1937
The Vijay College
LIBRARY,
VIJAY COLLEGE,
JAYANAGAR.
052
ACC.NO
212

ಶಿವಾನುಭವ.

ವರ್ಷ ೧೨] ಅಕ್ಟೋಬರ ೧೯೩೭. [ಸಂಚಿಕೆ ೧

ಹರಿಹರದೇವನು ಚಿತ್ರಿಸಿದ ಚನ್ನಯ್ಯ.

ಲೇಖಕರು:— ಶ್ರೀ ಚಂದ್ರಶೇಖರದೇವರು, ಅಡ್ನೂರ.
ಮುಕ್ತಾಂ ಸರ್ವಭೂಷಣಮಠ ಜೊಂಗಳೂರ.

Acc.No
052

ಕನ್ನಡ ವಾಙ್ಮಯದಲ್ಲಿ ಶಿವಶರಣರ ವಚನಗಳು ಉಚ್ಚತರಗತಿಯನ್ನು ಪಡೆದಿರುವಂತೆ, ಸರಳುಗಬ್ಬಗಳಾದ ಸೊಗಸುರಗಳೆಗಳೂ ಮೇಲ್ಮೆಯನ್ನು ಪಡೆದಿವೆ. ವಚನಗಳು ವಿಶ್ವವ್ಯಾಪಕವಾದ ವಿಶಾಲ ತತ್ವಗಳನ್ನು ತೋರುವಂತೆ ಸುಲಲಿತಗಳಾದ ರಗಳೆಗಳು ಸಹೃದಯರಿಗೆ ಅನನ್ಯವಾದ ಕಾವ್ಯಾನಂದದ ಸೊಬಗನ್ನುಣಿಸುವವು; ತಣಿಸುವವು. ಒಟ್ಟಿಗೆ ವಚನ-ರಗಳೆಗಳೆರಡೂ ನಮ್ಮ ಕನ್ನಡ ಸಾಹಿತ್ಯದೇವಿಗೆ ಹೆಚ್ಚು ಕಳೆಯನ್ನೂ ಕೀರ್ತಿಯನ್ನೂ ತಂದುಕೊಟ್ಟಿವೆಯೆಂದರೆ ಏನೂ ತಪ್ಪಾಗದು; ಯಾರೂ ಒಪ್ಪದಿರಲಾರರು.

ರಗಳೆಗಾರರು ನಮ್ಮಲ್ಲಿ ಬಹಳವಾಗಿದ್ದಾರೆ. ಅವರಲ್ಲಿ ರಸವತ್ತಾಗಿಯೂ, ರಹಸ್ಯಪೂರ್ಣವಾಗಿಯೂ ಹಾಗು ರಮ್ಯವಾಗಿಯೂ ರಚಿಸಿದ ರಗಳೆಗಾರನೆಂದರೆ ಹರಿಹರದೇವನು. ಆದ್ದರಿಂದಲೇ ಆತನಿಗೆ 'ರಗಳೆಯಕವಿ' ಯೆಂದು ಕರೆದಿರುವರು. ಆತನು ಕವಿಯಾಗಿ ಹಾಡಿದನು. ಋಷಿಯಾಗಿ ಬೋಧಿಸಿದನು. ಶರಣನಾಗಿ ಭಕ್ತಿರಸವನ್ನು ಬೆರಿಸಿದನು. ಆತನ ರಗಳೆಗಳಲ್ಲಿ ಕನ್ನಡದೇವಿಯ ಸೊಂಪು, ಪೆಂಪು, ನುಣ್ಪುಗಳು ಬಹು ಸೊಗಸಾಗಿ ಚಿತ್ರಿಸಲ್ಪಟ್ಟಿವೆ. ಭಕ್ತಿರಸವಾಹಿನಿಯು ಕಥಾರೂಪತೀರಗಳನ್ನು ಮೀರಿ, ಶಬ್ದತರಂಗಗಳಿಂದ ಅತಿಮನೋಹರವಾಗಿ ಅಟ್ಟಹಾಸದಿಂದ ಹರಿದಿರುವದು. ಆತನ ರಗಳೆಗಳಲ್ಲಿ ಹೆಚ್ಚಿನುಟ್ಟು ವ್ಯತ್ಯಯವಿ

ಹಂಬಲವಿಲ್ಲ. ಮೆಚ್ಚುವ ತೊಡಕುಗಳಿಗಿಂಬಿಲ್ಲ. ಬೇರೆ ಯಾವ ರಸ-ಭಾವಗಳಿಗೂ ಕೊರತೆಯಿಲ್ಲ. ಹರಿಹರದೇವನ ಈ ರಮ್ಯರಗಳೆಗಳಿಂದ ಕನ್ನಡ ಸಾಹಿತ್ಯಕ್ಕಾದ ಉಪಕಾರಕ್ಕೆ ಉಪಮೆಯಿಲ್ಲ. ಅವನ್ನು ಪ್ರಕಟಿಸುವ ಕಾಯಕವ ಕೈಕೊಂಡ ಶ್ರೀಮಾನ್ ರಾ. ಸಾ. ಹಳಕಟ್ಟಿಯವರ ಕೀರ್ತಿಗೆ ಕೊನೆಯಿಲ್ಲ. ಅದಿರಲಿ.

ಹರಿಹರನ ರಗಳೆಯ ಕಾವ್ಯಗಳು ಹಳೆಯುವೆಂದರೆ ಹಳೆಯವು; ಹೊಸವೆಂದರೆ ಹೊಸವು. ಏಕೆಂದರೆ ಆತನ ಶೈಲಿಯೇ ಆ ತೆರನಾದುದು. ಆತನ ಆ ಶೈಲಿಯಲ್ಲಿ ನಾವೀನ್ಯವು ನರ್ತನವಾಡುತ್ತಿದೆ. ಅದೇ ರೀತಿಯಲ್ಲಿ ರಚಿಸಿದ ಆತನ ರಗಳೆಗಳಲ್ಲಿ "ಚನ್ನಯ್ಯಗಳ ಮಹಾತ್ಮೆ" ಯೆಂಬುದೊಂದು. ಅದನ್ನು ಆತನು ಕಾವೇರಿಯಂತೆ ಕಾವೇರಿ (ಕಾವು-ಏರಿ) ಹೆಣದಿರುವನು. ಏಕೆಂದರೆ ಕಥಾನಾಯಕನಾದ ಚನ್ನಯ್ಯನಲ್ಲಿ ಅಂಥದೊಂದು ಅಮೋಘಶಕ್ತಿಯಿತ್ತು, ಅನನ್ಯಭಕ್ತಿಯಿತ್ತು. ಅಂತೆಯೆ ಬಸವಣ್ಣನವರ ವಚನದಲ್ಲಿ ಚನ್ನಯ್ಯನವರಿಗೆ ಹೆಚ್ಚಿನ ಸ್ಥಾನ-ಮಾನಗಳು ದೊರೆತಿವೆ. ಏನಿಲ್ಲೆಂದರೂ ೩೦-೪೦ ವಚನಗಳು ಆ ಚನ್ನಯ್ಯಗಳ ಬಣ್ಣನೆಗೆ ಮೀಸಲಾಗಿವೆ. ಆತನ ವಿಷಯಕ್ಕೆ ಬಸವಣ್ಣನವರ ಮನವುಕ್ಕಿ ಮೆಯ್ಯುಬ್ಬಿ ಹಲವೆಡೆಯಲ್ಲಿ ಹೀಗೆ ಉದ್ಗಾರ ತೆಗೆದಿದ್ದಾರೆ.—

"ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದಡೆಯೂ ಅಯ್ಯಾ ಎನಲಾರೆನಯ್ಯಾ. ಚನ್ನಯ್ಯನೆಮ್ಮಯ್ಯನು. ಚನ್ನಯ್ಯನ ಮಗ ನಾನು. ಚನ್ನಯ್ಯನ ಮನೆಯ ದಾಸನ ಮಗ ನಾನು. ಚನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪಯ್ಯ, ಅಯ್ಯಗಳ ಅಯ್ಯ ನಮ್ಮ ಮಾದಾರ ಚನ್ನಯ್ಯ, ಕುಲತಿಲಕ ನಮ್ಮ ಮಾದರ ಚನ್ನಯ್ಯ ಉನ್ನತ ಮಹಿಮ, ಉಮೇಶನಿಂದಧಿಕ. ಚಿಕ್ಕಯ್ಯ ಚನ್ನಯ್ಯಗಳೆತ್ತಿ ಮುದ್ದಾಡಿದರೆನ್ನ ಆವ್ದರಿಂದಲೇ "ವೇದಕ್ಕೆ ಒರೆಯ ಕಟ್ಟುವೆ. ಶಾಸ್ತ್ರಕ್ಕೆ ನಿಗಳನಿಕ್ಕುವೆ. ತರ್ಕದ ಬೆನ್ನಬಾರನೆತ್ತುವೆ. ಆಗಮದ ಮೂಗ ಕೊಯ್ಯುವೆ ನೋಡಯ್ಯ. ಮಹಾದಾನಿ ಕೂಡಲಸಂಗಮದೇವ ಮಾದರ ಚನ್ನಯ್ಯನ ಮಗ ನಾನಯ್ಯ. "

[illegible]ಾಗಿ ಆ ಚನ್ನಯ್ಯಗಳ ಚನ್ನ ನಡೆಗೆ ಮೆಚ್ಚಿ ಮುದ್ದಿಕ್ಕಿ [illegible]ಗಳ ಹಾದಿಯನ್ನೂ ಸಹ ಹೀಯಾಳಿಸಿರುವನು. ಇದೇನು?

ಆ ವೇದಾಗಮಶಾಸ್ತ್ರಗಳಿಗಿಂತ ಮಾದಾರ ಚನ್ನಯ್ಯನ ನಡೆಯು ಮೇಲಾದುದೆ? ಎಂದರೆ ಆತನೇ ಮತ್ತೊಂದು ವಚನದಿಂದ ಹೀಗೆ ಉತ್ತರಿಸಿರುವನು.—

"ವೇದ ನಡ ನಡುಗಿತ್ತು. ಶಾಸ್ತ್ರವಗಲಿ ಕೆಲಕ್ಕೆ ಸಾರಿದುದಯ್ಯ. ತರ್ಕತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ. ಆಗಮ ಹೊರತೊಲಗಿ ಅಗಲಿದ್ದಿತಯ್ಯ. ನಮ್ಮ ಕೂಡಲಸಂಗಯ್ಯನು ಚನ್ನಯ್ಯನ ಮನೆಯಲುಂಡ ಕಾರಣ. "

ವೇದಾದಿಗಳು ಪರಬ್ರಹ್ಮವನ್ನು ಬಾಯ್ತುಂಬ ಹೊಗಳಿದವೆ ಹೊರತು ಪ್ರತ್ಯಕ್ಷ ತೋರಿಸಲಿಲ್ಲ. ಅವುಗಳಲ್ಲಿರುವದು ಶಬ್ದಬ್ರಹ್ಮವೇ ವಿನಹ ಸತ್ಯ ಬ್ರಹ್ಮವಲ್ಲ. ಆ ಶಬ್ದಬ್ರಹ್ಮದಲ್ಲಿ ತೊಡಕು-ತೊಳಲಿಕೆಗಳೇ ಹೊರತು ತೃಪ್ತಿಯಿಲ್ಲ. ನಮ್ಮ ಚನ್ನಯ್ಯ ಹಾಗಲ್ಲ. ಶಿವನನ್ನು ತನ್ನ ಮನೆಗೆಯೇ ಬರಮಾಡಿಕೊಂಡವನು. ತನ್ನ ಅಂಬಲಿಯ ಅದ್ವಿತೀಯ ರುಚಿಯನ್ನು ಹಚ್ಚಿಸಿದವನು. ಬೇಕಾದಾಗ ಬೇಡುವ ಭಕ್ತರಿಗೆ ತೋರಿಸಬಲ್ಲವನು. ಮಹದೇವನಿಗುಣಬಡಿಸಿ ವೇದಾದಿಗಳ ನಡೆಯನ್ನು ನಡುಗಿಸಿದನಲ್ಲದೆ ಬುಡಮೇಲು ಮಾಡಿದನು. ಅಂಥವನ ಮಗ ನಾನು ಎಂಬುದಾಗಿ ಎದೆತಟ್ಟಿ ಎರಕುಗೊಂಡು ಚನ್ನಯ್ಯಗಳ ಪೆರ್ಮೆ-ಕೂರ್ಮೆಗಳೆರಡನ್ನೂ ಸೊಗಸಾಗಿ ಸಾರಿರುವನು, ಬೀರಿರುವನು.

ಇನ್ನು ಹರಿಹರನತ್ತ ಹೊರಳೋಣ. ಹರಿಹರನಾದರೂ ಏನನ್ನವನು ?

"ವೇದದ ಡಂಗುರಂ ಹೆದರಿ ಸೈವೆರಗಾದವು. ಶಾಸ್ತ್ರಸಂಭ್ರಮಂ।
ಪೋದವು ನಿಚ್ಚಲೋದುವ ಪುರಾಣದ ಮಾತಿನ ಮಾಲೆಯಲ್ಲ ಹಾ-।
ಳಾದವು ನೇಮ ನಿತ್ಯ ಸುಸಮಾಧಿಗಳೆಂಬುವವೆಲ್ಲ ನುಚ್ಚುನೂ-।
ರಾದವು ಹಂಪೆಯಾಳ್ದವರ ಚನ್ನನ ಕೂಡೊಲೆದುಂಡ ಕಾರಣಂ॥ "

"ವೇದ ನಡನಡುಗಿತ್ತೆಂಬ" ಆ ಬಸವಣ್ಣನವರ ವಚನವೋ? ಹರಿಹರದೇವನ ವೃತ್ತವೋ? ಎಂದು ಭ್ರಾಂತಿ ಬರುವಂತಿದೆ. ಇಲ್ಲಿ ಸ್ವಲ್ಪ ವಿಚಾರಿಸಿದರೆ ಚನ್ನನ ನಡೆಯೇ ಬಸವಣ್ಣನ ನುಡಿಯಾದಂತಿದೆ. ಬಸವೇಶ್ವರನ ವಚನವೇ ಹರೀಶ್ವರನ ವೃತ್ತವಾಗಿ ನಿಂತಂತಿದೆ. ನೋಡಿ ಎಂಥ ವಿಚಿತ್ರ! ಚನ್ನ ಚರಿತ್ರ!! ಇವೆಲ್ಲಕ್ಕೂ ಎಳ್ಳಷ್ಟು ವ್ಯತ್ಯಯವಿ

ಲ್ಲೆಂಬುದೆ ತಾತ್ಪರ್ಯ. ಇಂತು ಮಹಾನುಭಾವನಾದ ಮಾದರ ಚನ್ನಯ್ಯನವರೊಲ್ಮೆಯ ಬಲ್ಮೆಯನ್ನು ಕವಿಯು ಎಂತು ಚಿತ್ರಿಸಿರುವನೆಂಬುದನ್ನು ನಿರೀಕ್ಷಿಸೋಣ.

ಜೋಳರಾಜ್ಯವು ನಮ್ಮ ಕನ್ನಡಿಗರಿಗೆ ಹೆಮ್ಮೆಯ ರಾಜ್ಯ. ನಮ್ಮ ಕಲೆಗಳನ್ನು ಉಳಿಸಿ ಬೆಳಸಿದ ರಾಜ್ಯ. ಅದರಲ್ಲೂ ನಮ್ಮ ಪುರಾತನರೆಲ್ಲ ಅಲ್ಲಿಯೇ ಹುಟ್ಟಿ ಬೆಳೆದು ಬಾಳಿ ಬೆಳಕಿಗೆ ಬಂದ ರಾಜ್ಯ. ಅಂತೆಯೆ ಆ ರಾಜ್ಯವನ್ನು ಕವಿಯು ಇಂತು ಬಣ್ಣಿಸುತ್ತಾನೆ. ಆ ರಾಜ್ಯವು ಶಿವ ಭಕ್ತ ಸಂಕುಳಕೆ ಶಿವಭವನವಾಗಿತ್ತು. ಅಲ್ಲಿರುವ ಊರುಗಳೆಲ್ಲ ಶಿವಪುರಗಳಾಗಿದ್ದವು. ಅವುಗಳಲ್ಲಿರುವ ಜನರೆಲ್ಲ ಶಿವಭಕ್ತರಾಗಿದ್ದರು. ಹೀಗೆ ಎಲ್ಲ ಬಗೆಯಿಂದಲೂ ಶಿವಮಯವಾದ ಆ ದೇಶದಲ್ಲಿ ಎಲ್ಲಿನೋಡಿದರೂ ಬೆಳೆಯಿಲ್ಲದೆಡೆಯಿರಲಿಲ್ಲ; ಜನವಿಲ್ಲದೂರಿರಲಿಲ್ಲ; ನೆಳಲತಂಪಿಲ್ಲದಿಂಪಿರಲಿಲ್ಲ. ಅದರೊಳಗೆ ಹರಭಕ್ತಿ ರಸದಂತೆ ಹರಿದಿಹುದು ಕಾವೇರಿ. ಅದರ ತೀರದೊಳು ಫಲಭರಿತ ಚಲುವ ವೃಕ್ಷಗಳ ರಾಜಿ; ಆ ರಾಜಿಯಲ್ಲಿ ಜಪಿಸುವ-ತಪಿಸುವ ಯತಿಗಳ ಪಂಕ್ತಿ; ಆ ಪಂಕ್ತಿಯಲ್ಲಿ ಜಪದರ್ಥವೆನಿಪ ಶಿವನ ಸಂಚಾರ. ಆದ್ದರಿಂದ ಅಲ್ಲಿರುವ ತರುಗಳು ಕಲ್ಪತರಗಳು, ಗಿರಿಗಳು ಹೇಮಗಿರಿಗಳು, ಅಲ್ಲಲೆವ ಧೇನುಗಳು ಕಾಮಧೇನುಗಳು. ಹೆಚ್ಚೇನು? ಆ ದೇಶ ಸರ್ವಸೌಂದರ್ಯನಿವಾಸ! ಶರ್ವ ಸೌಖ್ಯದ ಕೈಲಾಸ!! ಅಂತಹ

ಆ ದೇಶಮುಂ ಪೊಗಳ್ವೊಡೆನ್ನಳವೆ ಸುರರಳವೆ ?।
ವೇದಮಯವಭವಮಯವಾದುದಕೆ ಪಡಿಯೊಳವೆ ?॥

ಎಂದು ಕವಿಕುಲತಿಲಕನಾದ ಹರಿಹರನೇ ಆ ದೇಶವನ್ನು ಪೊಗಳಲು ಎನ್ನೊಳವೆ? ಸುರರಳವೆ? ಎಂದು ಹೇಳಿರುವಲ್ಲಿ ನಮ್ಮಳವೆ?

ಇಂತು ಅವರ್ಣನೀಯವಾದ ಜೋಳದೇಶವನ್ನು ಕರಿಕಾಲಚೋಳನೆಂಬರಸನು ಆಳುತ್ತಿದ್ದನು. ಆತನು ಹರಭಕ್ತ-ಗುರುಭಕ್ತ-ಚರಭಕ್ತನಾಗಿದ್ದನು. ಸತ್ಯಸಂಧನೆನಿಸಿದ್ದನು. ಆತನ ರಾಜಧಾನಿಯಲ್ಲಿ ಚನ್ನಯ್ಯನೆಂಬ ಮಾದಾರನಿದ್ದನು. ಈತನೇ ನಮ್ಮ ಕಥಾನಾಯಕನು. ಈತನು ನಿತ್ಯದಲ್ಲಿಯೂ ಹುಲ್ಲು ಹೊರೆಯನ್ನು ತಂದು, ಜೋಳನ ಕುದುರೆಗೆ ಹಾಕುವದೇ ಈತನ ಬಹಿರಂಗಕಾಯಕ. ಅಂತರಂಗದಲ್ಲಿ ಮಾತ್ರ ಲಿಂಗಭಕ್ತಿ. ಸದಾ ಲಿಂಗಾಭಿಮಾನಿ, ಲಿಂಗಾನುಭಾವಿ, ಲಿಂಗ ಪ್ರಾಣಿಯಾಗಿದ್ದನು. ಆತನದು ಹೊರಗೆ ಕುಲಾಚಾರ, ಒಳಗೆ ಶಿವಾ

ಚಾರ. ತನುವು ಜೋಳನಿಗಾಳ, ಮನವು ಲಿಂಗದ ಮೇಳ. ವ್ಯಕ್ತದಿ ಮಾದಾರ, ಗುಪ್ತದಿ ಮಾಹೇಶ್ವರ. ಹೀಗೆ ಯಾರು ಅರಿಯದಂತೆ ಗುಪ್ತ ಭಕ್ತನಾಗಿದ್ದನು. ಇದರಿಂದ ಆಗಿನ ಕಾಲದಲ್ಲಿ ಶಿವಭಕ್ತರೆಂದು ಗೊತ್ತಾದರೆ ಯಾರೂ ತಮ್ಮ ಸೇವೆಗೆ ಹಚ್ಚಿಕೊಳ್ಳುತ್ತಿರಲಿಲ್ಲವೆಂದು ಗೊತ್ತಾಗುತ್ತದೆ. ಆದ್ದರಿಂದ ಚನ್ನಯ್ಯನು ಹಾಗೆ ವರ್ತಿಸಿರಬೇಕು. ಹಾಗೆ ನಡೆದುದನ್ನು ಕವಿಯು ಇಂತು ಬಣ್ಣಿಪನು—

"ಒಳಗೆ ಭಕ್ತಿಯ ಗುಂಪು, ಹೊರಗೆ ಜಾತಿಯ ಸೊಂಪು।
ಒಳಗೆ ಮುಕ್ತಿಯ ನುಂಪು, ಹೊರಗೆ ಜನ್ಮದ ಪೆಂಪು॥
ತಿಲದ ತೈಲದ ತೆರದೆ, ಕಾಷ್ಠದಗ್ನಿಯ ತೆರದೆ।
ನೆಲದ ಮರೆಯೊಳಗೆ ತೋರುವ ನಿಧಾನದ ತೆರದೆ,॥
ಪೆರರರಿಯದಂತೊಳಗೆ ಲಿಂಗಾರ್ಚನೆಯೊಳಿರ್ಪ।
ಅರಿವಂತೆ ಹೊರಗೆ ಕುಲಧರ್ಮ ಕರ್ಮದೊಳಿರ್ಪ॥
ಅತನ ಶಿವಾರ್ಚನೆಯನೆಣಿಸಲೆನ್ನಳವಲ್ಲ।
ಭೂತೇಶ್ವರಂಗೆ ಕೌತುಕಂ, ಉಳಿದವರ್ಗಳವಲ್ಲ॥

ಇಲ್ಲಿ ಒಡಮೂಡಿದ ರಸಭಾವಗಳನ್ನು ನೋಡಿ! ಈ ರಸಭಾವಗಳಿಲ್ಲದ ಸಾಹಿತ್ಯವು ಸಾಹಿತ್ಯವಲ್ಲ. ಅದು ಆತ್ಮವಿಲ್ಲದ ಶರೀರವಿದ್ದಂತೆ, ನಿರ್ಜೀವ ಸಾಹಿತ್ಯ. ಇಲ್ಲಿ ಹಾಗಿಲ್ಲ. ಚನ್ನಯ್ಯನಂತರಂಗವೇ ತಾನಾಗಿ ಹಾಡಿದ ಹರಿಹರನ ಈ ನುಡಿಗಳಲ್ಲಿ ರಸ ಭಾವಗಳು ತಾಂಡವವಾಡುತ್ತವೆ. ಓದುಗರ ಹೃದಯಗಳೂ ನರ್ತಿಸುವಂತಿವೆ. ೩—ಳನೇ ಪಂಕ್ತಿಗಳನ್ನು ಓದುವಾಗ ಮಹಾದೇವಿಯಕ್ಕನ ಮೂರನೆಯ ವಚನವು ಮಾರ್ಪಟ್ಟು ರಗಳೆಯಾಗಿ ಬಂದಿಲ್ಲಿ ಸೇರಿದೆಯೋ ಎಂಬಂತಿದೆ. ಕೊನೆಯ ಚರಣದಲ್ಲಿ ಚನ್ನಯ್ಯಗಳ ಅಂತರಂಗದ ಅರ್ಚನೆಯ ಕಂಡರೆ ಕೃತ್ತಿವಾಸನಿಗೂ ಕೌತುಕ! ಇನ್ನು ಜಡ ದೃಷ್ಟಿಯುಳ್ಳ ಜಗದ ಜನರರಿವುದೆಂತು? ಎಂದು ವರ್ಣಿಸುವದರಿಂದ ಆತನ ವರ್ತನೆಯ ವೈಶಿಷ್ಟವು ಎಂತಹದಿತ್ತೆಂದು ವ್ಯಕ್ತವಾಗುತ್ತದೆ; ಒಡೆದು ತೋರುತ್ತದೆ.

ಹೀಗೆ ಗುಪ್ತವಾಗಿ ಗಿರೀಶನಿಗಾಪ್ತನಾಗಿ ಚನ್ನಯ್ಯನೊಂದು ದಿನ ಉದಯದೊಳೆದ್ದು ಕುಲಕರ್ಮಕನುಗುಣವಾಗಿ ಜೋಳರಸನ ಕುದುರೆಗೆ ಹುಲ್ಲು ತರಲು ಕಾನನಕ್ಕೆ ಹೊರಟು ದಾರಿಯಲ್ಲಿ—

"ಕಂಡ ಚಲ್ವಕ್ಷಿ ಮುಖದಿಂದ ಲಿಂಗಾರ್ಪಿತಂ । ಕೊಂಡನಾಲಿಗೆಯ
ರುಚಿಯಿಂದಲರ್ಪಿತಂ ॥
ಕೇಳ್ದ ಸವಿನುಡಿ ಕಿವಿಯ ಮುಖದಿಂದರ್ಪಿತಂ। ತಾಳ್ದಗಂಧಂ ನಾಸಿಕದ
ಮುಖದೊಳರ್ಪಿತಂ ॥
ಸೋಂಕಿದ ಮೃದುದ್ರವ್ಯವಂಗದಿಂದರ್ಪಿತಂ । ಮುಂಕೊಳಸಿ ನೆನೆದ
ರುಚಿಮನದಿಂದವರ್ಪಿತಂ" ॥

ಇಲ್ಲಿ ನೋಡಿ! ಕವಿಯು ಅತಿಗಾಢವಾದ ಅಧ್ಯಾತ್ಮಿಕ ವಿಚಾರವನ್ನು ಎಷ್ಟು ಸುಲಭವಾದ ಮಾರ್ಗದಿಂದ ತೋರಿಸುತ್ತಾನೆ. ಈ ಕವಿತೆಯಲ್ಲಿ ಒಂದು ಚಮತ್ಕಾರವಿದೆ. ಈ ಭಾವದಲ್ಲಿ ಒಂದು ಸ್ವಾರಸ್ಯವಿದೆ. ಇಲ್ಲಿ ಹೇಳಿದುದಕಿಂತಲೂ ಹೆಚ್ಚಿನ ಧರ್ಮವಿನ್ನಾವದಿದೆ? ಈ ಧರ್ಮದಿಂದಿರುವವರು ಕುಲಹೀನರಾಗಬಲ್ಲರೇ? ಎಲ್ಲ ವಿಷಯಗಳನ್ನು ತನಗೆಂದು ವಾಂಛಿಸದೆ ಲಿಂಗಕ್ಕರ್ಪಿಸುವ ಚನ್ನಯ್ಯನು ಮಾದಾರನೇ? ಕಂಡುದುದ ಶಿವಲಿಂಗಕ್ಕೆ, ಕೊಂಡುದುದ ಗುರುಲಿಂಗಕ್ಕೆ, ಕೇಳಿದುದ ಪ್ರಸಾದ ಲಿಂಗಕ್ಕೆ ಅರ್ಪಿಸುವಾತನು ಭವಿಯಾಗಬಲ್ಲನೆ? ಮೂಸಿದುದ ಆಚಾರ ಲಿಂಗಕ್ಕೆ, ಸ್ಪರ್ಶಿಸಿದುದ ಜಂಗಮಲಿಂಗಕ್ಕೆ, ನೆನೆದುದ ಮಹಾಲಿಂಗಕ್ಕೆ ಅರ್ಪಿಸಿದವನು ಶಿವಭಕ್ತನಾಗನೆ? ಎಲ್ಲವನ್ನೂ ಶಿವಾರ್ಪಣ ಮಾಡುವ ಆಚರಣೆಗಿಂತ ಬೇರೆ ವೀರಶೈವಾಚಾರವುಂಟೆ? ಷಡಿಂದ್ರಿಯಗಳಲ್ಲಿಯೂ ಷಡ್ಲಿಂಗಗಳನ್ನು ಧಾರಣ ಮಾಡಿದ ಆ ಚನ್ನಯ್ಯನಿಗೆ ಅದಾವ ಷಟ್‌ಸ್ಥಲ ಬ್ರಹ್ಮಿಯು ಸಾಟಿಯಾಗುವನು? ಲಿಂಗಾಂಗಿಯಾದ ಆತನನ್ನು ಮತ್ತಾವ ವಿಷಯಗಳು ವಿಕಾರಗೊಳಿಸಬಲ್ಲವು? ಹಾಗು ಅದಾವ ಸ್ವರ್ಗ ಮೋಕ್ಷ ಮುಂತಾದ ಪದವಿಗಳು ಬಾಯ್‌ನೀರಕರಿಸಬಲ್ಲವು? ಇದೇ ಅಭಿಪ್ರಾಯವನ್ನೇ ಮಗ್ಗೆಯ ಮಾಯಿದೇವನು ಎಷ್ಟು ಸರಸಾಗಿ ಬಣ್ಣಿಸುವನು ನೋಡಿ—

ಎಲ್ಲಿಯ ಮುಕ್ತಿಯಲ್ಲಿಯ ಪರಾ ಗತಿಯೆಲ್ಲಿಯ ಪಾರಲೌಕಿಕಂ ।
ನಿಲ್ಲು ಷಡಂಗಲಿಂಗ ಮುಖಖಂಡಿತಜೀವ ಶರೀರಯೋಗದಿಂ ॥
ಪಲ್ಲಟವಾಗಿ, ಪೂರ್ವತನು ಪೋಗಿ, ನಿಜೈಕ್ಯ ವಿಶೇಷದಲ್ಲಿ ತಾಂ ।
ನಿಲ್ಲದೆ ನಿಂದವಂಗೆ ಪರಮಪ್ರಭುವೇ ಮಹದೈಪುರೀಶ್ವರಾ ॥

ಈತನ ಈ ಮಾತು ರತ್ನ ಮೌಕ್ತಿಕದಚ್ಚು. ಈತನ ಶತಕತ್ರಯವು ನಿಜವಾಗಿಯೂ ರತ್ನತ್ರಯ. ಈತನ ಈ ಕಾವ್ಯದಲ್ಲಿ ಗಂಗೆ-ಯಮುನೆಗಳಂತೆ

ಧರ್ಮ-ಸಾಹಿತ್ಯಗಳಿರಡೂ ಕೂಡಿ ಹರಿದಿವೆಯೆಂಬುದಕ್ಕೆ ಇದೇ ಸಾಕ್ಷಿ 'ಲಿಂಗಭಕ್ತಿಯಿಂದ ದೇಹಧರ್ಮವಳಿದು ಲಿಂಗವೇ ತಾನಾದ ಶರಣನಿಗೆ ಮೋಕ್ಷ ಪರಾಗತಿ ಪರಲೋಕಗತಿ ಎಂಬಿವುಗಳೆಲ್ಲಾ ಯಾವ ಮಹಾ ಪದವಿಗಳು? ಕುಲಜಾತಿಗಳು ಚತುರ್ವಿಧ ಪುರುಷಾರ್ಥಗಳು ಎಂಥವರ ಸೊತ್ತು!! ಅವೆಲ್ಲ ಆ ಲಿಂಗಭಕ್ತನಿಗೆ ತೃಣಪ್ರಾಯಗಳು ಎಂದು ಹೇಳುವಲ್ಲಿ ಚನ್ನಯ್ಯಗಳಿಗೆ ಹೊಲೆತನವು ನಿಲ್ಲಬಹುದೆ? ಇದಲ್ಲದೆ ವೀರಶೈವರಲ್ಲಿ ಚತುರ್ವರ್ಣಗಳುಂಟೆಂದು ಹೇಳಿ ತಮ್ಮ ಅಜ್ಞಾನವನ್ನು ಹೊರಗೆಡುವವರಿಗೆ ಏನನ್ನಬೇಕು? ಇದನ್ನು ಬೋಧಿಸುವದಕ್ಕಾಗಿಯೇ ಹರಿಹರನು ಆತನ ಲಿಂಗಪ್ರೇಮವನ್ನು ಈ ಬಗೆಯಾಗಿ ಬಣ್ಣಿಸಿರುವನು. ಇದರಿಂದ ಆತನಲ್ಲಿರುವ ವಿಷಯ ವಿರತಿ, ಲಿಂಗ ಪ್ರೀತಿಗಳು ಎಷ್ಟೊಂದು ಬಲಿತಿದ್ದವೆಂಬುದು ಗೊತ್ತಾಗುವದು. ಇದು ಅವನ ಲಿಂಗಪ್ರೇಮದ ಪರಮಾವಧಿ. ಆದರೂ ಇನಿತು ಮಾತ್ರಕ್ಕೆ ಅವನ ಲಿಂಗಪ್ರೇಮವು ಪೂರ್ಣಿಸಲಿಲ್ಲ. ಇದೆಲ್ಲ ಬಟ್ಟೆಯ ಮಾತು.

ಆಮೇಲೆ ಚನ್ನಯ್ಯನು ಕಾನನವ ಪೊಕ್ಕು ಕಾವೇರಿ ನದಿಯ ತೀರಕ್ಕೆ ಬರುವನು. ಆ ನದೀ ತೀರದಲ್ಲಿ ಮಗ ಮಿಗಿಪ ಮಲ್ಲಿಗೆಯ ಮಂಟಪವೊಂದು ಆತನ ಕಣ್ಣಿಗೆ ಬೀಳುವದು. ಅದರಲ್ಲಿ ತಣ್ಣೆಳಲನೆರ ಚುವ ಸೊಗಸಾದುದೊಂದು ತಾಣ. ಆ ಸ್ಥಾನಕ್ಕೆ ಬರುವನು. ನುಣ್ಬಳಲ ಕಟ್ಟಿಯ ಕಟ್ಟೆ ತಳಿರ ಹಸೆಯ ಹಾಸುವನು. ಹರುಷದೇರಿ ಕಣ್ಮನಗಳನ್ನು ಲಿಂಗದತ್ತ ತಿರುಗಿಸುವನು. ಮಿತ್ರನು ಮಿತ್ರನನ್ನು ಅಕ್ಕರೆಯಿಂದ ಕರೆಯುವಂತೆ ಕೈನೀಸಿ—

ಬಾರಯ್ಯ ಬಾರ ಶಿವಭಕ್ತೈಕ ಸಿಂಧುವೆ ।
ಬಾರಯ್ಯ ಬಾರ ಕಾರುಣ್ಯರಸ ಸಿಂಧುವೆ ॥
ಗುರುವೆ, ವರಗುರುವೆ, ಸದ್ಗುರುವೆ, ಗುರುಲಿಂಗವೆ ।
ಭರದಲರ್ಚಿಪ ಜನದ ಮನದ ಸರ್ವಾಂಗವೆ ॥

ಎಂದು ಮೈಪುಳಕವೇರಿ, ನೇತ್ರಬಿಂದುಗಳೆಂಬ ಕುಸುಮಗಳುದುರಿ, ಸ್ನೇಹ ತೈಲ ಸುಗಂಧ ಬೀರಿ, ಕರೆವ ಈ ಸಂಬೋಧನಗಳು ಯಾರ ಮನಸ್ಸನ್ನು ಕರಗಿಸವು? ಈ ಇನಿದನಿಗೆ ಶಿವನು 'ಓ' ಎನ್ನದೆ ಸುಮ್ಮನಿರಬಲ್ಲನೆ? ಹೀಗೆ ಭಕ್ತಿಯಿಂದ ಕರೆದು ಸಜ್ಜೆಯೊಳಗಿರ್ಪ ಶಿವಲಿಂಗಮುಂ

ತೆಗೆದು, ಕರತಳದೊಳಿರಿಸಿ, ಕಣ್ತುಂಬ ಪರಿಕಿಸಿ, ತಿಳಿಯಗ್ಗಣಿಯನೆರೆದು, ಹೃದಯದಿಂಬೆರೆದು, ಆ ಲಿಂಗದೇವನಂ ಮತ್ತೆ ಮತ್ತೆ ಮೆಲುದನಿಯಿಂದ ಕರೆವನು. ಕರೆತಂದು ತಾ ರಚಿಸಿದ ತಳಿರ ಸಿಂಹಾಸನದ ಮೇಲೆ ಬಿಜಯಂಗೈಸುವನು. ಪರಿಮಳದ ತಿರುಳಿನಿಪ ಮೊಲ್ಲ ಮಲ್ಲಿಗೆಗಳನು ಕಂಪಿಡುವ ಸಂಪಿಗೆಗಳನು ಧರಿಸುವನು. ಮತ್ತೆ ಪಚ್ಚೆ ಪಡ್ಡಳೆಯಪೂಗಳನು, ಸುರಗಿ-ಸುರಹೊನ್ನೆ-ಸೇವಂತಿಗೆಯ ಕುಸುಮಗಳನು ಅಂದವಾಗಿ ಧರಿಸುವನು. ಮೇಲೆ ಹೊಂಗೇದಿಗೆಯ ಸುತ್ತಲೂ ನಿಲ್ಲಿಸುವನು. ಈ ಬಗೆಯಾಗಿ ಸಿಂಗರಿಸಿ, ಹೊಂಗಿ ಹೊರೆಯೇರಿ, ಮುಮತೆ ಮಿತಿಮೀರಿ—

"ಅಡಿಗಡಿಗೆ ನೋಡಿ ಮಾತಾಡಿ ಮೈವೆರ್ಚುತುಂ। ಹಾಡಿತಣಿವುತೆ ಮತ್ತೆ ಮತ್ತೆ ಮಿಗೆಕೊರ್ಬುತುಂ ॥
ಪುಳಕಿಸುತೆ ಪುಟವೇರಿ ತವಕಿಸುತೆ ಮುದವೇರಿ। ಎಳಸುತುಂ ದಳವೇರಿ ಬಳಸುತುಂ ಬಲ್ಪೇರಿ ॥
ನುಡಿಯುತುಂ ಗದುಗದುಸಿ, ಬೆಮರುತುಂ ಸಡಗರಿಸಿ। ನಡೆವುತುಂ ಡೆಂಡಣಿಸಿ, ಬೀಳುತುಂ ತರಹರಿಸಿ ॥
ಮೆಲ್ಲನೆಚ್ಚತ್ತು ಶಿವಲಿಂಗಮುಂ ನಡೆನೋಡಿ। ಲಲ್ಲೆಗರೆವುತ್ತಿ ಪರಮ ಸ್ನೇಹಮುಂ ಮಾಡಿ" ॥

ಹೀಗೆ ಗಾಢವಾದ ಪ್ರೇಮದಿಂದ ಪೂಜೆ ಮಾಡುವವರಿಗೆ ಇಂತು ಕ್ರಿಯೆಗಳಾಗುವದು ಸಹಜ. ಚನ್ನಯ್ಯನು ನೋಡುವ ನೋಟ, ಆಡುವ ಮಾತು, ಮಾಡುವ ಪೂಜೆ ಮುಂತಾದವುಗಳನ್ನು ನೆನಿಸಿಕೊಂಡರೆ ಆತನ ಕಣ್ಗಳಲಿ ಲಿಂಗಮೂರ್ತಿ, ವಾಕ್ಕಿನಲಿ ಲಿಂಗಕೀರ್ತಿ, ಚಿತ್ತದಲ್ಲಿ ಲಿಂಗ ಪ್ರೀತಿಗಳು ಎಷ್ಟೆಂದು ತುಂಬಿ ತುಳುಕುತ್ತಿದ್ದವೆಂಬದನ್ನು ಯಾವ ಶಬ್ದಗಳಿಂದ ಹೇಳೋಣ! ಇನಿತು ಭಾವರತಿ ಬಲಿದು, ಬಂದಂತೆ ಬಗೆದು, ಪುಟವೇರಿ ಬಲ್ಪೇರಿ, ದಳವೇರಿ, ಕಳೆಯೇರಿ, ಸಡಗರಿಸಿ-ತರಹರಿಸಿ, ಲಿಂಗ ಮೂರ್ತಿಯ ಪೂಜಿಸುವುದನು ನೋಡಿದರೆ ಆತನಿಗಾದ ಆನಂದ ಎಷ್ಟೆಂದು ಬಣ್ಣಿಸೋಣ!!

ಆ ಅವಸ್ಥೆಯು ಬರಬೇಕಾದರೆ ಸರ್ವೇಂದ್ರಿಯಗಳು ಶಿವನತ ಧಾವಿಸುತ್ತಿರಬೇಕು. ಇದಿಲ್ಲದೆ ಮನಸ್ಸಿನೊಳಗೊಂದಿಟ್ಟು ಮೇಲೆ ಮಾತ್ರತ್ತ ಮಾಡುವ ಪೂಜೆ ಪೂಜೆಯಲ್ಲ. ಮತ್ತೊಬ್ಬರೊಡನಾಡುತ್ತ ಹೇಳುವ ಮಂತ್ರವಲ್ಲ. ಮಗದೊಂದು ನೋಡುತ್ತ ಮಾಡುವ ಪೂಜೆಯೂ ಪೂಜೆಯಲ್ಲ. ಅವೆಲ್ಲವನ್ನೂ ತಡೆಯಬೇಕು; ಹ್ಯೂಹ ಕಟ್ಟಿ ಒಂದೆಡೆಗೆ ನಿಲ್ಲಿಸಬೇಕು. ಅಂದರೆ ಮನವು ಶಿವನನ್ನೇ ನೆನೆಯುತ್ತಿರಬೇಕು. ಬಾಯಿ ಭಾಲಾಕ್ಷನನ್ನೇ ಬಣ್ಣಿಸುತ್ತಿರಬೇಕು. ಕಣ್ಣು ಮುಕ್ಕಣ್ಣನನ್ನೇ ಕಾಣುತ್ತಿರಬೇಕು. ಈ ತೆರನಾಗಿ ಮೈಮರೆತು, ಮನಬೆರೆತು ಅರ್ಚಿಸುವದೇ ನಿಜವಾದ ಲಿಂಗಾರ್ಚನೆ; ಅದೇ ನಿಜವಾದ ಲಿಂಗಭಕ್ತಿ; ಅದೇ ನಿಜವಾದ ಲಿಂಗೈಕ್ಯ. ಅದನ್ನೇ—

"ಅಷ್ಟವಿಧಾರ್ಚನೆಯ ಷೋಡಶೋಪಚಾರವ ಮಾಡುವದು. ಮಾಡಿದ ಪೂಜೆಯ ನೋಡುವದಯ್ಯ. ಶಿವತತ್ವಗೀತವ ಪಾಡುವದು. ಶಿವನ ಮುಂದೆ ನಲಿನಲಿದಾಡುವದಯ್ಯ. ಭಕ್ತಿ ಸಂಭಾಷಣೆಯ ಮಾಡುವದು. ನಮ್ಮ ಕೂಡಲಸಂಗಯ್ಯನ ಕೂಡುವದು."

ಎಂದು ಭಕ್ತಿ ಭಾಂಡಾರಿಯಾದ ಬಸವಣ್ಣನೂ ಬಲು ಸೊಗಸಾಗಿ ಬಣ್ಣಿಸಿದ್ದಾನೆ. ಇದಕ್ಕೂ ನಮ್ಮ ಚನ್ನಯ್ಯಗಳ ಆಚರಣೆಗೂ ಯಾವ ಭೇದವಿಲ್ಲ. ಆತನ ಭಕ್ತಿಪರವಶತೆಗೆ ಪ್ರತಿಯಿಲ್ಲ.

ಭಕ್ತಿಲಂಪಟನಾದ ಭಾಳಲೋಚನನು ಭಕ್ತಿ (ಪ್ರೇಮ) ದಿಂದಲ್ಲದೆ ಬೇರೆ ಸಾಧ್ಯವಲ್ಲ. ಏಕೆಂದರೆ ಪರಮಾತ್ಮನು ಪ್ರೇಮಸ್ವರೂಪನಾಗಿದ್ದಾನೆ. 'ಪ್ರೇಮವು ಪ್ರೇಮವನ್ನು ಹುಟ್ಟಿಸುತ್ತದೆ' ಎಂಬ ಆಂಗ್ಲೋಕ್ತಿಯಂತೆ ಪ್ರೇಮವೇ ಪರಮಾತ್ಮನನ್ನು ಪಡೆಯಲು ಪರಮ ಸಾಧನವು. ಅದೊಂದನ್ನು ಬಿಟ್ಟು ಆತನಿಗೆ ಅರ್ಪಿಸತಕ್ಕ ಬೇರೆ ಪದಾರ್ಥವೇ ಇಲ್ಲ. ಸರ್ವಭರಿತನಾದ ಶಿವನಿಗೆ ನಾವೇನು ಅರ್ಪಿಸಬೇಕಾಗಿದೆ? ಮಗುವು ಮಾತೆಗೆ ಅರ್ಪಿಸುವದೇನು? ಮುಮತೆಯೊಂದನ್ನಲ್ಲವೇ? ಹಾಗೆ ಚನ್ನಯ್ಯಗಳು ಶಿವನಲ್ಲಿ ಶುದ್ಧ ಪ್ರೇಮವನ್ನಿಟ್ಟು ಸಂತಸದೆ ಬೀಗಿ, ಸಂಭ್ರಮದಿ ಕೂಗಿ, ಆ ಪ್ರೇಮದುದ್ರೇಕದಿಂದ ಮೆಲ್ಲನೆಚ್ಚತ್ತು—

ಹಸಿದೆಯ್ಯ ಎನ್ನ ಜೀವದ ಜೀವವೇ ಎಂದು।
ಉಸಿರ ಸಂತೈಸುತೋವುತ್ತಿ ಹತ್ತಿರ ಬಂದು ॥
ಜಂಬೂಫಳಂ ಚೂತಫಳವನೊಲವಿಂ ಕರಂ।
ಇಂಬಿನಲ್ಲಾರೋಗಿಸಲ್ಕೊಟ್ಟನಂತರಂ ॥

'ಎನ್ನವನೆ, ಎನ್ನವನೆ' ಎಂದು ಕರೆವ ಕಣ್ಣಪ್ಪನ ನುಡಿಯಲ್ಲಿ ತೋರುವ ಒಂದು ಬಗೆಯ ಭಿನ್ನಭಾವವು 'ಎನ್ನ ಜೀವದ ಜೀವವೇ' ಎಂದು ಸಂಬೋಧಿಸುವ ಚನ್ನಯ್ಯಗಳ ಈ ಚನ್ನುಡಿಯಲ್ಲಿ ತೋರುವದೇ? ಅಹಾ! ಎಂಥ ಜಾಣ್ಣುಡಿಯಿದು; ಎಂಥ ಐಕ್ಯಭಾವವಿದು.

ಓ ದೇವ! ಪೂಜಿಸಿ ಪ್ರಸಾದವನ್ನು ಅರ್ಪಿಸಲು ಮರತೆ. ನಿಜವಾಗಿ ಹಸಿವೆಗೊಂಡಿರಬೇಕು ಎಂದು ಶಿವನೊಡಲವೇ ತಾನಾಗಿಹಸೋ ಎಂಬಂತೆ 'ಎನ್ನ ಜೀವದ ಜೀವವೇ, ಹಸಿದಯ್ಯ ಹಸದಿ, ನಿಜವಾಗಿಯೂ ಹಸಿದಿರುವಿ. ಆನಂದಭರದಲ್ಲಿ ಅರ್ಪಿಸಲು ಮರೆತ ಮಹಾಪರಾಧಿನಾನು, ಎಂಬುವಂತೆ ಉಸಿರು ಹಿಡಿಹಿಡಿದು ಬಿಡುತ್ತ ಶಿವನ ಸವಿೂಪಕ್ಕೈತಂದು 'ಓ ತಂದೆ, ನಾ ಬಂದೆ, ನಿನಗಾಗಿ ನೀರಲ-ವಾವಿನ ಫಲಗಳನ್ನು ತಂದೆ, ಇದೋ ತೆಗೆದುಕೋ' ಎಂದು ಆರೋಗಿಸಲು ಕೊಡುವನು. ಕೊಟ್ಟುದನ್ನು ಶಿವನು ಕೈಕೊಳ್ಳಲು ಆ ಚನ್ನಯ್ಯನು ಆನಂದಾತಿಶಯದಿಂದ—

ತೂಪಿರಿದು ಕಾಪಿಟ್ಟು ಕಣ್ಗಳೊಳಗೊತ್ತುತುಂ।
ಭಾಪು ಭಾಗ್ಯವೇ ಎಂದು ಕೊಂಡಾಡಿ ಹೆಚ್ಚುತುಂ॥
ಕರುಣ ಪ್ರಸಾದವುಂ ಪ್ರೀತಿಯಿಂ ಕೈಕೊಂಡು।
ಹರನ ಕಾರುಣ್ಯವುಂ ತಾನೊಚ್ಚತಂ ಗೊಂಡು॥

ಇನಿತು ಹರುಷದಿಂ ಹೊರೆಯೇರಿ, ನೇಹದಿಂ ಕಳೆಯೇರಿ, ಕೊಂಡಾಡಿ-ಮುಂಡಾಡಿ, ಆ ಲಿಂಗಪ್ರಸಾದವನ್ನು ತಾನೂ ಕೈಕೊಂಡು, ಹರನ ಕಾರುಣ್ಯವ ಪಡೆದುಕೊಂಡು, ಬಾಹ್ಯಸ್ಮರಣೆಯಲ್ಲಿ ಬನದ ಸಿರಿಯಲ್ಲಿ ಬಂದು ನಿಲ್ಲುವನು. ಕಾಯಕವು ನೆನಪಾಗಿ, ಕುದುರೆಗೆ ಹುಲ್ಲನ್ನು ಕೊಯ್ದು ಎತ್ತಿನ ಮೇಲೆ ಹೇರಿ, ತಾನು ಶಿವಪೂಜೆಯಿಂದ ಸಂದಣಿಪ ಪುಳಕವುಂ ತನ್ನ ಮೈಯಲ್ಲಿ ಹೇರಿ, ನಡೆತಂದು ಚೋಳರಾಜನ ಅಶ್ವಶಾಲೆಯ ಮುಂದೆ ವೇಳೆಗೆ ಸರಿಯಾಗಿ ಹುಲ್ಲು ಹೊರೆಯನು ಚಲ್ಲಿ, ಬಳಲಿ ಭರದಿಂದ ಮನೆಗೆ ಬಂದು ಕುಳ್ಳಿರುವದೇ ತಡ, ಮತ್ತೆ ಲಿಂಗಧ್ಯಾನ. ಇತ್ತ ಕಡು ಬಡವೆಯರಾದ ಆ ಚನ್ನಯ್ಯಗಳರಸಿಯರು ಶಿವನಿತ್ತುದನ್ನೇ ಭಕ್ತಿಯಿಂದ ಭೋನವುಂ ಮಾಡಿ, ತಂದುಣಬಡಿಸಲು, ಧ್ಯಾನಾವೃತ ಪುತ್ರರಾದ ಚನ್ನಯ್ಯಗಳು ಉಳ್ಳುದೇ ಅವೃತವೆಂದು ಭಾವಿಸಿ, ಶಿವ

ಲಿಂಗಕ್ಕೆ ಸುಖದಿಂದರ್ಪಿಸಿ ಆ ಲಿಂಗಪ್ರಸಾದವನ್ನು ಪ್ರೀತಿಯಿಂದ ಕೈಕೊಂಡು ತೃಪ್ತರಾಗುತ್ತಿದ್ದರು.

ಈ ತೆರದೊಳವರುವತ್ತು ವರುಷಗಳುರುಳಿ ಹರನು ಗುಪ್ತ ಭಕ್ತನಾದ ನಸ್ಮೀ ಚನ್ನನನ್ನು ಧರೆಯೊಳವೆಂದು ಮೆರೆಯಿಸಲಿ, ಮಹಾಪದವಿಯನೀಯಲಿ, ಎಂದು ಯೋಚನೆಯೊಳಗಾಗುವನು. ಇತ್ತ ಚನ್ನಯ್ಯಗಳು ಎಂದಿನಂತೆ ಹೊಲಕ್ಕೆ ಹೋಗಿ, ಹೊಳೆಯ ಧಡಕ್ಕೆ ಬಂದು, ಹರನ ಪೂಜೆಯ ಮಾಡಿ, ಹರುಷವೇರಿ ಆಡಿ-ಹಾಡಿ ಮೈಮರೆತಿರಲು ಒಮ್ಮೆಲೆ ಕಾಯಕದ ನೆನಪಾಗಿ ಎಚ್ಚತ್ತು ವೇಳೆಮಿಕ್ಕುವದೆಂದು ವೇಗದಿಂದ ವನದೊಳಗೆ ಹೋಗಿ, ಬೇಗ ಬೇಗ ಹುಲ್ಲೊಯ್ದು ಎತ್ತಿನ ಮೇಲೆ ಹೊರೆ ಹೇರಿ ಗಳಗಳನೆ ಹೊಡೆತಂದು ಅಶ್ವಶಾಲೆಯಲ್ಲಿ ಹುಲ್ಲು ಹೊರೆಯನಂ ಒಗೆದು, ಸೊಂಪೇರಿ ಮನೆಗೆ ಬಂದು ಚಿತ್ತದೊಳ್ ಕೃತ್ತಿವಾಸನ ನೆನೆಯುತ್ತ ಕುಳ್ಳಿರಲು, ಅರಸಿಯರು ಅಂಬಲಿಯ ತಂದು ಎಡೆಬಡಿಸಿ, ಉಪ್ಪುಗಾಯುಂ ಹಚ್ಚಿ, ಶಾಕಪಾಕಂಗಳಂ ನೀಡಿ ನಿಲ್ಲುತಿರೆ, ಅವನ್ನು ಚನ್ನಯ್ಯಗಳೊಲವಿಂದ ಲಿಂಗಾರ್ಪಿತವ ಮಾಡಿ, ಮನವಿಟ್ಟು ಕೈಯಿಟ್ಟು ಭಕ್ತಿರಸವನು ಬೆರಸಿ ಕೈಕೊಳ್ವಲ್ಲಿ ಆ ಅಂಬಲಿಯ ಸವಿ ಜಿಹ್ವೆಯುಂ ಮುತ್ತಿ, ಶಿವಲಿಂಗವುಂ ತಾಗೆ ಅಮೃತದ ಸವಿಗಿಂತ ಅಂಬಲಿಯ ಸವಿ ನೂರ್ಮಡಿಲು ಸಾಸಿರಪಾಲು ಹೆಚ್ಚಾಗುವದು. ಆ ಸವಿಗೆ ಶಿವನು ಲವಲವಿಸಿ—

"ಕೊಂಡನೇನೆಂಬೆನಾಂ ಚನ್ನಯ್ಯನೊಂದಾಗಿ।
ಉಂಡನಭವಂ ಸ್ವರ್ಗಮರ್ತ್ಯಕ್ಕೆಪೊಸತಾಗಿ॥
ಒಂದು ಸುರಿಯೊಳಗೆ ಕೈವಂದುದೇ ಶಿವಪದಂ।
ನುಂದೆ ಸವಿದರ್ಪಿಸುವದಕ್ಕಿಲ್ಲ ಘನಪದಂ॥
ಎಂದಂಜಿಕೊಂಡನಾಶಿವನು ....."।

ಕವಿಯು ಚನ್ನಯ್ಯನಂಬಲಿಯ ಸವಿಯ ಘನತೆಯನ್ನು ಎಷ್ಟೊಂದು ಸೊಗಸಾಗಿ ಚಿತ್ರಿಸುವನು ನೋಡಿ! ಸ್ವರ್ಗ ಮರ್ತ್ಯಗಳೆರಡಕ್ಕೂ ಪೊಸತಾಗಿ ಹರನುಂಡ ಊಟವನು ಇನ್ನಾವ ಶಬ್ದಗಳಿಂದ ಬಣ್ಣಿಸೋಣ!! ಸಾಕ್ಷಾತ್ ಶಿವನೇ ಮನಸೋತ ಚನ್ನಯ್ಯನಂಬಲಿಯ ಸವಿಯನ್ನು ಹೀಯಾಳಿಸುವ ಸುಧೆಯಾವುದಿದೆ ಹೇಳಿ ನೋಡೋಣ!!! ಅಹಾ! ಭಕ್ತಿರಸದ ಸ್ವಾದವೇ ಆ ತೆರನಾದುದು. ಆ ಸ್ವಾದಕ್ಕೆ ಮೂಲೋಕದಲ್ಲಿಯೂ

ಪ್ರತಿಯಿಲ್ಲ. ಆ ಸವಿಯನ್ನು ಶಿವನೊಮ್ಮೆ ಸುರಿದು, ಆ ಸುರಿತಕ್ಕೆ ಸರಿಯಾದ ತನ್ನ ಪದವನ್ನೇ ಕೊಟ್ಟು ಬಿಟ್ಟನಂತೆ. ಆ ಮೇಲೆ ಮತ್ತೊಮ್ಮೆ ಸುರಿಯಬೇಕೆಂದರೆ ಅದಕ್ಕೇನು ಕೊಡಲಿ, ಎಂದು ಅಂಜಿಕೊಂಡನಂತೆ. ಕೇಳಿ ಎಂತಹ ಮಾತಿದು. ನೋಡಿ ಭಕ್ತಿರಸದ ಭವ್ಯ ದಿವ್ಯ ಪ್ರಭಾವವನು. ಈ ತೆರನಾದ ಚನ್ನಯ್ಯಗಳ ಅಂಬಲಿಯ ಅನನ್ಯವಾದ ಅಮೃತದ ಸವಿಯನ್ನು ಸವಿದು ಸವಿಗಲಿತ ಶಿವನು, ಕಣ್ಣಪ್ಪನರ್ಪಿಸಿದ ಖಂಡ ಮಾಂಸಕ್ಕೆ ಮನವೆಳಿಸದೆ ಭೂತಸಂಕುಳಕೆ ಹಂಚಿದನೆಂದು ಹೇಳುವಲ್ಲಿ ಆಶ್ಚರ್ಯವೇನು ?

ಪರಮಾತ್ಮನಲ್ಲಿ ಪ್ರೇಮವೊಂದನ್ನಿಡದೆ ಬೇರೆ ಬೇಕಾದಂಥ ನೇಮವನ್ನಿಟ್ಟುಗೊಂಡರೂ ಅವೆಲ್ಲ ವ್ಯರ್ಥ. ಅವುಗಳಿಂದ ದೇವಾನುಗ್ರಹವನ್ನು ಪಡೆಯಲು ಸಾಧ್ಯವಿಲ್ಲ. ಆತನಲ್ಲಿ ಕೇವಲ ಸಾತ್ವಿಕವಾದ ನಿರ್ಹೇತುಕವಾದ ಪ್ರೇಮ (ಭಕ್ತಿ) ವೊಂದಿದ್ದರಾಯಿತು. ಅದರೊಡನೆ ಬೇರೆ ಯಾವದನ್ನರ್ಪಿಸಿದರೂ ಅದು ಆತನಿಗೆ ಅಮೃತ. ಅವನೇ ಆತನಿಗೆ ಪರಮ ಭಕ್ತ.

"ಹಾಲ ನೇಮ, ಹಾಲಕೆನೆಯ ನೇಮ, ಕೆನೆಯ ತಪ್ಪಿದ ಬಳಿಕ
ಕೆಚ್ಚಡಿಯ ನೇಮ.
ಬೆಣ್ಣೆಯ ನೇಮ, ಬೆಲ್ಲದ ನೇಮ, ಅಂಬಲಿಯ ನೇಮದವರಾರನೂ
ಕಾಣೆ. ಕೂಡಲ
ಸಂಗನ ಶರಣರಲ್ಲಿ ಅಂಬಲಿಯ ನೇಮದಾತ ಮಾದಾರಚನ್ನಯ್ಯ."

ಮನವೊಂದಿಲ್ಲದೆ ಇಲ್ಲದ ನೇಮವ ಹಿಡಿದು, ಮಾಡಿ, ನೀಡಿ ಕೆಟ್ಟು ಹೋಗುವವರೇ ಬಹಳ. ಇದ್ದುದ ವಂಚನೆಯ ಮಾಡದೆ, ಪ್ರತಿಫಲ ವಾಂಛಿಸದೆ, ಪ್ರೇಮಪರವಶರಾಗಿ ಶಿವನಿಗರ್ಪಿಸುವವರು ವಿರಳ. ಇಂಥವನು ನಮ್ಮ ಮಾದರ ಚನ್ನಯ್ಯನೊಬ್ಬನಲ್ಲದೆ ಇನ್ನಾರನು ಕಾಣೆ ಎಂದು ಬಸವಣ್ಣನು ಚನ್ನಯ್ಯಗಳ ಮೇಲಣ ಪ್ರೇಮದ ಭರ ಹರಿಯದೆ ಮೇಲಿಂದ ಮೇಲೆ ಇನಿತು ಬಣ್ಣಿಸುವನು.

"ಎನಗೆ ಗುರುವಿನ ಪ್ರಸಾದ. ನಿನಗೆ ಚನ್ನನ ಪ್ರಸಾದ. ಎನಗೆಯೂ ನಿನಗೆಯೂ ಸಮಯಾಚಾರ ಸರಿ. ಕೂಡಲಸಂಗಮದೇವಾ ! ನೀನೆನಗೆ ಚಿಕ್ಕ ತಮ್ಮ." ಚನ್ನನ ಪ್ರಸಾದಕ್ಕೆ ಪರಮಾತ್ಮನು ಎಷ್ಟೊಂದು ಮನಸೋತಿದ್ದನೆಂಬುದು ಇದರಿಂದ ನಮಗೆ ಜಿನ್ನಾಗಿ ತಿಳಿದುಬರುತ್ತದೆ. ಇದಲ್ಲದೆ ಬಸವಣ್ಣನವರಿಗೆ ಪ್ರತಿಯೊಂದು ಮಾತಿಗೂ ಚನ್ನಯ್ಯನವರನ್ನು ಬಣ್ಣಿಸದಿದ್ದರೆ ಸಮಾಧಾನವಿಲ್ಲ; ಶಾಂತಿಯಿದ್ದಿಲ್ಲ. ಇದರಿಂದ ಚನ್ನಯ್ಯಗಳ ನಡತೆಯು ಬಸವಣ್ಣನವರ ಹೃದಯದಲ್ಲಿ ಎಷ್ಟೊಂದು ಆಳವಾಗಿ ಇಳಿದು ಮನೆಮಾಡಿಕೊಂಡಿತ್ತೆಂಬುದು ವ್ಯಕ್ತವಾಗುತ್ತಿದೆ.

ಹೀಗೆ ಶಿವನು ಚನ್ನನೊಡನೆ ಅಮೃತಪ್ರಾಯವಾದ ಅಂಬಲಿಯನ್ನುಂಡು ಸುಖದಿಂದಿರಲು ಸೂರ್ಯೋದಯವು ಸಮೀಪಿಸಿದೆ. ನಿತ್ಯ ನೇಮದಂತೆ ಜೋಳರಾಜನು ಪೂಜೆಗೈಯಲು ದೇವಾಲಯಕ್ಕೆ ಬಂದಿದ್ದಾನೆ. ದೇವರಿಗೆ ಕೈಮುಗಿದು ವಾಮಭಾಗದಿ ಕುಳಿತು, ಷೋಡಶೋಪಚಾರದಿಂದ--ರಾಜೋಪಚಾರದಿಂದ ಪೂಜಿಸಿದ್ದಾನೆ. ಆಮೇಲೆ ಪ್ರದಕ್ಷಿಣೆಮಾಡಿ ಪೊಡಮಟ್ಟು, ನವವಸ್ತ್ರಗಳನ್ನೂ ನೂತನರತ್ನಗಳನ್ನೂ ತರಿಸಿ ಶಿವಲಿಂಗವಕ್ಕಲಂಕರಿಸಿ, ನೇಹದಿಂ ನೋಡಿ, ಮುದದಿಂ ಹಾಡಿ ನಲಿನಲಿದು ರಾಜೋಪಚಾರದಿಂದಿಂತು ಎಡೆಬಡಿಸುವನು. ರನ್ನದಡ್ಡಣಿಗೆಗಳಮೇಲೆ ಹೊನ್ನ ಹರಿವಾಣಗಳನಿರಿಸಿದ್ದಾನೆ. ದೇವಾನ್ನ-ದಿವ್ಯಾನ್ನ ಅಮೃತಾನ್ನಗಳನ್ನು ಬಡಿಸಿದ್ದಾನೆ. ಮೇಲೆ ಶಾಕಂಗಳನಿರಿಸಿ, ಹಪ್ಪಳಗಳನ್ನಿಟ್ಟು, ಚಲುಪಾಲ ಬಟ್ಟಲಗಳನಡೆ ಮಾಡಿದ್ದಾನೆ. ಕಂಪು ತುಪ್ಪ-ಕೆನೆಮೊಸರು-ಸಕ್ಕರೆಗಳೆಲ್ಲವನ್ನು ಎಡೆಮಾಡಿ, ಜವನಿಕೆಯಿಂದ ಮುಚ್ಚಿ, ಓ ಮೃಡನೆ! ಶರಣಾಗತರಕ್ಷಕನೆ !! ಆರೋಗಿಸೆಂದೊಲನಿಂದ ನಮಸ್ಕರಿಸಿ, ಜವನಿಕೆಗೆ ಕೈವಿಗೊಟ್ಟು ನಿಲ್ಲುವನು. ಶಿವನು ತನ್ನ ಮುಂದಿರಿಸಿದ ರಾಜಾನ್ನಗಳನ್ನು ಸ್ವಲ್ಪಾ ಮುಟ್ಟದೆ ಸುಮ್ಮನಿರಲು ಎಂದಿನಂತೆ ಉಂಬ ಬಾಯ್ದನಿಯು ಇಂದೇಕೆ ಕೇಳಲೊಲ್ಲದು ? ಎಂದು ಅರಸನು ಶಂಕಿಸಿ ಶೀಘ್ರದಿಂದ ಜವನಿಕೆಯ ತೆಗೆದು ನೋಡುವನು. ಶಿವನು ಎಷ್ಟೂ ಪರಕಿಸದೆ, ಲೆಕ್ಕಿಸದೆ, ಕಂಪಿಸದೆ ಇರುವದನ್ನು ಕಂಡು ಕಳವಳಿಸಿ, ಕೆಟ್ಟಿಸೆಂದು ಕೂಗಿ ಓ ಪರಮಪತಿಯೆ! ಇಂದೇಕೆ ಉಣಲೊಲ್ಲೆ! ಇಂದು ಅನುಗ್ರಹಿಸದೆ ಕುಪಿಸಲು ಕಾರಣವೇನು ? ನಿನ್ನೊಲುಮೆಯಿಲ್ಲದೆ ಈ ವಸುಮತಿಯೂ ಈ ಅಸುಗಳೂ ಇದ್ದೇನು ಫಲ ? ಎಂದು ನಿಂದಿಸಿಕೊಳ್ಳುತ್ತ ಕತ್ತಿಯನ್ನು ಒರೆದು ಕತ್ತನ್ನು ಕತ್ತರಿಸಿಕೊಳ್ಳಲು ಪ್ರಾರಂಭಿಸುವನು. ಇದನ್ನು ಶಂಕರನು ನೋಡಿ, ಓಹೋ ! ವಿಚಾರವಿಲ್ಲದೆ ಇಂತು ಮಾಳ್ಪುದೇ ? ನಿನ್ನರಸುತನವನೆನಗೆ ತೋರುವುದೇ ? ಬೇಡ ಬೇಡ. ಎಲೋ

ಜೋಳಭೂಪನೇ! ನಿನಗಿನಿತು ಸಹ ಸೈರಣೆಯಿಲ್ಲವಲ್ಲ! ನಾವು ಚನ್ನ
ನೊಡನೆ ಉಂಡಿರುವೆವಾದ್ದರಿಂದ ನನುಗಿಂದು ಹಸಿವಿಲ್ಲ.

ಕೇಳಂಬಕಳದ ಸವಿಯದನೇನನೆಂದಪೆಂ। ಜೋಳಾದಿಗಳ್ ಪಡೆಯರವ
ನೆಂತು ಬಣ್ಣಿಪೆಂ ॥
ಪಾಕದಿಂದಿಪ್ಪ ವಸ್ತುಗಳವಕೆ ಪಡಿಯಿಲ್ಲ। ಲೋಕದೋಳ್ ಕಾಣೆನಾಂ
ಪೇಳ್ವೊಡಂ ಪ್ರತಿಯಿಲ್ಲ ॥
ದೇವಾನ್ನ ದಿವ್ಯಾನ್ನವೆಂಬುವಂ ನೇಳಿಪುದು। ಭಾವಿಸುವೊಡಿನ್ನದಂ
ಪೆಸರಿಡಲ್ಕೇನರಿದು ॥
ಕ್ಷೀರ ಮುಘುಗಳ ರುಚಿಯದಕ್ಕೆ ಕೇಳ್ಸರಿಯಿಲ್ಲ। ಹಾರಯಿಸಿ ಸವಿಯುಳ್ಳ
ಸಕ್ಕರೆಯುಮೆಣೆಯಿಲ್ಲ ॥
ಎಂದು ಶಿವನಾ ಲಿಂಗದೊಳ್ ಪೊಕ್ಕನಾಕ್ಷಣಂ। ನಿಂದುಜೋಳಂ
ಕೌತುಕಂಬಟ್ಟನಾಕ್ಷಣಂ ॥

ಇವನ್ನು ಕೇಳಿ ಜೋಳಭೂಪನು ಬೆರಗಾಗಿ ಬೆಚ್ಚಿ ಬಿದ್ದಿದ್ದಾನೆ. ಏನು? ಪಾಪರ ಚನ್ನನ ಮನೆಯಲ್ಲಿ ಮಹಾದೇವನುಂಡನೇ? ಎಂದು ಚಿಂತೆಯಲ್ಲಿ ಮಗ್ನನಾಗುವನು. ಆಮೇಲೆ ಚಿಂತೆಯಿಂದೆಚ್ಚತ್ತು ಶಿವನಿಗುಣ ಬಡಿಸಿದ ಚನ್ನಶರಣನನ್ನು ಇಂತು ಕಂಡೆನೆ? ಅಯ್ಯೋ ಮುಂದೆ ಎಂತು ಕಾಣುವೆನು? ಹರುಷದಿಂದವನ ಚರಣಕ್ಕೆ ಎಂದು ಬಾಗಿ ಬೀಗುವೆನ-? ಎಂದು ಜೋಳನಿಗೆ ಚನ್ನಯ್ಯಗಳಲ್ಲಿ ಆದರಾತುರಗಳುಕ್ಕಿ ತಾನು ರಾಜನಾಗಿದ್ದರೂ ಕಾಲ್ನಡಿಗೆಯಿಂದ ಚನ್ನನನ್ನು ಹುಡುಕಲು ಹೊರಡುವನು! ಸುತ್ತಲೂ ಸೇವಕರು-ರಾಜಕುವರರು ನೆರೆದು ಬೆಂಬತ್ತಿದ್ದಾರೆ. ಜೋಳ ರಾಜನ ಮನದಲ್ಲಿ ಚನ್ನನ ಕೀರ್ತಿತುಂಬಿ, ಕಣ್ಣಲ್ಲಿ ಮೂರ್ತಿತುಂಬಿ ಹಾದಿಹಾದಿಯಲ್ಲಿ ನಿಂತವರನ್ನು ನೆರೆದವರನ್ನು ಕೇಳಹತ್ತಿದ್ದಾನೆ. ತನ್ನತ್ತ ಬಂದವರನ್ನು ಬರುವವರನ್ನು ಹೀಗೆ ಕೇಳಹತ್ತಿದ್ದಾನೆ—

ಸಕಲಗುಣ ಜಲಧಿ ಚನ್ನಯ್ಯನಂ ಕಂಡಿರೇ। ಅಕಳಂಕ ಚರಿತ ಚನ್ನ
ಯ್ಯನಂ ಕಂಡಿರೇ ॥
ಎನ್ನಗತಿ ಎನ್ನಮತಿ ಚನ್ನನಂ ಕಂಡಿರೇ। ಎನ್ನ ನಿಧಿ ಎನ್ನ ಸುಖ ಚನ್ನನಂ
ಕಂಡಿರೇ ॥
ಶಿವನ ಸದ್ಭಕ್ತನಂ ಚನ್ನನಂ ಕಂಡಿರೇ। ಶಿವನಂತರಂಗದೊಳಭಿನ್ನನಂ
ಕಂಡಿರೇ ॥
ಗುರುಲಿಂಗದೊಡನುಂಡ ಚನ್ನನಂ ಕಾಣಿರೇ। ಪುರಹರಂಗುಣಲಿತ್ತ
ಚನ್ನನಂ ತೋರಿರೇ ॥

ಹೀಗೆ ಕೇಳಿಕೇಳಿದಂತೆ ಆತನ ಹೃದಯದಲ್ಲಿ ಉತ್ಸುಂತತೆಯು ಹೆಚ್ಚಿ ಹೆಚ್ಚುತ್ತ ಹೋಗಿದೆ. ಹೆಚ್ಚಾಗಿ ರೂಪುಗೊಂಡು ನರ್ತಿಸಹತ್ತಿದೆ. ಕೊನೆಗೆ ಚನ್ನನ ವಿರಹ ಸಂತಾಪವು ಶಬ್ದರೂಪಗೊಂಡು ಮುಖದಿಂದ ಮತ್ತೆ ಮತ್ತೆ ಈ ಪಂ ಹೊರಬೀಳತೊಡಗಿದೆ—

ತೋರಿರೇ ಚಂದ್ರಸೌಲಿಯ ಭಕ್ತ ಚನ್ನನಂ ತೋರಿರೇ। ಷಡ್ವರ್ಗಕರ್ಣನಂ
ಚನ್ನನಂ ॥
ಚನ್ನನಂ ತೋರಿ ಎನ್ನಂ ಕಾಯ್ದುಕೊಳ್ಳಿರೇ। ಚನ್ನಯ್ಯ ನೆನ್ನಯ್ಯ
ನಿರ್ದೆಡೆಯನರುಪಿರೇ ॥
ಚನ್ನಯ್ಯನಿರ್ಪಗುಡಿಯಿದೇ ಎಂದು ತೋರಿರೇ। ಚನ್ನಯ್ಯ ಭಕ್ತನೆನ್ನ
ಯ್ಯನಂ ತೋರಿರೇ ॥
ಅಯ್ಯೋ ಮಹಾದೇವ ಚಪ್ಪೊಳ್ತು ಕಾಣ್ಬೆನೇ। ಅಯ್ಯೋಪದಪ್ಪಯವನೆಂ
ದಪ್ಪಿಕೊಳ್ವೆನೇ ॥

ಎಂದು ಮುಂತಾಗಿ ಚನ್ನಯ್ಯನ ಚಿಂತೆ ಜೋಳರಾಜನ ಚಿತ್ತವನ್ನೆಲ್ಲಾ ವ್ಯಾಪಿಸಿಬಿಟ್ಟಿತ್ತು. ಪ್ರತಿಕ್ಷಣವೂ ಚನ್ನನ ಚಿತ್ರವು ಕಣ್ಣಿಗೆ ಕಟ್ಟಿದಂತಾಗುತ್ತಿತ್ತು. ಪ್ರತಿಸೊಲ್ಲಿನಲ್ಲಿಯೂ ಚನ್ನನ ಮಹಿಮೆ-ಮೇಲ್ಮೆಗಳು ಹೊರಬೀಳುತ್ತಿದ್ದವು. ಸಾಲದೆ ಚಾರರನ್ನು ಹುಡುಕಲು ಮುಂದೆ ಮುಂದೆ ಕಳುಹುವನು. ಆ ಚಾರರು ದೊಡ್ಡ ದೊಡ್ಡ ಕೇರಿಗಳಲ್ಲಿ ಹುಡುಕುತ್ತ ಚನ್ನನಿರುವ ಮನೆಯಾವುದೆಂದು ಕೇಳುತ್ತ ಬರುತಿರಲು ಕೆಲವರು ಒಂದೇ ಸ್ವರದಲ್ಲಿ ಇದೇ ಇದೇ ಎಂದು ತೋರುವರು.

ಬಾಗಿಲ ಬಳಿಗೆ ಬಂದ ನೃಪಚಾರರನ್ನು ಕಂಡು ಒಳಗಿರುವ ಚನ್ನಯ್ಯನತಿಕಂದಿ ಕುಂದಿ ಇದೇನೆನುತ ಇಣಿಕಿ ನೋಡಿ—ಓ! ಅರಮನೆಯ ಚಾರರೇ? ಇವರೇಕೆ? ಎಂದು ಎದೆಗುಂದಿ ನಿಲ್ಲುವಷ್ಟರಲ್ಲಿ ಎದುರಿಗೆ ಬರುವ ಅರಸನನ್ನು ಕಂಡು ಅತ್ಯಂತಭಾಗಿ ಖತಿಗೊಂಡು ಹೇ ದೇವಾ! ಅರಸನೇಕೆ ಈ ತಿರುಕನ ಮನೆಗೆ? ಏನಿವ, ನಿನ್ನ ತಂತ್ರ! ಒಂದು ವೇಳೆ ಬಂದರೂ ಚಿಂತೆಯಿಲ್ಲ. ನನ್ನನ್ನು ನಿನ್ನ ಭಕ್ತನೆಂದರಿಯದಿರ್ದಡೆ ಬದುಕುವೆನು. ಇಲ್ಲವಾದಡೆ ಎಂತು ನಾ ಮುಂದೆ ನಾ ಬಾಳುವದು? ಶಿವಶಿವಾ! ರಾಜನು ಬಂದೇ ಬಿಟ್ಟನು. ಏತಕ್ಕಾಗಿಯೋ? ಏನಾಗುವದೋ? ಅವಿಚಾರದಿಂದ ಹೀಗೆ ಮಾಡುವದು (ಹೇಳಿ ಕಳುಹುವದು) ಉಚಿತವೇ

ದೇವಾ! ಎಂದು ಚನ್ನಯ್ಯಗಳು ಚಿಂತಿಸುತ್ತಿರಲು ಜೋಳನ ಚಾರರು ಬಂದು ಗುಡಿಸಲವನ್ನು ಮುತ್ತುವರು; ಮುದದಿಂದ ಜಯಘೋಷವನ್ನು ಮಾಡುವರು; ಚನ್ನಯ್ಯಗಳನ್ನು ಕಂಡು ಚರಣಗಳಿಗೆ ಬಾಗುವರು. ಅಷ್ಟರಲ್ಲಿಯೇ ಉದ್ಘೋಷಿಸುವ ರಾಜಪುತ್ರರ ನಡುವೆ ಬರುವ ಸಮ್ಯಜ್ಞಾನಿ ಸತ್ಯಸ್ವಾಣಿಯಾವ ಜೋಳರಾಜನು ಸದ್ಭಕ್ತಿಯಿಂದಲ್ಲಿಗೆ ಗಳಗಳನೆ ಬಂದು—

ಭಕ್ತಿಗುಡಿಸಿರ್ದಗುಡಿಸಲೊಳಿರ್ಪನಂ ಕಂಡು।
ಮುಕ್ತಿಮೂವಡಿಸಿ ಮುಂದಡಸಿರ್ದನಂ ಕಂಡು॥
ಪುಕುಕಿಸುತೆ ಪುಟವೇರುತುರ್ಬುತುಂ ಕೊರ್ಬುತುಂ।
ಇಳಿವಶ್ರು ಜಲದಿಂದೆ ಮೂಡುತುಂ ಮುಳುಗುತುಂ॥
ಎನ್ನೊಡೆಯನಿದನಿದನೆ ಚನ್ನಯ್ಯನೆಂದೆನುತ।
ಎನ್ನಸುಧೆ ಇದನಿದನೆ ಚನ್ನಯ್ಯನೆಂದೆನುತ॥
ಇಳುಪಿದಂ ಸರ್ವಾಂಗಮುಂ ಚನ್ನನಂಘ್ರಿಯೊಳ್।
ತೊಳತೊಳಗೆ ಮಣಿಮುಕುಟ ಕಾಂತಿಪದ ಭೂವಿಯೊಳ್॥
.....'ಪಾದಮುಂ ಬಲ್ಪಿಡಿದು ಬಿಡೆನೆಂದು ಹೆಣಗುತಿರೆ.'

ಇಲ್ಲಿ ಕೊಂಚ ವರ್ಣನೆಯು ಒಡೆದು ತೋರುವಂತಿದ್ದರೂ ನಿಜವಾಗಿಯೂ ಜೋಳರಾಜನು ಚನ್ನಯ್ಯನನ್ನು ಚನ್ನಾಗಿ ಪ್ರೀತಿಸುವನೆಂದು ತೋರುವದು. ಏಕೆಂದರೆ ಸಹೋದ್ಯೋಗಿಗಳಲ್ಲಿ ಶ್ರೇಷ್ಠ ಪುರುಷರಲ್ಲಿ ಸ್ನೇಹಾದರಗಳು ಹುಟ್ಟುವದು ಸಹಜವಿದೆ. ಈ ಕಾರಣದಿಂದ ಜೋಳನಿಗೆ ಚನ್ನಯ್ಯಗಳಲ್ಲಿ ಒಲವು ಒಡಮೂಡಿ ಓಲಾಡಿ ಸರ್ವಾಂಗ ನಮಸ್ಕಾರ ಮಾಡಿ, ಕೊಂಡಾಡಿ ಓ ಎನ್ನ ಚನ್ನಯ್ಯ ಇನ್ನು ನಿನ್ನ ಪಾದವ ಬಿಡಲಾರೆ. ಬಡವನಿಗೆ ಭಾಗ್ಯದೊರೆತಂತಾಗಿದೆ. ಕುರುಡನಿಗೆ ಕಣ್ಬಂದಂತಾಗಿದೆ. ಎಂದು ಮುಂತಾಗಿ ಜೋಳರಾಜನು, ಭಕ್ತಿ ಬಲವನ್ನು ಮಾಡುವನು. ಆಗ ಚನ್ನಯ್ಯಗಳು—ಏನಯ್ಯ ಜೋಳಭೂಪಾಲ! ಸೂರ್ಯವಂಶದ ಮುಕುರ!! ನೀನಿಂತು ಬರುವುದುಚಿತವೇ? ಎನ್ನ ಕುಲ-ಜಾತಿಗಳನೆ ಜಿಸದೆ ನೀನಿಂತು ಬರುವುದೆ? ಸೂರ್ಯವಂಶದವರು ಶೂದ್ರರ ಮನೆಗೆ ಬರುವದು ನ್ಯಾಯವೇ? ಪಾಲಕರು ಸೇವಕರ ಗುಡಿಸಲಿಗೆ ಬರುವದು ಅನ್ಯಾಯವಲ್ಲವೇ? ನೀವು ಮಡಿದರೆ ವೀರಸ್ವರ್ಗ; ಉಳಿದರೆ ಭುವನ ಭೋಗ. ನಿಮಗೆ ನರಕವೆಂಬುದಿಲ್ಲ. ಇಂಥ ನೀವು ಇಂತು ಬರುವದೆ?

ಎಂದರೂ ಚಿಂತೆಯಿಲ್ಲ. ಕಾಲ್ಪಿಡಿಯುವದೇ? ಲೋಕಕ್ಕಿದು ವಿಪರೀತವಲ್ಲವೇ? ಏನಿದೇನಿದು? ಎನುತ ಗದ್ಗದಿಸಿ ಕಂಪನಂ ಗೊಂಡು ಕೈವಿಡಿದು ತನ್ನ ಕಾಲಬಿಡಿಸಲು ಯತ್ನಿಸುವನು. ಏನು ಮಾಡಿದರೂ ರಾಜನು ಬಿಡದಿರುವದನ್ನು ಕಂಡು—ಓ ಜೋಳ ಭೂಪಾಲ! ನೀನೆನ್ನ ಕಾಲ್ಬಿಡದಿದ್ದರೆ 'ನಿನಗೆ ನಿನ್ನಾಣೆ-ಎನ್ನಾಣೆ' ಎಂದು ಆಣೆಯಿಟ್ಟು, ಅಂಜಿಕೆಹಾಕಿ, ಬಿಡು, ಬಿಡು, ಬೇಗಬಿಡು, ಎಂದೆನಲು ಅದಕ್ಕಳುಕದೆ ರಾಜನು—

ಎಲೆದೇವ! ದೇವನೊಲ್ದನ ಕುಲಂ ಸತ್ಕುಲಂ।
ಘನಮಹಿಮನೊಲ್ದ ಜಾತಿಯೇಜಾತಿ ನಿರ್ಮಲಂ॥
ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ?।
ಸರ್ವಜ್ಞ ನಿಮ್ಮ ಕೆರವಿಂಗೆನ್ನ ಶಿರ ಸರಿಯೇ?॥

ಎಂದು ಉತ್ತರಿಸುವನು. ಇಲ್ಲಿ ಜೋಳನು ಹೇಳಿದ ಮಾತಿಗೂ ಬಸವಣ್ಣನ ವಚನಗಳಿಗೂ ಎಷ್ಟೊಂದು ಪೋಲ್ಮೆಯಿದೆ ನೋಡಿ—

"...ಕುಲವೇನೋ ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು."

"ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ ಪಂಚಮಹಾವಾದ್ಯದಲ್ಲಿ ಸನ್ಮಾನವ ಮಾಡನೇ? ನೆಲನನುಳ್ಳಡಿಸಿ, ಉಳೆ, ಚಾಂಗು ಭಲಾ ಎಂದು? ಕುಲಕಧಿಕ ಹಾರುವಂಗೆ ಸಿದ್ಧಿಗೆಯ್ಯಸಲೆ ನಿಮ್ಮ ಶರಣರ ಮಹಿಮೆ ಘನಕ್ಕೆ ಘನ. ಎಲೆ ಕೂಡಲಸಂಗಮದೇವ, ನಿಮ್ಮ ನಂಬದವ ಹೊಲೆಯ"

"ನಿಮ್ಮ ಶರಣರ ಚರಣದ ಚಮ್ಮಾವುಗೆಗೆ ಪೃಥ್ವಿಸಮುಬಾರದಯ್ಯಾ"

"ಚತುರ್ವೇದಿಯಾದಡೇನು? ಲಿಂಗವಿಲ್ಲದವನೇ ಹೊಲೆಯ. ಶ್ವಪಚನಾದರೇನು? ಲಿಂಗವಿದ್ದವನೇ ವಾರಣಾಸಿ. ಆತನ ನುಡಿಗಡಣ ಲೇಸು. ಆತನ ನಡೆ ಜಗಕ್ಕೆ ಪಾವನ. ಆತನ ಪ್ರಸಾದವೆನಗಮೃತಸೇವನೆ.... ಕೂಡಲಸಂಗಮದೇವನನರಿತು ಪೂಜಿಸಿದಾತ ಪಡುದರ್ಶನಕ್ಕಧಿಕ, ಜಗಕ್ಕೆ ಪಾವನ ನೋಡಾ!" ಇದಲ್ಲದೆ

"ದೇವ ನಿಮ್ಮ ಪೂಜಿಸಿ ಚನ್ನನ ಕುಲ ಚನ್ನಾಯಿತ್ತು. ದೇವ ನಿಮ್ಮ ಪೂಜಿಸಿ ದಾಸನ ಕುಲ ದೇಸೆವಡೆಯಿತ್ತು. ದೇವ ನಿಮ್ಮಡಿಗೆರಗಿ ಮಡಿವಾಳಮಾಚಯ್ಯ ನಿಮ್ಮಡಿಯಾದ. ನೀನೊಲಿದ ಕುಲಕ್ಕೆ ನೀನೊಲಿದ ಹೊಲೆಗೆ ಮೇರೆಯುಂಟೇ ದೇವಾ!

ಹೀಗೆ ಬಸವಣ್ಣನವರ ಅಭಿಪ್ರಾಯವನ್ನೇ ಇಲ್ಲಿ ಕವಿಯು ಜೋಳನ ಬಾಯಿಂದ ರಗಳೆ ರೂಪಾಗಿ ಹೇಳಹಚ್ಚಿದ್ದಾನೆ. ಅದಿರಲಿ. ಕಡೆಗೆ ಜೋಳನು—'ಎಮ್ಮವರಧಿಕರು, ಎಲ್ಲರಿಂದಲೂ ಅಧಿಕರು, ಎಂಬ ಬಸವಣ್ಣನುಕ್ತಿಯನ್ನು ಭಕ್ತಿಯಿಂದ ಶಿರಸಾ ವಹಿಸಿ—

ಬಿಡೆನಯ್ಯ ನಿಮ್ಮ್ರ ಪದವಂ ಬಿಟ್ಟು ಬಾಳ್ವೆನೇ ? ।
ವೃಡಮೂರ್ತಿಯುಂ ಬಿಟ್ಟು ಸಂಸೃತಿಯೊಳಾಳ್ವೆನೇ ? ॥
ಪಲವು ಮಾತೇಕೆ ಶಿವನಲ್ಲಿಗೈತನ್ನಿರೇ ।
ಕುಲಗೋತ್ರದಿರವನೀಶ್ವರನೊಡನೆ ಪೇಳಿರೇ ! ॥

ನಾನು ಮಾತ್ರ ನಿಮ್ಮ ಪಾದಪದ್ಮವ ಬಿಡೆನು. ಬಿಟ್ಟು ಬದುಕುವದೆಂತು? ನಿನ್ನ ಪದವ ಬಿಟ್ಟರೆ ಸಂಸೃತಿಯು ಎನ್ನನು ಸೆರೆಯಾಳದೇ? ಹಲವು ಮಾತೇನು? ಇದು ನಿಮಗೆ ಒಪ್ಪಿಗೆಯಾಗದಿದ್ದರೆ ಶಿವನೆಡೆಗೆ ಬನ್ನಿ. ಕುಲಗೋತ್ರವ ವಿಷಯಕ್ಕೆ ನಿಮ್ಮಭಿಮತವನ್ನು ಅವನೆದುರು ಪೇಳಬನ್ನಿ ಎಂದು ಅರಸನು ಕರೆಯುತಿರಲು ಚನ್ನಯ್ಯಗಳದಕೊಪ್ಪುವರು. ಚನ್ನಯ್ಯಗಳು ಒಪ್ಪಿದುದೇ ಜೋಳನಿಗೆ ಸಾಕಾಯಿತು. ಬಡತನದಿಂದೆತ್ತಿ ಅವೃತವ ನೀಡಿದಂತಾಯಿತು. ಉತ್ಸಾಹಕ್ಕೆ ಮೇರೆಯಿಲ್ಲದಾಯಿತು. ಆತನ ಉಲ್ಲಾಸವು ನೂರ್ಮಡಿ, ಸಾಸಿರಮಡಿ, ಕೋಟಿಮಡಿ ಹೆಚ್ಚಿತು. ತರಿಸಿದಾನೆಯ ಮೇಲೆ ಚನ್ನಯ್ಯಗಳನೇರಿಸಿದನು. ಊರಕೇರಿಗಳಲ್ಲಿ ಗುಡಿಗಟ್ಟಿ ಶೃಂಗರಿಸಲು ಸಾರಿದನು. ಕ್ಷಣಕಾಲದಲ್ಲಿಯೇ ಎಲ್ಲೆಡೆಯಲ್ಲಿಯೂ ಸುದ್ದಿಯು ಹಬ್ಬಿತು. ಜನರು ಸೇರಿದರು. ಜಯಘೋಷವಾಗಿ ಮೆರವಣಿಗೆಯು ಸಾಗಿತು. ಆಗ ಆನಂದಾತಿಶಯದಿಂದ ಜೋಳರಾಜನು—

'ಮುಂದೆ ತುರಗವನೇರಿ ಕೆಲಬಲಕೆ ತೋರುತುಂ । ಮುಂದೈಪ
ಪುಳಕದಿಂ ಬೆಳೆದು ದಳವೇರುತುಂ ॥
ಚನ್ನಯ್ಯನಂ ನೋಡಿ ನೋಡಿ ಕೆಯ್ಮುಗಿವುತುಂ । ಉನ್ನತಂ
ಜ್ಞಾನಿ ಜೋಳಂ ಹೆಚ್ಚಿ ಹಿಗ್ಗುತುಂ ॥
ನಡಿತಂದುವೃಡನಾಲಯದ ಮುಂದೆ ನಿಂದಿರ್ದು । ಕಡುನೇಹದಿಂ
ಗಜದ ಮಗ್ಗಲತ್ತಂ ಸಾರ್ದು ॥
ಆನೆಯಿಂದಿಳುಹಿ ಮೆಲ್ಲನೆ ಬಂದು ಕೈಯೆತ್ತಿ ಬಾ । ದಾನನಿಧಿ ಚನ್ನಂ
ಸಂತಸದೆ ಮುಂದಿಟ್ಟ ॥

ಗಾಢವಾದ ಭಕ್ತಿಯ ಕೆಚ್ಚು ತುಂಬಿ ಇನಿತು ಉಲ್ಲಾಸ-ಉತ್ಸಾಹಗಳಿಂದ ಮೆರವಣಿಗೆಯ ಮುಗಿಸಿ, ಶಿವಾಲಯಕ್ಕೆ ಬಂದು, ಕುದುರೆಯಿಂದಿಳಿದು, ಆನೆಯ ಬಳಿಗೆ ಬಂದು, ಚನ್ನಯ್ಯಗಳಿಗೆ ಕೈಯ್ಹೊಟ್ಟು, ಮೆಲ್ಲಮೆಲ್ಲನೆ ಇಳುಹಿ, ಕರನಿಡಿದು ಶಿವಾಲಯದೊಳಗೆ ಕರೆದುಕೊಂಡು ಹೋಗುವನು. 'ಭಕ್ತಜನ ಕಲಹಲೀಲಾಲೋಲ' ನಾದ ಶಿವನನ್ನು ತೋರುವನು. ಆ ಶಿವನನ್ನು ಕಂಡೊಡನೆ ಚನ್ನಯ್ಯಗಳಿಗೆ ಭಕ್ತಿಕೋಪವು ಹೆಚ್ಚಾಗಿ 'ಓ ದೇವನೆ! ನೀನಿಂತು ದೂರುವದೇ? ಈಪರಿ ಜೋಳನಿಂದ ಹಿಡಿಸಿ ತರಿಸಲು ನಾನೇನು ತಪ್ಪುವಮಾಡಿರುವೆನೆ? ಹೇಳಯ್ಯ. ನಿಮ್ಮನ್ನು ಪದವಿಯನ್ನಾದರೂ ಬೇಡಿದೇನೆ? ಅರಿಯದಂಬಲಿಯನರ್ಪಿಸಿದರೆ ಇಂತರಿದು ಪೆರರಿಗೆ ದೂರುವದೆ? ಅಯ್ಯೋ! ಜಗಕ್ಕೆಲ್ಲ ಬೀರಿ ಗುರುವಾಯಿತೆನ್ನಭಕ್ತಿ. ವಾದಕ್ಕೆ ಅವಕಾಶವನ್ನು ತಂದಿಕ್ಕಿತೀ ಭಕ್ತಿ. ಇನ್ನಿಳೆಯೊಳಿರಲು ಎನಗೆ ಸಾಲದು ಶಕ್ತಿ. ಒಪ್ಪದು ಎನ್ನ ಮನ. ಸಾಕೀ ಗೌರವದ ಸಂಕೋಲೆ; ಬೇಡೀ ಶರೀರದ ಕೋಟಲೆ.' ಎಂದೆನುತೆ ಅಲಗನೆತ್ತಿ ಕೊರಳಿಗೆ ಹಚ್ಚಲು ಶಿವಲಿಂಗದಿಂದ ಶಿವನೆದ್ದು ಚನ್ನಯ್ಯನ ಕೈಪಿಡಿದು-ಓ! ಎನ್ನ ಚನ್ನಯ್ಯ! ವಿಚಾರಿಸದೆ ಇಂತು ಉದ್ಯವಿಸುವರೇ? ಮರೆತು ಜೋಳನಿಗೆ ಪೇಳಿದುದು ತಪ್ಪೆ? ಇಷ್ಟಕ್ಕೆ ಇನಿತು ಕೊಪವೇಕೆ? ಇನಿತು ತಾಪವೇಕೆ? ಬೇಡ, ಬೇಡ ಈ ಆಸುರೀಕರ್ಮ. ಅರಿಯದೆ ಅರುಹಿದೆನು ಸೈರಿಸೈ ಚನ್ನಯ್ಯ! ನಿನ್ನ ಮೇಲಣ ಪ್ರೇಮದಿಂದ ಪೇಳಿದೆನು. ಸೈರಿಸೈ ಚನ್ನಯ್ಯ !! ಎಂದು ಹಲವು ವಿಧವಾಗಿ ಹೇಳಿ, ಹೇಗೋ ಚನ್ನಯ್ಯಗಳಂ ಸಂತೈಸಿ, ಇತ್ತ ಜೋಳ ಭೂಪಾಲನ ಕಡೆಗೆ ಹೊರಳಿ, ನೋಡಯ್ಯ ಜೋಳ ಭೂಪಾಲ! ಚನ್ನಯ್ಯನಾಡಂಬರವಿಲ್ಲದ ಗುಪ್ತಾರ್ಜನೆಯ ಶಕ್ತಿಯನು; ಆತನ ಅತ್ಯಾದರದ ಭಕ್ತಿಯ ಪ್ರಭಾವವನು. ನಾನು ಆಡಂಬರದ ರಾಜಪೂಜೆಗೆ ಒಲಿಯುವವನಲ್ಲ. ಅಂತರಂಗದ ಅಮಿತ ಪ್ರೇಮಕ್ಕೆ ಒಲಿಯುವವನು. ನೀನರ್ಪಿಸಿದ ರಾಜಾನ್ನಗಳಿಗಿಂತಲೂ ಭಕ್ತಿರಸದಿಂದ ಬೆರೆದ ಚನ್ನಯ್ಯನಂಬಲಿಯು ನನಗೆ ಹೆಚ್ಚು ಮಧುರವಾದುದು. ಏನು ಮಾಡಿದರೆಯೂ ನನ್ನ ನೆನಹು ಬಿಡದಿರುವವರೇ ನನಗೆ ಪರಮ ಪ್ರಿಯರು. ಇಷ್ಟೇ ಅಲ್ಲ 'ನುಮುಭಕ್ತಾ ನುಮಾಧಿಕಾಃ" ಎಂದು ಹೇಳಿದ್ದಾದರೂ ಇಂಥವರಿಗಾಗಿಯೇ. ಹೀಗೆಂದು ಹೇಳುತ್ತ ನಿಂತ ಪರಮಾತ್ಮನಿಗೆ ಒನ್ಮೆಲೆ ಭಾವೋದ್ರೇಕಗೊಂಡು, ಭಕ್ತಾಭಿಮಾನ ಹೆಚ್ಚಿ—

ಭಾಪುಮಾದರ ಚನ್ನ ಪೂತುಮಾದರ ಚನ್ನ । ಸೋಪಾಧಿಕಂಪುಗದ
ಶೈವವಮಾದರ ಚನ್ನ ॥
ಗುಪ್ತಪೂಜೆಯ ಚನ್ನಗುರುತರಾಜ್ಞೆಯಚನ್ನ । ಆಪ್ತಗುಣ ನಿಧಿ ಚನ್ನ
ಎನ್ನ ಭಕ್ತಿಯ ಚನ್ನ ॥

ಎಂದು ಮನದಣಿ ಕೊಂಡಾಡಿ, ಮುಂಡಾಡಿ, ಒಂದಾಗಿ ನಿಂತಿರಲು ಅನಿತರೊಳು ಪೂಮಳೆಗಳೆರಗುವವು. ದುಂದುಭಿಕಹಳೆಗಳು ಗಗನದೊಳು ಮೊಳಗುವವು. ನಂದೀಶ್ವರಾದಿ ಗಣಸಂದೋಹದೊಡನೆ ಪುಷ್ಪಕ ವಿಮಾನವು ಬಂದು ನಿಲ್ಲುವದು. ಬಂದ ಪುಷ್ಪಕದೊಳಗೆ ಚನ್ನನಂ ಕುಳ್ಳಿರಿಸಿ, ಜೋಳನಂ ಬೀಳ್ಕೊಟ್ಟು, ಆಕಾಶಕ್ಕೆ ಹಾರಿ, ಕೈಲಾಸಕ್ಕೆ ಹೋಗಿ ಸಿಂಹಾಸನವನೇರುವನು. ಶೈಲಜೆಗೆ ಶರಣ ಚನ್ನಯ್ಯನಂ ಸಂತಸದಿ ತೋರುವನು. ಗಣಪದವಿಯನೀಯುವನು.

ಶಿವನಿತ್ತ ಗಣಪದವಿಯನ್ನು ಪಡೆದು, ಮಾದರ ಚನ್ನಯ್ಯ ಮಾದೇನರೊಂದಾಗಿ, ಭಕ್ತ ಚನ್ನಯ್ಯ ಭೂತೇಶರೊಂದಾಗಿ—

"ಕುಲತಿಲಕನೊಪ್ಪಿದಂ ಕುಲಹೀನನೊಪ್ಪಿದಂ । ಹೊಲೆಗಲಿಸಿ
ಭಕ್ತರೊಳ್ನಿಲಿಸಿರ್ಪನೊಪ್ಪಿದಂ ॥
ಉಲಿವವೇದಂಗಳ ಶಿಖಾರತ್ನನೊಪ್ಪಿದಂ । ಸಲಿಪೊಗಳ್ವಶರಣರ
ಸುಖಾಂಬೋಧಿಯೊಪ್ಪಿದಂ ॥
ಚನ್ನನ ಮಹಾನಿಧಿ ಮಹಾದಾನಿಯೊಪ್ಪಿದಂ । ಚನ್ನಹಂಪೆಯ
ವಿರೂಪಾಕ್ಷನಿಂತೊಪ್ಪಿದಂ ॥"

ಕೊನೆಗೆ ಚನ್ನಯ್ಯ ನೊಲ್ಮೆಯ ಪೆರ್ಮೆಯು ಹರಿಹರನಿಂದ 'ವೇದಶಿಖಾರತ್ನ" "ಶರಣಸುಖಾಂಬೋಧಿ" ಎಂಬ ಬಿರುದುಗಳನ್ನು ದೊರಕಿಸಿಯೇ ಬಿಟ್ಟಿತು. ನಿಜವಾಗಿಯೂ ಆತನ ಭಕ್ತಿಗೆ ಅಂಥದೊಂದು ಬೆಲೆಯುಂಟು. ಆತನ ಪ್ರೇಮರಸವು ಉಳಿದವರಂತೆ ಸಹೇತುಕವಾಗದೆ ಸಹಜವಾಗಿ ಹೃದಯದಿಂದ ಹೊರಟು ಹೃದಯಂಗಮವಾಗಿ ಹರಿದಿದೆ. ಅಂತೆಯೇ ಈ ರಗಳೆಯಲ್ಲಿ ಹರಿಹರದೇವನ ಘನವಾದ ಕಾವ್ಯಶೈಲಿಯೂ ಇನಿದಾದ ಭಕ್ತಿರಸವೂ ಎಡೆತಡೆಯಿಲ್ಲದೆ ಮನೋಹರವಾಗಿ ಸಾಗಿದೆ. 'ಪೊಸಬಗೆ' 'ಮೃದುಪದ' ಗಳು ಈತನ ಕಾವ್ಯದಲ್ಲಿರುವ ಉತ್ತಮ ಗುಣಗಳು. ಭಕ್ತಿ ಸೃಷ್ಟಿ-ಭಾವಪುಷ್ಟಿಗಳು ಮೆಚ್ಚಿ ತಲೆದೂಗುವಂತಹವು. ಇವುಗಳಿಂದಲೇ

ಇವನ ರಗಳೆಗಳು ರಮ್ಯವಾಗಿವೆ, ಗಮ್ಯವಾಗಿವೆ. ಕಾವ್ಯದುನ್ನತಿಯೂ ಕತೆಯ ಉಜ್ವಲತೆಯೂ ಕಂಗೊಳಿಸುತ್ತವೆ. ಇದಕ್ಕೆ ಚನ್ನಯ್ಯಗಳ ಬಾವದಲ್ಲಿ ಸ್ವತಃ ಭಕ್ತಿಬೀಜವಂಕುರಿಸಿ, ಅದು ಬುದ್ಧಿಯಲ್ಲಿ ಪಲ್ಲವಿಸಿ, ನಿಷ್ಠೆಯಲ್ಲಿ ಕುಡಿವರೆದು, ಕೃತಿಯಲ್ಲಿ ಕಾಯಾಗಿ ಹಣ್ಣಾದುದೇ ಕಾರಣ. ಆ ಹಣ್ಣಿನ ರಸವೇ ಹರಿಹರದೇವನ ಈ ರಗಳೆ. ಅಂದಮೇಲೆ ಇದರಲ್ಲಿ ಇಷ್ಟೊಂದು ಸವಿ-ಸೊಬಗುಗಳಿರುವದೇನಾಶ್ಚರ್ಯ! "ಕಾರಣಗುಣಾಃ ಕಾರ್ಯೇಷು ಸಂಕ್ರಾಮಂತಿ" ಎಂಬ ಮಾತು ಇದರಿಂದಲೇ ಕೃತಾರ್ಥ. ಚನ್ನಯ್ಯಗಳ ನಿರ್ವ್ಯಾಜ ನಿರುಪಮ ಪ್ರೇಮವು ಭಕ್ತಕಲಹ ಪ್ರಿಯನಾದ ಶಿವನನ್ನು ತಪ್ಪಿತಸನನ್ನಾಗಿ ಮಾಡಿರುವಲ್ಲಿ ಅದರ ಬಲ್ಮೆಯನ್ನು ಬರೆದು ಚಿತ್ರಿಸಲು ನಾವೆಷ್ಟರವರು? ಸಮರ್ಥರಾದ ಆ ಹರೀಶ್ವರ ಬಸವೇಶ್ವರರ ಬಾಯಿಂದಲೇ ಕೊನೆಗೊಮ್ಮೆ ಕೇಳಿ ತಣಿಯೋಣ ದಣಿಯೋಣ ಬನ್ನಿ!

ಚನ್ನನಸಿಧಿ, ಚನ್ನನ ಸುಧೆ ।
ಚನ್ನನ ಸಕಳಾಯು ಚನ್ನನಮೃತ ಸಮುದ್ರ. ॥
ಚನ್ನಂ ರಕ್ಷಿಸುಗೆನ್ನಂ ।
ಚನ್ನನ ಸುತನೆಂದು ಹಂಪೆಯ ವಿರೂಪಾಕ್ಷಂ ॥

— ಹರೀಶ್ವರ

"ನಡೆ ಚನ್ನ, ನುಡಿಚನ್ನ, ಎಲ್ಲಿ ನೋಡಿದಡೆ ಚನ್ನ. ಪ್ರಮಥರೊಳಗೆ ಚನ್ನ. ಪುರಾತನರೊಳಗೆ ಚನ್ನ. ಸವಿದು ನೋಡಿ ಅಂಬಲಿ ರುಚಿಯಾಯಿತ್ತೆಂದು ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚನ್ನ.

—ಬಸವೇಶ್ವರ

ಚನ್ನಯ್ಯನೊಲ್ಮೆಯ ಪೆರ್ಮೆಗೆ ಇವಕ್ಕಿಂತಲೂ ಮಿಕ್ಕಿನ ಬಣ್ಣನೆಯಿನ್ನಾವುದು ಬೇಕು? ಅಮೃತ ಸಮುದ್ರದೆದುರಿಗೆ ತಂಬುಳಿಯ ರುಚಿಯೇ? ಬೇಡ ಬೇಡ ಇದಂ ಬಗೆದು ಈ ಬಡಲೇಖನಿಯನಿಲ್ಲಿಗೆ ನಿಲ್ಲಿಸುವೆ. ಬಸವೇಶ್ವರನ ಬಣ್ಣನೆಗೂ-ಹರೀಶ್ವರನ ಹೊಗಳಿಕೆಗೂ-ಪರಮಾತ್ಮನ ಪ್ರೀತಿಗೂ ಪಾತ್ರನಾದ ಚನ್ನಯ್ಯ ತಂದೆಯೇ! ತೋರು ಆ ಭಾವವ! ಬಾಗಿ ಬೇಡುವೆ.

ಓಂ ಶಾಂತಿ:

"ದಾಸಿಮಯ್ಯಗಳ ಕಾಲನಿರ್ಣಯ."

ಲೇಖಕ:— ಬಿ. ಶಿವಮೂರ್ತಿಶಾಸ್ತ್ರಿ ಕೀರ್ತನಕೇಸರಿ, ಕವಿರತ್ನ,
ಹುಲ್ಕುಂಟಿಮಠ, ತುಮಕೂರು.

ಮ॥ ರಾ॥ ಶ್ರೀ. ಯಂ. ಆರ್. ಶ್ರೀನಿವಾಸಮೂರ್ತಿ ಬಿ. ಏ. ರವರು ೧೯೩೦ನೇ ಇಸವಿಯಲ್ಲಿ "ಭಕ್ತಿ ಭಾಂಡಾರಿ ಬಸವಣ್ಣನವರು" ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದರು. ಅದರಲ್ಲಿ ಜೇಡರ ದಾಸಿಮಯ್ಯ, ಶಂಕರದಾಸಿಮಯ್ಯ ಎಂಬ ಪ್ರಾಚೀನ ಶಿವಶರಣರಿಬ್ಬರು ಬಸವೇಶ್ವರನ ಸಮಕಾಲೀನರಾಗಿರಬಹುದೆಂದು ಅವರು ತಿಳಿದು ವಾದಿಸಿದರು. ಅಲ್ಲಿಂದೀಚೆಗೆ ಕೆಲವರು ಅವರ ಈ ಬರೆಹವನ್ನೇ ಪ್ರಮಾಣವನ್ನಾಗಿ ಸ್ವೀಕರಿಸಿ ಲೇಖನ ಭಾಷಣಾದಿಗಳನ್ನೂ ಮಾಡಿದರು. ವೀರಶೈವಮತ ಚರಿತ್ರೆಯಲ್ಲಿ ಈ ದಾಸಿಮಯ್ಯಗಳಿಬ್ಬರ ಕಾಲನಿರ್ಣಯವು ಅತ್ಯಂತ ಮಹತ್ವದ್ದಾದುದರಿಂದ ನಾನು ಐತಿಹಾಸಿಕ ದೃಷ್ಟಿಯಿಂದ ಈ ವಿಚಾರವನ್ನು ಚರ್ಚಿಸಿ ಮ॥ ರಾ॥ ಶ್ರೀನಿವಾಸಮೂರ್ತಿಗಳ ಅಭಿಪ್ರಾಯವು ಸಾಧುವಲ್ಲವೆಂದೂ, ಈ ಶರಣರಿಬ್ಬರೂ ಚಾಲುಕ್ಯ ಜಯಸಿಂಹನ ಕಾಲದವರೆಂದೂ ಸಮರ್ಥಿಸಿ ಶಿವಾನುಭವ ಸಂ. ೯ ಸಂ. ೬ ರಲ್ಲಿ "ಜೇಡರ ದಾಸಿಮಯ್ಯ, ಶಂಕರದಾಸಿಮಯ್ಯಗಳ ವಿಚಾರ" ಎಂಬ ಹೆಸರಿನಿಂದ ಒಂದು ಲೇಖನವನ್ನು ಬರೆದನು. ಈ ಲೇಖನವು ಸಂಯುಕ್ತ ಕರ್ನಾಟಕ ಶರಣಸಂದೇಶ ಮೊದಲಾದ ಪತ್ರಿಕೆಗಳಲ್ಲಿಯೂ ಪ್ರಕಟವಾಯಿತು. ಮ॥ ರಾ॥ ಶ್ರೀನಿವಾಸಮೂರ್ತಿಗಳು ೧೯೩೬ನೇ ಇಸವಿಯಲ್ಲಿ ಮುದ್ರಿಸಿರುವ "ಭಕ್ತಿ ಭಾಂಡಾರಿ ಬಸವಣ್ಣನವರು" ಎಂಬ ಗ್ರಂಥದ ದ್ವಿತೀಯ ಪೀಠಿಕೆಯಲ್ಲಿ ನನ್ನ ಶಿವಾನುಭವದ ಲೇಖನವನ್ನು ಖಂಡಿಸಿ ಮತ್ತೆ ತಾವು ಮೊದಲು ಬರೆದಂತೆ ಶಂಕರದಾಸಿ, ದೇವರದಾಸಿಗಳಿಬ್ಬರೂ ಬಸವನ ಸಮಕಾಲೀನರೆಂದೂ ವಚನಕಾರ ದೇವರದಾಸಿಯೇ ಪುರಾಣ ಪ್ರಸಿದ್ಧ ದಾಸಿಯೆಂದೂ ಸಿರೂಪಿಸಿದ್ದಾರೆ. ಪುನಃ ಪುನಃ ಎಷ್ಟು ವಿಚಾರಮಾಡಿ ನೋಡಿದರೂ ಅವರು ಹೇಳಿರುವ ಸಿದ್ಧಾಂತವು ಇತಿಹಾಸದ ಒರೆಗಲ್ಲಿನ ಮೇಲೆ ಉತ್ತೀರ್ಣವಾಗುವುದಿಲ್ಲವೆಂದು ತಿಳಿದು ನಿರ್ವಾಹವಿಲ್ಲದೆ ನಾನು ಅವರ ವಾದವು ಸಾಧುವಲ್ಲವೆಂಬುದನ್ನು ತೋರಿಸಿ ಕೊಡಬೇಕಾಗಿದೆ.

ಮ॥ ರಾ॥ ಶ್ರೀನಿವಾಸಮೂರ್ತಿಗಳ ಅಭಿಪ್ರಾಯಃ—

(*i*) "ಶಂಕರದಾಸಿಗೂ, ಜೇಡರದಾಸಿಗೂ ಸಂಬಂಧಪಟ್ಟ ಕಥೆ ಪುರಾಣ ಗ್ರಂಥದಲ್ಲಿ ಬರುವುದರಿಂದ ಇವರಿಬ್ಬರಲ್ಲಿ ಯಾರೊಬ್ಬರು ಬಸವಣ್ಣನವರ ಸಮಕಾಲೀನರಾದಾಗ್ಗೂ ಇನ್ನೊಬ್ಬರೂ ಸಮಕಾಲೀನರಾಗುತ್ತದಷ್ಟೇ. ಈಗ ಶಂಕರದಾಸಿಯ ವಿಚಾರವನ್ನೇ ತೆಗೆದುಕೊಳ್ಳೋಣ.

(*a*) ಬಸವ ಪುರಾಣದ ೨೪ನೇ ಸಂಧಿಯಲ್ಲಿ ಕಿನ್ನರಿ ಬ್ರಹ್ಮಯ್ಯನ ಕಥೆ ಬರುತ್ತದೆ. ಈ ಕಿನ್ನರಿ ಬ್ರಹ್ಮಯ್ಯನು ಬಸವಣ್ಣನವರ ಸಮಕಾಲೀನನೆಂಬುದು ನಿರ್ವಿವಾದ ವಿಷಯ. ೨೯ನೇ ಸಂಧಿಯಲ್ಲಿ ಕಿನ್ನರಿ ಬ್ರಹ್ಮಯ್ಯನ ಗರ್ವಭಂಗವನ್ನು ಕಲಕೇತ ಬ್ರಹ್ಮಯ್ಯನು ಮಾಡುವ ಕಥೆಯಿದೆ. ಈ ಕಲಕೇತ ಬ್ರಹ್ಮಯ್ಯನು ಶಂಕರದಾಸಿಮಯ್ಯನ ಶಿಷ್ಯನೆಂದು ತಾನು ಹೇಳಿಕೊಂಡಿದ್ದಾನೆ. "ಶರಣ ಶಂಕರದಾಸಿಮಯ್ಯನ— ಚರಣಯುಗಳವನೋಲವಿಪ ಕಿಂಕರನೆ ಧನವಿಲ್ಲೆನಲು ಬಾರದು ಬಸವ ನಿಮ್ಮಾಣೆ." ಈ ಮಾತುಗಳನ್ನು ಕಲಕೇತ ಬ್ರಹ್ಮಯ್ಯನು ಬಸವಣ್ಣನವರಿಗೆ ಹೇಳಿದ್ದು.

(*b*) ಇದೇ ಕಲಕೇತ ಬ್ರಹ್ಮಯ್ಯನ ಕಥೆ ವೃಷಭೇಂದ್ರವಿಜಯದ ೧೮ನೇ ಆಶ್ವಾಸದಲ್ಲಿ ಬರುತ್ತದೆ. ಅಲ್ಲಿ ಕಲಕೇತ ಬ್ರಹ್ಮಯ್ಯನು "ಶಂಕರ ದಾಸಯ್ಯನ ಭೃತ್ಯನಾಂ ಬಸವ" ಎಂದು ಹೇಳಿಕೊಂಡಿದ್ದಾನೆ. (ಟಿಪ್ಪಣಿ:— ಪಾಲ್ಕುರಿಕೆ ಸೋಮನಾಥನ ಬಸವ ಪುರಾಣದಲ್ಲಿಯೂ ಇದೇ ವಿಷಯವನ್ನು ೧೫ನೇ ಪುಟದಲ್ಲಿ ಹೇಳಿದೆ. ಪಾಲ್ಕುರಿಕೆ ಸೋಮನು ಭೀಮಕವಿಗಿಂತ ಹಿಂದಿನವನು.) ಇವುಗಳಿಂದ ಶಂಕರದಾಸಿಮಯ್ಯನು ಬಸವಣ್ಣನವರ ಸಮಕಾಲೀನನೆಂದು ಹೇಳಬಹುದಷ್ಟೇ.

(*c*) ಮುಂದೆ ಬಸವ ಪುರಾಣದ ೪೮ನೇ ಸಂಧಿಯಲ್ಲಿ ಕಬ್ಬಲಿಗರೊಡನೆ ಪ್ರಸಾದ ವಿವಾದ ನಡೆಯುತ್ತದಷ್ಟೇ. ಈ ವಿವಾದಕ್ಕೆ ಬಸವಣ್ಣನವರೊಡನೆ ಯಾರು ಯಾರು ಹೋಗಿದ್ದರೆನ್ನುವುದನ್ನು ಭೀಮಕವಿ ಹೇಳಿದ್ದಾನೆ. ಅದರಲ್ಲಿ "ದೇವರದಾಸಿ, ಶಂಕರದಾಸಿಮಯ್ಯನೂ" ಎಂಬ ಈ ಎರಡು ಹೆಸರುಗಳೂ ಇವೆ.

(*d*) ಬಸವ ಪುರಾಣದ ೫೯ನೇ ಸಂಧಿಯಲ್ಲಿ ಪ್ರಸಾದ ವಿನಿಯೋಗವಾಗುತ್ತಿದ್ದಾಗ "ಮೀಸೆಗಳನಲುಗಾಡಿಸಿದಿರಾ ದಾಸಿದೇವ" ಎಂದು

ಹೇಳಿದೆ. ಅಲ್ಲದೆ ಪ್ರಸಾದ ಸೇವನೆ ಮಾಡಿದ ಶಿವಶರಣೆಯರ ಹೆಸರಿನಲ್ಲಿ ದುಗ್ಗಳೆಯ ಹೆಸರನ್ನೂ ಹೇಳಿದೆ."

(e) ವೃಷಭೇಂದ್ರ ವಿಜಯದ ೪ನೇ ಆಶ್ವಾಸದಲ್ಲಿ ಬಸವಣ್ಣನವರೊಡನೆ ವಾದಕ್ಕೆ ಹೋದವರ ಹೆಸರುಗಳನ್ನು ಈ ರೀತಿ ಹೇಳಿದೆ. "ಉತ್ತಮಾಂಗದ ಕೇತಿ ಜೆಡರದಾಸಿಯುಂ ಶಂಕರದಾಸಯ್ಯಂ ಸಂಕದ ಬಂಕಯ್ಯಂ."

(f) ಪ್ರಸಾದ ಸೇವನೆ ಮಾಡುತ್ತಿದ್ದಾಗ ಸುಗ್ಗಳೆ ಮತ್ತು ದುಗ್ಗಳೆಯರಿವ್ವಂತಿ ಹೇಳಿದೆ.

(g) ಪ್ರಸಾದ ಸೇವನೆ ಮಾಡಿದವರಲ್ಲಿ "ಬಿನದಂಗೆಯ್ವುತ್ತಿ ಪೂಣ್ದಂತಿರೆ ಸವಿದಪನೀ ಢಕ್ಕೆಯ ಮೂರಂ" ಎಂದು ಢಕ್ಕೆಯ ಮಾರಯ್ಯನ ಹೆಸರನ್ನು ವೃಷಭೇಂದ್ರ ವಿಜಯದಲ್ಲಿ ಹೇಳಿದೆ. ಈ ಢಕ್ಕೆಯ ಮಾರಯ್ಯನು ಶಂಕರದಾಸಯ್ಯನ ಗರ್ವಭಂಗಮಾಡಿದ ಕಥೆ ವೀರಶೈವಾಮೃತ ಮಹಾ ಪುರಾಣದಲ್ಲಿಯೂ, ಪ್ರೌಢರಾಯನ ಕಾವ್ಯದಲ್ಲಿಯೂ ಇದೆ. ಶಂಕರದಾಸಯ್ಯನು ಜೇಡರದಾಸಯ್ಯನ ತವನಿಧಿಯನ್ನು ಅಪಹರಿಸಿ ಗರ್ವದಿಂದ ಬೀಗುತ್ತಿದ್ದನೆಂದೂ, ಆಗ ಢಕ್ಕೆಯ ಮಾರಿ ತಂದೆ ಶಂಕರದಾಸಯ್ಯನ ನೊಸಲ ಕಣ್ಣನ್ನು ಕಿತ್ತು ಬಾಯಿಗೆ ಹಾಕಿಕೊಂಡಂತೆಯೂ ವೀರಶೈವಾಮೃತ ಮಹಾಪುರಾಣದ ಕಾಂಡ ೮, ಸಂಧಿ ೨, ಪದ್ಯ ೩೩-೩೪ ರಲ್ಲಿದೆ. ಪ್ರೌಢರಾಯನ ಕಾವ್ಯದ ೬ನೇ ಸಂಧಿಯಲ್ಲಿ ಢಕ್ಕೆಯ ಮಾರಯ್ಯನು ಶಂಕರದಾಸಯ್ಯನ ನೊಸಲ ಕಣ್ಣನ್ನು ಕಿತ್ತು ನುಂಗಿದಾಗ ಶಂಕರದಾಸಿಯು ಬಂದು "ಶರಣ ನಿಮ್ಮಯ ಮಹಿಮೆಯರಿಯದಾದೆವುಯೆಂದು ಬಸವೇಶನ ಸಹಿತ ನುತಿಸೆ" ಎಂದು ಹೇಳಿದೆ. ಇವುಗಳಿಲ್ಲದರಿಂದ ಶಂಕರದಾಸಯ್ಯನು ಬಸವಣ್ಣನವರ ಸಮಕಾಲೀನನೆಂದು ಸಿದ್ಧಿಸುವುದಷ್ಟೆ. ಹೀಗೆಯೇ ದುಗ್ಗಳೆ, ಸುಗ್ಗಳೆ ಮತ್ತು ದುಗ್ಗಳೆಯ ಪತಿಯೂ, ಸುಗ್ಗಳೆಯ ಗುರುವೂ ಆದ ಜೇಡರದಾಸಯ್ಯ ಇವರೆಲ್ಲ ಬಸವಣ್ಣನವರ ಸಮಕಾಲೀನರೆಂದು ಸಿದ್ಧಿಸುವುದು.

(ii) ವಚನಕಾರ ದಾಸಿಮಯ್ಯನೇ ಬೇರೆ ಪುರಾಣ ಕಥಿತನಾದ ದಾಸಿಮಯ್ಯನೇ ಬೇರೆಯೆಂದು ಇಬ್ಬರು ವ್ಯಕ್ತಿಗಳನ್ನು ಹೇಳುವುದಕ್ಕೂ ಕಾರಣಗಳಿಲ್ಲ.

(a) ಜೇಡರದಾಸಯ್ಯನು ರಾಮನಾಥನನ್ನೇ ಇಷ್ಟ ಲಿಂಗವನ್ನಾಗಿ ಉಳ್ಳವನೆಂದು ಪುರಾಣಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ದೇವರ ದಾಸಯ್ಯನ ವಚನಗಳಲ್ಲಿ ಬರುವ ಅಂಕಿತವೂ ಅದೇ ಆಗಿದೆ.

(b) ದುಗ್ಗಳೆಯನ್ನು ಮದುವೆಯಾಗುವುದಕ್ಕೆ ಮುಂಚೆ ದೇಸಿಂಗನ ಆಸ್ಥಾನದಲ್ಲಿ ಜೈನರನ್ನು ಭಂಜಿಸಿದನೆಂಬುವುದು ಪ್ರೌಢರಾಯನ ಕಾವ್ಯದ ೪ನೇ ಸಂಧಿಯಲ್ಲಿ ಸ್ಪಷ್ಟವಾಗಿದೆ. (ಟಿಪ್ಪಣಿ— ಈ ದೇಸಿಂಗನ ವಿಚಾರವನ್ನೂ, ದೇವರದಾಸಿಯ ವಿಚಾರವನ್ನೂ ದೇವಾಂಗ ಪುರಾಣದಲ್ಲಿ ಕಾಣಬಹುದಾಗಿದೆ. ಡಾ॥ ಫ್ಲೀಟ್‌ರವರು ಬಸವ ಪುರಾಣದಲ್ಲಿ ಬರುವ ದೇಸಿಂಗ ಎಂಬ ಹೆಸರನ್ನು ನೋಡಿ ಈ ದೇಸಿಯು ಕಲ್ಯಾಣದ ಚಾಲುಕ್ಯರ ಇಮ್ಮಡಿ ಜಯಸಿಂಹ (ಜಗದೇಕಮಲ್ಲ) ನಾಗಿರಬೇಕೆಂದು ಹೇಳಿದ್ದರಿಂದ ದೇವರದಾಸಿ ಕ್ರಿ. ಶ. ೧೦೪೦ ರಲ್ಲಿ ಇದ್ದನೆಂದೂ ಶಂಕರದಾಸಿಯು ಅದೇ ಕಾಲದಲ್ಲಿ ಇದ್ದಿರಬೇಕೆಂದೂ ಕೆಲವರು ಅಭಿಪ್ರಾಯಪಡಲವಕಾಶವಾಗಿದೆ. ದೇವಾಂಗ ಪುರಾಣದ ಅಷ್ಟಪಂಚಾಶಧ್ಯಾಯದಲ್ಲಿ ದೇವರ ದಾಸಯ್ಯನ ಕಥೆಯನ್ನು ವಿಸ್ತಾರವಾಗಿ ಹೇಳಿದೆ ..... ಈ ದೇವರ ದಾಸಿಗೆ ಏಕೋರಾಮನೆಂಬ ಮಗನು ಹುಟ್ಟುವನು. ಮೇಲಿನ ಕಥೆಯಲ್ಲಿ ಬರುವ ದೇವರದಾಸಿ ದೇಶಿಂಗರ ವೃತ್ತಾಂತಕ್ಕೂ ವೀರಶೈವ ಪುರಾಣಗಳಲ್ಲಿ ಬರುವ ದೇವರದಾಸಿ, ದೇಶಿಂಗರ ವೃತ್ತಾಂತಕ್ಕೂ ಹೋಲಿಕೆ ಇರುವದನ್ನು ನೋಡಬೇಕಾಗಿದೆ. ".....ದೇವರದಾಸಯ್ಯನೆಂದೆಂಬ ಶರಣ ಹೊಟ್ಟಲ ಕೇರಿಯಲ್ಲಿ ಸುಗ್ಗಲ ದೇವಿಯರಿಗೆ ಗುರುವಾಗಿರುತಲಿ ಪರಮತವ ನೆಲಿದು ಉತ್ತರನಾಥ ಲಿಂಗವನು ವರ ಸುಪ್ರತಿಷ್ಠೆಗೈಮೊಡನೆ ದೇಸಿಂಗ ಭೂವರನ ಭಕ್ತನ ಮುಂದೆ ನಿರಕ್ತಿಯಿಂದೆ ದೇಶಾಂತರವ ಚಲಿಸಿ ಬಳಿಕ" ಎಂದು ಹೇಳಿ ಆ ದೇವರದಾಸಿ ಮುದೇನೂರಿಗೆ ಬಂದು ಒಂಭತ್ತು ವರ್ಷದ ದುಗ್ಗಳೆಯನ್ನು ಮದುವೆಯಾದಂತೆ ಕವಿಯು ಬರೆದಿದ್ದಾನೆ.

(iii) ಇನ್ನು ಶೂನ್ಯಸಂಪಾದನೆಯ ವಿಚಾರವನ್ನು ನೋಡೋಣ. ಶ್ರೀ. ಹಳಕಟ್ಟಿಯವರು ಮುದ್ರಿಸಿರುವುದು ಗೂಳೂರು ಸಿದ್ಧವೀರಣಾರ್ಯನ ಶೂನ್ಯಸಂಪಾದನೆ. ಆದರೆ ನಾನು ಉದಾಹರಿಸಿರುವ ವಚನಗಳು ಕೆಂಚವೀರಣ್ಣೊಡೆಯಾದಿಗಳು ರಚಿಸಿದ ಇನ್ನೂ ಮುದ್ರಿತವಾಗದಿರುವ *K. A. 105* ಎಂಬ ನಂಬರುಳ್ಳ ಮೈಸೂರು ಓರಿಯಂಟಲ್

ಲೈಬ್ರೆರಿಯಲ್ಲಿ ತೆಗೆದನವು. ಈ ವಿಚಾರವನ್ನು ಅವಿ ಟಿಪ್ಪಣಿಯಲ್ಲಿ ಸೂ
ಸಿದ್ದೇನೆ. ಶೂನ್ಯಸಂಪಾದನೆಗಳು ನಾಲ್ಕೈದು. ಈ ವಿಷಯವನ್ನು ಪ್ರಬು
ಕರ್ನಾಟ ಸಂ. ೧೫, ಸಂ. ೪ ರಲ್ಲಿ ನಾನು ವಿವರಿಸಿದ್ದೇನೆ. ನಾನ
ಉದಾಹರಿಸಿರುವ ವಚನಗಳೂ ಕೆಂಚವೀರಣ್ಣೊಡೆಯಾದಿಗಳು ಮಾ
ವಲ್ಲ ಸಿದ್ಧಲಿಂಗಯತಿಯ ಶೂನ್ಯಸಂಪಾದನೆಯಲ್ಲಿಯೂ ಇವೆ. ಇ
ರಷೂ ಗೂಳೂರು ಸಿದ್ಧವೀರನ ಶೂನ್ಯಸಂಪಾದನೆಗಿಂತ ಹಿಂದೆ ರಚಿ
ವಾದುವು. ಆದುದರಿಂದ "ಶೂನ್ಯಸಂಪಾದನೆ ಆರ್ವಾಚೀನ ಗ್ರಂಥ. ಆ
ಗ್ರಂಥಕರ್ತೃವು ಅನುಭವಮಂಟಪದಲ್ಲಿ ಶಂಕರದಾಸಿಯ ಹೆಸರನ್ನು
ಭರ್ತಿಮಾಡಲಿಕ್ಕಾಗಿ ಅವನ ವಚನಗಳನ್ನು ಹಾಕಿರಬೇಕೆಂದು ನಮ್ಮ
ಅಭಿಪ್ರಾಯ" ಯೆಂಬ ಶ್ರೀಯುತ ಶಾಸ್ತ್ರಿಗಳ ಅಭಿಪ್ರಾಯವು ಸಾಧು
ವಾಗಿಲ್ಲವೆಂದು ಹೇಳಬೇಕಾಗಿದೆ.

ಈ ವಚನಗಳಷ್ಟೇ ಅಲ್ಲ. ಚೆನ್ನಬಸವೇಶ್ವರನು ಉಳುವೆಗೆ ಗಣ
ಗಳು ಸಹಿತ ಹೊರಟಾಗ ಜೊತೆಯಲ್ಲಿ ಶಂಕರದಾಸಿಯೂ ಇದ್ದಂತೆ
ಶೂನ್ಯಸಂಪಾದನೆಗಳಲ್ಲಿ ಹೇಳಿದೆ. ಬಸವಪುರಾಣಗಳಲ್ಲಿ ನಾನು ತೆಗೆ
ದುತೋರಿಸಿದ ಅಭಿಪ್ರಾಯವನ್ನು ನೋಡಿದರೆ ಶಂಕರದಾಸಿಯು ಬಸವ
ಣ್ಣನವರ ಸಮಕಾಲೀನನಾಗಿದ್ದುದು. ಆದುದರಿಂದಲೇ ಉಳುವೆಗೆ ಚೆನ್ನ
ಬಸವೇಶ್ವರನ ಸಂಗಡ ಹೋಗಿದ್ದಿರಬಹುದಾದುದು ಅಸಂಭವವಾಗಿ
ಕಾಣುವುದಿಲ್ಲ. ಇದು ವರೆಗೆ ಹೇಳಿದ ಆಧಾರಗಳಿಂದ ದೇವರದಾಸಯ್ಯ
ಮತ್ತು ಜೇಡರದಾಸಯ್ಯ ಇಬ್ಬರೂ ಒಂದೇ ವ್ಯಕ್ತಿಯೆಂದೂ, ಪುರಾ
ಣಕಥಿತನೂ ದುಗ್ಗಳೆಯ ಪತಿಯೂ, ಸುಗ್ಗಳೆಯ ಗುರುವೂ ಎಲ್ಲಾ
ಒಬ್ಬನೇಯೆಂದೂ ಈ ದೇವರದಾಸಿ ಅಥವಾ ಜೇಡರದಾಸಿಯಿವರು ಬಸ
ವಣ್ಣನವರ ಸಮಕಾಲೀನರೆಂದೂ ಸಿದ್ಧಿಸುವುದರಿಂದ ಪರಿಶಿಷ್ಟದಲ್ಲಿ ಕೊಟ್ಟ
ರುವುದನ್ನು ನಾನು ಬದಲಾಯಿಸಿಲ್ಲ.

ಈ ಬಗ್ಗೆ ನನ್ನ ಸಮಾಧಾನ.

ಇದು ವರೆಗೆ ಉದಾಹರಿಸಿದ ಮ॥ ರಾ॥ ಶ್ರೀನಿವಾಸಮೂರ್ತಿಗಳ
ವಾದಕ್ಕೆ ನಾನು ಉತ್ತರ ಕೊಡುವುದಕ್ಕೆ ಮೊದಲು ನಾನು ಒಂದೆರಡು
ಮಾತುಗಳನ್ನು ಹೇಳಬೇಕಾಗಿದೆ.

ಅವರು ತಮ್ಮ ವಾದವನ್ನು ಸಮರ್ಥಿಸಲು ಪ್ರೌಢರಾಯನ ಕಾವ್ಯ,
ವೀರಶೈವಮಹಾಪುರಾಣ ಬಸವ ಪುರಾಣ ಕೆಂಚವೀರಣ್ಣೊಡೆಯಾದಿ

ಗಳ ಶೂನ್ಯಸಂಪಾದನೆ, ವೃಷಭೇಂದ್ರವಿಜಯ ದೇವಾಂಗಪುರಾಣ ಇತ್ಯಾದಿ
ಗ್ರಂಥಗಳನ್ನು ಆಧಾರವಾಗಿ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾವೊಂದು
ಮಾತನ್ನು ನೆನಪಿನಲ್ಲಿಡಬೇಕಾಗಿದೆ. ಮ॥ ರಾ॥ ಶ್ರೀನಿವಾಸಮೂರ್ತಿಗ
ಳಂತಹ ನಾಗರಿಕರು ಪರಸ್ಪರ ವಿರೋಧವುಳ್ಳ ಈ ಪುರಾಣಗಳ ಮಾತಿಗೆ
ಇಷ್ಟಕ್ಕಿಷ್ಟಂತೆಯೇ ಇತಿಹಾಸದ ಬೆಲೆಯನ್ನು ಕಟ್ಟುವುದು ಆಶ್ಚರ್ಯಕ
ರವಾಗಿದೆ. ಇತರ ಮತದ ಪುರಾಣಗಳಲ್ಲಿರುವಂತೆ ವೀರಶೈವ ಪುರಾ
ಣಗಳಲ್ಲಿಯೂ ಪರಸ್ಪರ ವಿರೋಧವಾದ ಚರಿತೆಗೆ ಸರಿಹೋಗದ ಸಂಗ
ತಿಗಳಿಷ್ಟೋ ಇವೆ. ಉದಾಹರಣೆಗೆ ಚಿಕ್ಕನಂಜಾರ್ಯನು ತನ್ನ ರಾಘ
ವಾಂಕನ ಕಾವ್ಯದಲ್ಲಿ ಹರೀಶ್ವರ, ಚಾಮರಸ, ರಾಘವಾಂಕ, ಕುಮಾರ
ವ್ಯಾಸ ಇವರನ್ನೆಲ್ಲ ಒಂದೇ ಗದ್ದಿಗೆಯಲ್ಲಿ ಕುಳ್ಳಿರಿಸಿ ವಾದ ಮಾಡಿಸಿ
ದ್ದಾನೆ. ಜೋರ ಬಸವಪುರಾಣದ ಶಂಕರ ಕವಿಯು ಬಸವೇಶ್ವರನ
ಮಹಿಮೆಯನ್ನು ಹರೀಶ್ವರನಿಂದ ಚಾಮರಸನಿಗೆ ಹೇಳಿಸಿದ್ದಾನೆ. ರೇವಣ
ಸಿದ್ಧ ಪುರಾಣದ ಬೊಮ್ಮರಸನು ರೇವಣಸಿದ್ಧೇಶ್ವರನನ್ನೂ ರಾವಣಾಯ
ಣದ ವಿಭೀಷಣನನ್ನೂ ಸಮಕಾಲೀನರೆಂದು ಹೇಳಿದ್ದಾನೆ. ಇದನ್ನೆಲ್ಲ
ನಾವು ಚರಿತ್ರೆಯೆಂದು ನಂಬಲಾಗುತ್ತದೆಯೇ? ಈ ಪುರಾಣಗಳೆಲ್ಲ
ಮುಖ್ಯವಾಗಿ ಶಿವಶರಣರ ಮಹಿಮೆಗಳನ್ನೂ ವೀರಶೈವ ಮತತತ್ವಗ
ಳನ್ನೂ ವಿಸ್ತರಿಸಲಿಕ್ಕೆ ಬರೆಯಲ್ಪಟ್ಟಿವೆ. ಆದರೆ ಈ ಪುರಾಣಗಳೆಲ್ಲ ಸುಳ್ಳೆಂಬ
ನನ್ನ ತಾತ್ಪರ್ಯವಲ್ಲ. ತತ್ರಾಪಿ ವೀರಶೈವ ಶರಣರ ಪುರಾಣಗಳ ಕಥಾ
ವಸ್ತುವು ಮೂಲದಲ್ಲಿ ಚರಿತ್ರೆಯೇ ಆಗಿದೆ. ಇವುಗಳೆಲ್ಲ ಕವಿಗಳು
ಮಾಡಿದ ಕಲ್ಪನಾಂಶವೂ ಉತ್ಪ್ರೇಕ್ಷೆಗಳೂ ಇವನ್ನು ಪುರಾಣಗಳನ್ನಾಗಿ
ಮಾರ್ಪಡಿಸಿವೆ. ಆದುದರಿಂದ ಈ ಪುರಾಣಗಳಲ್ಲಿ ಚರಿತ್ರೆಗೆ ಸರಿಬರುವ
ವಿಷಯಗಳು ಹೊರತಾಗಿ ಮಿಕ್ಕವನ್ನು ಗಮನಿಸುವುದು ಸಾಧುವಲ್ಲ.

ಇನ್ನು ಶೂನ್ಯಸಂಪಾದನೆಗಳನ್ನು ಕುರಿತು ಒಂದು ಮಾತು ಹೇಳ
ಬೇಕಾಗಿದೆ. ಈಗ ತಿಳಿದುಬಂದಿರುವ ಐದು ಶೂನ್ಯಸಂಪಾದನೆಗಳೂ
ಬಸವೇಶ್ವರನ ಕಾಲಕ್ಕಿಂತ ಬಹಳ ಈಚಿನವು. ವಚನ ಗ್ರಂಥಗಳಲ್ಲಿಯೂ
ಕವಿಗಳ ಕೈವಾಡ ನಡೆದಿವೆ. ನಾಟಕೀಯತೆಯಿದೆ. ವಚನಗ್ರಂಥಗಳು ತತ್ವ
ಜ್ಞಾನದಿಂದ, ಸಾಹಿತ್ಯದೃಷ್ಟಿಯಿಂದ ಪ್ರಸಿದ್ಧವೇ ಹೊರತು ಚರಿತ್ರೆಯಿಂ
ದಲ್ಲ. ವಿಜಯನಗರದ ಕಾಲದ ಲಿಂಗವಂತ ಕವಿಗಳು ಪುರಾಣಕಥೆ
ಗಳಲ್ಲಿ ಏಕಾಪಾಟು ಮಾಡಿದಂತೆಯೇ ವಚನಗ್ರಂಥಗಳಲ್ಲಿಯೂ ಮಾರ್ಪಾ

ಟುಮಾಡಿದ್ದಾರೆ. ಶೂನ್ಯಸಂಪಾದನೆ ಗ್ರಂಥಗಳಲ್ಲಿಯೂ ಬದಲಾವಣೆ ನಡೆದಿದೆ. ಅಲ್ಲಮಪ್ರಭು ಮತ್ತು ಅಕ್ಕಮಹದೇವಿಯವರ ವಿವಾಹ ವಿಷಯವನ್ನು ಪ್ರಾಚೀನನಾದ ಹರೀಶ್ವರನು ಹೇಳಿದುದನ್ನು ಈಚಿನವರಾದ ಜಾಮರಸಾದಿಗಳು ಕೈಬಿಟ್ಟು ಅದಕ್ಕೆ ಬೇರೊಂದು ರೂಪನ್ನೇ ಕೊಟ್ಟಿದ್ದಾನೆ. ಗುಮ್ಮಳಾಪುರದ ಸಿದ್ಧಲಿಂಗಯತಿಯಂತಹ ಉಗ್ರಪಕ್ಷದವರು ಕಡೆಗೆ ಹರಿಹರನನ್ನು ಶಪಿಸಿ ಅವನಿಗೆ ಭವಿತನವನ್ನು ಕೂಡ ಅನುಗ್ರಹಿಸಿದ್ದಾರೆ. ಈಚೀನ ಶೂನ್ಯಸಂಪಾದನೆಕಾರರು ತಮ್ಮ ಮನಬಂದಂತೆ ಬದಲಾವಣೆಯನ್ನು ಕೂಡ ಮಾಡಿದ್ದಾರೆ.

ಮ॥ ರಾ॥ ಶ್ರೀನಿವಾಸಮೂರ್ತಿಗಳು ಪ್ರಬುದ್ಧ ಕರ್ಣಾಟಕ ಸಂ. ೧೫. ಸಂ. ೪ ರಲ್ಲಿ 'ಶೂನ್ಯಸಂಪಾದನೆಗಳು' ಎಂಬ ಲೇಖನವನ್ನು ಬರೆದು ಈ ಗ್ರಂಥಗಳ ಮಾರ್ಪಾಟಿನ ವಿಚಾರವನ್ನು ಚರ್ಚಿಸಿ ಕಡೆಯಲ್ಲಿ "ಶೂನ್ಯ ಸಂಪಾದನೆಯ ಸಂಕಲ್ಪಗಳು ಸುಮಾರು ಐದು ಇರುವುದರಿಂದಲೂ ಅವುಗಳಲ್ಲಿ ವ್ಯತ್ಯಾಸಗಳನೇಕವಿರುವುದರಿಂದಲೂ ಇತಿಹಾಸದ ದೃಷ್ಟಿಯಿಂದ ನೋಡುವವರಿಗೆ ಈ ಬೆಳವಣಿಗೆ ಮತ್ತು ಮಾರ್ಪಾಟುಗಳು ಬಹಳ ಮುಖ್ಯವಾಗಿ ಕಾಣುವುವು. ಮೊದಲಿನ ಗ್ರಂಥಗಳಲ್ಲಿದ್ದ ಕೆಲವು ಮುಖ್ಯವಾದ ವಚನಗಳಿಗೆ ಸಿದ್ಧಲಿಂಗಯತಿಯ ಕೈಯಿಂದಲೂ ಸಿದ್ಧವೀರಣಾರ್ಯನ ಕೈಯಿಂದಲೂ ಬಹಿಷ್ಕಾರವುಂಟಾಗಿದೆ. ಆದುದರಿಂದ ಸಿದ್ಧರಾಮನ ದೀಕ್ಷೆ ವಿಚಾರ, ಅಲ್ಲಮಪ್ರಭುವಿನ ವಿಕಾರ ಮುಂತಾದುವನ್ನು ವಿಮರ್ಶೆ ಮಾಡತಕ್ಕವರು ಹಿಂದಿನ ಶೂನ್ಯಸಂಪಾದನೆ ಗ್ರಂಥಗಳನ್ನು ನೋಡುವುದಾವಶ್ಯಕ. ಸಿದ್ಧಲಿಂಗಯತಿ ಮತ್ತು ಸಿದ್ಧವೀರಣಾರ್ಯರ ಗ್ರಂಥಗಳಲ್ಲಿ ಹೊಸದಾಗಿ ಸೇರಿಸಿರುವ ವಚನಗಳನ್ನು ಒರೆಹಚ್ಚಿ ನೋಡುವುದೂ ಅವಶ್ಯಕ." ಎಂದು ಬರೆದಿದ್ದಾರೆ. ಈ ಮಾತುಗಳೆಲ್ಲವೂ ನಮ್ಮ ವಾದಕ್ಕೆ ಸಹಾಯಕವಾಗಿಯೇ ಇವೆ.

ಇತಿಹಾಸ ಸಂಶೋಧನೆಯಲ್ಲಿ ಆಧುನಿಕ ಗ್ರಂಥಗಳಿಗಿಂತಲೂ ಪ್ರಾಚೀನ ಗ್ರಂಥಗಳನ್ನೂ ಪುರಾಣಗಳಿಗಿಂತ ಶಾಸನಗಳನ್ನೂ ಹೆಚ್ಚು ಪ್ರಮಾಣಾರ್ಹವೆಂದು ನಂಬುವುದು ಎಲ್ಲರೂ ಒಪ್ಪಬೇಕಾದ ವಿಚಾರ. ಮತ್ತೊಬ್ಬರ ಪುರಾಣದಲ್ಲಿ ಒಬ್ಬ ಮಹಾತ್ಮನ ವಿಚಾರವನ್ನು ಪ್ರಾಸಂಗಿಕವಾಗಿ ತೆಗೆದುಕೊಂಡಿರುವುದಕ್ಕಿಂತಲೂ ಆ ಮಹಾತ್ಮನ ವಿಷಯವಾಗಿಯೇ ಹುಟ್ಟಿದ ಗ್ರಂಥವು ಅತನ ಚರಿತ್ರೆಗೆ ಹೆಚ್ಚು ಉಪಯುಕ್ತವಾದ ಸಾಧನ.

ಇದುವರೆಗೆ ನಾನು ಹೇಳಿದ ಸರ್ವಸಾಧಾರಣ ನಿಯಮಗಳನ್ನು ಒಪ್ಪಿದವಂಗೆ ಮುಂದೆ ನಾನು ಹೇಳುವ ಸಮಾಧಾನಗಳು ಸಾಧುವೆನಿಸದಿರವಾರವು.

ಈ ಮುಂದೆ ಹೇಳಿರುವ ಶಂಕರದಾಸಿ ಮತ್ತು ದೇವರದಾಸಿಯ ಕಥೆಗಳಿಂದ ಇವರಿಬ್ಬರೂ ಬಸವೇಶ್ವರನಿಗಿಂತಲೂ ಪ್ರಾಚೀನರೆಂದು ಸಿದ್ಧವಾಗುತ್ತದೆ.

ಭೀಮಕವಿ ಬಸವ ಪುರಾಣದ ಸಂಧಿ ೨೩ ಮತ್ತು ೫೧. ಷಡಕ್ಷರದೇವನ ವೃಷಭೇಂದ್ರವಿಜಯ ಆಶ್ವಾಸ ೧೩ ಮತ್ತು ೩೫. ವ್ಯಾಸೋಕ್ತ ಬಸವಪುರಾಣ ಅಧ್ಯಾಯ ೨೪ ಹಾಗೂ ೩೨. ಕಂಚಿ ಶಂಕರಾರಾಧ್ಯನ ಸಂಸ್ಕೃತ ಬಸವೇಶವಿಜಯದ ಅಧ್ಯಾಯ ೧೨ ಮತ್ತು ೩೬. ಪಾಲ್ಕುರಿಕೆ ಸೋಮನಾಥನ ಆಂಧ್ರ ಬಸವಪುರಾಣದ ಆಶ್ವಾಸ ೪ ಮತ್ತು ೬. ಕೈ॥ ಕರ್ಣಾಟಕ ಭಾಷಾರತ್ನ ಪಿ. ಆರ್. ಕರಿಬಸವಶಾಸ್ತ್ರಿಗಳ ಬಸವೇಶ ವಿಜಯ ಅಧ್ಯಾಯ ೧೧ ಮತ್ತು ೩೮ ಕೈ॥ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳ ಬಸವರಾಜವಿಜಯದ ಅಧ್ಯಾಯ ೧೭ ಮತ್ತು ೪೦ ಎಂಬೀ ಸ್ಥಳಗಳಲ್ಲಿ ದಾಸಿಮಯ್ಯಗಳ ಕಥೆ ಬಂದಿದೆ.

ಈ ಸಂದರ್ಭದಲ್ಲೆಲ್ಲ ಮಾಚಿದೇವನು ಬಸವೇಶ್ವರನಿಗೂ ಏಕಾಂತರಾಮಯ್ಯನು ಜಿನಭಕ್ತನಿಗೂ ಪೂರ್ವದ ಶಿವಶರಣರ ಕಥೆಗಳನ್ನು ಹೇಳುವ ದಾಟಿಯಲ್ಲಿ ಹೇಳಿದ್ದಾರೆ. ಈ ಕಥೆಗಳಲ್ಲೆಲ್ಲ ಶಂಕರದಾಸಿ, ದೇವರದಾಸಿ, ಜಯಸಿಂಹ, ಸುಗ್ಗಲಾದೇವಿ, ಪೊಟ್ಟಲಕೆರೆ ಎಂಬೀ ಹೆಸರುಗಳು ಬರುತ್ತವೆ. ಹರೀಶ್ವರನ ಶಂಕರದಾಸಿಮಯ್ಯರಗಳೆಯ ಕಥಾವಸ್ತುವನ್ನೆ, ಬಸವೇಶ್ವರ ಷಟ್‌ಸ್ಥಲ ವಚನ ಕಥಾಸಾರ ಗ್ರಂಥಕರ್ತೃವೂ ಹೇಳಿದ್ದಾನೆ.

ಚಾಲುಕ್ಯರಾಜರಲ್ಲಿ ಕ್ರಿ ಶ. ೧೦೦೮ ರಿಂದ ೧೦೪೦ ರವರೆಗೆ ಜಯಸಿಂಹನೆಂಬ ರಾಜನೊಬ್ಬನಿದ್ದಾನೆಂದೂ ಇವನಿಗೆ ಸುಗ್ಗಲಾದೇವಿಯೆಂಬ ರಾಣಿಯೊಬ್ಬಳಿದ್ದಾಳೆಂದೂ, ಈ ಅರಸನು ಪೊಟ್ಟಲಕೆರೆಯಲ್ಲಿ ರಾಜ್ಯಭಾರಮಾಡುತ್ತಿದ್ದಾನೆಂದೂ ಇವನು ಆನಂತರ ರಾಜ್ಯಭಾರ ಮಾಡಿದ ಅಹವಮಲ್ಲ ಸೋಮೇಶ್ವರನು ಕ್ರಿ. ಶ. ೧೦೫೬ ರಲ್ಲಿ ಕಲ್ಯಾಣಪಟ್ಟಣವನ್ನು ಕಟ್ಟಿಸಿದನೆಂದೂ ಚರಿತ್ರೆಯು ಹೇಳುತ್ತದೆ. ಇದರಿಂದ ಕಲ್ಯಾಣಕ್ಕಿಂತ ಮೊದಲು ಪೊಟ್ಟಲಕೆರೆಯೇ ರಾಜಧಾನಿಯಾಗಿತ್ತೆಂದು ಸಿದ್ಧ

ವಾಗುತ್ತದೆ. ಪೊಟ್ಟಲಕೆರೆಗೆ ಜಯಸಿಂಹನ ಆಸ್ಥಾನಕ್ಕೆ ದೇವರದಾಸಿ, ಶಂಕರದಾಸಿಗಳು ಹೋಗಿದ್ದರೆಂಬುದನ್ನು ಕನ್ನಡ, ಸಂಸ್ಕೃತ, ತೆಲುಗು ಬಸವಪುರಾಣಗಳಿಲ್ಲವೂ ಹೇಳುತ್ತವೆ. ಒಂದೆರಡುಕಡೆ ಪೊಟ್ಟಲಕೆರೆಯನ್ನೇ ಕಲ್ಯಾಣವೆಂದು ಕವಿಗಳು ಭ್ರಮಿಸಿ ಹೇಳಿದ್ದರೂ ನಾನು ಹಿಂದೆ ಹೇಳಿದ ಚಾರಿತ್ರಿಕ ಪ್ರಮಾಣದಿಂದ ಇದು ಸ್ಪಷ್ಟವಾಗುತ್ತದೆ. ಬಸವಪುರಾಣಗಳಲ್ಲಿ ಈ ದಾಸಿಮಯ್ಯಗಳ ಕಥೆಗಳನ್ನು ಹೇಳುವ ಮಾಚಿದೇವ ಮತ್ತು ಏಕಾಂತದ ರಾಮಯ್ಯಗಳು ಈ ಕಥೆಗಳು ತಮ್ಮ ಕಾಲಕ್ಕೆ ಹಿಂದಿನವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ ಈ ಕವಿಗಳ ಅಭಿಪ್ರಾಯದ ಪ್ರಕಾರ ದಾಸಿಮಯ್ಯಗಳು ಬಸವನಗಿಂತ ಹಿಂದಿನವರೆಂದು ಸಿದ್ಧವಾಗುತ್ತದೆ. ಈ ನಮ್ಮ ಅಭಿಪ್ರಾಯವನ್ನು ಸಂಸ್ಕೃತ ಬಸವಪುರಾಣಕಾರರು ಸಮರ್ಥಿಸಿದ್ದಾರೆ.

ಶ್ಲೋ॥ ಏವಮಾ ಭಾಷ್ಯ ಬಸವಂ ಮಾಚಾಖ್ಯೋ ಭಕ್ತ ಸತ್ತಮಃ।
ಕುರ್ವಾಣಸ್ತನ್ಮತಸ್ಥೈರ್ಯಂ ವಕ್ತುಂ ಸಮುಪಚಕ್ರಮೇ ॥

ಬಸವೇಶ ಮಹಾಬುದ್ಧೇಶೃಣುಷ್ವೇಮಾಂ ಕಥಾಂ ಪರಾಂ। ಸುರ
ಮ್ಯೇ ಶಂಕರಸ್ಥಾನೇ ನಾನಾ ಮುನಿಗಣಾವೃತೇ । ೯ಸೀಚ್ಛಂಕರದಾಸಾಖ್ಯ
ಶಿವಭಕ್ತೋ ದೃಢವ್ರತಃ ॥

(ವ್ಯಾ. ಬ. ಪು. ಅ. ೨೪.)

ಪುರಾ ಪೊಟ್ಟಲಕರ ಗ್ರಾಮೋ ಚಾರ್ವಾಕೋಭೂನ್ಮಹಾ ಮತಾಂ। ಪಂ
ಚವಿಂಶತಿಸಾಹಸ ಚಾರ್ವಾಕಪರಿವಾರಿತಃ ॥

ತದ್ಗ್ರಾಮೇ ಬಲ್ಲಹೋ ನಾಮರಾಜಾ ಜೈನಕುಲೋದ್ಭವಃ। ತಸ್ಯ
ರಾಜ್ಞಾಶ್ಚ ಗುರುರಭೂತ್ಸ್ವಯಾ ಜೈನ ಶಿಖಾಮಣಿಃ ॥

ಸಿಂಗಬಲ್ಲಹ ಭೂಪಸ್ಯ ಪುರಂದರಸಮ ಶ್ರಿಯಾಂ। ತಸ್ಯಾಸೀತ್ಸು
ಗ್ಗಲಾದೇವೀ ಭಾರ್ಯಾತ್ರೈಲೋಕ್ಯ ಸುಂದರೀ ॥ ಪಟ್ಟಣೇ ಜಯಸಿಂಹಾ
ಖ್ಯಃ ಪೊಟ್ಟಲಜ್ಞೇರುನಾಮನಿ। ಬಭೂವ ಕೋಪಿಭೂಪಾಲೋ ಭೂಪಾ
ಲಮರುಹೋತ್ತಮಃ। ತಸ್ಯ ಸುಗ್ಗಲಾದೇವೇತಿಸರ್ವ ಸೌಭಾಗ್ಯ ಸುಂದರೀ।
ಪ್ರಿಯಾಭವದ್ಗುಣೈಶ್ಲಾಘ್ಯಾ ಮಹಾದೇವೀಪದಂಗತಾ ॥

(ಸಂ. ಬ. ವಿ. ಅ. ೩೪.)

ಈ ಪುರಾಣಕಾರರ ಅಭಿಪ್ರಾಯದಂತೆ ದಾಸಿಮಯ್ಯಗಳಿಬ್ಬರೂ ಬಸವೇಶ್ವರನಗಿಂತಲೂ ಹಿಂದಿನವರೆಂದು ಸಿದ್ಧಿಸುವುದಿಲ್ಲವೇ?

(ii) ದೇವರದಾಸಿ ಶಂಕರದಾಸಿಮಯ್ಯಗಳು ಶ್ರೀ ರೇಣುಕಾಚಾರ್ಯ ಶ್ರೀ ಬಸವೇಶ್ವರ ಶ್ರೀ ತೋಂಟದಾರ್ಯರಂತೆ ವೀರಶೈವ ವಿಭೂತಿಗಳಾದುದರಿಂದ ಈ ಮಹಾತ್ಮರಿಬ್ಬರ ಬಗ್ಗೆ ಲಿಂಗವಂತ ಕವಿಗಳು ದೇವರದಾಸಿಮಯ್ಯನ ಪುರಾಣ, ಶಂಕರದಾಸಿಮಯ್ಯ ಪುರಾಣ ಎಂಬ ಹೆಸರಿನಿಂದ ಸ್ವತಂತ್ರ ಕಾವ್ಯಗಳನ್ನೇ ಬರೆದಿದ್ದಾರೆ. ಹರೀಶ್ವರನು 'ಶಂಕರದಾಸಿಮಯ್ಯನ ರಗಳೆ' ಎಂಬ ಒಂದು ಕಾವ್ಯವನ್ನೇ ಬರೆದಿದ್ದಾನೆ. ಇವನು ದೇವರದಾಸಿಮಯ್ಯನ ರಗಳೆಯನ್ನೂ ಬರೆದಿರಬಹುದೆಂದು ತೋರುತ್ತದೆ. ಆದರೆ ಅದು ಇನ್ನೂ ನಮಗೆ ಸಿಕ್ಕಿಲ್ಲ.

ಸಾ. ಶ. ೧೭೬೪ ರಲ್ಲಿ ವಿರೂಪಾಕ್ಷಕವಿ ಎಂಬುವನು "ದೇವರದಾಸಿಮಯ್ಯನ ಪುರಾಣ" ಎಂಬ ಗ್ರಂಥವನ್ನು ಬರೆದಿದ್ದಾನೆ. ಇದರ ಮೂಲ ಸಂಸ್ಕೃತದಲ್ಲಿತ್ತೆಂದು ಅವನು ಹೇಳುತ್ತಾನೆ. ಈ ಸಂಸ್ಕೃತದ ಗ್ರಂಥ ನಮಗೆ ಸಿಕ್ಕಿಲ್ಲ. ಈ ಕನ್ನಡ ಪುರಾಣವು ರಾವಸಾಹೇಬ ಪಿ. ಜಿ. ಹಳಕಟ್ಟಿ ವಕೀಲರ ಕಡೆಗಿದೆ. ಈ ಗ್ರಂಥವು ಕವಿಚರಿತೆಕಾರರಿಗೆ ಸಿಕ್ಕಂತೆ ತೋರುವುದಿಲ್ಲ. ಇದು ಷಟ್ಪದೀಕಾವ್ಯ.

ಈ ಗ್ರಂಥದಲ್ಲಿ ದೇವರದಾಸಿಯ ಚರಿತ್ರೆ ವಿಸ್ತಾರವಾಗಿ ಬಂದಿದೆ. ದೇವರದಾಸಿ, ದುಗ್ಗಳೆ, ಶಂಕರದಾಸಿ, ಜಯಸಿಂಹ, ಸುಗ್ಗಲಾದೇವಿ, ಪೊಟ್ಟಲಕೆರೆ ಹೆಸರುಗಳು ಮಾತ್ರ ಬಂದಿವೆ. ಬಸವೇಶ್ವರನ ಹೆಸರಾಗಲಿ ದಾಸಿಮಯ್ಯಗಳು ಬಸವ ಯುಗದವರೆನ್ನುವ ಯಾವ ವಿಚಾರವಾಗಲಿ ಇದರಲ್ಲಿ ಬಂದಿಲ್ಲ. ಆದುದರಿಂದ ಈ ಪುರಾಣ ಕಥೆಯು ಚರಿತ್ರೆಗೆ ಹೊಂದಿಕೆಯಾಗಿದೆ.

ಹಂಪೆಯ ಹರೀಶ್ವರನು ನಾವು ಹಿಂದೆ ಹೇಳಿದ ಎಲ್ಲ ಗ್ರಂಥಕಾರರಿಗೂ ಪ್ರಾಚೀನನೆಂಬುದು ಸಿದ್ಧಾಂತವಾಗಿದೆ. ಇವನ ಶಂಕರದಾಸಿಮಯ್ಯ ರಗಳೆಯಲ್ಲಿಯೂ ಈ ಗ್ರಂಥದ ಆಧಾರದ ಮೇಲೆ ಪಂಡಿತ ಮಲ್ಲಿಕಾರ್ಜುನನಿಂದ ಕ್ರಿ. ಶ. ೧೬೮೭ ರಲ್ಲಿ ಬರೆಯಲ್ಪಟ್ಟಿರುವ ಕವಿಚಂತ್ರಿಯಲ್ಲಿ ಉಕ್ತವಾಗಿರುವ ಶಂಕರದಾಸಿಮಯ್ಯನ ಪುರಾಣ ಎಂಬ ಗ್ರಂಥದಲ್ಲಿಯೂ ಶಂಕರದಾಸಿಯು ಬಸವನ ಸಮಕಾಲೀನನೆಂಬ ಅರ್ಥದ ಬಾವ ಕಥೆಯೂ ಹೇಳಲ್ಪಟ್ಟಿಲ್ಲ.

ನಾನು ಇದುವರೆಗೆ ಸೂಚಿಸಿರುವಲ್ಲಿ ಪುರಾಣಗಳ ಕಥೆಗಳೂ ಈ ದಾಸಿಮಯ್ಯಗಳು ಬಸವನಗಿಂತಲೂ ಹಿಂದಿನವರೆಂಬುವನ್ನೇ ಸಮರ್ಥ

ಸುತ್ತವೆ. ಹಾಗೂ ಮು॥ ರಾ॥ ಶ್ರೀನಿವಾಸಮೂರ್ತಿಗಳು ಸೂಚಿಸುವ ಕಥೆಗಳಿಗೆ ವಿರೋಧವಾಗಿವೆ.

೧. ಶಂಕರದಾಸಿಮಯ್ಯ ರಗಳೆ (ಹರೀಶ್ವರ).
೨. ಶಂಕರದಾಸಿಮಯ್ಯ ಪುರಾಣ (ಪಂಡಿತ ಮಲ್ಲಿಕಾರ್ಜುನ ಕವಿ)
೩. ದೇವರದಾಸಿಮಯ್ಯ ಪುರಾಣ. (ವಿರೂಪಾಕ್ಷ ಕವಿ.)
೪. ಬಸವೇಶ್ವರ ಷಟ್‌ಸ್ಥಲ ವಚನ ಕಥಾಸಾರ.

ಎಂಬೀ ನಾಲ್ಕು ಗ್ರಂಥಗಳಲ್ಲಿ ಬರುವ ದಾಸಿಮಯ್ಯಗಳ ಕಥೆಯೂ ಶ್ರೀಯುತ ಶ್ರೀನಿವಾಸಮೂರ್ತಿಗಳಿಗೆ ಪ್ರತಿಕೂಲವಾಗಿಯೂ ಚರಿತ್ರೆಗೆ ಸಮಂಜಸವಾಗಿಯೂ ಇವರು ಬಸವನಗಿಂತ ಹಿಂದಿನವರೆಂಬುದನ್ನು ಹೇಳತಕ್ಕುವಾಗಿಯೂ ಇವೆ.

(*iii*) ಇನ್ನು ಕೆಲವು ಇತಿಹಾಸಕಾರರ ಅಭಿಪ್ರಾಯಗಳ ಮೇಲಿನಿಂದ ಈ ದಾಸಿಮಯ್ಯಗಳು ಬಸವನಗಿಂತಲೂ ಪ್ರಾಚೀನರೆಂಬುದನ್ನು ಸಿದ್ಧಮಾಡಬೇಕಾಗಿದೆ.

ವಿದ್ವಾಂಸರ ಅಭಿಪ್ರಾಯಗಳು.

(*a*) ಜೇಡರದಾಸಯ್ಯನು ೧೦೪೦ ಇವನು ಜೈನರನ್ನು ಜೈಸಿ ತನ್ನ ಶಿಷ್ಯೆಯಾದ ಸುಗ್ಗಲಾದೇವಿಯ ಗಂಡ ಜಯಸಿಂಹರಾಜನನ್ನು (ದೇಸಿಂಗ) ವೀರಶೈವನನ್ನಾಗಿ ಮಾಡಿದಂತೆ ತಿಳಿಯುತ್ತದೆ. ಬ್ರಹ್ಮಶಿವನು (ಸು. ೧೧೫೫) ಈ ಕವಿಯ ಹೆಸರನ್ನು ಹೇಳುವುದರಿಂದ ಇವನು ಅವನ ಕಾಲಕ್ಕೆ ಹಿಂದೆ ಇದ್ದಿರಬೇಕು. ಆದುದರಿಂದ ಈ ರಾಜನು ೧೦೧೮ ರಿಂದ ೧೦೪೨ ರ ವರೆಗೆ ರಾಜ್ಯವಾಳಿದ ಚಾಲುಕ್ಯ ರಾಜನಾದ ೧ನೇ ಜಯಸಿಂಹನಾಗಿರಬೇಕು. (ಕನ್ನಡ ಕವಿಚರಿತ್ರೆ. ೧ನೇ ಭಾಗ)

ಮೇಲೆ ಹೇಳಿರುವ ಬ್ರಹ್ಮಶಿವನು ತನ್ನ ಸಮಯ ಪರೀಕ್ಷೆಯೆಂಬ ಗ್ರಂಥದಲ್ಲಿ ಜೇಡರದಾಸಯ್ಯನ ಹೆಸರನ್ನು ಎತ್ತಿದ್ದಾನೆಂದು ಕೈ॥ ಆರ್. ನರಸಿಂಹಾಚಾರ್ಯರು ಹೇಳಿದ್ದಾರಷ್ಟೆ. ಇವರು ಈ ಕವಿ ಕ್ರಿ. ಶ. ೧೧೫೫ ಎಂದು ಹೇಳಿದ್ದಾರೆ. ಆದರೆ ಡಾ॥ ವೆಂಕಟಸುಬ್ಬಯ್ಯನವರು "ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ" ಎಂಬ ಗ್ರಂಥದಲ್ಲಿ ಈ ಬ್ರಹ್ಮಶಿವ ಕವಿಯು ಇನ್ನೂ ಹಿಂದಿನವನೆಂದು ಹೇಳಿದ್ದಾರೆ. "ಆದುದರಿಂದ ಈ ಬ್ರಹ್ಮಶಿವನೂ ಕೂಡ ಕ್ರಿ. ಶ. ೧೦೬೦—೧೦೬೫ ಕ್ಕಿಂತ ಈಚೆಗೆ ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲ ಆಹವಮಲ್ಲನ ಆಳಿಕೆಯಲ್ಲಿ

ಎಂದರೆ ಕ್ರಿ. ಶ. ೧೦೬೫—೧೦೬೮ ರಲ್ಲಿ ತನ್ನ ಗ್ರಂಥವನ್ನು ಬರದಿರಬೇಕು. (ಕೆ. ಕ. ಜೇ. ಪು. ೨೦೭) ಈ ಬ್ರಹ್ಮಶಿವನ ಪ್ರಾಚೀನತೆಯು ಜೇಡರದಾಸಿಮಯ್ಯನ ಪ್ರಾಚೀನತೆಗೆ ಸಹಾಯಕವಾಗುತ್ತದೆಯಲ್ಲವೇ?

(*a*) ದೇವರದಾಸಿಮಯ್ಯನು ಕ್ರಿ. ಶ. ೧೦೦೮ ರಿಂದ ೧೦೫೦ ರವರೆಗೆ ಆಳಿದ ಚಾಳುಕ್ಯರಾಜನಾದ ಜಯಸಿಂಹನ ಕಾಲದಲ್ಲಿದ್ದನೆಂಬುದು ಈಗ ಸ್ಪಷ್ಟವಾಗಿರುತ್ತದೆ. ಪೆಫ್ಲೀಟಸಾಹೇಬರು ಇಂಡಿಯನ್ ಆಂಟಿಕ್ವೆಯರಿನ ೧೯ ರಲ್ಲಿ ಈತನು ಜಯಸಿಂಹನ ಕಾಲಕ್ಕಿರಬಹುದೆಂದು ಊಹಿಸಿದ್ದಾರೆ. (ದೇವರದಾಸಿಮಯ್ಯನ ವಚನಗಳ ಪೀಠಿಕೆ ರಾವಸಾಹೇಬ ಪಿ. ಜಿ. ಹಳಕಟ್ಟಿಯವರು)

(*c*) ಇನ್ನು ಸ್ವತಃ ಲಿಂಗಧಾರಿಗಳಾಗಿದ್ದು ವೀರಶೈವರ ಆಚಾರ ಕ್ರಿಯೆಯನ್ನು ಪ್ರಸಾರ ಮಾಡಲು ಹೆಣಗಾಡಿದವರಲ್ಲಿ ನಮಗೆ ಗೊತ್ತಿದ್ದ ಮಟ್ಟಿಗೆ ಜೇಡರದಾಸಿಮಯ್ಯನವರೊಬ್ಬರು. ಇವರ ಬಗ್ಗೆ ಬಸವೇಶ್ವರನ ವಚನಗಳಲ್ಲಿ ಮೇಲಿಂದಮೇಲೆ ಉಲ್ಲೇಖವಿದೆ. ಬಸವ ಪುರಾಣದಲ್ಲಿಯೂ ಇತರ ವೀರಶೈವ ಪುರಾಣಗಳಲ್ಲಿಯೂ ಇವರ ಚರಿತ್ರವು ಬಂದಿದೆ. ಅದರೊಳಗಿನ ಕೆಲವು ವಿಚಾರಗಳು ಶಿಲಾಶಾಸನದಿಂದ ಪ್ರಸ್ಥಿತವಾಗುವವು. ಕ್ರಿ. ಶ. ೧೧೪೪ ರಲ್ಲಿ ಹುಟ್ಟಿದ ಗೊಬ್ಬೂರು ಶಿಲಾಶಾಸನದಲ್ಲಿ ಜೇಡರದಾಸಿಮಯ್ಯಗಳ ಹೆಸರಿದೆ. ಡಾ॥ ಫ್ಲೀಟರಂಥ ಪಾಶ್ಚಾತ್ಯ ವಿದ್ವಾಂಸರೂ ಕೂಡ ದಾಸಿಮಯ್ಯನು ಐತಿಹಾಸಿಕ ಪುರುಷನೆಂದು ಒಪ್ಪಿಕೊಂಡಿದ್ದಾರೆ. ಕ್ರಿ. ಶ. ೧೦೦೮ ರಿಂದ ೧೦೪೨ ರ ವರೆಗೆ ಆಳಿದ ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲ ಜಯಸಿಂಹನ ಕಾಲದಲ್ಲಿ ದಾಸಿಮಯ್ಯಗಳಿದ್ದರೆಂದು ತೋರುವುದರಿಂದ ಇವರು ಬಸವಣ್ಣನವರಿಗಿಂತಲೂ ನೂರಾರು ವರ್ಷ ಹಿಂದಿನವರು. ನಮಗೆ ಗೊತ್ತಿದ್ದ ವೀರಶೈವ ಐತಿಹಾಸಿಕ ಪುರುಷರಲ್ಲಿ ಇವರೇ ಮೊದಲನೆಯವರೆನ್ನಬಹುದು. ಆದುದರಿಂದ ವೀರಶೈವ ಇತಿಹಾಸವನ್ನು ಇವರ ಕಾಲದಿಂದ ಅಂದರೆ ೧೧ನೇ ಶತಮಾನದಿಂದಲೇ ಆರಂಭಿಸಬೇಕಾಗುತ್ತದೆ. (ಶಿವಾನುಭವ ಸಂ. ೬ ಸಂ. ೫ ಡಾ. ಎಸ್. ಸಿ. ನಂದೀಮಠ ಎಂ. ಎ. ಪಿ. ಎಚ್. ಡಿ.).

(*d*) ಮು॥ ಫ್ಲೀಟಸಾಹೇಬರು "*Dynasties of Canarese Districts*" ಎಂಬ ಗ್ರಂಥದ ೪೫ನೇ ಪುಟದಲ್ಲಿ ಪೋಟಲಕೆರೆಯ ವಿಷಯವಾಗಿ ಬರೆದಿರುವುದೇನಂದರೆ ಕ್ರಿ. ಶ. ೧೦೧೬ ರಿಂದ ೧೦೪೦ ರ

ವರಿಗೆ ಆಳಿದ ಚಾಲುಕ್ಯ ವಂಶದ ಮೂರನೇ ಜಯಸಿಂಹನು ದೇವರ ದಾಸಿಮಯ್ಯನಿಂದ ವೀರಶೈವ ದೀಕ್ಷೆಯನ್ನು ಹೊಂದಿದನು. (ಶ್ರೀ. ಬಸವ ಚರಿತ್ರೆ ಹರ್ದೇಕರ ಮಂಜಪ್ಪನವರು)

(*e*) ಈ ಗ್ರಂಥದಲ್ಲಿ ಪ್ರತಿಪಾದಿತರಾದ ಶಿವಶರಣರಲ್ಲಿ ಮಾಚಿದೇವ ಕಿನ್ನರೀಬ್ರಹ್ಮಯ್ಯ ಮುಸುಟಿಚೌಡಯ್ಯ ಕಲಿಕೇತಬ್ರಹ್ಮಯ್ಯ ತೆಲುಂಗು ಜೊಮ್ಮಯ್ಯ, ಸುರಗಿಚೌಡಯ್ಯ, ದಸರಯ್ಯ, ಕದಿರೆರೇಮಯ್ಯ. ಏಕಾಂತದರಾಮಯ್ಯ ಮೊದಲಾದವರು ಬಸವೇಶ್ವರನ ಕಾಲದಲ್ಲಿದ್ದವರು. ಬಾಹೂರುಜೊಮ್ಮಯ್ಯದೇವ, ಶಂಕರದಾಸಿ, ಸಿರಿಯಾಳಶೆಟ್ಟಿ, ಹಲಾಯುಧ ಮೊದಲಾದವರೆಲ್ಲರೂ ಬಸವೇಶ್ವರನಿಗಿಂತಲೂ ಮೊದಲಿಗರು. (ಬಸವರಾಜ ವಿಜಯ ಕೈ॥ ವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿ)

(*a*) ಕೈ॥ ಎಂ. ಎಂ. ಕಲ್ಯಾಣಶೆಟ್ಟಿ ಬಿ. ಎ. ರವರು 'ವೀರಶೈವಾಚಿಸ್ಥಿತಿ' ಎಂಬ ಮರಾಠಿ ಗ್ರಂಥದಲ್ಲಿ ಈ ದಾಸಿಮಯ್ಯನು ಜಯಸಿಂಹನ ಕಾಲದವರೆಂದು ಅಭಿಪ್ರಾಯಪಟ್ಟಿದ್ದಾರೆ. ಅವರ ಮಾತುಗಳನ್ನೇ ಮುಂದೆ ಉದಾಹರಿಸಿದೆ. "**चालुक्यराजांमध्यें एक तिसऱ्या जयसिंहनामक राजाची बायको सुग्गला नामें होती. तिनें देवरदासिमय्य नावाच्या भक्ताकडून आपल्या नवऱ्यास वीरशैव दीक्षा देविली असें फ्लीट साहेबाचे मत आहे**" (**वीरशैवांची स्थिति** पृ ??.)

(*g*) ವೀರಶೈವ ಇತಿಹಾಸದಲ್ಲಿ ದೇವರದಾಸಿಮಯ್ಯನು ಬಸವಣ್ಣನಿಗಿಂತ ಸುಮಾರು ೧೨೦ ವರ್ಷ ಮೊದಲೂ ಶೈವರ ಕಾಲದಿಂದ ಈಚೆಗೂ ಬರುತ್ತಾನೆ. ಈತನನ್ನು ಜನರು ದೇವರದಾಸಿಮಯ್ಯ ಜೇಡರ ದಾಸಿಮಯ್ಯನೆಂದು ತಿಳಿದುಕೊಂಡಂತೆ ತೋರುತ್ತದೆ..... ಪುರಾಣಗಳಲ್ಲಿ ದೊರೆಯುವ ದಾಸಿಮಯ್ಯನು ದೇವರದಾಸಿಯಾಗಲಿ ಜೇಡರ ದಾಸಿಯಾಗಲಿ ಆತನು ಕ್ರಿ. ಶ. ೧೦೦೮ ರಿಂದ ೧೦೫೮ ರ ವರೆಗೆ ಆಳಿದ ಚಾಲುಕ್ಯರಾಜನಾದ ಜಯಸಿಂಹನ ಹೆಂಡತಿ ಸುಗ್ಗಲೆಗೆ ಗುರುವಾಗಿದ್ದನೆಂದು ತಿಳಿದುಬರುತ್ತದೆ. ಮತ್ತು ಜೈನರನ್ನು ವಾದದಲ್ಲಿ ಸೋಲಿಸಿ ಜಯಸಿಂಹನನ್ನು ಶೈವನನ್ನಾಗಿ ಮಾಡಿದನೆಂದೂ ಬರೆದಿದೆ. ಈ ಹೇಳಿಕೆಯನ್ನು ಕ್ರಿ. ಶ. ೧೮೫೫ ರಲ್ಲಿದ್ದ ಬ್ರಹ್ಮಶಿವನು ತನ್ನ ಗ್ರಂಥದಲ್ಲಿ ಸಮರ್ಥಿಸಿದ್ದಾನೆ. (ವೀರಶೈವ ಮತಾಚಾರ್ಯರ ಕಾಲನಿರ್ಣಯೂ ಮು॥ ಕರ್ಲಮಂಗಲಂ ಶ್ರೀಕಂಠಯ್ಯನವರು.)

(*h*) ಪಾಲ್ಕುರಿಕೆ ಸೋಮನಾಥ ಕವಿಯ ಆಂಧ್ರ ಬಸವ ಪುರಾಣವನ್ನು ತಿದ್ದಿ ಪ್ರಕಟಿಸಿದ ವಿದ್ವಾನ ವೇಟೂರು ಪ್ರಭಾಕರ ಶಾಸ್ತ್ರಿಗಳು ತಾವು ಆ ಗ್ರಂಥಕ್ಕೆ ಬರೆದಿರುವ ವಿದ್ವತ್ಪೂರ್ಣವಾದ ಪೀಠಿಕೆಯಲ್ಲಿ ದೇವರ ದಾಸಿ ಶಂಕರದಾಸಿಗಳು ಬಸವನಿಗಿಂತ ಹಿಂದಿನವರೆಂದು ಅಭಿಪ್ರಾಯ ಪಟ್ಟಿದ್ದಾರೆ. ಅವರ ಬರಹವನ್ನು ಇದ್ದಕ್ಕಿದ್ದಂತೆ ಉದ್ಧರಿಸಿದ್ದೇನೆ.

"ಪ್ರಾಚೀನ ಭಕ್ತಲುಃ— ಪಶ್ಚಿಮ ಚಾಳುಕ್ಯರಾಜಯಿನ ಜಗದೇಕಮಲ್ಲುಂಡು (ಈತಂಡೆರೆಂಡುವ ಜಯಸಿಂಹವಲ್ಲಭುಂಡು ದೇಸಿಂಗುಂಡು ಸಿಂಗಬಲ್ಲಡೆಂಡು ಅನಿಪೆರ್ಕೊನಂಬಡಿನವಾಂಡು ನೀ ಕಂಡೆ) ..... ಸಿಂಗಬಲ್ಲಹುನಿ ಭಾರ್ಯೆಯೇ ಸುಗ್ಗಳದೇವಿ ಈನೆ ಶೈವಮತಸ್ಥರಾಲು ಜೇಡರದಾಸಯ್ಯ ಈಮೆಗುರುಂಡು ತನ ಮಾಹಾತ್ಮ್ಯಮುನು ಬ್ರಕಟಿಂಚಿ ಜೇಡರದಾಸಯ್ಯ ಸಿಂಹಬಲ್ಲಹುನಿ ಶೈವನಿಂಗಾ ಜೇಸೇನು ಪೊಟ್ಲಜೆರವು ಕೋಲಿಪಾಕಯನು ಪುರಮುಲಂತನಿ ರಾಜ್ಯಸ್ಥಾನ ಮುಲುಗಾ ಶಾಸನಮುಲಂದುಂಗಲದು. ಪೊಟ್ಲಜೆರುವುಲೋನೆ ಜೇಡರದಾಸಯ್ಯ ಮಹಾತ್ಮ್ಯಮುನು ಬ್ರಕಟಿಂಚಿಯಕ್ಕಡಿ ಜೈನಮತ ಮುಲನೆಪ್ಪೊರಿಂಟಿನಿ ಜೇಡಂಗೊಟ್ಟಿಂಚೇನು. ಅಪ್ಪಡು ರಾಜುಡೋಸಕ್ಕಡಿ ಜೈನರೆಲ್ಲರು ಗೂಡ ಶೈವಮತಮವಲಂಜಾಚಿರಿ ಪೊಟ್ಲಜೆರುವು ಬಳ್ಳಾರಿ ಮಂಡಲಮುಂ ದೊಗಲದು (ಆಂಧ್ರ ಬಸವ ಪುರಾಣ ಪೀಠಿಕೆ ಪುಟ ೬೧—೬೨)

ಇಹುವರೆಗೆ ನಾನು ಉದಾಹರಿಸಿದ ಪುರಾಣ ಮತ್ತು ಚರಿತ್ರಾಕಾರಗಳಿಂದ ಪುರಾಣ ಪ್ರಸಿದ್ಧವಾದ ಶಂಕರದಾಸಿ, ದೇವರದಾಸಿಮಯ್ಯಗಳು ಬಸವೇಶ್ವರನಿಗಿಂತಲೂ ಪೂರ್ವಿಕರೆಂಬುದು ಸಿದ್ಧಾಂತವಾಗುತ್ತದೆ.

ವಚನಕಾರ ದಾಸಿಮಯ್ಯ.

(*iv*) ರಾವಸಾಹೇಬ ಹಳಕಟ್ಟಿಯವರು ಪ್ರಕಟಿಸಿರುವ "ದೇವರದಾಸಿಮಯ್ಯನ ವಚನಗಳು" ಎಂಬ ಗ್ರಂಥವು ಸ್ವತಂತ್ರವಾಗಿ ಸಿಕ್ಕಿಲ್ಲ. ರಾಮನಾಥಾ ಎಂಬ ಅಂಕಿತವುಳ್ಳ ಜೇರೆ ಜೇರೆ ಸಂಗ್ರಹ ಗ್ರಂಥಗಳಲ್ಲಿಯ ವಚನಗಳನ್ನು ಕೂಡಿಸಿ ಅವರು ಈ ಗ್ರಂಥವನ್ನು ಪ್ರಕಟಿಸಿದ್ದಾರೆ. ಈ ವಚನಕಾರ ದಾಸಿಮಯ್ಯನು ತನ್ನದೊಂದು ವಚನದಲ್ಲಿ ಡೋಹರ

ಕಕ್ಕಯ್ಯನ ಹೆಸರನ್ನು ಹೇಳಿದ್ದಾನೆ. ಕಾರಣ ಬಸವನ ಸಮಕಾಲೀನನಾದ ಡೋಹರಕಕ್ಕಯ್ಯನ ಹೆಸರನ್ನೆತ್ತಿದ ದಾಸಿಮಯ್ಯನು ಬಸವ ಯುಗದವನೇ ಆಗಿರಬೇಕೆಂಬುದನ್ನು ಒಪ್ಪಿಕೊಳ್ಳಲೇಬೇಕಾಗಿದೆ. ಪುರಾಣ ಪ್ರಸಿದ್ಧ ದಾಸಿಮಯ್ಯನು ರಾಮನಾಥನ ಭಕ್ತನಾದ ಮಾತ್ರಕ್ಕೇ ಆ ಅಂಕಿತ ದಿಂದ ಅವನು ವಚನಗಳನ್ನು ಹಾಡಿರುವನೆಂಬುದಕ್ಕೆ ಆಧಾರವಿಲ್ಲ. ಈ ವಿಚಾರವನ್ನೆಲ್ಲ ನಾನು ನನ್ನ ಶಿವಾನುಭವದ ಹಿಂದಿನ ಲೇಖನದಲ್ಲಿ ವಿಸ್ತರಿಸಿರುವೆನು.

ವೀರಶಂಕರದಾಸಿ

ಪುರಾಣದ ದೇವರದಾಸಿಯ ಸಮಕಾಲೀನನಾದ ಮಯೂರ ಪುರದ ಶಂಕರದಾಸಿಯು ಬಸವನ ಸಮಕಾಲೀನನೆಂಬುದಕ್ಕಂತೂ ಯಾವ ಚಾರಿತ್ರಿಕ ಕಾರಣಗಳೂ ಇಲ್ಲ. ಮು॥ ರಾ॥ ಶ್ರೀನಿವಾಸಮೂರ್ತಿಗಳು ಕೊಟ್ಟಿರುವ ಪ್ರಮಾಣಗಳಿಗೆ ವಿರೋಧವಾಗಿ ಆಯಾ ಪುರಾಣಗಳಲ್ಲಿಯೇ ಕಥೆಗಳಿವೆಯಾದುದರಿಂದ ಅವು ಬಲವತ್ತರ ಪ್ರಮಾಣಗಳಲ್ಲ.

ಬಸವ ಪುರಾಣಗಳಲ್ಲಿ ವೀರಶಂಕರದಾಸಿಯೆಂಬ ಶರಣನ ಕಥೆಯೊಂದಿದೆ. ಇವನು ನಾವು ಇದುವರೆಗೆ ಹೇಳಿದ ನವಿಲೆಯ ಶಂಕರದಾಸಿಗಿಂತಲೂ ಭಿನ್ನನಾಗಿದ್ದಾನೆ. ಈ ವೀರಶಂಕರದಾಸಿಯು ಬಸವೇಶ್ವರನ ಸಮೀಪಕಾಲೀನನಾಗಿದ್ದರೂ ಇರಬಹುದು. ಇವನನ್ನೇ ಪ್ರಾಚೀನ ಶಂಕರದಾಸಿಯೆಂದು ಭ್ರಮಿಸಿದ್ದರೂ ಕೆಲವು ಪುರಾಣಕಾರರು ಭ್ರಮಿಸಿರಬಹುದು. ಇವನ ಕಥೆಯ ಮೇಲಿನಿಂದ ಇವನು ಲಿಂಗವಂತನಾಗಿದ್ದನೆಂದು ತೋರುತ್ತದೆ.

ನಾನು ಇದುವರೆಗೆ ಉದಾಹರಿಸಿರುವ ಆಧಾರಗಳಿಂದ ಪುರಾಣ ಪ್ರಸಿದ್ಧ ದಾಸಿಮಯ್ಯಗಳೇ ಬೇರೆ, ವಚನಕಾರ ದೇವರದಾಸಿಯೇ ಬೇರೆ ಎಂಬುದು ಸ್ಪಷ್ಟವಾಗಿದೆ. ಹಲವು ಮಂದಿ ಇತಿಹಾಸ ಪಂಡಿತರು ನನ್ನ ಹೇಳಿಕೆಗೆ ಬೆಂಬಲವಾಗಿದ್ದಾರೆ. ಬ್ರಹ್ಮಶಿವನು ದಾಸಿಮಯ್ಯನ ಹೆಸರನ್ನೆತ್ತಿರುವುದೂ ಪ್ರಾಚೀನನಾದ ಹರೀಶ್ವರನು ಶಂಕರದಾಸಿಮಯ್ಯನ ರಗಳೆಯಲ್ಲಿ ಇತಿಹಾಸಕಾರರಿಗೆ ಅನುಕೂಲವಾಗಿ ಹೇಳಿರುವುದೂ ನಮ್ಮ ವಾದವನ್ನು ಸಮರ್ಥಿಸುತ್ತವೆ.

ಆದ್ದರಿಂದ ಭಕ್ತಿಭಂಡಾರಿ ಬಸವಣ್ಣನವರು ಎಂಬ ಗ್ರಂಥದ ಪುನರ್ಮುದ್ರಣದಲ್ಲಿಯೂ ಮು॥ ರಾ. ಶ್ರೀನಿವಾಸಮೂರ್ತಿಗಳು ತಮ್ಮ ಹಿಂದಿನ

ವಾದವನ್ನೇ ಸಮರ್ಥಿಸಿರುವುದು ಸಮಂಜಸವಾಗಿಲ್ಲವೆಂದು ನಾವು ಮತ್ತೊಮ್ಮೆ ಹೇಳಬೇಕಾಗಿದೆ.

ಪುರಾಣ ಕಥಿತ ಶಂಕರದಾಸಿ ದೇವರದಾಸಿಮಯ್ಯಗಳು ಬಸವನ ಸಮಕಾಲೀನರೆಂಬುವಲ್ಲಿ ಮತ್ತೊಂದು ಪ್ರತಿಬಂಧಕವಿದೆ. ಏನೆಂದರೆ ಜಯಸಿಂಹ, ಸುಗ್ಗಲಾದೇವಿ, ಶಂಕರದಾಸಿ, ದೇವರದಾಸಿ, ಪೊಟ್ಟಲಕೆರೆ ಎಂಬೀ ಹೆಸರುಗಳು ಪ್ರಾಯೇಣ ಇವರ ಕಥೆಗಳಲ್ಲೆಲ್ಲಾ ಬರುತ್ತವೆ. ಬಸವೇಶ್ವರನ ಕಾಲದಲ್ಲಿ ಪೊಟ್ಟಲಕೆರೆಯೆಂಬ ರಾಜಧಾನಿಯಿದ್ದುದಾಗಲಿ ಜಯಸಿಂಹನು ಸುಗ್ಗಲೆಯರೆಂಬ ರಾಜರಾಣಿಯಿದ್ದುದಾಗಲಿ ಚರಿತ್ರೆಯಿಂದ ಸಿದ್ಧವಾಗುವುದಿಲ್ಲ. ಆದಕಾರಣ ದಾಸಿಮಯ್ಯಗಳಿಬ್ಬರೂ ಪ್ರಾಚೀನರೆಂದು ತಾನಾಗಿಯೇ ಸಿದ್ಧವಾಗುತ್ತದೆ. ಕ್ರಿ. ಶ. ೧೧೬೫ ರಲ್ಲಿದ್ದ ಬ್ರಹ್ಮಶಿವನು ತನ್ನ ಗ್ರಂಥದಲ್ಲಿ ದೇವರ ದಾಸಿಮಯ್ಯನ ಹೆಸರನ್ನು ಹೇಳಿರುವುದರಿಂದಲೂ (ಈ ಬ್ರಹ್ಮಶಿವ ಪೊಟ್ಟಲಕೆರೆಯವನು) ಕ್ರಿ. ಶ. ೧೧೪೫ ರಲ್ಲಾದ ಗೊಬ್ಬೂರು ಶಿಲಾಶಾಸನವು ದೇವರದಾಸಿಮಯ್ಯನ ಪ್ರಾಚೀನತೆಯನ್ನು ಹೇಳುತ್ತಿರುವುದರಿಂದಲೂ ಈ ದಾಸಿಮಯ್ಯಗಳು ಪ್ರಾಚೀನರೆಂಬ ವಾದವೇ ವಿಶೇಷವಾಗಿ ಸಮರ್ಥಿಸಲ್ಪಡುತ್ತಿದೆ.

ಆಳಿದ ಮಹಾಶ್ರಭುಗಳಾದ ರಾಜರ್ಷಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯ
ರವರ ಸ್ಮಾರಕೋತ್ಸವದ ನಿಮಿತ್ತವಾಗಿ ರಚಿಸಿದ

ಸ್ಮಾರಕ ಪದ್ಯಾವಳಿ.

ಶಾ। ವಿ। ವೃ॥
ಶ್ರೀನಂದೀಶ್ವರ ಭೃಂಗಿವೀರ ವೃಷಭಸ್ಕಂದಾದಿ ಸಂಸೇವಿತಃ।
ಸಾನಂದಾತ್ರಿ ಪರಾಶರಾದಿ ಮುನಿಹೃತ್ಕಂಜಾತ ಸಂಶೋಭಿತಃ ॥
ಶ್ರೀನಾಗೇಂದ್ರ ವಿಭೂಷಣಾಂಚಿತತನುಶ್ಶ್ರೀ ಪಾರ್ವತೀನಾಯಕಃ।
ನಾನಾ ಶಾಸ್ತ್ರವಿನುತ್ಯಸಾರ ಮಹಿಮೋ ಭೂಪಂ ಸದಾ ರಕ್ಷತು ॥೧॥

ಕಂದ॥ ಮುಮ್ಮಡಿಯ ಕೃಷ್ಣರಾಜಂ।
ನಮ್ಮಾ ಕರ್ನಾಟ ರತ್ನ ಸಿಂಹಾಸನದೊಳ್ ॥
ಸಮ್ಮದದಿಂ ಶೋಭಿಸಿದಂ।
ಜೊಮ್ಮಂ ನಿಜಪದ್ಮಪೀಠದೊಳ್ ರಾಜಿಪವೊಲ್ ॥೨॥

ಯಾದವ ವಂಶಲಲಾಮಂ।
ಮಾಧವನಪರಾವತಾರನನುಪಮ ಶೂರಂ ॥
ಭೂಧವಲೋಕೋದ್ಧಾರಂ।
ವೇದವಿದಂ ಕೃಷ್ಣಭೂಪನಪಹೃತತಾಪಂ ॥೩॥

ಕಾ। ವಿ। ವೃ॥
ಆವಾತಂ ವಿಬುಧಸ್ತುತಂ ಪರತರ ಶ್ರೀಕೃಷ್ಣವಂಶೋದ್ಭವಂ।
ದೇವಾಧೀಶ ಮಹೇಶ ಭಕ್ತಿನಿರತಂ ಸನ್ಮಾರ್ಗ ಸಂಶೋಭಿತಂ ॥
ಆವಾತಂ ಘನವೇದ ಶಾಸ್ತ್ರ ಕವಿತಾ ವಿದ್ಯಾವಿನೋದಾಸ್ಪದಂ।
ದೇವಂ ಮುಮ್ಮಡಿ ಕೃಷ್ಣರಾಜನನಿಶಂ ರಕ್ಷಿಕ್ಕೆ ಭಕ್ತಾಳಿಯಂ ॥೪॥

ಕಂದ॥ ಕನ್ನಡ ಸಂಸ್ಕೃತ ಭಾಷೆಯೊ।
ಉನ್ನತ ಗುಣಭರಿತಮೆನಿಪ ಪಲವು ಸತ್ಕಾವ್ಯಗಳಂ ॥
ಜಿನ್ನಿಂ ವಿರಚಿಸಿ ಬುವಿಯೊಳ್।
ಕನ್ನಡ ಸಾಹಿತ್ಯ ಶರಧಿಗುಡುಪತಿಯೆನಿಪಂ ॥೫॥

ಉಭಯ ಕವಿ ಲಿಂಗರಾಜಂ।
ಪ್ರಭು ಕೃಷ್ಣೇಂದ್ರಂಗೆ ಅಳಿಯನೆನಿಪಾ ಕತದಿಂ ॥

ಅಭಯಪ್ರದನಾವಿದ್ವತ್।
ಪ್ರಭುತಾಂ ಧಾರಿಣಿಯೊಳಕ್ಕುಮನುಪಮಮಹಿಮಂ ॥೬॥

ಉ। ವಸಂ। ವೃ॥
ನೋಡದ ದೈವವಿಲ್ಲವೆಲೆಭೂವಿಪ ನಿನ್ನಯ ದಿವ್ಯನೇತ್ರದಿಂ।
ಪಾಡದ ಕಾಲವಿಲ್ಲ ಪರಮೇಶ್ವರ ಕೀರ್ತನವಂ ಸುಜಿಹ್ವೆಯಿಂ ॥
ನೀಡದ ದಾನವಿಲ್ಲ ನಿಜ ಹಸ್ತದೆ ಭೂಸುರಜಂಗಮಾಳಿಗಂ।
ಕೂಡಿದೆಯಲ್ತೆ ನೀನದರ ಸತ್ಫಲದಿಂ ವರಮೋಕ್ಷ ಲಕ್ಷ್ಮಿಯಂ ॥೭॥

ಚಂ। ಮಾ। ವೃ॥
ಮನುಮುನಿಯೆಂಬ್ರ ಚಂದ್ರ ದಿಗಧೀಶ ಗಿರೀಶ ನರೇಶರೆಂಬರಂ।
ತನನಮದೆಂದು ತಾಂ ಕುಣಿಸಿ ಕಾಡಿಸಿ ಬಾಡಿಸಿ ಪೈಮೆಪೆತ್ತನಂ॥
ಮನಸಿಜನಂ ಮಹಾಬಲನನಳ್ಕಿಸಿ ಒಳ್ಕಿಸಿ ಬೂದಿಗೆಯ್ದನಂ।
ಚನುಮಯನಂ ಮಹೀಶ ಮರು! ಕಟ್ಟಿದೆ ನಿನ್ನಯ ಭಕ್ತಿಪಾಶದಿಂ ॥೮॥

ಶಾ। ವಿ। ವೃ॥
ಜಾಪೇಂದ್ರಾತ್ಮಜ ನಿನ್ನ ದಿವ್ಯಯಶಮಂ ಪಾಡುತ್ತಿರಲ್ ಕಿನ್ನರರ್।
ಶ್ರೀಮದ್ಯಾದವ ವಂಶ ವರ್ಧನರೆನಿಸ್ಪಾ ಚಿಕ್ಕದೇವಾದಿಗಳ್ ॥
ಪ್ರೇಮಂ ಮಿಕ್ಕುರೆ ಕೇಳ್ದಪರ್ ನಯನದೊಳ್ ಸುಖ್ಯಾಶ್ರುವಂಬೀ
ರುವರ್।
ಕಾಮದ್ವಿಟ್ಪದ ಭಕ್ತ ಸಗ್ಗದೆಡೆಯೊಳ್ ದೇವರ್ಕಳಾನಂದಿಪರ್ ॥೯॥

ಮ। ವಿ। ವೃ॥
ನರನೆಂದುಂ ವರಭೋಗಿಯೆಂದು ಕೆಲಬರ್ ಗಾಂಪರ್ದಲು
ದ್ಘೋಷಿಪರ್।
ನರನೇ ಭೂಪತಿ? ಭೋಗಿಯೇ ಶಿವಶಿವಾ ಸರ್ವಸ್ವಮುಂ ಪಾರ್ವತೀ ॥
ಪರಮೇಶರ್ಕಳಿಗೊಪ್ಪಿಸಿರ್ದ ಮಹಿಮಂ ಶ್ರೀಕೃಷ್ಣಭೂವಿಶ್ವರಂ ।
ನರನಲ್ಲಂ ವರಭೋಗಿಯಲ್ ಮರಿಯಲ್ ಶ್ರೀಕೃಷ್ಣಯೋಗೀಶ್ವರಂ॥೧೦॥

ಕಂದ॥ ಜಯಮುಕ್ಕೆ ಕೃಷ್ಣನೃಪತಿಗೆ।
ಜಯಮುಕ್ಕೆಮ ವೀರ ಧೀರ ಯುವರಾಜಂಗಂ ॥
ಜಯಜಾಮೇಂದ್ರಂಗಂ ಮೇಣ್।
ಜಯವಾಗುಗೆಯಾದವಾನ್ವಯರ್ಗೆಲ್ಲರಂ ॥೧೧॥

ಕೀರ್ತನಕೇಸರಿ ಬಿ. ಶಿವಮೂರ್ತಿಶಾಸ್ತ್ರಿ ಹುಲಕುಂಟೆಮಠ
ತುಮಕೂರು.

ಸಮಾಜಸುಧಾರಣೆಯ ರೀತಿ.

(ಲೇ:— ಅನ್ನದಾನೀಶ್ವರ ವಿರಕ್ತಮಠ.)

ಹಿಂದೆ ವೈಭವದಲ್ಲಿದ್ದ ನಮ್ಮ ವೀರಶೈವ ಸಮಾಜವು ಇಂದು ಅಧೋಗತಿಗಿಳಿದಿದೆ. ಅಧೋಗತಿಗೆ ಕೆಲವು ಕಾರಣಗಳಿವೆ. ಅವುಗಳಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣದ ಅಭಾವವೂ ಒಂದು ಕಾರಣವಾಗಿದೆ. ಜ್ಞಾನ ಮತ್ತು ಶಕ್ತಿಗಳನ್ನು ಬೆಳಿಸಿಕೊಂಡು ಶೀಲಬಲಸಂಪನ್ನರಾಗಿ ಸಮಾಜೋದ್ಧಾರ ಕಾರ್ಯಗಳಲ್ಲಿ ಉತ್ಸಾಹದಿಂದ ದುಡಿಯುವ ಸದುದ್ದೇಶದಿಂದ ಧಾರ್ಮಿಕ ಶಿಕ್ಷಣ ಹೊಂದುವ ವಾತಾವರಣವು ನಮ್ಮ ಸಮಾಜದಲ್ಲಿ ಇಲ್ಲವೆಂದೇ ಹೇಳಬಹುದು.

ತಾನು ಜ್ಞಾನಿಯಾಗಿ ಸಮಾಜದಲ್ಲಿ ಜ್ಞಾನಪ್ರಸಾರ ಮಾಡಿ ದುಃಖಗಳನ್ನು ಕಳೆಯುವದು ಪವಿತ್ರವಾದ ಕರ್ತವ್ಯವಾಗಿದೆಯೆಂದೇ ನಮಗೆ ತಿಳವಳಿಕೆಯಾಗಬೇಕಾಗಿದೆ. ಈ ಪವಿತ್ರ ಕರ್ತವ್ಯದ ಅರಿವುಳ್ಳವರೊಡನೆ ಸಹಕರಿಸಿ ಕಾರ್ಯಸಾಗಿಸುವದು ಅತ್ಯಗತ್ಯವಾಗಿದೆ.

ಶಕ್ಯವಿದ್ದಲ್ಲಿ ಅಭ್ಯಾಸಮಂಡಲಗಳನ್ನು ಏರ್ಪಡಿಸಿ ತುಲನಾತ್ಮಕ ಅಭ್ಯಾಸ-ತತ್ವವಿವೇಚನೆಗಳನ್ನು ಪ್ರಾರಂಭಿಸಬೇಕಾಗಿದೆ. ಆದರೆ ಆ ತುಲನಾತ್ಮಕ ಅಭ್ಯಾಸದಿಂದ ಕೇವಲ ತಾರ್ಕಿಕ ವೃತ್ತಿಬೆಳಿದರೆ ಉಪಯೋಗವಿಲ್ಲ. ಆ ತುಲನಾತ್ಮಕ ದೃಷ್ಟಿಯಿಂದ ಬುದ್ಧಿಯು ವಿಶಾಲವಾಗಿ ಭಾವನೆಯು ಬೆಳಿಯಬೇಕು. ಧಾರ್ಮಿಕ ಸಹಿಷ್ಣುತೆಯು ಲಭ್ಯವಾಗಬೇಕು. ನಮ್ಮ ಧರ್ಮದಲ್ಲಿ ನಿಷ್ಠೆಯು ಬೆಳೆಯಬೇಕು. ಸಂಸ್ಕೃತದಲ್ಲಿಯ ಉದಾತ್ತ ತತ್ವಗಳನ್ನು ಸ್ವೀಕರಿಸಬೇಕು. ಆದರೆ ಕೇವಲ ಪ್ರಾಚೀನ ಸಂಸ್ಕೃತ ಶ್ಲೋಕ-ಮಂತ್ರ-ತಂತ್ರಾದಿಗಳಿಂದ ಸಮಾಜೋದ್ಧಾರವಾಗಲಾರದು. ಅಭ್ಯಾಸ ಮಂಡಲಗಳಿಗೆ ಅನುಭವಮಂಟಪ ಎಂದು ಕರೆದರೂ ಅಡ್ಡಿಯಿಲ್ಲ.

ಈ ಕಾಲದಲ್ಲಿ ಇಂಥ ಅನುಭವಮಂಟಪಗಳಿಂದ ಜಾತಿಭೇದದ ಬಂಧನ, ನಾನಾದೇವತೋಪಾಸನೆ, ಮೌಢ್ಯತೆ ಇತ್ಯಾದಿ ಕಲ್ಪನೆಗಳನ್ನು ದೂರಮಾಡಬಹುದು.

ಧಾರ್ಮಿಕ ಜ್ಞಾನವನ್ನೂ, ಶಿಕ್ಷಣವನ್ನೂ ಪ್ರಸಾರಗೊಳಿಸುವ ವಿದ್ಯಾಲಯಗಳೇ ಈ ಮಂಟಪಗಳು. ಧರ್ಮಾತ್ಮತೆಯ ಪ್ರದರ್ಶನಾಮಂದಿರಗಳೇ ಈ ಮಂಟಪಗಳು. ಪ್ರಪಂಚವನ್ನು ಶಿವಮಯ ಅಥವಾ ಕಲ್ಯಾಣಮಯವಾಗಿ ಮಾಡುವ ಧುರೀಣರ ರಂಗಸ್ಥಳಗಳೇ ಈ ಮಂಟಪಗಳು. ಈ ಅಭ್ಯಾಸ ಮಂಡಲ ಅಥವಾ ಅನುಭವಮಂಟಪಗಳಲ್ಲಿ ಎಲ್ಲ ವಜನ ಗ್ರಂಥಗಳನ್ನು ಸಂಗ್ರಹಿಸಬೇಕು. ಬೇರೆ ಬೇರೆ ಧರ್ಮ-ಮತಗಳ ಉದಾತ್ತ ತತ್ವಗಳನ್ನು ಬೋಧಿಸತಕ್ಕ ಗ್ರಂಥಗಳನ್ನು ಶೇಖರಿಸಬೇಕು. ಪ್ರಾಚೀನ ತಾಡವಾಲಿಯ ಗ್ರಂಥಗಳನ್ನು ಸಂಗ್ರಹಿಸಬೇಕು.

ಅನುಭವಮಂಟಪವು ನಿಜವಾದ ಶಿವಯೋಗಮಂದಿರವೇ ಆಗಿದೆ. ಅನುಭವದ ಆತ್ಮವೀರರಿಂದ ಧರ್ಮದ ದಿವ್ಯತೇಜಸ್ಸು ಪ್ರಕಾಶವಾಗಿ ಸಮಾಜೋದ್ಧಾರವಾಗುವದು. ಕೇವಲ ವಿಚಾರವಾದಿಗಳಿಂದ, ತಾರ್ಕಿಕವಾಗ್ಮಿಗಳಿಂದ, ಮಿಥ್ಯಾಚಾರಿಗಳಿಂದ, ಡಂಭಾಚಾರಿಗಳಿಂದ ಎಂದಿಗೂ ಸಮಾಜೋದ್ಧಾರವಾಗುವದಿಲ್ಲ.

ಸ್ವಯಂಸೇವಕರನ್ನು ತಯಾರಿಸಲಿಕ್ಕೂ, ಸಮಾಜದಲ್ಲಿಯ ಅನಿಷ್ಟ ರೂಢ-ಕಲ್ಪನೆಗಳನ್ನು ತೆಗೆದುಹಾಕಲಿಕ್ಕೂ, ಸೇವಾಮಂದಿರಗಳನ್ನು ಸ್ಥಾಪಿಸುವದು ಅತ್ಯಗತ್ಯವಾಗಿದೆ. ಸಮಾಜದ ಉನ್ನತಿಗಾಗಿ ಸಕಲ ರೀತಿಗಳಿಂದ ಸದಾ ದುಡಿಯತಕ್ಕ ಕೆಲಸಗಾರರಿಲ್ಲದೆ ಸಮಾಜ ಸುಧಾರಣೆಯಾಗುವದು ಶಕ್ಯವೇ? ಸೇವಾದಲವು ಶ್ರಮಗೌರವ ತತ್ವವನ್ನು (*Dignity of labour*) ಆಚರಣೆಯಲ್ಲಿ ತಂದು ಉದ್ಯೋಗದ ಕೀಳು-ಮೇಲು ಕಲ್ಪನೆಯನ್ನು ತೆಗೆದುಹಾಕಬೇಕು. ಒಳಪಂಗಡಗಳಲ್ಲಿ ಏಕೀಕರಣವನ್ನುಂಟುಮಾಡಬೇಕು. ವರ್ಣ, ಜಾತಿ, ಆಶ್ರಮ ಇತ್ಯಾದಿಗಳ ಕಲ್ಪನೆಗಳಿಂದ ದೂರವಿರಬೇಕು. ಅಸ್ಪೃಶ್ಯೋದ್ಧಾರ, ಶುದ್ಧಿಸಂಘಟನೆ, ಮುಂತಾದ ಕಾರ್ಯಗಳನ್ನು ಸಾಗಿಸಬೇಕು.

ಸಂಕುಚಿತ-ಮಡಿ-ಮೈಲಿಗೆಯ ಕಲ್ಪನೆಗಳನ್ನು ತೆಗೆದುಹಾಕಬೇಕು. ನಮ್ಮ ಹಿಂದಿನ ಕೆಲವು ಶರಣರಂತೆ ಶಕ್ಯವಿದ್ದರೆ ಪರದೇಶಗಳಲ್ಲಿಯೂ ನಮ್ಮ ಸಂಸ್ಕೃತಿಯನ್ನು ಹರಡಬೇಕು.

ಕನ್ನಡ ಭಾಷೆಗೂ, ಪ್ರಚಾರಕ್ಕೂ ಹೆಚ್ಚು ಮಹತ್ವಕೊಡುವದು ಕನ್ನಡಿಗರಾದ ನಮಗೆ ಭೂಷಣಾಸ್ಪದವೂ ಶ್ರೇಯಸ್ಕರವೂ ಆಗಿದೆ.

ವೀರಶೈವ ಸಮಾಜದಲ್ಲಿ ಯಾವದಾದರೊಂದು ಪಕ್ಷವನ್ನು ಎತ್ತಿ ಹಿಡಿಯುವದು ಕಲ್ಯಾಣಕ್ಕೆ ಕಂಟಕವೆಂದು ತಿಳಿದು ಅಖಿಲ ವೀರಶೈವ

ಸಮಾಜದ ಕಲ್ಯಾಣಕ್ಕಾಗಿ ದುಡಿಯುವದೇ ಸೇವಾಮಂದಿರದ ಧ್ಯೇಯವಾಗಿರುವದು.

ಸಮಾಜದ ಸಲುವಾಗಿ ಸತ್ತಂಥ ಸೇವಕನು ಸತ್ತರೂ ಜೀವಂತನಾಗಿದ್ದಂತೆಯೇ ಸರಿ. ಅಂಥವರ ಸ್ಮಾರಕಗಳನ್ನು ಮಾಡಬೇಕು. ಕೇವಲ ಸ್ವಾರ್ಥದ ಸಲುವಾಗಿ ಬದುಕಿರುವ ಮನುಷ್ಯನು ಜೀವನ್ಮೃತನೇ ಸರಿ. ಆಧುನಿಕರು ಕೇವಲ ಸರಕಾರಿ ನೌಕರಿಗಳಿಗಾಗಿ ಆಶೆಪಡುವದು, ಬಿರುದು, ಅಧಿಕಾರ, ವರ್ಜೆ, ಧನ, ಕೀರ್ತಿಗಳಿಗಾಗಿ ಡಿ. ಎಲ್. ಬಿ. ಕೌನ್ಸಿಲ ಅಸೆಂಬ್ಲಿಗಳಲ್ಲಿ ಮೆಂಬರರಾಗುವದು, ನಮ್ಮ ಸಕಲ ಸಮಾಜದ ಕಲ್ಯಾಣಕ್ಕೆ ಕಾರಣವಾಗಲಾರದು. ಧರ್ಮದ ಸಹಾಯವಿಲ್ಲದೆ ಸಮಾಜದಲ್ಲಿ ಚೈತನ್ಯವನ್ನುಂಟುಮಾಡಲು ಶಕ್ಯವಿಲ್ಲ. ನಾವೆಲ್ಲರೂ ಉಜ್ವಲ ಧರ್ಮಾಭಿಮಾನ ತಾಳಲಿಕ್ಕೆಬೇಕು. ಶ್ರೀ. ಬಸವಾದಿ ಪ್ರಮಥರಲ್ಲಿಯೂ, ರೇಣುಕಾಚಾರ್ಯರಲ್ಲಿಯೂ, ವಚನಶಾಸ್ತ್ರದಲ್ಲಿಯೂ, ಲಿಂಗದಲ್ಲಿಯೂ, ನಾವು ವಿಶ್ವಾಸವಿಡಲಿಕ್ಕೆಬೇಕು. ಬಸವನು ಶರಣಮಾರ್ಗದ ಚಾಲಕನು. ಶರಣ ಮಾರ್ಗವು ಸರ್ವಾರ್ಪಣಯೋಗವು, ಸಮನ್ವಯಯೋಗವು ಅಥವಾ ಪೂರ್ಣಯೋಗವು. ಶರಣಮಾರ್ಗವು ಭುಕ್ತಿ-ಮುಕ್ತಿ ಪ್ರದಾಯಕವು. ವಚನಶಾಸ್ತ್ರವು ಧರ್ಮಗ್ರಂಥವು. ಲಿಂಗವು ನಮ್ಮದೈವತವು. ಶಿವಭಕ್ತರ ನೋವೇ ಲಿಂಗದ ನೋವು. ವಚನಶಾಸ್ತ್ರಕ್ಕೆ ಸಮ್ಮತವಿದ್ದ ವೇದಾಗಮ ಪುರಾಣಗಳಲ್ಲಿಯ ಎಲ್ಲ ಉದಾತ್ತ ವಿಚಾರ ಕಲ್ಪನೆ, ಭಾವನೆಗಳನ್ನು ಸಂಗ್ರಹಿಸಿ ಅಖಿಲ ವೀರಶೈವ ಸಮಾಜಕ್ಕೆ ಮಾನ್ಯವಾದ ಪ್ರಮಾಣ ಗ್ರಂಥವನ್ನು ರಚಿಸುವದು ಶಕ್ಯವಿದೆ.

ವೀರಶೈವ ವೀರರ, ಮಹಾತ್ಮರ, ಶರಣೆಯರ ಹಬ್ಬಗಳನ್ನು ಆಚರಣೆಯಲ್ಲಿ ತರಬೇಕು. ಜಯಂತಿಗಳನ್ನು ಮಾಡಬೇಕು. ಆ ಧರ್ಮವೀರರ ಪೂಜೆಯನ್ನು ಪ್ರಾರಂಭಿಸಬೇಕು. ಅವರ ಚರಿತ್ರೆಗಳನ್ನು ತಿಳಿದು ಪ್ರಸಾರಗೊಳಿಸಿ ಆ ರೀತಿಯಲ್ಲಿ ಸ್ವಲ್ಪಾದರೂ ನಾವು ತಯಾರಾಗಬೇಕು.

ಶಕ್ತಿವರ್ಧಕ ವ್ಯಾಯಾಮಗಳಿಂದ ಶಕ್ತಿಯನ್ನು ಬೆಳಿಸಬೇಕು. ಬಾಲ್ಯವಿವಾಹದ ಅನಿಷ್ಟರೂಢಿಯನ್ನು, ದುರ್ವ್ಯಸನಗಳನ್ನು ದೂರಗೊಳಿಸಬೇಕು. ವೀರಶೈವ ಅವೈಲ್ಯವಾಜ್ಮಯವನ್ನು ಬೆಳಕಿಗೆ ತರಲು ಸಮಾಜದ ಮುಖ್ರ ಪಾಲಯಗಳು ಸ್ಥಾಪನೆಯಾಗಬೇಕು. ಕ್ರಿಸ್ತೀ ಮಿಶನರಿ ಮತ್ತು ಆರ್ಯ ಸಮಾಜಗಳಂತೆ ಚಿಕ್ಕ ಚಿಕ್ಕ ಗ್ರಂಥಗಳನ್ನು ಪ್ರಸಾರಗೊಳಿಸಬೇಕು.

ಸ್ವಯಂಸೇವಕರು ಸೇವಾಮಂದಿರಗಳಿಂದ ತಂಡೋಪತಂಡವಾಗಿ ಹೊರಬಿದ್ದು ಪ್ರಚಾರ ಮಾಡುವ ಸುಂದರ ನೋಟವು ಕಣ್ಣಿಗೆ ಬೀಳಬೇಕು. ವರ್ತಮಾನಪತ್ರ, ಮಾಸಿಕಪತ್ರಗಳನ್ನು ಹೊರಡಿಸಿ ಸಂಘಟನೆಯನ್ನುಂಟುಮಾಡಬೇಕು.

ಆಲ್ಲಲ್ಲಿಯ ತರುಣಸಂಘಗಳೊಡನೆ ಸಕ್ರಿಯ ಸಹಾನುಭೂತಿಯನ್ನು ತೋರಿಸುತ್ತ ಕೆಲಸಸಾಗಿಸಬೇಕು. ಎಷ್ಟೋ ಪ್ರಸಂಗಗಳಲ್ಲಿ ಆಶ್ರಮಾದಿಗಳಿಗಿಂತಲೂ ತರುಣಸಂಘಗಳಲ್ಲಿ ಹೆಚ್ಚು ಪಾವಿತ್ರ್ಯವಿರುವ ಸಂಭವವಿದೆ.

ಸ್ವಾತಂತ್ರ್ಯ, ವಿಚಾರ ವಿಮರ್ಶೆ ಮುಂತಾದ ಗುಣಗಳಿಂದ ಯುಕ್ತವಾದ ಇಂಗ್ಲೀಷ ಭಾಷೆಯನ್ನೂ, ಹಿಂದು ಸಂಘಟನೆಗೆ ಅನುಕೂಲವಾದ ಹಿಂದಿಯನ್ನೂ ಈ ಕಾಲದಲ್ಲಿ ಕಲಿಯುವದು ಅತ್ಯಗತ್ಯವಾಗಿದೆ.

ಈ ವಿಚಾರದಲ್ಲಿ ನಾವು ಜಾಗರೂಕರಾಗಿರಬೇಕು. ಪಾಶ್ಚಾತ್ಯ ಸಂಸ್ಕೃತಿಯು ತನ್ನ ಭೌತಿಕ ಸುಖ-ಸಾಮ್ರಾಜ್ಯದಿಂದ ನಮ್ಮ ಪುರಾತನ ಹಿಂದೀ ಸಂಸ್ಕೃತಿಯ ನೈತಿಕ ಆದರ್ಶವನ್ನು ತಳ್ಳಿಹಾಕಿ ಪಾರತಂತ್ರ್ಯ, ಹೇಡಿತನಗಳನ್ನು ನಮ್ಮಲ್ಲಿ ಉತ್ಪನ್ನ ಮಾಡಲು ಬಹುಮಟ್ಟಿಗೆ ಕಾರಣವಾಗಿದೆ.

ಪ್ರಪಂಚದಲ್ಲಿ ಈಗ ಮೂರು ಶಕ್ತಿಗಳು ಅದ್ಭುತಕಾರ್ಯ ಮಾಡಹತ್ತಿವೆ. (೧) ಕೂಲಿಕಾರರ ಶಕ್ತಿ. (೨) ತರುಣರ ಶಕ್ತಿ. (೩) ಸ್ತ್ರೀಯರ ಶಕ್ತಿ. ನಮ್ಮ ಸಮಾಜದ ರೈತರ ಮತ್ತು ಕೂಲಿಕಾರರ, ತರುಣರ, ಮತ್ತು ಸ್ತ್ರೀಯರ ಶಕ್ತಿಗಳನ್ನು ಸಮಾಜೋದ್ಧಾರಕ್ಕಾಗಿ ಬೆಳಿಸಿ, ಹೇಗೆ ಉಪಯೋಗಿಸಬೇಕೆಂಬುದೊಂದು ಮಹತ್ವದ ಪ್ರಶ್ನೆಯೇ ಆಗಿದೆ. ಧರ್ಮಗುರುಗಳು, ಮುಂದಾಳುಗಳು, ಪಂಡಿತರು ಇತ್ತ ಲಕ್ಷ ಪೂರೈಸಿದರೆ ಈ ಪ್ರಶ್ನೆಯು ಬಿಡಿಸಲ್ಪಡಬಹುದು. ಸಮಯಭೇದ ಮಾಡುವ ವಿರಕ್ತರಿಂದಲೂ, ಬ್ರಾಹ್ಮಣ್ಯವನ್ನು ಪ್ರತಿಪಾದಿಸುವ ಪಂಚಾಚಾರ್ಯರಿಂದಲೂ ಸಮಾಜದ ಸರ್ವಾಂಗೀಣ ಸಮುನ್ನತಿಗೆ ಬಾಧೆ ತಟ್ಟುತ್ತದೆ.

ಸೇವಾದಲವಿಲ್ಲದೇ ಮಹಾಸಭೆಯಿಂದಲೂ ಯಾವ ಕಾರ್ಯಗಳೂ ಆಗುವಂತಿಲ್ಲ. ಮಹಾಸಭೆಯವರಾಗಲೀ, ಶಿರಸಂಗಿ ಪಂಡಿನವರಾಗಲೀ, ಒಂದು ಉದ್ಯೋಗ ಮಂದಿರವನ್ನಾದರೂ ಸ್ಥಾಪಿಸಬಾರದೇ ?

ಸಮಾಜದ ಕಲ್ಯಾಣಕ್ಕಾಗಿ ದುಡಿಯುವದೇ ಸೇವಾಮಂದಿರದ ಧ್ಯೇಯವಾಗಿರುವದು.

ಸಮಾಜದ ಸಲುವಾಗಿ ಸತ್ತಂಥ ಸೇವಕನು ಸತ್ತರೂ ಜೀವಂತನಾಗಿದ್ದಂತೆಯೇ ಸರಿ. ಅಂಥವರ ಸ್ಮಾರಕಗಳನ್ನು ಮಾಡಬೇಕು. ಕೇವಲ ಸ್ವಾರ್ಥದ ಸಲುವಾಗಿ ಬದುಕಿರುವ ಮನುಷ್ಯನು ಜೀವನ್ಮೃತನೇ ಸರಿ. ಆಧುನಿಕರು ಕೇವಲ ಸರಕಾರಿ ನೌಕರಿಗಳಿಗಾಗಿ ಆಶಿಪಡುವದು, ಬಿರುದು, ಅಧಿಕಾರ, ದರ್ಜೆ, ಧನ, ಕೀರ್ತಿಗಳಿಗಾಗಿ ಡಿ. ಎಲ್. ಬಿ. ಕೌನ್ಸಿಲ ಅಸೆಂಬ್ಲಿಗಳಲ್ಲಿ ಮೆಂಬರರಾಗುವದು, ನಮ್ಮ ಸಕಲ ಸಮಾಜದ ಕಲ್ಯಾಣಕ್ಕೆ ಕಾರಣವಾಗಲಾರದು. ಧರ್ಮದ ಸಹಾಯವಿಲ್ಲದೆ ಸಮಾಜದಲ್ಲಿ ಚೈತನ್ಯವನ್ನುಂಟುಮಾಡಲು ಶಕ್ಯವಿಲ್ಲ. ನಾವೆಲ್ಲರೂ ಉಜ್ವಲ ಧರ್ಮಾಭಿಮಾನ ತಾಳಲಿಕ್ಕೆಬೇಕು. ಶ್ರೀ. ಬಸವಾದಿ ಪ್ರಮಥರಲ್ಲಿಯೂ, ರೇಣುಕಾದ್ಯಾಚಾರ್ಯರಲ್ಲಿಯೂ, ವಚನಶಾಸ್ತ್ರದಲ್ಲಿಯೂ, ಲಿಂಗದಲ್ಲಿಯೂ, ನಾವು ವಿಶ್ವಾಸವಿಡಲಿಕ್ಕೆಬೇಕು. ಬಸವನು ಶರಣಮಾರ್ಗದ ಪ್ರಾಲಕನು. ಶರಣ ಮಾರ್ಗವು ಸರ್ವಾರ್ಪಣಯೋಗವು, ಸಮನ್ವಯಯೋಗವು ಅಥವಾ ಪೂರ್ಣಯೋಗವು. ಶರಣಮಾರ್ಗವು ಭುಕ್ತಿ-ಮುಕ್ತಿ ಪ್ರದಾಯಕವು. ವಚನಶಾಸ್ತ್ರವು ಧರ್ಮಗ್ರಂಥವು. ಲಿಂಗವು ನಮ್ಮದೈವತವು. ಶಿವಭಕ್ತರ ನೋವೇ ಲಿಂಗದ ನೋವು. ವಚನಶಾಸ್ತ್ರಕ್ಕೆ ಸಮ್ಮತವಿದ್ದ ವೇದಾಗಮ ಪುರಾಣಗಳಲ್ಲಿಯ ಎಲ್ಲ ಉದಾತ್ತ ವಿಚಾರ ಕಲ್ಪನೆ, ಭಾವನೆಗಳನ್ನು ಸಂಗ್ರಹಿಸಿ ಅಖಿಲ ವೀರಶೈವ ಸಮಾಜಕ್ಕೆ ಮಾನ್ಯವಾದ ಪ್ರಮಾಣ ಗ್ರಂಥವನ್ನು ರಚಿಸುವದು ಶಕ್ಯವಿದೆ.

ವೀರಶೈವ ವೀರರ, ಮಹಾತ್ಮರ, ಶರಣೆಯರ ಹಬ್ಬಗಳನ್ನು ಆಚರಣೆಯಲ್ಲಿ ತರಬೇಕು. ಜಯಂತಿಗಳನ್ನು ಮಾಡಬೇಕು. ಆ ಧರ್ಮವೀರರ ಪೂಜೆಯನ್ನು ಪ್ರಾರಂಭಿಸಬೇಕು. ಅವರ ಚರಿತ್ರೆಗಳನ್ನು ತಿಳಿದು ಪ್ರಸಾರಗೊಳಿಸಿ ಆ ರೀತಿಯಲ್ಲಿ ಸ್ವಲ್ಪಾದರೂ ನಾವು ತಯಾರಾಗಬೇಕು.

ಶಕ್ತಿವರ್ಧಕ ವ್ಯಾಯಾಮಗಳಿಂದ ಶಕ್ತಿಯನ್ನು ಬೆಳಿಸಬೇಕು. ಬಾಲ್ಯವಿವಾಹದ ಅನಿಷ್ಟರೂಢಿಯನ್ನು, ದುರ್ವ್ಯಸನಗಳನ್ನು ದೂರಗೊಳಿಸಬೇಕು. ವೀರಶೈವ ಅವೈದಿಕ್ಯವಾಜ್ಯಯವನ್ನು ಬೆಳಕಿಗೆ ತರಲು ಸಮಾಜದ ಮುದ್ರಣಾಲಯಗಳು ಸ್ಥಾಪನೆಯಾಗಬೇಕು. ಕ್ರಿಸ್ತೀ ಮಿಶನರಿ ಮತ್ತು ಆರ್ಯಸಮಾಜಗಳಂತೆ ಚಿಕ್ಕ ಚಿಕ್ಕ ಗ್ರಂಥಗಳನ್ನು ಪ್ರಸಾರಗೊಳಿಸಬೇಕು.

ಸ್ವಯಂಸೇವಕರು ಸೇವಾಮಂದಿರಗಳಿಂದ ತಂಡೋಪತಂಡವಾಗಿ ಹೊರಬಿದ್ದು ಪ್ರಚಾರ ಮಾಡುವ ಸುಂದರ ನೋಟವು ಕಣ್ಣಿಗೆ ಬೀಳಬೇಕು. ವರ್ತಮಾನಪತ್ರ, ಮಾಸಿಕಪತ್ರಗಳನ್ನು ಹೊರಡಿಸಿ ಸಂಘಟನೆಯನ್ನುಂಟುಮಾಡಬೇಕು.

ಆಲ್ಲಲ್ಲಿಯ ತರುಣಸಂಘಗಳೊಡನೆ ಸಕ್ರಿಯ ಸಹಾನುಭೂತಿಯನ್ನು ತೋರಿಸುತ್ತ ಕೆಲಸಸಾಗಿಸಬೇಕು. ಎಷ್ಟೋ ಪ್ರಸಂಗಗಳಲ್ಲಿ ಆಶ್ರಮಾದಿಗಳಿಗಿಂತಲೂ ತರುಣಸಂಘಗಳಲ್ಲಿ ಹೆಚ್ಚು ಪಾವಿತ್ರ್ಯವಿರುವ ಸಂಭವವಿದೆ.

ಸ್ವಾತಂತ್ರ್ಯ, ವಿಚಾರ ವಿಮರ್ಶೆ ಮುಂತಾದ ಗುಣಗಳಿಂದ ಯುಕ್ತವಾದ ಇಂಗ್ಲೀಷ ಭಾಷೆಯನ್ನೂ, ಹಿಂದು ಸಂಘಟನೆಗೆ ಅನುಕೂಲವಾದ ಹಿಂದಿಯನ್ನೂ ಈ ಕಾಲದಲ್ಲಿ ಕಲಿಯುವದು ಅತ್ಯಗತ್ಯವಾಗಿದೆ.

ಈ ವಿಚಾರದಲ್ಲಿ ನಾವು ಜಾಗರೂಕರಾಗಿರಬೇಕು. ಪಾಶ್ಚಾತ್ಯ ಸಂಸ್ಕೃತಿಯು ತನ್ನ ಭೌತಿಕ ಸುಖ-ಸಾಮ್ರಾಜ್ಯದಿಂದ ನಮ್ಮ ಪುರಾತನ ಹಿಂದೀ ಸಂಸ್ಕೃತಿಯ ನೈತಿಕ ಆದರ್ಶವನ್ನು ತಳ್ಳಿಹಾಕಿ ಪಾರತಂತ್ರ್ಯ, ಹೇಡಿತನಗಳನ್ನು ನಮ್ಮಲ್ಲಿ ಉತ್ಪನ್ನ ಮಾಡಲು ಬಹುಮಟ್ಟಿಗೆ ಕಾರಣವಾಗಿದೆ.

ಪ್ರಪಂಚದಲ್ಲಿ ಈಗ ಮೂರು ಶಕ್ತಿಗಳು ಅದ್ಭುತಕಾರ್ಯ ಮಾಡಹತ್ತಿವೆ. (೧) ಕೂಲಿಕಾರರ ಶಕ್ತಿ. (೨) ತರುಣರ ಶಕ್ತಿ. (೩) ಸ್ತ್ರೀಯರ ಶಕ್ತಿ. ನಮ್ಮ ಸಮಾಜದ ರೈತರ ಮತ್ತು ಕೂಲಿಕಾರರ, ತರುಣರ, ಮತ್ತು ಸ್ತ್ರೀಯರ ಶಕ್ತಿಗಳನ್ನು ಸಮಾಜೋದ್ಧಾರಕ್ಕಾಗಿ ಬೆಳಿಸಿ, ಹೇಗೆ ಉಪಯೋಗಿಸಬೇಕೆಂಬುದೊಂದು ಮಹತ್ವದ ಪ್ರಶ್ನೆಯೇ ಆಗಿದೆ. ಧರ್ಮಗುರುಗಳು, ಮುಂದಾಳುಗಳು, ಪಂಡಿತರು ಇತ್ತ ಲಕ್ಷ ಪೂರೈಸಿದರೆ ಈ ಪ್ರಶ್ನೆಯು ಬಿಡಿಸಲ್ಪಡಬಹುದು. ಸಮಯಭೇದ ಮಾಡುವ ವಿರಕ್ತರಿಂದಲೂ, ಬ್ರಾಹ್ಮಣ್ಯವನ್ನು ಪ್ರತಿಪಾದಿಸುವ ಪಂಚಾಚಾರ್ಯರಿಂದಲೂ ಸಮಾಜದ ಸರ್ವಾಂಗೀಣ ಸಮ್ಮುನ್ನತಿಗೆ ಬಾಧೆ ತಟ್ಟುತ್ತದೆ.

ಸೇವಾದಲವಿಲ್ಲದೇ ಮಹಾಸಭೆಯಿಂದಲೂ ಯಾವ ಕಾರ್ಯಗಳೂ ಆಗುವಂತಿಲ್ಲ. ಮಹಾಸಭೆಯವರಾಗಲೀ, ಶಿರಸಂಗಿ ಫಂಡಿನವರಾಗಲೀ, ಒಂದು ಉಚ್ಚೋಗ ಮಂದಿರವನ್ನಾದರೂ ಸ್ಥಾಪಿಸಬಾರದೇ ?

ಒಟ್ಟಾಗಿ, ಅನುಭವಮಂಟಪ ಸೇವಾದಲ ಉದ್ಯೋಗ ಮಂದಿರ ಗಳಿಲ್ಲದೇ. ದುಡಿಯುವವರ ತರುಣರ ಸ್ತ್ರೀಯರ ಶಕ್ತಿತ್ರಯಗಳ ಸಹಾಯವಿಲ್ಲದೇ, ಧರ್ಮಗುರುಗಳ ಪಂಡಿತರ ಮುಂದಾಳುಗಳ ಪ್ರೋತ್ಸಾಹವಿಲ್ಲದೇ, ವೀರಶೈವ ಸಮಾಜದ ಸರ್ವಾಂಗಸುಂದರ ಪ್ರಗತಿಯಾಗುವದು ಸಾಧ್ಯವೇ ಇಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಅಧುನಿಕ ವಿದ್ಯಾಂಸರಾದ ತರುಣರ ಬಳಗವು ತಯಾರಾದರೆ ಸಮಾಜವು ಎಷ್ಟೋ ಮುಂದು ವರಿಯಬಹುದು. ಆದರೆ ತರುಣರೇ, ನಾವು ಯಾವ ಪಾರ್ಟಿಯಲ್ಲಿಯೂ ಸೇರದೇ ಅಖಿಲ ಸಮಾಜದ ಕಲ್ಯಾಣವನ್ನೇ ದೃಷ್ಟಿಪಥದಲ್ಲಿಟ್ಟುಕೊಂಡು ದುಡಿಯೋಣ!

ಶ್ರೀ ವೀರಶೈವ ಧರ್ಮಕ್ಷೇತ್ರದಲ್ಲಿ ಸ್ತ್ರೀಯರಿಗಿರತಕ್ಕ ಧಾರ್ಮಿಕ ಸ್ವಾತಂತ್ರ್ಯ.

(ಅಕ್ಕನಮಹಾದೇವಿಯ ಸೇವಾಸಮಾಜದಿಂದ.)

(ಲೇಖಕರು:— ಎಮ್. ರಾಜೇಶ್ವರಿದೇವಿ ಬೆಂಗಳೂರು ಸಿಟಿ.)

ಪ್ರಪಂಚದಲ್ಲಿ ಜಗದ್ಧಿತಾರ್ಥವಾಗಿಯೂ ಮತ್ತು ಮತೋದ್ಧಾರಕ್ಕಾಗಿಯೂ ಮಹಾತ್ಮರು ಮತ್ತು ಶರಣರು ಜನಿಸುವರೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಹೀಗೆ ನಮ್ಮ ವೀರಶೈವ ಮತೋದ್ಧಾರಕ್ಕಾಗಿ ಅವತರಿಸಿದವರಲ್ಲಿ ಅಣ್ಣ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭುದೇವ ಮತ್ತು ಉಡುತಡಿಯ ಶ್ರೀ ಜಗಜ್ಜ್ಯೋತಿ ಮಹದೇವಿಯಕ್ಕಗಳು ಮುಖ್ಯರಾದವರು.

ವೀರಶೈವರಲ್ಲಿ ಸ್ತ್ರೀಪುರುಷರೆಂಬ ಜೇಧವಿಲ್ಲ. ಪ್ರತಿಯೊಬ್ಬ ಪುರುಷನಿಗಿರುವಂತೆಯೇ ಸ್ತ್ರೀಗೂ ಧಾರ್ಮಿಕ ವಿಚಾರದಲ್ಲಿ ಸಂಪೂರ್ಣ ಹಕ್ಕಿದೆ. ಆದರೆ ಇತರ ಮತಗಳಲ್ಲಿ ಸ್ತ್ರೀಯರಿಗೆ ಧಾರ್ಮಿಕ ವಿಚಾರದಲ್ಲಿ ವೀರಶೈವರಲ್ಲಿರುವಷ್ಟು ಸ್ವಾತಂತ್ರ್ಯವಿಲ್ಲೆಂದು ಸ್ಪಷ್ಟವಾಗಿ ಹೇಳಬಹುದು. ಉದಾಹರಣಾರ್ಥವಾಗಿ ಅದ್ವೈತಮತ ಸ್ಥಾಪಕನಾದ ಶಂಕರಾಚಾರ್ಯರು "ದ್ವಾರಂ ಕಿಮೇಕಂ ನರಕಸ್ಯ ನಾರೀ" ಎಂದು ತಮ್ಮ ಮಣಿರತ್ನಮಾಲೆಯಲ್ಲಿ "ನರಕದ ದಾರಿ ನಾರಿ" ಎಂದು ಹೇಳಿದ್ದಾರೆ. ಆಹಾ! ಎಂತಹ ಉಪಮೆಯಿದು, ಎಂಥ ಸನ್ಮಾನವಿದರಲ್ಲಿ! ಸ್ತ್ರೀಯರಿಗೆ ಇಂತಹ ಮಹಾಪುರುಷರಿಂದಲೇ ಇಷ್ಟೊಂದು ಸನ್ಮಾನ ದೊರೆತಿರುವಾಗ, ಮಿಕ್ಕವರ ಮಾತೇನು? ಅಪಭ್ರೂತಗೀತೆಯಲ್ಲಿ "ಕೇನೈಷಾ ನಿರ್ಮಿತಾ ನಾರೀ?" ಈ ಸ್ತ್ರೀ ಜಾತಿಯನ್ನು ನಿರ್ಮಾಣ ಮಾಡಿದವರಾರು? ಎಂದು ಹುಟ್ಟಿಸಿದ ಬ್ರಹ್ಮನನ್ನೇ ಆಕ್ಷೇಪಿಸಿದ್ದಾರೆ. ಹೀಗೆ ಸ್ತ್ರೀಯರನ್ನು ಕಸದಂತೆ ಕಡೆಮಾಡಿರುವ ಉದಾಹರಣೆಗಳಿಗೆ ಲೆಕ್ಕವಿಲ್ಲ. ಈ ಕೀಳುಭಾವನೆಯನ್ನು ಕತ್ತುಹಾಕಿ ಸ್ತ್ರೀ ಸ್ವಾತಂತ್ರ್ಯವನ್ನು ಸ್ಥಾಪಿಸಿದ ಕೀರ್ತಿಯು ಬಸವಾದಿ ಶಿವಶರಣರದು. ಸ್ವಾತಂತ್ರ್ಯವೆಂದರೆ ತಾನು ಬೇಕಾದ ಹಾಗೆ ಮನೆಮನೆ, ಬೀದಿ ಬೀದಿ ತಿರುಗುವುದಕ್ಕಲ್ಲ; ಮನಬಂದಂತೆ ಮಾತನಾಡು

ವುದಕ್ಕಲ್ಲ: ಆತ್ಮವಿಕಾಸಕ್ಕಾಗಿ. ಅದಾಗಬೇಕಾದರೆ, ಧಾರ್ಮಿಕ ವಿಚಾರದಲ್ಲಿ ಅಂದರೆ ಆತ್ಮಸಾಧನೆಯ ವಿಷಯದಲ್ಲಿ ಮಾನವ ಜನ್ಮಕ್ಕೆಲ್ಲ ಒಂದೇ ರೀತಿಯಾದ ಸಮಾನತೆ ಮತ್ತು ಸಂಪೂರ್ಣ ಸ್ವಾತಂತ್ರ್ಯ ಅತ್ಯವಶ್ಯಕ.

ವಾಚಕರೇ! ಧಾರ್ಮಿಕ ಸಮಾನತೆ ಅಂದರೆ ಏನು? ಎಂದು ನೀವು ಪ್ರಶ್ನಿಸಬಹುದು. ಅದಕ್ಕೆ ಇಷ್ಟು ಉತ್ತರ ಹೇಳಲು ನಾನು ಸಿದ್ಧಳಿದ್ದೇನೆ. ವೀರಶೈವರಲ್ಲಿ ಹೆಣ್ಣೇ ಹುಟ್ಟಲಿ, ಗಂಡೇ ಹುಟ್ಟಲಿ, ಗಂಡುಮಗುವಿಗೆ ಶ್ರೀಗುರುವಿನಿಂದ ಲಿಂಗಧಾರಣೆ (ಲಘುದೀಕ್ಷೆ) ಯನ್ನು ಮಾಡಿಸುವ ಹಾಗೆಯೇ ಹೆಣ್ಣುಮಗುವಿಗೂ ಮಾಡಿಸುತ್ತಾರೆ. ಒಂದು ವೇಳೆ ಯಾರಾದರೂ ಅಜ್ಞಾನದಿಂದ ಹೆಣ್ಣುಮಕ್ಕಳಿಗೆ ಶಿವದೀಕ್ಷೆ ಮಾಡಿಸದಿದ್ದರೆ, ಅವರು ವೀರಶೈವ ಪಥಕ್ಕೆ ಸಲ್ಲರು. ಅವರ ಭಕ್ತಿಯು ದೇವರಿಗೆ ಮುಟ್ಟದು. ಅಂಥವರನ್ನು ಕುರಿತು "ಗಂಡ ಶಿವಲಿಂಗ ದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ. ಹೆಂಡತಿ ಕೊಂಬುದು ಸುರೆ ಮಾಂಸ. ಭಾಂಡಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವಾ." ಎಂದು ಬಸವಣ್ಣನವರು ಬಹುವಾಗಿ ಟೀಕಿಸಿದ್ದಾರೆ. ಆದರೆ ಇತರ ಮತಗಳಲ್ಲಿ ನೋಡಿ. ಗಂಡುಮಗುವಿಗೆ ಮಾತ್ರವೇ ಉಪನಯನ ಸಂಸ್ಕಾರವನ್ನು ಮಾಡುವರು; ಸ್ತ್ರೀಗೆ ಮಾಡುವದಿಲ್ಲ. ಇವರ ಉದ್ದಿಶ್ಯ ಹೆಂಗಸಿಗೆ ಮೋಕ್ಷಕ್ಕೇ ಅಧಿಕಾರವಿಲ್ಲವಂತೆ. ಇದು ಎಂತಹ ಅನ್ಯಾಯ! ಇನ್ನು ಸ್ವಾತಂತ್ರತೆಯ ವಿಷಯ. ಪ್ರತಿಯೊಬ್ಬ ವೀರಶೈವನೂ ಗುರು ಕೊಟ್ಟ ಇಷ್ಟಲಿಂಗವನ್ನು ಸದಾ ತನ್ನ ಎದೆಯ ಮೇಲೆ ಧರಿಸಿರುವುದರಿಂದ ಆ ದೇವನನ್ನು ನೋಡಬೇಕೆಂಬ ಇಚ್ಛೆ ಯುಂಟಾದಲ್ಲಿ ಯಾವಾಗ ಬೇಕಾದರೂ, ತಾನು ನಿಂತಿರಲಿ, ಮಲಗಿರಲಿ, ಕೂತಿರಲಿ, ನೋಡಿ, ಪಾಡಿ, ನಲಿದಾಡಿ ಹಿಗ್ಗಿ ಆನಂದಪಡಬಹುದು. ಆದರೆ ಇತರ ಮತದವರಿಗಾದರೋ ಈ ತೆರನಾದ ಅನುಕೂಲತೆ ಇಲ್ಲದ ಕಾರಣ, ಅವರು ಆ ದೇವನ ದರ್ಶನ ಮಾಡಬೇಕೆಂಬ ಇಚ್ಛೆಯುಂಟಾದಲ್ಲಿ ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗಿ ಅರ್ಚಕನು ಬಂದಮೇಲೆ ಅವನು ಹೇಳುವ ಮಂತ್ರಗಳಿಗೆ ಇವರು ಹೂವನ್ನು ಧರಿಸಿ ಕಟ್ಟಿನ ಪೂಜೆ ಮಾಡಿ, ನೋಡಿ, ಪಾಡಿ ಆನಂದಿಸಬೇಕು. ವಾಚಕರೇ!

ನೋಡಿ! ಇವೆರಡರಲ್ಲಿ ಯಾವುದಕ್ಕೆ ಧಾರ್ಮಿಕ ವಿಚಾರದಲ್ಲಿ ಹೆಚ್ಚು ಸ್ವಾತಂತ್ರ್ಯವಿದೆ ಎಂದು? ಈ ಧಾರ್ಮಿಕ ಸ್ವಾತಂತ್ರ್ಯದ ವಿಷಯದಲ್ಲಿ ನಮ್ಮ ಶರಣರ ಅಭಿಪ್ರಾಯವೇನೆಂದರೆ, "ಸ್ತ್ರೀಯಾದರೇನು? ಪುರುಷನಾದರೇನು? ಬಾಹ್ಯದಲ್ಲಿ ಭೇದವೇ ಹೊರತು ಆತ್ಮನಲ್ಲಿ ಭೇದವಿಲ್ಲ" ಎಂಬುದೇ ಅವರ ಮುಖ್ಯ ಧ್ಯೇಯವಾಗಿದ್ದಿತು. ಹೀಗೆ ವೀರಶೈವ ಸಮಾಜದಲ್ಲಿ ಸ್ತ್ರೀಯರಿಗೆ ಧಾರ್ಮಿಕ ವಿಚಾರದಲ್ಲಿ ಎಷ್ಟು ಸ್ವಾತಂತ್ರ್ಯವಿತ್ತೆಂಬುದನ್ನು ನಿದರ್ಶಿಸಲು ಉಡುತಡಿಯ ಶ್ರೀ ಜಗಜ್ಜ್ಯೋತಿ ಮಹಾದೇವಿಯಕ್ಕಗಳ ಜೀವನವೇ ಸಾಕ್ಷಿಯಾಗಿದೆ.

ಪರಮಪವಿತ್ರಳಾದ ಮಹಾದೇವಿಯಕ್ಕಗಳ ಚರಿತ್ರೆ ಮತ್ತು ವಚನಾವೃತಗಳು ಎಷ್ಟೋ ಹಳೆಯ ಗ್ರಂಥಗಳಲ್ಲಡಗಿದ್ದರೂ ಬೆಂಗಳೂರಿನಲ್ಲಿರುವ ನಾವು ಯಾರೂ ಆ ಚರಿತ್ರೆಯನ್ನು ನೋಡಿರಲಿಲ್ಲ; ಪ್ರಚುರಕ್ಕೆ ತಂದಿರಲಿಲ್ಲ; ಮತ್ತು ಅವಳ ವಚನಾವೃತಗಳನ್ನು ಓದಿರಲಿಲ್ಲ. ಹಿಂದೆ ಇನ್ನೇ ಶತಮಾನದಲ್ಲಿ ಸ್ತ್ರೀ ಸ್ವಾತಂತ್ರ್ಯವನ್ನು ತಂದು ಕೊಟ್ಟ ಬಸವಣ್ಣನವರಿಗೆ ಬಂದ ಅಗ್ರತಾಂಬೂಲವು ಇಂದು ಶ್ರೀ ಸರ್ವಭೂಷಣ ಮಹಾಧ್ಯಕ್ಷರೂ ಮತ್ತು ಪ್ರಣವ ಸ್ವರೂಪಿಗಳೂ ಆದ ಶ್ರೀ ಮಹದೇವ ಸ್ವಾಮಿಗಳು ಬೆಂಗಳೂರಿಗೆ ದಯಮಾಡಿಸಿ, ಅಕ್ಕನ ವಚನಾವೃತ ಮತ್ತು ಬಸವಾದಿ ಶಿವಶರಣರ ವಚನ ವಾಙ್ಮಯವನ್ನು ಎಲ್ಲರಿಗೂ ಜೋಧಿಸಿ, ಇಡೀ ಬೆಂಗಳೂರಿನ ಸ್ತ್ರೀ ಪುರುಷರನ್ನು ಉದ್ಧಾರ ಮಾಡುವುದರ ಮೂಲಕ, ಇಂದು ಇವರಿಗೆ ಸಲ್ಲಬೇಕಾಗಿದೆ. ಇಂದು ನಮ್ಮನ್ನು ನಾವು ತಿಳಿದುಕೊಂಡು ಅಜ್ಞಾನದಿಂದ ಎಚ್ಚತ್ತಿದ್ದು ಈ ಮಹಾನುಭಾವರಿಂದಲೇ. ಎಚ್ಚತ್ತಿರುವುದಷ್ಟೇ ಅಲ್ಲ; ಎದ್ದು ಸಮಾಜಸಂಘಟಿತರಾಗಿ ಈ ಲೇಖನಪ್ರಪಂಚದಲ್ಲಿ ಕಾಲಿಡಬೇಕಾದರೂ ಆ ಮಹಾತ್ಮರ ಆಶೀರ್ವಾದ ಬಲದಿಂದಲೇ ಎಂದು ಹೇಳಲು ನಮಗೆ ಹೇರಳ ಹರ್ಷವೆನಿಸುತ್ತದೆ. ಇದಕ್ಕಾಗಿ ಈ ಪುಣ್ಯ ಶ್ಲೋಕಿಗಳು ನಮ್ಮೆಲ್ಲರಿಗೂ ಆದರ್ಶಮಹನೀಯರಾಗಿದ್ದಾರೆ.

ಅಕ್ಕನವರನ್ನು ನಿಷ್ಠೆಯಲ್ಲಿಯೂ ಮತ್ತು ದಿವ್ಯ ಜ್ಞಾನವಲ್ಲಿಯೂ ಮಿಗಿದವರು ಯಾರೂ ಇರಲಿಲ್ಲ. ಇದಕ್ಕೆ ಚನ್ನಬಸವಣ್ಣನವರ ಒಂದು ವಚನ ನಿದರ್ಶನವಾಗಿದೆ. ಅದೇನೆಂದರೆ:— "ಅಜಕೋಟಿ ವರುಷದ ವಕಿಲ್ಲರೂ ಹಿರಿಯರೆ? ಹುತ್ತೀರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿ

ಯಸಿ? ನಡುಮುರಿದು, ತಲೆನಡುಗಿ, ನೆರೆ ತೆರೆ ಹೆಚ್ಚಿ, ಮತಿಗೆಟ್ಟ ಒಂದನಾಡಹೋಗಿ ಒಂಭತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ? ಅನುವರಿದು ಘನವ ಬೆರಸಿ ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ ಬೇರಾಗ ದಿಪ್ಪ ಹಿರಿಯತನ ನಮ್ಮ ವ.ಹದೇವಿಯಕ್ಕನಿಗಾಯಿತ್ತು" ಮತ್ತು ಇದೇ ವಿಷಯದಲ್ಲಿ ಶ್ರೀಮಾನ್ ಜಿ. ಸಿ. ವೀರಪ್ಪ *B. A. L. L. B.* ಇವರು ಭಾಷಾಂತರ ಮಾಡಿರುವ, " '*The Teachings of Lord Basava*" ಎಂಬಲ್ಲಿನ ಒಂದು ವಚನದಲ್ಲಿ ನಿಜವಾದ ಜ್ಞಾನಿಗಳು ಯಾರೆಂದು ಹೇಳಿರುವುದೇನೆಂದರೆ— *All that do read sacred books, all that do speak well are not wise; wise is he that believeth in God and serveth mankind* " ಅಂದರೆ ದೊಡ್ಡ ದೊಡ್ಡ ಗ್ರಂಥಗಳನ್ನು, ವೇದಪುರಾಣಗಳನ್ನು ಓದುವವರೂ ಮತ್ತು ಒಳ್ಳೆ ವಾಚಾಳಿತನದಿಂದ ಅಂದರೆ ಎಲ್ಲರ ಮನಸ್ಸನ್ನು ಒಲಿಸಿ ಕೊಳ್ಳುವಂತಿ ಮಾತನಾಡುವವರೂ ಜ್ಞಾನಿಗಳಲ್ಲ. ಆದರೆ ಯಾರು ಭಗವಂತನಲ್ಲಿ ಸಹಜವಾದ ನಂಬಿಕೆ, ಭಕ್ತಿ, ಪ್ರೇಮವನ್ನಿಡುತ್ತಾರೋ ಮತ್ತು ಯಾರು ಸಮಾಜಸೇವೆಯನ್ನು ನಿಶ್ಚಲವಾದ ಭಕ್ತಿಯಿಂದ ಮಾಡುವರೋ ಅವರೇ ನಿಜವಾದ ಜ್ಞಾನಿಗಳು ಎಂದು ಹೇಳಿರುತ್ತಾರೆ. ಇದರಿಂದ ಅಕ್ಕಗಳು ತುಂಬಾ ಚಿಕ್ಕವರಾಗಿದ್ದಾಗ್ಯೂ, ದಿವ್ಯ ಜ್ಞಾನಾನುಭವದಲ್ಲಿ ವಯೋವೃದ್ಧರಿಗಿಂತಲೂ ಎಷ್ಟು ಹಿರಿಯರಾಗಿದ್ದಾರೆಂಬುದು ಇದರಿಂದ ಸೊತ್ತಾಗುತ್ತದೆ. ಅದಕಾರಣ ಹುಟ್ಟಿನಿಂದ ಹೆಣ್ಣುಗಂಡಾದರೂ ಜ್ಞಾನದಿಂದ. ಹೆಣ್ಣುಗಂಡಿಲ್ಲ. ಊಟದಲ್ಲಿರುವಂತಿ ಧರ್ಮದಲ್ಲಿಯೂ ಎಲ್ಲರಿಗೂ ಸಮಾನ ಹಕ್ಕಿದೆ. ಎಲ್ಲರಲ್ಲಿರುವ ಆತ್ಮನು ಒಬ್ಬನೇ. ಆತನಿಗೆ ಜಾತಿರೂಪಗಳಿಲ್ಲ. ಆತನ ಉದ್ಧಾರ ಮಾಡಿಕೊಳ್ಳುವ ಮಾರ್ಗವು ಎಲ್ಲ ಸ್ತ್ರೀ ಪುರುಷರಿಗೂ ಸಮಾನವಾದುದು. ಸ್ತ್ರೀಯರಿಗೂ ಧಾರ್ಮಿಕ ಹಕ್ಕಿದೆ ಎನ್ನುವುದಕ್ಕೆ, " ಶರಣಸತಿ ಲಿಂಗಪತಿ " ಎಂಬ ನಮ್ಮ ಉಚ್ಚತತ್ವವೇ ಸಾಕ್ಷಿ. ಶಿವನ ವಿಷಯದಲ್ಲಿ ಜೀವನಲ್ಲಿರೂ ಸತಿಯರು. ಅಂದಮೇಲೆ, " ನ ಸ್ತ್ರೀ ಸ್ವಾತಂತ್ರ್ಯಮರ್ಹತಿ " ಎಂಬ ಸ್ವಾರ್ಥಿಗಳ ಮಾತು ಹೇಗೆ ನಿಲ್ಲುವುದು ? "

ಅಕ್ಕಗಳ ಪ್ರತಿಯೊಂದು ವಚನವು ಅತ್ಯಂತ ಮಧುರವೂ ಮತ್ತು ಭಾವಗರ್ಭಿತವೂ ಆಗಿರುತ್ತದೆ. ಇದು ಚನ್ನಬಸವಣ್ಣನವರ ಒಂದು ವಚನದಿಂದ

ಗೊತ್ತಾಗುತ್ತದೆ. ಅದೇನೆಂದರೆ, "ಆದ್ಯರ ಅರವತ್ತು ವಚನಕ್ಕೆ ವಣ್ಣಾಯಕರ ಇಪ್ಪತ್ತು ವಚನ....ಕ್ಕೆ, ಪ್ರಭುದೇವರ ಹತ್ತು ವಚನ....ಕ್ಕೆ, ಅಜಗಣ್ಣನ ಐದು ವಚನ....ಕ್ಕೆ, ಕೂಡಲ ಚನ್ನಸಂಗಯ್ಯನಲ್ಲಿ ಮಹದೇವಿಯಕ್ಕಗಳ ಒಂದು ವಚನ ನಿರ್ವಚನ." ಅಂದರೆ ಆದ್ಯರ ಅರವತ್ತು ವಚನಗಳಲ್ಲಡಗಿರತಕ್ಕ ಅದೇ ಭಾವಾರ್ಥವನ್ನು, ಅಕ್ಕನು ಒಂದೇ ವಚನದಲ್ಲಿ ಹೇಳಬಲ್ಲವರಾಗಿದ್ದರು. ಸ್ತ್ರೀಯರು ಪ್ರಕೃತಿಯಿಂದ ಅಬಲೆಯರೆಂದು ಅಪವಾದ ಬಂದರೂ, ಬುದ್ಧಿಯಿಂದ ಅಬಲೆಯರಲ್ಲ; ಧಾರ್ಮಿಕ ಸ್ವಾತಂತ್ರ್ಯದಿಂದ ಅಬಲೆಯರಲ್ಲ; ಆತ್ಮೋನ್ನತಿಯಲ್ಲಿ ಅಬಲೆಯರಲ್ಲ, ಎಂಬುದು, ಈ ಅಕ್ಕನ ಮೇಲಣ ಸ್ತುತಿಯಿಂದ ಗೊತ್ತಾಗುತ್ತದೆ. ಇಲ್ಲದಿದ್ದರೆ, ಆದ್ಯರ ಅರವತ್ತು ವಚನಗಳಲ್ಲಿರುವ ಅನುಭವವನ್ನು ಒಂದೇ ಒಂದು ವಚನದಲ್ಲಿ ತುಂಬಿ ಹೇಳುವ ಅಪ್ರತಿಮಶಕ್ತಿಯು ಅಕ್ಕನವರಿಗೆ ಬರಬಾರದಾಗಿತ್ತು. ಆದ್ದರಿಂದ ಆತ್ಮೋನ್ನತಿಗಾಗಿ, ಧಾರ್ಮಿಕದಲ್ಲಿ ನಮಗೂ ಸ್ವಾತಂತ್ರ್ಯದ ಪಟ್ಟವಿದೆ.

ಅಕ್ಕಗಳಿಗೆ ಆಚಾರವಿಚಾರಾದಿಗಳಲ್ಲಿ ಶ್ರದ್ಧೆ, ಲಿಂಗಪೂಜೆಯಲ್ಲಿ ನಿಷ್ಠೆ, ಭಕ್ತಿಯಲ್ಲಿ ಉಜ್ವಲ, ಇವು ಬಾಲ್ಯದಲ್ಲಿ ಅಂಕುರ ರೂಪದಲ್ಲಿದ್ದು ದಿನದಿನವೂ, ಇಮ್ಮಡಿ ಮುಮ್ಮಡಿಯಾಗಿ ಬೆಳೆದು ಫಲಿಸಿರುತ್ತವೆ. ಪ್ರೇಮದ ಭಾವಸಮಾಧಿಯಲ್ಲಿ ಲಿಂಗಸೊಡನೊಂದಾಗಿ ಕೂಟದಲ್ಲಿ ಸಂತಿಸಿ, ವಿಯೋಗದಲ್ಲಿ ದುಃಖಿಸಿ, ಕೊರಗಿ ಕಾತರಿಸುವುದು ಅಕ್ಕನಿಗೆ ಸ್ವಾಭಾವಿಕವಾಗಿತ್ತು. ಹೇಗೆಂದರೆ, "ಬಂದಹನೆಂದು ಬಟ್ಟೆಯ ನೋಡಿ ಬಾರದಿರ್ದೊಡೆ ಕರಗಿ ಕೊರಗಿದೆನವ್ವಾ! ತಡವಾದಡೆ ಬಡವಾದೆ ತಾಯೆ. ಚನ್ನಮಲ್ಲಿಕಾರ್ಜುನನ ಒಂದಿರುಳಗಲಿದೊಡೆ ತಿಕ್ಕಿಸಡಲಿಬ ಜಕ್ಕಿವಕ್ಕಿಯಂತಾದೆನವ್ವಾ." ಇದರಿಂದ ಅಕ್ಕಗಳಿಗೆ ಪರಮಾತ್ಮನಲ್ಲಿ ಎಷ್ಟು ನಿಷ್ಠೆ ಮತ್ತು ಪ್ರೀತಿ ಇತ್ತೆಂಬುದು ಸೊತ್ತಾಗುತ್ತದೆ.

ಕೌಶಿಕರಾಜನ ಬಲವಂತದಿಂದ ಸಂಸಾರಕ್ಕೆಳೆಯಲ್ಪಟ್ಟಾಗ, ಅವರು ವಿಷಯಾಭಿಲಾಷೆಗೊಳಪಡದೆ, ಭವಬಂಧನವನ್ನು ಬಿಡಿಸಲು ಪರಮಾತ್ಮನನ್ನೇ ಮರೆಹೊಕ್ಕರು. ಹೇಗೆಂದರೆ, "ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ ಮನ ಬಂದುದ ಬಯಸಿ, ಬೇವುತ್ತಿದ್ದೇನೆ. ಅಯ್ಯಾ! ಎನ್ನ ಮನದ ದುರಾಶೆಯ ಮಾಣಿಸಿ ನಿಮ್ಮತ್ತ ತೋರಾ ಚನ್ನಮಲ್ಲಿಕಾರ್ಜುನಾ." ಅಂದರೆ

ಜೇಡರಹುಳು ತನ್ನ ಅಂಟಿನಿಂದ ಬಲೆಯನ್ನು ಮಾಡಿ, ಅದಕ್ಕೆ ಸಿಕ್ಕಿ ಕೊಂಡ ಕ್ರಿಮಿಕೀಟಾದಿಗಳನ್ನು ತಿಂದು ಜೀವಿಸುತ್ತದೆ. ಕೊನೆಗೆ ಅವು ಬಲೆಯಲ್ಲಿ ಸಿಕ್ಕಿಕೊಂಡು ಹೇಗೆ ಪ್ರಾಣವನ್ನು ಹಾಳುಮಾಡಿಕೊಳ್ಳು ವುದೋ, ಹಾಗೆ ಸಂಸಾರವಲ್ಲಿನ ಅಲ್ಪಸುಖದ ವಿಷಯಾಭಿಲಾಷೆಗೊಳ ಪಟ್ಟು, ಕೊನೆಗೆ ಅವೇ ವಿಷಯಾಭಿಲಾಷೆಗಳಿಂದಲೇ ದುಃಖಿಗಿಡಾಗುವ ವೆಂಬುದನ್ನರಿತು ಅಕ್ಕಗಳು ಸಂಸಾರದಿಂದ ಪಾರಾಗಲು ಎಷ್ಟು ಪ್ರೇಸ್ಸಿ ದಿಂದ ಪರಮಾತ್ಮನಿಗೆ ಮೊರೆಯಿಡುತ್ತಿದ್ದರೆಂಬುದು ಇದರಿಂದ ಗೊತ್ತಾ ಗುತ್ತದೆ. ಈ ವಚನದಿಂದ ನಮಗೆ ಬೋಧೆಯಾಗುವುದೇನಂದರೆ, ನಾವು ಕೇವಲ ಜಡವಸ್ತುಗಳಂತೆ, ಪುರುಷರ ಭೋಗದ ಬೊಂಬೆಗಳಾ ಗಬಾರದು. ಕೇವಲ ಯಾವಾಗಲೂ ವಿಷಯ ವ್ಯಾಸಂಗವಲ್ಲಿಯೇ ಅಂದರೆ ೪ ಮಕ್ಕಳನ್ನು ಹಡೆದು ಸಾಕುವುದೇ ನಮ್ಮ ನಿರ್ದಿಷ್ಟ ಧ್ಯೇಯವಲ್ಲ. ಹಗಲಿರುಳು ಮನೆ ಮಡಿಕೆ ಕುಡಿಕೆ ತಿಕ್ಕುವುದೇ ನಮ್ಮ ಜೀವಿತವಲ್ಲ. ನಾವೂ ಮನುಷ್ಯರು, ನಮಗೂ ಮನುಷ್ಯತ್ವವಿದೆ. ಆದ ಕಾರಣ ನಮ್ಮ ಉದ್ಧಾರಕ್ಕಾಗಿ ಸ್ವಲ್ಪ ಕಾಲವನ್ನಾದರೂ ಲಿಂಗಪೂಜೆ, ಜಂಗಮಸೇವೆಯಲ್ಲಿ ಕಳೆಯಬೇಕು; ಮನಶ್ಶಾಂತಿಯನ್ನು ಪಡೆಯಬೇಕು.

ಶ್ರೀ ಬಸವಣ್ಣನವರ ಶಿವಾನುಭವ ಮಂಟಪದಲ್ಲಿ ಶರಣರಂತೆಯೇ ಶರಣೆಯರೂ ಪ್ರವೇಶಿಸಲು ಅಧಿಕಾರವಿತ್ತು. ಇದು ಮಾತ್ರವೇ ಅಲ್ಲದೆ ಧಾರ್ಮಿಕ ವಿಚಾರವಲ್ಲಿಯೂ ಮತ್ತು ಆತ್ಮಸಾಧನೆಯ ವಿಷಯದ ಲ್ಲಿಯೂ ಅವರವರ ಅನುಭವವನ್ನು ತಿಳಿಸಲು ಮತ್ತು ಚರ್ಚೆಮಾ ಡಲು ಸಂಪೂರ್ಣ ಅಧಿಕಾರವಿತ್ತು. ಇದಕ್ಕೆ ಸಾಕ್ಷಿ, ಶಿವಾನುಭವ ಮಂಟಪದಲ್ಲಿ ಪ್ರಭುದೇವರಿಗೂ ಮತ್ತು ನಮ್ಮ ಅಕ್ಕಗಳಿಗೂ ನಡೆದ ಸಂವಾದದಿಂದ ಅದು ಗೊತ್ತಾಗುತ್ತದೆ. ಮಹಾದೇವಿಯು ನಿರ್ವಾಣ ದಿಂದ ಶಿವಾನುಭವ ಮಂಟಪವನ್ನು ಪ್ರವೇಶಿಸಿದ್ದನ್ನು ಪ್ರಭುದೇವರು ನೋಡಿ, "ಅವ್ವಾ! ಉದಮುದದ ಯೌವ್ವನವನೆಳಕೊಂಡು ಸತಿ, ನೀ ಇತ್ತಲೇಕಕ್ಕೆ ಬಂದೆಯವ್ವಾ? ಸತಿ, ಎಂದರೆ ಮುನಿವರು ನಮ್ಮ ಶರ ಣರು; ನಿಮ್ಮ ಪತಿಯ ಕುರುಹು ಹೇಳಿದರೆ, ಬಂದು ಕುಳ್ಳಿರು ಅಲ್ಲ ದಿರೆ ತೊಲಗು ತಾಯೆ." ಅಂದರೆ, ನಿಮ್ಮ ನಿಜವಾದ ಪತಿಯ ಗುರು ತನ್ನು ಹೇಳಿದರೆ, ನಿಮಗೆ ಇಲ್ಲಿ ಅವಕಾಶವುಂಟು. ಅಲ್ಲವಾದರೆ, ಅಲ್ಲಿಂದ ಹೊರಟು ಹೋಗು ಎಂದರು. ಅದಕ್ಕೆ ಅಕ್ಕಗಳು, "ಹರನೇ ನಿ

ನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳ್ಳಲಟ್ಟಿದರೆ, ಶಶಿಧರನ ಹತ್ತಿರಕ್ಕೆ ಕಳುಹಿದ ರೆಮ್ಮವರು. ಭಸ್ಮವನೆ ಪೂಸಿ, ಕಂಕಣವನೇ ಕಟ್ಟಿದರು. ಚನ್ನಮಲ್ಲಿ ಕಾರ್ಜುನಯ್ಯ ನನಗೆ ನೀನಾಗಬೇಕೆಂದು." ಇದರಿಂದ ಅಕ್ಕಗಳು ಚಿಕ್ಕಂ ದಿನಿಂದಲೂ "ಶರಣ ಸತಿ, ಲಿಂಗಪತಿ" ಎಂಬ ತತ್ವವನ್ನು ಚನ್ನಾಗಿ ಅರಿತಿದ್ದು ಅದರಂತೆ ನಡೆಯುತ್ತಿದ್ದರೆಂಬುದು ಗೊತ್ತಾಗುತ್ತದೆ. ಆಕೆಗೂ ಪರಮಾತ್ಮನಿಗೂ ವಿವಾಹ ಸಂಬಂಧವು ಹೇಗಾಯಿತೆಂದರೆ, "ಗುರುವೇ ತತ್ತಿಗನಾದ. ಲಿಂಗವೇ ಮದುವಳಿಗನಾದ, ಆನು ಮದುವಳಿಗೆಯಾ ದೆನು, ಪಸುಧೆಯ ಭಕ್ತರೆಲ್ಲರೂ ಸಿಬ್ಬಣಿಗರಾದರು. ಕೊಟ್ಟರು ಸಾದ್ಯ ಶವಪ್ಪ ವರನ ನೋಡಿ. ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡ ನೆನಗೆ. ಈ ಲೋಕದ ಗಂಡಂದಿರೆನಗೆ ಸಂಬಂಧವಿಲ್ಲವಯ್ಯಾ" ಎಂದು ಹೇಳಿದ್ದಾರೆ. ಹೀಗೆ ಪ್ರಭುದೇವರು, ನಿಮ್ಮ ಪತಿಯಾರು? ಎಂದು ಅಕ್ಕ, ಇದುವರೆವಿಗೂ ಹೇಳಿದ ಉತ್ತರಗಳಿಂದ ಚನ್ನಮಲ್ಲಿಕಾರ್ಜು ನನೇ ತನ್ನ ಪತಿ ಎಂದ ಹಾಗಾಯಿತು. ಈ ಲೋಕದ ಗಂಡಂದಿರೆ ನಗೆ ಸಂಬಂಧವಿಲ್ಲೆಂದು ಏತಕ್ಕಾಗಿ ಹೇಳಿದರೆಂದರೆ, ಅವರು, ಈ ಲೋಕದ ಮಾನವನಿಗೂ ಮತ್ತು ಪರಮಾತ್ಮನಿಗೂ ಇದ್ದ ತಾರತಮ್ಯ ವನ್ನು ಚನ್ನಾಗಿ ಅರಿತಿದ್ದರು. ಹೇಗೆಂದರೆ, "ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ, ಚಲುವ ನಾನೊಲಿದೆನವ್ವಾ! ಎಡೆ ಇಲ್ಲದ ಕಡೆ ಇಲ್ಲದ ತೆರಹಿಲ್ಲದ ಕುರುಹಿಲ್ಲದ ಚಲುವನಾನೊಲಿದೆನೆಲೆ ಅವ್ವಾ! ನೀನು ಕೇಳಾ ತಾಯೆ. ಭವವಿಲ್ಲದ ಭಯವಿಲ್ಲದ ನಿರ್ಭಯ ಚಲುವನಂಗೊ ಲಿದೆ ನಾನು. ಕುಲಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದು ಕಾರಣ, ಚನ್ನಮಲ್ಲಿಕಾರ್ಜುನ ಗಂಡನೆನಗೆ ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು." ಎಂದು ಹೇಳಿದ್ದಾರೆ. ಅಕ್ಕಗಳು ಇದರಿಂದ ನಮಗೆ ಲಿಂಗಪತಿಯೊಬ್ಬನಿರುವನು. ಆತನನ್ನು ನೀವೆಲ್ಲರೂ ಮರೆತಿರುವಿರಿ. ಆತನ ಉಪಚಾರಕ್ಕಾಗಿ ಸ್ವಲ್ಪ ಕಾಲವನ್ನಾದರೂ ಕಳೆ ಯುವುದಿಲ್ಲ. ಆತನೇ ನಮಗೆ ನಿಜವಾದ ಸುಖವನ್ನು ಕೊಡಬಲ್ಲನು. ಈ ಲೋಕದ ಪತಿಗಳು ಸ್ವಾರ್ಥಿಗಳು. ಸಾವುಳ್ಳವರು. ಆತನು ಮೃತ್ಯುಂ ಜಯನು. ಆತನನ್ನು ಪಡೆಯುವುದೇ ನಮ್ಮ ಧ್ಯೇಯವೆಂದು ತಿಳಿ ಹೇಳಿದ್ದಾರೆ.

ಹೀಗೆ ಆ ಪರಮಾತ್ಮನನ್ನೇ ಪತಿಯನ್ನಾಗಿ ಆರಿಸಿಕೊಂಡ ಮೇಲೆ ತಮ್ಮ ಸರ್ವ ಸುಖ ದುಃಖಗಳೆಲ್ಲವನ್ನೂ ಆ ಪರಮಾತ್ಮನಿಗೆ ಅರ್ಪಿಸಿದರು. "ನಚ್ಚುಗೆ ಮನ ನಿಮ್ಮಲ್ಲಿ. ಮಚ್ಚುಗೆ ಮನ ನಿಮ್ಮಲ್ಲಿ. ಸಲುಗೆಗೆ ಮನ ನಿಮ್ಮಲ್ಲಿ. ಸೋಲುಗೆ ಮನ ನಿಮ್ಮಲ್ಲಿ. ಅಳಲುಗೆ ಮನ ನಿಮ್ಮಲ್ಲಿ. ಬಳಲುಗೆ ಮನ ನಿಮ್ಮಲ್ಲಿ. ಕರಗುಗೆ ಮನ ನಿಮ್ಮಲ್ಲಿ. ಕೊರಗುಗೆ ಮನ ನಿಮ್ಮಲ್ಲಿ. ಎನ್ನ ಪಂಚೇಂದ್ರಿಯಂಗಳು ಕಬ್ಬಿಣ ಉಂಡ ನೀರಿನಂತೆ ನಿಮ್ಮಲ್ಲಿ ಬೆರಸುಗೆ ಚನ್ನಮಲ್ಲಿಕಾರ್ಜುನಾ." ಹೀಗೆ ತಮ್ಮ ಸರ್ವ ಸುಖದುಃಖಗಳೆಲ್ಲವನ್ನೂ ಪರಮಾತ್ಮನಿಗೆ ಅರ್ಪಿಸಿದರು. ಇನ್ನು ಪಂಚೇಂದ್ರಿಯಗಳು, ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮ ಇವುಗಳ ಯಾವತ್ತೂ ಕ್ರಿಯೆಗಳು, ರೂಪು, ರಸ, ಗಂಧ, ಸ್ಪರ್ಶ, ಶಬ್ದ ಈ ಯಾವತ್ತು ಪರಮಾತ್ಮನಿಗೆ ಅರ್ಪಿಸಿದ ಪಂಚವಿಷಯಗಳು, ಬಿಸಿ ಯಾದ ಕಬ್ಬಿಣವನ್ನು ನೀರಲ್ಲಿ ಅದ್ದಿ ತೆಗೆದರೆ ಅದಕ್ಕೆ ಅಂಟಿಕೊಂಡಿದ್ದ ನೀರು ಹೇಗೆ ಅದರಲ್ಲಿಯೇ ಅದೃಶ್ಯವಾಗುವುದೋ ಹಾಗೆ ಪರಮಾತ್ಮನಲ್ಲಿಯೇ ಲಯವಾಗುವುವು, ಎಂಬುದೇ ಆಕೆಯ ಭಾವವು. ನಮ್ಮ ಭಾವವು ಇಂದ್ರಿಯ ಸುಖಕ್ಕಾಗಿ ಧಾವಿಸುತ್ತದೆ. ಜನನ ಮರಣಗಳನ್ನು ಉಡಿಯಲ್ಲಿ ಕಟ್ಟಿಕೊಳ್ಳಲು ಹೆಣಗುತ್ತದೆ. ಮನಸ್ಸನ್ನು ಕೇವಲ ಸಂಸಾರವಲ್ಲಿರಿಸಿ ಪರ್ವತ ಪ್ರಾಯವಾದ ದುಃಖವನ್ನು ಹೊತ್ತು ನಿಲ್ಲಲು ಸಾಹಸ ಮಾಡುತ್ತೇವೆ. ಇದೆಲ್ಲವೂ ನಮ್ಮ ಮನೋದೌರ್ಬಲ್ಯವು; ನಾವು ಪುರುಷರ ಪರತಂತ್ರವಾದ ಫಲವು. ಅದಕ್ಕಾಗಿ ನಾವಿನ್ನು ನಮ್ಮಿಂದ್ರಿಯಗಳನ್ನು ಮನಸ್ಸನ್ನು, ಲಿಂಗಪತಿಗಾಗಿ, ಕೊಂಚ ಕಾಲವಾದರೂ ಮಾಡಿ ಕೊಳ್ಳಬೇಕು. ಅದೇ ಶಾಶ್ವತ.

ಹೀಗೆ ಪಂಚೇಂದ್ರಿಯಗಳು ಪರಮಾತ್ಮನಲ್ಲಿ ಬೆರೆದ ಬಳಿಕ ಇನ್ನು ಭವವೆಲ್ಲಿಯದು? ಹೇಗೆಂದರೆ, "ಲೋಕದ ಜೀವಿಗೆ ರವಿ ಬೀಜವಾದಂತೆ ಕರಣಂಗಳ ಜೀವಿಗೆ ಮನವೇ ಬೀಜ. ಎನಗುಳ್ಳದೊಂದು ಮನ. ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ ಎನಗೆ ಭವವುಂಟೇ ಚನ್ನಮಲ್ಲಿಕಾರ್ಜುನಾ." ಯಾವತ್ತು ಮಾನವ ಮೊದಲಾಗಿ ಸಕಲ ಜೀವಿತ ಪ್ರಾಣಿ ಕ್ರಿಮಿಕೀಟಾದಿಗಳ ಪ್ರಾಪಂಚಿಕ ವ್ಯವಹಾರವೆಲ್ಲ ಸೂರ್ಯಾಸ್ತಮಾನವನ್ನೇ ಅನುಸರಿಸುತ್ತವೆ. ಅಂದರೆ ಎಲ್ಲವೂ ಸೂರ್ಯೋದಯದಿಂದ, ಅಸ್ತಮಾನದ ವರೆಗೂ ವ್ಯವಹಾರ ನಡೆಸಿ ದಣಿದು, ಸೂರ್ಯಾ

ಸ್ತಮಾನದಲ್ಲಿ ವಿಶ್ರಾಂತಿ ಹೊಂದುವುವು. ಇದರಿಂದ ಪ್ರಾಪಂಚಿಕ ವ್ಯವಹಾರಕ್ಕೆಲ್ಲ ಸೂರ್ಯನೇ ಹೇಗೆ ಮೂಲನೋ, ಹಾಗೆ ಇಂದ್ರಿಯಗಳ ಜೀವಿಗೆ ಮನವೇ ಮೂಲ. ಇರತಕ್ಕ ಒಂದು ಮನ, ಬೇರೆ ಬೇರೆ ಇಂದ್ರಿಯಗಳಲ್ಲಿ ಸೇರಿ, ಬೇರೆ, ಬೇರೆ ಕ್ರಿಯೆಯನ್ನು ಮಾಡುತ್ತಿರುತ್ತದೆ. ಇನ್ನು ಈ ಮನ ಪರಮಾತ್ಮನಲ್ಲಿ ಲೀನವಾದ ಮೇಲೆ ಇನ್ನು ಭವವೆಲ್ಲಿಯದು? ಇಲ್ಲ. ಏಕೆಂದರೆ, "ಮನಯೇವ ಮನುಷ್ಯಾಣಾಂ, ಕಾರಣಂ, ಬಂಧಮೋಕ್ಷಯೋಃ" ಅಂದರೆ ಮನಸ್ಸು ಪಾರಮಾರ್ಥಿಕವಲ್ಲಿದ್ದರೆ ಮೋಕ್ಷವುಂಟಾಗುವುದು; ಅದಲ್ಲದೆ ಲೌಕಿಕದಲ್ಲಿದ್ದರೆ ಭವವುಂಟಾಗುವುದು. ನಮ್ಮ ಪ್ರಕೃತಿಯು ಪುರುಷತಂತ್ರವಾದರೂ ಮನಸ್ಸು ಮಹಾದೇವನ ಮಂತ್ರಧ್ಯಾನದಲ್ಲಿರಬೇಕು. ಇಂದ್ರಿಯಗಳಲ್ಲಿ ಮನವೇ ಮುಖ್ಯವಾದುದರಿಂದ, ಅದೊಂದನ್ನು ಆತನಿಗೆ ಕೊಟ್ಟರಾಯಿತು. ಆಗ ನಮ್ಮ ಸಂಸಾರವೆಲ್ಲ ಸಸಾರವಾಗುವುದು; ನಮ್ಮ ಜೀವಿತವು ಸಫಲವಾಗುವುದು. ನಾವಲ್ಲದೆ ನಮ್ಮ ಕುಲವೂ ಉದ್ಧಾರವಾಗುವುದು.

ಹೀಗೆ ಮನಸ್ಸು ಪರಮಾತ್ಮನಲ್ಲಿ ಲೀನವಾದ ಮೇಲೆ ಭವವೆಲ್ಲಿಯದು? ಇಲ್ಲ. ಇನ್ನು ಅದೇ ಮನ ಇನ್ನಾವ ತುಚ್ಛಪ್ರಾಪಂಚಿಕ ಭೋಗಕ್ಕೆಳಿಸುವುದು? ಯಾವುದಕ್ಕೂ ಎಳಿಸುವುದಿಲ್ಲ. ಹೇಗೆಂದರೆ, "ಗಿರಿಯಲ್ಲದೆ ಹುಲ್ಲು ಮೊರಡಿಯಲ್ಲಾಡುವುದೇ ನವಿಲು? ಕೊಳನಲ್ಲದೆ ಕಿರಿವಳ್ಳಕ್ಕೆಳಿಸುವುದೇ ಹಂಸೆ? ಮಾಮರ ತಳಿತಲ್ಲದೆ ಸ್ವರಗೈಯ್ವುದೆ ಕೋಗಿಲೆ? ಪರಿಮಳವಿಲ್ಲದ ಪುಷ್ಪಕ್ಕೆಳಿಸುವುದೇ ಭ್ರಮರ? ಎನ್ನ ದೇವ ಚನ್ನಮಲ್ಲಿಕಾರ್ಜುನನಲ್ಲದೆ ಅನ್ಯಕ್ಕೆಳಿಸುವುದೇ ಎನ್ನ ಮನ? ಹೀಗೆ ಚನ್ನಮಲ್ಲಿಕಾರ್ಜುನನಲ್ಲಿ ಬೆರೆಯುವುದೇ ಆಕೆಗೆ ಸ್ವಾಭಾವಿಕ. ಅದನ್ನು ಬಿಟ್ಟು, ಆಕೆಯ ಮನ ಪರಮಾತ್ಮನನ್ನಲ್ಲದೆ ಅನ್ಯಕ್ಕೆಳಿಸದು, ಎಂದುದಕ್ಕೆ ಪ್ರಭುದೇವರು ಆಕೆಯನ್ನು ಪರೀಕ್ಷಿಸಬೇಕೆಂಬ ಉದ್ದೇಶದಿಂದ ಇಷ್ಟಾದರೆ ಸಾಲದು; ನಿನಗೆ ಪುರುಷನ ಧೈರ್ಯ ಸಾಹಸವಿದ್ದರೆ ಮಾತ್ರವೇ ಶಿವನು ನಿನಗೆ ಒಲಿಯುವನು ಎಂದುದಕ್ಕೆ ಅಕ್ಕನಗಳು, "ಕಾಮನ ಗೆಲಿದೆನು ಬಸವಾ ನಿಮ್ಮ ದಯದಿಂದ. ಸೋಮಧರನ ಹಿಡಿ ತಪ್ಪೆನು ಬಸವಾ ನಿಮ್ಮ ಕೃಪೆಯಿಂದ. ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡು ರೂಪು. ಬಸವಾ ನಿಮ್ಮ ದಯದಿಂದ ಅತಿ ಕಾಮಿ ಚನ್ನಮಲ್ಲಿಕಾರ್ಜುನಯ್ಯಂಗೆ ತೊಡರಸಿಕ್ಕಿ ಎರಡು

ಪರಿಯವೆ ಕೂಡಿವೆನು ಬಸವಾ ನಿಮ್ಮ ಕೃಪೆಯಿಂದ." ಇದು ಅಕ್ಕಗಳ ದಿವ್ಯ ಆತ್ಮ ತೇಜಸ್ಸನ್ನೂ ಮತ್ತು ನಾನೆಂಬುದಿಲ್ಲದ ನಿರಹಂಕಾರತ್ವವನ್ನೂ ತೋರಿಸುತ್ತವೆ. ವಾಚಕರೇ! ಹೀಗೆ ಇಷ್ಟು ಭೀರುತನದ ಮತ್ತು ಸಮುಂಜಸವಾದ ಉತ್ತರ ಹೇಳಬೇಕಾದರೆ, ನಮ್ಮ ಶರಣರು ಧಾರ್ಮಿಕ ವಿಚಾರದಲ್ಲಿ, ಅವರಿಗಿನ್ನೆಷ್ಟು ಸ್ವಾತಂತ್ರ್ಯ ಕೊಟ್ಟಿರಬೇಕೆಂಬುದನ್ನು ನೀವೇ ಊಹಿಸಿ. ಆದ್ದರಿಂದ ನಾವು ಕೇಳುವುದು ಸಮಾಜ ಸ್ವಾತಂತ್ರ್ಯವಲ್ಲ. ಅದು ಬೇಕಾಗಿಯೂ ಇಲ್ಲ. ನಮಗೆ ಬೇಕಾದುದು ಅಕ್ಕನು ಶಿವಾನುಭವ ಮಂಟಪದಲ್ಲಿ ಪಡೆದ ಧರ್ಮ ಸ್ವಾತಂತ್ರ್ಯ. ಅದಕ್ಕಾಗಿ ನಮ್ಮ ಜೀವನವು ಇನ್ನೂ ಮುಂದೆ ಧಾವಿಸಬೇಕು.

ಹೀಗೆ ಯಾವ ಅಸಾಧಾರಣ ಪುರುಷನಿಗೂ ಸುಲಭಸಾಧ್ಯವಲ್ಲದ ನಿರ್ಭೈತ್ಯವನ್ನು ಮಹಾದೇವಿಯಕ್ಕಗಳು ಸುಲಭ ಸಾಧ್ಯಪಡಿಸಿಕೊಂಡರು. ಇದೇ ರೀತಿಯಲ್ಲಿಯೇ, ಲಿಂಗಮ್ಮ, ನೀಲಮ್ಮ, ನಾಗಮ್ಮ ಮೊದಲಾದ ಶಿವಶರಣೆಯರು ಭಕ್ತಿ, ಜ್ಞಾನ, ವೈರಾಗ್ಯಗಳಲ್ಲಿ ಪುರುಷರನ್ನು ಸಹ ಮೀರಿಸಿ ಮುಂದುವರೆದಿದ್ದಾರೆ. ಇದನ್ನೆಲ್ಲ ಅರಿತೇ ನಮ್ಮ ಶರಣರು ಧಾರ್ಮಿಕ ವಿಚಾರದಲ್ಲಿ ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ಲೋಕದಲ್ಲಿ, ಬೀಜದಲ್ಲಿ ಮರವಾಗುವ ಶಕ್ತಿ ಹೇಗಿದೆಯೋ ಹಾಗೆಯೇ ಮಾನವ ಜನ್ಮಕ್ಕೆಲ್ಲ ತಾನು ಶಿವನಾಗುವ ಶಕ್ತಿ ಇದೆಯೆಂದು ಶಾಸ್ತ್ರಗಳು ಕೂಡ ಹೇಳುತ್ತಿದ್ದರೂ, ಇತ್ತೀಚೆಗೆ ಪುರುಷರು ಹಲವು ಸ್ವಾರ್ಥಗಳ ಮೂಲಕ, ಆ ಹಕ್ಕನ್ನು ತಾವೇ ಇಟ್ಟುಕೊಂಡು, ಸ್ತ್ರೀ ಜನ್ಮವು ಇದಕ್ಕೆ ಅನರ್ಹವಾದುದೆಂದು ಹೇಳುವಲ್ಲಿ ಯಾವುದೋ ಒಂದು ಬೇರೆ ಉದ್ದೇಶವಿದ್ದಂತೆ ತೋರುತ್ತದೆ. ತಾನೇ ನಾವೆರೂ ಪಾಪಕಾರ್ಯವನ್ನು ಮಾಡಿ ಯಾವುದೋ ಒಂದು ವ್ಯಕ್ತಿಯಿಂದ ಅವಮಾನ ಅನರ್ಥಗಳನ್ನು ಪಡೆದಿದ್ದಿರಬಹುದು. ಅದಕ್ಕಾಗಿ ಇಡೀ ಸ್ತ್ರೀ ಸಮಾಜವನ್ನೇ ನಿಂದಿಸುವುದೆಂದರೆ, ಧರ್ಮದೂರರನ್ನು ಮಾಡುವುದೆಂದರೆ, ಎಂತಹ ಅನ್ಯಾಯ? ತಾನು ಕೆಟ್ಟಾದರೆ ಜನಾಂಗವೇ ಕೆಟ್ಟಾಗಬಹುದು. ಹೀಗೆ ಹರಿಹಾಯುವುದು ತೀರ ಅಸಮಂಜಸವಾದುದು.

ಇವಕ್ಕೆಲ್ಲಾ ಸ್ತ್ರೀಯರಲ್ಲಿನ ಮನೋ ದುರ್ಬಲತೆಯೇ ಮೂಲ. ಆದುದರಿಂದ ತಾಯಿಗಳೇ! ತಂಗಿಯರೇ! ಮತ್ತು ಸರ್ವ ಸ್ತ್ರೀ

ಸಮುದಾಯವೇ ತಮಗೆಲ್ಲ, ನಾನು ಒತ್ತಿ ಒತ್ತಿ ಹೇಳುವುದೇನೆಂದರೆ, ನಮ್ಮಲ್ಲಿ ಆತ್ಮ ಬಲವು ಸಂಪೂರ್ಣವಾಗಿ ಲೋಪವಾಗಿರುವುದರಿಂದಲೇ ಸಮಾಜದಲ್ಲಿ ನಾವು ಯಾವ ರೀತಿಯಿಂದಲೂ ತಲೆಯೆತ್ತುವಂತಿಲ್ಲ. ಇದರಿಂದಲೇ ಹಿಂದೂ ಸ್ತ್ರೀಯರ ರೋಮ ರೋಮಗಳೂ ಪರಾಧೀನತೆಯ ಶೃಂಖಲೆಯಿಂದ ಬಂಧಿಸಲ್ಪಟ್ಟಿವೆ. ಇವಕ್ಕಾಗಿ ಮನೋ ದುರ್ಬಲತೆಯೇ ಮೂಲವಾದುದರಿಂದ, ನಾವೆಲ್ಲರೂ ವೀರ ನಾರಿಯರಾಗಿ ಲೋಕದಲ್ಲಿ ಬಾಳಬೇಕು. ಅಂದರೆ ಅಕ್ಕಗಳಂತೆ ನಿರ್ವಾಣಹೊಂದಿ ಕೇವಲ ಪಾರಮಾರ್ಥಿಕವನ್ನು ಸಾಧಿಸಬೇಕೆಂದಲ್ಲ. ಆದರೆ ಸಂಸಾರದಲ್ಲಿಯೇ ಇದ್ದು ಅಕ್ಕಗಳಂತೆ, ಆಚಾರ ವಿಚಾರಾದಿಗಳಲ್ಲಿ ಶ್ರದ್ಧೆ, ಲಿಂಗ ಪೂಜೆಯಲ್ಲಿ ನಿಷ್ಠೆ, ಭಕ್ತಿಯಲ್ಲಿ ಉಜ್ವಲ, ಪ್ರಾಣದಯೆ, ಜಂಗಮದಾಸೋಹ, ಗುರುಹಿರಿಯರ ಸೇವೆ, ಇವುಗಳನ್ನು ದಿನದಿನವೂ ಬೆಳೆಸುತ್ತಾ ಹೋಗಿ, ಮನೋ ನಿಗ್ರಹ ಮಾಡಿಕೊಂಡು ಲೌಕಿಕ ಪಾರಮಾರ್ಥಿಕವನ್ನು ಸಾಧಿಸಿ, ವೀರನಾರಿಯರಾಗಿ, ಜಗತ್ತಿನಲ್ಲಿ ಬಾಳಿ, ಈ ಲೇಖನವನ್ನು ಸಾರ್ಥಕ ಗೊಳಿಸುವಿರೆಂದು, ಲೇಖಕಿಯಾದ ನಾನು ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಪ್ರಾರ್ಥಿಸಿ ನನ್ನೀ ಚಿಕ್ಕ ಲೇಖನವನ್ನು ಮುಗಿಸುತ್ತೇನೆ.

ಪ್ರಮಥರ ಪೂಜೆ.

ಶಿವಲಿಂಗ ಪೂಜೆಯಿಂದ ಭಕ್ತಿದೊರಕೊಂಬುದು; ಮುಕ್ತಿದೊರಕೊಂಬುದು. 'ಶಿವಲಿಂಗಪೂಜೆಗೆ ಸರಿಯೊಂದಿಲ್ಲ' ವೆಂದು ಪುರಾತನರು ಶಿವಲಿಂಗಪೂಜೆಯ ಮಾಡಿ ಶಿವನೊಳಗಾದರು. ಇದನರಿತು ಮತ್ತೇಕೆ ಮರೆವಿರಿ ಮರುಳ ಮಾನವರುಗಳಿರಾ! ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಪೂಜೆಯ ಮಾಡಿರಣ್ಣಾ!

ಲಿಂಗಪೂಜೆಯಿಂದ ಭಕ್ತಿ
ಲಿಂಗಪೂಜೆಯಿಂದ ಮುಕ್ತಿ
ಲಿಂಗಪೂಜೆಗೊಂದು ಸಾಟಿಯಿಲ್ಲ ಜಗದೊಳು ॥೧॥

ಶಿವನ ಪೂಜೆಗೆಂದು ಸಕಲ।
ನವನವಪ್ರಸೂನಗಳನು।
ಜವದಲಾಯ್ದುಕೊಯ್ದು ಭಕ್ತಿಯಿಂದತರುವರು ॥೩॥
ಪುಷ್ಪಧರಿಸಿ ಬೆಳಗನೆತ್ತಿ।
ಧೂಪವಿಕ್ಕಿ ರುಚಿಯನಿತ್ತು।
ಪಾಪವುರುಳಿಹರುಷವೇರಿ ಮೀರಿನಲಿದರು ॥೪॥
ಪೂಜೆನೂಡಿ ನೋಡಿ ನಲಿದು।
ತೇಜಗೊಂಡು ಕೂಡಿ ಶಿವನ।
ಓಜೆಯಿಂದಲಾಡಿ ಪಾಡಿ ಹರಿಸಿ ಹರುಷದಿಂ ॥೪॥
ಶಿವನೆ, ಶಿವನೆ, ಶಿವನೆ, ಎನುತ।
ಭವನೆ, ಭರ್ಗ, ಭೀಮನೆನುತ।
ಶಿವನ ಸವಿಯ ನಾಮದಿಂದ ಹಿಗ್ಗಿಹೆಚ್ಚಿದರ್ ॥೫॥
ಇಂದುಶೇಖರಂಗೆ ನಮಿಸಿ।
ತಂದೆ, ತಾಯೆ, ಬಂಧು ನೀನು।
ಎಂದು ನೇಹದಿಂದ ನಲಿದು ನಚ್ಚಿ ನುಡಿದರು ॥೬॥
ಸೊಂಪುಸೊಗಸಿ ಲೀಲೆಯಿಂದ।
ಕಂಪುಬೀರಿ ಯೋಗದಿಂದ।
ತಂಪುದೋರಿ ಶಾಂತಿಯಿಂದ ಶಿವನ ಯಜಿಸಿದರ್ ॥೭॥
ಭಕ್ತಿಭಾವದಿಂದ ನಿರುತ।
ಯುಕ್ತಕಾಯ ಕಂಗಳಿಂದ।
ಮುಕ್ತಿಮಾರ್ಗವರಿದು ಭರದಿ ಶಿವನ ಭಜಿಸಿದರ್ ॥೮॥
ಕಾಮ ಕೋಪಗಳನು ಹುರಿದು
ಪ್ರೇಮ ಪಾಶಗಳನು ಹರಿದು।
ಸೋಮಪೂಜೆಯಲ್ಲಿ ಬೆರೆದು ಮೃಡನ ತಣಿಸಿದರ್ ॥೯॥
ನಿತ್ಯನೇಮಯುಕ್ತರೆನಿಸಿ।
ಸತ್ಯಮನದಘನದರೆನಿಸಿ।
ಸ್ತುತ್ಯವಾದ ಶಿವನ ಪೂಜೆ ಸತತ ಮಾಡಿದರ್ ॥೧೦॥
ಇಂತು ಶಿವನ ಪೂಜೆ ಮಾಡಿ।
ಕಂತು ಹರನ ಜವದಿ ಕೂಡಿ।
ಶಾಂತರಸದ ಸವಿಯ ಸವಿದು ಸತತ ಸುಖಿಸಿದರ್॥೧೧॥

ಆರಿದಿದನ್ನು ಮುತ್ತದೇಕೆ।
ಮರಿವೆರಯ್ಯ ಮರುಳ ಜನರೆ।
ನೆರೆ ಸ್ವತಂತ್ರ ಸಿದ್ಧಲಿಂಗ ಪೂಜೆ ಮಾಡಿರೈ ॥೧೨॥

ಇ೦ತೀ ಚಂದ್ರಶೇಖರ ದೇವರು ಆಡ್ನೂರ.

ರಾಘವಾಂಕನ ಪಾತ್ರಸೃಷ್ಟಿ.

(ಪೀ. ಎಂ. ಶರಭಯ್ಯ ಕನ್ನಡ ಪಂಡಿತ ಬೋರ್ಡ ಹೈಸ್ಕೂಲ ಮು. ಎಮ್ಮಿಗನೂರು ಸಾ. ಬಳ್ಳಾರಿ)

(ಹಿಂದಿನಿಂದ ಮುಂದೆ ಸಾಗಿದ್ದು)

ವಿಶ್ವಾಮಿತ್ರ—ಮಹಾಋಷಿ, ಬ್ರಹ್ಮಋಷಿ. ವಸಿಷ್ಠನ ಮೇಲಣ ದ್ವೇಷ ಬುದ್ಧಿಯಿಂದ ಹರಿಶ್ಚಂದ್ರನಿಗೆ ಅನಿಮಿತ್ತ ವೈರಿಯಾಗಿ ಸತ್ಯಭಕ್ತನಾದ ಅರಸನನ್ನು ಕಷ್ಟಕ್ಕೆಡಲು ಪರಿಪರಿಯಾದ ಕುಟಿಲ ತಂತ್ರಗಳನ್ನು ಹೂಡುವನು. ಈ ಚಂಡ ಕರ್ಮದಿಂದ ಬ್ರಹ್ಮಋಷಿ ಪದವಿಯಿಂದ ಕ್ರೂರ ಮಾನವ ಪದವಿಗೆ ಇಳಿಯುವನು. ಧೀರೋದಾತ್ತನಾದವನು ಅಸೂಯ ಅಸಹನೆಗಳಿಂದ, ಚಂಡ ವೃತ್ತಿಯಿಂದ, ಆತ್ಮಶ್ಲಾಘಾಪರತ್ವದಿಂದ, ಮುಂತ್ರಾದಿ ಬಲಗಳ ಮೋಸಗಳಿಂದ, ಸುಲಭ ಕ್ರೋಧಾದಿ ಗುಣ ಸಮುದಾಯಗಳಿಂದ ಧೀರೋದ್ಧತನಾಗುವನು. ಈ ಕಾವ್ಯದಲ್ಲಿ ಕವಿಯು ರುದ್ರನಾಯಕನ ಚಿತ್ರವನ್ನು ಭಾಷೆಯಿಂದ, ವೃತ್ತಿಯಿಂದ ಉನ್ನತಿಯು ತುದಿಗೇರುವಂತೆ ಚಿತ್ರಿಸಿದ್ದಾನೆ.

ಇಂದ್ರನು "ಇಕ್ಷ್ವಾಕು ವಂಶದಲ್ಲಿ ಸತ್ಯವಂತರಾರೆಂದು ವಸಿಷ್ಠರನ್ನು ಕೇಳುವನು. "ಹರಿಶ್ಚಂದ್ರನು ಮಹಾ ಸತ್ಯಶಾಲಿಯೆಂದು" ಋಷಿಯ ಉತ್ತರ. ಆಲ್ಲೇಯಿದ್ದ ವಿಶ್ವಾಮಿತ್ರನು 'ತೀವಿದೊಹ್ಯೋಲಗದ ನಡುವೆ ತನ್ನಂ ಮೊದಲೊ। ಳೋವಿ ನುಡಿಸುವ ಕೋಪವೊಂದಾ ವಸಿಷ್ಠಮುನಿ। ಯಾವುದಂ ಪೇಳ್ದುದನಲ್ಲೆಂಬ ಭಾಷೆಯಿರಡಖಿಳ ಜೀವಾವಳಿಯಲಿ ॥

ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ। ಭಾವ ಮುಪ್ಪರಿಗೊಂಡು ಕುದಿವಾದು ಕಡುಗೋಪ। ಪಾವರಿಸಿ ಕೌಸಿಕಂ ನಿಂದು ನಿಲ್ನುಡಿಯಜೇಡೆಂದು ಜರೆದಿಂತೆಂದನು।

ಮತ್ತು

' ಜೀಸರವೆ ಕೇಳ್ವ ದೇವೇಂದ್ರನುಂಟಿಂದು ಅಕಟಕಟ ಇಂತು ಜೀಸರವೆ ಸೊರಹುವರೆ ವಾಸಿಷ್ಠ ' ' ರಾತಿ ಹೊನ್ನುಂಟು ಅಧಿಕನಹನ್ ' ' ಸತ್ಯಲೇಶವಂತವನಾಳ್ವ ದೇಶದೋಳ್ ಕೇಳ್ವರಿಯೆ ' : ಆನಿನ್ನ ಹರಿಶ್ಚಂದ್ರನು ವರುಣನಿಗೆ ಮಗನನ್ನು ಬಲಿಕೊಡುವುದಾಗಿ ಮಾತು ಕೊಟ್ಟ ತಪ್ಪಿ ಶುನಸ್ಸೇಷನನ್ನು ತಂದು ನರಮೇಧಯಾಗ ಮಾಡಿದ ಕೊಟ್ಟ ಮಾತಿಗೆ ತಪ್ಪಿದ ಭ್ರಷ್ಟ 'ಎಂದು **ಅಸೂಯ ಅಸಹನೆಗಳ ಚಂಡ ವೃತ್ತಿಯಿಂದ** ಹರಿಶ್ಚಂದ್ರ ವಶಿಷ್ಠರನ್ನು ಕೊರಚಾಡುವನು.

ವಸಿಷ್ಠನ ಪ್ರತಿ ಮಾತುಗಳಿಗೆ ವಿಶ್ವಾಮಿತ್ರನು ಮನದೊಳಗೆ ಮುಳಿದು—" ನಿಲ್ಲು ಅಡದಿರು ಬಾಯಿ ಹಿರಿದುಂಟೆಂದು ' 'ವನಧಿ ಪರಿಯಂತ ಧರೆಗರಸುತ. ಅದರೊಳಂ ಧನವುಳ್ಳ ಶಿಷ್ಯನಾಗಿಹನು. ನಿನ್ನ ಗತಿ ವಿಪುಳ ಧನವಾರಾಧಿಸುವಂತವನ್. ಅಂತಲ್ಲದಾತ ನಾರಯೆಚ್ಚಯೊಳಗಿರ್ಪೆ. ನೀನೆ ಎನಿತಾಗಲಿಸಿ ಬಣ್ಣಿಸಲ್ ಒಪ್ಪದಯ್ಯ ' ಮುನಿಯದೇಡ! ಆತ ಹುಸಿದನಾದಡೆ ನಿನ್ನನೇಗೆಯ್ಯಬಹುದು ' ಎನ್ನುವನು.

ವಿಶ್ವಾಮಿತ್ರನ ಆತ್ಮ ಶ್ಲಾಘನೆ—ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ ಮುನಿದು। ಪೊಡವಿ ನುಂಗುವೊಡೆ ಮನೆ ತಾಂಗುವುದೆ ಕವಿದುಹಿಗ್ಗಡಲುಕ್ಕಿ ಜಗವ ಮೊಗೆವಡೆ ಮಿಳಿಗಳಡ್ಡ ಬಹವೇ ಹೇಳು ಮುನಿಪ ನಿನ್ನ॥ ಬಡಜೋಳೆ ಗೀಳಿಗಳು ರಕ್ಷಿಸುವುವಲ್ಲನಾಂ। ಕಡುಮುಳಿದ ಬಳಿಕಲೇಗುವವು ನೀಹೇಳದಿ। ದ್ದಡೆ ಮದನ ಹರನಾಣೆ ಹೋಗೆಂದು ಕೌಶಿಕಂ ಜರೆದನು ವಸಿಷ್ಠಮುನಿಯ॥ " ಪ್ರಕೃತಿಯು ಭೀಕರವಾಗಿ ಧಾವಿಸಿದರೆ ಅದರ ಮುಂದೆ ಕೃತ್ರಿಮ ದಾಟವೇ? ನಾನು ಪ್ರಕೃತಿಯಂತೆ ಉತ್ಕೃಷ್ಟ, ನಿನ್ನ ಜೋಳೆಗಳು ಕೃತ್ರಿಮದಂತೆ ನಿಕೃಷ್ಟವೆಂದು ವಿಶ್ವಾಮಿತ್ರನ ಅಹಂಕಾರದ ಧ್ವನಿ. (ಪದ್ಯವಾದರೂ ಸಂದರ್ಭೋಚಿತವಾದ ಶಬ್ದ ಜಾಲಗಳಿಂದ ಸುಂದರವಾಗಿ ಹೆಣೆಯಲ್ಪಟ್ಟಿದೆ.) ಕೌಶಿಕನು ಅರಸನನ್ನು ಸತ್ಯಭ್ರಷ್ಟನನ್ನಾಗಿ ಮಾಡಲು ಪೋಷ ಮಾಯೆಗಳಿಗೆ ಕೈ ನೀಡುವನು. ಆತನಿಂದ ಪ್ರೇರಿತರಾದ ಋಷಿಗಳು ಹರಿಶ್ಚಂದ್ರನಲ್ಲಿಗೆ ಬಂದು ಸುವರ್ಣಯಾಗ ಮಾಡಿಸುತ್ತಿರುವರು. ವಿಶ್ವಾಮಿತ್ರನು ಯಜ್ಞಕ್ಕೆ ಬಹು ಧನದ ರಾಶಿಯನೀಯಿಸಿಕೊಂಡು ಅದನ್ನು ಅರಸನ ಭಂಡಾರದಲ್ಲಿಟ್ಟು ಹೋಗುವನು. ತನ್ನ ಮನಸ್ಸಿನಲ್ಲಿ ತಾನಿರುವ ಆಶ್ರಮಕ್ಕೆ ಬರಮಾಡಿಕೊಂಡು

ಅರಸನ ಸತ್ಯದ ಬಲುಹ ನೋಡಬೇಕೆಂಬ ಕುಹಕೋಪಾಯವನ್ನು
ನೆನೆದು ತನ್ನನ್ನು ತಾನೇ ಮೆಚ್ಚಿ ತಲೆದೂಗುವನು.
ಆಕುಟಿಲೋಪಾಯ ಈ ಐಂದ್ರಜಾಲದ ನಾಟಕ.

... ...
... ... ಕಣ್ಮುಚ್ಚುತಂ
.., ...
ಮನದೊಳುತ್ಪತ್ತಿ ಮಂತ್ರವ ಮುಂತ್ರಿಸಿದ ಜಲವನೊಸೆದು ದೆಸೆ
ದೆಸೆಗೆ ತಳಿದು।

ವಿನಯದಿಂ ನೋಡ ನೋಡಲು ದಿಕ್ಕು ಧರಣಿತಿ।
ಕ್ಕನೆತೀವಿ ನಿಂದ ನಾನಾ ಪಕ್ಷಿ ವೃಗಕುಲಕೆ
ಕೊನೆವೆರಳನಲುಗಿ ತಲೆದೂಗಿ ಕೈವೀಸಿದಂ ದೇಶಮುಂ ಗೊಳಿಡಿಸಲು।

ಇನ್ನು ಕೇಳಬೇಕಾದುದೇನು? ಹರಿಶ್ಚಂದ್ರನ ರಾಜ್ಯದಲ್ಲಿ ಎಲ್ಲಿ ನೋಡಿದರೂ ಖಗಮೃಗಗಳ ಹಾವಳಿಯೇ ಹಾವಳಿ.

ವಿಶ್ವಾಮಿತ್ರನು ಹರಿಶ್ಚಂದ್ರನ ಹೊಡತದಿಂದ ನೊಂದ ತನ್ನ ಘೋರ ಮಾಯಾ ಭೀಕರ ವರಾಹನನ್ನು ನೋಡಿ—' ಹಂದಿಯುಂ ಕಾಣುವ ತಡಂ ಕೋಪಗಿಚ್ಚು ಭುಗಿ। ಲೆಂದು ಜಪ ಜಾರಿ ತಪತಗ್ಗಿ ಮತಿಗತವಾಗಿ ಸಂದ ಯೋಗಂ ಹಿಂಗಿ ದಯೆದಾಂಟಿ ನೀತಿ ಬೀತಾನಂದವಜಿತು ಹೋಗಿ॥ ಹಿಂದೆ ನನೆದುರಿದೆದ್ದು ಸಿಕ್ಕಿಪನಲಾ ಭೂಪನಿಂದು ನಾನಾಯ್ತು ತಾನಾಯ್ತು ... ... ಎಂದು ಹೂಂಕಾರ ಮಾಡಲು ಯತಿಗೆ ಹೊಲೆಯಾದ ಕೋಪದಿಂದ ಹೊಲತಿಯರು ಜನ್ಮ ತಾಳುವರು. ದುರ್ಮಂತ್ರ ಬಲವಂತನು ಅವರಿಗೆ 'ಜನಪತಿ ಹರಿಶ್ಚಂದ್ರ ಬಂದು ನಮ್ಮಯ ತಪೋವನದೊಳ್ಪಿದನೆ? ನೀವು ಸರ್ವ ಬುದ್ಧಿಗಳೊಳಾತನ ಮರುಳು ಮಾಡುತಿರಿ ಹೋಗಿ ಎಂದು ಅಪ್ಪಣೆ ಕೊಡುವನು.

ಗಾಣತಿಯರು ರಾಜನಿಂದ ಒದಿಸಿಕೊಂಡು ವಿಶ್ವಾಮಿತ್ರನಲ್ಲಿಗೆ ಬಂದು ಗೋಳಿಡುವರು. ಆಗ ವಿಶ್ವಾಮಿತ್ರನು—' ವಡಬಾಗ್ನಿ ಜಡೆ ಪೆತ್ತುದೋ ಸಿಡಿಲು ಪೊಸ ಭಸಿತ। ವಿಡಕಲಿತುದೋ ಕಾಡಕಿಚ್ಚು ಕೃಷ್ಣಾಜಿನವ। ನುಡಕಲಿತುದೋ ಪ್ರಳಯವಹ್ನಿ ತಪ ವಿರ್ದುದೋ ಭಾಳಲೋಚನಕೋಪ॥ ಕಡುಗಿ ಮನೆಯಾಯ್ತೋ ಹೇಳಿನೆ ಕಣ್ಣಕಡೆ ತೋರ। ಗಿಡಿಗೆದರಿ ಮೀಸೆಗೂದಲು ಹೊತ್ತಿ ಹೊಗೆಯೆ ಬಿಜು। ನುಡಿಗಳುರಿಯುಗುಳಿ ವಿಶ್ವಾಮಿತ್ರನುರವಣಿಸಿ ಬಂದನವನೀಶನೆಡೆಗೆ" (ಎಂತಹ

ಭೀಷಣ ದೃಶ್ಯ? ಶಬ್ದಗಳಿಂದಲೇ ರುದ್ರಮೂರ್ತಿಯ ಉಗ್ರ ರೂಪವನ್ನು ವಾಚಕರ ಮನಸ್ಸಿನ ಮೇಲೆ ಸ್ಥಾಯಿಯಾಗಿ ನಿಲ್ಲುವಂತೆ ಕೊರೆದ ಕವಿಯ ಚಾತುರ್ಯ ಸ್ತುತ್ಯವಾದುದು.) ಎಲೋ ಹರಿಶ್ಚಂದ್ರ! ಪಂಚ ಭೂತಗಳು ಸೂರ್ಯ ಚಂದ್ರಾದಿಗಳು ನನ್ನ ಭಯದಿಂದ ಗದಗದನೆ ನಡುಗಿ ಮೇರೆ ಮೀರದಂತೆ ನಡೆಯುತ್ತಾರೆ ಇಂದ್ರನು ಕೂಡ ಅನಾವೃಷ್ಟಿಯಿಲ್ಲದೆ ಮಳೆ ಸುರಿಸುವನು. ನೀನು ಸೊಕ್ಕಿನಿಂದ ವನ ಪ್ರವೇಶ ಮಾಡಿ ಅದನ್ನು ಕೆಡಿಸಿ, ಖಗಮೃಗಗಳನ್ನು ನಾಶಮಾಡಿದೆಯೆಂದು ವಿಶ್ವಾಮಿತ್ರನು ಕರಾಳನಾಗುವನು. ಸಜ್ಜನರಲ್ಲಿ ಇಲ್ಲದುದನ್ನು ರೋಪಿಸಿ ಪೀಡಿಸುವುದು ದುಷ್ಟರ ನೈಸರ್ಗಿಕ ಸ್ವಭಾವ. ದುಷ್ಟರಲ್ಲಿ ಇಲ್ಲದ ಡಂಭ, ಜಂಭ, ಅಹಂಕಾರಗಳು ನೆಲೆನಿಂತಿರುವವೆಂಬುದಕ್ಕೆ ವಿಶ್ವಾಮಿತ್ರನೇ ಸಾಕ್ಷಿ. ದರ್ಪ ಭೂಯಿಷ್ಠವಾದ ವಿಶ್ವಾಮಿತ್ರನ ಆಡಂಬರವ, ಭೀಮ ಪರಾಕ್ರಮದ, ತಪಶ್ಯಕ್ತಿಯ, ಮಾತುಗಾರಿಕೆಯ ಕತೋರಕ ನೋಡಿರಿ.—

'ಹಿಂದೆ ಸಂಪದದೊಳುರೆಗರ್ವದಿಂ ಪೆರೆದ ಸಂಕ್ರಂದನ ಸಿರಿಯ ನೀರೊಳಗೆ ನೆರಹಿದ ಮುನಿಪನಂದವಂ ಮಾಡುವೆನು' 'ಹರ್ರನ ಹಣೆಗಣ್ಣ ಹಗ್ಗಿಯನು ಹಗೆಗೊಂಬಂದದಿಂ ಇಂದೆನ್ನ ಹಗೆಗೊಂಡೆ' 'ಬಟ್ಟ ಬೀಡೆಲ್ಲಮಂ ಕೊಂದು ಕೂಗಿಡಿಸಿ ನೆರಿಸುಟ್ಟು ಬೊಟ್ಟಿಡುವೆನ್ ಆರೆಂದಿರ್ದೆ.' 'ನಿನ್ನ ಗುರು ಹೇಳನೇ ತನ್ನ ಸುತರಳಲತಿಣ್ಣನು' 'ಎನ್ನ ಬಸುರಿಂ ಮೂಡಿರ್ದ ಕನ್ನೆಯರ ಚನ್ನೆಯರನಬಲೆಯರ ಗಾಣಗಾತಿಯರಂ ಅರಿವರಿದಿಂತು ಸಾಯಸಪಡಿಸಿ ಬಡಿವರೆ?' 'ಅವದಿರಂ ಹೊಡೆದ ಕೈಗಳಂ ಕಡಿವೆ.' 'ನಿನ್ನಂ ನಚ್ಚಿ ಮಲಿತ ದೇಶವನುರುಹಿ ಸುಡುವೆನ್' 'ಆ ದೇಶಕ್ಕೆ ಹಿತವಾಗಿ ಬಂದ ಮುನಿಯಂ ಮುರಿವೆನ್' 'ಮುನಿಯನು ಹಿಡಿದು ಕಡಸಕ್ಕೆ ಬಂದಮರರಂ ಕೆಡಹಿ ಹುಡುಕು ನೀರದ್ರುವೆನ್' 'ಎನ್ನಳವನರಿಯಾ' 'ಎಲವೋ ನಿನ್ನ ಕೋಡು ಕೊರೆಯದೆ ಬರಿದೆ ಬಿಟ್ಟಪೆನೆ?' ಎನ್ನುತ್ತ ಕೆರಳುವನು. ಹರಿಶ್ಚಂದ್ರನು ಬೇಡಿಕೊಳ್ಳಲು 'ಎನ್ನ ಕುವರಿಯರ ಮದುವೆಯಾಗು. ಎಲ್ಲಾ ನಿರೋಧಮಂ ಬಿಡುವೆನ್' ಎನ್ನುವನು. ಚಕ್ರವರ್ತಿಯು ಮುನಿಯ ಕಾಟಕ್ಕೆ ತಾಳದೆ ರಾಜ್ಯವನ್ನೇ ಬಿಟ್ಟು ಕೊಡುವನು. ಮತ್ತು ಮರಳಿ ಕಾಟ ಕ್ಕಾರಂಭ. "ನನ್ನ ದಕ್ಷಿಣೆ ದ್ರವ್ಯ ಕೊಡು." "ನನ್ನ ರಾಜ್ಯದಲ್ಲಿರ

ಬೇಡ" ವೆಂದು. ರಾಜನು ತನ್ನ ನಿಷ್ಠೆ ಬಿಡದಿರಲು—ಚಿಂತೆಗೊಳಗಾಗುವನು. ಜಡಪಡಿಸುವನು. ಮೂಗಿನ ಮೇಲೆ ಬೆರಳಿಟ್ಟು ತಲೆಯ ನೊರೆಸುವನು. ತಲೆ ಕೆಟ್ಟಿಕೊಳ್ಳುವನು. ತಪಸ್ಸಿನ ಅರ್ಧಭಾಗ ಹೋಗುವದು. ವಸಿಷ್ಠನಿಗೆ ಗೆಲುವಾಗುವದು. ದೇವಲೋಕದ ಮನ್ನಣೆ ನನ್ನಿಂದ ದೂರ ಸಾರುವುದೆಂದು ತಳಮಳಗೊಳ್ಳುವನು. "ಇವನನ್ನು ಇಲ್ಲಿಗೇ ಬಿಡುವನೇ" ಎಂದು ಉತ್ಸಾಹಗೊಳ್ಳುವನು. ನಿನ್ನ ರಾಜ್ಯ ಸಂಪತ್ತಿಯ ಸ್ವಾಧೀನಪಿಸು ಬಾರೆಂದು ಅರಸನನ್ನು ಪಟ್ಟಣಕ್ಕೆ ಕರೆತಂದು ಸಮಸ್ತ ರಾಜ್ಯ ಸಂಪತ್ತಿಯನ್ನು ಒಂದೊಂದಾಗಿ ವಿವರಿಸಿ ಅರಸನಿಗೆ ಲೋಭ ಪುಂಟುಮಾಡಲಿಚ್ಛಿಸುವನು. ಅವನು ಸತ್ಯಚ್ಯುತನಾಗದಿರಲು ಮುನಿಯ ಸೋಷ ಮಾಯೆಗಳೆಲ್ಲಾ ವಾಯುವಾಗಿಯೇ ಹೋಗುವವು.

ತಿರಿಕಾರನಾದ ನಕ್ಷತ್ರಕನಿಗೆ ಕೌಶಿಕನು ಬೋಧಿಸುವ ನೀತಿ ಹೇಗಿದೆಯೋ ನೋಡುವ—

"ಕೊಡುವೊಡವೆ ಬರಲಿ ಬಾರದೆ ಕೆಡಲಿ ಕಾನನದ। ನಡುವೆತ ಗಹಿನಲಿರಿಸಿ ಕೆಲವು ದಿನವುಪವಾಸ। ಬಡಿಸಿರ್ದು ಕೆಲವು ದಿನ ದೇಹವನುವಲ್ಲೆಂದು ನೆವವೊಡ್ಡಿ ಕೆಲವು ದಿವಸ॥ ನಡೆವಾಗ ದಾರಿ ತಪ್ಪಿಸಿ ತಿರಿಪಿ ಕೆಲವು ದಿನ। ಪಡಿಯಬೀಯಕ್ಕಾಣೆಯಿಟ್ಟಿಂತು ಕೆಲವು ದಿನ। ಕೆಡಿಸಿ ನುಡಿದವಧಿಯಾಯ್ತೆಂದು ಧರೆಯರಿಯೆ ನೃಪನಂ ಮುನಿಕನೆನಿಸೆಂದನು" ॥ ಮತ್ತು "ಕರುಣಿಸದಿರನುಗೊಡದಿರಗಲದಿರು ಅನುಸರಿಸ। ದಿರು ಬಟ್ಟಿಯೂರಲೆಡೆಗೆಯ್ಯದಿರು ಕಡೆಗಾವ। ಪರಿಯೊಳಾವಾವನಿಗ್ರಹ ನಿರೋಧಾಯಾಸವಡಸುವಂದದಿ ಮಾಳ್ಪುದು॥ ಗುರುಭಕ್ತನಾದಡತಿ ಬುದ್ಧಿಯುಳ್ಳವನಾದ। ಡರಸನಂ ಕೆಡಿಸಿಹುಸಿತೋರ್ + (ಎಂದಡೆ)

ನ—ಎನಗವಂ ಕರಗುವನೆ ದೇವ (ಎನೆ)

ನಿ—ನೇಮುಕ್ಕೆ ನೀನಿರ್. ಆನ್ ಬಂದು ಕಾಡುವೆನ್ + (ಎಂದನು)

ಹೇಗಿದೆ, ಕುಟಿಲೋಪದೇಶ— ಮಹೇಂದ್ರಜಾಲದ ಚರಮಸೀಮೆ--

"ಬಿಸಿಲಾಗಿ, ಬಿರುಗಾಳಿಯಾಗಿ, ಕಲುನೆಲನಾಗಿ, ವಿಷವಾಗ್ನಿಯಾಗಿ ನಾನಾ ಕ್ರೂರ ಮೃಗವಾಗಿಮುಸಗಿ? ಘೋರಾರಣ್ಯವಾಗಿ ಕವಿವ ಭೂತ ಭೇತಾಳರಾಗಿ ಗರ್ಜಿಸಿ" "ಹಸಿವು ನೀರಡಿಕೆ ನಿದ್ರಾಲಸ್ಯವಾಗಿ ಸಂದಿಸಿ" ಹೊಕ್ಕಲ್ಲಿ ಹೊಕ್ಕು ಮುನಿಯು ಅರಸನನ್ನು ಕಷ್ಟ ಪಡಿಸುವನು. ಅರಸನು ಈ ಎಲ್ಲ ಕುತ್ತಗಳಿಂದ ನಿವಾರಕನಾಗಿ ಕಾಶಿಯನ್ನು ಸೇರುವನು. ವಿಶ್ವಾಮಿತ್ರನಿಂದ ಪ್ರೇರಿತವಾದ ಅಗ್ನಿ-ಯುವರು, ವಿಪ್ರ

ಚಾಂಡಾಲ ವೇಷಧಾರಿಗಳಾಗಿ ಮಾರಿಕೊಳ್ಳುವ ಅರಸನ ಸತಿ ಪುತ್ರರನ್ನೂ—ಅರಸನನ್ನೂ ಕೊಂಡು ಕೊಳ್ಳುವರು. ಅವರು ಕೊಡುವ ಕೋಟಿಲೆಗೆ ಮಿತಿಯಿಲ್ಲ ಮೇರೆಯಿಲ್ಲ.

ಮುನಿಯು ಮೋಸ ಮಾಯೆಗಳ ಬಲೆಬೀಸಿ ಅರಸು ಸಿಂಹವನ್ನು ಕೆಡಹಲು ನೋಡುವನು. ಕುಟಿಲ ಮಾಯೆಗಳನ್ನು ಹೂಡಿ ನನ್ನ ಉದ್ದೇಶವು ನೆರವೇರುವುದೆಂಬ ಭರವಸದಲ್ಲಿ ಚಲ್ಲಾಟವಾಡುತ್ತಿರುವಾಗ ಅರಸು ದೃಢಮನಸ್ಸಿನವನಾಗಿ ಮಾಯೆಯಿಂದ ನಿವೃತ್ತನಾಗಲು ಸಫೇದಾರ್ಢ್ಯದಿಂದ ಸ್ವಲ್ಪಕಾಲ ಸುಮ್ಮನಿದ್ದು ಕೂಡಲೇ ಮತ್ತೊಂದು ರೀತಿಯಿಂದ ವಿಜೃಂಭಿಸಿ ಮೇಲೆ ಬೀಳುವನು. ಉಪಾಯವು ಕುದುರದೆ ಕೆಳಗುರುಳುವನು. ಒಂದು ಬಗೆಯಿಂದ ರಾಘವಾಂಕನು ಅತಿ ಚಮತ್ಕಾರವಾದ ಜಟ್ಟಿಕಾಳಗವನ್ನೇ ತನ್ನ ಗ್ರಂಥದಲ್ಲಿ .ಚಿತ್ರಿಸಿದ್ದಾನೆನ್ನುವಂತೆ ಕಾಣುತ್ತದೆ.

ಲೋಹಿತಾಶ್ವನಿಗೆ ಮರಣವನ್ನುಂಟುಮಾಡಿ ಅರಸ ಅರಸಿಯರ ಹೃದಯವನ್ನು ಚುರ್ಚುವನು. ಅವರಿಂದ ಪರಿತಪಿತರಾಗುವರು. ಆ ದುಃಖಕ್ಕೆ ಕಡೆಯೇ ಇಲ್ಲದಂತಿರಲು, ರಾಜನು ಮಿಂಚಿನ ವೇಗದಿಂದ ತನ್ನ ಕರ್ತವ್ಯದ ಕಡೆಗೆ ಹಾರುವನು. ದುಡ್ಡು ತರಲು ಚಂದ್ರಮತಿಯು ಒಡೆಯನ ಮನೆಗೆ ತೆರಳುತ್ತಿರಲು ಋಷಿ, ತನ್ನ ಮಾಯಾಶಕ್ತಿಯಿಂದ ಕಾಶೀ ರಾಜಪುತ್ರನನ್ನು ಚೋರರಿಂದ ಕೊಲ್ಲಿಸಿ ಯಾವ ಪಾಪವನ್ನರಿಯದ ಚಂದ್ರಮತಿಯ ಉಡಿಲಲ್ಲಿ ಪುತ್ರಹತ್ಯಾ (ಕಾಶೀ ರಾಜಪುತ್ರ ಹತ್ಯಾ) ದೋಷವನ್ನು ಕಟ್ಟುವನು. ಇವಳ ತಲೆ ಹೊಡೆಸುವುದಾಗಿ ರಾಜನ ಅಪ್ಪಣೆ. ಭಟರು ವಧಸ್ಥಾನಕ್ಕೆ ದೇವಿಯನ್ನು ತರುವರು. ಈ ಕಾರ್ಯ ಹರಿಶ್ಚಂದ್ರನ ಪಾಲಿಗೆ ಬೀಳುವುದು. ಅವನು ಅವಕ್ಕೆ ಸಿದ್ಧನಾಗೇ ನಿಂತ. "ನನ್ನ ಪುತ್ರಿಯರನ್ನು ವಿವಾಹವಾಗು ನಿನಗೆ ಮಂಗಳವನುಂಟುಮಾಡುವೆನೆ" ಂಬ ಸೊಲ್ಲು ಋಷಿ ಬಾಯಿಯಿಂದ ದೂರಾಗಲಿಲ್ಲ. ದೂರಾದರೇನು ದೂರಾಗದಿದ್ದರೇನು. ಕಾಶಿಕನು ಸೋತನು. ತನ್ನ ತಪಸ್ಸಿನ ಅರ್ಧ ಫಲವನ್ನು ಕಳಕೊಂಡನು-ಸತ್ಯದ ಮುಂದೆ ಮಿತ್ಥ್ಯದ ಹೆಮ್ಮೆಯೆ?

ವಸಿಷ್ಠ— ಬ್ರಹ್ಮಋಷಿ. ಬ್ರಹ್ಮಋಷಿಗೆ ತಕ್ಕ ಗುಣಸಂಪತ್ತಿಗೆ ವಸಿಷ್ಠನ ಚಾರಿತ್ರ್ಯವೇ ಉದಾಹರಣೆಯಾಗಿದೆ, ಎಂದರೆ ಅತ್ಯುಕ್ತಿಯಲ್ಲ.

ವಸಿಷ್ಠನಿಗೆ ಕಾವ್ಯರಂಗದಲ್ಲಿ ಸ್ಥಳ ಸ್ವಲ್ಪ. ಅಷ್ಟರಲ್ಲೇ ಅವನ ಗುರುತಿಗೆ ತಕ್ಕ ಸ್ಥಾನವು ನಿರ್ಮಿಸಲ್ಪಟ್ಟಿದೆ. ಅದು ಬಹು ಮನೋಜ್ಞವಾಗಿದೆ. ರಾಘವಾಂಕನ ವಸಿಷ್ಠನು ಒಂದು ಬಗೆಯ ಧೀರ, ಶಾಂತ ಪ್ರಕೃತಿಗೆ ಯೋಗ್ಯವಾಗುವ ಶ್ರಮಪ್ರಧಾನ ಪುರುಷ. ಪ್ರಸನ್ನಾತ್ಮ, ಕ್ಲೇಶಸಹಿಷ್ಣು. ದ್ವಿಜೋತ್ತಮ.

ವಿಶ್ವಾಮಿತ್ರನು ಇಂದ್ರಸಭೆಯಲ್ಲಿ ಕಠೋರ ವಾಕ್ಯಗಳನ್ನಾಡಿದರೆ ವಸಿಷ್ಠನು 'ನಾ ಸೊರಹಿಪಾತನೆ' 'ಅವನಧಿಕನಲ್ಲವೆ' 'ಹೊನ್ನಮಾತೀ ಸಭೆಯೊಳೇಕೆ, ಸತ್ಯನೆ ಹೇಳ್' ಎನ್ನುವನು. ಬ್ರಹ್ಮತೇಜಸ್ಸಿನಲ್ಲಿ ತಪಸ್ಸಿನಲ್ಲಿ ಕಡಿಮೆಯಿಲ್ಲದವನಾದರೂ ಕೌಶಿಕನ ಬಿರುಮಾತಿನಿಂದಾದ ಮನಃಕ್ಲೇಶವನ್ನು ದೂರತಳ್ಳಿ ಧೀರತನದಿಂದ ಶಾಂತರೀತಿಯಿಂದ ಉತ್ತರಕೊಡುವನು. ವಸಿಷ್ಠನ ಮಾತುಗಳು ತಂಪಿಡಿದು ಬೀಸುವ ಮನೋಜ್ಞ ಮಾರುತನಂತೆ. ಮೇಘದಬ್ಬರದಿಂದ ಸಿಡಿಲು ಮಿಂಚುಗಳಿಂದ ಕೂಡಿ ಬೀಸುವ ಬಿರುಗಾಳಿಯಂತೆ ಕೌಶಿಕನ ಮಾತುಗಳು.

ವಾದವು ಅಧಿಕವಾಗಲು— "ಶ್ರುತಿಸ್ಮೃತಕುಲಾಚಾರ ಧರ್ಮ ಮಾರ್ಗಂ ಮಹಾ। ವ್ರತವನುಷ್ಠಾನ ಗುರುವಾಜ್ಞೆ ಲಿಂಗಾರ್ಚನೋ। ನ್ನತತಪಂ ಬ್ರಹ್ಮಂ ಕರ್ಮಂ ಬೆಳೆದ ಪುಣ್ಯವೊಳಗಾದವಂ ತೊಜೆಸಿದು ಕಳೆದು॥ ಸತಿಯನುಳಿದ ದಿಗಂಬರನಾಗಿ ಮುಕ್ತಕೇ। ಶಿತನಾಗಿ ನರಕ ಪಾಲದೊಳು ಸುರಿಯೆರೆದು ಕುಡಿ। ಯುತ ತೆಂಕಮುಖನಾಗಿ ಹೋಹೆಂ ಹರಿಶ್ಚಂದ್ರ ಮಱಿಸಿದು ಹುಸಿಯಂ ನುಡಿದಡೆ॥

ಇದು ವಸಿಷ್ಠನ ಪ್ರತಿಜ್ಞಾ ವಾಕ್ಯ. ಶ್ರುತಿ ಸ್ಮೃತ, ಕುಲಾಚಾರ ಧರ್ಮಾದಿಗಳಲ್ಲಿ ಶ್ರದ್ಧೆ, ನಿಷ್ಠೆ, ಅನುರಾಗ, ಮುಂತಾದವು ವಸಿಷ್ಠನಲ್ಲಿ ಉಜ್ವಲಿಸುತ್ತವೆ. ಇಷ್ಟು ಸಾಕು ಈತನು ಪರಮಸಾವನಚರಿತನೆನ್ನುವುದಕ್ಕೆ. ವಸಿಷ್ಠ ವಿಶ್ವಾಮಿತ್ರರ ಪ್ರತಿಜ್ಞೆಗಳ ಬಹಳ ಅಂತರವಿದೆ. ನಾನು ಸೋತರೆ ತಪೋಫಲದರ್ಧವನ್ನು ಹರಿಶ್ಚಂದ್ರನಿಗೆ ಕೊಡುವೆನು. ಇಂದ್ರ ಈರೇಳ್ಪೆರಿ ಹುಟ್ಟಿ ಹುಟ್ಟಿ ಒರುವ ವರಿಗೂ ಸ್ವರ್ಗಕ್ಕೆ ಹೋಗದಿರೆಂದು ವಿಶ್ವಾಮಿತ್ರನ ಪ್ರತಿಜ್ಞೆ. ಈ ಜಿದ್ದಿನಲ್ಲಿ ಮಹತ್ವ ಕಡಿಮೆ. ಇಂದ್ರ ರೋಕಕ್ಕೆ ಹೋದರೂ ಬಂದೀತು, ಬಿಟ್ಟರೂ ಬಂದೀತು. ಮಹಾಮುನಿವಾದವನಿಗೆ ಸ್ವರ್ಗದ ಹಂಗೇನು? ತಪಸ್ಸಿನಲ್ಲಿ ಅರ್ಧ ಕೊಟ್ಟರೆ ಉಳಿ

ವರ್ಧದಿಂದ ಹೋದುವನ್ನು ಸಂಪಾದಿಸಿ ತಪಸ್ಸಿನ ಫಲವನ್ನು ಅಖಂಡವಾಗಿ ಸಾಧಬಹುದು. ವಿಶ್ವಾಮಿತ್ರನು ಹುಸಿದುದಾವರೆ ವಸಿಷ್ಠನಿಗೆ ಬ್ರಹ್ಮ ಋಷಿ ಪದವಿ ಮರಳಿ ಸಿಕ್ಕುವುದಕ್ಕವಕಾಶವೇಯಿಲ್ಲ

ರಾಜನು ಸುಳ್ಳಾಡಲು ನಿನ್ನ ಋಷಿತನವೇ ಹೋಗುವುದು. ಮೊದಲೇ ಅವನಿಗೆ ಎಷ್ಟರಿಕೆ ಕೊಡು ಎಂದು ವಿಶ್ವಾಮಿತ್ರನೆನ್ನಲು,

ವ— ತರಣಿ! ತೇಜೆಂಗೆಡದಿರು. ಅಗ್ನಿ! ಬಿಸುಪಾರದಿರು.!
ಸರಸಿರುಹವೈರಿ! ತಂಪ ಬಿಡದಿರ್.+ಎಲೆಲೆ ಮುಂ।
ವರವೆ! ಚಲಿಸದಿರ್+ಎಂದು ಜೋಧಿಸಲೇಕೆ? ನಿಜವಲ್ಲವೆ? ಸುಮ್ಮನಿರಲು॥
ವರಹರಿಷ್ಟಂಪ್ರ! 'ಸತ್ಯಂಗೆಡದಿರ್'+ಎಂದು ಜೋ।
ಸರಿಸುವಂತಾಗಿ ಹುಸಿಯುಂಟೆ? ಕೊಂಡೆಯವೆ+ಎನಗೆ।
ಹಿರಿಯತನ ಕೆಟ್ಟು+ಇಂತು ನುಡಿಯಲಿಹುದೆ.....॥

ವಿ— ನೀ ಹೇಳದಿರ್ದಡೆ ಮದಹರನಾಣೆ

ವ— ಕುಲವ ನಾಲಿಗೆಯರುಹಿತೆಂಬ ನಾಣ್ನುಡಿಗೆ+ಇಂದು ನೆಲೆಯಾಯ್ತಲಾ!—ಬ್ರಹ್ಮಋಷಿಯಾದಡೆ+ಒಳಗೆ ನಿರ್ಮಳವಿರ್ಪುದಯ್ಯ.—ನೀ ರಾಜ ಋಷಿ—ಕೋಪಿಸದೆ, ದಬ್ಬಿಸದೆ, ಕೆಡೆನುಡಿಯದೆ—ನಿಲಲೆಂತು ಬಲ್ಲೆ.....

ವಿ— ಎನ್ನ ನೀನೀಗ ಹೆಪ್ಪಳಿಸದಾಡಿದೆ.....

ವ— ಅಹುದಹುದು. ನಿನ್ನಲಿಹ ನೆಲೆಯಾಡಿತು.

ಕಂಡದ್ದಾದಿದರೆ ಕೆಂಡಪಂತಹ ಕೋಪ.—ವಿಶ್ವಾಮಿತ್ರನಿಗೆ ಮುಖೋಷ್ಣಾಟನೆಯಾವಂತಾಗಿ ಕೊಚ್ಚಿಗೇಳುವನು. ಅದಿರಲಿ. ವಸಿಷ್ಠನ ಸರಳ ಮಾತಿನ ಸರಣಿ ಉಪದೇಶಕರಿಗೆ ಒಪ್ಪುವಂತಹದು.

B. M. Challa

(ಮುಂದೆ ಸಾಗುವದು.)

ಶಿವಾನುಭವ.

ಪು ೧೨] ನವೆಂಬರ ೧೯೩೭ [ಸಂಚಿಕೆ ೨

ಶ್ರೀ ನಿಡುಮಾವಿಡಿ ಮಠದ ಇತಿಹಾಸ.

(ಲೇಖಕ:— ಎಂ. ಜಿ ನಂಜುಂಡಾರಾಧ್ಯ 'ರಾಷ್ಟ್ರಭಾಷಾವಿಶಾರದ'
ಸಿದ್ಧಗಂಗಾ ಗುರುಕುಲ.)

ಶ್ರೀ ನಿಡುಮಾವಿಡಿ ಮಠವು ವೀರಶೈವ ಮತಾಚಾರ್ಯರ ಮುಖ್ಯ ಪೀಠಗಳಲ್ಲೊಂದಾಗಿದೆ. ಇದು ಜಗದ್ಗುರು ಪಂಡಿತಾಚಾರ್ಯ ಸೂರ್ಯ ಸಿಂಹಾಸನದ ಪರಂಪರೆಯಲ್ಲಿ ನಡೆದು ಬಂದುದು. ಇದರ ಶಾಖೋಪಶಾಖೆಗಳು ಭರತಖಂಡದ ನಾನಾಭಾಗಗಳಲ್ಲಿರುತ್ತವೆ. ಈ ಸಿಂಹಾಸನಾಧೀರ ಕರಕಮಲ ಸಂಜಾತರಾದ ಅನೇಕ ಮೂರ್ತಿಗಳು ತಮ್ಮ ಮಹಿ ಮಾಪ್ರಭಾವಗಳಿಂದ ರಾಜಾಧಿರಾಜರಿಂದ ಸನ್ಮಾನಿತರಾಗಿ ವಿಖ್ಯಾತಿಯನ್ನು ಪಡೆದ ಕುರುಹುಗಳು ಇತಿಹಾಸದಲ್ಲಿ ಕಂಡುಬರುತ್ತವೆ. ಇವರಲ್ಲಿ ಅನೇಕರು ಉದ್ದಾಮಕವಿಗಳೂ, ಶಾಸ್ತ್ರಕಾರರೂ ಆಗಿಹೋಗಿದ್ದಾರೆ. ಇವರಿಂದ ರಚಿತವಾದ ಗ್ರಂಥಗಳ ಶೋಧನೆಗಳು ನಡೆಯುತ್ತಿವೆ. ಈ ಮಠದ ಇತಿಹಾಸವು, ವೀರಶೈವ ಸಮಾಜದ ಐತಿಹಾಸಿಕ ಹಾಗೂ ಸಾಮಾಜಿಕದ ಅನೇಕ ತೊಡಕುಗಳನ್ನು ಸಡಲಿಸಿ, ಬಹುಕಾಲದಿಂದಲೂ ಗುರು-ಲಿಂಗ-ಜಂಗಮರು ಹೇಗೆ ಏಕಸೂತ್ರತೆಯಿಂದ ಸಮಾಜೋದ್ಧಾರ ಕಾರ್ಯಗಳನ್ನೆಸಗುತ್ತಿದ್ದರೆಂಬುದನ್ನು ತೋರಿಸುವ ಒಂದು ಆದರ್ಶ ಚಿತ್ರನಾಗಿದೆ. ಈ ಪೀಠಾಧಿಪತಿಗಳು ಹಿಂದೆ ಮಾಡಿರುವ ಮಹತ್ಕಾರ್ಯಗಳು ಇಂದಿನ ಪೀಠಾಧಿಕಾರಿಗಳ ಹಾಗೂ ವಿರಕ್ತಮೂರ್ತಿಗಳ ಕಾರ್ಯ ಗೌರವವನ್ನು ಸೂಚಿಸಲು ಬಲವಾದ ನಿದರ್ಶನವಾಗಿವೆ. ಸಾಮಾನ್ಯ

ವಾಗಿ ವೀರಶೈವರಲ್ಲಿ ಮತಗಳೇರ್ಪಟ್ಟುದು ಇದೇ ಉದ್ದೇಶದಿಂದಲೇ ಎಂಬುದು ಅನೇಕ ಐತಿಹಾಸಿಕ ನಿದರ್ಶನಗಳಿಂದ ಸಿದ್ಧವಾಗಿದೆ. ಅನಾದಿಕಾಲದಿಂದ ಸಾವಿರಾರು ಜನ ಮಹಾನುಭಾವರು 'ವಸುಧೈವ ಕುಟುಂಬಕಂ' ಎಂಬ ಮಹಾವಾಕ್ಯವನ್ನನುಸಂಧಾನಮಾಡಿ ವಿಶ್ವವನ್ನೇ ತಮ್ಮ ವಿಶಾಲವಾದ ಪ್ರೇಮವೆಂಬ ಬಾಹುಪಾಶದಿಂದ ತಬ್ಬಿಕೊಂಡದರಿಂದಲ್ಲವೇ ಈ ಯುಗದಲ್ಲಿ ವೀರಶೈವದ ಅಸ್ತಿತ್ವವು ಉಳಿದಿರುವುದು! ಇರಲಿ.

ಸದ್ಯದಲ್ಲಿ ಈ ಮತದಲ್ಲಿ ಉಪಲಬ್ಧವಾಗುವ ಕೆಲವು ಆಧಾರಗಳಿಂದ ಅರಿಯಬಹುದಾದ ನಾಲ್ಕಾರು ವಿಷಯಗಳನ್ನು ವಾಚಕರ ಅನುಕೂಲಕ್ಕಾಗಿ ಇಲ್ಲಿ ವಿವರಿಸುವುದು ಉಚಿತವೆನಿಸುತ್ತದೆ.

ಈ ಮತದ ಕೇಂದ್ರಸ್ಥಾನವು ಸದ್ಯದಲ್ಲಿ ಕೋಲಾರ ಜಿಲ್ಲಾ ಬಾಗೇಪಲ್ಲಿ ತಾಲ್ಲೂಕಿಗೆ ಸೇರಿದ ಗೂಳೂರು[೧] ಗ್ರಾಮದ ಕೆರೆಯ ದಂಡೆಯಲ್ಲಿರುತ್ತದೆ. ಈ ಪೀಠದ ಮೂರನೆಯ ಪೀಠಾಧೀಶ್ವರರಾದ ಶ್ರೀ ಜಗದ್ಗುರು ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳವರು ದೇಶ ಸಂಚಾರಾರ್ಥವಾಗಿ ದಯಮಾಡಿಸಿ, ಇತಿಹಾಸದಲ್ಲಿ ಪ್ರಸಿದ್ಧವಾದ ರಾಜೇಂದ್ರ ಚೋಳ (೧೦೧೮—೧೦೪೫) ನ ಉದ್ಯಾನವನದಲ್ಲಿ ಶಿವಾರ್ಚನೆಯನ್ನು ಮಾಡುತ್ತಿದ್ದರೆಂದೂ, ಶಿವಾರ್ಚನೆಯಾದ ನಂತರ ಶಿವನಿಗೆ ನೈವೇದ್ಯಕ್ಕಾಗಿ ಅಲ್ಲಿದ್ದ ತೆಂಗಿನ ಮರವನ್ನೇ ಭಿಕ್ಷೆ ಬೇಡಿದಾಗ ಆ ಮರವು ಬಗ್ಗಿ ಫಲಗಳನ್ನು ನೀಡಿ ಮೊದಲಿನಂತಾಯಿತೆಂದೂ ಇದನ್ನು ಚಾರರ ಮೂಲಕ ಅರಿತ ಚೋಳ ರಾಜೇಂದ್ರನು ಶ್ರೀ ಸ್ವಾಮಿಯವರ ಶಿಷ್ಯನಾಗಿ ಅವರ ಉಪದೇಶ ಪ್ರಭಾವದಿಂದ ತನಗೆ ಬಹಳ ಕಾಲದಿಂದಿದ್ದ ಬ್ರಹ್ಮಹತ್ಯ ದೋಷದಿಂದ ವಿಮುಕ್ತನಾದನೆಂದೂ, ಇದರ ಜ್ಞಾಪಕಾರ್ಥವಾಗಿ ಶ್ರೀಯವರಿಗೆ ಅಲ್ಲಿಯೇ ಒಂದು ಬೃಹನ್ಮಠವನ್ನು ಕಟ್ಟಿಸಿಕೊಟ್ಟನೆಂದೂ ಅಲ್ಲಿರುವ ಪಂಡಿತಾರಾಧ್ಯ ಚರಿತ್ರೆಯಲ್ಲಿ ವಿಶದವಾಗಿ ವರ್ಣಿತವಾಗಿದೆ. ಈಗಲೂ ಸಹ ಆ ಮಠದಲ್ಲಿಯೂ ಸುತ್ತು ಮುತ್ತಿನ ಪ್ರದೇಶಗಳಲ್ಲಿಯೂ ಸಹ ಚೋಳ ಪ್ರತಿಷ್ಠಿತವಾದ ಅನೇಕ ದೇವಾಲಯಗಳೂ ಕುರುಹುಗಳೂ ದೊರೆಯುತ್ತವೆ.

ನಿಡುಮಾವಿಡಿ ಎಂಬುದು ಅನಂತಪುರಂ ಜಿಲ್ಲಾ ಪೆನುಗೊಂಡೆ ತಾಲೂಕಿನಲ್ಲಿ ಅರಣ್ಯ ಮಧ್ಯ ಪ್ರದೇಶದಲ್ಲಿ ಮನೋಹರವಾದ ಪ್ರಕೃತಿದೇವಿಯಿಂದ ಪೂಜಿಸಲ್ಪಡುವುದಾಗಿ ಯೋಗಾಭ್ಯಾಸಿಗಳಿಗೆ ಯೋಗ್ಯ ಸ್ಥಾನವಾಗಿ ರಂಜಿಸುತ್ತಿದೆ. ಅದರ ಸಮೀಪದಲ್ಲಿಯೇ ಸುವರ್ಣಾವತೀ ಎಂಬ ಪುಣ್ಯ ನದಿಯು ಪ್ರವಹಿಸುತ್ತಿರುವುದರಿಂದ ಈ ಪ್ರದೇಶವು ಅತ್ಯಂತ ಮನೋಹರವಾಗಿದೆ. ಆದುದರಿಂದಲೇ ಈ ಸ್ಥಾನವು ಈ ಪೀಠಪರಂಪರೆಯ ಮೂರ್ತಿಗಳಾದ ಶ್ರೀ ಕರಿಬಸವದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳ ತಪೋನುಷ್ಠಾನಾದಿಗಳಿಗೆ ಉಚಿತವಾಗಿ ತೋರಿರಬಹುದು. ಅಲ್ಲಿರುವಾಗ್ಗೆ ಪೆನುಗೊಂಡೆಯ ಅರಸರು ದರ್ಶನಾರ್ಥವಾಗಿ ಬಂದರೆಂದೂ ಅವರಿಗೆ ಆಶೀರ್ವದಿಸಲು ಫಲವಿಲ್ಲದಿರಲು ಇವರು ತಮ್ಮ ಮಹಿಮಾ ಪ್ರಭಾವದಿಂದ ಒಂದು ಒಣಗಿದ ಮಾವಿನ ಮರವನ್ನು ಚಿಗುರಿಸಿ, ಕುಸುಮಿಸಿ, ಫಲಿಸುವಂತೆ ಮಾಡಿ ಅದೇ ಮಾವಿನ ಫಲಗಳನ್ನು ಆಶೀರ್ವಾದ ಮಾಡಿ ರಾಜನಿಗೂ ಅವನ ಯಾವತ್ತೂ ಪರಿವಾರಕ್ಕೂ ಕೊಟ್ಟು ತೃಪ್ತಿಪಡಿಸಿದರೆಂದೂ, ಇದರಿಂದ ಸಂತುಷ್ಟನಾದ ರಾಜನು ಒಂದು ದೊಡ್ಡ ಮಠವನ್ನು ಕಟ್ಟಿಸಿಕೊಟ್ಟು ಬೇಕಾದ ಬಿರುದಾವಳಿಗಳನ್ನೂ ಮಾನ್ಯವಿರಾಶೆಗಳನ್ನೂ ಕೊಟ್ಟಿರುವುದಾಗಿ ಪುಲ್ಲಕವಿಯು ವರ್ಣಿಸುತ್ತಾನೆ. ಮತ್ತು ಮತ್ತೊಬ್ಬ ಕವಿವರ್ಯನು ಇದೇ ಪವಾಡವನ್ನು ಈ ರೀತಿಯಾಗಿ ವರ್ಣಿಸಿದ್ದಾನೆ.

ಪದ

ಒಣಗಿದಂಥಾ ಚೂತ ವೃಕ್ಷವನು
ಕ್ಷಣದೊಳಗೆ ಚಿಗುರಿಸಿ
ಘನಫಲಂಗಳ ಭಕ್ತ ಜನಗಳಿಗೆ
ಗಣನೆಯಿಲ್ಲದೆ ಕೊಟ್ಟು ಜಗದಲಿ
ಘನಮಹಿಮನೆನ್ನುತೆ ಪೊರೆವ ದೇವಗೆ

ಮಂಗಲಂ ಮಹಮಹಿಮಜಗದಾಯಯತಿ ಪುಂಗವರ್ಯ। ಮಂಗಲಂ॥

---

೧ ಹಿಂದಿನ ಹೆಸರು 'ಗುಡುಲೂರು'

೨ ಆಂಧ್ರದಲ್ಲಿ ಪ್ರಸಿದ್ಧನಾದ ಪುಲ್ಲ ಕವಿಯು ಬರೆದನೆಂದು ಈ ಗ್ರಂಥವಲ್ಲಿರುವ ಅಂಕಿತದಿಂದ ತಿಳಿಯುಬಹುದಾಗಿದೆ. ಇದಲ್ಲದೆ ಕರ್ನಾಟಕಾಂಧ್ರ ಕವಿತಾವಿಶಾರದನಾದ ಇಡಗೂರು ರುದ್ರಕವಿಯೂ, ಅಪ್ಪಪ್ಪನೆಂಬವನೂ ಇದೇ ವಿಷಯವನ್ನು ಮನೋಹರವಾಗಿ ವರ್ಣಿಸಿದ್ದಾರೆ. ಇವು ಕವಿವರಿತೆಕಾರರಿಗೆ ಸಿಕ್ಕಿರುವದಿಲ್ಲ.

ಈ ರೀತಿಯಾದ ಅನೇಕ ಪವಾಡಗಳನ್ನು ವರ್ಣಿಸುವ ಕೀರ್ತನೆಗಳೂ ಹಾಡುಗಳೂ ಆ ಪ್ರದೇಶ ಜನರಲ್ಲಿ ವಾಡಿಕೆಯಲ್ಲಿರುತ್ತವೆ.

ಆ ಮಠದ ಹತ್ತಿರವಿರುವ ಒಂದು ಸ್ತಂಭವಲ್ಲಿ ಒಂದು ಶಿಲಾಶಾಸನವು ಉಪಲಬ್ಧವಾಗುತ್ತದೆ. ಇದನ್ನು ಮೇಲೆ ಹೇಳಿದ ಅರಸನೇ ಶ್ರೀಸ್ವಾಮಿಗಳವರಿಗೆ ಬರೆದು ಕೊಟ್ಟದ್ದಾಗಿರಬೇಕೆಂದು ಊಹಿಸಬಹುದಾಗಿದೆ. ಇದರಲ್ಲಿ ಕಾಲ ಮುಂತಾದವುಗಳು ಇದ್ದಂತೆ ಕಾಣುವುದಿಲ್ಲ. ಅದರ ಸ್ವರೂಪವು ಈ ರೀತಿಯಲ್ಲಿದೆ.

"....ರುಭವಸ್ತು ಕಾಳಯುಕ್ತಿ ಸಂವತ್ಸರ ಶ್ರಾವಣ ಶು. ೧೦ ರು. ಆನುಮವತ್ರಾಯ ರಾಜಗುರು ಮಹಾನಿಡಂಬಾರ್ಯ ಆ ಚಂದ್ರ ಭೂಷಣದೇವವಡೆಯರ ನಿಡುಮಾವಿಡಿ ಬಸವರಾಜದೇವರಿಗೆ ಅಣ್ಣಾವ್ಮ ರಸರ ಮಗ ಬಾಬರಸನು ಪ್ರತಿಷ್ಠೆ ಮಾಡಿ ಬರದು ಕೊಟ್ಟ ಶಾಸನ. ಮಂಗಳಮಹಾ ... ಆ ಅ." ಎಂದಿರುತ್ತದೆ. ಇದನ್ನು ಸರಿಯಾಗಿ ಶೋಧಿಸಿದಲ್ಲಿ ಅನೇಕ ವಿಷಯಗಳು ವ್ಯಕ್ತವಾಗಬಹುದು. ಈ ಶಾಸನದಲ್ಲಿ ಈ ಪೀಠಾಧೀಶರಿಗಿರುವ 'ರಾಜಗುರು' ಎಂಬ ವಿಶೇಷಣವು ಬಹಳ ಮಹತ್ವದ್ದಾಗಿರುತ್ತವೆ. ಇದು ಚರಿತ್ರೆಯಲ್ಲಿ ಈ ಪೀಠಾಧಿಪತಿಗಳು ರಾಜಾಧಿರಾಜರಿಂದ ಸನ್ಮಾನಿಸಲ್ಪಟ್ಟಿರುವರೆಂಬ ಪುಲ್ಲಕವಿಯ ಉಕ್ತಿಗಳಿಗೆ ಒಂದು ಬಲವಾದ ಆಧಾರವಾಗಿದೆ.

ಈ ಮಠದ ಸಭಾಂಗಣದಲ್ಲಿರುವ ಒಂದು ಸ್ತಂಭದಲ್ಲಿ ಶ್ರೀ ಚಂದ್ರಗುಂಡದೇಶಿಕೇಂದ್ರರು ತೆಂಗಿನಮರವನ್ನು ಭಿಕ್ಷೆ ಬೇಡಿದಾಗ ಅದು ಅಂಬಿನಂತೆ ಬಗ್ಗಿ ಫಲಗಳನ್ನು ನೀಡಿದಂತೆ ಇರುವ ಒಂದು ಪ್ರತಿಮೆಯು ಕೆತ್ತಲ್ಪಟ್ಟಿದೆ. ಇದು ವಿರೂಪಾಕ್ಷ ಪಂಡಿತಾರಾಧ್ಯನಿಂ

---

೧ ಈ ಪದ್ಯದಲ್ಲಿ ಕರಿಬಸವ ದೇಶಿಕೇಂದ್ರರು ತೆಂಗಿನಮರವನ್ನು ಭಿಕ್ಷೆ ಬೇಡಿದರೆಂಬುದು ಪದಿನೈದನೆಯ ಶತಮಾನದ ವಿರೂಪಾಕ್ಷ ಪಂಡಿತಾರಾಧ್ಯನು ಬರೆದಿರುವುದು ಸಂಭವೇ ಸರಿ. ಏಕೆಂದರೆ ಈ ಪವಾಡವು ಶ್ರೀ ಚಂದ್ರಗುಂಡ ದೇಶಿಕೇಂದ್ರರಿಂದ ನಡೆಯಿಸಲ್ಪಟ್ಟಂತೆ ಇತಿಹಾಸವಿದೆ. ನಿಡುಮಾಮಿಡಿ ಎಂಬುದು ಮಾತ್ರ ಶ್ರೀ ಕರಿಬಸವ ದೇಶಿಕೇಂದ್ರರ ಕಾಲಕ್ಕೆ ನಡೆಯಿಸಿದ ಮಹಿಮೆಯಿಂದ ಲಬ್ಧವಾದುದು. ಹಿಂದಿನ ಪ್ರಸಿದ್ಧ ವಿಷಯಗಳು ವ್ಯಕ್ತವಾಗಿ ಇಲ್ಲಿ ವರ್ಣಿತವಾಗಿವೆ. ಆದರೆ ಈ ಪವಾಡಗಳು ಈ ಪೀಠಾಧೀಶರಿಂದ ನಡೆಯಿಸಲ್ಪಟ್ಟವೆಂಬುದರಲ್ಲಿ ವಾದವಿಲ್ಲ.

ನಿಡುಮಾವಿಡಿಯ ಕರಿಬಸವೇಶನೈತರುತೆ
ನುಡಿದು ತೆಂಗಿನಮರನ ಭಿಕ್ಷನುಂ ಬೇಡಲತಿ
ಕಡುಬಾಗಿ ನಿಂದುಫಲಗಳ ನೀಡಿ ಬಳಿಕಲಾ ಮರನು
ಮೊದಲಂತೆಸೆವುದು ॥

'ಚೆನ್ನ ಬಸವ. ಪ್ರ, ಕಾ. ೫. ಸಂ. ೧೦. ಪ್ಪ. ೫೪'

ಎಂಬ ಪದ್ಯವನ್ನು ನೆನಪಿಗೆ ತರುತ್ತದೆ.

ಶ್ರೀ ಪೀಠದ ಚರಿತ್ರೆಯಲ್ಲಿ ಒಂದು ಪುರಾತನ ತಾಳೆ ಓಲೆಯ ಶಾಸನವಿರುತ್ತದೆ. ಇದರ ಕಾಲವು ವಿಜಯನಗರದ ಅರಸರ ಕಾಲವೆಂದು ತೋರುತ್ತದೆ. ವಿಜಯನಗರದ ಅರಸರ ಒಂದು ಅರಮನೆಯು ಪೆನುಗೊಂಡೆಯಲ್ಲಿ ಇಂದಿಗೂ ವಿರಾಜಿಸುತ್ತದೆ. ಅದರಲ್ಲಿನ ಉಲ್ಲೇಖಗಳಿಂದ ವಿಜಯನಗರದ ಅರಸರಿಂದ ಈ ಮಠಕ್ಕೆ ಕೊಟ್ಟಿರುವ ಮರ್ಯಾದೆಗಳೂ ಮಠಮಾನ್ಯಗಳೂ ವಿವರಿಸಲ್ಪಟ್ಟು ಎಲ್ಲಾ ಘಣಾಚಾರದ ಧಾರ್ಮಿಕ ವ್ಯವಸ್ಥೆಯ ಅಧಿಕಾರವು ಈ ಪೀಠಕ್ಕೆ ಉಂಟೆಂಬುದು ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ಕೊನೆಯಲ್ಲಿ "....ನಿಡುಮಾವಿಡಯ್ಯ ಪಂಡಿತಾರಾಧ್ಯ ಸೂರ್ಯಸಿಂಹಾಸನಾನಿತಿ ಜೇರೇದಿ...." ಎಂದಿರುತ್ತದೆ. ಈ ಶಾಸನದ ಒಂದು ನಕಲನ್ನು ಈ ಪೀಠದ ಅಧಿಕಾರಿಗಳು ಬರೆದು ಚರಿತ್ರೆಯಲ್ಲಿ ಸೇರಿಸಿದ್ದಾರೆ. ಇದರಿಂದ ಶ್ರೀಶೈಲದಿಂದ ದೇಶ ಸಂಚಾರಾರ್ಥವಾಗಿ ವಯಮಾಡಿಸಿದ ಜಗದ್ಗುರು ಕರಕಂಜಾತರಾದ ಶ್ರೀ ವಿರೂಪಾಕ್ಷ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳ ಪರಂಪರೆಯು ಲೋಕೋದ್ಧಾರಾರ್ಥವಾಗಿ ಇಲ್ಲಿಯೇ ನೆಲೆಸಿತೆಂದು ಊಹಿಸಬಹುದಾಗಿದೆ.

ಶ್ರೀಶೈಲದಲ್ಲಿ ಅಗಮಪ್ರಸಿದ್ಧವಾದ ಶ್ರೀ ಧೇನುಕರ್ಣ (ಗೋಕರ್ಣ) ಶಿವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಪೀಠವೂ ಮಠವೂ ಸಹ ಈ ನಿಡುಮಾವಿಡಿ ಮಠಕ್ಕೆ ಸೇರಿರುತ್ತವೆ. ಈ ಗೋಕರ್ಣೇಶ್ವರ ಪೀಠದ ಮೇಲ್ವಿಚಾರಣೆಯನ್ನು ಈ ಪೀಠಾಧೀಶರಾದ ಮರಿಕರಿಬಸವರಾಜ ದೇಶಿಕೇಂದ್ರ ಸ್ವಾಮಿಗಳವರು ಮಾದುಲವೀರಯ್ಯನವರೆಂಬ ಗಣಾಧೀಶರ ವಶಕ್ಕೆ ಕೊಟ್ಟಿರುವರೆಂಬ ಒಂದು ತಾಮ್ರಶಾಸನವು ಈ ಮಠದಲ್ಲಿರುತ್ತದೆ. ಅದರಲ್ಲಿಃ—

"ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ಸಂ. ೧೭೪೧ ಪ್ರಮಾದಿ ಸಂವತ್ಸರಂ ವೈಶಾಖ ಶು॥ ೬ ಶುಕ್ರವಾರಂ ಶ್ರೀಶೈಲದಿಗ್ಭಾಗ

ಮುನ ಪಂಚವನ್ನಿಗಿ ಬಳೆಯ ಶ್ರೀ ಗೋಕರ್ಣ ಸಿಂಹಾಸನಾಧ್ಯಕ್ಷುಲೈನ ಶ್ರೀ ಮರಿಕರಿಬಸವ ಸ್ವಾಮುಲವಾರು ಮಾದುಲವೀರಯ್ಯಕು ವ್ರಾಯಿಂಚ ಇಚ್ಚಿನಶಾಸನಂ....." (ಸನ್ ೧೮೦೯ ಆಗುತ್ತೆ) "ಮಜುಕೂರಿಲೋ ಶ್ರೀ ಗೋಕರ್ಣೇಶ್ವರ ಸ್ವಾಮುಲ ವಾರಿಕಿವುಂದು ಕೊನ್ನಿಯಿನಾಂ ಸ್ಥಳ ಮೂಲಲೋ....." ಎಂದು ಈ ಶಾಸನದಲ್ಲಿರುವದರಿಂದ ಶ್ರೀ ಗೋಕರ್ಣೇಶ್ವರ ಸ್ವಾಮಿಗಳೇ ಈ ಸಿಂಹಾಸನದ ಮೂಲ ಕರ್ತೃ ಗಳೆಂಬದು ಸ್ಪಷ್ಟವಾಗುತ್ತದೆ. ಶ್ರೀಶೈಲದ ಇತಿಹಾಸವನ್ನು ಸಂಕ್ಷೇಪ ವಾಗಿ ಆಂಧ್ರದಲ್ಲಿ ಬರೆದಿರುವ ಮಾ॥ ರಾ॥ ಶ್ರೀ ಪಿ. ರಾಮಯ್ಯ ಪ್ರೆಸಿ ಡೆಂಟ ಶ್ರೀ ಶೈಲಂ ಮ್ಯಾನೇಜಿಂಗ ಕಮಿಟಿಯವರು "ಶ್ರೀ ಗೊಕರ್ಣೇ ಶ್ವರ ಸ್ವಾಮಿಯವರು ನವನಾಥಸಿದ್ಧರು ಅನಾದಿ ಕಾಲದಲ್ಲಿ ಈ ಪರ್ವತ ದಲ್ಲಿ ನೆಲಸಿದ್ದರೆಂಬುದಕ್ಕೆ ಕೆಲವು ಗಾಥೆಗಳಿವೆ." ಎಂದು ಬರೆದಿರುತ್ತಾರೆ. ಆದುದರಿಂದ ಈ ಮಠದ ಮೂಲಸ್ಥಾನವು ಶ್ರೀ ಧೇನುಕರ್ಣ (ಗೋಕರ್ಣ) ಶಿವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶ್ರೀಗಿರಿರಾಜಸೂರ್ಯ ಸಿಂಹಾಸನ ವೆಂಬುದು ವ್ಯಕ್ತವಾಗುತ್ತದೆ. ಧೇನುಕರ್ಣ ಗಣಾಧೀಶರೇ ಕಲಿಯುಗ ದಲ್ಲಿ ಪಂಡಿತಾರಾಧ್ಯರೆಂದು ಕರೆಯಲ್ಪಟ್ಟಿರುವರೆಂಬುದು ಆಗಮ ಪ್ರಸಿದ್ಧ ವಾಗಿಯೇ ಇದೆ.

ವೇದ ತೀರ್ಥೇತ್ಯಾದಿ ಬಿರುದಾಂಕಿತರಾದ ವೇ॥ ಚಿದರೆಮಠದ ವೀರಭದ್ರ ಶಾಸ್ತ್ರಿಗಳವರು "ಆಂಧ್ರದ ವೀರಶೈವರು"[1] ಎಂಬ ಲೇಖನ ದಲ್ಲಿ ಆಂಧ್ರದೇಶದಲ್ಲಿರುವ ಪ್ರಸಿದ್ಧ ವೀರಶೈವ ಮಠಗಳಲ್ಲಿ 'ನಿಡು ಮಾಮಿಡಿ' ಮಠವು ಮುಖ್ಯವಾದುದೆಂದು ಉಲ್ಲೇಖಿಸಿದ್ದಾರೆ.

ವೇ॥ ಬುದ್ಧಯ್ಯಸ್ವಾಮಿ ಪುರಾಣಿಕ ಎಂಬುವರು "ಪ್ರಭುದೇವರ ಕಾಲನಿರ್ಣಯ" ಎಂಬ ಶಿರೋನಾಮೆಯ ಲೇಖನಮಾಲೆಯಲ್ಲಿ ಶ್ರೀ ಪ್ರಭುದೇವರು ರೇಣುಕಾದಿಗಳಂತೆ ಹತ್ತನೇ ಶತಮಾನಕ್ಕಿಂತಲೂ ಹಿಂದಿನ ವರೆಂಬುದನ್ನು ಸಿದ್ಧ ಮಾಡುತ್ತಾ " ಪ್ರಭುದೇವರು ನಿಡುಮಾಮಿಡಿಯಲ್ಲಿ ಕರಿಬಸವದೇಶಿಕೇಂದ್ರರನ್ನು ಮಠಾಧಿಕಾರಿಗಳನ್ನಾಗಿ ಮಾಡಿದರು"

(೧) ಶಿವಾನುಭವ ೧೯೨೯ ಮೇ.

(೨) ಶಿವಾನುಭವ ೧೯೨೯ ಅಕ್ಟೋಬರ

ಎಂದು ಬರೆದಿರುತ್ತಾರೆ. ಆದರೆ ಇದಕ್ಕೆ ಯಾವ ಐತಿಹಾಸಿಕದ ಆಧಾ ರವೂ ಇದ್ದಂತೆ ಕಂಡುಬರುವುದಿಲ್ಲವಾದರೂ ಈ ನಿಡುಮಾಮಿಡಿ ಕರಿಬ ಸವ ಸ್ವಾಮಿಗಳ ಕಾಲ ನಿರ್ಣಯಕ್ಕೆ ಕೆಲಮಟ್ಟಿಗೆ ಸಹಾಯಕವಾಗಬಹು ದೆಂದು ಹೇಳಬಹುದು.

"ಕೊಟ್ಟೂರು ಬಸವರಾಜನೆಂಬ ವೀರಮಾಹೇಶ್ವರನು ದ್ವಿತೀ ಯಧನ್ವಂತರಿಯಂತೆ ಪ್ರಖ್ಯಾತನಾದನು. ಇವನ 'ಬಸವರಾಜೀಯ' ವೈದ್ಯಗ್ರಂಥರಾಜವು ಆಂಧ್ರದೇಶದಲ್ಲಿ ಪ್ರಖ್ಯಾತವಾಗಿದೆ." ಎಂದು ವೇ॥ ಚಿದರೆಮಠದ ವೀರಭದ್ರ ಶಾಸ್ತ್ರಿಗಳು ಅವನನ್ನು ಬಹಳವಾಗಿ ಕೊಂಡಾಡಿದ್ದಾರೆ. ಈ ಬಸವರಾಜನು ಶ್ರೀ ನಿಡುಮಾಮಿಡಿಯ ಸಂಪ್ರ ದಾಯದವನೆಂಬುದು 'ಬಸವರಾಜೀಯ' ಗ್ರಂಥದ ಒಕ್ಕಣಿಕೆಯಿಂದ ಸ್ಪಷ್ಟವಾಗುತ್ತದೆ.

"ಇತಿ ಶ್ರೀ ನೀಲಕಂಠಚರಣಾರವಿಂದ ತೀರ್ಥಪ್ರಸಾದ ಪಾರಾವಾರ ಭೋಗ ವಿಹಾರಣ ಪಾರೀಣ ನಿಡುಮಾಮಿಡಿ ಬಗೆ ಸತ್ಸಂಪ್ರದಾಯ ಕಾರಾಧ್ಯರಾಮ ದೇಶಿಕಶಿಷ್ಯೋತ್ತಮ...." ಎಂದಿರುತ್ತದೆ. ಇದರಂತೆ ಅನೇಕ ಶಾಸ್ತ್ರಕಾರರೂ ಉದ್ದಾಮಕವಿಗಳೂ ಈ ಸಂಪ್ರದಾಯದವರಿದ್ದ ರೆಂಬುದು ಅನೇಕ ಕುರುಹುಗಳಿಂದ ಸಿದ್ಧವಾಗಿದೆ.

(ಸಶೇಷ.)

---

(೧) ಶಿವಾನುಭವ ೧೯೨೯ ಎಪ್ರಿಲ್

ಸ್ತ್ರೀ ಶಿಕ್ಷಣ.

(ಲೇಖಕಿ:—ಶ್ರೀಮತಿ ಬಿ. ಬಸವರಾಜದೇವಿ. ಬೆಂಗಳೂರು.)
—ಅಕ್ಕಮಹಾದೇವಿಯ ಸೇವಾಸಮಾಜದಿಂದ—

ಒಮ್ಮೆ ದೇಶ ವಿದೇಶಿಯರಿಂದ "ಪುಣ್ಯಭೂಮಿ" ಯೆಂದು ಕೀರ್ತಿ ಪಡೆದಿದ್ದ ಈ ನಮ್ಮ ಭರತಖಂಡವು ಈಗ ಅನೇಕ ರೀತಿಯಲ್ಲಿ ಅಧೋಗತಿಗೆ ಬರುತ್ತಿರುವ ವಿಷಯವು ನಮ್ಮೆಲ್ಲರ ಕಣ್ಣಿಗೂ ಪ್ರತ್ಯಕ್ಷವಾಗಿ ಕಾಣುತ್ತಿರುವುದಾಗಿದೆ. ಅವರಲ್ಲೂ ನಮ್ಮ ಮಹಿಳಾ ವರ್ಗವು ಹೊಂದುತ್ತಿರುವ ಅಧೋಗತಿಯ ವಿಷಯದಲ್ಲಿ ಬರೆಯತಕ್ಕ ಅಗತ್ಯವೇ ಇಲ್ಲ. ಸ್ತ್ರೀ ಶಿಕ್ಷಣವು ಬಹುಮಟ್ಟಿಗೆ ಹೆಚ್ಚಿದ್ದರೂ ಶಿಕ್ಷಣವು ಕೆಲವರಿಗೆ ದೊರೆತಿದೆ. ಇಲ್ಲದವರಿಗೆ ಇಲ್ಲ. ಅಧುನಿಕ ಕಾಲದಲ್ಲಿಯೇ ಈ ರೀತಿ ಸ್ತ್ರೀ ವಿದ್ಯಾಭ್ಯಾಸವು ಅಭಿವೃದ್ಧಿಗೆ ಬರುತ್ತಿರುವಲ್ಲಿ ಪುರಾತನ ಕಾಲದಲ್ಲಿ ಸ್ತ್ರೀ ಶಿಕ್ಷಣವು ಇರಲಿಲ್ಲವೇ? ಆಗಿನ ಕಾಲದಲ್ಲಿ ಈಗಿನಂತೆ ಕವಿತೆಗಳು ಇರಲಿಲ್ಲವೇ? ಎಂಬ ನೂರಾರು ಪ್ರಶ್ನೆಗಳು ತಲೆದೋರುವವು. ಆದರೆ ಪೂರ್ವ ಕಾಲದಲ್ಲಿಯೂ ಅನೇಕವರ ಕವಯಿತ್ರಿಯರಿದ್ದರೂ ಶಿಕ್ಷಣವನ್ನು ಪಡೆದಿರಲಿಲ್ಲ. ಆಗಿನ ಕಾಲದಲ್ಲಿ ಹುಡುಗಿಯರಿಗೆ ವಿದ್ಯೆ ಕಲಿಸಿದರೆ ಅವರು ಕೆಟ್ಟು ಹೋಗುವರೆಂಬ ಭಾವನೆಯು ಭಾರತೀಯರಿಗೆ ಇದ್ದಿತಲ್ಲದೆ ಗಂಡು ಹುಡುಗರಂತೆ ಹೆಣ್ಣು ಹುಡುಗಿಯರಿಗೂ ಸಹ ವಿದ್ಯೆಯನ್ನು ಕಲಿಸಿ ವಿದ್ಯಾವತಿಯರನ್ನಾಗಿ ಮಾಡಬೇಕೆಂಬ ಭಾವನೆಯು ಇರಲಿಲ್ಲ. ಅವರನ್ನು ಚಿಕ್ಕಂದಿನಲ್ಲಿಯೇ ಸಂಸಾರವೆಂಬ ಬಂಧನದಲ್ಲಿ ಸಿಲುಕಿಸುತ್ತಿದ್ದರು. ಸ್ತ್ರೀಯರಿಗೆ ಶಿಕ್ಷಣವಿಲ್ಲದಿರುವುದರಿಂದ "ಎತ್ತು ಏರಿಗೆ ಎಳೆದರೆ ಕೋಣವು ನೀರಿಗೆ ಎಳೆಯುವುದು" ಎಂಬ ಗಾದೆಯಂತೆ ಆ ಕುಟುಂಬದ ಗತಿಯಾಗುತ್ತದೆ. ನಮ್ಮ ಹಿಂದುಸ್ಥಾನದಲ್ಲಿಯಾದರೋ ಮಹಿಳೆಯರ ಸಂಖ್ಯೆಯು ಸುಮಾರು ೧೭ ಕೋಟಿ ೬೦ ಲಕ್ಷ ೬೫ ಸಾವಿರಕ್ಕೆ ಹೆಚ್ಚಾಗಿದೆ. ಇದರಲ್ಲಿ ಕೂಲಿಗಾರರನ್ನು ಬಿಟ್ಟರೆ ಕೂತುಣ್ಣುವರೇ ಹೆಚ್ಚು ಮಂದಿ. ಇದಕ್ಕೆ ಕಾರಣವೇನೆಂದರೆ ಸರಿಯಾದ ಶಿಕ್ಷಣವು ಮಹಿಳೆಯರಿಗೆ ಇಲ್ಲದಿರುವುದೇ. ಕೈಕಾಲು ಗಟ್ಟಿಯಾಗಿದ್ದು ಕೆಲಸ ಮಾಡಲು ಶಕ್ತಿಯುಳ್ಳ ಇಷ್ಟೊಂದು ಮಹಿಳೆಯರ ಶಕ್ತಿಯು ವ್ಯರ್ಥ

ವಾಗಿ ಹೋಗುತ್ತಿರುವಾಗ ಈ ನಮ್ಮ ಮಾತೃಭೂಮಿಯು ಅಭಿವೃದ್ಧಿಗೆ ಬರುವುದು ಹೇಗೆ? ಸಂಸಾರವೆಂಬ ರಥದಲ್ಲಿ ಗಂಡಹೆಂಡತಿಯರೆಂಬ ಎರಡು ಚಕ್ರಗಳು ಸರಿಯಾಗಿ ಉರುಳಿದರೇ ಆ ರಥವು ಸರಿಯಾಗಿ ನಡಿಯುವುದು. ಅದು ಬಿಟ್ಟು ಒಂದು ಚಕ್ರವು ಮುಂದಕ್ಕೆ ಬಂದು ಇನ್ನೊಂದು ಚಕ್ರವು ಹಿಂದೆಯೇ ಇದ್ದರೆ ರಥವು ಸರಿಯಾಗಿ ನಡಿಯುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಸಂಸಾರದಲ್ಲಿ ಗಂಡಹೆಂಡತಿಯರಿಬ್ಬರೂ ವಿದ್ಯಾವಂತರಾಗಿದ್ದರೇ ಆ ಸಂಸಾರವು ಸುಖಮಯವಾಗಿರುವುದು. ದಂಪತಿಗಳು ವಿದ್ಯಾವಂತರಾಗಿರುವ ಒಂದು ಸಂಸಾರವನ್ನೂ ಅವಿದ್ಯಾವಂತರಾಗಿರುವ ದಂಪತಿಗಳ ಒಂದು ಸಂಸಾರವನ್ನೂ ಹೋಲಿಸಿದರೆ ಅವರಲ್ಲಿರುವ ಮುಖ್ಯ ವ್ಯತ್ಯಾಸಗಳನ್ನು ನಾವೇ ನೋಡಬಹುದು. ಎರಡು ಸಂಸಾರಗಳಲ್ಲಿ ಹೊರಗಿನ ಆಕಾರವು ಒಂದೇ ಆಗಿದ್ದರೂ ಅವರ ಅವರ ಮನಸ್ಸಿನ ಭಾವಗಳು ಮಾತ್ರ ವ್ಯತ್ಯಸ್ತವಾಗಿರುವವು. ಪಾಶ್ಚಾತ್ಯ ದೇಶಗಳಲ್ಲಿ ಪ್ರತಿಯೊಬ್ಬ ಹೆಂಗಸೂ ವಿದ್ಯಾವತಿಯಾಗಿದ್ದು ತನ್ನ ಜೀವನೋಪಾಯಗಳನ್ನು ತಾನು ನೋಡಿಕೊಳ್ಳುವುದರಿಂದಲೇ ಆ ದೇಶಗಳು ಅಷ್ಟು ಅಭಿವೃದ್ಧಿಗೆ ಬಂದಿರುವುವು. ಮಹಿಳೆಯರು ಶಿಕ್ಷಣ ಹೊಂದಿ ತಮ್ಮ ತಮ್ಮ ಶಕ್ತಿಗಳಿಗನುಸಾರವಾಗಿ ಯಾವುದಾದರೂ ಒಂದು ಕೆಲಸವನ್ನು ಮಾಡುವುದರಿಂದ ಮಹಿಳೋನ್ನತಿ ದೇಶೋನ್ನತಿಯಾಗುವದು ಮಾತ್ರವಲ್ಲದೆ ಪುರುಷರಿಗೂ ಇದರಿಂದೆಷ್ಟೋ ಸಹಾಯವೂ ಪ್ರಯೋಜವೂ ಉಂಟು. ಈ ರೀತಿಯಾಗಿ ಭಾರತೀಯರು ಸ್ತ್ರೀ ಶಿಕ್ಷಣವನ್ನು ನಿಲ್ಲಿಸಿ ಬಿಟ್ಟಿರುವುದರಿಂದ ಅದರ ಶಿಕ್ಷೆಯೋ ಎಂಬಂತೆ ಭಾರತ ವರ್ಷವು ಇಂದು ಇಷ್ಟೊಂದು ದುಃಖವನ್ನನುಭವಿಸುತ್ತಿರುವುದು.

ಶಿಕ್ಷಣವೆಂದರೇನು? ಎಲ್ಲಿಯ ವರೆಗೆ ಸ್ತ್ರೀಯರಿಗೆ ಶಿಕ್ಷಣವನ್ನು ಕೊಡಿಸಬೇಕು? ಸ್ತ್ರೀಯರನ್ನು ಬ್ಯಾರಿಸ್ಟರ್, ವಕೀಲ ಮುಂತಾದ ಹುದ್ದೆಗಳಿಗೆ ಓದಿಸಬಹುದೇ? ಸ್ತ್ರೀಯರಿಗೆ ಕಾಲೇಜು ಶಿಕ್ಷಣವನ್ನು ಕೊಡಿಸಬಹುದೇ? ಎಂಬ ನೂರಾರು ಪ್ರಶ್ನೆಗಳನ್ನು ನೀವು ಕೇಳಬಹುದು. ಆದರೆ ಸ್ತ್ರೀಯರಿಗೆ ಶಿಕ್ಷಣವನ್ನು ಕೊಡುವುದೆಂದರೆ, ಬರಿಯ ಓದು ಬರಹವನ್ನು ಕಲಿಸುವುದು ಮಾತ್ರವೇ ಅಲ್ಲ. ಸುಖಶಾಂತಿಗಳಿಂದ ಜೀವನವನ್ನು ಸಾಗಿಸಲು ಬೇಕಾದ ಎಲ್ಲಾ ಗುಣ ವಿಶೇಷಗಳನ್ನೂ ಸಾಧನ ಸಾಮಗ್ರಿಗಳನ್ನೂ ಪಡೆದು ಜ್ಞಾನಾರ್ಜನೆಯನ್ನು ಮಾಡಿ ವಿದ್ಯೆಯನ್ನು

ಸರಿಯಾದ ರೀತಿಯಲ್ಲಿ ಕಲಿಯತಕ್ಕದ್ದೇ ಸರಿಯಾದ ಶಿಕ್ಷಣವೆನಿಸುವುದು.

ಆದರೆ ಎಲ್ಲಾ ಕಾಲದಲ್ಲಿಯೂ, ಎಲ್ಲಾ ದೇಶಗಳಲ್ಲಿಯೂ ಒಂದೇ ತರಹವಾದ ಶಿಕ್ಷಣವು ಅನ್ವಯಿಸುವುದಿಲ್ಲ. ಆಯಾ ದೇಶಗಳಲ್ಲಿ ಯಾವ ಯಾವ ತೊಡಕುಗಳಿವೆಯೋ ಅವುಗಳನ್ನು ಬಿಡಿಸಬಲ್ಲ ದೇಶದೇಳಿಗೆಗೆ ಯಾವ ಯಾವ ಕುಂದು ಕೊರತೆಗಳನ್ನು ನೀಗಿಸಬಹುದೋ ಅಂತಹ ಶಿಕ್ಷಣವೇ ಸರಿಯಾದ ಶಿಕ್ಷಣವೆನಿಸುವುದು.

ಶಿಕ್ಷಣವನ್ನು ಪಡೆದ ಸ್ತ್ರೀಯರು ಸ್ವಾವಲಂಬನವನ್ನು ಚೆನ್ನಾಗಿ ಕಲಿತುಕೊಳ್ಳಬೇಕು. ಹಾಗೆಯೇ ಅವಳು ಹೆಚ್ಚು, ನಾನು ಕಡಿಮೆ, ಅವಳು ಮೇಲು, ನಾನು ಕೀಳು ಎಂಬ ಭಾವನೆಯನ್ನು ಬಿಡಬೇಕು. ಇಲ್ಲದಿದ್ದರೆ ನಮ್ಮ ಮಹಿಳಾ ವರ್ಗಕ್ಕೆ ನೆಮ್ಮದಿ ಇಲ್ಲ, ಶಾಂತಿ ಇಲ್ಲ, ಸುಖವಿಲ್ಲ. ಈ ರೀತಿಯಾದ ಶಿಕ್ಷಣವನ್ನು ಪ್ರತಿಯೊಬ್ಬ ಮಹಿಳೆಯೂ ಕಲಿತುಕೊಂಡು ತಮ್ಮ ಜೀವನವು ತಾವು ಪರಿಷ್ಕರಿಸಿದರೆ, ದೇಶಕ್ಕೇ ಉಪಕಾರ ಮಾಡಿದಂತೆಯೇ ಸರಿ. ಮಹಿಳೆಯರು ಸರಳ ಜೀವಿಗಳಾಗಿ, ಹರ್ಷಮುಖರಾಗಿ ಕರ್ತವ್ಯ ಪರರಾಗಿ ಸತ್ಯ ನಿಷ್ಠರಾಗಿದ್ದರೆ ಭರತ ಖಂಡವು ಉನ್ನತ ಸ್ಥಿತಿಗೆ ಬರುವುದರಲ್ಲಿ ಸಂದೇಹವೇ ಇಲ್ಲ.

ಸಾಮಾನ್ಯವಾಗಿ ಸ್ತ್ರೀಯರಿಗೆ ಮಾಧ್ಯಮಿಕ ತರಗತಿಗಳ ತನಕ ಶಿಕ್ಷಣವನ್ನು ಕೊಡಿಸಿದರೆ ಸಧ್ಯಕ್ಕೆ ಅಂದರೆ ೨೦ನೆಯ ಶತಮಾನಕ್ಕೆ ಸಾಕೆನಿಸುವುದು. ಸ್ತ್ರೀಯರನ್ನು ಬ್ಯಾರಿಸ್ಟರ, ವಕೀಲ ಮುಂತಾದ ಹುದ್ದೆಗಳಿಗೆ ಓದಿಸುವುದು ಪಾಶ್ಚಾತ್ಯ ದೇಶಗಳಲ್ಲಿ ವಿಶೇಷವಾಗಿ ಪ್ರಚಾರಕ್ಕೆ ಬಂದಿರುವುದೇ ಹೊರತು ಇಂಡಿಯಾದಲ್ಲಿ ಅಷ್ಟು ಪ್ರಚಾರಕ್ಕೆ ಬಂದಿಲ್ಲ. ಕಾಲೇಜು ಶಿಕ್ಷಣವು ಈಗೀಗ ಪ್ರಚಾರಕ್ಕೆ ಬರುತ್ತಲಿರುವುದು. ಈ ರೀತಿಯಲ್ಲಿ ಸ್ತ್ರೀ ಶಿಕ್ಷಣವು ಈಗೀಗ ಪ್ರಚಾರಕ್ಕೆ ಬರುತ್ತಿರುವುದು ಹೆಚ್ಚು ಸಂತೋಷಕರವಾಗಿದೆ. ಈ ರೀತಿ ಮಹಿಳೆಯರು ಉತ್ತಮ ಶಿಕ್ಷಣ ಹೊಂದಿದ್ದರೂ ಇಂಡಿಯಾದ ಸ್ತ್ರೀಯರಿಗೆಲ್ಲಾ ಸಾಮಾನ್ಯವಾಗಿ ಅಬಲೆಯರೆಂಬ ಹೆಸರು ರೂಢಿಯಲ್ಲಿದೆ. ನಮ್ಮ ದೇಶದ ಮಹಿಳೆಯರು ಉತ್ಸಾಹ, ಸಾಹಸ, ಬುದ್ಧಿ, ಮಂತ್ರಸಾಧನೆ ಕಾರ್ಯಸಾಧನೆ ಮುಂತಾದುವುಗಳಲ್ಲಿ ಪುರುಷರನ್ನು ಮೀರಿರುವರು. ಅಕ್ಕಮಹಾದೇವಿ, ಕಮಲಾದೇವಿ

ಲಿಂಗವ್ವ, ಲಕ್ಷ್ಮವ್ವ ಇವರೇ ಇದಕ್ಕೆ ನಿದರ್ಶನರಾಗಿದ್ದಾರೆ. ಈಗಲೂ ಭಾರತ ಮಹಿಳೆಯರು ಕಷ್ಟನಷ್ಟಗಳನ್ನು ಧೈರ್ಯದಿಂದ ಸಹಿಸುತ್ತಿರುವ ಸಮಾಚಾರಗಳನ್ನು ಕೇಳುತ್ತಲೂ ಪ್ರತ್ಯಕ್ಷವಾಗಿ ನೋಡುತ್ತಲೂ ಇದ್ದೇವೆ. ಈ ಕಾರಣಗಳಿಂದ ಧೈರ್ಯ, ಸ್ಥೈರ್ಯಗಳಲ್ಲಿ ಇವರನ್ನು ಅಬಲೆಯರೆನ್ನಬಹುದೋ? ಅಲ್ಲ. ಹಿಂದೂಸ್ಥಾನದಲ್ಲಿ ನಮಗೆ ದಾಸವೃತ್ತಿಯನ್ನು ಗಂಟು ಹಾಕಿ ಅಜ್ಞಾನಾಂಧಕಾರದಲ್ಲಿ ಮುಳುಗಿಸಿ ಪಾತಾಳಕ್ಕೆ ತುಳಿದು ಬಿಟ್ಟಿದ್ದರಿಂದ ನಮಗೆ ಅಬಲೆಯರೆಂಬ ಹೆಸರು ಕೊಡಲ್ಪಟ್ಟದ್ದು ಸಾರ್ಥಕವಾಯಿತು ಎಂದು ಘಂಟಾಘೋಷವಾಗಿ ಹೇಳಬಹುದು.

ಈ ದೇಶದಲ್ಲಿ ಸ್ತ್ರೀ ಶಿಕ್ಷಣವು ಪ್ರಬಲಿಸುತ್ತಾ ಬಂದರೆ ಸ್ತ್ರೀಯರು ಜ್ಞಾನವತಿಯರಾಗಿ ಅಬಲೆಯರೆಂಬ ನಾಮವನ್ನು ಕಳೆದುಕೊಳ್ಳುತ್ತಾರೆಂದು ಸಂದೇಹವಿಲ್ಲದೆ ಹೇಳಬಹುದು. ಈ ರೀತಿ ಪುರುಷರಂತೆಯೇ ಸ್ತ್ರೀಯರೂ ಸಹ ಕಲೆ, ಜ್ಞಾನ, ಪಾಂಡಿತ್ಯವುಳ್ಳವರಾಗಿ ವೈಜ್ಞಾನಿಕ ಪರಿಶೋಧನೆಗಳಲ್ಲಿಯೂ ಅವರು ಹೆಸರು ಪಡೆಯಬಹುದು. ಭಾರತದ ವಿಜ್ಞಾನ ಮಂದಿರದ ಮಹಾದ್ವಾರಗಳು ಸ್ತ್ರೀ ಪರಿಶೋಧಕರಿಗೆ ಸರ್ವದಾ ತೆಗೆದಿರುವುವು. ಶಿಕ್ಷಣ ಪಡೆಯಲು ಪುರುಷನಿಗೆ ಎಷ್ಟು ಅಧಿಕಾರವಿದೆಯೋ ಅಷ್ಟೇ ಅಧಿಕಾರವು ಸ್ತ್ರೀಯರಿಗೆ ಇದೆಯೆನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುವರು. ಆದರೆ ಶಿಕ್ಷಣವು ಇಬ್ಬರಿಗೂ ಒಂದೇ ವಿಧವಾಗಿರಬೇಕೆ? ಬೇರೆ ಬೇರೆಯಾಗಿರಬೇಕೆ? ಎಂಬುದೇ ಇಂದಿನ ಪ್ರಶ್ನೆ. ಶಿಕ್ಷಣದ ಅವಶ್ಯಕತೆಯಲ್ಲಿ, ದೇಹ ದಾರ್ಢ್ಯದಲ್ಲಿ, ಕರ್ತವ್ಯ ಕರ್ಮಗಳಲ್ಲಿ ಸ್ತ್ರೀಯರಿಗೂ ಪುರುಷರಿಗೂ ಇರುವ ಭೇದಗಳನ್ನು ನಾವು ತಿಳಿಯಬೇಕು. ಪಾಶ್ಚಿಮಾತ್ಯನಾಗರೀಕತೆಯಲ್ಲಿ ಸ್ತ್ರೀ ಪುರುಷ ವ್ಯಕ್ತಿಗಳ ಸ್ವಾತಂತ್ರವು ತಾಂಡವಾಡುತ್ತಲಿದೆ. ಆದರೆ ಆ ರೀತಿ ಅಂದರೆ ಪಾಶ್ಚಾತ್ಯ ಜೀವನದಂತೆ ಇರುವುದು ನಮ್ಮ ಗೃಹಸ್ಥ ಜೀವನಕ್ಕೆ ಧ್ವಂಸವಾಗುವುದು. ಅದು ಹಿಂದೂ ಮಾನವ ಮತ್ತು ಮಹಿಳೆಯರಿಗಿಲ್ಲ. ತಲೆತಲಾಂತರದಿಂದ ಬಂದ ನಮ್ಮ ಪದ್ಧತಿಗಳು ವ್ಯಕ್ತಿ ಜೀವನಕ್ಕೆ ತಕ್ಕಂತೆ ಕಲ್ಪಿಸಲ್ಪಟ್ಟಿರುತ್ತವೆ. ಗೃಹಸ್ಥ ಜೀವನವು ಹೇಗಿರಬೇಕೆಂಬುದು ಆಗಲೇ ನಿರ್ಮಾಣ ಮಾಡಲ್ಪಟ್ಟಿದೆ. ಅದು ಬೇಡವೆಂದರೂ ನಮಗೆ ತಪ್ಪುವ ಹಾಗಿಲ್ಲ. ಆದರೆ ನಮ್ಮ ಪ್ರಾಚೀನ ಜೀವನವು ಆದರ್ಶವು. ಭಾವನೆಗಳು ಇವುಗಳಿಗೆ ಸರಿಹೋಗತಕ್ಕ ಶಿಕ್ಷಣವು ಇಂದು ನಮ್ಮ ಮಹಿಳೆ

ಯುಂಗೆ ಬೇಕಾಗಿದೆ. ಕೆಲವರು ಶಿಕ್ಷಣದಿಂದ ಗೃಹಸ್ಥ ಜೀವನಕ್ಕೆ ಎಳ್ಳಷ್ಟೂ ಪ್ರಯೋಜನವಿಲ್ಲ. ಆದರೆ ಇದರಿಂದ ಪಾಶ್ಚಾತ್ಯರನ್ನು ಮೀರಿಸುವ ಸ್ಪರ್ಧೆ ಗಳಿಗೆ ಅನಕಾಶವು ಹೆಚ್ಚಾಗುತ್ತದೆ ಎಂದು ಹೇಳುತ್ತಾರೆ. ಆದರೆ ಶಿಕ್ಷಣದ ವ್ಯವಸ್ಥೆಯು ಸರಿಯಾಗಿ ಮಾಡಲ್ಪಟ್ಟರೆ ಅದರ ಸಹಾಯದಿಂದ ಮಹಿಳೆಯರು ದೇಹ, ದೇವ, ದೇಶ ಸೇವೆಗಳನ್ನು ಮಾಡಬಲ್ಲರೆಂಬು ದನ್ನು ನಾವು ಸಂದೇಹವಿಲ್ಲದೆ ಹೇಳಬಹುದು ಶಿಕ್ಷಣಕ್ಕೂ, ಜನ ಜೀವನಕ್ಕೂ, ಸಮೀಪ ಬಾಂಧವ್ಯವಿದೆ ಎಂದು ಹೇಳಬಹುದು. ಜೀವನ ದಲ್ಲಿ ಪುರುಷನಿಗೆ ಎಂತಹ ಸ್ಥಾನವಿದೆಯೋ, ಸ್ತ್ರೀಯರಿಗೂ ಅಂತಹ ಸ್ಥಾನವನ್ನು ಪಡೆದಿದ್ದಾರೆ. ಶಿಕ್ಷಣದಲ್ಲಿಯೂ ಹಾಗೆಯೇ. ವಿದ್ಯಾಪೀಠ ದಲ್ಲಿ ಪ್ರಥಮಸ್ಥಾನವನ್ನು ಸ್ತ್ರೀಯರಿಗಿತ್ತವರು ಹಿಂದೂಗಳೇ. ಲೀಲಾವತಿ, ಮೀರಾಬಾಯಿ, ಜೆಬುನ್ನಿಸಾ, ಸಂಚಿಯ ಹೊನ್ನಮ್ಮ, ಮಹಾದೇವಿ ಯಕ್ಕ, ಇಂದಿನ ತೋರದತ್ತ, ಮತ್ತು ಶ್ರೀಮತಿ ಸರೋಜನಿದೇವಿಯವರೇ ನಿದರ್ಶನರಾಗಿದ್ದಾರೆ. ಪಾಶ್ಚತ್ಯ ಶಿಕ್ಷಣವು ನಮ್ಮಲ್ಲಿ ಪ್ರಚಾರಕ್ಕೆ ಬಂದ ನಂತರವೇ ನಮ್ಮ ಸ್ತ್ರೀಯರಲ್ಲಿ ಶಿಕ್ಷಣವೂ ಸಾಹಿತ್ಯಾಭಿರುಚಿಯೂ ಉಂಟಾ ಯಿತೆಂದು ಅನೇಕರು ಈ ವಿಧವಾದ ತಪ್ಪು ತಿಳುವಳಿಕೆಯನ್ನಿಟ್ಟುಕೊಂ ಡಿದ್ದಾರೆ. ಬುದ್ಧದೇವನು ಅವತಾರ ಮಾಡಿದ ಕಾಲದಲ್ಲಿ ಪಾಶ್ಚಾತ್ಯರ ಜೀವನವು ಹುಟ್ಟಿತೆಂದು ಹೇಳಬಹುದು. ಆದರೆ ಅದಕ್ಕೆ ಮೊದಲೇ ಭಾರತದ ಜೀವನವು ಪೂರ್ಣತೆ ಯಾಗಿತ್ತೆನ್ನುವುದಕ್ಕೆ ಬೇಕಾದಷ್ಟು ಆಧಾ ರಗಳಿವೆ. ಅಶೋಕ ಮತ್ತು ಹರ್ಷವರ್ಧನ ಚಕ್ರವರ್ತಿಗಳ ಆಸ್ಥಾನ ಗಳಲ್ಲಿ ಕಲೆ ಸಾಹಿತ್ಯಗಳಲ್ಲಿ ನುರಿತ ವಿದುಷಿಯರನೇಕರಿದ್ದರು. ಈಜಿಪ್ ಗ್ರೀಕ್ ಜನರ ಸಂಬಂಧವು ಭಾರತೀಯರಿಗೆ ಆದ ನಂತರ ಭಾರತದ ಸಂಸ್ಕೃತ ಜೀವನವು ಗ್ರೀಕ್ ದೇಶಕ್ಕೂ ಗ್ರೀಕರ ಸಂಸ್ಕೃತಿಗಳು ಭಾರತಕ್ಕೂ ಬರತೊಡಗಿದುವು. ಉದಾಹರಣೆಗಾಗಿ ಮಿಹಿರಾಚಾರ್ಯನ ಪತ್ನಿಯಾದ ಖನಾ ಎಂಬ ಗ್ರೀಕ್ ದೇಶದ ಸ್ತ್ರೀಯು ಪಾಶ್ಚಾತ್ಯ ಮತ್ತು ಪೌರ್ವಾತ್ಯ ಜ್ಯೋತಿಷ್ಯ ಶಾಸ್ತ್ರದಲ್ಲಿ ಪಂಡಿತಳಾಗಿದ್ದು "ಖನಾ ವಾಕ್ಯ" ವೇ ಮೊದ ಲಾದ ಗ್ರಂಥಗಳನ್ನು ರಚಿಸಿ ಪ್ರಸಿದ್ಧಿಗೆ ಬಂದಳು ಅಲ್ಲದೆ ಇದಕ್ಕೂ ಮೊದಲೇ ಜೀವಿಸಿದ್ದ ಜಗದ್ವಿಖ್ಯಾತನಾದ ಆರ್ಯಭಟ್ಟನ ಮಗಳಾದ ಲೀಲಾವತಿಯು ಅಂಕಗಣಿತ, ರೇಖಾಗಣಿತ, ಬೀಜಗಣಿತ, ದಶಮಾಂಶ, ರೀತಿಯ ಗಣಿತ ಮುಂತಾದ ಗ್ರಂಥಗಳನ್ನು ರಚಿಸಿ ಪ್ರಸಿದ್ಧಳಾಗಿರುವಳು. ಮೇಲ್ಕಂಡ

ಉದಾಹರಣೆಗಳಿಂದ ಪುರಾತನ ಕಾಲದಲ್ಲಿ ಸ್ತ್ರೀ ಶಿಕ್ಷಣವು ಎಷ್ಟು ಅಭಿ ವೃದ್ಧಿಗೆ ಬಂದಿತ್ತೆಂದು ತಿಳಿದುಕೊಳ್ಳಬಹುದು.

ಇನ್ನು ಹಳ್ಳಿಗಳಲ್ಲಿ ಸ್ತ್ರೀ ಶಿಕ್ಷಣ ಸ್ಥಿತಿ ಗತಿಯೇನೆಂಬುದನ್ನು ಸ್ವಲ್ಪ ಮಟ್ಟಿಗೆ ತಿಳಿಯೋಣ. ಹಳ್ಳಿಗಳು ಎಷ್ಟು ಹಿಂದುಳಿದಿವೆ ಎಂಬುದನ್ನು ಹೇಳುವುದು ಆಗದ ಮಾತು. ಹಳ್ಳಿಯನ್ನು ಸುಧಾರಿಸಲಿಕ್ಕೆ ಏನು ಮಾಡಬೇಕು? ಯಾರ ಸ್ಥಿತಿ ಹೇಗಿದೆ? ಯಾರು ಏನು ಮಾಡಬೇಕು? ಎಂಬ ಸಂಗತಿಗಳನ್ನು ಕುರಿತು ವಿಚಾರಿಸಲೇ ಬೇಕು. ಹಳ್ಳಿಯಲ್ಲಿ ವಿದ್ಯೆಯ ರುಚಿಯು ಮೊದಲೇ ಕಡಿಮೆ. ಪ್ರೇಮದಿಂದ ಕಲಿಸುವವರು ೧೦೦ಕ್ಕೆ ಒಬ್ಬಿ ಬ್ಬರು. ಇದು ಗಂಡು ಹುಡುಗರ ಸ್ಥಿತಿಯಾಯಿತು. ಹೆಣ್ಣು ಮಕ್ಕ ಳನ್ನು ಹೇಳಲಸದಳ. ಹೆಣ್ಣುಮಕ್ಕಳು ಮೊದಲಿನ ಸ್ತ್ರೀಯರು ಇದ್ದಂತೆ ಇರಬೇಕು. ಅದರಲ್ಲಿ ಯಾವ ಅಂತರವು ಆಗಬಾರದು. ನೆಟ್ಟಗೆ ಇಲ್ಲ ವಾದರೆ ಹಾಗೆ ಹೀಗೆ ಎಂದು ಟೀಕು ಮಾಡುತ್ತಾರೆ. ಇದಕ್ಕೆ ಅವಿದ್ಯೆಯೇ ಕಾರಣವಲ್ಲವೇ? ೩-೪ ಸಾವಿರ ಜನಸಂಖ್ಯೆ ಇರುವ ಊರಿನಲ್ಲಿ ೩೦-೪೦ ಹೆಣ್ಣು ಹುಡುಗರು ಶಾಲೆಯಲ್ಲಿ ಇದ್ದರೆ ಬಹಳವಾಯಿತು. ತಾಯಿ ಗಾದರೋ, ಆರಂಭ ಬೇಕು. ಹುಡುಗರಿಗೆ ಕೆಲಸ ಕೊಟ್ಟು ತಾನು ವಿಶ್ರಾಂತಿ ಹೊಂದಬಯಸುವಳು. ಹೆಣ್ಣು ಮಕ್ಕಳಿಗೇಕೆ ವಿದ್ಯೆ? ಅವರಿ ಗಾಗಿ ಖರ್ಚನ್ನೇಕೆ ಮಾಡಬೇಕು? ಎಂದು ಯಾವಾಗಲೂ ವಾದ ಮಾಡುವರೇ ಬಹಳ. ಎಲ್ಲರೂ ಕಲಿಯುವದೆಂದರೆ ನೌಕರಿಗೆ ಹೋಗು ವದೆಂದು ತಿಳಿದುಕೊಂಡಿದ್ದಾರೆ. ಹೀಗಾಗಲಿಕ್ಕೆ ಈಗಿನ ಶಿಕ್ಷಣವೇ ಕಾರಣವಾಗಿರುವುದು. ಸ್ತ್ರೀ ಶಿಕ್ಷಣದ ಕೊರತೆಗಾಗಿ ಅವರಿಗೆ ಅನೇಕ ಸಂಕಟಗಳೇ ಬರುವುವು ಸಾಲೆಗೆ ಹೆಸರು ಹಚ್ಚಿದ್ದರೂ ಹುಡಿಗಿಯರನ್ನು ಮೇಲಿಂದ ಮೇಲೆ ಕೆಲಸಕ್ಕೆಂದು ತಾಯಿಯು ಮನೆಗೆ ಕರೆದುಕೊಂಡು ಹೋಗುವಳು. ಹೀಗಾಗಿ ಗೈರು ಹಾಜರಿ ಉಳಿದು ಕ್ಲಾಸಿನ ಗೂಡ ವಿಷಯಗಳೂ ಸಹ ಅವರಿಗೆ ತಿಳಿಯುವದಿಲ್ಲ. ಆದ್ದರಿಂದ ಒಟ್ಟಿನಲ್ಲಿ ಹೀಗಾಗಿ ಸ್ತ್ರೀ ಶಿಕ್ಷಣವು ಕ್ಷಯರೋಗದಿಂದ ಬಳಕಾಡುತ್ತಾ ತಿರುಗು ವುದು. ಇದಕ್ಕೆ ಒತ್ತಾಯು ಶಿಕ್ಷಣದ ಕಾಯ್ದೆಯು ಹೊರತು ಈ ರೋಗ ಹೋಗುವುದಿಲ್ಲ. ಸ್ತ್ರೀ ಶಿಕ್ಷಣದ ಹೊರತು ಯಾವ ದೇಶವೂ ಮುಂದೆ ಬಂದಿಲ್ಲ ಮುಂದೆ ಬರುವುದೂ ಇಲ್ಲ. ಭಾರತ ವರ್ಷದ ಧರ್ಮವು ಭಾರತ ಪುತ್ರರಿಂದಲ್ಲ, ಪುತ್ರಿಯರ ಪ್ರತಾಪದಿಂದಲೇ ಸ್ಥಿರ ವಾಗಿದೆ. ಆದ್ದರಿಂದ ಸ್ತ್ರೀಯರೇ ದೇಶದ ಆಧಾರ ಸ್ತಂಭಗಳು. ಸ್ತ್ರೀಯರೇ

ವೇಶವ ಸೂತ್ರವನ್ನು ಹಿಡಿಯತಕ್ಕವರು. ಸ್ತ್ರೀಯರೇ ದೇಶದ ಜೀವಾಳಗಳಾಗಿರುವರು. ಸ್ತ್ರೀಯೇ ಸಾಕ್ಷಾತ್ ದಯೆ, ಕ್ಷಮೆ, ಸ್ನೇಹಗಳ ಮೂರ್ತಿಮಂತ ದೇವಿಯಾಗಿದ್ದಾರೆ. ಆದ್ದರಿಂದ ಸ್ತ್ರೀಯರಿಗೆ ವಿದ್ಯೆಯು ಸ್ವಲ್ಪವಾಗಿದ್ದರೂ ಜ್ಞಾನಾರ್ಜನೆ, ಕುಶಲತೆ ಹೆಚ್ಚಾಗಿರಬೇಕು. ಜನಸೇವೆ ಮಾಡಬೇಕು. ವಿದ್ಯಾವತಿಯರಾಗಿ ನಾನು ವಿದ್ಯವಂತೆ ಎಂಬ ತೃಪ್ತಿಯಿಂದ ಸುಮ್ಮನೆ ಕುಳಿತರೆ ಪ್ರಯೋಜನವಿಲ್ಲ. ತನ್ನ ವಿದ್ಯೆಯಿಂದ ಜತೆಗಾರರಾದ ಅಘೋಗತಿಯಲ್ಲಿರುವ ಮಹಿಳೆಯರ ಗುಂಪನ್ನು ಮೇಲಕ್ಕೆತ್ತಲೂ ಪ್ರತಿಯೊಬ್ಬ ಮಹಿಳೆಯೂ ಪ್ರಯತ್ನಪಟ್ಟರೆ ಭರತಖಂಡವು ಮುಂದೆ ಬರುವುದರಲ್ಲಿ ಲೇಶ ಮಾತ್ರವೂ ಸಂಶಯವಿಲ್ಲ.

ಸ್ಥಾವರಲಿಂಗ ಮತ್ತು ಇಷ್ಟಲಿಂಗ.

(ಲೇಖಕ:— ಎಸ್. ಬಿ. ಮಸಳಿ.
ಹೆಡ್ ಮಾಸ್ತರ ಅಹೇರಿ, ತಾಲೂಕ ವಿಜಾಪುರ.)

ಎಲ್ಲರೂ, ಎಲ್ಲ ಜಾತಿಯವರೂ, ಎಲ್ಲ ಧರ್ಮದವರೂ, ಮೂರ್ತಿ ಪೂಜೆಯನ್ನು ಮಾಡುವದುಂಟು. ಆದರೆ ಮೂರ್ತಿಗಳಲ್ಲಿ ಅನೇಕ ಪ್ರಕಾರಗಳುಂಟು. ಅವುಗಳಲ್ಲಿ ಕೆಲವು ಮನುಷ್ಯನಂತೆ, ಕೆಲವು ಪಶುಗಳಂತೆ, ಕೆಲವು ಪಕ್ಷಿಗಳಂತೆ, ಕೆಲವು ಪೃಥ್ವಿ ಸೂರ್ಯ ಚಂದ್ರ ಆಕಾಶಗಳಂತೆ, ಮತ್ತೂ ಕೆಲವು ಕಾಡುಗಲ್ಲುಗಳಂತೆ ಹೀಗೆ ಅನೇಕ ಪ್ರಕಾರದಿಂದ ಈ ಜಗತ್ತಿನ ಜನರೆಲ್ಲ ಮೂರ್ತಿಗಳನ್ನು ಪೂಜಿಸುತ್ತ ಬಂದಿರುವರು. ಇದಲ್ಲದೆ ಮೂರ್ತಿಗಳನ್ನು ಕೆಲವರು ಬಂಗಾರದಿಂದ, ಕೆಲವರು ಬೆಳ್ಳಿಯಿಂದ, ಬೇರೆ ಕೆಲವರು ಕಲ್ಲಿನಿಂದ, ಮತ್ತೆ ಕೆಲವರು ಮಣ್ಣಿನಿಂದ, ಉಳಿದ ಕೆಲವರು ಕಟ್ಟಿಗೆಯಿಂದ, ಮತ್ತೂ ಕೆಲವರು ಹಿತ್ತಾಳೆ ತಾಮ್ರ ಮೊದಲಾದ ಧಾತುಗಳಿಂದ ಮಾಡಿಕೊಂಡು ಜಗುಲಿಯ ಮೇಲಾಗಲೀ

ಗುಡಿಯಲ್ಲಾಗಲೀ ಇಟ್ಟು ಪೂಜಿಸುವರು. ಇವೆಲ್ಲವು ಅವರವರ ವಿಚಾರ, ಅವರವರ ಬುದ್ಧಿ, ತರ್ಕಜ್ಞಾನಗಳ ಮೇಲಿಂದಲೇ ಹುಟ್ಟಿದಂಥವುಗಳು. ಇವೆಲ್ಲವುಗಳೂ ಅವರವರ ಮತದಂತೆ ಅವರವರಿಗೆ ಶ್ರೇಷ್ಠವೆನ್ನಬೇಕಾಗಿದೆ.

ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳಿ ಮೊದಲಾದ ಬೆಲೆಯುಳ್ಳ ಧಾತುಗಳಿಂದ ಮೂರ್ತಿಗಳನ್ನು ಮಾಡಿದರೆ ಕೊಟ್ಟಿಗಿಲ್ಲದಾಗ ಮಾರಿ ತಿನ್ನುವ ವಿಚಾರವೇ ಬರಬಹುದು. ತುಡುಗರು ಅವುಗಳನ್ನು ಎತ್ತಬಹುದು. ಹೀಗಾಗಿ ಭಕ್ತಿಯು ಕೆಡುವದು. ಯಾವಾಗಲೂ ಅವುಗಳ ಜೋಪಾನದ ಚಿಂತೆಯಾಗುವದು. ದೇವರ ಮೂರ್ತಿ ಎಂಬ ಭಾವನೆಯಳಿದು ಜಗುಲಿಯ ಮೇಲಿಡುವ ವಸ್ತು ಒಡವೆಗಳೆಂಬ ಭಾವವು ಬರುವದು. ಅದಕ್ಕಾಗಿಯೇ ಮಹಾತ್ಮನಾದ ಬಸವಣ್ಣನವರು "ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ, ಮುರುಟುವ ದೈವವ ನೆಂತು ಸರಿ ಎಂಬೆನಯ್ಯಾ? ಅವಸರ ಬಂದರೆ ಮಾರುವ ದೈವವನೆಂತು ಸರಿ ಎಂಬೆನಯ್ಯಾ? ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿ ಎಂಬೆನಯ್ಯಾ? ಸಹಜ ಭಾವ ನಿರ್ಜೈಕ್ಯ ಕೂಡಲಸಂಗಮದೇವನೊಬ್ಬನೇ ದೇವ" "ಮಾರಿಕಪ್ಪೆಯನೆಂತು ಕೊರಳಲ್ಲಿ ಕಟ್ಟಿಕೊಂಬರು? ಸಾಲ ಬಟ್ಟರೆ ಮಾರಿಕೊಂಡು ತಿಂಬರು. ಸಾಲ ಬಟ್ಟರೆ ಒತ್ತೆಯ ನಿಟ್ಟು ಕೊಂಬರಯ್ಯಾ. ಮಾರು ಹೋಗ, ಒತ್ತೆ ಹೋಗ ನಮ್ಮ ಕೂಡಲಸಂಗಮದೇವ" ಈ ಪ್ರಕಾರ ಒಳ್ಳೇ ಸರಸಾಗಿ ಹಾಡಿದ್ದಾರೆ. ಇದರ ಮೇಲಿಂದ ಮೂರ್ತಿಗಳನ್ನು ಏತರಿಂದ ಮಾಡಬೇಕೆಂಬದು ಹೊಳೆಯುವದು. ಆದರೆ ಮೂರ್ತಿ ಬೇಡೆಂದು ಅವನು ಹೇಳೇ ಇಲ್ಲ. ಮೂರ್ತಿಗಳು ಕಲ್ಲಿನಿಂದ ಮಾಡಿದರೆ ಬಹಳೇ ಒಳ್ಳೇದಲ್ಲವೇ? ನೀರು ಹಾಕಿದರೆ ನೆನೆದು ಒಡೆಯುವದಿಲ್ಲ, ಕೊಳೆಯುವದಿಲ್ಲ, ಕೆಡುವದಿಲ್ಲ. ಕಟ್ಟಿಗೆಯ ಮೂರ್ತಿಗಳು ತೀವ್ರ ಕೆಡುವವು. ಅಲ್ಲದೆ ನೀರು ಹಾಕಿದರೆ ನೆನೆಯುವವು, ಹುಳ ಹತ್ತುವವು, ಕೊಳೆಯುವವು. ಇದರ ಮೇಲಿಂದ ಕಲ್ಲಿನ ಮೂರ್ತಿಗಳು ಒಳ್ಳೇ ಸುರಕ್ಷಿತವೆಂದು ಗೊತ್ತಾಗುವದು. ಇವುಗಳಿಗೆ ಯಾರದೂ ಯಾವ ತರದ್ದೂ ಅಂಜಿಕೆಯಿಲ್ಲ.

ಸಿಕ್ಕ ಸಿಕ್ಕ ಆಕೃತಿಯ ಮೂರ್ತಿಗಳನ್ನು ಮಾಡುವದುಂಟು. ಅವುಗಳೂ ಕೂಡ ಸರಿಯೋರುವದಿಲ್ಲ. ಮನುಷ್ಯನ ಆಕೃತಿಯನ್ನು ಮಾಡಿ

ದ್ದಾದರೆ ಕೈಕಾಲು ಮೊದಲಾದ ಅವಯವಗಳು ಮುರಿದು ಛಿನ್ನವಾ
ಗುವ ಅಂಜಿಕೆ ಬಹಳೇ ಇರುವದು. ದೇವರ ಮೂರ್ತಿಗಳು ಮುರಿ
ಯಬಾರದೆಂದು ನಾವು ಎಚ್ಚರು ಪಡಬೇಕಾಗುವದು. ಮುರಿದರೆ ಸೆಟ್ಟಿಗೆ
ಮಾಡಿಸಬೇಕು. ಆಗದಿದ್ದರೆ ಹೊಸದನ್ನೇ ಸ್ಥಾಪಿಸಬೇಕು. ಹೀಗಾಗಿ
ಭಕ್ತಿ ಮಾಡಲಿಕ್ಕೆ ಅವೂ ಸರಿಯಾದ ಸಾಧನೆಯೆಂದು ತೋರುವದಿಲ್ಲ.
ಮೇಲಿಂದಮೇಲೆ ಹೊಸ ಮೂರ್ತಿಗಳನ್ನು ಇಡುವದರಿಂದ ಮೊದಲಿನ
ಮೂರ್ತಿಯು ಪತ್ತಿತೆಂಬ ಸಹ ಕಲ್ಪನೆ ಬರುವದು. ಹೊಸದರ ಮೇಲೆ
ಅಷ್ಟೊಂದು ಭಕ್ತಿ ಕೂಡ್ರಲಿಕ್ಕಿಲ್ಲ. ಹೀಗಾಗಿ ಪೂಜೆ ಧ್ಯಾನಗಳಲ್ಲಿ ಕೊರ
ತೆಯಾಗುವದು ಸಹಜ. ಕಾರಣ ಮನುಷ್ಯನ ಆಕೃತಿ, ಪಶುಪಕ್ಷಿಗಳ
ಆಕೃತಿಯು ಮೂರ್ತಿಗಳು ಸುರಕ್ಷತೆಗೆ ಯೋಗ್ಯ ಕಾಣುವದಿಲ್ಲ. ಇದೂ
ಅಲ್ಲದೆ ಮನುಷ್ಯ, ಪಶು, ಪಕ್ಷಿ ಮೊದಲಾದವುಗಳ ಶಕ್ತಿ ಬುದ್ಧಿ ಯೋಗ್ಯ
ತೆಗಳು ನಮಗೆ ತಿಳಿದವುಗಳಾಗಿರುವವು. ಪಶು ಪಕ್ಷಿಯಾಕೃತಿಯ
ಮೂರ್ತಿಗಳನ್ನು ಪೂಜಿಸಿದರೆ ದೇವರಲ್ಲಿ ಸರ್ವಜ್ಞತ್ವ, ಸರ್ವಶಕ್ತಿತ್ವ,
ಸರ್ವವ್ಯಾಪಕತ್ವ, ಸಚ್ಚಿದಾನಂದತ್ವ, ಸರ್ವಾಂತರ್ಯಾಮಿತ್ವ ಮೊದಲಾದ
ವುಗಳು ಮನಸ್ಸಿನಲ್ಲಿ ಬರುವದಿಲ್ಲ. ಯಾಕಂದರೆ ಪಶುಪಕ್ಷಿಗಳನ್ನು
ನಾವು ನಿತ್ಯ ನೋಡುತ್ತೇವೆ. ಅವುಗಳ ಶಕ್ತಿಯು ನಮಗೆ ಗೊತ್ತು.
ಅದಕಾರಣ ಮೇಲಿನ ಆ ಗುಣಗಳು ಇವುಗಳಲ್ಲಿ ಬರುವದಿಲ್ಲ. ಇವು
ಗಳು ಬರದಿದ್ದರೆ ಭಕ್ತಿಗೆ ಪೂರ್ಣತ್ವ ಬರುವದಿಲ್ಲ. ಅದೇ ಪ್ರಕಾರ
ಮನುಷ್ಯನ ಸ್ಥಿತಿಯಾದರೂ ಉಂಟು. ಇವನಲ್ಲಿಯೂ ಆ ಮೇಲಿನ
ಗುಣಗಳನ್ನು ಕಲ್ಪಿಸಲಿಕ್ಕೆ ಬರುವದಿಲ್ಲ. ಯಾಕಂದರೆ ಇವನು ಅಲ್ಪಜ್ಞ,
ಅಲ್ಪ ಶಕ್ತ, ಅಲ್ಪ ವ್ಯಾಪಕನಾಗಿರುವನು. ಆ ಗುಣಗಳು ಅವನಲ್ಲಿಯೂ
ಕಲ್ಪಿಸಲಾಗುವದಿಲ್ಲ. ಕಲ್ಪಿಸಿದರೂ ಅದು ತಪ್ಪಾಗುವದು. ಆದಕಾರಣ
ಮನುಷ್ಯ, ಪಶು, ಪಕ್ಷಿಗಳ ಆಕೃತಿಯ ಮೂರ್ತಿಗಳು ಕ್ಷೇಮಕರವಲ್ಲ,
ಭಕ್ತಿ ಮಾಡಲು ಯೋಗ್ಯವೂ ಅಲ್ಲೆಂದು ತಿಳಿಯುತ್ತದೆ.

ಕೆಲವು ಮೂರ್ತಿಗಳು ಪೂಜೆಗೆ ಹಿತಕಾರಿಯಲ್ಲೆಂದು ಮೇಲೆ ವಿಶ
ದವಾಗಿ ಹೇಳಿದ್ದಾಯಿತು. ಇನ್ನು ಸ್ಥಾವರಲಿಂಗ ಇಷ್ಟಲಿಂಗಗಳೆರಡು
ಮಾತ್ರ ಉಳಿದಿವೆ. ಇವುಗಳಲ್ಲಿ ಯಾವದು ಒಳಿತೆಂಬುದನ್ನು ವಿಚಾರ
ಮಾಡುವದು ಅತ್ಯವಶ್ಯಕವಾಗಿದೆ. ಲಿಂಗತತ್ವವು ಸ್ವಾಭಾವಿಕವಾದ
ಭೂಮಿ ಸೂರ್ಯ ಚಂದ್ರ ಮೊದಲಾದ ದುಂಡಗಿನ, ಶಕ್ತಿಯುಳ್ಳ ಪದಾ

ರ್ಥಗಳ ಮೇಲಿಂದ ಹುಟ್ಟಿದ ಹಾಗೆ ತೋರುತ್ತದೆ. ಸ್ಥಾವರಲಿಂಗವು
ಬಹು ಪೂರ್ವ ಕಾಲದ್ದು. ಮೊದಲು ಇಂದ್ರ, ವರುಣ, ಸೂರ್ಯ,
ವಾಯು, ಚಂದ್ರ, ಭೂಮಿ ಮೊದಲಾದ ಸಾಧನೆಗಳ ಪೂಜೆಯು ಹೆಚ್ಚಾ
ಗಿತ್ತು. ಮುಂದೆ ಬರಬರುತ್ತ ಈ ಸ್ಥಾವರಗಳನ್ನು ಮೇಲಿನ ತತ್ವ
ದಂತೆ ಕಲ್ಪಿಸಿ ದೇವರೆಂದು ಪೂಜಿಸಹತ್ತಿದರು. ಭೂಮಿಯೇ ಈ ಸ್ಥಾವ
ರಲಿಂಗದ ಉತ್ಪತ್ತಿಗೆ ಕಾರಣವಾದದ್ದು. ದೊಡ್ಡ ದೊಡ್ಡ ಭವ್ಯವಾದ
ಸುಂದರವಾದ ಮಂದಿರಗಳನ್ನು ಕಟ್ಟಿಸಿ ಈ ಲಿಂಗಗಳನ್ನು ಸ್ಥಾಪಿಸಿದರು.
ಆಗ ಅವುಗಳ ಪೂಜೆಗೆ ಜನರು ಮುಗಿ ಬೀಳಹತ್ತಿದರು. ಅದಕ್ಕಾಗಿ
ಪೂಜಾರಿಗಳನ್ನು ನಿಯಮಿಸಿದರು. ಉತ್ಪನ್ನ ಹೆಚ್ಚಿಗಿ ಬೆಳೆಯಿತು.
ಭಕ್ತಿಯನ್ನು ಮಾರುವ ಅಂಗಡಿಗಳಂತೆ ಈ ಗುಡಿಗಳು ಆದವು. ದೇವರಿಗೆ
ನೈವೇದ್ಯ ಪೂಜೆ, ಧೂಪ, ದೀಪ, ತೆಂಗುಗಳನ್ನು ಅರ್ಪಿಸಬೇಕಾದರೆ
ಕೆಲವು ದರ (*Charges*) ಗಳನ್ನು ಇಟ್ಟರು. ಪೂಜಾರಿಗಳು ಲಾಭ
ಪಡೆಯಹತ್ತಿ ಲಕ್ಷಾಧೀಶರಾಗಹತ್ತಿದರು. ಜನರು ಅವರ ಪಾದದ ಮೇಲೆ
ಸಾಮು ಧೋಮು ಉದ್ದಕೆ ಬೀಳಹತ್ತಿದರು. ದೇವರಿಗಿಂತ ಪೂಜಾರಿಯು
ಬಲವೇ ಬಲವಾಯಿತು. ಯಾವದನ್ನಾದರೂ ದೇವರಿಗರ್ಪಿಸಬೇಕಾ
ದರೆ ಅವನ ತೃಪ್ತಿಯನ್ನು ಮೊದಲು ಮಾಡಿಯೇ ಮುಂದಿನ ಕಾರ್ಯ.
ಅವರಿಗೆ ರಾಜರಿಗಿಂತಲೂ ಮಹತ್ವ ಬಂದಿತು. ಅವರ ಮೆರವಣಿಗೆ
ಹೆಚ್ಚಾಯಿತು. ಇದಕ್ಕಾಗಿ ಸರಕಾರದವರು ಆಯಾ ಗುಡಿಗಳ ಉತ್ಪ
ನ್ನದ ಮೇಲೆ ಕರ (*Taxes*) ಗಳನ್ನೂ ಸಹ ಕೂಡ್ರಿಸಿ ಲಾಭ
ಪಡೆಯುವರು. ಸಿಂದೀ ಕಟ್ಟಿಗಳನ್ನು ಮುಕ್ತ ಕೊಡುವಂತೆ ಕೆಲವು ಗುಡಿ
ಗಳನ್ನು ಮುಕ್ತೆ ಕರಾರಿನಿಂದ ಮತ್ತೊಬ್ಬರಿಗೆ ಸಹ ಕೊಟ್ಟು ಲಾಭ ಪಡೆ
ಯುವರು. ಇದೊಂದು ವ್ಯಾವಾರದ ಕಂಪನಿಯೇ ಆಗಿ ಬಿಟ್ಟಿದೆ.
ಭಕ್ತಿ ಜ್ಞಾನಗಳ ಲೇಶವೂ ಈ ಸ್ಥಾವರ ದೇವಸ್ಥಾನಗಳಲ್ಲಿ ಉಳಿದಿ
ಲ್ಲೆಂದರೂ ಅಡ್ಡಿಇಲ್ಲ. ದೇವರೂ, ಗುಡಿಗಳೂ ಸಹ ಪಾರತಂತ್ರ್ಯದು
ರಿಯೊಳು ಸುಡುತ್ತಲಿವೆ. ಅವುಗಳನ್ನು ಬಲವಾದ ಕೀಲಿಗಳಲ್ಲೇ ಇಡ
ಹತ್ತಿದರು. ಇದರ ಮೇಲಿಂದ ದೇವರುಗಳಿಗೂ ಸೆರೆಮನೆಯ ವಾಸ
ವಾಯಿತೆಂದೆನಿಸುವದು. ಯಾವದಕ್ಕೂ ಯಾರಿಗೂ ರೊಕ್ಕವಿಲ್ಲದೆ ಒಳಗೆ
ಬಿಡರು. ದೇವರ ಹತ್ತಿರ ಒಂದು ನಿಮಿಷ ಸಹ ಹೆಚ್ಚಿಗೆ ನಿಲ್ಲಗೊ
ಡುವದಿಲ್ಲ ಕತ್ತನ್ನು ಹಿಡಿದು ಒತ್ತಿಬಿಡುವರು. ಜಾತ್ರೆ ಕೇತ್ರೆಗಳನ್ನೂ
ಮಾಡಿಸಹತ್ತಿದರು. ಪೂಜಾರಿಗಳು ಉತ್ಪನ್ನಿಗಾಗಿ ೩-೪ ಜಾತ್ರೆಗ

ಳನ್ನು ಒಂದೊಂದು ವೇವರಿಗೆ ಒಂದೇ ವರ್ಷದಲ್ಲಿ ಮಾಡಿಸಹತ್ತಿದರು. ಹೀಗಾಗಿ ಗುಡಿಗಳು ಭಕ್ತಿಯ ಸ್ಥಾನವೆನ್ನುವದು ಲೋಪವಾಗಿ ಸಂತೆ ಬಜಾರಗಳಂತೆ ಪರಿಣಮಿಸಿ ಹೋಗಿರುವವು. ಇವರಿಂದ ಮತ್ತಷ್ಟು ಅನಾಚಾರಗಳಾದವು. ರೋಗದ ಬೀಜಗಳು ಇವುಗಳಿಂದಲೂ ಹುಟ್ಟಿ ಜನರನ್ನು ಕೊಲೆ ಮಾಡಹತ್ತಿದವು. ಇಂಥ ಸ್ಥಾವರ ದೇವರುಗಳಿಂದ ಜನರಿಗೆ ಯಾವ ಉಪಯೋಗವಿವೆ ಎಂಬುದನ್ನು ಯಾರಾದರೂ ಹೇಳ ಬಲ್ಲಿರಾ? ಗುಡಿಗಳಲ್ಲಿ ಲೊಕ್ಕ, ನೈವೇದ್ಯ, ಸೊದಲಾದವುಗಳ ಸಲುವಾಗಿ ಯಾವಾಗಲೂ ಬಡಿದಾಟಗಳೇ ಇರುವವು. ಈ ಗುಡಿಗಳಿಂದ ಅನಾಚಾರ, ರೋಗದ ಬೀಜ, ಜಗಳ, ಸಂತೆ, ದುಶ್ಚಟ, ದುಂದುಗಾರಿಕೆ ಮೊದಲಾದವುಗಳನ್ನೇ ಜನರು ತೆಗೆದುಕೊಳ್ಳಹತ್ತಿದರು. ದೇವರ ಉದ್ದೇಶವು ಭಕ್ತಿ ಜ್ಞಾನಗಳ ಸಲುವಾಗಿಯಲ್ಲವೇ? ಅದೆಲ್ಲ ಇವುಗಳಲ್ಲಿ ಸಿಗುವ ಶಕ್ಯವಿದೆಯೆ? ಹೀಗಿದೆ ಈ ಸ್ಥಾವರಗಳ ಗತಿ! ಪೂಜೆ ಧ್ಯಾನಗಳು ಮನಸ್ಸಿನ ಏಕಾಗ್ರತೆಗಾಗಿ, ಮನಸ್ಸಿನ ನಿರ್ಮಲತೆಗಾಗಿಯೇ ಇರುವವು. ಇದು ಮಾತ್ರ ಈ ಸ್ಥಾವರಗಳಲ್ಲಿ ಎಂದೂ ಸಿಗುವದಿಲ್ಲ. ಮತ್ತು ಈ ಸ್ಥಾವರಲಿಂಗ ತತ್ವವು ಕಷ್ಟೊಂದು ಪೂರ್ವಾವಸ್ಥೆಗೆ ಬಂದೂ ಇಲ್ಲ.

ಇದಕ್ಕಾಗಿಯೇ ಬಸವಮಹಾನುಭಾವಿಯು ಇಷ್ಟಲಿಂಗದ ತತ್ವವನ್ನು ಸಮರ್ಥಿಸಿದ್ದಾನೆ. ಎರಡೂ ಲಿಂಗಗಳೂ ಆಕಾರದಲ್ಲಿ ಒಂದೇ ಇವೆ. ಆದರೆ ಇಷ್ಟಲಿಂಗದಲ್ಲಿ ಹೆಚ್ಚಿನ ತತ್ವಗಳು ಸಮಾವೇಶವಾಗಿವೆ. ಪೃಥ್ವಿಗೆ ಆಕಾಶವೇ ಹೊದಿಕೆಯಾಗಿರುವಂತೆ ಲಿಂಗಕ್ಕೆ ಕಂತೆಯನ್ನು ಕೂಡ್ರಿಸಿದ್ದಾರೆ. ಆಕಾಶದ ಬಣ್ಣ ಕರೇಮಸಕು ಕಾಣುವಂತೆ ಲಿಂಗದ ಬಣ್ಣವೂ ಕರೇದು ಇದೆ. ಕರೇಬಣ್ಣಗಳು ನೋಡಲಿಕ್ಕೆ ಒಹಳೇ ಹಿತವಾದವುಗಳು. ನೋಡಲು ಬೇಸರವೂ ಆಗುವದಿಲ್ಲ. ಏಕಾಂತದಲ್ಲಿ ಪದ್ಮಾಸನ ಹಾಕಿಕೊಂಡು ಸೂರ್ಯಚಂದ್ರರೆಂಬ ಕಣ್ಣುಗಳ ದೃಷ್ಟಿಯನ್ನು ಏಕೀಕರಿಸಿ ಮುಂದಿನ ಇಷ್ಟಲಿಂಗದ ಮೇಲೆ ಆ ನೋಟವನ್ನು ಹಾಕಿ ನೋಡುತ್ತ ಸಚ್ಚಿದಾನಂದನಾದ ಪರಮಾತ್ಮನ ಧ್ಯಾನವನ್ನು ಮಾಡಲು ಬಹು ಅನುಕೂಲವು. ಆದರೆ ಇಷ್ಟಲಿಂಗವು ಸಾಕ್ಷಾತ್ ದೇವರಲ್ಲ. ಅದು ನಮ್ಮ ಆತ್ಮಲಿಂಗದ ಕುರುಹು ಮಾತ್ರ. ಆತ್ಮಲಿಂಗದ ಧ್ಯಾನ ಮಾಡಲಿಕ್ಕೆ ಬರಲಾರದ್ದಕ್ಕಾಗಿ ಈ ಇಷ್ಟಲಿಂಗವನ್ನು ಕಲ್ಪಿಸಿದ್ದಾಗಿದೆ. ಬರೇ ನೀರುಹಾಕಿ ತೊಳೆದು ವಿಭೂತಿ ಹಚ್ಚಿ, ಅದರ ತುಂಬ ಪತ್ರಿಗಳನ್ನು ಏರಿಸಿ ರುದ್ರಾಕ್ಷಿ

ಮಾಲೆಗಳನ್ನು ಹಾಕಿ ಕಣ್ಣುಮುಚ್ಚಿ ಶಿವ! ಶಿವ!! ಎಂದು ಗುಣುಗುಟ್ಟುವದು ಇಷ್ಟಲಿಂಗ ಪೂಜೆಯ ಉದ್ದೇಶವಲ್ಲ. ಕುರುಡನಿಗೆ ಕೋಲು ಯಾವಪ್ರಕಾರ ನಡೆಯಲಿಕ್ಕೆ ಒಂದು ಸಾಧನವಾಗಿರುವದೋ ಅದೇ ಪ್ರಕಾರ ಆತ್ಮಲಿಂಗವ ಕಡೆಗೆ ಹೋಗಲು ನಮಗೆ ಈ ಲಿಂಗವು ನಿಜವಾದ ಸಾಧನವೇ ಹೊರತು ಬೇರೆ ಇಲ್ಲ. ನಮ್ಮ ಆತ್ಮಲಿಂಗವು ಹೃದಯಸ್ಥಾನದಲ್ಲಿದ್ದು ಈ ಪ್ರಕಾರ ವ್ಯಾಪ್ತವಾಗಿದೆ ಎಂದು ತಿಳಿಸುವ ಕುರುಹು ಇದಾಗಿದ. ಆದರೆ ಇದೇ ಆತ್ಮಲಿಂಗವಲ್ಲ.

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಎಂದು ಆರುಚಕ್ರಗಳು ಈ ನಮ್ಮ ಬೆನ್ನ ಹುರಿಯಲ್ಲಿ ಇವೆ. ಅವುಗಳಲ್ಲಿ ನಾಗರಹಾವಿನಂತೆ ಒಂದು ನಾಡಿಯಿದೆ. ಅದು ನಿದ್ರಹೋಗಿದೆ. ಅದನ್ನು ಎಚ್ಚರಿಸಿದರೆ ನಮಗೆ ನಿಜವಾದ ಜ್ಞಾನವಾಗುತ್ತದೆ. ಅದಕ್ಕಾಗಿ ನಾವು ಪದ್ಮಾಸನವನ್ನು ಹಾಕಿಕೊಂಡು ಕರಿಯ ವಸ್ತುಗಳನ್ನು ಮೇಲೆ ಹೇಳಿದ ಪ್ರಕಾರ ನೋಡುತ್ತ ಏಕಾಗ್ರತೆಯಿಂದ ಕುಳಿತರೆ ಆ ಸುಷುಮ್ನಾ ನಾಡಿಯು ಎಚ್ಚತ್ತು ತಲೆಯಲ್ಲಿ ಇರುವ ಬ್ರಹ್ಮರಂಧ್ರದಲ್ಲಿ ಸೇರಹತ್ತಲು ಕೋಟಿ ಸೂರ್ಯರು ಉದಿಸಿದಷ್ಟು ಪ್ರಕಾಶ ಬೀಳುವದಂತೆ. ಆವಾಗ್ಗೆ ಆದ ಆನಂದ ಸುಖಗಳಿಗೆ ಪಾರಾವಾರ ಅಂತಗಳೇ ಇರುವದಿಲ್ಲ ವಂತೆ ಪ್ರತಿಯೊಬ್ಬನು ಪಡೆಯಬೇಕೆನ್ನುವ ಹಿರಿದಾದ ಸುಖವೆಂದರೆ ಇದೇ. ಅಂತೆಯೇ ಇದಕ್ಕೇ ಕೆಲವರು ಅರಿವು ಎನ್ನುವರು. ಕೆಲವರು ಅನುಭವವೆನ್ನುವರು. ಕೆಲವರು ಆತ್ಮಜ್ಞಾನವೆನ್ನುವರು. ಕೆಲವರು ಶಿವ-ಜೀವೈಕ್ಯವೆನ್ನುವರು. ಕೆಲವರು ಜೀವಾತ್ಮ-ಪರಮಾತ್ಮರ ಸಂಯೋಗವೆನ್ನುವರು. ಮೋಕ್ಷವೆನ್ನುವರು. ಆದರೆ ಇವೆಲ್ಲವುಗಳೂ ಒಂದೇ. ಅಷ್ಟೇ ಸುಖಗಳನ್ನು ಕೊಡುವಂಥವುಗಳು. ಶಬ್ದಗಳೇ ಬೇರೆಯಲ್ಲದೆ ಮತ್ತೇನೂ ಇಲ್ಲ. ಇದೇ ಇಷ್ಟಲಿಂಗದಿಂದ ಸ್ಥಾಪಿಸಲ್ಪಡುವ ಉಚ್ಚಧ್ಯೇಯವು.

ಏಕಾಂತ ವಾಸವು ಪ್ರತಿಯೊಬ್ಬನಿಗೆ ಅವಶ್ಯವು. ಇಷ್ಟಲಿಂಗ ಪೂಜೆಯಿಂದ ಏಕಾಂತ ವಾಸವು ಲಭಿಸುವದು. ತಾನು ಹೋದಲ್ಲಿ ಈ ಲಿಂಗವನ್ನು ತೆಗೆದುಕೊಂಡು ಹೋಗಿ ನಿತ್ಯ ಸಾಧನೆಗಳನ್ನು ಮಾಡಲು ಬರುವದು. ಇದರಿಂದ ನೇಮವು ಕೆಡುವದಿಲ್ಲ. ಕೆಲ ಪರದೇಶೀಯರು ಸುಣ್ಣಾದ ಗೋಡೆಯ ಮೇಲೆ ಕರೇ ಬಣ್ಣದಿಂದ ದುಂಡಗಿನ ಗುರ್ತನ್ನು ಮಾಡಿ ಪದ್ಮಾಸನ ಹಾಕಿಕೊಂಡು ನೋಡುತ್ತ ಕೂಡ್ರುವರಂತೆ. ಆದರೆ ಹೋದಲ್ಲಿ

ಬಂದಲ್ಲಿ ಸುಣ್ಣದ ಗೋಡೆ ಕರೀ ಗುರ್ತುಗಳೆಲ್ಲಿ ಬರಬೇಕು? ಅವ ಹೋದಲ್ಲಿ ಬಂದಲ್ಲಿ ಇಷ್ಟ ಲಿಂಗವನ್ನು ಧರಿಸಿ ಮೇಲೆ ಹೇಳಿದಂತೆ ಧ್ಯಾನಾದಿಗಳನ್ನು ಮಾಡಲಿಕ್ಕೆ ಬರುವದಲ್ಲವೇ? ಅದಿರಲಿ. ಆವರೆ ನಮ್ಮ ವೀರಶೈವರ ಇಷ್ಟಲಿಂಗದ ತತ್ವ ವಿಷಯವು ಬಹಳ ಉದಾತ್ತವಾದುದೂ, ಉಚ್ಚವಾದುದೂ, ಯೋಗ್ಯವಾದುದೂ, ಸುಲಭವಾದುದೂ, ಗೊಂದಲ-ಜಗಳಗಳಿಲ್ಲದೂ, ಮನಸ್ಸನ್ನು ನಿರ್ಮಲಗೊಳಿಸುವಂಥದೂ, ಯಾವ ಅನಾಚಾರ ದುಷ್ಟಟಗಳಿಗೆ ಅಸ್ಪದಕೊಡಲಾರದಂಥದೂ, ಭಕ್ತಿ-ಜ್ಞಾನಗಳ ಸಮನ್ವಯವನ್ನು ಮಾಡುವಂಥದೂ ಆಗಿದೆಂಬುದು ನಿಃಸಂದೇಹವಾದಮ್ಮ.

ಆದರೆ ಈಗಿಗ ನಮ್ಮವರು ಇದರ ಅರ್ಥ ತಿಳಿಯದಕ್ಕಾಗಿ ಸಿಕ್ಕಂತೆ ತೊಳಲಾಡುವರು. ಕೆಲವರು ಈ ಇಷ್ಟಲಿಂಗ ಹೋದರೆ ಜೀವವು ಈ ಶರೀರ ಬಿಡುವದೆಂದು ಅನೇಕ ಪೌರಾಣಿಕ ಕಥೆಗಳನ್ನು ಹೇಳುವರು. ಅಪ್ಪಿ ತಪ್ಪಿ ಈ ಲಿಂಗವು ಕಳೆದರೆ, ಇಲ್ಲವೆ ನಾಶವಾದರೆ ತೀರಿಹೋಯಿತು. ಕೆಲವರು ಉಪವಾಸ ಕೂಡ್ರುವರು. ಕೆಲವರು ಪ್ರಾಣಗಳನ್ನು ಕಳಕೊಳ್ಳಲಿಕ್ಕಾ ಯತ್ನಿಸುವರು. ಹೀಗೆ ಮಾಡುವದರಿಂದ ಆತ್ಮಲಿಂಗದ ಹತ್ಯಮಾಡಿದಂತಾಗುವದಿಲ್ಲವೇ? ನಾವು ಕಟ್ಟಿಕೊಂಡ ಲಿಂಗ ಕಳೆದರೆ ಮತ್ತೊಂದನ್ನು ಕಟ್ಟಿಕೊಂಡು ಸಾಧನೆಗಳನ್ನು ಮಾಡಬೇಕೆಂಬ ವಿಚಾರವೂ ಕೂಡ ಕೆಲವರ ತಲೆಯಲ್ಲಿ ಬರಬಾರದೆಂದರೆ ಇದೆಂಥ ಹೆಡ್ಡತನ? ವಿಚಾರಿಸಿರಿ. ಕುರುಡನ ಕೈಯಲ್ಲಿರುವ ಕೋಲು ಮುರಿದರೆ ಅವನು ಸತ್ತೇ ಬಿಡುವನೇ? ಇದರಂತೆ ಇಂಥವರ ವಿಚಾರವಿರುವದು. ಅವನು ಕೋಲು ಮುರಿದರೆ ಹೊಸದೊಂದು ಕೋಲನ್ನು ತೆಗೆದುಕೊಂಡು ತನ್ನ ಕಾರ್ಯವನ್ನು ಮಾಡುವದಿಲ್ಲವೇ? ಅದರಂತೆ ಅಪ್ಪಿ ತಪ್ಪಿ ಲಿಂಗನಾಶವಾದರೆ ಬೇರೊಂದು ಲಿಂಗವನ್ನು ಪಡೆದು ಸಾಧನೆಯನ್ನು ಮಾಡಿ ಈ ಶ್ರೇಷ್ಠ ಜನ್ಮದ ಸಾರ್ಥಕವನ್ನು ಮಾಡಿಕೊಳ್ಳದೆ ಸಾಯುವದೆಂದರೆ ಎಂಥ ಅಜ್ಞತನವು ವಿಚಾರಿಸಿರಿ?

"ಶ್ರೀಗುರುಲಿಂಗದೇವನು ತನ್ನ (೧) ಕರಸ್ಥಲದಲ್ಲಿ ಮಹಾಲಿಂಗವನೆನ್ನ ಕರಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ (೨) ಮನಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಮನಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ (೩) ಭಾವಸ್ಥಲದಲ್ಲಿ ಮೂರ್ತಿ

ಗೊಳಿಸಿದ. ಎನ್ನ ಭಾವಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ (೪) ಜ್ಞಾನಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಜ್ಞಾನಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ (೫) ಸರ್ವಾಂಗದೊಳ ಹೊರಗೆ ತೆರಹಿಲ್ಲದಳವಡಿಸಿದ ನಮ್ಮ ಶ್ರೀಗುರು ಲಿಂಗದೇವ ಚನ್ನಮಲ್ಲಿಕಾರ್ಜುನಾ" ಎಂದು ಶಿವಶರಣೆಯಾದ ಮಹಾದೇವಿಯಕ್ಕನು ಲಿಂಗಗಳಲ್ಲಿ ಪ್ರಕಾರಗಳನ್ನು ಹೇಳಿದ್ದಾಳೆ. ಒಂದು ಲಿಂಗದಿಂದ ಮತ್ತೊಂದು ಲಿಂಗಕ್ಕೆ ಏರುವ ಗತಿಯನ್ನು ತಿಳಿಸಿದ್ದಾಳೆ. (೧) ಇಷ್ಟಲಿಂಗ (೨) ಪ್ರಾಣಲಿಂಗ, (೩) ಭಾವಲಿಂಗ, (೪) ಆತ್ಮಲಿಂಗ, (೫) ಪರಮಾತ್ಮಲಿಂಗಗಳೆಂದು ಅನುಕ್ರಮವಾಗಿ ವಚನದಲ್ಲಿಯ ಲಿಂಗಗಳಾಗುವವು. ಹೊರಗೆ ಕಟ್ಟಿಕೊಳ್ಳುವದೇ ಇಷ್ಟಲಿಂಗ, ಇದರ ಸಹಾಯದಿಂದಲೇ ಪ್ರಾಣಲಿಂಗ, ಪ್ರಾಣಲಿಂಗದಿಂದಲೇ ಭಾವಲಿಂಗ, ಭಾವಲಿಂಗದಿಂದಲೇ ಆತ್ಮಲಿಂಗ, ಆತ್ಮಲಿಂಗದಿಂದಲೇ ಪರಮಾತ್ಮಲಿಂಗಕ್ಕೆ ಏರುತ್ತೇರುತ್ತ ಹೋಗುವದಾಗಿದೆ. ಪರಮಾತ್ಮಲಿಂಗಕ್ಕೆ ಹೋಗುವದೆಂದರೆ ಶಿವನೊಡನೆ ಐಕ್ಯನಾಗುವದೇ ಆಗಿದೆ. ಅದಕ್ಕೆ ಮೋಕ್ಷವೆಂದೆನ್ನುವರು. ಹೀಗದೆ ವೀರಶೈವರ ಲಿಂಗಾಂಗ ಸಾಮರಸ್ಯವು! ಬಹು ಸೂಕ್ಷ್ಮವಾಗಿ ಒಳ್ಳೇ ಸ್ವಾರಸ್ಯವಾಗಿ ಮಹಾದೇವಿಯಕ್ಕನವರು ಬಣ್ಣಿಸಿದ್ದಾರೆ. ಲಿಂಗ ಶಬ್ದವು ಒಳ್ಳೇ ವ್ಯಾಪಕವಾದದ್ದಾಗಿದೆ. ಅದು ಇಡೀ ಬ್ರಹ್ಮಾಂಡವನ್ನೇ ಸುತ್ತಿ ಬಿಟ್ಟಿದೆ ಅದಕ್ಕಾಗಿ ಲಿಂಗದ ಮಹತ್ವವು ವೀರಶೈವರಿಗೆ ಬಹಳೇ ಇದೆ. ಈ ಇಷ್ಟಲಿಂಗದಿಂದ ಎಲ್ಲಿಯವರೆಗೆ ಏರಲು ಬರುವದೆಂಬದು ತಿಳಿಯುವಂತೆ ಇದೆ.

ಸಾರಾಂಶವೇನೆಂದರೆ, ಮೂರ್ತಿಗಳು ಆವಶ್ಯಕ. ಆದರೆ ಎಲ್ಲ ಮೂರ್ತಿಗಳಲ್ಲಿ ಇಷ್ಟಲಿಂಗದ ಮೂರ್ತಿಯು ಉದಾತ್ತ ತತ್ವದ್ದೂ, ಉಚ್ಚ ಧ್ಯೇಯದ್ದೂ ಸುಲಭವಾದದ್ದೂ ಯೋಗ್ಯವಾದದ್ದೂ, ಕ್ಷೇಮಕರವಾದದ್ದೂ, ದುರಾಚಾರ ದುಷ್ಟಟಗಳಿಂದ ದೂರವಾದದ್ದೂ, ಸ್ವತಂತ್ರವಾದದ್ದೂ, ಏಕಾಂತವಾಸವನ್ನು ಲಭಿಸಿ ಕೊಡುವಂಥದ್ದೂ, ಮನಸ್ಸಿನ ಏಕಾಗ್ರತೆಗೆ ಅಸ್ಪದವಾದದ್ದೂ ಈ ಎಲ್ಲ ಗುಣಗಳುಳ್ಳದ್ದೂ ಇದೆ. ಅಂದ ಮೇಲೆ ಸ್ಥಾವರಲಿಂಗಕ್ಕಿಂತಲೂ ಇಷ್ಟ ಲಿಂಗದ ವಿಚಾರಗಳು ಮೇಲಿನವೆಂದು ಏಕೆ ಹೇಳಬಾರದು?)

ರಾಘವಾಂಕನ ಪಾತ್ರಸೃಷ್ಟಿ.

(ವೇ. ಮೂ. ಎಂ. ಶರಭಯ್ಯ ಕನ್ನಡ ಪಂಡಿತ ಬೋರ್ಡ್ ಹೈಸ್ಕೂಲು.
ಮು. ಎಮ್ಮಿಗನೂರು ಜಿ। ಬಳ್ಳಾರಿ)

ಹಿಂದಿನಿಂದ ಸಾಗಿ ಮುಗಿದುದು.

ಹರಿಶ್ಚಂದ್ರನು ಮೃಗಯಾ ಪ್ರಸಂಗದಿಂದ ಗುರು ವಸಿಷ್ಠರಾಶ್ರಮಕ್ಕೆ ಬಂದಾಗ,

ತಿಳಿಗೊಳನಬಳಸಿ ನಳನಳಿಸಿ ಬೆಳೆವೆಳಪಾವು।
ಗಳತಳದ ಮಲ್ಲಿಕಾಮುಂಟಪದ ತಣ್ಣೆಳಲ।
ತಿಳುಗಾಳಿಯೊಳು ಪುಣ್ಯವಪ್ಪ ಪುಳಿನಸ್ಥಳದ ಮೇಲಶೋಕೆಯ ತರುವಿನ॥
ತಳದ ಪೊಂಗಲ ಗದ್ದುಗೆಯೊಳ್ಕೋಲಗಂಗೊಟ್ಟ
ಬಳಸಿಬಂದೆಡಬಲದೊಳಿಪ್ಪ ಮುನಿಗಳ ಕೂಡೆ
ನಲವಿನಿಂ ನುಡಿವ ಪಶುಪತಿಯಂತಿರ್ದ ಮುನಿನಾಥ ಕಣ್ಗೆಸೆದಿರ್ದನು॥

ಕಂಡಕಂಡ ಕಡೆ ಹರಡಿದ ಪ್ರಕೃತಿಯ ಸಹಜ ಸೌಂದರ್ಯವನ್ನು ಸೂರೆಗೊಂಡು ಕ್ರಮವಾಗಿ ಸೇರಿಸಿ ವಾಚಕರ ಮನಸ್ಸನ್ನು ಪುಣ್ಯಮಪ್ಪ ಆರಣ್ಯದ ತಣ್ಣನ ವಾತಾವರಣದಲ್ಲಿ ಸಂಚಾರ ಮಾಡಿಸಿ ಪಶುಪತಿಯಂತಿರ್ದ ಮುನಿನಾಥನನ್ನು ನೋಡಿಸಿದ ರಾಘವಾಂಕನ ಪ್ರತಿಭೆಯನ್ನು ಕೊಂಡಾಡತಕ್ಕದ್ದು.

ನೀತಿ ಬಲಿದುದೊ ಶಾಂತಿ ರೂಪಾಯ್ತೊ ಸದ್ಗುಣ।
ವ್ರಾತವೇ ಮುನಿಯಾಯ್ತೊ ಮುಕ್ತಿ ಜಡಿವೊತ್ತುದೋ।
ಭೂತದಯೆ ವಲ್ಕಲಾಂಚವಾಂತುದೋ ಪುಣ್ಯವೆಳಸಿಭಸಿತವಸಿಟ್ಟುದೋ॥
ನೂತನಶ್ರುತ್ಯರ್ಥನುಡಿಗಲಿತುದೋ ಘನ।
ಸ್ವಾತಂತ್ರವೃತ್ತಿ ಗೋಚರಿಸಿತೋ ಎಂಬ।
ಜಾತುರ್ಯದಿಂದಿರ್ದ ಮುನಿನಾಥನಂ ಕಂಡ ಹರುಷದಿಂ!ಭೂನಾಥನು॥

ರಾಘವಾಂಕನ ಪುಣ್ಯ ಮೂರ್ತಿ ವಸಿಷ್ಠನ ಭಾವಚಿತ್ರವಿದು. ನಾವು ಹುಡುಕಲೆಳಸುವ ಸಮಸ್ತ ಸದ್ಗುಣಗಳಿಗೆ ಗನಿ ಈ ಬ್ರಹ್ಮರ್ಷಿ. ಇನ್ನು

ಅವನನ್ನು ವರ್ಣನೆಗೊಳಪಡಿಸುವುದೆಂದರೆ ಆಕಾಶದ ಹೂವಿಗೆ ಕೈ ನೀಡಿದಂತೆ.

ಹರಿಶ್ಚಂದ್ರನು ನುತಿಸಲು ಪ್ರಸನ್ನಾತನು.

ವ—ನೀನೆತ್ತಲ್! ಈ ವಿಪಿನವೆತ್ತಲ್! ಈ ವನಕೆ ನೀನೇನು ಕಾರಣ ಬಂದೆ ಮಗನೆ! ಹೇಳ್.

ಹ—ಖಗವೃಗದ ಕಾಟಕ್ಕವನೀಜನಂ ಸೈರಿಸಲಾರದೆ ಪೊರೆಯಿಡೆ ಕೇಳ್ದ ಬೇಂಟೆಯ ಸುಮ್ಮಾನಕ್ಕೆ ಬಂದೆನ್.

ತ್ರಿಕಾಲೋಚಿತ ಜ್ಞಾನಿಯು, ಕೌಶಿಕನು ಕಾಡಲಿಕ್ಕಾರಂಭಮಾಡಿದುದನ್ನೂ ಅರಸನಿಗೆ ಮುಂದೆ ಬರಲಿರುವ ಕೇಡುಗಳನ್ನೂ ಧ್ಯಾನದಿಂದ ತಿಳಿದು ಚಿಂತಿಸಿ.

ವ—ಮಗನೆ! ಎನ್ನನೊಲುವಡೆ, ಕುಲಾಚಾರಮುಂ ಬಿಡದಿರ್ಪಡುನ್ನತಿಕೆ ಬೇಹಡೆ, ಉತ್ತಮ ಕೀರ್ತಿ ಕೆಡದಿಹಡೆ, ನನ್ನಿ ಉಳಿವಡೆ ವಿಶ್ವಾಮಿತ್ರನಾಶ್ರಮಕ್ಕೆ ಮರೆದು ಪೋಗದಿರು. ಗನ್ನದಿಂ ಮರಹಿಕ್ಕಿ ಕೊಂಡೊಯ್ದು ಬಳಿಕ ಮುನಿ ಬನ್ನಬಡಿಸಿಯೆ ಕಾಡಿದಪನ್. ಅರಿದಿರ್.

ಉಪದೇಶವು ಬಹು ಸಂಗ್ರಹವಾಗಿದೆ. ಅದರಲ್ಲಿ ಉಪದೇಶದ ಸಾರವೆಲ್ಲಾಯಿದೆ. ಹರಿಶ್ಚಂದ್ರನಂತಿರಲಿ ಸಾಮಾನ್ಯನೀತಿಜ್ಞರಿಗೂ ಇದಕ್ಕೂ ಹೆಚ್ಚು ಬೇಡ. 'ವಿಶ್ವಾಮಿತ್ರನಾಶ್ರಮಕ್ಕೆ ಮರೆದಾದೊಡಂ ಪೋಗದಿರು' ಕಟ್ಟಪ್ಪಣೆ. 'ಮರೆದು' ಇದರಲ್ಲಿ ತಿರುಳಿದೆ. ಸ್ವಾರಸ್ಯವಿದೆ. ವಿಷಯ ಸಂಗ್ರಹವಿದೆ. ಗುರುವಿನ ಕಟ್ಟಪ್ಪಣೆಯ, ಗುರುವಿನ ಅವ್ಯಾಜ ಪ್ರೇಮದ, ಮುಂದುಂಟಾಗುವ ವಿಪತ್ತಿನ ಘೋರ ಪರಿಣಾಮದ, ವಿಶ್ವಾಮಿತ್ರನ ಕಠಿಣ ಸ್ವಭಾವದ ಸೂಚನೆಯು 'ಮರೆದು' ಎಂಬುದರಲ್ಲಡಗಿದೆ. ಶಿಷ್ಯರಹಿತ ಚಿಂತನೆಯೇ ಗುರುಗಳಾನವರ ಮುಖ್ಯ ಕರ್ತವ್ಯವೆಂದು ವಸಿಷ್ಠರು ತಮ್ಮ ವರದ ವಾಣಿಯಿಂದ ಈಗಿನ ಶಿಷ್ಯವಿತ್ತಾಪಹಾರಕರಾದ ಗುರುವರ್ಗದವರಿಗೆ, (ಶಿಷ್ಯವಿತ್ತಾಪಹಾರಕ ಗುರುಗಳಿರುವಂತೆ ಗುರುಸ್ವತ್ತಾಪಹಾರಕ ಶಿಷ್ಯರಿಗೆ ಈ ಜಗತ್ತಿನಲ್ಲಿ ವಿಶಾಲವಾದ ಸ್ಥಳವಿದೆ.) ಕೂಗಿ ಹೇಳುವಂತಿದೆ. ಅವರ ದಿವ್ಯೋಪದೇಶವಾಕ್ಯ. ವಸಿಷ್ಠರು ಹರಿಶ್ಚಂದ್ರನ ಮುದಲಲ್ಲಿ ಶ್ರೀಪಂಪಾಂಬಿಕಾಪತಿಯ ದರ್ಶನದ ಪುಣ್ಯವನ್ನು ಪಾಕಿ ಶಿಷ್ಯನನ್ನು ಕಳಿಸುವರು.

ಚಂದ್ರಮತಿ—ಕಥಾನಾಯಿಕೆ. ಚಕ್ರವರ್ತಿನಿ. ದೇವೀಪಟ್ಟಕ್ಕೇರಿದ ಮಹಾಪತಿವ್ರತೆ. ಕ್ಷತ್ರಿಯ ರಮಣಿಗೆ ಯೋಗ್ಯವಾದ ಧೈರ್ಯ ಸಾಹಸಗಳುಳ್ಳವಳೆನ್ನುವುದಕ್ಕೆ ತಕ್ಕಷ್ಟು ಉದಾಹರಣೆಗಳನ್ನು ಈ ಕಾವ್ಯದಲ್ಲಿ ಕಣ್ಣಾಣಬಹುದು.

ವರರೂಪಿನೊಳು ರತಿಗೆ ಹೊಣಕೆ ಸೌಭಾಗ್ಯದೊಳು। ಸಿರಿಗೆ ಹೊಯ್ಕೈ ಜಾಣಿನೊಳು ವಾಣಿಗೆಕ್ಕೆ ಸ। ಚ್ಚರಿತದೊಳು ಸುರನದಿಗೆ ಸಾಮ್ಯ ಪತಿಭಕ್ತಿಯೊಳರುಂಧತಿಗೆ ಸರಿ ಜಸದೊಳು॥ ಪರಮ ರೋಹಿಣಿಗೆ ಹೆಗಲೆಣೆ ಪುಣದೊಳ್ ಸ್ವಧಾ। ತರುಣಿಗೋರಗೆ ಪಂಥ್ಯತೆಯೊಳುಗಾಯತ್ರಿಗೂರೆ। ದೊರೆಯೆನಿಸಿ ಮೆರೆವಳು ಹರಿಶ್ಚಂದ್ರನೃಪನರಸಿ ಭೂತಳದೊಳು॥

ಈ ವರ್ಣನೆಯಲ್ಲಿ ಸತ್ಯವಿದೆ. ಸೌಂದರ್ಯವಿದೆ. ಕೇಶಪಾಶಹೀಗಿತ್ತು ಮುಖಹಾಗಿತ್ತು ಎಂದು ಒಂದೊಂದೇ ಅಂಗೋಪಾಂಗಗಳನ್ನ ವಿಸ್ತಾರವಾಗಿ ವರ್ಣಿಸುವುದಕ್ಕಿಂತ ಹೀಗೆ ವರ್ಣಿಸುವುದರಲ್ಲಿ ರೂಪಗುಣ ಸಂಪತ್ತಿ, ಸಹಜ ಸೌಂದರ್ಯ, ಕವಿಯ ಸಂಗ್ರಾಹಕ ಶಕ್ತಿ, ವರ್ಣಿತ ವ್ಯಕ್ತಿಯ ಸತ್ಯಪರಿಚಯ, ವಾಚಕರ ಮನಸ್ಸಿನ ಮೇಲೆ ಪ್ರತಿಬಿಂಬಿಸುತ್ತವೆ.

ವಿಶ್ವಾಮಿತ್ರನ ವನದಲ್ಲಿ ಹರಿಶ್ಚಂದ್ರನು ಹೆಂಡತಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿ ಭೀಕರ ಕನಸು ಕಂಡು ಬೆದರಿ ಎದ್ದ ಗಂಡನನ್ನು ಕಂಡು ಚಂದ್ರಮತಿಯು,—

'ಧುರದೊಳಂ ಭೂಭುಜರನಂಜಿಸುವ ನಡುಗಿಸುವಿ। ಕೊರಗಿಸುವ ಕೋಡಿಸುವ ಬಳುಕಿಸುವ ಜಳಕಿಸುವ। ಬಿರುದಂಕಮಲ್ಲ ನೀನಡುಗಲೇ ತಕ್ಕೆ ಹೇಳ್....” ಎಂದು ಮೆಲ್ಲನೆ ನುಡಿವಳಂತೆ.— ಬಿರುದಂಕಮಲ್ಲನಾದ ಗಂಡನು ಕನಸಿಗೆ ಹೆದರಿದನೆಂದರೆ ತನ್ನ ಗೌರವಕ್ಕೆ ಕಡಿಮೆಯೆಂದು ಅವಳ ಅಭಿಪ್ರಾಯ. ಪತಿಯು ಲೋಕೋತ್ತರ ಗುಣವುಳ್ಳವನಾಗಿ ಕುಂದದ ಉಜ್ವಲ ಕಾಂತಿಯಿಂದ, ಸಾಹಸದಿಂದ ಮೆರೆಯಬೇಕೆಂಬೇ ಆ ವೀರನಾರೀ ರತ್ನದ ಆಶೆ. ಯುದ್ಧವೀರರ ಹೃದಯಗಳು ಉಬ್ಬಿ ಮುಂದಿನ ಕದನದ ರೌದ್ರ ಪರಿಣಾಮವನ್ನು ಸಡ್ಡಿಮಾಡದಿರಬೇಕಾದರೆ ಭೇರಿಪಟಹಾದಿಗಳ ಶಬ್ದ, ಭಟ್ಟಂಗಿಗಳ ಉತ್ಸಾಹವಾಕ್ಯ ಕೆಲವುಮಟ್ಟಿಗಾದರೂ ಸಹಾಯಕಾರಿಗಳಾಗುವವೆಂದಲ್ಲಿ 'ಬಿರುದಂಕಮಲ್ಲ' 'ನೀನಡುಗುವರೆ ಹೇಳ್' ಮುಂತಾದ ಪ್ರಿಯ ವೀರಪತ್ನಿಯ ವೀರಾಲಾಪನ ಮಾತಿನಿಂದ ಭಯಗೊಂಡ ಹರಿಶ್ಚಂದ್ರನ ಹೃದಯದಲ್ಲಿ ದುಶ್ಯಕುನದ

ಭಯವು ಸ್ವಲ್ಪವಾದರೂ ಕಡಿಮೆಯಾಗಲಿಕ್ಕೆ ಸಾಕು. 'ಬಿರುದಂಕಮಲ್ಲ' 'ಮೆಲ್ಲನೆ' ಇವು ಅರ್ಥಪುಷ್ಟಿಯುಳ್ಳ ಮಂಜುಳ ಶಬ್ದಗಳು. ಒಂದರಲ್ಲಿ ಹರಿಶ್ಚಂದ್ರನ ಅಗ್ಗಳಿಕೆಗೆ ಚಕ್ರವರ್ತಿತ್ವದ ಸೂಚನೆ; ಮತ್ತೊಂದರಲ್ಲಿ ಚಂದ್ರಮತಿಯ ಪತಿಭಕ್ತಿ ಶೀಲವೂ ಸ್ತ್ರೀಯರ ಮೃದುತ್ವ, ವಿಧೇಯತೆ, ಸೌಜನ್ಯ ಮುಂತಾದ ಸುಗುಣಗಳೂ ಬೋಧೆಯಾಗುತ್ತವೆ.

ಮತ್ತು—'ಬಗೆವೊಡೀ ಕನಸು ಗುರುವಾಜ್ಞೆಯುಂ ಮೀರಿತ। ಕ್ಕೊಗೆ ವಕೀಡಿಂಗೆ ಸೂಚನೆ ಮುನಿಯ ಬೇಡ ಮುಂ। ತ್ರಿಗೆ ಮಗಂಗೆನಗೆ ರಾಜ್ಯಕ್ಕೆ ಚತುರಂಗ ಸೇನೆಗೆ ಸಕಲ ಭಂಡಾರಕೆ। ನಗರಕ್ಕೆ ಸರ್ವ ಪರಿವಾರಕ್ಕೆ ತೇಜ ದೇ। ಳ್ಗೆಗೆ ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ। ಮಿಗೆ ಸತ್ಯಮುಂ ಬಿಟ್ಟು ಕೆಡದಿರವನೀಶ ಕೈಮುಗಿದು ಬೇಡಿದೆನೆಂದಳು”॥ ಚಂದ್ರಮತಿಯನ್ನು ಕೈಹಿಡಿದ ಅರಸನೇ (ಹರಿಶ್ಚಂದ್ರನೇ) ಭಾಗ್ಯಶಾಲಿ.

ಅರಣ್ಯದಲ್ಲಿ ವಿಶ್ವಾಮಿತ್ರನ ಮಾಯೆಯ ಜೆಂಕಿಯು ಎಲ್ಲರನ್ನು ಸುಡಬರುತ್ತಿರಲು—

“ಮುಳಿದು ಮೊಗೆದೆಲ್ಲರಂ ಕೊಲ್ಲದಿಂದೆನ್ನನೊ। ಬ್ಬನೆ ಕೊಂದ ಪುದೆ ಭೂಭುಜ ನಿಮ್ಮ ಕೂಡೆ ಸ। ಯೊಳು ಜೀವಮುಂ ಬಿಡುವುದುಚಿತ ವಲ್ಲಂ ಬಳಿಕ ಬಿಡುವುದತ್ಯಧಮತನವು॥ ಎಳೆ ಮುತ್ತೈದತನದಲಿ ಮುಂದೆ ಹೋದಪೆಂ। ಕಳಿಸಿಕೊಡಬೇಕೆಂದು ಮೈಯಿಕ್ಕಿ ಬೇಡಿಕೊಂಡಳು ಗಂಡನಂ ಚಂದ್ರಮತಿ ಪತಿವ್ರತೆಯರಾನಂದನಿಧಿ ಲಲ್ಲಿಗಱಿದು”॥ 'ಪತಿವ್ರತೆಯರಾನಂದನಿಧಿ'—ಚಂದ್ರಮತಿಗೆ ಒಪ್ಪುವ ಹೆಸರು. ಜೆಂಕಿಯಲ್ಲಿ ಹಾರಿಕೊಳ್ಳುವ ಮೊದಲು ದಿಕ್ಕೆಗಳಿಗೆ ದೈವಕ್ಕೆ ಕೈಮುಗಿವಳು. 'ಹರಿಶ್ಚಂದ್ರನೇ ಗಂಡನಾಗಲಿ; ಲೋಹಿತಾಶ್ವನೇ ಮಗನಾಗಲಿ; ನಮ್ಮಿಕೆಯ ಪಾಲಿಸುವ ವಿಶ್ವಾಮಿತ್ರ ನಿತ್ಯಗಲಿ' ಎಂದು ಮನಸ್ಸಿನ ಸಂಕಲ್ಪ. ಆಕೆಯ ಪವಿತ್ರ ಹೃದಯದಿಂದೊರೆದೆ ಚಿವ್ವಿದ ಮಹಾ ಸಂಕಲ್ಪಕ್ಕೆ ಬೆಲೆ ಕಟ್ಟಲು ಸಾಧ್ಯವೇ? ಗಂಡ ಮಕ್ಕಳೆಂದರೆ ಮಧ್ಯಮ ವರ್ಗದ ಸ್ತ್ರೀಯರಲ್ಲಿ ತಕ್ಕಷ್ಟು ಪ್ರೇಮ ವಾತ್ಸಲ್ಯಗಳಿರುತ್ತವೆ. ಉತ್ತಮ ವರ್ಗದವರಲ್ಲಿ ಇದಕ್ಕಿಂತ ಉತ್ಕೃಷ್ಟ. ಪತಿವ್ರತೆಯರಲ್ಲಿ ಅತ್ಯುತ್ಕೃಷ್ಟವಾದ ಪ್ರೇಮ ವಾತ್ಸಲ್ಯಗಳಿರುವವೆಂದು ಯಾರು ಹೇಳಬೇಕಾದುದೇ ಅನವಸರ. ಒಂದು ಪಾತಿನಿಂದ ಚಂದ್ರಮತಿಯು ಪತಿವ್ರತೆಯರಿಗಿಂತ ಮಿಗಿಲಾಗಿ 'ದೇವಿ' ಪದವಿ ಪಡೆಯುತ್ತಾಳೆ. ಆ ಮಾತು 'ನಮ್ಮಿಕೆಯ ಪಾಲಿಸುವ ವಿಶ್ವಾಮಿತ್ರ

ನಿತ್ಯನಾಗಲಿ' ಎಂಬುದು. ಇದು ದೇವಿ ಬಾಯಿಂದ ಬಂದ ಕೂಡಲೆ, ವಾಚಕರು ಸಾನಂದಾಶ್ಚರ್ಯಗಳಿಂದ ವೈಮನಿತಂತಾಗಿ 'ಅಮ್ಮಾ ನಿ ನಿದ್ದ ನಾಡು ಪುಣ್ಯದ ಬೀಡು' ಎಂದು ಉದ್ಗಾರ ಮಾಡಲು ಹಿಂಜ ಗೆಯುವರೇನು?

ಯಾರೇ ಆಗಲಿ ಬಾಯಿಯಿಂದ ಬೇಕಾದಷ್ಟು ವೇದಾಂತವನ್ನು ಹೇಳಬಹುದು. ಉಪದೇಶ ಮಾಡಬಹುದು. ತಾವು ನುಡಿದಂತೆ ನಡೆಸಿ ತೋರಿಸುವುದು ಅತ್ಯಂತ ಕಠಿಣ. ಉತ್ತಮ ನಡೆತೆಯಿಲ್ಲದ ಬಾಯಿ ಬ್ರಹ್ಮಿಗಳು ವಿದ್ವೇಷದಿಂದ ಅಧಃಪತನ ಹೊಂದುವರು. ಮಹಾ ರಾಜ್ಞಿಯಲ್ಲಿ ಪವಿತ್ರ ನುಡಿ, ಅವಕ್ಕೆ ತಕ್ಕ ನಡೆಗಳು ಅನ್ಯೋನ್ಯ ಮೈತ್ರಿಭಾವ ದಿಂದ ರಂಜಿಸುತ್ತವೆಂಬುವನ್ನು ಮುಂದಿನ ಪದ್ಯದಲ್ಲಿ ನೋಡಬಹುದು.

"ಪೊಡವೀಶ ಕೇಳುಭಯ ಕುಲಶುದ್ಧೆಯಲ್ಲದಿ। ರ್ದಡೆ, ನಿನ್ನ ನ್ನ ವನ್ಯರನು ಲಕ್ಷಿಸಿದೆನಾ। ದಡೆ, ಹಿಂದೆ ನಿನಗೊಂದ ನಿಕ್ಕಿ ನಾನೊಂದ ನುಂಡಡೆ ಮೂರುಕರಣವರಿಯೆ ॥ ಮೃಡನಲ್ಲದನ್ಯ ದೈವಕ್ಕೆ ನಮಿಸಿದ ಡೆನ್ನ। ಹೊಡೆದು ಮುಕ್ಕುವುದು ದಾವಾಗ್ನಿಸೋಣಲ್ಲದಿ। ರ್ದಡೆ ಬಟ್ಟೆಗೊಟ್ಟಿ ಪುದು ಕೇಳೆಂದು ಬೊಬ್ಬೆಗೊಡುವಾ ಪೊತ್ತನೇ ವೊಗಳ್ದೆನು ॥ ತರುಣಿಯ ಮನಂ ಬೆದರಬೇಕೆಂದು ನೆನೆದುದ। ಳ್ಳುರಿಗಗನಮಂ ತೀವಿ ಸುತ್ರಿಮು ತ್ತಿರೆ ಕಂಡು। ಹರಿದು ಹೊಕ್ಕಳು ಹೊಕ್ಕಳೆಲೆಲೆ ಶಿವಶಿವ ಮಹಾದೇವ ಒಗೆಯದೆ ಹೊಕ್ಕಡೆ ॥ ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂ ತಾಯ್ತು। ನೆರೆದ ಕೌಶಿಕನ ಕೃತಕಾಗ್ನಿ ಹರಿದೋಡಿಭಾ। ಪುರೆ ಬಟ್ಟೆ ಗೊಟ್ಟಿದು...."

(ತರುಣಸೂರ್ಯನು ಕತ್ತಲೆಯನ್ನು ಹೊಗುವುದಸಂಭವ. ಆದರೆ ಹೊಗುವುದು ನಿಜವಾದರೆ ಕತ್ತಲೆಯು ಹೇಳ ಹೆಸರಿಲ್ಲದಂತಾಗಬಹುದು ಇದು ನಿಶ್ಚಯವಲ್ಲವೆ?) ಬೆಂಕಿಯು ನಂದಿತು. ಸುರರು ಹೂ ಮಳೆ ಗರೆದುದರಿಂದ ಭೂಮಿ ತಂಪಾಯ್ತಂತೆ. ಆಗಲೆ ಬೆಂಕಿಯ ಬೇಗೆ ಯಿಂದ ಬೆಂಪ ಸೆಲವು ತಂಪಿಡಿಯಬೇಕಾದರೆ ಅದಿಷ್ಟು ಹೂ ಮಳೆ ಯನ್ನು ಕರೆದಿರಬೇಕು? ಚಂದ್ರಮತಿಯ ಪಾತಿವ್ರತ್ಯಕ್ಕೆ ಬೆರಗಾದ ಮಹಾನಂದದಿಂದ ದೊಡ್ಡ ಅರಳ ಮಳೆ ಸುರಿಸಿರಬಹುದಲ್ಲವೆ ಸುಮನ ಸರು? ಮುಖ್ಯವಾಗಿ ಸುರರ ಪೆಚ್ಚುಗೆಗೆ ಪಾತ್ರಳಾಗುವಷ್ಟು 'ಚಂದ್ರ ಮತಿ ಉತ್ತಮ ಪತಿವ್ರತೆ' ಎಂಬುದು ಅತಿಶಯೋಕ್ತಿಯಲ್ಲದ ಮಾತು.

ವಿಶ್ವಾಮಿತ್ರನ ಸಾಲ ಹರಿಸುವುದರಲ್ಲಿ ಅರಸನು ದಿಙ್ಮೂಢನಾಗಿರಲು —

'ಸಾಲದಲಿ ಪೋದನಿತು ಪೋಗಲಿಮ್ಮಿಬ್ಬರಂ ಮಾರಿ ಬಳಿಕುಳಿದುದಂ ಕಾಣು ನಡೆನಡೆ' ಎಂದು ಧೈರ್ಯಗೊಟ್ಟು ಗಂಡನ ಜೆನ್ನು ಚಪ್ಪರಿಸುವಳು. 'ಮರುಳಿ ಸರ್ವಕ್ಕೆ ಮೊದಲು ಸತಿಸುತರು ತನ್ನೊಡಲು ಕಡೆ; ಸತ್ಯಕ್ಕೆ, ನೇಮಕ್ಕೆ ಬಂಧನಕ್ಕೆ ಲಜ್ಜೆಗೆಡಬೆಮ್ಮ ಮಾರು ಮತ್ತಿದುದಾಗಲಿ' ಎಂದು ಉಪದೇಶ ಮಾಡುವಳು. ಚಂದ್ರಮುಖಿಯಲ್ಲಿ ವೀರಧೈರ್ಯ, ಧರ್ಮಪರಿಜ್ಞಾನ, ನಿಶ್ಚಲಬುದ್ಧಿ, ಸಮುಯೋಚಿತ ಚಾತುರ್ಯಗಳಿಗೆ ಕೊರತೆಯಿಲ್ಲ.

ಏಪ್ರನು ರಾಣಿಯನ್ನು ಕೊಳ್ಳುವನು. ಪರಿಪರಿಯ ಕಷ್ಟಗಳನ್ನೊಡ್ಡಿದರೂ ರಾಣಿಯು ಮನಪೆರಡಿಲ್ಲದೆ ಮೇಲೆ ಬಿದ್ದ ಕಾರ್ಯವನ್ನು ಮಾಡಿ ಮುಗಿಸುವಳು. ರಾಣಿಯಾಗಿದ್ದು ದಾಸಿಯ ಸ್ಥಿತಿಗಿಳಿದರೂ ವಿಶ್ವಾಮಿತ್ರನ ಕಾಟತಪ್ಪುವುದಿಲ್ಲ. ಮೆಲ್ಲನೆ ಮಗನ ದುಃಖವನ್ನು ತಂದೊಡ್ಡುವನು.

ಮಗನು ಅಡವಿಗೆ ಹೋಗಿಬಾರದಿರಲು ಚಕ್ರವರ್ತಿನಿಯು — ಮಗನು ಬರಲಿಲ್ಲವೆಂದು ಸುಯ್ಯುವಳು. ಒರಲುವಳು. ಬಸಿರೊಸರು ಕೊಳ್ವಳು. ಹೊರಗೆ ಬಂದು ನೋಡುವಳು. ಮನೆಯೊಡತಿಗೆಂಜಿ ಒಳಗೆ ಸುಳಿವಳು. ಕವಿಯನ್ನುತ್ತಾನೆಃ — ಅವಳ ದುಃಖವು 'ಸೀಗೆಯೊಳಗಣ ಬಾಳಿಗೆಣೆಯಾಯಿತಂತೆ. ಕತ್ತಲೆಯಾದಂತೆಲ್ಲಾ ಅರಸಿಯ ಹೃದಯದಲ್ಲಿ ಶೋಕಾಗ್ನಿ ಪ್ರಜ್ವಲಿಸುವುದು. ಆ ಕತ್ತಲೆಯಲ್ಲಿ ಬರವವರು ಹೋಗುವವರು; ಮಾತಾಡುವವರೆಲ್ಲರೂ ಲೋಹಿತಾಶ್ವರಾಗಿ ಮೊದಲು ಕಾಣುವರು ಅಕೆಯ ದುಃಖದ ಕಣ್ಣಿಗೆ. ಸವಿೂಪಕ್ಕೆ ಬರಲು ಅವಳ ಆಶೆಯು ನಿರಾಶೆಯಾಗಿ ಒರಲುವಳು. ಮತ್ತು 'ಬಂದರಂ ಲೋಹಿತಾಶ್ವಾಯೆಂದು ಬಟ್ಟೆಯೊಳು। ನಿಂದರಂ ಲೋಹಿತಾಶ್ವಾಯೆಂದು ಗಾಳಿ ಗರಿಕೆಂದಡಂ ಲೋಹಿತಾಶ್ವಾಯೆಂದು ಕರೆಕರೆದು ಬಿಡೆ ಬೀದಿಗರುವಿನಂತೆ ॥ ತನ್ಮಯಂ ವಿಶ್ವಮೇತತ್'.

ಸರ್ವದಶ್ಚನಾಗಿ ಮಗನು ಸತ್ತನೆಂದು ಕೇಳಿ, ಹೇಳಲುಬಾರದಷ್ಟು ಮೀರಿ ಮೊರೆವ ದುಃಖವನ್ನು ಬದಿಗಿಟ್ಟುಕೊಂಡು ಬಂದು ಒಡೆಯನ ಅಡಿಗಳ ಮೇಲೆ ಕೆಡೆದು ಬಾಯ್ಬಿಡುತ.

ಚಂ—ಅರಣ್ಯದೊಳಿನ್ನ ಮಗನು ಉಗ್ರಕಾಳೋರಗಂ ಕಚ್ಚಿ ನುಡಿದನ್.
ವಿಪ್ರ—ಲೇಸಾಯ್ತು. ನುಡಿದರೆ ನುಡಿವನ್. (ಎಂದು ಕೆಡೆನುಡಿವನು).
ಚಂ—ಬಂಟರನು ಕೂಟ್ಟರಸಿ ಸೈತಂದೆ
ವಿ—ನಡುವಿರುಳೆ ಬಂಟರುಂಟೆ? ನಿದ್ದೆಗೆಯ್ಯಬೇಕೇಳು ಕಾಡದಿರು.
ಚಂ—ನಂಗಳಿಯದ ಮುನ್ನ ದಹಿಸಬೇಡವೆ? ತಂದೆ ಕರುಣಿಸು.
ವಿ—ದುರ್ಮರಣಪಟ್ಟ ಶೂದ್ರನನು ಸಂಸ್ಕರಿಸುವವರಾವಲ್ಲ.
ಚಂ—ಅನಾದಡಂ ಹೋಗಿ ಕಂಡು ಮಗನ ಉರಿಗಿತ್ತು ಬಪ್ಪೆನೆ.
ವಿ—ಕೆಲಸಮುಂ ಬಿಟ್ಟೂ! ಹರಿಯದಿರ್ದುದನೆಯ್ದೆಗೆಯ್ದು ಹೋಗು.

ಮಗನನ್ನು ಕಂಡು ದೇವಿಪಡುವ ದುಃಖವನ್ನು ವರ್ಣಿಸುವಲ್ಲಿ ಕವಿಯ ಜಾಣ್ಮೆ ಅಸಾಧಾರಣವಾಗಿ ಪ್ರಜ್ವಲಿಸುವುದು. ಲೋಹಿತಾಶ್ವನ ಮೈಯ್ಯ ಸುರಾಗಿ ಶಟಿದು ಬಿಟ್ಟಿದ್ದರೂ ಅವಳಿಗಿನ್ನು ಸಂಶಯ ದೂರಾಗಿಲ್ಲ. ಪಾಪ! ಪುತ್ರದುಃಖವೇ ಅಂತಹುದು. ಅವಳಾದರೂ ಏನು ಮಾಡಿಯಾಳು. ವೈದ್ಯನಂತೆ ಮೂಗಿನಲ್ಲಿ ಉಸಿರು; ಅಳೈಯ ಹೊಯ್ಲು; ಎದೆಯೊಳಲ್ಲಾಟ; ಕೈ ತುದಿ ನಾಡಿ ಹೊಡತ: ಅಕ್ಷಿಯಲ್ಲಿ ಬೆಳ್ಪು; ಹಣೆಯಲ್ಲಿ ಬೆವರು; ಕಂಕದೊಳುಲುಕು; ಪಾದದಲ್ಲಿ ಬಿಸಿ; ಹೆಬ್ಬಟ್ಟಿನಲ್ಲಿ ರಕ್ತ; ನಾಲಗೆಯ ಲಿಂಪು; ರೋಮದಲ್ಲಿ ಬಲ್ಪು ಕಾಣದೆ ನೋಯುವಳು. ತಾಯಂದಿರಿಗೆ ಮಕ್ಕಳಲ್ಲಿರುವ ಪ್ರೇಮಕ್ಕೆ ಪಾರವೇ ಇಲ್ಲವೆಂಬುದನ್ನು ಚಂದ್ರಮತಿಯಪಾತ್ರ ಸೃಷ್ಟಿಯಿಂದ ಜಗತ್ತಿಗೆ ತೋರಿಸಿದ್ದಾನೆ. ಮಕ್ಕಳ ಬಗ್ಗೆ ತಾಯಂದಿರಿಗಿರುವ ಈ ಗಾಢ ಪ್ರೇಮಕ್ಕೆ ಕಾರಣವೇನೆಂಬುದು ದೊಡ್ಡ ಸಮಸ್ಯೆ. ಚಂದ್ರಮತಿಯು- ಪುತ್ರಪ್ರೇಮದಲ್ಲಿ ಮೊದಲಿನವಳೆಂಬುದನ್ನು ಇವಳ ದುಃಖ ವಿಶೇಷದಿಂದ ಕಾಣುವಂತೆ ಚಿತ್ರಿಸಲ್ಪಟ್ಟಿದೆ.

ಮಗನ ಶವವನ್ನು ಕಾಡಿಗೆ ತಂದು ಸುಡುತ್ತಿರಲು ಕಾವಲುಗಾರನಾದ ಹರಿಶ್ಚಂದ್ರನು ಶವದ ಕಾಲಿಡಿದು ಬಿಸುಡುವನು. ಆಗ ಚಂದ್ರಮತಿಯು— "ಬಿಸುಡದಿರು. ಬಿಸುಡದಿರು. ಬೇಡ! ಬೇಡ! ಅಕಟಕಟ! ಹಸುಳೆ ನೊಂದಪನೆಂದು ಬೀಳ್ವನ ನೆತ್ತಿಕೊಂಡು. 'ಇವನು ನಿನ್ನ ಶಿಶುವಿನೋಪಾದಿ ಸುಡಲನುಮತಿಕೂಡೆ' ನ್ನವಳು. (ಇಲ್ಲಿನ ದುಃಖಕ್ಕೆ ತುದಿ ಮೊದಲಿಲ್ಲ. ವಾಚಕರನ್ನು ಮನಸಾರೆ ಓದಿ ತಣಿಯಬೇಕು.) ಅಪ್ಪಣೆ ಸಿಕ್ಕದಿರಲು, ತಮ್ಮ ವಂಶದ ಪವಿತ್ರಾತ್ಮರನ್ನು ನೆನೆಸುತ್ತ ಗಂಡ

ನನ್ನೂ ಸ್ಮರಿಸುವಳು. ಹೊಲೆಯ ವೇಷಧಾರಿಯಾದ ಹರಿಶ್ಚಂದ್ರನು ನೊಂದು 'ಪಾತಕನಾದ ಹರಿಶ್ಚಂದ್ರನನ್ನು ಏತಕೆ ನೆನೆದಪೆ' ಎನ್ನಲು ಚಂದ್ರಮತಿಯು—"ಜಡವೊತ್ತಡಂಹಸಿಯ ತೊವಲುಟ್ಟೊಡಂ ನಾಡ। ಸುಡುಗಾಡಿನೊಳಗಿರ್ದಡಂ ನರಕಪಾಲಮಂ। ಪಿಡಿದಿರ್ದಡಂ ತಿರಿದು ಪಿಪವುಂಡಡಂ ಶವಶಿರೋಪೂಲೆಗಟ್ಟಿರ್ದಡಂ ॥ ಕಡು ಮುರುಳ್ ಪಡೆಯ ಸಂಗಡ ಬತ್ತಲಿರ್ದಡಂ। ಮೃಡನಲ್ಲದಖಿಳಲೋಕಕ್ಕೊಡೆಯನಿಲ್ಲೆಂಬ। ನುಡಿಯಂತಿರಿನಗಾ ಹರಿಶ್ಚಂದ್ರನಲ್ಲದಿನ್ನಾರುಗತಿಮತಿಯೆಂದಳು" ॥ ಹೀಗೆ ಉತ್ತರಕೊಟ್ಟ ರಾಜ್ಞಿಯ ಶ್ರೀಪಾದಗಳಿಗೆ ಮನಸ್ಸು ತಾನಾಗಿಯೇ ಅಗಣಿತ ಸಾಷ್ಟಾಂಗವನ್ನರ್ಪಿಸುತ್ತದೆ.

ಹಣ ತರಲು ಚಂದ್ರಮತಿಯು ಬರುತ್ತಿರುವಳು. ವಿಶ್ವಾಮಿತ್ರನ ಮಾಯಾಜೋರರು ಕಾಶೀರಾಜ ಪುತ್ರನನ್ನು ತಂದು ದೇವಿಯು ಹೋಗುವ ದಾರಿಯಲ್ಲಿ ಶಿಶುವಿನ ಕುತ್ತಿಗೆ ಕೊಯ್ಯುತ್ತಿರಲು ಕೂಸು ಕಿರುಚುವುದು. ಆ ಶಬ್ದ ದೇವಿಯು ಕೇಳಿ ತನ್ನ ಮಗನ ಶಬ್ದವೆಂದು ಕೊಂಡು ಹೋಗಿ ಶವದ ಬಳಿಯಲ್ಲಿ ಅಳುತ್ತ ಕೂಡ್ರುವಳು. ಅಷ್ಟರಲ್ಲೇ ರಾಜಭಟರು ಬಂದು ರಾಣಿಯನ್ನಿಡಿದು ಎಳೆದೊಯ್ದು ಕಾಶೀರಾಜನ ಮುಂದೆ ನಿಲ್ಲಿಸುವರು. ರಾಜನು ವಿಚಾರಿಸುವನು. ರಾಣಿಯು ಚಂದ್ರಮತಿಯು 'ಕೂಸನ್ನು ಕೊಂದುದು ಸಹಜ' ವೆನ್ನುವಳು. "ಈ ಹುಸಿಯಿಂದ ಪವಿತ್ರಾತ್ಮಳಾದ ಚಂದ್ರಮತಿದೇವಿಯ ಸತ್ಯಕ್ಕೆ ಹುಳುಹಿಡಿಯಿತಲ್ಲಾ, ದೇವಿಯು ಆ ಮಾತನ್ನು ಏಕೆ ಆಡಿರಬಹುದು." ಎಂದು ನಮಗೆ (ವಾಚಕರಿಗೆ) ವಿಷಾದವಾಗುತ್ತದೆ. ಆದರೆ ಅವಳ ಪರಿಸ್ಥಿತಿಯನ್ನು ಸ್ವಲ್ಪ ಉದಾರ ಹೃದಯದಿಂದ ಪರೀಕ್ಷಿಸಿ ತಿಳಿಯಬೇಕು. ಮಗನು ಸತ್ತದ್ದರಿಂದ ಅವಳಿಗೆ ಜಗತ್ತೇ ಶೂನ್ಯವಾದಂತಾಗಿತ್ತು. ಏಕ ಮಾತ್ರ ಪುತ್ರ. ಸೂರ್ಯವಂಶ ವೃಕ್ಷಕ್ಕೆ ಅದೊಂದೇ ಬೀಜ. ಇಂತಹ ಪುತ್ರಹೀನಳಾಗಿ ಅವಳಿಗೆ ಬದುಕುವ ಇಷ್ಟವಿಲ್ಲ. ಆದರೆ ತಾನೇ ಹತ್ಯ ಮಾಡಿಕೊಂಡು ಆತ್ಮಹತ್ಯಾದೋಷ ಕಟ್ಟಿಕೊಳ್ಳಬಾರದು. ಆಕಳಿಕೆ ಬಂದವರಿಗೆ ಹುಸಿಕೊಟ್ಟುದೇ ನೆವವೆನ್ನುವಂತೆ ಪ್ರತಿಕೂಲವಾದ ವಿಧಿಯು ಇವನಿಗೆ ಬೇಕಾದ ಮರಣಕ್ಕೆ ಅನುಕೂಲ ಮಾಡಿಕೊಟ್ಟಿತು. ಪ್ರಕೃತ ಕಂಡಿತ ಹೇಳಿದರೂ ಹತ್ಯಾಪವಾದ ದೂರವಾಗುವಂತಿಲ್ಲವೆಂದು ಬಗೆದು ಹುಸಿ ನುಡಿದಿರಬಹುದು. ಅಲ್ಲದೆ ದುಃಖಾವೃತರಾದವರಲ್ಲಿ ಪರಿಶೀಲನಾ

ಶಕ್ತಿ ಕಡಿಮೆ. ದುಃಖದ ಭರಭರಾಟೆಯಲ್ಲಿ ಧರ್ಮಕರ್ಮ, ವಿಚಾರ, ಸಡಾರಗಳು ಸ್ವಲ್ಪ ಮರೆಯಾಗಿರುತ್ತವೆ. ಆಗ ದುಃಖದಿಂದ ಪೀಡಿತವಾದ ಮನಸ್ಸು ಶೀಲದ ಮೆಟ್ಟಿಲಿಂದ ಜಾರುತ್ತದೆ. ನಡೆಯುವವರೆಡಹಲಿಕ್ಕೆ ಬೇಕು. ಹುಷಾರ್ (ಎಚ್ಚರ) ವಿದ್ದವರೇ ಎಡಹುವರೆನ್ನುವಲ್ಲಿ ದುಃಖಿಗಳ ವಿಷಯವಲ್ಲಿ ಕೇಳಬೇಕಾದುದೇನು. ಚಂದ್ರಮತಿಗಾದರೋ ಒಂದಲ್ಲ ಎರಡಲ್ಲ. ದುಃಖದ ಮೇಲೆ ದುಃಖ. ಕಷ್ಟದ ಮೇಲೆ ಕಷ್ಟ. ಕುರುವಿನ ಮೇಲೆ ಬರೆಯಿಟ್ಟಂತೆ. ಆದರೂ ಇಲ್ಲಿಯವರಿಗೂ ಸಹಿಸಿದ್ದಾಯಿತು. ದುಃಖದಾಯಕ ವಿಧಿಯ ಮೇಲೆ ದಂಡೆತ್ತಿ ಹೋಗುವುದಕ್ಕೆ ಕಾಲ್ಕೆದರಿ ಜಗಳ ತೆಗೆಯಲು ಹುಸಿನುಡಿದು, ಅದರ ಭೀಕರ ಪರಿಣಾಮದ ಗುರಿಯಾದ ಮರಣಕ್ಕೆ ಸಿದ್ಧಳಾಗುವಳು. ಹುಸಿ ನುಡಿದುದಕ್ಕೆ ಪ್ರಾಯಶ್ಚಿತ್ತವೆಂದರೆ ಮರಣದಂಡನೆ. ವಧ ಸ್ಥಾನದಲ್ಲಿ ಕುಳಿತು-'ಸುಖದುಃಖಗಳ ಲಕ್ಷವಿಲ್ಲದ, ನಶ್ವರ ದೇಹಾಭಿಮಾನವಿಲ್ಲದ ಪರಮ ಯೋಗಿಯಂತೆ' ಗುರು, ದೇವರು, ಪತಿಗಳನ್ನು ಭಕ್ತಿಯಿಂದ ವಂದಿಸಿ ಮೃತ್ಯುವಿಗೆ ಕತ್ತು ಚಾಚುವಳು. ಮೃತ್ಯುವಿನ ದರ್ಶನವ ಬದಲು ಮೃತ್ಯುಂಜಯನ ದರ್ಶನವಾಗುವುದು. ಪತಿವ್ರತೆಯರಿಗೆ ಇದಕ್ಕಿಂತ ಹೆಚ್ಚಿನ ಮೇಲ್ಪೆಯೇನು?

ಪರಿಸಮಾಪ್ತಿ—ರಾಘವಾಂಕನ ಪಾತ್ರ ಸೃಷ್ಟಿಯ ವಿಚಾರವಾಗಿ ಸ್ವಲ್ಪಮಟ್ಟಿಗೆ ಚರ್ಚಿಸಿದ್ದಾಯಿತು. ಅದರಲ್ಲಿ ಇನ್ನೂ ವಿಮರ್ಶಿಸತಕ್ಕ ಅಂಶಗಳೆಷ್ಟು ಉಳಿದಿವೆ ಸಹಜ. ಆತನ ಸೃಷ್ಟಿಯಲ್ಲಿ ನಯವಿದೆ, ನುಣ್ಪಿದೆ, ಉಚಿತವಿದೆ, ವ್ಯಕ್ತಿತ್ವವಿದೆ— ಲಕ್ಷಣ ಶಾಸ್ತ್ರದ ನಿಬಂಧನೆಗಳನ್ನು ವೀರದಂತೆ ಧೀರೋದಾತ್ತ, ಧಿರೋದ್ಧತ, ಧೀರಶಾಂತರ ಚಿತ್ರಗಳನ್ನು ಸುಹೃದಯರಿಗೆ ಅಂದವಾಗುವಂತೆ ನಿರ್ಮಿಸಿದ್ದಾನೆ. ಅಯಾನಾಯಕರ ವೇಷ, ಅದಕ್ಕೆ ತಕ್ಕ ಭಾಷೆಗಳು ಬಹು ಸುಂದರವಾಗಿವೆ. ವರ್ಣನೆ, ಶೈಲಿ ಮುಂತಾದವುಗಳು, ಮತ್ತು ಮಹಾ ಕಾವ್ಯಕ್ಕೆ ತಕ್ಕ ಲಕ್ಷಣಗಳು ಈ ಕಾವ್ಯದಲ್ಲಿ ಪರಿಶೋಭಿಸುತ್ತವೆ. ಹರಿಶ್ಚಂದ್ರ ಕಾವ್ಯವು ಮಹಾ ಕಾವ್ಯಗಳಲ್ಲಿ ಎಂಡನೆಯದೆನ್ನಿಸಿಕೊಳ್ಳದಂತೆ ಉತ್ತಮ ಕಾವ್ಯಗಳ ಸಾಲಿನಲ್ಲಿ ಇದಕ್ಕೆ ತೆರವುಂಟು. 'ಕವಿಶರಭ ಪೇರುಂಡ' 'ಉಭಯ ಕವಿಕಮಲ ರವಿಯ' ಪುಣ್ಯದಾಕೃತಿಯಾದ ಹರಿಶ್ಚಂದ್ರ ಕಾವ್ಯವನ್ನು ಪಠಿಸಿ ಆನಂದ ಸಾಗರದಲ್ಲಿ ಓಲಾಡುವ ಭಾಗ್ಯ ಪಾಚಕರದು.

ಶ್ರೀಕರಭಾಷ್ಯ ವಿಮರ್ಶವು.

(ಲೇ:— ಸಿದ್ಧರಾಮಪ್ಪ ದುಂಡಪ್ಪ ಪಾವಟೆ ಬಿ. ಏ ಎಲ್. ಎಲ್ ಬಿ. ಹುಬ್ಬಳ್ಳಿ.)

ಹಿಂದಿನಿಂದ ಮುಂದೆಸಾಗಿದ್ದು.

ಲಿಂಗಧಾರಣರಾದ್ಧಾಂತವು.

ಇಂತು ಪೂರ್ವಪಕ್ಷವನ್ನು ಇಟ್ಟ ಶ್ರೀಪಂಡಿತಾಚಾರ್ಯನು ಲಿಂಗಧಾರಣ ರಾದ್ಧಾಂತವನ್ನು ನೆಲೆಗೊಳಿಸಲೇಳುವನು. "ಸಮೌಸಿದ್ಧಾಂತದಾದ್ಧಾಂತೌ" ಎಂದು ಅಮರನಿಂದ ರಾದ್ಧಾಂತವೆಂದರೆ ಸಿದ್ಧಾಂತವೆಂದಾಗಿ, ಲಿಂಗಧಾರಣ ಸಿದ್ಧಾಂತವೆ ಲಿಂಗಧಾರಣ ರಾದ್ಧಾಂತವಾದರು ಎರಡು ಶಬ್ದಾರ್ಥಗಳಲ್ಲಿ ಅಣುವೆ (ಕಿಂಚಿತ್) ಅಂತರವಿಹುದು. "ಸಂಶಯ್ಯ ವಾದಿದರ್ಶಿತಪಕ್ಷನಿರಾಕರಣ ಪೂರ್ವಕ ಯಥಾರ್ಥ ಪಕ್ಷ ಪ್ರತಿಪಾದಕಂ ವಾಕ್ಯಂ ರಾದ್ಧಾಂತಃ" ತಾರಾನಾಥತರ್ಕ ವಾಚಸ್ಪತಿ ವಿಶ್ರರು. ಶ್ರೀಪತಿ ಪಂಡಿತಾಚಾರ್ಯನು ರಾದ್ಧಾಂತ ಪದ ಪ್ರಯೋಗದಲ್ಲಿ ತನ್ನದೊಂದು ದರ್ಪವನ್ನೂ ವಾದಿವಾಕ್ಯಭಂಗಸೈಪುಣಿಯ ಕುಶಲತೆಯನ್ನೂ ಒಂದು ಭಂಗಿಯಿಂದ ತೋರಿಸಲು ಹವಣಿಸಿರುವನು. ಸೂತ್ರವನ್ನು ಒಂದು ದೆಸೆಗೆ ಎಳೆದೊಯ್ವ ಈ ಸಿದ್ಧಾಂತವು ರಾದ್ಧಾಂತವಲ್ಲ. ಸಿದ್ಧಾಂತವೂ ಅಲ್ಲ ಎಂದು ತೋರಿಸುವ ನಾವು ಆಕ್ಷೇಪಗಳಿಂಬಾಗುವಂತೆ ಅದನ್ನು ಕನ್ನಡಕ್ಕೆ ತಿರುವುವಲ್ಲಿ ಈ ಸಂಪಾದಕರ ಮತ್ತು ಓದುವರ ಸೈರಣೆಯನ್ನು ಬಯಸುತಲಿಹೆವು.

ರಾದ್ಧಾಂತಭಾಷ್ಯಾನುವಾದವು.

ಲಿಂಗಧಾರಣವು ಪ್ರತ್ಯಕ್ಷನಾವ ಶ್ರುತಿಸ್ಮೃತೀತಿಹಾಸಾಗಮ ಪುರಾಣಗಳಿಂದ ವಿಹಿತವಾಗಿದೆಯಾಗಿ ಅದು ಅಗ್ನಿ ಹೋತ್ರದಂತೆ ವೈದಿಕವೆಂದು ಸಿದ್ಧವು.

"ಯಶ್ಚಂದಸಾಮೃಷಭೋ ವಿಶ್ವರೂಪ" ಎಂಬಲ್ಲಿ ಭಕ್ತರ ಉಪಾಸನಾರ್ಥವಾಗಿ ಶಿವನು ಪರಿಚ್ಛಿನ್ನನಹನೆನ್ನುವುದುಚಿತವು. ನಾರಾಯಣದಲ್ಲಿ "ಸಿಪಿನಪತಯೇ ನಮಃ" ಎಂದು ಮುಂತಾಗಿ ಲಿಂಗವು ಸರ್ವಾತ್ಮಕವಹುದೆಂದು ಹೇಳಿ "ಸರ್ವಲಿಂಗಂ ಸ್ಥಾಪಯತಿ" ಎಂದಿದರಿಂದ ಅದೇ

ಲಿಂಗದ ಪರಿಚ್ಛಿನ್ನ ಲಿಂಗ ಧಾರಣವನ್ನು ವಿಧಿಸುವಣವು ಕಂಡುಬರು ತಿಹುದು. ಶಿವನು ಸರ್ವರ ಮುಖ ಶಿರಸ್ಸುಕಂಠಗಳಲ್ಲಿ ಸರ್ವಭೂತ ಗಳ ಹೃದಯಗುಹೆಯಲ್ಲಿರುವನಾಗಿಹನು. ಸರ್ವವನ್ನು ತುಂಬಿಹನು. ಆರುಗುಣದ ಐಶ್ವರ್ಯಯುತನಹನು. ಆದುದರಿಂದ ಸರ್ವಗತನಹನು. ಪೂರ್ವಕಾಲದೇಶಗಳಲ್ಲಿಹರೂ ನಾನೆ. ಪಶ್ಚಿಮಕಾಲದೇಶಗಳಲ್ಲಿಹರೂ ನಾನೆ. ಎಂಬಿವು ಮುಂತಾದ ಶ್ವೇತಾಶ್ವತರ ಅಥರ್ವಶಿರಸ್ಸು ಉಪನಿಷತ್ತುಗಳಲ್ಲಿ ಉಪಾಸನಕ್ಕಾಗಿ ಶಿವಪರಿಚ್ಛಿನ್ನತ್ವವು ಕೇಳುತಿದೆ. ಪ್ರಾಣಗಳ ಮನಸಿನ ಒಳಗು ಆ ಲಿಂಗವೆಂದು ಹೇಳುವರು. ಲಿಂಗದಲ್ಲಿ ಸುಷುಪ್ತಿಯು, ಲಿಂಗವು ಸನಾತನವಾದ ಬ್ರಹ್ಮವು. ಇಂತಾದ ಕಠವಲ್ಲೀ ಹಂಸೋಪನಿಷದ್ ಲಿಂಗಪುರಾಣಾದಿಗಳಲ್ಲಿ ನಿರುಪಪದ ಬ್ರಹ್ಮ ಶಬ್ದವನ್ನು ಹಸ್ತಕರಪಾಣಿ ಶಬ್ದಗಳಂತೆ ಲಿಂಗಶಬ್ದದ ಪರ್ಯಾಯವಾಗಿ ಹೇಳುವರು. ದೇವಧಾರಣಃ ಎಂಬಿದನ್ನು ದೇವ ಧಾರಣಃ ಎಂದು ಒಡೆದು "ದೇವ" ಪದವನ್ನು ಸಂಬೋಧನವಿಭಕ್ತ್ಯಂತವಾ ಹಿಡಿದರೆ, ಅಪರಿಮಿತಾಧಿಕರಣನ್ಯಾಯವನ್ನು ಮೀರಿ (ಅಪರಿಮಿತಾಧಿಕರಣವೆಂದು ಪೂರ್ವಮೀಮಾಂಸೆಯಲ್ಲಿಯದೊಂದು ಸೂತ್ರಾಧಿಕರಣವು. ಇದನ್ನು ನಾವು ಮುಂದೆ ತಿಳಿಸಹೇಳುವೆವು.) ಸವಿಭಪದ ಧಾರಣ ಶಬ್ದದೊಡನೆ ಅನ್ವಯಿಸದೆ ದೂರದ "ಗೋಪಾಯ" ಪದದೊಡನೆ ಅನ್ವಯಿಸುವದು ತಕ್ಕುದಲ್ಲ. "ಬ್ರಹ್ಮಣಃ ಕೋಶೋಽಸಿ" ಎಂತಿಲ್ಲಿ ವಿಭಕ್ತಿ ಪರಿಣಾಮ ಮದಿಂದ (ವಿಭಕ್ತಿ ಪರಿಣಾಮವೆಂದರೆ) ಅರ್ಥಾನುಕೂಲವಾಗುವಂತೆ ವಿಭಕ್ತಿಯನ್ನು ತಿರುಗಿಸುವದು. "ಇಂತೀ ಪೇಳ್ದ ವಿಭಕ್ತಿಗಳಿಂತುಂ ಪಲ್ಲ ಟಿಸುಗುಂ ಯ.ಥೇಷ್ಟಂ"— ಶಬ್ದ ಮಣಿದರ್ಪಣ. ಸೂ. ೧೭೪ ಉದಾಹರಣ—ದೇವರಂ ಪೂವಿನಿಂದರ್ಚಿಸಿದನೆಂಬಲ್ಲಿ ಪೂವನರ್ಚಿಸಿದಂ ಎಂದಾಯ್ತು.) ಸವಿಭಪದಲ್ಲಿರುವ ಬ್ರಹ್ಮಪದದೊಡನೆಯೆ ಅನ್ವಯವು ಸಂಭವಿಸುತ್ತದೆ. ಧಾರಣಶಬ್ದವು ಸಂಯೋಗಾರ್ಥವಾಗಿದೆಯಾಗಿಯು, ಅಮೃತ ಪದಕ್ಕೆ ಅರ್ಥವಾದ ಮೋಕ್ಷವು ಬೇರೆ ಪರಿಯಿಂದ ದೊರಕದಾಗಿಯು ದೇವಧಾರಣ ಶಬ್ದವನ್ನು ಒಡೆಯದೆ ಲಿಂಗಧಾರಕನೆಂದು ಅರ್ಥಕಲ್ಪಿಸ ತಕ್ಕುದು. ಶಂಕರ ಸಂಹಿತೆಯ ವಾಕ್ಯವು. ಮಗನೆ ಲಿಂಗಾಂಗ ಸಂಗಿಗೆ ಮರುಹುಟ್ಟಿಲ್ಲ. ಒಮ್ಮೆಯೆ ಜ್ಞಾನವು ಸಿದ್ಧಿಪುದು ಅದರಿಂದ ಮುಕ್ತಿಯು ದೊರೆವುದು. ಎಂದು ಲಿಂಗಧಾರಣವೆ ಮೋಕ್ಷ ಹೇತುವೆಂದುಪದೇಶಿಸುತಿಹುದು. "ಶರೀರಂ ಮೇ ವಿಚರ್ಷಣಂ" ಇಂತಿದು ಮುಂತಾದು

ದರಿಂದ ಹೊರಗಣದೊಂದು ವಿಶಿಷ್ಟ ಪದಾರ್ಥವೆ ಉದ್ದೇಶ್ಯವಾಗಿ ವಿಹಿತವಾಗಿಹುದು— ಭಾಷ್ಯ ಶರೀರದ ಶುದ್ಧಿಯು ಹೇಳಪಡೆದುದು ಎಂಬರ್ಥ— "ಅತ್ಯಾಶ್ರಮಸ್ಥ-ಸಕಲೇಂದಿಯಾಣಿ." "ಅತ್ಯಾಶ್ರಮಿ ಸರ್ವದಾಸಕೃದ್ಜಪೇತ್" ವ್ರತಮೇತತ್ಪಾಶುಪತಂ ಪಶುಪಾಶವಿಮೋಕ್ಷಾಯ" ವ್ರತಮೇತತ್ ಶಾಂಭವಂ" "ತತ್ಸಮಾಚರೇನ್ಮುಮುಕ್ಷುರ್ನ ಪುನರ್ಭವಾಯ" ತೇಷಾ ಮೈಷೈತಾಂ ಬ್ರಹ್ಮ ವಿದ್ಯಾಂ ವದೇತ ಶಿರೋವ್ರತಂ" ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ" ಇಂತೆಂಬ ಕೈವಲ್ಯ ಅಥರ್ವ ಶಿರಸ್ಸು ಮುಂಡಕ ಮೊದಲಾದವುಗಳಲ್ಲಿ ಪಾಶುಪತಿವ್ರತವೆ ಬ್ರಹ್ಮ ವಿದ್ಯಾಧಿಕಾರಪ್ರದವೆಂದು ಹೇಳಿಹುದು. ಇಂತಿದೆಲ್ಲರಿಂದ ಲಿಂಗ ಧಾರಣ ದೀಕ್ಷಿತನೆ ಬ್ರಹ್ಮವಿದ್ಯಾಧಿಕಾರಿಯೆಂದು ಸಿದ್ಧವಾಯ್ತು.

ಇನಿತರ ಬಗೆ (ವಿಚಾರ).

ಶ್ರೀ ಪಂಡಿತಾಚಾರ್ಯನ ಲಿಂಗಧಾರಣ ಭಾಷ್ಯವು ಇನ್ನೂ ಎಂಟು ಪುಟಗಳನ್ನು ತುಂಬಿದೆ. ಅದನ್ನು ತೀರಿಸಿ ನಮ್ಮ ವಿಮರ್ಶವ ಮಾಡುವೆವೆಂದರೆ ಸಂದರ್ಭವು ದೊಡ್ಡದಾಗಿ ಓದುವರ ಲಕ್ಷದಲ್ಲಿ ಎಲ್ಲವು ಆಕಲಿತವಾಗುವುದು ದುಸ್ತರವು. ಇದಕ್ಕೆಂತು ಮಾಡುವೆವೆಂದು ಚಿಂತಿಸುವಾಗ ಆಚಾರ್ಯನು ತನ್ನ ಸಿದ್ಧಾಂತದ ಒಂದು ಮೆಟ್ಟನ್ನು ಮುಗಿಸಿದ ಈ ತಾಣವು ನಮಗಿಂಬುಗೊಟ್ಟಿದೆ. ಸಂಶಯ ಪೂರ್ವ ಪಕ್ಷಗಳೂ ಸಿದ್ಧಾಂತದ ಇನಿತು ಭಾಗವೂ ಈಗಾಗಲೆ ಶಾಸ್ತ್ರಗಳಲ್ಲಿ ಬಳಕೆಯಿಲ್ಲದ ಲೋಕಬಳಕೆಯ ಓದುಗರಿಗೆ ಭಾರವೆನಿಸಿರಬೇಕು. ಇನಿತನ್ನು ಬಗೆದು ನೋಡುವರೆ ಆಚಾರ್ಯನು ಲಿಂಗಧಾರಣ ಸಿದ್ಧಾಂತವನ್ನು ಸಾಮಾನ್ಯವಾಗಿ ಮುಗಿಸಿದುದು ಅನುಕೂಲವಾಗಿದೆ. ಇದನಿಸಿಗಿ ಮುಂದಿನ ಭಾಷ್ಯವನ್ನು ಅನಿತನಿತು ವಿಮರ್ಶಿಸುವುದು ಆನ ತೆರದಿಂದಲು ಭಾಷ್ಯಕಾರನಲ್ಲಿ ನಮ್ಮ ಅಪರಾಧವಾಗದು.

ಸಂಶಯ ವಿಮರ್ಶವು.

ಶ್ರೀ ಪಂಡಿತಾಚಾರ್ಯನು "ದೇವಧಾರಣ" ಶ್ರುತಿಯು ಲಿಂಗ ಧಾರಣವನ್ನು ವಿಧಿಸುವುದೆಂಬ ತನ್ನ ಸಿದ್ಧಾಂತಕ್ಕೆ ಸಂಶಯವನ್ನು ಎಬ್ಬಿಸುವಲ್ಲಿ ನಿಜವಾದ ಪ್ರತಿಪಕ್ಷಿಯು ಮುಂದಿಡಬಹುದಾದ ಕೋಟಿಗಳನ್ನು ಬಿಟ್ಟುದು ಕಾಣುತಲಿದೆ. ನೋಡಿರಿ.

ತೈತ್ತಿರೀಯೋಪನಿಷತ್ತಿನಲ್ಲಿ ಶ್ರುತಿಯು ಶೀಕ್ಷಾಧ್ಯಾಯದಲ್ಲಿ ಕೇಳು
ತಿದೆ. ಶೀಕ್ಷಾಧ್ಯಾಯವೆಂದರೆ ವರ್ಣಗಳನ್ನು ತಪ್ಪದೆ ಎಡವದೆ ನುಡಿಯು
ಕಲಿಸುವ ಶಾಸ್ತ್ರವು. ಇದೊಂದು ವೇದಾಂಗವು. ಆರು ಅಂಗಗಳು.
ಅವುಗಳನರಿಯದೆ ವೇದಾರ್ಥವನ್ನು ತಿಳಿಯಲು ಬಾರದು. ಅದರಿಂದಲೆ
ಅವುಗಳನ್ನಂಗಗಳೆಂಬರು—"ಶೀಕ್ಷಾ ಘ್ರಾಣಂ ತು ವೇದಸ್ಯ ಮುಖಂ
ವ್ಯಾಕರಣಂ ಸ್ಮೃತಂ" ಪಾ. ಶಿ. ೪೨. ಶಿಕ್ಷೆಯು ವೇದವ ಮೂಗು
ವ್ಯಾಕರಣವು ವೇದವ ಮೊಗವು ಉಪನಿಷತ್ತುಗಳು ಜ್ಞಾನಪರವಾದುವು.
ಯಜ್ಞ ಕ್ರಿಯಾಪರವಲ್ಲ. ಆದುದರಿಂದ ಈ ಉಪನಿಷತ್ತಿನ ಪಾಠದಲ್ಲಿ
ವರ್ಣೋಚ್ಚಾರವು ಅನಿತೊಂದು ದೊಡ್ಡಿತ್ತಲ್ಲ ಲೌಕಿಕ ಸಾಧು ಶಬ್ದಗಳಂತೆ
ಇದರ ಶಬ್ದಗಳನ್ನು ನುಡಿದರೆ ಸಾಕು ಎಂದು ವರ್ಣೋಚ್ಚಾರದಲ್ಲಿ
ಅನಾದರವಾಗಬಾರದೆಂದೂ ಈ ಉಪನಿಷತ್ತಿನಲ್ಲಿ ಉದಾತ್ತಾದಿ ಸ್ವರಗಳ
ಜ್ಞಾನವು ಅರ್ಥ ನಿರ್ಣಯಕ್ಕೆ ಅವಶ್ಯಕವೆಂದೂ ಶಿಕ್ಷಾಧ್ಯಾಯವು ತೈತ್ತಿ
ರೀಯದ ಮೊದಲನೆಯ ಅಧ್ಯಾಯವಾಗಿದೆ. ಈ ಅಧ್ಯಾಯದ ಮೊದ
ಲನೆಯ ಅನುವಾಕವು (ಯಜಸ್ಸುಗಳ ಸಮೂಹವು ತೈತ್ತಿರೀಯವು ಕೃಷ್ಣ
ಯಜುಃ ಶಾಖೆಯದು) ಓದುವ ಶಿಷ್ಯನಿಗೂ ಓದಿಸುವ ಆಚಾರ್ಯನಿಗೂ
ಶಾಂತಿಯನ್ನು ಹರಸುವ ಯಜಸ್ಸುಗಳಿವೆ. ಎರಡನೆಯ ಅನುವಾಕವಿಂತು.

ಓಂ ಶೀಕ್ಷಾಂ ವ್ಯಾಖ್ಯಾಸ್ಯಾಮಃ। ವರ್ಣಃ ಸ್ವರಃ। ಮಾತ್ರಾ ಬಲಮ್।
ಸಾಮ ಸಂತಾನಃ। ಇತ್ಯುಕ್ತಃ ಶೀಕ್ಷಾಧ್ಯಾಯಃ(?) ಇತಿಃ ಶೀಕ್ಷಾಧ್ಯಾಯೇ
ದ್ವಿತೀಯೋನುವಾಕಃ—

ಶೀಕ್ಷಾಧ್ಯಾಯದಲ್ಲಿಹನ್ನೆರಡು ಅನುವಾಕಗಳಿವೆ. ಅವರಲ್ಲಿ "ಯಶ್ಚಂ
ದಸಾಮೃಷಭೋ" ಎಂಬುದು ನಾಲ್ಕನೆಯ ಅನುವಾದವು.

ಈ ಹನ್ನೆರಡು ಅನುವಾಕಗಳಲ್ಲಿ ಕಾಣುವ ಒಂದೊಂದು ವಿಷಯ
ವನ್ನು ಬೇರೆ ಬೇರಾಗಿ ಬರೆವುದು ಹಬ್ಬು. ಆದುದರಿಂದ ಆ ಅಧ್ಯಾ
ಯದ ಸಾರಾಂಶವನ್ನು ಹೇಳ್ವುದೆ ಸಾಲ್ವುದು. ಇದು ಅವರ್ಣೋಚ್ಚಾ
ರವನ್ನು ಶಿಕ್ಷಾನುಸಾರವಾಗಿ ಉಚ್ಚರಿಸುವುದನ್ನು ಒತ್ತಿ ಹೇಳುತ್ತ ವರ್ಣ
ಗಳ ಸಂಹಿತೆ (ಸಂಧಿ) ಯ ಉಪಾಸನವನ್ನು ವಿಧಿಸಿ, ವೇದದ ಮಂತ್ರ

ಗಳಲ್ಲಿ ಮುಖ್ಯವಾದ ಪ್ರಣವವನ್ನೂ ಭೂಃ ಭುವಃ ಸುವಃ ಮಹಃ
ಎಂಬ ವ್ಯಾಹೃತಿ ಚತುಷ್ಟಯವನ್ನೂ ಕುರಿತು ಉಪಾಸನೆಗಳನ್ನು ಬಗೆ
ಬಗೆಯಾಗಿ ಬಿತ್ತರಿಸುವುದು. ಇಂತಹ ಅಧ್ಯಾಯದಲ್ಲಿ ಅರ್ಥ ರೂಪ
ವಾದ ಇಷ್ಟಲಿಂಗಧಾರಣ ವಿಷಯವು ಬಂದುದೆಂತು? ಎಂಬುದಾಗಿ
ಪ್ರಣವ ಧಾರಣಕ್ಕೆ ಪ್ರಬಲವಾದ ಸಂಶಯ ಕೋಟಿಯನ್ನು ಎತ್ತಿದೆ
ಬಿಟ್ಟಪನಾಚಾರ್ಯನು.

ಪೂರ್ವಪಕ್ಷ ವಿಚಾರ.

ಪೂರ್ವಪಕ್ಷದಲ್ಲಿಯು ಆಚಾರ್ಯನು ಪ್ರಬಲವಾದ ಯುಕ್ತಿಗಳನ್ನು
ಬಿಟ್ಟಿರುವನು. ಲಿಂಗಧಾರಣವನ್ನು ವಿಧಿಸುವ ಈ ಅಧ್ಯಾಯದಲ್ಲಿ ಲಿಂಗ
ಪೂಜೆಯನ್ನು ವಿವರಿಸಿಲ್ಲ. ಒಂಬತ್ತನೆಯ ಅನುವಾಕದಲ್ಲಿ ಋತಂ ಚ

ಸ್ವಾಧ್ಯಾಯ ಪ್ರವಚನೇ ಚ - ಸತ್ಯಂ ಚ ಸ್ವಾಧ್ಯಾಯ ಪ್ರವಚನೇ ಚ

ತಪಶ್ಚ ಸ್ವಾಧ್ಯಾಯ ಪ್ರವಚನೇ ಚ ತಪಶ್ಚ ಸ್ವಾಧ್ಯಾಯ ಪ್ರವಚನೇ ಚ.

ಶಮಶ್ಚ ಸ್ವಾಧ್ಯಾಯ ಪ್ರವಚನೇ ಚ. ಅಗ್ನಯಶ್ಚ ಸ್ವಾಧ್ಯಾಯ ಪ್ರವಚನೇ

ಚ. ಅಗ್ನಿಹೋತ್ರಂ ಚ ಸ್ವಾಧ್ಯಾಯ ಪ್ರವಚನೇ ಚ. ಅತಿಥಯಶ್ಚ ಸ್ವಾಧ್ಯಾ

ಯ ಪ್ರವಚನೇ ಚ. ಮಾನುಷಂ ಚ ಸ್ವಾಧ್ಯಾಯ ಪ್ರವಚನೇ ಚ, ಪ್ರಜ

ನಶ್ಚ ಸ್ವಾಧ್ಯಾಯ ಪ್ರವಚನೇ ಚ ಪ್ರಜಾತಿಶ್ಚ ಸ್ವಾಧ್ಯಾಯ ಪ್ರವಚನೇ ಚ,

ಸತ್ಯ ಮಿಸತ್ಯವಚಾರಾಧೀತರಃ- ತಪ ಇತಿ ತಪೋ ನಿತ್ಯಃ ಪೌರುಶಿಷ್ಟಿಃ ಸ್ವಾ

ಧ್ಯಾಯ ಪ್ರವಚನೇ ಏವೇತಿ ನಾಕೋವ್ರತೌದ್ಗಲ್ಯಃ ತದ್ಧಿತಪಸ್ತದ್ಧಿ ತಪಃ(?)

"ಎಂದು ಬ್ರಹ್ಮವಿದ್ಯಾಧಿಕಾರಿಯು ಅನುಷ್ಠಿಸಲು ತಪ್ಪಬಾರದ ವಿಷಯ ಗಳನ್ನು ಶ್ರುತಿಯು ವಿಧಿಪುದು. ಸತ್ಯವೂ ಸ್ವಾಧ್ಯಾಯವೂ, ಅಗ್ನಿಯೂ ಅಗ್ನಿಹೋತ್ರವೂ 'ಅತಿಥಿ ಪೂಜೆಯೂ ಮಾನುಷವೆಂಬ ಲೌಕಿಕ ನಿತ್ಯ ಬಾರವೂ ಪುತ್ರೋತ್ಪತ್ತಿಯೂ ಋತುಗಮನವೂ ಮೊದಲ್ಗೊಳನ್ನ ಕಾರ್ಯ ವುದು ಇವೆಲ್ಲವುಗಳನ್ನು ನಡೆಯಿಸುತ್ತ ಸ್ವಾಧ್ಯಾಯ ಪ್ರವಚನದಲ್ಲಿ ಪ್ರವ ರ್ತನವೂ ವಿಹಿತವಾಗಿವೆ. ಇವುಗಳಲ್ಲಿ ರಾಧೀತರಾಚಾರ್ಯನು ಸತ್ಯ ವಚನನಾಗಿಯು ಸತ್ಯವೇ ಮುಖ್ಯವೆಂದೂ ಆಚಾರ್ಯಪೌರುಶಿಷ್ಟಿಯು ತಪೋನಿತ್ಯನಾಗಿ ತಪಸ್ಸೆ ಮಿಗಿಲೆಂದೂ, ತೋರಿಸಿದ ಅಭಿಪ್ರಾಯವನ್ನು ಶ್ರುತಿಯು ಸ್ವಾಧ್ಯಾಯ ಪ್ರವಚನಗಳೆ ಮುಖ್ಯವೆಂಬ ಮೌದ್ಗಲ್ಯಾಚಾ ರ್ಯನ ಅಭಿಪ್ರಾಯದಲ್ಲಿ ಮುಗಿಸಿ ಅದುವೆ ಸಿದ್ಧಾಂತವೆಂದು ನೆಲೆಗೊ ಳಿಸುವುದು. ತಪಃ ಸತ್ಯಾದಿಗಳು ಈ ಅಧ್ಯಾಯದಲ್ಲಿ ಬಂದಿಲ್ಲವಾದರು ಅವನ್ನು ಮುಮುಕ್ಷುವಿನ ಧರ್ಮವೆಂದು ಅರುಹುತ್ತ ನಾಲ್ಕನೆಯ ಅನು ವಾಕದಲ್ಲಿ ವಿಹಿತ ಲಿಂಗಧಾರಣವನ್ನು ಶ್ರುತಿಯು ಬಿಡಲಾರದು. ಆದು ದರಿಂದ ದೇವಧಾರಣವೆಂದರೆ ಲಿಂಗಧಾರಣವಲ್ಲ.

ಮುಂದೆ ಹನ್ನೆರಡನೆಯ ಅನುವಾಕದಲ್ಲಿಃ—ವೇದಮನೂಚ್ಯಾಚಾ ರ್ಯೋಂತೇವಾಸಿನಮನು ಶಾಸ್ತಿ. ಸತ್ಯಂ ವದ. ಧರ್ಮಂ ಚರ. ಸ್ವಾಧ್ಯಾ

ಯಾನ್ಮಾ ಪ್ರಮದಃ ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾ

ತಂತುಂ ಮಾ ವ್ಯವಚ್ಛೇತ್ಸೀಃ ಸತ್ಯಾನ್ನ ಪ್ರಮದಿತವ್ಯಂ. ಧರ್ಮಾನ್ನ ಪ್ರಮ

ದಿತವ್ಯಂ. ಕುಶಲಾನ್ನ ಪ್ರಮದಿತವ್ಯಂ ಭೂತ್ಯೈನ ಪ್ರಮದಿತವ್ಯಂ. ಸ್ವಾ

ಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ.

ದೇವ ಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ. ಮಾತೃದೇವೋಭವ.

ಪಿತೃದೇವೋ ಭವ. ಯಾನ್ಯನವದ್ಯಾನಿಕರ್ಮಾಣಿತಾನಿ ಸೇವಿತವ್ಯಾನಿ

ನೋ ಇತರಾಣಿ. ಯಾನ್ಯಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ

ನೋ ಇತರಾಣಿ.

'ಇತ್ಯಾದಿಯಾಗಿ ಮುಮುಕ್ಷುವು ಅನುಷ್ಠಿಸಬೇಕೆಂಬ ವಿಷಯಗ ಳನ್ನು ಸಾಂಗ ವೇದವನೋದಿಸಿ ಆಚಾರ್ಯನು ಉಪದೇಶಿಸುವನು. ಅಲ್ಲಿಯೂ ಲಿಂಗಪೂಜೆಯು ಬರುವುದಿಲ್ಲ. ಇದಕ್ಕೆ ದೇವಪಿತೃಕಾ ರ್ಯಾಭ್ಯಾಂ ನ ಪ್ರಮದಿತವ್ಯಂ ಎಂಬ ಯಜುಸ್ಸು ಉಂಟಲ್ಲ! ಎಂದು ಸಿದ್ಧಾಂತಿಯು ತೋರಿಸಬಹುದು. ಆದರೆ ದೇವಕಾರ್ಯ ಪಿತೃಕಾರ್ಯ ಶಬ್ದಗಳು ಧರ್ಮಶಾಸ್ತ್ರದಲ್ಲಿ ದೇವತೆಗಳನ್ನು ಉದ್ದೇಶಿಸಿ ಬೇಳುವ ಅಗ್ನಿ ಯಲ್ಲಿಕ್ಕುವ) ಹೋಮ ಕಾರ್ಯಕ್ಕೂ ಪಿತೃಗಳನ್ನುದ್ದೇಶಿಸಿ ಮಾಡುವ ಶ್ರಾದ್ಧಕ್ಕೂ ಹೆಸರಾಗಿವೆ.

ಋಷಯಃ ಪಿತರೋ ದೇವಾ ಭೂತಾನ್ಯತಿಥಯಸ್ತಥಾ।
ಆಶಾಸತೇ ಕುಟುಂಬಿಭ್ಯ ತೇಭ್ಯಃ ಕಾರ್ಯಂ ವಿಜಾನತಾ ॥
ಮನು ೩—೮೦.

ಸ್ವಾಧ್ಯಾಯೇನಾರ್ಚಯೇದೃಷಿನ್ ಹೋಮೈರ್ದೇವಾನ್ಯಥಾವಿಧಿ।
ಪಿತೄನ್ ಶ್ರಾದ್ಧೈಶ್ಚ ನಾನಾನ್ನೈರ್ಭೂತಾನಿ ಬಲಿಕರ್ಮಣಾ ॥
ಮನು. ೩—೮೧.

ದೇವಾನೃಷೀನ್ಮನುಷ್ಯಾಂಶ್ಚ ಪಿತೄನ್ಗೃಹ್ಯಾಂಶ್ಚ ದೇವತಾಃ।
ಪೂಜಯಿತ್ವಾತತಃ ಪಶ್ಚಾದ್ಗೃಹಸ್ಥಃ ಶೇಷಭುಗ್ಭವೇತ್ ॥
ಮನು. ೩—೧೧೭.

ದ್ವಾವೈವೇ ಪಿತೃಕಾರ್ಯೇ ತ್ರೀನೇಕೈಕಮುಭಯತ್ರವಾ ।
ಭೋಜಾಯೇತ್ಸು ಸಮೃದ್ಧೋಪಿ ನ ಪ್ರಸಜ್ಜೇತ ವಿಸ್ತರೇ ॥
ಮನು ೩—೧೨೫.

ದೇವಕಾರ್ಯಾದ್ದ್ವಿಜಾತೀನಾಂ ಪಿತೃ ಕಾರ್ಯಂ ವಿಶಿಷ್ಯತೇ ।
ದೈವಂ ಹಿ ಪಿತೃಕಾರ್ಯಸ್ಯ ಪೂರ್ವಮಾಪ್ಯಾಯನಂ ಸ್ಮೃತಂ ॥
ಮನು ೩—೨೦೫.

ಋಷಿಗಳು, ಪಿತೃಗಳು, ದೇವತೆಗಳು, ಪ್ರಾಣಿಗಳು ಅತಿಥಿಗಳು ಗೃಹಸ್ಥರಿಂದ ಹಿತನಿರೀಕ್ಷಣಂಗೆಯ್ವರು. ಬಲ್ಲವನು ಅವರಿಗಾಗಿ ಮಾಡಬೇಕು.

ದೇವತೆಗಳನ್ನು ಋಷಿಗಳನ್ನು ಮನುಷ್ಯರನ್ನು ವೇದಾಧ್ಯಯನದಿಂದ ಋಷಿಗಳನ್ನು, ಹೋಮಗಳಿಂದ ದೇವತೆಗಳನ್ನು, ಪಿತೃಗಳನ್ನು ತೆರತೆರನಾದ ಅನ್ನಗಳುಳ್ಳ ಶ್ರಾದ್ಧಗಳಿಂದ, ಪ್ರಾಣಿಗಳನ್ನು ಬಲಿದಾನದಿಂದ ಯಥಾವಿಧಿ ಅರ್ಚಿಸತಕ್ಕುದು.

ದೇವತೆಗಳನ್ನು ಋಷಿಗಳನ್ನು ಮನುಷ್ಯರನ್ನು ಪಿತೃಗಳನ್ನು ಮನೆಯ ದೇವರುಗಳನ್ನು ಪೂಜಿಸಿ ಬಳಿಕ ಗೃಹಸ್ಥನು ಉಳಿದುದನುಣ್ಣುವನಾಗಬೇಕು.

ದೇವಕಾರ್ಯ ಇಬ್ಬರನ್ನೂ (ಬ್ರಾಹ್ಮಣರನ್ನು) ಪಿತೃಕಾರ್ಯದಲ್ಲಿ ಮೂವರನ್ನೂ ಅಥವಾ ಉಭಯ ಕಾರ್ಯಗಳಲ್ಲಿಯು ಒಬ್ಬೊಬ್ಬನನ್ನು ಉಣಿಸಬೇಕು. ಒಳ್ಳೆ ದೈವುಳ್ಳವನಾದರು ಬಿತ್ತರದಲ್ಲಿ ತೊಡಗಬಾರದು.

ದ್ವಿಜರಿಗೆ ದೈವಕಾರ್ಯಕ್ಕಿಂತಲು ಪಿತೃಕಾರ್ಯವು ಮಿಗಿಲು. ದೇವಕಾರ್ಯವು ಪಿತೃಕಾರ್ಯದ ಪರಿಪೂರ್ವಕವಾಗಿದೆ.

ಎಂಬಿಂತಹ ಒಂದಲ್ಲವಾದ ಧರ್ಮಶಾಸ್ತ್ರದ ನುಡಿಗಳು ದೇವಕಾರ್ಯವೆಂದರೆ ಲಿಂಗಪೂಜೆಯಲ್ಲ, ಶಿವಪೂಜೆಯಲ್ಲವೆಂದು ತೋರಿಪುವು. ಲಿಂಗಪೂಜೆಗೆ ದೇವಕಾರ್ಯವೆನ್ನುವ ಬಳಿಕೆಯೂ ಇಲ್ಲ. ದೇವಕಾರ್ಯವೆಂದು ಒಂದೆ ಪದವಿಲ್ಲ. ದೇವಪಿತೃಕಾರ್ಯಾಭ್ಯಾಂ ಎಂದು ದ್ವಂದ್ವ ಸಮಾಸದ ಪದವಿದೆ. ದ್ವಂದ್ವ ಸಮಾಸವು "ಉಭಯ ಪದ ಪ್ರಧಾನೋ ದ್ವಂದ್ವಃ" ಎಂಬ ವೈಯಾಕರಣಮತದಿಂದ ಎರಡೂ ಪದಗಳು ಪ್ರಧಾನವಾದುದು. ಆದುದರಿಂದ ಪಿತೃಕಾರ್ಯದೊಡನೆ ಹೇಳಿದ ದೇವಕಾರ್ಯವು ಸ್ಮೃತಿ ಶಾಸ್ತ್ರಗಳಲ್ಲಿ ಅದರೊಡನೆ ಬರುವ ದೇವಕಾರ್ಯವಾ ನಿರಪೇಕ್ಷದೆ ಲಿಂಗಪೂಜೆಯಲ್ಲ. ಸಿದ್ಧಾಂತಿಯ ಆಗ್ರಹಕ್ಕಾಗಿ ದೇವ ಕಾರ್ಯ ಶಬ್ದವ ಎಂದಾದರು ಲಿಂಗಪೂಜೆಯೆಂಬರ್ಥದಲ್ಲಿ ಬಳಕೆಯಾಗಬಹುದೆಂದರು. ಈ ಶ್ರುತಿಯಲ್ಲಿ ಪಿತೃಕಾರ್ಯ ಸಾಹಚರ್ಯದಿಂದ ಸ್ವಾರ್ಥ ಧರ್ಮದ ದೇವತೆಗಳಿಗಾಗಿ ಕೊಡುವ ಹೋಮಕಾರ್ಯವಾಗಿದೆ. ಸಾಹಚರ್ಯವು ಅರ್ಥ ನಿರ್ಣಯಕ್ಕೆ ಹೇತುವೆಂಬಲ್ಲಿ—

ಸಂಯೋಗೋವಿಪ್ರಯೋಗಶ್ಚ ಸಾಹಚರ್ಯಂ ವಿರೋಧಿತಾ ।

- -

ಶಬ್ದಾರ್ಥಸ್ಯಾನವಚ್ಛೇದೇ ವಿಶೇಷ ಸ್ಮೃತಿ ಹೇತವಃ(ಕಾವ್ಯ ಪ್ರಕಾಶ) ಎಂಬುದು ಪ್ರಮಾಣವಾಗಿದೆ.

ಶ್ರೀ ಪಂಡಿತಾಚಾರ್ಯನು ಇಂತಹ ನಿಜವಾದ ಸಂಶಯ ಪೂರ್ವ ಪಕ್ಷಗಳನ್ನು ಎತ್ತದೆ ಕೆಲ ವಂಶದಲ್ಲಿ ತನಗೆ ಬೇಕಾದಂತೆ ಅವುಗಳನ್ನು ಒಡ್ಡಿ ಸಿದ್ಧಾಂತ (ರಾದ್ಧಾಂತ ?) ವನ್ನು ಹವ್ಮಿರುವನು. ಇದೆಂತೆಂದರೆ:-

ಶ್ರೀ ಪಂಡಿತಾಚಾರ್ಯನ ಪೂರ್ವ ಪಕ್ಷದಲ್ಲಿ, ಧರಿಸುವ ಲಿಂಗವು ಪರಿಚ್ಛಿನ್ನವಾದುದರಿಂದ ವಿಶ್ವರೂಪವೆಂಬ ಬ್ರಹ್ಮಧರ್ಮವು ಆ ಲಿಂಗವ ಅನ್ವಯಿಸಲಾರದೆಂದು ವಾದವನೆತ್ತಿದೆ. ಇದು ಬ್ರಹ್ಮಸೂತ್ರಾನುಸರಣವಾಗಿ ಏಳಬಾರದವಾದವು. "ಅರ್ಭಕೌಕಸ್ತ್ವಾತ್ತದ್ವ್ಯಪದೇಶಾಚ್ಚ ನೇತಿ ಚೇನ್ನ ನಿಚಾಯ್ಯತ್ವಾದೇವಂ ವ್ಯೋಮವಚ್ಚ" ಅ. ೧. ಪಾ. ೨. ಸೂ. ೨ ಎಂಬೀ ಸೂತ್ರದಲ್ಲಿಯು ಹೃದ್ಯಪೇಕ್ಷಯಾತು ಮನುಷ್ಯಾಧಿಕಾರತ್ವಾತ್ ಅ-೧ ಪಾ. ೩ ಸೂತ್ರ ೨೫ ಎಂಬ ಮತ್ತೊಂದು ಸೂತ್ರದಲ್ಲಿಯು ಶ್ರೀಬಾದರಾಯಣಾಚಾರ್ಯನೆ ಭಕ್ತರ ಉಪಾಸನೆಗಾಗಿ ಬ್ರಹ್ಮವು ಪರಿಚ್ಛೇದವನ್ನು ತಾಳಲಹುದೆಂದು ಹೇಳುವನಾಗಿ ಶ್ರೀಕಂಠಾಚಾರ್ಯನ ಅಥವಾ ಶ್ರೀಶಂಕರಾಚಾರ್ಯನ ಮತದ ಪೂರ್ವಪಕ್ಷದಲ್ಲಿ ಈ ವಾದವು ಪುಟ್ಟಲಾರದು ಆಚಾರ್ಯನು ತನಗೆ ಬೇಕಾದಂತ ಸುಲಭವಾದ ಪೂರ್ವಪಕ್ಷವನ್ನು ಮಾಡಿರುವನು. ಉಪಾಸನಕ್ಕಾಗಿ ಬ್ರಹ್ಮವು ಲಿಂಗವು ಪರಿಚ್ಛೇದವನ್ನು ತಾಳಬಹ.ದೆಂಬ ಉತ್ತರವು ಸುಕರವಾಗಿದೆ. ಅದಿರಲಿ. ದೇವಧಾರಣ ಶ್ರುತ್ಯರ್ಥವನ್ನು ವಿಚಾರಿಸುವಣ—

ವೇದಸ್ವರವಿಚಾರವು.

ಮೊದಲು ವೇದಸ್ವರಗಳ ವಿಚಾರವು ಮಾಡತಕ್ಕುದಾಗಿದೆ. ವೇದದಲ್ಲಿ ಸ್ವರವು ಬಹು ಮಹತ್ವವನುಳ್ಳುದು. ಹದಿನಾಲ್ಕು ಸ್ವರಗಳು ಅಕಾರದಿಂದ ಔಕಾರದ ವರೆಗೆ ಉಂಟು. ಸ್ವರಗಳು ಕಂಠದಿಂದ ತುಟಿಯ ವರೆಗೆ ಬೇರೆ ಬೇರೆ ನೆಟ್ಟುಗಳಲ್ಲಿ ನಾಲಗೆಯ ವ್ಯಾಪಾರದಿಂದ ಹುಟ್ಟುವುವು. ಅವುಗಳು ಹುಟ್ಟುವ ನೆಟ್ಟುಗಳಲ್ಲಿ ಎಲ್ಲಕ್ಕು ಮೇಲುಗಡೆಯ ಭಾಗವನ್ನು ನಾಲಗೆಯು ಮುಟ್ಟಿ ಆದ ಉಚ್ಚಾರವು ಉದಾತ್ತವು. ಎಲ್ಲಕ್ಕು ಕೆಳಗಡೆಯನ್ನು ಮುಟ್ಟಿ ಆದ ಉಚ್ಚಾರವು ಅನುದಾತ್ತವು. ಸಮಭಾಗದಲ್ಲಿ ಆದ ಉಚ್ಚಾರವು ಸ್ವರಿತವು. ಉಚ್ಚೈರುದಾತ್ತಃ ಪಾ. ೧-೨-೨೦. ನೀಚೈರನುದಾತ್ತಃ ಪಾ. ೧-೨೩೦ ಸಮಾಹಾರಃ ಸ್ವರಿತಃ ಪಾ. ೧-೨-೩೧.

ಭಾಷೆಯಲ್ಲಿ ನಾವು ಈ ಸ್ವರಗಳನ್ನು ಅಷ್ಟೆ ಆಗಲಿ ವ್ಯಂಜನಗಳೊಡನೆ ಕೂಡಿ ಗುಣಿತಾಕ್ಷರಗಳಲ್ಲಿ ಆಗಲಿ ಅವು ಹುಟ್ಟುವ ಸ್ಥಾನದಲ್ಲಿ ಯಾವ ಭಾಗದಲ್ಲಿ ಆದರು ನಾಲಗೆಯನ್ನು ಹಚ್ಚಿ ಉಚ್ಚರಿಸಿದರೂ ಶಬ್ದಾರ್ಥದಲ್ಲಿ ಭೇದವಾಗದು. ವೇದದಲ್ಲಿ ಹಾಗಲ್ಲ--ಶಬ್ದವನ್ನು ಯೋಗ್ಯ ಸ್ವರದಿಂದಲೆ ಉಚ್ಚರಿಸಬೇಕು. ಸ್ವರಗಳು ಸಂಧಿ ಸಮುದಾಯದಿಂದಲು ಸಮಾಸ ನಿಯಮದಿಂದಲು ಬದಲಾಗುವುದು. ವಿಭಕ್ತ್ಯನುಸಾರದಿಂದಲು ಬದಲಾಗುವುದು. ಆದುದರಿಂದ ಅರ್ಥ ನಿರ್ಣಯದಲ್ಲಿ ಸ್ವರವು ಅತ್ಯಂತ ಮಹತ್ತ್ವದ ಅಂಶವಾಗಿದೆ. ಬ್ರಹ್ಮಚಾರಿಯು ವೇದ ಶಬ್ದಗಳ ಉಚ್ಚಾರವನ್ನು ಮತ್ತು. ಅವು ಋಕ್ಕುಗಳಲ್ಲಿಯು ಯಜುಸ್ಸುಗಳಲ್ಲಿಯು ಸಾಮಗಳಲ್ಲಿಯು ಸಮುದಾಯವಾದಾಗ ಸಂಹಿತೆಯಲ್ಲಿ ಉಚ್ಚರಿಸುವ ಕ್ರಮವನ್ನು ಆಚಾರ್ಯನ ಉಚ್ಚಾರಗಳಂತೆ ಉಚ್ಚರಿಸಿ ಕಲಿವನು. ಉಚ್ಚಾರಗಳನ್ನು ಪುಸ್ತಕಗಳಲ್ಲಿ ಚಿಹ್ನಗಳಿಂದ ತಿಳಿಸುವರು.

ಉದಾತ್ತಕ್ಕೆ ಚಿಹ್ನವನ್ನು ಹಾಕುವದಿಲ್ಲ. ಅನುದಾತ್ತಕ್ಕೆ ಬುಡದಲ್ಲಿ—ಹಾಕುವರು. ಸ್ವರಿತಕ್ಕೆ ಮೇಲೆ ಹಾಕುವರು--"ಅನುದಾತ್ತಂ ಪದಮೇಕ ವರ್ಜರಿ" ಪಾ. ೬—೧—೧೫೮. ಎಂಬ ಸೂತ್ರದಿಂದ ಒಂದು ಪದದಲ್ಲಿ ಒಂದು ಸ್ವರವು ಮಾತ್ರ ಉದಾತ್ತವಿರಬಲ್ಲುದು. ಉಳಿದುವು ಅನುದಾತ್ತ ಸ್ವರಗಳು. ಉದಾತ್ತದ ಮುಂದೆ ಬಂದ ಅನುದಾತ್ತವು ಉದಾತ್ತಾದ

ನುದಾತ್ತಸ್ಯ ಪಾ. ೮-೪-೬೬ ಸೂತ್ರದಿಂದ ಸ್ವರಿತವಾದವುವು. ಆ ಸ್ವರಿತದ ಮುಂದಿನ ಅನುದಾತ್ತಗಳು ಪ್ರಚಯವಾದವುವು. ಪ್ರಚಯಕ್ಕು ಚಿಹ್ನವನ್ನು ಬಳಸುವುದಿಲ್ಲ. ಸ್ವರಿತದ ಮುಂದೆ ಅಥವಾ ಪ್ರಚಯದ ಮುಂದೆ ಉದಾತ್ತ ಸ್ವರವು ಬಂದರೆ ಆ ಸ್ವರಿತವು ಅಥವಾ ಪ್ರಚಯವು ಪುನಃ ಅನುದಾತ್ತವಾದಪುದು.

ಪ್ರಕೃತೋಪಯೋಗಿ ನಿಯಮಗಳು.

"ಆಮಂತ್ರಿತಸ್ಯ ಚ" ಪಾ. ೮-೧-೧೯. ಪಾದದ ಆದಿಯಲ್ಲಿರದ ಸಂಬೋಧನ ವಿಭಕ್ತ್ಯಂತ ಪದವು ಸರ್ವಾನುದಾತ್ತವು—"ಸಮಾಸಸ್ಯ." ಪಾ. ೬-೧ ೨೩೩. ಸಮಾಸದ ಅಂತ್ಯ ಸ್ವರವು ಉದಾತ್ತವು—"ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ" ಪಾ. ೬-೨-೧. ಬಹುವ್ರೀಹಿ ಸಮಾಸದಲ್ಲಿ ಸಮಾಸದ ಪೂರ್ವಪದವು ತನ್ನ ಸ್ವರವನ್ನು ಬದಲಿಸುವುದಿಲ್ಲ.

ದೇವಧಾರಣ ಶ್ರುತಿಸ್ವರ ವಿಚಾರವು.

ಅಮೃತಸ್ಯ ದೇವ ಧಾರಣೋ ಭೂಯಾಸಮ್ । ಪಾದದ ಆದಿಯಲ್ಲಿಯು

ಅಮೃತಸ್ಯ ಪದದ ಪ್ರಾತಿಪದಿಕವಾದ ಅಮೃತ ಶಬ್ದವು. ಮಮೃತಂ ಅಮೃತಂ ಮರಣವಲ್ಲದುದು ಅಮೃತವು. ಮರಣ ರಹಿತವಾದ ಸ್ಥಿತಿಯು ಇಲ್ಲಿ ಅದಕ್ಕೆ ಕಾರಣವಾದ ಬ್ರಹ್ಮಜ್ಞಾನವು. ನಞ್ ತತ್ಪುರುಷ ಸಮಾಸವು. ಸಮಾಸ್ಯ ಎಂಬ ಸೂತ್ರಕ್ಕೆ ಅಪವಾದವಾಗಿ ತತ್ಪುರುಷೇ ತುಲ್ಯಾರ್ಥ ತೃತೀಯಾ ಸಪ್ತಮ್ಯುಪಮಾನಾವ್ಯಯದ್ವಿತೀಯಾ ಕೃತ್ಯಾಃ ಪಾ. ೬-೨ ೨ ಎಂಬ ಸೂತ್ರದಿಂದಲು "ನಿಷ್ಠಾ ಚದ್ವ್ಯಜನಾತ್. ಪಾ. ೬-೧ ೨೦೫ ಎಂಬ ಸೂತ್ರದಿಂದಲು ಮಧ್ಯೋದಾತ್ತವಾಗಿದೆ. ಅನುದಾತ್ತೌ ಸುಪ್ಪಿತೌ ಪಾ ೩-೧-೪. ಎಂಬ ಸೂತ್ರದಿಂದ 'ಸ್ಯ' ಎಂಬ ಷಷ್ಠೀ ವಿಭಕ್ತಿ ಪ್ರತ್ಯಯವು ಅನುದಾತ್ತವು. ಮೇಲಿನ ನಿಯಮಗಳಿಂದ ಈ ಪದವನ್ನು ಅಮೃತಸ್ಯ ಎಂದು ಸಂಹಿತೆಯಲ್ಲಿ ಬರೆದಿದೆ.

ಶ್ರೀ ಪಂಡಿತಾಚಾರ್ಯನು ದೇವಧಾರಣಃ ಎಂಬ ಪದವು ಬಹುವ್ರೀಹಿ ಸಮಾಸವೆಂದು ಹೇಳುತ್ತ ಲಿಂಗಧಾರಣ ಸಿದ್ಧಿಯನ್ನು ಬಯಸುವನು. ಇದು ಸ್ವರ ಶಾಸ್ತ್ರದಿಂದ ಸಿದ್ಧಿಸದು. ಹೇಗೆಂದರೆ ದೇವ ಶಬ್ದವು "ದಿವು" ಧಾತುವಿಗೆ " ನಂದಿ-ಗ್ರಹಿಪಟಾದಿಭ್ಯೋಲ್ಯುಣಿನ್ಯಚಃ" ಪಾ. ೩-೧-೧೩೪. ಎಂಬ ಸೂತ್ರದಿಂದ ಅಚ್ ಪ್ರತ್ಯಯವು ಸೇರಿ ಆಗಿದೆ. "ಚಿತಃ" ೬-೧-೧೫೩ ಸೂತ್ರದಿಂದಲು "ಫಿಷೋ ಅಂತ ಉದಾತ್ತಃ" ಎಂಬ ಸೂತ್ರದಿಂದಲು ಅಂತೋದಾತ್ತವಾಗಿದೆ. ಆದನ್ನು ದೇವಃ ಎಂದು ಬರೆಯಬೇಕು. ಧಾರಣ ಶಬ್ದವು ಧೃಞ್ ಧಾತುವಿಗೆ 'ಕೃತ್ಯ ಲ್ಯುಟೋ ಬಹುಲಂ' ಪಾ. ೩-೩-೧೧೩ ಸೂತ್ರದಿಂದ ಲ್ಯುಟ್ ಪ್ರತ್ಯಯವು ಸೇರಿ ಆಗಿದೆ. ಲಿತಿ ಪಾ. ೬-೧-೧೯೩ ಸೂತ್ರದಿಂದ ಆದ್ಯುದಾತ್ತವಾಗಿದೆ. ಧಾರಣಃ ಪದವನ್ನು ಧಾರಣಃ ಎಂದು ಬರೆಯಬೇಕು. "ಬಹುವ್ರೀಹೌ ಪ್ರಕೃತ್ಯಾ ಪೂರ್ವ ಪದಂ " ಸೂತ್ರದಿಂದ ಬಹುವ್ರೀಹಿ ಸಮಾಸ ಪದವನ್ನು ದೇವ ಧಾರಣಃ ಎಂದು ಬರೆಯಬೇಕು—'ಈ ಸಮುಗ್ರ ಪಾದವನ್ನು ಶಿಕ್ಷಾ ಶಾಸ್ತ್ರದ ನಿಯಮದಂತೆ ಬಹುವ್ರೀಹಿ ಸಮಾಸ ಪದವೆಂದು ಹಿಡಿದರೆ ಅಮೃತಸ್ಯ ದೇವ ಧಾರಣೋ ಭೂಯಾಸಂ ಎಂದು ಬರೆಯಬೇಕು. ಆದರೆ ಹಾಗೆ ಬರೆದಿಲ್ಲ. ಅಮೃತಸ್ಯ ದೇವ ಧಾರಣೋ ಭೂಯಾಸಂ" ಎಂದು ಬರೆದಿದೆ. ಪಾದದ ಆದಿಯಲ್ಲಿ ಅವೃತಸ್ಯ ಎಂಬ ಪದವದೆ. 'ಆಮಂತ್ರಿತಸ್ಯ ಚ" ಸೂತ್ರದಿಂದ ದೇವಶಬ್ದವು ಅನುದಾತ್ತ ಪದವಾಯ್ತು. ಅಂದರೆ ದೇವ ಎಂದು ಆಯ್ತು. ಸ್ವರಿತವಾದ ತಕಾರದ ಮುಂದೆ ಅನುದಾತ್ತ ಗಳಿಲ್ಲ ಪ್ರಚಯವಾದುವು. ಆದರೆ ಧಾರಣಃ ಪದದಲ್ಲಿಯು ಧಾವಿದಾತ್ತ ವಾದುದರಿಂದ "ವ"ದ ಸ್ವರವು ಅನುದಾತ್ತವಾಯ್ತು. ಆಂತು ಪಾದವನ್ನು

ಅಮೃತಸ್ಯ ದೇವ ಧಾರಣೋ ಭೂಯಾಸಂ ಎಂದು ಬರೆದುದರಿಂದ ಬಹುವ್ರೀಹಿ ಸಮಾಸವು ಸಿದ್ಧಿಸಲಿಲ್ಲ ಲಿಂಗಧಾರಣವೂ ಸಿದ್ಧಿಸಲಿಲ್ಲ— ''ಶಿಕ್ಷಾ ಘ್ರಾಣಂತು ವೇದಸ್ಯ ಮುಖಂ ವ್ಯಾಕರಣಂ ಮತಂ'' ಎಂಬುದನ್ನು ನೆನಸಿದರೆ, ಶ್ರೀ ಪಂಡಿತಾಚಾರ್ಯನು ವೇದದ ಮೂಗನ್ನೆ ಕೊಯ್ದಿರುವನು.

[ಮುಂದೆ]

ಕಿತ್ತೂರ ಸಂಸ್ಥಾನದ ಇತಿಹಾಸ.

(ಬರೆದವ:— ಶ್ರೀಯುತ ಕಲ್ಮೇಶ್ವರ, ಚೆನ್ನಮಲ್ಲಪ್ಪ, ಶ್ರೇಷ್ಠಿ ಸಂಪಗಾವ ಮುಕ್ಕಾಮು ಬೈಲಹೊಂಗಲ ಜಿಲ್ಲಾ ಬೆಳಗಾಂವ.)

ಕಿತ್ತೂರ ಸಂಸ್ಥಾನದ ಇತಿಹಾಸವನ್ನು ಮೊದಲು ಹಿಸ್ಟಾರಿಕಲ್ ಅಕೌಂಟ ಆಫ್ ಬೆಳಗಾವ ಡಿಸ್ಟ್ರಿಕ್ಟ (ವಿ॥ ಸ್ಟೋಕ್ಕೃತ) ಮತ್ತು ಇಂಗ್ಲಿಷ ಗ್ಯಾಝಿಟಿಯರದಲ್ಲಿ ಬರೆದಿರುತ್ತಾರೆ. ಆಮೇಲೆ ಪ್ರೋಫೆಸರ ಮೋಡಕ ಇವರು ಮೇಲಿನ ಇಂಗ್ಲಿಷ ಗ್ರಂಥಗಳ ಆಧಾರದ ಮೇಲಿಂದ ಮರಾಠಿಯಲ್ಲಿ ಬರೆದಿರುತ್ತಾರೆ. ಇವರ ಮರಾಠೀ ಲೇಖದ ಅನುವಾದವನ್ನೇ ಮ ರಾ. ರಾ. ಶಿವಾನಂದ ಯಜ್ಞೇಶ್ವರ ವಾಜಪೆ ಕನ್ನಡ ಶಾಲೆಯ ಮಾಸ್ತರ ಇವರು ಧಾರವಾಡದಲ್ಲಿ ಹೊರಡುವ ಕನ್ನಡ ಶಾಳಾ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಮ. ರಾ. ರಾ. ವೆಂಕಟರಂಗೋ ಕಟ್ಟಿ ಧಾರವಾಡ ಇವರು ಕನ್ನಡ ಗ್ಯಾಝಿಟಿಯರದಲ್ಲಿ ಹಾಗು ಮೊದಲಿನ ಕನ್ನಡ ನಾಲ್ಕನೇ ಪುಸ್ತಕದಲ್ಲಿ ಒಂದು ಪಾಠ ಬರೆದಿರುತ್ತಾರೆ.

ಬಾಪುಗೋಖಲೆ ಮತ್ತು ಪಟವರ್ಧನ ಸರದಾರರ ಇತಿಹಾಸದಲ್ಲಿ ಅಲ್ಪಸ್ವಲ್ಪ ಕಿತ್ತೂರಕರ ಇತಿಹಾಸವು ಇರುವದು ಕಂಡುಬರುತ್ತದೆ. ಸಂಸ್ಥಾನದ ಗಂಗಾಧರ ಮಡಿವಾಳೇಶ್ವರ ತುರಮರಿ ಇವರು ಕಿತ್ತೂರ ಇತಿಹಾಸವನ್ನು ಬರೆಯಬೇಕೆಂದು ಮಾಡಿದ್ದರಂತೆ. ಆದರೆ

ಅವರ ಮೇಲಧಿಕಾರಿಗಳು ಅಪ್ಪಣೆಯನ್ನು ಕೊಡದ್ದರಿಂದ ಅದು ಹಾಗೆಯೇ ಉಳಿಯತೆಂದು ಕೇಳುತ್ತೇನೆ.

ಮುಂದೆ ಇನ್ನುವರಿಗೆ ಅಂದರೆ ಸಂಸ್ಥಾನವು ಹಾಳಾಗಿ ೧೦೩ ವರ್ಷಗಳಾದರೂ ಕಿತ್ತೂರ ಸಂಸ್ಥಾನದ ಇತಿಹಾಸವನ್ನು ಬರೆಯಲಿಕ್ಕೆ ಯಾರೂ ಮನಸ್ಸು ಹಾಕದ್ದು ಆಶ್ಚರ್ಯಕರವಾದ ಸಂಗತಿಯಾಗಿರುತ್ತದೆ.

ಈಗ ೪—೫ ವರ್ಷಗಳ ಹಿಂದೆ ನನ್ನ ಮನಸ್ಸಿನಲ್ಲಿ ಕಿತ್ತೂರ ಇತಿಹಾಸವನ್ನು ಬರೆಯಲಿಕ್ಕೆ ಬೇಕಾಗುವ ಸಾಹಿತ್ಯಗಳನ್ನು ಕೂಡಿಸಬೇಕೆಂಬ ಆಲೋಚನೆ ಬರಲು ಈ ನನ್ನ ವಿಚಾರವನ್ನು ನನ್ನ ಸನ್ಮಾನ್ಯ ಮಿತ್ರರಾದ ಶ್ರೀಯುತ ಭಾವೆಪ್ಪ ಜೆನ್ನಬಸವಪ್ಪ ಮೂಗಿ ಮುಕ್ಕಾಮ ಬೈಲಹೊಂಗಲ ಇವರ ಮುಂದೆ ಇಟ್ಟಿನು. ಅವರಾದರೂ ಉತ್ಸಾಹದಿಂದ ಒಪ್ಪಿಕೊಂಡು ಕೂಡಲೆ ಕೆಲಸಕ್ಕೆ ಪ್ರಾರಂಭ ಮಾಡಿದರು. ಅವರು ದೇಸಗತಿಯ ಇತಿಹಾಸದ ಕಾಗದಪತ್ರಗಳು ಇವೆ ಎಂದು ಮೊದಲೇ ಗೊತ್ತಿದ್ದ ಹುನಶಿಕಟ್ಟಿ, ಗೆಜಪತಿ, ಕಿತ್ತೂರ ಮುಂತಾದ ಊರುಗಳಿಗೆ ಹೋಗಿ ಕಾಗದಪತ್ರಗಳನ್ನು ಹೇರಳವಾಗಿ ದೊರಕಿಸಿ ತಂದಿರುವರು.

ಆದರೆ ಕಿತ್ತೂರ ಸಂಸ್ಥಾನಕ್ಕೆ ಬಾದಶಹರು ಕೊಟ್ಟ ಸನದುಗಳು ಫಾರ್ಸಿ ಭಾಷೆಯಲ್ಲಿ ಇದ್ದು, ಅವು ಯಾರಿಗು ತಿಳಿಯದಂತಾಗಿವೆ. ನನ್ನ ಮಿತ್ರರಾದ ಶ್ರೀ. ಭಾವೆಪ್ಪನವರು ಬೆಳಗಾವಿಯಿಂದ ಒಬ್ಬ ಮೌಲವಿಯನ್ನು ಕರೆತಂದು, ಭಾಷಾಂತರ ಮಾಡಿಸುವ ಪ್ರಯತ್ನ ಮಾಡಿದರು. ಆದರೆ ಬಹಳ ಕಾಲಾವಧಿ ಮತ್ತು ದುಡ್ಡು ಬೇಕಾದ್ದರಿಂದ ಹಾಗೆ ಉಳಿದಿರುತ್ತದೆ. ಆದರೂ ಚಿಂತೆ ಇಲ್ಲ. ಕಿತ್ತೂರ ಸಂಸ್ಥಾನದ ಸಂಕ್ಷಿಪ್ತ ಇತಿಹಾಸವನ್ನು ಕರ್ನಾಟಕದ ಜನತೆಯ ಮುಂದೆ ಇಡಬೇಕೆಂಬ ಸದುದ್ದೇಶದಿಂದ ಈ ಚಿಕ್ಕ ಲೇಖನವನ್ನು ಬರೆದಿರುತ್ತೇನೆ.

ಕಿತ್ತೂರ ಸಂಸ್ಥಾನದ ಇತಿಹಾಸವನ್ನು ಕೆಳಗೆ ಬೇರೆ ಸಾಧನಗಳಿಂದ ಬರೆಯಲಿಕ್ಕೆ ಬರುವಂತಿದೆ.

೧ ಆಖ್ಯಾಯಿಕೆಗಳು.
೨ ಸನದುಗಳು.
೩ ಪತ್ರಗಳು.
೪ ಪದಗಳು.

ಇವುಗಳ ಹೊರ್ತಾಗಿ ಪುಣೆಯಲ್ಲಿ ಅಲಿಯನೇಶನ್ನ (ಪತನ) ರಿಕಾರ್ಡದಲ್ಲಿ ಕಿತ್ತೂರ ಸಂಸ್ಥಾನಕ್ಕೆ ಸಂಬಂಧಿಸಿದ ೧೦—೧೫ ದಪ್ತರಗಳು ಇರುವದಾಗಿಯೂ ಒಂದೊಂದು ದಪ್ತರದಲ್ಲಿ ೫೦೦ ಕಾಗದಪತ್ರಗಳು ಇರುವದಾಗಿಯೂ ಕೇಳುತ್ತೇನೆ. ಈ ದಪ್ತರಗಳನ್ನು ನೋಡುವ ಇಚ್ಛೆ ಇದ್ದವರು ಮೆ॥ ಕಮೀಶನರ ಸಾಹೇಬ ಬಹಾದ್ದೂರ ಸೆಂಟ್ರಲ ಡಿವಿಜನ ಪುಣೆ ಇವರ ಕಡಿಗೆ ಅರ್ಜಿ ಮಾಡಬೇಕು. ಒಂದೊಂದು ದಪ್ತರಕ್ಕೆ ಹತ್ತು ರೂಪಾಯಿಗಳಂತೆ ಫೀ ಕೊಡಬೇಕು ಹೀಗೆ ನಿಯಮವಿರುತ್ತದೆಂದು ತಿಳಿಯುತ್ತದೆ. ಕಾರಣ ಇತಿಹಾಸ ಪ್ರೇಮಿಗಳಾದ ಕರ್ನಾಟಕಸ್ಥರು ಈ ದಪ್ತರಗಳ ಲಾಭವನ್ನು ಹೊಂದಿ ವಿಸ್ತೃತವಾದ ಕಿತ್ತೂರ ಇತಿಹಾಸವನ್ನು ಬರೆಯಲೆಂದು ಹಾರೈಸುತ್ತೇನೆ.

ಕಿತ್ತೂರ ಸಂಸ್ಥಾನವು ಉತ್ತರ ಕರ್ನಾಟಕದಲ್ಲಿ ಬಹು ಪ್ರಸಿದ್ಧವಾದ ದೇಸಗತಿ ಆಗಿತ್ತು.

೧೬ನೇ ಶತಕದ ಕಡೆಯಲ್ಲಿ ಈ ಕಿತ್ತೂರ ಸಂಸ್ಥಾನವನ್ನು ಹಿರೇಮಲ್ಲಶೆಟ್ಟಿ, ಚಿಕ್ಕಮಲ್ಲಶೆಟ್ಟಿ ಎಂಬ ಈರ್ವರು ಅಣ್ಣತಮ್ಮಂದಿರು ಕಲಬುರ್ಗೆಯ ಸೀಮೆಯಿಂದ ಬಂದು ವಿಜಾಪುರ ಬಾದಶಹರ ದಂಡಿನ ಕೂಡ ಚಿನಿವಾರರಾಗಿ ಸಂಪಗಾಂವಿಯಲ್ಲಿ ಇರುತ್ತಿದ್ದರು. ಹಿರೇಮಲ್ಲಶೆಟ್ಟಿಯು ವಿಜಾಪುರ ಬಾದಶಹರ ದಂಡಿನಲ್ಲಿ ಸೇರಿ ಶೌರ್ಯವನ್ನು ತೋರಿಸಿದ್ದರಿಂದ ಅವನಿಗೆ ಬಾದಶಹನು "ಸಮುಶರಜಂಗಬಹಾದ್ದೂರ" ಎಂಬ ಬಿರುದು ಕೊಟ್ಟು ಹುಬ್ಬಳ್ಳಿಯ ಸರದೇಶಮುಖಿಯನ್ನು ಕೊಟ್ಟನು. ಈ ಹಿರೇ ಮಲ್ಲಶೆಟ್ಟಿಯನ್ನು ಹಿಡಿದು ೧೨ ಜನ ದೇಸಾಯರು ಕೆಳಗೆ ಬರೆದ ಪ್ರಕಾರ ರಾಜ್ಯಕಾರಭಾರ ಮಾಡಿರುತ್ತಾರೆ. ಅವರ ಹೆಸರುಗಳು ಕೆಳಗೆ ಬರೆದಂತೆ.

ದೇಸಾಯರ ಹೆಸರುಗಳು.	ಆಳಿದ ವರ್ಷಗಳು
೧ ಹಿರೇಮಲ್ಲಶೆಟ್ಟಿ	೬
೨ ಹಿರೇನಾಗನಗೌಡಾ ಸರದೇಶ ಪಟ್ಟಣ ಶೆಟ್ಟಿ ಸುವರ್ಣ ಹಸ್ತ ಶಕೆ ೧೫೧೩	೪೩
೩ ಚಿಕ್ಕನಾಗನಗೌಡಾ (ಮೇಲಿನವನ ತಮ್ಮನು)	೨೨
೪ ಚೆನ್ನಪ್ಪ ಬಿಚ್ಚಗತ್ತಿ	೪

೫	ಅಲ್ಲಪ್ಪಗೌಡಾ ಸರದೇಸಾಯಿ	೩೧
೬	ಮುದಿಮಲ್ಲಪ್ಪ ಸರದೇಸಾಯಿ (ಗೌಡಶಬ್ದವು ಹೋಯಿತು)	೫
೭	ಚಿಕ್ಕಮಲ್ಲಪ್ಪ ದೇಸಾಯಿ (ಇವನು ಜುಲುಮೆಯಿಂದ ಸಿಕ್ಕಾ ತೆಗೆದುಕೊಂಡನು)	೨೧
೮	ಶಿವನಗೌಡಾ ಸರದೇಸಾಯಿ ಶಕೆ ೧೬೫೯ ರಿಂದ	೧೭
೯	ಮಲವರುದ್ರಗೌಡಾ ಶಕೆ ೧೬೫೬ ಕಾರ್ತಿಕ ಶುದ್ಧ ೧ ರಿಂದ	೧೫
೧೦	ವೀರಪ್ಪಗೌಡ ಸರದೇಸಾಯಿ ಶಕೆ ೧೬೭೧	೩೩
೧೧	ಮಲ್ಲಪ್ಪ ಸರ್ಜ ಪ್ರತಾಪರಾವ ಶಮಶೇರಜಂಗ ಬಹಾದ್ದೂರ	೩೪
೧೨	ಶಿವಲಿಂಗರುದ್ರ ಸರ್ಜ ಸರದೇಸಾಯಿ	೮

ಒಟ್ಟಿಗೆ ಹನ್ನೆರಡು ಜನರು ೩೫೯ ವರ್ಷ ಆಳಿದರು.

ಈ ಹನ್ನೆರಡು ಜನ ದೇಸಾಯರಲ್ಲಿ ೧ನೆಯವನಾದ ಹಿರೇಮಲ್ಲಶೆಟ್ಟಿಯು ವಿಜಾಪುರ ಬಾದಶಹರ ದಂಡಿನಲ್ಲಿ ಸೇರಿ ಎಷ್ಟೋ ಶೌರ್ಯ ಸಾಹಸದ ಪರಾಕ್ರಮಗಳನ್ನು ಮಾಡಿದ್ದರಿಂದ ಬಾದಶಹರು ಇವನ ಪರಾಕ್ರಮಕ್ಕೆ ಮೆಚ್ಚಿ ಹುಬ್ಬಳ್ಳಿ ಪ್ರಾಂತದ ಸರದೇಶಮುಖಿಯನ್ನು ಕೊಟ್ಟರು ಇಸ್ವಿ ಸನ್ ೧೫೮೫ ರಲ್ಲಿ.

೨ನೆಯವನಾದ ಹಿರೇನಾಗನಗೌಡಾ ಸರದೇಶಪಟ್ಟಣಶೆಟ್ಟಿ ಇವನು ಮಾಮಲೇದಾರ ಖವಾಸಖಾನ ಸಂಪಗಾಂವ ಈತನ ಪೇಳೆಗೆ ಸಂದೇಸಗತಿಯನ್ನು ಸಂಪಾದಿಸಿದನು.

೩ನೆಯವನು ಚಿಕ್ಕನಾಗನಗೌಡಾ ರಾಜ್ಯಕಾರಭಾರ ೩೨ ವರ್ಷ ಮಾಡಿದನು.

೪ನೆಯವನು ಚಿನ್ನಪ್ಪ ಬಿಜ್ಜಗತ್ತಿ ೪ ವರ್ಷ ಮಾತ್ರ ರಾಜ್ಯಕಾರಭಾರ ಮಾಡಿದನು.

೫ನೆಯವನು ಅಲ್ಲಪ್ಪಗೌಡಾ ಸರದೇಸಾಯಿ ಇವನು ಶಕೆ ೧೫೮೨ ಮೊದಲು ೧೦ ವರ್ಷ ಆಳಿದನು. ಆನಂತರ ವಿಜಾಪೂರಕ್ಕೆ ೬ ವರ್ಷ

ಹೋದನು. ಅಲ್ಲಿಂದ ಸವಾಯಿ ಸಿಕ್ಕಾ ತೆಗೆದುಕೊಂಡು ಬಂದು ಮತ್ತೆ ೧೫ ವರ್ಷ ರಾಜ್ಯವಾಳಿದನು. ಇವನೇ ಕಿತ್ತೂರ ಕಿಲ್ಲೆಯನ್ನು ಕಟ್ಟಿಸಿದನು. ಅಂತು ೩೧ ವರ್ಷ ರಾಜ್ಯಕಾರಭಾರ ಮಾಡಿದನು.

೬ನೆಯವನು ಮುದಿಮಲ್ಲಪ್ಪ ಸರದೇಸಾಯಿ (ಶಕೆ ೧೬೧೫) ಐದು ವರ್ಷ ರಾಜ್ಯಕಾರಭಾರ ಮಾಡಿದನು. ಈತನ ಆಳಿಕೆಯಲ್ಲಿ ಔರಂಗಜೇಬ ಬಾದಶಹನು ವಿಜಾಪುರವನ್ನು ತೆಗೆದುಕೊಂಡನು. ಕಿತ್ತೂರ ಸಂಸ್ಥಾನದ ಕಾರಭಾರವು ಸವಣೂರ ನವಾಬರ ಕಡೆಗೆ ಬಂದಿತು ಶಕೆ ೧೬೮೮-೧೬೯೯.

೭ನೆಯವನಾದ ಚಿಕ್ಕ ಮಲ್ಲಪ್ಪ ದೇಸಾಯಿ ಇವನು ಜುಲುಮೆಯಿಂದ ಸಿಕ್ಕಾ ತೆಗೆದುಕೊಂಡು ೨೧ ವರ್ಷ ರಾಜ್ಯಕಾರಭಾರ ಮಾಡಿದನು.

೮ನೆಯವನಾದ ಶಿವನಗೌಡಾ ಇವನು ಔರಂಗಜೇಬ ಬಾದಶಹನಿಂದ ಅನೇಕ ಸನದುಗಳನ್ನು ಪಡೆದನು. ೧೭ ವರ್ಷ ರಾಜ್ಯಕಾರಭಾರ ಮಾಡಿದನು.

೯ನೆಯವ ಮಲವ ರುದ್ರಗೌಡಾ ಅಥವಾ ಹುಚ್ಚ ಫಕೀರ ರುದ್ರ ಸರ್ಜ (ಶಕೆ ೧೬೫೬ ಕಾರ್ತಿಕ ಶುದ್ಧ ೧) ಇವನು ೧೫ ವರ್ಷ ರಾಜ್ಯಕಾರಭಾರ ಮಾಡಿದನು. ಈತನ ಆಳಿಕೆಯಲ್ಲಿ "ನಿರಂಜನಿ" ಎಂಬ ಹೆಸರಿನ ಒಬ್ಬ ಮುಸಲ್ಮಾನ ಜಾತಿಯ ಪಾತರದವಳನ್ನು ಲಿಂಗಾಯತ ಮತದ ದೀಕ್ಷೆ ಕೊಟ್ಟು ಬಹುಜನ ಸಮಾಜದ ವಿರುದ್ಧ ವೀರಶೈವ ಮತದಲ್ಲಿ ಕಿಗದುಕೊಂಡನು. ಫಕೀರರುದ್ರಸರ್ಜನ ಖಾಸ ತಮ್ಮನಾದ ಮಲ್ಲಪ್ಪನು ನಿರಂಜನಿಯನ್ನು ದೀಕ್ಷೆ ಮಾಡುವದಕ್ಕೆ ವಿರುದ್ಧ ಅಭಿಪ್ರಾಯವುಳ್ಳವನಾಗಿದ್ದನು. ಆದರಿಂದ ಆತನ ಮೇಲೆ ಫಕೀರ ರುದ್ರ ಸರ್ಜನು ಸಿಟ್ಟಾಗಿ ಅವನನ್ನು ಕೊಲ್ಲಿಸಿದನು. ಆದರೆ ಫಕೀರ ರುದ್ರ ಸರ್ಜನಿಗೆ ಗಂಡು ಮಕ್ಕಳಿದ್ದಿಲ್ಲ. ಆದ್ದರಿಂದ ತಮ್ಮನ ಮಗನಾದ ವೀರಪ್ಪ ಸರ್ಜನನ್ನು ಗಾದಿಯ ಮೇಲೆ ಕೂಡ್ರಿಸಲಿಕ್ಕೆ ಸಿದ್ಧನಾದನು ಪರಂತು ವೀರಪ್ಪ ದೇಸಾಯಿಯ ತಂದೆಯಾದ ಮಲ್ಲಪ್ಪ ದೇಸಾಯಿಯನ್ನು ಫಕೀರ ರುದ್ರ ಸರ್ಜನು ಕೊಲ್ಲಿಸಿದ್ದರಿಂದ ವೀರಪ್ಪ ಸರ್ಜನ ತಾಯಿಯು ಮಗನನ್ನು ಕರೆದುಕೊಂಡು ಕಿತ್ತೂರ ಶ್ರೀಮನ್ನಿರಂಜನ ಕಲ್ಮಠ ಸ್ವಾಮಿಗಳವರ ಕಡೆಗೆ ಗುಪ್ತರೀತಿಯಿಂದ ಕೆಲವು ವರ್ಷ ಮತ್ತು ಉಪ್ಪಿನಬೆಟಗೇರಿ ಶೆಟ್ಟರ

ಮನೆಯಲ್ಲಿ ಕೆಲವು ವರ್ಷ ಸುಪ್ರೀತಿಯಿಂದ ಇರುತ್ತಿದ್ದಳು. ಇತ್ತ ಫಕೀರ ರುದ್ರಸರ್ಜನಿಗೆ ತಮ್ಮನ ಹೆಂಡತಿ ಮತ್ತು ಅಕೆಯ ಮಗನು ಎತ್ತ ಹೋದರೆಂಬವನ್ನು ಹುಡುಕಲಿಕ್ಕೆ ಹಚ್ಚಿಸಿದನು. ಉಪ್ಪಿನಬೆಟಿಗೇರಿ ಕೆಟ್ಟರ ಮನೆಯಲ್ಲಿ ಇರುವದನ್ನು ಗುಪ್ತಚಾರರ ಮುಖದಿಂದ ಕೇಳ ತಾನೇ ಸ್ವತಃ ಜಂಗಮ ವೇಷದಿಂದ ಉಪ್ಪಿನಬೆಟಿಗೇರಿ ಕೆಟ್ಟರ ಮನೆಗೆ ಹೋಗಿ ಖಾತ್ರಿ ಮಾಡಿಕೊಂಡು ಕಿತ್ತೂರಿಗೆ ಬಂದು ರಾಜವೈಭವದಿಂದ ಆವರನ್ನು ಕರೆಸಿಕೊಂಡು ಏನೂ ಅಪಾಯವಿಲ್ಲೆಂದು ಅಭಯ ಕೊಟ್ಟು ಯುವರಾಜಾಭಿಷೇಕವನ್ನು ವೀರಪ್ಪ ಸರ್ಜನಿಗೆ ಮಾಡಿದನು. ಮುಂದೆ ತಾನು ನಿಷ್ಠಿಂತೆಯಿಂದ ಸ್ವರ್ಗವಾಸಿಯಾದನು. ಈತನನ್ನೂ ನಿರಂಜನಿಯನ್ನೂ ಕೂಡಿ ದಫನ ಮಾಡಿದ ಸಮಾಧಿಗಳನ್ನು ಕಿತ್ತೂರ ಕಲ್ಮಠದಲ್ಲಿ ಇಂದಿಗೂ ಕಾಣಬಹುದು. ಕಿತ್ತೂರ ರಾಜಮನೆತನದವರನ್ನು ಸಮಾಧಿ ಮಾಡಿದ ಸ್ಥಳಗಳು ಕಿತ್ತೂರ ಕಲ್ಮಠದಲ್ಲಿಯೇ ಇರುತ್ತವೆ. ಈತನು ದೇಸನೂರು ಗುಡ್ಡದ ಮೇಲೆ ತನ್ನ ಹೆಸರಿನ ರುದ್ರಗಡವೆಂಬ ಸಣ್ಣ ಕಿಲ್ಲೆಯನ್ನು ಕಟ್ಟಿಸಿರುತ್ತಾನೆ. ಹಾಗು ಈತನು ಕಟ್ಟಿಸಿದ ನಿರಂಜನಿ ಮಹಾಲು ಎಂಬುದು ಇನ್ನೂ ದೇಸನೂರಲ್ಲಿ ಇರುತ್ತದೆ. ದೇಸನೂರು ಫಕೀರ ರುದ್ರಸರ್ಜನ ರಾಜ್ಯದ ಉತ್ತರ ಕಡೆಯ ಮೇರೆಯಾದ್ದರಿಂದ ಅಲ್ಲಿ ತನ್ನ ಹೆಸರಿನ ಕಿಲ್ಲೆ ಕಟ್ಟಿಕೊಂಡು ಇರುತ್ತಿದ್ದನೆಂದು ಊಹಿಸಲಿಕ್ಕೆ ಆಸ್ಪದವಿದೆ. ದೇಸನೂರಲ್ಲಿ ಕಿತ್ತೂರ ಕಲ್ಮಠದವರ ಶಾಖಾ ಮಠವು ಇರುತ್ತದೆ. ಈಗ ಆ ಮಠವು ಸ್ವತಂತ್ರವಿರುತ್ತದೆ. ಅದಕ್ಕೆ ಜಮೀನು ಇನಾಮು ಇರುತ್ತವೆ. ಇದರ ಮೇಲಿಂದ ಸಹ ದೇಸನೂರಲ್ಲಿ ರುದ್ರಸರ್ಜನು ಇರುತ್ತಿದ್ದನೆಂಬುದು ಸಿದ್ಧವಾಗುತ್ತದೆ.

ನಿರಂಜನಿ ಪಾತರದವಳ ವಂಶಜರು ಈಗಲೂ ಕೂಡ ಸಾಂಗಲಿ ಸಂಸ್ಥಾನಕ್ಕೆ ಸೇರಿದ ತೇರದಾಳದಲ್ಲಿ ಇರುವದಾಗಿ ತಿಳಿಯುತ್ತದೆ.

೧೦ನೆಯ ವೀರಪ್ಪಗೌಡಾ ಸರದೇಸಾಯಿ (ಶಕೆ ೧೭೬೧) ಈತನು ೩೩ ವರ್ಷ ರಾಜ್ಯಕಾರಭಾರ ಮಾಡಿದನು. ಈತನು ಬಹುಪರಾಕ್ರಮಶಾಲಿಯೂ ಅತ್ಯಂತ ಧೈರ್ಯಸ್ಥನೂ ಆಗಿದ್ದನು. ತನ್ನ ಭುಜಬಲದಿಂದ ಗೋಕಾವಿ, ಸವದತ್ತಿ ತಾಲೂಕುಗಳನ್ನು ಆಕ್ರಮಿಸಿದನು. ಇದು ಪುಣೆ ಪೇಶ್ವೆಯವರಿಗೆ ತಿಳಿಯಲು ಪರಶುರಾಮಭಾವು ಪಟವರ್ಧನನನ್ನು ವೀರಪ್ಪ ಸರದೇಸಾಯಿಯ ಮೇಲೆ ದಂಡೆತ್ತಿ ಕಳಿಸಿದರು. ಪರಶುರಾಮಭಾವು ಪಟ್ಟವರ್ಧನನು ಬಂದು ಗೋಕಾವಿಯ ಹತ್ತರ ವೀರಪ್ಪದೇಸಾಯಿಯನ್ನು ಎದುರಿಸಿದನು. ಅಲ್ಲೇ ಕಾಳಗವಾಗಿ ವೀರಪ್ಪದೇಸಾಯಿಯು ಸೋತು ಪೈಠಣ ಹಿಡಿಯಲ್ಪಟ್ಟು ಮಿರಜ ಕಿಲ್ಲೆಯಲ್ಲಿ ನಜರ ಕೈದಿನಲ್ಲಿ ಇಡಲ್ಪಟ್ಟನು. ವೀರಪ್ಪದೇಸಾಯಿಯು ಮಿರಜದಲ್ಲಿ ಕೈದಿನಲ್ಲಿ ಇರುವಾಗಲೇ ಸ್ವರ್ಗವಾಸಿಯಾದನು. ಇವನನ್ನು ಮಿರ್ಜಿಯಿಂದ ಕಿತ್ತೂರಿಗೆ ತಂದು ಕಲ್ಮಠದಲ್ಲಿ ಸಮಾಧಿ ಮಾಡಿರುತ್ತಾರೆ. ಇವನ ಸಮಾಧಿಯ ಮೇಲಿನ ಗುಡಿಯನ್ನು ಕಿತ್ತೂರ ಕಲ್ಮಠದಲ್ಲಿ ಈಹೊತ್ತಿಗೂ ನೋಡಬಹುದು.

೧೧ನೆಯ ಮಲ್ಲಸರ್ಜ ಪ್ರತಾಪರಾವ ಸರದೇಸಾಯಿ ಶಮಶೇರ ಜಂಗಬಹಾದ್ದೂರ (ಶಕೆ ೧೭೦೪) ಇವನು ೩೪ ವರ್ಷ ರಾಜ್ಯಕಾರಭಾರ ಮಾಡಿದನು. ಕಿತ್ತೂರ ಸರದೇಸಾಯರಲ್ಲಿ ಒಳ್ಳೇ ಧಾರ್ಮಿಕನೂ ವೈಭವ ಸಂಪನ್ನನೂ ಆದ ರಾಜನಿವನು. ಇವನು ವೀರಶೈವ ಧರ್ಮಾಭಿಮಾನಿಯು ಇದ್ದು ತನ್ನ ರಾಜ್ಯದಲ್ಲಿಯ ಇತರ ಧರ್ಮದ ಪ್ರಜೆಗಳಮೇಲೆಯೂ ಕೂಡ ಪ್ರೀತಿಯುಳ್ಳವನಾಗಿದ್ದನು. ಇವನ ರಾಜಸಭೆಯಲ್ಲಿ ಕೊಳಸಿ ರಂಗಾಚಾರ್ಯ ಮೊದಲಾದ ಬ್ರಾಹ್ಮಣ ಪಂಡಿತರು ಹಾಗು ವೆಂಗಿ ಚನ್ನಬಸವಪ್ಪನವರು ಮತ್ತು ಮುಳುಗುಂದ ಜವಳಿಶೆಟ್ಟರ ಚನ್ನಬಸವಪ್ಪನವರು ಮುಂತಾದ ವೀರಶೈವ ಪಂಡಿತರು ಇದ್ದರು. ಅಲ್ಲಮಪ್ರಭುವರ ರುದ್ರಕವಿ ಎಂಬ ವೀರಶೈವ ಕವಿಯು ಇದ್ದು ಎಷ್ಟೋ ಪದಗಳನ್ನು ಅವನು ಮಾಡಿದ್ದು ಅವುಗಳಲ್ಲಿ ಅನೇಕ ಪದಗಳು ಇನ್ನೂ ಸಿಗುತ್ತವೆ. ಅಮೃತೇಶ್ವರನೆಂಬ ಬ್ರಾಹ್ಮಣ ಕವಿಯೂ ಇದ್ದನು. ಈತನು ಮಲತರಂಗಿಣಿ ಎಂಬ ಗ್ರಂಥವನ್ನು ಮಲ್ಲಸರ್ಜನ ಸ್ತುತಿಪರವಾಗಿ ಬರೆದಿರುವನು. ಈ ಗ್ರಂಥದ ಸ್ವಲ್ಪ ಭಾಗವು ಉಪಲಬ್ಧವಿರುವದು. ಇದರ ಮೇಲಿಂದ ನೋಡಲು ಮಲಸರ್ಜ ಧೊರೆಯು ಎಲ್ಲ ಜಾತಿಯವರಿಗೂ ಬೇಕಾದವನು ಇದ್ದನೆಂದು ಒಡೆದು ಕಾಣುತ್ತದೆ. ಜಂಗಮ ದಾಸೋಹದಲ್ಲಿ ಪ್ರಸಿದ್ಧನಿದ್ದನು. ಯಾಕಂದರೆ ಅವನ ಕಾಲದ ಕವಿಗಳು ಅವನನ್ನು ಜಂಗಮ ದಾಸೋಹ ಪ್ರಿಯನೆಂದು ಕೊಂಡಾಡಿರುವರು.

ಮಲ್ಲಸರ್ಜ ರಾಜೇಂದ್ರನಿಗೆ ರುದ್ರಮ್ಮ ಮತ್ತು ಚೆನ್ನಮ್ಮ ಎಂಬ ಇಬ್ಬರು ಧರ್ಮಪತ್ನಿಯರಿದ್ದರು. ಹಾಗು ೧ ಶಿವಲಿಂಗರುದ್ರಸರ್ಜ ಉರ್ಫ ಬಾಪುಸಾಹೇಬ ೨ ವೀರಪ್ಪಸರ್ಜ ೩ ಶಿವಲಿಂಗಸರ್ಜ ಉರ್ಫ ಬಾಳಾಸಾಹೇಬ ಎಂಬ ಮೂವರು ಗಂಡು ಮಕ್ಕಳಿದ್ದರು.

ಇವನಿಗೆ ಪೇಶ್ವೆ ಸರಕಾರದಿಂದ "ಪ್ರತಾಪರಾವ" ಎಂಬ ಬಹು ಮಾನದ ಬಿರುದು ಸಿಕ್ಕಿತ್ತು. ತನ್ನ ಸ್ಮರಣಾರ್ಥವಾಗಿ ನಂದಗಡದ ಬಳಿಯಲ್ಲಿ ಪ್ರತಾಪಗಡ ಎಂಬ ಕಿಲ್ಲೆಯನ್ನು ಕಟ್ಟಿಸಿದನು. ಇವನ ರಾಜ್ಯದಲ್ಲಿ ೧೪ ಕರ್ಯಾತಗಳು ಇದ್ದವು. ಅವು ಈಗಿನ ಸಂಪಗಾಂವ ಮತ್ತು ಖಾನಾಪೂರ ತಾಲೂಕುಗಳು ಪೂರಾ ಮತ್ತು ಬೆಳಗಾಂವ ತಾಲೂಕಿನ ಕೆಲವು ಭಾಗ ಮತ್ತು ಧಾರವಾಡ ತಾಲೂಕಿನ ಕೆಲವು ಭಾಗ ಮತ್ತು ಸವದತ್ತಿ ತಾಲೂಕದ ಕೆಲವು ಭಾಗ ಮತ್ತು ಹಳ್ಳಿಯಾಳ ತಾಲೂಕದ ಕೆಲವು ಭಾಗ ಇವುಗಳಲ್ಲಿ ಸಮಾವೇಶವಾಗಿರುತ್ತವೆ.

ಮಲ್ಲಸರ್ಜ ಸರದೇಸಾಯಿಯನ್ನು ಸಾಕ್ಷಾತ್ ಶ್ರೀ ಪರಶಿವನಿಗೆ ಹೋಲಿಸಿ ಒಬ್ಬ ಕವಿಯು ಪದ ಮಾಡಿದ್ದಾನೆ. ಪರಶಿವನು ಹದಿನಾಲ್ಕು ಲೋಕಗಳಿಗೆ ಒಡೆಯನಾಗಿದ್ದಾನೆ. ಇದರಂತೆ ಮಲ್ಲಸರ್ಜ ಘೊರಿಯು ೧೪ ಕರ್ಯಾತಗಳಿಗೆ ಒಡೆಯನಾಗಿದ್ದಾನೆ. ಪರಮೇಶ್ವರನಿಗೆ ಇಬ್ಬರು ಹೆಂಡರು ಮತ್ತು ಮೂವರು ಮಕ್ಕಳಿರುವರಂತೆ. ಮಲ್ಲಸರ್ಜನಿಗೆ ಕೂಡ ಇಬ್ಬರು ಹೆಂಡರು ಮತ್ತು ಮೂವರು ಗಂಡು ಮಕ್ಕಳು ಇರುವರೆಂದು ಕವಿಯು ವರ್ಣನೆ ಮಾಡಿರುವನು.

ಮಲ್ಲಸರ್ಜನು ತನ್ನ ರಾಜ್ಯದಲ್ಲಿ ದೇಶಪಾಂಡೆ, ಪಾಟೀಲ, ಕುಲಕರ್ಣಿ, ಹಿರೇಮಠ, ಜೋಶಿ, ಪೂಜಾರಿ ಮುಂತಾದವರ ವತನಗಳನ್ನು ಕಾಯ್ದಿದ್ದು ಅವರಿಗೆ ಕಾಲಕಾಲಕ್ಕೆ ಇನಾಮುಗಳನ್ನು ಹಾಕಿಕೊಟ್ಟ ಸನದುಗಳು ಈಗಲೂ ನೋಡಲಿಕ್ಕೆ ಸಿಗುತ್ತವೆ.

ಕಿತ್ತೂರ ರಾಜ್ಯದಲ್ಲಿ ನಂದಗಡ, ಖಾನಾಪೂರ, ಬೈಲಹೊಂಗಲ, ಕಿತ್ತೂರ, ಸಂಪಗಾಂವ, ದೇಸನೂರು ಮುಂತಾದ ವ್ಯಾಪಾರೀ ಪಟ್ಟಣಗಳಿದ್ದವು. ನಂದಗಡ ಪಟ್ಟಣವು ಆಗಿನ ಕಾಲಕ್ಕೆ ಪ್ರಸಿದ್ಧ ವ್ಯಾಪಾರದ ಪಡಮೂಲಿ ಪೇಟೆ ಆಗಿತ್ತು. ಕೊಂಕಣ ಪ್ರಾಂತದಿಂದ ಬರುವ ಸರಕುಗಳು ಮೊದಲು ನಂದಗಡಕ್ಕೆ ಬಂದು ಅಲ್ಲಿಂದ ಮುಂದೆ ಹೋಗುತ್ತಿದ್ದವು. ರೇಲ್ವೆ ಆಗುವ ವರೆಗೆ ನಂದಗಡ ಪೇಟೆಯ ವ್ಯಾಪಾರವು ಬಹು ಭರಭರಾಟೆಯ ಸ್ಥಿತಿಯಲ್ಲಿ ಇತ್ತು. ಸಂಪಗಾವಿಯಲ್ಲಿ ಮೊದಲಿನ ನಾಲ್ಕು ತಲೆದೇಸಾಯರು ಇದ್ದುದರಿಂದ ಅಲ್ಲಿಯ ವ್ಯಾಪಾರವಾದರೂ ತಕ್ಕಮಟ್ಟಿಗೆ ನಡೆಯುತ್ತಿತ್ತು. ಬೈಲಹೊಂಗಲದಲ್ಲಿ ಧೋತರ ಜೋಡಿಯ ವ್ಯಾಪಾರವು ಜೋರಾಗಿ ಇತ್ತು. ಕಿತ್ತೂರ ಪಟ್ಟಣವು ರಾಜಧಾನೀ ಪಟ್ಟಣ

ವಾಗಿದ್ದರಿಂದ ಎಲ್ಲ ತರದ ವ್ಯಾಪಾರವು ಅಲ್ಲಿ ಬಹು ಜೋರಾಗಿ ನಡೆಯುತ್ತಿತ್ತು. ದೇಸನೂರಲ್ಲಿ ಸಣಗು ಪಂಜೆ ಮುಂತಾದ ಬಟ್ಟೆಗಳ ವ್ಯಾಪಾರವು ದೊಡ್ಡ ಪ್ರಮಾಣದಿಂದ ನಡೆಯುತ್ತಿತ್ತು. ದೇಸನೂರು ಕರೆಸನಗು ಕಾರವಾರ ಪಟ್ಟಿಗೆ ಬಹಳ ಹೋಗುತ್ತಿದ್ದವು. ಒಟ್ಟಿನ ಮೇಲಿಂದ ನೋಡಲು ಕಿತ್ತೂರ ರಾಜ್ಯವು ಆಗ ವ್ಯಾಪಾರದಿಂದಲೂ ಒಕ್ಕಲುತನದಿಂದಲೂ ಕೈಗಾರಿಕೆಗಳಿಂದಲೂ ಊರ್ಜಿತ ಸ್ಥಿತಿಯಲ್ಲಿ ಇದ್ದು ಸಂಪತ್ತಿನಿಂದ ತುಂಬಿಕೊಂಡು ಸುವ್ಯವಸ್ಥಿತ ರಾಜ್ಯವಾಗಿತ್ತು.

ಮಲ್ಲಸರ್ಜನ ಮಗನಾದ ಶಿವಲಿಂಗರುದ್ರಸರ್ಜ ಉರ್ಫ ಬಾಪುಸಾಹೇಬನು ೪ ವರ್ಷ ಮಾತ್ರ ರಾಜ್ಯಕಾರಭಾರ ಮಾಡಿದನು. ತಂದೆಯಂತೆ ಇವನಾದರೂ ಪಿದ್ವಾಂಸನೂ ಶೂರನೂ ಮುತ್ಸದ್ದಿಯೂ ಆಗಿದ್ದನು. ಪೇಶ್ವೆ ಸರಕಾರವು ಮುಳುಗುವ ಧೋರಣವನ್ನು ಕಂಡು ಹಿಡಿದು ಮುಂದಾಲೋಚನೆಯಿಂದ ಸರ್. ಜಾನ ಮನ್ರೋ ಸೇನಾಪತಿಯ ಕೂಡ ಒಡಂಬಡಿಕೆಯನ್ನು ಮಾಡಿಕೊಂಡಿದ್ದನು. ಇವನು ಸರ್ ೧೮೨೪ನೇ ಇಸ್ವಿಯಲ್ಲಿ ಸ್ವರ್ಗವಾಸಿಯಾದನು.

ಈ ಪ್ರಕಾರ ೧೨ ಜನ ದೇಸಾಯರು ೩೫೯ ವರ್ಷ ರಾಜ್ಯದಾಡಳಿತೆಯನ್ನು ಉತ್ತಮ ಪ್ರಕಾರದಿಂದ ಮಾಡಿ ಕರ್ನಾಟಕದಲ್ಲಿ ಪ್ರಸಿದ್ಧಿಯನ್ನು ಹೊಂದಿರುತ್ತಾರೆ.

ಮಹಾದೇವಿಯಕ್ಕಗಳ ಮದುವೆ.

(ಲೇ:—ಶ್ರೀ ಸ ಹಾ. ಶಿವಮೂರ್ತಿಯವರು ಶಿವಯೋಗಮಂದಿರ)

[ಲೇಖಾಂಕ ೧]

'ಮಹಾದೇವಿಯಕ್ಕನವರ ಮದುವೆಯಾಗಿದ್ದರೆ? ಅವರ ಜೀವನ ವಿಚಾರ.' ಎಂಬ ಶಿರೋನಾಮದ ನನ್ನ ಉಪನ್ಯಾಸವು 'ತರುಣ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಈ ಉಪನ್ಯಾಸಕ್ಕೆ ಪ್ರತಿಯಾಗಿ, ಚಂದ್ರಶೇಖರದೇವರು ಅಡ್ನೂರು ಎಂಬುವವರು ಈ ವರ್ಷದ ಜುಲೈ ತಿಂಗಳಿನ ಇದೇ 'ಶಿವಾನುಭವ' ಪತ್ರಿಕೆಯಲ್ಲಿ—'ಮಹಾದೇವಿಯಕ್ಕನವರು ಮದುವೆಯಾಗಿದ್ದರೆ?' ಎಂಬ ತಲೆಕಟ್ಟಿನಿಂದ ಒಂದು ಲೇಖವನ್ನು ಕೊಟ್ಟಿದ್ದರು. ಈ ಲೇಖದಲ್ಲಿಯ ಅಭಿಪ್ರಾಯಗಳು ಯಥಾರ್ಥವಿದ್ದಿದ್ದರೆ, ಮತ್ತೆ ಇಂತು ನಾನು ಬರೆಯತೊಡಗದೆ ಬಹು ಮಾನ್ಯ ಮಾಡಿ ಒಪ್ಪಿಕೊಳ್ಳಬಹುದಿತ್ತು. ಕಾರಣ ಈ ಲೇಖದಲ್ಲಿ ಯಾವುದಾದರೂ ನಿಜಸಂಗತಿಯು ದೊರಕುತ್ತಿದೆಯೆ? ಮತ್ತು ತಮ್ಮ ವಿಚಾರಕ್ಕೇ ಸರಿಯಿಲ್ಲದಂತೆ ಏನನ್ನಾದರೂ ಬರೆದಿದ್ದಾರೆಯೇ? ಎಂಬುದನ್ನು ವಿಚಾರಿಸಬೇಕಾಗಿದೆ.

ಈ ಲೇಖಕರು ಹರಿಹರದೇವನ ಮತ್ತು ಚಾವುರಸನ—ಕಾಲನಿರ್ಣಯಕ್ಕೆ ತೊಡಗಿ—'ಹರೀಶ್ವರ ಕವಿಯು ವೀರಶೈವ ಕವಿಗಳಲ್ಲಿ ಪ್ರಾಚೀನರು. ಆತನು ಸುಮಾರು ಕ್ರಿ. ಶ. ೧೬೬೫ ರಲ್ಲಿರತಕ್ಕವನು. ಆದರೂ ಪಂ। ಸುಬ್ರಾಯ ಶಾಸ್ತ್ರಿಗಳು, ಕನ್ನಡ ಭಾರತ ಕರ್ತನ ವಿಚಾರವಾಗಿ ಬರೆಯುತ್ತ ಚಾಮರಸ, ಹರೀಶ್ವರ, ರಾಘವಾಂಕರು ಸಮಕಾಲೀನರೆಂದು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಚಾಮರಸನೂ ಒಂದು ಪಕ್ಷದಿಂದ ಪ್ರಾಚೀನನೇ ಎಂದು ಹೇಳಬೇಕಾಗುತ್ತದೆ." ಎಂದು ಬರೆದಿರುವರು

ಚಾಮರಸನೂ ಹರಿಹರದೇವನ ಸಮಕಾಲೀನನೆಂದು, ಈ ಲೇಖಕರು ಸಾಧಿಸುವ ಕಾರಣವಾದರೂ ಇಷ್ಟೆ—ಅಕ್ಕಗಳು ಮದುವೆಯಾಗಿಲ್ಲವಾಗಿ ಚಾಮರಸಕವಿಯು ಹೇಳಿರುವನು. ಮದುವೆಯಾಗಿದ್ದರೆಂದು ಹರಿಹರದೇವನು ಬರೆದಿರುವನು. - [ಇವನು ಚಾಮರಸ ಕವಿ

ಗಿಂತಲೂ ಸುಮಾರು ೩೦೦ ವರ್ಷ ಮೊದಲಿಗನು.] ಮದುವೆಯಾಗಿಲ್ಲವೆಂದು ಸಾಧಿಸಲು ತಮಗೆ ಚಾಮರಸನ ಹೇಳಿಕೆಯು ಸ್ಪಷ್ಟವಾಗಿರುವದರಿಂದ ಈ ಚಾಮರಸ ಕವಿಯನ್ನು ಹರೀಶ್ವರನ ಕಾಲದವನೆಂದು ಹೇಳಿ, ಈರ್ವರ ಕಾಲನಿರ್ಣಯವನ್ನೂ ನಿರಾಧಾರವಾಗಿ ಬರೆದಿರುವರು.

ಹರಿಹರದೇವನ ಕಾಲವು ಸು. ಕ್ರಿ ಶ. ಹನ್ನೊಂದನೂರಾ ಅರುವತ್ತೈದು ಎಂದು ಪಂಡಿತರ ಅಭಿಪ್ರಾಯವಿದೆ. [ಕವಿಚರಿತೆಯ ಪ್ರ. ಸಂಪುಟದ ೨೨೪ ನೇ ಪುಟ, ನೋಡಬಹುದು.] ಚಾಮರಸ ಕವಿಯ ಕಾಲವು, ಕ್ರಿ. ಶ. ಹದಿನಾಲ್ಕನೂರಾಮೂವತ್ತು. [ಪ್ರಭುಲೀಲೆಯ ಸಂಗ್ರಹದ ಪೀಠಿಕೆಯ xi ನೇ ಪುಟದಲ್ಲಿಯೂ ಮತ್ತು ಕ. ಚ. ೨ ನೆ, ಸಂ. ೫೮ ನೇ ಪುಟದಲ್ಲಿಯೂ ನೋಡಿಂ.]

ಚಾಮರಸನ ಹೇಳಿಕೆಯು ವಿಿಥ್ಯ. ಹರಿಹರದೇವನದು ಸತ್ಯ.

ಮಹಾದೇವಿಯಕ್ಕಗಳು ಮದುವೆಯಾಗಿದ್ದರು ಅಥವಾ ಇಲ್ಲ, ಎಂದು—ನಿರ್ಣಯಿಸಿ ಹೇಳಲು ನಾವು ಯಾರೂ ಬ್ರಹ್ಮನ ಆಯುಷ್ಯ ಳವರಿದ್ದು ಅಂದು ನೋಡಿಲ್ಲ. ಕಾರಣ ಯಾರಾದರೂ ಪೂರ್ವ ಕವಿಗಳ ಕಾವ್ಯಗಳನ್ನೇ ಹಿಡಿದು ಉಚಿತ ವಿಮರ್ಶೆಯಿಂದ ನಿರ್ಣಯಿಸತಕ್ಕದ್ದು. ಮಹಾದೇವಿಯಕ್ಕಗಳ ಚರಿತ್ರೆಯನ್ನು ಬರೆದವರಲ್ಲಿ ಹರಿಹರ ಮಹಾಕವಿಯೇ ಪ್ರಾಚೀನನು. ಇಷ್ಟೇ ಅಲ್ಲ; ಕನ್ನಡದಲ್ಲಿ ಅವನೇ ವೀರಶೈವರ ಪ್ರಬಲವಾದ ಆದಿಕವಿ. ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿರುವ ಕಂಚವೀರಣ್ಣೊಡೆಯಾದಿಗಳು ರಚಿಸಿದ 'ಶೂನ್ಯಸಂಪಾದನೆ' ಯಲ್ಲಿಯೂ ಮದುವೆಯಾದ ವಿಷಯವಿದೆ. 'ಮಹಾದೇವಿಯಕ್ಕಗಳ ಪುರಾಣ'ವನ್ನು ಬರೆದ ಚೆನ್ನಬಸವಾಂಕನೂ ಹೀಗೆಯೇ ಹೇಳುವನು. ಒಟ್ಟು ಅಕ್ಕಗಳು ಮದುವೆಯಾಗಿದ್ದರೆಂದು ಹೇಳಲು ಈ ಮೂವರೇ ಪದ್ಯದಲ್ಲಿ ಕಾಣತಕ್ಕವರು. ಇನ್ನುಳಿದ ಕೆಲವರು [ಹರಿಹರದೇವನಿಗಿಂತಲೂ ಬಹುಕಾಲ ಇತ್ತೀಚಿನವರು] ಮದುವೆಯಾಗಿಲ್ಲವಾಗಿ ತಿಳಿಸುವರು ಇವರೆಲ್ಲರಿಗೂ ಚಾಮರಸ ಕವಿಯೇ ಮುಖ್ಯನು. ಚಾಮರಸ ಕವಿಯು—ಅಕ್ಕಗಳು ಮದುವೆಯಾಗಿದ್ದಿಲ್ಲೆಂದು ಹೇಳಬೇಕಾದರೆ, ಹರಿಹರದೇವನು ರಚಿಸಿದ "ಮಹಾದೇವಿಯಕ್ಕನ ರಗಳೆ" ಎಂಬ ಕಾವ್ಯವು

ಇವನಿಗೆ ಗುರುತಿಲ್ಲ. ಏಕಂದರೆ – ಇಂದಿನ ಕಾಲದಂತೆ ಅಂದು ಮುದ್ರಣ ಯಂತ್ರಗಳಿಲ್ಲದ್ದರಿಂದ ಕೈಬರಹದ ತಾಳೆಓಲೆಯ ಪ್ರತಿಗಳಿಂದಲೇ ತಿಳಿಯಬೇಕಾಗಿತ್ತು. ಹೀಗಾಗಿ ಅವು ದೊರಕುವದೇ ಅಂದು ಕಷ್ಟವಾಗಿತ್ತು. ಅಥವಾ ಒಂದು ಪಕ್ಷ ತನಗೆ ತಿಳಿದಿದ್ದರೂ ಇದರಿಂದ ಅಕ್ಕನ ಗೌರವಕ್ಕೆ ಕುಂದು ಬಂದೀತೆಂಬ [ಕುಂದೇನೂ ಬರುವದಿಲ್ಲ. ಆದರೆ ಚಾಮರಸ ಭಾವವು ಮಾತ್ರ ಹಾಗಾಗಿವೆ] ಸಂಶಯದಿಂದ ಮತ್ತು ಅಂದಿನ ಜನ ದಲ್ಲಿ ಸ್ವಾಭಾವಿಕವಾಗಿ ನೆಲೆಸಿದ್ದ ಮೂಢ ಪ್ರೇಮ (ಭಕ್ತಿ) ದಿಂದ ಹೀಗೆ ಬರೆದನು. ಪ್ರೇಮವು ಅಂಧ-ಕುರುಡ-ಎಂದು ಒಪ್ಪಿಕೊಳ್ಳಬೇಕು. ಪ್ರೇಮದ ನೈಜ ಗುಣವು ವಿಚಾರ ಸ್ವರೂಪವಾದುದಲ್ಲ; ಅದು ಮೂಢ ಶ್ರದ್ಧೆಯನ್ನು ಆಶ್ರಯಿಸಿ ಜೀವಿಸಿರುವದು. ಈ ಪ್ರೇಮದಲ್ಲಿ ವಿಚಾರವೂ ಕೂಡ ಮೂಢವಾಗುವದು. ಹೆಚ್ಚೇನು? 'ಸರ್ವಜ್ಞ' ನಾದ ದೇವರೂ ಇದರಿಂದ ಮೂಢನಾಗುವನು. ಕಾರಣ ಇಂತಹ ಪ್ರೇಮವು (ಭಕ್ತಿಯು) ಅಕ್ಕಗಳ ಮದುವೆ ವಿಷಯದಲ್ಲಿ – ಶ್ರೀ ಚಾಮರಸ ಕವಿಯು ಕಣ್ಣನ್ನು [ವಿಚಾರವನ್ನು] ಕುರುಡಾಗಿ ಮಾಡಿತು. ಏನೇ ಹೇಳಿದರೂ ಅಕ್ಕಗಳಿಗೂ ಚಾಮರಸನಿಗೂ ಕೊಂಚ ಕಡಿಮೆ. ಮುನ್ನೂರು ವರ್ಷಗಳ ಅಂತರ ವಿದೆ. ಇದೊಂದು ಕಾರಣದಿಂದಲೇ ಅವನಿಗೆ ಅಕ್ಕಗಳ ಚರಿತ್ರೆಯು ಸರಿಯಾಗಿ ತಿಳಿದಿಲ್ಲವೆಂದು ಇತಿಹಾಸಜ್ಞರಾದ ವಿಮರ್ಶಕರಷ್ಟೇ ಏಕೆ ಇನ್ನಿತರರೂ ಹೇಳಬಹುದು. ಈ ಅಭಿಪ್ರಾಯಕ್ಕು ಈ ಲೇಖಕರು ಒಂದು ಆಕ್ಷೇಪವನ್ನು ತರುವರು. ಏನೆಂದರೆ—"ಒಂದು ನಾಡಿನಲ್ಲಿ ನಡೆದು ಹೋದ ಕಾರ್ಯಗಳ ನಿಜಸ್ಥಿತಿಯು ಕಾಲಾಂತರ ಮೇಲೆ ಹಬ್ಬುವದು ಸ್ವಾಭಾವಿಕ. ಆದ್ದರಿಂದ ಹರಿಹರನಿಗಿಂತಲೂ ಇನ್ನಿತರ ಕವಿಗಳಿಗೆ ಅಕ್ಕನ ವಿಷಯಕ್ಕೆ ಹೆಚ್ಚು ಗೊತ್ತಿದ್ದಿತು." ಎಂದು. ಇದಕ್ಕೆ ನಮ್ಮ ಉತ್ತರ:— ಒಂದು ನಾಡಿನ- ವ್ಯಕ್ತಿಯ ಕಾರ್ಯಗಳು ಕಾಲಾಂತರದ ಮೇಲೆ ಪ್ರಸಾರವಾಗುವದೇನೋ ದಿಟವು. ಆದರೆ ಆ ಕಾರ್ಯವು ಕಾಲಾಂತರ ಮೇಲೆ ಹೆಚ್ಚು ಹಬ್ಬಬೇಕಾದರೆ ಮೊದಲಿಗೇ ಆ ವಿಷಯವು ಎಲ್ಲಿಯಾದರೂ, ಅಲ್ಪ ಪ್ರಮಾಣದಿಂದಲಾದರೂ ಹಬ್ಬಿಕೊಂಡಿರಬೇಕಾಗುತ್ತೆ. ಏಕೆಂದರೆ—"ಯಾವುದು ಕಾಲಾಂತರದ ಮೇಲೆ ಪ್ರಸಾರವಾಗುತ್ತದೆಯೋ ಅದು ಆ ಮೊದಲಿಗೇ ಇರಬೇಕಾಗುತ್ತೆ. ಯಾವುದು ಇರುವದಿಲ್ಲವೋ ಅದು ಪ್ರಸಾರವಾಗುವದೇ ಇಲ್ಲ. ಇದು ಸೃಷ್ಟಿಯ ನೇಮ " ಆದುದರಿಂದ ಹರಿಹರದೇವನ-ಅಥವಾ-ಅಕ್ಕನ ಕಾಲದಲ್ಲಿಯೇ ಮದುವೆಯಾಗಿದ್ದಿಲ್ಲವೆಂದು ಹೇಳಿದ ಯಾವುದಾದರೂ ಪ್ರಮಾಣವು ದೊರೆಯಬೇಕಲ್ಲವೆ?

ಅಷ್ಟಿದರೆ ಆ ಕಾರ್ಯವು ಪ್ರಸಾರವಾಗುವ ಬಗೆ ಹೇಗೆ? ಮಹಾದೇವಿಯಕ್ಕಗಳು ಮದುವೆಯಾಗಿದ್ದರೆಂದು ಅಕ್ಕಗಳ ತರುವಾಯವೇ ಇದ್ದು ಬರಿದ ಪರಂಪರದೇವಸಿಗೆ. ಮಧ್ಯದಲ್ಲಿ ಇನ್ನೂರು ಮುನ್ನೂರು ವರ್ಷ ಗತಿಸಿ, ನಂತರ ಮಹಾದೇವಿಯಕ್ಕಗಳು ಮದುವೆಯಾಗಿಲ್ಲೆಂದು ಅದೆಂತು ಪ್ರಸಾರವಾಗುವದು? ಈ ಲೇಖಕರು ಇಂತಹ ಅಭಿಪ್ರಾಯಗಳನ್ನು ಸಾಧಿಸಬೇಕಾದರೆ ಇದಕ್ಕೆ ತಕ್ಕ ಐತಿಹಾಸಿಕ ಆಧಾರವನ್ನು ತೋರಿಸ ಕೊಡಬೇಕಲ್ಲವೇ? ಆಧಾರವಿಲ್ಲದೆ ಹೇಳಿದರೆ ನಂಬಲು ಇದು ಬೇಸರ ಕಥೆಯಲು ಕೇಳುವ ಕತೆಯಲ್ಲ. ಇಲ್ಲಿ ಬೇಕಾಗಿರುವದು ಕೇವಲ ಐತಿಹಾಸಿಕ ದೃಷ್ಟಿ. ಇಂತಹ ವಿಷಯಗಳನ್ನು ಚರ್ಚಿಸಲು, ಸಾಧಿಸಲು, ಸಂಸ್ಕೃತ ವ್ಯಾಕರಣದಲ್ಲಿ 'ಅಧಿಕಾರ ಸೂತ್ರ' ದಂತೆ, ಈ ಐತಿಹಾಸಿಕ ದೃಷ್ಟಿಯು ಮುಖ್ಯವಾಗಿರುವದು. ಇದನ್ನು ಅನುಸರಿಸಿಯೇ ಎಲ್ಲವೂ ನಡೆಯಬೇಕು. ಕಾರಣ ಮಹಾದೇವಿಯಕ್ಕಗಳಿಗೂ ಚಾಮರಸನಿಗೂ ಬಹು ದೂರ ಅಂತರವಿರುವದರಿಂದ ಇವನಿಗೆ ಈ ವಿಷಯವು ಚೆನ್ನಾಗಿ ತಿಳಿದೇ ಇಲ್ಲ. ಚಾಮರಸನ ಈ ಒಂದು ಹೇಳಿಕೆಯು ಸತ್ಯವಾದುದೇ ಅಲ್ಲ. ಅಕ್ಕಗಳ ಘನತೆಯೇನೋ ಸ್ವಾಭಾವಿಕವಾಗಿಯೇ ಸಾರತರವಾಗಿರುವದು ನಿಜ. ಆದರೆ ಇದಕ್ಕಿಂತಲೂ ಮದುವೆಯಾಗಿಲ್ಲೆಂದು ಹೇಳುವದರಿಂದ ತನ್ನ ಕಥಾನಾಯಿಕೆಯ ಮಹತ್ವವು ಮತ್ತಷ್ಟು ಉಜ್ವಲವಾಗಲೆಂಬುದೇ ಚಾಮರಸನ ಪೌರಾಣಿಕ ಭಕ್ತಿಯ ಉದ್ದೇಶವಾಗಿದೆ.

ಹರಿಹರದೇವನು ಮಹಾದೇವಿಯಕ್ಕಗಳ ಕಾಲದಲ್ಲಿ ಅಥವಾ ಅವರ ತರುವಾಯವೇ ಇದ್ದವನು. ಅವನು ಅಕ್ಕಗಳ ವಿಷಯದಲ್ಲಿ ಚಾಮರಸನಿಗಿಂತಲೂ ಅತಿಭಕ್ತಿಯುಳ್ಳವನೆಂದು ಹೇಳಬಹುದು. ಇದನ್ನು ಆತನ 'ಮ. ರಗಳೆ' ಯನ್ನು ಓದಿದವರು ತಿಳಿಯಬಹುದು. ಹಾಗಾದರೆ ಚಾಮರಸನಂತೆ ಇವನೂ ಹೇಳಬೇಕಾಗಿತ್ತು. ಎಂದರೆ—'ಹರಿಹರದೇವನು ತಾನು ಕಂಡದ್ದನ್ನು, ಕೇಳಿದ್ದನ್ನು ಹೇಳುವದರಲ್ಲಿ ಮರೆಮಾಡಿಕೊಳ್ಳುವ ಸ್ವಭಾವದವನಲ್ಲ. [ರೇವಣಸಿದ್ಧೇಶ್ವರ ರಗಳೆಯಲ್ಲಿ ಎಷ್ಟೇ ಪುಟವನ್ನು ನೋಡಿದರೆ ತಿಳಿಯುವದು.] ಹರಿಹರಕವಿಗೆ ಪ್ರತ್ಯಕ್ಷ ನೋಡಿದವರೇ ಹೇಳಿರಬೇಕು. ಅಥವಾ ಅಕ್ಕಗಳು ಆಗಿಹೋಗಿ ಎಂಟು ಹತ್ತು ವರ್ಷಗಳಾಗಿರುವದರಿಂದ ಮದುವೆಯಾದದ್ದು ಜನರಲ್ಲಿ ಬಹು ಪ್ರಸಿದ್ಧವಾಗಿರಬೇಕು. ಏಕೆಂದರೆ ಮದುವೆಯಾಗಿಲ್ಲೆಂಬುದಕ್ಕೆ ಅದೇ ಕಾಲ

ದಲ್ಲಿಯ ಗ್ರಂಥಗಳು ಇವುವರೆವಿಗೂ ಒಂದೂ ದೊರೆತಿಲ್ಲ. ಕಾರಣ ವಿವಾಹವೇ ನಡೆದು ಹೋದದ್ದು ಹರಿಹರ ಕವಿಗೆ ಚೆನ್ನಾಗಿ ಗುರುತಿದ್ದು ದರಿಂದ ಈ ವಿಷಯವನ್ನು ಚಾಮರಸನಂತೆ ಕಲ್ಪಿತ ಮಾಡಿಕೊಳ್ಳುವ ಪ್ರಸಂಗವೇ ಅವನಿಗೆ ಒದಗಿಲ್ಲ ಅಕ್ಕಗಳು ಮದುವೆಯಾಗಿರುವದರಿಂದ ಅವರ ಘನತೆಗೆ, ಗೌರವಕ್ಕೆ ಚ್ಯುತಿ ಬರುವದಿಲ್ಲೆಂಬುದನ್ನು ಈ ವರ್ಷದ ಆಗಷ್ಟ ತಿಂಗಳಿನ 'ಶಿವಾನುಭವ' ಸಂಚಿಕೆಯಲ್ಲಿ ವಿವರಿಸಿದ್ದೇನೆ.

ಹರಿಹರದೇವನು ಮನರಂಜಿಸಲು ಇದನ್ನು ಹೇಳಿಲ್ಲ.

ಇನ್ನು ತನ್ನ ಕಾವ್ಯವು ಮನರಂಜನೆಯುಳ್ಳದ್ದಾಗಲು, ಆ ಹರಿಹರ ಕವಿಯು ಹೀಗೆ ಬರೆದಿರುವನೆಂದು ಈ ಲೇಖಕರ ಬಯಕೆಯೊಂದು ಇದ್ದಂತೆ ತೋರುತ್ತದೆ. ಮನರಂಜಿಸುವಂತೆ ಸುಳ್ಳು ಬರೆದು ತನ್ನ ಕಾವ್ಯರಚನಾ ಶಕ್ತಿಯನ್ನು ತೋರಿಸಲು ಹರಿಹರದೇವನು ಇದೊಂದೇ ಕಾವ್ಯವನ್ನೇನೂ ಅವನು ಬರೆದಿಲ್ಲ. ಈ ತೆರನಾದ ಕಾವ್ಯಗಳನ್ನು ಅವನು ಅದೆಷ್ಟೋ ಬರೆದಿರುವನು. ಅವೆಲ್ಲವೂ ಸ್ವಾಭಾವಿಕವಾಗಿಯೇ ಮನರಂಜನೆಯುಳ್ಳವುಗಳಾಗಿವೆ. ಅವನು ಹೇಗೆ ಬೇಕೋ ಹಾಗೆ ಕಲ್ಪಿಸಿಕೊಳ್ಳಲು ಕಟ್ಟು ಕತೆಗಳಾದ 'ಕಾದಂಬರಿ'ಗಳನ್ನು ಬರೆದಿಲ್ಲ. ಅವನ ಕೃತಿಗಳೆಲ್ಲವೂ ಶಿವಶರಣರ ಸತ್ಯ ಚರಿತ್ರೆಗಳು. ಇವುಗಳನ್ನು ಧರ್ಮ ಪ್ರಸಾರಕ್ಕಾಗಿ ಮತ್ತು ತನ್ನ ಚಿತ್ತ ಶಾಂತಿಗಾಗಿ ಅವನು ಬರೆದಿರುವನು. ಮನರಂಜನೆಯಾಗುವಂತೆ ವರ್ಣಿಸಬೇಕಾದರೆ ಎಷ್ಟು ಕಾರ್ಯ ನಡೆದಿದೆಯೋ ಅಷ್ಟರಲ್ಲಿ ಬೇಕಾದಷ್ಟೇ ವರ್ಣಿಸುತ್ತಾನೆ. ಮಹಾದೇವಿಯಕ್ಕಗಳು ಮದುವೆಯಾಗಿದ್ದರೆಂದು ತಾನೇ ಕಲ್ಪಿಸಿಕೊಳ್ಳಲು ಪರಮ ವೀರಶೈವನಾದ ಆ ಹರಿಹರದೇವನಿಗಾಗುವ ಲಾಭವಾದರೂ ಏನು? ಭವಿಯೊಡನೆ ಲಗ್ನವಾದಳೆಂದು ಸುಳ್ಳು ಬರೆಯಲು ಅವನಿಗೆ ಅಡ್ಡವಾದ ದೊಡ್ಡ ಸಂಕಟವಾದರೂ ಏನಿದೆ? ಒಂದು ಪಕ್ಷ ಹರಿಹರದೇವನ ಈ ಅಭಿಪ್ರಾಯವು ಮಿಥ್ಯವಾಗಿದ್ದರೆ ಕೆಂಚ ವೀರಣ್ಣೊಡೆಯಾದಿಗಳು (ಶೂನ್ಯ ಸಂಪಾದನಾಕಾರರು) ಎಂದಿಗೂ ಹೀಗೆ ಬರೆಯುತ್ತಿರಲಿಲ್ಲ. ಚೆನ್ನಬಸವಾಂಕನೂ ಇಂತು ಬರೆಯುತ್ತಿರಲಿಲ್ಲ.

ಚಾಮರಸನಂತೆ ಚೆನ್ನಬಸವಾಂಕನೇಕೆ ಹೇಳಲಿಲ್ಲ?

'ಹರೀಶ್ವರ ಕವಿಗಿಂತಲೂ ಚಾಮರಸನಿಗೆ ಹೆಚ್ಚು ಗೊತ್ತಿದ್ದಿತು ಏಕಂದರೆ—ಒಂದು ನಾಡಿನಲ್ಲಿ ನಡೆದು ಹೋದ ಕಾರ್ಯಗಳು ಕಾಲಾಂತರದ ಮೇಲೆ ಹೆಚ್ಚು ಪ್ರಸಾರವಾಗುವದು ಸಹಜ.' ಎಂದು ಈ ಲೇಖಕರು ಹೇಳಿದ್ದಕ್ಕೆ ಈ ಮೊದಲೇ ಉತ್ತರಿಸಿದೆವಷ್ಟೇ! ಇದಕ್ಕೆ ಮತ್ತೊಂದು ಉತ್ತರವನ್ನೂ ಕೊಡುತ್ತೇವೆ.

ಈ ಲೇಖಕರು ಹೇಳುವಂತೆ—ಅಕ್ಕಗಳು ಮದುವೆಯಾಗಿರಲಿಲ್ಲವೆಂದು, ಕ್ರಿ. ಶ. ೧೪೩೦ ರಲ್ಲಿದ್ದ ಚಾಮರಸನ ಕಾಲದಲ್ಲಿಯೇ ಹೆಚ್ಚು ಪ್ರಸಿದ್ಧಿಗೊಂಡಿದ್ದರೆ,— ಸುಮಾರು ಕ್ರಿ. ಶ. ೧೫೫೦ ರಲ್ಲಿದ್ದು 'ಮಹಾದೇವಿಯಕ್ಕಗಳ ಪುರಾಣ' ಪದ್ಯ ಬರೆದ ಚೆನ್ನಬಸವಾಂಕನು ಅದರಲ್ಲಿ ಮದುವೆಯಾಗಿದ್ದರೆಂದೇಕೆ ಹೇಳುತ್ತಿದ್ದ? ನಿಜವಾಗಿಯೂ ಅಕ್ಕಗಳು ಮದುವೆಯಾಗಿರಲಿಲ್ಲವೆಂದು ಪ್ರತೀತಿಯಿದ್ದರೆ ಚೆನ್ನಬಸವಾಂಕನು ಮಾತ್ರ ಹೀಗೆಂದಿಗೂ ಬರೆಯುತ್ತಿರಲಿಲ್ಲ. ಕಾರಣ ಈ ಲೇಖಕರ ಅಭಿಪ್ರಾಯದಂತೆ ಹೋದರೂ ಚಾಮರಸ ಕವಿಯ ಹೇಳಿಕೆಯೇ ಕಲ್ಪಿತವಾಗಿ ತೋರುತ್ತದೆ.

ಹರಿಹರದೇವನ ಸಮ್ಮಂಧ, ಮತ್ತೊಂದು ಅಡ್ಡ ಪ್ರಶ್ನೆ.

ಈ ಲೇಖಕರು ಹರಿಹರ ಮಹಾಕವಿಯ ಹೇಳಿಕೆಯನ್ನೇ ಸಂಪೂರ್ಣ ತೆಗೆದೊಗೆಯಲು ಬಹು ಸಾಹಸ ಪಟ್ಟು—"ಹರೀಶ್ವರನ ಸ್ಥಿತಿಗಳನ್ನು ವಿಚಾರಿಸಬೇಕು." ಎಂಬ ಒಂದು ಅಡ್ಡ ಪ್ರಶ್ನೆಯನ್ನು ತಂದೊಡ್ಡಿ, 'ಸದ್ಧರ್ಮ ದೀಪಿಕೆಯ' ಸಂಪಾದಕರ ಅಭಿಪ್ರಾಯದ ಮೇಲೆ ಕೈಯಾಡಿಸಿದ್ದಾರೆ. ಆದರೆ ಆ ಸಂಪಾದಕರವರು ಮಾತ್ರ ಅಕ್ಕಗಳು ಮದುವೆಯಾಗಿರಲಿಲ್ಲವೆಂದು ಸಾಧಿಸಲು ಬರೆದಿಲ್ಲ. ಆದರೂ ಆ ಅಭಿಪ್ರಾಯವನ್ನಿಲ್ಲಿ ನೋಡೋಣ—

"ಇಂದಿನ ಕಾಲದಂತೆ ಪೂರ್ವದಲ್ಲಿ ಅಂಚೆ, ತಂತಿ, ವರ್ತಮಾನ ಪತ್ರಗಳಿಲ್ಲದುದರಿಂದ ರಾಜರು ಮಾತ್ರ ತಮಗೆ ಬೇಕಾದ ವರ್ತಮಾನಗಳನ್ನು ತಮ್ಮ ಚಾರರಿಂದ ತಿಳಿದುಕೊಳ್ಳುತ್ತಿದ್ದರು. ರಾಜರಿಲ್ಲದ ಊರಿನಲ್ಲಿ ಮಾತ್ರ ಬಂದ ಸುದ್ದಿಗಳು ಕೆಲವು ಕಾಲ್ಪನಿಕಗಳಾದರೂ ಆಗಬಹುದು. ಏಕೆಂದರೆ— ಮಹಾದೇವಿಯಕ್ಕಗಳ ತಂದೆ ತಾಯಿಗಳಾರು ಎಂಬುದನ್ನು ವಿಚಾರಿಸುವದೂ ಕೂಡಾ ಹರೀಶ್ವರನಿಗೆ ಅನುಕೂಲವಾಗಲಿಲ್ಲ. (ಈಗ ತಕ್ಕ ಪುಸ್ತಕ ಭಂಡಾರವಿಲ್ಲದಿರುವ ಊರಿನಲ್ಲಿ ಸಂಗ್ರಹ

ಗ್ರಂಥಗಳನ್ನು ಬರೆವವರಂತೆ ಆತನ ಗತಿಯೂ ಆಗಿರಬೇಕು.)" ಇದರಲ್ಲಿಯ ಒಟ್ಟು ಆ ಸಂಪಾದಕರವರ ಅಭಿಪ್ರಾಯವೇನೆಂದರೆ— ಅಕ್ಕಗಳ ತಂದೆ ತಾಯಿಗಳ ಹೆಸರು 'ಶಿವಭಕ್ತ' 'ಶಿವಭಕ್ತೆ' ಎಂದು ಹರಿಹರ ಕವಿಯು ಬರೆದಿರುವನು. ಅವರೆ ಇಂತಹ ಹೆಸರುಗಳನ್ನು ಯಾರೂ ಇಡುವದಿಲ್ಲ. ಅವುದರಿಂದ ಇದು ಕಾಲ್ಪನಿಕವಾಗಿ ಬಂದ ಸುದ್ದಿ ಇರಬೇಕು, ಎಂಬುದಿಷ್ಟೆ. ಆದರೆ ಮದುವೆಯಾಗಿರಲಿಲ್ಲವೆಂದು ಸಾಧಿಸಿದ ಅಭಿಪ್ರಾಯವಲ್ಲ.

ಇದಕ್ಕೆ ನಮ್ಮ ಉತ್ತರ.

ರಾಜರಿಲ್ಲವ ಊರಿನಲ್ಲಿ ಬಂದ ಸುದ್ದಿಗಳು ಕೆಲವು ಕಾಲ್ಪನಿಕಗಳಾಗಬೇಕಾದರೆ, ಅವು ರಾಜತಂತ್ರದಂತೆ 'ರಾಜಕೀಯ' ಎಂದರೆಯುದ್ಧ ಮೊದಲಾದ ಮೋಸದ ಕೃತ್ಯಗಳೇ ಇರಬೇಕು. ಆದರೆ ಸಾಧು ಶರಣರ-ಶರಣೆಯರ ಚರಿತ್ರೆಗಳು ಮಾತ್ರ ಇಂತು ಕಾಲ್ಪನಿಕಗಳಾಗಲಾರವು. ಏಕೆಂದರೆ ಇದರಿಂದ ಯಾರಿಗಾದರೂ ಪ್ರಯೋಜನವಿರಬೇಕಲ್ಲವೇ? ಇದರಿಂದ ಅಕ್ಕಗಳ ತಂದೆ ತಾಯಿಗಳ ಹೆಸರು ಶಿವಭಕ್ತ-ಶಿವಭಕ್ತೆಯೆಂಬುದಾಗಿಯೇ ಇದ್ದಿತೆಂದು ನಮ್ಮ ಅಭಿಪ್ರಾಯವಲ್ಲ; ಅವರ ಹೆಸರು 'ಶಿವಭಕ್ತ-ಶಿವಭಕ್ತೆ' ಎಂದು ಹರಿಹರದೇವನಿಗೆ ಸುದ್ದಿಯೇ ಬಂದಿಲ್ಲ. ಮತ್ತು ಅವರ ಹೆಸರನ್ನೇ ತಿಳಿಯಲು ಅವನು ಅಪೇಕ್ಷೆ ಪಟ್ಟೂ ಇಲ್ಲ. ಅದು ಅವನಿಗೆ ಮುಖ್ಯವೂ ಅಲ್ಲ. ಇದು ಕಾರಣವೇ ಆ ರೀತಿ ಹೇಳಿರುವನು.

ಇನ್ನುಳಿದ ಕವಿಗಳಾದರೂ ಅಕ್ಕಗಳ ತಂದೆತಾಯಿಗಳಿಗೆ 'ನಿರ್ಮಲ' 'ಸುಮತಿ' ಎಂದು ಕರೆದಿರುವರು. ಹಾಗಾದರೆ ಇಂತಹ ಹೆಸರನ್ನು ಯಾರಾದರೂ ಇಡುವ ರೂಢಿಯಿದೆಯೋ? ಬೇಡ. ಒಂದು ಪಕ್ಷ ನಿರ್ಮಲನೆಂಬ ಹೆಸರುಳ್ಳವನಿಗೇ ಸುಮತಿಯೆಂಬ ಹೆಸರುಳ್ಳ ಸತಿಯೂ ದೊರಕಿಯೇ ಬಿಟ್ಟಳೆ? ಎಂಬ ಪ್ರಶ್ನೆಯೂ ಬಾರದಿರದು. ಇಂತು ವಿಚಾರಿಸಿದರೆ ಅಕ್ಕಗಳ ತಂದೆ ತಾಯಿಗಳ ಹೆಸರು ಯಾರಿಗೂ ತಿಳಿದು ಬಂದಿಲ್ಲ. ಅವರ ನಾಮಾಂಕಿತವು ಆ ಆ ಕವಿಗಳ ಇಚ್ಛಿಕವಾಗಿಯೇ ಸಾಗಿದೆ ಎಂದು ನಿರ್ವಿವಾದವಾಗಿ ಹೇಳಲೇಬೇಕು. ಆದುದರಿಂದ ಇದರ ನಿರ್ಣಯವ

ಚರ್ಚೆಯು ಅಂದಿನ ಕವಿಗಳಿಗೆ ಹೇಗೆ ಅವಶ್ಯವಿದ್ದಿಲ್ಲವೋ ಹಾಗೆಯೇ ಇಂದಿನ ನಮಗೂ ಅವಶ್ಯವೇ ಆಗಿಲ್ಲ. ಅದು ಅಷ್ಟು ಪ್ರಧಾನವೂ ಅಲ್ಲ.

ಮತ್ತೊಂದು ಪ್ರಶ್ನೆಯು.

ಈ ಲೇಖಕರು ಮತ್ತೊಂದು ಪ್ರಶ್ನೆಯನ್ನು ತಂದಿರುವರು. ಏನೆಂದರೆ—"ಇದಲ್ಲದೆ ಆಗ್ಯೆ ಹಳೇಬೀಡಿನಲ್ಲಿದ್ದ ಹೊಯಿಸಳ ರಾಜರಿಗೂ, ಕಲ್ಯಾಣದ ಬಿಜ್ಜಳ ರಾಜನಿಗೂ ಸ್ನೇಹವಿದ್ದಂತೆ ತೋರಲಿಲ್ಲ. ಈ ವಿಷಯವು ಹರೀಶ್ವರನ ರಗಳೆಯಿಂದಲೇ ವ್ಯಕ್ತಪಡುತ್ತದೆ. ಬಸವೇಶ್ವರನ ಕಾಲದ ಅನುಭವಮಂಟಪ, ವೀರಶೈವ ವಿಚಾರಗಳು ಇವುಗಳ ಗಂಧವೇ ಆ ದೇಶಕ್ಕೆ ಉಂಟಾಗಿರುವದಿಲ್ಲ...." (ಮ. ರ. ಮುಮ್ಮುಖ ಪು. ೪.) ಎಂದು ಮು। ರಾ। ಸದ್ಧರ್ಮ ದೀಪಿಕೆಯ ಸಂಪಾದಕರವರ ಈ ಅಭಿಪ್ರಾಯವನ್ನೂ ಎತ್ತಿರುವರು.

ಇದಕ್ಕೆ ನಮ್ಮ ಉತ್ತರವು.

ಪರಸ್ಪರ ರಾಜರಲ್ಲಿ ದ್ವೇಷವಿತ್ತೆಂದು ಬೇರೆ ಬೇರೆ ಕಾರಣಗಳು ದೊರೆತಿದ್ದರೆ ಹೇಳಬಹುದಲ್ಲದೆ, ಹರಿಹರದೇವನ—'ಮಹಾದೇವಿಯಕ್ಕನ ರಗಳೆ'ಯಿಂದ ಮಾತ್ರ ಊಹಿಸಲಾಗದು. ಆಗ ಪರಸ್ಪರ ರಾಜರಲ್ಲಿ ವೈರವಿದ್ದರೂ ಭಗವಾನ್ ಶ್ರೀ ಬಸವೇಶ್ವರನ ಅನುಭವಮಂಟಪದ ವಿಚಾರಗಳಿಗೆ ಆ ವೈರವು ತಡೆಯಾಗಲಿಲ್ಲ. ಏಕೆಂದರೆ ಕರ್ನಾಟಕದಲ್ಲಿಯ ವೀರಶೈವ ಸಂಖ್ಯೆಯು ಆಗಲೂ ಬಹಳವಿದ್ದಿತು. ಆದಕಾರಣ ರಾಜ ರಾಜರ ದ್ವೇಷವಿದ್ದರೂ, ಎಲ್ಲೆಡೆಯಲ್ಲಿಯೂ ವೀರಶೈವರು ಭಗವಾನ್ ಬಸವರಾಜನ ತತ್ವಗಳಿಗೆ ಅಂದು ತಲೆಬಾಗಿ ಬಹು ಗೌರವಿಸಿದರು. ಕರ್ನಾಟಕದ ಸಂದಿಗೊಂದಿಗಳಲ್ಲಿಯೂ ಆತನ ತತ್ವವು ನುಗ್ಗಿ ಉನ್ನತ ಸ್ಥಾನವನ್ನು ಆಕ್ರಮಿಸಿತ್ತು. ಇದನ್ನು ನೋಡಿದ ಚೆನ್ನಬಸವಣ್ಣನವರು—"ಬಸವಣ್ಣಾ! ನೀವು ಮರ್ತ್ಯಕ್ಕೆ ಅವತರಿಸಿದರಿ ಭಕ್ತಿಯ ಬೆಳಸಿಗೆ ದೆಸೆದೆಸೆಗೆ ಪಸರಿಸಿತಲ್ಲ..." ಒಂದು ಉದ್ಗಾರ ತೆಗೆದದ್ದನ್ನು ನೋಡಬಹುದು. ಅಷ್ಟೇಕೆ? ಹರಿಹರ ಮಹಾಕವಿಯೇ ಬಸವಣ್ಣನವರ ವಚನಗಳ ಸಮ್ಮಂಧವಾಗಿ "ಬಸವನ ಗೀತವಂಬುಧಿ...." ಎಂಬ ಪದ್ಯದಲ್ಲಿ ತನ್ನ ಬಸವರಾಜದೇವರ ರಗಳೆ.ಯ ಹತ್ತನೆಯ ಸ್ಥಲದಾದಿಯಲ್ಲಿ ಬಣ್ಣಿ

ಸಿರುವದನ್ನು ಕಣ್ಣಿಟ್ಟಿ ನೋಡಿದರೆ, ಬಸವಣ್ಣನವರ ವಚನಗಳು ಹರಿಹರ ದೇವನಿಗೆ ತಿಳಿದಷ್ಟು ಮತ್ತಾರಿಗೂ ತಿಳಿದಿಲ್ಲವೆಂದೇ ಹೇಳಬೇಕು. ಮತ್ತು ಅದೇ ರಗಳೆಯ ಹನ್ನೆರಡನೆಯ ಸ್ಥಲದ ಆದಿಯಲ್ಲಿ—

"ಬಸವನ ಪುಣ್ಯ ಕೀರ್ತಿಲತೆ, ಬೇರ್ವರಿಯುತ್ತುರಗೇಂದ್ರ ಲೋಕದೊಳ್
ದೆಸೆಗಳನಗ್ಗಳಂ ಮುಸುಕಿ, ಪರ್ವಿಗೆಯಾಯ್ತು, ನರೇಂದ್ರ
ಲೋಕದೊಳ್ ।
ಕುಸುಮಿತವಾಗಿ, ಸೌರಭದಿ, ಹೊಂಪುಳಿಯಾಯ್ತಮರೇಂದ್ರ
ಲೋಕದೊಳ್.
ಪಸರಿಸಿ ಪೂರಿತಾಮಳ ಸುಧಾಫಳವಾದುದು ರುದ್ರ
ಲೋಕದೊಳ್ ॥೧॥

ಇಂತು ಭೆಗವಾನ್ ಬಸವರಾಜನ 'ಕೀರ್ತಿಲತೆ' ಯು ಪಸರಿಸಿತೆಂದು ಹರಿಹರದೇವನೇ ಬಗೆಮುಂಬಿ ಭಾವಿಸಿ ಬಣ್ಣಿಸಬೇಕಾದರೆ, ಇವನಿದ್ದ ರಾಜ್ಯದಲ್ಲಿ ಬಸವೇಶ್ವರನ ಕಾಲದ ಅನುಭವಮಂಟಪದ, ವೀರಶೈವ ವಿಚಾರಗಳ ಗಂಧವೇ ಉಂಟಾಗಿಲ್ಲವೆಂದು ಹೇಗೆ ಹೇಳುತ್ತಾರೆ? ಅಹುದು; ಹಾಗಾದರೆ ಲಿಂಗವಂತರಾದ ಮಹಾದೇವಿಯಕ್ಕಗಳ ಮಾತಾ ಪಿತರು, ಸ್ಥಾವರ ಲಿಂಗಕ್ಕೆ ಹೋಗಿ ಬೇಡಿಕೊಂಡರೆಂದು ಹರಿಹರ ದೇವನೇ ಏಕೆ ಹೇಳಿದ? ಎಂದು ಪ್ರಶ್ನೆ ಹಾಚಿದರೆ, ಇದಕ್ಕೆ ಉತ್ತರ ವಿಷ್ಟು:— ಸದ್ಯದ ಕಾಲದಲ್ಲಿ ಬಸವಣ್ಣನವರ ತತ್ವವು ಮತಮತಾಂತರ ದವರಿಗೂ ತಿಳಿದಿವೆಯಲ್ಲವೇ? ಆದರೂ ಎಷ್ಟೊ ತಿಳಿದ ವೀರಶೈವರೇ 'ಸಂಪ್ರದಾಯ ಶರಣರಾ'ಗಿ ಗುಡಿಗಳಿಗೆ ಹೋಗಿ ಆರಾಧಿಸುವದನ್ನು ನಾವೇ ನೋಡುತ್ತೇವೆ. ಕಾರಣ ಈಗಲೂ ಬಸವಣ್ಣನವರ ತತ್ವ ವಿಚಾ ರಗಳ ಗಂಧವೇ ಇಲ್ಲವೆಂದು ಹೇಳಲು ಬರುತ್ತದೆಯೇ? ಎಂದಿಗೂ ಸಾಧ್ಯವಿಲ್ಲ. ಒಟ್ಟಿನಲ್ಲಿ—'ಗುಡಿಗಳಿಗೆ ಪೂಜಾರ್ಥವಾಗಿ ವೀರಶೈವನು ಹೋಗಬಾರದು' ಎಂಬ ನಿಯಮವಿದ್ದರೂ ಇಂದಿನ ಕಾಲದಂತೆ ಅಂದಿನವರೂ ಕೆಲವು ಸ್ಥಾವರ ಲಿಂಗಾರ್ಚನೆಗೆ ಹೋಗುತ್ತಿದ್ದರು. [ಟಿ- ಆಗ ವೀರಶೈವರು ವಿಶೇಷವಾಗಿ ಶೈವ ಮಾರ್ಗದ ಕೆಲವು ಆಚರ ಣೆಗಳನ್ನು ಅನುಸರಿಸುತ್ತಿದ್ದರೆಂಬುದು ಇತಿಹಾಸದಿಂದಲೂ, ಕೆಲವು

ವೀರಶೈವ ಕಾವ್ಯಗಳಿಂದಲೂ ತಿಳಿದೇ ಇದೆ. ಆಗ ಬಸವಂಣನವರು ಪ್ರತಿಪಾದಿಸಿದ ತತ್ವಗಳು ಜನ ಮನಕ್ಕೆ ಒಪ್ಪಿಗೆಯಾಗಿದ್ದರೂ, ಅವು ಗಳನ್ನು ನೂತನವಾದವುಗಳಂತೆ ಭಾವಿಸಿದ್ದುದರಿಂದ,—ಬಹು ದಿನಗ ಳಿಂದ ಹಿಡಿದು ನಡೆದು ಬಂದ ತಮ್ಮ ಶೈವ ಮಾರ್ಗವನ್ನು ಬಿಟ್ಟಿರಲಿಲ್ಲ] ಇವನ್ನು ಕಂಡ ಹರಿಹರದೇವನು, ತಾನು ನೋದಿದ.ದನ್ನು ಮರೆ ಮಾಡುವ ಸ್ವಭಾವದವನಾಗದಿರುವದರಿಂದ, ಆಗಿನ ಲಿಂಗವಂತರ ವರ್ತನೆಯನ್ನೇ ಕಂಡಂತೆ ಚಿತ್ರಿಸಿರುವನು * ಇಂತು ವಿಚಾರ ಮಾಡಿದಾಗ- 'ಹರಿಹರನಿಗೆ ಶಿವಾನುಭವ ಮಂಟಪದ ವಿಚಾರಗಳು ತಿಳಿದಿಲ್ಲ' ವೆಂಬ ವಾಕ್ಯವನ್ನು ಹೇಳಿದೆ—"ಈ ಅಕ್ಕಗಳ ರಗಳೆಯಿಂದ, ಅಂದಿನ ವೀರಶೈ ವದ ಇತಿಹಾಸವು ವರ್ತನೆಯು ಮತ್ತಷ್ಟು ದಿಟವಾಗಿ, ಸ್ಫುಟವಾಗಿ ತೋರು ತ್ತದೆ" ಎನ್ನಬಹುದು.

ಇನ್ನೊಂದು ಪ್ರಶ್ನೆ.

'ಶತ್ರುರಾಜರಲ್ಲಿ-ಅದರಲ್ಲಿ ಬೇಹುಗಾರರಿಲ್ಲದ ಸ್ಥಳಗಳಲ್ಲಿ ಬರತಕ್ಕ ಸುದ್ದಿಗಳಾದರೂ ಎಂತಹವು? ವಿರೋಧದ ಸುದ್ದಿಗಳೆ. ಶತ್ರುರಾಜರನ್ನು ಹರಿಯುವ ಸುದ್ದಿಗಳೆ ಅಕ್ಕಗಳು ಕಲ್ಯಾಣಕ್ಕೆ ಬಂದ ಸುದ್ದಿಯನ್ನು ಹರಿ ಪುರೋಕೆ ಬರೆಯುವದನ್ನು ಬಿಟ್ಟನು? ಇದು ಇನ್ನೂ ವಿಚಾರ ಮಾಡ ತಕ್ಕ ಅಂಶವೇ ಆಗಿದೆ." ಎಂಬ ವಾಕ್ಯವನ್ನೂ 'ಸದ್ಧರ್ಮದೀಪಿಕೆ' ಯ ಸಂಪಾದಕರವರೇ ಬರೆದಿರುವರು. ಇದನ್ನೂ ಈ ಲೇಖಕರು 'ಮದು ವೆಯಾಗಿಲ್ಲ' ವೆಂದು ಸಾಧಿಸುವವರಲ್ಲಿ ಪರಿವರ್ತಿಸಿಕೊಂಡಿರುವರು.

ನಮ್ಮ ಉತ್ತರ.

ಬೇಹುಗಾರರಿಲ್ಲದ ಶತರಾಜರಿಗೆ-ಸ್ಥಳಗಳಿಗೆ-ವಿರೋಧದ, ತಮ್ಮನು ಜಯಿಸುವ ವಾರ್ತೆಗಳು ಬರುತ್ತವೆ; ಬರಲಿ. ಆದರೆ ಕೌಶಿಕರಾಜನು

---

* ಇದರಿಂದ ಹರಿಹರದೇವನೂ ಸ್ಥಾವರ ಲಿಂಗಾರ್ಚನೆಗೆ ಹೋಗುತ್ತಿದ್ದನೆಂದು ತಿಳಿ ಯಬಾರದು. ಏಕೆಂದರೆ— ಶೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರದಲ್ಲಿ— "ವಿಷ್ಣು ವರ್ಧನನ ಅನ್ಯಧೈವಕ್ಕೆ ಕೊಡಮಾಡಲೊಲ್ಲೆನು; ಗುಡಿಯ ಹೊಗಲೊಲ್ಲೆನು" ಎಂಬು ದಾಗಿ ಆ ಹರಿಹರದೇವನ 'ಪ್ರತಿಜ್ಞೆ' ಇದ್ದಿತೆಂದು ಉಲ್ಲೇಖವಿದೆ. ಈ ವಿಷಯವನ್ನು ಮುಂದೆ ನಿರೂಪಿಸುವ ಪ್ರಸಂಗವೊದಗಿದರೆ ಇನ್ನೂ ಹೆಚ್ಚು ವಿಶದಪಡಿಸುವದರಲ್ಲಿ ಬರ ಬಹುದು.

ಮಹಾದೇವಿಯಕ್ಕಗಳನ್ನು ಮದುವೆಯಾದನೆಂದು ಸುದ್ದಿ ಬಂದಕಿ ಇವ
ರಿಂದ ಅನ್ಯರಾಜರನ್ನು ಜರೆದಂತಾಗುವದೇ? ಇರಿದಂತಾಗುವದೇ?
ಮತ್ತು ಈ ಸಂಗತಿಯು ಪರಸ್ಪರ ರಾಜರ ವಿರೋಧಕ್ಕೆ, ವಿಕೋಪಕ್ಕೆ,
ವೈಮನಸ್ಸಿಗೆ ಕಾರಣವಾಗುತ್ತದೆಯೆ? ಕಿಡಿಯಾಗುತ್ತದೆಯೆ? ಈ ವಿವಾ
ಹಕ್ಕೂ ಆ ವಿರೋಧಕ್ಕೂ ಎತ್ತಣಿಂದಲೂ ಸಂಬಂಧವೇ ಇಲ್ಲ. §

(ಮುಂದೆವರಿಯುವದು.)

§ ಇನ್ನು ಅಕ್ಕಗಳು ಕಲ್ಯಾಣಕ್ಕೆ ಬಂದ ಸುದ್ದಿಯನ್ನು ಹರೀಶ್ವರನೇಳೆ ಬರೆಯು
ವದನ್ನು ಬಿಟ್ಟನು!—' ಎಂಬ ಪ್ರಶ್ನೆಗೆ, ಇದೇ ವರ್ಷದ ಆಗಷ್ಟ ತಿಂಗಳಿನ 'ಶಿವಾನು
ಭವ' ಪತ್ರಿಕೆಯಲ್ಲಿ 'ಮಹಾದೇವಿಯಕ್ಕಗಳ ಜೀವನ ಮತ್ತು ಸಾಹಿತ್ಯ' ಎಂಬ ಲೇಖದ
ಕಳಸ ಮತ್ತು ಕಳಸನೇ ಪುಟವಲ್ಲಿ ವಿವರಿಸಿದ್ದೇನೆ.

ಶ್ರೀ. ಹಾನಗಲ್ಲ ಸ್ವಾಮಿಗಳವರು ರಚಿಸಿದ

ಹಾಡುಗಬ್ಬಗಳು.

ಪದ್ಯ ೧.

(ರಾಗ-ಪಹಡಿ)

ಪಾಹಿ ಶಿವ ನೀ ಪಾಹಿ ಶಿವ।
ನಾ ಮರೆಹೊಕ್ಕೆ ದೇವ ॥ಪ॥

೧

ಪುರಹರ ನಿನ್ನಯ ಕರುಣವಿಲ್ಲದೆ।
ಮರಳಿ ಮರಳಿ ಭವದೊಳು ತಿರುಗಿ॥
ಘೋರ ಕಷ್ಟದೊಳು ಪಾರುಗಾಣೆ ನಾ।
ಪರಮೇಶ! ಪರಿತೋಷ!! ವರಕೋಶ!!! ॥

೨

ಮಲವಾಯದಿ ಬಲು ಕಳವಳಗೊಳ್ಳುವೆ।
ಬಲವಂತನೆ ಸಲಹುವದೆನ್ನಂ॥
ಬಲುಮೆಯುಳ್ಳ ಬಹು ಕಲುಷವ ಕಾಟವು॥
ಬಲುಶಾಂತ! ಕಲೆಯಾಂತ!! ಫಲವಂತ!!! ॥

೩

ಶಿವನರ್ಚನೆಯೊಳು ತನು, ಮನ, ಧನವನು।
ಸವೆಸುವ ತವೆ ಸಾಧನವಿರಿಸಿ॥
ಜೀವಭಾವವನು ಕಳೆಯುತ ಕೃಪೆಯಿಂ।
ಶಿವಯೋಗಿ! ಸುವಿರಾಗಿ!! ಭವತ್ಯಾಗಿ!!! ॥

ಪದ್ಯ ೨.

(ಜೀವನ್ ಪುರಿರಾಗ.)

ಜೀವ, ದೇವ! ಜೀವಗುಣವ ಜವದಿ ।
ನಾಶಗೊಳಿಸಿ ಕಾಯೋ ॥ಪ॥

೧

ಘನಪಾಪವು ಮುಸುಕಿ ।
ನಿರ್ವಾಣವನಾವೆ ।
ಮನುಮುನಿ ವಂದ್ಯ ॥

೨

ಮಮತಾ ವಿಷಯದೊಡನೆ ।
ಪ್ರಮಾದಗೊಳುವೆ ।
ಸುಮನವ ನಿತ್ತು ॥

೩

ಶಿವಯೋಗದೊಳಿರಿಸಿ ।
ನಿರ್ವಾಣ ಸುಖವ ।
ತಪೆ ಪಾಲಿಸುತೆ ॥

ಪದ್ಯ ೩.

(ರಾಗ-ಸಿಂಧುರ)

ದೇವ ಪೊರೆಯೊ! ಭವಮಾಲೆಯಜಿತ ।
ಭಾವಜಮದಹತ ಈ ವಸುಜಾತ ॥ಪ॥

೧

ಚಿತ್ತದ ರಾಗ । ಭ್ರಾಂತಿಯ ಪೂಗ ।
ಗುಹೇಶ್ವರ ।
ಜೊತೆಗೂಡಿ ಅತಿ ವೇಗ ॥

(ಮುಂದಿ ಸಾಗುವದು.)

ಶಿವಾನುಭವ.

ವರ್ಷ ೧೨] ಡಿಸಂಬರ ೧೯೩೭ [ಸಂಚಿಕೆ ೩

ಅಕ್ಕಮಹಾದೇವಿಯ ಜೀವನ ರಹಸ್ಯ.

(ಲೇಖಕ:-- ಪ್ರೊ॥ ಎಸ್. ಎಸ್. ಮಾಳವಾಡ, ಎಮ್. ಏ. ಪ್ರೊಫೆಸರ
ಕರ್ನಾಟಕ ಕಾಲೇಜ— ಧಾರವಾಡ.)

ಅಕ್ಕನ ವ್ಯಕ್ತಸ್ವರೂಪವನ್ನು ಶೂನ್ಯಸಂಪಾದನೆಕಾರರು ಹೀಗೆ ಕೊಟ್ಟಿದ್ದಾರೆ:—

ಭಕ್ತಿಯ ಭಾಗ್ಯವೆನಿಪ, ಮುಕ್ತಿಯ ತವರ್ಮನೆ ಎನಿಪ, ಶಿವ ಭಾವಸಂಪನ್ನೆ, ಪ್ರಸಾದದ ಮೇರುವೆ, ತತ್ವ ಶಿಖಾಮಣಿ, ಪುಣ್ಯದ ಪುಂಜೆ, ನೈಷ್ಠೆಯ ಕಣಿ, ಸತ್ಯದ ಸದನ, ಶಾಂತಿಯ ನಿಧಿ, ಚಿದಂಬರ ಸಂಯುತೆ, ಸ್ವಾನುಭವದ ಸಾಗರ, ನಿತ್ಯದ ನಿವಾಸೆ— ಎನಿಪ ಮಹಾದೇವಿಯಕ್ಕಂಗಳ್—

ಈ ವ್ಯಕ್ತಿಸ್ವರೂಪವನ್ನು ಅನುಸರಿಸಿ ಅಕ್ಕನ ಮೂರ್ತಿಯನ್ನು ನಾವು ಕಲ್ಪಿಸಿಕೊಳ್ಳಬಹುದಾಗಿದೆ. ಅಲ್ಲದೆ ನಮಗೆ ಉಪಲಬ್ಧವಿರುವ ಪುರಾಣಗಳ ಕಥಾಂಶಗಳಲ್ಲಿಯ ವ್ಯತ್ಯಾಸವನ್ನು ಬಿಟ್ಟುಗೊಟ್ಟು ಅಕ್ಕನ ಜೀವನದ ರಹಸ್ಯವನ್ನು ತಿಳಿದುಕೊಳ್ಳುವದಾದರೆ ಅದನ್ನು 'ಧ್ಯೇಯಕ್ಕಾಗಿ ಆತ್ಮಾರ್ಪಣ' ಎಂಬ ಒಂದೇ ಮಾತಿನಲ್ಲಿ ಹೇಳಲು ಸಾಧ್ಯವಿದೆ. ಕನ್ನಡ ನಾಡಿನ ಜೀವಜ್ಯೋತಿಗಳಲ್ಲಿ ಶ್ರೇಷ್ಠಸ್ಥಾನದಲ್ಲಿರುವ ಅಕ್ಕನ ಪೌರಾಣಿಕ ವ್ಯಕ್ತಿತ್ವದ ಸುತ್ತಲೂ ಅನೇಕ ಘಟನೆಗಳು ಹೆಣೆಯಲ್ಪಟ್ಟಿವೆ. ಅಪಕ ವ್ಯಕ್ತಿತ್ವವನ್ನು ಉಜ್ವಲಗೊಳಿಸಬೇಕೆಂಬ ಭರದಲ್ಲಿ ಅನೇಕರು ಅನೇಕ ರೀತಿಯಿಂದ ಅವಳನ್ನು ಬಣ್ಣಿಸಲು ಯತ್ನಿಸಿರುವದರಿಂದ ಅಕ್ಕನ

ಬಗೆಗೆ ಇರುವ ಪ್ರಾಚೀನ ಸಾಹಿತ್ಯದಲ್ಲಿ ಭಿನ್ನಾಭಿಪ್ರಾಯಗಳು ಇರುವುದು ಸ್ವಾಭಾವಿಕವಾಗಿದೆ. ಅಕ್ಕನ ಬಗೆಗೆ ಇದುವರೆಗೆ ನಮಗೆ ಕಂಡು ಬಂದಿರುವ ಪ್ರಾಚೀನ ಸಾಹಿತ್ಯವು ಇಪ್ಪುಃ—

(೧) ಹರಿಹರಕೃತ ಮಹಾದೇವಿಯಕ್ಕನ ರಗಳೆ.
(೨) ಚೆನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ.
(೩) ಮಹಾದೇವಿಯಕ್ಕನ ಸಾಂಗತ್ಯ.
(೪) ಚಾಮರಸನ ಪ್ರಭುಲಿಂಗಲೀಲೆ.
(೫) ಶೂನ್ಯಸಂಪಾದನೆ.
(೬) ಚೆನ್ನಬಸವ ಪುರಾಣ. ಮುಂತಾದ ವೀರಶೈವ ಪುರಾಣಗಳಲ್ಲಿಯ ಸಂದರ್ಭಗಳು.

ಈ ಮೇಲಿನ ಸಾಹಿತ್ಯದಲ್ಲಿ ಅಡಕವಾಗಿರುವ ಚರಿತ್ರೆಯಲ್ಲಿಯ ಭಿನ್ನಾಭಿಪ್ರಾಯಗಳನ್ನು ಬಿಟ್ಟುಕೊಟ್ಟರೆ ಅಕ್ಕನ ಚರಿತ್ರೆಯನ್ನು ಹೀಗೆ ಸಂಗ್ರಹಿಸಬಹುದು.

ದಕ್ಷಿಣ ದೇಶದ ಉಡುತಡಿಯಲ್ಲಿ ಒಂದು ಸಾಮಾನ್ಯ ಶೈವ ಮನೆತನದಲ್ಲಿ ಮಹಾದೇವಿಯಕ್ಕನ ಜನ್ಮವಾಯಿತು. ಅವಳು ರೂಪವತಿಯಾಗಿದ್ದಳು. ಶಿವಭಕ್ತಳಾಗಿದ್ದಳು ಅವಳು ಯೌವನಾವಸ್ಥೆಗೆ ಬಂದ ಕಾಲಕ್ಕೆ ಆ ಭಾಗದ ಅರಸನಾದ ಕೌಶಿಕನು ಆಕೆಯನ್ನು ಮೋಹಿಸಿದನು. ಆತನು ಶಿವಭಕ್ತನಲ್ಲದುದರಿಂದ ಅಕ್ಕನು ಅವನನ್ನು ತಿರಸ್ಕರಿಸಿ ಮನೆಯನ್ನು ಬಿಟ್ಟು ಹೊರಟುಹೋದಳು. ಬಾಲ್ಯದಿಂದಲೂ ತನಗೆ ಶಿವನೇ ಗಂಡನಾಗಬೇಕೆಂಬ ಹಂಬಲವನ್ನಿಟ್ಟುಕೊಂಡಿದ್ದು ಅದನ್ನು ಸಾಧಿಸುವದಕ್ಕಾಗಿ ವೀರ ವಿರಕ್ತವ್ರತವನ್ನು ತಳೆದು, ಜ್ಞಾನವನ್ನು ಸಂಗ್ರಹಿಸಿ, ಅರಣ್ಯದಲ್ಲಿ ಅನೇಕ ದಿನಗಳ ವರೆಗೆ ತೊಳಲಿ, ಬಳಲಿ, ಆಧ್ಯಾತ್ಮಿಕ ವಿರಹದಿಂದ ಬೆಂಡಾಗಿ ಕೊನೆಗೊಮ್ಮೆ ನಿಸರ್ಗರಮ್ಯ ಕದಳಿಯ ಬನದಲ್ಲಿ ತನ್ನ ಬಾಲ್ಯದ ಕನಸನ್ನು ನನಸಾಗಿ ಕಂಡಳು. ಅಂದರೆ ಯೌವನವಲ್ಲಿಯೇ ಮನೆ, ತಾಯಿತಂದೆ ದಾಂಪತ್ಯ ಸುಖಗಳನ್ನು ತೊರೆದು ಜ್ಞಾನಕ್ಕಾಗಿ ಹಂಬಲಿಸಿ, ತನ್ನ ಧ್ಯೇಯಕ್ಕಾಗಿ ಆತ್ಮಾರ್ಪಣ ಮಾಡಿದಳು. ಈ ನಿರ್ವಿವಾದವಾದ ಅಕ್ಕನ ಚರಿತ್ರೆಯಲ್ಲಿ ಅಕ್ಕನ ವೀರ ವಿರಕ್ತಿ, ಶ್ರೇಷ್ಠ ಅನುಭಾವ, ಅನುಪಮವಾದ ಸಾಹಸ, ಧೈರ್ಯ, ಧ್ಯೇಯನಿಷ್ಠೆ ಇವೆಗಳು ಮೂರ್ತಿಮತ್ತಾಗಿ ಕಂಡುಬರುತ್ತವೆ.

ಇನ್ನು ಅಕ್ಕನ ಚರಿತ್ರೆಯಲ್ಲಿ ಕಂಡುಬರುವ ಭಿನ್ನಾಂಶಗಳನ್ನು ಚರ್ಚಿಸುವಾಗ ತೀರ ಮೊದಲಿಗನಾದ ಹರಿಹರನ ಕಥಾಂಶವನ್ನು ಇಂದು ಜನಪ್ರಿಯವಾಗಿರುವ ಚಾಮರಸನ ಕಥಾಂಶವನ್ನು ನಾವು ತುಲನಾತ್ಮಕದೃಷ್ಟಿಯಿಂದ ನೋಡಬೇಕಾಗುತ್ತದೆ.

ಹರಿಹರನ ರಗಳೆಯಲ್ಲಿ ಅಕ್ಕನ ಅವತಾರದ ಕಾರಣ, ಅಕ್ಕನ ತಾಯಿತಂದೆಗಳ ಹೆಸರು ಬೇರೆಯಾಗಿದ್ದರೂ ಅವು ಮುಖ್ಯ ವಿಷಯವಲ್ಲ. ಗುಪ್ತಗಣನಾಥನು ಕಾಲು ಸೋಂಕಿದ ಕಾಲಕ್ಕೆ ರುದ್ರಕನ್ನಿಕೆಯು ಅವನನ್ನು ಭವಿಯೆಂದು ಕೋಪದಿಂದ ಜರಿದಳು. ಅದಕ್ಕಾಗಿ

ಭಕ್ತರುದರಂಬೊಕ್ಕು ನಿಜನಾಮವಂ ತಳೆದು
ಭಕ್ತನಂ ಭವಿಯೆಂದು ದೂಸರಿಂದಪ್ಪುದಿದು
ಭವಿಗೆ ಹೆಂಡತಿಯಾಗಿ ಭಕ್ತರ್ಗೆ ಶರಣೆಂದು
ಭವವಾರ್ಧಿಯಂ ದಾಂಟಿ ಶ್ರೀಗಿರಿಗೆ ನಡೆತಂದು
ಬಳಿಕ ಬಪ್ಪುದು.

ಎಂಬ ಶಾಸನವನ್ನು ಪಾರ್ವತಿಯಿಂದ ಪಡೆಯುತ್ತಾಳೆ. ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಅಕ್ಕನ ಅವತರಣ ಕಾರಣವು ಹೀಗೆ ಇದೆಃ—

ಪಾರ್ವತಿಯು ಅಲ್ಲಮನ ವಿರಕ್ತಿಯನ್ನು ಪರಿಕಿಸಲು ತನ್ನ ತಾಮಸ ಕಳೆಯನ್ನು ಭೂಲೋಕಕ್ಕೆ ಕಳಿಸಿರಲು ಆ ಪ್ರಯತ್ನವು ವಿಫಲವಾಯಿತು. ಆದುದರಿಂದ ಆಕೆಯು ತನ್ನ ಸಾತ್ವಿಕ ಕಳೆಯನ್ನು ಕಳಿಸಿದಳು. ಆಗ

ಇಳಿಯೊಳುಡುತಡಿಯೆಂಬ ಪಟ್ಟಣ
ದೊಳಗೆ ವೀರ ಶಿವಾಗಮಿಕ ನಿ
ರ್ಮಳನ ವಲ್ಲಭೆಯೆನಿಪ ಸುಮತಿಯ ಗರ್ಭಶುಕ್ತಿಯಲಿ
ಚೆಲುವೆಯಾದ ಕುಮಾರಿಯೆಂಬ
ನ್ಗಳದ ಮುತ್ತುದಯಿಸಿತು ಧರಣೀ
ತಳದೊಳಗೆ ಪಾರ್ವತಿಯ ಸಾತ್ವಿಕ ಗುಣವೆ ರೂಪಾಗಿ.

ಅಕ್ಕಮಹಾದೇವಿಯ ತಾಯಿತಂದೆಗಳ ಹೆಸರು ಪ್ರಭುಲಿಂಗಲೀಲೆಯಲ್ಲಿ ನಿರ್ಮಳ, ಸುಮತಿ ಎಂದಿದ್ದರೆ ಹರಿಹರನ ರಗಳೆಯಲ್ಲಿ ಶಿವಭಕ್ತ, ಶಿವಭಕ್ತಿ ಎಂಬದಾಗಿ ಇದೆ.

ಹರಿಹರನ ಶಿವಶರಣರ ರಗಳೆಯಲ್ಲಿ ಶರಣರ ಅವತಾರದ ಕಾರಣಗಳು ಒಂದೇ ರೀತಿಯಾಗಿವೆ. ಶಿವನ ಓಲಗದಲ್ಲಿ ಆವುದೊಂದು ತಪ್ಪನ್ನು ಗೈದವರಿಗೆ ಭೂಲೋಕದಲ್ಲಿ ಜನ್ಮ ತಳೆಯಲು ಶಾಪಕೊಡುವದೇ ಸರ್ವಸಾಮಾನ್ಯಕಾರಣ. ಅದಕ್ಕನುಸರಿಸಿ ಅಕ್ಕನ ಅವತಾರವಾಗಿದೆ. ಭವಿಯೆಂದು ಶಿವಭಕ್ತನನ್ನು ದೂಷಿಸಿದ್ದರಿಂದ ಭವಿಗೆ ಹೆಂಡತಿಯಾಗುವ ಶಾಪವನ್ನು ಪಾರ್ವತಿಯು ಆಕೆಗೆ ಕೊಟ್ಟದ್ದರಿಂದ ಹರಿಹರನ ಪ್ರಕಾರ ಅಕ್ಕನ ಮದುವೆಯು ಕೌಶಿಕನೊಡನೆ ಆಗುತ್ತದೆ. ಆದರೆ ಚಾಮರಸನ ಅಭಿಪ್ರಾಯದ ಪ್ರಕಾರ ಮದುವೆ ನಡೆಯುವದಿಲ್ಲ. ಕೌಶಿಕನು "ನಮಗೆ ಶಿವಭಕ್ತಿಯನು ಮಾಡುವ ಸಮಯವಳವಡಪೆನಲು ಸೃಪತಿಗೆ ರಮಣಿ ನುಡಿವಳು ನಮಗೆ ನಿಮ್ಮಯ ಸಂಗವಳವಡದು."

ಅಕ್ಕನ ಜೀವನದಲ್ಲಿಯ ಈ ಘಟನೆಯು ಇಂದು ಬಹು ಜನರ ಲಕ್ಷವನ್ನೆಳೆದು ಅನೇಕ ವಾದಗಳಿಗೆ ಎಡೆಗೊಟ್ಟಿದೆ. ಅಕ್ಕನು ಮದುವೆ ಮಾಡಿದ್ದರಿಂದ ಹರಿಹರನನ್ನು ಅಲ್ಲಗಳೆಯುವ ಪ್ರಯತ್ನವೂ ಕೂಡ ಕೆಲವು ಲೇಖನಗಳಲ್ಲಿ ಕಂಡುಬರುತ್ತಿದೆ. ಹರಿಹರನನ್ನು ಸಮರ್ಥಿಸುವ ಹಟವು ಕೆಲವರಲ್ಲಿದೆ. ಆದುದರಿಂದ ಈ ಮಾತಿನ ಬಗೆಗೆ ಸ್ವಲ್ಪ ವಿಶದವಾದ ಚರ್ಚೆಯು ಅವಶ್ಯಕವಾಗಿದೆ. ಹರಿಹರನು ಉಳಿದ ಎಲ್ಲ ಕವಿಗಳಿಗಿಂತ ಮೊದಲಿಗನಾದುದರಿಂದ ಅತನ ಹೇಳಿಕೆಯೇ ಸರಿಯೆಂದು ಒಂದು ಪಕ್ಷ. ಹರಿಹರನು ಕಲ್ಯಾಣ ಪ್ರಾಂತದಿಂದ ದೂರವಿದ್ದುದರಿಂದ ಆ ನಾಡಿನ ಚಟುವಟಿಕೆಗಳ ಪರಿಚಯವು ಅವನಿಗಿರಲಿಲ್ಲ. ಅಲ್ಲದೆ ಅತನು ಹಳೇ ಬೀಡಿನಿಂದ ಹೊರದೂಡಲ್ಪಟ್ಟು ಹಂಪೆಯಲ್ಲಿ ಇರುವ ಸಂದರ್ಭವಿದ್ದುದರಿಂದ ಮಹಾದೇವಿಯಕ್ಕನ ಜೀವನದ ಅಂಶಗಳನ್ನು ಕೂಡ ಅರಿತುಕೊಳ್ಳಲಿಕ್ಕೆ ಆಗಿನ ಕಾಲಕ್ಕೆ ಅನುಕೂಲವಿರಲಿಲ್ಲ. ಆದುದರಿಂದ ಅತನ ಹೇಳಿಕೆಯನ್ನು ನಂಬಬೇಕಾಗಿಲ್ಲ ಎಂದು ವಾದಿಸುವ ಪಕ್ಷವು ಎರಡನೆಯದು. ಹೀಗೆ ವಾದಿಸುವವರಿಗೆ ಶೈವಭಕ್ತಿ ಸಾಮ್ರಾಜ್ಞಿಯು ಭವಿಯೊಡನೆ ಮದುವೆಯಾಗುವ ಕಲ್ಪನೆ ಸಹ್ಯವಾಗಿ ತೋರುವದಿಲ್ಲ.

(೧) ಅಕ್ಕನು ಮದುವೆಯಾಗಿ ಕೌಶಿಕನ ಸಹವಾಸ ಸುಖದಲ್ಲಿದ್ದು ಆತನಿಂದ ಮೂರು ತಪ್ಪು ನಡೆದ ಮೇಲೆ ಆತನನ್ನು ತ್ಯಜಿಸಿದಳೆಂಬುದು ಹರಿಹರನ ಅಭಿಪ್ರಾಯ.

(೨) 'ನೃಪತಿಗೆ ರಮಣಿ ನುಡಿದಳು ನಮಗೆ ನಿಮ್ಮಯ ಸಂಗವಳವಡದು' ಎಂಬ ಅಭಿಪ್ರಾಯವು ಚಾಮರಸನದು. ಅದುವೇ ಇನ್ನು ಕೆಲವು ವೀರಶೈವ ಪುರಾಣಗಳಲ್ಲಿ ಇದೆ.

'ವಿರಕ್ತಿ ಒಂದುದು ಮೀಸಲಳಿಯದ ಕನ್ನೈತನದಲಿ' ಎಂಬ ಚಾಮರಸನ ಅಭಿಪ್ರಾಯಕ್ಕೂ ಕೌಶಿಕನ ಸಹವಾಸದಲ್ಲಿ ಅಕ್ಕನು ಇದ್ದಳು ಎಂಬ ಹರಿಹರನ ಅಭಿಪ್ರಾಯಕ್ಕೂ ಮಧ್ಯವರ್ತಿಯಾಗಿರುವ ಇನ್ನೂ ಒಂದು ಕಲ್ಪನೆಯು ಇದೆ. ಅದೆಂದರೆ ಅಕ್ಕನ ಮದುವೆಯಾಯಿತು. 'ಹೀಗೆ ಮದುವೆಯಾದರೂ ಅಂಗಸಂಗ ಸುಖವು ಒದಗಲಿಲ್ಲ.' (ಮ. ರ. ಮುಮ್ಮುಖ ಪು. ೨). ಇದರಿಂದ ಅಕ್ಕನು ಭವಿಯ ಸಂಗವಲ್ಲಿದ್ದುದು ಕೆಲವರಿಗೆ ಸೇರುವದಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಅಕ್ಕನು ಕೌಶಿಕನ ಸಂದರ್ಶನ ಮಾಡಿದಳೆಂಬುದರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಹಾಗೆ ಕೌಶಿಕನಲ್ಲಿಗೆ ಹೋದುದೇ ವಿವಾಹವಾಗಿ ಆತನಲ್ಲಿದ್ದಳೆಂದು ತಿಳಿಯುವದಕ್ಕೆ ಅವಕಾಶ ಕೊಟ್ಟಿದೆಯೆಂದು ಕೆಲವರು ಊಹಿಸುತ್ತಾರೆ. "ಮಿಕ್ಕಿನ ಲೋಕದ ಗಂಡರ ಸಂಬಂಧವೆನಗಿಲ್ಲವಯ್ಯ" ಎಂಬ ಮಾತನ್ನು ಮದುವೆಯಾಗಲಿಲ್ಲವೆಂದು ಹೇಳುವವರು ಉದಾಹರಿಸುತ್ತಿದ್ದಾರೆ. ಆದರೆ ಆದೇ ಉಕ್ತಿಯಿಂದ ಮದುವೆಯಾಗಿದ್ದರೂ ಲೋಕದ ಗಂಡರ ಸಂಬಂಧವನ್ನು ತಡೆದುಹಾಕಿದ್ದಾಳೆಂಬ ಅಭಿಪ್ರಾಯವನ್ನೂ ಕೂಡ ನಾವು ಪಡೆಯಬಹುದಾಗಿದೆ. ಲೋಕದ ಗಂಡನನ್ನು ಪಡೆದಿದ್ದರೂ ಅವನು 'ಸಾವು ಕೊಡುವ' ಗಂಡನಾದುದರಿಂದ ಅವನನ್ನು ಒಲೆಯೊಳಗಿಕ್ಕು' ಎಂದು ಹೇಳಿ ಬಾಲ್ಯದ ತನ್ನ ಕನಸಿನ 'ಹೊಳೆವ ಕೆಂಜೆಡೆಗಳ..... ಕಾಂತಿಯಿಂ ಈರೇಳು ಭುವನವುಂ ಬೆಳಗುವ ದಿವ್ಯ ಸ್ವರೂಪ' ನನ್ನು ಕಾಣುವ ಬಯಕೆಯಿಂದ ಹೊರಟು ಹೋಗಿರಬೇಕೆಂದು ಊಹಿಸುವದು ತಪ್ಪಾಗಲಾರದು. ಭವಿಯ ಸಂಗವು ಅಕ್ಕನಿಗೆ ಗೌರವವನ್ನು ತರುವದಿಲ್ಲವೆಂಬ ಭಾವನೆಗೆ ಒಳಪಟ್ಟು ಹರಿಹರ ಕವಿಯನ್ನು ತೀಕ್ಷ್ಣಣವಾಗಿ ನಿಂದಿಸುವುದು ಸರಿಯಲ್ಲ. ಅಕ್ಕನ ಬಗೆಗೆ ಉಪಲಬ್ಧವಿರುವ ಪ್ರಾಚೀನ ಸಾಹಿತ್ಯದಲ್ಲಿ

(೧) ಹರಿಹರನ ರಗಳೆ.
(೨) ಚೆನ್ನಬಸವಾಂಕನ ಪುರಾಣ.
(೩) ಕೆಂಚವೀರಣ್ಣೊಡೆಯರ ಶೂನ್ಯಸಂಪಾದನೆ.

ಇವುಗಳು ಅಕ್ಕನ ಮದುವೆಯನ್ನು ಸಮರ್ಥಿಸುತ್ತಿವೆ. ಚಾಮರಸನ ಪ್ರಭುಲಿಂಗಲೀಲೆ ಸಿದ್ಧವೀರಣ್ಣೊಡೆಯನ ಸಂಪಾದನೆಯಲ್ಲಿ ಮಾತ್ರ ಈ ವಿವಾಹವಾಗಿಲ್ಲವೆಂದು ಹೇಳಿದೆ. ಹರಿಹರನು ಹೇಳಿದ ಮಾತು ಸತ್ಯವಾಗಿ ತೋರದ್ದರಿಂದ ಎರಡುನೂರು ವರುಷ ನಂತರ ಚಾಮರಸನು ಅದನ್ನು ಮಾರ್ಪಡಿಸಲು ಪ್ರಯತ್ನಿಸಬೇಕೆಂಬ ಊಹೆ ತಪ್ಪಾಗಲಿಕ್ಕಿಲ್ಲ. ಹರಿಹರನ ಮಾತು ಅಫಿಕೃತವಲ್ಲವೆಂದು ಹೇಳುವವರು ಕೆಳಗಿನ ಕಾರಣಗಳನ್ನು ಕೊಡುತ್ತಾರೆ.

(೧) ಹರಿಹರನಿಗೆ ಅಕ್ಕನ ತಾಯಿತಂದೆಗಳ ಹೆಸರು ಸರಿಯಾಗಿ ಗೊತ್ತಿಲ್ಲ.

(೨) ಶೈವ ಸಾಮ್ರಾಜ್ಞಿಯನ್ನು ಭವಿಯ ಸಂಗ ಮಾಡಿಸುವ ಮುಂತಾದ ಸಲ್ಲದ ಚರಿತ್ರೆಯನ್ನು ಹೇಳಿವ್ದಾನೆ. ಆದ್ದರಿಂದ ಕವಿ ಹರೀಶ್ವರನಿಗೆ ಅಕ್ಕನ ಚರಿತ್ರೆ ಗೊತ್ತಿಲ್ಲ.

(೩) ಅಕ್ಕನ ಜೀವನದ ಉಜ್ವಲ ಭಾಗವಾದ ಶಿವಾನುಭವ ಮಂಟಪದ ಸಂದರ್ಶನವನ್ನು ಹರಿಹರನು ಉಲ್ಲೇಖಿಸಿಲ್ಲ.

(೪) ಅಕ್ಕನು ಅರಣ್ಯಕ್ಕೆ ಬಂದ ನಂತರ ಹರಿಹರನು ಹೇಳುವ ಚರಿತ್ರಾಂಶವು ಅಕ್ಕನ ಚರಿತ್ರಕ್ಕೆ, ತತ್ತ್ವಕ್ಕೆ ಒಪ್ಪವಂತಹದಿಲ್ಲ.

(೫) ಹರಿಹರನು ತೀರ ಮೊದಲಿನ ಕವಿಯಾದರೂ ಆತನಿಗೆ ನಿಜಸ್ಥಿತಿಗಳು ಗೊತ್ತಿರಲಿಲ್ಲ.

ಹರಿಹರನ ಕಾವ್ಯೋದ್ದೇಶವನ್ನು ಆತನು ಚಿತ್ರಿಸಿರುವ ಶರಣರ ಮೂರ್ತಿ ಸ್ವರೂಪವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಮೇಲಿನ ಆಕ್ಷೇಪಣೆಗಳಲ್ಲಿ ಸಾಕಷ್ಟು ತಥ್ಯವಿಲ್ಲವೆಂದು ತಿಳಿಯುವುದು.

(೧) ಅಕ್ಕನ ತಾಯಿತಂದೆಗಳ ಹೆಸರು ನಿರ್ಮಳ ಸುಮತಿ ಎಂಬುದಾಗಿದ್ದು ಹರಿಹರನು ಅವರನ್ನು ಶಿವಭಕ್ತ, ಶಿವಭಕ್ತೆ ಎಂದು ಕರೆದಿರುವನು ಎಂದು ಹೇಳುವದಾದರೆ ನಿಜವಾದ ಹೆಸರು ನಿರ್ಮಳ, ಸುಮತಿ ಎಂಬದಾಗಿಯೇ ಇರಬೇಕೆಂದು ಹೇಳಲಿಕ್ಕೆ ಆಧಾರವೇನು? ಅಲ್ಲದೆ ನಿರ್ಮಳ ಸುಮತಿ ಇವುಗಳಾದರೂ ಶಿವಭಕ್ತ, ಶಿವಭಕ್ತೆಯಂತೆ ಗುಣವಾಚಕ ವಿಶೇಷಣಗಳಂತೆಯೇ ತೋರುವದಿಲ್ಲವೇ? 'ಶಿವಭಕ್ತರುದರಂ ಬೊಕ್ಕ್ಯ' ಎಂಬ ಶಾಪವಿರುವದರಿಂದ ಅದಕ್ಕ ಹೆಚ್ಚಾಗಿ ಅನ್ವಯಿಸುವಂತೆ ಹೆಸರುಗಳನ್ನು ಆರಿಸಿದ್ದರೆ ತಪ್ಪೇನು? ಮುಂದೆ ಚಾಮರಸನು ಅಕ್ಕನ ಚರಿತ್ರಾಂಶವನ್ನು ಮಾರ್ಪಡಿಸುವಾಗ ಹೆಸರುಗಳನ್ನೂ ಮಾರ್ಪಡಿಸಿರಬಹುದೆಂದು ಊಹಿಸಬಹುದಲ್ಲವೇ?

(೨) ಶಿವಭಕ್ತನನ್ನು ಭವಿಯೆಂದು ಹೇಳಿದ ಕಾರಣದಿಂದಲೇ ಅಕ್ಕನಿಗೆ ಭವಿಸಂಗವಾಗಬೇಕಾಯಿತೆಂದು ಹರಿಹರನ ಅಭಿಪ್ರಾಯವಿದೆ! ಶಿವನ ಓಲಗದಲ್ಲಿಯ ಸಂದರ್ಭಕ್ಕೆ ಅನುಸರಿಸಿ ಕಥಾರಚನೆಯಿದೆ. ಆಥವಾ ಚರಿತ್ರವನ್ನು ಅನುಸರಿಸಿಯೇ ಓಲಗದಲ್ಲಿಯ ಶಾಪರಚನೆಯಿದೆ ಎಂದು ಹೇಳಿದರೆ ತಪ್ಪೇನು? ಕೌಶಿಕನೊಡನೆ ಮದುವೆಯಾಗುವದರಿಂದ ಅಕ್ಕನ ಮೂರ್ತಿ ಸ್ವರೂಪಕ್ಕೆ ಗೌರವವಿಲ್ಲವೆಂದು ಏಕೆ ನಂಬಬೇಕು? 'ಕಾರಿಕಾಲವ್ಮ್ಯೆ ತಾಂ ಭವಿಯೊಡನೆ ಬಾಳಲೇ? ಹೇರೂರ ಹೆಂಗೂಸು ಭವಿಗೆ ಸತಿಯಾಗಲೇ'? ಎಂಬ ಹರಿಹರನ ವಾದವು ಸಮಂಜಸವೆಂದು ಏಕೆ ಹೇಳಬಾರದು? ಅಕ್ಕನ ಜೀವನವನ್ನು ಹರಿಹರನು ಉಜ್ವಲವಾಗಿಯೇ ಚಿತ್ರಿಸಿದ್ದಾನವೋ? "ಏನಾಗಿತ್ತಾದೊಡಂ ಭಕ್ತರಂ ರಕ್ಷಿಪುದು, ನಾನಾವಿಧಂ ಬಂದು ಶರಣರಂ ಸಲಹುವುದು" ಎಂಬ ಅವಳ ಧ್ಯೇಯವು ಉನ್ನತವಾಗಿಯೇ ಇದೆ. ಹರಿಹರನು ಅಕ್ಕನಿಗೆ ಅಗೌರವವನ್ನೇನೂ ತಂದಿಲ್ಲ. ಭವಿಯೊಡನೆ ಮದುವೆ ಸರಿಯೆಂದು ಆತನು ತಿಳಿದಿಲ್ಲ; ಅನಿವಾರ್ಯವೆಂದು ಮಾತ್ರ ಅದನ್ನು ಚಿತ್ರಿಸಿದ್ದಾನೆ. ಆಯ್ಯೋ ಭವಿಗೆ ಕುಡುವದ ಮಾಣಿಸುವರಿಲ್ಲೆಂದು ಬೆರಲಂ ಕಚ್ಚಿ ಬೇಡಿಕೊಂಬಂತೆ ಶರಣರ್ಗೆ ಕೈಮುಗಿದು' ಎಂಬ ಕಳವಳವು ಹರಿಹರನಿಗೂ ಇದೆ. 'ಶಿವನೇ, ಭವನೇ, ಶಂಕರಾ, ಶಶಿಧರಾ ಭವಿಗೊಪ್ಪಿಸಿ ಕೊಟ್ಟೊಡೇನಪ್ಪೆನೆಂತಪ್ಪೆ ನಿನ್ನೆತ್ತ ಸಾರ್ವೆನಾರುಂಟಯ್ಯೋ ಶಿವಧೋ, ಶಿವಧೋ ಎಂದು ಮನದೊಳ್ ಮಹೇಶ್ವರಂಗೆ ಮೊರೆಯಿಟ್ಟು ಭವಿಗಳತ್ತಂ ಸೋರ್ದೆ ಭಕ್ತರಿನ್ನತ್ತಂ ಸಾರ್ದ ಲಗ್ನಂ ದೂರವಕ್ಕೆ" ಎಂಬುದಾಗಿ ಹರಿಹರನ ಮಹಾದೇವಿಯಕ್ಕನೂ ಕಳವಳಿಸುತ್ತಾಳೆ. ಇದರಿಂದ ಹರಿಹರನು ಅಕ್ಕನಿಗೆ ಅಗೌರವವನ್ನುಂಟುಮಾಡಿದನೆಂದು ಹೇಗೆ ಹೇಳಬೇಕು? ಏನಾಗಿಯೂ ಕೊಡಂ ಶಿವಭಕ್ತರಂ ರಕ್ಷಿಸುವದಕ್ಕಾಗಿ,

ಎನ್ನಿಷ್ಟಿಯೊಳು ಶಿವನ ಪೂಜೆಯೊಳು ನಲಿದಿಪ್ಪೆ
ಎನ್ನಿಷ್ಟಿಯೊಳು ಮಹೇಶ್ವರರ ಗೋಷ್ಠಿಯೊಳಿಪ್ಪೆ
ಎನ್ನಿಷ್ಟಿಯೊಳು ಗುರುವಿನಂಘ್ರಿ ಸೇವೆಯೊಳಿರ್ಪೆ
ಎನ್ನಿಷ್ಟಿಯೊಳು ನಿಮ್ಮ ನೃಪನ ಸಂಗದೊಳಿರ್ಪೆ

ಇಲ್ಲಿ ಮೂರುಂ ತಪ್ಪನೇ ಪೈರಿಸುವೆನೆಂದು
ಅಲ್ಲಿಂದ ಬಳಿಕ ಒಲಿವಂತಿಪ್ಪೆ—

ಎಂಬ ನಿಷ್ಠುರ ನಿಯಮಗಳನ್ನು ಒಪ್ಪಿಸಿಕೊಂಡೇ ವಿವಾಹ ಸಮ್ಮತಿಸುತ್ತಾಳೆ. ತನ್ನ ಧ್ಯೇಯ ಸಾಧನಕ್ಕೆ ಅನುಕೂಲವಾಗುವದಕ್ಕೆಂದೇ ಶಿವಭಕ್ತರಾದ ತಾಯಿತಂದೆಗಳನ್ನು ರಕ್ಷಿಸಲಿಕ್ಕೆ ತನ್ನ ಆತ್ಮದ ಉಜ್ವಲತೆಯನ್ನು ತಾನು ಕಾಯ್ದುಕೊಳ್ಳಬಲ್ಲೆನೆಂಬ ಆತ್ಮನಿಶ್ವಾಸದಿಂದ ಪಾವನತೆಯ ಸಂಕೇತಕ್ಕಾಗಿ ಹರಿಹರನ ಮಹಾದೇವಿಯು ಮದುವೆಯಾದುದು ಅಯೋಗ್ಯವಲ್ಲ. ಹೀಗಿರಲು ಹರಿಹರನ ಹೇಳಿಕೆಯನ್ನೇಕೆ ನಾವು ಅಲ್ಲಗಳೆಯಬೇಕು?

(೩) ಅಕ್ಕನ ಚರಿತ್ರೆಯಲ್ಲಿ ಹರಿಹರನು ಶಿವಾನುಭವ ಮಂಟಪದ ಪ್ರಸ್ತಾಪ ತರದೆ ಇರುವದು ಒಂದು ಕುಂದೆಂದು ಒಪ್ಪಿದರೂ ಅದರಿಂದ ಅಕ್ಕನ ಜೀವನದ ಪರಿಚಯವೇ ಅವನಿಗೆ ಇದ್ದಿಲ್ಲವೆಂದು ಊಹಿಸುವುದು ಮಾತ್ರ ಸರಿಯಲ್ಲ. ಅಕ್ಕನ ಮೂರ್ತಿಸ್ವರೂಪವನ್ನು ಚಿಕ್ಕದೊಂದು ರಗಳೆಯಲ್ಲಿ ಮುಗಿಸಬೇಕಾದುದರಿಂದ ಅಕ್ಕನ ಕಾವ್ಯಮಯ ಜೀವನವನ್ನು ಚಿತ್ರಿಸುವಾಗ ಒಂದು ಅಂಶವನ್ನು ಹರಿಹರನು ಬಿಟ್ಟಿರಲೂ ಬಹುದು. ಬಸವದೇವರಾಜ ರಗಳೆಯಲ್ಲಾದರೂ ಬಸವನ ಜೀವನದ ಎಲ್ಲ ಘಟನೆಗಳ ಪ್ರಸ್ತಾಪವಿಲ್ಲ. ತನ್ನ ಉದ್ದೇಶಕ್ಕೆ ಅವಶ್ಯವೆಂದು ಕಂಡುದುದನ್ನೇ ಹರಿಹರನು ಆರಿಸಿಕೊಂಡಿರಬಹುದು. 'ಭವಿಗೆ ಹೆಂಡತಿಯಾಗಿ ಭಕ್ತಗೇ ಶರಣೆಂದು ಭವವಾರ್ಧಿಯಂ ದಾಂಟಿ ಶ್ರೀಗಿರಿಗೆ ನಡೆತಂದು ಬಳಿಕ ಬಪ್ಪುದು' ಎಂಬ ಚರಿತ್ರಾಂಶವನ್ನು ಮಾತ್ರ ಅತನು ಆರಿಸಿಕೊಂಡಿದ್ದಾನೆ. ಅಕ್ಕನ ಜೀವನ ಗುರಿಯ ಸಾಧನದಲ್ಲಿ ಶಿವಾನುಭವ ಮಂಟಪದ ಸಂದರ್ಶನವೂ ಒಂದು ಮೆಟ್ಟಲು ಮಾತ್ರ. ಅದುವೇ ಅಂತಿಮ ಧ್ಯೇಯವಲ್ಲ. ಅಂತಿಮಧ್ಯೇಯದ ಒಂದು ಸಾಧನವನ್ನು ಆ ತನ್ನ ಕಾವ್ಯದಲ್ಲಿ ಆರಿಸಿಕೊಂಡಿಲ್ಲವೆಂಬ ಕಾರಣದಿಂದ ಹರಿಹರನಿಗೆ ಅಕ್ಕನ ಚರಿತ್ರಾಂಶಗಳೇ ಗೊತ್ತಿಲ್ಲವೆಂದು ಹೇಳಲಾಗದು. ಅಕ್ಕನ ಮೂರ್ತಿ ಸ್ವರೂಪವನ್ನು ಹರಿಹರನು ಅದೆಷ್ಟು ಸುಂದರವಾಗಿ ಚಿತ್ರಿಸಿದ್ದಾನೆ. 'ಭಕ್ತಕುಲ ಚಿಂತಾಮಣಿ, ಶಿವಜ್ಞಾನಸಂಪನ್ನೆ, ವೈರಾಗ್ಯನಿಧಿಯೆನಿಪುದುತಡಿಯ ಮಹಾದೇವಿ' ಯ ಶಿವಪೂಜಾ ಸಂಭ್ರಮವನ್ನು ಹರಿಹರನು ವರ್ಣಿಸಿದ ರೀತಿಯು ರೋಮಾಂಚಕಾರಿಯಾಗಿದೆ.

ಭಕ್ತಿರಸದ ನಡುವೆ ಗೀತವುಣ್ಮೆಪೊಣ್ಮೆ ಪಾಡಿ
ಭಕ್ತಿಯೊಳು ವಿರಕ್ತಿನೆಲಿಸಿ ಮುಕ್ತಿ ಮುಂದುದೋರೆ ಪಾಡಿ
ಒಲಿದುಪಾಡಿ ಉಲಿದುಪಾಡಿ ಮರೆದುಪಾಡಿ ಬಲಿದುಪಾಡಿ
ಸಲಗೆಯಿಂದ ಗೆಲಿದುಪಾಡಿ ಪುಳಕವಡರೆ ನೋಡಿ ಪಾಡಿ
ದೇವ ಎನಗೆ ಭವಿಯ ಸಂಗವೆಂದು ಮಾಣ್ಬದೆನ್ನ ತಂದೆ
... ...
... ...
ಎನುತಲರ್ಚಿಸುತ್ತಲ್ಲಲ್ಲಿ ... ...
... ...
ಒಪ್ಪುತಿರ್ದಳಮಮ ಹರನ ಪೂಜೆಯೊಳಗೆ ಮಹಾದೇವಿ
ಸರ್ಪಭೂಷನಾಸೆಗೆಯ್ವ ಪರಮ ಭಕ್ತಿಯೋಗತೀವಿ

ಎಂಬುದಾಗಿ ಹರಿಹರನು ಅಕ್ಕನನ್ನು ಬಣ್ಣಿಸಿದ್ದಾನೆ. ತಕ್ಕ ಕಾವ್ಯೋದ್ದೇಶಕ್ಕೆ ಅನುಭವ ಮಂಟಪದ ಪ್ರಸ್ತಾಪವು ಆತನಿಗೆ ಅವಶ್ಯವೆನಿಸಿರಲಿಕ್ಕಿಲ್ಲ. ಇದರಿಂದ ಆ ಅಕ್ಕನ ಬಗೆಗೆ ಹರಿಹರನ ಅಜ್ಞಾನವು ಸೂಚಿತವಾಗುವದಿಲ್ಲ. ಆದರೂ ಅನುಭವ ಮಂಟಪದ ಸಂದರ್ಭವು ಅಕ್ಕನ ಜೀವನದಲ್ಲಿ ಉಜ್ವಲವಾದುದು ಎಂಬ ಅಭಿಪ್ರಾಯಕ್ಕೆ ಮಾತ್ರ ಭಿನ್ನಾಭಿಪ್ರಾಯವಿರಲಾರದು.

(೪) ಅಕ್ಕನು ಅರಣ್ಯಕ್ಕೆ ಬಂದ ನಂತರ ಕೌಶಿಕನು ಅಕೆಯನ್ನು ಪಡೆಯಲು ಹವಣಿಸುವ ಪ್ರಯತ್ನ ಇತ್ಯಾದಿ ಸಂಗತಿಗಳನ್ನು ಹೇಳುವಲ್ಲಿ ಹರಿಹರನು ಅಕ್ಕನ ಗೌರವಕ್ಕೆ ಕುಂದು ತಂದಿರುವನೆಂಬ ವಾದವನ್ನಾದರೂ ಒಪ್ಪದವಿಲ್ಲ. ಕೌಶಿಕನ ಪ್ರಯತ್ನಗಳಿಗೆ, ಮತದ ಗುರುಗಳ ಮೋಹಕ್ಕೆ ಅಕ್ಕನು ಪಕ್ಕಾಗಲಿಲ್ಲವೆಂಬುದು ಅಕ್ಕನ ಘನತೆಯನ್ನೇ ಸೂಚಿಸುತ್ತದೆ. ಅಕ್ಕನ ತ್ಯಾಗವನ್ನು, ಧೈರ್ಯವನ್ನು, ನಿಷ್ಠೆಯನ್ನು ಸೂಚಿಸುವ ಉದ್ದೇಶವು ಹರಿಹರನ ಕಾವ್ಯದಲ್ಲೆಲ್ಲ ಸ್ಪುಟವಾಗಿ ಕಂಡು ಬರುತ್ತದೆ. ಕಲುಮಠದ ಹುಲುಮಠದ ಗುರುಗಳ ಪ್ರಸ್ತಾಪವು ಆಗಿನ ಸಾಮಾಜಿಕ ಜೀವನದ ಪ್ರತಿಬಿಂಬವಾಗಿರಬೇಕು. ಅಕ್ಕನು ಲಂಚಗುಳಿಗಳಾದ ಗುರುಗಳನ್ನೂ ಜಿಕ್ಕಸ ಬೆರಗುಗೊಳಿಸಿದಳು, ತನ್ನ ಶಿವಪೂಜಾ ಸಂಭ್ರಮದಿಂದ. ಆಗ ಶರಣರೆಲ್ಲರೂ

ನಿನ್ನಂತೆ ಗುರುಕರುಣವಾರ್ಗುಂಟು ಮಹಾದೇವಿ
ನಿನ್ನಂತೆ ಭಯಭಕ್ತಿ ಇನ್ನುಂಟೆ ಮಹಾದೇವಿ
ಮಲ್ಲಿನಾಥನ ಪರಮಕೀರ್ತಿಲತೆ ನೀನವ್ವ
ಮಲ್ಲಿನಾಥನ ಸರಳ ಸುಖಮೂರ್ತಿ ನೀನವ್ವ
ಎಲೆ ನಿತ್ಯ ಮುಕುತೆ ನಿತ್ಯ ಪ್ರಕಾಶಿತೆ ನೀನೆ
ಎಲೆಸಂದ ನಿರುಪಮ ಜ್ಞಾನಸಂಪದೆ ನೀನೆ

ಎಂಬುದಾಗಿ ಅಕ್ಕನನ್ನು ಬಣ್ಣಿಸಲು ಹರಿಹರನು ಅವಕಾಶ ಕಲ್ಪಿಸಿದ್ದಾನೆ.

(೫) ಹರಿಹರನು ಮೊದಲಿನ ಕವಿಯಾದರೂ ಆತನಿಗಿಂತ ಚಾಮರಸನ ವೃತ್ತಾಂತವೇ ನಂಬಲರ್ಹವೆಂದು ತಿಳಿಯಲಿಕ್ಕೆ ಕಾರಣಗಳು ಎರಡು ಇವೆ.

[೧] ಚಾಮರಸನ ಕಾವ್ಯವೇ ಬಹು ಜನರಿಗೆ ಓದಲು ಮೊದಲು ದೊರೆತಿವೆ. ಹರಿಹರನ ರಗಳೆಯ ನಂತರ ಉಪಲಬ್ಧವಾಗಿದೆ.

[೨] ಚಾಮರಸನ ಚರಿತ್ರೆಯು ಭಾವನಾವಶ ಭಕ್ತರಿಗೆ ಒಗ್ಗುವ ರೀತಿಯಲ್ಲಿದ್ದು ಅದುವೇ ನಿಜವಾಗಿರಬೇಕೆಂಬ ಕಲ್ಪನೆ ನಮ್ಮಲ್ಲಿ ಬಹು ದಿವಸದಿಂದ ಬಳೆದು ಬಂದಿವೆ. ಆಕಸ್ಮಿಕ ಕಾರಣಗಳಿಂದ ಬಳೆದು ಬಂದ ನಂಬಿಗೆಗೇ ವಿಶೇಷ ಮಹತ್ವ ಕೊಡುವ ಅವಶ್ಯಕತೆಯೇನೂ ಇಲ್ಲ.

ಅಂತು ಹರಿಹರನ ಅಭಿಪ್ರಾಯವನ್ನು ಅಲ್ಲಗಳೆಯಲಿಕ್ಕೆ ಕಾರಣವಿಲ್ಲದುದರಿಂದ ಆತನ ಹೇಳಿಕೆಯಲ್ಲಿ ಅಸಮಂಜಸವಾದ ಅಥವಾ ಅಕ್ಕನ ಮೂರ್ತಿ ಸ್ವರೂಪಕ್ಕೆ ಗೌರವವನ್ನು ತರುವಂತಹ ಸಂಗತಿಯು ಇಲ್ಲದುದರಿಂದ, ಆತನೇ ಮೊದಲಿಗನಾದುದರಿಂದ ಅಕ್ಕನ ವಿವಾಹವಾಗಿತ್ತೆಂದು ನಾನು ಅಭಿಪ್ರಾಯ ಪಡುತ್ತೇನೆ.

ಆದರೆ ಅಕ್ಕನ ವಿವಾಹವಾಗಿರಲಿ, ಆಗದೆ ಇರಲಿ, ನಾನು ಚಿತ್ರಿಸಬೇಕೆಂದಿರುವ ಅಕ್ಕನ ಮೂರ್ತಿಸ್ವರೂಪಕ್ಕೆ ಅದರಿಂದ ಯಾವ ಬಾಧೆಯೂ ಇಲ್ಲ. ಅಕ್ಕನ ಜೀವನವೆಂದರೆ ಧ್ಯೇಯಕ್ಕಾಗಿ ಆತ್ಮಾರ್ಪಣವೆಂಬ ತತ್ವದ ಉದಾಹರಣೆಯೇ ಸರಿ. ಬಾಲ್ಯದ ಆಟ-ಪಾಟಗಳಲ್ಲಿ ಯೌವನದ ಶೃಂಗಾರದಲ್ಲಿ ಸಾಧಕಳ ಪ್ರೌಢಾವಸ್ಥೆಯಲ್ಲಿ ಅಕ್ಕನು ಚನ್ನಮಲ್ಲಿಕಾರ್ಜುನನನ್ನು ಹೊಂದಬೇಕೆಂದೇ ಹಂಬಲಿಸುತ್ತಾಳೆ. ಆ ಧ್ಯೇಯ ಸಾಧನೆಯ ಉದ್ದೇಶದಿಂದ ರಾಜನ ಮೋಹದ ಮಡದಿಯಾಗಿ ರಾಜ್ಯ ಸುಖವನ್ನು ಅನುಭವಿಸುವ ಅವಕಾಶವನ್ನು ಅಲ್ಲಗಳೆಯುತ್ತಾಳೆ. ಅನುಪಮ ಸಾಹಸವನ್ನು, ವಿರಕ್ತಿಯನ್ನು, ನಿಷ್ಠೆಯನ್ನು, ಜ್ಞಾನವನ್ನು ಮೆರೆದು ಮಹಿಳಾ ಪ್ರಪಂಚಕ್ಕೊಂದು ಸ್ಮರಣೀಯ ಆದರ್ಶವಾಗಿ ಉಳಿದಿದ್ದಾಳೆ. ಅವಳು ಕಿರಿಯಳಾಗಿದ್ದು ಹಿರಿಯ ಸ್ಥಾನವನ್ನು ಪಡೆದುದರಿಂದ ಕಿರಿಯರಿಗೂ ಹಿರಿಯರಿಗೂ ಆದರ್ಶಳಾಗಿದ್ದಾಳೆ. ಅಂತೆಯೇ ಚಕ್ಕರಣ್ಣಾಯಕರು

'ಅಜಕೋಟಿ ವರುಷದವರೆಲ್ಲರು ಹಿರಿಯರೇ? ಹುತ್ತೀರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ? ನಡುಮುರಿದು ಗುಡಗೂರಿ, ತಲೆ ನಡುಗಿ ನರೆತೆರೆ ಹೆಚ್ಚಿ, ಮತಿಗೆಟ್ಟು ಒಂದನಾಡ ಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವರಿದು, ಘನವ ಬೆರಸಿ ಹಿರಿದು ಕಿರಿದೆಂಬ ಭೇದವ ಮರೆದು ಕೂಡಲಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು.'

ಎಂದು ಹರುಷದಿಂದ ಹಾಡಿದ್ದಾರೆ. ಅಕ್ಕನ ಜೀವನದಲ್ಲಿ ಸನ್ಯಾಸ ಹಾಗೂ ಸಂಸಾರಗಳ ಸುಂದರ ಸಮನ್ವಯವಿದೆ. ಸಂಸಾರಿಯಾಗಿದ್ದಳೆಂದು ಊಹಿಸಿದರೂ ಅವಳು ನಿರ್ಲಿಪ್ತಳಾಗಿದ್ದಳು. ಅವಳು ಕೇವಲ ಸನ್ಯಾಸಿಯೆಂದರೂ ಉಚ್ಚ ಧ್ಯೇಯಸಾಧನೆಗಾಗಿ ಸನ್ಯಾಸವನ್ನು ಸ್ವೀಕರಿಸಿ ಆ ಧ್ಯೇಯವನ್ನು ಕೊನೆಗಾಣಿಸಿ ಕೃತಕೃತ್ಯಳಾಗಿದ್ದಾಳೆ. ಅಂತೆಯೇ ಆಕೆಯು ಸಂಸಾರಿಗಳಿಗೂ ಸನ್ಯಾಸಿಗಳಿಗೂ ಆದರ್ಶಳಾಗಿದ್ದಾಳೆ.

"ನಾಮದಲ್ಲಿ ಹೆಣ್ಣು ರೂಪಲ್ಲಮೆ ಭಾವಿಸಲು ಗಂಡುರೂಪು ಸೋದಾಬಸವಣ್ಣ"ಃ — ಎಂದು ಆಕೆ ಹೇಳಿರುವದರಿಂದ ಆಕೆ ಸ್ತ್ರೀ ಪುರುಷರಿಗೂ ಆದರ್ಶಳಾಗಿದ್ದಾಳೆ. ಅಕ್ಕನಲ್ಲಿ ಗಂಡಸಿನ ಕೆಚ್ಚಿದೆಯು ಇದ್ದರೂ ಹೆಂಗಸಿನ ಹೃದಯವೂ ಇದೆ.

ಅಳಿಸಂಕುಳವೇ, ಮಾಮರವೇ, ಬೆಳುದಿಂಗುಳೇ, ಕೋಗಿಲೆಯೇ, ನಮ್ಮಯೆಲ್ಲರನು ಒಂದು ಬೇಡುವನು. ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ — ಎಂಬ ನುಡಿಯಲ್ಲಿಯು ಕಳವಳವನ್ನು ಪರಿಕಿಸಬೇಕು.

'ಬಸವಣ್ಣ ಮೆಚ್ಚಲೊಗೆತನವ ನೂಡುವೆ. ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ತಲೆಗೆ ಹುವ್ವ ತಾಹೆನಲ್ಲದೆ ಹುಲ್ಲ ತಾರೆನು.' ಎಂಬ ಮಾತಿನಲ್ಲಿಯ ಸ್ತ್ರೀ ಸಹಜವಾದ ಶಾಲೀನತೆಯನ್ನು ಗಮನಿಸಬೇಕು. ಅವರಲ್ಲಿ ಸ್ತ್ರೀಯರಿಗೆ ಅವಶ್ಯವಾದ ವ್ಯವಹಾರ ಜ್ಞಾನವಿದೆ. ಒಗೆತನವ ಮಾಡಿ ತವರು ಮನೆಯವರ ತಲೆಗೆ ಹೂವ ತರುವಂತೆ ವರ್ತಿಸುವುದು ಸ್ತ್ರೀಯರ ಕರ್ತವ್ಯವಾಗಿದೆ. ಅಂತಹ ಕರ್ತವ್ಯದ ಅರಿವು ಅಕ್ಕನಿಗಿದೆ. ವಿರಕ್ತಿ, ಸಾಹಸ, ನಿಷ್ಠೆ ಇವುಗಳ ಜೊತೆಗೆ ಅಕ್ಕನಲ್ಲಿ ಹೆಣ್ತನವೂ ಇದೆ.

ಅಕ್ಕನ ಜೀವನವನ್ನು ನಾಲ್ಕು ಭಾಗವಾಗಿ ವಿಭಾಗಿಸಬಹುದು.

[೧] ಬಾಲ್ಯ- ಕೌಶಿಕನಿಂದ ನೋಡಲ್ಪಡುವ ವರೆಗೆ
[೨] ಕೌಶಿಕನನ್ನು ತೊರೆದು ಹೋಗುವ ವರೆಗೆ
[೩] ಕಲ್ಯಾಣದ ಅನುಭವ ಮಂಟಪದಲ್ಲಿ
[೪] ಕೊನೆಗೆ ಶ್ರೀಶೈಲದಲ್ಲಿ

ಈ ನಾಲ್ಕೂ ವಿಭಾಗಗಳು ರವ್ಯವಾಗಿವೆ; ಘನವಾಗಿವೆ. ಇಡೀ ಅಕ್ಕನ ಜೀವನವೇ ಕಾವ್ಯಮಯವಾಗಿದೆ.

(೧) ಅದರಂತೆ ಈ ಮೊದಲನೆಯ ಭಾಗವೂ ಕೂಡ ಇದೆ. ಪಾರ್ವತಿಯ ಸಾತ್ವಿಕ ಕಳೆಯೇ ರೂಪುವೆತ್ತದ್ದರಿಂದ ಈಕೆಯ 'ತನು ವಿನಲತಿ ಮಹತ್ತರ ದೇವತಾ ಕಳೆಯಿರಲು ಮಹದೇವಿಯೆಂದೀ ಹೆಸರನಿಟ್ಟುದು' ಆಕೆಗೆ ಎಂದು ಡಾಮರಸನು ಬಣ್ಣಿಸಿದ್ದಾನೆ. ಹಾಗೂ 'ಈಕೆ ಭಕ್ತಿಯ ಬಳ್ಳಿಯಂತೆಯನೇಕ ಪರಿಯಲಿ ಬಳೆವುತಿರ್ದಳು' ಎಂದು ಹೇಳಿದ್ದಾನೆ. ಹರಿಹರನು ಅಕ್ಕನ ಜನನವನ್ನು ಹೀಗೆ ಬಣ್ಣಿಸುತ್ತಾನೆ:—

"ಡಂಭ್ರಸಿಂ ಬೆಳುದಿಂಗಳು, ಪರುಷದಿಂ ಬಣ್ಣ, ಚಿಂತಾಮಣಿಯಿಂ ಕಾಂತಿ, ಸುರಭಿಯಿಂ ಸುಧಾರಸಂ ಕಲ್ಪತರುವಿಂ ಸಣ್ಣ ನನೆ ಪುಟ್ಟುವಂತೆ ಪುಣ್ಯೋದರದಿಂ ಫಳಿಲನುದಯವಾಗೆ, ಕಂಡು ಕಂಡು, ಕೊಂಡು ಕೊನೆದು ಸಿಂಗರದ ಶಿಸುವಿಂಗೆ ಭಕ್ತಿಯ ಭಾವಕ್ಕೆ, ಅರಿವಿನವಯವಕ್ಕೆ, ಮುಕ್ತಿಯ ಮಸಿಗೆ ತಾತಂ..... ಮಹಾದೇವಿಗೆ ಶಿವಲಿಂಗ ಪ್ರಸಾದಮಂ ಭಕ್ತಿವೆರಸಿ ಬಾಯ್ವಿಜ್ಜೆಯಸಿಕ್ಕಿ ನಲಿನಲಿದು ಸಲಹುತಿರೆ ....."

ಅಕ್ಕನು ತನ್ನ ವಚನಗಳಲ್ಲಿ 'ಹರನೆ ನೀನೆಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ!'—ಎಂದು ಹೇಳುತ್ತಾಳೆ. ಬಾಲಕರು ಗಂಡ ಹೆಂಡಿರ ಆಟವನ್ನು ಆಡುತ್ತಿರುವಂತೆ ಅಕ್ಕನು ತನಗೆ ಚನ್ನಮಲ್ಲಿಕಾರ್ಜುನನೇ ಗಂಡನಾಗಿರಬೇಕೆಂದು ಆಡಿರಬೇಕು.

(೨) ಎರಡನೆಯ ಭಾಗವು ಅಕ್ಕನ ಸಮುಯೋಚಿತ ಜ್ಞಾನ, ಸಾಹಸ ಇವುಗಳಿಗೆ ನಿದರ್ಶನವಾಗಿದೆ. ಅರಸನಿಂದ ತಂದೆ ತಾಯಿಗಳಿಗೆ ತೊಂದರೆಯಾಗುವದೆಂದು ತಿಳಿದಾಗ ತಾನೇ ಮುಂದೆಬಂದು ಅರಸನನ್ನು ಸಂದರ್ಶಿಸಿ ತನಗೆ ಅನುಕೂಲವಾಗುವ ರೀತಿಯಲ್ಲಿ ಅರಸನ ಭಾಷೆ ಪಡೆಯುವುದು, ಕೇವಲ ರಾಣಿವಾಸದ ಸುಖಕ್ಕೆ ಮೆಚ್ಚದೆ ಇರುವುದು ಅವಳ ಸ್ತ್ರೀತ್ವಕ್ಕೆ ಅಲಂಕಾರವಾಗಿವೆ. ಭಾರತದ ಮಹಿಳೆಯರು ಎಂದಿಗೂ ಮುಖ ಹೀನರೆಂಬ ಅಪವಾದವನ್ನು ಅಕ್ಕನು ಅಲ್ಲಗಳೆದಿದ್ದಾಳೆ. ಅಕ್ಕನ ಬುದ್ಧಿಮತ್ತೆ. ಆಕೆ ತನಗಾಗಿ ಸಮಾಜದಲ್ಲಿ ಕಲ್ಪಿಸಿಕೊಂಡಿದ್ದ ಶ್ರೇಷ್ಠ ಸ್ಥಾನ, ಇವು ಎಂದಿಗೂ ಸ್ತ್ರೀಯರ ಆದರ್ಶನಗಳಾಗಬಲ್ಲವು. 'ಪುಟವನಿಕ್ಕಿದ ಮಿಸುನಿಯಂದದಲಿ ಜವ್ವನದ ಕಳಿವೆತ್ತು' ಆಕೆ ಬೆಳೆಯುತ್ತಿದ್ದಾಗ ಅರಸನೂ ಕೂಡ ಆಕೆಯನ್ನು ಮೋಹಿಸಿದನು. ಆದರೆ ಅರಸನ ರಾಣಿಯಾಗಬೇಕೆಂಬ ಆಲ್ಪಾಶೆ ಅಕ್ಕನಲ್ಲಿ ಬಂಲಿಲ್ಲ. ಆದರೂ 'ಜನಪನಳುಪಿಗೆ ಹರಿವ ಮಾಡುವೆನೆನುತಲಾ ಮಹದೇವಿ ಜಾಣಿನ ವಿನಯದಲಿ' ಅರಸನನ್ನು ತನ್ನಿಚ್ಛೆಯಂತೆ ವರ್ತಿಸಲು ಒಪ್ಪಿಸಿದಳು. ಪದುವೆಯಾಗಲಿ, ಆಗದಿರಲಿ, ಎಂತಹ ವಿಷಮಸ್ಥಿತಿಯಲ್ಲಿಯೂ ಕೂಡ ಅಕ್ಕನು ತನ್ನ ಧ್ಯೇಯಕ್ಕಾಗಿ ಹೆಣಗಿದಳು ಅರಸನ ಸಂದರ್ಶನವನ್ನು ತನ್ನ ಆತ್ಮೋನ್ನತಿಯ ಒಂದು ಸಾಧನವನ್ನಾಗಿ ಮಾರ್ಪಡಿಸಿಕೊಂಡಳು ಎಂಬುದು ಮಹತ್ವದ ಮಾತಾಗಿದೆ. ಅಕ್ಕನ ಮದುವೆಗಿಂತ, ಮದುವೆಯ ಘಟನೆಯ ಹಿಂದೆ ಅಡಗಿರುವ ಅಕ್ಕನ ಜೀವನದ ರಹಸ್ಯವನ್ನೇ ನಾವೀಗ ಗಮನಿಸಬೇಕಾಗಿದೆ. "ಕಾಮಿಯಾಗಿ ನಿಃಕಾಮಿಯಾದಳು. ಸೀಮೆಯಲ್ಲಿದ್ದೂ ನಿಸ್ಸೀಮೆಯಾದಳು. ಭವಿಯ ಸಂಗವ ತೊರೆದು ಭವ ಬಾಧೆಯ ಹರಿದಳು." ಎಂಬ ಮಡಿವಾಳ ತಂದೆಯ ವಚನವನ್ನು ಇಲ್ಲಿ ನಾವು ಲಕ್ಷಕ್ಕೆ ತಂದುಕೊಳ್ಳಬೇಕು. ಮಹಾತ್ಮನಾದ ಬಸವಣ್ಣನೂ ಕೂಡ ಅಕ್ಕನನ್ನು ಹೀಗೆ ಹೊಗಳುತ್ತಾನೆ. "ಹೆಂಗುಸಿನಂಗವ ನೋಡಿದರೆ ಪುರಾತನರು. ಬಾಲತನದಂಗವ ನೋಡಿದರೆ ಪುರಾತನರು. ಬ್ರಹ್ಮ

ವನಾಚರಿಸಿ ತನ್ನ ಮರೆದಿಪ್ಪುದ ನೋಡಿದರೆ ಲಿಂಗವಂತರು. ತನ್ನಲಿ ತಾನು ನಿಷ್ಠೆಯವಾಗಿ ಭಾಷೆ ಬೀಸರುವೋಗದೆ ಇಪ್ಪ ಇರವು ಕೂಡಲ ಸಂಗಮದೇವರಲ್ಲಿ ನಮ್ಮ ಮಹಾದೇವಿಯಕ್ಕಂಗಾಯಿತ್ತು."

ಯೌವನದಲ್ಲಿ ತಾನಾಗಿಯೇ ಅರಸನನ್ನು ಸಂದರ್ಶಿಸಿ, ಅರಮನೆಯನ್ನು ಸೇರುವದು, ನಂತರ ಅರಸನನ್ನು ತೊರೆಯುವುದು, ಮನೆಮಾರುಗಳನ್ನು ತೊರೆಯುವುದು, ಸ್ತ್ರೀಗೆ ಎಂತಹ ಸಾಹಸದ ಮಾತೆಂಬುದನ್ನು ಯೋಚಿಸಬೇಕು. ಧ್ಯೇಯಸಾಧನೆಗೆ ಹೆಣಗುವಾಗ ಅಕ್ಕನು ಅರ್ಥವಿಲ್ಲದ ಜನರ ನಿಂದಾ-ಸ್ತುತಿಗೆ ಬೆದರಲಿಲ್ಲ. ಬಾಗಲಿಲ್ಲ. ಆಗ ಹೇಳಿದ ಅಕ್ಕನ ವಚನವು ಮನನೀಯವಾಗಿದೆ. 'ಬೆಟ್ಟದ ಮೇಲೆ ಮನೆಯ ಮಾಡಿದ ಮೇಲೆ ಮೃಗಂಗಳಿಗಂಜಿದೊಡೆಂತವ್ವ - - - - ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ ಕೋಪವ ತಾಳದೆ ಸಮಾಧಾನಿಯಾಗಿರಬೇಕು.' ಅಕ್ಕನ ಈ ಧೈರ್ಯವನ್ನು ಅದೆಷ್ಟು ಜನ ಪುರುಷರು ತೋರಿಸಿದ್ದಾರೆ. ಸಿದ್ಧಾರ್ಥನ ಗೃಹತ್ಯಾಗದೊಡನೆ ಅಕ್ಕನದನ್ನು ಹೋಲಿಸಿ ನೋಡಬಹುದು. ಬುದ್ಧನಾದರೋ ಗಂಡಸು, ಪ್ರಬುದ್ಧನು, ಸಂಸಾರದ ಸುಖವನ್ನು ಸವಿದು ನೋಡಿದವನು. ಅಕ್ಕನ ತ್ಯಾಗವು ಬುದ್ಧನ ತ್ಯಾಗವನ್ನು ಮೀರಿಸಿದೆಯೆಂದು ಹೇಳಬಹುದೋ? ಹೀಗಿದ್ದರೂ ಅಕ್ಕನ ಚರಿತೆಯ ಪರಿಚಯವು ಕನ್ನಡಿಗರಲ್ಲದವರಿಗೆ ಅದೆಷ್ಟು ಜನರಿಗೆ ಪರಿಚಿತವಿದೆ!

(೩) ಅಕ್ಕನು ಸಂಸಾರದ ಯಾವ ಪ್ರಯೋಜನಕ್ಕೂ ಪಕ್ಕಾಗದೆ ಗೃಹತ್ಯಾಗ ಮಾಡಿ ತನ್ನ ಧ್ಯೇಯ ಸಾಧನೆಯಲ್ಲಿ ಇನ್ನೊಂದು ಅಡಿ ಮುಂದಿಟ್ಟಳು. ಶಿವಶರಣರ, ತತ್ವಜ್ಞಾನಿಗಳ ಆಗರವಾದ ಕಲ್ಯಾಣ ಕ್ಷೇತ್ರಕ್ಕೆ ನಡೆತಂದಳು. ಈ ಭಾಗವನ್ನು ಹರಿಹರನು ಚಿತ್ರಿಸಿಲ್ಲವಾದರೂ ಶೂನ್ಯಸಂಪಾದನೆ ಮುಂತಾದ ಗ್ರಂಥಗಳಲ್ಲಿ ಈ ಉಜ್ವಲ ಜೀವನದ ಸುಂದರ ಚಿತ್ರವಿದೆ. ತನ್ನ ತ್ಯಾಗದಿಂದ, ವೀರ ವಿರಕ್ತಿಯಿಂದ, ಜನತೆಯನ್ನು ಬೆರಗುಗೊಳಿಸಿದ ಅಕ್ಕನು ಇದೀಗ ತನ್ನ ಅನುಪಮ ಬುದ್ಧಿಮತ್ತೆಯಿಂದ ಆ ಕಾಲದ ಶ್ರೇಷ್ಠ ಜ್ಞಾನಿಗಳನ್ನು ಮೆಚ್ಚಿಸಿದಳು. ಬಸವಣ್ಣನಿಗೂ ಕೂಡ ಬುದ್ಧಿ ಹೇಳುತ್ತಿದ್ದ ಜ್ಞಾನಜ್ಯೋತಿ ಅಲ್ಲಮನಿಂದಲೂ ಅಕ್ಕನು ಹೊಗಳಲ್ಪಟ್ಟವಳಾಗಿದ್ದಾಳೆ.

'ನುಡಿಗೆಡೆಗುಡದ ಘನವ ಹಿಡಿದ ವಡಬಂದಿಗಳಾದಳು. ಎಡೆಯಿಲ್ಲದ ಪರಿಪೂರ್ಣದೊಳಗೆ ನುಡಿಗೆಟ್ಟಳು. ತನ್ನ ನಿಲುಕಡೆಯ ನಿಜವ ತಾನರಿಯದಂತೆ ತನ್ನಿಂದ ಕೇಳಿ ಸ್ವಯವಾದಳು. ಗುಹೇಶ್ವರ ಸಾಕ್ಷಿಯಾಗಿ ಮಹದೇವಿಯಕ್ಕನ ನಿಲವ ಕೊಂಡಾಡುವದಕ್ಕೆ ತೆರಹಿಲ್ಲ ಕಾಣಾ ನುಡಿವಾಳಯ್ಯ.'

ಪ್ರಭುವಿನಿಂದಲೂ ಕೂಡ 'ಮಹದೇವಿಯಕ್ಕನ ನಿಲವ ಕೊಂಡಾಡುವದಕ್ಕೆ ತೆರಹಿಲ್ಲ ಕಾಣಾ' ಎಂದು ಹೊಗಳಿಕೊಂಡ ಅಕ್ಕನು ಧನ್ಯಳೇ ಸರಿ. ಇಂತಹ ಮಹಿಳಾರತ್ನವನ್ನು ಪಡೆದ ವೀರಶೈವ ಸಮಾಜವೂ ಕನ್ನಡ ನಾಡೂ ಇನ್ನಿಷ್ಟು ಧನ್ಯವೆಂದು ಹೇಳಬೇಕು.

ಅಕ್ಕನು ಕಲ್ಯಾಣ ಪ್ರವೇಶ ಮಾಡಿದುದು ಸಮಯೋಚಿತವಾಗಿದೆ. ಏಕೆಂದರೆ ಅವಳೇ ಹೀಗೆ ಹೇಳುತ್ತಾಳೆ.

"ಎಲೆ ದೇವ ಸಕಲಗಣಂಗಳ ಉಪಟಳಕ್ಕಂಜಿ ನಿಮ್ಮ ಶರಣರ ಮರೆಹೊಕ್ಕೆ. ಅವರ ಕಾರುಣ್ಯವಂ ಪಡೆದು ಬಂದು ನಿಮ್ಮ ಶ್ರೀಮೂರ್ತಿಯುಂ ಕಂಡೆ." ಇದರಿಂದ ಅಕ್ಕನ ಧ್ಯೇಯಸಾಧನೆಗೆ ಕಲ್ಯಾಣ ಪ್ರವೇಶವು ಒಂದು ಉತ್ತಮ ಸಾಧನವಾಗಿ ಪರಿಣಮಿಸಿತೆಂದು ಹೇಳಬಹುದು. ಅಕ್ಕನೇ ಹೀಗೆ ಹೇಳಿದ್ದಾಳೆ.

"ನಿನ್ನ ಅಂಗದ ಆಚಾರವ ಕಂಡು, ಎನಗೆ ಲಿಂಗಸಂಗವಾಯಿತ್ತು. ಅಯ್ಯ ಬಸವಣ್ಣ ನಿನ್ನ ಮನದ ಸುಜ್ಞಾನವ ಕಂಡು ಎನಗೆ ಜಂಗಮ ಸಂಬಂಧವಾಯಿತ್ತಯ್ಯ ಬಸವಣ್ಣಾ. ನಿನ್ನ ಸದ್ಭಕ್ತಿಯ ತಿಳಿದು ಎನ್ನ ನಿಜ ಸಾಧ್ಯವಾಯಿತ್ತಯ್ಯ ಬಸವಣ್ಣ" ಇದರಿಂದ ಅಕ್ಕನ ಜೀವನದಲ್ಲಿ ಬಸವಣ್ಣನ ಪ್ರಭಾವವು ವ್ಯಕ್ತವಾಗುತ್ತದೆ. ಅಕ್ಕನು 'ಕಾಮನ ಗೆಲಿದೆನಯ್ಯ ಬಸವಣ್ಣ ನಿಮ್ಮ ದಯದಿಂದ' ಎಂದೇ ಒಪ್ಪಿದ್ದಾಳೆ. ಅಲ್ಲದೆ ಕಲ್ಯಾಣ ಪ್ರವೇಶಕ್ಕೆ ಮೊದಲು ಅದಕ್ಕೆ ಬೇಕಾದ ಅರ್ಹತೆಯನ್ನೂ ಗಳಿಸಿ ಪಡೆದಿದ್ದಳು. ಎಲ್ಲರಿಗೂ ಕಲ್ಯಾಣವನ್ನು ಪ್ರವೇಶಿಸುವುದು ಸಾಧ್ಯವಿಲ್ಲ. ಅಕ್ಕನು-

'ಕಲ್ಯಾಣವೆಂಬುದಿನ್ನಾರಿಗು ಹೊಗಬಾರದು. ಅಸಾಧ್ಯವಯ್ಯ. ಅಸಿ ಆಪಿಷವಳಿದವಂಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು. ಒಳ ಹೊರಗೆ ಶುದ್ಧವಾದವರಿಗಲ್ಲದೆ ಕಲ್ಯಾಣವ ಹೊಗಬಾರದು. ನಾನೆಂಬುದ ಹರಿದವಂಗಲ್ಲದೆ ಕಲ್ಯಾಣವ ಹೊಗಬಾರದು. ಒಳಗೆ ತಿಳಿದು ಚನ್ನ ಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆಯನಳಿದಿನಾಗಿ ಕಲ್ಯಾಣವ

ಕಂಡು ನವೋ ನವೋ ಎನುತಿರ್ದೆನು'— ಎಂದು ಹೇಳಿದ್ದಾರೆ. ಇದರಿಂದ ಅಕ್ಕನ ಅಂತರಂಗವು ಈ ಮೊದಲೇ ಶುದ್ಧವಾಗಿ ಶಿವಶರಣರ ತತ್ವಜ್ಞಾನವನ್ನು ಗ್ರಹಿಸುವದಕ್ಕೆ ತಕ್ಕ ಭೂಮಿ ಈ ಮೊದಲೇ ಸಿದ್ಧವಾಗಿತ್ತೆಂದು ತಿಳಿದುಬರುತ್ತದೆ.

ಅನುಭವ ಮಂಟಪವನ್ನು ಅಕ್ಕನು ಪ್ರವೇಶಿಸುತ್ತಿರುವಾಗ ಪ್ರಭುದೇವನು ಆಕೆಯನ್ನು ಪರೀಕ್ಷಿಸಲೆಂದು ಬಹು ವಿಧದ ಪ್ರಶ್ನೆಗಳಿಂದ ಅಕ್ಕನನ್ನು ಸುಮ್ಮನಾಗಿಸಬೇಕೆಂಬ ಪ್ರಯತ್ನವು ಫಲಕಾರಿಯಾಗಿರಲಿಲ್ಲ. ಈ ವಾದದಲ್ಲಿ ಅಕ್ಕನ ಕೊಡುವ ಉತ್ತರಗಳು ಮನನೀಯವಾಗಿವೆ. ಪ್ರಭುದೇವನನ್ನು ಕೂಡ ವಾದದಲ್ಲಿ ಸೋಲಿಸಬಲ್ಲ ಸಾಹಸ ಬುದ್ಧಿ ಅಕ್ಕನಿಗಿದೆ. ಅಕ್ಕ-ಪ್ರಭುದೇವರ ಸಂಭಾಷಣೆಯ ಶೂನ್ಯಸಂಪಾದನೆಯ ಭಾಗವು ಸುಂದರವಾಗಿದೆ. 'ಉಪಮುವದ ಯೌವನವನೊಳಕೊಂಡು ಸತಿ ನೀನು ಇತ್ತಲೇತಕ್ಕೆ ಬಂದೆಯವ್ವ? ಸತಿ ಎಂದರೆ ಮುನಿವರು ಎಮ್ಮ ಶರಣರು' ಎಂದು ಅಕ್ಕನನ್ನು ಬೆದರಿಸಲು ಪ್ರಯತ್ನಿಸಿದ ಪ್ರಭುದೇವನೇ ಕೊನೆಗೆ ಅಕ್ಕನ ಪ್ರತಿವಾದಕ್ಕೆ ಮನಮೆಚ್ಚಿ "ಇದು ಲೇಸಾಯಿತ್ತು" ಎಂದು ಒಪ್ಪುತ್ತಾನೆ. "ಅಂಗನೆ ಅಂಗನೆಯ ರೂಪಲ್ಲದೆ ಮನ ವಸ್ತು ಭಾವದಲ್ಲಿ ಬೆಚ್ಚಂತಿಹುದು. ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲ. ಅಕ್ಕ ಗುಹೇಶ್ವರ ಲಿಂಗದಲ್ಲಿ ಉಭಯ ನಾಸ್ತಿ ಮನವಳಿದೆ ಎನ್ನಕ್ಕಳ್ಳೆ" ಎಂದು ಕೊಂಡಾಡುತ್ತಾನೆ.

ಶಿವಾನುಭವಮಂಟಪದ ಸಂದರ್ಶನದಿಂದ ಅಕ್ಕನ ಧ್ಯೇಯವು ಇನ್ನು ಸಮೀಪಗತವಾಯಿತು. ಬಸವನ ಭಕ್ತಿ, ಪ್ರಭುವಿನ ಜ್ಞಾನ, ಚೆನ್ನಬಸವನ ಧರ್ಮಗಳ ತ್ರಿವೇಣಿಯ ಹೊನಲು, ಅಕ್ಕನಲ್ಲಿ ನೆಲೆಸಿದುವು.

(೪) ಬಾಲ್ಯದ ಕನಸನ್ನು ನನಸುಮಾಡಿಕೊಂಡ ಅಕ್ಕನ ಜೀವನದ ನಾಲ್ಕನೆಯ ಭಾಗವೂ ಕೂಡ ಕಾವ್ಯಮಯವಾಗಿದೆ. ಒಳಗು ಹೊರಗು ಶುದ್ಧವಾಗಿ ಕಲ್ಯಾಣವ ಸೇರಿದಳು. ಅಲ್ಲಿ ಶಿವಶರಣರ ಕಾರುಣ್ಯದಿಂ ಜ್ಞಾನವನ್ನು ಪಡೆದಳು. ಅಂಗವಿಕಾರವ ಗೆಲಿದು ಸರ್ವಾಂಗದೊಳು ಲಿಂಗವನು ಧೃಡಮಾಡಿಕೊಂಡು ನಿಜಗಲಿಯಾದಳು. ಈ ಕೊನೆಯ ಭಾಗದಲ್ಲಿ ಅಕ್ಕನ ಆಧ್ಯಾತ್ಮಿಕ ವಿರಹದ ವರ್ಣನೆಯಿದೆ. ತನ್ನ ಹೃದಯ ಸ್ವಾಮಿಯನ್ನು ಅಕ್ಕನು ಅರಸುತ್ತಿರುವದನ್ನು ಚಾಮರಸನು ಹೀಗೆ ಬಣ್ಣಿಸಿದ್ದಾನೆ.

ಎಲ್ಲಿ ಸಜ್ಜನವೆಲ್ಲಿ ನಿರ್ಜನ
ವಲ್ಲಿ ಗಿಡು ಮುಡುವೆಲ್ಲಿ ತರು ಗಿರಿ
ಯೆಲ್ಲಿ ಗಂಹರವೆಲ್ಲಿ ಪೂಗೊಳವೆಲ್ಲಿ ಲತೆ ಪುಕ್ಕನ
ವೆಲ್ಲ ಎದೆಯಲಿ ಹಾಡುತಾಡುತ
ಮೆಲ್ಲ ಮೆಲ್ಲನೆಯರಸುತಿರ್ಪಳು
..... ಮಹಾದೇವಿ.

ಚನ್ನಮಲ್ಲಿಕಾರ್ಜುನನನ್ನು ಕಾಣಬೇಕೆಂಬ ಹಂಬಲವು ಇದೀಗ ಅಕ್ಕನಲ್ಲಿ ಹೆಚ್ಚಾಗಿತ್ತು. ಅವಳ ಮನದ ಉತ್ಕಟೇಚ್ಛೆಯು ಫಲವನ್ನು ಪಡೆಯುವ ಸ್ಥಿತಿಗೆ ಬಂದಿತ್ತು. ವನಾಂತರದಲ್ಲಿ ಅಳಿಸಂಕುಳ, ಮಾಮರ, ಬೆಳುದಿಂಗಳು, ಕೋಗಿಲೆಗಳನ್ನು 'ಎನ್ನೊಡೆಯ ಚನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ' ಎಂದು ಬೇಡುತ್ತಾಳೆ. ಆಧ್ಯಾತ್ಮಿಕ ವಿರಹದಿಂದ ನೊಂದು ಗಿಳಿ, ಕೋಗಿಲೆ, ತುಂಬಿಗಳನ್ನು ಮೊರೆ ಹೋಗುತ್ತಾಳೆ. ಕೊನೆಗೆ ವನದಲ್ಲಿ ಎಲ್ಲ ಕಡೆಗೂ ದೇವನ ರೂಪವನ್ನು ಕಾಣುತ್ತಾಳೆ.

'ವನವೆಲ್ಲ ನೀವೆ. ವನದೊಳಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗ ಮೃಗವೆಲ್ಲ ನೀವೆ. ಚನ್ನಮಲ್ಲಿಕಾರ್ಜುನ ಸರ್ವಥರಿತನಾಗಿ, ಎನಗೆ ಮುಖದೋರಿ'—ಎಂದು ಹಂಬಲಿಸಿ ಬೇಡಿಕೊಳ್ಳುತ್ತಾಳೆ. ಕೊನೆಗೊಮ್ಮೆ 'ಹೊಳಿವ ಕೆಂಜೆಡೆಗಳ, ಮಣಿ ಮುಕುಟದ ಒಪ್ಪುವ ಸುಲಿಪಲ್ಲ, ನಗೆ ಮೊಗದ ಕಂಗಳ ಕಾಂತಿಯಿಂ ಈರೇಳು ಭುವನವಂ ಬೆಳಗುವ ದಿವ್ಯ ಸ್ವರೂಪನ' ನ್ನು ಕಂಡು ತನ್ನ ಕಂಗಳ ಬರವನ್ನು ಹಿಂಗಿಸಿಕೊಳ್ಳುತ್ತಾಳೆ. ಈ ಐಕ್ಯ ಸ್ಥಾನದಲ್ಲಿ ಅನುಪಮ ಆನಂದವನ್ನು ಪಡೆಯುತ್ತಾಳೆ. ಕೊನೆಗೆ ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿ ಆತ್ಮಾರ್ಪಣೆ ಮಾಡಿ ತನ್ನ ಧ್ಯೇಯವನ್ನು ಕೊನೆಗಾಣಿಸುತ್ತಾಳೆ.

ಇಂತಿದು ಅಕ್ಕನ ಜೀವನ ಚಿತ್ರ. ನಮಗೆ ದೊರೆಯುವ ಸಾಹಿತ್ಯದಲ್ಲಿರುವ ಸ್ವಲ್ಪ ಭಿನ್ನಾಂಶಗಳನ್ನು ಬಿಟ್ಟುಕೊಟ್ಟರೆ, ಉಜ್ವಲವಾದ ಅಕ್ಕನ ಜೀವನದ ತಿರುಳು ಒಂದೇ ಇರುವದನ್ನು ನಾವು ಕಾಣುತ್ತೇವೆ. ಅಕ್ಕನ ಮೂರ್ತ ಸ್ವರೂಪವು ಘನವಾಗಿದೆ. ಹರಿಹರನು ತನ್ನ ರಗಳೆ

ಒದೆದು ಸಮಸ್ತ ರಾಜ್ಯ ಸುಖಮುಂ ಸುಖದಿಂ
ಬಿಸುಟ್ಟಲ್ಪಭೋಗ ಸಂ।
ಪದವಸೆ ನೂಂಕಿ ಸಂಸೃತಿಯ ವಂದುಗಮುಂ
ಬಿದಿರ್ದಾಸೆಯೆಂಬಿವಂ ॥
ವಿದಳಿಸಿ ಕಾಮ ಮತ್ತ ಗಜ ಮಸ್ತಕದಾ
ಮದಮುಂ ಸಡಿಲ್ಚಿಮಾ।
ಣವೆ ಮಹಾದೇವಿ ... ...
... ...
... ...
ಅನುಪಮ ಮಲ್ಲಿಕಾರ್ಜುನನ ಭಕ್ತಿಯ ಭಾವಕಿ ಚನ್ನಮಲ್ಲಿಕಾ
ರ್ಜುನನ ಸುಖಂ ಬರುತ್ತಲಿಸಿದಳ್ ಮಹಾದೇವಿ ...
... ...
ಹೀಗೆ ಬಣ್ಣಿಸುತ್ತಾನೆ.

ಕೊನೆಗೆ ಅಕ್ಕನ ಮೂರ್ತಿ ಸ್ವರೂಪವನ್ನು ಶೂನ್ಯಸಂಪಾದನೆಕಾ
ರರ ಉಕ್ತಿಯಲ್ಲಿಯೇ ಹೇಳಿ ಈ ಅಲ್ಪ ಲೇಖನವನ್ನು ಮುಗಿಸುತ್ತೇನೆ.

ತನುವಿನೊಳಗೆ ಇದ್ದು ತನುವ ಗೆದ್ದಳು. ಮನದೊಳಗೆ ಇದ್ದು ಮನವ ಗೆದ್ದಳು. ಉಭಯದೊಳಗೆ ಇದ್ದು ವಿಷಯಂಗಳ ಗೆದ್ದಳು. ಅಂಗ ಸಂಗವ ತೊರೆದು ಭವವ ಗೆದ್ದಳು. ಕೂಡಲ ಚನ್ನಸಂಗಯ್ಯನ ಹೃದಯ ಕಮಲವ ಬಗೆದು ಹೊಕ್ಕು ನಿಜಪದವನೈದಿದ ಮಹಾದೇವಿಯಕ್ಕನ ಶ್ರೀ ಪಾದಕ್ಕೆ ನಮೋ ನಮೋ ಎಂಬೆನು.

ಇದಕಾಗಿ ಇರಲಿ.

(ಲೇ॥ ಶ್ರೀ ಚಂದ್ರಶೇಖರದೇವರು ಅಡ್ವೊಕೇಟರು, ಮುಕ್ಕಾಂ ಸರ್ವಭೂಷಣ ಮುತ ಬೆಂಗಳೂರನಗರ.)

೧

ಧನವಿರಲಿ ದಾನಕ್ಕೆ
ಮನವಿರಲಿ ಧ್ಯಾನಕ್ಕೆ
ತನುವಿರಲಿ ಜಗದೊಳಗೆ ಧರ್ಮಕ್ಕೆ ತಾ-
ನೆನುತಿರುವ ಅಹಮಿಕೆಯದವನಕ್ಕೆ ತಾ ॥

೨

ಸತಿಯಿರಲಿ ಸೇವಿಸಲು
ಸುತನಿರಲಿ ಪಾಲಿಸಲು
ಹಿತರಿರಲಿ ಹಗಲಿರುಳು ಹರುಷಿಸುತ ಸ-
ತ್ಪಥವ ತೋರಿ ಸಂಸೃತಿ ಸಂಗವಳಿಸೆ ॥

೩

ಸಯವಿರಲಿ ನುಡಿಯಲ್ಲಿ
ಭಯವಿರಲಿ ನಡೆಯಲ್ಲಿ
ಜಯವಿರಲಿ ದುಷ್ಟಗುಣಮನದಲ್ಲಿ
ದಯವಿರಲಿ ಸಕಲ ಜೀವಂಗಳಲ್ಲಿ ॥

೪

ಶಿರವಿರಲಿ ವಂದಿಸಲು
ಕರವಿರಲಿ ಪೂಜಿಸಲು
ಅರಿವಿರಲಿ ಧರೆಯೊಳಗೆ ಹರಸಿಗಿಂತ
ಪರಮೈವವಿಲ್ಲೆಂದು ತಿಳಿಯುವಂತೆ ॥

ಶೂನ್ಯಸಂಪಾದನೆಯ ರಹಸ್ಯ.

(ಪ್ರಭುದೇವರ ಶೂನ್ಯಪೀಠ ಮೂರ್ತ ಸಂಪಾದನೆ.)

ಅಷ್ಟಾದಶೋಪದೇಶ.

ಪ್ರಭು ಶೂನ್ಯವಿಪ್ಪರದೊಳತಿ
ವಿಭವದಿ ಮಂಡಿಸಿ ಸಮಸ್ತ ಶರಣರ ಕಂದಿಂ।
ಶುಭದಿಂದರ್ಚಿಸಿಕೊಂಡುದ
ತ್ರಿಭುವನ ಮರಿಯಲ್ಕೆ ಪೇಳ್ವೆನತ್ತಿ ಕೌತುಕದಿಂ ॥

ಈ ಸಂಪಾದನೆಯಲ್ಲಿ ಬಸವರಾಜದೇವರು ನಿರ್ಮಿಸಿದ ಶೂನ್ಯ ಪೀಠದ ಮೇಲೆ ಪ್ರಭುದೇವರು ಮಂಡಿಸಿದುದನ್ನೂ ಅವರ ಪಾದವನ್ನು ಶಿವಶರಣರೆಲ್ಲರೂ ಒಲ್ಮೆ ಭಕ್ತಿಯಿಂದ ಪೂಜಿಸಿದುದನ್ನೂ ವರ್ಣಿಸಲಾಗಿದೆ. ಆದರೆ ತಾತ್ವಿಕ ದೃಷ್ಟಿಯಿಂದ ವಿವೇಚಿಸಲಾಗಿ ಬಸವೇಶನ ಭಕ್ತಿಯೆಂಬ ಪೀಠದ ಮೇಲೆ ಪ್ರಭುವೆಂಬ ಜ್ಞಾನವು ಮಂಡಿಸಿತೆಂಬರ್ಥ. ಅಂದರೆ ಬಸವನ ಭಕ್ತಿಯು ಜ್ಞಾನ ಜ್ಯೋತಿಯನ್ನು ಪಡೆದು ಪ್ರಭುಲಿತವಾಯಿತು. ಬಸವನೇ ಅಂಗ ಪ್ರಭುವೇ ಲಿಂಗವಾಗಿದ್ದು ಇಲ್ಲಿ ಅಂಗದ ಮೇಲೆ ಲಿಂಗವು ಅಳವಟ್ಟಿದೆ. ಅರ್ಥಾತ್ ಅಂಗಲಿಂಗಸಂಗವಾಗಿದೆ. ಅವ್ಯಕ್ತವಾದ ಪರವಸ್ತುವು ಸೇವ್ಯಸೇವಕ ಭಾವದಿಂದ ಭೂಮಿಯ ಮೇಲೆ ಪ್ರಭು-ಬಸವರ ರೂಪದಿಂದ ಅವತರಿಸಿ, ಸಾಧಕರೂಪವಾದ ಬಸವನ ಭಕ್ತಿಯು ಸಿದ್ಧರೂಪವಾದ ಪ್ರಭುವಿನ ಜ್ಞಾನದಲ್ಲಿ ಕೊನೆಗಂಡಿದೆ. ಪ್ರೌಢವಾದ ಬಸವನ ಭಕ್ತಿಯು ಸಾಧನದಿಂದ ಅಪ್ರೌಢವಾದ ಪ್ರಭುಜ್ಞಾನವನ್ನು ಪಡೆದು ನಿತ್ಯಸುಖಿಯಾಗಿದೆ. ಈ ಉದಾತ್ತ ತತ್ವವನ್ನೇ ಶೂನ್ಯ ಸಂಪಾದನಾ ಕರ್ತರು ಸುಗಮವಾದ ಕಥಾರೂಪದಿಂದ ಚಿತ್ರಿಸಿರುವರು.

ಈ ಸಂಪಾದನೆಯ ಕಥಾಸಾರವಿಷ್ಟೇ. ಬಸವರಾಜನು ನಿರ್ಮಿಸಿದ ಶೂನ್ಯಸಿಂಹಾಸನದ ಮೇಲೆ ಪ್ರಭುದೇವರು ಮೂರ್ತಗೊಳ್ಳಲು ಮಡಿವಾಳ, ಅಪ್ಪಣ್ಣ, ಬಾಚರಸ ಮೊದಲಾದ ಶರಣರು ಅವರ ನಿಲವನ್ನು ಬಹು ವಿಧವಾಗಿ ಕೊಂಡಾಡಿದರು. ಬಸವನಾನಂದ ಶರಧಿಯು ಮೀರಿವಪ್ಪಿ ಹರಿಯಿತು ಬಸವನು ೧೨ ವರ್ಷ ಮಾಡಿದ ಲಿಂಗಪೂಜೆಯ

ಫಲವೇ ಪ್ರಭುವೆಂಬ ಜಂಗಮರೂಪವಾಗಿ ಪರಿಣಮಿಸಿತು. ಹೀಗೆ ಪ್ರಭುದೇವರು ಶೂನ್ಯಪೀಠವನ್ನಲಂಕರಿಸಿರಲು, ಬಸವಣ್ಣನವರು ಆನಂದ ಪರಧಿಯಲ್ಲಿ ಓಲಾಡುತ್ತಿರಲು, ಇತ್ತ ಪ್ರತಿನಿತ್ಯದಂತೆ ಆರೋಗಣೆಗೆ ಬಂದು ಕುಳಿತ ಲಕ್ಷದ ಮೇಶೆ ತೊಂಭತ್ತಾರು ಸಾವಿರ ಜಂಗಮರಿಲ್ಲರು ಬಸವನು ನಮ್ಮ ಕಡೆಗೆ ಲಕ್ಷಕೊಡಲೊಲ್ಲನು, ವ್ರತಗೇಡಿಯೆಂದು ಅವನನ್ನು ಜರಿದರು. ಪ್ರಭುವನ್ನು ಮಹೇಂದ್ರ ಜಾಲಿಗನೆಂದು ಹೀಯಾಳಿಸಿ ಹೊರಟು ಹೋದರು. ಆಮೇಲೆ ಪ್ರಭುದೇವರು "ಅಶನಕ್ಕೆ ಬಂದ ಜಂಗಮರು ಗುಹೇಶ್ವರನ ನಿಲವನೆತ್ತ ಬಲ್ಲರು?" ಎಂದು ವಿಡಂಬಿಸಿ ನುಡಿದರು.

ಚನ್ನಬಸವಣ್ಣನು "ಲಿಂಗದಲ್ಲಿ ಸ್ವಯವಾಗಿ ಬಂದು ನಿಂದಾತನೇ ಜಂಗಮು. ಅಂಥ ಜಂಗಮವೇ ಪ್ರಭುವು. ಉಳಿದ ಬರಿಯ ಬೋಳುಗಳೆಲ್ಲ ಜಂಗಮರೇ? ಅವರು ಕೇವಲ ಲಾಂಛನಧಾರಿಗಳು. ಅವರಿಗೆ ಪರವಸ್ತುವು ಬೇಡವಾಗಿದ್ದರೆ ಹೋಗಲಿ" ಎಂದು ಜರಿದು ಮಾತನಾಡಿದರು. ಸೊಡ್ಡಳ ಬಾಚರಸರು "ಅಡವಿಯಲ್ಲಿ ಆನೆಯು ಹಿಂಡು ಆನಂದ ಲೀಲೆಯೊಳಾಡುವಾಗ ಕೇಸರಿಯು ಬರಲು ಆ ಮದಕರಿಗಳೆಲ್ಲ ಓಡುವ ತೆರನಂತೆ ಪ್ರಭುದೇವರು ಬರಲೊಡನೆ ನೆರೆದ ಗಣಂಗಳೆಲ್ಲ ಹರಿದರಯ್ಯ" ಎಂದು ಹಾಸ್ಯವಾಡಿದರು. ಆದರೆ ಬಸವಣ್ಣನವರು ಜಂಗಮರೆಲ್ಲ ಮುಳಿದು ಹೋಗಲು ಬಹಳೇ ಪಶ್ಚಾತ್ತಾಪದಿಂದ "ಜಂಗಮವು ಮುನಿದರೆ ನಾನಂತು ಬದುಕುವ ಕೂಡಲ ಸಂಗಮದೇವಾ" ಎಂದು ನುಡಿಯಲು ಪ್ರಭುದೇವರು ಯುಕ್ತಿಯಿಂದ ಅವರನ್ನು ಸಂತೈಸಿದರು.

ಆಮೇಲೆ ಬಸವಣ್ಣನವರು ಪ್ರಭುವಿಗೆ ಬಿನ್ನವಿಸಿದ್ದೇನೆಂದರೆ "ಪ್ರಭುವೇ ಜಂಗಮರು ಹೋದರು. ತಾವು ಬೇಡುವದನ್ನು ದಯವಿಟ್ಟು ತಿಳಿಸಯ್ಯಾ. ಕಾಮಿಸದೆ ಕಲ್ಪಿಸದೆ ಭ್ರಮಿಸದೆ ನಿಮ್ಮ ಪರಿಯಾಣಕ್ಕೆ ನೀಡುವೆನು." ಇದಕ್ಕೆ ಪ್ರಭುವು "ಗುಹೇಶ್ವರನು ಹಸಿದಿಹನು ಪದಾರ್ಥವ ನೀಡಬಯ್ಯಾ ಸಂಗನಬಸವಣ್ಣಾ" ಎಂದು ಅಪ್ಪಣೆ ಕೊಡಿಸಲು ಬಸವಣ್ಣನವರು ಪ್ರತೀ ಪ್ರಭುವಿನ ಸೇವೆಗೆ ಅನುವಾದರು. ಮಡಿವಾಳ ತಂದೆಗಳು ಅಕ್ಕನಾಗಮ್ಮನು ಪ್ರಭುವಿಗೆ ಆರತಿಯನ್ನೆತ್ತಿದರು.

(ಬಸವಣ್ಣನ ಆರಮನೆ— **ಶೂನ್ಯಪೀಠಾರೋಣ**)

ಬಸವೇಶ್ವರನ ಹೆಮ್ಮನೆಯನ್ನು ಗ್ರಂಥಕಾರನು ಬಹು ಸೊಗಸಾಗಿ ವರ್ಣಿಸಿರುವನು. ಆ ಮನೆಯ ಮುಂಟಪಗಳು ಸುವರ್ಣ ಭಿತ್ತಿಗಳಿಂ ದಲೂ ರತ್ನದೆನೆಗಳಿಂದಲೂ ಪರಿಕೋಭಿತವಾಗಿದ್ದವು. ನೀಲವರ್ಣದ ಉಪ್ಪರಿಗೆಗಳೂ ಮಾಣಿಕ್ಯದ ಕಲಶಗಳಿಂದೊಪ್ಪುವ ಗೋಪುರಗಳೂ ವಿರಾ ಜಿಸುತ್ತಿದ್ದವು. ಪಚ್ಚೆಯ ಕಂಬಗಳಿಂದಲೂ ನವರತ್ನದ ರಂಗಮುಂಟಪ ದಿಂದಲೂ ಬಣ್ಣದ ಲೋವೆಗಳಿಂದಲೂ ನೀಲರತ್ನದ ನೆಲಗಟ್ಟಿನ ಕನ್ನಿ ಪಾಡಂಗಳ ಸಾಲ್ಗಳಿಂದಲೂ ಅವು ಅಂದವಾಗಿತ್ತು. ಇದಲ್ಲದೆ ಅಲ್ಲಲ್ಲಿ ಗಂಧದ ಬಟ್ಟಲಗಳೂ ಭಸಿತದ ಭರಣಿಗಳೂ ರುದ್ರಾಕ್ಷಿಯ ಸರಗಳೂ ಶರಣರ ಪ್ರತಿಬಿಂಬಗಳೂ ಅಲ್ಲಲ್ಲಿ ಕಂಗೊಳಿಸುತ್ತಿದ್ದವು. ಕನ್ನಿಕೆಯರು ಆರತಿಯನ್ನು ಹಿಡಿದೆತ್ತುತ್ತಿದ್ದರು. ಕೆಲವರು ಮಧ್ಯಮುಂಟಪದಲ್ಲಿ ಶಿವಾ ರ್ಚನೆ ಮಾಡುತ್ತಿದ್ದರು. ಕೆಲವೆಡೆಯಲ್ಲಿ ಪ್ರವಚನ ಶಿವಗೋಷ್ಠಿಗಳು ನಡೆದಿದ್ದವು. ಬೇರೆಡೆಯಲ್ಲಿ ಗಾಯನ, ನಾಟ್ಯ, ಭಟ್ಟಂಗಿಗಳ ಕೊಂಡಾ ಟಗಳು ಸಾಗಿದ್ದವು. ಆ ಸಮಯದಲ್ಲಿ ಪ್ರಭುದೇವರು ಸ್ತುತಿ, ಆರತಿ, ಜಯಘೋಷಗಳೊಂದಿಗೆ ಶೂನ್ಯಸಿಂಹಾಸನದ ಮೇಲೆ ಮೂರ್ತಗೊಳಿ ಸಿದರು.

ಶರಣರು ಪ್ರಭುವನ್ನು ಸ್ತುತಿಸಿದ್ದು.

(೧) ಮಡಿವಳ— ಮಲೆವುತ್ತ ಮೆಟ್ಟುತ್ತ ತನುವನೆಲೆವುತ್ತ ತಲೆ ಮೊಗಿ ಮನವನಲ್ಲಾಡಿ ಬಸವನ ಹಿಂದು ಮುಂದೆ ನೋಡುತ್ತಿ ನಗುತ್ತಿ ಮುತ್ತಿನ ತೋರಣಕ್ಕೆ ಹಾರೈಸಿ ಬಸವನ ಮನೆಯ ಹೊಕ್ಕನು ಕಲಿ ದೇವರ ದೇವನು.

(೨) ಬಸವಣ್ಣ— ಅಂತರಂಗವಿಲ್ಲದ ಒಳಗು ಅವಲಂಬವಿಲ್ಲದ ಹೊರಗು ನೋಡಲಳವಲ್ಲದ ಕುಸುಮದ ಗದ್ದುಗೆಯಲ್ಲಿ ಒಡಲಿಲ್ಲದ ಘನವು ಮೂರ್ತಿಗೊಂಡರೆ ವಿಚಿತ್ರವಾಯಿತ್ತು ಜಗಪೆಲ್ಲ. ಕೂಡಲಸಂ ಗಮದೇವರ ಶರಣ ಪ್ರಭುದೇವರ ಶ್ರೀಪಾದಕ್ಕೆ ನಮೋನಮೋ ಎಂಬೆನು.

(೩) ಹಡಪದಪ್ಪಣ್ಣ— ನೆಲನ ಹೊದ್ದದು, ಆಕಾಶ ಮುಟ್ಟದು, ಎಡೆಯಲೊಂದು ರೂಪಿಲ್ಲ. ನಿಜವೆಂಬ ವಿಸ್ತಾರದಲ್ಲಿ ನಿತ್ಯನಿರಾಳವೆಂಬ ಮಹಾಘನವು ಬಂದು ಮೂರ್ತಿಗೊಳ್ಳಲು ಕಾಯದ ಕಣ್ಣಿಗೆ ಕಾಣಬಾ ರದು. ಮನದ ಮುಂದೆ ಅಳವಡದು. ಭಾವದ ಬಗೆಗೆ ಮೈದೋರದು. ಬಸವ ಪ್ರಿಯ ಕೂಡಲ ಚನ್ನಸಂಗಯ್ಯನಲ್ಲಿ ಪ್ರಭುದೇವರ ಶ್ರೀಪಾದಕ್ಕೆ ನಮೋನಮೋ ಎಂಬೆನು.

(೪) ಸೊಡ್ಡಳಬಾಚರಸ— ಆಕಾರವಿಲ್ಲದ ನಿರಾಕಾರ ನಿರಾಳ ವೆಂಬ ಗದ್ದುಗೆಯ ಮೇಲೆ ಕುಳ್ಳಿರ್ದು ಕಂಡು ಆನು ಪ್ರಭುದೇವರೆಂ ದೆಂದು ಅತನ ನಿಜಪಾದಕ್ಕೆರಗಿ ಎನ್ನ ಭವವ ಹರಿದೆನು. ಮಹಾ ಜ್ಞಾನಿ ಸೊಡ್ಡಳನ ಕಂಡ ಕಡು ಸುಖವನು ಉಪಮಿಸಬಾರದು.

ಬಸವರಾಜದೇವರ ಆನಂದ.

ಎನ್ನ ಗಂಡ ಬರಬೇಕೆಂದು ಅಂತರಂಗವೆಂಬ ಮನೆಯ ತೆರಹು ಮಾಡಿ ಅಷ್ಟದಲವೆಂಬ ಓವರಿಯೊಳಗೆ ನಿಜನಿವಾಸವೆಂಬ ಹಾಸಿಗೆಯ ಹಾಸಿ ಧ್ಯಾನವೆಂಬ ಮೇಲ್ಕಟ್ಟು ಕಟ್ಟಿ ಜ್ಞಾನವೆಂಬ ದೀಪವಮಂ ಬೆಳ ಗಿಸಿ ಕ್ರಿಯೆಯೆಂಬ ಉಪಚಾರಂಗಳಂ ಹರಹಿಕೊಂಡು ಪಶ್ಚಿಮ ದ್ವಾರ ವೆಂಬ ಬಾಗಿಲತೆರೆದು ಕಂಗಳೇ ಪ್ರಾಣವಾಗಿ ಹಾರೈಸುತ್ತಿದ್ದೆನು. ನಾನು ಬಾರೆಸೆಂದು ತಾನೇ ಬಂದು ಹೃದಯ ಸಿಂಹಾಸನವೇರಿದನು. ಎನ್ನ ಮನದ ಬಯಕೆ ಸ್ವಯವಾಯಿತ್ತು. ಹಿಂದೆ ಹನ್ನೆರಡು ವರ್ಷದಿಂದಿದ್ದ ಚಿಂತೆ ಇಂದು ನಿಶ್ಚಿಂತವಾಯಿತ್ತು. ಪ್ರಭುವೇ, ನಿಮ್ಮ ಪಾದಾರ್ಚನೆಗೆ ನನ್ನ ಪರಮಾನಂದ ಜಲವನೆರೆಯುವೆನಯ್ಯ, ಪೂಜೆಗೆ ನನ್ನ ಹೃದಯ ಕಮಲವನಿರಿಸುವೆನಯ್ಯ, ಆರತಿಯಿಂದ ಆರತಿಯನ್ನೆತ್ತುವೆನಯ್ಯ, ಎನ್ನ ಮಹಾ ಪ್ರಕಾಶವ ದೀಪವಾಗಿ ಬೆಳಗುವೆನಯ್ಯ. ಈ ತೆರನಲ್ಲದೆ ಅಷ್ಟ ವಿಧಾರ್ಚನೆ ಷೋಡಶೋಪಚಾರವೆಂಬುದಕ್ಕೆ ಬೇರೆ ತೆರನ ಕಾಣೆನಯ್ಯ. ಪ್ರಭುವೆನ್ನ ಪ್ರಾಣಲಿಂಗವೆಂದು ಇಂದೆನಗೆ ಕಾಣಬಂದಿತಯ್ಯ. ಪ್ರಭುವೇ, ನಿಮ್ಮ ಸೋಟವನಂತ ಸುಖವು. ನಿಮ್ಮ ಕೂಟ ಪರಮ ಸುಖವು. ಕೋಟ್ಯಕೋಟಿ ರೋಮಂಗಳೆಲ್ಲ ಕಂಗಳಾಗಿ ನೋಡುತ್ತಿದ್ದೇನೆ. ನಿಮ್ಮ ನೋಡಿ ನೋಡಿ ಎನ್ನ ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಂಗಳು. ಎನ್ನ ವಚನದಲ್ಲಿ ನಿಮ್ಮ ನಾಮಾಮೃತ ತುಂಬಿದೆ. ಎನ್ನ ನಯನ ದಲ್ಲಿ ನಿಮ್ಮ ಮೂರುತಿ ತುಂಬಿದೆ. ಎನ್ನ ಮನದಲ್ಲಿ ನಿಮ್ಮ ನೆನಹು ತುಂಬಿದೆ. ಎನ್ನ ಕವಿಯಲ್ಲಿ ನಿಮ್ಮ ಕೀರ್ತಿ ತುಂಬಿದೆ. ನಿಮ್ಮ ಚರಣ ಸಮಲದಲ್ಲಿ ನಾನು ತುಂಬಿಯಾಗಿದ್ದೇನೆ. ಬಿಡಲಾರದ ನಿಧಾನವ ಕಂಡೆ ನಯ್ಯ. ಆನಂದದಿಂದ ಆಡುವೆ, ಹಾಡುವ, ಕಣ್ಣಾ ತುಂಬ ನೋಡುವೆ.

ವನವೊಲಿದು ಭಕ್ತಿಯ ಮಾಡುವೆ. ಆಡಿ ಕಾಲು ದಣಿಯವು. ನೋಡಿ ಕಣ್ಣು ದಣಿಯವು. ಹಾಡಿ ಮನ ದಣಿಯದು. ಇನ್ನೇವೆ ನಿನ್ನೇವೆನಯ್ಯ?

ಜಂಗಮರು ಬಸವನನ್ನು ಜರೆದದ್ದು.

ಪ್ರಭುವನ್ನು ಲಕ್ಷಿಸಿ ತಮ್ಮನ್ನುಪೇಕ್ಷಿಸಿದ ಬಸವನನ್ನು ಜಂಗಮರು ಈ ರೀತಿಯಾಗಿ ಆಕ್ಷೇಪಿಸಿದರು. "ಅರಳು ಕಂಗಳುಳ್ಳವರಿಗೆ ಹರಳುಕಂಗಳುಳ್ಳವರು ಸೇರದಂತೆ, ತುರುಬುಳ್ಳವರಿಗೆ ಬರಿಮುಂಡೆಯವರು ಸೈರಿಸವಂತೆ, ಮಾಡಿದನೀ ವ್ರತಗೇಡಿ ಬಸವನು. ಮಹೇಂದ್ರ ಜಾಲಿಗನೊಬ್ಬನ ಕುಳ್ಳಿರಿಸಿಕೊಂಡು ತನ್ನ ಪ್ರಾಣಲಿಂಗವೆಂದು ನಮ್ಮತ್ತ ತಿರುಗಿ ನೋಡಲೊಲ್ಲ. ಆತನಲ್ಲಿ ಏನು ಲೇಸ ಕಂಡನು? ನಮ್ಮಲ್ಲಿ ಏನು ಹೊಲ್ಲೆಯವ ಕಂಡನು? ಕಾಂಚನವನೊಲ್ಲದೆ ಬಿಟ್ಟು ಹಂಚನ್ನು ಹಿಡಿದನು. ಪ್ರಭುವೊಬ್ಬ ಅನಾಚಾರಿ, ಬಸವನೊಬ್ಬ ವ್ರತಗೇಡಿ. ಇವರಿಬ್ಬರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು, ಇವರ ಮುಖ ನೋಡಲಾಗದು" ಹೀಗೆನ್ನುತ್ತ ಹೊರಟು ಹೋದರು.

ಜಂಗಮರ ವಿಡಂಬನೆ.

(೧) ಪ್ರಭು— ಬಸವಾ, ಸಾತ್ವಿಕ ಶರಣರ ನುಡಿ ಹುಸಿಯೆ? ಅದು ದಿಟ. ಒಳಗೆಂಬುದೇ ದೇವಲೋಕ ಹೊರಗೆಂಬುದೇ ಮರ್ತ್ಯಲೋಕ. ಈ ಎರಡೂ ಲೋಕಕ್ಕೆ ಹೊರಗಾಗಿ ನಾವಿರಲು ಈ ಎರಡೂ ಲೋಕದೊಳಗೆ ತಾವಿರಲಿ. ಈ ಅಂಗಜ ಜಂಗುಳಿಗಳೆಲ್ಲ ಅಶನಕ್ಕೆ ನೆರೆವಿದ್ದು, ಲಿಂಗದ ಹವಣ ನಿವರಿತ್ತ ಬಲ್ಲರು? ಕಳವಳದ ಕಾಯಜೀವಿಗಳು ದೇವರ ಸುದ್ದಿಯ ನೆತ್ತಬಲ್ಲರು? ಮದ್ಯಪಾನವ ಮಾಡಿ ಮದವೆದ್ದ ಜೋಗಿಗಳಂತೆ ನುಡಿವರು. ಗುಹೇಶ್ವರನ ನಿಲವನಿವರೆತ್ತ ಬಲ್ಲರು?

(೨) ಚನ್ನಬಸವಣ್ಣ— ಪಥವನೆರಿಯದೆ ಮಂಡೆಯ ಬೋಳಿಸಿಕೊಂಡಾತ ಜಂಗಮನಲ್ಲ. ಸತ್ತೊಡೆ ತೆಗೆಯುವರಿಲ್ಲೆಂದು ಕಟ್ಟಿಕೊಂಡಾತ ಭಕ್ತನಲ್ಲ. ತನುಮನ ಧನವಿನ್ನೆದಲ್ಲ, ಲಿಂಗದ ಒಡವೆ ಲಿಂಗಕ್ಕೆಂದು ಮಾಡುವಾತ ಭಕ್ತ. ತನುಗುಣವಿರಹಿತನಾಗಿ ಲಿಂಗದಲ್ಲಿ ಸ್ಥಯವಾಗಿ ಬಂದುನಿಂದಾತ ಜಂಗಮ. ಲಾಂಛನ ಧಾರಿಗಳೆಲ್ಲ ಜಂಗಮರೇ? ಜಡ ಜೀವಿಗಳೆಲ್ಲ ಜಂಗಮರೇ? ಕೂಡಲ ಚನ್ನ ಸಂಗಯ್ಯನೊಲ್ಲದಿದ್ದರೆ ಅವರು ಹೋಗಲಿ.

(೩) ಸೊಡ್ಡಳ ಬಾಚರಸ— ವಿಪಿನದೊಳು ಮದಕರಿಯ ಹಿಂಡು ಅನಂತ ಲೀಲೆಯೊಳಾಡುತ್ತಿರಲು, ಕೇಸರಿ ಬರಲು ಮದಕರಿಗಳೆಲ್ಲ ಕೆದರಿ ಓಡುವ ತೆರನಂತೆ ನಿಮ್ಮ ಶರಣ ಪ್ರಭುದೇವರು ಬರಲೊಡನೆ ಪಾದುಪಯ್ಯ ನೆರೆದ ಗಣಂಗಳು.

ಬಸವಣ್ಣನವರ ಕಳವಳ

ಜಂಗಮರು ತನ್ನ ಮನೆ ಬಿಟ್ಟು ಹೋದದ್ದು ತಿಳಿದ ಕೂಡಲೆ ಬಸವಣ್ಣನವರ ಹೊಟ್ಟೆಯಲ್ಲಿ ಬಹಳ ಕಳವಳವುಂಟಾಯಿತು. ಅವರು ಪ್ರಭುದೇವರನ್ನು ಕುರಿತು "ಅಯ್ಯಾ ನಿಮ್ಮ ಶರಣರ ಸಂಗವೆನಗೆ ಪರಮ ಸುಖವಯ್ಯಾ. ಅಯ್ಯಾ ನಿಮ್ಮ ಶರಣರ ಅಗಲಿಕೆ ಪ್ರಾಣವಿಯೋಗವಯ್ಯಾ. ಶಿವಶಿವಾ ಸಂತವಿಡುವೆನು ಇನ್ನೆಂತಯ್ಯಾ? ಎನಗೇನು ಗತಿ? ಶರಣರ ಮುನಿಸು ಬಿಡಿಸಬಾರದ ತೊಡಕು. ಗುರು ಮುನಿದರೆ ಒಂದು ದಿನ ತಾಳುವೆ. ಲಿಂಗ ಮುನಿದರೆ ಅರೆ ದಿನ ತಾಳುವೆ. ಜಂಗಮ ಮುನಿದರೆ ಕ್ಷಣಮಾತ್ರ ತಾಳಿದರೆ ನನ್ನ ಪ್ರಾಣ ಹೋಕು. ಅರಸು ಮುನಿದರೆ ಆ ನಾಡೊಳಗಿರಬಾರದು. ಪತಿ ಮುನಿದರೆ ಸತಿ ಇರಬಾರದು. ಜಂಗಮ ಮುನಿದರೆ ನಾನೆಂತು ಬದಕುವೆನು ಕೂಡಲಸಂಗಮದೇವಾ" ಎಂದು ಪಶ್ಚಾತ್ತಾಪದಿಂದ ಅರಿಕೆ ಮಾಡಿಕೊಂಡರು.

ಪ್ರಭುವು ಬಸವನನ್ನು ಸಮಾಧಾನ ಮಾಡಿದ್ದು.

ಪ್ರಭುದೇವರು ಬಸವನನ್ನು ಕುರಿತು "ಅಂಜಬೇಡ. ಅಳುಕಬೇಡ. ಹೋದವರಾರು? ಇದ್ದವರಾರು? ಹಲವರ ಮುಖದಲ್ಲಿಪ್ಪ ದೇವನೊಬ್ಬನೆ. ನಾವು ಹಲವಲ್ಲದೆ ಕಾರ್ಯವೊಂದೇ ನೋಡಾ. ಮನದೊಳಗಣ ಧನವು ತನುವನಗಲುವದೇ? ಗುಹೇಶ್ವರ ಲಿಂಗವ ವಿಯೋಗಕ್ಕೆ ತೆರಳಿ ಕೇಳಾ ಸಂಗನಬಸವಣ್ಣಾ" ಎಂದರು. ಅದಕ್ಕೆ ಬಸವಣ್ಣನವರು "ಅವೈವೃತವ ಅಂತರಂಗದಲ್ಲಿ ಅರಿದು ಹೊರಗೆ ದಾಸೋಹ ಮಾಡದಿರ್ದರೆಂತಯ್ಯ? ಕೂಡಲಸಂಗಮದೇವಾ, ಹಾವು ಸಾಯದಂತೆ ಕೋಲು ಸೋಯದಂತೆ ಮಾಡಾ ನಿಮ್ಮ ಧರ್ಮ" ಎಂದು ಬೇಡಿಕೊಂಡರು. ಆಗ ಪ್ರಭುದೇವರು "ಕಳಗೇಳು ಲೋಕಂಗಳಿಲ್ಲದ ಮುನ್ನ, ಮೇಲೇಳು ಲೋಕಂಗಳಿಲ್ಲದ ಮುನ್ನ, ಸಮಸ್ತ ಬ್ರಹ್ಮಾಂಡಗಳಿಲ್ಲದ ಮುನ್ನ, ಬಸವಣ್ಣಾ ನೀನು ಲಿಂಗ ಭಕ್ತ, ಜಂಗಮ ಪ್ರಾಣವೆಂಬುದನ್ನು ನಾನು

ಅರಿದಿಹೆನಯ್ಯ. ಮಾಡುವ ನೀಡುವ ನಿಜಭಕ್ತರಿಲ್ಲದ ಕಾರಣ ಬಾಯ್ದೆರೆಯದೆ ಇದ್ದೆನು. ಮಾಡಿ ನೀಡಿಹೆನೆಂಬ ಸಂತೋಷವಾಪ್ಯಾಯನ ಹರಿದಾಯಿತ್ತು. ನೀಡಯ್ಯ ಗುಹೇಶ್ವರಂಗೆ ಸಂಗನ ಬಸವಣ್ಣಾ" ಎಂದು ಅಪ್ಪಣೆ ಕೊಡಿಸಲು ಬಸವಣ್ಣನವರು "ರೂಹಿಲ್ಲದ ಸುಯಿಧಾನವ ನೀಡುವೆ. ರುಚಿಯಿಲ್ಲದ ಪದಾರ್ಥವ ನೀಡುವೆ. ಲಿಂಗಪದಾರ್ಥವ ಲಿಂಗಮುಖಕ್ಕೆ ನೀಡುವೆ. ಕಾಮಿಸದೆ ಕಲ್ಪಿಸದೆ ಭಾವಿಸದೆ ಭ್ರಮಿಸದೆ ನಿಮ್ಮ ಪರಿಯಾಣಕ್ಕೆ ನೀಡುವೆನು. ಸಮಾಧಾನದಿಂ ಅವಧರಿಸಬೇಕಯ್ಯ ಪ್ರಭುವೆ" ಎಂದು ವಿನಯಗೊಳ್ಳಲು ಪ್ರಭುವು "ಗುಹೇಶ್ವರ ಹಸಿದಿಹನು ಪದಾರ್ಥವ ನೀಡಯ್ಯ ಸಂಗನಬಸವಣ್ಣಾ" ಎಂದು ಅಪ್ಪಣೆ ಕೊಡಿಸಿದರು.

ಅಮೇಲೆ ಬಸವರಾಜದೇವರು ಸ್ವತಃ ಪ್ರಭುವಿನ ಸೇವೆಗೆ ಸನ್ನದ್ಧರಾದರು. ಮಡಿವಾಳತಂದೆಗಳೂ ಅಕ್ಕನಾಗಮ್ಮನವರೂ ಪ್ರಭುವಿಗೆ ಮಂಗಳಾರತಿಯ ಮಾಡಿದರು. ಇಲ್ಲಿಗೆ ಕಥೆಯು ಮುಗಿಯಿತು.

ಮಹಾಶರಣರಿಂದ ಪೂಜೆಗೊಂಡ ಪ್ರಭುವಿನ ಯೋಗ್ಯತೆಯು ಎಷ್ಟಿದ್ದಿತೆಂಬದನ್ನು ವಾಚಕರೇ ಊಹಿಸಬೇಕು. ಪ್ರಭುವು ಸಾಕ್ಷಾತ್ ಪರಶಿವನ ಮೂರ್ತಿಯೆಂದೇ ಶರಣರೆಲ್ಲರು ಭಾವಿಸಿದ್ದರು.

ಶ್ರೀ. ನಿಡುಮಾವಿಡಿ ಮಠದ ಇತಿಹಾಸ.

ಲೇಖಾಂಕ ೨.

(ಲೇಖಕರು:— ಪಂ. ಜಿ. ನಂಜುಂಡಾರಾಧ್ಯ, 'ರಾಷ್ಟ್ರಭಾಷಾ ವಿಶಾರದ' ಸಿದ್ಧಗಂಗಾ ಗುರುಕುಲ.)

ನಮ್ಮ ಹಿಂದಿನ ಲೇಖಾಂಕದಿಂದ ಮೇಲ್ಕಂಡ ಮಠದ ಕೆಲವು ಚಾಂತ್ರಕ ವಿಚಾರಗಳು ವಾಚಕರ ಗಮನಕ್ಕೆ ಬಾರದಿರವು. ಈ ಲೇಖದಲ್ಲಿ ಮತ್ತೆ ಕೆಲವು ಸಂಗತಿಗಳು ಉದಾಹರಿಸಲ್ಪಡುತ್ತವೆ.

ಶ್ರೀ ನಿಡುಮಾವಿಡಿ ಮಠದ ಕೇಂದ್ರಸ್ಥಾನವು ಸಯ್ಯದಲ್ಲಿ ಬಾಗೇಪಲ್ಲಿ ತಾಲ್ಲೂಕಿಗೆ ಸೇರಿದ ಗೂಳೂರು ಗ್ರಾಮದ ಬಳಿಯಿರುತ್ತದೆಯೆಂದು ಹೇಳಿದೆಯಷ್ಟೆ! ಈ ಗ್ರಾಮವು ಹಿಂದೆ ಇತಿಹಾಸದಲ್ಲಿ ಪ್ರಸಿದ್ಧನಾದ ರಾಜೇಂದ್ರ ಚೋಳಭೂಪಾಲನ (೧೦೧೨—೧೦೬೫) ರಾಜಧಾನಿಯಾಗಿತ್ತೆಂಬುದಕ್ಕೆ ಅನೇಕ ಪ್ರಮಾಣಗಳಿವೆ. ಜಗದ್ಗುರು ಚಂದ್ರಗುಂಡ ವೀಶಿಕೇಂದ್ರ ಶಿವಾಚಾರ್ಯರ ದಿವ್ಯ ಮಂತ್ರೋಪದೇಶ ಪ್ರಭಾವದಿಂದ ಜನರ ಅಜನ್ಮಗತವಾಗಿ ಪೀಡಿಸುತ್ತಿದ್ದ ಬ್ರಹ್ಮಹತ್ಯಾಪಾತಕವು 'ಗುಯ್' ಎಂದು ಶಬ್ದ ಮಾಡುತ್ತ ಕರ್ಣದಿಂದ ಹೊರಹೊರಟಿತೆಂದೂ, ಅಂದಿನಿಂದ ಆ ನಗರಕ್ಕೆ 'ಗುಯಲೂರು' ಎಂಬಭಿಧಾನವು ಇಡಲ್ಪಟ್ಟಿತೆಂದೂ ಹೇಳುವ ಪುಲ್ಲಕವಿಯ ಅಭಿಪ್ರಾಯವನ್ನೇ 'ಅಪ್ಪಪ್ಪ' ಮತ್ತು 'ಇಡಗೂರು ರುದ್ರಕವಿ' ಗಳು ಸಮರ್ಥಿಸುತ್ತಾರೆ. ಅದು ರಾಜಧಾನಿಯಾಗಿದ್ದುದಕ್ಕೆ ಬೇಕಾದ ಅನೇಕ ಪಾಚೀನ ಶಿಲಾಶಿಲ್ಪ ಕೌಶಲವನ್ನು ಸೂಚಿಸುವ ಕಟ್ಟಡಗಳೂ, ಕುರುಹುಗಳೂ ಸಹ ಈಗಲೂ ಅಲ್ಲಿ ಉಪಲಬ್ಧವಾಗುತ್ತವೆ.

ಆ ಗ್ರಾಮಕ್ಕೆ ಸಮೀಪದಲ್ಲಿರುವ ದಿಣ್ಣೆಯಲ್ಲಿ ಒಂದು ಪ್ರಾಚೀನ ಸ್ತಂಭವಿದೆ. ಅದು ಚೋಳರಾಜನ ಗಜಶಾಲೆಯಾಗಿದ್ದು ಅದಕ್ಕೆ ಪಟ್ಟ ದಾನೆಯನ್ನು ಬಂಧಿಸುತ್ತಿದ್ದರೆಂಬ ಪ್ರತೀತಿಯಿದೆ. ಆ ಕಂಭದ ಬುಡವು ಉರಜನಿಯಿಂದ ಸವೆದು ಕೃಶವಾಗಿರುವುದನ್ನು ನಾವಿಂದು ಕಾಣಬಹುದು. ಮತ್ತು ಈ 'ಗುಯಲೂರು' ಎಂಬುದು ಸು. ೧೫ನೆಯ ಶತ

ಮಾನವ ವರೆಗೂ ವಿಜಯನಗರದ ಪ್ರಸಿದ್ಧಿ ಸೀಮೆಯೆಂದು ಕರೆಯ ಲ್ಪಡುತ್ತಿದ್ದಿತೆಂಬುದಕ್ಕೆ ಕೆಲವು ಶಿಲಾಶಾಸನಗಳು ಉಪಲಬ್ಧವಾಗುತ್ತವೆ.

ಅನಂತಪುರಂ ಜಿಲ್ಲಾ ಹಿಂದೂಪುರದ ತಾಲ್ಲೂಕಿಗೆ ಸೇರಿದ ಗೊರವನಹಳ್ಳಿ ಗ್ರಾಮದ ಸಮೀಪದಲ್ಲಿ ಒಂದು ಮಹಾಲಕ್ಷ್ಮೀ ದೇವಾಲಯವಿದೆ. ಅದನ್ನು ಕಟ್ಟಿಸಿದವನು ಕಲಾ ಸೌಂದರ್ಯದಲ್ಲಿ ಜಗತ್ಪ್ರಸಿದ್ಧವಾದ ಲೇಪಾಕ್ಷಿ ಮತ್ತು ನಂದಿ ದೇವಾಲಯಗಳನ್ನು ಕಟ್ಟಿಸಿದ ಪೆನುಗೊಂಡೆಯ ವಿರುಪಣ್ಣನೆಂಬವನು. ಆ ಸಮಯದಲ್ಲಿ ವಿಜಯನಗರದ ಐತಿಹಾಸಿಕ ಪ್ರಭುವಾದ ಅಚ್ಯುತರಾಯನು ಪೆನುಗೊಂಡೆಯಲ್ಲಿದ್ದು ರಾಜ್ಯಭಾರ ಮಾಡುತ್ತಿದ್ದನೆಂದು ಈ ಶಿಲಾಲಿಪಿಯಿಂದ ವ್ಯಕ್ತವಾಗುತ್ತದೆ. ಆ ದೇವಾಲಯದ ಶಿಲಾಭಿತ್ತಿಯ ಮೇಲೆ ೭ ದೊಡ್ಡ ಶಾಸನಗಳಿವೆ. ಅವುಗಳ ಒಂದರ ಮಾದರಿಯು ಹೀಗಿದೆ.

"ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾನಶಕ ವರ್ಷಂಗಳು ೧೪೫೫ (ಕ್ರಿ. ಶ. ೧೫೩೩) ನೆಯ ದುರ್ಮುಖಿ ಸಂ. ಮಾಘ ಶು. ೭ ಬುಧವಾರ ಪುಣ್ಯಕಾಲದಲ್ಲೂ ಶ್ರೀಮನ್ ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರತಾಪ ಶ್ರೀ ಅಚ್ಯುತದೇವ ಮಹಾರಾಯರು ಪೃಥ್ವೀರಾಜ್ಯಂ ಗೈಯುತ್ತಿರಲು ಸಾಣೆ ಚನ್ನಪ್ಪನಾಯಕನ ಕುಮಾರ ... ... ನಾಯಕರು ಶ್ರೀ ಅಚ್ಯುತರಾಯ ಮಹಾರಾಯರು ತಮಗೆ ಮೊಗಣಿ ನಾಯಕತನಕೆ ಪಾಲಿಸಿದ ಪೆನುಗೊಂಡೆ ರಾಜ್ಯ ಗುಯ್ಯಲೂರು ಸೀಮೆಮೊಳಗಣ ಅತ್ತಯ್ಯನ ಕೊಡಗೇನಹಳ್ಳಿ ಸ್ಥಳದ ..... " ಇತ್ಯಾದಿ ಆ ದೇವಾಲಯದ ಚಕ್ಕುಬಂದಿ, ದೇವಿಯ ಪೂಜಾದಿಗಳಿಗೆ ಕೊಟ್ಟಿರುವ ಮಾನ್ಯಗಳ ಉಲ್ಲೇಖವಿದೆ.

ಮತ್ತು ಅದರ ಸಮೀಪದಲ್ಲಿರುವ ಕೊಡಿಗೇನಹಳ್ಳಿ ಎಂಬ ಗ್ರಾಮದಲ್ಲಿನ ಮಾರುತಿಯ ದೇವಾಲಯದಲ್ಲಿ ಮೂರು ಶಾಸನಗಳಿವೆ. ಅವುಗಳಲ್ಲಿ ಒಂದು ಮಾತ್ರ ಶಾಲಿವಾಹನ ೧೭೫೦ (ಕ್ರಿ. ಶ. ೧೪೨೮) ರದು ಅದರಲ್ಲಿಯೂ 'ಗುಯಲೂರು ನಾಡ ಸೀಮೆ' ಎಂಬ ಉಲ್ಲೇಖವಿದೆ. ಇದರಿಂದ ಗುಯಲೂರು ಸೀಮೆಯು ಸು. ೧೨-೧೪ನೆಯ ಶತಮಾನಗಳಿಂದಲೂ ಪ್ರಸಿದ್ಧವಡೆದಿತ್ತೆಂಬುದು ಸಿದ್ಧವಾಗುತ್ತದೆ. ಮತ್ತು ಈಗ ಗೂಳೂರಿನ ಸಮೀಪದಲ್ಲಿ ಒಂದು ಹೊಲದಲ್ಲಿ ಮುರಿದು ಬಿದ್ದಿರುವ

ಶಿಲಾಲಿಪಿಯಲ್ಲಿಯೂ ಸಹ ಈ ಹೆಸರಿನ ಉಲ್ಲೇಖವಿದ್ದು ಶಕೆ ೧೪೬೬ (೧೫೪೪) ವರ್ಷದ್ದಾಗಿದೆ. ಇದರಿಂದ ಆ ಗುಯಲೂರು ಇಂದಿನ ಗೂಳೂರಾಗಿರಬೇಕೆ ಎಂಬ ಶೋಧಕರ ಅಭಿಪ್ರಾಯವು ನಿಜವೆಂದು ಸ್ಪಷ್ಟವಾಗುತ್ತದೆ.

ಆದುದರಿಂದ ಗುಯಲೂರು ಸೀಮೆಯು ಅಚ್ಯುತರಾಯನ ಪ್ರಭುತ್ವಕ್ಕೆ ಒಳಪಟ್ಟಿದ್ದಿತೆಂಬುದು ದೃಢವಾಗುತ್ತದೆ. ಪೆನುಗೊಂಡೆಯಲ್ಲಿ ವಿಜಯನಗರದ ಸಂಸ್ಥಾಪಕನಾದ ಬುಕ್ಕರಾಯನು ಕಟ್ಟಿಸಿದ ಅರಮನೆಯು ಇಂದಿಗೂ ರಾರಾಜಿಸುತ್ತಿದೆಯೆಂದು ವಿದ್ವಾನ್ ಸೋಮಣ್ಣಪಂತಲು ಎಂ. ಎ. ಎಲ್. ಟಿ. § ಅವರು ಬರೆಯುತ್ತಾರೆ. ವಿಜಯನಗರದ ಅರಸರು ಪೆನುಗೊಂಡೆಯಲ್ಲಿ ಬಂದಿರುತ್ತಿದ್ದರೆಂಬುದಕ್ಕೆ ಬಲವಾದ ನಿದರ್ಶನಗಳಿವೆ. ಅಚ್ಯುತರಾಯನು ಅಲ್ಲಿಗೆ ಸಮೀಪದಲ್ಲಿರುವ ನಿಡುಮಾವಿಡಿ ಎಂಬ ಮಹಾಕ್ಷೇತ್ರದಲ್ಲಿ ಮಹಿಮಾಶಾಲಿಗಳಾದ ಶ್ರೀ ಕರಿಬಸವದೇಶಿಕೇಂದ್ರರನ್ನು ಸಂದರ್ಶಿಸಿ ಗೌರವಿಸಿದುದಕ್ಕೆ ಚಾರಿತ್ರಕ ನಿದರ್ಶನಗಳಿವೆ. ಆದುದರಿಂದ ಪುಲ್ಲಕವಿಯು ಹೇಳುವ ಇಮ್ಮಡಿ ಕರಿಬಸವೇಂದ್ರರು ೧೫ನೆಯ ಶತಮಾನದ ಕಡೆಯ ಭಾಗದಲ್ಲಿದ್ದರೆಂದು ಹೇಳಬಹುದಾಗಿದೆ. ಆದುದರಿಂದಲೇ ಇವರ ಉಲ್ಲೇಖವನ್ನು ಮಾಡಿದ ವಿರೂಪಾಕ್ಷ ಪಂಡಿತಾರಾಧ್ಯನಿಗೆ ಈ ವಿಷಯವು ತಿಳಿದಿದ್ದಿತೆಂದು ಕಾಣುತ್ತದೆ.

ನಾವು ಐತಿಹಾಸಿಕ ದೃಷ್ಟಿಯಿಂದ ಪುಲ್ಲ ಕವಿಯ ಪಂಡಿತಾರಾಧ್ಯ ಚರಿತ್ರೆಯನ್ನು ಅವಲೋಕಿಸಿದಲ್ಲಿ ಅವನು ಕೊಟ್ಟಿರುವ ಈ ಪೀಠದ ಸ್ವಾಮಿಗಳ ಪರಂಪರೆಯಲ್ಲಿ ಅನೇಕ ಬಿರುಕುಗಳು ಕಂಡುಬರುತ್ತವೆ. ಅವನು ಚರಿತ್ರೆಯಲ್ಲಿ ಸೂಚಿಸದೆ ಇರುವ ಅನೇಕ ಮಹಿಮಾ ಮೂರ್ತಿಗಳು ಈ ಪೀಠಾಧೀಶರಾಗಿ ಈ ಮಠಕ್ಕೆ ಸೇರಿದ ಶಾಖಾಮಠಗಳಲ್ಲಿ ಲಿಂಗೈಕ್ಯರಾಗಿರುವುದು ಶೋಧನೆಗಳಿಂದ ಕಂಡುಬರುತ್ತಿರುವುದರಿಂದ ಅದು ಅಸಂಪೂರ್ಣವಾದುದೆಂದೂ ಮತ್ತು ಆತನು ಚಾರಿತ್ರಕ ವಿವೇಚನೆಯಿಲ್ಲದೆ ಎಲ್ಲ ಪುರಾಣಕಾರರಂತೆ ಸಾಮಾನ್ಯವಾಗಿ ವಾಙ್ಮೂಲಕವಾಗಿ ಪಡೆದ ಕೆಲವು ಸಂಗತಿಗಳನ್ನು ಬರೆದಿರಬೇಕೆಂದೂ ವ್ಯಕ್ತವಾಗುತ್ತದೆ. ಅಸ್ತು.

ಮೇಲ್ಕಂಡ ಗೊರವನಹಳ್ಳಿಯಲ್ಲಿ ಉಲ್ಲೇಖಿತನಾದ ವಿರುಪಣ್ಣನು ಈ ನಿಡುಮಾವಿಡಿ ಪೀಠದ ಮುಖ್ಯ ಶಿಷ್ಯವೃಂದಕ್ಕೆ ಸೇರಿದ ಬಳ್ಳಾರಿಯ

§ ಅನಂತಪುರಂ ಜಿಲ್ಲಾ ಭೂಗೋಳ ಮು॥ ೧೯೩೫.

ಪರ ಪಂಗಡದ ದೇಶಮುಖ್ರಿ ಶೆಟ್ಟರ ವಂಶೀಯನಿರಬಹುದೆಂದು ಈ ಶಾಸನಗಳಲ್ಲಿ ಕಂಡುಬರುವ ವಿಶೇಷಣಗಳಿಂದ ಊಹಿಸಬಹುದಾಗಿದೆ.

೭ನೆಯ ಶಾಸನದಲ್ಲಿ " .. ವಿರುಪಣ್ಣಾಯ್ಯನವರ ತಮ್ಮಂದಿರು ವೀರಣ್ಣನಾಮಾಂಕರು, ಸ್ವಸ್ತಿ ಸಮಸ್ತ ನಿಜನಾಮಾಂಕ ಮಾಲಿಕಾ ಪ್ರಶಸ್ತ ಸಹಿತವಾದ ಶ್ರೀಮದ್ಗುಹೇಶ್ವರ ಗೌರೀಶ್ವರ ದೇವರ ದಿವ್ಯಪಾದ ಪದ್ಮಾರಾಧಕರಾದ ಉಭಯ ನಾನಾ ದೇಶ ಅಯ್ಯಾಚಾರ ಮುಖ್ಯರಾದ..... ಸ್ವಾಮಿಗಳ ಕೈಯ್ಯಲ್ಲು ....." ಎಂದಿವೆ.

೪ನೆಯ ಶಾಸನದಲ್ಲಿ ".....ಅಚ್ಯುತರಾಯರು ರಾಜಂ ನೈಯು ತ್ತಿರಲು ಲೇಪಾಕ್ಷಿ ನಂದಿ ಲಕಿ ಶೆಟ್ಟಿ ಮುದ್ರೆ.....ವರಕುಮಾರ ವೀರಣ್ಣಯ್ಯ....." ಇತ್ಯಾದಿಯಾಗಿದೆ. ಕ್ರಿ. ಶ. ೧೭೭೧ ರಲ್ಲಿ ಶ್ರೀ ಸಿಡುಮೂಮಿಡಿ ಪೀಠಾಧೀಶರಾಗಿದ್ದ ಮರಿಕರಿಬಸವರಾಜದೇಶಿಕೇಂದ್ರ ಸ್ವಾಮಿಗಳವರು ಕಂಚಿಯಲ್ಲಿರುವ ತಮ್ಮ ಮಠಕ್ಕೆ ದಯಮಾಡಿಸಿದ್ದಾಗ ಪಾಲಾಜಾ ನಗರದ ಗುಂಡಪ್ಪಶೆಟ್ಟಿ ಕೊಮಾರ ಸಂಗಪ್ಪಶೆಟ್ಟಿ ಮೊದಲಾದವರು ಶ್ರೀ ಸ್ವಾಮಿಯವರಿಗೆ ಬರೆದುಕೊಟ್ಟ ತಾಳಪತ್ರದ ದಾನಶಾಸನದಲ್ಲಿ ಈ ಶಾಸನದಲ್ಲಿ ಕಾಣುವ ವಕ್ಕಣಿಕೆಯು ಅಕ್ಷರಶಃ ಕಂಡುಬರುತ್ತೆ. ಇದರಿಂದ ಈ ವೆನುಗೊಂಡೆ ವಿರುಪಣ್ಣನೂ ಶ್ರೀ ಮಠದ ಮುಖ್ಯ ಶಿಷ್ಯನಾಗಿದ್ದು ಇಂತಹ ಮಹಾ ದೇವಾಲಯಗಳನ್ನು ಕಟ್ಟಿಸಿದ್ದನೆಂಬುದು ಅನಂದ ಜನಕವಾದ ವಿಷಯವಾಗಿದೆ.

ಕಡಪಾ ಡಿಸ್ಟ್ರಿಕ್ಟಿನಲ್ಲಿ ಜಗತ್ಪ್ರಸಿದ್ಧವಾದ ರಾಯಚೋಟಿ ವೀರಭದ್ರದೇವರ ಪ್ರತಿಷ್ಠೆಯನ್ನು ಈ ಪೀಠಾಧಿಕಾರಿಗಳಾಗಿದ್ದ ಚಂದ್ರಗುಂಡ ದೇಶಿಕೇಂದ್ರರು ಮಾಡಿಸಿದರೆಂಬುದಕ್ಕೆ ಬಲವಾದ ಆಧಾರಗಳಿವೆ. ಇವರು ದೇಶಸಂಚಾರದಲ್ಲಿರುವಾಗ್ಗೆ ಆ ಸ್ಥಳಕ್ಕೆ ದಯಮಾಡಿಸಿ ಅಲ್ಲಿ ತಮ್ಮ ಶಿಷ್ಯರಲ್ಲಗ್ರೇಸರನಾದ ಶ್ರೀ ವೀರಭದ್ರನ ಪ್ರತಿಷ್ಠೆಯನ್ನು ಮಾಡಿಸಿ ಒಂದು ಮಠವನ್ನು ಕಟ್ಟಿಸಿ ಇದರ ಮೇಲ್ವಿಚಾರಣೆಯನ್ನು ಓರ್ವ ಮೂರ್ತಿಗಳನ್ನೆ ಒಪ್ಪಿಸಿರುವಂತೆ ಇತಿಹಾಸವಿದೆ. ಅದರಂತೆಯೇ ಈಗಲೂ ಆ ದೇವಾಲಯದ ಮೇಲ್ವಿಚಾರಣೆಯು ವೀರಶೈವ ಪಟ್ಟಾಧಿಕಾರಿಗಳ ಅಧೀನವಲ್ಲಿದ್ದುದರ ದಾಖಲೆಗಳು ಈ ಸಿಡುಮೂಮಿಡಿ ಮಠದಲ್ಲಿರುತ್ತವೆ. ಈ ವಿಷಯವನ್ನು ಸಮರ್ಥಿಸುವ ಅನೇಕ ವಿಷಯಗಳನ್ನು ರಾ॥ ಸಾ॥ ಫ ಗು. ಹಳಕಟ್ಟಿಯವರು ಪ್ರಕಟಿಸಿರುತ್ತಾರೆ. † ಆದ್ದರಿಂದ ಈ ದೇವಾಲಯ ಮತ್ತು ಮಠ ಇವು ನಿಡುಮೂಮಿಡಿ ಮಠದ ಶಾಖಾಕ್ಕೆ ಸೇರಿದುದೆಂದು ಈ ಮುಂದಿನ ಉಲ್ಲೇಖದಿಂದ ಸಿದ್ಧವಾಗುತ್ತದೆ.

"ಈ ದೇವಸ್ಥಾನದ ಆಧಿಪತ್ಯವು ಓರ್ವ ವೀರಶೈವ ಮಠಾಧಿಕಾರಿಗಳ ಕಡೆಗೆ ಇದ್ದು ಅವರಿಗೆ ಸಪ್ಪಡಿ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳೆಂದು ಬಹು ಪುರಾತನಕಾಲದಿಂದಲೂ ಹೆಸರಿದ್ದುದು ಕಂಡುಬರುತ್ತದೆ. ಈ ಮಠಾಧೀಶ್ವರರಲ್ಲಿ ಅನೇಕರು ವಿದ್ವಾಂಸರೂ ಕವಿಗಳೂ ಆಗಿಹೋಗಿರುವರು. ಸಪ್ಪಡಿ ಸಿದ್ಧಮಲ್ಲಿಕಾರ್ಜುನ ಸ್ವಾಮಿ ಈ ಹೆಸರಿನ ಬದಲು ಸಪ್ಪಿ ಸಿದ್ಧಮಲ್ಲಿಕಾರ್ಜುನ ಸ್ವಾಮಿ ಅಥವಾ ಸೊಪ್ಪೆ ಸಿದ್ಧಮಲ್ಲಿಕಾರ್ಜುನ ಸ್ವಾಮಿ ಇಲ್ಲವೆ 'ಸೊಪ್ಪೆಯ ಸ್ವಾಮಿಗಳು' ಎಂದೂ ರೂಢಿಯಲ್ಲಿ ಜನರು ಅನ್ನುವುದುಂಟು. ಇದರಂತೆಯೇ ರಾಯಜೂಟ ದೇವರು 'ರಾಯಜೋಟಿ ಪಟ್ಟಾಧ್ಯಕ್ಷರು' ಎಂದೂ ಹೆಸರುಗಳಿವೆ. ಸೊಪ್ಪೆ ಸಿದ್ಧಮಲ್ಲಿಕಾರ್ಜುನ ಎಂಬ ಹೆಸರು ಇವರಿಗೆ ಏಕೆ ಬಂದಿತೆಂಬುದಕ್ಕೆ ಒಂದು ಆಖ್ಯಾಯಿಕೆಯಿದೆ. ಈ ದೇವಾಲಯದ ಮುಂದೆ ಒಂದು ಬಸವಣ್ಣನ ಗುಡಿಯಿದ್ದು ಅದರಲ್ಲಿ ಒಂದು ದೊಡ್ಡ ನೀರಿನ ದೋಣಿಯಿದೆ. ಈ ದೇವಾಲಯದ ವಿಷಯಕ್ಕೆ ಈ ಮಠದ ಗುರುಗಳಿಗೂ ವೈಷ್ಣವ ಬ್ರಾಹ್ಮಣ ಸ್ವಾಮಿಗಳಿಗೂ ವಾದ ನಡೆದು— 'ನೀವು ಈ ದೇವಸ್ಥಾನದ ನಿಜವಾದ ಗುರುಗಳಾಗಿದ್ದರೆ ಈ ಶಿಲಾಮೂರ್ತಿಯಾದ ಬಸವಣ್ಣನಿಗೆ ಸೊಪ್ಪೆ ಮತ್ತು ನೀರು ಕುಡಿಸಿದರೆ ನೀವೇ ಈ ದೇವಸ್ಥಾನಕ್ಕೆ ಬಾಧ್ಯರು" ಎಂದು ಬ್ರಾಹ್ಮಣ ಸ್ವಾಮಿಗಳು ಪಣವನ್ನು ಹಾಕಿದರಂತೆ. ಇದನ್ನು ಸಿದ್ಧಮಾಡಿಸಿದ ಗುರುಸ್ವಾಮಿಗಳು ತಮ್ಮ ಮಹಿಮಾ ಪ್ರಭಾವದಿಂದ ಆ ಬಸವನಿಗೆ ಜೀವ ಚೈತನ್ಯವಿತ್ತು ಸೊಪ್ಪೆ ನೀರುಗಳನ್ನುಣಿಸಿದರಂತೆ. ಅಂದಿನಿಂದ ಸ್ವಾಮಿಗಳಿಗೆ ಸೊಪ್ಪೆ ಸ್ವಾಮಿಗಳು ಎಂಬ ಅಭಿಧಾನವು ಬಂದಿತಂತೆ.

ಈ ಮಠದ ಶಾಖಾಮಠವು ವಿಜಾಪುರದಲ್ಲೊಂದಿರುತ್ತದೆ. ಅದಕ್ಕೆ 'ಸೊಪ್ಪಯ್ಯನ ಮಠ'ವೆಂಬ ಹೆಸರು ಇಂದಿಗೂ ಇರುತ್ತದೆ. ಅಲ್ಲಿದ್ದ ಕಾಗದ ಪತ್ರಗಳನ್ನು ಶೋಧನೆ ಮಾಡಿದಾಗ ಈಗಿನ ಆ ಮಠದ ಯಜಮಾನರು ಅನೇಕ ಕಾಗದ ಪತ್ರಗಳನ್ನು ನನಗೆ ತೋರಿಸಿದರು. ಈ

† ಶಿವಾನುಭವ ೧೯೩೨ ಅಗಷ್ಟ.

ಮಠದ ಹಿಂದಿನವರೊಬ್ಬರು ರಾಚವಟ್ಟಿ ಮಠದ ಪಟ್ಟಾಧ್ಯಕ್ಷರಾಗಿದ್ದರು ತೋರಿಬರುತ್ತದೆ. ಇವುಗಳಲ್ಲಿ ಪುಣೆ ಪೇಷ್ವೆ ಮಾಧವರಾವ ಬಲ್ಲಾಳನು ರಾಚವಟ್ಟಿ ಸ್ವಾಮಿಗಳಿಗೆ ಹಾಕಿಕೊಟ್ಟ ಮೂಲ ಸನ್ನದು ಇರುತ್ತದೆ. (ಅದು ಮರಾಠಿಯಲ್ಲಿದೆ. ಶಕೆ ೧೬೯೨) ಅಲ್ಲಿದ್ದ ಕೆಲವು ಪತ್ರಗಳ ವಕ್ಕಣಿಕೆಯ ಕ್ರಮವು ಹೀಗಿದೆ —

"ರಾಜಾಧಿ ರಾಜಮಾನ್ಯ ರಾಜಶ್ರೀ ಆದಿ ಸಾಂಗೊಲಿ ಮಠ ಮೊದಲಾದ ಸಮಸ್ತ ದೇಶದ ಮಠಕ್ಕೆ ಕರ್ತ್ರುಗಳಾದ ರಾಯಜೋಟಿ ದೇವರ ಚರಣಾರವಿಂದಕ್ಕೆ" "ಪರತರ ಪರಂಜ್ಯೋತಿ ಪಂಡಿತಾರಾಧ್ಯಸ್ಥಲ ಪಟ್ಟದ ಕಂಥೆ ಪರಮಮೂರ್ತಿ ಆದಿ ಸಾಂಗೋಲಿ ಮಠ ಮುಂತಾದ ಸಮಸ್ತ ದೇಶದ ಮಠಕ್ಕೆ ಕರ್ತ್ರುಗಳಾದ ರಾಯಜೋಟಿ ದೇವರ" "ವೇದ ವೇದಾಂತ ಸಿದ್ಧಾಂತ ಪುರಾಣಾಗಮೇತಿಹಾಸ ಶಾಸ್ತ್ರಪ್ರಸಿದ್ಧ ಶ್ರೀಮದ್ವೀರಶೈವ ಮತಸ್ಥಾಪನಾಚಾರ್ಯವರ್ಯ ಶ್ರೀಮನ್ನಿರಾಭಾರಿ ದೇಶಿಕವರೇಣ್ಯ ರಾಯಜೋಟಿ ಪಟ್ಟಾಧ್ಯಕ್ಷ ಸಪ್ಪಡಿ ಸಿದ್ಧಮಲ್ಲಿಕಾರ್ಜುನ ಸ್ವಾಮಿ ಸನ್ನಿಧಿಗೆ"

ರಾಚವಟ್ಟಿ ಸ್ವಾಮಿಗಳ ಶಿಖಾಮುದ್ರೆ (ಮೊಹರು) ಯ ವಿವರಃ — ತಾಮ್ರದಿಂದ ಮಾಡಿದ್ದು .....ಎಡಮಗ್ಗಲು "ಶ್ರೀ ರಾಯಜೋಟಿ ಶ್ರೀವೀರ ಸೂರ್ಯ ಸಿಂಹಾಸನಕ್ಕೆ ಸಪ್ಪಿಸಿದ್ಧಮಲ್ಲಿಕಾರ್ಜುನ ಸ್ವಾಮಿಯವರು" ಎಂದಿದೆ.

ಈ ಸೊಪ್ಪೆಯ ಮಠದಲ್ಲಿನ ಕೈಬರಹದ ಪತ್ರಗಳನ್ನು ನೋಡಲಾಗಿ ಕೆಲವು ಪತ್ರಗಳು ವಿಜಯನಗರದಲ್ಲಿದ್ದ ಒಂದು ಮಠದಿಂದ ಬಂದಂತೆ ತೋರುತ್ತದೆ. ಬರೆದವರ ವಕ್ಕಣಿಕೆಯು ಹೀಗಿದೆ. "ಶ್ರಿಮನ್ ಚತುರ್ದೀಕ್ಷು ಏವತ್ತಾರು ದೇಶ ನವಖಂಡ ಪೃಥ್ವಿಯೊಳೊಪ್ಪುವ ಶ್ರೀ ಜಂಬೂದ್ವೀಪ ಸ್ವಯಂಭು ಭೂಕೈಲಾಸ ಪಂಪಾಕ್ಷೇತ್ರ ಮಾತಂಗಮಾನ್ಯವಂತ ಋಷ್ಯಶೃಂಗ ಕಿಷ್ಕಿಂಧ ಹೇಮಕೂಟ ಮಣಿಖಚಿತ ಕನಕಸಿಂಹಾಸನಾರೂಢರಾದ ಶ್ರೀ ಸಿಂಹಾಸನ ಶಿಖಾಮುದ್ರೆಗೆ ಕಾರಣಕರ್ತರಾದ ಭೂಸನೂರು ಜರಮೂರ್ತಿ ಹುಚ್ಚಪ್ಪಯ್ಯನವರು" ಎಂದಿದೆ. ಶಕ ವರ್ಷ ತೋರಿಸಲ್ಪಟ್ಟಿಲ್ಲ. ಕೆಲವು ಪತ್ರಗಳು ವಿಜಾಪುರದ ಜೈವದವರಿಗೆ ಬರೆದಂತಿವೆ. ಅವುಗಳ ವಕ್ಕಣಿಕೆಯು ವಿಲಕ್ಷಣವಾಗಿದೆ. "... ಜೈವಮತ

ಸಜ್ಜನ ಸಿದ್ಧ ಶಿವಾಚಾರ ಸಂಪನ್ನ ಗುರುಲಿಂಗ ಜಂಗಮ ಪ್ರೇಮಿಗ ರಾದ .." ಇತ್ಯಾದಿ.

ಇಷ್ಟೆಲ್ಲ ವಿಶೇಷಣಗಳೂ ಸಹ ಶ್ರೀ ನಿಡುಮಾಮಿಡಿ ಮಠಕ್ಕೆ ಸಂಬಂಧಿಸಿದ ವಿಚಾರಗಳನ್ನು ಸಮರ್ಥಿಸುತ್ತವೆ. ರಾಯಜೋಟಿ ಮುತಾಧ್ಯಕ್ಷರಿಗೆ ಬರೆದ ಒಕ್ಕಣಿಕೆಗಳಲ್ಲಿ ಕಂಡುಬರುವ 'ರಾಜಾಧಿರಾಜಮಾನ್ಯ' 'ಪರತರ ಪರಂಜ್ಯೋತಿ ಪಂಡಿತಾರಾಧ್ಯ' 'ವೇದವೇದಾಂತ .. ಶ್ರೀಮದ್ವೀರಶೈವ ಮತಸ್ಥಾಪನಾಚಾರ್ಯ... ಪಟ್ಟಾಧ್ಯಕ್ಷ' ತಾಮ್ರದ ಮೊಹರಿನಲ್ಲಿರುವ 'ಶ್ರೀವೀರ ಸೂರ್ಯ ಸಿಂಹಾಸನ' 'ಮಣಿಖಚಿತ ಕನಕ ಸಿಂಹಾಸನಾರೂಢ' ಇವೆಲ್ಲವೂ ಸಹ 'ಶ್ರೀ ನಿಡುಮಾಮಿಡಿ ಮಠಕ್ಕೆ ಅನಾದಿಯಿಂದ ನಡೆದುಬಂದಿರುವ "ಶ್ರೀಮದ್ವೀರಶೈವ ಮಹಾಮತ ಸ್ಥಾಪನಾಚಾರ್ಯವರ್ಯ ಶ್ರೀ ೧೦೮ ಜಗದ್ಗುರು ಪಂಡಿತಾರಾಧ್ಯ ಪರಂಪರಾಗತ ಶ್ರೀ ಗಿರಿರಾಜ ಮಣಿಖಚಿತ ಕನಕ ಗೋಕರ್ಣ ಸೂರ್ಯಸಿಂಹಾಸನಾಸೀನ ಪಟ್ಟಾಧ್ಯಕ್ಷ ಶ್ರೀ ನಿಡುಮಾಮಿಡಿ ಸ್ವಾಮಿಗಳು" ಎಂಬ ವಕ್ಕಣಿಕೆಯಲ್ಲಿರುವ ಅಭಿಪ್ರಾಯದ ಅಂಶಗಳನ್ನು ಅಕ್ಷರಶಃ ಅನುಕರಿಸುತ್ತವೆ. ಅಲ್ಲದೆ 'ವೈವಮತ ಸಜ್ಜನ ಸಿದ್ಧ ಶಿವಾಚಾರ ..' ಎಂದು ಶಿಷ್ಯರಿಗೆ ಸಂಬೋಧಿಸಿರುವುದೂ ಯಥಾರ್ಥವಾದ ವಿಷಯವಾಗಿದೆ. ಏಕೆಂದರೆ ಶ್ರೀ ಚಂದ್ರಗುಂಡ ದೇಶಿಕೇಂದ್ರ ಸ್ವಾಮಿಗಳು ಕಾರ್ತವೀರ್ಯಾರ್ಜುನನ ವಂಶೀಯರಿಗೆ ಲಿಂಗಧಾರಣೆಯನ್ನು ಮಾಡಿ ಅವರಿಗೆ 'ಸಜ್ಜಶಿವಾಚಾರಸ್ಥ'ರೆಂದು ನಾಮಕರಣ ಮಾಡಿದ್ದಾರೆ. ಅದರಂತೆ ತದ್ವಂಶೀಯರಾದ "ಸಜ್ಜನ ಶಿವಾಚಾರ' ಜನಾಂಗದವರು ಈ ಪೀಠದ ಮುಖ್ಯ ಶಿಷ್ಯರಾಗಿ ನಡೆದುಕೊಳ್ಳುತ್ತಿದ್ದಾರೆ. ಆದ್ದರಿಂದಲೇ ಈ ಪೀಠದ ಶಾಖಾಮಠಗಳಿಗೂ ಅವರು ಶಿಷ್ಯರಾಗಿ ನಡೆದುಕೊಳ್ಳುತ್ತಲೂ ಇದ್ದಾರೆ. ಈ ಜನಾಂಗದವರು ದಕ್ಷಿಣ ಭಾರತದ ಎಲ್ಲ ಭಾಗಗಳಲ್ಲಿಯೂ ಇದ್ದಾರೆ. ಮತ್ತು ಚಂದ್ರಗುಂಡ ದೇಶಿಕೇಂದ್ರರು ಮೇಲೆ ಉಲ್ಲೇಖಿತರಾದ ಸಪ್ಪಡಿ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳಿಗೆ ಆ ಮಠದ ಅಧಿಕಾರವನ್ನು ಕೊಟ್ಟಿದ್ದರೆಂಬುದು ಈ ವಿವೇಚನೆಯಿಂದಲೂ ಮತ್ತು ತಾಮ್ರದ ಮೊಹರಿನಲ್ಲಿ "ಶ್ರೀ ವೀರ ಸೂರ್ಯ ಸಿಂಹಾಸನಕ್ಕೆ ಸಪ್ಪಿ ಸಿದ್ಧಮಲ್ಲಿಕಾರ್ಜುನ ಸ್ವಾಮಿಯವರು" ಎಂದು ಸಿಯಮ ಮಾಡಿದುದನ್ನೆ ಸೂಚಿಸುವುದರಿಂದಲೂ ಹಾಗೂ 'ಸೂರ್ಯ ಸಿಂಹಾಸನ' ಎಂಬ ಹೆಸರು ಪರ್ವತ ಸಿಂಹಾಸನಕ್ಕೆ ಮಾತ್ರ ವಾಡಿಕೆ

ಯಾಗಿಯೂ ಶಾಸ್ತ್ರಸಿದ್ಧವಾಗಿಯೂ ಇರುವುದರಿಂದ ಈ ಮಠವು ಶ್ರೀಶೈಲ ಪರ್ವತದ ಮೂಲ ಪೀಠವಾದ ಈ ನಿಡುಮಾವಿಡಿ ಮಠಕ್ಕೆ ಸೇರಿದ ಶಾಖಾ ಮಠವೆಂಬುದರಲ್ಲಿ ಸಂದೇಹ ಬರಲಾರದು. ಈ ಮಠವು ಹೇಗೆ ಶ್ರೀಶೈಲ ಮೂಲ ಪೀಠವೆಂಬುದರ ಬಗ್ಗೆ ಐತಿಹಾಸಿಕ ಪ್ರಮಾಣಗಳಿಂದ ಕ್ರಮವಾಗಿ ಬರೆಯಲಾಗುವುದು. ಮತ್ತು ಈ ಮಠದ ಶಾಖಾಮಠಗಳು ಹೈದರಾಬಾದು ಮುಂತಾದ ಪ್ರಾಂತ್ಯಗಳಲ್ಲಿ ಹೇರಳವಾಗಿರುತ್ತವೆ. ಇದರ ಬಗ್ಗೆ ಅನೇಕ ಆಧಾರಗಳು ಈ ಮಠದಲ್ಲಿವೆ. 'ಕೇಶಂಪ್ಯಾಟಿ, ನಿಡವಳ್ಳಿ, ಬಳಗಾನೂರು, ಗುಂಜವಹಳ್ಳಿ, ಬಿದರೆ, ಕೊಂಟ ಮುಂತಾದ ಪ್ರಸಿದ್ಧ ಮಠಗಳ ಮೂರ್ತಿಗಳಿಗೂ ಈ ಮಠಕ್ಕೂ ಅನೇಕ ವ್ಯವಹಾರಗಳು ಇಂದಿಗೂ ನಡೆಯುತ್ತಿವೆ. ಅವುಗಳ ವಿವೇಚನೆಯನ್ನು ಮುಂದು ವರಿಸುವುದಾಗುತ್ತದೆ. (ಕ್ರಮಶಃ)

ಶಿವದೀಕ್ಷೆಯೂ ಅಯ್ಯಾಚಾರವೂ.

(ಬರೆದವರು -- ಬಸವಪ್ಪ ಚೆನ್ನಪ್ಪ ಪಟ್ಟೇದ ವಂಟಮುರಿ.)

ಕಂದಪದ್ಯ.

ಶಿವದೀಕ್ಷಾ ಸಂಸ್ಕಾರಂ ।
ಭವಪರಿಹಾರಕ್ಕೆ ವೀರಶೈವರಿಗೆಲ್ಲ–॥
ಗವಶ್ಯಮಿಹುದದನುಳಿಯ- ।
ಲ್ಪವಕಾಶಮುದಾವುದುದ್ಧರಣ ಕುಳಿದತ್ತೈ ॥೧॥

ಅಯ್ಯಾಚಾರಂ ತನ್ನೊಳ್ ।
ಪೈಯ್ಯುಕ್ತಿಕ ದೀಕ್ಷೆಯೊಡನೆ ಸಾಮಾಜಿಕವ ॥
ರಯ್ಯ ಸುಧಾರಣೆ ಹೊಣೆಯಿಂ ।
ದೊಯ್ಯನೆ ಬೆರೆದಯ್ಯನವರ ಶಿರದೊಳ್ ಮೆರೆಗುಂ ॥೨॥

ಶಿವದೀಕ್ಷೆಯೆ ತಾನಖಿಲರ ।
ಸವಬಾಧ್ಯತೆಯಪ್ಪ ಮೊದಲನೆಯ ಸಂಸ್ಕಾರಂ ॥
ಸವನಿಪುದು ಗುರುತೆ ಜೋಳಿಗೆ ।
ಶಿವದೀಕ್ಷೆಗದೆಂತು ಜನ್ಮಸಿದ್ಧತೆ ಯುಕ್ತುಂ ॥೩॥

ನರಜನ್ಮೋದ್ಧಾರಕೆ ಗಡ ।
ತೊರೆಯುವ ಸಾಧನಮದಾವದಾಗಿರ್ಪುದು ಮೇಣ್ ॥
ಪರರಾವ ಬಾಧ್ಯತೆಯನಪ ।
ಹರಿಸದು ಕಾಣದುವೆ ಜನ್ಮಸಿದ್ಧಂ ಸೊತ್ತು ॥೪॥

ಗುರುತನ, ಭಿಕ್ಷಾಟನಗಳ ।
ನರವೇತಕೆ ಜೇಕು ಸ್ವಂತದುದ್ಧಾರಕ್ಕೆ ॥
ಪರರುನ್ನತಿಗೆಯ್ವ ಮಹಾ- ।
ತ್ಮರಿಗವು ಸಾಧನಮೆನುತ್ತಿ ಗುರುಕರುಣಿಸಿಹಂ ॥೫॥

ಗಮ್ಮನೆಗೊಂಡುರಿ ಜನರಿಂ ।
ಪೊದ್ದುವುದುರುಮನ್ನಣೆಯನು ಭಿಕ್ಷಾಶನಮುಂ ॥

ಪೆಪ್ಪದತಿ ಸುಖದಿಂ ಜೀವಿಸಿ।
ನಿದ್ದಿಪುದಿವು ಜನ್ಮಸಿದ್ಧಮಪ್ಪುದಶಕ್ಯಂ ॥೬॥

ಗಪ್ಪುಗೆಯಂ ಭೂಷಿಸಿ ಭ-।
ಕ್ತೋದ್ಧಾರಂಗೆಯ್ವುದಕಟ ಸಾಧಾರಣಮೇ? ॥
ಪೊದ್ದದೆ ಸಚ್ಛೀಲಜ್ಞಾ-।
ನೋದ್ದೀಪನವಂತು ತಾನೆ ಪೂಜ್ಯತೆ ಲಭಿಕುಂ? ॥೭॥

ಭಕ್ತರನೆಂತೈ ಮಾಳ್ಪುದು।
ಮುಕ್ತರ, ಪಾದೋದಕ ಪ್ರಸಾದಗಳಿರೆದು ॥
ಯುಕ್ತರ್ ಗುರುಪದಕೈಸಲೆ।
ಸಕ್ತರ್ ಲಿಂಗಾನುಭವದೊಳಾಗದಿರಲ್ ತಾವ್ ॥೮॥

ಸಿರಿವಂತನನಾರಿಸಿ ತಂ।
ದುರೆ ಭೂಷಿಸೆ ವಿಭವದಿಂದವನುದಿನಮಿರ್ಪಂ ॥
ಸಿರಿಹೀನನ ಸಿಂಗರಿಸಲ್।
ಸಿರಿತನದಿಂ ಕೊನೆಯ ವರೆಗೆ ಬಾಳ್ವಿನದೆಂತೈ ॥೯॥

ವಿದ್ಯಾವಂತನ ಶೋಧಿಸಿ।
ಯಧ್ಯಕ್ಷನನೆಸಗೆ ಸಭೆಗೆ ಮುಂಗಲಮಕ್ಕುಂ ॥
ವಿದ್ಯಾಹೀನನಂಗೀಯಲ್।
ಬುದ್ಧ್ಯಾಸಂಕಟಕೆ ಕರೆಯನಿತ್ತಂತಲ್ತೇ? ॥೧೦॥

ಅದರಿಂದಯ್ಯಾಚಾರಕೆ।
ಸದಮಲ ವಟುಗಳನೆ ಶೋಧಿಸೀಕ್ಷೆಸಿಯೊಲವಂ ॥
ಮುದದಿಂ ಸಂಸ್ಕಾರವನವ-।
ರ್ಗೊದವಿಪುದೆ ಸುಯೋಗ್ಯಮುಭಯ ಹಿತಕರಮಕ್ಕುಂ ॥೧೧॥

ತಕ್ಕರಿಗಯ್ಯಾಚಾರಂ।
ಮಿಕ್ಕರಿಗಲ್ಲವರ್ಗೆ ಬರಿಯ ಶಿವದೀಕ್ಷೆಯೆ ತಾಂ ॥
ತಕ್ಕುದೆನೆಲ್ಕಯ್ಯನವರಿ।
ಗುಕ್ಕುವ ಸಿಟ್ಟೀಕೆ ಬರ್ಪುದಿದು ಸೋಜಿಗಮೈ ॥೧೨॥

ನಿಮಗೇನಿದರಿಂ ಸಂಕಟ।
ಸಮನಿಪುದುರು ಪಾರಮಾರ್ಥಿಕಕೆ ತಡೆಯಹುದೇ? ॥

ಸಮಾಜದಿಂ ಸುಮ್ಮನೆ ಬಹ।
ನಮನಂ ಭಿಕ್ಷಾಶನಂಗಗಳಿಗುಂ! ಮತ್ತೇಂ? ॥೧೩॥

ಇತರರ್ ಕಾಯಕದಿಂದಂ।
ಸತತಂ ಸುಖ ಜೀವನಂಬಡೆವುದಂ ಕಂಡುಂ ॥
ಮತಿಯುತರಹ ನೀವೇಕಿದ।
ಕತಿ ಚಿಂತನಗೊಳ್ವುದಕಟ ನ್ಯಾಯಿಗಳಕ್ಕುಂ ॥೧೪॥

ಜೋಳಿಗೆಯುಪಯೋಗಂ ಮನೆ।
ಹೋಳಿಗೆ ತುಪ್ಪದಲಿ ಬೀಳ್ವ ಮಟ್ಟಿಗೆಯಾಗಲ್ ॥
ಗೋಳಿಗೆ ಕಾರಣಮಕ್ಕುಂ।
ಬಾಳುವೆಯೇ ವ್ಯರ್ಥವಾಗಿ ಬರ್ಕುಂ ನಿರಯಂ ॥೧೫॥

ಜನಪದದುದ್ಧಾರಕ್ಕುಂ।
ಧನವಾರ್ಜಿಸೆ ತೆತ್ತನಿರದೆ ನಿಮ್ಮಯ ಕರದೊಳ್ ॥
ಗುರುರಾಯಂ ಜೋಳಿಗೆಯಂ।
ನೆರೆ ನೆನೆದೇಳ್ಪರವನಾಂತು ವರ್ತಿಪುದದರೊಲ್ ॥೧೬॥

ಸಾಮಾನ್ಯ ವೀರಶೈವರು।
ಸೋಮುಂ ಕರುಣಿಸಿದ ಬುದ್ಧಿ ತನುಕರಣಗಳಿಂ ॥
ನೇಮದಿ ದುಡಿದು ಧನಾರ್ಜಿಸಿ।
ಪ್ರೇಮದಿನುಂಡುಟ್ಟು ದಾನಧರ್ಮವ ನೆಗಳ್ವರ್ ॥೧೭॥

ಇದರಿಂದಾವುದುಮಿಲ್ಲಂ।
ಸದಮಲ ವೀರತ್ವವಾದೊಡಂ ಲೌಕಿಕದ ॥
ಹದುಳದ ಮಾರ್ಗಂ ನೆಲಸಿ-।
ರ್ಪುದು, ತಮ್ಮನಿತಕ್ಕೆ ತಾವೆ ರಕ್ಷಣವಾಂಪರ್ ॥೧೮॥

ಪರಿಶೀಲಿಪುದಿನ್ನಯ್ಯನ।
ವರ ಶಿಷ್ಟಾಚಾರಮುಂ ಸಮಾಜ ಗುರುಗಳ ॥
ಸರಿಸರಿ ತಿರಿಪರ್ ಭಿಕ್ಷೆಗೆ।
ಪರಿಪರಿಯಿಂ ಹಿಂಡಿ ಹಿಪ್ಪಿ ಮಾಳ್ಪರು ಜನಮಂ ॥೧೯॥

ನೆರವೇರಿಸದೆ ಸಮಾಜದೊ।
ಳುರುತರದುನ್ನತಿಯನಾವುದಂ ತಿಲಮಾತ್ರಂ ॥

ನೆರೆ ಕಾಂಕ್ಷಿಪರು ಸುಖಾಜ್ಯತೆ।
ಪರಿತಪಿಸದೆ ಭೋಜನಾದಿ ಸುಖಗಳನೆಲ್ಲಂ ॥೨೦॥

ಅಳಿಮನದಿಂ ತಾವಾಗಿಯೆ।
ಕಳಕೊಂಡರ್ ಮೇಲ್ಮೈಯನ್ನು ಸಾಮಾನ್ಯರಿಗಿಂ- ॥
ತಿಳಿದರಘೋಗತಿಗಕ್ಕುಟ।
ಸಲೆ ಕೆಟ್ಟರ್ ಹೆಂದೆ ಜೀವನದ ಮುಬ್ಬಿನೊಳು ॥೨೧॥

ಇಲ್ಲಿನೆ ಬೆರಳಂ ತೋರಿಸ।
ಲೆಲ್ಲಿಯೊ ವಾಸಿಸ್ಪರೊರ್ವರೊರ್ವರ್ ಮಹಿಮರ್ ॥
ಪಲ್ಲಿಪ ಕಳ್ತಲೆ ಪರಿವುದೆ?।
ಅಲ್ಲೊಂದಿಲ್ಲೊಂದು ದೀಪಮಿನುಗಲು ಫಲಮೇಂ? ॥೨೨॥

ಕೃತಯುಗದೊಳ್ ನಾಲ್ಕುಡಿಯಿಂ।
ದ್ವಿತೀಯದೊಳ್ ತ್ರಿಪದದಿಂದಮೆಸೆಗುಂ ಧರ್ಮಂ ॥
ತೃತೀಯದೊಳ್ ದ್ವಿಚರಣದಿಂ।
ಚತುರ್ಥಕಲಿಯುಗದೊಳೀಗಳೊಂದೆಯೆ ಕಾಲಿಂ ॥೨೩॥

ಕೃತದೊಳ್ ದಾನಿಗಳಿಲ್ಲರ್।
ದ್ವಿತೀಯದೊಳ್ ಕೊಂಬರಕಟ ಮನೆಗೆಯ್ದೀಯಲ್ ॥
ತೃತೀಯದೊಳ್ ಕುಡುವರ್ ಬರೆ।
ಚತುರ್ಥದೊಳೀಯರೀಗಳೆಯ್ದಿರೆ ಮನೆಗಂ ॥೨೪॥

ಹತ್ತಿಗೆ ಬಂದಿಹುದೀಗಳ್।
ಪ್ಯತ್ತಿಗೆ ನೀಡುವುದು, ಸಾರ್ವಜನಿಕಕ್ಕಿರದೆ ॥
ತೆತ್ತುವ ಪರಿಪಾಠಂ ಬೀ-।
ಳುತ್ತಿಹುದೀ ಕಲಿತಕಾಲದೊಳ್ ಸೋಜಿಗಮೇ? ॥೨೫॥

ಬಗೆವಂದಿದನೆಲ್ಲವನ-।
ಯ್ಯಗಳೀಗೇಳ್ಪರವನಾಂತು ತಮ್ಮಯ ಕರ್ತ- ॥
ಪ್ಯಗಳಂತುರಿಪದಿ ಕೆಯ್ಮೊಳೆ।
ಪಿಗೆ ಹಿತಕರಮಕ್ಕು ಭಕ್ತತತಿಗಂ ತಮಗಂ ॥೨೬॥

ಹರಿಹರನ ಕಾವ್ಯಗಾನವಾದ ಆನಾಯನಾರನ ಮುಂತ್ರಗಾನ!

(ಲೇಖಕರು:— ಶ್ರೀ ಚಂದ್ರಶೇಖರದೇವರು ಅಡ್ಮಿನ್ಸ್. ಮುಕ್ಕಾಮು
ಶ್ರೀ ಸರ್ವಭೂಷಣಮಠ ಬೆಂಗಳೂರು ನಗರ.)

ದ್ರಾವಿಡ ದೇಶದಲ್ಲಿ ಪಲ್ಲವ, ಕೇರಳ (ಚೇರ), ಚೋಳ, ಪಾಂಡ್ಯ ಎಂಬೀ ರಾಜ್ಯಗಳು ಪ್ರಸಿದ್ಧವಾದವುಗಳು. ಅವುಗಳಲ್ಲಿ ಚೋಳ ರಾಜ್ಯವೂ ಒಂದು. ಅಲ್ಲಿಯ ಅರಸರು ಶೈವ ಮತಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟವರು. ಇದಕ್ಕೆ ಆ ದೇಶದಲ್ಲಿರುವ ಶೈವ ದೇವಾಲಯಗಳೂ ದೇಸೆವಡೆದ ಟ್ಟಿ ಮಂದಿ ಪುರಾತನರೂ ಸಾಕ್ಷಿ. ಆದ್ದರಿಂದ ಆ ನಾಡು ಆಗ ಸಕಲ ಸಂಪದದ ಬೀಡಾಗಿತ್ತು. ಸೊಗಸಿನ ನಾಡಾಗಿತ್ತು.

ಅಂತಹ ಆ ಚೋಳ ನಾಡಿನಲ್ಲಿ ವನತರುಗಳಿಂದ ಹೂದೋಟಗಳಿಂದ ಶೋಭಿಸುವದೊಂದು ಮುಂಗಳಪುರ. ಆ ಪುರದೊಳಗಿರುವ ನೋರ್ವ ಭಕ್ತ. ಆತನೇ ಆನಾಯನಾರ. ಆತನಿರವು ಅತಿ ವಿಚಿತ್ರ. ಆತನು ಯಾವಾಗಲೂ ಉಚ್ಚರಿಸುವದೊಂದೇ ಮುಂತ್ರ. ಆತನ ಜನನವೂ ಅದರಿಂದಲೇ. ಆತನ ಪ್ರತಿಯೊಂದು ವ್ಯವಹಾರವೂ ಪಂಚಾಕ್ಷರಿಯಿಂದಲೆ.

ಇಂತು ಪಂಚಾಕ್ಷರಿಯೆ ಬಾಯ್ತುಣ್ಣೆ ಎನೆ ಬೆಳೆದು।
ಸಂತತ ಪಂಚಾಕ್ಷರಿಯೆ ನಾಲಿಗೆಗೆ ಸವಿದು ॥
ಉದಯ ಸಮಯದೊಳೆದ್ದು ದೇವಾಲಯಕೆ ಬಂದು।
ಮದನಾರಿ ಶಂಜೆನುತ ಕೆಯ್ಮುಗಿವುತುಂ ನಿಂದು ॥

ಹೀಗೆ ಮುಂತ್ರವನುಚ್ಚರಿಸುತ್ತ ದೇವರೆದುರು ನಿಂದಿರಲು, ಆತನ ಮುಂದಿನ ಜೀವನೋಪಾಯಕ್ಕೆ ಊರ ಗೋಕುಲವನ್ನು ಕಾವುದೇ ಉಚಿತವೆಂಬ ಒಂದು ಉಪಾಯವು ತೋಚಿದೆ. ಅದನ್ನೇ ಆತನೂ ನಿರ್ಧರಿಸಿದ್ದಾನೆ. ಆತನ ಆ ನಿಶ್ಚಯವನ್ನು ಋಷಿಗಳೆಲ್ಲರೂ ತಿಳಿದು— ಕಾಡಿನಲ್ಲಿದ್ದು ಇಷ್ಟೊಂದು ಕಷ್ಟ ಪಡುವದಕ್ಕಿಂತಲೂ ಕೆಲವು ದಿನ ಗೋವುಗಳಿಗಾಗಿ ಆನಾಯನಾರನ ಅನುನಯದ ಪಾಲನೆಗೆ ಪಾತ್ರರಾ

ಗುವದು ಒಳಿತೆಂದು ಯೋಚಿಸಿ ಆ ಊರ ಗೋವುಗಳಿಗಾಗಿ ಹುಟ್ಟಿದ
ರಂತೆ. ಅಂತಹ

ಊರದನವೆಲ್ಲವಂ ತಾನೊಂದುಗೂಡುತುಂ।
ದೂರಕ್ಕೆ ಪೊರಮಟ್ಟುಕೊಂಡು ಬಂದಾಡುತುಂ।
ಪರಿದು ಮೇಗೆಂದು ಹುಲ್ಲುಳ್ಳ ಹೊಲದೊಳ್ ಹೊಡೆದು।
ಪರಿಪರಿಯ ಹುಲ್ಲುದಂಡೆಗಳ ನಲವಿಂ ತಳೆದು॥

ಇನಿತು ಕರುಣೆಯಿಂದ ಗೋಕುಲವನ್ನು ಕಾಯಲಾರಂಭಿಸಿದ್ದಾನೆ. ಹೀಗೆ ಕಾಯುವದು ಶಿವಭಕ್ತರಿಗೆ ಉಚಿತವೆ? ಎಂದು ನೀವು ಕೇಳಬಹುದು. ಅದು ಉಚಿತವೆ. ಗೋವುಗಳೆಂದರೆ ಸಾಮಾನ್ಯವಲ್ಲ. ಅವು ಭಾರತೀಯರ ಪರಮದೈವವು. ಭಾರತಾಂಬೆಯ ಚೈತನ್ಯ ಸ್ವರೂಪು. ಪುಣ್ಯದ ಮೂರ್ತಿ. ಅಂತೆಯೇ ದಿಲೀಪನಂತಹ ರಾಜನು, ಕೃಷ್ಣನಂತಹ ದೇವರು ಅವನ್ನು ಕಾಯ್ದರು. ಸರ್ವಜ್ಞನಂತಹ ಗಂಡು ಗಲಿಯೂ ಸಹ—

"ತುರು ಕರಿಲ್ಲದ ಊರು ನರಕಭಾಜನಮಕ್ಕು।
ತುರು ಕರೂ ಉಂಟಾದರುಣಲುಂಟು ಲೋಕಕ್ಕೆ।
ತುರು ಕರೂ ದೈವ ಸರ್ವಜ್ಞ॥"

ಎಂದು ಭಾವುಕರಿಗೂ ವಿಜ್ಞಾನವಾದಿಗಳಿಗೂ ಒಪ್ಪುವಂತೆ ಒಂದೇ ಪದ್ಯದಲ್ಲಿ ಒಳ್ಳೇ ಹೃದಯಂಗಮವಾಗಿ ಹೇಳಿದ್ದಾನೆ.। ಈಗಿನ ವಿಜ್ಞಾನವಾದದಂತೆ ಗೋವಿನ ಹಾಲಿಗೆ ಸರಿಬರುವ ಹಾಲು ಬೇರೊಂದಿಲ್ಲ. ಆ ಹಾಲಿನಿಂದ ಆಗುವ ಪ್ರಯೋಜನಗಳಿಗೆ ಮಿತಿಯಿಲ್ಲ. ಎಲ್ಲರೂ ಆಕಳ ಹಾಲನ್ನೇ ಕುಡಿಯಬೇಕೆಂದು ಬೋಧಿಸುತ್ತಿರುವದಾದರೂ ಇದೇ ದೃಷ್ಟಿಯಿಂದ. ಈ ಎಲ್ಲವಿಚಾರವನ್ನು ತಿಳದೇ ಮೊದಲಿನವರು ಆಕಳ ಹಾಲಿನ ನೇಮವನ್ನಿಟ್ಟುಕೊಳ್ಳುತ್ತಿದ್ದರು. ಆಕಳು ಪೂಜ್ಯವೆಂದು ಭಾವಿಸುತ್ತಿದ್ದರು. ಆಕಳಗಳಿಂದಾಗುವ ಪ್ರಯೋಜನಗಳನ್ನು ಮೈಲಾರ ಬಸಪ್ಪನವರು ತಮ್ಮ ಶಿವಾನುಭವ ದರ್ಪಣದಲ್ಲಿ—

ಗೋವಿಂದನಾದಿ ಗೋವಿಂದ ನಮ್ಮ। ಗೋವಿಂದನಾದಪಾವನ
ಪಾಂಡುರಂಗ॥
ಶ್ರೀ ವಿಭೂತಿಯು ಪಂಚಗೋವಿಂದ। ವೀರಶೈವಾಗಮೋಕ್ತವು
ಗೋವಿಂದ॥
ಜೀವ ಪಂಚಾಮೃತಗೋವಿಂದ। ಜಗಜ್ಜೀವ ಸಂತೃಪ್ತಿ ಗೋವಿಂದ॥

ಹವ್ಯಕವ್ಯಗಳಿಲ್ಲ ಗೋವಿಂದ। ಪಡುಗವ್ಯಸವರ್ಮಾರ್ಜನೆ ಗೋವಿಂದ॥
ದ್ರವ್ಯಪಂಗಳಿಕೆಯು ಗೋವಿಂದ। ಮಹದಿವ್ಯಪ್ರಕಾಶವು ಗೋವಿಂದ॥೨॥
ಗೋತ್ರ ಹೋತ್ರವು ನಮ್ಮ ಗೋವಿಂದ। ಪುಣ್ಯಕ್ಷೇತ್ರಯಾತ್ರೆಗಳೆಲ್ಲ
ಗೋವಿಂದ॥
ಧಾತ್ರಿ ಪಾವನ ಗಾತ್ರ ಗೋವಿಂದ। ಸುಪವಿತ್ರಚರಿತ್ರವು ಗೋವಿಂದ॥೩॥
ಅಭವ ದಾಹನವು ತಾ ಗೋವಿಂದ। ಬಹು ಶುಭಮಂಗಲೆಯು ಜಾತ
ಗೋವಿಂದ।
ವಿಬುಧಗಮನಶ್ವೇತ ಗೋವಿಂದ। ಕೃಷ್ಣನುಭಯಾಂಬಕ ವ್ರತ
ಗೋವಿಂದ॥೪॥
ಮೂರು ತಾಪವಿನಾಶ ಗೋವಿಂದ। ಸುವಿಚಾರಮೋಕ್ಷ ವಿಲಾಸ
ಗೋವಿಂದ।
ಸಾರಸುಖವಿಶೇಷಗೋವಿಂದ। ಚನ್ನವೀರಮುದ್ಗುರುವಾಸ
ಗೋವಿಂದ॥೫॥

ಎಂದು ಸಾರಭೂತವಾಗಿ ಸಂಗ್ರಹರೂಪವಾಗಿ ಹಾಡಿದ್ದಾರೆ. ಇವೆಲ್ಲ ಕಾರಣಗಳಿಂದ ತುರುವಿಂಡನ್ನು ರಕ್ಷಣೆ ಮಾಡುವುದು ವಿಹಿತವಾದುದು. ಅದರಂತೆ ಆನಾಯನಾರನು ಹಸುಗಳನ್ನು ಹಚ್ಚಗೆ ಹಸುರಾದ ಹುಲ್ಲುಳ್ಳ ಪ್ರದೇಶದಲ್ಲಿ ಮೇಯಲು ಬಿಟ್ಟು ತಾನು ತಂದ ಕಟ್ಟೋಗರವನುಂಡು † ಕಾವೇರಿಯಲ್ಲಿ ಕೈತೊಳೆದು ಬಂದೊಂದು ತಪ್ಪಿಲೆಯಲ್ಲುಳ್ಳ ಹೆಮ್ಮಾರದ ಬುಡದಲ್ಲಿ ತಪ್ಪಗಾಲಿಕ್ಕಿ ತ್ರಿಭಂಗಿಯಲ್ಲಿ ನಿಂದು, ಅಂದವಾದೊಂದು ಪೊಸ ಕೊಳಲ ತಂದು ಅದರಲ್ಲಿ ಪಂಚಾಕ್ಷರಿಯನ್ನೆ ಪಂಚಸ್ವರಗಳನ್ನು ಮಾಡಿ ಪಂಚಪತ್ರನ ಕಿವಿಗೆ ಸವಿಯಾಗುವಂತೆ ಬಾಜಿಸಿದ ಮಂತ್ರಗಾನದ ಮಾಧುರ್ಯವನ್ನ ಹರಿಹರದೇವನ ಕಾವ್ಯ ಗಾನದಲ್ಲಿ ಕೇಳೋಣ ಬನ್ನಿ.

ಅಧರಸೊಳ್ ತಂವಿಳುಪಿವಂ ಕೊಳಲನೊಪ್ಪದಿಂ।
ಮಧುರಾಕ್ಷರಂಗಳಂ ಸವಿಪ ಸಮರಾಗದಿಂ॥
ಭಕ್ತಿಯಿಂ ಮನಿದೂದುತಲೆ ಸುಗತಿಗಳುಮಾಗೆ।
ಯುಕ್ತಿಯಿಂ ಭರತಶಾಸ್ತ್ರಕ್ಕೆ ದಿಕ್ಕುಗಳಾಗೆ॥

† ಕಾವೇರಿ ತೀರದಲ್ಲಿ ಒಂದು ದೇವಾಲಯವಿತ್ತೆಂದೂ ಅಲ್ಲಿಗೆ ಬಂದು ಆ ಶಿವಲಿಂಗಕ್ಕೆ ಪೂಜೆಯು ಮಾಡಿ ತಂದ ಬುತ್ತಿಯ ನೈವೇದ್ಯವ ಮಾಡಿ ಅಮೇಲೆ ತಾನುಣ್ಣುತ್ತಿದ್ದನೆಂದೂ ಕವಿಚಕ್ರವರ್ತಿಯಾದ ಸುಗಂಧಕವಿಯು ವರ್ಣಿಸುತ್ತಾನೆ.

ಕೊಳಲನ್ನು ಕೆಳದುಟಿಯಲ್ಲಿಳುವಿ ಪಂಚಾಕ್ಷರಿಯ ಮಧುರಾಕ್ಷರಗಳ ಮಾಧುರ್ಯವನ್ನು ಸವಿವ ಇಚ್ಛೆಯಿಂದ ಭಕ್ತಿ ಉತ್ಕಟವಾಗಿ ಏಪಕ್ಕರಗಳನ್ನೆ ಏಳು ಸ್ವರಗಳನ್ನು ಮಾಡಿ ಉತ್ಸಾಹದಿಂದ ಊಮುತ್ತಿರಲು ಸಂಗೀತ ಶಾಸ್ತ್ರದಲ್ಲಿ ಹೇಳುವ ಸುಗತಿ, ಸರಸಗತಿ, ಸಾಂದ್ರಗತಿಗಳೂ ನುಣ್ಣಗತಿ,ನವೀನಗತಿಗಳೂ,ಮಧುರಗತಿ. ಮನೋಹರಗತಿಗಳೂ, ಚಿಣ್ಣಗತಿ, ಗಂಭೀರಗತಿಗಳೂ ಉಂಟಾಗಿವೆ. ಸಪ್ತಸ್ವರದಿಂದ ಇವನ್ನೆಲ್ಲ ಹುಟ್ಟಿಸುವ ಭರತ ಶಾಸ್ತ್ರಕ್ಕೆ ಅಲ್ಲಿ ನಿಲ್ಲಲು ನಾಚಿಕೆಯಂತೆ.

ಇಲ್ಲಿ ಭರತ ಶಾಸ್ತ್ರದ ವಿಚಾರವನ್ನು ಕೊಂಚ ಮಾಡುವದು ಸಯುಕ್ತಿಕವಾಗಿದೆ. ಭರತಶಾಸ್ತ್ರ-ಭರತಮುನಿ, ಭರತಖಂಡ-ಭರತರಾಜ ಎಂಬೀ ಪದಗಳು ನಮಗೆ ಸಿಕ್ಕುತ್ತವೆ. ಇವುಗಳಲ್ಲಿ ಭರತಮುನಿಯ ಹೆಸರೇ ಭರತಶಾಸ್ತ್ರಕ್ಕೆ ಬಂದಿತೆಂತಲೂ ಭರತರಾಜನ ಹೆಸರೇ ಭರತಖಂಡಕ್ಕೆ ಬಂದಿತೆಂತಲೂ ಹಲವರು ಹೇಳುವರು. ಇದು ಅಷ್ಟು ಸಮುಂಜಸವಾಗದು. ಏಕಂದರೆ—ಹರದತ್ತ ಶಿವಾಚಾರ್ಯರು—"ತಾಪ್ಪಮಾಮನಂತಿ ಭರತಂ ನಟನಾಭಿಯೋಗಾತ್" ಎಂಬ ಶ್ಲೋಕದಲ್ಲಿ ನಾಟ್ಯನಿಮಿತ್ತದಿಂದ ಶಿವನಿಗೆ ಭರತನೆಂದು ಮೊದಲೆ ಹೆಸರು ಬಂದಿದೆ ಎಂದು ಹೇಳುತ್ತಾರೆ. ಶಿವನು ನಾಟ್ಯವನ್ನು ಮಾಡಿರುವನೆಂದು ಹೇಳಲು ಹೇರಳ ಪ್ರಮಾಣಗಳುಂಟು. ಉದಾಹರಣೆಗಾಗಿ— ಕಾಳಿದಾಸನು ಮಾಲವಿಕಾಗ್ನಿಮಿತ್ರನಾಟಕದಲ್ಲಿ—''....ರುದ್ರೇಣೇದವುಮಾಕೃತವ್ಯತಿಕರೇ ಸ್ವಾಂಗೇ ವಿಭಕ್ತಂ ದ್ವಿಧಾ...." ಅಂದರೆ ಅರ್ಧನಾರೀಶ್ವರನಾದ ಶಿವನು ಸ್ವಾಂಗದಲ್ಲಿ ನಾಟ್ಯವನ್ನು ಲಾಸ್ಯ-ತಾಂಡವವೆಂಬದಾಗಿ ಎರಡು ವಿಧ ಮಾಡಿದನೆಂದು ಹೇಳಿಕೊಂಡಿರುವನು. ಮತ್ತು ಸಂಗೀತ ವಿದ್ಯಾವಿನೋದದಲ್ಲಿ"..... ವಿಭುರಾದಿ ನಟಃ ಸುರಾಣಾಂ" ಅಂದರೆ ದೇವತೆಗಳಿಗೆಲ್ಲ ಶಿವನು ಆದಿನಟನೆಂದೆ ಸಂಬೋಧಿಸುತ್ತಾನೆ. ಇದೂ ಅಲ್ಲದೆ ನಂದಿಕೇಶ್ವರ ಶಿವಾಚಾರ್ಯರು ತಮ್ಮ ಕಾಶಿಕಾರಂಭದಲ್ಲಿ—"ನೃತ್ತಾವಸಾನೇ ನಟರಾಜರಾಜೋನನಾದಢಕ್ಕಾಂ ನವಪಂಚವಾರಂ" ಎಂದು ವರ್ಣಿಸಿದ್ದಾನೆ. ಅಮರಸಿಂಹನು 'ಮಹಾನಟ' ನೆಂದು ಕರೆದಿದ್ದಾನೆ. ಆದ್ದರಿಂದ ಭರತನು (ಶಿವನು) ನಾಟ್ಯ ಮಾಡಿದ ಭೂಮಿಗೆ ಭರತಖಂಡವೆಂತಲೂ ಆದಿನಟ ಮಹಾನಟ ಶಿವನಾಗಿರುವದರಿಂದ ನಾಟ್ಯಶಾಸ್ತ್ರಕ್ಕೆ ಭರತಶಾಸ್ತ್ರವೆಂತಲೂ ಬಂದಿತೆಂದು ಹೇಳಿದರೆ ಹೆಚ್ಚು ಸಮುಂಜಸವಾಗುವದು.

ಭಾಗು ಶಿವನ ಹೆಸರುಗಳಾದ ಶಿವ, ಶಂಕರ, ಚಂದ್ರಶೇಖರ, ನೀಲಕಂಠ ಎಂಬ ಹೆಸರುಗಳನ್ನೇ ಜನರಿಗಿಡುವಂತೆ ಭರತರಾಜನಿಗೂ ಭರತಮುನಿಗೂ ಇಟ್ಟರಲಿಕ್ಕೆ ಸಾಕು.

ಹೀಗೆ ಭರತಶಾಸ್ತ್ರಕ್ಕೆ ಆವಿಕರ್ತೃವಾದ ಶಿವನೇ ಆನಾಯನಾರನ ಗಾನಕ್ಕೆ ಮನ ಸೋತಿರುವಾಗ ಭರತಶಾಸ್ತ್ರದ ಅವಸ್ಥೆಯನ್ನೇನು ಹೇಳಬೇಕು? ಈ ತೆರನಾಗಿ ಊದಲಾರಂಭಿಸಿದ ಆತನ ಕೊಳಲಗಾನದಲ್ಲಿ ಯಾವ ಶ್ರುತಿಲಯಕ್ಕೆ ಕೊರತೆಯಿದ್ದಿಲ್ಲ. ಯಾವ ತಾಳಮೇಳಕ್ಕೆ ಕಡಿಮೆಯಿದ್ದಿಲ್ಲ. ಯಾವ ಅಣಕ ಗಮಕಗಳಿಗೆ ಹಿಂಜರಿಯುತ್ತಿರಲಿಲ್ಲ. ಯಾವ ನಯ ಸೊಂಪು ಇಂಪುಗಳಿಗೆ ಹೊರಗಾಗಿರಲಿಲ್ಲ. ಹೆಚ್ಚೇನು? ಆತನ ಗಾನದಲ್ಲಿ ಇವೆಲ್ಲವೂ ಒಡಮೂಡುತ್ತಿದ್ದವು.

ಹೊಳಿವ ಹಣೆಯೊಳ್ ಬೆರಸಿ ವಹಣಿ ತಿರುವಿನೊಳಳಿಯೆ। ಸುಳಿಸುಳಿದು
ತಿರುಪು ಪೊಂಪುಳಿಯೊಳಡಗುತೆ ಹೊಳೆಯೆ ॥

ಬಣ್ತೆ ಗಮಕಮನುಗುಳೆ ಗಮಕವರಿದಂತೊಡರೆ। ಅಣಕನಯನ
ದೊಳ್ಮೊಳಿಯೆ ನಯವಿಂಪಿನೊಳಗಡರೆ ॥

ಅವು ಬೆಡಂಗಂಬೆರೆಯೆ ಬೆಡಗುಕಾಲಂ ಕೊನರೆ। ನವರೀತಿಯೊಡ್ಡಯಿಸೆ
ಯೊಡ್ಡವಣೆ ಮೇಲಡರೆ ॥

ಪೊಸದೇಶಿ ಪಜ್ಜಳಿಸೆ ಪಜ್ಜಳಂ ಪಲ್ಲವಿಸೆ। ಮಿಸುಕುತಿರಲಸುಜಾಯಿ
ಹೂಂಕಾರ ಒತ್ತರಿಸೆ ॥

ನುಣ್ಪ ನುಸುಳದೆ ಪೊಣ್ಮೆಕಮ್ಮವಣೆಗೆಡೆಗುಡಲು। ತಣ್ಪು ಸೊಂಪಿ
ನೊಳಿಂದಿ ಕಾಳಾಸಕೆಡೆಗುಡಲು ॥

ಕಾಂತಿಕವಲೇರಿ ಸರಿಯೊಪ್ಪಿಂಜಳಮನುಗುಳಿ। ಶಾಂತಿರಾಗಂ ರಸದ
ಸೋಪಾನದೊಳ್ನಿಗಳಿ ॥

ರಾಗರಸದೊಳಗೆ ಪಂಚಾಕ್ಷರಿಗಳೀಯುತಿರೆ। ನಾಗಾಭರಣನೆಲ್ಲವಂ
ಒರೆದು ಕೇಳುತಿರೆ।

ಪದನದೊಳ್ ವೇಣುವಿನೊಳ್ ಐದಕ್ಕರಂಗಳಿರೆ। ಹೃದಯದೊಳಗ
ಗುಸುರೊಳಗೆ ಶಂಕರಂ ಸಿಲ್ಕುತಿರೆ ॥

ಪಂಚಮುಖದೊಳಗೆಲ್ಲ ಕೊಳದನಿತೊಳಗುತಿರೆ। ಪಂಚಾಕ್ಷರಿಗೆ ನಾದ
ಮೂರ್ತಿಯಿಗೆ ಸೋಲುತಿರೆ ॥

ಆಶ್ಚರ್ಯ! ಆನಂದ!! ಆ ಆನಾಯನಾರನ ಕೈಬೆರಳುಗಳು ಆ ಕೊಳಲ ಮೇಲೆ ಕುಣಿಯುವಾಗ ಇನಿತೊಂದು ಮಂಜುಳವಾಗಿ ಮನೋಹರವಾಗಿ ರಾಗ ರಸವು ಹರಿಯತೊಡಗಿದೆ. ಆ ಹರಿವ ರಸವಲ್ಲಿ ಐದಕ್ಷರಗಳು ಹೊರಹೊಮ್ಮತೊಡಗಿವೆ. ಹೊಮ್ಮುವ ಮಂತ್ರದಲ್ಲಿ ಶಿವನು ಸಿಲ್ಕಿದ್ದಾನೆ. ನಾದ ಮೂರ್ತಿಯಾದ ನಟರಾಜ ರಾಜನಾದ ಶಿವನು ಆತನ ಕೈಬೆರಳ ಕುಣಿತಕ್ಕೆ ರಾಗರಂಜನೆಗೆ ಮಂತ್ರ ಪ್ರೇಮಕ್ಕೆ ಮನಸೋತು ನಿಂತಿದ್ದಾನೆ ಆ ಆನಾಯನಾರನ ಕೊಳಲಕ್ಕೆ ಸರಸತಿಯ ವೀಣೆ, ತುಂಬುರನ ತಂಬೂರಿ, ಕೃಷ್ಣನ ಕೊಳಲು, ಮೃಡನ ಡಮರುಗಗಳೂ ಸಹ ನಾಚಿ ನಿಂತಿವೆ. ಸಾಮವೇದವೂ ಶರಣು ಬರುವಂತಾಗಿದೆ ಆತನ ಆ ಗಾನದ ಇನಿದನಿಯು ಶಂಕರನ ಐದು ಮೊಗಗಳಲ್ಲಿಯೂ ತುಂಬಿ, ಹತ್ತು ತುಟಿಗಳನ್ನೂ ತೆರಿಸಿ ಬಿಟ್ಟಿದೆ. ಹೃದಯವನ್ನು ಅರಳಿಸಿ ಬಿಟ್ಟಿದೆ ಭಾವವನ್ನು ತಲ್ಲೀನ ಮಾಡಿ ಬಿಟ್ಟಿದೆ. ಸಾಕ್ಷಾತ್ ಪರಮಾತ್ಮನಿಗೇನೆ ಇನಿತೊಂದವಸ್ಥೆಯನ್ನು ತಂದು ಕೊಡುವಂತೆ ಆನಾಯನಾರನು —

ಬಾರಿಸುವಕೊಳಲದನಿಗೆಯ್ತಂದು ಗೋಕುಲಂ। ಮೇರೆಗೆಟ್ಟರಿವುಗೆಟ್ಟುಂ
ಸಲೆಸರಾಕುಳಂ॥
ಎಳ್ವಕೆವಿ ಮುಗಿದ ಕಣ್ಣೆತ್ತಿದ ಮುಖಂ ಪೆರೆಯೆ। ಇಳಿದ ಕಟವಾಯ
ಜೊಸನೊರೆಗರುಂಕೆಗಳಿಸೆಯೆ॥
ಜೊಮ್ಮಿಸುತೆ ಜೋಲುತ್ತೆಯೊಂದನೊಂದಂ ನೆಮ್ಮಿ। ಸುಮ್ಮಾನವೇರಿ
ಮೆಯ್ಮಿಗಿರಿ ಸುಖಮುಂ ಹೂಮ್ಮಿ॥
ಆನಾಯನಾರ ಹೆಗಲೊಳ್ಕೊಗವನಿಟ್ಟಕೆಲ। ಆನಾಯನಾರತೀ
ಳೊಳ್ಕೊಗವನಿಟ್ಟ ಕೆಲ॥
ಇಂತು ಗೋಕುಲವೆಲ್ಲ ಮರೆದು ಕೇಳುತ್ತಮಿರೆ। ಮುಂತೆ ಬಗೆಗೆಟ್ಟು
ಪಗೆಗೆಟ್ಟು ಮೃಗನಿಚಯಮಿರೆ॥
ಪುಲಿಯುಕೊರಲೊಳುಕೊಟ್ಟನಿಟ್ಟ ಕಣ್ಣಂ ಮುಚ್ಚಿ। ನಲಿದು ಕೇಳ್ವವು
ಮರೆದು ಪುಲ್ಲೆದನಿಯಂ ಮೆಚ್ಚಿ॥
ಮುಂಗುಲಿಯು ಮೇಲೆ ಹೆಡೆಯಿಟ್ಟು ಕೇಳ್ವಹಿಗಳಿಂ। ಸಂಗಡಿಸುವಹಿಯ
ಹೆಡೆಗೆಡೆಗುಡುವ ಶಿಖಿಗಳಿಂ॥
ಗಿಳಿಯುಂಜೆ ಕೋಕಿಲೆಗಳೆಳಿಸಿ ಕೇಳ್ವವುನೋಡ। ಅಳಿಕುಳಂ ತರು
ಗಿರಿಗಳೆಳಸಿ ಕೇಳ್ವವು ನೋಡ॥
ಇಂತು ಸಚರಾಚರಂಗಳ್ಮೈರೆಯೆ ಕೊಳಲೂದಿ। ಸಂತತಂ ಪುಳಕದಿಂ
ಪಲ್ಲವಿಸಿ ಕೊಳಲೂದಿ॥

ಹೀಗೆ ಒಗ್ಗುವಂತೆ ಎಲ್ಲರ ಎದೆದಾಣಗಳಲ್ಲಿ ರಸ ಭಾವಗಳನ್ನು ಒಡಮೂಡಿಸುವದೇ ಸಂಗೀತದ ಮುಖ್ಯ ಧ್ಯೇಯ. ಕಾವ್ಯಕ್ಕೆ ಛಂದಸ್ಸು ಹೇಗೋ ಸಂಗೀತಕ್ಕೆ ತಾಳ-ಲಯಗಳು ಹಾಗೆ. ಉಳಿದ ಕಲೆಗಳು ಹಲವರನ್ನು ಮಾತ್ರ ಆಕರ್ಷಿಸುತ್ತಿದ್ದರೆ ಸಂಗೀತವು ಮಾತ್ರ ಸಕಲರನ್ನು ಮೋಹಿಸುತ್ತದೆ. ಚರಾಚರ ಪ್ರಾಣಿಗಳನ್ನೂ ಆಕರ್ಷಿಸುತ್ತದೆ. ಜಗತ್ತಿನಲ್ಲಿ ಸಂಗೀತದ ರುಚಿಗೆ ಇಂಬಿಗೆ ಸೋಲದ ಶಿಶುವಿಲ್ಲ. ಪಶುವಿಲ್ಲ. ಅದರಲ್ಲಿಯೂ ಭರತ ಭೂಮಿಯಲ್ಲಿ ವಿಶೇಷ. ಇವರಿಗೂ ಸಂಗೀತಕ್ಕೂ ಒಂದು ಬಿಡಲಾರದಂಥ ಸಂಬಂಧವಿದೆ. ಇವರ ಪ್ರತಿಯೊಂದು ಕಾರ್ಯವೂ ಸಂಗೀತದಲ್ಲಿಯೇ ಜರಗುವದು. ಹುಡುಗರನ್ನು ಆಡಿಸುವಾಗ-ಹಂತಿಯನ್ನು ಹೊಡೆಯುವಾಗ-ಬೀಸುವಾಗ-ಬೆತ್ತುವಾಗ, ಭಜನೆ ಮಾಡುವಾಗ, ಭಿಕ್ಷೆ ಬೇಡುವಾಗ, ಓದುವಾಗ, ನೀತಿ ಹೇಳುವಾಗ, ಇವರು ಹಾಡದಿದ್ದರೆ ಗತಿಯಿಲ್ಲ. ಎಲ್ಲ ಕಾರ್ಯಗಳಲ್ಲಿಯೂ ರಸ-ರಂಜನೆಗಳನ್ನು ತರತಕ್ಕದ್ದು ಹಾಡು. ಕಸವೂ ರಸವಾಗುತ್ತೆ ರಾಗದಲ್ಲಿ. ಆದ್ದರಿಂದಲೇ ಸಕಲ ಚರಾಚರ ಪ್ರಾಣಿಗಳು ತಮ್ಮ ತಮ್ಮ ಉದ್ಯೋಗವನ್ನು ಬಿಟ್ಟು ಸಂತಸಂಬಟ್ಟು ಆ ಆನಾಯನಾರನ ಇಂಪಾದ ಗಾನಕ್ಕೆ ಮೊಗವೆತ್ತಿ ನಿಂತಿವೆ. ತಮ್ಮ ತಮ್ಮೊಳಗಿರುವ ಜಾತಿ ವೈರವನ್ನೂ ಸಹ ಬಿಟ್ಟು ಬಿಟ್ಟಿವೆ. ಎಲ್ಲವೂ ಸೇರಿ ಏಕ ಭಾವದಿಂದ ಕೇಳತೊಡಗಿವೆ. ಹೀಗೆ ಸಕಲ ಪ್ರಾಣಿಗಳು ಸಂತೋಷಪಡುವ ಆತನ ಸಂಗೀತಕ್ಕೆ ಸೂರ್ಯನೂ ಸಹ ಮೈಮರೆತು ನಿದ್ದೆ ಹೋಗುವನು. ಮತ್ತಲೂ ಮನಸು ಆವರಿಸುವದು. ಆ ಗೋಧೂಳಿ ಸಮಯಕ್ಕೆ ಗೋಕುಲವನ್ನೆಲ್ಲ ಕಾವೇರಿ ಯಲ್ಲಿ ಮೈದೊಳೆದು ಮನೆಗೆ ಹೊಡತರುವನು. ಇಂತು

ಕನ್ನ ಗೋವಂ ಕಾವ ಇದಿರಗೋವಂ ಸೋವ। ಉನ್ನತಯಶಂ
ಜಿತೇಂದ್ರಿಯನಾಗುತುಂ ಕಾವ॥
ಅವರಿಚ್ಛಿತಾನಲ್ಲ ತನ್ನಿಚ್ಛೆಗೋವಾಗಿ। ಭವನಿಚ್ಛಿತಾನಾಗಿ ತನ್ನಿಚ್ಛೆ
ಭವನಾಗಿ॥

ಗೋವುಗಳನ್ನು ಕಾಯುವದೂ ಒಂದು ವಿದ್ಯೆ. ಅದರಲ್ಲಿಯು ಒಂದು ಜನ್ಮವಿರಬೇಕು. ಅವುಗಳಿಗೆ ಒಗ್ಗುವಂತಹ ಹಸರು ಮೇಯಿಸಬೇಕು. ಒಲಿಯುವಂತೆ ಕೊಳಲೂದಬೇಕು. ವೇಳೆಗೆ ಸರಿಯಾಗಿ ತಿಳಿನೀರುಗುಡಿಸಬೇಕು. ಮೈತೊಳೆದು ಮೈಯ್ದಡವಬೇಕು. ವಿಶ್ವಾಸವು ಹುಟ್ಟುವಂತೆ ಸಂತೋಷವು ಜನಿಸುವಂತೆ ಯಾವಾಗಲೂ ನೋಡಿಕೊಳ್ಳಬೇಕು.

ಆನಾಯನಾರನು ಈ ಎಲ್ಲ ಜಾಣ್ಮೆಯಿಂದ ಕೂಡಿದ್ದನು. ಅಂತೆಯೇ ಆ ಗೋವುಗಳು ಅವನಿಚ್ಛೆಯಂತಿದ್ದವು. ಹಿಂದಕ್ಕೆ ದಿಲೀಪನೇನೋ ಗೋವನ್ನು ಕಾಯ್ದ. ಆದರೆ ಆತನ ಇಚ್ಛೆಯಂತೆ ಅದಿರಲಿಲ್ಲ. ಆತನೇ ಅದಿರಿಚ್ಛೆಯಂತೆ ವರ್ತಿಸಿದನು. ಎಷ್ಟಾದರೂ ಆತನಲ್ಲಿದ್ದುದು ಪುತ್ರಕಾಮುಕನ ರಾಜಪ್ರೇಮ. ಈತನಲ್ಲಿದ್ದುದು ನಿರ್ಹೇತುಕ ಹೃದಯ ಪ್ರೇಮ.

ಹೀಗೆ ಗಾನ ಲೀನನಾಗಿ ಗೋವುಗಳನ್ನು ಕಾಯುವಲ್ಲಿ ಹಲವು ಸಂವತ್ಸರಗಳು ಕಳೆದು ಹೋಗಿವೆ. ಈತನ ಈ ಅನನ್ಯವಾದ ಸಂಗೀತದ ಸವಿಗೆ ಮನಸೋತ ಶಿವನು ಈತನನ್ನು ಉದ್ಧರಿಸಬೇಕೆಂದು ಒಂದು ಕಕ್ಕೆಯ ಗಿಡದ ಮೇಲೆ ನಿಂತಿದ್ದಾನೆ. ಇತ್ತ ಆನಾಯನಾರನು ಎಂದಿನಂದದಿ ತುರುವಿಂಡನ್ನು ಹೊಡೆದುಕೊಂಡು ಬಂದು ಹೆಮ್ಮರದ ತಪ್ಪಲಲ್ಲಿ ನಿಂದು ಕೊಳಲು ಊದವನು. ಊದುತ್ತಲೆ ಎದುರಿಗೆ ಹೂತ ಹೊಂಬಣ್ಣದ ಕಕ್ಕೆಯ ಗಿಡವನ್ನು ಕಂಡು ಅದರ ಬಳಿಸಾರಿದ್ದಾನೆ.

ಮರದಮುಂದಡ್ಡಮುಂ ತಿಗಟಮುಂ ಪರಿದಾಡಿ। ಹರಿಸದಿಂ
ಪಂಚಾಕ್ಷರಿಯನೂದಿ ಕೂಗಾಡಿ॥
ತಾನೆ ಕೊಳಲೂದಿ ತಾನೆ ಹಿಗ್ಗಿ ಹೆಜ್ಜುತುಂ। ನಾನಾರಸಂಗಳಂ
ಸವಿಸವಿದು ಪೊಂಗುತುಂ॥
ಹೊರಗನಾಲಿಸದೆಯರಿದೊಲಿದಂತೆಯಾಡುತುಂ। ತೆರಹುಗಾಣದೆ
ಜಾನಿಸುತ್ತ ಕೊಳಲೂದುತುಂ॥

ಇನಿತು ಆ ಕಕ್ಕೆಯ ಸುತ್ತಲೂ ಸುತ್ತುತ್ತ ಊದಲಾರಂಭಿಸಿದ್ದಾನೆ. ಊದಿ ಊದಿದಂತೆ ಆತನ ಆನಂದವು ಎಲ್ಲೆ ಮೀರಿ ನಿಂತಿದೆ. ಸ್ನೇಹ, ಸಲುಗೆ, ಆತ್ಮೀಯತೆ, ತನ್ಮಯತೆಗಳು ಮಿತಿ ಮೀರಿವೆ. ತೃಷೆ-ತೃಷ್ಣೆಗಳು ತಗ್ಗಿ ಕುಗ್ಗಿ ಹೋಗಿವೆ. ಜೀವನದ ಭಾನವು ಹಿಂಗಿ ಹೋಗಿದೆ. ಮನೆ-ಮಕ್ಕಳ ಚಿಂತೆಯು ನಿಂತು ಹೋಗಿದೆ. ಎಲ್ಲವನ್ನೂ ಪೈಮರೆತು ಬಿಟ್ಟಿದ್ದಾನೆ. ಅಖಂಡವಾದ ಲಯ, ಅನನ್ಯವಾದ ಮನೋವಿಲಯಗಳಿಂದ ಬಾಜಿಸ ಹತ್ತಿದ್ದಾನೆ. ಆ ರಾಗದಲ್ಲಿ ಹುಟ್ಟವ ಕೋಮಲತೆ ಮಧುರತೆಗಳಿಗೆ ಮಿತಿಯಿಲ್ಲ. ಪ್ರೇಮ ಆನಂದಗಳಿಂದ ಬೆರತ ನಯರಾಗಕ್ಕೆ ಕೊರತೆಯಿಲ್ಲ. ಅನಂತವಾದ-ಅಮೇಯವಾದ ಅನುಭವಾನಂದದಿಂದ ಬಿರ್ರನೆ ಬೀಗಿ ಹೋಗಿದ್ದಾನೆ. ಪಂಚಾಕ್ಷರಿ ಪರಮಾತ್ಮನ ಹೊರತು ಏನೊಂದೂ ಆತ

ನಿಗೆ ತೋಚದಾಗಿದೆ. ಯಾವದೋ ಒಂದು ಅವಾಚ್ಯವಾದ ಆನಂದ ದಲ್ಲಿ ಕಣ್ಮುಚ್ಚಿ ತಲ್ಲೀನನಾಗಿ ನಿಂತು ಬಿಟ್ಟಿದ್ದಾನೆ. ಇನಿತೊಂದು ಸಿಬ್ಬಿರಗ ಸ್ಥಿತಿಯಲ್ಲಿ ಬಾಜಿಸುವದನ್ನು ಕಂಡು ಪರಮಾತ್ಮನು ಪರಮಾರ್ಥ ವೇಷವನ್ನು ತೊಟ್ಟು — ನುಣ್ಪಿನಿಗಳಿಂದ 'ಇತ್ತ ಬಾ ವಗನೆ' ಎಂದು ಕರೆಯಲು ಆನಾಯನಾರನು ಕಣ್ದೆರೆದು ಕಂಡು ತನುವಾರೆ ಸೊಂಕಿ, ಕಯ್ಯಾರೆ ಬಿಗಿದಪ್ಪಿ

ದೇವ ಇಂತೀ ಅಡವಿಗೇಕೆ ಬಂದೈ ತಂದೆ। ದೇವ ಹುಲಿ, ಕರಡಿ
ಮೊದಲಾದವುಂಟೆಲೆತಂದೆ॥
ಕೈಲಾಸಮುಂ ಬಿಟ್ಟು ಕರುಣಮುಂ ಮುಂದಿಟ್ಟು। ಶೈಲಜೆಯನಿರಸಿ
ತನುವಂ ಮನಕ್ಕೆಡೆಗೊಟ್ಟು॥
ಎನಗೋಸುಗಂ ಮರದ ಮೇಲೆ ನಿಂದೈ ತಂದೆ। ಎನಗೋಸುಗಂ
ವಿಂಧ್ಯದೊಳಗೆ ಬಂದೈತಂದೆ॥
ನಿನಗಿನಿತವಸ್ಥೆಯುಂ ಮಾಡಿತೆನ್ನಯಭಕ್ತಿ। ನಿನಗಿನಿತು ಬಿಟ್ಟತಂ
ಮಾಡಿ ತೆನ್ನಯ ಭಕ್ತಿ॥
ಎಂದು ಶಂಕರನ ಪದಯುಗಳವುಂ ಪಿಡಿದಿರಲ್। ಇಂದು ಧರನೆತ್ತಿ
ತಳ್ಳಿಪ್ಪಸಿ ಹಿಗ್ಗುತಿರಲ್॥

ಎಂಬು ಕರುಳಿನಿಂದ ಕೇಳಿ ವೃಷಭನ ಅಡಿದಾವರೆಗಳನ್ನು ಬಿಡದೆ ಬಿಗಿದಪ್ಪಿದನು. ಶಿವನು ಕೈಹಿಡಿದೆತ್ತಿ ತಳ್ಳಿಪ್ಪಸಿ ಹಿಗ್ಗುವನು. ಆನಿತರಲ್ಲಿ ಪೂಮಳೆಗಳಿರಗುವವು. ದುಂದುಭಿಗಳುಣ್ಮುವು. ಶಿವನ ಬಿರುದಿನ ಕಹಳೆಗಳು ಮೊಳಗುವವು. ಪ್ರಮಥಗಣವೆಲ್ಲ ಮುತ್ತುವದು. ಆ ಸಮಯ ವಲ್ಲಿಯೇ ಆನಾಯನಾರನ ಗೋವುಗಳಿಲ್ಲ ಗೋಜನ್ಮವಬಿಟ್ಟು, ಋಷಿ ವೇಷವ ತೊಟ್ಟು —

ವೇದವರಿಯದ ನಿಮ್ಮನರಿದೈ ಭಕ್ತನಿಂ। ವಾದವರಿಯದ ನಿಮ್ಮ
ನೆಯ್ದಿದೆವು ಭಕ್ತನಿಂ॥
ಗೋಜನ್ಮಮುಂ ಕಳಿದವೀ ನಿಮ್ಮ ಭಕ್ತನಿಂ। ಗೋಜಾತಮುಂ
ಮಾಣ್ದುದಭವ ನಿಜಭಕ್ತನಿಂ॥

ಎಂದುರಿ ಪೊಗಳ್ವ ರುಷಿಜನಕ್ಕಭಯಮುಂ ಕೊಟ್ಟು। ಮುಂದೆ ನಿಂದಾ
ನಾಯನಾರ್ಗೆ ಹರುಷಂ ಒಟ್ಟು।
ಇಂತೆಲ್ಲವಂ ಮರೆದು ಕೊಳಲೂದಿದವರುಂಟೆ? ಸಂತತಂ ;
ಪಂಚಾಕ್ಷರಿಯ ಸವಿದರಿಂತುಂಟೆ?।

ಎಂದು ಆತನ ಅನನ್ಯ ಭಕ್ತಿಯನ್ನೂ, ಗಾನ ವಿಲಕ್ಷಣತೆಯನ್ನೂ, ಗೋ ರಕ್ಷಣ ದಕ್ಷತೆಯನ್ನೂ ಸಕಲ ಗಣರಿಗೆ ಬೋಧಿಸಿ ಆನಾಯನಾರನನ್ನು ಹೂದೇರಿನಲ್ಲಿ ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಬಂದು ಅರಮನೆಯ ಪೊಕ್ಕು ಸಿಂಗರದ ಸಿಂಹಾಸನವನೇರಿ ಹರುಷದಿಂ ತುಳ್ಳಾಡಿ ಪಾರ್ವತೀ ದೇವಿಯನ್ನೂ ಪ್ರಮಥಗಣರನ್ನೂ ಕುರಿತು —

ಕೊಳಲೊಳಗೆ ಸಿಲ್ಕಿಕೊಂಡಿರ್ದೆನಾನಿನ್ನೆಗಂ। ಕೊಳಲದನಿಗೆಳಸಿ
ಕೊಂಡಿರ್ದೆನಾನಿನ್ನೆಗಂ।
ಹೊಸಪರಿಯಭಕ್ತಿಯುಂ ಕಂಡೆವಾವೆಂದೆನುತೆ। ಹಸನಾದ ಸುಖಮುಂ
ಕಂಡೆವೆಂದೆನುತೆ।
ಆನಾಯನಾರ್ಗೆಗಣಪದವಿಯುಂ ಸಲಿಸುತುಂ। ನಾನಾಗಣವ್ರಾತ
ದೊಡನೆ ಕೂಡಿರಿಸುತುಂ।
ನೆನೆವರ ನಿಧಾನನೊಪ್ಪಿದನೀಶನೊಪ್ಪಿವಂ। ನೆನೆವರವನೋರಥ ಸುಧಾ
ವರುಷನೊಪ್ಪಿದಂ।
ನೋಲ್ಪಭಕ್ತರ ಕಣ್ಣ ಪುಣ್ಯನಿಧಿಯೊಪ್ಪಿದಂ। ಬೇಳ್ಪ ಶರಣರ ಸುಖದ
ಸುರಧೇನು ವೊಪ್ಪಿದಂ।
ಭಕ್ತಜನವನಕಮಲವಿಮಲಾರ್ಕನೊಪ್ಪಿದಂ। ಭಕ್ತನಿಧಿ ಹಂಪೆಯ
ವಿರೂಪಾಕ್ಷನೊಪ್ಪಿದಂ।

ನಮ್ಮಲ್ಲಿ ಯಕ್ಷಗಾನ-ಕಾವ್ಯಗಾನ ಮೊದಲಾದವುಗಳುಂಟು. ಮಂತ್ರಗಾನವು ಮಾತ್ರ ಅಪರೂಪ. ಆ ಮಂತ್ರಗಾನವಾಡಿ ಮಹಾದೇವನನ್ನೊಲಿಸಿಕೊಂಡವನು ಆನಾಯನಾರನು. ಆದ್ದರಿಂದ ಈತನು ಮಂತ್ರಗಾನದ ಸೃಷ್ಟಿಕರ್ತನೆಂದು ಹೇಳಿದರೆ ಏನೂ ತಪ್ಪಾಗದು. ರಾವಣಾದಿಗಳು ಗಾನ ಮಾಡಿದರು. ಆದರೆ ಆ ಗಾನಕ್ಕೆ ಶಿವನೊಲಿಯಲಿಲ್ಲ. ಆ ಗಾನವೆ ಕೇವಲ ಹೊರಗಿನದು. ಸ್ವಾರ್ಥ ಪ್ರೇಮವದ್ದು. ಆದಕ್ಕೆ ಶಿವನೊಲಿಯನು. ಆದಕ್ಕೇನೆ ಬಸವಣ್ಣನವರು "ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲವಯ್ಯ" ಎಂದ ಹಾಡಿದರು. ಆದರಿದು ಒಳಗಣ ಗಾನ.

(ಒನಮಃ ಶಿವಾಯ) ಪ್ರಣವದಲ್ಲಿ ಮೂರಕ್ಷರಗಳುಂಟು. ಅವುಗಳಲ್ಲಿ ಮೊದಲನೆ 'ಅ' ಅಕ್ಷರವು ನಾದಸ್ವರೂಪವಾದುದು. ಇದರಿಂದ ಶಿವನು ನಾದ ಸ್ವರೂಪನೆಂದು ಸಿದ್ಧವಾಗುವದು. ಅಂತಯೇ "ನಾದಬ್ರಹ್ಮ ಸದಾನಂದ ಮದ್ವಿತೀಯ ಮುಪಾಸ್ಮಹೇ" ಎಂತಲೂ "ನಾದ ಪ್ರಿಯಂ ನಾದಮಯಂ ನಾದಲಿಂಗಂ ಮಹೇಶ್ವರಂ" ಎಂತಲೂ ಶ್ರುತಿಗಳು ಸಾರುತ್ತವೆ. ಈ ಒನಮಃಶಿವಾಯ ಅಂದರೆ ಮಂತ್ರಗಾನವು ಪರಮಾತ್ಮನಿಗೆ ಪರಮ ಪ್ರಿಯ ತಮವೂ ಆಗಿದೆ. 'ಮದ್ಭಕ್ತಾಯತ್ರ ಗಾಯಂತಿ ತತ್ರ ತಿಷ್ಠಾಮಿ ಪಾರ್ವತಿ, ಎಂಬುದು ಪರಮಾತ್ಮನ ಪ್ರೀತಿಯುಮಾತು. ಒಟ್ಟಿನಲ್ಲಿ ನಾದ-ಬಿಂದು-ಕಲೆಗಳಲ್ಲಿ ನಾದವು ಮೊದಲು ಸ್ಥಾನವನ್ನು ಪಡೆದಿದೆ. ಅಕ್ಷರಗಳಲ್ಲಿ ಅಕಾರವು ನಾದಸ್ವರೂಪವಾಗಿದೆ. ಆದ್ದರಿಂದ ಆಳವಾದ ಆ ಒಳನಾದವನ್ನು ಎಲ್ಲರೂ ಅಭ್ಯಸಿಸಬೇಕು. ಅದರಿಂದ ಅನಂತವಾದ ಅಮೇಯವಾದ ಆನಂದವನ್ನು ಪಡೆಯಬೇಕು. ರಾಗವೆಂದರೆ ಪ್ರೇಮ. ಆ ಪ್ರೇಮುಗಾನವೇ ಮಿಗಿಲಾದುದು. ಅದು ಭಕ್ತಿಯಲ್ಲಿ ಪರ್ಯವಸಾನವಾದಾಗ ಮಾತ್ರ.

ದೇವರು.

(ಲೇ:— ಶ್ರೀಮತಿ ಗೌರಮ್ಮನವರು ಬೆಂಗಳೂರ ಸಿಟಿ.)

ಮಹಾದೇವಿಯಕ್ಕನ ಸೇವಾ ಸಮಾಜದಿಂದ.

ನಾವು ವಿಚಾರ ದೃಷ್ಟಿಯಿಂದ ಜಗತ್ತನ್ನು ನೋಡಿದರೆ ಸೂರ್ಯನು ಪ್ರತಿನಿತ್ಯವೂ ತಪ್ಪದೆ ನಮಗೆ ಬೆಳಕನ್ನು ಯಾರ ಭಯದಿಂದ ಕೊಡುವನು, ಗಾಳಿಯು ಬಿಡದೆ ಬೀಸಿ ಪ್ರಾಣಿಗಳನ್ನೆಲ್ಲ ಯಾರ ಭಯದಿಂದ ರಕ್ಷಿಸುವದು, ಅಗ್ನಿ ನೀರುಗಳು ತಮ್ಮ ಅಮೋಘ ಶಕ್ತಿಯನ್ನು ಮುಚ್ಚಿಕೊಂಡು ನಮಗೆ ನಿತ್ಯದಲ್ಲೂ ಉಪಕಾರವನ್ನು ಯಾರ ಭೀತಿಯಿಂದ ಮಾಡುವವು, ಮತ್ತು ಆಕಾಶದಲ್ಲಿ ಚಂದ್ರ ತಾರೆಗಳು ಮಿಣಕುವದು ಯಾರಿಂದ, ಮಿಂಚು ಮಿಂಚುವದು ಯಾರಿಂದ, ಆಕಾಶವನ್ನು ಕಂಬವಿಲ್ಲದೆ ಅಂತರದಲ್ಲಿ ನಿಲ್ಲಿಸಿದವರಾರು, ಹಕ್ಕಿಗಳಿಗೆ ಹಾರುವ ಶಕ್ತಿಯನ್ನು ಕೊಟ್ಟವರಾರು, ಎಂಬ ಯೋಚನೆಯು ತಲೆಯೆತ್ತುವದು. ಇದಕ್ಕೆಲ್ಲ ಒಬ್ಬ ಕರ್ತೃವಿರಬೇಕೆಂದು ಭಾಸವಾಗುವದು. ಆತನೇ ದೇವರು. ಅವೇ ಮಹಾ ಚೈತನ್ಯ.

ದೇವರು ವಿಶ್ವವನ್ನೆಲ್ಲ ವ್ಯಾಪಿಸಿದ್ದಾನೆ. ಸರ್ವ ವಸ್ತುಗಳ ಚೈತನ್ಯರೂಪನಾಗಿದ್ದಾನೆ. ಸಣ್ಣ ವಸ್ತುವಿನಲ್ಲಿ ಸಣ್ಣರೂಪನಾಗಿದ್ದಾನೆ. ದೊಡ್ಡ ವಸ್ತುವಿನಲ್ಲಿ ದೊಡ್ಡ ರೂಪನಾಗಿದ್ದಾನೆ. ಕಲ್ಲು ಕಟ್ಟಿಗೆಗಳಲ್ಲಿ ಅವ್ಯಕ್ತವಾಗಿದ್ದಾನೆ. ಚೇತನ ಪ್ರಾಣಿಗಳಲ್ಲೆಲ್ಲ ವ್ಯಕ್ತವಾಗಿದ್ದಾನೆ. ಹೀಗೆ ದೇವರು ಜಗತ್ತಿನಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿದ್ದಾನೆ. ಇದೇ ಅಭಿಪ್ರಾಯವನ್ನು ಮಹಾನುಭಾವರಾದ ಬಸವಣ್ಣನವರು

"ಎತ್ತೆತ್ತ ನೋಡಿದತ್ತತ್ತ ನೀನೇ ದೇವ. ಸಕಲ ವಿಸ್ತಾರದ ರೂಪು
ನೀನೇ ದೇವ. ವಿಶ್ವತೋ ಬಾಹು ನೀನೇ ದೇವ. ವಿಶ್ವತೋ ಚಕ್ಷು
ನೀನೇ ದೇವ. ವಿಶ್ವತೋ ಮುಖ ನೀನೇ ದೇವ. ವಿಶ್ವತೋ ಪಾದ
ನೀನೇ ದೇವ. ಘನಕ್ಕೆ ಘನ ನೀನೇ ದೇವ. ಅಣೋರಣೀಯಾನ್
ಮಹತೋ ಮಹೀಯಾನ್ ನೀನೇ ಕೂಡಲ ಸಂಗಮದೇವಾ."

ಎಂದು ಎಲ್ಲಿ ನೋಡಿದಡಲ್ಲಿ ದೇವರು ತುಂಬಿಕೊಂಡಿಹನೆಂದು ಎಷ್ಟು ಸೊಗಸಾಗಿ ಸರಸವಾಗಿ ಬಣ್ಣಿಸಿದ್ದಾರೆ! ಹೀಗೆ ಜಗತ್ತನ್ನೇ ವ್ಯಾಪಿಸಿ

ನೊಂಡ ದೇವರನ್ನು ಹಲವರು ಹಲವು ವಿಧವಾಗಿ ಹುಡುಕಲು ಪ್ರಯತ್ನಪಡುತ್ತಿದ್ದಾರೆ. ಲಿಂಗವಂತರನ್ನು ಬಿಟ್ಟು ಇನ್ನುಳಿದವರು ದೇವರನ್ನು ಹುಡುಕಲು ಗುಡಿ ಗುಂಡಾರಗಳಿಗೂ ತೀರ್ಥ ಕ್ಷೇತ್ರಗಳಿಗೂ ಅಲೆದಾಡುತ್ತಾರೆ. ಅವಂಗೆ ತಮ್ಮಲ್ಲಿಯೇ ಇರುವ ದೇವರ ಅರಿವೇ ಇಲ್ಲ. ನಾವು ಮಾತ್ರ ಹಾಗೆ ಮಾಡುವಂತಿಲ್ಲ. ನಮಗೆ ನಮ್ಮ ಗುರುಗಳು ಸದಾ ಪೂಜಿಸಲು ನಮ್ಮೆದೆಯಲ್ಲಿಯೇ ತಂದು ಕೊಟ್ಟಿದ್ದಾರೆ. ನಮ್ಮ ಶಿರದಲ್ಲಿರುವ ಕಲೆಯನ್ನೇ ಕರದಲ್ಲಿ ಕೊಟ್ಟಿದ್ದಾರೆ. ಉಳಿದವರಂತೆ ನಾವು ದೇವರ ಸಲುವಾಗಿ ಸಿಕ್ಕ ಕಡೆ ತಿರುಗುವಂತಿಲ್ಲ, ತಿರುಗುವದೂ ಉಚಿತವಲ್ಲ.

"ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನ. ತ್ರೇತಾಯುಗದಲ್ಲಿ ವಾರಾಣಸಿ ಎಂಬ ಮೂಲಸ್ಥಾನ. ದ್ವಾಪರ ಯುಗದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ. ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ. ಇಂತೀ ನಾಲ್ಕು ಮೂಲಸ್ಥಾನ. ನಾನಾ ಸ್ಥಾನವ ಪೆಟ್ಟಿದೆ, ಜಂಗಮವೇ ಲಿಂಗವೆಂದು ನಂಬಿದೆ ಕೂಡಲ ಸಂಗಮದೇವಾ."

ಎಂದು ಬಸವಣ್ಣನವರೂ ಸಹ ನಮಗೆ ಬೋಧಿಸುತ್ತಾರೆ. ಬೇರೆ ಕೆಲವರು ಬೆಂಕಿಯೇ ದೇವರೆಂದು ಪೂಜಿಸುವರು. ಗಿಡಗಳೇ ದೇವರೆಂದು ಪ್ರಾರ್ಥಿಸುವರು. ಭೂಮಿಯ ಕಲ್ಲೇ ದೇವರೆಂದು ಅಡ್ಡಬೀಳುವರು. ಅವರೆ ಅವೆಲ್ಲ ನಿಜವಾದ ದೇವರುಗಳಲ್ಲ.

"ಬನ್ನಿರೇ ಅಕ್ಕಗಳು, ಹೋಗಿರೆ ಆಲದಮರಕ್ಕೆ. ಕಚ್ಚುವವೇ ನಿಮ್ಮ ಚಿಪ್ಪಿನ ಹಲ್ಲುಗಳು? ಬೆಚ್ಚಿಸುವವೇ ನಿಮ್ಮ ಬಚ್ಚಣಿಯ ರೂಹುಗಳು? ನಮ್ಮ ಕೂಡಲ ಸಂಗಮದೇವನಲ್ಲದೆ ಉಳಿದ. ಪರದೈವಂಗಳು ಮನಕ್ಕೆ ಬಂದವೇ? ಬಿಕ್ಕರಿ ಬಿರಿವ ದೈವಂಗಳು?"

ಎಂದು ಅನ್ಯದೈವಂಗಳಿಗೆರಗುವದು ಉಚಿತವಲ್ಲವೆಂದು ಉಪದೇಶಿಸಿದ್ದಾರೆ. ಇದು ನಮ್ಮ ಪಂಚಾಚಾರಗಳಲ್ಲಿ ಮೊದಲನೆಯ ಆಚಾರವಾಗಿದೆ. ಇವನ್ನೆ ಚನ್ನಬಸವೇಶ್ವರ ದೇವರು

"ಅಯ್ಯಾ ಶ್ರೀಗುರು ಕರುಣಿಸಿಕೊಟ್ಟ ಲಿಂಗ ಜಂಗಮವಲ್ಲದೆ
ಅನ್ಯ ದೈವಂಗಳ ತ್ರಿಕರಣದಲ್ಲಿ ಅರ್ಚಿಸದಿಪ್ಪುದೇ ಲಿಂಗಾಚಾರವೆಂಬ
ನಯ್ಯ"

ಎಂದು ಚನ್ನಾಗಿ ಹೇಳಿಕೊಟ್ಟಿದ್ದಾರೆ. ಅನ್ಯ ದೇವರಿಗೆ ಹೋಗಿ ಅಡ್ಡ ಬೀಳದಿರುವುದೇ ವೀರಶೈವಾಚಾರ. ಲಿಂಗ ದೇವನನ್ನು ಪೂಜಿಸುವುದೇ

ನಮ್ಮ ಲಿಂಗಾಚಾರ. ಈ ಬಗೆಯಾಗಿ ದೇವರನ್ನು ಗುರ್ತಿಸುವ ಸುಗಮ ಮಾರ್ಗವನ್ನು ನಮ್ಮ ಶಿವಶರಣರ ಹೊರತು ಬೇರೆ ಯಾರೂ ಗುರ್ತಿಸಿಲ್ಲ. ನಮ್ಮಲ್ಲಿ ಏನೂ ಗೊತ್ತಿಲ್ಲದ ಎಳೆಯ ಮಕ್ಕಳೂ ಸಹ ದೇವರು ಎಲ್ಲಿರುವನೆಂದು ಕೇಳಿದರೆ ಎದೆತಟ್ಟಿ ಥಟ್ಟನೇ ತೋರಿಸಬಲ್ಲವು. ಆದರೆ ಅನ್ಯ ಮತದ ಅದ್ವಿತೀಯ ಪಂಡಿತರು ಮಾತ್ರ ಮೂಕರಾಗಿ ಕೂಪ್ಪುವರು. ದೇವರನ್ನು ಕಂಡುಕೊಳ್ಳುವಷ್ಟು ಸುಲಭ ಮಾರ್ಗ ಮತ್ತೆಲ್ಲಿಯೂ ಇಲ್ಲ. ಇಂತಹ ಮತದಲ್ಲಿ ಹುಟ್ಟಿದ ನಾವೇ ಧನ್ಯ.

ಆ ದೇವರನ್ನು ಕಂಡುಕೊಳ್ಳಲು ನಮಗಿದ್ದಷ್ಟು ಸ್ವಾತಂತ್ರ್ಯ ಬೇರೆ ಯಾವ ಮತದಲ್ಲಿಯೂ ಇಲ್ಲ. ನಾವು ನಿಜವಾಗಿಯೂ ಲಿಂಗ ಸತಿಗ ಳಾಗಬೇಕು. ಈಗ ನಾವಾಗಿರುವದು ಕೇವಲ ಪುರುಷರ ಭೋಗದ ಬೊಂಬೆಗಳು. ನಾಲ್ಕು ಗಡಿಗೆ ಮಡಿಕೆಗಳನ್ನು ತೊಳೆದು ನಾಲ್ಕು ಮಕ್ಕ ಳನ್ನು ಹೆತ್ತರಾಯಿತು. ಅದೇ ನಮ್ಮ ಜೀವನದ ಗುರಿ ಎಂದು ನಾವು ಭಾವಿಸಿಗೊಂಡಿರುವೆವು. ಇದು ಶುದ್ಧ ತಪ್ಪು. ಮಹದೇವಿಯಕ್ಕನು ನಮ್ಮಂಥ ಹೇಡಿ ಜೀವಿಗಳನ್ನು ಕಂಡು ನಿಮಗೀ ಅಳಿದು ಹೋಗುವ ಪತಿ ಸುತರು ಆದರೆ ನನಗೆ

"ಗುರುವೇ ತೆತ್ತಿಗನಾದ. ಲಿಂಗವೇ ಮದುವಣಿಗನಾದ. ಆನು ಮದುವಳಿಗೆಯಾದೆನು. ವಸುಧೆಯ ಭಕ್ತರೆಲ್ಲರೂ ನಿಬ್ಬಣಿಗರಾದರು. ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ. ಇದು ಕಾರಣ ಚನ್ನಮಲ್ಲಿ ಕಾರ್ಜುನಯ್ಯನೇ ಗಂಡನೆನಗೆ."

ಎಂದು ಹೇಳಿಕೊಂಡಿರುವಳು. ಅವಳ ವಂಶಜರಾದ ನಾವು ಆ ದೇವರೂಪವಾದ ಲಿಂಗಪತಿಯನ್ನು ಬಿಟ್ಟು ಅಳಿದು ಹೋಗುವ ವಿಷಯ ಸುಖಕ್ಕೆ ಮೆಚ್ಚಿ ಸಂಸಾರ ಸಾಗರದಲ್ಲಿ ಬೀಳುವದು ನಮಗುಚಿತವೇ? ಒಮ್ಮೆ ನಾವು ಸಂಸಾರದಲ್ಲಿ ಧುಮುಕಿದರೆ ತಿರುಗಿ ಏಳುವದು ಕಷ್ಟ. ಗಾಳ ಬಿಟ್ಟ ದೀವಿಗೆಯಂತೆ ನಾವು ಅದರಲ್ಲಿಯೇ ನಂದಿಹೋಗುವೆವು. ಅಲ್ಲದೆ ಸಂಸಾರವು ಮುಂದಿನ ಜನ್ಮಕ್ಕೂ ನಮ್ಮನ್ನು ಕೈ ಬಿಡದು. ಅದೊಂದು ನಮ್ಮ ಮಹಾಶ್ರುತವಾಗಿದೆ.

"ಸಂಸಾರವೆಂಬ ಹಗೆಯಯ್ಯಾ ತಂದೆ. ಎನ್ನ ವಂಶ ವಂಶವ ಪ್ಪದೆ ಅರಿಸಿಕೊಂಡು ಬರುತ್ತಿದೆಯಯ್ಯಾ! ಎನ್ನವನರಿಸಿ ಯರಸಿ ಹಿಡಿದು

ಕೊಲ್ಲುತ್ತಿದೆಯಯ್ಯ!! ನಿಮ್ಮ ಮರೆಪೊಕ್ಕೆ ಕಾಯಯ್ಯ!!! ಎನ್ನ ಬಿನ್ನ ಪವಸವಧಾರು ಚನ್ನಮಲ್ಲಿಕಾರ್ಜುನಾ"

ಎಂದು ವೀರ ವಿರತೆಯಾದ ಮಹದೇವಿಯಕ್ಕಗಳೇ ಈ ತೆರವಾಗಿ ದೇವರಲ್ಲಿ ಈ ಸಂಸಾರದ ಕಷ್ಟವನ್ನು ತೋಡಿಕೊಂಡಾಗ ನಮ್ಮಂಥವರ ಪಾಡೇನು? ನಿಶ್ಚಯವಲ್ಲಿಯೂ ಅದರಲ್ಲಿ ಮುಳುಗಿ ಏಳುವ ನಾವು ಎಷ್ಟು ಜಾಗ್ರತೆಯಿಂದಿರಬೇಕಾಗುವದು? ದೇವರ ವಿಷಯಕ್ಕೆ ಎಷ್ಟೊಂದು ಭಾವ ಬಲಿಯಬೇಕು? ನಮ್ಮ ಮಕ್ಕಳು ನಮ್ಮನ್ನು ಅಗಲಿದರೆ ಅವಳಂತೆ ನಾವು ನಮ್ಮ ಲಿಂಗಪತಿಗಾಗಿ ಯಾವಾಗಲೂ ಶೋಕಿಸಬೇಕು. ನಾವೇನು ಮಾಡಿದರೂ ಆತನನ್ನು ಮರೆಯದೆ ಸ್ಮರಿಸುತ್ತಿರಬೇಕು. ಆತನ ಮೂರ್ತಿಯು ನಮ್ಮ ಕಣ್ಣಿನ ಮುಂದೆ ಕಟ್ಟಿದಂತಾಗಬೇಕು. ಅಂದರೆ ನಮಗೆ ಆ ದೇವರ ಒಲುಮೆಯಾಗುವದು. ಈ ಸಂಸಾರದ ಬಲೆಯು ಬಿಚ್ಚಿ ಹೋಗುವದು. ಶ್ರೇಷ್ಠವಾದ ಆನಂದವು ದೊರೆಯುವದು. ಆವಾಗ ಜಗತ್ತಿನಲ್ಲಿ ಒಬ್ಬ ದೇವರಿರುವನೆಂದು ಗೊತ್ತಾಗುವದು.

ಚಾರ್ವಾಕ ಮೊದಲಾದವರು ನಾಸ್ತಿಕ ವಾದಿಗಳೆಂದು ಕೆಲವರು ಆರೋಪಿಸುವರು. ಆದರೆ ಅವರೇ ನಾಸ್ತಿಕರೆಂದು ನಾನು ಹೇಳಲಾರೆ. ಯಾರು ನಿಜವಾಗಿ ದೇವರನ್ನು ತಿಳಿದಿಲ್ಲವೋ ಅವರೆಲ್ಲರೂ ನಾಸ್ತಿಕರು. ಕೇವಲ ದೇವರಿರುವನೆಂದು ದೊಡ್ಡ ದೊಡ್ಡ ಗ್ರಂಥಗಳನ್ನು ಬರೆದವರು ಆಸ್ತಿಕರಲ್ಲ. ಉದ್ದ ಉದ್ದ ವ್ಯಾಖ್ಯಾನ ಮಾಡುವವರು ಆಸ್ತಿಕರಲ್ಲ. ತಮ್ಮ ಕೊಟ್ಟಿಗೆ ಇಲ್ಲದ ಕಾಮ್ಯ ಕರ್ಮಗಳನ್ನು ಮಾಡುತ್ತ ಮತ್ತೊಬ್ಬರಿಂದ ಮಾಡಿಸುತ್ತ ತಿರುಗುವವರು ಆಸ್ತಿಕರಲ್ಲ. ಆದರೆ ಯಾರ ಮನಸ್ಸು ಯಾವಾ ಗಲೂ ದೇವರ ಕಡೆಗೆ ಹರಿಯುತ್ತದೆಯೋ ಯಾರ ಆರ್ತವು ಪತಿತವಾ ಗುವ ಸಮಾಜದ ದುಃಸ್ಥಿತಿಗಾಗಿ ಮರುಗುತ್ತಿದೆಯೋ ಅವರೇ ಆಸ್ತಿಕರು. ಅವರೇ ನಿಜವಾದ ದೇವರ ಮಕ್ಕಳು. ಮಹಾನುಭಾವರು. ಆದ್ದರಿಂದ ಸರ್ವ ವ್ಯಾಪಕನಾದ ದೇವರನ್ನು ನಾವು ತಿಳಿಯಬೇಕಾದರೆ ನಾವು ನಿರ್ಮಲರೂ ನಿಃಸ್ವಾರ್ಥಿಗಳೂ ಆಗಬೇಕು.

ಈಗೀಗ ಸರ್ವ ವ್ಯಾಪಕನಾದ ಶಿವನ ಸಂಬಂಧವಾಗಿ ಒದಪಿ, ಕೇಪಿ, ವಿಚಾರವಾಡದೆ. ಅದರೊಳಗೇನಿದೆ, ಇದರೊಳಗೇನಿದೆ, ಇದು ಪೊಳ್ಳು, ಅವ. ಗೊಳ್ಳು, ಇದು ಹುಚ್ಚು, ಅದು ಮಬ್ಬು, ಎಂದು ಏನಬಂದಂತೆ ಪಾಶ್ಚಾತ್ಯ ಸುಧಾರಣೆಯ ಬಯಲಲ್ಲಿ ಸಿಲುಕಿ ತಮ್ಮ

ತಮ್ಮ ದೇವರನ್ನು ನಿಂದಿಸುತ್ತ, ತಮ್ಮ ತಮ್ಮ ಶೀಲಗಳನ್ನು ಹೀಯಾಳಿಸುತ್ತ ಬಿಡುತ್ತ, ಅಪಾನಪೇಯ, ಅಭಕ್ಷ್ಯಭಕ್ಷಣ ಮಾಡುತ್ತ ವೃತ್ತಿಯಿಂದ ಸಂಚರಿಸುವವರ ಸಂಖ್ಯೆಯನ್ನು ನೋಡಿದರೆ ನಮ್ಮ ಹೃದಯಗಳು ತಳಮಳಿಸುತ್ತವೆ. ಮನಸ್ಸುಗಳು ಮರಗುತ್ತವೆ. ಪೈಗಳು ನಡಗುತ್ತವೆ. ಮಾಡುವದೇನು? ಎಲ್ಲವೂ ವಾತಾವರಣದಂತೆ ಸಾಗಿ ಹೋಗಬೇಕಾಗಿದೆ. ಏನಾದರೂ ದೇವರ ವಿಷಯಕ ಅಥವಾ ಧರ್ಮದ ವಿಷಯಕ ಹಂಬಲ, ಪ್ರೇಮ, ಆಸಕ್ತಿಗಳು ಇವೆಯೆಂದರೆ ನಮ್ಮಲ್ಲಿಯೇ. ಇದೊಂದು ಇದೀಗ ನಮಗೆ ಹೆಮ್ಮೆಯ ಮಾತು. ಅವನ್ನು ನಾವು ಬಲಪಡಿಸಿಕೊಂಡು ಹೋಗುವದು ಮಹದೇವಿಯಕ್ಕಗಳಂತಹ ಶಿವಶರಣೆಯರ ವಂಶಿಕರಾದ ನನಗೆ ಭೂಷಣಪ್ರಾಯವಾಗಿದೆ. ಅಂಥ ಬುದ್ಧಿಯನ್ನು ಆ ಮಹಾದೇವಿಯಕ್ಕನೇ ನಮಗೆಲ್ಲರಿಗೂ ಪಯಪಾಲಿಸಲೆಂದು ಕೋರುವೆ.

ವಿಶ್ವದೊಳಗಿನ ಚೈತನ್ಯವು.

(ಲೇಖಕ:— ಬಂಡೆಪ್ಪ ರೇವಣಸಿದ್ದಪ್ಪ ಝುಂಜೇ ವಕೀಲ ಸೊಲ್ಲಾಪೂರ.)

ಅಪಾರವಾದ ವಿಶ್ವದಲ್ಲಿ ಎಲ್ಲ ಕಡೆಗೆ ಚೈತನ್ಯವು ವ್ಯಾಪಿಸಿಕೊಂಡಿರುವದು. ಆದರೆ ಯಾವ ಚೈತನ್ಯವು ಸ್ಪಷ್ಟರೂಪವನ್ನು ಹೊಂದುವದೋ ಅದು ಮಾತ್ರ ನಿಜವಾದ ಚೈತನ್ಯವು. ಯಾವದಕ್ಕೆ ಸ್ಪಷ್ಟರೂಪದ ಜ್ಞಾನ ವಿಲ್ಲವೋ ಅದು ಜಡಚೈತನ್ಯವನಿಸುವದು. ಈ ಜಡಚೈತನ್ಯದಿಂದ ಕೆಲ ಪಟ್ಟಿಗೆ ಚಲನವಲನವು ಉಂಟಾದರೂ ಅದರಲ್ಲಿ ಜ್ಞಾನದ ನಿಜವಾದ ಪ್ರಕಾಶವು ಇಲ್ಲದಿರುವದರಿಂದ ಅದು ನಿರುಪಯೋಗವಾಗುವದು. ಮನುಷ್ಯನು ಪ್ರತಿಯೊಂದು ಕ್ಷಣದಲ್ಲಿ ಯಾವದಾದರೊಂದು ಕ್ರಿಯೆಯಲ್ಲಿ ಆಸಕ್ತನಾಗಿರುವನು. ಆದರೆ ಸ್ವಕರ್ತವ್ಯದ ತಿಳುವಳಿಕೆಯು ಇಲ್ಲದಿರುವದರಿಂದ ಆ ಕ್ರಿಯೆಯ ಪರಿಣಾಮವು ಹಿತಕರವಾಗಿ ಪರಿಣಮಿಸುವದಿಲ್ಲ. ಸಕಲ ಜಗತ್ತಿನಲ್ಲಿ ತನ್ನ ಬುದ್ಧಿಯನ್ನು ವ್ಯಾಪಿಸಿ ಯಾವನ ದೃಷ್ಟಿಯು ವಿಶ್ವರೂಪವಾಗಿರುವದಿಲ್ಲವೋ ಅವನ ಹತ್ತರ ವಿಪುಲಸಂಪತ್ತು ಮತ್ತು ಅಗಾಧವಾದ ಪಾಂಡಿತ್ಯವು ಇದ್ದರೂ ಕೂಡ ಅವು ವ್ಯರ್ಥವಾಗುವವು.

ಯಾವನು ಸರ್ವವ್ಯಾಪಿಯಾದ ಮತ್ತೂ ಅನಂತವಾದ ಚೈತನ್ಯ ಸ್ವರೂಪವನ್ನು ತಿಳಿಯುವದಿಲ್ಲವೋ, ಅವನಲ್ಲಿ ಚೈತನ್ಯವಿದ್ದರೂ ಅದು ಜಡಚೈತನ್ಯವೇ ಸರಿ. ಚೈತನ್ಯವು ಅಹಂಕಾರದಲ್ಲಿ ಬೆರೆತಿರುವದು. ಅಹಂಕಾರವು ಶುದ್ಧಾಶುದ್ಧವೆಂದು ಎರಡು ಪ್ರಕಾರವಾಗಿರುವದು. ಅಹಂಕಾರದಲ್ಲಿ ಪೃಥ್ವೀ ತತ್ತ್ವವಿರುವದು. ಪೃಥ್ವೀ ತತ್ತ್ವದಲ್ಲಿ ಶುದ್ಧವಾದ ಅಹಂಕಾರವು ಕೂಡಿತೆಂದರೆ ಅದು ಜಡವಾಗುವದು. ಯಾಕಂದರೆ ಪೃಥ್ವಿಯು ಜಡವಾಗಿರುವದು. ಅಶುದ್ಧಾಹಂಕಾರವು ಅಶುದ್ಧ ಸ್ವರೂಪದ ಕಡೆಗೆ ಒಯ್ದು ಮನುಷ್ಯನನ್ನು ಪೃಥ್ವಿಯಲ್ಲಿ (ಮಣ್ಣಿನಲ್ಲಿ) ಕೂಡಿಸುವದು. ಪೃಥ್ವಿಯು ಶಬ್ದ ಸ್ಪರ್ಶ ರೂಪ ರಸ ಗಂಧಗಳಿಂದ ಕೂಡಿಕೊಂಡಿರುವದು. ಈ ರಸ ರೂಪಾದಿಗಳಿಂದ ಪೃಥ್ವಿಯು ದ್ವೇಷ ಮತ್ಸರಾದಿ ದುರ್ಗುಣಾದಿಗಳನ್ನು ತ್ಯಜಿಸಿ ಸಪ್ತಮ ತತ್ತ್ವವನ್ನು ಮರೆತು ಒಂದೇ ಒಂದು ಪವಿತ್ರ ವಸ್ತುಗಳನ್ನು ವಹಿಸಲಿಕ್ಕೆ ಸಮರ್ಥವಾಗುತ್ತದೆ. ನಮ್ಮ ಶುದ್ಧ ಅಹಂಕಾರದಲ್ಲಿ ವಸ್ತ್ರಮಾತ್ರ ಉಳಿಯುವದರಿಂದಲೇ ಅನೇಕ ಪ್ರಾಣಿ

ಲ್ಲಿರುವ ಅಧಿಕ ಶಕ್ತಿಯ ಅಹಂಕಾರವು ಪೃಥ್ವಿಗೆ ಇರುವದರಿಂದ ಅದು ಈ ಅಪಾರವಾದ ವಿಶ್ವಶಕ್ತಿಯಿಂದ ತನ್ನ ಮಸ್ತಕದ ಮೇಲೆ ಧರಿಸುತ್ತದೆ. ಇದು ತೇಜದ ತಿರಸ್ಕಾರವನ್ನಾಗಲಿ ವಾಯುವಿನ ಅವಹೇಲನವನ್ನಾಗಲಿ ಜಲದ ದ್ವೇಷವನ್ನಾಗಲಿ ಅಥವಾ ಆಕಾಶದ ಮತ್ಸರವನ್ನಾಗಲಿ ಎಂದೂ ಮಾಡುವದಿಲ್ಲವಾವ ಕಾರಣ ಇದನ್ನು ಉಳಿದ ನಾಲ್ಕು ತತ್ವಗಳು ತಮ್ಮಲ್ಲಿ ಸಮಾವೇಶ ಮಾಡಿಕೊಳ್ಳುವವು. ಅಹಂಕಾರದಿಂದಲೇ ಸೃಷ್ಟಿಯು ತನ್ನ ಅಸ್ತಿತ್ವವನ್ನು ಪ್ರಕಟಿಸುವದು. ಅಹಂಕಾರವು ಮನುಷ್ಯನಿಗೆ ಮನುಷ್ಯತ್ವವ ಮತ್ತು ತನ್ನ ಸ್ವರೂಪದ ಜ್ಞಾನವನ್ನು ಮಾಡಿಕೊಟ್ಟಾಗಲೇ ಅವನ ಅತ್ಯೋನ್ನತಿಯು ಜ್ಞಾನಕ್ಕೆ ಕಾರಣವಾಗುವದು. ಶರೀರವು ನಾನಲ್ಲ, ನಾನು ಪರಮಾತ್ಮನ ಸ್ವರೂಪನಾಗಿದ್ದೇನೆ, ಬುದ್ಧಿಯ ಆಶ್ರಯ ಮಾಡಿಕೊಂಡು ಜ್ಞಾನದಿಂದ ಆತ್ಮಸ್ವರೂಪದ ಉಚ್ಚಸ್ಥಿತಿಯನ್ನು ಹೊಂದುವದೇ ಮನುಷ್ಯನ ಧ್ಯೇಯವಿರುವದೆಂದು ಯಾನನು ತಿಳಿಯುವನೋ ಅವನಿಗೆ ಸೋಹಂ ಎಂಬ ಅಹಂಕಾರವು ಪರಮಾತ್ಮನ ಅರಿವನ್ನು ಮಾಡಿಕೊಡುವದು. ಇದಕ್ಕೆ ಶುದ್ಧಾಹಂಕಾರವೆನ್ನುವರು. ಯಾವ ಅಹಂಕಾರವು ತನ್ನ ಶರೀರ ಸುಖವನ್ನು ಶ್ರೇಷ್ಠವಾಗಿ ತಿಳಿಯುವದೋ ಅದು ವೃಥಾಭಿಮಾನದಿಂದ ಅನ್ಯರನ್ನು ತಿರಸ್ಕಾರ ದೃಷ್ಟಿಯಿಂದಲೂ ಮಾತ್ಸರ್ಯ ಭಾವದಿಂದಲೂ ಯಾವಾಗಲೂ ನೋಡುವದು. ಇದರ ಕಡೆಯಿಂದ ಅನೇಕ ಘಾತುಕ ಕಾರ್ಯಗಳಾಗುವವು. ಕಡೆಗೆ ಅನ್ಯರಿಗೆ ನಾಶವನ್ನುಂಟುಮಾಡಿ ತನಗೂ ಅನಿಷ್ಟವನ್ನು ತಂದುಕೊಳ್ಳುವದು. ಶುದ್ಧಾಹಂಕಾರವು ಸನ್ಮಾರ್ಗಕ್ಕೆ ಹಚ್ಚುವದು. ಅಶುದ್ಧಾಹಂಕಾರವು ದುರ್ಮಾರ್ಗದ ಕಡೆಗೆ ಒಯ್ಯುವದು.

ಜಲತತ್ವವು ಜೀವನರೂಪಾಗಿರುವದು, ಪೃಥ್ವಿಯ ಮೇಲಿನ ಸಮಸ್ತ ಪ್ರಾಣಿಗಳನ್ನೂ ವೃಕ್ಷಾದಿಗಳನ್ನೂ ಪಾಲನ ಮಾಡುವದು. ಜಲವಿಲ್ಲದೆ ಕ್ಷಣಕಾಲವಾದರೂ ಯಾವದೂ ಇರಲಾರದು. ಜಲದಲ್ಲಿ ದ್ರವ ಗುಣ ಇರುವದು. ಯಾವ ಪದಾರ್ಥದಲ್ಲಿ ದ್ರವ ಗುಣವಿರುವದಿಲ್ಲವೋ ಅದು ಶುಷ್ಕವಾಗುವದು. ಆರ್ದ್ರತ್ವವಿಲ್ಲದಿದ್ದರೆ ಯಾವ ಪದಾರ್ಥವೂ ಉಪಯೋಗಕ್ಕೆ ಬರುವದಿಲ್ಲ. ಯಾವದರಲ್ಲಿ ಸತ್ವವಿರುವದಿಲ್ಲವೋ ಅದರಲ್ಲಿ ಜಲವಂಶವಿರುವದಿಲ್ಲ. ಯಾವದರಲ್ಲಿ ಜಲವಿರುವದೋ ಅದು ರಸಭರಿತವಾಗುವದು. ನೀರಿನ ಪದಾರ್ಥಗಳನ್ನು ಕೂಡ ರಸ ಭರಿತನ್ನಾಗಿ ಮಾಡು

ವದು. ಆರ್ದ್ರತ್ವವು ಮೃದುಗುಣವನ್ನುಂಟು ಮಾಡುವದು. ಹೀಗೆ ಆರ್ದ್ರತ್ವವು ಉದಕವು ನಾಲ್ಕೂ ಕಡೆಗೆ ಪಸರಿಸಿ ಸರ್ವಕ್ಕೂ ಜೀವನ ಕರವನ್ನು ತರುವದು.

ಜೀವನ ಶಕ್ತಿಯಲ್ಲಿ ತೇಜದ ಪ್ರತಾಪವು ವಿಲಕ್ಷಣವಾಗಿರುವದು. ತೇಜದಲ್ಲಿ ಪ್ರಕಾಶ ಗುಣವಿರುತ್ತದೆ. ಅದು ಸರ್ವ ಪದಾರ್ಥಗಳನ್ನು ಪ್ರಕಾಶಮಯವನ್ನಾಗಿ ಮಾಡುತ್ತದೆ. ಪ್ರಕಾಶದಿಂದ ದೃಷ್ಟಿಯ ವ್ಯಾಪಕತೆಯು ಬೆಳೆದು ಸರ್ವ ವಸ್ತುಗಳು ಇದರ ಮೂಲಕ ಕಾಣಿಸುತ್ತವೆ. ಇದರಿಂದ ನಾವು ಇಚ್ಛಿತ ಸ್ಥಳಕ್ಕೆ ಹೋಗಿ ನಮ್ಮ ಧ್ಯೇಯವನ್ನು ಸಾಧಿಸಲಿಕ್ಕೆ ಯೋಗ್ಯವಾಗುವದು. ತೇಜವು ನಮ್ಮ ದೃಷ್ಟಿಯ ಪ್ರದೇಶವನ್ನು ವಿಸ್ತಾರ ಮಾಡುತ್ತದೆ. ಮತ್ತು ಸೃಷ್ಟಿಯೊಳಗಿನ ರಮ್ಯ ವಸ್ತುಗಳ ದರ್ಶನ ಮಾಡಿಸಿ ಆನಂದಗೊಳಿಸುತ್ತದೆ. ತೇಜವು ಜ್ಞಾನಕ್ಕೆ ಕಾರಣವಾಗುತ್ತದೆ. ಜ್ಞಾನವು ಮೋಕ್ಷಕ್ಕೆ ಕಾರಣವು. ನಮಗೊದಗಿರುವ ಸಂಕಟಗಳನ್ನು ದೂರ ಮಾಡಿಸುವ ಮಾರ್ಗವನ್ನು ತೋರಿಸುವ ಜ್ಞಾನವು ಜ್ಯೋತಿಸ್ವರೂಪವಾಗಿರುತ್ತದೆ. ಜ್ಯೋತಿಯು ಅನಂತ ಜ್ಯೋತಿಗಳೊಡನೆ ಕೂಡಿಕೊಂಡರೆ ಸರ್ವತ್ರ ಪರಿಯೂ ಪ್ರಕಾಶವನ್ನುಂಟುಮಾಡುವದು. ಮತ್ತು ತೇಜವು ಕಗ್ಗತ್ತಲೆಯನ್ನು ನಾಶ ಮಾಡುವಂತೆ ದುಷ್ಟಮನೋವಿಕಾರಗಳನ್ನು ನಾಶ ಮಾಡುವದು. ಹಾಗೆಯೇ ಮನೋ ಭೂಮಿಕೆಯನ್ನೂ ಶುದ್ಧ ಮಾಡುವದು. ಈ ತರಹದ ಶುದ್ಧ ಮನೋ ಭೂಮಿಕೆಯಲ್ಲಿ ಆತ್ಮ ಸ್ವರೂಪದ ಬಿಂಬವು ಉದ್ಭವಿಸಿತೆಂದರೆ ಅದೇ ಬರಬರುತ್ತ ಆತ್ಮಸ್ವರೂಪವೇ ಆಗಿಬಿಡುವದು. ಈ ತೇಜದ ಜ್ವಾಲೆಯು ವಾಯುವಿನಲ್ಲಿ ಕೂಡಿ ಎಲ್ಲ ಕಡೆಗೆ ವ್ಯಾಪಿಸುತ್ತದೆ.

ವಾಯುವಿನಲ್ಲಿ ಅಲ್ಲಾಡುವ ಶಕ್ತಿ ಇರುತ್ತದೆ. ಈ ಅಲ್ಲಾಡುವ ಶಕ್ತಿಯು ಪಸರಿಸುವ ಕಾರ್ಯವನ್ನುಂಟು ಮಾಡುತ್ತದೆ. ಇದು ಪೃಥ್ವಿ ಜಲ ಆಕಾಶಗಳಲ್ಲಿ ಕೂಡುವದು. ವಾಯುವಿನ ಪ್ರಸರಣ, ಧಾವನ, ಚಲನ, ವಲನ, ಕ್ರಿಯೆಗಳು ಸರ್ವ ವಸ್ತುಗಳಲ್ಲಿ ಎಲ್ಲಿಯ ವರೆಗೆ ಇರುತ್ತವೋ ಅಲ್ಲಿಯ ವರೆಗೆ ಚೈತನ್ಯವಿರುವದು. ಅದರಿಂದ ಪ್ರಾಣವಾಯುವು ಮನುಷ್ಯನ ಶರೀರದಲ್ಲಿ ಇರುವ ವರೆಗೆ ಅದು ಬಾಳಲು ಸಮರ್ಥವಾಗುತ್ತದೆ. ಬುದ್ಧಿಯು ತೇಜದಿಂದ ವಿಶ್ವದೊಳಗಿನ ಅನಂತ ಕಾರ್ಯಗಳನ್ನು ನೋಡಲಿಕ್ಕೆ ಸಮರ್ಥವಾಗುವದು. ವಾಯುವು ಬುದ್ಧಿಯ ರೂಪದಿಂದ ಆಕಾ

ಶದಲ್ಲಿ ಕೂಡಿದರೆ ಸರ್ವ ವ್ಯಾಪಿಯಾಗುವದು. ಹಾಗೆ ಸರ್ವ ವ್ಯಾಪಿಯಾದ ಪ್ರಾಣವಾಯುವು ಮುಕ್ತವಾಗುವದು. ಮುಕ್ತಿಯೆಂದರೆ ಜೀವನವಿಲ್ಲದಿರುವಿಕೆಯು. ಬಂಧನವೇ ದುಃಖವು. ಬಂಧನದ ರಾಹಿತ್ಯವೇ ಆನಂದವು. ವಿಶ್ವವ್ಯಾಪಿಯಾದ ಈ ಆನಂದ ಸ್ಥಿತಿಯೇ ಮುಕ್ತ ಸ್ಥಿತಿಯು. ಅಖಂಡ ಚೈತನ್ಯವು ನಿಜಾನಂದದ ಸಲುವಾಗಿಯೇ ಪ್ರಯತ್ನಿಸುವದು. ಯಾವನು ಈ ಮಾರ್ಗವನ್ನು ಹುಡುಕಿ ಅದರಿಂದ ಗಮನ ಮಾಡುವನೋ ಅವನೇ ಮುಕ್ತನಾದನೆಂದು ತಿಳಿಯಬೇಕು.

ಆಕಾಶವು ಆತ್ಮನ ವಸತಿಗೃಹವಾಗಿರುವದು. ಮನವು ವಾಯುರೂಪಾಗಿರುವುದು. ಚಿತ್ ಜಲರೂಪಾಗಿರುವುದು. ಮನ ಬುದ್ಧಿ ಚಿತ್ತ ಅಹಂಕಾರಗಳಿಗೆ ಅಂತಃಕರಣ ಚತುಷ್ಟಯಗಳೆನ್ನುತ್ತಾರೆ. ಈ ಅಂತಃಕರಣ ಚತುಷ್ಟಯದೊಳಗಿಂದ ಪ್ರೇರಣೆಗಳುತ್ಪನ್ನವಾಗಿ ಶರೀರದಲ್ಲಿ ಕಾರ್ಯರೂಪಗಳು ತೋರಿದ್ದಾದರೆ ಅವುಗಳಿಗೆ ಆತ್ಮನು ಸಾಕ್ಷೀಭೂತನಾಗಿರುತ್ತಾನೆ. ಆತ್ಮನು ಇದು ತನ್ನ ಶರೀರವೆಂದು ಭಾವಿಸಿದರೂ ಜೀವಾತ್ಮನು ಅಲ್ಪಜ್ಞನೆನಿಸುವನು. ಶರೀರ ಆತ್ಮರುಗಳಿರಡೂ ಭೇದಭಾವದಲ್ಲಿದ್ದು ಆತ್ಮನು ಮಾತ್ರ ಸರ್ವ ವ್ಯಾಪಕನಾಗಿರುವನೆಂಬುದನ್ನು ಬುದ್ಧಿಯ ಸಹಾಯದಿಂದ ತಿಳಿದರೆ ಜೀವನು ಆತ್ಮಸ್ವರೂಪನಾಗುವನು. ಅನಂತರ ಪ್ರೇತವು ನಾಶವಾಗಿ ಆತ್ಮಾರಾಮನೆನಿಸುವನು. ಬುದ್ಧಿಯು ಪ್ರಪಂಚದೊಳಗಿನ ಬಾಹ್ಯ ಸ್ವರೂಪವನ್ನು ನೋಡಿ ಅದರಲ್ಲಿಯೇ ಆಸಕ್ತನಾದರೆ ಆತ್ಮನು ಅದೇ ಶರೀರವನ್ನು ಧರಿಸಿಕೊಂಡು ಪುನಃ ಪುನಃ ಜನ್ಮವೆತ್ತುವನು. ಬುದ್ಧಿಯು ಅಂತರ್ಮುಖವಾಗಿ ಆತ್ಮಸ್ವರೂಪವನ್ನು ತಿಳಿಯಲು ಪ್ರವರ್ತಿಸಿದರೆ ಆ ಬುದ್ಧಿಯು ಆತ್ಮ ಸ್ವರೂಪವನ್ನು ತಿಳಿಯಪಡಿಸುವದು. ಇನ್ನು ಆತ್ಮಸ್ವರೂಪದ ಜ್ಞಾನವಾದ ಮೇಲೆ ಬುದ್ಧಿಗೆ ಯಾವ ಕಾರ್ಯವೂ ತಿಳಿಯುವದಿಲ್ಲ. ಆ ಮೇಲೆ ಅಲ್ಲಿಯೇ ಲಯವಾಗಿ ಶುದ್ಧ ಆತ್ಮಸ್ವರೂಪವೇ ಆಗುವದು. ಇದಕ್ಕೆ ಮುಕ್ತಾವಸ್ಥೆ ಎನ್ನುವರು. ಪ್ರಪಂಚದೊಳಗಿನ ಚೈತನ್ಯವು ಪ್ರಪಂಚದ ನಿಜ ಸ್ವರೂಪವನ್ನು ತಿಳಿಯುವದಕ್ಕಾಗಿಯೇ ಇರುತ್ತದೆ. ಇದನ್ನು ತಿಳಿಯುವದು ಮನುಷ್ಯನ ಕರ್ತವ್ಯವಾಗಿದೆ. ನಿಜ ಸ್ವರೂಪದ ಜ್ಞಾನವನ್ನು ಮಾಡಿಕೊಂಡವನೇ ಜನ್ಮದ ಸಾರ್ಥಕತೆಯನ್ನು ಮಾಡಿಕೊಳ್ಳುವನು. ಇದರ ವಿಪರೀತವಾಗಿ ಮನುಷ್ಯನು ಸಂಸಾರ ಚಕ್ರದಲ್ಲಿ ಸಿಲುಕಿ ತಿರುತಿರುಗಿ ಗಮನಾಗಮನ ಹೊಂದಿ

ಲೆ ದುಃಖ ಭಾಜನನಾಗುವನು. ಯಾವನಿಗೆ ಆತ್ಮಸ್ವರೂಪದ ಜ್ಞಾನವಿಲ್ಲವೋ ಅತನು ಬಂದ ಹಾಗೆ ಹೋಗುವನಲ್ಲದೆ ತಿರುಗಿ ಜನ್ಮವನ್ನು ಎತ್ತುವನು. ಮತ್ತು ಜನ್ಮವೆತ್ತಿದ ಮೇಲೆ ಈ ವಿಶ್ವದಲ್ಲಿ ತಿರುಗಿ ಆತ್ಮ ಜ್ಞಾನವನ್ನು ಮರೆತು ಬಿಡುವನು. ಈ ನಿಯಮವು ಒಂದು ವ್ಯಕ್ತಿಗೆ ಸಂಬಂಧವಿರುವಂತೆ ಸಮಸ್ತ ಸಮಾಜಕ್ಕೂ ಸಂಬಂಧಪಡುತ್ತದೆ. ಸ್ವಸ್ವರೂಪವನ್ನು ತಿಳಿಯದಿರುವ ವ್ಯಕ್ತಿಯಾಗಿಲೀ ರಾಷ್ಟ್ರವಾಗಲೀ ಅಥವಾ ಸಮಾಜವೇ ಆಗಲೀ ಅದು ಯಾವಾಗಲೂ ಬಂಧನದಿಂದ ಮುಕ್ತವಾಗುವದಿಲ್ಲ. ಧರ್ಮವೆಂದರೇನು? ಮನಸ್ಸಿನ ದುಷ್ಟ ವಿಕಾರಗಳನ್ನು ನಷ್ಟ ಮಾಡಿ ಶುದ್ಧ ಮನಸ್ಸನ್ನು ಸಿದ್ಧಪಡಿಸುವದೇ ಧರ್ಮವು. ಶುದ್ಧ ಮನಸ್ಸಿನಿಂದ ಸರ್ವ ಶುದ್ಧ ಕ್ರಿಯೆಗಳೇ ಉಂಟಾಗುವವು. ಹೀಗೆ ಶುದ್ಧವಾದ ಮನಸ್ಸಿನಲ್ಲಿಯೇ ಶುದ್ಧ ಸ್ವರೂಪ ಜ್ಞಾನವಾಗುವದು. ತದ್ವಿರುದ್ಧವಾದ ಮನಸ್ಸಿನಿಂದ ತದ್ವಿರುದ್ಧ ಕ್ರಿಯೆಗಳೇ ಘಟಿಸುವವು. ಅಂಧಕಾರವು ಕಾರ್ಗತ್ತಲೆಯಿಂದ ಪೃಥ್ವಿಯನ್ನು ವ್ಯಾಪಿಸುವಂತೆ ಅಜ್ಞಾನಾಂಧಕಾರವು ಜ್ಞಾನ ಪೃಥ್ವಿಯನ್ನು ವ್ಯಾಪಿಸುವದು. ಆದ್ದರಿಂದ ಶುದ್ಧಾಶುದ್ಧ ಜ್ಞಾನಗಳೇ ನಮಗೆ ಆಗುವದಿಲ್ಲಾದ್ದರಿಂದ ನಾವು ನಮ್ಮಗಳ ಪ್ರವೃತ್ತಿ ಮಾಡಿಕೊಳ್ಳಲಿಕ್ಕೆ ಸಮರ್ಥರಾಗುವದಿಲ್ಲ. ಅಜ್ಞಾನದಿಂದ ಕೂಡಿದ ಕಾರಣ ತನ್ನ ಮಾರ್ಗವು ತನಗೆ ತಿಳಿಯುವದಿಲ್ಲ. ಜ್ಞಾನವನ್ನು ನಾಶಮಾಡುವದೆಂದರೆ ಪ್ರಗತಿ ಪಥದ ಮೇಲೆ ಬರುವದೇ ಇದೆ. ಅಜ್ಞಾನವು ಪ್ರಕಾಶದಲ್ಲಿ ಸಂಚರಿಸುತ್ತದೆ. ಪ್ರಕಾಶವು ಸತ್ಯ ವಿಷಯತ್ವದ ಗುರುತುಮಾಡಿಕೊಳ್ಳುತ್ತದೆ. ಸತ್ಯದ ಆಶ್ರಯ ಮಾಡಿಯೇ ನಾವು ಸತ್ಯದಲ್ಲಿ ಕೂಡಬೇಕಾಗಿದೆ. ವಿಶ್ವದೊಳಗಿನ ಚೈತನ್ಯವು ಸತ್ಯ ಸ್ವರೂಪದಲ್ಲಿ ಲೀನವಾಗುವ ಪಕ್ಷಕ್ಕೆಯೇ ಜೀವಿಸುವದು. ಅದರಂತೆ ಪ್ರತಿಯೊಬ್ಬರೂ ತಮ್ಮ ಮನಸ್ಸನ್ನು ಶುದ್ಧಮಾಡಿಕೊಂಡು ಶುದ್ಧ ಸ್ವರೂಪದ ಕಡೆಗೆ ಸಾಗಬೇಕು. ಅದೇ ಸೇವೆಯಲ್ಲಿ ಅವರು ತಮ್ಮ ಸಮಾಜಕ್ಕೂ ರಾಷ್ಟ್ರಕ್ಕೂ ತಿಲಕಪ್ರಾಯರಾಗುತ್ತಾರೆ. ಯಾವದು ಸತ್ ಸ್ವರೂಪದಲ್ಲಿ ಕೂಡಿಕೊಂಡು ವ್ಯವಹರಿಸುವದಿಲ್ಲವೆ ಅನ್ಯರನ್ನು ಸಹ ಅದೇ ಸ್ವರೂಪದಲ್ಲಿ ಕೂಡಿಕೊಂಡು ವ್ಯವಹರಿಸುವಂತೆ ಮಾಡುವದೋ ಅದೇ ವಿಶ್ವದೊಳಗಿನ ನಿಜವಾದ ಚೈತನ್ಯವೆನಿಸಿಕೊಳ್ಳುತ್ತದೆ.

ಸೂಚನೆ.

"ಶಿವಾನುಭವ" ಪತ್ರಿಕೆಯು ನೂಸಿಕವಾದ ಬಳಿಕ ಒಂದು ವರ್ಷವು ಪೂರ್ತಿಯಾಗಿ ಮೇಲೆ ಮೂರು ಸಂಚಿಕೆಗಳು ಹೊರಟಿರುತ್ತವೆ. ಈ ಹಿಂದಿನ ೧೧ನೇ ಸಂಪುಟದಲ್ಲಿ ನಾವು ಮುಖ್ಯವಾಗಿ ವಿಮರ್ಶಾತ್ಮಕ ಲೇಖಗಳಿಗೆ ಇಂಬುಗೊಡುತ್ತ ಬಂದಿದ್ದೇವೆ. ಹಾಗೆಯೇ ರಗಳೆಗಳು, ಕಾವ್ಯಗಳು, ವಚನಗಳು ಇವುಗಳ ಗುಣದೋಷಗಳನ್ನರಹುವ ಅನೇಕ ಲೇಖಗಳೂ ಬಂದಿವೆ. ಈಚೆಗೆ ಅಲ್ಲಲ್ಲಿ ಚರ್ಚಾ ಕೂಟಗಳು ಸ್ಥಾಪಿಸಲ್ಪಡಹತ್ತಿವೆ. ಇವುಗಳಲ್ಲಿ ಅನೇಕರು ಕೂಡಿಕೊಂಡು ಶಿವಾನುಭವ ಗ್ರಂಥಗಳ ಅಭ್ಯಾಸ ಮಾಡುತ್ತಲಿರುವರು. ಇಂಥವರಲ್ಲನೇಕರು ಲೇಖಗಳನ್ನು ಬರೆದು ನಮ್ಮ ಕಡೆಗೆ ಕಳಿಸುತ್ತಲಿರುವರು. ಇವರ ಲೇಖಗಳಿಗೂ ನಾವು ಪತ್ರಿಕೆಯಲ್ಲಿ ಸ್ಥಾನವನ್ನು ಕೊಡಹತ್ತಿರುತ್ತೇವೆ. ಈ ಬಗೆಯ ಚರ್ಚಾ ಸಂಘಗಳು ನಾಡಿನಲ್ಲಿ ಸ್ಥಾಪಿಸಲ್ಪಡುವದು ಶುಭಚಿನ್ಹವಾಗಿದೆ. ಇದರಿಂದ ಪರಸ್ಪರ ವಿಚಾರ ವಿನಿಮಯಗಳೊದಗುವವು. ಅನೇಕ ರೀತಿಯ ಹೊಸ ತರದ ಅಭಿಪ್ರಾಯಗಳು ವ್ಯಕ್ತವಾಗುವವು. ಇದರಂತೆಯೇ ಪತ್ರಿಕೆಯಲ್ಲಿ ಸಂಶೋಧನಾತ್ಮಕ ಲೇಖಗಳೂ ಅನೇಕ ಬಂದಿರುತ್ತವೆ. ಇವಾದರೂ ಅತ್ಯಂತ ಮಹತ್ವವಾದವುಗಳು. ಇವುಗಳ ಮೂಲಕ ಸಮಾಜದ ಸಾಮಾಜಿಕ ಮತ್ತು ಐತಿಹಾಸಿಕ ನಿಜಸ್ಥಿತಿಯ ಮೇಲೆ ವಿಶೇಷ ಪ್ರಕಾಶವು ಬೀಳುವದು. ಈ ಧೋರಣಗಳಿಂದ ನಾವು ಹೋದ ವರ್ಷ ಶಿವಾನುಭವವನ್ನು ನಡಿಸುತ್ತ ಬಂದಿದ್ದು ವಾಚಕರ ತಿಳುವಳಿಕೆಗೆ ಬಂದಿರಬಹುದು. ನಮ್ಮ ಈ ಪ್ರಯತ್ನದಲ್ಲಿ ಅವರು ಮುಂದಾದರೂ ತಮಗೆ ತೋಚಿದ ಸಲಹೆಗಳನ್ನು ಕೊಟ್ಟು ನಮ್ಮ ಈ ಕಾರ್ಯದಲ್ಲಿ ಸಹಾಯವಾಗಿರಬೇಕೆಂದು ನಾವು ಅವರನ್ನು ಪ್ರಾರ್ಥಿಸುತ್ತೇವೆ.

ಸಂಪಾದಕ.

ಶ್ರೀ. ಹಾನಗಲ್ಲ ಸ್ವಾಮಿಗಳವರು ರಚಿಸಿದ

ಹಾಡುಗಬ್ಬಗಳು.

(ಸಂಗ್ರಾಹಕ:— ಶ್ರೀ ಚಂದ್ರಶೇಖರ ದೇವರು, ಅಡ್ನೂರ)

ಹಿಂದಿನಿಂದ ಸಾಗಿದುದು.

೨

ಪೃತ್ತಿಯ ಜಾಲ। ಚಿಂತೆಯ ಮೂಲ।
ಚರೇಶ್ವರ।
ಹತ ಮಾಡಿ ಘನಲೀಲ॥

೩

ನಿನ್ನಯ ಸಂಗ। ಬನ್ನವ ಭಂಗ।
ಪರೇಶ್ವರ।
ಅನುನೈದು ಶಿವಯೋಗ॥

ಪದ್ಯ ೪.

(ರಾಗ-ಆನಂದಭೈರವಿ)

ಭೋದೇವ ಗಿರಿಜಾಧವ!। ಮುದವಿಲಸಿತ ಮುದಹತ।
ಇಂದ್ರಿಯಜಿತ। ಸಾಧು ಚರಿತ ಆ ಜಯ ॥ಪ॥

೧

ಸಂಪದಾಸುರದಿ ಚರಿಪ। ಪಾಪದಾಗರವಿಲೋಪ।
ಸುಪಥವೇ ಸುಪ್ರದೀಪ॥ ತಮರಜಗುಣವಿರಹಿತ।
ಸುಮನ ಸಹಿತ। ವಿಮಲರತ 'ಆ' ಭವ॥

೨

ಸಂತರಾಚರಣ ಸುಖವ। ಚಿಂತಿಪಾತ್ಮರಿ ಸುಭಾವ।
ಸಂತತಾನಂದವೀವ॥ ವರಗುರುಚರಣ ಕಮಲ।
ದಿರವೆ ಸಕಲ। ಚರಲೀಲಾ 'ಆ' ಗತ॥

೩

ಬಿಂದುನಾದ ಪರಯೋಗ- । ದಿಂದಲಾದ ಶಿವಯೋಗಾ- ।
ನಂದದಾಚರಿಸು ಯೋಗ ॥ ಜವದಿ ಕೊಡು ಪರಮೇಶ ।
ಭವವಿನಾಶ । ಸುವಿಲಾಸ 'ಳ' ಶಿವ ॥

ಪದ್ಯ ೫.

(ರಾಗ-ಪೀಲು)

ಶಂಕರ ಕಾಯೊ ಸದಾ । ಕಿಂಕರರನು ।
ಸಂಕಟವನು ದೂರ ಕರಿಸುತ ॥ಪ॥

೧

ಭೋಂಕನೆ ಮನದ, ಬಿಂಕವ ಬಿಡಿಸಿ ।
ಅಂಕಿತದೊಳಗಿರಿಸಿ । ಕಿಂಕರರನು ॥

೨

ಪರತರ ಶಿವನೀ, ಗುರುಚರವೆನಿಸಿ ।
ನಿರುತದಿ ಸಂಚರಿಸಿ । ಪರಿಪಾಲಿಸಿ ॥

೩

ಸಾಭಾರಿ ಸಿರಾ, ಭಾರಿ ಗುರು ನೀನೆ ।
ಲೋಭಾದಿಗಳನಳಿದು । ಲಾಭದಿಸುಳಿದು ॥

೪

ದೀಕ್ಷ ಶೀಕ್ಷ, ಮೋಕ್ಷ ಗುರು ನೀ ।
ವಕ್ಷನೆ ಮುಮ್ಮಲವ । ಈಕ್ಷಿಸಿ ಕಳೆವ ॥

೫

ಕಾಮ ಕಾಲ ಮಾಯ, ಸೀಮೆಯ ಬಿಡಿಸಿ ।
ಕಾಮಾರಿ ಗುರುವರನೆ । ಪ್ರೇಮದಿ ನೀನೆ ॥

೬

ಇಷ್ಟ ಪ್ರಾಣ, ಶ್ರೀಷ್ಠ ಭಾವದಿ ।
ಕಷ್ಟವನತಿಗಳೆದು । ಶಿಷ್ಟತನದಿ ॥

೭

ತನು ಮೂರರಲಿ, ಜನಿಪ ಮೋಷವನು ।
ಸನುಮತದಿಂ ಕಳೆದು । ತನುವಳಿದು ॥

೮

ಸ್ಥಯ ಚರ ಪರವು, ಭಯಲಯದಿರವು ।
ಪಯ ಶೇಷಕರವಾಗಿ । ಪಯಯುತನಾಗಿ ॥

೯

ಶಿವಯೋಗಾಲಯ । ಭುವನದಿ ಮೆರೆಯುವ ।
ತಪೆ ಸಾಧನವಿರಿಸಿ । ನಿವಾಸಿಸಿ ॥

ಪದ್ಯ ೬.

(ರಾಗ-ದರ್ಬಾರಿಕಾನಡಾ)

ಶಾಂತಿಸುಖವ ಕೊಡು ಬೇಗನೆ ಶಿವ ।
ವೃಥಾಬದ್ಧ ಭವ ಬಾಧೆಯ । ಲಯವಾಡುತ ನೀ ।
ಪರತರ ಗುರುವರ ॥ಪ॥

೧

ಮುಂದ ತಾಮಸವ । ಪೊಂದಿ ನಿಂದೆ ನಾನು ।
ಕುಂದುವಡೆಯುತ, ಸದಾ ಮೂಢತಮ ॥
ಖೇದ ಮೋದವು ದಹಿಸಲಹುದೆನ್ನಂ ।
ಭವೋತ್ತರ! ಶಿವಾಪರ! ಭುವೀಶ್ವರ!!! ॥

೨

ಕುಟಿಲ ರಾಜಸವು । ಪಟುತರವಾಗಿಹುದು!
ದಿಟವನರಿಯದೆ, ವೃಥಾಲಿಂಗನವ ॥
ವಾಡಿ ಕೂಡಿ ಬಿಡದೆ ಕಾಡಿಪೆನ್ನಂ ।
ಚರಾಚರ! ಪರಾತ್ಪರ!! ನಿರಂತರ!!!

೩

ವಿನಯ ದಾನತಪ । ಘನ ಶಮೆ ದಮೆಗಳನು ।
ಮನದ ಕೊನೆಯೊಳು, ಅಸಾಧಾರಣ ॥

ಧ್ಯಾನ ಮೌನ ಶಿವಯೋಗವ ಕೊಡು ನೀ।
ನಪೋಭವ! ಉಪಾಧವ!! ಸುಮೋದವ!!! ॥

ಪದ್ಯ ೭
(ರಾಗ ಕೇದಾರ)

ಮನವನು ಪರಿಪಾಲಿಸು ನೀ। ಜ್ಞಾನದಾನಮಾಡಿ ಶಿವ।
ಚಿನುಮಯ ಪ್ರಭು। ಮಾಯಾರಿ! ಮಾರಾರಿ!! ಕಾಲಾರಿ!!! ॥ಪ॥

೧

ನೇತ್ರದಾಟನಿಲ್ಲಿಸಿ। ಸೂತ್ರದಿಯ ಸುಮತಿಯಗೂಡಿ।
ಗಾತ್ರತ್ರಯವಳಿಯುತೆ। ಚಿತ್ರದ ಚಿದ್ಬಿಂದು ತೋರಿ।
ಚಿನುಮಯ ಪ್ರಭು ॥

೨

ನಾದ ಬ್ರಹ್ಮ ಭೇದವ। ಶೋಧಿಸಿ ದೃಢ ಚಿತ್ತನಾಗಿ
ಸಾಧಿಸಿ ಶಿವಕಲೆಯನ್ನು। ಮೋದಗೊಳ್ಳುವಂತೆ ಮಾಡಿ।
ಚಿನುಮಯ ಪ್ರಭು ॥

೩

ಲಿಂಗಾಂಗ ಸಂಗವ। ಇಂಗಿತದ ಬೋಧವಿತ್ತು।
ಲಿಂಗೈಕ್ಯನ ಮಾಡುತೆ। ಮಂಗಲ ಶಿವಯೋಗಿಯೆನಿಸಿ ॥
ಚಿನುಮಯ ಪ್ರಭು ॥

ಪದ್ಯ ೮
(ರಾಗ- ದರ್ಬಾರಿಕಾನಡಾ)

ಮಾನವ! ನೀನಾರೋ?। ಕಾಯ-
ಮನ, ಮರತ ನಿನಗಿವೇನೋ? ॥ಪ॥

೧

ಭ್ರಮಾತ್ಮಕ ಸಂಸಾರವಿದು।
ಕುಮತಿಯುತರಬಿಡದೈಸೆ।
ಸುಮತಿಯಿಂ ಬಾಧಿಪುದೈಸೆ ॥

(ಮುಂದೆ ಸಾಗಿದುದು.)

ಶಿವಾನುಭವ.

ವರ್ಷ ೧೨] ಜಾನೇವಾರಿ ೧೯೩೮. [ಸಂಚಿಕೆ ೪

ಹರಿಹರನು ಹೊಗಳಿದ ದಾನವೀರ
ಇಳೆಯಾಂಡ ಗುಡಿವಾರ

(ಲೇ:— ಶ್ರೀ ಚಂದ್ರಶೇಖರ ದೇವರು ಅಡ್ನೂರ, ಮುಕ್ಕಾಂ ಶ್ರೀ ಸರ್ವಭೂಷಣಮಠ ಬೆಂಗಳೂರ.)

ಕವಿ ಹರಿಹರ. ಕಾವ್ಯ ಇಳೆಯಾಂಡ ಗುಡಿವಾರರ ಮಹಾತ್ಮ್ಯ ಕೇಳುವದೇನು? ಸಾಹಿತ್ಯದ ಸುಗ್ಗಿಯೇ ಸುಗ್ಗಿ. ಅದರಲ್ಲಿ ಕಾವ್ಯ ಸಾಹಿತ್ಯವೂ ಉಂಟು. ಭಕ್ತಿ ಸಾಹಿತ್ಯವೂ ಉಂಟು. ಆದರಲಿ. ಆ ಕಥಾನಾಯಕನ ಹೆಸರಿನಲ್ಲಿಯೇ ಒಂದು ಬಗೆಯ ಅವ್ಯಕ್ತ ಮಾಧುರ್ಯ ಬೆರೆತಿದೆ. ಅನುಪಮ ಸೌಂದರ್ಯವಿದೆ. ಆ ಹೆಸರಿನಲ್ಲಿರುವ ಹ್ರಸ್ವ-ದೀರ್ಘ ಸ್ವರಗಳು, ಕವಿಯು ಕಾವ್ಯವಲ್ಲಿ ಹೆಣೆದಂತೆ, ಆ ಹೆಸರಿಗೆ ಹೆಚ್ಚು ಶೋಭೆ ತಂದಿವೆ. ಇನ್ನೊಮ್ಮೆ ಅಂದು ನೋಡಿ! ಇಳೆ-ಯಾಂಡ-ಗುಡಿ-ವಾರ! ಆಹಾ! ಇಳೆಗೆಲ್ಲ ಪ್ರಿಯಕರ; ಒಳಗೆಲ್ಲ ಮೃದು ಮಧುರ +

ಸಾಧಾರಣವಾಗಿ ಒಂದೊಂದನ್ನು ದಾನವಮಾಡಿ ಜಗತ್ತಿನ ಜನರ ಅನುರಾಗಕ್ಕೆ ಕಾರಣರಾಗುವದನ್ನು ನಾವು ಕಣ್ಣಾರೆ ಕಾಣುವೆವು. ತಮ್ಮ ಜೀವಿತವನ್ನು ಹಾಳುಮಾಡಿಕೊಳ್ಳದೆ ಧನ ದಾನವಮಾಡಿದ ತ್ಯಾಗ

+ ಕರ್ನಾಟಕ ಕವಿಚಕ್ರವರ್ತಿಯಾದ ಸುರಂಗ ಕವಿಯು (ಸು. ೧೫೦೦) ತನ್ನ ಪ್ರಸ್ತುತ ಪೌರಾಣ ವಿಲಾಸದಲ್ಲಿ—ಎಳೆಯಾರ ಗುಡಿಯುಂಬುದೊಂದು ಊರು. ಆ ಊರಲ್ಲಿ ಈಶಾನಮುನಿಯಿಂದ ಇವನಿಗೆ 'ಎಳೆಯಾಂಡ ಗುಡಿವಾರ' ನೆಂದು ಹೆಸರು ಬಂದಿತು. ಈತನ ಜನ್ಮ ಸ್ಥಳವನ್ನು. ಎಂದು ತಿಳಿಸುತ್ತಾನೆ.

ರಾಜ-ಲಿಂಗರಾಜರು, ಧರ್ಮವೀರ ವೀರಸಂಗಪ್ಪನವರು, ದಾನಶೀಲ ಶಂಕರೆಣ್ಣನವರು ಯಾರಿಗೆ ಅಪ್ರಿಯರು? ಭಕ್ತಿಭಾಂಡಾರ-ಸಾಹಿತ್ಯ ಸಂಪತ್ತುಗಳನ್ನು ಸೂರೆ ಮಾಡಿದ ಬಸವಣ್ಣನು ಯಾರಿಗೆ ಬೇಸರ? ವೈರಾಗ್ಯ-ಸೌಭಾಗ್ಯ ಜ್ಞಾನ ಧನಗಳನ್ನು ನೀಡಿದ ಪ್ರಭು-ಚನ್ನಬಸವಣ್ಣರು ಯಾರಿಗೆ ನಿಂದ್ಯರು? ಎಲ್ಲರಿಗೂ ಪ್ರಿಯರು. ಎಲ್ಲರಿಗೂ ಪೂಜ್ಯರು. ಅಂದಮೇಲೆ ಬೇಡಿದವರಿಗೆ ಬೇಡಿದುದನ್ನು ಕಡು ನೇಹದಿಂದ ಕೊಡುವದಲ್ಲದೆ ಪ್ರಸಂಗ ಬಂದರೆ ಪಂಚಪ್ರಾಣಗಳನ್ನು ಈಡಾಡಿ ಬಿಡುವವರು ಯಾರಿಗೆ ತಾನೆ ಅಪ್ರಿಯರಾಗಬಲ್ಲರು? ಆದ್ದರಿಂದಲೇ ಕವಿಯು ಇಂತು ಬಣ್ಣಿಸುವನು.

"ಇಂದುಧರ ನಿನ್ನ ಬೆರಸಿ-।
ವಂದಿನ ಇಳೆಯಾಂಡ ಗುಡಿವಾರರ ಚರಿತೆಯ ॥
ಸಂದಣಿಪ ಮಧುರ ವಚನಗ-।
ಳಿಂದೊರೆವೆಂ ಕೇಳಯ್ಯ ಹಂಪೆಯ ವಿರೂಪಾಕ್ಷ" ॥

'ಸಂದಣಿಪ ಮಧುರ ವಚನಂಗಳಿಂದೊರೆವೆಂ' ಎಂಬ ಕವಿಯ ಈ ಮಧುರವಾದ ಮಾತೇ ನಮ್ಮ ಕಥಾನಾಯಕನ ಹೆಚ್ಚಳಿಕೆಯ ಹೆಸ್ಸರುತ್ತು. ಏಕೆಂದರೆ ಹಿಂದೆ ಹೇಳಿದ ತಿರುನೀಲಕಂಠ, ಕಣ್ಣಪ್ಪ, ಅನಾಯನಾರ ಮೊದಲಾದವರ ಕಥೆಗಳ ಆದಿ ಕಂದ ಪದ್ಯಗಳಲ್ಲಿ ಕವಿ ತರಹದ ನಲ್ನುಡಿಯು ಕವಿಯಿಂದ ಹೊರಬಿದ್ದಿಲ್ಲ. ತನ್ನ ಜೀವಿತದಲ್ಲಿಯೇ ತನ್ನ ಸರ್ವಸ್ವವನ್ನೆಲ್ಲ ಭಕ್ತರ್ಗಿತ್ತು ಮಹಾದಾನಿಯಾದ ಶಿವಶರಣನಿಗೆ ಹಿಂದಿನವರಿಗಿಂತಲೂ ಹೆಚ್ಚಾಗಿ ನಾಲ್ಕು ಮೃದು ಮಧುರ ಮಾತುಗಳನ್ನಾಡಿದರೂ ದಾನವಾಡಿ ಕೃತಾರ್ಥನಾಗುವೆನೆಂಬ ಸದ್ಭಾವ ಪೂರಿತನಾಗಿಯೇ ಕವಿಯು 'ಸಂದಣಿಪ ಮಧುರ ವಚನಂಗಳಿಂದೊರೆವೆಂ' ಎಂದು ಎದೆದುಂಬಿ-ಬಾಯ್ದುಂಬಿ ಬಣ್ಣಿಸಿರಬೇಕು. ತನ್ನೀ ಸಹಜತೆಯಿಂದ ಕವಿಯ ಹೃದಯವನ್ನೇ ಆಕರ್ಷಿಸಿದ ಆ ಇಳೆಯಾಂಡ ಗುಡಿವಾರರ ಸ್ಥಾನಮಾನಗಳಿಗಾಗಿ ನಾನು ಬೇರೆ ಬರೆಯಬೇಕಾಗಿಲ್ಲ. ನಿಮಗಾಗಿ ಬರೆಯುವ ಮನಸ್ಸೂ ಇಲ್ಲ. ಆದರೆ 'ಮೃದು ವಚನಂಗಳಿಂದೊರೆವೆಂ' ಎಂದು ಪೀಠಿಕೆಯಲ್ಲಿಯೇ ಪ್ರತಿಜ್ಞೆಮಾಡಿ ರಚಿಸಿದ ಹರಿಹರ ದೇವನ ಕೃತಿಯ ಮಾಧುರ್ಯವನ್ನು ಮನನಮಾಡಿ ಮರೆಯಲು ಬಲ್ಲವರಿಂತಿಲ್ಲ. ಆದ್ದರಿಂದ ಆ ಕಡೆಗೆ ಲಕ್ಷಣಹೊತ್ತು ಹೊರಳೋಣ!

ಜನುಮನ್ನು ಸ್ವಲ್ಪ ಕಾಲ ಸವಿಯೋಣ!! ಆ ಆನಂದದಿಂದ ಒಂದರಗಳಿಗೆಯಾದರೂ ನಡೆಯೋಣ!!!

ದ್ರಾವಿಡ (ಚೋಳ) ದೇಶವು ಪುರಾತನರ ನೆಲವೀಡು. ಪರಮಾತ್ಮನ ಪರಮ ಪ್ರೀತಿಯ ನಾಡು. ಅಂತಹ ಆ ದೇಶದಲ್ಲಿ ಪೆರಿಯವು ಮುದುವೂರ. ಆ ಪುರದಲ್ಲಿ ಇರುವನೊಬ್ಬ ಆತ್ಮ ಕೃಷಿಕಾರ; ಅತುಲ ಸಾಧುಕಾರ. ಅವನೇ ನಮ್ಮ ಇಳೆಯಾಂಡ ಗುಡಿವಾರ.

ಆ ಆತ್ಮ ಕೃಷಿಕಾರನಾದ ಇಳೆಯಾಂಡ ಗುಡಿವಾರನಿಗೆ ಸಮಸ್ತವೇ ಭೂಮಿ, ಶಿವನ ನೆನಹೇ ನೇಗಿಲ, ಅರಿಷಡ್ವರ್ಗವೇ ಆರೆತ್ತುಗಳಾಗಿವೆ. ಹರಿವ ಮನವೇ ಹಿಡಿವ ಹಗ್ಗ, ಅಹಂಕಾರವೇ ಅಚ್ಚು, ಶಿವನಿಷ್ಠೆಯೇ ಬೀಜಗಳಾಗಿವೆ. ಶಿವಜ್ಞಾನವೇ ಅಂಕುರ, ಪರಮಾನಂದವೇ ಮುಳಿ, ಸದ್ಭಕ್ತಿಯೇ ಬೆಳೆಗಳಾಗಿವೆ. ಹೀಗೆ ಅಲೌಕಿಕವಾದ ಆತ್ಮಕೃಷಿ (ಸದ್ಗುಣ ಸಂಪಾದನೆ-ಸತ್ಯಸುಖಾಸ್ವಾದನೆ) ಯಲ್ಲಿ ನಿರತನಾಗಿದ್ದನು.

ಹೆಚ್ಚಾಗಿ ಹೊರಗಿನ ಹೊಲವನ್ನೇ ಹರಗಿ ಹರಸಿಗೆ ಹೊರಗಾಗುವ ಒಕ್ಕಲಿಗರೇ ಎಲ್ಲೆಲ್ಲಿಯೂ ಸಿಕ್ಕುವದು ಬಹಳ. ತಮ್ಮ ಶರೀರವೆಂಬ ಹೊಲ ಹಸನವಾಡಿ ಹರಸೊಳಗಾಗುವ ವಿಕ್ಕಿದ ಒಕ್ಕಲಿಗರು ಸಿಕ್ಕುವರು ವಿರಳ. ಈ ಹೊರಗಣ ಹರಗಣೆಯಿಂದ ಶರೀರೋನ್ನತಿಯಾದೀತೆ ಹೊರತು ಆತ್ಮೋನ್ನತಿಯಾಗದು. ಪ್ರತಿಯೊಬ್ಬನಿಗೂ ಎರಡು ಅಂಗಗಳುಂಟು. ಒಂದು ಅಂತರಂಗ, ಇನ್ನೊಂದು ಬಹಿರಂಗ. ಈ ಎರಡೂ ಅಂಗಗಳನ್ನು ಉನ್ನತಿಗೊಳಿಸುವದೇ ಪ್ರತಿಯೊಬ್ಬರ ಮುಖ್ಯ ಕರ್ತವ್ಯ. ಆದರಿದನ್ನು ಮರೆತು ಕೇವಲ ಬಹಿರಂಗ ಬೆಳವಣಿಗೆಯ ಬಲವಾದ ಬಲೆಗೆ ಬಿದ್ದು ಬಾಹ್ಯ ಕೃಷಿಕರ್ಮಕ್ಕೇನೆ ತಮ್ಮ ಅಮೂಲ್ಯವಾದ ಇಡೀ ಜೀವನವನ್ನೇ ತೆತ್ತುವರು. ಕೊನೆಗೆ ಮೃತ್ಯುವೇ ಪತಿಯಾಗುವರು. ಅವರಿಗೆ ಲಿಂಗಕಲೆ-ಲಿಂಗಸುಖಗಳೆಂಬುವು ಎತ್ತೋ ಬಳಿಯುವವು. ಇಷ್ಟೇ ಅಲ್ಲ. ಭೂರಂಗದ ಬಲೆಗೆ ಬಿದ್ದು ಬಹಿರಂಗವನ್ನು ಹಾಸುಮಾಡಿಕೊಳ್ಳುವ ಎಷ್ಟೋ ಜನರಿರುವರು. ಹೀಗಾಗುವದು ಸಾಮಾನ್ಯ ಮಾತ್ರರಿಗಲ್ಲ. ಶರಣ ಶ್ರೇಷ್ಠನಾದ ಗೊಗ್ಗಯ್ಯನೂ ಕೂಡಿ ಒಮ್ಮೆ ಭ್ರಾಂತಿಗೊಂಡು ಬಾಹ್ಯ ತೋಟ ಪಟ್ಟಿಯಲ್ಲಿ ಆಸಕ್ತನಾಗಿರುವಾಗ ಅದನ್ನು ನೋಡಿ ಅಲ್ಲಮಪ್ರಭುವು—

"ತನುವ ತೋಟವಮಾಡಿ, ಮನವ ಗುದ್ದಲಿಯಮಾಡಿ, ಆಗಿದು ಕಳೆದನಯ್ಯ ಭ್ರಾಂತಿಯ ಬೇರು. ಒಡೆದು ಸಂಸಾರದ ಹೆಂಟೆಯ ಬಗೆದು ಬಿತ್ತಿದನಯ್ಯ ಬ್ರಹ್ಮ ಬೀಜವ. ಅಖಂಡ ಮಂಡಲವೆಂಬ ಬಾನಿ, ಪವನವೆ ರಾಟಾಳ. ಸುಷುಮ್ನದಿಂದುದಕವ ತಿದ್ದಿ, ಬಸವಗಳೈನರು ಹಸಗೆಡಿಸಿಹವೆಂದು-ಸಮತೆ-ಸೈರಣೆಯೆಂಬ ಬೇಲಿಯನಿಕ್ಕಿ, ಆವಾಗಳೂ ಆ ತೋಂಟದಲ್ಲಿ ಜಾಗಂವಿದ್ದು ಸಸಿಯ ಸಲಹುವನು ಕಾಣಾ ಗುಹೇಶ್ವರಾ."

ಎಂದು ಸಂಬೋಧಿಸಿ, ಒಳ ತಿರುಳನ್ನು ತಿಳಿಸಿ, ಕೇವಲ ಬಾಹ್ಯ ಕೃಷಿ ಕರ್ಮವಲ್ಲಿ ನಿರತರಾದ ಗೊನ್ಗಯ್ಯಗಳನ್ನು ಆತ್ಮ ಕೃಷಿಗಳನ್ನಾಗಿ ಮಾಡ್ಡಿ, ಪ್ರಮಾಣವಾಡುತ್ತ ಬರಲು, ಇತ್ತ ಸೊನ್ನಲಾಪುರದಲ್ಲಿ ಶ್ರೇಷ್ಠ ಶಿವಯೋಗಿಯಾದ ಸಿದ್ಧರಾಮನು ಕೆರೆಕಾಲುವೆ-ಗುಡಿಗೋಪುರಗಳನ್ನು ಕಟ್ಟಿಸುವ ಬಾಹ್ಯ ಕರ್ಮವನ್ನು ಕಂಡು ಕನಿಕರಬಟ್ಟು—

"ತನುವೆಂಬ ಏರಿಗೆ ಮನವೆಂಬ ಕಟ್ಟಿ, ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ ತುಂಬಿ, ಕೆರೆಯ ಕಟ್ಟ ಬಲ್ಲವರಾರನೂ ಕಾಣೆ. ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರನಿವ್ಮಾಣೆ." ಈ ತೆರೆದ ಕೆರೆಯ ಕಟ್ಟುವದನ್ನು ಬಿಟ್ಟು—

"ಈ ಬಾಹ್ಯ ಕೆರೆಯ ಕಟ್ಟಿಸುವ ಒಡ್ಡನ ಪ್ರತಾಪವೇನೆಂಬೆನಯ್ಯಾ? ನೆಲವನಗಿದು ಜಲವ ತೆಗೆದೆನೆಂಬ ಬಳಲಿಕೆಯ ನೋಡಾ! ಒಂದ ಕಲ್ಲು ಕಡಿದು ಮತ್ತೊಂದು ಕಲ್ಲಿಗೆ ಭೋಗವ ಕೊಟ್ಟೆಹೆನೆಂಬ ಅಜ್ಞಾನವಿದೇನೊ ಗುಹೇಶ್ವರಾ! ಈ ಇರವಿನ ಪರಿಗೆ ಬೆರಗಾದೆನು."

ಎಂದು ಆತ್ಮ ಕಳಕಳಿಯಿಂದ ಹೇಳುತ್ತ ಎಲೊ ಸಿದ್ಧರಾಮಾ!

"(ಇಂತು) ಅನ್ನವಸಿಕ್ಕಿ ನನ್ನಿಯ ನುಡಿದು, ಅರವಟ್ಟಿಗೆಯನಿಕ್ಕಿ ಕೆರೆಯ ಕಟ್ಟಿಸಿದರೆ, (ನಿನಗೆ) ಮರಣದಿಂದ ಮೇಲೆ ಸ್ವರ್ಗವುಂಟಲ್ಲದೆ ಶಿವನ ನಿಜವು ಸಾಧ್ಯವಾಗದು....."

ಎಂದು ವಿಧವಿಧವಾಗಿ ತಿಳಿಹೇಳಿ ಕೊನೆಗೆ ಅಂತರಂಗದ ಶುದ್ಧಿಯೂ ಶ್ರೇಷ್ಠವಾದುದು. ಅದನ್ನು ಮೊದಲು ಮಾಡಿಕೊಳ್ಳಬೇಕು. ಅದಿಲ್ಲದೆ

ಇದೆಲ್ಲ ರಸವಿಲ್ಲದ ಹಣ್ಣಿನಂತೆ, ಆತ್ಮವಿಲ್ಲದ ದೇಹದಂತೆ, ವ್ಯರ್ಥವಾದುದು ಎಂದು ಬೋಧಿಸಿ ಮನಸ್ಸನ್ನು ತಿರುಗಿಸಿರುವನು.

ಇದೆಲ್ಲ ಅಭಿಪ್ರಾಯವನ್ನು ಬೊಬ್ಬುಳಿಗೂಡಿಸಿ ಹಾಡುಗಬ್ಬ ಮಾಡಿ ಸರ್ವಭೂಷಣ ಶಿವಯೋಗಿಗಳು ಎಷ್ಟೊಂದು ಸೊಗಸಾಗಿ-ಸರಸಾಗಿ ಪಾಡಿರುವರು ನೋಡಿ! ಇಲ್ಲಿ ಆ ಹಾಡನ್ನು ಹೇಳದೆ ಹೃದಯದ ಪುರುಪು ಹಿಂಗದು. ಹಂಬಲ ತಂಗದು.

ಶರೀರವೆಂಬೆಂಬುವ ಹೊಲನ ಹಸನವಮಾಡಿ। ಪರತತ್ವ ಬೆಳೆಯನೆ
ಬೆಳೆದುಣ್ಣೋ ॥ಪ॥
ಶಮೆ-ದಮೆಯೆಂದೆಂಬುವೆರಡೆತ್ತುಗಳ ಹೂಡಿ। ವಿಮಲ ಮಾನಸವ
ನೇಗಿಲವ ಮಾಡಿ ॥
ಮುಮುಕ್ಷಾವೆಂದೆಂಬ ಕರಕಿಯ ಕಳೆದಿಟ್ಟು। ಸಮತೆಯುಂತೆಂಬ
ಗೊಬ್ಬರವ ಚಲ್ಲಿ ॥೧॥
ಗುರುವರನುಪದೇಶವೆಂಬ ಬೀಜವ ಬಿತ್ತಿ। ಮೆರೆವ ಸಂಸ್ಕಾರ
ವೃಷ್ಟಿಯ ಬಲದಿ ॥
ಅರಿವೆಂಬ ಪೈರನೆ ಬೆಳಿಸುತೆ ಮುಸುಕಿರ್ದ। ದುರಿತ ದುರ್ಗುಣವೆಂಬ
ಕಳೆಯುಕಿತ್ತು ॥೨॥
ಸ್ಥಿರ ಮುಕ್ತಿಯೆಂತೆಂಬ ಧಾನ್ಯವ ಬೆಳಿದುಂಡು। ಪರಮಾನಂದದೊಳು
ದಣ್ಣನೆ ದಣಿದು ॥
ಗುರುಸಿದ್ಧನಡಿಗಳಿಗೆರಗುತ್ತ ಭವವೆಂಬ। ಬರವನು ತನ್ನ ಸೀಮೆಗೆ
ಕಳುಹಿ ॥೩॥

ನೋಡಿರಿ! ನಮ್ಮವರು ಭೋಗಶಾಲಿಗಳು-ತ್ಯಾಗಶೀಲರು. ಸ್ವಾರ್ಥತ್ಯಾಗಿಗಳು-ಆತ್ಮವೀರರು. ಹತರೋಗಿಗಳು-ಜಿತರಾಗಿಗಳು. ಶುಭಭಾಗಿಗಳು-ಶಿವಯೋಗಿಗಳು. ಲೌಕಿಕ ಪಾರಮಾರ್ಥವೆರಡನ್ನು ಕೂಡಿ ನಡಿಸಿದರು. ನಡೆದಂತೆ ನುಡಿದರು. ನುಡಿದಂತೆ ನಡೆದರು. ಮನೆ ಹಿಡಿದು ಭೋಗಪಡೆಯಿರಿ. ಮನ ಹಿಡಿದು ಮೋಕ್ಷಗಳಿಸಿರಿ. ಎಂದು ಸಾರಿದರು. ಬಯಿಸಿ ಬೆಂನು ಹೋಗಬೇಡಿರಿ. ಭಜಿಸಿ ಬರವ ಹರಿದು ಧನ್ಯ ಜೀವಿಗಳಾಗಿರಿ ಎಂದು ತಿಳಿಹೇಳಿದರು. "ಬಯಸದೆ ಭೋಗ-ಮೋಕ್ಷ ಪರರಪ್ಪುದು ಚಿತ್ರವಲಾ ಶಿವಾಧವಾ" ಎಂಬುದಾಗಿ ಮಹಾಮೇಧಾವಿಗಳಾದ ಮೊಗ್ಗೆಯ ಮಾಯಿದೇವರೂ ಸಹ ಅಚ್ಚರಿಗೊಂಡು

ಉದ್ಗಾರ ತೆಗೆದಿರುವರು. ಈ ತೆರನಾಗಿ ಸರ್ವಾಂಗ ಸುಂದರವಾದ ವೀರಶೈವರ ಸಿದ್ಧಾಂತ ವಿಷಯವಲ್ಲಿ ನಾವೆಷ್ಟು ಬರೆದರೂ ಸ್ವಲ್ಪವೇ.

ಇದನ್ನೆಲ್ಲವನಂತ ನಮ್ಮಿಳೆಯಾಂಡ ಗುಡಿಮಾರರು ನಿಷ್ಠಾಮಿಗಳಾಗಿ ಒಳಗೆ ಭವನ ಭಕ್ತ್ಯಾರಂಭವನ್ನೂ ಹೊರಗೆ ಭುವನ ಕೃಷಿಕರ್ಮವನ್ನೂ ನಿರವೇರಿಸುತ್ತಿದ್ದರು. ಹೀಗಿರುವ ಇಳೆಯಾಂಡ ಗುಡಿಮಾರರು ಸಾಕಷ್ಟು ಸಾವುಕಾರರೂ ಇದ್ದರು. ವಿಪುಲವಾದ ಭೂಮಿ-ಸೀಮೆಗಳೂ ಅವರಿಗಿದ್ದವು. ದೊಡ್ಡ ಮನೆಯೂ ಇತ್ತು. ಮನೆಯಂತೆ ಮನವೂ ಹಿರಿದಾಗಿತ್ತು. ಹೀಗಿದ್ದ ಅವರ ಅಂತರಂಗ-ಬಹಿರಂಗಗಳ ಸಂಪತ್ತಿನ ಸ್ಥಿತಿಯನ್ನು ಕವಿಯು ಇಂತು ಬಣ್ಣಿಸುವನು.

ಏನೆಂಬೆನಿತ ಭಕ್ತಿ ಸಿಯ ಬೆಳಿಸಿರಿವಂತ। ಆನಂದದಿಂ ಶರಣತತ್ತೀ
ಗೀವ ಮತಿವಂತ॥
ಧರೆಯೆನಿತು ಉಂಟಿನಿತು ಭೂಮಿಯಾತುಂಗುಂಟು। ಹರನ ಕರುಣಂ
ಆತನಲ್ಲಿ ಪಿರಿದಾಗುಂಟು॥
ಅದರೊಳಾವ ಬೆಳಸನೀವ ಶರಣರ ಬಂಟ। ಮುದಮುಖಮುದೊಂದಿಲ್ಲ
ದೀವ ಭಕ್ತರನಂಟ॥

ಹೀಗೆ ಅತುಲವಾದ ಆತನ ಉಭಯ ಸಂಪತ್ತನ್ನು ಚಿತ್ರಿಸಿ ಆ ಮೇಲೆ ಆತನು ದಾನ ಮಾಡುವ ರೀತಿಯನ್ನು ಹೇಳುವನು. ಏಕೆಂದರೆ ಧನ ವಿದ್ವಜ್ಜನಿಗೆ ದಾನ ಮಾಡುವವೆ ಭೂಷಣವಾದುದು. ತಲೆಗೆ ವಂದನವು, ಬಾಯಿಗೆ ಸತ್ಯ ಮಾತು, ಹೃದಯಕ್ಕೆ ವಿಶುದ್ಧತೆಗಳು ಭೂಷಣವಾದಂತೆ ಹಸ್ತಕ್ಕೆ ದಾನಗುಣವೇ ಭೂಷಣವಾಗಿದೆ. ಒಂದ ಪಕ್ಷ ಯಾರಾದರೂ ದಾನ ಮಾಡದೆ ತನಗೆ ತನ್ನ ಮಕ್ಕಳಿಗೆ ಎಂದು ಬಯಸಿ ಬಚ್ಚಿಟ್ಟರೆ ಅದಕ್ಕೆ ಯಾವ ಪ್ರಯೋಜನವಿಲ್ಲ, ಪುಣ್ಯವೂ ಇಲ್ಲ. ಆದ ಕಾರಣ "ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ" ಎಂದು ಗಂಡುಗವಿಯಾದ ಸರ್ವಜ್ಞನು ಬೋಧಿಸುತ್ತಾನೆ. ಕೊಟ್ಟದ್ದು ಮುಂದೆ ಕಟ್ಟಿಟ್ಟ ಬುತ್ತಿಯೆಂದು ಎಚ್ಚರಗೊಟ್ಟಿದ್ದಾನೆ. ಹಾಗು ಈಗಿನ ವಾತಾವರಣದಂತೆ ಧನವಂತರು ದರಿದ್ರರಿಗೆ ಕೊಡುವದು ವಿಶ್ವಬಂಧುತ್ವದ ಲಕ್ಷಣವೂ ಆಗಿದೆ. ಆದ್ದರಿಂದಲೇ ಕವಿಯು ಕೊನೆಯ ಸಾಲಿನಲ್ಲಿ ಕೊಡುವದರಲ್ಲಿ 'ಶರಣರ ಬಂಟ' ಕಿಂಕರತೆಯಲ್ಲಿ 'ಭಕ್ತರ ನಂಟ, ಆಗಿದ್ದನು ಇಳೆಯಾಂಡ

ಗುಡಿಮಾರನು' ಎಂದು ಹೇಳಿ ತಾನು ಮೊದಲು ಮಾಡಿದ 'ಮಧುರ ವಚನಂಗಳಿಂದೊರೆವೆಂ,' ಎಂಬ ಪ್ರತಿಜ್ಞೆಯನ್ನು ಸಾರ್ಥಕ ಮಾಡಿಕೊಂಡಿದ್ದಾನೆ. ಇವಲ್ಲದೆ

ಒಳಿತಂ ಸೊಗಸಿತಂ ಶಿವನ ಭಕ್ತಗರ್ಪಿಪ। ಉಳ್ಳವ್ಯವ್ಯಂಗಳಂಭುವನ
ಭಕ್ತಗರ್ಪಿಪ॥
ಎಲ್ಲ ತೇಜಂಗಳಂ ಶರಣ ತತಿಗೀವುತುಂ। ಉಳ್ಳವ್ಯವ್ಯಂಗಳಂ ಭಕ್ತಗೆ
ಸಾರ್ಚುತುಂ॥
ಬಟ್ಟ ಬೆಸನಂ ಶಿವನ ಭಕ್ತಗೇ ಮಾಡುವಂ। ಕೊಟ್ಟು ತಣಿವಿಲ್ಲದನು
ತಾಪದಿಂ ಬಾಡುವಂ॥

ಇನಿತು ಮಾಡುವ ದಾನವನ್ನಾದರೂ ಪಾತ್ರಾಪತ್ರವನ್ನರಿತು ಮಾಡುತ್ತಿದ್ದನು. ದಾನದಲ್ಲಿಯೂ ಸಾತ್ವಿಕ, ರಾಜಸ, ತಾಮಸವೆಂದು ಮೂರು ಬಗೆ. ಇವಕ್ಕೇನೆ ವೀರಶೈವರು ಉಪಾಧಿ ಮಾಟಸ್ಥಲ (ತಾಮಸ) ನಿರುಪಾಧಿ ಮಾಟಸ್ಥಲ (ರಾಜಸ) ಸಹಜ ಮಾಟಸ್ಥಲ (ಸಾತ್ವಿಕ) ವೆಂದು ಹೇಳುವರು. ಇವುಗಳನ್ನೊಳಗೊಂಡೇ ಭಕ್ತಿಸ್ಥಲವು ಪೂರ್ತಿಗೊಳ್ಳುವದು. ಪಾತ್ರಗಳನ್ನರಿತು ಪ್ರತಿಫಲ ವಾಂಛಿಸದೆ ಕೊಡುವ ದಾನವೇ ಸಾತ್ವಿಕ ದಾನವು. ಪ್ರತ್ಯುಪಕಾರ ಪಡೆಯಬೇಕೆಂದಾಗಲಿ, ಹೇಮ-ಸೀಮೆ, ಪುತ್ರ-ಕಲತ್ರ, ಮೊದಲಾದ ಫಲಗಳ ಬಯಿಕೆಯಿಂದಾಗಲಿ ಮಾಡುವ ದಾನವೇ ರಾಜಸದಾನ. ದೇಶ ಕಾಲ-ಪಾತ್ರಗಳನ್ನರಿಯದೆ ದುಷ್ಟಟಗಳಿಗೆ ವ್ಯಯ ಮಾಡುವ ದುರ್ಜನರಿಗೆ ಕೊಡುವ ದಾನವೇ ತಾಮಸದಾನ. ಇವುಗಳಲ್ಲಿ ತಾಮಸದಾನಕ್ಕೆ ಯಾವ ಪುಣ್ಯ ಫಲವಿಲ್ಲ. ಪ್ರತಿಯಾಗಿ ಪಾಪವೇ ಅವರ ಬೆನ್ನಿಗೆ ಬೀಳುವದು. ರಾಜಸದಾನಕ್ಕೆ ಪ್ರತಿಫಲ ಸಿಗುವದಾದರೂ ಅದು ಕ್ಷಣಿಕ. ಸಾತ್ವಿಕಕ್ಕೆ ಸಿಗುವದು ಪಾರತರ ಫಲ, ಸ್ವರ್ಗವೊಳಗಾಗುವ ಸುಖ. ಆ ಸಾತ್ವಿಕ ದಾನವೇ ದಾನ. ಆದ್ದರಿಂದಲೇ ಪರಹರ ದೇವನು "ಒಳಿತಂ ಸೊಗಸಿತಂ ಶಿವನ ಭಕ್ತಗರ್ಪಿಪ" ಎಂದು ಹೇಳಿ ಇಳೆಯಾಂಡ ಗುಡಿಮಾರನು ಸಾತ್ವಿಕದಾನ (ಸಹಜ ಮಾಟಸ್ಥಲ) ವನ್ನೆ ಆಚರಿಸುತ್ತಿದ್ದನೆಂದು ಚನ್ನಾಗಿ ಬೋಧಿಸುತ್ತಾನೆ.

ಹೀಗೆ ಇಳೆಯಾಂಡ ಗುಡಿಮಾರರು ದಾನಿಗಳೆಂದು ಧರಣಿಯೊಳೆಲ್ಲ ಹಬ್ಬಿದೆ. ಹಬ್ಬವದೇ ತಡ! ಸಾಲ್ಕು ಕಡೆಯಿಂದಲೂ ಸಕ್ಕರೆಗೆ ಇರುವೆ

ಮುಕ್ಕುರುವಂತೆ, ಮಾವಿನ ತಳಿರಿಗೆ ಕೋಗಿಲೆಗಳಿರಗುವಂತೆ, ಪರ ಕ್ಷಣರು ಯಾಚಕರಾಗಿ ಅತಿಥಿಗಳಾಗಿ ನೆರೆಯ ತೊಡಗಿದ್ದಾರೆ. ಈತನಾಗಿ ಮೇರೆದಪ್ಪಿ ತಂಡೋಪತಂಡವಾಗಿ ಬರುವ ಭಕ್ತರ ಪರಿಯನ್ನು ಕವಿಯ ಬಾಯಿಂದ ಕೇಳೋಣ ಬನ್ನಿ!

ನೆರೆಯತೊಡಗಿತು ಹರನ ಶರಣಕುಲವಳ್ತಿಯಿಂ। ಬರುತವಿರ್ದುದು
ಭೂತಳದ ಭಕ್ತರೊಲ್ಮೆಯಿಂ॥
ಮೆರೆದಪ್ಪಿದ ವಾರ್ಧಿಯಂತಂತೆ ಕವಿವುತಿರೆ। ಧೀರನೋಸರಿಸದೆ ಮಹಾ
ಗಣಂ ಪೊಗಳುತಿರೆ॥

ಕಂಡಿರಾ, ಇಳೆಯಾಂಡ ಗುಡಿಮಾರರ ಮನೋವೈಶಾಲ್ಯವನ್ನು! ಮೇರೆದಪ್ಪಿದ ವಾರುಧಿಯಂತೆ ಬರುವ ಭಕ್ತರನ್ನು ನೋಡಿ ದಾನ ಪ್ರೇಮಿಯಾದ ಇಳೆಯಾಂಡ ಗುಡಿವಾರನು ಬಲಗುಂದದೆ ಬಣ್ಣಿಸುತ್ತ ಬಹುಮಾಡಿಕೊಳ್ಳುವದನ್ನು ನೆನಸಿಗೊಂಡರೆ ಆತನಲ್ಲಿರುವ ಮಿತಿಮೀರುವ ಮನೋವೈಶಾಲ್ಯವೂ ಕರ್ಮಕೌಶಲ್ಯವೂ ಮುಂದು ಬಂದು ನಿಲ್ಲುತ್ತವೆ, ಆತ್ಯಾಶ್ಚರ್ಯವನ್ನುಂಟು ಮಾಡುತ್ತಿವೆ. ಹೀಗೆ ಅಪರಿಮಿತವಾಗಿ ಬರುವ ಭಕ್ತರಿಗೆಲ್ಲ ಕೊಟ್ಟು ಕೊಟ್ಟು ಧನ, ಧಾನ್ಯ, ಕನಕಗಳೆಲ್ಲ ತೀರಿಹೋಗಿವೆ. ಭೂಮಿಯನ್ನು ಮಾರಲು ಮೊದಲು ಮಾಡಿದ್ದಾನೆ. ಮಾರಿ ಮಾರಿ ಭೂಮಿಯೂ ಮುಗಿದಿದೆ. ಭೂಮಿ ಮುಗಿದರೂ ಆತನಲ್ಲಿರುವ ದಾನ ಪ್ರೇಮವು ಮಾತ್ರ ಮುಗಿದಿಲ್ಲ. ಚಿತ್ತದಲ್ಲಿ ಹಿಗ್ಗಿ ಹೆಚ್ಚಿದ್ದಾನೆ. ಹೊಂಗಿ ಹೊರೆಯೇರಿದ್ದಾನೆ. ಮುಂದೆ ಏನು ಕೊಡಲೆಂದು ಯೋಚನೆ. ಉಳಿದುದೊಂದು ತೋಟ. ಅದನ್ನೂ ಮಾರ ತೊಡಗಿದನು. ಅದುವೂ ಆಯಿತು. ಮತ್ತೆ ಉಳಿದುದೊಂದು ಮನೆ. ಆ ಮನೆಯ ಅರ್ಧಭಾಗವನ್ನು ಮಾರಿದ್ದಾನೆ. ಅದೂ ತೀರಿತು. ಮತ್ತೆ ಮತ್ತೆ ಶರಣರು ಬರತೊಡಗಿದ್ದಾರೆ. ಬಂದವರಿಗೆ ಉಟ್ಟುದುದನ್ನು ಹೊದೆದುದನ್ನು ಕೊಟ್ಟಿದ್ದಾನೆ. ಅಪ್ಪು ಮುಗಿದಿವೆ. ಮಗನ ಅರಿವೆಗಳನ್ನು ಕಳಚಿಕೊಟ್ಟಿದ್ದಾನೆ. ಆದರೂ ಬೇಡುವವರ ಕಾಟ ಹಿಂಗಲಿಲ್ಲ. ಅವರಿಗೆಲ್ಲ ತನ್ನರಸಿಯ ವಸ್ತ್ರಾಭರಣಗಳನ್ನೂ ಕೊಟ್ಟುದಾಯಿತು. ಕೊನೆಗೆ—

"ಸತಿಗೊಂದು ಕಪ್ಪಟಂ ತನಗೊಂದು ಕೋವಣಂ। ಸುತನೆನಿಸುವಾತಂಗೆ
ಮತ್ತೊಂದು ಕೋವಣಂ।

ಮಾವರು ನಿಂದಿರ್ಪರನಿತುಮನೆತವಮುಳಿಯೆ। ಈವಡಂತೇನುಮಿಪ್ಪಿದೆ
ನಿಜದಮನ ಉಳಿಯೆ॥

ಓ ಯಾಚಕರೇ! ಸತಿಗೊಂದು ಸುತ್ತಿಗೊಳ್ಳಲು ಸೀರೆ. ತನಗೊಂದು ಕೋವಣ. ತನ್ನ ಮಗನಿಗಿನ್ನೊಂದು ಕೋವಣ. ತಾವ್ ಮೂವರೇ ನಿಲ್ಲಲು ಬೇಕಾಗುವಷ್ಟು ಮನೆ. ಒಮ್ಮನ ಬೀಜ ಬಿತ್ತುವಷ್ಟು ಹೊಲ. ಇವಿಷ್ಟೇ ಉಪಯೋಗಿಸಿದ ಸಂಪತ್ತು. ಇವಿಷ್ಟೇ ಇವರಿಗಾದ ಸುಖದ ಸೊತ್ತು. ಪರಿಸ್ಥಿತಿ ಹೀಗಾದರೂ—

ಇವರೊಳಗೆ ಇಳೆಯಾಂಡ ಕುಡುತುಮಿರ್ದಂ ನೋಡ। ಮುವನ
ಹರಭಕ್ತರ್ಗೆ ಕುಡುತುಮಿರ್ದಂ ನೋಡ॥
ಧನಿತವಸ್ತೆಯೊಳಿರ್ದ ಸುಮನಿರ್ದನೆ ನೋಡ। ಅನುಪಮದ ಭಕ್ತಂಗೆ
ಲೀಲೆ ಮಿಕ್ಕುದು ನೋಡ॥
ಧನವಿಲ್ಲದೊಡೇನು? ಧಾನ್ಯವಿಲ್ಲದೊಡೇನು? ಮನೆಯಿಲ್ಲದೊಡೇನು
ವಿಲ್ಲದೊಡೇನು?
ತನುವಿರ್ದಪುದು ತನುವಿನೊಳಗರ್ಥವಿತ್ತಪೆಂ। ಮನವಿರ್ದಪುದು
ಮನದೊಳರ್ಥಮ ನಿತ್ತಪೆಂ॥
ಧರಣಿವಿಡೆ ಹರಣದೊಳಗರ್ಥಮುಂ ಕೊಟ್ಟಪೆಂ। ಎರಡು ಕಣ್ಣಿಪ
ರಡರೊಳಗೊಂದ ಕೊಟ್ಟಪೆಂ॥
ಇಂತು ಶರಣಾರ್ಥವೀವ ಚಿಂತೆಯುಂ ಚಿಂತಿಸುತೆ। ಮುಂತೆ ತನಗೇನಾದುದಂ
ಕುಡಲ್ಬಿಂತಿಸುತೆ॥

ಓ ನೋಡಿರಿಲ್ಲಿ ದಾನವೀರನ ಧೈರ್ಯ! ದಾನಪ್ರಕಾಂಡನ ಧರ್ಮ!! ಇನ್ನುಸೊತ್ತು ಸಂಪತ್ತುಗಳು ತೀರಿದಷ್ಟು ಅವನ ಉತ್ಸಾಹ-ಉಲ್ಲಾಸ ಸೂರ್ಮಡಿ ಸಾಸಿರಮಡಿ ಹೆಚ್ಚಿ ಹೊರಹೊಮ್ಮಿನೆ. ಹೊಮ್ಮಿನುಡಿ ಮನ ಇಂತು ಹೊರಬಿದ್ದಿವೆ. ಧನವಿಲ್ಲದಿದ್ದರೇನು ತನುವಿಲ್ಲವೇ? ಮನೆ ಮುಗಿದರೇನು ಮನವಿಲ್ಲವೇ? ಭೂಮಿ ತೀರಿದರೇನು ಭಾವವಿಲ್ಲವೇ? ಕಣ್ಣು ಮುಗಿದರೇನು ಕಣ್ಣಿಲ್ಲವೇ? ಇವನ್ನು ಕೊಟ್ಟು ಕೃತಾರ್ಥನಾಗುವೆನು ಎಂದು ಯೋಚಿಸುವನು. ಲೌಕಿಕ ಸಂಪತ್ತು ತೀರಿದರೇನು? ಇಕೋ ಅಲೌಕಿಕವಾದ ಸಂಪತ್ತುಗಳಿವೆ. ಇವನ್ನು ಆತನಿಗೆ ನೀಡಿ ತಣಿ

ಯುವೆನು. ಇದೇ ನನ್ನ ಹೃದಯದ ಚರಮ ಧ್ಯೇಯ. ಇದೇ ನನ್ನ ಜೀವಿತದ ಆದ್ಯ ಕರ್ತವ್ಯ ಎಂದು ಭಾವಿಸಿಕೊಳ್ಳುವನು.

ಇದಕ್ಕೇನೇ ನಮ್ಮವರು ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣವೆಂದು ಹೇಳಿದ್ದಾರೆ. ಕೇವಲ ಬಾಹ್ಯ ಸಂಪತ್ತನ್ನು ಪಾತ್ರವರಿದು ಕೊಡುವ ದಾನವೇ ದಾನವೆಂದು ಹೇಳುವ ಇತರರಿಗಿಂತಲೂ ನಮ್ಮವರು ಈ ವಿಷಯದಲ್ಲಿ ಎಷ್ಟೋ ಮುಂದು ಹೋಗಿರುವರು, ನಿಲುಕದಂತಹ ಸ್ಥಿತಿಯಲ್ಲಿ ನಿಂತಿರುವರು. ಹಿಂದೆ ಹೇಳಿದ ಸಾತ್ವಿಕ ದಾನದಿಂದ ಸ್ವರ್ಗ ಸಿಗಬಹುದು. ಆದರೆ ಅದಕ್ಕೂ ಮೇಲಿನ ಶಾಶ್ವತ ಸುಖ ಸಿಗದು, ಶಿವಸುಖ ಪ್ರಾಪ್ತವಾಗದು. ಅಂತೆಯೇ

"ಅನ್ನವನಿಕ್ಕಿ ನನ್ನಿಯನುಡಿದು ಅರವಟಿಗೆಯನಿಕ್ಕಿ ಕೆರೆಯ ಕಟ್ಟಿಸಿದರೆ ಮರಣದಿಂದ ಮೇಲೆ ಸ್ವರ್ಗವುಂಟಲ್ಲದೆ ಶಿವನ ನಿಜವು ಸಾಧ್ಯವಾಗದು"

ಎಂಬ ಪ್ರಭುವಿನ ವಚನವೂ ಇದನ್ನೇ ಸಮರ್ಥಿಸುತ್ತದೆ. ಬಸವೇಶ್ವರನು ಆತ್ಮಾರ್ಪಣ ಮಾಡಿ ಪ್ರಭುವನ್ನು ಪರಿತುಷ್ಟಿ ಪಡಿಸಿದನೇ ವಿನಹ ಬೇರೆ ಪದಾರ್ಥಗಳಿಂದಲ್ಲ. ಆದ ಕಾರಣ ವೀರಶೈವನಾದವನ ದಾನ ಪರಾಕಾಷ್ಠೆತೆಯು ತ್ರಿಕರಣಾರ್ಪಣದಲ್ಲಿಯೇ ಮುಗಿಯುತ್ತಿದೆ. ಈ ವಿಷಯವನ್ನು ನಮ್ಮವರು ನೂರೊಂದು ಸ್ಥಲಗಳಲ್ಲಿರುವ ಲಿಂಗಸ್ಥಲದ ಪ್ರಸಾದಿ ಸ್ಥಲದಲ್ಲಿ ಬಹು ಸೊಗಸಾಗಿ ವಿಸ್ತರಿಸಿರುವರು. ಅವನ್ನಿಲ್ಲಿ ಉದಾಹರಣೆಯ ಮುಖದಿಂದ ಕಂಡುಕೊಳ್ಳಬಹುದು.

ಕಾಯಾರ್ಪಣ

ದಿಟದಿಂದಂ ಖಗಸಂಕುಳಂ ವಿಟಪಿಯಂ ಸಾರ್ವಂತೆ ತತ್ಕಾಯದಿಂ।
ಸ್ಫುಟವಾಗುದ್ಭವ ಮಾದನೇಕ ಸುಖಮೆಲ್ಲಂ ಲಿಂಗದೊಳ್ ನಾಡೆ ಸಂ।
ಘಟಿಸುತ್ತಿರ್ಪವು ಲಿಂಗ ಸೊಂಕಿನ ಮಹಾ ಸೌಖ್ಯಾದಿ ಭೋಗಂಗಳಂ।
ಪಟುವಾಗಿಂತು ವಿರಾಜಿಪಂ ಲಸದಟಂ ಶ್ರೀ ಸಿದ್ಧಲಿಂಗೇಶ್ವರಾ॥

ಶಿವಭಕ್ತನು ಶಿವನ ಕಾರ್ಯಕ್ಕಾಗಿ ತನ್ನ ಕಾಯವನ್ನು ಸೇವೆಯ ರೂಪದಿಂದ ಅರ್ಪಿಸುವದೇ ಕಾಯಾರ್ಪಣ.

ಕರಣಾರ್ಪಣ.

ಸಕಟಂ ದೇಹವದಿಂತು ಬುದ್ಧಿಯೆ ನಿಜಂ ತತ್ಕಾರಣೇ ಪ್ರಗ್ರಹಂ।
ಪ್ರಕಟಂ ಮಾನಸ ಮಿಂದ್ರಿಯ ಪ್ರಚಯವೇ ತಾಂ ತದ್ಧ್ಯಯಂ ನಾಡೆ ಸಂ॥
ಗಿಕದಿಂದಾತ್ಮನೆ ಭಾವಿಸಲ್ಪಧಿಕನಿತಾರ್ಥಂಗಳಂ ಮಾನಸಾ-।
ಧಿಕದಿಂ ಲಿಂಗ ಮುಖಕ್ಕೆ ನೀಡುವೆನಲಾ ಶ್ರೀಸಿದ್ಧಲಿಂಗೇಶ್ವರಾ॥

ದೇಹಾರ್ಪಣವಾದ ಮೇಲೆ ತನ್ನ ಮನ, ಬುದ್ಧಿ, ಚಿತ್ತ, ಅಹಂಕಾರಗಳೆಂಬ ಅಂತಃಕರಣಗಳನ್ನರ್ಪಿಸುವದೇ ಕರಣಾರ್ಪಣ.

ಭಾವಾರ್ಪಣ.

ತನುವಂ ಮುಟ್ಟಿದ ಮುನ್ನ ಸೋಂಕಿನ ಸುಖಂ ತತ್ತೃಷ್ಣೆತಾನೆಯ್ದಿಯಾ-।
ಮನುಜಂ ಮುಟ್ಟಿದ ಮುನ್ನ ಕಲ್ಪಿತಮದುಂ ಭಾವಕ್ಕೆ ತಾನೆಯ್ದವಂ-॥
ಮನಿಜಂ ಅಂಗಿತಲಿಂಗ ಭಾವದೆ ಮಹಾ ಲಿಂಗಕ್ಕೆ ತತ್ಸೌಖ್ಯಮಂ।
ಜನದಂಗೊಂಡುರೆಮರ್ಪಿಪಾತನೆ ಶಿವಂ ಶ್ರೀ ಸಿದ್ಧಲಿಂಗೇಶ್ವರಾ॥

ಕಾಯ ಕರಣಗಳನ್ನರ್ಪಿಸಿದನಂತರ ಒಳಗಿರುವ ಜೀವ ಭಾವವನ್ನು ಶಿವನಿಗರ್ಪಿಸಿ ಶಿವನ ಸೊತ್ತಾಗಿ ಮಾಡುವದೇ ಭಾವಾರ್ಪಣ. ಈ ರೀತಿ ಶ್ರೀಸಿದ್ಧಲಿಂಗೇಶ್ವರನು ವಚನಗಳ ಸಾರವನ್ನೇ ಸಂಗ್ರಹಿಸಿ ಕಾವ್ಯಮಯವಾಗಿ-ಬಹು ಸುಂದರವಾಗಿ- ಅತಿ ಮನೋಹರವಾಗಿ ಹೆಣೆದಿದ್ದಾನೆ. ಈತನು ರಚಿಸಿದ ಏಕೋತ್ತರ ಶತಸ್ಥಲವು ಒಂದು ಹೊಸ ತರಹದ್ದಾಗಿದೆ. ಅವನ್ನು ಓದುವವರಿಂದ ಏಕೋತ್ತರ ಶತಸ್ಥಲಗಳ ಅನುಭವವು ಸ್ಪಷ್ಟವಾಗಿ ಮನಸ್ಸಿಗೆ ಅಂಟಿಕೊಳ್ಳುತ್ತದೆ. ಅದಲ್ಲದೆ ಗ್ರಂಥಕಾರನ ಕಾವ್ಯ ಶಕ್ತಿಯೂ ವ್ಯಕ್ತವಾಗುತ್ತದೆ. ಅದಿರಲಿ.

ಈ ತೆರನಾಗಿ ದಾನ ಮಾಡಲು ಮನಸ್ಸು ಮಾಡಿದ ಇಳೆಯಾಂಡ ಗುಡಿವಾರರಿಗೆ ತೊಂಬತ್ತೈದು ವರುಷಗಳು ಸಂದಿವೆ. ಈತನ ದಾನ ಗುಣವನ್ನು ಪರೀಕ್ಷಿಸಿ ಪರಮ ಸುಖವನ್ನೀಯುವೇಕೆಂಬ ಮನಸ್ಸು ಪರ ಶಿವನಿಗೆ ಬಂದಿದೆ. ಬಂದುದೇ ತಡ—

ಅಳವಡಿಸಿಕೊಂಡನೊಲ್ಬಿಂತೊಂದು ಜೋಗವಂ। ಇಳಿಗೆ ವಿುಗೆ
ಪೊಸತೆನಿಪ ಶತವೃದ್ಧ ಭಾವಮಂ॥
ಶಿರವನೆರೆ, ಮೆಯ್ಯತೆರೆ, ಕರದಕೋಲಿಂದೆಸೆದು। ಸುರುಳ್ದತನು, ಕೂತ್
ಜೆನಾ ಜೋಲ್ದಪುರ್ಬಿಂದೆಸೆದು॥
ಜೋಳದೇಶ ಪ್ರಾಂತಮುಂ ಹರ್ಷದಿಂ ಪೊಕ್ಕು। ಶೂಲಿಭಕ್ತನಮನವ
ನೋಡಲ್ಮನಂ ವಿುಕ್ಕು॥

ಎಂತಹ ಕನಿಕರ ರೂಪು! ಎಷ್ಟೆಂದು ವಿಕಾರವೇಷ! ನೂರು ವರುಷದ ಮುದುಕ. ತಲೆಯಲ್ಲೆಲ್ಲ ನೆರೆ. ಮೈಯ್ಯಲ್ಲೆಲ್ಲ ನೆರಿ, ಕೈಯಲ್ಲಿ ಕೋಲು, ಬಾಯಲ್ಲಿ ಜೊಲ್ಲು, ಸುಕ್ಕುಗಟ್ಟಿದ ಶರೀರ, ಬಾಗಿದ ಬೆನ್ನು ಈ ತರಹದ ವೇಷಿಯಾಗಿ ಕಾರಿರುಳಲ್ಲಿ ಜೋಳದೇಶವ ಹೊಕ್ಕಿದ್ದಾನೆ. ಅಷ್ಟರಲ್ಲಿಯೇ ಆಗಸದಲ್ಲಿ ಕಾರ್ಮೋಡಗಳು ತುಂಬಿಕೊಂಡಿವೆ. ವಿದ್ಯುಲ್ಲತೆ ಮಿಂಚು ಮಿಂಚುತ್ತಿದೆ. ಸಿಡಿಲುಗಳು ಆರ್ಭಟಿಸಿ ಗರ್ಜಿಸಲು ಪ್ರಾರಂಭಿಸಿದ್ದಾವೆ. ಅನಿತರೊಳು ಗಗನವೇ ನೀರಾಗಿ ಬೀಳುವಂತೆ ಭೋರೆಂದು ಮಳೆಯು ಬೀಳತೊಡಗಿದೆ. ನೋಡು ನೋಡುವಷರಲ್ಲಿ ನೆಲವೆಲ್ಲ ನೀರಿನಲ್ಲಿ ತೇಲುವಂತಾಗಿದೆ. ಸುತ್ತಲೂ ನೀರು. ಮೇಲೆ ಕತ್ತಲೆಯು ಕವಿದು ಕಡು ಹೆಚ್ಚಿದೆ. ದಿಙ್ಮುಖಗಳು ತೋರದಾಗಿವೆ. ಕತ್ತಲೆಯ ಕಪ್ಪಿನಿಂದ ಜಗವೆಲ್ಲ ಮುಚ್ಚಿ ಹೋಗಿದೆ. ಎತ್ತ ನೋಡಿದರೂ ಕತ್ತಲೆಯೇ ಕತ್ತಲು, ನೀರೇ ನೀರು.

ಇಂತಿಪ್ಪ ಕತ್ತಲೆಯೊಳಭವನೂರಂ ಪೊಕ್ಕು। ಕಂತುಹರ ತುಂತುರೊಳ್
ನಡುಗುತೂರಂ ಪೊಕ್ಕು।

ಇಳೆಯಾಂಡ ಗುಡಿವಾರನ ಮನೆಗೆ ನಡೆತಂದು। ಚಳಿಹತ್ತಿ ಮಳೆ
ಯೊಳಗೆ ಘಾಸಿಯಾಗುತೆ ಬಂದು।

ನಡುಗಿ ಪಲ್ಪರೆಗುಟ್ಟಿ ಬಾಗಿಲೊಳ್ ನಿಂದಿರಲ್। ಕಡುಶೀತದಿಂದಲ್ಲಿ
ಬಳ್ಳುತುಂ ಬಂದಿರಲ್।

ಇಸಿತೊಂದವಸ್ಥೆಯಿಂದ ಇಂದುಧರನು ಹಾಗೂ ಹೀಗೂ ಬಂದು ಇಳೆಯಾಂಡ ಗುಡಿವಾರರ ಮನೆಯ ಬಾಗಿಲಲ್ಲಿ ನಿಂತಿದ್ದಾನೆ. ಇತ್ತ ಒಳಗೆ ಇಳೆಯಾಂಡ ಗುಡಿವಾರರು ಬಟ್ಟೆ ಬರೆಯಿಲ್ಲದೆ ಚಳಿಹತ್ತಿ ಬಳಲುತ್ತಿದ್ದಾರೆ. ಧಾನ್ಯವಿಲ್ಲದೆ ಮೂರು ನಾಲ್ಕು ದಿನಗಳಿಂದ ಉಪವಾಸ ಬಿದ್ದಿದ್ದಾರೆ. ಬೆಚ್ಚಗೆ ವಲಗಬೇಕೆಂದರೆ ಹಾಸಲಿಲ್ಲ, ಹೊದೆಯಲಿಲ್ಲ.

ಹಾಸಲುಂ ಹೊದೆಯಲುಂ ಹರನ ನಾಮುಂ ತನಗೆ। ಆಸುರದ ಚಳಿಗೆ
ಮರೆ ಈಶನಾಮವೆ ತನಗೆ।
ಒಳಗೆ ಭಾಳೇಕ್ಷಣನ ನಾಮ ತೀವಿರೆ ಕರಂ। ಚಳಿಹೊದ್ದದಂತಿರ್ದನ
ಭವಭಕ್ತಂ ಕರಂ।

ಎಂಬಂತೆ ಅವರಿಗೆ ಹಾಸಲು ಹೊದೆಯಲು ಹರನ ನಾಮವೊಂದೇ ಬಳಿದಿತ್ತು; ಅದೇ ಅವರ ಪರಮ ಸೊತ್ತು; ಶಾಶ್ವತಸಂಪತ್ತು. ಆದ್ದರಿಂದ ಅವರಿಗೆ ಚಳಿಯ ಬಾಧೆಯಿರಲಿಲ್ಲ. ಹೊರಗೆ ಸುರಿವ ಚಳಿ ಸರಿದು ಪರಿಯಾಗುತ್ತಿತ್ತು. ನೋಡಿ! ನಿಜವಾಗಿಯೂ ಮುಮುಕ್ಷುಗಳ ಜೀವನವು ಈ ತೆರನಾಗಿರಬೇಕು. ಭೋಗ ಚಿಂತೆ, ಭಾಗ್ಯ ಚಿಂತೆ, ಬಟ್ಟೆಚಿಂತೆ ತೊಲಗಬೇಕು. ತ್ಯಾಗಚಿಂತೆ, ಯೋಗಚಿಂತೆ ಉಳಿಯಬೇಕು, ಬೆಳೆಯಬೇಕು.

ಪರರಚಿಂತೆ ನಮಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ? ಕೂಡಲ ಸಂಗಮದೇವ ಒಲಿವನೋ ಒಲಿಯನೋ ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು.

ಎಂಬ ಭಾವಪೂರಿತ ಬಸವಣ್ಣನ ಬೋಧಾವೃತದಂತೆ ನಮ್ಮಿಳೆಯಾಂಡ ಗುಡಿವಾರರ ಸ್ಥಿತಿಯಾಗಿದ್ದಿತು. ಅವರಿಗೆ ಯಾವುದರ ಹಂಗೂ ಇದ್ದಿಲ್ಲ. ಶಿವನ ಒಲುಮೆಯ ಹೊರತು ಬೇರೆ ಯಾವ ವಿಷಯಗಳ ಹಂಬಲವಿರಲಿಲ್ಲ. ಅಂತೆಯೇ ಶಿವನು ತನ್ನ ಕೈಲಾಸ ಬಿಟ್ಟು ಮನೆಯ ಬಾಗಿಲಗೆ ಬಂದು ನಿಂತು ಕೊಂಡಿದ್ದಾನೆ. ಚಳಿಯ ಬಾಧೆಯನ್ನು ಸಹಿಸದೆ ಬಾಗಿಲಲ್ಲಿಯೇ ನಿಂತು ಶಿವಶಿವ! ಹರಹರ!! ಶಂಕರ!!! ಎಂದು ಬಾಯ್ಬಿಡತೊಡಗಿದ್ದಾನೆ. ಆ ವನಿಯನ್ನು—

...ಕೇಳು ತಿಳೆಯಾಂಡ ಗುಡಿವಾರ ನಾರೆಂದು। ಕರಬಳಲ್ದಿಲಿಲಿ
ಎನ್ನಾಳ್ದರ ಧ್ವನಿಯೆಂದು ॥
ಕಟ್ಟಿ! ಕಲ್ತಲೆಯೊಳೆಯ್ತಪ್ಪರೇ? ಎಲಿದೇವ। ನಟ್ಟಿರುಳ್ಮಳೆಯೊಳೆ
ಯ್ತಪ್ಪರೇ ಎಲಿದೇವ ॥
ಎಂದು ಬಂದು ಗಳಗಳನೆ ಕದವಂ ತೆರೆದು ಕಾಣುತುಂ। ಬಂದು
ಚರಣದ ಮೇಲೆ ಬೀಳ್ದು ಭಯವೇರುತುಂ ॥

ಇಳೆಯಾಂಡ ಗುಡಿವಾರನು ಎಂತಹ ಕರುಣೆ! ಎಂತಹ ಕೃಪಾಳು! ಎಂತಹ ಪರೋಪಕಾರಿ! ಪರರ ದುಃಖಕ್ಕೆ ಬಳಲುವ-ಕರಗುವ ಸ್ಥಿತಿ ಪರಮಾಂತಃಕರಣಿಗಳಿಗಲ್ಲದೆ ಬೇರೆ ಯಾರಿಗೆ ಬರುವದು ಹೇಳಿ! ಇಳೆಯಾಂಡ ಗುಡಿವಾರರಂಥ ದಾನವೀರ ದಯಾರ್ದ್ರಹೃದಯಿಗಳಿಗಲ್ಲದೆ

ಕೈಬಿಚ್ಚಿದ ಕಲ್ಲಿದೆಯವರಿಗೆ ಬರಲು ಶಕ್ಯವೆ? ತಾವೇ ಹೆತ್ತ ತಪ್ಪು ಮಕ್ಕಳೇ ಇಂಥ ಇರುಳಲ್ಲಿ ಇಂಥ ಪರಿಸ್ಥಿತಿಯಲ್ಲಿ ಬಂದರೆ ಬಂಧು ಕವಿತೆಯದ ಕಟುಗರೆಪ್ಪೋ ಉಂಟು ವಿಧಾತೃ ಸೃಷ್ಟಿಯಲ್ಲಿ. ಅಂಥವರಿಗೆ ನಮಿಸಿ ಮುಂದೆ ಸಾಗುವೆ. ಪರಮಾತ್ಮನು ಬಾಗಿಲಲಿ ನಿಂದು ಚಳಿಯ ಬಾಧೆಯಿಂದ ನರಳುವ ಹರಹರ, ಶಿವಶಿವ ಎಂಬ ಆರ್ತಧ್ವನಿಯು ಆತನ ಹೃದಯಕ್ಕೊಂದು ಶಲ್ಯಪ್ರಾಯವಾಗಿದೆ. ಎದೆ ಕಂಗಿ ನೀರಾಗಿದೆ. "ಕೆಟ್ಟಿ! ಕಲ್ತಲಿಯೊಳಿಯ್ತಪ್ಪರೇ ಎಲೆ ದೇವ" ಎಂದು ಕನಿಕರ ಬಡುತ್ತಾನೆ. ಇದು ಎನ್ನಾಳ್ದನ ದನಿಯೆಂದು ಕೂಡಲೇ ಗುರ್ತಿಸಿ ಹೇಳಬಾರದಷ್ಟು ವೇತನೆ ಪಡುತ್ತಾನೆ. ಆ ಅಪಾರವಾದ ವೇದನೆಯಿಂದ ಬೇಗ ಎದ್ದು ಬಂದು ಕೇವಲ ಮನೆಯ ಕದವೊಂದನ್ನೇ ತೆಗೆಯಲಿಲ್ಲ. ಅದರೊಡನೆ ಹೃದಯ ಕದವನ್ನೂ ತೆರೆದಿದ್ದಾನೆ. ಒಮ್ಮೆಲೇ ಜರಣಗಳಿಗೆರಗಿದ್ದಾನೆ. ಭವಹರನ ಸ್ಥಿತಿಯನ್ನು ಕಂಡು ಭಯವೇರಿ ಭ್ರಾಂತನಾಗಿ ನಿಂತಿದ್ದಾನೆ. ಆಗ ಶಿವನು—

...ಕರಂ ನಡುನಡುಗಿ ಜಳಿ ಹೊಡೆದುದೆಲೆ ಮಗನೆ। ಹರಣಮುಂ
ಹತ್ತಿತ್ತು ಸೀತ, ಹೂ ಹೂ ಮಗನೆ॥
ನಿಲಲಾರೆನಿನ್ನೆಂತು ಕೈಕಾಲ್ಗಳುಳ್ಪವು। ಪಲವು ಮಾತೇ ನವಯ
ವಂಗಳೆಲ್ಲರಳ್ದವು॥
ತನು ಒಡೆದಪುದು, ಜಳಿಗೆ ಮನ ಸೀಳ್ದಪುದು ಚಳಿಗೆ। ಎನೆ ಕೇಳ್ದು
ಭಯ ಭಕ್ತಿಯಿಂ ನಡುಗಿ ಬಂದೊಳಗೆ॥

ಎಂದು ಗುದುಗುಟ್ಟಿ ನಡುಗುತ್ತ ಎಲೆ ಮಗನೆ, ಶೀತವು ಬಾಧಿಪುದು. ಪ್ರಾಣವನೆ ಹೀರುವದು. ಅಯ್ಯೋ ನಿಲಲಾರೆ. ಕಾಲು ಕಳಚುವವು. ಕೈಯು ಸುರುಳುವವು. ಅವಯವಗಳು ಅದರುವವು. ದೇಹವೊಡೆದಿಹುದು. ಮನ ಸೀಳುವದು. ಹಾಯ್! ಹಾಯ್! ನಿಲಲಾರೆ ನಿಲಲಾರೆ ಎಂದು ಧೊಪ್ಪನೆ ನೆಲಕ್ಕೆ ಬೀಳುವನು. ಬಿದ್ದ ಶಿವನನೆತ್ತಿ ಒಳಗೊಯ್ದು ಏನು ಮಾಡಲೆಂದು ಯೋಚನೆಯೊಳಗಾಗದೆ ತಾವಿರುವ ಮನೆಯ ಪಾಳಿಗೆಯ ಜಂತೆಯನುಚ್ಚಿ ಬೆಂಕಿಯನ್ನು ಪಟು ಮಾಡಿದ್ದಾನೆ. ಇತ್ತ ಇವನು ಬೆಂಕಿಯನ್ನು ಪಟು ಮಾಡಿದಂತೆ ಅತ್ತ ಶಿವನು ಕಟುವಾಗಿ ನಡುಗ ತೊಡಗಿದ್ದಾನೆ. ನಡುಗುವ ಶಿವನ ತೊಡೆಗಳನ್ನು ತೋಳುಗಳನ್ನು

ಬೆಂಕಿಗೆ ಹಿಡಿದು ಕಾಸಿದ್ದಾನೆ. ಕಾಲನ್ನು ಕೈಯನ್ನು ಕಾಸಿದ್ದಾನೆ. ಬಾಯನ್ನು ಬೆನ್ನನ್ನು ಬೆಚ್ಚಗೆ ಮಾಡಿದ್ದಾನೆ. ಹೀಗೆ ಸಕಲೇಂದ್ರಿಯವನ್ನು ಕಾಸಿ ಕೈಯಿಂದ ಕರುಣೆಯಿಂದ ಹಿಸುಕಿದ್ದಾನೆ. ಹೀಗೆ ಹಿಸುಕಿ ಜೀವವನ್ನು ಕಳೆಯುವಷ್ಟರೊಳಗೆ—

ಎನಿತನಿತು ಚಳಿಹೋಗಲನಿತನಿತು ಪಸಿವಡಸೆ।
ಅನುವಿಸುತೆ ಪಸಿದೆ ಪಸಿದೇಂ ಎಂದುಲವಲವಿಸೆ॥

ಪಸಿವು ಹೆಚ್ಚಾಗಿ ಹರನು—ಪಸಿದೆ, ಪಸಿದೆ ಎಂದು ಲವಲವಿಸ ತೊಡಗಿದ್ದಾನೆ. ಇದನ್ನು ಕೇಳಿ ಇಳಿಯಾಂಡ ಗುಡಿವಾರರ ಎದೆ ಪೊಡೆದು ಹೋಗಿದೆ. ಪಾಪ! ಮನೆಯಲ್ಲಿ ಒಂದು ಮುಷ್ಟಿ ಕಾಳಿಲ್ಲ. ಕೈಯಲ್ಲಿ ಒಂದು ಕಾಸೂ ಸಹ ದುಡ್ಡಿಲ್ಲ. ಅದಕ್ಕಾಗಿ ಮೂರು ನಾಲ್ಕು ಉಪವಾಸದಿಂದ್ದಾನೆ. ಇಂತಹ ಅವಸ್ಥೆಯಲ್ಲಿ ಶಿವನಿಗೆ ಪಸಿವು. ಏನು ಮಾಡಲಿ, ಎಲ್ಲಿ ತರಲಿ, ಯಾರನ್ನು ಬೇಡಲಿ. ಸಮಯವಾದರೂ ನಡುಗರುಳು. ಹಾಯ್ ಪರಮಾತ್ಮಾ! ಭಕ್ತ ಬಂಧುವೇ!! ದೀನಕರುಣೆಯೇ!!! ಏನಿಗೆ ಎಂತಹ ಪ್ರಸಂಗ ತಂದೆ? ಪಸಿದು ಬಂದ ಅತಿಥಿಯನ್ನು ಹಿಂದಕ್ಕೆ ಕಳಿಸುವ ಸಮಯ ತಂದೆಯಾ? ಏನು ಮಾಡಲಿ ಎಂದು ಯೋಜನೆ ಪರಿಯುವೆ ದೀನ ಹೀನ ದೃಷ್ಟಿಯಿಂದ ತನ್ನ ಹೆಂಡತಿಯ ಮೊಗವನ್ನು ನೋಡುವನು. ಪರಮಸಾಧ್ವಿಯಾದ ಆತನ ಸತಿಯು— ಓ ಪತಿಯೆ! ಏಕೆ ಯೋಚಿಸುವೆ? ಮೊನ್ನೆ ಬಿತ್ತಿದ ಭತ್ತದ ಪೊಳಿಕೆಗಳನ್ನು ತೆಗೆದು ಕೊಂಡು ಬಸ್ಸಿ ಅವನ್ನೇ ಅಟ್ಟು ಅತಿಥಿಗೆ ಊಣಬಡಿಸೋಣ, ಎಂದು ಸಮಯಕ್ಕೆ ತಕ್ಕ ಹಂಚಿಕೆಯನ್ನು ಹೇಳಿಕೊಡುವಳು. ಆಹಾ! ಎಂಥ ಸೌಭಾಗ್ಯವತಿ! ಎಂಥ ಗುಣವತಿ! ಎಂಥ ವಿಶಾಲಮತಿ! ಇಳಿಯಾಂಡ ಗುಡಿವಾರ ಸತಿ! ಇದ್ದುದನ್ನು ಬಚ್ಚಿಡುವ ಸತಿಯರಿಪ್ಪೋ ಪ್ರಪಂಚ ನಲ್ಲಿರುವರು. ಬಂದವರನ್ನು ಬೈದು ಕಳಿಸುವ ಉದಾರ ಹೃದಯಿಗಳಿಪ್ಪೋ ಜನರಿರುವರು. ಅದರಿವಳು ಹಾಗಿಲ್ಲ. ಪತಿಯ ವ್ರತವು ಎಂತಾದರೂ ಸಾಗಿದರೆ ಸಾಕು. ಅದೇ ಅವಳಿಗೆ ಪರಮಭಾಗ್ಯ. ಅಂತೆಯೇ ಹಾಗೆ ಹೇಳುವಳು. ಅದನ್ನು ಕೇಳಿ ಇಳಿಯಾಂಡ ಗುಡಿವಾರರು ಅತ್ಯಂತ ಕರ್ತವ್ಯನಿರ್ಭರರಾಗಿ ಬಿತ್ತಿದ ಭತ್ತದ ಪೊಳಿಕೆ ತರಲು ಕಾಳರಾತ್ರಿಯು ಏಸೋ ಹೊರಟಿದ್ದಾನೆ. ಆ ಪರಿಯನ್ನು ಹರಿಹರದೇವನು ಹೇಳುವದನ್ನು ಕೇಳಿ—

ಉರುಪೆ ಹರುಷಂದಳಿದು ಪರಮಭಕ್ತಂನೆಚ್ಚಿ । ಪೊರವೊಟ್ಟನೊಲ್ದು
ಮೆನ್ಯರಾತ್ರಿಯೊಳ್ಪೊಚ್ಚಿ ॥
ಮತ್ತೆ ಮಳೆ ಪಿರಿದಾಗೆ, ಮತ್ತೆ ಚಳೆ ಪಿರಿದಾಗೆ । ಮತ್ತೆ ಕತ್ತಲೆ ಸುತ್ತಿ
ಮುತ್ತಿಯುನ್ನತವಾಗೆ ॥
ಬರುತಿರ್ದನಪ್ರತಿಮ ಶಿವಭಕ್ತನುರವಣಿಸಿ । ಪುರದ ಹೊಲಗಳದಾಂಟಿ
ಕತ್ತಲೆಯನುತ್ತರಿಸಿ ॥
ಹಳ್ಳಂಗಳಂ ಕೆರೆಗಳಂ ತೊರೆಗಳಂ ದಾಂಟಿ । ಕೊಳ್ಳಂಗಳಂ ಕೊಳಗಳಂ
ಲಂಘಿಸುತೆ ದಾಂಟಿ ॥
ಹೋಗಿಗರ್ದೆಯೊಳಿರ್ದ ಮೊಳೆವಿತ್ತ ನೆತ್ತಿದಂ । ರಾಗದಿಂ ತಂದವಂ
ಗೂಡೆಯೊಳಗಿಕ್ಕಿದಂ ॥
ತಿರುಗಿ ಬರುತಿರ್ದಂ ಹರಂ ಹಸಿದನೆಂದೆನುತೆ । ಉರವಣಿಸಿ ಬರುತುಂ
ಬಳಲ್ದನೀಶ್ವರ ನೆನುತೆ ॥

ಈ ಪರಿ ಇಳೆಯಾಂಡ ಗುಡಿಮಾರನು ಮಧ್ಯರಾತ್ರಿಯಲ್ಲಿಯೇ ಹೊಲಕ್ಕೆ ಹೊರಟಿದ್ದಾನೆ. ಮೇಲೆ ಮಳೆಯು ಸುಮ್ಮೆಂದು ಸುರಿಯುತ್ತಿದೆ. ಬಿರುಸ್ಸೈ. ಚಳಿಯು ಬಲಿಬಲಿದು ಬಾಧಿಸುತ್ತಿದೆ. ಕತ್ತಲೆಯು ಕವಿಕವಿದು ಮುತ್ತ ತೊಡಗಿದೆ. ಅಂತಹದರಲ್ಲಿಯೇ ಹತ್ತುವ ಹಳ್ಳ ಕೊಳ್ಳಗಳನ್ನು ದಾಟಿ ದ್ದಾನೆ. ಎದುರಾಗುವ ಕೆರೆ ತೊರೆಗಳನ್ನು ಮೀರಿದ್ದಾನೆ. ಹೊಲಕ್ಕೆ ಬಂದಿ ದ್ದಾನೆ. ಮೊಳೆವಿತ್ತ ಕಾಳುಗಳನ್ನು ಕಾಳಿರುಳಲ್ಲಿಯೇ ಆಯ್ದುಕೊಂಡು ಹರನು ಹಸಿದಿರಬಹುದೆಂದು ಉರವಣಿಸುತ್ತ ಮನೆಗೆ ಬಂದು ಮಡದಿಯ ಮುಂದಿಳುಹಿದ್ದಾನೆ. ಅರಸಿಯು ಅವನ್ನು ತೆಗೆದುಕೊಂಡು ಹುರಿದು ಅಮೃತಾನ್ನದಂತೆ ಓಗರವ ಮಾಡಿದ್ದಾಳೆ. ಬಂದ ಭಕ್ತನಿಗೆ ಎಡೆ ಬಡಿಸಬೇಕೆಂದು ಮಗನನ್ನು ಬಾಳೆಯ ಎಲೆಯನ್ನು ತರಲು ಕಳುಹಿದ್ದಾಳೆ. ಉಣ್ಣುವ ಬಟ್ಟಲುಗಳು ಸಹ ದಾನವಾಗಿ ಹೋಗಿವೆ. ಅತ್ತ ಬಾಳೆಯ ಎಲೆಯನ್ನು ಕೊಯ್ಯುವ ಬಾಲಕನನ್ನು ಶಿವನ ಆಜ್ಞೆಯಿಂದ ಹಾವು ಕಚ್ಚಿದೆ. ವಿಷವೇರಿ ಮೂರ್ಛೆ ಬಂದಿದೆ. ಶಿವನ ಮಾಯೆಯಿಂದ ಶಿಶುವಿನ ಅಸುವೂ ಹೊರಟು ಹೋಗಿದೆ. ಹೀಗೆ—

ಮರೆದೊರಗಿದಂತಲ್ಲಿ ದೀರ್ಘನಿದ್ರೆಯೊಳಿರಲ್ । ಪೊರಗೆ, ಶಶಿಧರನತ್ತ
ಪಸಿದೆನೆಂದೆನುತಿರಲ್ ॥
ತಡೆದನೆಂದಿಳೆಯಾಂಡ ಗುಡಿಮಾರನೆಯ್ತಂದು । ಪಿಡಿದುರಗನಿಂ
ಮಡಿದ ಮಗನನೀಕ್ಷಿಸುತಂದು ॥

ಬಿಲ್ಲರಲು ಹೋದ ಹುಡುಗನು ಗಿಡದಡಿಯಲ್ಲಿ ಗತಪ್ರಾಣನಾಗಿ ಬಿದ್ದಿದ್ದಾನೆ. ಇಲ್ಲಿ ಶಿವನು ಕಪಟದಿಂದ ಹಸಿವನ್ನು ಸಹಿಸದೆ ಹೊರಳಾಡ ಲಾರಂಭಿಸಿದ್ದಾನೆ. ಇದನ್ನು ನೋಡದೆ ಇಳೆಯಾಂಡ ಗುಡಿಮಾರನೇ ಮೊಂಟು ಬಂದಿದ್ದಾನೆ. ಬಾಳೆಯ ಬದಿಯಲ್ಲಿ ಮಗುವಿನ ಶವ. ಮರುಗಿ ಮುಟ್ಟದೆ ತನ್ನ ಕಾರ್ಯದಲ್ಲಿ ತತ್ಪರನಾಗಿದ್ದಾನೆ. ಹಾ! ಎಂಥ ಶಿವನದು, ಶಿವಭಕ್ತರದು! ಎಲ್ಲಿಯವರೆಗೆ ತನ್ನ ನಂಬಿದವರನ್ನು ಪರೀಕ್ಷಿಸುವದು! ಅದಕ್ಕೊಂದು ಅವಧಿಯಿಲ್ಲವೇ?

"ಮೆಚ್ಚಿದನೆಂದರೆ, ಮೆಚ್ಚಿದನೆಂದರೆ, ಸಲಿಮಾರುವೋದನೆಂದರೆ, ತನು
ವನಲ್ಲಾಡಿಸಿ ನೋಡುವೆ ನೀನು. ಮನವನಲ್ಲಾಡಿಸಿ ನೋಡುವೆ ನೀನು.
ಧನವನಲ್ಲಾಡಿಸಿ ನೋಡುವೆ ನೀನು. ಇವೆಲ್ಲಕ್ಕಂಜದಿದ್ದರೆ ಭಕ್ತಿಕಂಪಿತ
ನಮ್ಮ ಕೂಡಲಸಂಗಮದೇವಾ"

ಮುಂದು ಬಸವಣ್ಣನವರು ಅವಧಿಯನ್ನು ಹೇಳಿದುದು ಸತ್ಯವಿದೆ. ಏಕೆಂದರೆ ಇಳೆಯ ವರೆಗೂ ಶಿವನು ಇಳೆಯಾಂಡ ಗುಡಿಮಾರನನ್ನು ದರಿದ್ರನ ಮಾಡಿ ತನುವಲ್ಲಾಡಿಸಿ ನೋಡಿದನು. ಮಳೆಯಲ್ಲಿ ಮಿಂಚಿನಲ್ಲಿ ಚಳಿಯಲ್ಲಿ ಕತ್ತಲೆಯಲ್ಲಿ ಹೊಲಕ್ಕೆ ಕಳುಹಿ ತನುವಲ್ಲಾಡಿಸಿ ನೋಡಿದನು. ಈಗ ನಡೆದಿದೆ ಮನದ ಪರೀಕ್ಷೆ. ಇದುರಿಗೆ ಮೋಹದ ಮಗುವಿನ ಶವ. ಅಲ್ಲಿ ಶಿವನು ಮನವಿನಿಂದ ಕನಲುವ ಕಾಟ. ಇಂತಹ ಉಭಯ ಸಂಕಟ ಸಮಯ ದಲ್ಲಿ ಆ ಮಹಾನುಭಾವನು ತನ್ನ ಮನದಲ್ಲಿ ಇಂತು ಯೋಚಿಸುವನು—

ಇದನರಿಸಿಕೊಡೀತನುಣಲಿಲ್ಲನೇಮೇಳುವೇಂ । ಇವನರುಪದುಣಲಿಕ್ಕೆ
ಸಂತಸಂ ಮಾಡುವೇಂ ॥

ಆ! ಎಂತಹ ವಿಶಾಲವಾದ ಭಾವ! ಎಷ್ಟೊಂದು ಶಿವಭಕ್ತರಲ್ಲಿ ಪ್ರೇಮ! ಆ ಮಗನು ಮಡಿದ ವಾರ್ತೆ ಅತನಿಗೆ ಮುಟ್ಟದರೆ ಉಣಲಿಕ್ಕಿಲ್ಲ. ಆವ ಇದನ್ನು ಅತನಿಗೆ ಅರುಪದೆ ಮೊದಲು ಉಣಲಿಕ್ಕೆ ಸಂತೋಷ ಪಡಿಸುವೆ ಎಂದು ಯೋಚಿಸಬೇಕಾದರೆ ಅತನ ಮನಸ್ಸು ಎಷ್ಟು ಸ್ಥೈರ್ಯ ಹೊಂದಿರಬೇಕು. ಎಷ್ಟು ನಿರ್ಮೋಹವಾಗಿರಬೇಕು, ಎಂಥ ಭಕ್ತಿ ಭಾವ ಬೆರೆತಿರಬೇಕು. ಈ ಪರಿ ಅಂತಹ ಆತ್ಮವೀರರಿಗಲ್ಲದೆ ಸಾಮಾನ್ಯರ ಕೈಲಿ ಆಗಲಿಲ್ಲ. ಇಳೆಯಾಂಡ ಗುಡಿಮಾರನು ಅಲ್ಲಿ ಕಂಪನನ್ನು ನೋಡುತ್ತ ಬಾಳೆಯ ಎಲೆಯನ್ನು ಕೊಯ್ದು ತಂದು ಭಕ್ತನ ಮುಂದಿರಿಸಿದ್ದಾನೆ.

ತಿಳಿನೀರನಿಕ್ಕಿದ್ದಾನೆ. ತೊಳಪ ಓಗರವನೆಡೆಬಡಿಸಿದ್ದಾರೆ. ಎಲೆಬಡಿಸಿ ಒಕ್ಕಿ
ಯಿಂದ ಓ ದೇವ! ಆರಯ್ವುದು ಎಂದು ಎರಗಿ— ಶಿವನನ್ನು ಬಿಸಕೊ
ಳಲು ಆಗ ಶಿವನು— ಏನು ನಾವೊಬ್ಬರುಣ್ಣುವದೇ? ಆಗದು. ಭಕ್ತರ
ಪಂಕ್ತಿಯಲ್ಲಿಯೇ ಉಂಬುದೆನ್ನ ವ್ರತ. ಆದ ಕಾರಣ ತಂದೆ ಮಕ್ಕಳಿಲ್ಲಿರೂ
ಬಂದು ಕುಳಿತುಕೊಳ್ಳಬೇಕು ಎಂದು ಆಗ್ರಹ ಮಾಡುವನು. ಇದನ್ನು
ಕೇಳಿ ಇಳೆಯಾಂಡ ಗುಡಿವಾರನು ಕಡು ನೊಂದು— ಇತ್ತ ಮಗನು
ಮಡಿದುದನ್ನು ಹೇಳಲೂ ಬಾರದು. ಅತ್ತ ಮಗನಿಲ್ಲದಿದ್ದರೆ ಉಣ್ಣುವದಿ
ಲ್ಲೆಂಬ ವೃಡನ ದೃಢತರ ಪ್ರತಿಜ್ಞೆ. 'ಇನ್ನೇಪೆನೆನುತೇಳ್ದು' ಕಂದನ
ಬಳಿಗೆ ಹೋಗಿ ಕರೆದು ನೋಡುವೆನು. ಆತನೆದ್ದುಬಾರದಿದ್ದರೆ ಇಂದು
ಆಭವಂಗೆ ಶಿರವನೊಪ್ಪಿಸಿಬಿಡುವೆನು. ಉಂಬುದ ಶಿವನಿಗೆ ಆರ್ಪಿಸಿ ಇಂಬಾಗಿ
ಇರುವೆನು. ಎಂದು ಯೋಚಿಸಿಗೊಂಡು ಹೋಗಿ ಮಗನ ಕರೆಯಲು
ನಿದ್ದೆಯಿಂದ ಎಚ್ಚರಿಯುವಂತೆ ಎದ್ದು ಬರುವನು. ಆನಂದದಿಂದ ಆತ
ನನ್ನು ಕರೆದುಕೊಂಡು ಶಿವನನ್ನು ಉಣಿಸಬೇಕೆಂದು ಉಲ್ಲಾಸದಿಂದ
ಬರುವಷ್ಟರಲ್ಲಿ—

...ಜಗಜ್ಜ್ಯೋತಿರ್ಮಯಂ ಬೆಳಗುತಿರಲೊಳಗೆ । ಪುರಹರಂ ವೃದ್ಧ
ವೇಷವನಿಳುಪಿ ತೊಳ ತೊಳಗೆ।
ಜಡೆ ಚಂದ್ರಕಳಿ ನೊಸಲ ಕಣ್ಣಾಗ ಕುಂಡಲಂ । ತೊಡಿಗೆಯಹಿ, ಕರೆ
ಗೊರಲ್ಮಿಸುಪ ಮುಖಮಂಡಲಂ।
ದಶಭುಜಂ ಡಮರುಗಂ ತ್ರಿಶೂಲಂ ಗಜಾಜಿನಂ । ದಿಸೆದಿಸೆಯೆ
ಬೆಳಿಪ ಪುಲಿದೊವಲು ಪಂಚಾನನಂ।
ತಾನೊಪ್ಪಿ ರವಿಕೋಟಿ ತೇಜಮುಂ ಮುಸುಳಿಸುತೆ । ನಾನಾ ಸುಧಾಕರ
ಪ್ರಭೆಗಳಂ ರಂಜಿಸುತೆ।

ಶಿವನು ಸಾಕಿನ್ನು ಪರೀಕ್ಷಿಸುವದೆಂದು ಕಪಟದ ವೃದ್ಧಭಾವವನ್ನು ಬಿಟ್ಟು ಅಭಯವನ್ನೀಯುವ ನಿಜರೂಪಂಬೊಟ್ಟು—

"ಅರಿವನಯ್ಯ ಸಣ್ಣನಹನ್ನಕ್ಕ. ಬರಿವನಯ್ಯ ಬಣ್ಣಗಾಬನ್ನಕ್ಕ
ಅರಿದರಿ ಸಣ್ಣಗಾಗಿ, ಒರಿದರಿ ಬಣ್ಣವಾದರೆ ಕೂಡಲಸಂಗಮದೇವ
ನೊಲಿದು ಸಲಹುವನು"

ಎಂಬ ಬಸವಣ್ಣನು ನಿಷ್ಠಾಪೂರಿತ ವಚನಾವೃತಕ್ಕೆ ಸತ್ಯದ ಹೊಂಗಳ
ಸನ್ನಿಕ್ಕೆ ಪೃಂಗರಿಸಿದನು. ಭಕ್ತರ ಬೆಂಗಾವಲಿಗನೆಂಬ ಬಿರುದನ್ನು ಭಾವ
ದಂತವನ್ನಾಗಿ ಮಾಡಿದನು. ಇದಾಗಬೇಕಾದರೆ ಭಕ್ತನಲ್ಲಿ ವೃಷ್ಠತಿ
ಮಾತ್ರ ಇರಬೇಕು. ಸಿರಿಬರಲಿ, ಉರಿಬರಲಿ, ಹಿಡಿದ ವ್ರತವನ್ನು ಬಿಡದೆ
ನಡಿಸುವ ಛಲವಿರಬೇಕು. ಆ ನಿಷ್ಠೆ, ಆಧೈರ್ಯ, ಆಸಾಹಸಗಳು ಕವ
ಲಿಂತಿರಬೇಕು. ತನ್ನ ಧ್ಯೇಯ ಸಂಪಾದನೆಯಲ್ಲಿ ನಚ್ಚು ಮುಚ್ಚು
ಗಳು ಅಸ್ಖಲಿತವಾಗಿರಬೇಕು. ಅದ್ವಿತೀಯವಾಗಿರಬೇಕು. ಅಂದರೇನೆ
ಭವನು ಕೈಕೊಂಡ ವ್ರತಸಮುದ್ರವನ್ನು ದಾಟಿ ಆ ಕಡೆಗೆ ನಿಲ್ಲುವನು.
ಸಂಸಾರ ಸಂಕಟಗಳನ್ನು ನೀಗುವನು. ಜಗತ್ತಿನ ಜನರಿಗೆ ಆದರ್ಶ
ಪುರುಷನಾಗುವನು. ಜಗಜ್ಜ್ಯೋತಿಯಲ್ಲಿ ಜ್ಯೋತಿ ರೂಪಾಗಿ ಲೀನವಾ
ಗುವನು.

"ಮನಕ್ಕೆ ಮನ ಒಂದಾಗಿ, ಧನಕ್ಕೆ ಧನ ಒಂದಾಗಿ, ನಚ್ಚಿದ ಮುಚ್ಚು
ಅಜ್ಜೊತ್ತಿದಂತಿರಬೇಕು. ಪ್ರಾಣಕ್ಕೆ ಪ್ರಾಣ ಒಂದಾಗಿ ಶುಭ ಸೂಚನೆ
ಒಂದಾಗಿರುನ ನಚ್ಚು ಮುಚ್ಚು ಪಾರವೈದುದೇ? ಶಿರ ಹರಿದರೇನು?
ಕರುಳು ಕುಪ್ಪಳಿಸಿದರೇನು? ಇಂತಪ್ಪ ಸಮಸ್ತವೆಲ್ಲವೂ ಹೋದರೇನು?
ಚಿತ್ತ-ಮನ-ಬುದ್ಧಿಯೊಂದಾದ ಮುಚ್ಚು ಬಿಚ್ಚಿ ಬೇರಾಗದಿದ್ದರೆ ಮುಚ್ಚುವ
ನಮ್ಮ ಕೂಡಲ ಸಂಗಮದೇವ"

ಎಂದು ದೃಢವ್ರತಿಗಳಾದರೆ ಮೃಡಪದ ಸಿಗುವದೆಂದು ಒಳ್ಳೇ ಸೊಗಸಾಗಿ
ಹೇಳಿದ್ದಾರೆ. ದೃಢವ್ರತನಾದ-ದಾನವೀರನಾದ-ಧರ್ಮಶೀಲನಾದ ಇಳೆ
ಯಾಂಡ ಗುಡಿವಾರನು ನಿಜಸ್ವರೂಪವನ್ನು ತಳೆದು ನಿಂತ ನಾಗಾಭರ
ಣನನ್ನು ನೋಡಿ ಆನಂದಬಾಷ್ಪ ಉಕ್ಕಿ ಉತ್ಸಾಹ ಪುತಿಪುಕ್ಕಿ ಗಳಗಳನೆ
ಅಂದು ಹರನ ಚರಣಗಳಿಗೆರಗಿ ಇಂತು ಹೃತ್ಪ್ರೇಮದಿಂದ ಕರಳು ಕರಗು
ವಂತ ನುಡಿವನು—

ದೇವಾ! ಜರಾಜೀರ್ಣವೇಷಮುಂ ಕೈಯ್ಕೊಂಡು । ದೇವಾ! ಮುಳಿಯೊಳ್
ಚಳಿಯೊಳಿನ್ನಮನಂಗೊಂಡು॥
ಬಪ್ಪುದೇ? ಇಂತಿರಿಗು ಕರುಣೆ ಕರುಣೆಗಳರಸ । ಒಪ್ಪುವಾಯ್ತಿನ್ನ
ವಾಟಂ ಹೈಮವತಿಯರಸ ॥
ಚಕಪಟ್ಟಿತೇ ಪತ್ತಿತೇ ತಂದೆ ಹೇಳಯ್ಯ । ಮುಳಿಯೊಳಗೆ ತನು ನೆನೆದು
ಕೊರಗಿತೇ ಹೇಳಯ್ಯ ॥

ಎಂದು ದೇವನಲ್ಲಿರುವ ನಾಥವಾದ ಪ್ರೇಮದಿಂದ ಕರುಣೆ ಹುಟ್ಟಿಕೆಸು
ವಾಗಲೆ ನಂದೀಶ-ಭೃಂಗೀಶ-ವೀರಭದ್ರ ಮೊದಲಾದ ಪ್ರಮಥಗಣವು
ಬಂದು ಶಿವನಿಗೆರಗಿ ಆತನಪ್ಪಣೆಯಂತೆ ಇಕ್ಕೆಲದಲ್ಲಿ ನಿಲ್ಲಿಸಿದರು ನಿಲ್ಲು
ವರು. ಆಗ ಶಿವನು ಸಮೀಪದಲ್ಲಿಯೇ ನಿಂತ ಶಿವಭಕ್ತ ಪ್ರೇಷ್ಮನಾದ ವಿಜ
ಯಾಂಡ ಗುಡಿವಾರನನ್ನು ಸ್ನೇಹ ದೃಷ್ಟಿಯಿಂದ ನೋಡಿ ನಲವೇರಿ—

"...ಶಿವನೆಂದನೆಲೆನಂದೀಶ ಕೇಳಯ್ಯ। ಕಂಡೆ ನಿಲ್ಲಿಂತಪ್ಪ ನೇಹವಂ
ಪೊಸತಯ್ಯ॥
ಈ ಮಳೆಯೊಳೀ ಚಳಿಯೊಳಿಂತು ಪೋದವರುಂಟೆ? । ಏ ಮಾತೊ
ಮೊಳೆವಿತ್ತ ನೆತ್ತಿ ತಂದವರುಂಟೆ?॥
ಮಗನ ಸಾವಂ ನೋಡದುಣಲಿಕ್ಕಿದವರುಂಟೆ? । ಜಗದೊಳಗೆ
ವಾಂಛಿತವನುಳಿದು ಮಾಳ್ಪವರುಂಟ?॥
ಎಂದು ಕೊಂಡಾಡುತಿರೆ ಪೂಮಳೆಗಳೆರಗಿದವು । ಅಂದು ನಾಕದ
ದುಂದುಭಿಸ್ವನಂ ಮೊಳಗಿದವು॥

ಇನಿತು ಪೈಭವ ಜರಗಿರಲು ಸಾಕ್ಷಾತ್ ಶಿವನು ಒಲಿದು ಸ್ವಸ್ವರೂಪ ತೋರಿ
ರಲು-ಮುಂದೆ ಮೋಕ್ಷಪದವನ್ನು ಕೊಡುವವನಿರುತಿರಲು-ಅವಕ್ಕೆಲ್ಲ
ಗುಡಿಮಾರನು ಮನಸೋಲದೆ-ಆಶೆಮಾಡದೆ ಓ ದೇವ! ಕೈಲಾಸಕ್ಕೆ
ಹೋಗುವದೊಂದಿಡಿಗಿರಲಿ. ಬಂದು ಬೇಡಿದುದಕ್ಕೆ ಮೊದಲು ಬೋನವ
ನುಣ್ಣು. ಭಕ್ತನ ಭಕ್ತಿಯನ್ನು ಕೈಕೊಳ್ಳು. ಬಯಸಿ ಬೇಡಿದುದನ್ನು
ಬಿಟ್ಟು ಹೋಗುವದೇ? ಏಂದು ತನ್ನ ದಾನ ಪ್ರೇಮವನ್ನೇ ಮುಂದ
ಮಾಡುವನು. ಹಸಿದು ಬಂದು ಆರೋಗಿಸದೆ ಹೊಂಳಿ ಹಾಗೆಯೇ ಹೋಗು
ವದೇ? ಎಂದು ಆತ್ಮಕಳಕಳಿಯಿಂದ ಹೃದಯ ನಿಷ್ಠೆಯಿಂದ ಬೀಳ್ಕೊಡು
ವನು. ಇದನ್ನು ಕೇಳಿ ಶಿವನು—

"...ನಸುನಗುತೆ ಭಕ್ತನಿಷ್ಠೆಯಂ ನೆರೆ ಸಲಿಸಿ । ವನಿತೆ ಪಾರ್ವತಿದೇವಿ
ಗಣಸಂಕುಳಂ ವೆರಿಸಿ॥
ಆರೈಸಿವಂಕರುಣದಿಂದ ಶಶಿಶೇಖರಂ । ಹಾರೈಸಿ ಮೊಳೆವಿತ್ತ ನೋಗರ
ವನೀಶ್ವರಂ।
ಅಸಮಯದೊಳ್ ಗಂಡ ಹೆಂಡಿರ್ಗೆ ತನಯಂಗೆ । ಭಾಸುರದ
ಪುಷ್ಪಕಂಗಳು ಬಂದವನುವಿಂಗೆ॥

ಈಗೆ ಶಿವಾ ಶಂಕರರು ಸಹಿತ ಸಕಲಗಣ ಸಂಕುಳವು ಉಣ್ಣುವದನ್ನು
ನೋಡಿ ಅವರ ಆನಂದವು ಎಲ್ಲೆ ಮೀರಿದೆ. ಅಲೌಕಿಕ ಜ್ಯೋತಿಯು
ನಯನಗಳಲಿ ಮೂಡಿದೆ. ಸತ್ಯ ಸೌಖ್ಯದ ಹಾದಿ ತೋರಿದೆ. ಅಷ್ಟರಲ್ಲಿಯೇ
ವಿಮಾನುಗಳು ಬರುವವು. ಅವುಗಳಲ್ಲಿ ಮೂವರನ್ನು ಕುಳ್ಳಿರಿಸಿಗೊಂಡು—

ಪರುಷದಿಂ ದೇವದುಂದುಭಿಗಳಂ ಹೊಯ್ಸುತುಂ । ಕರೆದು ತುಂಬುರ
ನಾರದರನೊಲ್ದು ಪಾಡಿಸುತೆ॥
ಬರಿಸಿ ವರಚಂಡಕೀರ್ತಿಗಳಿಂದೆ ಪೊಗಳಿಸುತೆ । ಕೈಸಾಸಪುರಕೆ ಕೊಂಡೊ
ಯ್ದನುತಸ್ನೇಹದಿಂ॥
ಕೊಂಡೊಯ್ದು ಗಣಪದವಿ ಯೊಳಗವರನೊಲ್ದಿರಿಸಿ । ಖಂಡೇಂದು
ಮೌಳಿ ತನ್ನಯ ಕರುಣದೊಳಿರಿಸಿ॥
ಸತ್ಪಾದಿ ಗುಣಭರಾರ್ಜಿತರೂಪನೊಪ್ಪಿದಂ । ತತ್ಪನಿಧಿ ಹಂಪೆಯ
ವಿರೂಪಾಕ್ಷನೊಪ್ಪಿದಂ॥

ಈ ಸ್ಥಿತಿಯು ಇಂದಿನ ಜನರ ಜೀವನ ಮಾರ್ಗದಲ್ಲಿ ಬಲು ದೂರ
ದಲ್ಲಿದೆ. ನಿಲುಕದಷ್ಟು ಅತಿ ಎತ್ತರವಾಗಿದೆ. ಅದನ್ನು ಸಾಧಿಸುವದು
ನಮ್ಮ ಆದ್ಯ ಕರ್ತವ್ಯ! ಹಾಗೆ ದಾನವೀರರು ಧರ್ಮಪರರು ಆಗುವದು
ನಮ್ಮ ಧ್ಯೇಯ !! ಜನ ಕಾರುಣ್ಯ ತೋರಿ ಜನಾರ್ದನನ ಕೂಡುವದು
ನಮಗೊಂದುಪಾಯ !!! ಏಕೆಂದರೆ ದಾನದಿಂದ ನಮಗೆ ಪ್ರಾಣಿಗಳು
ವಶವಾಗುತ್ತವೆ. ವೈರಿಗೂ ಸಹ ಸ್ನೇಹಿತರಾಗುವರು. ಸಕಲ ಜನತಾ
ಪ್ರೇಮವು ನಮ್ಮ ಮೇಲೆ ಆಗುವದು. ಇದಲ್ಲದೆ ಬಳಸಿದಂತೆ ಭಾವಿಯ
ನೀರು, ಹೆರವರಿಗೆ ಹೇಳಿದಂತೆ ವಿದ್ಯೆಯು ಹೆಚ್ಚುವಂತೆ, ದಾನ ಮಾಡಿ
ದಂತೆ ಧನವು ಹೆಚ್ಚುತ್ತಿದೆ. ಇಲ್ಲವೆ ಪುಣ್ಯವು ಬಲಿಯುತ್ತದೆ. ಯಾವನು
ದಾನಿಯೋ ಅತನಿಗೆ ಇಲ್ಲಿಯೂ ಪರದಲ್ಲಿಯೂ ಯಾವ ಭೀತಿಯಿಲ್ಲ.
ಯಾವ ಕೊರತೆಯಿಲ್ಲ. ಆದ್ದರಿಂದ ಧನವಂತರು ಪಾತ್ರವರಿತು ಶಕ್ತಿ
ಯುರಿತು ದಾನಿಗಳಾಗಬೇಕು. ಧನ್ಯ ಜೀವಿಗಳಾಗಬೇಕು. ಹೀಗೆ ಹೇಳಿ
ದಂತೆ ದಾನತತ್ಪರರಾಗುವದು ಎಲ್ಲರಿಗೂ ಸಾಮಾನ್ಯವಲ್ಲ. ಯಾರು
ಕೂಡಗೈದೊರೆಗಳೋ ಯಾರು ಉದಾರಾಂತಃಕರಣಿಗಳೋ ಅವರಿಗೆ ಮಾತ್ರ
ಸಾಧ್ಯ. ಅದೇ ಅವರಿಗೆ ಪರಮಭಾಗ್ಯ. ಅಂತೆಯೇ ಸರ್ವಜ್ಞನು—"ಗಾನವಿ
ದ್ಯೆಯು ಲೇಸು। ಮಾನವತಿ ಸತಿ ಲೇಸು। ಸ್ವಾನುಭವಿಗಳ ಕಳೆ ಲೇಸು

ಎಲ್ಲಕ್ಕೂ ದಾನಿಯೇ ಲೇಸು ಸರ್ವಜ್ಞ ॥ ಎಂದು ಮುಂತಾಗಿ ಸಾರಭೂತವಾಗಿ ಸಾರಿರುವನು. ದಾನಿಗಳೂ ದಯಾಂತಃಕರಣಿಗಳೂ ದೀನರಕ್ಷಕರೂ ಆಗುವ ಸಂಯೋಗವನ್ನು ಧನವಂತರಿಗೆ ಆ ದಾನವೀರ ಇಳಿಯಾಂಡ ಗುಡಿಮಾರನು ದಯೆಯಿಂದ ದಯಪಾಲಿಸಲೆಂದು ಬೇಡುವೆನು. ಉಳಿದವರಿಗೆ ತಮ್ಮ ತನು-ಮನ-ಭಾವಗಳನ್ನಾದರೂ ವಿಷಯಗಳಿಂದ ವಿರಕ್ತಗೊಳಿಸಿ ಸತ್ಕಾರ್ಯಕ್ಕಾಗಿ ಶಿವನಿಗಾಗಿ ಸೂರೆ ಮಾಡುವ ಸೌಭಾಗ್ಯವನ್ನು ಆತನೇ ಕೊಡಲೆಂದು ಪ್ರಾರ್ಥಿಸುವೆನು. ಓ ದಾನವೀರ ಗುಡಿಮಾರ! ಇದೋ ಭಿಕ್ಷಾರ್ಥಿ, ಇದು ಭಿಕ್ಷಾಪಾತ್ರೆ, ಬರಿದಾದ ಪಾತ್ರೆ, ನೀಡು ನಿನ್ನ ಭಾಗ್ಯದೊಳಿನಿತೊಂದು ಭಿಕ್ಷವ! ಸರ್ವಸ್ವವನ್ನೇ ದಾನ ಮಾಡಿದ ನೀನು ಇವನ್ನಾದರೂ ನೀಡದಿರಲಾರೆಯಾ?

ಶ್ರೀ. ನಿಡುವಾಮಿಡಿ ಮಠದ ಇತಿಹಾಸ.

ಲೇಖಾಂಕ ೩.

ಲೇಖಕ:— ಎಂ. ಜಿ. ನಂಜುಂಡಾರಾಧ್ಯ "ರಾಷ್ಟ್ರಭಾಷಾ ವಿಶಾರದ"
ಸಿದ್ಧಗಂಗಾ ಗುರುಕುಲ.

ನಮ್ಮ ಹಿಂದಿನ ಲೇಖನದಲ್ಲಿ ಈ ಪೀಠದ ಶಾಖಾ ಮಠವಾದ ರಾಯಜೋಟಿ ಮಠಕ್ಕೆ ಸಂಬಂಧಿಸಿದ ಕೆಲವು ವಿಚಾರಗಳನ್ನು ವಿವೇಚಿಸಿದುದಾಯಿತು. ಪ್ರಕೃತದಲ್ಲಿ ಅದಕ್ಕೆ ಪೋಷಕವಾದ ಒಂದೆರಡು ವಿಷಯಗಳನ್ನು ವಾಚಕರ ಮುಂದಿಡಲು ಪ್ರಯತ್ನಿಸಿದೆ.

ನಮ್ಮ ಮೊದಲನೆಯ ಲೇಖನದಲ್ಲಿ ಶ್ರೀ ನಿಡುವಾಮಿಡಿ ಮಠದ ಮೂಲ ಪೀಠವು ಶ್ರೀಶೈಲದಲ್ಲಿರುವ ಪಂಚವಣ್ಣೆಗೆಯ ಶ್ರೀ ಗೋಕರ್ಣ ಸಿಂಹಾಸನವೆಂದೂ, ಆ ಮಠದ ಮೇಲ್ವಿಚಾರಣೆಯನ್ನು ಈ ಪೀಠಾಧೀಶ್ವರರಾಗಿದ್ದ ಶ್ರೀಮರಿ ಕರಿಬಸವ ರಾಜೇಂದ್ರ ಸ್ವಾಮಿಗಳವರು ೧೪೧೯ ರಲ್ಲಿ ವೀರಮಾಹೇಶ್ವರರಾದ ಮಾದುಲ ವೀರಯ್ಯನವರಿಗೆ ವಹಿಸಿದಂತೆಯೂ, ಅದಕ್ಕಾಗಿ ಅವರಿಗೆ ಅಲ್ಲಿ ಶ್ರೀ ಗೋಕರ್ಣ ಸ್ವಾಮಿಗಳಿಗಿರುವ ಐನಾಂ ಜಮೀನುಗಳಲ್ಲಿಂದನ್ನು ಧಾರಾಕೃತವಾಗಿ ದಾನಮಾಡಿದಂತೆ ನಮೂದಿರುವ ತಾಮ್ರ ಶಾಸನವು ಈ ಮಠದಲ್ಲಿ ಉಪಲಬ್ಧವಾಗಿದೆಯೆಂದೂ ಉಲ್ಲೇಖ ಮಾಡಿದೆಯಷ್ಟೇ! ಈ ಶಾಸನದಲ್ಲಿರುವ "ಪಂಚವಣ್ಣೆಸೆ" ಎಂಬ ವಿಶೇಷಣವು ಬಹಳ ಮಹತ್ವದ್ದಾಗಿರುತ್ತದೆ. ಇದು ಆ ಪ್ರದೇಶದ ಅಥವಾ ಈ ಪೀಠದವರಿಗಿದ್ದ ಒಂದು ಅಂಕಿತವಾಗಿರಬಹುದೆಂದು ಊಹಿಸಬಹುದಾಗಿದೆ. ಆದರೆ ಈ ಉಪನಾಮವು ಬರಲು ನಿಮಿತ್ತವೇನೆಂಬುದಿನ್ನೂ ಸರಿಯಾಗಿ ತಿಳಿದು ಬಂದಿಲ್ಲ. ಆದಾಗ್ಯೂ 'ಪಂಚವಣ್ಣೆಸೆ' ಎಂಬ ಉಪಾಧಿಯುಳ್ಳ ಅನೇಕ ಕವಿಗಳೂ ಮಠಾಧೀಶ್ವರರೂ ಈ ಪೀಠದ ಶಾಖಾ ಮಠಗಳಲ್ಲಿದ್ದಂತೆ ಅನೇಕ ಉಲ್ಲೇಖಗಳು ಇತಿಹಾಸದಲ್ಲಿ ನಮಗೆ ಉಪಲಬ್ಧವಾಗುತ್ತಿವೆ.

ಕ್ರಿ. ಶ. ೧೬೦೦ ರಲ್ಲಿದ್ದ "ಸಿದ್ಧನಂಜೇಶ್ವರ" ಎಂಬ ಕವಿಯು ತನ್ನ ಗುರು ಪರಂಪರೆಗೆ ಸೇರಿದ ನೀಲಗುಂದದ ಸಿಂಹಾಸನ

---

§ ಕವಿಚರಿತ ಭಾ. ೨ ಪು ೩೮೦

ನಾಧೀಶ ಪಂಚವರ್ಣಿಗೆಯ ಅನ್ನದಾನೇಶ್ವರ, ಅವರ ಶಿಷ್ಯ ಕುರುಪತಿ ಪುರದ ಸಿಂಹಾಸನಾಧೀಶ ಸಿದ್ಧನಂಜೇಶ್ವರ ಇವರೆಲ್ಲರೂ ಈ ಪಂಚವರ್ಣಿಗೆಯ ಗೋಕರ್ಣ ಸಿಂಹಾಸನದ ಶಾಖಾಕ್ಕೆ ಸೇರಿದವರಿಂದು ಸಿದ್ಧವಾಗುತ್ತದೆ. ಈ ಸಿದ್ಧನಂಜೇಶನ ಗುರುರಾಜಚರಿತ್ರೆಯ ಪ್ರತಿ ಸಂಧಿಯ ಅಂತ್ಯದಲ್ಲಿಯೂ:—

"ಧಾತ್ರಿಗುತ್ತಮವೆನಿಪ ಪೂವಲ್ಲಿ ಪುರಕಧಿಪ।
ಜಿತ್ರ ಗುರು ಪಂಚವರ್ಣಿಗೆ ಸಿದ್ಧನಂಜೇಶ ॥
ಪುತ್ರಸತ್ಪವಿ ಕುಲ ಸ್ತೋತ್ರ ಶ್ರೀಶೈಲ ನೈರುತ್ಯ ಭಾಗದೊಳಿಪ್ಪ।
ಕ್ಷೇತ್ರ ನವನಂದಿ ಮಂಡಲದ ಸಿಂಹಾಸನಕೆ।
ಛತ್ರ ಶಿವ ಕವಿ ಸಿದ್ಧನಂಜೇಶ ಕೃತ ದಿವ್ಯ।
ಸ್ತೋತ್ರ ಗುರು ರಾಜ ಚಾರಿತ್ರದೊಳು ..... "

ಎಂಬ ಪದ್ಯವಿದೆ. ಈತನ ಗುರುವಾದ ಪಂಚವರ್ಣಿಗೆಯ ಸಿದ್ಧನಂಜೇಶನು ತನ್ನ ಪತ್ನಿಯಾದ ಚನ್ನವೀರಾಂಬೆಗೆ ಹೇಳಿದ ವಿಷಯಗಳನ್ನೇ ಅವನ ಆಜ್ಞಾನುಸಾರವಾಗಿ ತಾನು ಈ ಗ್ರಂಥದಲ್ಲಿ ವಿವರಿಸಿದಂತೆ ಹೇಳುತ್ತಾನೆ. ಈತನು ತನ್ನ ಗುರುವಾದ ಸಿದ್ಧನಂಜೇಶ್ವರನನ್ನು ಚತುರಾಚಾರ್ಯರಿಗೆ ಸಮಾನನೆಂದು ಸ್ತುತಿಸಿದ್ದಾನೆ. ಈತನ ರಾಘವಾಂಕ ಚಾರಿತ್ರವು "ಕರ್ನಾಟಕ ಕವಿತ್ವಕೋವಿದ ಪಂಚವರ್ಣಿಗೆಯ ಸಿದ್ಧನಂಜೇಶಾಂಘ್ರಿ ಕಮಲ ಮಧುಪ ರಾಚವಟ್ಟಿಯಾರಾಧ್ಯನ" ಕೃಪೆಯಿಂದ ಪೂರ್ಣವಾದಂತೆ ಈ ಕವಿಯು ಹೇಳುತ್ತಾನೆ. ಇದರಿಂದ ರಾಚವಟ್ಟಿಯಾರಾಧ್ಯನೂ ಪಂಚವರ್ಣಿಗೆಯ ಸಿದ್ಧನಂಜೇಶನ ಶಿಷ್ಯನಾಗಿದ್ದನೆಂದು ತಿಳಿಯ ಬರುತ್ತದೆ. ರಾಚವಟ್ಟಿಯ ಮಠದ ಅನೇಕ ಮಹಾಧೀಶರನ್ನು ಈ ಕವಿಯು ಸೂಚಿಸಿದ್ದಾನೆ. ಗಡ್ಡದ ರಾಚವಟ್ಟಿಯಯ್ಯಾ, ಪಂಚವರ್ಣಿಗೆಯ ವಿರೂಪಾಕ್ಷಯ್ಯ, ಚರಚಕ್ರವರ್ತಿ ಜಡೆಯ ಶಿವಲಿಂಗಾರ್ಯ, ಲೇಖ್ಯದ ಕವಿಯ ಸಿದ್ಧಬಸವೇಶ, ಸಪ್ಪೆಯರಾಯಯತಿ, ರಾಚವಟ್ಟಿಯಾರಾಧ್ಯ ಮುಂತಾದ ಈ ಪೀಠದ ಶಾಖಾ ಮಹಾಧೀಶರ ಉಲ್ಲೇಖವನ್ನು ಮಾಡಿದ್ದಾನೆ. ಇದಲ್ಲದೆ ತನ್ನ ಗುರುರಾಜ ಚರಿತ್ರದಲ್ಲಿ ಅನೇಕ ಪುರಾತನರ ಹಾಗೂ ನೂತನರ ಹೆಸರುಗಳು ಉಕ್ತವಾಗಿರುವುದರಿಂದ ಅನೇಕ ಕವಿಗಳ ಶೋಧನೆಗಳಿಗೆ ಬಹಳ ಅನುಕೂಲವಾಯಿತೆಂದು ಕವಿ ಚರಿತೆಕಾರರು ಅಭಿಪ್ರಾಯಪಟ್ಟಿರುತ್ತಾರೆ. ಇವರಲ್ಲಿ ಮುಖ್ಯವಾಗಿ ವೀರ

ಶೈವ ಪಂಚಾಚಾರ್ಯರಲ್ಲೊಬ್ಬನಾದ ವಿಶ್ವೇಶ್ವರಾಚಾರ್ಯನೂ ಅವನ ಶಿಷ್ಯ ಪಂಚವರ್ಣಿಗೆಯ ಸ್ವಾಮಿ ಇವನ ಶಿಷ್ಯ ಬಯಲ ಪಂಚವರ್ಣಿಗೆ ಮಹಾರ್ಯ..... ಇತ್ಯಾದಿ ಇವರೆಲ್ಲ ಪ್ರಸಿದ್ಧವಾದ 'ಪಂಚವರ್ಣಿಗೆ ಗೋಕರ್ಣ ಸೂರ್ಯ ಸಿಂಹಾಸನದ ಶಾಖೆಯವರೆಂದು ಹೇಳಬಹುದಾಗಿದೆ. ಪಂಚವರ್ಣಿಗೆಯ ಸ್ವಾಮಿಯು ವಿಶ್ವೇಶ್ವರಾಚಾರ್ಯನ ಸೇವೆಯಿಂದ ಅವರ ಅನುಗ್ರಹವನ್ನು ಪಡೆದುದೇನೂ ವಿಶೇಷ ಸಂಗತಿಯಾಗಿ ಕಾಣುವುದಿಲ್ಲ.

ಸಿದ್ಧನಂಜೇಶನು ಶ್ರೀಶೈಲ ನೈರುತ್ಯ ಭಾಗದೊಳಿಪ್ಪುವ ಶ್ರೀ ನಂದಿ ಮಂಡಲದ ಸಿಂಹಾಸನದ ಮಠಕ್ಕೆ ಅಧಿಪತಿಯಾಗಿದ್ದನೆಂದು ಹೇಳಿಕೊಂಡಿರುವುದರಿಂದಲೂ, ಈ ಗೋಕರ್ಣ ಪೀಠವು ಶ್ರೀಶೈಲದ ಪೂರ್ವ ಭಾಗದಲ್ಲಿದೆಯೆಂದು ತಾಮ್ರ ಶಾಸನದಿಂದ ವ್ಯಕ್ತವಾಗುವುದರಿಂದಲೂ ಈ ಪೀಠದ ಶಾಖೆಯವರೇ ಶ್ರೀ ನಂದಿ ಮಂಡಲದ ಮಠದಲ್ಲಿ ಅಧಿಪತಿಗಳಾಗಿರಬಹುದೆಂದು ಸ್ಪಷ್ಟವಾಗುತ್ತದೆ. ಮತ್ತು ಈತನ ಗುರು ರಾಜ ಚರಿತ್ರದಲ್ಲಿ ಉಕ್ತವಾಗಿರುವ 'ಚಂದ್ರಗುಂಡ, ವಿರೂಪಾಕ್ಷದೇವ' ಇವರು ಈ ಪೀಠದ ಅಧಿಕಾರಿಗಳಾಗಿದ್ದು ಹಿಂದಿನ ಗುರುವರ್ಯರು ಅಥವಾ ಅವರ ನಾಮಾಂಕಿತರಾದ ಈ ಪೀಠಾಧೀಶರಾಗಿದ್ದರೆಂಬ ವಿಷಯದಲ್ಲಿ ಸಂದೇಹವಿರುವುದಿಲ್ಲ. ಇನ್ನು ಮಾಗಡಿಯ ಕರಿಯ ಬಸವೇಶ್ವರ, ಸಪ್ಪೆಯಾರ್ಯ ಮುಂತಾದವರು ಇವರ ಶಾಖಾ ಪರಂಪರೆಯವರೆಂದೇ ಸಿದ್ಧವಾಗುತ್ತದೆ.

ಶಿವಲಿಂಗ ಚಾರಿತ್ರ, ಶಿವಗಣ ಚಾರಿತ್ರ ಮುಂತಾದ ಗ್ರಂಥಕರ್ತರಾದ ಶ್ರೀ ಶಾಂತವೀರ ದೇಶಿಕೇಂದ್ರರು † ಈ ಪೀಠದಲ್ಲಿ ಸುಮಾರು ಹದಿನಾರನೆಯ ಶತಮಾನದಲ್ಲಿ ಸಿಂಹಾಸನಾಸೀನರಾಗಿದ್ದಂತೆ ತಿಳಿದುಬರುತ್ತದೆ. ಇವರು ಆಶ್ರಮ ಸ್ವೀಕಾರಕ್ಕೆ ಪೂರ್ವದಲ್ಲಿಯೇ ತಮ್ಮ ಪ್ರಪಿತಾಮಹರಾಗಿಯೂ ಶ್ರೀ ಪಂಡಿತಾರಾಧ್ಯ ವಂಶೀಯರಾಗಿಯೂ ಇದ್ದ ಶ್ರೀ ಶಿವಲಿಂಗಾರ್ಯರ ಚರಿತ್ರೆಯನ್ನು ಬರೆದಿರುತ್ತಾರೆ. ಇವರ ಜನ್ಮಸ್ಥಾನವು ಪೆನುಗೊಂಡೆಯು ದೇಶದ ಅಪ್ಪೆಯ ಕೆರೆ ಎಂದು ಹೇಳಿರುತ್ತಾರೆ. ಪೆನುಗೊಂಡೆಯು ಸುತ್ತುಮುತ್ತಲೂ ಮೇಲೆ ಹೇಳಿದ ಶಿವಲಿಂಗಾರ್ಯರ

† ಕನ್ನಡ ಕವಿಚರಿತೆ ಭಾ. ೨ ಪು. ೨೭೭

ವಂತೀಯರಾದ ಶ್ರೀ ಪಂಡಿತಾರಾಧ್ಯ † ಮುಂಡಕೆಯವರೆಂದು ಕರೆಯಲ್ಪಡುವ ಒಂದು ಪಂಗಡದವರು ಇಂದಿಗೂ ವಾಸವಾಗಿರುತ್ತಾರೆ. ಅಲ್ಲಿಯ ಹೊಸ ಕೆರೆ (ಅಪ್ಪೆಕೆರೆ) ಬುಕ್ಕ ಪಟ್ಟಣ, ಕನಮುಕ್ಕಲು, ಧರ್ಮಾವರಂ, ಕಪ್ಪಲಬಂಡ, ತಲಮರಲ, ಪಾಮುದುರ್ತಿ, ಪುಲಿವಿಂದಲ, ನಾಗಲೂಟ್ಲ, ಕಲ್ಯಾಣದುರ್ಗಂ, ರಾಯದುರ್ಗಂ ಮುಂತಾದ ಅನೇಕ ಸ್ಥಳಗಳಲ್ಲಿನ ಈ ಪೀಠದ ಶಾಖಾ ಮಠಗಳು ಇಂದಿನ ವರೆಗೂ ಈ ಪೀಠದವರ ಅಧಿಕಾರಕ್ಕೆ ಒಳಪಟ್ಟಿರುತ್ತವೆ.

ಶ್ರೀ ಶಾಂತವೀರ ದೇಶಿಕೇಂದ್ರರು ಸಿಂಹಾಸನಾರೂಢರಾದ ನಂತರ ನಡೆಯಿಸಿದ ಮಹತ್ವಗಳನ್ನು ಶ್ರೀ ಪುಲ್ಲಕವಿ ಮುಂತಾದವರು ವರ್ಣಿಸಿರುತ್ತಾರೆ. ಇವರು – ಹೊಸ ಕೆರೆಗೆ ಸವಿೂಪದಲ್ಲಿರುವ ಬುಕ್ಕರಾಯ ಸಮುದ್ರವು ಪ್ರಾಂತ್ಯದ ಅಧಿಪತಿಗಳಾಗಿದ್ದ 'ಮಹರೆಡ್ಡಿ' ಗಳೆಂಬ ಜನಾಂಗದವರಿಗೆ ಲಿಂಗಧಾರಣೆಯನ್ನು ಮಾಡಿದರು. ಅದೇ ಹೊಸಕೆರೆ (ಅಪ್ಪೆಯ ಕೆರೆ) ಯಲ್ಲಿ ಮಹರೆಡ್ಡಿಗಳು ಒಂದು ಮಠವನ್ನು ಕಟ್ಟಿಸಿಕೊಟ್ಟು ಅಮೂಲ್ಯವಾದ ರತ್ನಾಭರಣಗಳನ್ನೂ ಅಪಾರವಾದ ಭೂ ಆಸ್ತಿಯನ್ನೂ ಗುರುಗಳಿಗೆ ಅರ್ಪಿಸಿದ್ದಾರೆ. ಈ ಮಠಾಧೀಶರು ಅದನ್ನಿಂದಿಗೂ ತಮ್ಮ ಅಧೀನದಲ್ಲಿಟ್ಟುಕೊಂಡಿರುತ್ತಾರೆ. ಅನಂತರ ಪೆನುಗೊಂಡೆಗೆ ದಯಮಾಡಿಸಿ ಅನೇಕ ಪವಾಡಗಳನ್ನು ನಡೆಯಿಸಿ ಮೂಕನಾಗಿದ್ದ ಒಬ್ಬ ಬ್ರಾಹ್ಮಣನಿಗೆ ವಾಕ್ ಶಕ್ತಿಯನ್ನನುಗ್ರಹಿಸಿದರಂತೆ. ಅನಂತರ ವಿಜಾಪುರಕ್ಕೆ ದಯಮಾಡಿಸಿ ಅಲ್ಲಿನ ನವಾಬರ ಸಮ್ಮುಖದಲ್ಲಿ ಅಗ್ನಿ ಕುಂಡಲದಲ್ಲಿ ಕೆಂಡವಂತೆ ಹಾಯಿಸಿದ ಕಬ್ಬಿಣದ ಸರಪಣಿಯನ್ನು ಶ್ರೀಯುರ ಅಭಯವನ್ನು ಪಡೆದ ವಟುವೊಬ್ಬನು ಲೀಲೆಯಿಂದ ಈಚೆಗೆ ತೆಗೆದುಕೊಂಡು ಬಂದನೆಂದೂ ಇವನ್ನು ನೋಡಿ ಆಶ್ಚರ್ಯಚಕಿತನಾದ ನವಾಬನು ಇವರಿಗೆ ಅನೇಕ ಪಲ್ಲಕ್ಕಿಗಳನ್ನೂ ಒಂಟೆ, ಕಾಟೇಪಾಗು, ಹಸರು ಬಾವುಟ ಮುಂತಾದ ಬಿರುದಾವಳಿಗಳನ್ನರ್ಪಿಸಿದನೆಂದೂ ಪುಲ್ಲಕವಿಯು ಮನೋಹರವಾಗಿ ವರ್ಣಿಸಿರುತ್ತಾನೆ.

† ಈ ಪಂಗಡದವರೇ ಈ ಪೀಠಕ್ಕೆ ಅಧೀಶರಾಗುತ್ತಿದ್ದುದು ಇಂದಿನ ವರೆಗೂ ನಡೆದು ಬಂದಂತೆ ಐತಿಹಾಸಿಕ ಹಾಗೂ ಪೌರಾಣಿಕ ಉಲ್ಲೇಖಗಳು ಉಪಲಬ್ಧವಾಗಿರುತ್ತವೆ. (ಈ ಬಗೆಯ ಕೆಲವು ಪುರಾರು ಕಾಪಿಗಳೂ ದೊರೆಯುತ್ತವೆ.)

ಶಿವಯೋಗಾಂಗ ಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾವೃತ, ವೃಷಭಗೀತೆ, ಅವಧೂತಗೀತೆ ಮತ್ತು ಮನೋವಿಜಯವೆಂಬ ಸಪ್ತ ಕಾವ್ಯಗಳನ್ನು ಬರೆದ 'ಶ್ರೀಗುರು ಬಸವೇಶ' * ನೆಂಬ ಕವೀಂದ್ರನು ಈ ಪೀಠದ ಪರಂಪರೆಗೆ ಸೇರಿದವನೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದನ್ನು ಸಮರ್ಥಿಸಲು ಮನೋವಿಜಯ, ಅವಧೂತ ಗೀತೆ ಮುಂತಾದ ಕೆಲವು ಕಾವ್ಯಗಳ ಜೀರ್ಣವಾದ ಓಲೆಯ ಪ್ರತಿಗಳು ಈ ಮಠದಲ್ಲಿ ಉಪಲಬ್ಧವಾಗುತ್ತಿವೆ. ಅವುಗಳಲ್ಲಿ ಪ್ರತಿ ಸಂಧಿಯ ಆದ್ಯಂತಗಳಲ್ಲಿ 'ಶ್ರೀ ಚಂದ್ರಗುಂಡ ಸ್ವಾಮಿನೇನಮಃ, ಶ್ರೀ ವಿರೂಪಾಕ್ಷಾಯನಮಃ' ಎಂಬ ಅಂಕಿತಗಳು ಉಲ್ಲೇಖಿಸಲ್ಪಟ್ಟಿವೆ. ಕವಿ ಚರಿತೆಯನ್ನು ಸಂಗ್ರಹಿಸಿದ ಶ್ರೀ ರಾ॥ ಬ॥ ಆರ್. ನರಸಿಂಹಾಚಾರ್ಯರೂ ಸಹ ಮನೋವಿಜಯದ ಕಡೆಯಲ್ಲಿ "ಶ್ರೀಮತ್ಪರಮಾನಂದ..... ಯೋಗಿಜನ ಸೇವಿತ ಚರಣಾರವಿಂದ ಷಟ್‌ಸ್ಥಲ ಜ್ಞಾನ ಪ್ರಭಾಪುಂಜ ತಾಂತರಂಗ ವೀರಶೈವ ಮತಸ್ಥಾಪನಾಚಾರ್ಯನಪ್ಪ ಶ್ರೀಮದ್ಗುರು ಬಸವೇಶ್ವರಂ..." ಎಂದು ಹೇಳಿರುವುದರಿಂದಲೂ, ಚನ್ನಬಸವ ಪುರಾಣದ ೬ನೆಯ ಸಂಧಿ ೧೫, ೧೬, ೩೫ನೆಯ ಪದ್ಯಗಳಲ್ಲಿ ಈತನು ವಿಜಯನ ಗುರುವಿನ ೨ನೆಯ ಪ್ರೌಢ ದೇವರಾಯನ (೧೪೧೯--೧೪೪೬) ಆಸ್ಥಾನವಲ್ಲಿದ್ದಂತೆ ಕಂಡುಬರುವುದರಿಂದಲೂ ಈತನು ವೀರಶೈವರಲ್ಲಿ ಬಹಳ ಪ್ರಸಿದ್ಧನಾದ ಗುರುವಾಗಿದ್ದಂತೆ ತೋರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಮತ್ತು ಗುರುಸಿದ್ಧ ಬಸವರಾಜೇಂದ್ರ ದೇಶಿಕೇಂದ್ರರೆಂಬಭಿಧಾನದ ಓರ್ವ ಮೂರ್ತಿಗಳು ಈ ಪೀಠದ ಪಟ್ಟವಲ್ಲರಿಯಲ್ಲಿ ಸೇರಿದ್ದರೂ ಕಾಲ ಮುಂತಾದವುಗಳಲ್ಲಿ ಸರಿಯಾದ ಆಧಾರಗಳು ನಮಗೆ ದೊರೆತಿಲ್ಲ. ಮನೋವಿಜಯದ ಕಾವ್ಯ ಭಾಗವಲ್ಲೆಲ್ಲಿಯೂ 'ಚಂದ್ರಗುಂಡ ದೇಶಿಕ' ಮುಂತಾದ ಉಲ್ಲೇಖಗಳು ದೊರೆಯದಿರುವುದರಿಂದಲೂ ಪುಲ್ಲಕವಿಯೂ ಈ ಪ್ರಸ್ತಾಪವನ್ನು ಮಾಡದಿರುವುದರಿಂದಲೂ ನಾವು ಈ ವಿಷಯವನ್ನು ಸದ್ಯಕ್ಕೆ ಸಂಶಯ ಕೋಟಿಯಲ್ಲಿ ಸೇರಿಸಬೇಕಾಗಿದೆ.

* ಕ. ಚ. ಭಾ ೨ ಪೀ. ೭೪

ಇನ್ನು ಸಿದ್ಧೇಶ್ವರ ಪುರಾಣದಲ್ಲಿಯೂ ಚನ್ನಬಸವೇಶ್ವರ ಪುರಾಣದಲ್ಲಿಯೂ ಉಕ್ತವಾಗಿರುವ ಕಂಬಳಿಯದೇವ, § ಸಂಪಗೆಯ ರಾಜವಟ್ಟಿಯದೇವ, ಸಪ್ಪಯಾರ್ಯ, ರಾಚವಟ್ಟಿದೇವ ಮುಂತಾದವರು ಶ್ರೀತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಗಳಿಗೂ ಶಿಷ್ಯರಾಗಿದ್ದಂತೆ ಉಲ್ಲೇಖಗಳಿದ್ದರೂ ಸಹ ಅವರೆಲ್ಲರೂ ಈ ಪೀಠದ ಶಾಖಾ ಮಠಗಳ ಮೂರ್ತಿಗಳೇ ಆಗಿದ್ದಾರೆಂಬುದರಲ್ಲಿ ಸಂದೇಹವಿಲ್ಲ.

ಸಾಕ್ಷಾತ್ ಶ್ರೀ ನಿಡುಮಾಮಿಡಿಯ ಮಠಾಧೀಶರೇ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರಿಂದ ಈಚೆಗೆ ಇತಿಹಾಸದಲ್ಲಿ ಪ್ರಸಿದ್ಧನೂ, ಸಾಕ್ಷಾತ್ ನಂದಿಯ ಅವತಾರಿಯೂ ಮಹಾಪುರುಷನೂ ಆಗಿದ್ದ ಶ್ರೀಮದ್ವಸವೇಶ್ವರನ ಅಂಕಿತವನ್ನು (ಕರಿಬಸವ, ಮರಿ ಕರಿಬಸವ ಇತ್ಯಾದಿ) ತಮ್ಮ ಕರಕಂಜಾತರಿಗೆ ಇಟ್ಟಿರುವುದನ್ನು ನೋಡಿದರೆ ಪ್ರಾಚೀನ ವೀರಶೈವ ಗುರು-ವಿರಕ್ತ ವರ್ಗದಲ್ಲಿ ಎಷ್ಟರಮಟ್ಟಿಗೆ ಮೇಳನ ವಿದ್ದಿತೆಂದು ತಿಳಿದು ಪ್ರತಿಯೊಬ್ಬ ಸಮಾಜಾಭಿಮಾನಿಗೂ ಆತ್ಯಾನಂದವುಂಟಾಗುತ್ತದೆ. ಇದಕ್ಕೆ ಸಾವಿರಾರು ನಿದರ್ಶನಗಳು ವೀರಶೈವ ಇತಿಹಾಸದಲ್ಲಿ ರಾರಾಜಿಸುತ್ತವೆ. ಎಲ್ಲ ಮಹಾಪುರುಷರ 'ವಿಶ್ವಪ್ರೇಮದ' ಆದರ್ಶವು ವೀರಶೈವ ವರ್ಗದಲ್ಲಿದ್ದುದರಿಂದಲ್ಲವೇ ಈ ಮಠದಲ್ಲಿ ಅನೇಕಾನೇಕ ಪವಾಡ ಪುರುಷರೂ, ಶಾಸ್ತ್ರಕಾರರೂ, ಕವಿಗಳೂ, ಕವಯಿತ್ರಿಯರೂ, ಆಗಿ ಇಡೀ ವಿಶ್ವಕ್ಕೆ ಒಂದು ಉಚ್ಚವಾದ ಆದರ್ಶವನ್ನು ತೋರಿ ಅಮರರಾದರು. ಅಂತಹುದೊಂದು ಅಮೃತ ಯುಗವನ್ನು ಇಂದು ವೀರಶೈವವು ನಿರೀಕ್ಷಿಸುತ್ತಿದೆಯೆಂದು ಸಮಾಜಾಭಿಮಾನಿಗಳು ಹೇಳುತ್ತಿರುವುದು ಸಹಜವೇ ಆಗಿದೆ. ಜಗದೀಶನು ಅದನ್ನು ಶೀಘ್ರದಲ್ಲಿಯೇ ಕರುಣಿಸಿ ಈ ದಾವಾಗ್ನಿಯಿಂದ ಪಾರುಮಾಡಲೆಂದೇ ನನ್ನ ಬೇಡಿಕೆಯು. ಅಸ್ತು. ಮುಂದೆ ಇವಕ್ಕೆ ಸಂಬಂಧಿಸಿದ ಇನ್ನಷ್ಟಿದ ವಿಚಾರಗಳನ್ನು ವಿವರಿಸುವೆವು.

(ಸಶೇಷ.)

§ ಕಂಬಳಿ ದೇಶಿಕೇಂದ್ರರು ಶ್ರೀ ನಿಡುಮಾಮಿಡಿ ಸ್ವಾಮಿಗಳ ಕರಕಂಜಾತರೆಂಬುವನ್ನು ಪ್ರತಿಪಾದಿಸುವ ಒಂದು ಪ್ರಾಚೀನ ಪತ್ರವು ಕೊಲ್ಲಾರದಲ್ಲಿರುವ ಕಂಬಳಿ ಮಠದಲ್ಲಿದ್ದು ೧೯೨೬ರಲ್ಲಿ ಶ್ರೀ ನಿಡುಮಾಮಿಡಿ ಸ್ವಾಮಿಗಳು ಶಿಷ್ಯ ಸಂಚಾರಕ್ಕೆ ದಯಮಾಡಿಸಿದಾಗ ಇದು ಲಭ್ಯವಾಗಿತ್ತೆಂಬುದು ಲೇಖಕನ ಸ್ವಂತ ಅನುಭವದ ವಿಷಯವಾಗಿದೆ.

ಶ್ರೀಕರಭಾಷ್ಯ ವಿಮರ್ಶವು.

(ಶ್ರೀ ಸಿದ್ಧರಾಮಪ್ಪ ದುಂಡಪ್ಪ ಪಾವಟೆ ಬಿ. ಏ. ಎಲ್. ಎಲ್. ಬಿ ಹುಬ್ಬಳ್ಳಿ.)

ಹಿಂದಿನಿಂದ ಮುಂದೆ ಸಾಗಿದ್ದು.

ಹಾಗಾದರೆ ಈ ಪದಸಮೂಹದ ಅರ್ಥವೇನು?

ಎಲ್ಲ ಬಗೆಯಿಂದಲೂ ವಿಮರ್ಶವು ಮುಗಿದ ಬಳಿಕ ಇಡಿಯದಾದ ಯಜುಸ್ಸಿನ ಅರ್ಥವನ್ನು ಒಮ್ಮೆ ಹೇಳುವುದು ಚೆಂದವು. ಆದರೆ ಓದುಗರಿಗೆ ಈ ಸ್ವರ ವಿಚಾರದ ಫಲವೇನು? ಎಂದು ಅನ್ನಿಸಬಹುದು. ಪದವು ಆಮಂತ್ರಿತವೆಂದರೇನು? ಬಹುವ್ರೀಹಿಯು ಅಲ್ಲವೆಂದರೇನು? ಭಾಷ್ಯಕಾರನ ಮತದಿಂದ ಬಹುವ್ರೀಹಿಯಾಗದಿದ್ದರೆ ಲಿಂಗಧಾರಣವು ಈ ಮಂತ್ರದಿಂದ ಸಿದ್ಧಿಸದೆಂತು? ಎಂಬ ಪ್ರಶ್ನೆಗಳು ಅವರ ಮನದ ಮುಂಬರಿಯಬಹುದು. ಆದುದರಿಂದ ಇಲ್ಲಿ ಅನಿತಕ್ಕೆ ಅಮೃತಸ್ಯ ದೇವ ಧಾರಣಾಯೋ ಭೂಯಾಸಮ್" ದ ಅರ್ಥವನ್ನು ವಿವರಿಸುವಣ.

"ಸಾಮಂತ್ರಿತಮ್" ೨-೩-೪೮. ಸಂಬೋಧನದಲ್ಲಿ ಬಂದ ಪ್ರಥಮೆಸೆ ಆಮಂತ್ರಿತವೆಂಬರು. ಆದುದರಿಂದ ದೇವ ಎಲೈ ಪ್ರಕಾಶಮಾನವಾದ ಪ್ರಣವವೆ (ನಾನು) ಅಮೃತಸ್ಯ ಮೋಕ್ಷಸಾಧನವಾದ ವಿದ್ಯೆಯನ್ನು (ಕರ್ತೃ ಕರ್ಮಣೋಃ ಕೃತಿ ೨-೩-೬೫ ಎಂದು ಕರ್ಮಣಿ ಷಷ್ಠೀ) ಧಾರಣಃ ಧರಿಯಿಸುವನು. ಭೂಯಾಸಂ ಆಗಲಿ.

ಪದವು ಸಂಬೋಧನಾಂತವಾದುದರಿಂದ ಧಾರಣ ಪದದೊಡನೆ ಸಮಾಸವಾಗದು. ಧಾರಣ ಪದವು ಕರ್ತರಿ ಲ್ಯುಡಂತ ಪ್ರತಿಪದಿಕಕ್ಕೆ ಪ್ರಥಮಾ ವಿಭಕ್ತಿಪರವಾಗಿದೆ. ಈ ಕರ್ತೃವಿಗೆ ಅಮೃತಸ್ಯ ಎಂಬುದು ಕರ್ಮವಾಗಿದೆ. ಇರಲಿ. ಇನ್ನು ವಿಭಕ್ತಿ ವಿಚಾರದತ್ತ ಹೊರಳುವಣ.

ಪ್ರಾತಿಪದಿಕ ವಿಭಕ್ತಿ ವಿಚಾರವು.

ಶಿಕ್ಷಾಶಾಸ್ತ್ರನಿಯಮಗಳಿಂದ ಅವೃತಸ್ಯ ದೇವ ಧಾರಣವೋ ಭೂ
ಯಾಸಂ ಎಂಬಲ್ಲಿ ಬಹುವ್ರೀಹಿ ಸಮಾಸವಿಲ್ಲ. ದೇವ ಎಂದು ಸಂಬೋ
ಧನ ವಿಭಕ್ತಿಪದವು ಎಂಬುವನ್ನು ತೋರಿಸಿದೆವು. ಈಗ 'ಅವೃತಸ್ಯ'
ಪದದ ವಿಭಕ್ತಿ ವಿಚಾರದಿಂದ ಶ್ರೀ ಪಂಡಿತಾಚಾರ್ಯನ ಲಿಂಗಧಾರಣ
ರಾದ್ಧಾಂತವನ್ನು ನೋಡುವೆವು.

ಆಚಾರ್ಯನು ಅವೃತಸ್ಯ ಎಂದುದಕ್ಕೆ ಮೋಕ್ಷಾಯ ಎಂದು
ಚತುರ್ಥೀ ವಿಭಕ್ತಿಯನ್ನಿಟ್ಟು ವಾಕ್ಯಾರ್ಥವನ್ನು ಮೋಕ್ಷಕ್ಕಾಗಿ ಶಿವಲಿಂಗ
ಧಾರಣವನುಳ್ಳಾತನಾಗಲಿ ನಾನು ಎಂಬುದಾಗಿ ಹೇಳ್ವನು. ಇದು
ಆಹುದೊ ಆಗದೊ ಎಂದು ಪರೀಕ್ಷಿಸಬೇಕಾಗಿದೆ.

ಚತುರ್ಥ್ಯರ್ಥೇ ಬಹುಲಂ ಛಂದಸ್ಸು.

ಆಚಾರ್ಯನು ಆವ ವ್ಯಾಕರಣ ಸೂತ್ರದಿಂದ ಷಷ್ಠೀವಿಭಕ್ತಿಯನ್ನು
ಚತುರ್ಥಿಗೊಯ್ದಿನೆಂದು ಹೇಳಿಲ್ಲ. ವಿಭಕ್ತಿಸೂತ್ರಗಳನ್ನು ನೋಡಿ ಶಕ್ಯ
ವಾದ ಸೂತ್ರಗಳನ್ನು ಪರಾಮರ್ಶಿಪುದು ನಮ್ಮ ಕೆಲಸವೀಗಾಗಿದೆ. ಷಷ್ಠಿ
ಯನ್ನು ಚತುರ್ಥಿಗೆ ತಿರುವಲು ಈ ೨-೩-೬೨ ಸೂತ್ರವು ಬಹಳ ಹವಣಾ
ಗಿದೆ. ನಾವದನ್ನು ಪರಿಶೀಲಿಸುವ. "ವೇದದಲ್ಲಿ ಚತುರ್ಥಿಯ ಅರ್ಥದಲ್ಲಿ
ಷಷ್ಠಿಯು ಬಹುಲದಿಂದ ಪ್ರಯೋಗವಹುದು." ಎಂದು ಈ ಸೂತ್ರವು
ಅವೃತಸ್ಯ = ಮೋಕ್ಷದ = ಮೋಕ್ಷಕ್ಕೆ ಈ ಸೂತ್ರದಿಂದ ಸಿದ್ಧವಾಯ್ತು
ಎಂದರೆ—

ಕಾರಕೋಪಪದ ವಿಭಕ್ತಿ ವಿಚಾರ.

ಇದಾಗದು. ಪ್ರಾತಿಪದಿಕ ವಿಭಕ್ತಿಗಳು ಕಾರಕ ವಿಭಕ್ತಿಗಳಾಗಿಯೂ
ಉಪಪದ ವಿಭಕ್ತಿಗಳಾಗಿಯೂ ವ್ಯವಹರಿಸುವುವು. ಕಾರಕವೆಂದರೆ 'ಕಾರಕಂ
ಹೇತುರಿತಿ ನಾರ್ಥಾಂತರಂ ಕಸ್ಯ ಹೇತುಃ? ಕ್ರಿಯಾಯಾಃ ವಕ್ಷ್ಯತಿ

ಪ್ರವಮಪಾಯೇ ಅಪಾದಾನಂ ಗ್ರಾಮಾದಾಗಚ್ಛತಿ. ಪರ್ವತಾದವರೋ
ಹತಿ" ಕಾಶಿಕಾ. ಕ್ರಿಯೆಗೆ ಹೇತುವಾದುದು ಕಾರಕವು. ಅದರ ಉದಾ
ಹರಣಗಳನ್ನು ಪಾಣಿನ್ಯಾಚಾರ್ಯನು ಹೇಳುವನು. ಅಗಲುವಲ್ಲಿ ಕದ
ಲದೆ ನಿಲ್ವನೆಲೆಯು ಅಪಾದಾನವು ಊರಿಂದೆ ಬಂದಪನು. ಬೆಟ್ಟದಿಂದಿ
ಳಿವನು. ಅಂತೆಯೆ ಕರ್ಮಣಾಯಮಭಿಪ್ರೈತಿ ಸ ಸಂಪ್ರದಾನಂ ೧-೪-೩೨
ಕರ್ತೃವು ತನ್ನ ಕರ್ಮದಿಂದ ಆರನ್ನು ಬಗೆವನೊ ಅದು ಸಂಪ್ರದಾನವು.
'ಕರ್ತುರೀಪ್ಸಿತತಮಂ ಕರ್ಮ' ೧-೪-೪೯. ಕರ್ತನ ಕ್ರಿಯೆಯಿಂದ ಆವುದು
ಹೊಂದಲು ಪಡೆವಲ್ಲಿ ವಿುಗಿಲಹುದೊ—ಕರ್ತನು ಕ್ರಿಯೆಯಿಂದ ಆವು
ದನು ಹೊಂದಲು ವಿುಗಿಲುಬಯಸಿದಪನೊ—ಅದು ಕರ್ಮವು. ಸ್ವತಂತ್ರ
ಕರ್ತಾ ೧-೪-೫೪. ಕ್ರಿಯೆಯು ಉಂಟಾಗುವಲ್ಲಿ ಸ್ವತಂತ್ರನಹನು ಕರ್ತೃವು
"ಸಾಧಕತಮಂ ಕರಣಮ್" ೧-೪-೪೨ ಕ್ರಿಯೆಯುಂಟಾಗುವಲ್ಲಿ ಆವುದು
ಅತ್ಯಂತವಾಗಿ ನೆರವಾದಪುದೊ ಅದು ಕರಣವು. ಆಧಾರೋ ಅಧಿಕರ
ಣಮ್ ೧-೪-೪೫. ಕ್ರಿಯೆಗೆ ಆಶ್ರಯವಾದ ಕರ್ತೃಕರ್ಮಗಳನ್ನು ಆವುದು
ಧರಿಪುದೊ ಅದು ಅಧಿಕರಣವು. ಕರ್ತೃ ಕರ್ಮ ಕರಣ ಸಂಪ್ರದಾನ,
ಅಪಾದಾನ, ಅಧಿಕರಣವೆಂಬಿವು ಕಾರಕಗಳು. ಇವು ಕ್ರಿಯೆಯ ಪ್ರಸಿದ್ಧಿಗೆ
ಹೇತುವಾಗಿವೆ. ಈ ಕಾರಕಗಳನ್ನು ವಾಚಿಸುವಲ್ಲಿ ಪ್ರಾತಿಪದಿಕ ವಿಭಕ್ತಿ
ಗಳು ಬಂದಪುವು. ಅವುಗಳಿಗೆ ಪ್ರಥಮಾದಿ ಸಂಜ್ಞೆಗಳನ್ನು ವ್ಯಾಕರಣ
ಸ್ಮೃತಿಕಾರರು ಕಲ್ಪಿಸಿಹರು. ಪ್ರಾತಿಪದಿಕವೆಂದರೆ ಧಾತುವಲ್ಲದ ಪ್ರತ್ಯ
ಯವೂ ಅಲ್ಲದ ಅರ್ಥವನುಳ್ಳ ಶಬ್ದವು. ಆದುದರಿಂದ ಬಳಿಕೆಯನುಳ್ಳ
ಶಬ್ದಗಳನ್ನು ಪ್ರಾತಿಪದಿಕಗಳಿಂತಲು ಧಾತುಗಳಿಂತಲು ಪ್ರತ್ಯಯಗಳಿಂ
ತಲು ಮೂರು ಬಗೆಯಿಂದ ವಿಂಗಡಿಸಬಹುದು. ಪ್ರಾತಿಪದಿಕಗಳಿಗೆ
ಹತ್ತುವ ಪ್ರತ್ಯಯಗಳಿಗೆ ಕಾರಕವಿಭಕ್ತಿಗಳೆಂಬರು. ಇವು ವಾಕ್ಯದಲ್ಲಿ
ಪ್ರಾತಿಪದಿಕದ ಬಳಿಯಲ್ಲಿ ವಿಶಿಷ್ಟ ಪ್ರಾತಿಪದಿಕಗಳು ಬಂದಾಗ ಆ ಶಬ್ದ
ಗಳ ಪೆಸೆಯಿಂದಲು ಬಂದಪುವು. ಆಗ ಅವು ಉಪಪದ ವಿಭಕ್ತಿಗಳೆನಿ
ಪುವು. ಇದರ ನಿಚ್ಚಳವಿಂತು. ಶಿವ, ಸೃಜ್ ಸು ತಿಪ್ ಎಂಬ ಶಬ್ದಗಳನ್ನು
ಕೊಳ್ಳಿ. ಶಿವ ಪ್ರಾತಿಪದಿಕವು. ಸೃಜ ಧಾತುವು. "ಸು" "ತ" ಗಳು ಪ್ರತ್ಯ
ಯಗಳು. "ಸು" ಪ್ರಾತಿಪದಿಕ ಪ್ರತ್ಯಯವು "ತಿಪ್" ಆಖ್ಯಾತ ಪ್ರತ್ಯ
ಯವು. ಧಾತುಗಳಿಗೆ ಸೇರುವ ಪ್ರತ್ಯಯಗಳಿಗೆ ಆಖ್ಯಾತ ಪ್ರತ್ಯಯಗ
ಳೆಂಬರು. ಇಲ್ಲಿ ಪ್ರಾತಿಪದಿಕಗಳಿಗೆ ಬರುವ ತದ್ಧಿತ ಪ್ರತ್ಯಯಗಳ ಮತ್ತು
ಧಾತುಗಳಿಗೆ ಬರುವ ಕೃತ್ಪ್ರತ್ಯಯಗಳ ಗೊಡವೆಯು ಬೇಡ.

ವಿಭಕ್ತಿವಿವರವು.

"ಶಿವಃ ಸೃಜತಿ" ವಾಕ್ಯದಲ್ಲಿ ಶಿವಶಬ್ದಕ್ಕೆ ಪ್ರಾತಿಪದಿಕ ಪ್ರಥಮಾ ವಿಭಕ್ತಿಯ "ಸು" ಪ್ರತ್ಯಯವೂ ಸೃಜ ಶಬ್ದಕ್ಕೆ 'ತಿತ್' ಆಖ್ಯಾತ ಪ್ರತ್ಯಯವೂ ಸೇರಿ ಶಿವನು ಹುಟ್ಟಿಸಿದವನು ಎಂಬ ವಾಕ್ಯವು ಪದಗಳ ಸಮನ್ವಯದಿಂದಾಗಿದೆ. ಶಿವಃ ಎಂಬುದು ಪ್ರಥಮೆಯು ಕಾರಕ ವಿಭಕ್ತಿಯಾದ ಉದಾಹರಣವು. "ಶಿವೋ ಜಗತ್ಸೃಜತಿ" ಶಿವನು ಜಗತ್ತನ್ನು ಹುಟ್ಟಿಸಿವನು ಎಂಬಲ್ಲಿ ಜಗತ್ ಪದವು ದ್ವಿತೀಯಾ ವಿಭಕ್ತಿಯಿಂದ ಕೂಡಿದೆ. ಈ ದ್ವಿತೀಯೆಯು ಕಾರಕವಿಭಕ್ತಿಯು- ಆದರೆ ಅನು, ಉಪ, ಅಭಿ ಎಂಬಿವು ಮುಂತಾದ ಅವ್ಯಯ ಪ್ರಾತಿಪದಿಕಗಳು ವಾಕ್ಯದಲ್ಲಿ ಮತ್ತೊಂದು ಪ್ರಾತಿಪದಿಕದ ಬಳಿಯಲ್ಲಿ ಬಂದರೆ ದ್ವಿತೀಯಾ ವಿಭಕ್ತಿಯು ಆ ಪ್ರಾತಿಪದಿಕಕ್ಕೆ ಸೇರುವುದು. ಉದಾಹರಣವು ''ಕರ್ಮಪ್ರವಚನೀಯಯುಕ್ತೇ ದ್ವಿತೀಯಾ" ೨-೩-೯ ಹೀನೆ ೧-೪-೮೬ ಕರ್ಮಪ್ರವಚನೀಯವು ಯೋಗವಾಗಲು ದ್ವಿತೀಯೆಯು ಆದಪುದು. ಕರ್ಮಪ್ರವಚನೀಯವೆಂದು ವ್ಯಾಕರಣಸ್ಮೃತಿಕಾರರು ಹಲವು ಶಬ್ದಗಳಿಗೆ ಇಟ್ಟ ಸಂಜ್ಞೆಯು. ಅನು ಶಬ್ದದಿಂದ ಹೀನತ್ವವು ದ್ಯೋತಿತವಾದಾಗ ಅದು ಕರ್ಮ ಪ್ರವಚನೀಯವಾದಪುದು. ಆ ವರ್ಗಕ್ಕೆ ಸೇರುವುದು. ಶಿವಮನುದೇವಾಃ ದೇವತೆಗಳು ಶಿವನಿಗೆ ಹೀನರು. ಶಿವಸ್ ಎಂಬಲ್ಲಿಯ ದ್ವಿತೀಯೆಯು ಕಾರಕವಿಭಕ್ತಿಯನ್ನಿಡುವುದಾದರೆ ಶಿವಾದಧೋದೇವಾಃ ಎಂದು ಪಂಚಮಿಯು ಬರುತಲಿತ್ತು. ಇದರಂತೆಯೆ ಚತುರ್ಥಿಯೂ ಕಾರಕವಿಭಕ್ತಿಯು ಉಪಪದ ವಿಭಕ್ತಿಯಾಗಿಯು ಇದೆ. ಗುರವೇ ದಕ್ಷಿಣಾಂ ದದಾತಿ ಗುರುವಿಗೆ ದಕ್ಷಿಣೆಯನ್ನು ಕೊಡುತ್ತಾನೆ ಎಂಬಲ್ಲಿ ಕಾರಕವಿಭಕ್ತಿಯು.

''ಕ್ರಿಯಾರ್ಥೋಪಪದಸ್ಯ ಚ ಕರ್ಮಣಿಸ್ಥಾನಿನಃ" ೨-೩-೧೦. ವಾಕ್ಯದಲ್ಲಿಯ ಕ್ರಿಯೆಗೆ ಮತ್ತೊಂದು ಕ್ರಿಯೆಯು ಫಲವಾಗಿ ಆ ಕ್ರಿಯೆಯನ್ನು ನುಡಿವ ಶಬ್ದವು ಪ್ರಯೋಗವಾಗದಾಗ ಆ ಕ್ರಿಯೆಯ ಕರ್ಮವು ದ್ವಿತೀಯೆಯಲ್ಲಿ ಬಾರದೆ ಚತುರ್ಥಿಯಲ್ಲಿ ಬರುವುದು. ಉದಾಹರಣ— ಫಲೇಭ್ಯೋಯಾತಿ ಫಲಾನ್ಯಾಹರ್ತುಂಯಾತಿ ಹಣ್ಣುಗಳಿಗೆ ಹೋಗುತ್ತಾನೆ. ಹಣ್ಣು ತರಲು ಹೋಗುತ್ತಾನೆ. ವಾಕ್ಯದಲ್ಲಿಯ ಕ್ರಿಯೆಯು ಹೋಗುವಣವು. ಆ ಹೋಗುವಣದರ ಫಲವಾದ ಕ್ರಿಯೆಯು. ಹಣ್ಣುಗಳನ್ನು ತರುವಣವು. ಈ ಫಲಕ್ರಿಯೆಯನ್ನು ವಚಿಸುವೆ. ''ಆಹರ್ತುಂ= ತರಲಿಕ್ಕೆ" ಶಬ್ದವು ವಾಕ್ಯದಲ್ಲಿ ಪ್ರಯೋಗವಾಗಿಲ್ಲ. ಅದರ ಕರ್ಮಫಲಾನಿ= ಹಣ್ಣುಗಳನ್ನು ಎಂಬುದಕ್ಕೆ ಫಲೇಭ್ಯೋ ಹಣ್ಣುಗಳಿಗೆ ಎಂದು ಬಂದಿತು. ಇದು ಉಪಪದ ಚತುರ್ಥಿಯು.

ಚತುರ್ಥ್ಯರ್ಥೇ ಸೂತ್ರ ವಿಷಯವು.

ಚತುರ್ಥ್ಯರ್ಥೇ ಬಹುಲಂ ಛಂದಸಿ. ವೇದದಲ್ಲಿ ಚತುರ್ಥಿಯರ್ಥದಲ್ಲಿ ಷಷ್ಠಿಯು ಬಹುಲದಿಂದ ಬರುವುದು ಎನ್ನುವುದು ಕಾರಕ ಚತುರ್ಥಿಯನ್ನು ಹಿಡಿದು ವಿಧಿಪುದೋ? ಉಪಪದ ಚತುರ್ಥಿಯನ್ನು ಹಿಡಿದು ವಿಧಿಪುದೋ? ಅಥವಾ ಉಭಯ ಚತುರ್ಥಿಯನ್ನು ಹಿಡಿದು ವಿಧಿಪುದೋ? ಆಚಾರ್ಯನು ಮೋಕ್ಷಸ್ಯ ಎಂಬದನ್ನು ಮೋಕ್ಷಾಯ ಎಂದು ಮಾಡಿದ ಚತುರ್ಥಿಯು ಮೋಕ್ಷವನ್ನು ಸಂಪಾದಿಸಲು ಎಂಬ ಉಪಪದ ಚತುರ್ಥಿಯು. ''ಫಲೇಭ್ಯೋಯಾತಿ" ಉದಾಹರಣವನ್ನು ನೋಡಿರಿ. ಚತುರ್ಥ್ಯರ್ಥೇ ಬಹುಲಂ ಛಂದಸಿ" ಸೂತ್ರವು ಕಾರಕ ಚತುರ್ಥಿಯನ್ನು ಹಿಡಿದು ಅದೆ ಉಪಪನ ಚತುರ್ಥಿಯನ್ನು ಹಿಡಿದು ಅಲ್ಲಿ ಚತುರ್ಥಿಯ ಅರ್ಥವು ಸಂಪ್ರದಾನವು. "ಚತುರ್ಥೀ ಸಂಪ್ರದಾನೇ" ೨-೩-೧೩ ಕರ್ಮವಲ್ಲ. ''ಕ್ರಿಯಾರ್ಥೋಪಪದಸ್ಯ ಚಕರ್ಮಣಿ ಸ್ಥಾನಿನಃ" ೨-೩-೧೦ ಸೂತ್ರದಿಂದ ಉಪಪದ ಚತುರ್ಥಿಯು ದ್ವಿತೀಯಾರ್ಥವಲ್ಲಿ ಉಂಟು. ಸ್ವಾರ್ಥವಲ್ಲಿ (ಸಂಪ್ರದಾನದಲ್ಲಿ) ಅಲ್ಲ. ಆದುದರಿಂದ ಅಮೃತಸ್ಯ= ಮೋಕ್ಷಾಯ ಎಂಬ ಉಪಪದ ಚತುರ್ಥೀ ಭಾಷ್ಯವು ವ್ಯಾಕರಣದುಷ್ಟವು.

ಆದರೆ ಆಚಾರ್ಯನಲ್ಲಿ ತಮ್ಮವನೆಂಬ ಬುದ್ಧಿಯನುಳ್ಳವರು ಚತುರ್ಥ್ಯರ್ಥೇ ಎಂದು ಸಾಮಾನ್ಯವಾಗಿ ಸೂತ್ರವಿಹುದಾಗಿ ಚತುರ್ಥಿಯ ಸರ್ವಕಾರಕೋಪಪದಿಕಾರ್ಥಗಳಲ್ಲಿ ಷಷ್ಠಿಯು ಬರುವುದೆನಬಹುದು. ಇದಲ್ಲ, 'ನ ಸಂದೇಹಾದ ಲಕ್ಷಣಂ ವ್ಯಭಿಚ್ಯಾನತೋ ವಿಶೇಷ ಪ್ರತಿಪತ್ತಿಃ ಸ್ಯಾತ್' ಎಂಬ ನ್ಯಾಯದಿಂದ ಈ ಸೂತ್ರಕ್ಕೆ ವ್ಯಾಖ್ಯಾತೃಗಳ ಏನೆಂಬದು ನೋಡುವಣ. ಛಂದಸಿ ವಿಷಯೇ ಚತುರ್ಥ್ಯರ್ಥೇ ಷಷ್ಠೀ ವಿಭಕ್ತಿರ್ಭವತಿ ,ಬಹುಲಂ ಪುರುಷ ವ್ಯತ್ಯಯಶ್ಚಂದ್ರವಸುಃ ಪುರುಷ ವ್ಯತ್ಯಯಂದ ಪುಸೇ ಗೋಧಾಕಾಲಕಾದಾವಾಘಾಟಸ್ತೇ ವನಸ್ಪತೀನಾವಹ್ ತೇವನಸ್ಪತಿಭ್ಯಃ ಕಾಶಿಕಾ ಷಷ್ಠ್ಯರ್ಥೇ ಚತುರ್ಥೀ ವಕ್ತವ್ಯಾ (ಇದು ವಾರ್ತಿ

ಕವು) ಯಾಖರ್ವೇಣಪಿಬತಿ ತಸ್ಯೈ ಖರ್ವೋ ಜಾಯತೇ ಯಾದತೋ ಧಾವತಿ ತಸ್ಯೈಶ್ವಾವದನ್ ಯಾನಖಾನಿ ಕೃಂತತಿ ತಸ್ಯೈ ಕುನಖಃ ಯಾ ಅಂಕ್ತೇ ತಸ್ಯೈ ಕಾಣಃ ಯಾ ಅಭ್ಯಂಕ್ತೇ ತಸ್ಯೈ ದುಶ್ಚರ್ಮಾ ಯಾ ಕೇಶಾನ್ ಪಲಿಖತಿ ತಸ್ಯೈ ಖಲತಿಃ ಅಹಲ್ಯಾಯೈಜಾರಃ— ಕನ್ನಡದಲ್ಲಿಂತು ವೇದವು ವಿಷಯವಾದಾಗ ಬಹುಲದಿಂದ ಚತುರ್ಥಿಯರ್ಥದಲ್ಲಿ ಷಷ್ಠಿಯು ಆದಪುದು. ಗಂಡು ವೃಗವು ಚಂದ್ರಮನ = ಗಂಡು ವೃಗವು ಚಂದ್ರಮನಿಗೆ ಉಡು. ಒಳ್ಳೀ (ನೀರಹಾವು) ಬಡಿಗನ ಹಕ್ಕಿ ಅವು ವನಸ್ಪತಿಗಳ = ಅವು ವನಸ್ಪತಿಗಳಿಗೆ ಷಷ್ಠಿಯರ್ಥದಲ್ಲಿ ಚತುರ್ಥಿಯನ್ನು ಹೇಳಬೇಕು. ಅವಳು ಕುಗ್ಗಿ ಕುಡಿವಳೊ ಆಕೆಗೆ ಖರ್ವನು (ಗಿಡ್ಡನು) ಹುಟ್ಟುವನು. ಅವಳು ಹಲ್ಲುಗಳನ್ನು ತೊಳೆವಳೊ ಆಕೆಗೆ ಕಪ್ಪು ಹಲ್ಲುವನು. ಅವಳು ಉಗುರುಗಳನ್ನು ಕತ್ತರಿಸುವಳೊ ಆಕೆಗೆ ಉಗುರುಗೆಟ್ಟವನು. ಅವಳು ಅಂಜನವಿಡುವಳೊ ಆಕೆಗೆ ಒಕ್ಕಣ್ಣನು. ಅವಳು ಎಣ್ಣೆ ಹೂಸುವಳೊ ಆಕೆಗೆ ತೊಗಲುಗೆಟ್ಟವನು. ಅವಾಕೆಯು ಕೂದಲು ಕೆರೆವಳೊ ಆಕೆಗೆ ತೇಗಣೆದತಿಯವನು. ಅಹಲ್ಯೆಗೆ ಜಾರನು.

ಈ ಉದಾಹರಣೆಗಳಿಂದ ವೈಯಾಕರಣರು ಕ್ರಿಯಾರ್ಥೋಪಪದ ಚತುರ್ಥಿಗೆ ಷಷ್ಠಿಯು ಬಾರದೆಂದೂ, ಸಂಪ್ರದಾನ ಚತುರ್ಥಿಗೆ ಮಾತ್ರ ಆದು ಸಲ್ಲುವೆಂದೂ ತೋರಿಸಿಹರು.

ತೃತೀಯಾರ್ಥೇ ಉದಾಹರಣವು.

ಮತ್ತೊಂದು ಸೂತ್ರವನ್ನು ಉದಾಹರಿಸಬಹುದು. ಅನು ಮುಂತಾದ ಅವ್ಯಯಗಳು ಕರ್ಮಪ್ರವಚನೀಯ ಸಂಜ್ಞೆಯನ್ನು ಅರ್ಥ ವಿಶೇಷವಾಚಕವಾಗಿ ವೈಯಾಕರಣರಿಂದ ಹೊಂದಿವೆ. ಅನು ಶಬ್ದವು ತೃತೀಯಾರ್ಥವು ದ್ಯೋತಿತವಾಗುವಾಗ ಕರ್ಮವು ವಚನೀಯವಾಗುವುದು ಎಂದು ೧-೪-೮೫. ಸೂತ್ರವು ಉಂಟು. ಅದಕ್ಕುದಾಹರಣವು ನದೀಮನ್ವವ್ಯತಾ ಸೇನಾ. ಪರ್ವತಮನ್ವವಸಿತಾ ಸೇನಾ. ಪರ್ವತೇನ ಸಂವಿದ್ಧಾ ಎಂದು ಉಂಟು. ಸೇನೆಯು ಪರ್ವತದಿಂದೇ (ಪರ್ವತದೊಡನೆ) ನದಿಯಿಂದ (ನದಿಯೊಡನೆ) ಸಂಬಂಧವಾಗಿದೆಯೆಂಬರ್ಥದಲ್ಲಿ ಮಾತ್ರ ತೃತೀಯಾರ್ಥವನ್ನು ಗ್ರಹಿಸಬೇಕಲ್ಲದೆ ತೃತೀಯೆಯ ಎಲ್ಲ ಅರ್ಥಗಳನ್ನು ಹಿಡಿಯಲಾಗದು. ಅಂದರೆ ಕುಠಾರೇಣ ಛಿನತ್ತಿ ಕೊಡಲಿಯಿಂದ ಕಡಿವನು ಎಂಬಲ್ಲಿ ಕುಠಾರವನ್ನು ಛಿನತ್ತಿ ಎಂದಾಗದು.

ಫಲಾಂಶವು.

ಅಮೃತತ್ವಸ್ಯ ಎಂಬುದಕ್ಕೆ ಮೋಕ್ಷಾಯ ಎನಲಾಗದು. ಆದುದರಿಂದ ದೇವಧಾರಣಃ ಎಂಬುದನ್ನು ಬಹುವ್ರೀಹಿ ಸಮಾಸವೆಂದು ಮೋಕ್ಷಕ್ಕಾಗಿ ಶಿವಲಿಂಗಧಾರಣವುಳ್ಳವನು ಎಂದು ವಿವರಿಸಲು ಸಾಧ್ಯವಿಲ್ಲವು.

ಭೂಯಾಸಂ ಶಬ್ದ ವಿಚಾರವು.

ಶ್ರೀ ಪಂಡಿತಾಚಾರ್ಯನು ದೇವಧಾರಣರೋ ಭೂಯಾಸಂ ವಾಕ್ಯದಲ್ಲಿ ಭೂಯಾಸಂ ಪದವು ನಃನು ಆಗಲಿ ಎಂದು ಕೋರಿಕೆಯನ್ನು ತೋರಿಸುವುದು. ಲಿಜ ಪ್ರತ್ಯಯಾಂತ ಶಬ್ದವಾಗಿಹುದು. ವೇದದಲ್ಲಿ ಯಜೇತ ಪದವು ಲಿಜ ಪ್ರತ್ಯಯಾಂತವಾಗಿದೆ. ವೈದಿಕ ವಿಧಿಯು ಲಿಜಂತ ಕ್ರಿಯಾಪದದಿಂದ ನುಡಿಯ ಪಡೆವುದು. ಆದುದರಿಂದ ಭೂಯಾಸಂ ಪದದಿಂದ ವೇದವಿಲ್ಲಿ ಲಿಂಗಧಾರಣವನು ವಿಧಿಸುತಿಹುದು ಎಂಬನು. ಇದನೀಗ ನೋಡುವಣ.

ವಿಧಿನಿಮಂತ್ರಣಾಮಂತ್ರಣಾಧೀಷ್ಟ ಸಂಪ್ರಶ್ನ ಪ್ರಾರ್ಥನೇಷು ಲಿಜ ೩-೩-೧೬೧. ಸೂತ್ರವು ವಿಧ್ಯರ್ಥದಲ್ಲಿ ಲಿಜ ಪ್ರತ್ಯಯವನ್ನು ವಿಧಿಸುವುದು. ವಿಧಿಯೆಂದರೆ ಪ್ರೇರಣವು. ಸ್ವರ್ಗಕಾಮೋ ಯಜೇತ ಎಂಬಲ್ಲಿ ಸ್ವರ್ಗವ ಬಯಸುವನು ಯಾಗವನನುಷ್ಠಿಸಬೇಕು ಎಂದು ವೇದವು ಪ್ರೇರಿಪುದು. ಈ ವಾಕ್ಯದಲ್ಲಿ ಭೂಯಾಸಂ ಪದವು ಲಿಜಂತವಾಗಿದೆ. ಆದುದರಿಂದ ಇದು ಲಿಂಗಧಾರಣ ವಿಧಿಯು, ಲಿಂಗಧಾರಣ ಪ್ರೇರಣವು ಲಿಂಗಧಾರಣದ ಅಪ್ಪಣೆಯು, ಆಜ್ಞೆಯು, ಎಂದು ರಾದ್ಧಾಂತವು. ಇದು ಆಗದು.

ಈ ಸೂತ್ರದ ತದುವಾಯಲ್ಲಿ, 'ಲೋಟ್ ಚ" ಸೂತ್ರವು ಇದೆ ಅರ್ಥಗಳಲ್ಲಿ "ಲೋಟ್" ಪ್ರತ್ಯಯವೂ ಬರುವುದು ಎಂದು ವಿಧಿಪುದು. ಅಂದರೆ 'ಯಜೇತ" ಎಂದೂ "ಯಜತಾಮ್" ಎಂದೂ ಯಾಗವನ್ನು ವಿಧಿಸಬಹುದು. ಇಲ್ಲಿ ಚಕಾರದಿಂದ ಹಿಂದಿನ ಸೂತ್ರದಿಂದ ಹೇಳಿದ ಎಲ್ಲ ಅರ್ಥಗಳಲ್ಲಿಯು ಲೋಟ್ ಪ್ರತ್ಯಯಗಳು ಬರುವುವು. ಲಿಜ ಪ್ರತ್ಯಯಗಳಿಗೆ ಜೇರೆ ಅರ್ಥಗಳೂ ಇವೆ. ಲೋಟ್ ಪ್ರತ್ಯಯಗಳಿಗೂ ಹಾಗೆ

(ಪ್ರತ್ಯಯಗಳಿಗೆ ಎಂಬ ಬಹು ವಚನವು ಪ್ರಯೋಗವು ಹೀಗೆ – ಪ್ರಥಮ ಮಧ್ಯಮೋತ್ತಮ ಪುರುಷಗಳ ಮೂರು ಮೂರು ಪ್ರತ್ಯಯಗಳು ಒಂಬತ್ತು ಆವೆ) ವಿಧಿನಿಮಂತ್ರಣಾದಿಗಳು ಪ್ರವರ್ತನದ ರೂಪಗಳೆ ಆಗಿರುವುದರಿಂದ ಇವೆಲ್ಲಿಲ್ಲ ಒಂದು ಸೂತ್ರದಲ್ಲಿ ಪವಣಿಸಿಹನು. ಸಿದ್ಧಾಂತ ಕೌಮುದಿ ಕಾರನು ಹೇಳುವಂತೆ ಇವೆಲ್ಲ ಆ ಪ್ರವರ್ತನದ ಬೇರೆ ಬೇರೆ ಬಗೆಗಳನ್ನೊಡಗೊಂಡ ಸೂತ್ರವನು ಮಾಡಬಹುದಿತ್ತು. ಪ್ರವರ್ತನಾಯಾಂ ಲಿಜ ಇತ್ಯೇವಮುವಚವ್. ಚತುರ್ಣಾಂ ಪ್ರಥಮಾ ಪಾದಾನಂ ಪ್ರಪಂಚಾರ್ಥಮ್

ಪ್ರವರ್ತನದಿಂದ ಭಿನ್ನವಾದ ಅರ್ಥಗಳಲ್ಲಿ ಲಿಜ ಪ್ರತ್ಯಯಗಳು ಬರುವಲ್ಲಿ ಶ್ರೀ ಪಾಣಿನ್ಯಾಚಾರ್ಯನು ಸ್ವತಂತ್ರ ಸೂತ್ರಗಳನ್ನೇ ರಚಿಸಿಹನು. ಇಂತು ಸ್ವತಂತ್ರ ಸೂತ್ರಗಳ ವಿಷಯಗಳು ತದ್ವಾಚಕ ಪ್ರತ್ಯಯಗಳು ಒಂದೆಯಾದರು ಪ್ರವರ್ತನದೊಡನೆ ಒಂದಾಗಿ ಹಿಡಿಯತಕ್ಕುವಲ್ಲ. ಈ ಭಿನ್ನಾರ್ಥಗಳು. ಉತಾಪ್ಯೋಃ ಸಮರ್ಥಯೋರ್ಲಿಜ. ೩-೩-೧೫೪. ಉತಾಧೀಯೊತ ಅಪ್ಯಧೀಯೊತ ಓದಿಯೆ ಓದುವನು. ನಿಶ್ಚಯಾರ್ಥವಲ್ಲಿ ಉತ ಆದಿ ಇದ್ದಾಗ ಇದು ಲಿಜ್. 'ಕಾಮು ಪ್ರವೇದನೇಽಕಚ್ಚಿತಿ" ೩-೩-೧೫೫ ಕಚ್ಚಿತ್ ಶಬ್ದವನ್ನು ಬಳಸದೆ ತನ್ನ ಅಭಿಪ್ರಾಯವನ್ನು ತೋರ್ಪಡಿಸುವಾಗಲು ಲಿಜ ಆಗುವದು. ಕಾವೋ ಮೇಭಿಂ ಜೀತ ಭವಾನ್ ತಾವು ಉಣಬೇಕೆಂದು ನನ್ನ ಅಭಿಪ್ರಾಯವು. ಬಯಕೆಯು ಸಂಭಾವನೇಽಲಮಿತಿ ಚೇತ್ಸಿದ್ಧಾ ಪ್ರಯೋಗೇ. ' ೩-೩.೧೫೬ ಆವುದೊಂದು ಕ್ರಿಯೆಯಲ್ಲಿ ಒಬ್ಬನು ನಿರ್ವಹಣ ಸಮರ್ಥನೆಂದು ಬುದ್ಧಿಯುಂಟಾಗಿ ಆ ಸಾಮರ್ಥ್ಯ ಬೋಧಕವಾದ ಅಲಂ ಶಬ್ದವು ಪ್ರಯೋಗವಾಗದಿರುವಾಗಿ ಧಾತುವಿಗೆ ಲಿಜ ಪ್ರತ್ಯಯಗಳಾಗುವವು. ಅಪಿ ಪರ್ವತಂ ಶಿರಸಾಭಿಂದ್ಯಾತ್ ಅರೆ (ಕಲ್ಲು ಬಂಡೆ) ಯನ್ನಾಗಲಿ ತಲೆಯಿಂದ ಒಡೆಯಲಾಪನು. ಆದರೆ 'ಅಲಂ' ಪ್ರಯೋಗವಾದಾಗ ಲಿಜ ಬರುವುದಿಲ್ಲ. "ಅಲಂ ದೇವದತ್ತೋ ಹಸ್ತಿನಂ ಹನಿಷ್ಯತಿ" ದೇವದತ್ತನು ಆನೆಯನ್ನು ಕೊಲ್ಲಲು ಸಾಕು. ಇತ್ಯಾದಿ ಅಧ್ಯಾಯ ೩-ಪಾದ೩ ಸೂತ್ರಗಳು ೧೫೫ ರಿಂದ ೧೬೦ ಹಾಗು ೧೬೪-೧೬೮-೧೭೩ ಎಂಬಿವನ್ನು ನೋಡಿರಿ. ಈ ಅರ್ಥಗಳು ಒಂದಕ್ಕೊಂದು ಜೇಕೆಯಾಗಿವೆ. ಅದರಂತೆಯೆ ಆಶಿರರ್ಥವು.

ಆಶಿಷಿ ಲಿಜ ಲೋಟೌ ೩-೩-೧೭೩.

ಆಶಿರರ್ಥದಲ್ಲಿ ಲಿಜ ಬರುವಂತೆ ಲೋಟ್ ಪ್ರತ್ಯಯವೂ ಬರವದು. ಏರಂನಲು ಆಶಿಷವು ವಿಧಿಯಿಂದ ಬೇರೆ ಎಂದು ತೋರಿ ಬರುವುದು. ಅಂದರೆ "ವಿಧಿನಿಮಂತ್ರಣಾ ಮಂತ್ರಣಾಧೀಷ್ಟ ಪ್ರಶ್ನಸಂಪ್ರಾರ್ಥನೇಷು ಲಿಜ" ಎಂದು ಸೂತ್ರಿಸಿ ಆ ಅರ್ಥಗಳಲ್ಲಿ 'ಲೋಟ್' ಪ್ರತ್ಯಯವೂ ಆಗುವೆಂದು "ಲೋಟ್ ಚ" ೩-೩-೧೬೫ ಸೂತ್ರದಿಂದ ವಿಧಿಸಿ ಮುಂದೆ ಕಿತ್ತು ಸೂತ್ರಗಳನ್ನು ವಿಂರಿ ೧೭೩ನೆಯ ಸೂತ್ರವನ್ನು ಆಶಿರರ್ಥದಲ್ಲಿ ಲಿಜ ಲೋಟ್ ಪ್ರತ್ಯಯಗಳು ಬಂದಪವೆನ್ನುವುದರಿಂದ ಆಶಿರರ್ಥವು ವಿಧ್ಯರ್ಥವಲ್ಲೆಂದು ಒಡೆದು ತೋರುತಲಿದೆ. ಒಂದೆಯಾಗಿದ್ದರೆ ಲೋಟ್ ಚ ಸೂತ್ರದಿಂದಲೆ ಆಶಿರರ್ಥದಲ್ಲಿ ಲೋಟ್ ಬರುತ್ತಿರಲು ಆಶಿಷಿ ಲಿಜ ಲೋಟೌ ಸೂತ್ರ ವಿಧಾನವು ಬೇಡಾಗಿತ್ತು. ಆಶಿರರ್ಥವು ವಿಧ್ಯರ್ಥದ ಒಂದು ಛಾಯಾ ಮಾತ್ರವಾಗಿದ್ದರೆ ಆಶಿಷಿ ಲಿಜ ವಿಧಾನವನ್ನು ಈ ಸೂತ್ರದಿಂದ ಮಾಡಲು ಬೇಡವಾಗಿತ್ತು.

ಆಶೀರ್ಲಿಜದ ವಿಶೇಷವು.

ಭಿನ್ನ ಸೂತ್ರಗಳಿಂದ ವಿಧಿಗೆ ಮತ್ತು ಆಶಿಷಕ್ಕೆ ಲಿಜ ಪ್ರತ್ಯಯಗಳನ್ನು ಹೇಳಿದರೇನಾಯ್ತು? ಒಂದೆ ಪ್ರತ್ಯಯದಿಂದ ಎರಡು ಅರ್ಥಗಳು ಬೋಧವಾಗಿರುವದರಿಂದ ಸಂದರ್ಭಾನುಗುಣ್ಯದಿಂದ ವಿಧಿಯೊ ಆಶಿಷವೊ ಈ ಪ್ರತ್ಯಯದಿಂದ ಹೇಳವಡೆದಿದೆಂದು ಗುರುತಿಸಬಹುದೆಂದರೆ ಆಗದು. ಭೂತಕಾಲದಲ್ಲಿ ಧಾತುವಿಗೆ ಮೂರು ಪ್ರತ್ಯಯಗಳು ಲಿಟ್ ಲಿಜ ಲುಜ್ ವಿಹಿತವಾಗಿವೆ. ಆದರೆ ಅರ್ಥಗಳು ಒಂದೊಂದು ವಿಶೇಷದಿಂದ ಕೂಡಿವೆ. ಪರೋಕ್ಷೇ ಲಿಟ್ ೩-೨-೧೧೫ ಲಿಟ್ ಪ್ರತ್ಯಯದಿಂದ ಒಂದು ಭೂತ ಕ್ರಿಯೆಯನ್ನು ನುಡಿದಾಗ ಆ ಕ್ರಿಯೆಯನ್ನು ಹೇಳುವನು ಕಂಡಿರುವುದಿಲ್ಲ. "ದಶರಥೋ ರಾಜಾ ಬಭೂವ" ದಶರಥನು ಅರಸನಾಗಿದ್ದನು. (ಇದನ್ನು ಹೇಳುವನು ಕಂಡಿಲ್ಲ) ಅನದ್ಯತನೇ ಲಿಟ್. ೩-೨-೧೧೧ ಇಂದಿನದಲ್ಲದ ಭೂತ ಕ್ರಿಯೆಯನ್ನು ಲಜ ಪ್ರತ್ಯಯವು ನುಡಿವುದು. "ದೇವದತ್ತಃ ಕಾಶೀಮಗಚ್ಛತ್" ದೇವದತ್ತನು ಕಾಶಿಗೆ ಹೋದನು. (ಇಂದು ಅಲ್ಲ — ಹೇಳುವನು ಕಂಡಿರಬಹುದು. ಕಂಡಿರಲಿಕ್ಕಿಲ್ಲ). ಲುಜ ೩-೨-೧೧೦ ಭೂತ ಕಾಲದಲ್ಲಿ ಲುಜ ಪ್ರತ್ಯಯವು. " ದೇವದತ್ತಃ ಕಾಶೀ

ಮಗಮತ್" ಜೀವಪತ್ತನು ಕಾಶಿಗೆ ಹೋದನು. (ಇಂದು ಇರಲಿ ಅಂದು ಇರಲಿ. ಹೇಳುವನು ಕಂಡಿರಲಿ ಕಾಣದಿರಲಿ) ಅಂದರೆ ಲಿಜಂತ ಕ್ರಿಯಾಪದವು ಆದ ಕ್ರಿಯೆಯನ್ನು ಹೇಳುವನು. ನೋಡಿಲ್ಲೆಂಬಲ್ಲಿಯು ಲಜಂತ ಕ್ರಿಯಾಪದವು ಆದ ಕ್ರಿಯೆಯು ಇಂದು ಅಲ್ಲ ಎಂಬಲ್ಲಿಯು ಲುಜಂತ ಕ್ರಿಯಾಪದವು ಆದ ಕ್ರಿಯೆಯು ಇಂದು ನಿನ್ನೆ ನೋಡಿದೆ ನೋಡಿಲ್ಲ ಎಂಬಿವನ್ನು ಬಗೆಯುದರಲ್ಲಿಯು ಭಿನ್ನ ಭಿನ್ನವಾಗಿವೆ. ಒಂದೆ ಭೂತಕಾಲ ಪ್ರತ್ಯಯಗಳು ಇಷ್ಟು ಭಿನ್ನಾರ್ಥವಾಗಿಹವು. ವಿಧಿಲಿಜ ಪ್ರತ್ಯಯವು ಸಾರ್ವ ಧಾತುಕವು "ಲಿಜಶಿತ್ ಸಾರ್ವಧಾತುಕಮ್. ೩-೩-೧೧೩ ಆಶೀರ್ಲಿಜ ಆರ್ಧ ಧಾತುಕವು. ಆರ್ಧಧಾತುಕಂ ಶೇಷಃ ೩-೪-೧೧೪ "ಲಿಙಾಶಿಷಿ" ೩-೪-೧೧೫ ಆದುದರಿಂದ ಪ್ರತ್ಯಯವೂ ಬೇರೆ ಅರ್ಥವೂ ಬೇರೆ, ಒಂದೆ ಎಂದು ಸಾಧಿಸುವುದು ವ್ಯಾಕರಣ ವಿಡಂಬನವು.

ವಾಕ್ಯ ವಿಚಾರವು

ಇದಿರಲಿ. ಈ ಯಜುಸ್ಸಿನಲ್ಲಿ ಏಳು ಕ್ರಿಯಾಪದಗಳಿವೆ. ಸ್ಪೃಣೋತು ಭೂಯಾತ್ ಭೂಯಾಸಂ ಮೊದಲಾದುವು. ಈ ಏಳು ಕ್ರಿಯಾಪದಗ ಳೆಂದರೆ ಸಮೇಂದ್ರೋ ಮೇಧಯಾ ಸ್ಪೃಣೋತು. ಅಮೃತಸ್ಯ ದೇವ ಧಾರಣೋ ಭೂಯಾಸಂ ಶರೀರಂ ಮೇ ವಿಚರ್ಷಣಂ (ಭೂಯಾತ್) ಜಿಹ್ವಾ ಮೇ ಮಧುಮತ್ತಮಾ (ಭೂಯಾತ್) ಕರ್ಣಾಭ್ಯಾಂಭೂರಿ ವಿಶ್ರುವಂ ಬ್ರಹ್ಮಣಃ ಕೋಶೋಪಿ ಮೇಧಯಾ ಪಿಹಿತಃ ಶ್ರುತಂ ಮೇ ಗೋಪಾಯ, ಈ ಸದಲ್ಲಿ ಹಾಕಿದ ಕ್ರಿಯಾಪದಗಳು ಅಧ್ಯಾಹಾರವಾ ಗಿವೆ. ಆಚಾರ್ಯನು ಈ ಅಧ್ಯಾಹಾರವನ್ನು ತಾನೆ ಮಾಡಿಹನು. ಆತ ದರು ಮಾಡಲೇಬೇಕಾಗಿದೆ. ಆದುದರಿಂದ ಇವು ಏಳು ವಾಕ್ಯಗಳು. ಇವು ಗಳಲ್ಲಿ ಆರು ಆಶಂಸನ ಕ್ರಿಯಾಪದಗಳಿವೆ. ಒಂದೊಂದು ಕ್ರಿಯಾಪ ದಕ್ಕೆ ಒಂದೊಂದು ವಾಕ್ಯವಾಗುತ್ತ ಆರು ಆಶಂಸಾ ಲಿಜಂತ ಕ್ರಿಯಾ ಪದದಿಂದ ಕೂಡಿದ ವಾಕ್ಯಗಳು. "ಸುಪ್ತಿಜಂತಚಯೋವಾಕ್ಯಂ ಕ್ರಿಯಾ ಪಾಶಾ ರಶಾಸ್ವಿತಾ" ಅಮರ. ಸುಬಂತ ಲಿಜಂತ ಪದಗಳ ಗುಂಪಾ ಗಲಿ ಕಾರಕದೊಡಗೂಡಿದ ಕ್ರಿಯೆಯಾಗಲಿ ವಾಕ್ಯವು. ಆಚಾರ್ಯನು ನನ್ನ ಶರೀರವು ಕಿಲ್ಬಿಷದ ಹಿತವಾಗಲಿ. ನನ್ನ ನಾಲಿಗೆಯು ಸವಿವಾತು ಗಳನಾಡಲಿ. ಕಿವಿಗಳಿಂದ ನಾನು ಬಹುಲವಾಗಿ (ಶಿವಶಾಸ್ತ್ರಗಳನ್ನು) ಕೇಳಲಿ. ನನ್ನ ಶ್ರುತವನ್ನು (ಶ್ರವಣ ಪೂರ್ವಕವಾದ ಭಕ್ತಿ ಜ್ಞಾನಗಳನ್ನು ಕಾಪಾಡು ಎಂದು ಆಶಿರರ್ಥವನ್ನು ಉಳಿದುವಕ್ಕೆ ಹೇಳಿ ಅದೆ ಸಂದರ್ಭ

ದಲ್ಲಿಯೆ ಅವೆ ಆಶಿರರ್ಥ ಲಿಜಂತವಾದ "ಭೂಯಾಸಂ" ಪದವನ್ನು ಭವೇಯಂ ಎಂದು ತಿರುಗಿಸಿ ವಿಧಿಯನ್ನು ಕಲ್ಪಿಸಬಾರದು.

ತನ್ನಲ್ಲಿ ವಿಧಿಯು ಸಂಭವಿಸದು.

ಇಲ್ಲಿಯ ತನಕ ಪ್ರತ್ಯಯವನ್ನು ಬಿಚ್ಚಿ ಬಿಚ್ಚಿ ಬಗೆದುದು ಆಯ್ತು. ಅಂದರೆ ಶಬ್ದ ವಿಚಾರವಾಯ್ತು. ಇನ್ನು ವಿಧ್ಯರ್ಥವನ್ನು ತಿರುವಿ ನೋಡು ಣ. ವಿಧಿಯೆಂದರೇನು? ಅದು ತನ್ನಲ್ಲಿ ಘಟಿಪುದೊ ಘಟಿಸದೊ ಎಂಬ ವಿಚಾರವೀಗ ವಿಷಯವು.

ವಿಧಿನಿಮಂತ್ರಣಾ ಮಂತ್ರಣಾಧೀಷ್ಟ ಸಂಪ್ರಶ್ನ ಪ್ರಾರ್ಥನೇಷು ಲಿಜ ೩-೩-೧೬೧. ಇದಕ್ಕೆ ಕಾಶಿಕಾವೃತ್ತಿ. ವಿಧಿಃ ಪ್ರೇರಣಂ ನಿಮಂತ್ರಣಂ ನಿಯೋಗಕರಣಂ ಆಮಂತ್ರಣಂ ಕಾಮಚಾರಕರಣಂ ಅಧೀಷ್ಟಃ ಸತ್ಕಾರ ಪೂರ್ವಕೋವ್ಯಾಪಾರಃ ಸಂಪ್ರಶ್ನಃ ಸಂಪ್ರಧಾರಣಂ ಪ್ರಾರ್ಥನಂ ಯಾಂಚಾ ವಿಧ್ಯಾದ್ಯರ್ಥೇಷು ಧಾತೋರ್ಲಿಜ್ ಪ್ರತ್ಯಯೋಭವತಿ ಸರ್ವಲಕಾರ ಣಾಮಪವಾದಃ ವಿಧ್ಯಾದಯಶ್ಚ ಪ್ರತ್ಯಯಾರ್ಥ ವಿಶೇಷಣಂ ವಿಧ್ಯಾದಿ ವಿಶಿಷ್ಟೇಷು ಕರ್ತ್ರಾದಿಷು ಲಿಜ್ ಪ್ರತ್ಯಯೋಭವತಿ ವಿಧೌತಾವತ್ ಕಟಂ ಕುರ್ಯಾತ್ ಗ್ರಾಮಂಭವಾನಾಗಚ್ಛೇತ್ ನಿಮಂತ್ರಣೇ ಇಹಭವಾನ್ಭುಂ ಜೀತ ಅಧೀಷ್ಟೋ ಅಧೀಚ್ಛಾವೋಭವಂತಂ ಮಾಣವಕಂ ಭವಾನು ಪನಯೇತ್ ಸಂಪ್ರಶ್ನೇ ಕಿಂ ಸುಖಲುಭೋ ವ್ಯಾಕರಣಮಧೀಷೀಯ ಪ್ರಾರ್ಥನೇ ಭವತಿಯೇ ಪ್ರಾರ್ಥನಾ ವ್ಯಾಕರಣಮಧೀಯಾಮ.

ಇದಕ್ಕೆ ಕನ್ನಡವು (ನ್ಯಾಸದ ಸಹಾಯದಿಂದ) ವಿಧಿಯೆಂದರೆ (ಸೇವ ಕಾದಿಗಳನ್ನು) ಮುಂಜರಿಸುವುದು ಪ್ರೇರಣವು. ನಿಮಂತ್ರಣವೆಂದರೆ (ಬಯಸದಿದ್ದರು ಮಾಡಬೇಜೇಕೆಂದು) ಗೊತ್ತುಪಡಿಸುವುದು ನಿಯೋಗ ಕರಣವು ಆಮಂತ್ರಣವೆಂದರೆ ಮಾಡುವನ ಬಗೆ ಬಂದರೆ ಮಾಡಬ ಹುದೆಂಬುದು. ಕಾಮಚಾರನುಜ್ಞಾ-ಅಧೀಷ್ಟವೆಂದರೆ ದೊಡ್ಡತನಗೊಟ್ಟು ಕೆಲಸಕ್ಕೆ ಹಚ್ಚುವುದು. ಸತ್ಕಾರಪೂರ್ವಕ ವ್ಯಾಪಾರವು. ಸಂಪ್ರಶ್ನವೆಂ ದರೆ ಬಗೆಯಲ್ಲಿ ತೂಗಿ ನೋಡುವುದು ಸಂಪ್ರಧಾರಣವು. ಪ್ರಾರ್ಥನ ವೆಂದರೆ ಬೇಡುವುದು, ಯಾಂಚೆಯು. ಇದಕ್ಕೆ ಉದಾಹರಣಗಳು. ವಿಧಿಗೆ (ಆಳು) ಜಾಪೆಯನ್ನು ಮಾಡಬೇಕು. ನೀವು ಊರಿಗೆ ಬರಬೇಕು. ನಿಮಂತ್ರಣಕ್ಕೆ ಇಲ್ಲಿ ತಾವು ಉಣಬೇಕು. ಇಲ್ಲಿ ತಾವು ಕುಳ್ಳಿರ ಬೇಕು (ಮಾಡದಿದ್ದರೆ ನಿಮಗೆ ಸಂಕಟ ಬಯಸದಿದ್ದರು ಮಾಡಲೇ

ಬೇಕು) ಆಮಂತ್ರಣಕ್ಕೆ (ಮನಸು ಬಂದರೆ) ಇಲ್ಲಿ ತಾವು ಕುಳ್ಳಿರಬೇಕು. ಇಲ್ಲಿ ತಾವು ಊಣಬೇಕು (ಮನಸು ಬಾರದಿದ್ದರೆ ಇಲ್ಲ) ಅಧೀಷ್ಟಕ್ಕೆ ತಾವು ಮಾಣಕನನ್ನು ಮುಂಜಿಗಟ್ಟಬೇಕೆಂದು ಗೌರವಿಸಿ ಬೇಡುತ್ತೇನೆ. ಸಂಪ್ರಶ್ನದಲ್ಲಿ- ಎಲೈ ನಾನು ವ್ಯಾಕರಣವನ್ನು ಓದಲೇನು? ಪ್ರಾರ್ಥನೆ ದಲ್ಲಿ ವ್ಯಾಕರಣವನ್ನು ನಾನು ಓದಲೆಂದು ನನ್ನ ಕೋರಿಕೆಯು.

ನೋಡಲು ವಿಧಿ ನಿಮಂತ್ರಾಣಾ ಮಂತ್ರಣಾಧೀಷ್ಟಗಳಲ್ಲಿ ಸಾಮಾನ್ಯವಾಗಿ ಪ್ರವರ್ತನ ವ್ಯಾಪಾರವಿದೆ. ಅಂದರೆ ಒಬ್ಬನು ಮತ್ತೊಬ್ಬನನ್ನು ಒಂದು ಕೆಲಸವನ್ನು ಮಾಡಹಚ್ಚುವನು. ತನಗಿಂತಲೂ ಹೀನನನ್ನು ಪ್ರವರ್ತಿಸುವಲ್ಲಿ ವಿಧಿಯೆನಿಸುವುದು. ಮಾಡದಿದ್ದರೆ ನೀನು ಸಂಕಟಕ್ಕೆ ಅಥವಾ ಪಾಪಕ್ಕೆ ಗುರಿಯಿಪ್ಪೆ ಎಂಬಲ್ಲಿ ನಿಮಂತ್ರಣವು. ಮನಬಂದರೆ ಮಾಡು ಬಿಡು ಎಂಬಲ್ಲಿ ಆಮಂತ್ರಣವು. ಸತ್ಕರಿಸಿ ಮಾಡಹಚ್ಚುವುದು ಅಧೀಷ್ಟವು. ಈ ಬಗೆಯಾದ ಪ್ರವರ್ತನವು ತನ್ನಲ್ಲಿ ಘಟಿಸದು. ಅಂದರೆ ಲಿಜ್ ಪ್ರತ್ಯಯಾರ್ಥವಾದ ಹೀನತ್ವ, ನಿಯೋಜತ್ವ, ಕಾಮುಕರಣಾನುಜ್ಞೆ. ಸತ್ಕಾರಪೂರ್ವಕ ವ್ಯಾಪಾರಗಳು ತನಗೆ ವಿಶೇಷಣಗಳಾಗವು. ತಾನು ಅನ್ಯರನ್ನು ಆಜ್ಞಾಪಿಸಬಲ್ಲನು. ಮನಬಂದರೆ ಮಾಡಿರೆಂದು ಅನುಜ್ಞೆಗೊಡಬಲ್ಲನು. ಗೌರವಿಸಿ ಕಾರ್ಯವಾಡಿಸಬಲ್ಲನು. ತನ್ನನ್ನು ತಾನು ಆಜ್ಞಾಪಿಸಲಾರನು. (ವಿಧಿ ನಿಮಂತ್ರಣಗಳು) ಅನುಜ್ಞೆಗೊಡಲಾರನು (ಆಮಂತ್ರಣ) ಸತ್ಕರಿಸಿ ತೊಡಗಿಸಲಾರನು. (ಅಧೀಷ್ಟ) ಆದರೆ ಮಾಡಲೊ ಎಂಬ ಸಂಪ್ರಧಾರಣವೂ, ಮಾಡಲಿ ಎಂಬ ಕೋರಿಕೆಯೂ ತನ್ನಲ್ಲಿ ಸಂಭವಿಪುವು. ಆದುದರಿಂದ ಶ್ರೀಪತಿ ಪಂಡಿತಾಚಾರ್ಯನು 'ಭೂಯಾಸಂ' ಪದವನ್ನು 'ಭವೇಯಂ' ಪದವನ್ನಾಗಿರಿಸಿದರು. ಆ ಪದವು ವಸ್ತು ಸ್ವಭಾವದಿಂದ ತನ್ನಲ್ಲಿ ಲಿಂಗಧಾರಣ ವಿಧಿಯನ್ನು ಕಲ್ಪಿಸದು. ವಿಧಿಯಿಂದ ಅಲ್ಲದೆ ಆಶಂಸನದಿಂದ ಧರ್ಮವನ್ನು ವೇದವು ವಿಧಿಸುವುದಿಲ್ಲೆಂದು ವಿಶಾವಾಂಸಾ ಸಿದ್ಧಾಂತವು. ಆ ಆಚಾರ್ಯನಾವರು ಆಶಂಸನದಿಂದ ಲಿಂಗಧಾರಣವನ್ನು ಸಾಧಿಸಹೋಗಿಲ್ಲ. ಆದರೆ ಈ ಭಾಷ್ಯ ಪಕ್ಷಪಾತಿಗಳು ಎಲ್ಲ ಬಗೆಯಿಂದಲು ಸುಮ್ಮನಾಗಲೆಂದು ಆಚಾರ್ಯನು ಮಾಡದ ಆಶಂಸನದಿಂದ ಧರ್ಮವಿಧಾನ ಪಕ್ಷವನ್ನು ಎಬ್ಬಿಸಿ, ಮಲಗಿಸುವುದು ಮುಂದೆ ಬರುವ ವಿಷಯವು.

ಮಹಾದೇವಿಯಕ್ಕನ ಮದುವೆಯ ವಿವಾದ.

ಲೇಖಕ:— ವೇ॥ ವಿ॥ ಚಂದ್ರಶೇಖರ ಶಾಸ್ತ್ರಿಗಳು ಅಡ್ಕೂರ

ಜುಲೈ ತಿಂಗಳಲ್ಲಿ ಬರೆದ 'ಮಹಾದೇವಿಯಕ್ಕನವರು ಮದುವೆಯಾಗಿದ್ದರೇ?' ಎಂಬ ನನ್ನ ಲೇಖನವನ್ನು ಖಂಡಿಸುವ ಸಾಹಸದಿಂದ ಶ್ರೀ ಸ ಹಾ. ಶಿವಮೂರ್ತಿಯವರು ನವಂಬರ 'ಶಿವಾನುಭವ' ಸಂಚಿಕೆಯಲ್ಲಿ— 'ಮಹಾದೇವಿಯಕ್ಕನವರ ಮದುವೆ' ಎಂದು ನಿಶ್ಚಯಿಸಿ ಬರೆದಿರುವರು. ಇವರು ನನ್ನ ಲೇಖದ ಅಭಿಪ್ರಾಯವನ್ನು ಯಥಾರ್ಥವಾಗಿ ತಿಳಿದುಕೊಳ್ಳದೆ ಖಂಡಿಸಲು ಪ್ರಯತ್ನಪಟ್ಟಿದ್ದರಿಂದ ಪುನಃ ನಾನು ಲೇಖನಿಯನ್ನು ಎತ್ತುವ ಪ್ರಸಂಗವು ಬಂದೊದಗಿತು. ಇದಕ್ಕಾಗಿ ವಿಷಾದಿಸುತ್ತೇನೆ.

ಮೊದಲು ಮಾತು.

ಅಕ್ಕನ ಗೌರವಕ್ಕಾಗಿ ನನ್ನ ವಾದವಿಲ್ಲ. ಹೇಗಾದರೂ ಆಕೆಯ ಗೌರವಕ್ಕೆ ಕೊರತೆಯಿಲ್ಲ. ಇನ್ನು ವಾದವು ನಿರ್ಣಯಕ್ಕೆಂದು ನಾನು ಬೇರೆ ಬರೆಯಬೇಕಿಲ್ಲ. ನಾನು ಮುಖ್ಯವಾಗಿ ಪ್ರಮಾಣವಾಗಿಟ್ಟುಕೊಂಡದ್ದು ಅಕ್ಕನವರ ವಚನ. ಪ್ರಭುಲಿಂಗ ಲೀಲೆಯು ಅದಕ್ಕೆ ಉಪಷ್ಟಂಭಕ ಮಾತ್ರ. ಹರಿಹರದೇವನು ವೀರಶೈವ ಕವಿಗಳೆಲ್ಲ ಆದಿಯವನಾದರೂ ಶರಣರಿಗಲ್ಲ. ಅಕ್ಕನ ಲಗ್ನದ ವಿಚಾರವು ಇನ್ನೂ ಸಂಶೋಧಾತ್ಮಕವಾಗಿರುವದರಿಂದ ಹೀಗೇ ಎಂದು ನಿರ್ವಿವಾದವಾಗಿ ನಿರ್ಧರಿಸಲು ಬರುವಂತಿಲ್ಲ. ನನ್ನ ನಿಮ್ಮಗಳ ಬರಹಗಳು ಕೇವಲ ಊಹಾ ಮಾತ್ರ.

ಕವಿ ಕಾಲ.

ಈ ಲೇಖಕರು 'ಹರಿಹರದೇವನ ಕಾಲ ಕ್ರಿ. ಶ. ೧೧೬೫ ಎಂದು ಪಂಡಿತರ ಅಭಿಪ್ರಾಯವಿದೆ. [ಹರಿಹರನು ಜಾಮರಸ ಕವಿಗಿಂತಲೂ ಸುಮಾರು ೩೦೦ ವರುಷ ಮೊದಲಿಗನು] .. ಜಾಮರಸನು ಹರಿಹರ ಕಾಲದವನೆಂದು ಹೇಳಿ ಈವರ ಕಾಲ ನಿರ್ಣಯವನ್ನು ನಿರಾಧಾರವಾಗಿ ಬರೆದಿರುವರು.' ಎಂದು ಹೇಳಿರುವರು. ಇವರು ಹೇಳುವಂತೆ

ಹರಿಹರದೇವನ ಕಾಲ ಇನ್ನೂ ನಿರ್ಣಯಕ್ಕೆ ಬಂದಿಲ್ಲ. ಅದರಲ್ಲಿ ಮುಖ್ಯವಾಗಿ ಎರಡು ಭೇದಗಳುಂಟು. ಕೆಲವರು ೧೨ನೇ ಶತಮಾನವೆನ್ನುವರು. ಬೇರೆ ಕೆಲವರು ೧೩ನೇ ಶತಮಾನವೆನ್ನುವರು. ಉದಾಹರಣೆಗಾಗಿ— ಕಿಟೆಲ್‌ರು ೧೨೯೦ ಎಂದು ಹೇಳುವರು. ಡಾ. ವೆಂಕಟಸುಬ್ಬಯ್ಯನವರೂ ಇದೇ ಅಭಿಪ್ರಾಯವಿದೆ. ಶ್ರೀ. ಬುದ್ಧಯ್ಯ ಪುರಾಣಿಕರು ೧೨೦೦ ಬರೆದಿರುವರು. ಕವಿಚರಿತೆಕಾರರು ೧೨೬೫ ಎಂದು ಅಭಿಪ್ರಾಯಪಡುವರು. ಅಂದವೇಲೆ ಯಾವುದನ್ನೂ ನಿರ್ಧಾರವಾಗಿ ಹೇಳಲು ಬರುವಂತಿಲ್ಲ. ನಾನು ಹಿಂದಿನ ಲೇಖದಲ್ಲಿ ಒಬ್ಬರ ಮತವನ್ನು ಪ್ರಕ್ಟ ಮಾಡಿರುವೆನೇ ಹೊರತು, ನಿರ್ಣಯವನ್ನು ಹೇಳಿಲ್ಲ. ನಾನು ಉಪಯೋಗಿಸಿದ ಪಕ್ಷವೆಂಬ ಶಬ್ದವೇ ಇವರ ಲಕ್ಷಕ್ಕೆ ಬಂದಂತಿಲ್ಲ. ನೀವು ಈಗ ಬರೆದುದಾದರೂ ಒಬ್ಬರ ಹೇಳಿಕೆಯನ್ನು ಅದನ್ನಾದರೂ ನಿಶ್ಚಯಿಸಿ ಬರೆದಿರುವಿರಿ. ಐತಿಹಾಸಿಕದಲ್ಲಿ ಒಬ್ಬರ ಹೇಳಿಕೆಯಲ್ಲಿ ನಿಶ್ಚಯಿಸಲು ಬರುವಂತಿಲ್ಲ. ಒಂದು ಪಕ್ಷ ನಿಶ್ಚಯಿಸಿದರೂ ನಿರ್ವಿವಾದವಾಗಲಾರದು. ಅಂತಹದನ್ನು ನೀವು ಸರ್ವಸಾಮಾನ್ಯವಾಗಿ ನಿರ್ಣಯಿಸಿರುವಂತೆ ಮೇಲೆ ಯಾರದು ನಿರಾಧಾರವೋ? ನೀವೇ ಊಹಿಸಿರಿ. ಇನ್ನು ನನ್ನ ಹಿಂದಿನ ಬರಹದಲ್ಲಿ ಹರಿಹರದೇವನ ಕಾಲ ಕ್ರಿ. ಶ. ೧೨೬೫ ಎಂದು ಬಿದ್ದುದು ಪ್ರಿಂಟು ಇಲ್ಲದೆ ಹಸ್ತದೋಷವಾಗಿರಬೇಕು. ಈ ದೋಷವನ್ನು ನಿಮ್ಮ ಅಗಷ್ಟ ತಿಂಗಳ ಲೇಖದಲ್ಲಿಯೂ ಕಾಣಬಹುದು.

ಮಹಾದೇವಿಯಕ್ಕನ ಕಾಲನ್ನು ಕವಿಚರಿತೆಕಾರರು ಸು. ಕ್ರಿ. ಶ. ೧೨೬೦ ಎಂದು ಹೇಳಿರುವರು. ವಿಚಾರಿಸಿದರೆ ಅಕ್ಕನವರ ಕಾಲ ಇನ್ನೂ ಕೊಂಚ ಹಿಂದಕ್ಕೆ ಹೋಗಬಹುದೋ? ಎಂದೆನಿಸುತ್ತದೆ. ಏಕೆಂದರೆ— ಉತ್ತರ ಕರ್ನಾಟಕದ ಸರಸ ಕವಿಗಳಾದ ಶ್ರೀಮಾನ್ ದ. ರಾ. ಬೇಂದ್ರೆಯವರು, ಧಾರವಾಡ ಕರ್ನಾಟಕ ಸಂಘದಿಂದ ಹೊರಬಿದ್ದ "ಅಭಿನವ ಪಂಪ" ಎಂಬ ಗ್ರಂಥದಲ್ಲಿ 'ನಾಗಚಂದ್ರನ ಮಲ್ಲಿನಾಥ ಪುರಾಣ' ಎಂಬ ಲೇಖನವನ್ನು ಬರೆದಿರುವರು. ಅದರಲ್ಲಿ ಅವರು ನಾಗಚಂದ್ರ ಕವಿಯ ಕಾಲ-ದೇಶಗಳ ವಿಚಾರವಾಗಿ ಬರೆಯುತ್ತ ಈ ಶ್ಲೋಕವನ್ನು ಉದಹರಿಸಿರುವರು.

ಓವದೆ ಮೀನಮೇಷ ವೃಷಭಾದಿಗಳಂ ಕ್ರಮದಿಂ ದಿನಾಧಿಪಂ।
ಸೇವಿಸಿ ಮತ್ತೆ ಕನ್ನೆಯೊಡಗೂಡಲೊಡಂ ಕಿಡೆ ತನ್ನ ತೇಜವಿಂ॥

ನ್ನಾವುದೊ ಕಜ್ಜವೆಂದು ತೊಲೆಯಂ ಜನರಂಜೆನೆಗೇರಿ ತೇಜಮಂ।
ಭೂವಲಯಕ್ಕೆ ಬೀರಿದನಿದೇಂ ಪ್ರಭುವಾಡಿದ ಮಾಯೆ ಸಲ್ಲದೆ॥"

ಇದು ಕರಪ್ರವೇಶ ಕಾಲದ ದಿನಾಧಿಪನ ವರ್ಣನೆ. ಇಲ್ಲಿ ಶ್ಲೇಷ, ಪರಿಸಗರ್ಭಿತ ಸರಣಿ, 'ಪ್ರಭು' ಎಂಬ ತೋರಿಕೆಗೆ ಅನುಚಿತವಾದ ಪದ ಪ್ರಯೋಗ, ಒಂದೊಂದೂ ಸಂಶಯವನ್ನುಂಟು ಮಾಡುವವು..... ..... ಈ ಪದ್ಯವನ್ನು ಬಿಟ್ಟರೆ ಎರಡೂ ಕಾವ್ಯಗಳಿಗೂ ಬಾಧೆಯಿಲ್ಲ. ಈ ಪದ್ಯದೊಳಗಿನ ಪರಿಹಾಸಗರ್ಭಶ್ಲೇಷೆಗೆ ಚಾರಿತ್ರಕ ಔಚಿತ್ಯವಿದ್ದಿರಬೇಕೇ ಹೊರ್ತು, ಕಾವ್ಯ ವಸ್ತುವಿನ ರೀತಿಯಿಂದಾಗಲಿ, ವರ್ಣನಾ ರೀತಿಯಲ್ಲಾಗಲಿ ಕಾಣದು. ಇದರೊಳಗಿನ 'ಪ್ರಭು' ಹಾಗು 'ಮಾಯೆ' ಶಬ್ದಗಳು, ಮತ್ತೇಂದ್ರ-ಗೋರಖಪಂಥ ಸಂಸರ್ಗದಲ್ಲಿ ಬಳೆದು ಮುಂದೆ ಬಸವನೊಡನೆ ಪ್ರಸಂಗವಾಡಿ, (ಕನ್ನೇ ಮಹಾದೇವಿಯಕ್ಕ) ಯೊಡನೆ ಶಿವಾನುಭವಗೋಷ್ಠಿ ಬೆಳಸಿ ಪವಾಡಗಳಿಂದಲೂ ಜನಪ್ರಿಯವಾಗುತಲಿದ್ದು ಮಾಯೆಯನ್ನು ಗೆದ್ದು ಪ್ರಭುವೆಂದು ಪ್ರಸಿದ್ಧಿಗೆ ಬರುತ್ತಿದ್ದ ಅಲ್ಲಮನನ್ನು ಕುರಿತು ಇರಬೇಕೆಂದು ಎತ್ತಿ ಒತ್ತಿ ಹೇಳುವಂತೆ ನನಗಂತೂ ತೋರುವದು. ಒಂದು ಹಠಯೋಗ ಗ್ರಂಥದ ಕೊನೆಗಿರುವ ನಾಥ ಸಂಪ್ರದಾಯದ ಪಟ್ಟಿಯಲ್ಲಿ ಅಲ್ಲಮಪ್ರಭುವಿನ ಹೆಸರನ್ನು ಓದಿದುದು ನನಗೆ ನೆನಪಿದೆ..... ವೃಷಭ-ಕನ್ನೆ ಶಬ್ದಗಳು ಬಸವನನ್ನೂ ಮಹಾದೇವಿಯಕ್ಕನನ್ನೂ ಸೂಚಿಸುವವು..... ಈ ಕಲ್ಪನೆಯು ಸಮಂಜಸವಾಗಿದ್ದರೆ ಕಲ್ಯಾಣ-ಬಾಗೇವಾಡಿಗಳತ್ತಲಿರುವ ವಿಜಾಪುರ ಪ್ರಾಂತದಲ್ಲಿಯೇ ನಾಗಚಂದ್ರನು ಇರಲಿಕ್ಕೆ ಸಾಕು. ಅವನ ಕಾಲ ಪ್ರಭುವಿನ ಕಾಲ. ಪ್ರಭುವು ಬಸವನಿಗೆ ವಯಸ್ಸಿನಲ್ಲಿ ಹಿರಿಯ." ಎಂದು ಬರೆದಿರುವರು.

ಇವರು ಉದಹರಿಸಿದ ಶ್ಲೋಕವು ಜೈನಕವಿಯಾದ ನಾಗಚಂದ್ರನ ಮೊದಲನೆಯ ಕೃತಿಯಾದ ಮಲ್ಲಿನಾಥ ಪುರಾಣದೊಳಗಿನದು. ಆ ಪುರಾಣವನ್ನು ಕ್ರಿ. ಶ. ಸು. ೧೧೧೫ ರಲ್ಲಿ ರಚಿಸಿರಬೇಕೆಂದು ಶ್ರೀಮಾನ್ ಗೋವಿಂದ ಪೈ, ಮುಂಜೇಶ್ವರ ಎಂಬವರು ಅಭಿಪ್ರಾಯಪಡುತ್ತಾರೆ. ಕವಿಚರಿತೆಕಾರರೂ ಈ ಕವಿಯ ಕಾಲ ಸು. ಕ್ರಿ. ಶ. ೧೧೦೦ ಎಂದು ತಿಳಿಸುವರು. ಉಳಿದವರೂ ಒಪ್ಪುವರು. ಆದ್ದರಿಂದ ಒಟ್ಟಿನ ಮೇಲೆ ಶ್ರೀಮಾನ್ ದ. ರಾ. ಬೇಂದ್ರೆ ಬಿ. ಏ. ಇವರು ಹೇಳುವ ಶ್ಲೇಷಾರ್ಥವು ಸತ್ಯಾಂಶವಾದಲ್ಲಿ ಅಲ್ಲಮ-ಅಕ್ಕಗಳ ಕಾಲ ಸುಮಾರು ಕ್ರಿ. ಶ. ೧೧೦೦ಕ್ಕೆ

ಬರುವನು. ಮತ್ತು ಹರಿಹರದೇವನಿಗಿಂತಲೂ ಪ್ರಾಚೀನನಾದ ಈ ಕವಿಯು ತನ್ನ ಪದ್ಯವಲ್ಲಿ 'ಮಾಯೆ' ಎಂಬ ಶಬ್ದವನ್ನು ಉಪಯೋಗಿಸಿರುವದರಿಂದ ಅಕ್ಕನ ತಾಮಸಾವತಾರಕ್ಕೆ ಮಾಯೆಯೆಂದು ಹೆಸರಿರಬೇಕು ಹಾಗು ಮಾಯಾಕೋಲಾಹಲ-ಮಾಯಾಮದಮರ್ದನ ಎಂಬ ಪ್ರಭುವಿನ ಬಿರುದುಗಳಿಂದಲೂ ಇದು ವ್ಯಕ್ತವಾಗುತ್ತದೆ. ಆ ಕಾರಣ ಇದೇ ಹೆಸರನ್ನು ಚಾಮರಸ ಕವಿಯು ಅಕ್ಕನ ಆದಿ ಅವತಾರಕ್ಕೆ ಉಪಯೋಗಿಸಿರುವದು ಸಾಧಾರವೂ ಸಯುಕ್ತಿಕವೂ ಆಗುವಲ್ಲಿ ಸಂದೇಹವಿಲ್ಲ. ಇನ್ನು ಹರಿಹರದೇವನು ಅದೇ ಮಾಯೆಗೆ ಪ್ರಭುವಿನ ರಗಳೆಯಲ್ಲಿ ಕಾಮುಲತೆಯೆಂದು ಕರೆದುದು ಕಲ್ಪಿತವಾಗಿರಬಹುದೇ? ಎಂಬ ಸಂಶಯವು ಅದಾಗಲೇ ತಲೆದೋರುವದು ಇರಲ್ಲದೆ ನಾಗಚಂದ್ರನು – ಪ್ರಭುವಿನ ಬಳಿಗೆ ಬಂದ ಅಕ್ಕನನ್ನು 'ಕನ್ನೆ' ಯೆಂದು ಹೇಳುವದರಿಂದ ಅಕ್ಕನು ಲಗ್ನವಾಗಿರಲಿಲ್ಲವೆಂದು ವ್ಯಕ್ತವಾಗುತ್ತದೆ.

ವಿಧ್ಯ–ಸತ್ಯಗಳ ನಿರ್ಣಯ.

ಕೇವಲ ಚಾಮರಸನೊಬ್ಬನೇ ಮೂಢ ಪ್ರೇಮದಿಂದ ಕಾವ್ಯವನ್ನು ಬರೆಯಲಿಲ್ಲ. ಸಾಮಾನ್ಯವಾಗಿ ಹಿಂದಿನ ಕವಿಗಳ ಕಾವ್ಯಗಳೆಲ್ಲ ಅದೇ ಮಟ್ಟಿಗಿಳಿವವುಗಳು. ಹರಿಹರದೇವನೇನೂ ವಿಜ್ಞಾನದಲ್ಲಿ-ಐತಿಹಾಸಿಕನಲ್ಲಿ ದೃಷ್ಟಿಯಿಟ್ಟು ಬರೆದಿಲ್ಲ. ಅತನದೂ ಚಾಮರಸನಿಗಿಂತಲೂ ಹೆಚ್ಚಿನ ಭಕ್ತಿಭಾವ; ಮಿಕ್ಕಿದ ಪ್ರೇಮ. ಆದ್ದರಿಂದ ಅತನ ರಗಳೆಯ ಕಾವ್ಯಗಳೂ ಹೊನಲು ಭಕ್ತಿಯ ಪಾತ್ರೆಯಲ್ಲಿಯೇ ಹರಿದು ನಿಂತಿದೆ. ಇದಕ್ಕೆ ಅತನ ಪಂಪಾಶತಕವೇ ಸಾಕ್ಷಿ. ಹಾಗು ರಂ. ಶ್ರೀ. ಮುಗಳಿಯವರು ಬರೆದ "ಅಕ್ಕಮಹಾದೇವಿ" ಯೆಂಬ ನಾಟಕದ ವಿಮರ್ಶಾತ್ಮಕ-ವಿಚಾರಾತ್ಮಕ (ಪುಟ ೪) ವಾದ ಮುನ್ನುಡಿಯನ್ನು ಓದಿದರೆ ವಿದಿತವಾಗುತ್ತದೆ. ಇದಲ್ಲದೆ ಹೂದೋಟ-ಲಿಂಗನೋಟ (ಪೂಜೆ) ಗಳನ್ನು ವರ್ಣಿಸುವದು ಅತನಿಗೆ ಹೆಚ್ಚು ಪ್ರಿಯವಾಗಿತ್ತು. ಆಗ ಅತನ ವಾಣಿಯು ಕುಣಿಯುತ್ತಿತ್ತು. ಉತ್ಸಾಹವು ಉಕ್ಕುತ್ತಿತ್ತು. ಪ್ರೇಮರಸವು ಇಮ್ಮಡಿ-ಮುಮ್ಮಡಿ-ನೂರ್ಮಡಿ ಹೆಚ್ಚಿ ಚಿಮ್ಮುತ್ತಿತ್ತು. ಎಂಬುದನ್ನು ಅತನ ರಗಳೆಯ ಅಭ್ಯಾಸಿಗಳಿಗೆ ಬೇರೆ ಹೇಳಬೇಕಾಗಿಲ್ಲ. ಇದಕ್ಕೂ ಅತನ ಪುಷ್ಪ-ಲಿಂಗ ರಗಳೆಗಳೇ ಪ್ರಮಾಣು. ಇದರಿಂದ ಅತನ ಕಾವ್ಯದೊಲವು ಅಂತರಂಗದಲ್ಲಿ ಹರಿದು ನಿಂತಿದೆಯೆಂದು ಕಂಡುಬರುವದು. ಎಲ್ಲಕ್ಕೂ ಮೂಲ

ವಾದ ಅಕ್ಕನವರ ವಚನ ಪರಿಚಯವಿದ್ದ ಚಾಮರಸನಿಗೆ ರಗಳೆಯ ರಚನೆಯಿಂದಲಾದರೂ ಏನು ಪ್ರಯೋಜನ? 'ಹಾಲಹಿಡಿದು ಬೆಣ್ಣೆ ಮೊಸರಲುಂಟೆ?' ಅಕ್ಕಗಳೆಗೂ ಚಾಮರಸನಿಗೂ ೩೦೦ ವರ್ಷ ಅಂತರವಿದ್ದರೆ, ಅಕ್ಕಗಳೆಗೂ ಹರಿಹರನಿಗೂ ೧೩೦ ವರುಷ [ಹದಿಮೂರನೇ ಶತಮಾನದ ಉತ್ತರ ಭಾಗವೆಂದು ಹೇಳುವವರ ಮತದಲ್ಲಿ] ಅಂತರವಾಗುವದು. ಒಂದು ಪಕ್ಷ ಶ್ರೀಮಾನ್ ದ. ರಾ. ಬೇಂದ್ರೆಯವರು ಹೇಳುವಂತೆ ಅಕ್ಕನ ಕಾಲ ೧೧೦೦ಕ್ಕೆ ಹೋಗುವದು ಸತ್ಯವಾಗಿ ಪರಿಣಮಿಸಿದರೆ ಸುಮಾರು ೬೦೦ ವರುಷ ಅಂತರವಾಗುವದು. ಅಂದ ಬಳಿಕ ಈತನಾದರೂ ಕಂಡು ಅಥವಾ ಕಂಡವರಿಂದ ಕೇಳಿ ಬರೆದನೆಂಬ ಮಾತು ಆಧಾರವಿಲ್ಲದೇ ನಿಲ್ಲಬಹುದಲ್ಲವೇ? ಈ ವಿಧವಾಗಿ ವಿಚಾರಿಸುವಾಗ ಅಕ್ಕನವರ ವಚನವೇ ಉಚಿತ ಪ್ರಮಾಣವಾಗುವದು ಸರಿಯಲ್ಲವೇ? ಅವರ ವಚನದಲ್ಲಿ ಅವರ ಇಡೀ ಜೀವನ ಚರಿತ್ರೆಯು ಸಿಕ್ಕದಿದ್ದರೂ ಸಾರವು ಮಾತ್ರ ಸಿಕ್ಕುತ್ತದೆ. ಅದನ್ನೇ ಹರಿಹರ-ಚಾಮರಸರು ತಂತಮಗೆ ಒಗ್ಗುವಂತೆ ಹಿಗ್ಗಿಸಿದ್ದಾರೆ. ಆದರೂ ಹರಿಹರನ ರಗಳೆಯ ಕೆಲವಂಶಗಳು ಅಕ್ಕನ ವಚನಗಳಿಗೆ ವಿರೋಧವಾಗಿ ನಿಲ್ಲುವಂತಿವೆ. ಅವುಗಳಲ್ಲಿ ಕೆಲವನ್ನು ಹಿಂದಿನ ಬರಹದಲ್ಲಿ ಹೇಳಿದ್ದೇನೆ. ಇಲ್ಲಿಯೂ ಪ್ರಸಂಗವೊದಗಿದಲ್ಲಲ್ಲಿ ತೋರಿಸುತ್ತ ಹೋಗುವೆನು. ಕೌಶಿಕನೊಡನಾದ ವಿವಾಹ ವಿಷಯವನ್ನು ಹೇಳತಕ್ಕ ಪ್ರಸಂಗಗಳು ಅಕ್ಕನವರಿಗೆ ಘಟಿಸಿದ್ದರೂ ಹೇಳಿಲ್ಲ. ಅಕ್ಕಗಳು ಆಗಿಹೋದುದನ್ನು ವ್ಯಕ್ತಮಾಡದೆ ಬಚ್ಚಿಡುವ ಸಂಕುಚಿತ ಸ್ವಭಾವದವಳೂ ಕಲ್ಮಷ ಹೃದಯದವಳೂ ಆಗಿರಲಿಲ್ಲ. ಆದ್ದರಿಂದ ಅವಳ ವಚನದಿಂದ ಲಗ್ನವಾಗಿಲ್ಲವೆಂದು ಒಕ್ಕುಮಟ್ಟಿಗೆ ಊಹಿಸಲು ಸಾಧ್ಯವಿದೆಯೆಂದು ತೋರುತ್ತದೆ. ಇದೇ ಅಭಿಪ್ರಾಯವನ್ನು ಅಂತರಂಗದಲ್ಲಿ ಅರಗಿಸಿಕೊಂಡು ಬರೆದ ಚಾಮರಸನೇ ಸತ್ಯವೆಂದು ಹೇಳಬಹುದು.

"ಒಂದು ನಾಡಿನಲ್ಲಿ ನಡೆದು ಹೋದ ಕಾರ್ಯಗಳ ನಿಜಸ್ಥಿತಿಯು ಕಾಲಾಂತರದ ಮೇಲೆ ಹಬ್ಬುವದು ಸ್ವಾಭಾವಿಕ" ಎಂಬ ನನ್ನ ಮಾತಿಗೆ-ಇನ್ನು ನಮ್ಮ ಉತ್ತರವೆಂದು ಆರಂಭಿಸಿ – "ಒಂದು ನಾಡಿನ ವ್ಯಕ್ತಿಯ ಕಾರ್ಯಗಳು ಕಾಲಾಂತರದ ಮೇಲೆ ಪ್ರಸಾರವಾಗುವದೇನೋ ದಿಟವು. ಆದರೆ ಆ ಕಾರ್ಯವು ಕಾಲಾಂತರ ಮೇಲೆ ಹೆಚ್ಚು ಹಬ್ಬಬೇಕಾದರೆ ಮೊದಲಿಗೇ ಆ ವಿಷಯವು ಎಲ್ಲಿಯಾದರೂ ಅಲ್ಪ ಪ್ರಮಾಣದಿಂದ

ಲಾದರೂ ಹಬ್ಬಿಕೊಂಡಿರಬೇಕಾಗುತ್ತೆ. ಯಾವುದು ಇರುವದಿಲ್ಲವೋ ಅದು ಪ್ರಸಾರವಾಗುವದೇ ಇಲ್ಲ. ಇದು ಸೃಷ್ಟಿಯ ನೇಮ." ವಿವಾಹವಾಗಿಲ್ಲವೆಂದು ಹಂಪರನ ದೇವನ ಅಥವಾ ಅಕ್ಕನ ಕಾಲಕ್ಕೆ ಸಿಕ್ಕುವದಿಲ್ಲ. ಇಲ್ಲುದುದು ಚಾಮರಸನ ಕಾಲಕ್ಕೆ ಹೇಗೆ ಪ್ರಸಾರವಾಯಿತು? ಈ ಲೇಖಕರು ಇಂತಹ ಅಭಿಪ್ರಾಯಗಳನ್ನು ಸಾಧಿಸಬೇಕಾದರೆ ಇದಕ್ಕೆ ತಕ್ಕ ಐತಿಹಾಸಿಕ ಆಧಾರವನ್ನು ತೋರಿಸಿ ಕೊಡಬೇಕಲ್ಲವೇ? ಆಧಾರವಿಲ್ಲದೆ ಹೇಳಿದರೆ ನಂಬಲು ಇದು ಬೇಸರ ಕಳೆಯಲು ಕೇಳುವ ಕತೆಯಲ್ಲ." ಎಂದು ಕೊಂಚ ಮಾರ್ದವದ ಮೆಟ್ಟಲನ್ನು ಬಿಟ್ಟು ಕಾಠಿಣ್ಯದ ಕಟ್ಟಿಯನ್ನು ಏರಿ ಬರೆದಿರುವರು.

ಇದಕ್ಕೆ ನನ್ನ ಮಾರುತ್ತರ.

'ಯಾವುದು ಇರುವದಿಲ್ಲವೋ ಅದು ಪ್ರಸಾರವಾಗುವದೇ ಇಲ್ಲ.' ಎಂಬಿವರ ಮಾತಿನಂತೆ ಅಕ್ಕನ ಅಥವಾ ಹರಿಹರನ ಕಾಲಕಿಲ್ಲುದದನ್ನು ಚಾಮರಸನಾದರೂ ಹೇಗೆ ಪ್ರಸಾರ ಮಾಡಿದನು? ಇಲ್ಲುದುದನ್ನು ಹೇಳಿದನೆಂದರೆ ನಿಮ್ಮ ಮಾತಿಗೇನೆ ವ್ಯತ್ಯಯ ಬರುವದಿಲ್ಲವೇ? ಅಥವಾ ಲಗ್ನವಾಗಿಲ್ಲವೆಂಬ ಮಾತು ಹರಿಹರನ ಕಾಲಕ್ಕಿಲ್ಲದಿದ್ದರೂ ಅಕ್ಕನವರ ಕಾಲಕ್ಕಿತ್ತು. ಅದೇ ಚಾಮರಸನ ಕಾಲಕ್ಕೆ ಹಬ್ಬಿತು. ಹಾಗಾದರೆ ಹರಿಹರನೇಕೆ ಹಾಗೆ ಹೇಳಲಿಲ್ಲವೆಂದರೆ– ಆತನ ಕಾಲಕ್ಕೆ ಆತನಿಗೆ ಹೇಳಿದ ಜನಗಳಲ್ಲಿ ಲಗ್ನವಾಗಿದ್ದಳೆಂದು ಭ್ರಮೆ (ತಪ್ಪು ಕಲ್ಪನೆ) ಯಾಗಿರಬೇಕು. ಬರಬರುತ್ತ ಅದು ಸುಳ್ಳಾಗಿ ಚಾಮರಸನ ಕಾಲಕ್ಕೆ ನಿಜಸಂಗತಿಯ ಪ್ರಮೆಯಾಗಿರಬೇಕು. ಆದಕಾರಣ "ಭ್ರಮೆಯಿಂದ ಪ್ರಮೆಯಾಗುವದೂ ಸೃಷ್ಟಿಯ ನೇಮ." ಎಂದು ನನ್ನ ಹೇಳಿಕೆ. ಇದಕ್ಕೆ ಸರ್ಪರಜ್ಜುನ್ಯಾಯವೇ ದೃಷ್ಟಾಂತ. ಇನ್ನು ಹರಿಹರ ದೇವನಿಗಾದರೂ ಲಗ್ನವಾಗಿತ್ತೆಂದು ಹೇಳಲು ಯಾವ ಐತಿಹಾಸಿಕ ಆಧಾರವಿದೆಯೋ ಅದು ನನಗೆ ತಿಳಿಯದಾಗಿದೆ. ಒಂದು ಪಕ್ಷದ ದೃಷ್ಟಿಯಿಂದ ಅಕ್ಕನವರಿಗಿಂತ ೮೦ ವರ್ಷ ಅಂತರದಲ್ಲಿರುವ ಹರಿಹರನಿಗಾದರೂ ಈ ಲೇಖಕರು ಒಂದು ಐತಿಹಾಸಿಕ ಪ್ರಮಾಣವನ್ನು ಕೊಡದಿದ್ದರೆ ಅಕ್ಕನವರು ಲಗ್ನವಾಗಿದ್ದರೆಂದು ಹೇಳುವದು ತಾವೇ ಹೇಳಿದಂತೆ ತಮ್ಮದೇ ಬೇಸರ ಕಳೆಯಲು ಕೂತು ಕೇಳುವ ಕತೆಯಾಗುವದಲ್ಲವೇ? ಎಂದು ಕೇಳಿದರೆ ಇವರಿಗೆ ಕೊಂಚ ಕಠಿಣವಾಗಬಹುದು. ಕಾರಣ ಆ ಪ್ರಶ್ನೆ ಮಾಡಿ ಕಲ್ಲೆದೆಯವನಾಗುವ

ಇಚ್ಛೆಯು ಎನಗಿಲ್ಲ. ಇನ್ನು ಚಾಮರಸನ ಮಾತಿಗೆ ಅಕ್ಕನವರ ವಚನವು ತುಂಬಾ ಸಹಾಯಕವಾಗುವದರಿಂದ ಅದೇ ಆಧಾರ. ಆದ್ದರಿಂದ ನಾವು ಹೇಳುವದು ಐತಿಹಾಸಿಕ ದೃಷ್ಟಿ. ಹರಿಹರನನ್ನು ಹಿಡಿದು ಲಗ್ನವಾಗಿತ್ತೆಂದು ಹೇಳುವ ನಿಮ್ಮ ಮಾತಿಗೆ ಐತಿಹಾಸಿಕ ಅಧಿಕಾರ ಸೂತ್ರವನ್ನು ಅರಿಸುವದು ಕೊಂಚ ಮಟ್ಟಿಗೆ ನಿಮ್ಮ ಭಾಗಕ್ಕೇನೆ ಉಳಿದಂತಾಯಿತು.

"ಮದುವೆಯಾಗಿಲ್ಲವೆಂದು ಹೇಳಿದರೆ ತನ್ನ ಕಥಾನಾಯಿಕೆಯ ಮಹತ್ವವು ಮತ್ತಿಷ್ಟು ಉಜ್ವಲವಾಗಲೆಂಬುದೇ ಚಾಮರಸನ ಪೌರಾಣಿಕ ಭಕ್ತಿಯ ಉದ್ದೇಶವಾಗಿದೆ." ಎಂದು ಬರೆದಿರುವರು.

ಇದಕ್ಕೂ ನನ್ನ ಮಾರುತ್ತರ

ಕೇವಲ ಚಾಮರಸನೊಬ್ಬನದೇ ಪೌರಾಣಿಕ ಭಕ್ತಿಯಲ್ಲ. ಹರಿಹರ ದೇವನಲ್ಲಿ ಪೌರಾಣಿಕ ಭಕ್ತಿಗೇನೂ ಕಮ್ಮಿಯಿಲ್ಲ. ನಿದರ್ಶನಗಾಗಿ ರೇವಣಸಿದ್ಧೇಶ್ವರರಗಳೆಯಲ್ಲಿ—"ಸದಮಳವೆನಿಸಿ ಲಿಂಗದೊಳು ಜನನಂ ಪೆತ್ತು" ಎಂದು ಹರಿಹರದೇವನು ಬರೆದಿರುವನು. ರೇವಣಸಿದ್ಧೇಶ್ವರರು ಬಸವಣ್ಣನವರ ಸಮಕಾಲೀನರೆಂಬ ಮಾತನ್ನು ತಾವೂ ಒಪ್ಪಬಹುದು. ಅಂದ ಮೇಲೆ ಅಂಥ ಸಮೀಪಸ್ಥರ ವಿಚಾರವಾಗಿ ಸ್ಥಾವರ 'ಲಿಂಗೋದ್ಭವ' ರೆಂಬಿ ಮೂಢ ಭಕ್ತಿಯಿಂದ ಬರೆದದ್ದು ಪೌರಾಣಿಕ ಭಕ್ತಿಯ ಹೆಗ್ಗುರುತಲ್ಲದೆ ಮತ್ತೇನು? ಲಿಂಗೋದ್ಭವವೆಂಬ ಶಬ್ದವು ನಮ್ಮ ಮತದಲ್ಲಿ ಲಿಂಗೈಕ್ಯವೆಂಬ ಶಬ್ದದಂತೆ ತಾತ್ಪಿಕವಾಗಿಯೂ ಪೂಜ್ಯರಲ್ಲಿರುವ ಪೂಜ್ಯತೆಗಾಗಿಯೂ ಬಂದಿರುವ ಶಬ್ದವು. ಉದಾಹರಣೆಗಾಗಿ— ಪರಮಪೂಜ್ಯರೂ ಗುರುಗಳೂ ಆದ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರು ಶಿವಯೋಗ ಮಂದಿರದಲ್ಲಿ ಲಿಂಗೈಕ್ಯರಾದರೆಂದು ಕಾವ್ಯ ಕಟ್ಟಿ ಬಣ್ಣಿಸಬೇಕಾದರೆ ಆ ಶಿವಯೋಗಮಂದಿರವಲ್ಲಿರುವ 'ಕೊಟ್ಟೂರ ಬಸವ' ಲಿಂಗದಲ್ಲಿ ಅಡಕಾವರೆಂದು ಬಣ್ಣಿಸಬಹುದೋ? ಆದರೆ ಲಿಂಗೋದ್ಭವ-ಲಿಂಗೈಕ್ಯ ಶಬ್ದಗಳು ನಮ್ಮಲ್ಲಿ ಸಾಮಾನ್ಯವಾಗಿ ಸೃಷ್ಟಿಯ ನೇಮದಂತೆ ಜನಿಸಿ, ಮುಂದೆ ಸಮಾಜದಲ್ಲಿ ಪೂಜ್ಯರಾದವರಿಗೆ ಲಿಂಗೋದ್ಭವರೆಂದೂ. ಕೊನೆಗೆ ವಿಷಯಗಳ ವ್ಯಸನವಿಲ್ಲದೆ ಲಿಂಗಾ! ಲಿಂಗಾ!! ಎಂದು ಐಕ್ಯರಾದವರಿಗೆ ಲಿಂಗೈಕ್ಯರೆಂದೂ ಹೇಳುವ ತಾತ್ವಿಕ ಶಬ್ದಗಳು. ಸಮಾಜದಲ್ಲಿ ಲಗ್ನವಾಗದೆ

ಇರುವವರನ್ನು ನಾವು ಈವಾಗಲೂ ಕಾಣಬಹುದು. ಸ್ಥಾವರ ಲಿಂಗೋ ದ್ಭವರನ್ನು ಮಾತ್ರ ಕಂಡಿಲ್ಲ; ಕಾಣಲಾರೆವು. ಹೀಗೆ ಸೃಷ್ಟಿಯ ನಿಯಮಕ್ಕೆ ಹೊರಗಾದ ಈ ವಿಚಾರವನ್ನಾದರೂ ಹರಿಹರದೇವನು ಪ್ರಾಣಿಕ ಭಕ್ತಿಯನ್ನು ಬಿಟ್ಟು ಕಂಡು ಅಥವಾ ಕೇಳಿಯೇ ಬರದಿರಬಹುದೇ? ಇದರಿಂದ ಈ ಲೇಖಕರು 'ಹರಿಹರನು ಕಂಡದ್ದನ್ನು-ಕೇಳಿದ್ದನ್ನು ಹೇಳುವದರಲ್ಲಿ ಮರೆಮಾಡಿಕೊಳ್ಳುವ ಸ್ವಭಾವದವನಲ್ಲ. [ರೇವಣಸಿದ್ದೇಶ್ವರ ರಗಳೆಯಲ್ಲಿ ೩೩ ನೇ ಪುಟವನ್ನು ನೋಡಿದರೆ ತಿಳಿಯುವದು.] ಎಂದು ತಪ್ಪು ಮಾತಿನೆ ಆ ರಗಳೆಯನ್ನು ಆಧಾರವಾಗಿ ಅಂಗೀಕರಿಸಿರುವದು ಎಷ್ಟರ ನುಟ್ಟಿಗೆ ನೆಲೆಯಾಗಿ ನಿಲ್ಲುವದೆಂಬುದನ್ನು ಓದುಗರೇ ವಿಚಾರಿಸಲಿ.

ಹರಿಹರನ ಕಾವ್ಯದುದ್ದೇಶ.

ಹರಿಹರದೇವನು ವೀರಶೈವ ಕವಿಗಳಲ್ಲಿ ಆದಿಕವಿ; ಮಹಾಕವಿ. ಆತನು ಕನ್ನಡಜಾಣ; ಕವಿಪ್ರಣ. ಆತನು ಅನಂತರಗಳೆಗಳನ್ನು ಬರೆದಿರುವನು. ಶತಕಗಳನ್ನು ಬಿತ್ತರಿಸಿರುವನು. ಗಿರಿಜಾಕಲ್ಯಾಣವನ್ನು ವಯಪಾಲಿಸಿರುವನು. ಆದರೆ ಆತನು ರಚಿಸಿದ ರಗಳೆಗಳೆಲ್ಲಾ ಐತಿಹಾಸಿಕಕ್ಕೆ ತಳಹದಿಯಾಗಲಾರವೆಂಬುದು ನನ್ನ ಭಾವನೆ. ಹಲವು ಗ್ರಂಥಗಳನ್ನು ಬರೆಯುವಾಗ ಆ ಸಮಸ್ತ ಕಥಾನಾಯಕರ ನಿಜಸಂಗತಿಗಳನ್ನು ಆಮೂಲಾಗ್ರವಾಗಿ ತಿಳಿದು ಬರೆಯುವದು ಆಗಿನ ಕಾಲಕ್ಕೆ ಬಹು ಕಷ್ಟಕರವಾದುದಾಗಿತ್ತು. ಆದಕಾರಣ ಅವರವರ ವಿಷಯಕ್ಕೆ ಅಲ್ಪಸ್ವಲ್ಪ ಕೇಳಿದುದನ್ನೇ ತನ್ನ ಭಾವನೆಯಿಂದ ಬೆಳಸಿ ಬರದಿರಬಹುದೆಂದು ಹೇಳಬಹುದು. ಏಕೆಂದರೆ ಹಲವು ಕಡೆಗೆ ಹಲವು ವಿಧವಾಗಿ ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗಾಗಿ— ಕೊಳೂರು ಕೊಡುಗೂಸಿನ[೧] ರಗಳೆ, ಕಣ್ಣಪ್ಪನರಗಳೆ[೨], ಪ್ರಭುದೇವರರಗಳೆ, ಮೊದಲಾದವುಗಳು. ಅವನ್ನೆಲ್ಲಾ ಇಲ್ಲಿ ವಿಸ್ತರಿಸಿ ಬರೆದು ಲೇಖನವನ್ನು ಬೆಳಿಸುವ ಬಯಕೆಯಿಲ್ಲ.

---

೧ ಸದ್ಧರ್ಮದೀಪಿಕೆಯ ಸಂಪಾದಕರು ಪ್ರಕಟಿಸಿದ ಇದೇ ರಗಳೆಯ ಮುನ್ನುಡಿಯನ್ನೋದಿ ತಿಳಿಯಬಹುದು.

೨ ಹುಬ್ಬಳ್ಳಿಯಲ್ಲಿ ಹೊರಟ 'ಕಲ್ಯಾಣ' ವೆಂಬ ಕನ್ನಡ ಮಾಸಿಕದ ಮೊದಲನೆ ಸಂಚಿಕೆಯಲ್ಲಿ ಅನುವಾದ ಮಾಡಿದ ಚಕ್ರವರ್ತಿ ರಾಜಗೋಪಾಲಾಚಾರ್ಯರ ಕಣ್ಣಪ್ಪನ ಕತೆಯನ್ನು ತಿಳಿಸುವ ಬರಹದಲ್ಲಿ ಮನಗಾಣಬಹುದು.

ಒಟ್ಟಿನಲ್ಲಿ ಆತನ ಕಾವ್ಯಗಳ ಉದ್ದೇಶವು ಬಹುಭಾಗವಾಗಿ ಆಂತರಂಗಿಕವೇ ಹೊರ್ತು ಬಹಿರಂಗ (ಚಾರಿತ್ರಕ) ವಾಗಿಲ್ಲ. 'ರವಿ ಕಾಣದು ಕವಿ ಕಂಡ' ನೆಂಬ ಮಾತು ಇಂತಹದರಿಂದಲೇ ಸಾರ್ಥಕವಾಗಿರ್ತೋ ಏನೋ?

ನಾನೆತ್ತಿ ಬರೆದ ಸದ್ಧರ್ಮದೀಪಿಕೆಯ ಸಂಪಾದಕರ ಅಭಿಪ್ರಾಯಕ್ಕೆ ಈ ಲೇಖಕರು ಬಹು ದೀರ್ಘವಾಗಿ ಕಟುವಾಗಿ ಉತ್ತರಿಸಿ ವೃಥಾ ಲೇಖನಾಂಕವನ್ನು ಬೆಳೆಸಿರುವರು. ಆ ಸಂಪಾದಕರ ಮಾತಿನಲ್ಲಿರುವ ಒಂದು ಮೂಲ ಮರ್ಮವನ್ನು ಇವರು ತಿಳಿದುಕೊಂಡಿದ್ದರೆ ಇಷ್ಟೊಂದು ರೇಗಿ ಬರೆಯುತ್ತಿರಲಿಲ್ಲ. 'ಶೇಷಂ ಕೂಪೇನ ಪೂರಯೇತ್' ಎಂಬ ರೀತಿಯಂತೆ ಇವರು ಬರೆಯುವದರಲ್ಲಿ ಅವರ ಆಂತರಂಗದ ಆಶಯವಷ್ಟೇ ಗ್ರಹಿಸಿಕೊಂಡಿಲ್ಲ. ಆ ಸಂಪಾದಕರ ಅಭಿಪ್ರಾಯದಲ್ಲಿ ನಾವಿಷ್ಟನ್ನು ಮಾತ್ರ ಗಮನಿಸಬೇಕು. ಅವರು ಅಕ್ಕನು ಲಗ್ನವಾಗಿಲ್ಲವೆಂದು ಸ್ಪಷ್ಟವಾಗಿ ಹೇಳಿಲ್ಲವಾದರೂ ಅವರ ಅಭಿಪ್ರಾಯವು, ಹರಿಹರದೇವನ ಕಾವ್ಯವು ಚರಿತ್ರಾಂಶದ ಸತ್ಯಪೀಠದಲ್ಲಿ ನಿಲ್ಲಲಾರದೆಂಬುದನ್ನು ಮಾತ್ರ ವ್ಯಕ್ತಪಡಿಸುತ್ತದೆ. ಇದು ಇನ್ನೂ ಸ್ಪಷ್ಟವಾಗಬೇಕಿದ್ದರೆ 'ಕೊಳೂರು ಕೊಡುಗೂಸಿನರಗಳೆ' ಯ ಮುನ್ನುಡಿಯನ್ನು ನೋಡಬಹುದು.

ಚಾಮರಸನ ಕಾರಣವೇ ಚನ್ನಬಸವಾಂಕನಿಗೆ.

ಇದೇ ಲೇಖಕರು ಹಿಂದೆ ತಮ್ಮ ಬರಹದಲ್ಲಿ ಚಾಮರಸನು ಹರಿಹರನ ಮಾರ್ಗವನ್ನೇಕೆ ಅನುಸರಿಸಲಿಲ್ಲವೆಂಬುದಕ್ಕೆ ಯಾವ ಉತ್ತರವನ್ನು ಹೇಳಿರುವರೋ ಅದನ್ನೇ ಚನ್ನಬಸವಾಂಕನಿಗೂ ಹೇಳಿದರೆ ಸಾಕು. ಇಲ್ಲವೆ ನನ್ನ ಮಾತಿನಲ್ಲಿಯೇ ಉತ್ತರಿಸಬೇಕೆಂದರೆ— ಅಕ್ಕಗಳು ಲಗ್ನವಾಗಿಲ್ಲೆಂದು ತಮ್ಮ ವಚನವನ್ನಾಗಿ ಅಥವಾ ಬೇರೆ ಯಾವದಾದರೂ ಆಧಾರವನ್ನಾಗಲಿ ಹಿಡಿದು ಬರೆದ ಚಾಮರಸನಿಗೆ ಹರಿಹರನ ರಗಳೆಯು ಹೇಗೆ ತ್ಯಾಜ್ಯವಾಗಿದೆಯೋ ಹಾಗೆಯೇ ಗುರುವಿನಪ್ಪಣೆಯಂತೆ ರಗಳೆಯನ್ನಾಧಾರವನಿಟ್ಟುಕೊಂಡು (ಬಾಸಿಗ ಕಟ್ಟಲಿಕ್ಕೆ ಮಾತ್ರ) ಬರೆಯುವ ಚನ್ನಬಸವಾಂಕನಿಗೆ ಲಗ್ನವಾಗಿಲ್ಲೆಂದು ಹೇಳುವ ಚಾಮರಸನ ಮಾತು ಆರು ಭಯವಾಗಿರುವಲ್ಲಿ ಆಶ್ಚರ್ಯವೇನು?

ಚನ್ನಬಸವಾಂಕನು ಒಬ್ಬರನ್ನೂ ನಂಬಿಲ್ಲ

ಚನ್ನಬಸವಾಂಕನು ಹರಿಹರನ ಸಂಪೂರ್ಣ ಮಾರ್ಗವನ್ನು ಅನುಸರಿಸಿಲ್ಲ. ಚಾಮರಸನ ಸಕಲ ರೀತಿಯನ್ನೂ ತಿರಸ್ಕರಿಸಿಲ್ಲ. ಬಾಸಿಗ ಕಟ್ಟುವದೊಂದನ್ನು ಮಾತ್ರ ಹರಿಹರನಿಂದ ಗ್ರಹಿಸಿದ್ದಾನೆ. ಉಳಿದುದು ಬಹು ಮಟ್ಟಿಗೆ ಚಾಮರಸನ ರೀತಿಯಲ್ಲಿಯೇ ಸಾಗಿದೆ. ಅಕ್ಕನು ರಾಣಿಯಾಗಿ ರಾಜ್ಯಭಾರವನ್ನು ವಹಿಸಿವ್ದು ಅವನದೇ ಆದ ಒಂದು ಸ್ವತಂತ್ರ ಮಾರ್ಗ. ಈ ಕವಿಯು ಅಕ್ಕನಿಗೆ ಬಾಸಿಗ ಕಟ್ಟಿ ಬ್ರಹ್ಮಚರ್ಯವನ್ನು ಕಾಪಾಡಿ ಹೊರಟಿದ್ದು ಅಷ್ಟೊಂದು ಸಮಂಜಸವಾಗಿ ತೋರುವದಿಲ್ಲ. ಏಕೆಂದರೆ ಕೌಶಿಕನು ಕಾಮ ವಾಸನೆಯ ದೌಡು ಕೇವಲ ಅಕ್ಕಿಯ ಕಾಳನ್ನು ಹಾಕಿಸಿಕೊಳ್ಳುವದರಲ್ಲಿ ಪರ್ಯವಸಾನವಾಗುವಂತಹದಲ್ಲ. ಅದರಲ್ಲಿಯೂ ಅಕ್ಕನು ರಾಜ್ಯ ಸೂತ್ರವನ್ನು ಕೈಯಲ್ಲಿ ತೆಗೆದುಕೊಂಡ ಮೇಲೆ ಅವಳಿಗೆ ಅರಸನ ಮನೆಯಲ್ಲಿ ಹಲವು ಕಾಲ ಸಂದಿರಬೇಕು. ಅನಿತೊಂದು ದೀರ್ಘಕಾಲದ ವರೆಗೆ ಕೌಶಿಕನು ಕೂಡದೇ ಇದ್ದನೆಂದು ಹೇಳುವವರಾದರೂ ಅಷ್ಟೊಂದು ಸಯುಕ್ತಿಕವಾಗಿ ತೋರುವದಿಲ್ಲ. ಇವನು ಹರಿಹರನನ್ನು ನಂಬಿ ಬಾಸಿಗವನ್ನು ಹೇಗೋ ಕಟ್ಟಿದನಾದರೂ ಮುಂದೆ ಬ್ರಹ್ಮಚರ್ಯವನ್ನು ಹಾಳ ಮಾಡಲು ಇವನಿಗೆ ಧೈರ್ಯ ಸಾತಿರುವದಿಲ್ಲ. ಇವರಿಂದ ಇವನು ಹೇಳುವದು ಯಾವ ದಫಕ್ಕೂ ಹತ್ತದಂತಿದೆ. ಆದುದರಿಂದ ಇವನನ್ನೇ ಆಧಾರವಾಗಿಟ್ಟುಕೊಂಡು ಚರಿತ್ರವನ್ನು ಬರೆಯುವದು ಅಷ್ಟೊಂದು ಸಮಂಜಸವಾಗಿ ತೋರುವದಿಲ್ಲೆಂದು ನನ್ನ ಭಾವನೆಯು.

ಹೆಸರಿನ ಪ್ರಶ್ನೆ.

ಈ ಲೇಖಕರು— ಇನ್ನುಳಿದ ಕವಿಗಳಾದರೂ ಅಕ್ಕನಳ ತಂದೆ ತಾಯಿಗಳಿಗೆ ನಿರ್ಮಲ ಸುಮತಿ ಎಂದು ಕರೆದಿರುವರು. ಹಾಗಾದರೆ ಇಂತಹ ಹೆಸರನ್ನು ಯಾರಾದರೂ ಇಡುವ ರೂಢಿಯಿದೆಯೋ? ಎಂದು ಕೇಳಿರುವರು.

ಈ ಲೇಖಕರು ಈ ಪ್ರಶ್ನೆಯನ್ನು ಮಾಡಿದುದು ಬಹು ಆಶ್ಚರ್ಯಕರವಾಗಿದೆ. ಸುಬುದ್ಧಿ, ಸಹಸ್ರಬುದ್ಧಿ, ವಿಮಲಾ ಮೊದಲಾದ ಅದೇ ಅರ್ಥದ ಪರ್ಯಾಯ ಹೆಸರುಗಳನ್ನು ಜೇಕಾದಷ್ಟು ಕಾಣಬಹುದಾಗಿದೆ.

ಹೀಗೆ ಉತ್ತರಿಸುವದರಿಂದ ಚಾಮರಸನು ಹೇಳಿದ ಹೆಸರುಗಳೇ ಸತ್ಯವೆಂದು ಸಿದ್ಧ ಮಾಡುತ್ತೇನೆಂದು ತಿಳಿಯಬಾರದು. ತಕ್ಕಮಟ್ಟಿಗೆ ಹೆಸರುಗಳು ಸಮಂಜಸವಾಗಿವೆಯೆಂಬುದೇ ನನ್ನ ತಾತ್ಪರ್ಯ. ಒಂದು ವೇಳೆ ಅವು ಕಾಲ್ಪನಿಕವಾದರೂ ಈ ಕವಿಗೆ ಅಷ್ಟೇನು ದೋಷವುಂಟಾಗದು. ಅವರೆ ಸಮಕಾಲೀನನೆಂದು ನೀವು ಅಭಿಪ್ರಾಯಪಡುವ ಹರಿಹರ ಕವಿಯು ಆ ವಿಷಯವಾಗಿ ಕಲ್ಪಿಸಿರುವದು ಒಪ್ಪುವ ಮಾತಾಗಿದೆ. ಈ ಹೆಸರುಗಳು ಅಂದಿನ ಕವಿಗಳಿಗೆ ಅವಶ್ಯವಿರದಿದ್ದರೆ ಭಿನ್ನ ಭಿನ್ನವಾಗಿ ಹೇಳಲು ಏಕೆ ಹೋಗಿದರು? ಹೆಸರು ಹೇಳದೆ ಹಾಗೆಯೇ ಕಥೆಯನ್ನು ವಿವರಿಸಿದ್ದರೆ ನಡೆಯುತ್ತಿರಲಿಲ್ಲವೇ? ಉಳಿದ ಕವಿಗಳಾದರೂ ಹರಿಹರನಿಟ್ಟ ಹೆಸರುಗಳನ್ನು ಏಕೆ ಅನುಮತಿಸಲಿಲ್ಲ?

ಇನ್ನು ಬೇರೆ ಕೆಲವರು ಹರಿಹರನು ಹೇಳುವ ಹೆಸರುಗಳು ಸತ್ಯವೆಂದು ಸಾಧಿಸಲು ಇಂತು ಪ್ರಶ್ನೆಯನ್ನು ಮಾಡಿರುವರು— ನಿರ್ಮಳ, ಸುಮತಿ ಇವುಗಳಾದರೂ ಶಿವಭಕ್ತ, ಶಿವಭಕ್ತೆಯಂತೆ ಗುಣವಾಚಕ ವಿಶೇಷಣಗಳಂತೆಯೇ ತೋರುವದಿಲ್ಲವೇ? 'ಶಿವಭಕ್ತರುದರಂಬೊಕ್ಕು' ಎಂಬ ಶಾಪವಿರುವದರಿಂದ ಅದಕ್ಕೆ ಹೆಚ್ಚಾಗಿ ಅನ್ವಯಿಸುವಂತೆ ಹೆಸರುಗಳನ್ನು ಆರಿಸಿದ್ದರೆ ತಪ್ಪೇನು?— ಮುಂದೆ ಚಾಮರಸನು ಅಕ್ಕನ ಚರಿತ್ರಾಂಶವನ್ನು ಮಾರ್ಪಡಿಸುವಾಗ ಹೆಸರುಗಳನ್ನೂ ಮಾರ್ಪಡಿಸಿರಬಹುದೆಂದು ಊಹಿಸಬಹುದಲ್ಲವೆ? ಎಂದು ಮೂಗಬೆಗೆಯಾಗಿ ಕೇಳಿರುವರು. ಉತ್ತರ (೧) ಚಾಮರಸನ ಹೆಸರುಗಳು ಹರಿಹರನ ಹೆಸರುಗಳಂತೆ ಗುಣವಾಚಕಗಳಾಗಿದ್ದರೂ ಹರಿಹರನಿಟ್ಟ ಹೆಸರುಗಳಂತೆ ಯೌಗಿಕವಲ್ಲ. ಇವು ಲೋಕ ರೂಢಿ (ಬಳಕೆ) ಯಲ್ಲಿ ಬಂದಿವೆ. (೨) ಶಾಪಕ್ಕೆ ಸರಿಯಾಗಿ ಹೆಸರನ್ನಾರಿಸಿದರೂ. ನೀವು ಸತ್ಯಾಂಶವಂತೆ ಭಾವಿಸಿದ್ದ ಶಾಪವೇ ಕಾಲ್ಪನಿಕವೆಂದು ನನ್ನ ಅಭಿಪ್ರಾಯವಿದೆ. ಹೇಗೆಂದರೆ ಹರಹರದೇವನ ಶರಣರ ರಗಳೆಗಳಲ್ಲಿ ವ್ಯಾಸರ ಪುರಾಣಗಳ ಶೈಲಿಯ ಛಾಯೆಯು ಹಾಸುಹೊಕ್ಕಾಗಿ ಹಬ್ಬಿಕೊಂಡಿದೆ. ಹರಿಹರನು ವ್ಯಾಸರಂತೆ ಶರಣರೆಲ್ಲರನ್ನೂ ರಾಪಕೂಪದಲ್ಲಿ ಅದ್ದಿ ತೆಗೆದಿದ್ದಾನೆ. ಪುರಾಣಗಳಲ್ಲಿರುವಂತೆ ಪುಷ್ಪಕವಿಮಾನಗಳಲ್ಲಿಯೇ ಕೈಲಾಸಕ್ಕೆ ಕಳಿಸಿಕೊಡುತ್ತಾನೆ. ಅಲ್ಲಿ ಪೂರ್ವದಲ್ಲಿರುವ ಅವರ ಪದಗಳನ್ನೇ ತಿರುಗಿ ಅವರಿಗೆ ಸರಿ ಮಾಡಿಕೊಡುತ್ತಾನೆ. ಹೀಗಿದ್ದರೂ ಈ ಲೇಖಕರು—"ಚರಿತ್ರವನ್ನು ಅನುಸರಿಸಿಯೇ ಓಲಗವ

ಲ್ಲಿಯ ಶಾಪರಚನೆಯಿಪೆ ಎಂದು ಹೇಳಿದರೆ ತಪ್ಪೇನು? ಎಂದು ಎರಡನೆಯದಾಗಿ ಅಭಿಪ್ರಾಯಪಡುವದು ಹರಿಹರದೇವನು ಕೇವಲ ಅಕ್ಕನ ಕೊಬ್ಬಿನಿಗೇನೆ ಹಾಗೆ ಮಾಡಿದ್ದರೆ ಒಪ್ಪಬಹುದಾಗಿತ್ತು. ಏಕೆಂದರೆ ಅಕ್ಕನಗಳು ತಮ್ಮ ವಚನದಲ್ಲಿ ತಮ್ಮ ಜನ್ಮ ಕಾರಣವನ್ನು ಹೇಳಿಕೊಂಡಿಲ್ಲ. ಆದರೆ ತಮ್ಮ ಜನ್ಮಕಾರಣವನ್ನು ತಿಳಿಸುವ ಬಸವ, ಅಲ್ಲಮರನ್ನೂ ಸಹ ಶಾಪದಿಂದಲೇ ಹುಟ್ಟಿಸಿರುವದರಿಂದ ಅವುಗಳಂತೆ ಇದನ್ನೂ ಸಹ ಸಂಬರಿಕ್ಯಾಗುವದಿಲ್ಲ. ಅವರ ಅವತಾರ ವಿಷಯಕ್ಕೆ ಶೂನ್ಯ ಸಂಪಾದನೆಯಲ್ಲಿ— " ... ಕಲಿಯುಗದಲ್ಲಿ ಜಗಹಿತಾರ್ಥವಾಗಿ, ಬಸವನೆಂಬ ಗಣೇಶ್ವರನಾಗಿ ಬಂದು, ಗುರು, ಲಿಂಗ ಜಂಗಮ, ಪಾದೋದಕ, ಪ್ರಸಾದವ ಪಾದಿಯನೆಲ್ಲರಿಗೆ ತೋರಿ ಆರಾಧಿಸುವಲ್ಲಿ, ಭಕ್ತಿ ಕಾರಣ ಪ್ರಭುವೆಂಬ ಜಂಗಮವಾಗಿ ಲಿಂಗಾರ್ಚನೆಯ ಮಾಡಬಂದ. ಇಂತೀ ಪರಶಿವಲಿಂಗವು ಲೀಲಾವಿನೋದಕ್ಕೆ ದೇವ-ಭಕ್ತನೆಂಬ ಉಭಯ ನಾಮವ ಧರಿಸಿ, ಕ್ರಿಯಾಂಗದಿಂ ಬಂದುದನರಿಯದೆ, ಶಾಪದಿಂದ ಬಂದರೆಂದು ಸಂಕಲ್ಪಿಸಿ ನುಡಿವರಿಗೆ ನಾಯಕನರಕ ತಪ್ಪದು ಕೂಡಲಚನ್ನಸಂಗಮದೇವಾ." (ಪುಟ ೭-೩) ಎಂದು ಹೇಳಿದೆ. ಇನ್ನು ಇವರು ಮೊದಲನೆಯದಾಗಿ 'ಶಿವನ ಓಲಗವಲ್ಲಿಯ ಸಂದರ್ಭಕ್ಕೆ ಅನುಸರಿಸಿ ಕಥಾರಚನೆಯಿದೆ.' ಎಂದು ಹೇಳಿರುವಂತೆ ಆ ಸಂದರ್ಭವನ್ನು ಹರಿಹರನೇನೂ ಕಂಡಿಲ್ಲ. ಕಲ್ಪಿಸಿ ಕಥೆಗೆ ಪೀಠಿಕೆಯನ್ನು ಬರೆದಿರುವನು. ಕಲ್ಪನೆಯ ಪೀಠಿಕೆಗೆ ಅನುಗುಣವಾಗಿ ಕಥೆಯನ್ನಾದರೂ ಹರಿಹರನು ಏಪರ್ಪಡಿಸಿರಬಹುದೆಂದು ಊಹಿಸಬಹುದಾಗಿದೆ.

ಇನ್ನೊಂದು. ಮುಖ್ಯ ಲೇಖಕರು ತಮ್ಮ ಮೊದಲನೆ ಲೇಖಾಂಕದ ಕೊನೆಗೆ ಉಡಿಟಿಪ್ಪಣಿಯಲ್ಲಿ ಅಕ್ಕನು ಕಲ್ಯಾಣಕ್ಕೆ ಹೋದ ಸುದ್ದಿಯನ್ನು ಪರೀಕ್ಷರನೇಕೆ ಬರಿಯಲಿಲ್ಲ? ಎಂಬ ಪ್ರಶ್ನೆಗೆ ಹಿಂದೆ ಅಗಷ್ಟ ತಿಂಗಳಲ್ಲಿ ಕೊಟ್ಟ ತಮ್ಮ ಲೇಖವನ್ನು ತೋರಿಸಿದ್ದಾರೆ. ಆದರೆ ಅದರಲ್ಲಿ 'ತರುಣ ಕರ್ನಾಟಕದಲ್ಲಿ' ಕೊಟ್ಟಂತೆ ಇದೆಯೇ ಹೊರತು ಹೆಚ್ಚಿನದೇನೂ ಇಲ್ಲ. ಉಪನ್ಯಾಸ ಜುಲೈ ಸಂಚಿಕೆಯಲ್ಲಿ ಖಂಡಿಸಿ ಉತ್ತರ ಬರೆದಿರುವದರಿಂದ ಅದು ನನಗೆ ಮಾನ್ಯವಿಲ್ಲ, ಮತ್ತು ಪೀಠಿಕೆಯಲ್ಲಿ 'ಶಿವಭಕ್ತಗೆ ಬೆಸಕೆಯ್ವ' ಎಂದು ಬರೆದ ಮಾತಿಗೆ ಕಲುಮಠದ ಹುಲುಮಠದ ಶಿವ

ಭಕ್ತರೇ ಅನ್ವಯವಾಗುತ್ತಾರೆ ಎಂದು ಹಿಂದಿನ ಲೇಖದಲ್ಲಿಯೇ ವಿಸ್ತಾರವಾಗಿ ಹೇಳಿದ್ದೇನೆ. ಮತ್ತು ಈ ಲೇಖಕರು ಮೊದಲನೆಯ ಸ್ಥಲದ ಮೂರನೇ ಪಂಕ್ತಿಯಲ್ಲಿಯೂ ಹೇಳಿದೆ ಎಂದು ಬರೆದಿರುವರು. ಆ ಪಂಕ್ತಿಯಲ್ಲಿ ಆ ವಿಚಾರವೇ ಇಲ್ಲ. ಇನ್ನು ಅದೇ ಸ್ಥಲದ ೧೨೮ನೇ ಪಂಕ್ತಿಯಲ್ಲಿ 'ಶಿವಭಕ್ತಗೆ ಶರಣೆಂದು' ಎಂಬ ಪದವಿದೆಯಾದರೂ ಅದು ಕಲ್ಯಾಣದ ಶಿವಶರಣರನ್ನು ಬೋಧಿಸುವದಿಲ್ಲ. ಮುಂದೆ ೭ನೇ ಸ್ಥಲದಲ್ಲಿ 'ಶಿವಭಕ್ತರ್ಗೆ ಹೊನ್ನಿತ್ತು ನೋಡುವೆನೆಂದು' (ಪಂ-೧೩೩) ಎಂಬುದಕ್ಕೆ ಯಾವ ಶಿವಭಕ್ತರಥವಾಗುವದೋ ಅವರೇ ಇಲ್ಲಿಯೂ ಅನ್ವಯಿಸುವರು. ಅಕ್ಕನ ಅನುಭವಮಂಟಪದ ಸಂವಾದವು ಸುಂದರವಿದ್ದುದರಿಂದ ಬಿಟ್ಟಿದ್ದರಿ ಕಲ್ಯಾಣಕ್ಕೆ ಹೋದುದನ್ನಾದರೂ ಹೇಳಬಾರದೇ? ಇದಿರಲಿ, ಪ್ರಭುದೇವರ ರಗಳೆಯಲ್ಲಿ ಅನುಭವ ಮಂಟಪದ ವಿಚಾರವೇಕಿಲ್ಲ? ಅನುಭವ ಮಂಟಪದ ಅಧ್ಯಕ್ಷನು ಅಲ್ಲಮನು. ಅವರಿಂದ ಆತನ ಚರಿತ್ರೆಗೆ ಹೆಚ್ಚು ಕಳೆಯೇರಿದೆ. ಅಂತಹ ವಿಚಾರವನ್ನು ವರ್ಣಿಸಬೇಕಾದುದು ಅಗತ್ಯವಲ್ಲವೇ? ಕೇವಲ ಬಸವನಿಗೆ ಛಿಟ್ಟಿಯಾಗಿ ಮಾತಾಡಿ, ಸೊನ್ನಲಾಪುರಕ್ಕೆ ಆಮೇಲೆ ಬಂದು ಸಿದ್ಧರಾಮನ ಕಂಡು ಅಲ್ಲಿಂದ ಹಾಗೆಯೇ ಕೈಲಾಸಕ್ಕೆ ಹೋದನೆಂದು ಹೇಳಿದೆ. ಇಲ್ಲಿ ಶೂನ್ಯ ಸಿಂಹಾಸನಾರೋಹಣದ ವಿಚಾರವನ್ನು ಹೇಳುವದವಶ್ಯವಿತ್ತು. ಅದನ್ನು ಚಾಮರಸನು ಒಂದು ಪ್ರಕರಣವನ್ನೇ ಮಾಡಿ ಹೇಳಿದ್ದಾನೆ. ಹರಿಹರನು ಹೇಳದಿರುವದನ್ನು ಅತನು ಹೇಳಿದುದು ಸುಳ್ಳೆಂದು ಹೇಳಬಹುದೇ? ರೇವಣಸಿದ್ಧೇಶ್ವರ-ಬಸವೇಶ್ವರ ರಗಳೆಗಳಲ್ಲಿ ಅವರವರ ಪವಾಡಗಳನ್ನು ಪ್ರಕರ್ಣವಾಡಿ ವರ್ಣಿಸಿದ ಹರಿಹರನು ಪ್ರಭುವಿನ ನಡೆದು ಹೋದ ಸೊಗ್ಗಯ್ಯ-ಮುಕ್ತಾಯಕ್ಕ-ಗೋರಕ್ಷ ಮೊದಲಾದವರ ಸಂವಾದವನ್ನೂ ಶೂನ್ಯಸಿಂಹಾಸನಾರೋಹಣವನ್ನೂ ವರ್ಣಿಸುವದು ಬಹು ಭಾರವಾಗಿ ಬಿಟ್ಟೀರಬಹುದೇ? ಹಾಗು ಈ ರಗಳೆಯಲ್ಲಿ ಅಕ್ಕನಿಗೂ ಅಲ್ಲಮನಿಗೂ ಇರುವ ಯಾವ ಸಂಬಂಧವೂ ತೋರುವದಿಲ್ಲ. ಅಕ್ಕನ ರಗಳೆಯಲ್ಲಾಯೂ ಹೀಗೆಯೆ. ಇಪ್ಪತ್ತೆಳು ಮಂದಿ ಶರಣರ ಕಾಲದಿಂದೀಚಿಗಿದ್ದ ಹರಿಹರನು ಶರಣರ ಸಂಪೂರ್ಣ ಯಥಾರ್ಥ ಚರಿತ್ರೆಗಳನ್ನು ಸಂಪಾದಿಸಲು ಸಮರ್ಥನಾಗದೆ ಅಲ್ಪಸ್ವಲ್ಪ ಕಂಡದ್ದನ್ನೆ ಕಾವ್ಯದಲ್ಲಿ ಬೆಳಸಿ ಬರೆದಿರುವನೆಂದು ಸ್ಪಷ್ಟವಾಗುವದಿಲ್ಲವೇ?

ಅಕ್ಕನು ದಿಗಂಬರೆಯಾದದ್ದು ಸತ್ಯ.

ಬೇರೆ ಕೆಲವರು ಅಕ್ಕನು ದಿಗಂಬರೆಯಾಗಿದ್ದಿಲ್ಲವೆಂದು ವಾದಿಸುವರು. ಇನ್ನು ಕೆಲವರು ದಿಗಂಬರೆಯಾಗಿದ್ದಳೆಂದು ಹೇಳಲು ಸಬಲವಾದ ಪ್ರಮಾಣವಿಲ್ಲ ಎಂದು ಮುಂತಾಗಿ ಬರೆದಿರುವರು. ಆದರೆ ಅಕ್ಕಗಳೇ ತಪ್ಪು ಯೋಗಾಂಗ ತ್ರಿವಿಧಿಯಲ್ಲಿ—

* ಉಟ್ಟ ಸೀರೆಯ ಸೆಳೆದು । ಕೊಟ್ಟ ತೊಡಿಗೆಯ ಹರಿದು
ಬಿಟ್ಟಿನೋ ನಾನು ಬಿಡು ಮುಡಿಯ ಎಲೆ ದೇವ! ।
ಕೊಟ್ಟಿನೋ ಎನ್ನ ತನುಮನವ ॥೪॥

ಎಂದು ಸ್ಪಷ್ಟವಾಗಿ ಹೇಳಿಕೊಂಡಿರುವರು. ಆದ್ದರಿಂದ ಅಕ್ಕಗಳು ದಿಗಂಬರೆಯಾದದ್ದೇ ಸತ್ಯ.

(ಕ್ರಮಶಃ)

---

*ಈ ಯೋಗಾಂಗತ್ರಿವಿಧಿಯನ್ನು ಶ್ರೀ ಬಿ ಶಿವಮೂರ್ತಿಶಾಸ್ತ್ರಿಗಳು ಹೊರಡಿಸಿದ "ಶರಣಸಾಹಿತ್ಯ" ಮಾಸಿಕದ ಮಾರ್ಗಶಿರಮಾಸ ಸಂಚಿಕೆಯಲ್ಲಿ ಪ್ರಕಟಿಸಿದ್ದೇನೆ.

ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳು ರಚಿಸಿದ ಹಾಡು ಗಬ್ಬಗಳು.

(ಹಿಂದಿನಿಂದ ಮುಂದೆ ಸಾಗಿದ್ದು.)

೨

ಅನಾದಿ ವೃಥಾ ಮೂಢಮತಿ ।
ಜನನ ಮರಣದೊಳು ಕೂಡಿ ।
ಘನ ಸುಖ ಕೆಡಿಪುದು ನೋಡೋ ॥

೩

ಪರಾತ್ಮಕ ಸಂಸಾರವಹ ।
ಪರಶಿವಯೋಗವನೈದಿ ।
ಸುರಸ ಸುಖವ ನೀ ಪೊಂದೊ ॥

ಪದ್ಯ ೯

(ರಾಗಃ- ಜುಂಜುಟಿ)

ಮಾರಾರಿಯೆ ಪಾಲಿಸು ಕಾಲಾರಿ ಬೇಗ ।
ಪಾರುಗೊಳಿಪದೆನ್ನ ಮಾಯಾಸಂಗ ॥ಪ॥

೧

ಮನಸಿಜನಾಗಿತಾ-। ಘನ ಬಾಧೆಗೊಳಿಪನು ।
ವನಿತೆಯರೊಲವಿತ್ತು । ವಿನಯದಿ ಸಾಧಿಪ ॥
ಸನುಮತದಿಂದಿವ ನಾಶನಾಸಿಸಿ ॥

೨

ಮರಣದ ಭೀತಿಯಿಂ । ಕೊರಗುತ್ತಿರುವೆನು ।
ಕರುಣವಿಲ್ಲದ ಯಮ-। ದೂತರ ಕಾಟದಿ ।
ದುರುಳರ ಸಾಹಸ ಪರಿಹರಿಸಭವ ॥

೩

ಆಶಾಪಾಶದಿ। ಘಾಸಿಯಾಗುವೆ ನಾನು
ನೋಸದ ಮಾಯೆಯ। ಬಲೆಯೊಳು ವಾಸಿಸೆ।
ಭಾಸುರಾನಂದ ಶಿವಯೋಗದೊಳಿರಿಸಿ ॥

ಬಸವೇಶ್ವರ ಸ್ತೋತ್ರ

ಪದ್ಯ ೧೦

(ರಾಗಃ- ದರ್ಬಾರಿ ಕಾನಡಾ)

ಶ್ರೀ ಪರಾತ್ಪರ ಬಸವೇಶ್ವರನನು।
ಸಾರುತ ಸೇರುತ ಭಜಿಸೊ ನೀ ಮಾನವ ॥ಪ॥

೧

ಭಕ್ತಿಯ ಮಾರ್ಗದಿ ನಡೆಯುವ ಜನರಿಗೆ।
ಶಕ್ತಿಯನರಿತು ಫಲಗಳ ಕೊಡುವ।
ಮುಕ್ತಿಯ ಪಥವನ್ನೀಯುವ ಪರಮ ॥

೨

ವೀರಶೈವ ಮತ ಜೀರ್ಣೋದ್ಧಾರಕ।
ಸಾರ ಸುಬೋಧಕ ಪರತರ ಶೋಭಕ।
ಪೂರಿತ ಕರುಣದಿ ದೀನ ಸುರಕ್ಷಕ ॥

೩

ಶಿವಯೋಗದಲ್ಲಿ ಸುವಿರಾಗದಲಿ।
ಭವಿಗಳ ನೀಕ್ಷಿಸಿ ಭಕ್ತರ ಮಾಡಿದ।
ಸುವಿವೇಕದ ಗುರುವಿಗೆ ಗುರುವೆನಿಸಿದ ॥

ಪದ್ಯ ೧೧

(ರಾಗಃ- ದಕ್ಷಿಣಾದಿ ಕಾನಡಾ)

ಗುರು ಬಸವೇಶನ ಹರುಷದಿ ಸ್ಮರಿಸೋ।
ಸ್ಥಿರ ಸುಖ ಪೊಂದುವೆ ನಿರುತದಿ ಭಜಿಸೋ ॥ಪ॥

೧

ಪರಶಿವನಾಜ್ಞೆಯಿಂದಿಳದೀ ಜಗವ।
ಪರಿಪಾಲಿಸಿ ಬೋಧಿಸಿ ಸದ್ಗುಣವ ॥

೨

ಶೈವ ಮತವ ಬಿಟ್ಟು ವೀರಶೈವದ।
ದಿವ್ಯ ಮಾರ್ಗವ ಹೊಂದಿ ನೆರೆ ಶೋಭಿಸಿವ ॥

೩

ಹೀನದೆಶೆಯೊಳಿಹ ವೀರಶೈವರನು।
ಕಾಣುತೆ ಕರುಣದಿ ಪೊರೆದಿಹ ಮಹಿಮನ ॥

೪

ಸಗಪಾಗವು ತತ್ವ ಸಾರವನರಪುವ।
ಬಗೆಯನು ಬೋಧಿಸಿ ಜಗದೊಳು ಮೆರೆವ ॥

೫

ಸಾಧಕ ಸಿದ್ಧರ ಮಾರ್ಗದ್ವಯವನು।
ಬೋಧಿಸಿ ತೋರಿಸಿ ಜಗದೊಳೊಪ್ಪಿಹನು ॥

೬

ಪರುಷ ಪಂಚಕದಿಂ ದುರಿತವನೊರಿಸುತ।
ಪರಶಿವ ಲಿಂಗವನವರೊಳು ಬೆರೆಸಿಹ ॥

ಪದ್ಯ ೧೨

(ರಾಗಃ- ಭೈರವಿ)

ವೀರಶೈವಾಚಾರ ಪರಾ-।
ಘೋರ ಬಸವ ಧೀರಾ ॥ಪ॥

೧

ಆದಿ, ನಾದ, ಬಿಂದು ಕಲಾ ; ಹೃದಯಾಲಯ ನಾಕಮುಲ॥
ಸೋದ ಘನಾನಂದನನ। ಬೋಧಾಮೃತ ಸವನ ॥

೨

ಕಾಮ ಕಲಿಯ ವೈರಿ ಸದಾ । ಮುಮುತಾ ಮುತಿವಾರಿಸಿದ ॥
ಸೋಮಧರಾಪಾರಸುಖ । ಪ್ರೇಮಾಬ್ಧಿ ಶಿವಸಖ ॥

೩

ತ್ರಾಹಿ ಶೈವಯೋಗ ನಿಪ್ರ । ವಹಿಸಿ ಪರಮ ಶಾಂತಿಮುದ್ರ ॥
ಸಾಹಸದಿಂ ಕೂಡಿಸುತ । ಸೋಹಂ ಭಾವಯುತ ॥

ರೇಣುಕ ಸ್ತೋತ್ರ

ಪದ್ಯ ೧೩

(ರಾಗಃ- ಭೀಮಪಲಾಸ)

ಸುಶಾಂತ ಗುರುವರೇಣ್ಯ ।
ರೇಣುಕಾರ್ಯ ಭೋ ॥ಪ॥

೧

ವರ ಶೈವ ಮತಸಾರ । ಪರವಾವತಾರ ।
ಗುರುದೇವ ನೀನೆ ಪರಿಪಾಲಿಸೈ-
ಮುತಾಚಾರ್ಯ ॥

೨

ಕಪಟವಕಟ ವೋಸ । ಚಪಲ ಕುದೋಷ ।
ವಿಪರೀತ ವಾಡಿ । ಸುಪಥವೀಯೋ-
ಮಹಾಚಾರ್ಯ ॥

೩

ಶಿವಯೋಗಿ ಕುಲಪಾಲ । ಭವನಾಶಮೂಲ ।
ಜವದಿಂದ ನೋಡು । ತವೆ ವೋದದಿ.
ಶಿವಾಚಾರ್ಯ ॥

ತೋಂಟದಾರ್ಯರ ಸ್ತೋತ್ರ

ಪದ್ಯ ೧೪

(ರಾಗಃ- ದೇಸ್)

ಶ್ರೀ ಜಗದ್ಗುರು ವರ ತೋಂಟದಾರ್ಯ ।
ಸುಜನ ಮನವಸಾಘನಸಾರ ಶೌರ್ಯ ॥ಪ॥

೧

ಮಾಯಾ ಮೋಹ ಹೇಯಗೊಳಿಸಿ ಬಿಡದು ।
ಕಾಯಜ ಮದಹರ ಜಯವೀಯು ಪೊರೆದು ॥

೨

ಜನನ ದೂರನೆನಿಸಿ ನೋಡಿ ದಯದಿ ।
ಗಣ ಸಮೂಹದಿ ಗಣಿಸೊ ನೀ ಮುದದಿ ॥

೩

ಸಿದ್ಧಲಿಂಗ ಶುದ್ಧ ಕ್ಷೇತ್ರಾಧೀಶ ।
ತಿದ್ದುತೆ ಮನವನು ಬದ್ಧನೆನಿಸದಿ ತೋಷ ॥

ಪದ್ಯ ೧೫

(ರಾಗಃ- ಭೂಪ)

ಪರಶಿವಯೋಗದ ಸಾರ ।
ಕರುಣ ವಿಹಾರ । ತೋಂಟದಾರ್ಯ ಹೋ ॥ಪ॥

೧

ಮನವು ನೇತ್ರವು ಸುಷುಮ್ನದಿ ಕೂಡಿ ।
ತನುವನು ಮೀರಿ ಶಿವಸುಭಾನುತೋಷ ।
ಅನಂದಸಕ್ತ ಗುಹದಲಿ ನೀ ಅನನ್ಯ ವಿಲಾಸಹೋ ॥

೨

ಕರಣಲೋಕ ಮುನ್ನ ಪರಿದು ಬಂದು ನಿನ್ನ ।
ಮರಿಯೊಳು ಸಾರೆ ವರ ವಿಜ್ಞಾನವನ್ನು ।
ಪರಂಪರಾನಂದಾಬ್ಧಿಯಾ ಕರುಣಿಸಿ ಪರಿಪಾಲಿಸೆನ್ನಹೋ ॥

೩

ಸಿದ್ಧಲಿಂಗ ಭೂಷ ಬದ್ಧಜೀವ ಪಾಶ।
ವಿದ್ಯುರೆ ಸಾರೆ ಸಿದ್ಧಶಿವಯೋಗ ವಾಸ।
ಸಿದ್ಧಾಂತ ಶೇಖರಾವೇಶ ಮುದದೊಳು ನೀ ಪರಿಪಾಲಿಸೇಶಹೋ॥

ಪದ್ಯ ೧೬

(ರಾಗಃ- ಭೈರವಿ)

ಶಿವಮೂರ್ತಿಯೆ। ತವೆ ಪೂಜಿಸುವೆ ॥ಪ॥

೧

ತರು ವಿಸ್ತಾರವನಿರವೈಕ್ಯಗೊಂಡ। ನೆರೆ ಬೀಜದ ಪರಿ।
ಶರೀರಾದಿ ಜಗವ ವೀರಿ ತೋರ್ಪ।

೨

ತವೆ ಇಷ್ಟಾರ್ಥವ ಭುವಿಯೊಳು ಕೊಡುವ। ಭವದೋಷದರತಿ।
ಜವದೊಳ್ ನಾಶಿಪ ದೇವದೇವಾ ॥

೩

ಲಿಂಗ ರೂಪದ ಜಂಗಮಾರ್ಯಗೆ। ಮಂಗಲ ಗುರುವರ।
ಕಂಗಳಾಲಯ ಶಿವಯೋಗ ದೇವಾ ॥

ಪದ್ಯ ೧೭

(ರಾಗಃ- ಕೇದಾರಗೌಳ)

ದೇವ! ಕಾಯೋ ನೀ ಮಾಯಾತೀತನೆ ॥ಪ॥

೧

ವೀರಶೈವವ ಸಾರಿ ತೋರುವ।
ಘೂರಿ ಭಕ್ತಿಯುಕ್ತರ ಪಾರುಗೊಳಿಸುತೆ ॥

೨

ಶಿಷ್ಟ ಮತವಿದು ನಷ್ಟಗೊಳ್ಳದು।
ತುಷ್ಟಿಗೊಳಿಸುವೆನೆಂದ–ಭೀಷ್ಟ ವೀಯುತೆ ॥

೩

ಮತವೆ ನಿನ್ನದು ಪತಿಯೆ ಕಾಯ್ವುದು।
ಗತಿಯು ಕಾಣದಿರ್ಪರ ಜತಿಯುಗೂಡುತೆ ॥

೪

ಇಂತು ಸಭೆಯೊಳು ಕುಂತು ಜನಗಳು।
ಪಂಥಗಾರರಾಗಿರುವಂತೆ ಮಾಡುತೆ ॥

೫

ಬೇಡಿಕೊಂಬೆನು ಮಾಡು ಕೃಪೆಯನು।
ಮೂಢರಾದ ಜನಗಳ ನೋಡಿ ಮರೆಯುದೆ ॥

೬

ಭೇದವೆಂಬುದು ಭೇದವೀವುದು।
ಜ್ಞೋಧಿಸೈಕ್ಯ ಮತದ ಹಾದಿ ತೋರಿಸಿ ॥

೭

ಮತವು ನಿನ್ನಯ ಹಿತದ ಸೀಮೆಯ।
ಗತಿಯೊಳೈಕ್ಯಗೊಳ್ಳುವ ಮತಿಯ ಕೂಡುತೆ ॥

೮

ಸ್ವಂತಪರರಿಗೆ ಸಂತ ಜನರಿಗೆ।
ಅಂತರ್ಯಾಮಿಯಾಗಿ ಹಂತೆ ತೊಲಗಿಸಿ ॥

೯

ಸಿದ್ಧಲಿಂಗನೆ ಪೊದ್ದಿದವರನೆ।
ಶುದ್ಧರಾಗಿರುವಂತೆ ತಿದ್ದಿ ತೋರುತೆ ॥

ಮಂಗಲಗಳು ೧೮

(ರಾಗ-ಮಾಂಡ)

ಶಿವಮಂಗಲವನು ಕೊಡು ಬೇಗ।
ಭವದುಃಖದಿ ಬಳಲುವೆ ವೀಗ ॥ಪ॥

೧

ಮನುಜ ಜನ್ಮವನು ತೊಟ್ಟಿಹವು।
ಮನದಿ ಹೀನಗುಣ ತೊಡರಿಹವು ॥

ಘನಮಹಿಮರ ಪಥ ಬಿಟ್ಟಿಹವು।
ಮುನಿವಂದನೆ ನವಿಸುತ್ತಿಹವು ॥

೨

ಹುಟ್ಟಿ ಹುಟ್ಟಿ ಸಾಯ್ವುದು ನೋಡಿ।
ಕಷ್ಟತರದಿ ಬಹು ಚರಿಸಾಡಿ ॥
ದುಷ್ಟರೆನಿಸಿಕೊಂಬುದು ನೋಡಿ।
ಶಿಷ್ಟನೆ ನೀನತಿ ದಯಗೂಡಿ ॥

೩

ಇವ್ವ ಗುಣಗಳೆಲ್ಲವ ಮರೆಸಿ।
ಶುದ್ಧಗುಣದಿ ಮನವನ್ನಿರಿಸಿ ॥
ಸಿದ್ಧರಾಮಗುರು ದಯ ಕರಿಸಿ।
ತಿದ್ದುವದದಿ ನೀ ಮುದವಿರಿಸಿ ॥

ಮಂಗಲ ೧೯

(ರಾಗ-ಕಾಂಬೋದಿ)

ಮಂಗಳಾರತಿ ದೇವಗೆ ಶಿವಯೋಗಿಗೆ। ಕಂಗಳಾಲಯಸಂಗಗೆ।
ಜಂಗಮಲಿಂಗಭೇದದ ಸ್ವಯುಚರಪರ। ದಿಂಗಿತಪರುಪಿದಂತಾಚರಿಸಿದ
ಮಹಿಮಗೆ ॥ಪ॥

೧

ಒಂದೆ ಮತದಿ ವಾಸಿಸಿ ಸದ್ಭಕ್ತಿಯಿಂ।
ಬಂದಬಂದವರನು ಬೋಧಿಸಿ ॥
ನಿಂದು ಏಕಾಂತದಾನಂದದ ಯೋಗದ।
ಜಂದವನರಿದನುಷ್ಠಾನಿಪ ಶಿವ ಸ್ವಯುಗೆ ॥

೨

ಜರಿಸಿ ಭಕ್ತರ ಭಕ್ತಿಯ ಕೈಕೊಳ್ಳುತ್ತ।
ಭರದಿ ಪರತರ ಬೋಧೆಯ- ॥

(ಮುಂದುವರಿವುದು)

'ಶರಣಸಾಹಿತ್ಯ' ಮಾಸಪತ್ರಿಕೆ.

(ಸಂಪಾದಕರು)

ಬೆಂಗಳೂರ ನಗರದಲ್ಲಿ ಹೋದ ತಿಂಗಳಿನಿಂದ "ಶರಣಸಾಹಿತ್ಯ" ಪತ್ರಿಕೆಯು ಹೊರಡುತ್ತಲಿದ್ದು ಇದರ ಪ್ರಥಮ ಸಂಚಿಕೆಯು ನಮ್ಮ ಕೈಸೇರಿದೆ. ಇದರ ಸಂಪಾದಕರು ಕರ್ನಾಟಕದಲ್ಲೆಲ್ಲ ಬಹು ಪ್ರಸಿದ್ಧಿ ಹೊಂದಿದ ವೇ. ಮೂ. ಶಿವಮೂರ್ತಿ ಶಾಸ್ತ್ರಿಗಳಿದ್ದು ಅವರು ಈ ಪ್ರಯತ್ನವನ್ನು ಕೈಕೊಂಡದ್ದಕ್ಕೋಸ್ಕರ ನಾವು ಅವರನ್ನು ಅತ್ಯಂತವಾಗಿ ಅಭಿನಂದಿಸುತ್ತೇವೆ. ಶಾಸ್ತ್ರಿಗಳವರು ಕರ್ನಾಟಕತ್ವದ ಅರಿವನ್ನು ಕರ್ನಾಟಕದ ಮೂಲೆ ಮೂಲೆಗೂ ತಮ್ಮ ಕೀರ್ತನಗಳ ಮೂಲಕ ಹರಡಿರುತ್ತಾರೆ. ಅವರು ಮಾಡಿದ ಈ ಸೇವೆಯು ಮಹತ್ತರವಾದದ್ದು. ಅವರು ಉತ್ತಮ ವಾಗ್ಮಿಗಳಿದ್ದಂತೆಯೇ ಮೇಲ್ತರದ ಲೇಖಕರೂ ಸಂಶೋಧಕರೂ ಇರುವರು. ಇದು ಶಿವಾನುಭವ ಪತ್ರಿಕೆಯಲ್ಲಿ ಅವರು ಆಗಿಂದಾಗ್ಗೆ ಪ್ರಕಟಪಡಿಸುತ್ತ ಬಂದ ಲೇಖಗಳ ಮೇಲಿಂದ ಎಲ್ಲರಿಗೂ ಚನ್ನಾಗಿ ತಿಳಿದುಬರುವಂತೆ ಇದೆ.

ವೀರಶೈವ ವಾಙ್ಮಯವು ಅಪಾರವಾದದ್ದು. ಅಚ್ಚಾಗದೆ ಇವ್ವ ಹಸ್ತಲಿಖಿತ ಗ್ರಂಥಗಳು ಇನ್ನೂ ಅಸಂಖ್ಯಾತವಾಗಿರುತ್ತವೆ. ಹಾಗೆಯೇ ವೀರಶೈವರ ರಾಜಕೀಯ ಮತ್ತು ವಾಙ್ಮಯಾತ್ಮಿಕ ಇತಿಹಾಸವೂ ಪ್ರಕಾಶಕ್ಕೆ ಬಂದಿಲ್ಲ. ಈ ಕಾರ್ಯವನ್ನು ಮಾಡತಕ್ಕ ಯಾವ ಪತ್ರಿಕೆಯೂ ದಕ್ಷಿಣ ಕರ್ನಾಟಕದಲ್ಲಿ ಬಹು ದಿವಸಗಳಿಂದಲೂ ಇದ್ದಿರಲಿಲ್ಲ: ಈ ಕಾರ್ಯವನ್ನು ಶರಣಸಾಹಿತ್ಯ ಪತ್ರಿಕೆಯು ಈಗ ಕೈಕೊಂಡಿದ್ದು, ಇದರ ಮೂಲಕ ಇದು ಅವ್ಯಾಹತವಾಗಿ ಮುಂದೆ ಸಾಗುವದೆಂದು ನಾವು ಭರವಸೆ ಕಾಳಿದ್ದೇವೆ.

ಶರಣಸಾಹಿತ್ಯ ಪತ್ರಿಕೆಯ ಈ ಮೊದಲನೆಯ ಸಂಚಿಕೆಯಲ್ಲಿ ಅನೇಕ ಮಹತ್ವದ ವಿಷಯಗಳು ಅಡಕವಾಗಿವೆ. ನಮ್ಮ ಈ ಶಿವಾನುಭವ ಪತ್ರಿಕೆಯು ಈ ವರೆಗೆ ಮಾಡುತ್ತ ಬಂದ ವಾಙ್ಮಯ ಸೇವೆಯನ್ನು ಕುರಿತು ಒಂದು ಬಹು ವಿಸ್ತಾರವಾದ ಲೇಖವು ಪತ್ರಿಕೆಯಲ್ಲಿ ಬಂದಿದೆ. ಇದಕ್ಕೋಸ್ಕರ ನಾವು ಅವರಿಗೆ ಬಹಳ ಋಣಿಯಾಗಿದ್ದೇವೆ. ಪತ್ರಿಕೆಯಲ್ಲಿ

ನಿಜಗುಣಶಿವಯೋಗಿಯ ವಿಷಯವಾಗಿ ವಿಮರ್ಶಾತ್ಮಕ ಲೇಖವು, ಕಿತ್ತೂರ ಚನ್ನಮ್ಮನ ಚರಿತ್ರೆ, ಕೈ. ವಾ. ಇರಸಂಗಪ್ಪನವರ ಜೀವನ ಚರಿತ್ರೆ, ಅಲ್ಲದೆ ಯೋಗಾಂಗ ತ್ರಿವಿಧಿ ಎಂಬ ಪುರಾತನ ಗ್ರಂಥ, ಇವೇ ಮೊದ ಲಾದ ಮಹತ್ವದ ವಿಷಯಗಳು ಬಂದಿರುತ್ತವೆ. ಈ ವಿಷಯಗಳ ಮೇಲಿಂದ ಪತ್ರಿಕೆಯು ಎಷ್ಟು ಉಚ್ಚ ಧ್ಯೇಯವುಳ್ಳದೆಂಬದು ವಾಚಕರಿಗೆ ವಿದಿತ ವಾಗದೇ ಇರದು. ಇದಲ್ಲದೆ ಇದರಲ್ಲಿ ಅನೇಕ ಸುಂದರವಾದ ಚಿತ್ರಗಳೂ ಕೊಡಲ್ಪಟ್ಟಿವೆ. ಈ ಪತ್ರಿಕೆಗೋಸ್ಕರ ವಿದ್ವಾಂಸರದೊಂದು ಉಪಸಂಪಾ ದಕ ಮಂಡಳಿಯೂ ಏರ್ಪಡಿಸಲ್ಪಟ್ಟಿದೆ. ಈ ಬಗೆಯಾಗಿ ಏರ್ಪಡಿಸಲ್ಪಟ್ಟ ಈ ಪತ್ರಿಕೆಯ ಮೂಲಕ ಕರ್ನಾಟಕಕ್ಕೆ ಘನತರ ವಾಙ್ಮಯ ಸೇವೆಯು ಜರಗುವದೆಂದು ನಾವು ನಿರೀಕ್ಷಿಸಿದ್ದೇವೆ. ಈ ಪತ್ರಿಕೆಯನ್ನು ಕನ್ನಡಿಗರೆ ಲ್ಲರೂ ಪೋಷಿಸುವದು ಬಹು ಅವಶ್ಯವಾಗಿದೆ.

ಶಿವಾನುಭವ ಪತ್ರಿಕೆಗೋಸ್ಕರ ಕಾಣಿಕೆ.

ಶಿವಾನುಭವ ಪತ್ರಿಕೆಗೋಸ್ಕರ ಬಹುಜನರು ಆದರಭಾವವನ್ನು ತಾಳಿದವರಾಗಿರುವರು. ಅವರಲ್ಲಿ ಬೆಳಗಾವ ಜಿಲ್ಲಾ ಒಂಟಮುರಿ ಗ್ರಾಮ ವಲ್ಲಿರುವ ಶ್ರೀ. ಬಸವಪ್ಪ ಚನ್ನಪ್ಪ ಪಟ್ಟೇದ ಇವರು ಇರುವರು. ಅವರು ತಮ್ಮ ಜೀ॥ ರಾದ ಶಿವಬಸಪ್ಪ ಬಸವಪ್ಪ ಮತ್ತು ಬಸಲಿಂಗಪ್ಪ ಮಲ್ಲಿಕಾ ರ್ಜುನಪ್ಪ ಇವರ ಲಗ್ನಗಳ ಕಾಲದಲ್ಲಿ ೫ ರೂ. ಶಿವಾನುಭವ ಪತ್ರಿಕೆಗೆ ಕಾಣಿಕೆಯಾಗಿ ಕಳಿಸಿದ್ದು ಅವನ್ನು ನಾವು ಅತ್ಯಾದರ ಪೂರ್ವಕವಾಗಿ ಸ್ವೀಕರಿಸುತ್ತೇವೆ.

ಶಿವಾನುಭವ.

ಪುಟ ೧೨] ಮಾರ್ಚ ೧೯೩೮ [ಸಂಚಿಕೆ ೬

ಮಹಾದೇವಿಯಕ್ಕಗಳ ಮದುವೆ.

ಲೇ:— ಶ್ರೀ ಸ. ಹಾ. ಶಿವಮೂರ್ತಿಗಳು, ಶಿವಯೋಗಮಂದಿರ.

[ಲೇಖಾಂಕ ೩.]

ಈ ಲೇಖಕರ ಕೆಲವು ಪ್ರಶ್ನೆಗಳಿಗೆ ಪ್ರಭುಲಿಂಗ ಲೀಲೆಯಲ್ಲಿರುವ ಅಕ್ಕನ ಕಥಾಭಾಗವನ್ನೂ ಮಹಾದೇವಿಯಕ್ಕನ ರಗಳೆಯನ್ನೂ ಇಲ್ಲಿಂದ ಕೊಂಚ ಬಿತ್ತರಿಸುತ್ತ ಉತ್ತರಿಸುತ್ತೇನೆ.

'ಪ್ರಭುಲಿಂಗಲೀಲೆಯ' ಕಥಾಭಾಗ.

ಕೌಶಿಕರಾಜನುವೈಹಾಳಿಯಿಂದ ಬರುವಾಗ ಆ ಸಂಭ್ರಮವನ್ನು ನೋಡಲು ನಿಂತಿದ್ದ ಅಕ್ಕನನ್ನು ನೋಡಿದೊಡನೆ ನಿಮಿಷದಲ್ಲಿಯೇ ಕಾಮಾತುರದಿಂದ ಕಂಗೆಟ್ಟು ಕಳವಳಿಸುತ್ತ ಅರಮನೆಗೆ ಹೋಗಿ ಅಕ್ಕ ನನ್ನು ವರಿಸುವ ಲಾಲಸೆಯಿಂದ ಹೆಗ್ಗಡತಿ [ವಿಲಾಸಿನಿ] ಯರನ್ನಿಟ್ಟ ಮಹಾದೇವಿಯರ ತಂದೆ ತಾಯಿಗಳನ್ನು ಕೇಳಿಸುತ್ತಾನೆ. ಆಗ ಅಕ್ಕನ ಮಾತಾಪಿತರು 'ನೃಪ ಕುಲದವನೆ ಕೊಡೆವು' ಎನ್ನಲು, ಅದಕ್ಕಾ ಹೆಗ್ಗಡ ತಿಯರು—'ಅರಸನಿದಿರೇ ನೀವು? ಸುಮ್ಮನೆ ಸರಸದಿಂದಲಿ ಕೊಡುವು ದೊಳಿತು. ವಿರಸವಾದೊಡೆ ನೀವು ಮಾಡುವುದೇನು ಭೂಪತಿಯ? ನಮಗಳಿಗೆ ಸ್ವಸ್ತಿಯಾಗುವದು, ನಿಮಗಾಸ್ತಿಯಾಗುವದು.' ಎಂದು ಪ್ರತ್ಯು ತ್ತರಿಸಲು ಮತ್ತಾ ತಾಯಿ ತಂದೆಗಳು—'ತಾಯುಮಾರಿ ತೊತ್ತತೆಗೆದು ಕೊಂಬರೆ? ಇವ ಸುಡು. ಕಾಮುದಾಸೆಗೆ ಕಳವಳಿಸಿ ವಿಷಮ ಕುಲ

ದಲಿ ಕೊಳುಕೊಡೆಯ ಮಾಡಿದರೆ, ನಾಯಕದ ನರಕಗಳು ತಪ್ಪವು
ಸಾಕು ಸುಮ್ಮನಿರಿ; ರಾಯ ಮಾಡುವುದೇನು? ಅಥವಾ ಆಕೆ [ತಿಕ್ಕನ]
ಒಪ್ಪಿಕೊಂಡರೆ ನಾವಾಗ ಕೊಡುವೆವು.' ಎಂದು ಉತ್ತರಿಸಲು ಆಗ
ಅಕ್ಕನು ಹೆಗ್ಗಡತಿಯರನ್ನು ಕುರಿತು—'ನಾನೆ ಬೇಕಾಗಿದ್ದರೆ ಕೌಶಿಕರಾ
ಜನೇ ಇಲ್ಲಿ ಬಂದು. ನಾನೇನ ಹೇಳುವೆನೋ ಅದನ್ನು ಮಾಡುವ
ನೆಂದು ನನ್ನ ಮನೋನುಂಗಾಗದಂತೆ ಶಪಥ ಮಾಡಲಿ.' ಎಂದಳು. ಆಗ
ವಿಲಾಸಿನಿಯರು ಇದನ್ನು ಅರಸನಿಗೆ ತಿಳಿಸಲು ಅದರಂತೆ ಕೌಶಿಕರಾ
ಜನು ಅಕ್ಕನ ಮನೆಗೇ ಬಂದು—'ಲಲನೆ ಕೇಳ್ಹಾ! ಮೊದಲಲ್ಲಿ ನಿನ್ನ
ಬಯಕೆಯ ಸಲಿಸುವೆನು. ಬಳಿಕ ನಿನ್ನನೊಲಿಸಿಕೊಂಬೆನು.' ಎನಲು,
ಅಕ್ಕನು—'ನನ್ನ ಹೇಳಿಕೆಯ ಕೇಳದಿದ್ದರೆ ನಿನ್ನನ್ನು ಬಿಟ್ಟುಹೋಗುವೆ.
ಎಂದುಸುರುವಳು. ಕೌಶಿಕರಾಜನು—'ಏನು ಮಾಡಲಿಬೇಕು ಹೇಳಿಕೆ
ಮಾನಿನಿಯೆ!' ಎನಲು,—'ನೀನು ಸಲೆ ಶಿವಭಕ್ತನಾದರೆ ಕೂಡುವೆನು
ನಿನ್ನ. ನೀನು ಭವಿಯಾಗಿದ್ದೊಡೊಲ್ಲೆನು. ನಾನು ಹೇಳುವುದಿನಿತು;'
ಎಂದು ಅಕ್ಕನು ಸಾರುವಳು. ಅದಕ್ಕರಸು ಕೌಶಿಕನು—'ನಮಗೆ ಶಿವ
ಭಕ್ತಿಯನು ಮಾಡುವ ಸಮಯವಳವಡದು.' ಎಂದು ಹೇಳುತ್ತ ಉಟ್ಟ
ಸೀರೆ ತೊಟ್ಟ ಆಭರಣಗಳನ್ನು ಅರಸನಿಗೇ ಕೊಟ್ಟು ವೈರಾಗ್ಯದಿಂದ
ದಿಗಂಬರೆಯಾಗಿ ಅಲ್ಲಮಪ್ರಭುವನ್ನರಸುತ್ತ ಸಾಗಿದಳು. ಇದೆಲ್ಲವೂ
ಜಾಮರಸ ಕವಿಯ ಹೇಳಿಕೆಯಾಯಿತು. ಇನ್ನು ಮಹಾದೇವಿಯಕ್ಕನ
ರಗಳೆಯಲ್ಲಿ ನೋಡೋಣ.

'ಮಹಾದೇವಿಯಕ್ಕನ ರಗಳೆ' ಯಲ್ಲಿ.

ಪೈಪಾಳಿಗೆ ಹೋದ ಸಮಯದಲ್ಲಿ ಅರಸು ಕೌಶಿಕನು ಸಹಜ
ಸೌಂದರ್ಯವತಿಯಾದ ಅಕ್ಕನನ್ನು ನೋಡಿದೊಡನೆ ಫೋಟೋ ಯಂತ್ರಕ್ಕೆ
ಸಿಕ್ಕ ಆಕೃತಿಯಂತೆ, ಅಕ್ಕನಾ ರೂಪು ಚಕ್ಕನೆ ಆತನ ಚಿತ್ತದಲ್ಲಿ ಜೊಕ್ಕ
ವಾಗಿ ಮೂಡಿತು, ಕೂಡಿತು. ಅಂದಿನಿಂದ ತದ್ಭಾವದಲ್ಲಿಯೇ ಮೂರ್ಛೆ
ಸಂದು ಕಂದಿ ಕುಂದಿ ಬಹು ಕಸವಿಸಿಯಾದನು. ಕೊನೆಗೆ ತಾಳದೆ
ಮಂತ್ರಿಗಳನ್ನು ಕರೆಯಿಸಿ—'ಮಹಾದೇವಿಯಂ ಕಂಡೊಡುಳಿವೆಂ. ಅಲ್ಲ
ದೊಡಳಿವೆ'. ಎಂದು ಹೇಳಿದ ಮೇಲೆ—'ಮಹಾದೇವಿ ಪೋಗದಿರಿ; ನಿಲ್ಲಿ
ಸಿನನೆ ತೊತ್ತಾದೆ. ಎನ್ನಾಣೆ ಹೋಗದಿರಿ.' ಇಂತು ಕಣ್ಮುಚ್ಚಿ ಕಳವಳ

ಸಿದನು. ಅರಸನ ಈ ಬಗೆಯನ್ನು ನೋಡಿದಾ ಮಂತ್ರಿಗಳು ವಸಂತ
ಕನೆಂಬ ದೂತನನ್ನು ಕುರಿತು—'ನಿಂದಿರಲು ತೆರಪಿಲ್ಲ; ಬೇಗ ಶಿವಭ
ಕ್ತನರಮನೆಗೆ ಹೋಗಿ, ಮಹಾದೇವಿಯಂ ಅವನಿಪತಿಗಂ ಬೇಡು" ಎಂದು ಹೇಳಿಕಳುಹಿದರು. ಅದಂತೆ ವಸಂತಕನು ಬಂದು ಅಕ್ಕನ
ಮಾತಾಪಿತರಿಗೆ ಭಯೋತ್ಪಾದಕವಾಗುವಂತೆ ರಾಜನ ನಿಷ್ಠುರ ಪ್ರಭಾ
ವವನ್ನು ಬಿತ್ತರಿಪನು. ಇದ ಕೇಳಿ ಭೀತರಾಗಿ—'ಅರಸ ಕೌಶಿಕನೊ
ಡನೆ ಸಮಸುಖದೊಳಿರು ಮಗಳೆ! ಪಿರಿದಪ್ಪ ಸಂಪದವನಿನಗೀವನೆಲೆ
ಮಗಳೆ!!" ಎಂದು ತಂದೆ ತಾಯಿಗಳು ಹೇಳಿದರು. ಇದನ್ನು ಕೇಳಿ
ಮೊಡನೇ ಅಕ್ಕನು, ಧಿಗಿಲು ಭುಗಿಲೆಂದು ಕೋಪಿಸುತ್ತ 'ಎಲೆ ಭವಿ
ಯೊಡನೆ ಬೆರಸಿರಲ್ಕಾರ್ಪೆನೆ? ಮೃಡ ಪೂಜೆಯಚಲಸುಖಮುಂ ಪಿಂಗ
ಲಾರ್ಪೆನೆ? ಆನೇಕೆ ಭವಿಯೇಕೆ? ಭಕ್ತರೀ ಮಾತೇಕೆ? ಏನೆಂ
ಪೊಡಂ ಭವಿಯನೊಲ್ಲೆನ್ [ವಸಂತಕನನ್ನು ನೋಡಿ] ಹೋಗೆಲೆ ವಸಂ
ತಕ! ನಿನಗೆ ಸೋಲ್ವವರಿಲ್ಲ. ನಾಗಭೂಷಣನ ಭಕ್ತರಿಗೆ ಭವಿಯು
ಸರಿಯಲ್ಲ. ಬೆಳಗಿಂಗೆ ಕತ್ತಲೆಯ ಕೂಟ ಮುಂಟೇ ಮರುಳೆ! ತಿಳಿವ
ಗಜ್ಞಾನದೊಳು ಸಂಗಮುಂಟೇ ಮರುಳೆ!!" ಎಂದು ಗಜರಿ ಗರ್ಜಿಸಿ
ಕಳುಹುವಳು. ವಸಂತಕನೂ ರಾಜನ ಬಳಿ ಹೋಗಿ ಅಕ್ಕನೆ ನಡೆ
ನುಡಿಗಳೆಲ್ಲವನ್ನೂ ಇಂತೆಂದರುಹಲು, ಕಾಮನ ಯಾತನೆಯಲ್ಲಿದ್ದಾ ಅರಸು
ಕೌಶಿಕನು—'ತಡವೇಕೆ? ಇನ್ನುಂ ನೋಡತಿರ್ಪರೆ? ಬಲ್ಪಿಂದ ಮೆಲ್ಪಿಂದ
ಮಂತಾದೊಡಂ ಪೋಗಿ...ತನ್ನಿರೇ ಏನೆಂದಳೆಂದುದನೊಡಂಬಟ್ಟು'
ಎಂದು ಸಿಟ್ಟಿನಿಂದ ಕಟ್ಟಪ್ಪಣೆ ವಿಧಿಪನು. ತರುವಾಯ ಮಂತ್ರಿಗಳೂ
ರೊಚ್ಚಿಗೆದ್ದು ತಾವೇ ಅಕ್ಕಗಳ ಮನೆಗೆ ಬಂದು ಆಕೆಯ ತಂದೆ ತಾಯಿ
ಗಳನ್ನುದ್ದೇಶಿಸಿ—'ಅಯ್ಯೆಲಾ ಭಕ್ತರಿರಾ! ಕೆಟ್ಟ ಸುತೆಯಿಂದ ದುರ್ಮ
ರಣವಾದಪುದು. ಕುಪಿತನಾದಂ ನೃಪತಿ; ಕೂಸು [ಅಕ್ಕನನ್ನು] ಕೊಡ
ದಿರ್ದೊಡೀಗಂ ಕೊಲಲು ಬೆಸಸಿದಂ..." ಎಂದು ಅರಸನ ಕಟ್ಟಪ್ಪಣೆ
ಯನ್ನು ಬೀರಿದರು. ಇವ ಕೇಳಿ ದುಃಖಗೊಂಡಾ ಮಾತಾಪಿತರು
'ಎಲೆ ಮಗಳೆ! ನಿನ್ನಯ ದೂಸರಿಂ [ತಿರಸ್ಕಾರದಿಂ] ಪೆಮಗೆ ನೆಲ
ಸಿಕ್ಕು ದುರ್ಮರಣವೇನೆಂಬೆ ವೃದ್ಧರಿಗೆ. ಹೊಸತು ನಿನ್ನಯ ಭಕ್ತಿ
ತಾನೆಮಗೆ ಸಂಕಟಂ. ವಸುಧೆಯೊಳು ಭವಿಯೊಳಗೆ ಬಾಳರೇನುತ್ತಟಂ.
ಕಾರಿಕಾಲಮ್ಮಿ ತಾಂ ಭವಿಯೊಡನೆ ಬಾಳಳೆ? ಹೇರೂರ ಹೆಂಗೂಸು
ಭವಿಗೆ ಸತಿಯಾಗಳೆ? ಎಲೆಲೆ ಪೈಜಕ್ಕವ್ವೆ ಭವಿಗೆ ಪುದುವೋಗಳೆ?

ಎಲಿಲೆ ಮಾಂಗಾಯಕ್ಕ ಪಾಂಡ್ಯನೊಡಗೂಡಕಿ? ಮಗಳಿ ಕೇಳವರಿಲ್ಲೆ
ಬುದ್ಧಿ ಪಿರಿದೇ ನಿನಗೆ? .... ಏಕೆಮ್ಮನೀ ವಿಧಿಗೆ ತಂದಪ್ಪೆ ಬೇಡವ್ವ
ಲೌಕಿಕದಿ ಕೌಶಿಕನ ಸಂಗವಂ ಮಾಡವ್ವ." ಎಂದು ಅಂಗಲಾಚಿ
ಯಾಚಿಸದರು. ಇದ ಕೇಳಿದ ಅಕ್ಕನು, ಭವಿಯ ಸಂಗದ ಪ್ರಸಂಗ
ಸಂದಿತಲ್ಲ! ಎಂದು ನೊಂದು 'ಅಂಬಕತ್ರಯೆನೆ ಇನ್ನೇವೆ' ನೆನುತ
ಯೋಚಿಸಿ – 'ಪಿರಿಯರ್ ಪುರಾತನರನನಗೆ ಸಮುಗಟ್ಟುವರೆ? ಪರಮ
ಶೈವಾಂಬುರಾಶಿಗಳನಿಂತೆಣಿಸುವರೆ? ಆ ಮಾತದಂತಿರಲಿ. ನಿಸ್ಸಮ್ಯ
ನಿರೋಧಮಂ ಏಮಾತು ತೀರ್ಚುವೆಂ... ಏನಾಗಿಯಾದೊಡಂ ಭಕ್ತರ
ರಕ್ಷಿಸುದು; ನಾನಾ ವಿಧಂ ಶರಣರಂ ಸಲಹುವದು; ಎಂದುಂಟು ಸತ್ಯಂ
ಪುರಾತನರ ವಚನವಿದು. ಕಾರಣ ಇಂದು ನಿಮಗುಮ್ಮಳಂ ಬೇಡ.
ಇದ ನಂಬುವದು.' ಎಂದು ಅಭಯಕೊಟ್ಟು ಮಾತಾಪಿತರನ್ನು ಸಂತೈಸಿ,
ಮುಂದೆ ನಿಂತಿರ್ದ ಮಂತ್ರಿಗಳನ್ನೂ ಕುರಿತು 'ನೀವೆಂದುದಂ ಮಾಳ್ಪೆ
ನಂತು; ಅದಕ್ಕೆರಡಿಲ್ಲ. ಆದರೆ ಎನ್ನ ಮನದೊಳಿದ್ದಂತೆ ನೀವೂ ಮಾಡ
ವದು. ಏನೆಂದರೆ—'ಎನ್ನಿಚ್ಛೆಯೊಳು ಶಿವನ ಪೂಜೆಯೊಳು ನಲಿದಿಪ್ಪೆ.
ಎನ್ನಿಚ್ಛೆಯೊಳು ಮಹೇಶ್ವರರ ಗೋಷ್ಠಿಯೊಳಿಪ್ಪೆ. ಎನ್ನಿಚ್ಛೆಯೊಳು ನಿಮ್ಮ
ನೃಪನ ಸಂಗದೊಳಿಪ್ಪೆ. ಇಲ್ಲೀ ಮೂರುಂ ತಪ್ಪನೇ ಸೈರಿಸುವೆನು.
ಅಲ್ಲಿಂದು ಬಳಿಕ ಒಲಿದಂತಿಪ್ಪೆ ನಾನುಳಿದು.' ಎಂದು ನುಡಿಯಲು
ಮಂತ್ರಿಗಳೂ ಇದಕ್ಕೊಡಂಬಟ್ಟರು. ಮುಂದೆ ವಿವಾಹವಾಗುವದು.
ಕೂಸಿಗೆ ಅರಸನಿಂದ ಮೂರು ತಪ್ಪಾಗಲು ವೈರಾಗ್ಯದಿಂದ ಶ್ರೀಗಿ
ಯುತ್ತ ಸಾಗಿದಳು. (ಇವೆಲ್ಲ ಹರಿಹರದೇವನ ಹೇಳಿಕೆ.)

ಈ ಈರ್ವರ ಹೇಳಿಕೆಯಲ್ಲಿ ನನ್ನ ವಿಚಾರ.

ಶ್ರೀ ಚಾಮರಸ ಕವಿಯ ಪ್ರಭುಲಿಂಗಲೀಲೆಯಲ್ಲಿಃ— 'ನೀನು ಶಿವ
ಭಕ್ತನಾದರೆ ಕೂಡುವೆನು ನಿನ್ನ; ನೀನು ಭವಿಯಾಗಿದ್ದರೊಲ್ಲೆ'
ಎಂದು ಅಕ್ಕಗಳು ಕೌಶಿಕರಾಜನನ್ನು ಕುರಿತು ಹೇಳಬೇಕಾದರೆ,—
ಮುಂದೆ ಕೌಶಿಕನು ಏನು ಹೇಳುವನೆಂಬುದನ್ನು ಮಾತ್ರ ಅವರೇನೂ
ಆಗ ತಿಳಿದಿದ್ದಿಲ್ಲ. ಆದ್ದರಿಂದ ಆಗ ಅಕ್ಕನ ಮನದಲ್ಲಿ ಕೌಶಿಕನು ಶಿವ
ಭಕ್ತನಾದ ಪಕ್ಷದಲ್ಲಿ ಅವನನ್ನು ಲಗ್ನವಾಗಬೇಕೆಂಬ ಹಂಬಲವಿತ್ತೆಂದು
(ಚಾಮರಸನ ದೃಷ್ಟಿಯಿಂದ) ಹೇಳಲ್ಪಡಬೇಕಾಗುತ್ತದೆ. ಮತ್ತೂ ಈ

ವಾಕ್ಯದಿಂದ ಆಗ ಒಟ್ಟು ಶಿವಭಕ್ತನನ್ನ ಮದುವೆಯಾಗುವ ಇಷ್ಟವು ಅಕ್ಕನಿಗೂ ಇದ್ದೇ ಇತ್ತೆಂದು ಬಹು ಸ್ಪಷ್ಟವಾಗಿ ತೋರುತ್ತದೆ.

ಅರಸನು ಕೌಶಿಕನು ಭವಿಯಾದರೂ ವೀರಶೈವ ದೀಕ್ಷೆಯನ್ನು ಅವನು ಪಡೆದರೆ ಲಗ್ನವಾಗುವೆನೆಂದು ಸ್ವಸಂತೋಷದಿಂದಲೇ ಒಪ್ಪಿ ಕೊಂಡ ಅಕ್ಕನು, ಅವನದಕ್ಕೆ ಒಲ್ಲದೇ ಹೋದರೆ ಬೇರೊಬ್ಬ ಶಿವಭಕ್ತನನ್ನು ವರಿಸಿ—" ಬಯಸದೆ ಭೋಗ ಮೋಕ್ಷ ಪರರಪ್ಪುದು ಚಿತ್ರವಲ್ತೆ ಶಿವಾಧವಾ." ಎಂಬ ಲಿಂಗವಂತರ ತತ್ವದಂತೆ ಐಹಿಕಾಮುಷ್ಮಿಕ ಸುಖ-ಶಾಂತಿಯನ್ನು ಹೊಂದಲು ಆ ಅಕ್ಕನಿಗೆ ಅಂದವಾದ ಅಚ್ಚುಕಟ್ಟಾದ ಅತ್ಯುನ್ನತವಾದ ಮಾರ್ಗವಿತ್ತು. ನಿಜವಾಗಿಯೂ ಅಕ್ಕನು ಅಂತು ಹೇಳಿದ್ದರೆ ಇಂತು ವರ್ತಿಸದೇ ಇರುತ್ತಿರಲಿಲ್ಲ. ಹೀಗೆ ಬೇರೊಬ್ಬ ಅನುಗುಣನಾದ ಶಿವಭಕ್ತನನ್ನು ವರಿಸಿದ್ದರೆ ಮುಂದೆ ಕೌಶಿಕರಾಜನಿಂದಲೂ ಭಯವಿರಲಿಲ್ಲ. (ಪ್ರಭುಲಿಂಗಲೀಲೆಯಲ್ಲಿಯ ಈ ಕಥಾಭಾಗವನ್ನು ನೋಡಿ) ಅದರೆ ಅಕ್ಕನು (ಕೌಶಿಕನು ಲಿಂಗಧಾರಣವಾಗದೊಡನೆಯೇ) ಅದಾವ ಕಾರಣದಿಂದಲೋ ಉಡಿಗೆತೊಡಿಗೆಗಳನ್ನೆಲ್ಲ ಅರಸನಿಗೆ ಕೊಟ್ಟು ವಿರತೆ[೧] ತಳೆದು ದಿಗಂಬರೆಯಾಗಿ ಹೋದಳೆಂದು ಚಾಮರಸನು ಹೇಳಿರುತ್ತಾನೆ. ಹೀಗೆ ಹೇಳಿದುದರಿಂದ ಓದುಗರಾದ ನಮ್ಮೆಲ್ಲರಿಗೊಂದು ಸಂಶಯ ಪುಟ್ಟಾಗುವದು ಸಹಜ. ಏನೆಂದರೆ 'ಭವಿಯಾದ ರಾಜನು ಲಿಂಗವಂತನಾದರೆ ಮದುವೆಯಾಗುವನೆಂದು ನಿರ್ಬಂಧವಿಲ್ಲದೇ ಸ್ವಸಂತೋಷದಿಂದ ಒಪ್ಪಿಕೊಂಡ ಅಕ್ಕನು, ಅವನು ಲಿಂಗವಂತನಾಗದಿರಲು, ಬೇರೊಬ್ಬ ವೀರಶೈವನನ್ನು ವಿವಾಹವಾಗಲಿಲ್ಲವೆಂದಮೇಲೆ, ಆ ಅಕ್ಕನಿಗೆ ರಾಜನನ್ನೇ ವರಿಸಬೇಕೆಂಬ 'ಆಶೆ' ಯೇನಾದರೂ ಇತ್ತೋ? ಎಂದು ಸಂಶಯವು ಬಂದೇಬರುತ್ತದೆ.

---

೧ ತನ್ನ ಉಡಿಗೆ ತೊಡಿಗೆಗಳನ್ನೆಲ್ಲ ಅರಸನಿಗೆ ಬಿಚ್ಚಿಕೊಟ್ಟು ವೈರಾಗ್ಯದಿಂದ ದಿಗಂಬರೆಯಾಗಿ ಹೋಗುವಷ್ಟು ಕಾರಣವು ಅಥವಾ ಕಷ್ಟವು ಆ ಅಕ್ಕನಿಗೆ ಅಲ್ಲಿ ಅಂತಹದೇನಿತ್ತು? ಎಂದು ಹುಡುಕಿದರೆ ಪ್ರಭುಲಿಂಗಲೀಲೆಯಲ್ಲಿ ಉತ್ತರ ದೊರೆಯಲಾರದೆಂದು ನನ್ನ ತಿಳುವಳಿಕೆಯಲ್ಲಿದೆ. ಮತ್ತೂ ಆಭರಣಾದಿಗಳನ್ನು ಅರಸನಿಗೆ ಏಕೆ ಕೊಡಬೇಕಾಗಿತ್ತು? ಎಂಬ ಸಂಶಯವೂ ವಿಚಾರಿಸಲ್ಪಡತಕ್ಕದ್ದಾಗಿದೆ.

ಕಾರಣ 'ಶಿವಭಕ್ತನಾದರೆ ಲಗ್ನವಾಗುವೆ' ನೆಂದು ಅಕ್ಕಗಳೇ ಕೌಶಿಕನಿಗೆ ಹೇಳಿರುವರೆಂದು ಚಾಮರಸನು ಬಗೆದದ್ದು ಒಪ್ಪತಕ್ಕ ನಾತಲ್ಲ, ಅದು ಸಾಧುವೂ ಅಲ್ಲ. ಇದೊಂದೇ ಮಾತಿನಲ್ಲಿಯೇ ಚಾಮರಸನು ಈ ಕಥೆಯನ್ನು ಮಾರ್ಪಡಿಸಿಕೊಂಡ ಗುಟ್ಟು, ನಾನು ಈ ಮೇಲೆ ವಿವರಿಸಿದ ದೃಷ್ಟಿಯಿಂದ ನೋಡಿದರೆ ಜಿನ್ನಾಗಿ ಬಟ್ಟಬಯಲಾಗುತ್ತದೆ.

ಇನ್ನು ಹರಿಹರದೇವನ 'ಮಹಾದೇವಿಯಕ್ಕನ ರಗಳೆ' ಯಲ್ಲಿ:— ಕೌಶಿಕರಾಜನ ಮೂತನಾದ ವಸಂತಕನ ಬೆದರಿಕೆಗೆ ಹೆದರಿದ ಅಕ್ಕನ ತಂದೆ ತಾಯಿಗಳು 'ಅರಸ ಕೌಶಿಕನೊಡನೆ ಸಮಸುಖದೊಳಿರು ಮಗಳೆ!' ಎಂದು ಹೇಳಿದೊಡನೆಯೇ ಅಕ್ಕನು ರೊಚ್ಚಿಗೆದ್ದು— "ಎಲೆ ಭವಿಯೊಡನೆ ಬೆರಸಿರಲ್ಬಾರ್ದೆನೆ? ಮೃಡ ಪೂಜೆಯಚಲ ಸುಖಮುಂ ಪಿಂಗಲಾರ್ದೆನೆ? ಅನೇಕೆ ಭವಿಯೇಕೆ? ಏನೆಂದೊಡಂ ಭವಿಯನೊಲ್ಲೆನ್" ಎಂದು ತಂದೆ ತಾಯಿಗಳನ್ನು ಕುರಿತು ಹೇಳಿ, ನಂತರ ಆ ರಾಜನನ್ನು ಕುರಿತು— 'ಹೋಗೆಲೆ ವಸಂತಕ! ನಿನಗೆ ಸೋಲ್ವವರಿಲ್ಲ. ನಾಗಭೂಷಣನ ಭಕ್ತರಿಗೆ ಭವಿಯು ಸರಿಯಲ್ಲ. ಬೆಳಗಾಗೆ ಕತ್ತಲೆಯ ಕೂಟಮುಂಟೇ ಮರುಳೆ? ತಿಳಿವಗಜ್ಞಾನದೊಳು ಸಂಗಮುಂಟೇ ಮರುಳೆ?" ಇಂತು ಗಜರಿ ಗರ್ಜಿಸಿ ಕಳಿಸಿದಳೆಂದು ಹೇಳುವ ಹರಿಹರನೀ ಮಾತುಗಳು, ಅಕ್ಕನ ಆ ಜೊಕ್ಕ ಶಿವಜ್ಞಾನಕ್ಕೆ ಮಾನಕ್ಕೆ ಒಪ್ಪತಕ್ಕವಾಗಿಯೆ. ಇಲ್ಲಿ 'ಲಿಂಗವಂತನಾಗು' ಎಂಬ ಮಾತೇ ಇಲ್ಲ. ಮೊದಲು ಒಟ್ಟು ಭವಿಯನ್ನೇ ಒಲ್ಲೆನೆನ್ನುವಳು. ಚಾಮರಸನು ಹೇಳುವಂತೆ, ಮೊದಲಿಗೇ ಯಾವದೊಂದೂ ಬಲಾತ್ಕಾರವಿಲ್ಲದೆ ಮದುವೆಯಾಗುವೆನೆಂದು (ಲಿಂಗವಂತನಾದರೆ) ಮನವೊಡುವಂತಹ, ಸಮ್ಮತಿ ಕೊಡುವಂತಹ, ಸ್ವಭಾವವು ಅಕ್ಕಗಳದಾಗಿರಲಿಲ್ಲ. ಇದನ್ನು ಅಕೆಯ ವಚನಗಳಿಂದಲೇ ತಿರಿಯಬಹುದು.

ಇತ್ತ ಆ ದೂತನೂ (ವಸಂತಕನು) ಬಂದು "ಎನ್ನಳವಲ್ಲ. ಆ ಕನ್ಯೆಯತಿ ಭಕ್ತೆಯುತೆ; ವೈರಾಗ್ಯಯುತೆ. ಸಿಡಿದೆದ್ದಪಳು ಭವಿಯ ಮಾತೆನೆ. ತಂದೆ ತಾಯಿಗಳ ಬಂಧುಬಳಗಗಳ ಮಾತ ಲೆಕ್ಕಿಸಳು, ಪರಿಕಿಸಳು." ಎಂದು ಮಂತ್ರಿಗಳಿಗೆ ತಿಳುಹುವನು. ಇದನ್ನು ಕೇಳಿದ ಮಂತ್ರಿಗಳೆಲ್ಲರೂ ತಮ್ಮೊಳಗೊಬ್ಬರ ಮೊಗವನೊಬ್ಬರು ನೋಡುತ 'ಮೆಲ್ಲನೀ ಮಾತನರಸಂಗೇ ಅರುಪಿ ನೋಡುವಂ. ಅಲ್ಲಿ ಹುಟ್ಟಿದ ಪದಕೆ ತಕ್ಕುದಂ ಮಾಡುವ' ಎಂದು ಆಲೋಚಿಸಿ, ಅತಿ ಕಾಮಾತುರನಾದ

ಕೌಶಿಕನಿಗೆ ತಿಳುಹುವರು. ಮೊದಲೇ ಸ್ವತಂತ್ರಸರ್ವಾಧಿಕಾರವುಳ್ಳ ನಾಡಿಗೊಡೆಯ; ಅವರಲ್ಲಿ ತರುಣ; ಮೇಲಾಗಿ ಕಾಮುಕ. 'ಕಾಮಾಂಧೋ ನೈವ ಪಶ್ಯತಿ.' ಇಂಥವನಿಗೆ 'ಅತಿಭಕ್ತಿಯುತೆ ವೈರಾಗ್ಯಯುತೆ' ಎಂದು ಹೇಳಿದರೆ ಎಲ್ಲಿಯಾದರೂ ಸುಮ್ಮನೇ ಬಿಟ್ಟು ಬಿಡುವನೇ? ಆಗ— "ಬಲ್ಪಿಂದ ಮೆಲ್ಪಿಂದ 'ಮೆಂತಾದೊಡಂ' ಪೋಗಿ ತನ್ನಿರಿ." ಎಂದು ಕಟ್ಟಪ್ಪಣೆಯನ್ನು ಕೊಟ್ಟೆಬಿಟ್ಟ. ಇಷ್ಟಾದ ಮೇಲೆ ಇನ್ನ ತಂತ್ರವಿಶಾರದ ರಾವ ಮಂತ್ರಿಗಳನ್ನು ಕೇಳಬೇಕೆ? ಅಕೆಯ ತಂದೆ ತಾಯಿಗಳಿಗೆ— 'ದುರ್ಮರಣವಾದಪುದು; ಕುಪಿತನಾದಂ ನೃಪತಿ. ಕೂಸು ಕೊಡದಿರ್ದೊಡೀಗಂ ಕೊಲಲು ಬೆಸಸಿದಂ[೧]" ಎಂದು ಹೇಳಿಯೇ ಬಿಟ್ಟರು. ಯಾವ

---

೧ "ಚಾಮರಸಾದಿಗಳು ಹೇಳುವಂತೆ ಮೊದಲೇ 'ಶಿವಭಕ್ತನಾಗು' ಎಂದು ಕರಾರು ಮಾಡಿದ್ದರೆ, ಆ ಕರಾರನ್ನು ಮೀರಿ ಶಿವಭಕ್ತನನ್ನು ಕೊಲ್ಲುವಷ್ಟು ಕೌಶಿಕನು ಕಟುಕನಿದ್ದಿಲ್ಲ. ಆತನೂ ಮನುಷ್ಯನು. ಅದರಲ್ಲಿ ರಾಜನು. ಕಾರ್ಯ್ಯ ಕಾರ್ಯ್ಯ ವಿವೇಕವೂ ಇತ್ತು. ತಕ್ಕಮಟ್ಟಿಗೆ ಗುಣವಂತನೂ ಇದ್ದನು. ಇಲ್ಲವಾದರೆ "ಪೈಹಾಳಿಯಿಂದೆ ಬರುತಿರ್ದನಾ ಕೌಶಿಕಂ। ಸಾಹಸಾಭರಣನತಿ ವೀರಂ ಗುಣಾಧಿಕಂ॥" ಎಂದು ಹರೀಶ್ವರನು ಆತನ ಗುಣವರ್ಣನೆಯನ್ನು ಮಾಡುತ್ತಿರಲಿಲ್ಲ." ಎಂಬ ಈ ಲೇಖಕರ ಆಕ್ಷೇಪಣೆಯ ಪ್ರಶ್ನೆಯೊಂದು ಇಲ್ಲಿದೆ.

ಶಿವಭಕ್ತನಾದರೆ ಲಗ್ನವಾಗುವೆನೆಂಬ ಚಾಮರಸನ ಕರಾರೇ ಕಲ್ಪಿತವೆಂಬುದನ್ನು ಇದೇ ಲೇಖಾಂಕದಲ್ಲಿ ಈ ಮೊದಲೇ ವಿವರಿಸಿದೆನಷ್ಟೆ! ಇನ್ನು ಈ ಲೇಖಕರು ಹೇಳುವಂತೆ, ಕೌಶಿಕನು ಕಾರ್ಯ್ಯ ಕಾರ್ಯ್ಯ ವಿವೇಕಯೂ ತಕ್ಕಮಟ್ಟಿಗೆ ಗುಣವಂತನೂ ಆಗಿದ್ದರೆ—ತರುಣೆಯಾದ ಅಕ್ಕನು, ಲಗ್ನವಾದವಳೊ ಆಗದವಳೊ ಎಂಬುದನ್ನು ವಿಚಾರಿಸದೆ, ನೋಡಿದೊಡನೆ ಅದೆಂದಿಗೂ ಕಾಮಾತುರನಾಗುತ್ತಿರಲಿಲ್ಲ (ತರುಣೆಯರನ್ನು ದೂರದಿಂದಾಗಲಿ ಕೊಂಚ ಸನೀಪದಿಂದಾಗಲಿ ನೋಡಿ, ಈಕೆ ಕನ್ಯೆ, ಅಥವಾ ಸಸಿ, ಎಂದು ನಿರ್ಧರಿಸಿ ತಿಳಿಯುವದು ತಿಂಣ.) ಪರಸ್ತ್ರೀ ಎಲ್ಲಿರುವಳೋ ಎಂಬ ಸಂಶಯದಿಂದ ಅಂಜದೇ ಅಳುಕದೇ ಹೋಗುತ್ತಿರಲಿಲ್ಲ. ಇದರಿಂದ ಅವನಿಗೆ ವಿವೇಕವೂ ತಕ್ಕಮಟ್ಟಿಗೆ ಗುಣವೂ ಇರಲಿಲ್ಲವೆಂತಲ್ಲ; ಮನುಷ್ಯನಾದ ಮೇಲೆ ಪ್ರತಿಯೊಬ್ಬನೂ ತಕ್ಕಮಟ್ಟಿಗೆ ವಿವೇಕಿಯೂ ಗುಣಿ

ನಾದರೊಬ್ಬ ದೊಡ್ಡ ಸಿರಿವಂತನಾಗಿದ್ದರೆ, ಅಕ್ಕನಾ ತಂದೆ ತಾಯಿಗಳು ಎಂತಾದರೂ ಅವನನ್ನು ತ್ಯಜಿಸಬಹುದಿತ್ತು, ತಿರಸ್ಕರಿಸಬಹುದಿತ್ತು. ಆದರೆ ಸರ್ವ ಸ್ವತಂತ್ರನೂ, ಗರ್ವವಿಶಿಷ್ಟನೂ, ಛಲಯುತನೂ ಬಲಯುತನೂ ಆದ ತನ್ನ ರಾಷ್ಟ್ರದೊಡೆಯನ ತೆಡೆಯಿಲ್ಲದ ಕಡುಶಾಸನ! ರಾಜದ್ರೋಹದಿಂದಾಗುವ ಕರಾಳ ದುಃಶಾಸನ!! ಇದಲ್ಲದೆ ಮಗಳು ನೋಡಿದರೆ ಪ್ರತಿಕೂಲಳು; ಇನ್ನು ತಮ್ಮನ್ನು ನೋಡಿಕೊಂಡರೆ ಅಬಲರು, ಅಸಹಾಯಕರು, ಅದರಲ್ಲಿಯೂ ಮುದುಕರು. ಇಂತಹ ಘೋರ ಸಮಯದಲ್ಲ ಆ ಬಡಪಾಯಿಗಳಾದರೂ ಏನು ಮಾಡಿಯಾರು? ಎತ್ತ ನೋಡಿದರೂ ದುಃಖವೇ ದುಃಖ. ಸೊಪ್ಪಾದ ಮುಖದಲ್ಲಿ ಕಂಣೀರು ತುಂಬಿ—'ಎಲೆ ಮಗಳೆ! ಮಗಳೆ!! ನಿನ್ನಯ ದೂಸರಿಂ [ತಿರಸ್ಕಾರದಿಂ] ದೆಮಗೆ। ನೆಲಸಿತ್ತು ದುರ್ಮರಣವೇನೆಂಬೆ ವೃದ್ಧರಿಗೆ। ಹೊಸತು—'ನಿನ್ನಯ ಭಕ್ತಿ' ತಃನೆಮಗೆ ಸಂಕಟಂ। ವಸುಧೆಯೊಳು ಭವಿಯೊಳಗೆ ಬಾಳರೇನುತ್ಕಟಂ॥" ಎಂದು ಹೇಳುತ್ತ ಹಿಂದಿನ ಮಹಾ ಶಿವಶರಣೆಯರಾದ, ಕಾರಿಕಾಲೆಮ್ಮೆ, ಹೇರೂರ ಹೆಂಗೂಸು, ವೈಜ

ವಂತನೂ ಇದ್ದೇ ಇರುತ್ತಾನೆ; ಆದರೆ ಕಾಮುನ ಕಣ್ಣಿಗಳು ತಾಗಿದವೆಂದರೆ ಮಾತ್ರ 'ಗುಣವು' ಹರಿದುಹೋಗುತ್ತದೆ. ಬುದ್ಧಿಯು ಸರಿದು ಹೋಗುತ್ತದೆ, ಮನವು ಕರಗಿಹೋಗುತ್ತದೆ, ಎಂಬುದೇ ನನ್ನ ಅಭಿಪ್ರಾಯ.

ಕಾಮಿಯಾದ ಕೌಶಿಕನು ಶಿವಭಕ್ತರನ್ನು ಕೊಲ್ಲುವಷ್ಟು ಕಟುಕನಿದ್ದಿಲ್ಲವೆಂಬುದಕ್ಕೆ ಪ್ರತಿಯಾಗಿ, ಒಂದು ಪ್ರಸಿದ್ಧ ಐತಿಹಾಸಿಕ ದೃಷ್ಟಾಂತವನ್ನೇ ಸಂಕ್ಷೇಪವಾಗಿ ತೋರಿಸಲು ಯತ್ನಿಸುತ್ತೇನೆ. ವಿಜಾಪುರ ಜಿಲ್ಲೆಯಲ್ಲಿರುವ ಕಡಲೇಮಟ್ಟಿ ರೇಲ್ವೆ ಸ್ಟೇಶನದ ಮಾಸ್ತರನೊಬ್ಬನು ಜೊತೆಯಲ್ಲಿ ಒಂದು ಕೂಸುಳ್ಳ ಕಾಶೀಬಾಯಿ ಎಂಬ ಪತಿವ್ರತೆಯನ್ನು ಮಧ್ಯರಾತ್ರಿಯಲ್ಲಿ ನೋಡಿ ಕಾಮಾತುರನಾಗಿ ಆಕೆಯನ್ನು ಕೂಡಲು ಮನವಮಾಡಿ ಬೇರೆ ಉಪಾಯದಿಂದ ಒಳಗೆ ಕರೆದು ಬಲಾತ್ಕರಿಸಲು, ಆ ಕಾಶೀಬಾಯಿಯು ಆ ಮಗುವನ್ನೂ ಅವನನ್ನೂ ಒಳಗೇ ಬಿಟ್ಟು ನೆವ ತೋರಿ ಹೊರಗೆ ಬಂದು ಕದವನ್ನಿಕ್ಕಿ ಭದ್ರಮಾಡಿದಳು. ಒಳಗಿದ್ದ ಮಾಸ್ತರನು—ಮಗುವನ್ನು ಕೊಲ್ಲುವನೆಂಬ ಆಸೆ ತೋರಿಸಿದರೆ ಒಳಗೆ

ಕ್ಷಸ್ಸೆ, ಮಾಂಗಾಯಕ್ಕ ಮೊದಲಾದವರು ಭವಿಯೊಡನೆ ಬಾಳಿಲ್ಲವೆ? ಒಡಗೂಡಿಲ್ಲವೆ? ಎಂದು ಪೂರ್ವದ ದೃಷ್ಟಾಂತಗಳನ್ನೂ ತೋರಿಸಿ, ಏನು ಹೊಸತಲ್ಲ; ಅವರೆಲ್ಲರಿಗಿಂತಲೂ ನಿನ್ನ ಬುದ್ಧಿ ಹಿರಿದಾದುದೆ? ಲೌಕಿಕದಿ ಕೌಶಿಕನ ಸಂಗವಂ ಮಾಡಪ್ಪ. ಎಮ್ಮನು ಈ ವಿಧಿಗೇಕೆ ತರುವೆ?" ಇಂತು ಮುಂತಾಗಿ ತನ್ನ ಸಲುವಾಗಿಯೇ ಕಣ್ಣೀರುಗರೆ

ಮತ್ತೆ ಬರುವಳೆಂಬ ಆಸೆಯಿಂದ ಚೂರಿ ಹಿಡಿದು ಕತ್ತರಿಸತೊಡಗಿದನು. ಪಾತಿವ್ರತ್ಯವಲ್ಲಿ ಲಕ್ಷ್ಯವಿಟ್ಟ ಆ ಸ್ತ್ರೀಯಳು ಅದಕ್ಕೂ ಬಾರದಿರಲು ಆ ಮಗುವಿನ ಒಂದು ಅವಯವವನ್ನು ಕಡಿದೇ ಬಿಟ್ಟನು. ಅವಳು ಅದಕ್ಕೂ ಬಾರದಿರಲು ಪ್ರತಿಯೊಂದು ಅವಯವವನ್ನು ಕಡಿದು ಕಡಿದು ತೋರಿಸುತ್ತ ಕೊಂದ ಕರುಣಾಜನವಾದೀ ಕಥೆಯು ಉತ್ತರ ಕರ್ನಾಟಕದ ಲಾವಣಿಗಾರರಿಂದಲೇ ಈಗಾಗಲೇ ಹಾಡಲ್ಪಡುತ್ತಿದೆ. ಮುಂದೆ ಆ ಮಾಸ್ತರನಿಗೆ ಶಿಕ್ಷೆಯೂ, ಆ ಪತಿವ್ರತೆಗೆ ಪಾರಿತೋಷಕವೂ, ಸರಕಾರದಿಂದಲೇ ಕೊಡಲ್ಪಟ್ಟಿವೆ. ಈ ಎಲ್ಲ ಇತಿಹಾಸವನ್ನು ನೋಡಿದವರು ಈಗಲೂ ಇದ್ದಾರೆ." ಇಂತು ಮುಂದೆ ಸರಕಾರದ ಭಯವುಳ್ಳ ಸಾಮಾನ್ಯ ಮನುಷ್ಯನೇ ಇಂತಹ ಕ್ರೂರಕರ್ಮ ಮಾಡಬೇಕಾದರೆ, ಯಾವುದೊಂದು ಭಯವಿಲ್ಲದ ರಾಜನು 'ಮರಣ ದಂಡನೆ ವಿಧಿಸುವ ಕಟುಕತನದಲ್ಲಿ ಆಶ್ಚರ್ಯವಾದರೂ ಏನು? ಇದಕ್ಕಾಗಿಯೇ ನಮ್ಮ ಪೂರ್ವಜರೂ 'ಕಾಮಾಂಧೋ ನೈವಪಶ್ಯತಿ' 'ನ ಕಾಮವೃತ್ತಿರ್ವಚನೀಯ ಮೀಕ್ಷತೆ' 'ಕಾಮಾತುರಾಣಾಂ ನ ಭಯಂ.....' ಇಂತು ಹಾಡಿರುವರು. ಇಂತಹ ಆ ಕೌಶಿಕರಾಜನ ಸ್ವಭಾವವನ್ನು 'ಅರಸನತಿ ವಿಷಯಿಯತಿ ಕೋಪಿಯತಿ ನಿಷ್ಕರುಣಂ। ಪಿರಿಯರವರಿವರೆನ್ನನತಿ ಸತೇಜಂ ಕರಂ॥, ಎಂದು ಅವನ ಪೂತನ ಮುಖದಿಂದಲೂ ಸಾಲದಿದ್ದಕ್ಕೆ ಮತ್ತೂ 'ಮರ್ಮದು ನಿಷ್ಕರುಣಂ ಪಸ್ತಿ ಮೂರ್ಖಂ ನೃಪತಿ।' ಎಂದು ಆತನ ಮಂತ್ರಿಗಳ ಮೊಗದಿಂದಲೂ ಹರಿಹರ ಕವಿಯೇ ನುಡಿಸಿದ್ದಾನೆ. ಮತ್ತು ಈ ಪರ್ಣನೆಗೆ ಭಂಗ ಬಾರದಂತೆ ಕೊನೆಯ ವರೆವಿಗೂ ಈ ಕೌಶಿಕನ ಪಾತ್ರವನ್ನು ಚಿತ್ರಿಸುವದರಲ್ಲಿ ತೋರಿದ ಹರಿಹರನ ಕೈವಾಡವು ಬಹು ಸೂಕ್ಷ್ಮವಾಗಿದೆ. ಇನಿತು ಸೂಕ್ಷ್ಮವಾಗಿ ಚಿತ್ರಿಸಿದ ಆ ಹರಿಹರನೇ 'ವೈಹಾಳಿಂ ಬರುತಿರ್ದನಾ ಕೌಶಿಕಂ। ಸಾಹಸಾಭರಣನತಿವೀರಂ ಗುಣಾಧಿಕಂ॥" ಎಂದು ಬಣ್ಣಿಸಿರುವನೆಂದರೆ, ಇದು ವಿಶ್ವಾಸಾರ್ಹವಾಗಲು

ಯುತ್ತ ಸುರಿಸುತ್ತ ಹೇಳುವ ಲಾಲನೆ ಪಾಲನೆ ಮಾಡಿದಾ ಮಾತಾಪಿತರ ಈ ದುಃಖೋಕ್ತಿಗಳನ್ನು ಕೇಳದೆ ಅವರನ್ನು ಮರಣಕ್ಲೇಷವ ಮಾಡುವಷ್ಟು ಅಕ್ಕನ ಚಿತ್ತವು ದಾರುಣವಾದುದಿರಲಿಲ್ಲ; ದಯೆಯುಳ್ಳ ದಿತ್ತು, ಧರ್ಮಪರಾಯಣವಾಗಿತ್ತು. ಆಗ ಇಂತು ವಿಚಾರಿಸಿದರೆ ಅಕ್ಕನು ತನಗೆ ಅನಿಷ್ಟವಾದ ಭವಿಯ ವಿವಾಹವನ್ನು ಒಪ್ಪಿಕೊಳ್ಳಬೇಕು? ಈ ತಿಣ್ಣವಾದ ಕಾರ್ಯದ್ವಯದಲ್ಲಿ ಸಿಕ್ಕಿಬಿದ್ದ ಅಕ್ಕನಿಗ ದುಃಖವಾಗದಿರಲು ಸಾಧ್ಯವಿಲ್ಲ ಆಗ ಆಕೆಯೂ ಕಣ್ಣನೀರಿಕ್ಕುತ 'ಅಂಬಕತ್ರಯನೆ ಇನ್ನೀಪ' ನೆನುತ ದಿಕ್ಕು ತೋಚದೆ ನೊಂದಳು. ಯೋಚಿಸಿ ಇಂತು ನುಡಿ

ಆಧಾರವಿಲ್ಲವೆನ್ನುತ್ತೇನೆ. ಏಕೆಂದರೆ ಈ ವರ್ಣನೆಗೆ ತಕ್ಕಂತೆ ಕೌಶಿಕ ರಾಜನ ವ್ಯಕ್ತಿತ್ವವು ಮಹಾದೇವಿಯಕ್ಕನ ರಗಳೆಯಲ್ಲಿ ಎಲ್ಲಿಯೂ ಕಾಣುವದಿಲ್ಲ. ಕಾಮಿಯಾದ ಕೌಶಿಕನೂ ಅಂತಹ ಸ್ವಭಾವದವನಿರಲು ಸಾಧ್ಯವಿಲ್ಲ. ಹಾಗಾದರೆ ಈ ಪದ್ಯದ ಗತಿಯೇನು? ಎಂದರೆ ಹರಿಹರನ ಈ 'ಮಹಾದೇವಿಯಕ್ಕನ ರಗಳೆ' ಎಂಬುದು ಒಟ್ಟು ಮೂರು ಪ್ರತಿಗಳ ಆಧಾರದಿಂದ ಪ್ರಿಂಟಾಗಿದೆ ಎಂದು ಅದರ ಪ್ರಕಾಶಕರೇ ಬರೆದಿದ್ದಾರೆ. ಅವುಗಳಲ್ಲಿ ಈ ಪದ್ಯವು ಮಾತ್ರ ಒಂದೇ ಪ್ರತಿಯಲ್ಲಿದೆ ಎಂಬುದನು ಆದೇ ಪದ್ಯದ ಅಡಿಟಿಪ್ಪಣಿಯಿಂದ ತಿಳಿಯಬಹುದಾಗಿದೆ. ಕಾರಣ ಸಾಹಿತ್ಯ ದೃಷ್ಟಿಯಿಂದಲೂ, ಇನ್ನಿತರ ದೃಷ್ಟಿಯಿಂದಲೂ ವಿಚಾರಿಸಿದರೆ, ಈ ಶ್ಲೋಕವು ಯಾರಿಂದಲೋ ಪ್ರಕ್ಷಿಪ್ತವಾದುದೆಂದು ಹೇಳಲೇಬೇಕು.

(೧) ಕೌಶಿಕನಿಗೆ ಲಿಂಗಧಾರಣ ಮಾಡಿಸಿದರೆ 'ಭವಿ' ಯೆಂಬ ಮಾತೇ ಇಲ್ಲವಲ್ಲ? ಎಂದರೆ – ಕೌಶಿಕನ ಅಂತರಂಗವು ಲಿಂಗಧಾರಣೆಗೆ ಪರಿಪಕ್ವವಾದುದಿಲ್ಲ. ಏಕೆಂದರೆ ಅವನಾ ಲಿಂಗವಂತಿಕೆ ಯೂಗ ಮುಮುಕ್ಷುಭಾವದ ತಾತ್ವಿಕ ದೃಷ್ಟಿಯಿಂದಿರದೆ, ಕೇವಲ ಕಾಮೋಪ ಭೋಗ ಇಷ್ಟವುಳ್ಳದ್ದಾಗಿದೆ. ನವವುಳ್ಳದ್ದಾಗಿದೆ. ಆದ್ದರಿಂದ ಅವನು ವೀರಶೈವ ದೀಕ್ಷೆಗೆ ಅಧಿಕಾರಿಯೇ ಇಲ್ಲ. ಇಂತು ಅನಧಿಕಾರಿಯಾದಾ ಕೌಶಿಕರಾಜನನ್ನು ತತ್‌ಕ್ಷಣವೇ 'ನೀನು ಶಿವಭಕ್ತನಾದರೆ ಲಗ್ನವಾಗುವ' ಎಂದು ನುಡಿಯಲು ಒಪ್ಪಿಕೊಳ್ಳಲು ಅಕ್ಕಗಳೇನೂ ಅಜ್ಞಾನಿಗಳಲ್ಲಿಲ್ಲ, ಅನುಭವಿಗಳಲ್ಲಿಲ್ಲ. ಆದ್ದರಿಂದಲೇ ಈ ನಿಜವಾದ ಲಿಂಗವಂತಿಕೆಯ ತತ್ವವನ್ನರಿತ ಹರಿಹರನೂ ತನ್ನ ಕಾವ್ಯದಲ್ಲೆಲ್ಲಿಯೂ 'ಶಿವಭಕ್ತನಾಗು' ಎಂಬ ಮಾತನ್ನೇ ಎತ್ತಿಲ್ಲ. ಒಟ್ಟು ಕೌಶಿಕನಿಗೆ 'ಭವಿ' ಯೆಂದೇ ನಿರ್ದೇಶಿಸಿದ್ದಾನೆ.

ದಳು 'ಆ ಹಿರಿಯ ಶಿವಶರಣೆಯರ ವಿಚಾರವಂತಿರಲಿ. ನಿಮಗಾದ ವಿರೋಧದ ಮಾತನ್ನೀಗ ತೀರಿಸುವೆ. ಏಕಂದರೆ— ಏನಾಗಿಯಾ ಮಾಡಂ ಭಕ್ತರಂ ಭಕ್ತರಂ ರಕ್ಷಿಪುದು ನಾನಾವಿಧಂ ಬಂದು ಶರಣರಂ ಸಲಹುವದು ಎಂದುಂಟು "ಸತ್ಯಂ ಪುರಾತನರ ವಚನವಿದು" ಕಾರಣ ದಿಂದು ನಿಮಗುಮ್ಮಳಂ ಬೇಡ' ಎಂದು ಆ ಮಾತಾಪಿತರನ್ನು ಸಂತೈಸಿದಳೆಂದು ಹೇಳುವ, ಹರಿಹರದೇವನ ಗೀತೆಯಲ್ಲಿ ನೀತಿಯಲ್ಲಿ ಧರ್ಮವಿದೆ; ಸತ್ಯವಿದೆ; ಸಹಜವಿದೆ. ಇನಿತಲ್ಲ "ಜಾಲಗಾರನೊಬ್ಬ ಜಲದ ಹೊಕ್ಕು ಶೋಧಿಸಿ ಹಲವು ಪ್ರಾಣಿಯ ಕೊಂದು ನಲಿನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ ಅದಕ್ಕೆ ಮರಗುವಂತೆ, ಅವಕೇಕೆ ಮರುಗನು?..." ಎಂದು ಮೀನುಗಳನ್ನೂ ನೋಡಿ ಮನ ಕರಗಿ ನೊಂದು ಹಾಡಿದ ಅಕ್ಕನಿಗೂ ಸಲ್ಲತಕ್ಕದ್ದಾಗಿದೆ, ಶೋಭಿಸತಕ್ಕದ್ದಾಗಿದೆ. ಇಂತಹ ಸದಯ ಹೃದಯಳಾದ, ಸತ್ಯ ಶರಣೆಯಾದ, ಲಿಂಗಾಂಗಸಂಗಿಯಾದ ಅಕ್ಕನ ಅನುಮತಿಯಿಂದಲೇ ಆ ಶಿವಭಕ್ತರ [ತನ್ನ ತಂದೆತಾಯಿಗಳ] ವಧೆಯೀಗ ನಡೆಯತಕ್ಕದ್ದು, ತಡೆಯತಕ್ಕದ್ದು. ವೀರಶೈವ ಮತದಲ್ಲಿಯ ಶಿವಭಕ್ತರಿಗಿರುವ ಸ್ಥಾನವು, ಮಾನವು ಶ್ರೀಶಿವಸಮಾನವಾದುದು. ಆಗಮಗಳಲ್ಲಿಯಂತೂ 'ಮದ್ಭಕ್ತಾ ಮಮಾಧಿಕಾಃ' ಎಂದು ಆ ಶಿವ ಶಾಸನವೇ ಇದೆ. ಇವನ್ನೇ ಪರ್ಯಾಯದಿಂದ ಬಸವಣ್ಣನವರೂ—'ಶಿವಭಕ್ತರಿಗಂತ ಹಿರಿಯರಿಲ್ಲ' ಎಂದು ಬೋಧಿಸಿದ್ದಾರೆ, ಸಾಧಿಸಿದ್ದಾರೆ. ಈ ಶಿವಭಕ್ತ ಸರ್ವೋತ್ಕೃಷ್ಟತೆಯನ್ನರಿತ ಅಕ್ಕನು, ತನ್ನ ತಂದೆತಾಯಿಗಳಾದ ಶಿವಭಕ್ತರ ವಧೆಯನ್ನು ಹೇಗೆ ಮಾಡಿಸುವಳು? ಕಾರಣ ಇದನ್ನು ತಪ್ಪಿಸಲೋಸುಗ ಬೇರೊಂದುಪಾಯವೂ ಸಾಗದಿರುವಾಗ, ಅನಿವಾರ್ಯವಾದ ಭವಿಯ ಒಡತನಕ್ಕೆ ಒಪ್ಪಿಕೊಂಡರೆ ಇದು ಗುಬ್ಬಿಗೆ ಬ್ರಹ್ಮಾಸ್ತ್ರವಾದಂತೆ ಆಗಲಾರದು. [ಶಿವಭಕ್ತರ ವಧೆಗಿಂತಲೂ ದೊಡ್ಡದಿನ್ನೊಂದು ಪಾಪಕರ್ಮವಿಲ್ಲೆಂದು ಸಾರುವದು ವೀರಶೈವಮತ.] ಇದು ಕಾರಣ ಅಕ್ಕನು ಮನವಿಲ್ಲದಿದ್ದರೂ, ವಧೆ ತಪ್ಪಿಸುವ ಮಟ್ಟಿಗೆ ಮದುವೆಗೆ ಒಪ್ಪಿದ್ದರಿಂದ ಅದರಲ್ಲಿಯೇ ನಿಲ್ಲುವಂತಿರಲಿಲ್ಲ. ಜಲದಲ್ಲಿಯ ಕಮಳದಳದಂತೆ ಇದ್ದು ಮುಂದೆ ಅದರಿಂದ ತನ್ನನ್ನೂ ತಪ್ಪಿಸಿಕೊಳ್ಳುವ ಯೋಚನೆಯೂ ಆಕೆಯ ಮನವಲ್ಲಿ ಮನೆಮಾಡಿರಬೇಕು, ಒಡಮೂಡಿರಬೇಕು. ಆದ್ದರಿಂದಲೇ ಮುಂದಿನ ಮಂತ್ರಿಗಳನ್ನು ಕುರಿತು—"ನೀವೆಂದುದಂ ಮಾಳ್ಪಿನಂತು ಅಪಕ್ಕೆರಡಿಲ್ಲ. ನೀವೂ ಎನ್ನ ಮನದೊಳಿದ್ದಂತೆ ಮಾಡುವುದು. ಏನೆಂದರೆ–

೧. ಎನ್ನಿಚ್ಛೆಯೊಳು ಶಿವನ ಸೂಜೆಯೊಳುನಲಿದಿಪ್ಪೆ.
೨. ,, ಮಹೇಶ್ವರರ ಗೋಷ್ಠಿಯೊಳಿಪ್ಪೆ.
೩. ,, ನಿಮ್ಮ ನೈಪನ ಸಂಗದೊಳಿಪ್ಪೆ.

ಇಲ್ಲೀ ಮೂರು ತಪ್ಪುಗಳಾಗುವ ವರೆಗೆ ಇರುವೆ. ಅಲ್ಲಿಂದ ಬಳಿಕ ಒಲಿದಂತಿಪ್ಪೆ ನಾನು." ಎಂದುದಕ್ಕೆ ಮಂತ್ರಿಗಳೂ ಒಡಂಬಟ್ಟ ಮುಂದೆ ವಿವಾಹ ನಡೆಸುವರು. ಇಂತು ಅಕ್ಕನು ಮೂರು ನಿಯಮಗಳನ್ನು[೧] ಮಾಡಿದುದರಿಂದ ಲಾಭವೇನು? ಎಂದರೆ:— ಶಿವಭಕ್ತರ ಮರಣವಂತೂ ತಪ್ಪಿತು. ಅಲ್ಲದೆ ತನ್ನ ಬಂಧನವೂ ಬಿಚ್ಚುವಂತೇ ಇದೆ. ಇದರಿಂದ ಮುಂದೆ ತನ್ನ ಚೆನ್ನಮಲ್ಲಿಕಾರ್ಜುನನತ್ತ ಸಾಗಲೂ ಸ್ವಚ್ಛಂದವಾಯಿತು. ಒಟ್ಟು ತನ್ನ ಪ್ರಿಯ ಚೆನ್ನಮಲ್ಲಿಕಾರ್ಜುನನತ್ತ ಸಾಗಬೇಕಾದರೆ ನಡುವೊಂದು ಮಹಾಪ್ರವಾಹವು ಎತ್ತ ಹೋಗಲೂ ಮಾರ್ಗವಿಲ್ಲದಂತೆ ಮುಂದಡ್ಡವಾಗಲು ಅದರಲ್ಲಿ ಈಸಿದಳು, ಬಿದ್ದು ಜೈಸಿದಳು. ಆಗ ಈ ಮೂರು ನಿಯಮಗಳು, ಮೂರು 'ಈಸುಗುಂಬಳ ಕಾಯಿಗಳಂ'ತೆ ಸಹಾಯಗಳಾದವು.

ಹೀಗೆ ನಿಯಮ ಮಾಡುವುದಾದರೂ ರೂಢಿಯಲ್ಲಿದೆಯೋ ಹೇಗೆ? ಎಂದರೆ— ಸೃಷ್ಟಿಯಲ್ಲಿ ಯಾವ ಯಾವ ರೂಢಿಗಳು ರೂಢವಾಗಿವೆಯೋ ಆ ಆ ರೂಢಿಗಳಿಗೆ ವಿಪರೀತವಾಗಿ ಆಗುವ ಕ್ವಚಿತ್ತಾದ ಒಂದು ರೂಢಿಯೂ ಇಲ್ಲವೆಂತಲ್ಲ. ವಿವಾಹ ವಿಷಯದಲ್ಲಿ ಅಕ್ಕನಿಗೆ ಒದಗಿದ ವಿಷಮ ಸಮಯವೇ 'ರೂಢಿಗೆ ವಿಪರೀತವಾಗಿ ಆಗುವ ಕ್ವಚಿತ್ತಾದ ರೂಢಿಯೆಂದು ಹೇಳಬಹುದು. 'ಒಂದೊಂದು ಕಾರ್ಯದಲ್ಲಿ ತಮ್ಮ ತಮ್ಮ ಮತಾನುಸಾರವಾಗಿ ಬಹು ಜನರು ವರ್ತಿಸುವ ಒಂದೊಂದು ಪದ್ಧತಿಯೇ ರೂಢಿ.' ಕಾರಣ ಅಕ್ಕನ ಸ್ವಭಾವದ ಸ್ತ್ರೀಯರೂ, ಕೌಶಿಕನ ಸ್ವಭಾವದ ರಾಜರೂ ಇದ್ದಿದ್ದರೆ ಇದೂ ಒಂದು ರೂಢಿಯೇ ಆಗುತ್ತಿತ್ತು. ಇನ್ನು ಮುಂದೆ ಅಂತಹವರಾದರೆ ಆಗಲೂ ಬಹುದು.

---

(೧) ವಿಷಯಿಯೂ ಚಪಲಚಿತ್ತನೂ ನಿಷ್ಠುರನೂ ಆದ ಕೌಶಿಕನು ಈ ಮೂರು ನಿಯಮಗಳಿಗೆ ಅಧೀನನಾಗಿ ವರ್ತಿಸುವದು ಅಸಾಧ್ಯವೆಂದೇ ಅಕ್ಕನ ಬಗೆಯಲ್ಲಿ ನಿಶ್ಚಯವಾಗಿರಬೇಕು. ಒಂದು ಪಕ್ಷ ವರ್ತಿಸಿದನೆಂದರೆ ತನಗಂತು ಚೆನ್ನಮಲ್ಲಿಕಾರ್ಜುನನ ಧ್ಯಾನಕ್ಕೆ ಯಾವ ಆತಂಕವೂ ಇಲ್ಲವೆಂದು ಇಂತು ಮಾಡಿರಬೇಕು.

ವೀರಶೈವ ಕವಿಗಳ ವೈಶಿಷ್ಟ್ಯ.

ಲೇಖಕರು :— ಶ್ರೀ ಚಂದ್ರಶೇಖರದೇವರು ಅಡ್ನೂರು

ಕನ್ನಡ ಕವಿಗಳಲ್ಲಿ ವೀರಶೈವ ಕವಿಗಳು ತಮ್ಮ ನಡೆ-ನುಡಿ (ಬಾಳು-ಭಾಷೆ) ಗಳಲ್ಲಿ ಒಂದು ವೈಶಿಷ್ಟ್ಯವನ್ನು ಕಾಯ್ದುಕೊಂಡು ಬಂದಿದ್ದಾರೆ. ಅವರಿಂದಲೇ ಅವರ ಜನಪದೆಣ್ಣಿಗೆ ಶೋಭನದ ತಿಲಕನ್ನಿಟ್ಟಂತಾಗಿದೆ. ಅವರು ಅನ್ಯರಂತೆ ಕಂಡು ನಡೆಯಲಿಲ್ಲ; ಕಲ್ತು ನುಡಿಯಲಿಲ್ಲ. ಏಕೆಂದರೆ ಅವರ ತತ್ವ ಅವರ ಮತಪಂಥಗಳು ಸ್ವತಂತ್ರವಾಗಿರುವದೇ ಕಾರಣ. ಅವರು ತಮ್ಮತಮ್ಮ ಸುಂದರ ಸುಗಮಶೈಲಿಯ ಕಾವ್ಯಗಳನ್ನು, ಯಾವದೇ ಒಂದು ಸ್ಫೂರ್ತಿದಾಯಕವಾದ ನವಚೈತನ್ಯದಿಂದ ಪ್ರೇರಿತರಾಗಿ ಅಳವಾದ ಅನುಭವದಿಂದ ಪೂರಿತರಾಗಿ ರಚಿಸಿದರು. ಆದ್ದರಿಂದಲೇ ಅವರ ಭಾಷೆಯು ರಮ್ಯವಾಗಿ ಬಳೆದು-ಬಳಿಕೆಯಲ್ಲಿಳಿದು, ಬೆಳಕಿಗೆ ಬಂದಿತು. ಒಂದು ಹೆಮ್ಮರದ ತಣ್ಣೆಳಲಲ್ಲಿ ಬಿತ್ತಿದ ಬೆಳೆ, ಬಲವಾಗಿ ಬೆಳೆದು ಬಹುವಾಗಿ ಫಲಿಸದು. ಅದು ಸಣ್ಣಾಗಿ ಬೆಳೆದು ಕಣ್ಣಿಗೆ ನುಣ್ಣಗೆ ಮಾತ್ರ ತೋರಬಹುದು. ಆದರೆ ಅದರಲ್ಲಿ ಅಂತಸ್ಸತ್ವವು ಕಾಣಲಾರದು. ಹಾಗೆಯೆ ಒಬ್ಬರು ಆಚರಿಸಿದಂತೆ ಆಚರಿಸುವವನ ಬಾಳು-ಒಬ್ಬರು ಆಡಿದಂತೆ ಆಡುವವನ ಭಾಷೆ ಆ ನಾಡಿನ ಜನಾಂಗಕ್ಕೆ ಆದರ್ಶವಾಗಿ ಬಾಳಲಾರದು. ಅಭೂತ ಪೂರ್ವವಾಗಿ ಬೆಳಗಲಾರದು.

ಕನ್ನಡತಿಯ ಕಾವ್ಯ ಪ್ರಪಂಚದಲ್ಲಿ ಕೆಲಸ ಮಾಡಿ ಕೀರ್ತಿ ಪಡೆದವರು ಮುಖ್ಯವಾಗಿ ಜೈನರು, ವೀರಶೈವರು, ಬಾಹ್ಮಣರು. ಇವರಲ್ಲಿ ವೀರಶೈವ ಕವಿಗಳು ಒಬ್ಬೊಬ್ಬರು ಒಂದೊಂದು ವೈಶಿಷ್ಟ್ಯವನ್ನು ಸಂಪಾದಿಸಿಕೊಂಡು ಬಂದಿದ್ದಾರೆ. ಕನ್ನಡತಿಗೆ ತಮ್ಮ ಸ್ವತಂತ್ರವಾದ ಸುಂದರವಾದ ಸಾಹಿತ್ಯದ ಸಿರಿಸೊಬಗನ್ನುಕೊಟ್ಟು (ಖಾದಿಯನ್ನುಡಿಸಿ) ಅಂದ ಚಂದವಾಡಿ ಉಳಿವ ಸಂಸ್ಕೃತಿಗಳಲ್ಲಿ ತಲೆಯೆತ್ತಿ ನಿಲ್ಲುವಂತೆ ಮಾಡಿದ್ದಾರೆ. ಇಕೋ ಇದು ಸ್ವತಃ ಸಂಪಾದಿಸಿದ ಮನೆಯ ಸಂಪತ್ತು ಎಂದು ಧೈರ್ಯವಾಗಿ ತೋರಿಸುವಂತೆ ಮಾಡಿದ್ದಾರೆ.

ಮೊತ್ತಮೊದಲು ಜೈನ ಕವಿಗಳು ಪ್ರೌಢ ಕಾವ್ಯಗಳನ್ನು ಕಟ್ಟು ನಿಟ್ಟಿನಿಂದ ಬರೆದು, ಕೇವಲ ಪಂಡಿತರ ಭಾಷೆಯನ್ನಾಗಿ ಮಾಡಿದರು. ಕಟ್ಟಕಡೆಗೆ ಬ್ರಾಹ್ಮಣ ಕವಿಗಳು ಸಂಸ್ಕೃತದಲ್ಲಿರುವ ಕಥಾವಸ್ತುಗಳನ್ನೂ ಕಥನರೀತಿಯನ್ನೂ ಅನುವಾದ ಮಾಡಿಕೊಂಡು ಪರ ಸಂಸ್ಕೃತಿಯಿಂದ ಜೀವಿಸುವಂತೆ ಮಾಡಿದರು. ಇವರಿಬ್ಬರಿಂದಲೂ ಕನ್ನಡತಿಯು ಸ್ವತಃ ಸಾಹಿತ್ಯ ಸಂಪತ್ತಿನಿಂದ ಬಾಳುವ ಭಾಗವು ಅವಳ ಸೌಭಾಗ್ಯಕ್ಕೆ ಪ್ರಾಪ್ತವಾಗಲಿಲ್ಲ. ಆ ಸಂಪತ್ತಿನ ಸುಗ್ಗಿಯನ್ನು ನಟ್ಟನಡುವಿನ ವೀರಶೈವ ಕವಿಗಳು ಅಕೆಯ ಒಡಲಲ್ಲಿ ತುಂಬಿದರು. ಅವಳಿಗೆ ವಿಲಕ್ಷಣವಾದ ನೆಲೆ ಬೆಲೆಗಳನ್ನು ತಂದುಕೊಟ್ಟರು. ಇವರು ಕವಿಸಮಯಗಳಿಗೆ ಸಿಲ್ಕಲಿಲ್ಲ. ಶಬ್ದಾಲಂಕಾರಗಳಿಗೆ ಮನಸೋಲಲಿಲ್ಲ. ಅಲ್ಲಲ್ಲಿ ಅನುಭವವನ್ನೂ ಅರ್ಥಾಲಂಕಾರಗಳನ್ನೂ ಬಳಸಿ ಕನ್ನಡ ಕಾವ್ಯಕನ್ನಿಕೆಯನ್ನು ನೈಸರ್ಗಿಕ ಸೌಂದರ್ಯದಿಂದ ಪೋಷಿಸುವಂತೆ ಮಾಡಿದರು. ಇವರ ಹೃದಯಗಳೇ ಕಾವ್ಯಝರಿಗಳಾಗಿ ಹರಿದು ನಿಂತವು. ಈ ದೃಷ್ಟಿಯಿಂದ ವಿಚಾರಿಸಿದರೆ ಇವರು ಕನ್ನಡತಿಯ ಹೊಟ್ಟೆಯ ಮುಕ್ಕಳಂತಿಹರು. ಇಲ್ಲವೇ ಪ್ರಕೃತಿಯೇ ಆಗಿರುವರು ಎಂದು ಹೇಳಿದರೆ ತಪ್ಪಾಗಲಾರದು. ಈ ಕಾರಣದಿಂದ ಇವರು ಕನ್ನಡತಿಯ ಸ್ವತಂತ್ರ ಜೀವನಕ್ಕೂ-ಸ್ವರೂಪಸೌಂದರ್ಯಕ್ಕೂ ಉಳಿದವರಿಗಿಂತಲೂ ಹೆಚ್ಚುಹೆಚ್ಚಾಗಿ ಕೆಲಸ ಮಾಡಿದರು; ಕೃತಕೃತ್ಯರಾದರು. ಇಂತಹ ಇವರ ವೈಶಿಷ್ಟ್ಯವನ್ನು ಕಂಡುಂಡೇ ಬಸವ ಪೌರಾಣದ ಮಲ್ಲಣಾರ್ಯರು ತಮ್ಮ ಭಾವಚಿಂತಾರತ್ನವೆಂಬ ಗ್ರಂಥದಲ್ಲಿ —

"..... ಶಿವಭಕ್ತರೆಂದೆನಿಪ ಕವಿಗಳು,
ದುರ್ಜನವ್ರಾತಘೂಕ ರವಿಗಳು
ಶಿವನ ಕಿವಿವಾಯ್ಗೆನೆರೆಸವಿಗಳು ॥"

ಎಂದು ಒಳ್ಳೇ ಹೃದಯಂಗಮವಾಗಿ ಶಿವ ಕವಿಗಳನ್ನು ಬಣ್ಣಿಸಿದ್ದಾರೆ.

ಇತಂಹ ವೀರಶೈವ ಕವಿಗಳಲ್ಲಿ ಬಸವಣ್ಣ, ಹರಿಹರ, ರಾಘವಾಂಕ ಸಿಜಗುಣ ಶಿವಯೋಗಿ, ಸರ್ವಜ್ಞ, ಮುರಿತೋಂಟದಾರ್ಯ ಮೊದಲಾದವರು ಅಗ್ರಗಣ್ಯರು. ಇವರು ಕನ್ನಡಕ್ಕೆ ಕೊಟ್ಟ ಪೊಸಕಲೆಗಳಲ್ಲಿ ವಚನ. ರಗಳೆ, ಷಟ್ಪದಿ, ತ್ರಿಪದಿ, ಶತಕ, ಸಾಂಗತ್ಯ, ಕೈವಲ್ಯ, ಕೋಶ ಮೊದಲಾಗಿ ಹಲವು ಒಗೆಯಾಗಿವೆ. ಈ ಸಾಹಿತ್ಯದಿಂದಲೇ ಇಂದು ಕನ್ನ

ಡತಿಯು ಸ್ವತಂತ್ರಳಾಗಿ ಪರಿಗಣಿಸಲರ್ಹಳಾಗಿದ್ದಾಳೆ. ಶಿಶುಗಳಿಗೂ ಸಹ ತನ್ನ ಸವಿದನಿಯ ಹಾಲನ್ನು ನೀಡುವ ಕರುಣಾಮೂರ್ತಿಯಾಗಿದ್ದಾಳೆ. ಪಶುಪಾಯಿಗಳಿಗೂ ತನ್ನ ರುಚಿಯನ್ನು ಹಚ್ಚಿ ಅವರ ಅವಿದ್ಯೆಯ ರೋಗವನ್ನು ಹರಿವ ವೈದ್ಯಗಾರಳಾಗಿದ್ದಾಳೆ. ನಾಸ್ತಿಕರಿಗೆ ಅನುಭವದ ಆವಿಚಾರವನ್ನು ಅರುಹಿ ಆಸ್ತಿಕರನ್ನಾಗಿ ಮಾಡುವ ಆಧ್ಯಾತ್ಮಿಕ ಯೋಗಿಣಿಯಾಗಿದ್ದಾಳೆ. ಅರಸಿಕರಿಗೆ ರಸವನ್ನು ನೀಡುವ ರಾಗಮೂರ್ತಿಯಾಗಿದ್ದಾಳೆ. ಒಟ್ಟಿನಲ್ಲಿ ತನ್ನ ಸ್ವತಂತ್ರವಾದ ಈ ವೈಶಿಷ್ಟ್ಯದಿಂದ ಎಲ್ಲರನ್ನೂ ಎಲ್ಲರೀತಿಯಿಂದಲೂ ತಣಿಸಲರ್ಹಳಾಗಿದ್ದಾಳೆ. ಈ ವಿಲಕ್ಷಣವಾದ ವೈಶಿಷ್ಟ್ಯವನ್ನು ತಂದುಕೊಟ್ಟ ಆ ಮಹಾನುಭಾವರ ಒಂದೊಂದು ಕೃತಿಯನ್ನು ಕುರಿತು ಒಂದೊಂದು ಮಾತನ್ನು ಹೇಳಿ ಬರಹವನ್ನು ಪೂರೈಸುವೆನು.

೧. ಬಸವಣ್ಣ :— ಈತನು ಕೊಟ್ಟ ಸಂಪತ್ತು ವಚನ ವಾಙ್ಮಯ. ಇದು ಅಪಾರವಾದುದು; ಅದ್ವಿತೀಯವಾದುದು. ಈ ವಾಙ್ಮಯವು ಅನುಭವಪೂರಿತವೂ ಹೃದಯಪ್ರೇರಿತವೂ ಬುದ್ಧಿಪ್ರಜ್ಞೋದಕವೂ ಆಗಿದೆ. ಇದರ ನೆಲೆಬೆಲೆಗಳು ಇಂದಿನ ಸಾಹಿತ್ಯದಲ್ಲಿ ಯಾವ ಸ್ಥಾನದಲ್ಲಿವೆಯೆಂಬುದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಹಲವುಮಂದಿ ಉದ್ದಾಮ ಸಾಹಿತಿಗಳು ತಮಗಾದ ಆನಂದ ಪ್ರಕಟನೆಗಾಗಿ- ಈ ವಾಙ್ಮಯಕ್ಕೆ "ಕನ್ನಡ ಉಪನಿಷತ್ತುಗಳು" ಎಂದು ಹೊಗಳಿದ್ದಾರೆ. "ರತ್ನದ ತುಂಡುಗಳು" ಎಂದು ಕರೆದಿದ್ದಾರೆ. ನೈಸರ್ಗಿಕ ನಿಲುವುಳ್ಳ "ಋಷಿಕನ್ನೆ" ಯೆಂದು ಬಣ್ಣಿಸಿದ್ದಾರೆ. ಕನ್ನಡ ಸಾಹಿತ್ಯ ಚಕ್ರದ "ಶ್ವೇತ ಛತ್ರ" ಎಂದು ಸ್ತುತಿಸಿದ್ದಾರೆ. ಇಂತಹ ಸುಂದರ ವಚನ ವಾಙ್ಮಯವನ್ನು —

"ನೋಡದ ಕಣ್ಗಳೇಕೆ? ಸಲೆಕೇಳದಕರ್ಣಮದೇಕೆ? ಭಕ್ತಿಯಿಂ।
ಪಾಡದ ಬಾಯದೇಕೆ? ಪೆಸಗೊಳ್ಳದ ಜಿಹ್ವೆಯದೇಕೆ? ಲೇಖನಂ॥
ತೀಡದ ಕೈಗಳೇಕೆ? ನೆರೆ ಶೋಧಿಸದಂಗಮದೇಕೆ? ಓದಿಯ-।
ಳ್ಯಾಡದ ಚಿತ್ತವೇಕೆ? ಬಸವಣ್ಣನ ಬಿಂಕದ ಭಾಷೆಯುಳ್ಳರಿಂ॥"

ಎಂದು ಪಂಪಾಶತಕದಲ್ಲಿ ಹರಿದ ಹರಿಹರನ ಹೃದಯದ ಝರಿಯನ್ನು ಇಂತು ಪಾರ್ಶ್ವಡಿಸಿಕೊಳ್ಳದೆ ಮನಸ್ಸು ಶಾಂತವಾಗದು. ಒಟ್ಟಿನಲ್ಲಿ ಈತನು ಮುಮುಕ್ಷುಗಳಾದ ಭಕ್ತರಿಗೆ ಭಕ್ತಿಯ ಭಂಡಾರವನ್ನುಕೊಟ್ಟು (ಭಕ್ತಿ ಭಂಡಾರಿ) ಯಾದಂತೆ ಕನ್ನಡಿಗರಿಗೆ ಅಮೋಘವಾದ ಅಸದೃಶ

ವಾದ ವಚನ ವಾಙ್ಮಯವನ್ನಿತ್ತು "ವಚನ ಭಂಡಾರಿ" ಯೂ ಆಗಿ ದ್ದಾನೆ. ಈತನ ಅನುಯಾಯಿಗಳು ಅಲ್ಲಮ ಪ್ರಭು, ಚನ್ನಬಸವಣ್ಣ, ಅಜಗಣ್ಣ, ಸಿದ್ಧರಾಮ, ಮಾಚಿದೇವ, ಅಕ್ಕಮಹಾದೇವಿ, ಮಹಾದೇವಿ, ಲಿಂಗಮ್ಮ, ತೊಂಟದಾರ್ಯ, ಸ್ವತಂತ್ರ ಸಿದ್ಧಲಿಂಗೇಶ್ವರ ಇವರೇ ಮೊದಲಾದ ೨೦೦-೩೦೦ ಜನ ಶಿವಶರಣ ಶರಣೆಯರಿರುವರು.

೨. ಹರಿಹರದೇವನು :— ಈ ಕ್ರಾಂತಿಕಾರಕ ಕವಿಯು ಕೊಟ್ಟ ಸಿರಿಯು ಸರಳ ಸುಂದರ ರಗಳೆಗಳು. ಇವು ಈಗಿನ ಸಾಹಿತ್ಯಕ್ಕೆ ಮೌಲಿಕದಂತಿವೆ. ಈತನ ಈ ಕ್ರಾಂತಿಯಾದರೂ ಅಸದೃಶವಾಗಿದೆ, ಅಪಾರವಾಗಿದೆ. ಇದು ಜನಸಾಮಾನ್ಯಕ್ಕೂ ಸಂತೋಷದಾಯಕವಾಗಿದೆ. ಈ ರಗಳೆಯ ವಿಚಾರವಾಗಿ ಒಂದೆರಡು ಮಾತುಗಳಲ್ಲಿ ಹೇಳಿ ಮುಗಿಸಲು ಸಾಧ್ಯವಿಲ್ಲ. ಆದರೂ ಹೇಳಬೇಕೆಂದರೆ ಈತನ ಕಾವ್ಯ ತರಂಗಿಣಿಯು ತುಂಬಿ ತುಳುಕುತ್ತ ತೊರೆ-ನೊರೆಗಳಿಂದ ಇಸಿಸನಿಗೈಯುತ್ತ ಹರಿದಿದೆ. ಆದರಲ್ಲಿ ಈಜುವವರ ಹೃದಯ ಕೂಪಗಳಲ್ಲಿ ಅದು ಮಡುಗಟ್ಟಿ ನಿಲ್ಲುತ್ತದೆ.

ಅದರಿಂದ ಚಿತ್ತಭೂಮಿಯಲ್ಲಿ ಪೊಚ್ಚ ಪೊಸ ಹಸರು ಹುಟ್ಟುತ್ತದೆ. ಆ ಹಸುರಿನಲ್ಲಿ ಪೊಸಕಲೆಯೆಂಬ ಕುಸುಮವರಳಿ ತನ್ನ ಪೊಸ ಗಂಪನು ಬೀರುವದು. ಆಗುಂಟಾಗುವ ಆ ಸುಖರಸದಲ್ಲಿ ಎಲ್ಲರೂ ಮೈಮರೆವರು. ಆದುದರಿಂದ ಇವನು ಕೇವಲ 'ರಗಣಿಕರ ಕುಲತಿಲಕ' ನಾಗದೆ "ಕವಿ ಕುಲತಿಲಕ" ನೂ ಆದನು. ಆಗ ಇನ್ನಿತರ ಕವಿಗಳು ಈತನಿಗೆ ಆಡಿದ 'ರಗಳೆಯ ಕವಿ' ಎಂಬ ಕಟಕಿಯು, ಈಗ ಅದೇ ಕೀರ್ತಿಯನ್ನು ತಂದು ಕೂಡುವ ಬಿರುದಿನ ಕುರುಹಾಗಿ ಪರಿಣಮಿಸಿದೆ. ಹೀಗೆ ಕಟಕಿಯಿಂದ ಆಡಿದ ಮಾತೇ ಕೀರ್ತಿವಾಚಕವಾಗಿ ಪರಿಣಮಿಸಿದ್ದು ಈ ಕವಿಯ ಕಾವ್ಯ ಮಹತ್ವವನ್ನು ವ್ಯಕ್ತ ಮಾಡುವದಿಲ್ಲವೆ? ಈ ಕವಿಯನ್ನನುಸರಿಸಿ ಸೋಮನಾಥ, ಶಂಕರದೇವ, ಸ್ವತಂತ್ರ ಸಿದ್ಧಲಿಂಗೇಶ್ವರ ಮೊದಲಾದವರು ರಗಳೆಗಳನ್ನು ಬರೆದು ತಮ್ಮ ಸಾಹಿತ್ಯ ಸೇವೆಯನ್ನು ಸಲ್ಲಿಸಿದ್ದಾರೆ.

೩. ರಾಘವಾಂಕ :—ಇವನು ಮೊಟ್ಟ ಮೊದಲು ಷಟ್ಪದಿಯಲ್ಲಿ ಸ್ವತಂತ್ರ ಗ್ರಂಥವನ್ನು ಬರೆದು ಕನ್ನಡತಿಯನ್ನು ಸ್ವತಂತ್ರಮಾಡಿ ಸಿಂಗರಿಸಿದ ಉಭಯಕವಿ ಕಮಲ ರವಿಯು. ಈತನ ಕಾವ್ಯರೂಪ ಷಟ್ಪದಿ

ಗಳು (ಭ್ರಮರಗಳು) ಗಾಯಕರು, ಗಮುಕಿಗಳು, ಕವಿಗಳು, ಕಲಾವಿದರು. ಪಾದಿಗಳು, ವಾಗ್ಮಿಗಳು, ರಸಾವೇಶಿಗಳೆಂಬ ಕುಸುಮಗಳಿಗೆ ರಸ ಅವರ ಹೃದಯಾಂತರಾಳಗಳಲ್ಲಿ ಮುಳುಗಿ ಅವರನ್ನೇ ತಲೆದೂಗಿಸುತ್ತಿದೆ. ಈತನ ಈ ರಾಜಮಾರ್ಗವನ್ನು ಉದ್ದಾಮ ಕವಿಗಳಾದ ಚಾಮರಸ, ವಿರೂಪಾಕ್ಷ ಪಂಡಿತ, ಭೀಮಕವಿ, ಗುಬ್ಬಿಯ ಮಲ್ಲಣಾರ್ಯ, ಪ್ರಾಸ ಭೂಷಣ (ಪೆವ್ಮಿಶೆಟ್ಟಿ) ಮೊದಲಾದ ಅನಂತ ಕವಿಗಳೂ ಸಹ ಹಿಂಬಾಲಿಸಿ ನಡೆದಿದ್ದಾರೆ.

೪. ನಿಜಗುಣರು :—ಇವರು ಕನ್ನಡದೇವಿಗೆ ಕೊಟ್ಟ ಸಾಹಿತ್ಯವು ಅಪೂರ್ವವಾದುದು; ಅಗಾಧವಾದುದು. ವೇದಾಂತ ಮತ್ತು ಯೋಗ ವಿಷಯಗಳನ್ನು ಮೊದಲು ಕನ್ನಡದಲ್ಲಿ ಬರೆದು ಕನ್ನಡತಿಯನ್ನು ವೇದಾಂತಿನಿಯನ್ನೂ ಯೋಗಿಣಿಯನ್ನೂ ಮಾಡಿದ ಶ್ರೇಯಸ್ಸು ಸಂಪೂರ್ಣ ಇವರದೇ. ಕೈವಲ್ಯಗಳ ಕ್ರಾಂತಿಯು ಕನ್ನಡಿತಿಯ ಕಲೆಗಳಲ್ಲಿ ಒಳಿ ಬಿಗಿಲಾದ ಕ್ರಾಂತಿಯು. ಇವಗಳಲ್ಲಿ ಭಾವ, ರಾಗ, ಸಾಹಿತ್ಯ, ಸರ್ವವು ಸೇರಿದೆ; ಸುಂದರವಾಗಿದೆ. ಇವನ್ನು ರಚಿಸಿ ಕನ್ನಡಿತಿಗೆ ನತ್ತನ್ನು ಕೊಟ್ಟಂತಾಗಿದೆ. ಇತಂಹ ಸಾಹಿತ್ಯದ ಆದ್ಯ ಪ್ರವರ್ತಕನೂ ಈತನೇ ಎಂದು ಈಗಿನ ಮಟ್ಟಿಗೆ ಹೇಳಬಹುದು. ಈ ಹೆಬ್ಬಾರಿಯಲ್ಲಿ ಸರ್ಪ ಭೂಷಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಮುಹಂತ ಶಿವಯೋಗಿ, ಘನಮಠಾರ್ಯ ಮೊದಲಾದ ಋಷಿಕವಿಗಳು ಸ್ವಚ್ಛಂದವಾಗಿ ಸಂಚರಿಸಿದ್ದಾರೆ.

೫. ಸರ್ವಜ್ಞ :— ಈ ಕವಿಯ ಮತ್ತು ಈತನ ಕಾವ್ಯದ ಪರಿಚಯದ ಅವಶ್ಯವೇ ಇಲ್ಲ. ಈ ಗಂಡುಗವಿಯು ಕನ್ನಡತಿಗೆ ತನ್ನ ತ್ರಿಪದಿಯ ಸುಂದರ ಉಡುಪನ್ನು ಉಡಿಸಿ ಕೈವಿಡಿದು ಕರೆದೊಯ್ದು ಎಲ್ಲರಿಗೆ ಹಳ್ಳಿಪಳ್ಳಿಗಳ ಪರಿಚಯ ಮಾಡಿಕೊಟ್ಟ ಮಹಾಕವಿಯು. ಈತನ ಈ ಅಪೂರ್ವವಾದ ರಾಜಮಾರ್ಗವನ್ನು ಇನ್ನಿತರ ಕವಿಗಳು ಅನುಸರಿಸಿದರೆಂದು ಹೇಳಿ ಈತನಿಗೆ ಒಂದು ಪ್ರಾಶಸ್ತ್ಯವನ್ನು ತಂದು ಕೊಡುವದು ಅಷ್ಟೊಂದು ಸಮುಂಜಸವಲ್ಲೆಂದು ನನ್ನ ಭಾವನೆ. ಈ ಕಾರಣ ಇಲ್ಲಿ ಉಳಿದ ತ್ರಿಪದಿಕಾರರ ಹೆಸರನ್ನೆತ್ತದೆ ಬಿಟ್ಟಿರುವೆನು.

೬. ಮರಿತೋಂಟದಾರ್ಯ :— ಶಿವಕವಿ ತಿಲಕರಾದ ಇವರು ಸಂಸ್ಕೃತದಲ್ಲಿ ವೀರಶೈವಾನಂದ ಚಂದ್ರಿಕೆ, ತರ್ಕಚಂದ್ರಿಕೆ, ಷಟ್‌ಸ್ಥಲ

ಚಂದ್ರಿಕೆ, ಎಂಬ ಗ್ರಂಥಗಳನ್ನೂ ಕನ್ನಡದಲ್ಲಿ ಸೋಮನಾರಾಧ್ಯ ಪುರಾಣವನ್ನೂ ಬರೆಯುವದಲ್ಲದೆ "ಕರ್ನಾಟಕ ಶಬ್ದ ಮಂಜರೀ" ಎಂಬ ಅಮೋಘವಾದ ಕನ್ನಡ ಕೋಶವನ್ನು ಷಟ್ಪದಿಯ ರೂಪದಲ್ಲಿ ಬರೆದ. ಕನ್ನಡ ಕವಿಗಳ ಕೈಯ್ಯಲ್ಲಿ ಕೊಟ್ಟಿರುವರು. ಅದು ಹಳಿಗನ್ನಡ ಶಬ್ದಗಳನ್ನು ತಿಳಿದುಕೊಳ್ಳಲು ಹೆಚ್ಚು ಸಹಾಯಕವಾಗಿದೆ.

೭. ಸಾಂಗತ್ಯ ಸಾಹಿತ್ಯಃ— ಇದನ್ನು ಸಾವಾನ್ಯವಾಗಿ ಬಸವ ಕವಿ (೧೫೫೦) ಲಿಂಗಿ ಕವಿ (೧೫೫೦) ಚನ್ನಮಲ್ಲಿಕಾರ್ಜುನ (೧೬೫೦) ಓದುವ ಗಿರಿಯ (೧೫೭೫) ಮಹಾದೇವ (೧೬೫೦) ಮೊದಲಾದ ಕವಿಗಳು ಬರೆದು ಸಾಂಗತ್ಯ ಸಾಹಿತ್ಯ ಸಂಪತ್ತನ್ನು ಸಮರ್ಪಿಸಿದ್ದಾರೆ.

ಈ ವಿಧವಾಗಿ ವೀರಶೈವ ಕವಿಗಳು ಕನ್ನಡದಲ್ಲಿ ನವೋನವೀನವಾದ ಪದ್ಧತಿಗಳಿಂದ ಗ್ರಂಥಗಳನ್ನು ಬರೆದು ವೈವಿಧ್ಯವಿಲ್ಲದೆ ಸ್ವತಂತ್ರ ಸೊಮ್ಮಿಲ್ಲದೆ ಕುಗ್ಗಿ ಬಗ್ಗಿ ಬಾಡಿದ ಕನ್ನಡತಿಯನ್ನು ಕತ್ತೆತ್ತಿ ಹೆಮ್ಮೆಯಿಂದ ನಿಲ್ಲುವಂತೆ ಮಾಡಿದ್ದಾರೆ. ಕರ್ನಾಟಕ ಸಂಸ್ಕೃತಿಗೆ ಒಂದು ನೆಲೆ ಒಂದು ಬೆಲೆಯನ್ನು ತಂದುಕೊಟ್ಟಿದ್ದಾರೆ. ಒಂದು ಸ್ವಾವಲಂಬನೆಯನ್ನು ಗಳಿಸಿಕೊಟ್ಟಿದ್ದಾರೆ. ಚರಿತ್ರಾರ್ಹವಾಗುವಂತೆ ಪ್ರಯತ್ನಪಟ್ಟಿದ್ದಾರೆ. ಒಟ್ಟಿನಲ್ಲಿ ವೀರಶೈವ ಕವಿಗಳು ತಂತಮ್ಮ ಕೃತಿಗಳಲ್ಲಿ ತಂತಮ್ಮದೇ ಆದ ಒಂದೊಂದು ವೈಶಿಷ್ಟ್ಯವನ್ನು ಸಂಪಾದಿಸಿಕೊಂಡು ಬಂದಿದ್ದಾರೆ. ಈ ವಿಶಿಷ್ಟತೆಯನ್ನು ಸಂಪಾದಿಸಬೇಕೆಂಬ ಹಂಬಲವೂ ಅವರಲ್ಲಿತ್ತೆಂಬ ಅವರವರ ಉಕ್ತಿಗಳಿಂದಲೇ ವ್ಯಕ್ತವಾಗುತ್ತದೆ. ಅಂತಹ ಒಂದೆರಡು ಉಕ್ತಿಗಳನ್ನು ಇಲ್ಲಿ ನೋಡಿಃ—

"ಹಾಲತೊರೆಗೆ ಬೆಲ್ಲದಂತಹ ಕೆಸರು, ಸಕ್ಕರೆಯಂತಹ ಮಳಲು, ತವರಾಜದಂತಹ ನೊರೆ ತೆರೆಗಳು. ಇಂತಪ್ಪ ಆದ್ಯರ ವಚನವಿರಲು, ಬೇರೆ ಬಾವಿಯ ತೋಡಿ, ಉಪ್ಪ ನೀರ ಸವಿದಂತಾಯಿತ್ತಯ್ಯ ಎನ್ನವುಕ್ತಿ. ನಿಮ್ಮ ವಚನಂಗಳ ಕೇಳದೆ, ಅನ್ಯ ಪುರಾಣಗಳ ಕೇಳಿ ಕೆಟ್ಟಿನಯ್ಯ ಕೂಡಲ ಸಂಗಮದೇವಾ."

—ಶ್ರೀಬಸವೇಶ್ವರ

ಕ್ಷುದ್ರಂಗೆ ಸಕಲ ಸುಜನೋ-।
ಪದ್ರವ ರೂಪಂಗೆ ಪರರ ಕಾವ್ಯಾರ್ಥಮುಮುಂ॥
ಛಿದ್ರಿಸುವಂಗತಿ ಶಬ್ದ ವ ।
ಲ್ಭ್ರಂಗಕ್ಕುಮೆ ನವೀನ ಕಾವ್ಯಾರಂಭಂ"॥

—ಶ್ರೀಹರೀಶ್ವರ

"ಪರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ।
ಪರರ ಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ॥
ಪರರ ದೈವನ ನುತಿಸದಿರ್ಪ ಭಾಷೆ.....
ಇದು ರಾಘವಾಂಕಗೆ ಸಂದದು"॥

—ಶ್ರೀರಾಘವಾಂಕ

ಒಟ್ಟಿನಲ್ಲಿ ವೀರಶೈವ ಕವಿಗಳು ತಮ್ಮ ಕೃತಿಗಳನ್ನೆಲ್ಲ ವಿಶೇಷವಾಗಿ ಕನ್ನಡ ಛಂದಸ್ಸುಗಳಲ್ಲಿಯೇ ಬರೆದಿದ್ದಾರೆ. ಒಬ್ಬೊಬ್ಬರು ಒಂದೊಂದರಲ್ಲಿ ಒಂದೊಂದು ವೈಶಿಷ್ಟ್ಯವನ್ನು ಉಳಿಸಿಕೊಂಡಿದ್ದಾರೆ. ನಾವೀನ್ಯದ ಸ್ವಾತಂತ್ರ್ಯದ ಧ್ವಜವನ್ನು ಎತ್ತಿಹಿಡಿದಿದ್ದಾರೆ. ಅಂತಹ ಅದ್ವಿತೀಯ ಕವಿ ಸಂಕುಳಕ್ಕೆ ಪೊಡವಮಟ್ಟು ಲೇಖನಿಯನ್ನು ಕೆಳಗಿಡುವೆನು.

ವರದಾನಿಗುಡ್ಡವ್ಮೆಯ ಚರಿತ್ರೆ.

ವರದಾನಿಗುಡ್ಡವ್ಮೆಯ ಚರಿತ್ರೆಯು ಶಿವಾನುಭವ ಪತ್ರಿಕೆಯ ೧೯೨೫ ಸಂಪುಟ ೩ನೇ ಸಂಚಿಕೆಯಲ್ಲಿ ೧೯೩೬ನೇ ಇಸವಿಯಲ್ಲಿ ಮೊದಲು ಪ್ರಕಟಿಸಲ್ಪಟ್ಟಿತು. ಆ ಚರಿತ್ರೆಯೊಡನೆ ವೀರಶೈವ ಮಹಾ ಕವಿಯೂ ವಿಜಯನಗರದ ಅರಸುಗಳ ಸೇನಾಪತಿಯೂ ಆದ ಲಕ್ಕಣ್ಣದಂಡೇಶನ ಕಾವ್ಯವೂ ಪ್ರಸಿದ್ಧಿಸಲ್ಪಟ್ಟಿತು. ಈ ಕಾವ್ಯವು ವಾರ್ಧಿಕ ಷಟ್‌ಪದಿಯಾಗಿದೆ. ಈ ಚರಿತ್ರೆಯಲ್ಲಿ ವರದಾನಿಗುಡ್ಡವ್ಮೆಯು ಅಲಂಪುರವೆಂಬ ಗ್ರಾಮದಲ್ಲಿ ಕಿತ್ತುಹಾಕಲ್ಪಟ್ಟ ಬ್ರಹ್ಮೇಶ್ವರ ಲಿಂಗವನ್ನು ಪುನಃ ಸ್ಥಾಪಿಸಿದ್ದರ ಕಥೆಯು ಈ ಕವಿಯಿಂದ ವರ್ಣಿಸಲ್ಪಟ್ಟಿದೆ. ಆದರೆ ಅವನು ರಚಿಸಿದ ಈ ಕೃತಿಯಲ್ಲಿ ಈ ಶಿವಶರಣೆಯ ಚರಿತ್ರಾಂಶಗಳು ಹೆಚ್ಚಿಗೆ ದೊರೆಯುವದಿಲ್ಲ. ಆಕೆಯು ಶೂರ ಸ್ತ್ರೀಯಳೂ ಶಿವಶರಣೆಯೂ ಆಗಿದ್ದಳೆಂದು ಮಾತ್ರ ಈ ಕಾವ್ಯದಿಂದ ತಿಳಿದುಬರುತ್ತದೆ.

ಆದರೆ ನಮಗೆ ಈಚೆಗೆ ದೊರೆದ ಒಂದು ಗ್ರಂಥದಲ್ಲಿ ಈಕೆಯ ಅನೇಕ ವಿಷಯಗಳು ನಮಗೆ ಗೊತ್ತಾಗುತ್ತಿದ್ದು ಅವುಗಳನ್ನು ನಾವು ಈ ಲೇಖದಲ್ಲಿ ವಿವರಿಸುತ್ತೇವೆ. ಈ ಕಾವ್ಯವನ್ನು ರಚಿಸಿದವನು ವಿಜಾಪುರ ಪಟ್ಟಣದ ಉತ್ತರದಲ್ಲಿ ೨೦ ಮೈಲು ದೂರವಾಗಿರುವ ಹೊರ್ತಿ ಎಂಬ ಗ್ರಾಮದವನು. ಅವನು ತನ್ನ ಹೆಸರನ್ನು ಹೇಳುವಲ್ಲಿ "ಶ್ರೀಗಿರಿಯ ಸಿದ್ಧಾಪುರ। ಹೋರುತಿ ವಾಸಸಿದ್ದೇಶನು। ಶಿವ ಚನ್ನಬಸವನ ಹೃದಯ ಕಮಲದೊಳ್ ನೀಸಿರ್ದು ನುಡಿಸಿದರೆ। ನುಡಿದೆನಲ್ಲದೆ ಲಿಂಗಾಂಗಸಮರಸದ ಪದಗಳನು॥ ಎಂದು ತನ್ನ ಹೆಸರನ್ನು ಹೇಳಿಕೊಂಡಿರುವನು. ಈ ಗ್ರಂಥದಲ್ಲಿ ಅಲ್ಲಲ್ಲಿ ಗದ್ಯಗಳೂ ಪದ್ಯಗಳೂ ಇವೆ. ಅದು ಉತ್ತಮ ತರಗತಿಯ ಗ್ರಂಥವಲ್ಲದಿದ್ದರೂ ಅದರಲ್ಲಿ ಈ ಪ್ರಸಿದ್ಧ ಶಿವಶರಣೆಯ ಚರಿತ್ರೆಯಲ್ಲಿ ಈವರೆಗೆ ಗೊತ್ತಿಲ್ಲದ ಅನೇಕ ಸಂಗತಿಗಳು ಬಂದಿವೆ. ಲಕ್ಕಣ್ಣದಂಡೇಶನು ವಿಜಯನಗರದಲ್ಲಿದ್ದುದರಿಂದ ಮುಸಲ್ಮಾನರ ಆಳಿಕೆಗೊಳಪಟ್ಟ ಪ್ರದೇಶಗಳಲ್ಲಿ ಬಂದು ಇಲ್ಲಿದ್ದ ಗುಡ್ಡಾಪುರ ಮತ್ತು ಅವರ ಸನಿಯದ ಗ್ರಾಮಗಳಲ್ಲಿ ಗೊತ್ತಾಗಬಹುದಾದ ವರದಾನಿಗುಡ್ಡವ್ಮೆಯ ಚರಿತ್ರೆಯಲ್ಲಿಯ ಅಂಶಗಳು ಅವನಿಗೆ ತಿಳಿಯದೆ ಇದ್ದಿರಬಹುದು. ಆದುದರಿಂದ ಅವನ ವರ್ಣ

ನೆಗಳಲ್ಲಿ ಗುಡ್ಡವ್ಮೆಯ ಚರಿತ್ರೆಯಲ್ಲಿಯ ಅನೇಕ ವಿಷಯಗಳು ಬಾರದೆ ಇದ್ದರೆ, ಅದರಲ್ಲಿ ಏನೂ ಆಶ್ಚರ್ಯವಿಲ್ಲ.

ತರ್ದವಾಡಿಯ ನಾಡು.

ವರದಾನಿಗುಡ್ಡವ್ಮೆಯು ಬಸವೇಶ್ವರನ ಕಾಲದಲ್ಲಿ ಇದ್ದಿರಬೇಕೆಂದು ನಾವು ಮೊದಲು ಊಹಿಸಿದ್ದು ಈ ಚರಿತ್ರೆಯಿಂದ ಹೆಚ್ಚಿಗೆ ದೃಢಪಡುತ್ತದೆ. ಆಕೆಯ ಪವಿತ್ರ ಸ್ಥಾನವು ವಿಜಾಪುರ ಪಟ್ಟಣದ ನಾಯವ್ಯಕ್ಕೆ ೩೦ ಮೈಲುಗಳ ಮೇಲಿರುವ ಗುಡ್ಡಾಪುರವಿರುತ್ತದೆ. ಈ ಭಾಗವು ಈಗ ಅಪ್ರಸಿದ್ಧವಾಗಿದ್ದರೂ ಬಸವೇಶ್ವರನ ಕಾಲದಲ್ಲಿ ಬಹು ಮುಂದುವಂದ ನಾಡಾಗಿತ್ತು. ಈ ಭಾಗದಲ್ಲಿ ಅನೇಕ ಜೈನ, ವೀರಶೈವ, ಬ್ರಾಹ್ಮಣ ಕವಿಗಳು ಮೊದಲಿನಿಂದಲೂ ಆಗುತ್ತ ಬಂದಿದ್ದಾರೆ. ಈ ಭಾಗದ ರಾಜಧಾನಿಯು ಭೀಮಾತೀರದಲ್ಲಿದ್ದ ತರ್ದೇವಾಡಿಯು. ಇಲ್ಲಿ ಬಿಜ್ಜಳನ ತಂದೆಯಾದ ಪೇರ್ಮಾಡಿರಾಯನು ರಾಜ್ಯವಾಳುತ್ತಿದ್ದನು. ರೇವಣಸಿದ್ಧೇಶ್ವರನು ಬಹು ದಿವಸ ವಾಸಮಾಡಿದ ಮುಂಗಳವಾಡವು ಇಲ್ಲಿಂದ ೫೫ ಮೈಲುಗಳ ಮೇಲೆ ಇದೆ. ವಚನಕಾರನೂ ಮಹಾ ಶಿವಶರಣನೂ ಆದ ಹಾವಿನಹಾಳ ಕಲ್ಲಯ್ಯನ ಗ್ರಾಮವು ಇಲ್ಲಿಂದ ೨೪ ಮೈಲು ದೂರವಿದೆ. ಸಿದ್ಧರಾಮನ ಸೊನ್ನಲಿಗೆಯೂ ಅಮುಗಿದೇವನ ಪುಳುಜೆ ಗ್ರಾಮವೂ ಈ ಪ್ರದೇಶದಲ್ಲಿಯೇ ನೆಲಿಸಿರುತ್ತವೆ. ಆದ್ದರಿಂದ ವರದಾನಿಗುಡ್ಡವ್ಮೆಯು ಪ್ರಸಿದ್ಧಿಗೆ ಬಂದ ಈ ಭಾಗವು ಬಸವೇಶ್ವರನ ಕಾಲದಲ್ಲಿ ಕ್ರಾಂತಿಯನ್ನೆಸಗಿದ ಮಹಾಪುರುಷರ ಆವಾಸ ಭೂಮಿಯಾಗಿತ್ತೆಂದು ಹೇಳಿದರೆ ಅದು ಪ್ರತ್ಯವಾಯವೂ ಇಲ್ಲ.

ಲಕ್ಕಣ್ಣದಂಡೇಶನು ತನ್ನ ಚರಿತ್ರೆಯಲ್ಲಿ ಗುಡ್ಡವ್ಮೆಯು ಪಾರ್ವತಿಯ ಅವತಾರವೆಂದು ಹೇಳಿ ಆಕೆಯು ಗುಡ್ಡಾಪುರದಲ್ಲಿದ್ದ ಸೋಮೇಶ್ವರಲಿಂಗ ಭಕ್ತರ ಗರ್ಭದಲ್ಲಿ ಜನಿಸಿದಳೆಂದು ಹೇಳಿರುವನು. ಆದರೆ ಆಕೆಯ ತಾಯಿ ತಂದೆಗಳ ಹೆಸರನ್ನು ಅವನು ಹೇಳಿಲ್ಲ. ಆದರೆ ಈ ಎಲ್ಲ ವಿಷಯಗಳು ಈ ಚರಿತ್ರೆಯಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿವೆ. ಮತ್ತು ಅವು ಸ್ಥಾನಿಕ ದಂತಕಥೆಗಳಿಂದಲೂ ಪುರಾತನ ಕುರುಹುಗಳಿಂದಲೂ ಬಲಪಡುತ್ತವೆ.

ಗುಡ್ಡವ್ವೆಯ ಜನ್ಮ ಮತ್ತು ಬಾಲ್ಯ.

ಗುಡ್ಡವ್ವೆಯ ತಾಯಿಯ ಹೆಸರು ಶಿರಸವ್ವ ಮತ್ತು ತಂದೆಯ ಹೆಸರು ಅನಂತರಾಯ. ಅವರು ಪಾಂಚಾಳರ ಕಾಯಕವನ್ನು ಮಾಡುತ್ತ ಉಮರಾಣಿ ಎಂಬ ಗ್ರಾಮದಲ್ಲಿ ಇರುತ್ತಿದ್ದರು. ಉಮರಾಣಿ ಗ್ರಾಮವು ವಿಜಾಪುರ ಜಿಲ್ಲಾ ಇಂಡೀ ತಾಲೂಕಿನಲ್ಲಿ ಭೀಮಾ ತೀರದ ಒಂದು ಗ್ರಾಮವಾಗಿದೆ. ಹಾವಿನಹಾಳ ಗ್ರಾಮದ ಕಲ್ಲಯ್ಯನೂ ಕೂಡ ಇವರಂತೆಯೇ ಅಕ್ಕಸಾಲಿಗನಾಗಿದ್ದನು. ಉಭಯ ದಂಪತಿಗಳು ಶಿವಭಕ್ತಿಯುಳ್ಳವರಾಗಿ ಅಲ್ಲಿ ವಾಸಿಸುತ್ತಿದ್ದರು. ಅವರಿಗೆ ಮಕ್ಕಳಿಲ್ಲದ್ದರಿಂದ ಅವರು ಆ ಗ್ರಾಮದಲ್ಲಿಯ ವೀರ ಮಲ್ಲಯ್ಯನ ದೇವಾಲಯಕ್ಕೆ ಹೋಗಿ ನೋಂಪಿಯನ್ನು ಮಾಡುತ್ತಲಿದ್ದರು. ಮುಂದೆ ಪರಮಾತ್ಮನು ಅವರಿಗೆ ಮೆಚ್ಚಿ ಶಿರಸವ್ವನ ಸ್ವಪ್ನದಲ್ಲಿ ಬಂದು ನಿನಗೆ ಒಬ್ಬ ಪ್ರಸಿದ್ಧಳಾದ ಪುತ್ರಿಯು ಹುಟ್ಟುವಳು ಎಂದು ಹೇಳಿ ಬಯಲಾದನು.

ಮುಂದೆ ಶಿರಸವ್ವನು ಗರ್ಭವನ್ನು ತಾಳಿ ೯ ತಿಂಗಳಾದ ಮೇಲೆ ಒಂದು ದಿವಸ ಸಿದ್ರೆಗೈದಿರಲು, ೭ ವರ್ಷಗಳ ಬಾಲವೇಷ ತಾಳಿದ ಶಿಸುವು ಆಕೆಯ ಕರ್ಣದಿಂದ ಉದಯವಾಗುವದು. ಆಗ ಪಟ್ಟಣಿಗರು ಇದು ಜೋದ್ಯವೆಂದು ವಿಸ್ಮಯಬಟ್ಟು ಆ ಶಿಸುವಿಗೆ ಲಿಂಗಮ್ಮನೆಂದು ನಾಮಕರಣಮಾಡಿದರು. ಶಿಸುವು ಅಯೋನಿಜವೆಂದು ಹೇಳಲು ಹೀಗೆ ಈ ಕಥೆಯನ್ನು ವಿವರಿಸಿರುವರು ಸಹಜವಾಗಿದೆ. ಮತ್ತು ವರವಾನಿಗುಡ್ಡವ್ವೆಯ ಮೊದಲಿನ ಹೆಸರು ಲಿಂಗಮ್ಮನೆಂದಿತ್ತೆಂಬದನ್ನೂ ನಾವು ಲಕ್ಷಿಸತಕ್ಕದ್ದು.

ಕಲ್ಯಾಣಕ್ಕೆ ಆಗಮನವಾಡಿದ್ದು.

ಹೀಗೆ ಲಿಂಗಮ್ಮನು ಉಮರಾಣಿ ಗ್ರಾಮದಲ್ಲಿ ಇರುತ್ತಿರಲು ಇತ್ತ ಬಸವೇಶ್ವರನು ಕಲ್ಯಾಣ ಪಟ್ಟಣದಲ್ಲಿ ಮಂತ್ರಿಪದವನ್ನು ವಹಿಸಿ ಶಿವಾನುಭವದ ಮಾರ್ಗವನ್ನು ಎತ್ತಲೂ ಪಸರಿಸುವ ಕಾರ್ಯದಲ್ಲಿ ತೊಡಗಿದ್ದನು. ಇದನ್ನು ತಿಳಿದು ಎಲ್ಲ ಪ್ರಾಂತಗಳಿಂದಲೂ ಬಹು ಜನ ಶಿವಶರಣರು ಅವನಲ್ಲಿಗೆ ಬಂದು ಕಲ್ಯಾಣದಲ್ಲಿ ನಿಂತು ಶಿವಾನುಭವ ಗೋಷ್ಠಿಯ ಮಗ್ನರಾಗಿರುತ್ತಿದ್ದರೆಂಬದು ಪ್ರಸಿದ್ಧವೇ ಇದೆ. ಇದು ಲಿಂಗಮ್ಮನಿಗೆ ತಿಳಿದ ಬಳಿಕ ಆಕೆಯು ತನ್ನ ತಾಯಿತಂದೆಗಳಿಗೆ ಏನೂ

ತಿಳಿಸದೆ ತನ್ನ ಗ್ರಾಮದಿಂದ ಹೊರಟು ಕಲ್ಯಾಣಕ್ಕೆ ಬಂದುಬಿಟ್ಟಳು. ಕವಿಯು ಈ ವಿಷಯವನ್ನು ಕುರಿತು ಮಾಡಿದ ವರ್ಣನೆ ಏನಂದರೆ:—

"ಉಮರಾಣಿ ಗ್ರಾಮ ಮಧ್ಯದಿ ಪಾಂಚಾಳ ಯುಕ್ತ ಶಿರಸವ್ವನ ಮಗಳಾದ ಶಿವಶರಣೆ ಲಿಂಗವ್ವ ಮಹದೇವಿ ಜನಸಮೂಹ ನೇತ್ರಕ್ಕೆ ಮೇಘಮಿಂಚಿನಂತೆ ಹೊಳಪಿನಲಿ ಗುಪ್ತವಾದಳು. ಮಾತಾಪಿತೃಗಳಿಗೆ ಪೈಲಾಗೆ ದುಃಖ ಶರಧಿಯೊಳು ಮುಳುಗಿ ಮರುಳರಂತಿ ದಿವಸ ಕಳೆವರು. ಶರಣಿ ಲಿಂಗವ್ವ ಕಲ್ಯಾಣ ಬಸವರಾಜನ ದರ್ಶನಕ್ಕೆ ಪ್ರಯಾಣ ಒದಗುವಳು. ಮಾತಾಪಿತರ ದುಃಖವ ಆತ್ಮನಲ್ಲಿ ತಿಳಿದು ಅನಂತರಾಯನ ಸ್ವಪ್ನದಲಿ ಬಂದು ಮೊದಲಿನ ಹೊಳಪ ತೋರಿಸಿ ನೀವು ಪುಣ್ಯಶಾಲಿಗಳು, ನನ್ನ ವಯಸ್ಸನ್ನು ಆದಂತೆ ರೂಪು ಶಿಲಾಗೊಂಬೆಯ ರಚಿಸು, ನಾನು ಕಲ್ಯಾಣ ಗಣಾಧೀಶ್ವರರು ಪುರಾತನರು ಶರಣಿ ಶರಣರು ಪಟ್ಟಣ ಸಮೂಹಕ್ಕೆ ಅನ್ನಪ್ರಸಾದ ತೃಪ್ತಿಬಡಿಸಿ ನೀಲಮ್ಮ ಬಸವಣ್ಣನ ದರ್ಶನ ತೆಗೆದುಕೊಂಡು ಮುಂದಿನ ಕಾಲಜ್ಞಾನ ಸೂಚನಾರ್ಥ ಉಪದೇಶಹೇಳಿ ಹೊರಟು, ಒಂದು ವತ್ಸರಕೆ ಬರುವೆನು. ಶಿಲಾಮೂರ್ತಿಯ ಜೋಪಾನ ಮಾಡಿರಿ. ದುಃಖವೇತಕ್ಕೆ? ವಚನ ಹಾಡುವದು ಆತ್ಮನಲಿ ಸೇರಿ ಎಚ್ಚರಾಗಿ, ಎಂದು ಬಯಲಾದಳು ಮಹಾದೇವಿ" ಎಂದು ವರ್ಣಿಸಿರುವನು.

ಮುಂದೆ ಕವಿಯು ಕಲ್ಯಾಣ ಪಟ್ಟಣದ ವರ್ಣನೆಯನ್ನು ಮಾಡಿರುವನು. ಅಲ್ಲಿರುವ ಉದ್ಯಾನವನಗಳು, ಪಕ್ಷಿಗಳು. ಕೊಳಗಳು, ಝೇಂಕರಿಸುವ ತುಂಬಿಗಳು, ಸುಂದರವಾದ ಆರಮನೆಗಳು, ಅಲ್ಲಿರುವ ಶಿವಭಕ್ತರ ಶಿವಪೂಜಾಸಂಭ್ರಮಗಳು, ಮುಂತಾದವುಗಳನ್ನು ಲಿಂಗಮ್ಮನು ನೋಡುತ್ತ ಮಹಾದೇವಿ ಎಂಬ ಒಬ್ಬ ಅತ್ಯಂತ ದರಿದ್ರಳಾದ ವನಿತೆಯಲ್ಲಿ ಇಂಹತ್ತುವಳು. ಲಿಂಗಮ್ಮನ ಈ ಸನ್ನಿಧಿಯಿಂದ ಆಕೆಯು ಅತ್ಯಂತ ಐಶ್ವರ್ಯವನ್ನು ಪಡೆಯುವಳು. ಆಗ ಆ ಬಡವಿಯು ಲಿಂಗಮ್ಮನ "ಪಿಡಿದು ಚರಣವ ಬಿಡಳು ಹೆಸರನು ನುಡಿದು ಹೇಳವ್ವ ನಿನ್ನ ಹೊತ್ತಿಗೆ. ಹೊಡವಿಬೈಸಿದ ಆದಿಶರಣಮ್ಮ ತಾನೆಂದಳು. ಬಡವಿ ಎಂಬುವ ಹೆಸರಿದು ಬಂದೆನು. ಬಿಡದೆ ಪೂಜೆ ಮಾಳ್ಪುದು. ಕಲ್ಯಾಣ ಬಸವನ ದರ್ಶನಕೆ ಹೋಗಬೇಕೆಂದು ಕಳುಹಿಸಿಕೊಂಡು ನಡೆದು ಪರಾನ ದರಿ ಲಿಂಗಮ್ಮ ಶರಣೆ ಬರುವ ಹಾದಿಯೊಳು ಮತ್ತೊಂದು ರೂಪವ ಧರಿಸಿ ನಡೆಗೊಂಡು" ಎಂದು ಕವಿಯು ಇಲ್ಲಿ ವರ್ಣಿಸಿರುವನು.

ಶಿವಾನುಭವಮಂಟಪದಲ್ಲಿ ಪ್ರವೇಶ.

ತರುವಾಯ ಲಿಂಗಮ್ಮನು ಕಲ್ಯಾಣ ಪಟ್ಟಣದಲ್ಲಿ ಶಿವಾನುಭವ ಮಂಟಪದಲ್ಲಿ ಸೇರಿಕೊಂಡು ಅಲ್ಲಿ ನಡೆಯುತ್ತಿದ್ದ ತತ್ವಗೋಷ್ಠಿಗಳನ್ನು ಕೇಳುತ್ತ ಕಾಲಕಳೆಯುತ್ತಿದ್ದಳು. ಈ ವಿಷಯವನ್ನು ಕುರಿತು ಈ ಗ್ರಂಥದಿಂದ ತಿಳಿಯುವದು ಏನೆಂದರೆ ಲಿಂಗಮ್ಮನು ಅಂಗದಲ್ಲಿ ರುದ್ರಾಕ್ಷಿ ಧಾರಣ ಮಾಡಿ ಬಸವರಾಜನ ವನಕ್ಕೆ ದಯಮಾಡಿಸಿ ಪಾದದಲ್ಲಿ ಹಾವುಗೆಯ ಧರಿಸಿ ಲಿಂಗಾರ್ಚನೆಯ ಜಪದಲಿ ಯೋಗವನ್ನು ಹೊಂದುವಳು. ಹೀಗೆ ಕಾಲಕಳೆಯುತ್ತಿರಲು ಇದು ಬಸವೇಶ್ವರನಿಗೆ ತಿಳಿದು ಅವನು ಅವಳಿದ್ದಲ್ಲಿಗೆ ಹೋಗಿ ಕಾಣುವನು. ಆಗ ಆಕೆಯು ಅವನಿಗೆ ಪಾದೋದಕ, ಪ್ರಸಾದ ಮುಂತಾದ ವಿಷಯಗಳನ್ನು ಅರುಹುವಳು. ಶಿವಯೋಗದ ಮರ್ಮವನ್ನು ತಿಳಿಸುವಳು. ಇವುಗಳನ್ನೆಲ್ಲ ಕವಿಯು ಇಲ್ಲಿ ವರ್ಣಿಸಿದ್ದಾನೆ. ಹೀಗೆ ಲಿಂಗಮ್ಮನು ಪ್ರಸಾದವನ್ನು ಸ್ವೀಕರಿಸಿ ತನ್ನನ್ನು ತೃಪ್ತಿಮಾಡಿಕೊಳ್ಳುವದಲ್ಲದೆ ಕಲ್ಯಾಣ ಪಟ್ಟಣದಲ್ಲಿಯ ಎಲ್ಲ ಗಣಂಗಳನ್ನೂ ಪ್ರಸಾದದ ಮೂಲಕ ತೃಪ್ತಿಪಡಿಸುವಳು. ಆಗ ಕಲ್ಯಾಣ ಪಟ್ಟಣದಲ್ಲಿರುವ ಎಲ್ಲರೂ ಚಕಿತರಾದರು. ಈ ವಿಷಯವನ್ನು ಕವಿಯು ವರ್ಣಿಸಿರುವದು ಹೇಗೆಂದರೆ:—

"ಬಸವೇಶ್ವರ ಸೋಜಿಗವಾಗಿ ಅಂತರಾತ್ಮನ ಕಂಡು ನೋಡಲಾಗಿ ಮಹಾ ಶರಣೆ ಮಹತ್ವದಿಂದೆ ಗಣಂಗಳ ತೃಪ್ತಿಮಾಡಿರುವಳು ಎಂದು ಬಸವಣ್ಣ ನೀಲಲೋಚನೆ ಸಾಷ್ಟಾಂಗವೆರಗಿ, ನೀವು ಝೇಂಕಾರ ಶರಣನ ನೆನವಿನಿಂದ ಹುಟ್ಟಿದ ತಾಯಿ ಮಹಾಶರಣೆ ಲಿಂಗಮ್ಮನವರು ನಿಮ್ಮ ಧರ್ಮ ಮಹತ್ವದಿಂದೆ ಸರ್ವ ಗಣಾಧೀಶ್ವರರಿಗೆ ತೃಪ್ತಿಬಡಿಸಿದಿರಿ. ಇಂತಹ ಧರ್ಮ ಯಾರಿಂದ ಆಗದು ಎಂದು ದಾನಮ್ಮ ಶರಣೆ ಎಂಬ ನಾಮಕರಣಹೊಂದಿರೆಂದಾ ಬಸವಣ್ಣಾ."

ಆ ಮೇಲೆ ಬಸವನು ಆಕೆಯನ್ನು ಅನುಭವಮಂಟಪಕ್ಕೆ ಕರೆದೊಯ್ದು, ನೆರೆದ ಶರಣಜನರಲ್ಲಿ ಬಹುಮಾನಿಸುವನು ಮತ್ತು ತನ್ನ ಗದ್ದುಗೆಯ ಮೇಲೆ ಕುಳ್ಳಿರಿಸುವನು. ಇದರಿಂದ ದಾನಮ್ಮನೆಂಬ ಹೆಸರು ಬಸವೇಶ್ವರನಿಟ್ಟದ್ದಾಗಿದೆಂದು ತಿಳಿದುಬರುತ್ತದೆ.

ಕಲ್ಯಾಣದಲ್ಲಿಯ ವಾಸ.

ಹೀಗೆ ಲಿಂಗಮ್ಮನು ಕಲ್ಯಾಣಪಟ್ಟಣದಲ್ಲಿ ತನ್ನ ದಾನನೂಡುವ ಬಲದಿಂದ ದಾನಮ್ಮನೆಂಬ ಹೆಸರನ್ನು ಬಸವೇಶ್ವರನಿಂದ ಪಡೆದು ಅಲ್ಲಿಯೇ ಕಾಲಕಳೆಯ ಹತ್ತಿದಳು. ಆ ಕಾಲದಲ್ಲಿ ಆಕೆಯು ಅಲ್ಲಿಯ ಜನರ ಅನೇಕ ಕಷ್ಟಗಳನ್ನು ನಿವಾರಣೆಮಾಡುತ್ತ ದಾನಧರ್ಮಮಾಡುತ್ತ ಶಿವಗೋಷ್ಠಿಯಲ್ಲಿ ಇರುತ್ತಿದ್ದಳೆಂದು ತೋರುತ್ತದೆ. ಈ ಗ್ರಂಥದಲ್ಲಿ ಹೇಳಿದುದೇನೆಂದರೆ ಒಂದು ದಿನ ಗೌರಮ್ಮನೆಂಬ ಬಾಲೆಯು ಹುಚ್ಚಿಯಂತೆ ತಿರುಗುತ್ತಿದ್ದುದನ್ನು ದಾನಮ್ಮನು ನೋಡಿದಳು. ಆಗ ದಾನಮ್ಮನು "ಆಕೆಯ ಕರವ ಹಿಡಿದು ಗೃಹದೊಳಗೆ ಕರೆದೊಯ್ದು ಗದ್ದುಗೆಯ ಮೇಲೆ ಮೂರ್ತವ ಮಾಡಿಸಲು" ಗೌರಮ್ಮನು "ನನ್ನ ಪುರುಷ ಹೇಳದೆಹೋಗಿ ಮೂರು ವರ್ಷವಾಯಿತು, ಚಿಂತೆ ಮಾಡುತ್ತಿರುವೆನು." ಎಂದು ಹೇಳಲು ದಾನಮ್ಮನು "ನಿನ್ನ ಚಿಂತೆಗೆ ನನ್ನ ಆತ್ಮದಲ್ಲಿ ಕಳವಳವಾಗಿ ನೋಡಿದೆ, ಒಂದು ಗಾವುದ ಅಂತರ ೫೫ ವರುಷ ಪುರುಷನು ಕೆಂಜಿಗನು ಬರುವ ಪಾದಿಯೊಳು ನೋಡಿದೆ" ಎಂದು ಹೇಳಿದ ಬಳಿಕ ಒಂದು ಗಳಿಗೆಯಲ್ಲಿ ಅವನು ಮನೆಗೆ ಬಂದನು. ಆಗ ಪತಿಯ ಕಂಡು "ಹಿರ್ರನೆ ಹಿಗ್ಗಿದಳು. ಪತಿಯ ಪಾದದ ಮೇಲೆ ಹೊರಳಿ ಕರವಿಡಿದು ಕರಕೊಂಡು ಗೃಹದೊಳಗೆ ಬಂದು ತಾವು ಐಕ್ಯವಾಗಿ ಲಿಂಗ ತೋರದೇ ಇರುವದು ಲಿಂಗಾರ್ಚನೆಯ ಮಾಡಿಸಿ ಪ್ರಸಾದಮಾಡಿ ಉಣಿಸಲಿಲ್ಲ ಎಂದು ನೇತ್ರದಿಂದ ಶರಧಿ ಸುರಿಸುತಲಿ ಬಾಲೆ ದುಃಖ ಭಾವದಿ ಇರಲು ಮಗಳ ಸ್ವಪ್ನದಲಿ ಹೋಗಿ ನಿತ್ಯ ಲಿಂಗ ಮಜ್ಜನ ಮಾಡಿ ಪ್ರಸಾದವ ತಂದು ಎಡೆನಾಡಿದರೆ ನಮ್ಮ ಹಸ್ತದಿಂದೆ ನಾವೇ ಸ್ವೀಕಾರ ಮಾಡಿಹೆವು ಎಂದು ಬಯಲಾದಳು"

ಇದರ ಮೇಲಿಂದ ವರದಾನಿಗುಡ್ಡಮ್ಮೆಯು ಕಲ್ಯಾಣ ಪಟ್ಟಣದಲ್ಲಿ ಯಾವ ರೀತಿಯಿಂದ ಕಾಲಕಳೆಯುತ್ತಿದ್ದಳೆಂಬದನ್ನು ಊಹಿಸಬಹುದಾಗಿದೆ.

ಹೀಗೆ ಕೆಲವು ಕಾಲ ಸಂದಿ ಹೋದ ಬಳಿಕ ಕಲ್ಯಾಣಪಟ್ಟಣದಲ್ಲಿ ಬಿಜ್ಜಳನೃಪನ ಕೂಡ ಅನಾಹುತಗಳು ಸಂಭವಿಸಲು, ಶಿವಶರಣರು ರಾಜಧಾನಿಯನ್ನು ಬಿಟ್ಟು ಚದರಿ ಹೋದರು. ಬಸವನು ಕೂಡಲ

ಸಂಗಮನಾಥನಲ್ಲಿಗೆ ತೆರಳಿದನು. ಅವನ ಪೆಂಬತ್ತಿ ಅವನ ಪತ್ನಿಯಾದ ನೀಲಲೋಚನೆಯೂ ಸಂಗಮ ಗ್ರಾಮದ ಸಮೀಪದಲ್ಲಿರುವ ತಂಗಡಿಗೆ ಗ್ರಾಮದಲ್ಲಿಗೆ ಹೋಗಿ ಐಕ್ಯಹೊಂದಿದಳು. ಈ ವಿಷಯಗಳು ಇಲ್ಲಿ ಹೇಳಲ್ಪಟ್ಟಿವೆ. ಈ ಭಯಾನಕ ಸ್ಥಿತಿಯಲ್ಲಿ ಬಸವೇಶ್ವರನ ಕಾಲದಲ್ಲಿ ಕಲ್ಯಾಣ ಪಟ್ಟಣದಲ್ಲಿ ವಾಸವಾಗಿದ್ದ ಶಿವಶರಣರು ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದ ಹಾಗೆ ತೋರುತ್ತದೆ. ಈ ಸಮಯದಲ್ಲಿ ವರದಾನಿಗುಡ್ಡಮ್ಮೆಯೂ ತನ್ನ ಪೂರ್ವದ ಗ್ರಾಮವಾದ ಉಮರಾಣಿಯಿಂದ ಒಂದುವರೆ ಮೈಲು ದೂರವಾಗಿರುವ ಸಂಕ ಎಂಬ ತೀರ್ಥಕ್ಕೆ ಬಂದಳೆಂದು ಈ ಗ್ರಂಥದಲ್ಲಿ ಹೇಳಲ್ಪಟ್ಟಿದೆ.

ಗುಡ್ಡಮ್ಮೆಯ ವಿವಾಹ.

ಈ ಸಂಕ ತೀರ್ಥವು ಸಂಗಮನಾಥನ ಸ್ಥಾನವಾಗಿದ್ದು ಅವನಿಂದ ದಾನಮ್ಮನು ಲಗ್ನವಾದದ್ದು ಇಲ್ಲಿ ಹೇಳಲ್ಪಟ್ಟಿದೆ. ಈ ವರ್ಣನೆಯು ವಿಸ್ತಾರವಾಗಿ ಇಲ್ಲಿ ಇರುತ್ತದೆ. ಇದರ ಮೇಲಿಂದ ವರದಾನಿಗುಡ್ಡಮ್ಮೆಯು ಕಲ್ಯಾಣ ಪಟ್ಟಣದಲ್ಲಿ ಕ್ರಾಂತಿಯುಂಟಾದ ಬಳಿಕ ತನ್ನ ಅವಾಸ ಸ್ಥಾನಕ್ಕೆ ಬಂದು ಗೃಹಸ್ಥಾಶ್ರಮಿಯಾಗಿ ವರ್ತಿಸಿದಳೆಂದು ತೋರುತ್ತದೆ. ಹೀಗೆ ಅವಳು ಲಗ್ನವಾದ ಬಳಿಕ ಉಭಯ ದಂಪತಿಗಳು ಸಂಕದಿಂದ ಗುಡ್ಡಾಪುರ ಸ್ಥಳದಲ್ಲಿ ಬಂದು ಶಿವಯೋಗದಲ್ಲಿ ಇರತೊಡಗಿದರು. ಇಲ್ಲಿ ದಾನಮ್ಮನು ಹೀಗೆ ಮೂರ್ತವಾಡಿದ್ದರಿಂದ ಈ ಸ್ಥಾನಕ್ಕೆ ಮಹತ್ವ ಬಂದಂತೆ ತೋರುತ್ತದೆ. ಇಲ್ಲಿ ಕೆಲವು ದಿನಗಳಿದ್ದ ಮೇಲೆ ಉಭಯತರು ದೇಶ ಪರ್ಯಟಣ ಮಾಡಲು ಹೊರಟರು. ಅವರು ಹೋದ ಹೋದಲ್ಲೆಲ್ಲ ಜನರನ್ನು ಉದ್ಧಾರಮಾಡುತ್ತ, ಶಿವಶಾಸ್ತ್ರಗಳನ್ನು ಅರುಹುತ್ತ ಸಂಚರಿಸುತ್ತಿದ್ದದ್ದರ ವರ್ಣನೆಗಳು ಇದರಲ್ಲಿ ಬಂದಿರುತ್ತವೆ.

ಬಿಜ್ಜಳನು ಮಡಿದ ತರುವಾಯ ಬಸವೇಶ್ವರನ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿದ್ದವರೆಲ್ಲರೂ ಕಲ್ಯಾಣವನ್ನು ಬಿಟ್ಟು ಶಿವಾನುಭವ ಬೋಧೆ ಮಾಡುತ್ತ ಸಂಚರಿಸಿದ ಹಾಗೆ ತೋರುತ್ತದೆ. ವೀರಶೈವ ಧರ್ಮಪ್ರಸಾರದ ಕಾರ್ಯವು ಬಸವೇಶ್ವರನ ತರುವಾಯ ಮತ್ತಿಷ್ಟು ಹೆಚ್ಚಿಗೆ ಪ್ರಬಲವಾಗಿ ನಾಗಿದ ಹಾಗೆ ಉಲ್ಲೇಖಗಳು ವೀರಶೈವ ಇತಿಹಾಸದಲ್ಲಿ ಬಹಳ ಕಡೆಗೆ ಕಂಡುಬರುತ್ತವೆ. ಹೀಗೆ ಕಾರ್ಯ ಮಾಡಿದವರಲ್ಲಿ ವರದಾನಿ ಗುಡ್ಡಮ್ಮೆಯೂ ಒಬ್ಬಳಾಗಿದ್ದಾಳೆ. ಈ ದೃಷ್ಟಿಯಿಂದ ವಿಚಾರ ಮಾಡಿದಲ್ಲಿ ವರದಾನಿ ಗುಡ್ಡಮ್ಮೆಯ ಕಾರ್ಯ ಮಹತ್ವವು ವಿಶೇಷತರವಾಗಿರುತ್ತದೆ.

ಆದವಾನಿಯಲ್ಲಿಯ ವಾಸ.

ವರದಾನಿಗುಡ್ಡಮ್ಮೆಯೂ ಆಕೆಯ ಪತಿಯೂ ಮೊದಲು ಆದವಾನಿಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿ ನಡೆದ ಸಂಗತಿಗಳನ್ನು ಗ್ರಂಥಕಾರನು ವರ್ಣಿಸಿರುವದು ಹೇಗೆಂದರೆ:— ಆ ಗ್ರಾಮದಲ್ಲಿ "ದೇವಾಂಗ ಶೀಲವಂತರು ಮುತ್ತೈದೇರಿಗೆ ಮಾಡುವ ನೇಮವಿದ್ದು ನಾಲ್ವರು ಸಿಕ್ಕಿದರು. ಹುಡುಕಲಾಗಿ ದಾನಮ್ಮ, ಶರಣ ಸಂಗಮೆನಾಥನು ಸತಿಪುರುಷರು ನಂದೀ ದೇವಾಲಯದಲ್ಲಿ ಮೂರ್ತವ ಮಾಡಿರುವರು, ಆಲ್ಲಿ ದೇವಾಂಗ ನೋರ್ವನು ನೋಡಿ ಸಾಷ್ಟಾಂಗಮಾಡಿ ಕರವ ಹಿಡಿದು ಗೃಹಕ್ಕೆ ಕರೆದೊಯ್ಯೆ, ದೇವಾಂಗ ದಂಪತಿಗಳು ಹಿಗ್ಗಿ ಮುತ್ತೈದೇರಿಗೆ ಫಲ ಬುಡಿತುಂಬಿ ..... ವಿಧಾನಯುಕ್ತವಾಡಿ ಪಂಚಾಮೃತ ಭೋಜನ ಮಾಡಿಸಿ ಕರ್ಪೂರ ವೀಳೆಯವ ಕೊಟ್ಟು ಕಳಿವಿದರು. ದೇವಾಂಗ ಸಂತೋಷಭರಿತನಾಗಿದ್ದು ನರೆಮನೆ ಹೊಕ್ಕು ಅವರ ಮುಂದೆ ಹೇಳಲು ನಮಗೆ ಅವರೇ ಸಿಕ್ಕಿದ್ದರು ಎಂದರು. ಇದರಂತೆ ಸಾವಿರು ಮನೆಗಳಲ್ಲಿ ದಾನಮ್ಮ ಸಂಗಮನಾಥ ಸತಿಪುರುಷರು ತಮ್ಮ ಮಹತ್ವದಿಂದ ಮುತ್ತೈದಿತನ ಭಾಗ ಸಲುಹಿದರು. ಸರ್ವ ಸಾವಿರ ಮನೆಯವರು ನಮ್ಮ ಭಕ್ತರೆಂದೇ ಪಾದಕ್ಕೆರಗಿದರು" ಎಂದು ವರ್ಣಿಸಲ್ಪಟ್ಟಿದೆ. ಇದರ ಮೇಲಿಂದ ಅಲ್ಲಿಯ ದೇವಾಂಗ ಕುಲದವರೆಲ್ಲ ಶಿವಭಕ್ತರಾದರೆಂದು ತೋರುತ್ತದೆ.

ಅಲಂಪುರದಲ್ಲಿ ಯುದ್ಧ.

ವರದಾನಿಗುಡ್ಡಮ್ಮೆಯು ಅತ್ಯಂತ ಶೂರಳಾಗಿದ್ದಳೆಂದು ವೀರಶೈವ ಗ್ರಂಥಗಳಿಂದ ತಿಳಿದುಬರುತ್ತದೆ. ಶಿವಶರಣರಲ್ಲಿ ಅನೇಕರಿಗೆ ಕೆಲವು ಪ್ರಸಂಗಗಳಲ್ಲಿ ಶೂರತನದಿಂದ ಕಾದಾಡುವ ಪ್ರಸಂಗಗಳು ಬಂದಿವೆ. ಆ ಕಾಲಕ್ಕೆ ಅವರು ಹಿಂಜರಿಯದೆ ಕಾಳಗಮಾಡಿ ಜಯಸಿದ್ದುಂಟು, ಮತ್ತು ಕೆಲವು ಸಾರೆ ಮಡಿವದ್ದೂ ಉಂಟು. ಇಂಥ ವೀರರಲ್ಲಿ ವರದಾನಿಗುಡ್ಡಮ್ಮೆಯು ಎಣಿಸಲ್ಪಟ್ಟಿರುವಳು. ಲಕ್ಕಣ್ಣ ದಂಡೇಶನು ಈ ಕಥಾ ಸಂದರ್ಭವನ್ನು ತನ್ನ ಕಾವ್ಯದಲ್ಲಿ ಮನೋಹರವಾಗಿ ವಿಸ್ತರಿ

ಸಿರುವನು. ಅಲಂಪುರವೆಂಬ ಗ್ರಾಮದಲ್ಲಿ ಬ್ರಹ್ಮೇಶ್ವರ ಲಿಂಗವನ್ನು ಭ್ರಷ್ಟಗೊಳಿಸಿ ಹೊಳೆಯಲ್ಲಿ ಪರವಾದಿಗಳು ಹಾಕಿಸಲು, ವರದಾನಿ ಗುಡ್ಡಮ್ಮೆಯು ಸೈನ್ಯದೊಡನೆ ಅಲ್ಲಿಗೆ ಹೋಗಿ ಪೈರಿಗಳನ್ನು ಜಯಿಸಿ ಪುನಃ ದೇವಸ್ಥಾನದಲ್ಲಿ ಲಿಂಗವನ್ನು ನೆಲೆಗೊಳಿಸಿದಳೆಂಬ ಐತಿಹ್ಯವಿದೆ. ಇದು ವರದಾನಿಗುಡ್ಡಮ್ಮೆಯು ಆದವಾನಿಯಲ್ಲಿದ್ದಾಗ ಸಂಭವಿಸಿರಬಹುದೆಂದು ತೋರುತ್ತದೆ. ಲಕ್ಕಣ್ಣ ದಂಡೇಶನು ಅಲಂಪುರವು ಮಲಾಪಹಾರೀ ತೀರದಲ್ಲಿತ್ತೆಂದು ಬರೆಯುತ್ತಾನೆ ಆದರೆ ಈ ಹೆಸರಿನ ಗ್ರಾಮವು ಮಳ್ಳಾಪಹಾರೀ ಅಥವಾ ಭೀಮಾನದೀ ತೀರಗಳಲ್ಲೆಲ್ಲಿಯೂ ಕಂಡುಬರುವದಿಲ್ಲ. ಆದರೆ ಅಲಂಪುರವು ಕರ್ನೂಲ್ ಜಿಲ್ಲೆಯಲ್ಲಿ ಮಾತ್ರ ಇರುತ್ತದೆ. ಅದು ಶ್ರೀಶೈಲ ಪ್ರಾಂತದ ಸಮೀಪವರ್ತಿಯಾದ ಗ್ರಾಮವಾಗಿರುತ್ತದೆ. ಬಸವೇಶ್ವರನ ತರುವಾಯ ಪ್ರಭುದೇವ, ಮಹಾದೇವಿಯಕ್ಕ ಮೊದಲಾದ ಶಿವಶರಣರು ಶ್ರೀಶೈಲಕ್ಕೆ ಹೊರಟುಹೋದರೆಂಬ ಐತಿಹ್ಯವಿದೆ. ಮತ್ತು ಆ ಭಾಗದಲ್ಲಿ ಪರವಾದಿಗಳೊಡನೆ ಹೋರಾಟಗಳಾದ ವಿವರಗಳೂ ಅನೇಕ ವೀರಶೈವ ಗ್ರಂಥಗಳಲ್ಲಿ ಬಂದಿರುತ್ತವೆ ವರದಾನಿಗುಡ್ಡಮ್ಮೆಯೂ ಕೂಡ ಕಲ್ಯಾಣದಲ್ಲಿ ಎದ್ದ ದಂಗೆಗಳ ಮೂಲಕ ತನ್ನ ಗ್ರಾಮಕ್ಕೆ ಹೋಗಿ ಅಲ್ಲಿ ಬಹುದಿವಸವಿರದೆ ಶ್ರೀಶೈಲದ ಕಡೆಗೆ ಹೋದಾಗ ಆಕೆಯು ಅಲ್ಲಿಯ ಅಲಂಪುರದಲ್ಲಿ ದಂಡನ್ನೆತ್ತಿ ಕಾದಾಡುವ ಪ್ರಸಂಗವು ಬಂದಿರಬಹುದು.

ಕಪಿಲಾ ಕಾವೇರಿ ಸಂಗವು ಸ್ಥಳದಲ್ಲಿ ಇದ್ದದ್ದು.

ಮುಂದೆ ಅಲಂಪುರದಲ್ಲಿ ಬ್ರಹ್ಮೇಶ್ವರ ಲಿಂಗವನ್ನು ಆಕೆಯು ಸ್ಥಾಪನೆಯನ್ನು ಮಾಡಿ ಮುಂದೆ ತನ್ನ ಪತಿಯೊಡನೆ ದಕ್ಷಿಣ ದೇಶಕ್ಕೆ ತೆರಳಿದಳು. ಅವಳು ಕಪಿಲಾ ಕಾವೇರೀ ನದಿಗಳ ಸಂಗಮಸ್ಥಾನಕ್ಕೆ ಬಂದು ಅಲ್ಲಿ ಒಂದುವರೆ ವರುಷ ವಾಸವಾಗಿದ್ದಳು. ಅಲ್ಲಿ ತನ್ನ ಮಹತ್ವದ ಬಲದಿಂದ ಅನೇಕ ದಾನ ಧರ್ಮಗಳನ್ನು ಜರಿಗಿಸಿದಳು. ಕುರುಡ, ಕುಂಟ, ಹೆಳವರು ಆಕೆಯ ಸಾನ್ನಿಧ್ಯದಿಂದ ತಮ್ಮ ಕುಂದುಗಳನ್ನು ದೂರುಮಾಡಿಕೊಂಡರು. ಇದರಿಂದ ಮಲಿಯಾಳ, ಕೋಚೀನ ಸೀಮೆಯಲ್ಲಿಂದ ಸಹ ಬಹು ಜನರು ಅಲ್ಲಿಗೆ ಆಗಮಿಸಿ ಪುನೀತರಾದರು. ಆಗ ದೇವಾಲಯದ ಪೂಜಾರಿಯು ಬಿನ್ನವಿಸಿಕೊಳ್ಳಲು ತಮ್ಮ ಕುರುಹನ್ನು ಅಲ್ಲಿ

ಸ್ಥಾಪಿಸುವ ಉದ್ದಿಶ್ಯವಾಗಿ ಆ ಸಂಗಮ ಸ್ಥಳದಲ್ಲಿ ಗುಡ್ಡಮ್ಮೆಯು ಒಂದು ಕೋಟಿ ಲಿಂಗಸ್ಥಾಪನೆ ಮಾಡಿದಳೆಂದೂ ಪೂಜಾರಿಗಳಿಗೂ ಆ ಪ್ರದೇಶದಲ್ಲಿಯ ಜನರಿಗೂ ಶಿವದೀಕ್ಷೆಮಾಡಿದಳೆಂದೂ ಇಲ್ಲಿ ಹೇಳಿದೆ.

ರಾಮೇಶ್ವರನ ದರ್ಶನ.

ಮುಂದೆ ವರದಾನಿ ಗುಡ್ಡಮ್ಮೆಯು ರಾಮೇಶ್ವರ ಕ್ಷೇತ್ರಕ್ಕೆ ಹೋಗಿ ಅಲ್ಲಿ ಕೆಲವು ಮಾಸ ಕಳೆದಳು. ಅಲ್ಲಿ ಬಸವನ ದೇವಾಲಯವನ್ನು ನಿರ್ಮಿಸಿದಳು. ಮುಂದೆ ಕಾಂಚೀ ಪಟ್ಟಣಕ್ಕೆ ತನ್ನ ಪತಿಯೊಡನೆ ಆಗಮಿಸಿದಳು.

ಕಾಂಚೀ ಪಟ್ಟಣದಲ್ಲಿ ವಾಸ.

ಅವರು ಕಾಂಚೀ ಪಟ್ಟಣದಲ್ಲಿದ್ದ ಮಹತ್ತರವಾದ ವಿಷ್ಣು ದೇವಾಲಯವನ್ನು ಸಂದರ್ಶಿಸಲು ಹೋದಾಗ ದ್ವಾರಪಾಲಕರು ಅವರನ್ನು ಒಳಗೆ ಬರಲು ತಡೆದರು. ಆದರೆ ಅವರು ಮರುಳರಂತೆ ನಟಿಸಿ ಉಪಾಯದಿಂದ ದೇವಾಲಯ ಪ್ರವೇಶವನ್ನು ಮಾಡಿ ಮೂರ್ತಿಯ ಇದಿರಿಗೆ ಹೋಗಿ ನಿಂತರು. ಆಗ ಮೂರ್ತಿಯು ತನ್ನ ಸ್ಥಾನದಿಂದೆದ್ದು ಉಭಯತರಿಗೆ ನಮಸ್ಕರಿಸಲು ವರದಾನಿ ಗುಡ್ಡಮ್ಮೆಯು ಮೂರ್ತಿಯ ತಲೆಯ ಮೇಲೆ ಕೈ ಇಡಲಾಗಿ ಅಲ್ಲಿ ಒಂದು "ಪರಶಿವಲಿಂಗ ಮುದ್ರೆಯು" ಮೂಡಿತು. ಇದನ್ನು ಪಟ್ಟಣದಲ್ಲಿಯ ಬ್ರಾಹ್ಮಣರು ಕಂಡು ದ್ವಾರಪಾಲಕರನ್ನು ತಾಡನ ಮಾಡಲು ಆ ಪೆಟ್ಟುಗಳೆಲ್ಲ ಆ ಬ್ರಾಹ್ಮಣರಿಗೆ ತಗಲಿ ಹತ್ತಲು ಅವರು ಆಶ್ಚರ್ಯಬಟ್ಟು ಅರಸನಿಗೆ ದೂರು ಹೇಳಿದರು. ಆಗ ಅರಸನು ದೇವಾಲಯಕ್ಕೆ ಬಂದು ನಡೆದ ಸಂಗತಿಗಳನ್ನು ತಿಳಿದು ಉಭಯ ದಂಪತಿಗಳನ್ನು ಅರಮನೆಗೆ ಕರೆತಂದು ಸನ್ಮಾನಿಸಿದರು. ಬ್ರಾಹ್ಮಣರೆಲ್ಲರೂ ತಮ್ಮ ಯಜ್ಞೋಪವೀತದೊಡನೆ ಲಿಂಗಧಾರಣೆಯನ್ನೂ ಮಾಡಿದರು. ಅರಸನೂ ಕೂಡ ಹಾಗೆಯೇ ಯಜ್ಞೋಪವೀತದೊಡನೆ ಲಿಂಗವನ್ನೂ ಧರಿಸಿದನು. ಈ ಮಹತ್ವವು ಸುತ್ತಲೂ ಪ್ರಸಿದ್ಧವಾಗಲು ಕುರುಡ, ಕುಂಟ, ಹುಚ್ಚರು, ದೇವಾಲಯಕ್ಕೆ ಬಂದು ವರದಾನಿ ಗುಡ್ಡಮ್ಮೆಯಿಂದ ಪುನೀತರಾಗಿ ಆರೋಗ್ಯವನ್ನು ಹೊಂದಿ ಮರಳುತ್ತಿದ್ದರು. ಈ ಮೇರೆಗೆ ಗುಡ್ಡಮ್ಮೆ ಮತ್ತು ಸಂಗಮನಾಥರು ಕೆಲಕಾಲ ಈ ಸ್ಥಳದಲ್ಲಿ ಕಳೆದರು.

ತೀರ್ಥ ಕ್ಷೇತ್ರಗಳ ದರ್ಶನ.

ಅಲ್ಲಿಂದ ಅವರು ಉತ್ತರ ದೇಶಕ್ಕೆ ತೆರಳಿ ಕಾಶೀ ವಿಶ್ವೇಶ್ವರನ ದರ್ಶನವನ್ನು ಹೊಂದಿ, ಅಲ್ಲಿಂದ ಪ್ರಯಾಗ ಗಯಾ ಕ್ಷೇತ್ರಗಳನ್ನು ನೋಡಿ, ಪುನಃ ದಕ್ಷಿಣಕ್ಕೆ ಹೊರಳಿ ಸೊನ್ನಲಿಗೆಯ ಸಿದ್ಧರಾಮೇಶನನ್ನು ಕಂಡರು. ಮುಂದೆ ಸೊನ್ನಲಿಗೆಯಿಂದ ಕೂಡಲ ಸಂಗಮಕ್ಕೆ ಬಂದು, ಅಲ್ಲಿಂದ ಹೊರಟು ಕೃಷ್ಣಾ ಘಟಪ್ರಭಾ ನದಿಗಳು ಕೂಡಿದ ಪುಣ್ಯ ಕ್ಷೇತ್ರವಾದ ಸಂಗಮಕ್ಕೆ ಬಂದು, ಅಲ್ಲಿಂದ ಮಣ್ಣಗೂಳಿ ಎಂಬ ಗ್ರಾಮಕ್ಕೆ ಆಗಮಿಸಿದರು.

ಮನಗೋಳಿಗೆ ಬಂದದ್ದು

ಮಣ್ಣಗೂಳಿಯು ವಿಜಾಪುರ ಪಟ್ಟಣದ ದಕ್ಷಿಣಕ್ಕಿರುವ ಮನಗೂಳಿ ಎಂಬುದಾಗಿರುತ್ತದೆ. ವರದಾನಿಗುಡ್ಡಮ್ಮೆಯು ಈ ಸ್ಥಲಕ್ಕೆ ಬಂದ ಕಾಲದಲ್ಲಿ ಅಲ್ಲಿಯ "ಪಂಚಮಸಾಲ ಗೌರವ್ಮ ಗೌಡಿತಿ" ಯ ಒಬ್ಬನೇ ಮಗನು ಮರಣಹೊಂದಿದ್ದನು. ಆಗ ಆಕೆಯು ಅತ್ಯಂತ ದುಃಖಿತಳಾಗಿ ಉಭಯ ಶರಣರ ಮೊರೆಹೊಗಲು ಅವರು ತಮ್ಮ ಲಾಕುಳಜೆತ್ತವನ್ನು ಮೃತ ದೇಹದ ಮೇಲೆ ಆಡಿಸಲು ಅವನು ಎಚ್ಚರಾದವರಂತೆ ಏಳಲು ಸರ್ವ ಜನರು ಸೋಜಿಗಗೊಂಡು ಅವರನ್ನು ಬಹಳ ಮನ್ನಿಸಿದರು.

ಬಾಗೇವಾಡಿಗೆ ಬಂದಿದ್ದು

ಆಮೇಲೆ ಅವರು ಬಾಗವಾಡಿಗೆ ಬಂದು ಅಲ್ಲಿರುವ ಸಂಗಮನಾಥನ ದರ್ಶನವನ್ನು ಹೊಂದಿದರು. ಅವರು ಅಲ್ಲಿಯ ನಂದಿಯನ್ನು ಕುರಿತು ಸ್ತುತಿಮಾಡುತ್ತಿರಲು ಅಲ್ಲಿಯ "ದೇಶಮುಖ ದೇಶಪಾಂಡೆಯರು ನಮ್ಮ ಗರಳಿಗೆ ಲಿಂಗಧಾರಣ ಮಾಡಬೇಕೆಂದು ಸತಿ ಪುರುಷ ಶರಣರಿಗೆ ಸಾಷ್ಟಾಂಗ ಎರಗಲು, ಶಿವಬ್ರಾಹ್ಮಣರು ನೀವು, ನಿಮ್ಮ ಕೊರಳಿಗೆ ಈಗ ಶಿವಲಿಂಗ ಮೂರ್ತಿಯು ಲಿಂಗವಿರುವದು ನೋಡಿ" ಎಂದು ಹೇಳಲು ಅದೇ ಸ್ಥಿತಿಯುಂಟಾಗಿರಲು ನೆರೆದ ಜನರು ಬೆರಗುಹೊಂದಿದರು. ಮತ್ತು ಅವರು ದಾನಮ್ಮನ ಭಕ್ತರಾದರು.

ಗುಡ್ಡಮ್ಮೆಯು ಐಕ್ಯವಾದದ್ದು

ಅಲ್ಲಿಂದ ಉಭಯತರು ಗುಡ್ಡಾಪುರಕ್ಕೆ ಬರಲು ಅಲ್ಲಿ ದಾನಮ್ಮನ ಸೋತೆಯಾದ ಶಿರಸಮ್ಮ ಮತ್ತು ಪಿತನಾದ ಅನಂತರಾಯ ಇವರು

ಅದೇ ಸ್ಥಳದಲ್ಲಿ ಮುಕ್ತರಾಗಿ ಸಮಾಧಿಸ್ಥರಾದದ್ದು ಕಂಡು ದಾನಮ್ಮನು ಅವರ ಪಾದಕ್ಕೆ ಶರಣೆಂದು ಸಾಷ್ಟಾಂಗವೆರಗಿದಳು. ಆಗ ಆಲ್ಲಿ ಉತ್ಸವಗಳು ಜರಗಿದವು. ಪ್ರಸಾದವು ಮುಗಿದಮೇಲೆ ಶರಣರ ಪಾದಕಮಲಕ್ಕೆ ಜನಸಮುದಾಯವು ಸಾಷ್ಟಾಂಗವೆರಗಿತು. ಭಕ್ತಮಂಡಲಿಯು ಎಷ್ಟು ನೋಡುವಷ್ಟರಲ್ಲಿ ದಾನಮ್ಮನು ಐಕ್ಯವಾಗಿ ಶಿಲಾಮೂರ್ತಿಯಾಗಿ ಮುಂದೆ ನಿಂತಿದ್ದಳು. "ಸಂಗಮೇಶ್ವರ ಪುರುಷರ ಪಾದಕೆ ಪಾದದಲಿ ಜಡಕವಾಗಿ ಶಿಲಾಮೂರ್ತಿಯ ಪೊಕ್ಕಳು ಮುತ್ತೈದಿ ಶರಣೆ ದಾನಮ್ಮ. ಶಿಲಾಮೂರ್ತಿ ಸಜೀವವಾಗಿ ಕಣ್ಣಾ ತೆರೆದು ಸಂಗಮನಾಥನ ನೋಡಲು ತನ್ನ ಪಶ್ಚಿಮ ಮೇಲುಭಾಗದಲಿ ಐಕ್ಯವಾಗಿ ಲಿಂಗಮೂರ್ತಿಯು ನಿಜವಾಗಿ ತೋರಿದುದು ನೋಡಿ ಮೌನಗೊಂಡಿತ್ತು ಶಿಲಾಮೂರ್ತಿಯು. ಭಕ್ತಜನ ಮಂಡಳಿ ಶರಣರ ಮಹತ್ವವ ಕಂಡು ಧನ್ಯ" ರಾದರು. ಎಂದು ಇಲ್ಲಿ ವರ್ಣಿಸಲ್ಪಟ್ಟಿದೆ.

ಮೇಲ್ಕಂಡ ವಿವರಣೆಯಲ್ಲಿ ಅನೇಕ ಅದ್ಭುತ ಸಂಗತಿಗಳು ವಿವರಿಸಲ್ಪಟ್ಟಿರುತ್ತವೆ. ಆದರೆ ಗುಡ್ಡಮ್ಮೆಯ ಚರಿತ್ರೆಯನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಬಸವೇಶ್ವರನ ಕಾಲದಲ್ಲಿ ಉಂಟಾದ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯಲ್ಲಿ ಆಕೆಯು ಉನ್ನತವಾದ ಕಾರ್ಯಗಳನ್ನು ಮಾಡಿದಳೆಂಬುದು ವಿಶದವಾಗುತ್ತದೆ. ಆ ಕಾಲದಲ್ಲಿ ಬಾಲಕರು, ಹೆಂಗಳೆಯರು, ಅಸ್ಪೃಶ್ಯರೆಂದೊಲ್ಲೊಂದು ಎಲ್ಲ ಜಾತಿಯವರು ಇಪರಲ್ಲೆಲ್ಲ ಒಂದು ಅದ್ಭುತವಾದ ಆಂದೋಲನವು ಬರೇ ಕಲ್ಯಾಣ ರಾಜಧಾನೀ ಪ್ರದೇಶನಲ್ಲಿಯಷ್ಟೇ ಅಲ್ಲ, ಕರ್ನಾಟಕದ ಮೂಲೆಮೂಲೆಯಲ್ಲಿಯೂ ಇದರ ನೆರೆ ಪ್ರಾಂತಗಳಾದ ಆಂಧ್ರ, ತಮಿಳು ಮಲಯಾಳ ದೇಶಗಳಲ್ಲಿಯೂ ಕೂಡ ಸಾಗಿತ್ತೆಂಬುದು ಕಂಡುಬರುತ್ತದೆ. ಸ್ತ್ರೀಯರು ಸ್ವಾಭಾವಿಕವಾಗಿ ಧಾರ್ಮಿಕ ಉಜ್ವಲಭಾವವುಳ್ಳವರು. ಅವರಲ್ಲಿ ವೀರಶೈವದ ಧಾರ್ಮಿಕ ಕಳೆಯು ಬಲವಾಗಿ ಮೂಡಿಕೊಂಡು ಅವರನ್ನು ಮಹತ್ತಾದ ಸಾಹಸ ಕೃತ್ಯಗಳಿಗೆ ತೊಡಗಿಸಿತು. ಉಡುತಡಿಯ ಮಹಾದೇವಿಯಕ್ಕನು ತನಗೆ ದೊರೆದ ರಾಜವೈಭವವನ್ನು ತ್ಯಜಿಸಿ, ಕಠಿಣವಾದ ತಪಶ್ಚರ್ಯೆಯನ್ನು ತಳೆದಳು. ಅವಳ ತೇಜಃಪುಂಜವಾದ ನುಡಿಗಳು ವೈರಾಗ್ಯವನ್ನು ಈಗಲೂ ಅರಳಿಸುತ್ತವೆ. ಆದರೆ ವರದಾನಿಗುಡ್ಡಮ್ಮೆಯು ವೀರವೃತ್ತಿಯನ್ನು ತಾಳಿದವಳಾದಳು. ಅವಳು ಕಲ್ಯಾಣ ಪಟ್ಟಣದಲ್ಲಿ

ಅನಾಪುತಗಳು ಉಂಟಾದಬಳಿಕ ವೀರಶೈವ ಧರ್ಮದ ಪ್ರಸಾರ ಕಾರ್ಯದಲ್ಲಿ ತೊಡಗಿದಳು. ಅವಳು ದೇಶವನ್ನು ಸಂಚರಿಸಿ ಅಲ್ಲಲ್ಲಿ ಜನಸಮುದಾಯಕ್ಕೆ ಧರ್ಮೋಪದೇಶಮಾಡುತ್ತ ಸಂಚರಿಸಿದಳು. ಅವಳ ಉಪದೇಶದ ಪ್ರಭಾವದಿಂದ ಅನೇಕರು ವೀರಶೈವ ಧರ್ಮೋಪಾಸಕರಾದರು. ಅನೇಕ ರಾಜರಲ್ಲಿ ಸಹ ಆಕೆಯು ಮನ್ನಣೆಯನ್ನು ಹೊಂದಿದಳು. ಬಸವೇಶ್ವರನ ತರುವಾಯ ದೇಶದಲ್ಲಿ ಕಡುತರವಾದ ಪ್ರಸಂಗಗಳು ಉಂಟಾವಂತೆ ನಮಗೆ ತೋರುತ್ತದೆ. ಆಗ ಶಿವಶರಣರು ಕಲ್ಯಾಣಪಟ್ಟಣವನ್ನು ತೊರೆದು ತಮ್ಮ ಅಸ್ತಿತ್ವದ ರಕ್ಷಣೆಯನ್ನು ತಮ್ಮ ಶಕ್ತಿಸಾಹಸಗಳಿಂದ ಕಾಯ್ದುಕೊಳ್ಳುವ ಪ್ರಸಂಗಗಳು ಅವರಿಗೆ ಒದಗಿದವು. ವೀರಶೈವರ ಇತಿಹಾಸದಲ್ಲಿ ಈ ಕಾಲವು ಅತ್ಯಂತ ಕಠಿಣತರವಾದದ್ದು. ಇಂಥ ಸಮಯದಲ್ಲಿ ವರದಾನಿ ಗುಡ್ಡಮ್ಮೆಯು ಶಸ್ತ್ರವನ್ನು ಧರಿಸಿ ಹಗೆಗಳೊಡನೆ ಕಾದಾಡಲು ಹಿಂದೆಗೆಯಲಿಲ್ಲ. ಇದರಿಂದ ವೀರಶೈವ ಶೂರ ಸ್ತ್ರೀಯಲ್ಲಿ ಆಕೆಯು ಎಣೆಸಲ್ಪಟ್ಟಿದ್ದಾಳೆ. ಆಕೆಯ ದೇವಾಲಯದಲ್ಲಿ ನಡೆಯುವ ಉತ್ಸವಾದಿ ಕಾರ್ಯಗಳಿಂದ ಆಕೆಯು ಈ ವೀರ ವೃತ್ತಿಯವಳೆಂಬದನ್ನು ಊಹಿಸಬಹುದಾಗಿದೆ. ಈಗಲೂ ಗುಡ್ಡಾಪುರದ ದಾನಮ್ಮನ ದೇವಾಲಯವು ಅತ್ಯಂತ ಜಾಗ್ರತಸ್ಥಾನವೆಂದು ಉತ್ತರ ಕನ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಪ್ರಾಂತಗಳಲ್ಲಿ ಬಹಳ ಖ್ಯಾತಿಯು ಇದೆ. ಇದರಿಂದ ಇಲ್ಲಿಯ ಜನರು ಬಹು ಭಯಭಕ್ತಿಯಿಂದ ಈ ದೇವಾಲಯಕ್ಕೆ ನಡೆದುಕೊಳ್ಳುತ್ತಾರೆ. ದಾನಮ್ಮನ ಪೂಜಾದಿ ಕಾರ್ಯಗಳು ಬಹು ಪವಿತ್ರತೆಯಿಂದ ಜರಗುವಂತೆ ಬಹು ಜಾಗ್ರತೆಪಡುತ್ತಾರೆ. ದಾನಮ್ಮನ ಮೂಲ ಗ್ರಾಮವು ಉಮರಾಣಿ ಎಂಬುದಿದ್ದು, ಆಕೆಯು ಲಗ್ನವಾಗಿದ್ದಳೆಂದು ಈಗಿನ ಗ್ರಂಥದಿಂದ ತೋರಿಬರುತ್ತದೆ. ಮತ್ತು ಗುಡ್ಡಾಪುರವು ಆಕೆಯ ಸಮಾಧಿ ಸ್ಥಳವಾಗಿರುತ್ತದೆಂತಲೂ ತಿಳಿದುಬರುತ್ತದೆ. ಇದರಿಂದಲೇ ಗುಡ್ಡಾಪುರ ಗ್ರಾಮಕ್ಕೆ ಬಹು ಮಹತ್ವವು ಪ್ರಾಪ್ತವಾಗಿರುತ್ತದೆ.

ವರದಾನಿಗುಡ್ಡಮ್ಮೆಯ ಹಸ್ತಲಿಖಿತ -ಗ್ರಂಥವನ್ನು ಅಥಣಿಯ ಮೋಟಿಗಿ ಮಠದ ವೇ॥ ಮೂ॥ ಒಸವಲಿಂಗಶಾಸ್ತ್ರಿಗಳು ನಮಗೆ ತಂದು ಕೊಟ್ಟರು. ಇದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ.

ವಚನಕಾರರ ರಾಷ್ಟ್ರಭಾವನೆ.

(ಸದಾಶಿವಶ್ರೀ ತೆಗ್ಗಿಹಳ್ಳಿ ವೀರಶೈವ ಸಾಹಿತ್ಯ ಮಂಡಳ ವಿಜಾಪುರ.)

ಇಂದಿನ ಶತಮಾನದ ಕಾಲವೆಂದರೆ ನಮ್ಮ ವಚನಕಾರರ ಉದಯಕಾಲ. ಆಗಿನ ಕಾಲದಲ್ಲಿ ನಮ್ಮ ಹಿಂದುಸ್ತಾನದ ಸಮಾಜದ ರಚನೆ ಧಾರ್ಮಿಕ ಕಲ್ಪನೆ ಇವುಗಳನ್ನು ತಿಳಿದುಕೊಳ್ಳುವದು ಅತ್ಯಂತ ಅವಶ್ಯವಿದೆ. ಯಾಕಂದರೆ ಯಾವದಾದರೊಂದು ರಾಷ್ಟ್ರದಲ್ಲಿ ಅಥವಾ ಸಮಾಜದಲ್ಲಿ ಕ್ರಾಂತಿಯಾಗಬೇಕಾದರೆ ಆಗಿನ ಕಾಲದ ರಾಷ್ಟ್ರ ಅಥವಾ ಸಮಾಜವು ಏನಾದರೊಂದು ಬಂಧನದೊಳಗೆ ಸಿಲುಕಿಕೊಂಡಿರಬೇಕು. ಆ ಬಂಧನಗಳ ವಿಮೋಚನೆಗಾಗಿ ಮಾಡಿದ ಪ್ರಯತ್ನವೇ ಕ್ರಾಂತಿಯೆನಿಸುವದು. ಕಾಲಮಾನ ಪರಿಸ್ಥಿತಿಗನುಸರಿಸಿ ಸಮಾಜದ ರಚನೆಯಲ್ಲಿಯೂ, ಧಾರ್ಮಿಕ ಕಲ್ಪನೆಗಳಲ್ಲಿಯೂ, ಬದಲಾವಣೆಯನ್ನು ಮಾಡಿ ಜನಾಂಗಕ್ಕೆ ಭವಿಷ್ಯ ಜೀವನದ ಸುಖ ಸೌಖರ್ಯದ ಕಲ್ಪನೆಯನ್ನು ತಂದು ಕೊಡುವದೇ ಕ್ರಾಂತಿಯು. ಈ ತರದ ಬದಲಾವಣೆಯು ಆಗಿನ ಕಾಲದಲ್ಲಿ ಅವರಿಗೆ ಬೇಕಾಗಿತ್ತು. ನಮ್ಮ ವಚನಕಾರರು ಹಳೇ ವಿಚಾರಗಳ ಗೊಡವೆಗೆ ಹೋಗದೇ ಬರೇ ಹೊಸ ವಿಚಾರಗಳ ಬೆನ್ನುಹತ್ತಿದರೆಂದು ಅನ್ನಲಿಕ್ಕೆ ಬರಲಾರದು. ಯಾಕಂದರೆ ಅವರು ಹಳೆಯದರಲ್ಲಿಯ ಮಿಥ್ಯ ವಿಚಾರಗಳನ್ನು ಬಿಟ್ಟು ಸತ್ಯವಾದವುಗಳನ್ನೇ ಆಯ್ದುಕೊಂಡರು. ಮತ್ತು ಅಂಥ ವಿಚಾರ ವೇದಿಕೆಯ ಮೇಲೆಯೇ ತಮ್ಮ ಕ್ರಾಂತಿಗುಡಿಯನ್ನು ಕಟ್ಟಿದರು. ಹೂವು ಗಿಡದ ಸಾರ ಸರ್ವಸ್ವವೇ ಆದರೂ ತನ್ನ ಭವಿಷ್ಯ ಜೀವನದ ಅನಂತ ಶಕ್ತಿಗಳನ್ನು ತನ್ನಲ್ಲಿ ಅಡಕ ಮಾಡಿಕೊಂಡಂತೆ, ವಚನಕಾರರು ನಮ್ಮ ಸತ್ಯ ಧರ್ಮದ ಸನಾತನತತ್ವದ ಮೇಲೆಯೇ ತಮ್ಮ ಕ್ರಾಂತಿಯ ಮಂದಿರವನ್ನು ಸ್ಥಾಪಿಸಿದರು. ಮತ್ತು ತಮ್ಮ ಮುಂದಿನ ಜೀವನದ ಏಳಿಗೆಗಾಗಿ ಬೇಕಾಗುವ ಕೆಲವು ತತ್ವಗಳನ್ನು ಅದರೊಳಗೆ ಇಟ್ಟರು. ಹಳೆಯದರಲ್ಲಿ ಹೊಸದನ್ನು ಕಂಡರು, ಹೊಸದರಲ್ಲಿ ಹಳೆಯದನ್ನು ರೂಪಿಸಿದರು. ಇದೇ ಅವರ ಆ ಕ್ರಾಂತಿಯ ಮರ್ಮ.

ಆಗಿನ ಕಾಲದಲ್ಲಿ ಉತ್ತರ ಹಿಂದುಸ್ತಾನದಲ್ಲಿ ಮುಸಲ್ಮಾನರ ದಾಳಿಗಳು ಅವ್ಯಾಹತವಾಗಿ ನಡದೇ ಇದ್ದುದು ಇತಿಹಾಸ ಪ್ರಸಿದ್ಧವಾದ

ಮಾತು. ಮುಸಲ್ಮಾನರ ಒಂದೊಂದು ಗುಂಪು ಹಿಂದುಗಳನ್ನು ಸೆಬಡೆದು ತಮ್ಮ ಧರ್ಮವನ್ನು ಪ್ರಸಾರ ಮಾಡಹತ್ತಿದರು. ಇದರಿಂದ ಆಗಿನ ಕಾಲದ ಹಿಂದೂ ಜನರ ಸಾಂಪತ್ತಿಕ ಸ್ಥಿತಿಯ ಮೇಲೂ ಧರ್ಮದ ಹಕ್ಕಿಗೂ ಬಲವಾದ ಏಟುಗಳು ಬಿದ್ದವು. ಈ ಪ್ರಕಾರ ಮುಸಲ್ಮಾನರು ನಮ್ಮ ಹಿಂದೂಗಳ ಮೇಲೆ ಬೀಳಬೇಕಾದರೆ, ಆಗಿನ ಕಾಲದ ಹಿಂದೂ ಸಮಾಜದ ಮನೋ ದೌರ್ಬಲ್ಯವೇ ಕಾರಣವಿರಬಹುದು. ಹೇಗೆಂದರೆ ಮೊದಲು ನಮ್ಮ ಸಮಾಜದಲ್ಲಿ ಜನ್ಮಸಿದ್ಧವಾದ ವರ್ಣಾಶ್ರಮ ಧರ್ಮದ ಪ್ರಚಾರದಲ್ಲಿತ್ತು. ಈ ವರ್ಣಾಶ್ರಮ ಧರ್ಮದ ಪ್ರಭಾವವು ರಾಜಕಾರಣದಲ್ಲಿ ಸಮಾವೇಶವಾಗಹತ್ತಿದ್ದರಿಂದ ಆಗಿನ ಕಾಲದ ನಮ್ಮ ರಾಜಕೀಯ ವಿಚಾರದಲ್ಲಿ ವಿಫಲತೆಯುಂಟಾಯಿತು. ಬ್ರಾಹ್ಮಣರು, ಬಾಹ್ಯ ಜಗತ್ತನ್ನು ನಾವು ಮರೆತವರು, ಇಹಲೋಕದ ಚಿಂತೆ ನಮಗೆ ಬೇಡ. ಬ್ರಹ್ಮ ಚಿಂತನೆಯೇ ನಮ್ಮ ಜೀವನದ ಕೊನೆಯ ಗುರಿಯು ಎಂದು ಅಧ್ರುವವಾಸಿಗಳಾಗಿ ಕಾಲಹರಣ ಮಾಡುತ್ತಿದ್ದರು, ಕ್ಷತ್ರಿಯರು ರಾಜಕಾರಣಕ್ಕೆ ವಿಶೇಷತಃ ಸಂಬಂಧಪಟ್ಟವರಾದರೂ ತಮ್ಮ ತಮ್ಮೊಳಗಿನ ಅಂತಃಕಲಹದಿಂದ ಅವರ ಕ್ಷಾತ್ರ ತೇಜಸ್ಸೇ ಅವರಿಗೆ ಪೈರಿಯಾಗಿ ಪರಿಣಮಿಸಿತು. ಇದಕ್ಕೆ ಇತಿಹಾಸವೇ ಸಾಕ್ಷಿ. ವೈಶ್ಯರು ತಮ್ಮ ವ್ಯಾಪಾರದ ಸೀಮೆಯನ್ನು ಬಿಟ್ಟು ಕದಲಲಿಲ್ಲ. ಸಮುದ್ರಯಾನ ಮಾಡುವದು ಪಾಪದ ಕೆಲಸವೆಂದು ಅವರು ತಿಳಿಯುತ್ತಿದ್ದರು. ಇನ್ನುಳಿದ ಕೂಪ್ರರಂತೂ ಬುದ್ಧಿಹೀನರಾಗಿ ಹೇಗೋ ಉಪಜೀವನವನ್ನು ಸಾಗಿಸಿಕೊಂಡು ಸೇವಾವೃತ್ತಿಯಲ್ಲಿಯೇ ಕಾಲಹರಣ ಮಾಡುತ್ತ ಇದ್ದರು. ಈ ಪ್ರಕಾರವಿದ್ದ ವರ್ಣ ವ್ಯವಸ್ಥೆಯಲ್ಲಿ ಒಬ್ಬರ ಸುಖ ದುಃಖಗಳು ಮತ್ತೊಬ್ಬರ ಸುಖ ದುಃಖಗಳಾಗಿ ಪರಿಣಮಿಸಲಿಲ್ಲ. ಸಮಾಜದಲ್ಲಿ ಒಕ್ಕಟ್ಟು ಸಡಲಿತು, ಬಿಕ್ಕಟ್ಟು ಉತ್ಪನ್ನವಾಯಿತು. ಇಂಥ ಪರಿಸ್ಥಿತಿಯಲ್ಲಿ ಮತ್ತೊಂದು ವಿಚಾರವು ನಮ್ಮನ್ನು ಬಾಧಿಸತೊಡಗಿತು. ಅದೇನೆಂದರೆ, ಕೆಲವು ಕರ್ಮಕಾಂಡಿಗಳಾದ ಸನಾತನಿಗಳು ಧರ್ಮದ ಹೆಸರಿನಿಂದ ಅನಂತ ಅತ್ಯಾಚಾರಗಳನ್ನು ಮಾಡುತ್ತಿದ್ದರು. ಒಂದು ಕಡೆ ಯಜ್ಞ-ಯಾಗಾದಿ ಕರ್ಮಗಳ ಹೆಸರಿನಿಂದ ಮೂಕ ಪ್ರಾಣಿಗಳ ವಧೆ ನಡೆಯಿತು. ಮತ್ತೊಂದು ಕಡೆ ಅದೇ ಧರ್ಮದ ಹೆಸರಿನಿಂದ ಸುಲಿಗೆಯೂ ಸರೂ ನಡೆಯಿತು. ದಲಿತ ವರ್ಗದವರಂತೂ ಮೇಲ್ವರಗತಿಯ ಜನರ

ಕಡೆಯಿಂದ ಬರುತ್ತಿದ್ದ ಅನಂತ ಯಾತನೆಗಳನ್ನು ಸಹಿಸಿ ಹಿಂದೂ ಧರ್ಮದಲ್ಲಿರತಕ್ಕ ತಮ್ಮ ಸಹಾನುಭೂತಿಯನ್ನು ಸಡಲಿಸಿದರು. ಆದ್ದರಿಂದ ವರಧರ್ಮದವರ ದಾಳಿಗೆ ಮತ್ತಿಷ್ಟು ಕಳೆ ಏರಿತು. ಇಂಥ ಸಮಯದಲ್ಲಿ ನಮ್ಮ ಹಿಂದೂ ಸಮಾಜದಲ್ಲಿ ಕ್ರಾಂತಿಯಾಗದೆ, ಅವರ ಸಂಸ್ಕೃತಿಯು ಉಳಿಯುವ ಶಕ್ಯವೇ ಇರಲಿಲ್ಲ.

ಇಂಥ ಪ್ರಸಂಗದಲ್ಲಿ ನಮ್ಮ ವಚನಕಾರರು ಜನಾಂಗ ಸಂಘಟನೆ, ಶಿಕ್ಷಣದಲ್ಲಿ ಒದಲಾವಣೆ, ಔದ್ಯೋಗಿಕ ಪ್ರಗತಿ, ಸ್ತ್ರೀ ಸ್ವಾತಂತ್ರ್ಯ, ಅಹಿಂಸೆ ಮೊದಲಾದ ರಾಷ್ಟ್ರಪೋಷಕವಾದ ಶಕ್ತಿಯನ್ನು ಜನಾಂಗದೊಳಗೆ ತುಂಬಹತ್ತಿದರು. ಯಾವ ಪ್ರಕಾರ ಒಬ್ಬ ಚಿತ್ರಕಾರನು ಒಂದು ಪೂರಡಾದ ಕಾಡು ಬಂಡೆಯಲ್ಲಿ ತನಗೆ ಬೇಕಾಗುವ ಒಂದು ಇಷ್ಟ ವಿಸ್ತಹವನ್ನು ಸಂದರ್ಶಿಸುವಂತೆ, ನಮ್ಮ ವಚನಕಾರರು ಭಿನ್ನ ಭಿನ್ನ ಸಂಸ್ಕೃತಿ ಭಿನ್ನ ಭಿನ್ನ ವಿಚಾರಗಳಿಂದ ತುಂಬಿ ತುಳುಕುತ್ತಿದ್ದ ನಮ್ಮ ಭರತ ಖಂಡದಲ್ಲಿ ಒಂದು ಆದರ್ಶ ಸಮಾಜದ ರೂಪರೇಷೆಯನ್ನು ನಿಷ್ಪಪಡಿಸಿದರು.

ಸಮಾಜ ಸಂಘಟನೆ.

ಈಗಿನ ಕಾಲದಲ್ಲಿ ನಮ್ಮ ಹಿಂದೂ ಸಮಾಜಕ್ಕೆ ಅಸ್ಪೃಶ್ಯತೆಯು ಕಳಂಕಪ್ರಾಯವಾಗಿರುವಂತೆ ಆಗಿನ ಕಾಲದಲ್ಲಿಯಾದರೂ ಇತ್ತು. ಇದನ್ನು ಪರಿಹಾರ ಮಾಡುವದಕ್ಕೋಸ್ಕರ ನಮ್ಮ ವಚನಕಾರರು ಆಯಾ ಧರ್ಮದಲ್ಲಿದ್ದ ನೀತಿವಂತ ಜನರನ್ನು ಒಟ್ಟುಗೂಡಿಸಿ, ಒಂದು ಸಭೆಯನ್ನು ಮಾಡಿಕೊಂಡು ಅದರ ಮುಖಾಂತರ ಜನರಿಗೆ ನೀತಿಯ ಬೋಧೆಯನ್ನು ಮಾಡುತ್ತಿದ್ದರು. ಈಗಿನ ರಾಷ್ಟ್ರ ಸಭೆಯಂತೆ ಆಗಿನ ಶಿವಾನುಭವ ಮಂಟಪ, ಈಗಿನ ರಾಷ್ಟ್ರಸಭೆಯ ಚಾಲಕನಾದ ಮಹಾತ್ಮಾ ಗಾಂಧಿಯಂತೆ ಆಗಿನ ಶಿವಾನುಭವ ಮಂಟಪದ ಚಾಲಕನಾದ ಮಹಾತ್ಮಾ ಬಸವೇಶ್ವರ ಹೀಗೆ ಪರಿಸ್ಥಿತಿಯಾಯಿತು. ಬಸವಣ್ಣನವರು ದಲಿತ ವರ್ಗದವರ ಕೂಡ ಯಾವ ಪ್ರಕಾರದ ವರ್ತನೆಯನ್ನಿಟ್ಟಿದ್ದರು. ಮತ್ತು ಯಾವ ಪ್ರಕಾರ ಅವರ ಜೀವನದೊಳಗೆ ಸಮರಸವಾಗಿದ್ದರೆಂಬದು ಅವರ ವಚನಗಳೇ ಸ್ಪಷ್ಟೀಕರಣ ಮಾಡುತ್ತವೆ.

೧. ಅಸ್ಪೃಶ್ಯ ಹೋಗರ ಕಕ್ಕಯ್ಯನಾಗಿ, ಮುತ್ತಯ್ಯ ಚನ್ನಯ್ಯ ಸಾವರಿ ಅನ್ನ ಬಡುಕುವೆ. ಮತ್ತು ಶ್ವಪಚಯ್ಯನ ಸನ್ನಿಧಿಯಿಂದ

ಭಕ್ತಿಯ ಸದ್ಗುಣವ ನಾನು ಅರಿವೆನಯ್ಯಾ. ಕಷ್ಟಜಾತಿಯ ಜನ್ಮದಲ್ಲಿ ಬರಿಸಿದೆ, ಎನಗಿದು ವಿಧಿಯೇ ಕೂಡಲ ಸಂಗಮದೇವಾ.

೨. ಕೆಟ್ಟಯೆಂಬೆನೆ ಶಿರಿಯಾಳನ? ಮಡಿವಾಳನೆಂಬೆನೆ, ಮಾಚಯ್ಯನ? ಡೋಹರನೆಂಬೆನೆ, ಕಕ್ಕಯ್ಯನ? ಮಾದಾರನೆಂಬೆನೆ ಚನ್ನಯ್ಯನ? ಅನು ಹಾರುವನೆಂದಡೆ ಕೂಡಲ ಸಂಗಯ್ಯ ನಗುವನಯ್ಯಾ.

೩. ಅಪ್ಪನು ನಮ್ಮ ಮಾದರ ಚನ್ನಯ್ಯ. ಬೊಪ್ಪನು ನಮ್ಮ ಡೋಹರ ಕಕ್ಕಯ್ಯ. ಚಿಕ್ಕಯ್ಯ ಎಮ್ಮಯ್ಯ ಕಾಣಿರಯ್ಯಾ. ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ. ಎನ್ನ ನೇತಕ್ಕರಿಯಿರಿ ಕೂಡಲಸಂಗಮದೇವಾ.

೪. ಆಚಾರವನ್ನರಿಯಿರಿ, ವಿಚಾರವನ್ನರಿಯಿರಿ. ಜಂಗಮಸ್ಥಲ ಲಿಂಗ ಕಾಣಿರಯ್ಯಾ. ಜಾತಿ ಭೇದವಿಲ್ಲ, ಸೂತಕವಿಲ್ಲ, ಅಜಾಂತರ ಕುಲವಿಲ್ಲ, ನುಡಿದಂತೆ ನಡೆಯದಿದ್ದರೆ, ಕೂಡಲಸಂಗಯ್ಯ ಮೆಚ್ಚನು, ಕೂಡಲಸಂಗಮದೇವಾ.

೫. ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ, ಕುಲವೇನೋ ಅವಂದಿಗರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜರು.

೬. ಹೊಲೆಯರ ಭಾವಿಯಲೊಂದು ಎಲವು ತಾ ನಟ್ಟಿರಲು, ಹೊಲೆಎನುವುದೀ ಜಗವು. ಹಲವೆಲುವಿನಿಂದಾದ ಮೆಲುವಂಥ ಬಾಯಿಂದ ಬಲುಸಟೆಯ ನುಡಿಯಲದು ಹೊಲೆಯಂಥಾ ಭಾವಿಂದ ಕರಕಷ್ಟ ಕಾಣಾ ರಾಮನಾಥಾ.

೭. ನೆಲಸೊಂದೇ ಹೊಲಗೇರಿ, ಶಿವಾಲಯಕ್ಕೆ ಜಲವೊಂದೇ ಶೌಚಾಚವನಕ್ಕೆ ಕುಲವೊಂದೇ, ತನ್ನ ತಾನರಿದಂಗೆ ಫಲ ಒಂದೇ, ಷಡುದರ್ಶನ ಮುಕ್ತಿಗೆ ನಿಲುವೊಂದೇ ಕೂಡಲಸಂಗಮದೇವಾ ನಿಮ್ಮನರಿದಂಗೆ.

ಮಹಾತ್ಮಾ ಬಸವೇಶ್ವರ ಮತ್ತು ಮಹಾತ್ಮಾ ಗಾಂಧಿ ಇವರ ಅಸ್ಪೃಶ್ಯರ ಉದ್ಧಾರ ಕಾರ್ಯದಲ್ಲಿ ಏನಾದರೂ ಮತಭೇದವಿದೆಯೋ ಹೀಗೆಂದು ಯಾರಾದರೂ ಪ್ರಶ್ನಿಸಿದರೆ, ಎಳ್ಳಷ್ಟೂ ಮತಭೇದವಿಲ್ಲವೆಂದು

ನನಗೆ ಅನಿಸುತ್ತದೆ. ಮಹಾತ್ಮಾ ಗಾಂಧಿಯವರ ಕೆಲವು ವಚಗಳನ್ನು ನಾನು ಇಲ್ಲಿ ಉದಹರಿಸಿದ್ದೇನೆ.

೧. ಕಷ್ಟದಲ್ಲಿ ಸಿಕ್ಕಿ ಬಿದ್ದು ಪರಿತಪಿಸುವವರಾರು? ಬಡವರು, ಮತ್ತು ಬಲವಂತರ ದಬ್ಬಾಳಿಕೆಗೆ ಗುರಿಯಾಗಿ ನೊಂದಿರುವ ಅಸ್ಪೃಶ್ಯರು ಇವರ ಸೇವೆಯೇ ದೇವರ ಸೇವೆ; ದೈವಭಕ್ತನು ತ್ರಿಕರಣಪೂರ್ವಕವಾಗಿ ಈ ಜನರನ್ನು ಸೇವಿಸಬೇಕು; ಅಸ್ಪೃಶ್ಯರೆಂದು ಹೆಸರಿಟ್ಟು ಜನರನ್ನು ದೂರ ಓಡಿಸುವವರು. ದಬ್ಬಾಳಿಕೆಯಿಂದ ನೊಂದು ನರಳುತ್ತಿರುವವರನ್ನು ಹೇಗೆ ಸೇವಿಸಬಲ್ಲರು; ಮಾನವ ವರ್ಗವನ್ನೇ ಹತ್ತರ ಸೇರಿಸದ ಅವನ ಹೃದಯದಲ್ಲಿ ದೇವರೆಂತು ವಾಸಿಸಿಯಾನು?

೨. ಹಿಂದೂ ಜನರು ಉಚ್ಚವಾದ ಮತ್ತು ಉತ್ತಮವಾದ ಧರ್ಮಕ್ಕೆ ಕಳಂಕ ತರುವಂಥ ಅಸ್ಪೃಶ್ಯತೆಯನ್ನು ಎಲ್ಲಿಯವರೆಗೆ ತೆಗೆದುಹಾಕುವದಿಲ್ಲವೋ ಅಲ್ಲಿಯವರೆಗೆ ಅವರು ಸ್ವಾತಂತ್ರ್ಯಕ್ಕೆ ನಿಶ್ಚಯವಾಗಿ ಪಾತ್ರರಾಗಿರಲಾರರು. ಮತ್ತು ಅವರಿಗೆ ಲಭ್ಯವೂ ಆಗಲಾರದು.

೩. ಅಸ್ಪೃಶ್ಯತಾ ನಿರೋಧ ಚಳವಳಿಯು ಸ್ಥಾಪಿತವಾಗುವದೆಂದರೆ ಹರಿಜನ ಸ್ಥಿತಿಗತಿಗಳಲ್ಲಿ ಅಲ್ಪಸ್ವಲ್ಪ ವ್ಯತಾಸಮಾಡಬೇಕೆಂದಲ್ಲ ಎಲ್ಲಾ ಆತ್ಮರುಗಳು ಒಂದೇ ಎಂದೂ, ಉತ್ತಮ ಹೀನವೆಂಬ ವಿಭಾಗವು ಮಿಥ್ಯವೆಂದೂ, ಅದು ಮಾಯೆಯ ಪ್ರಭಾವವೆಂದೂ ಪ್ರತಿಪಾದಿಸುವ ಮಹೋನ್ನತ ತತ್ವಗಳನ್ನೊಳಗೊಂಡ ಹಿಂದೂ ಧರ್ಮಕ್ಕೆ ಅಂಟಿರುವ ಉಚ್ಚನೀಚ ಭಾವನೆಗೆ ಮೂಲವಾದ ಅಸ್ಪೃಶ್ಯತೆಯನ್ನು ಪೂರ್ಣವಾಗಿ ನಾಶಮಾಡಿ ಹಿಂದೂ ಧರ್ಮದ ಹಿತವನ್ನು ಸಾಧಿಸುವದೇ ಅಸ್ಪೃಶ್ಯತಾ ಚಳವಳಿಯ ಮೂಲ ಉದ್ದೇಶವು.

ಈ ತರದ ಉಪದೇಶಗಳಲ್ಲಿ ಉಭಯ ಮಹಾತ್ಮರ ಗೊತ್ತುವಳಿಗಳು ಒಂದೇ ಎಂಬುದು ತಿಳಿದುಬರುತ್ತದೆ.

ವಚನಕಾರರ ಈ ಕಾರ್ಯಕ್ರಮದೊಳಗೆ ಅಪತ್ತುಗಳಾದರೂ ಮೇಲಿಂದಮೇಲೆ ಬರಲಾರದೆ ಇರಲಿಲ್ಲ. ಯಾಕಂದರೆ ಆಗಿನ ಕಾಲದಲ್ಲಿ ಸನಾತನಿಗಳಂದರೆ ರಾಜರು, ರಾಜರೆಂದರೆ ಸನಾತನಿಗಳು. ವಚನ

ಕಾರರ ಹೊಸ ಆಚಾರವಿಚಾರಗಳು ಅವರಿಗೆ ಸರಿಬೋರದಾದವು. ವಚನಕಾರರು ಧರ್ಮಲೆಂಡರೆಂದೂ. ಕರ್ಮ ಬ್ರಷ್ಟರೆಂದೂ ಅವರ ವಿಷಯವಾಗಿ ಬಿಜ್ಜಳರಾಜನಲ್ಲಿ ಮೇಲಿಂದಮೇಲೆ ಕಲುಷಿತವನ್ನುಂಟುಮಾಡುತ್ತಿದ್ದರು. ಆದ್ದರಿಂದ ವಚನಕಾರರ ಕಾರ್ಯಕ್ರಮದೊಳಗೆ ರಾಜರಿಂದಲೂ ಸನಾತನಿಗಳಿಂದಲೂ ಸಂಕಟಗಳು ಬಂದೊದಗುತ್ತಿದ್ದವು. ಆದರೆ ಇಂಥ ಸಂಕಟಗಳಿಗೆ ಭಯಪಡದೇ ಅವರು ಸಮಾಜೋದ್ಧಾರದ ಕಾರ್ಯಕ್ರಮವನ್ನು ಒಳ್ಳೇ ಒತ್ತರದಿಂದ ಸಾಗಿಸಿದರು. ಇಷ್ಟೇ ಅಲ್ಲ. ಮಧುವಯ್ಯಾ ಹರಳಯ್ಯರೆಂಬುವರಲ್ಲಿ ಶರೀರ ಸಂಬಂಧ ಬೆಕಿಸಿದರು. ಈ ಪ್ರಕಾರವಾಗಿ ನಮ್ಮ ಹಿಂದೂ ಸಮಾಜದಲ್ಲಿರತಕ್ಕ ಉಚ್ಚ ನೀಚ ಭಾವನೆಗಳನ್ನು ಕಳಿಪಿ, ಎಲ್ಲರೂ ಒಂದೇ ತಾಯಿಯ ಮಕ್ಕಳೆಂದೂ, ಧಾರ್ಮಿಕ ವಿಚಾರದಲ್ಲಿಯೂ ರಾಜಕಾರಣದಲ್ಲಿಯೂ ಸ್ಪರ್ಧೇ ಮಾಡಲಿಕ್ಕೆ ಹಕ್ಕು ಉಂಟಿಂದೂ ಸಾರಿಹೇಳಿದರು. ಇದರಿಂದ ಹಿಂದುಳಿದ ಜಾತಿಯವರೂ, ಅಸ್ಪೃಶ್ಯರೂ ತಂಡೋಪತಂಡವಾಗಿ ಬಂದು, ವಚನಕಾರರ ತತ್ವವನ್ನು ಸ್ವೀಕಾರಮಾಡಿದರು.

ಶಿಕ್ಷಣ.

ಯಾವುದಾದರೊಂದು ರಾಷ್ಟ್ರ ಅಥವಾ ಜನಾಂಗವು ಉನ್ನತಿಯ ಸ್ಥಾನವನ್ನು ಹೊಂದಬೇಕಾದರೆ, ರಾಷ್ಟ್ರೀಯ ಶಿಕ್ಷಣವೇ ಅದರ ಮಹೋನ್ನತವಾದ ಗುರಿಯಾಗಿರುತ್ತದೆ. ಯಾಕಂದರೆ ಸದ್ಯದ ಪರಿಸ್ಥಿತಿಯನ್ನು ನಿರೀಕ್ಷಣ ಬುದ್ಧಿಯಿಂದ ವಿಚಾರಮಾಡಿದ್ದಾದರೆ ಯಾವ ರಾಷ್ಟ್ರವು ಶಿಕ್ಷಣದೊಳಗೆ ಮುಂದುವರಿದಿದೆಯೋ, ಆ ರಾಷ್ಟ್ರವು ಒಳ್ಳೇ ಉನ್ನತಾವಸ್ಥೆಯೊಳಗೆ ಇರುತ್ತದೆ. ಇದು ನಮಗೆ ಗೊತ್ತಿದ್ದ ಮಾತು. ನಮ್ಮ ದೇಶದ ಪರಿಸ್ಥಿತಿಯ ಮೇಲಿಂದ ಶಿಕ್ಷಣವು ಆಗಿನ ಕಾಲಕ್ಕಾದರೂ ಬೇಕಾಗಿತ್ತು. ಈಗಿನ ಕಾಲಕ್ಕಾದರೂ ಕೂಡ ಶಿಕ್ಷಣದ ಅವಶ್ಯಕತೆ ಇದೆ. ಆಗಿನ ಕಾಲದ ಶಿಕ್ಷಣವು ಬರೇ ಸವರ್ಣೀಯರ ಸ್ವತ್ತಾಗಿತ್ತೆ ಹೊರ್ತು ಸಾಮಾನ್ಯ ಜನರಿಗೆ ಶಿಕ್ಷಣಕೊಡುವ ಸಾಂಪ್ರದಾಯವಿರಲಿಲ್ಲ. ಸವರ್ಣೀಯರಲ್ಲಿ ಶಿಕ್ಷಣವು ಸಾಧಾರಣ ಮಟ್ಟಿಗೆ ಇದ್ದಿತಾದರೂ ಅದು ಕೂಡ ಮತ ತತ್ವಗಳ ಬಡಿದಾಟನಲ್ಲಿ ಸಿಲ್ಕಿಕೊಂಡು ಹೀನಪರಿಸ್ಥಿತಿಯೊಳಗಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ವಚನಕಾರರು ಸಾಮಾನ್ಯ ಜನರಿಗೂ ಕೂಡ

ಜ್ಞಾನದ ತಿಳುವಳಿಕೆಯಾಗಬೇಕೆಂಬ ಸದುದ್ದೇಶದಿಂದ ನಾಡಭಾಷೆಯಾದ ಕನ್ನಡದಲ್ಲಿಯೇ ಶಿಕ್ಷಣಕೊಡಹತ್ತಿದರು. ಗೀರ್ವಾಣ ಭಾಷೆಯಲ್ಲಿದ್ದ ಉಚ್ಚ ತತ್ವಗಳನ್ನೇ ತೆಗೆದುಕೊಂಡು ಸರಳವಾದ ಕನ್ನಡ ಭಾಷೆಯಲ್ಲಿ ಬೋಧಿಸಹತ್ತಿದರು. ಇದರಿಂದ ಸಾಮಾನ್ಯ ಜನರಿಗೂ ಕೂಡ ಮತ ತತ್ವಗಳ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೆ ಅನುವುಮಾಡಿಕ್ಕಿತು.

ಆಗಿನ ಕಾಲದಲ್ಲಿ ಶಿಕ್ಷಣದ ಕ್ರಮವು ಭಿನ್ನ ಭಿನ್ನ ಸ್ವರೂಪವನ್ನು ತಾಳಿತ್ತು. ದೇವತ್ವದ ವಿಷಯವಾಗಿಯಾಗಲೀ ಧರ್ಮದ ವಿಷಯದಲ್ಲಿಯಾಗಲೀ ಒಂದೇ ತರದ ಘೋರಣೆಯು ಇರಲಿಲ್ಲ. ಇದರಿಂದ ನಮ್ಮ ಜನಾಂಗದಲ್ಲಿ ಅನಂತ ಮುಖಗಳಾಗಿ ಪಕ್ಷ ಪಂಗಡಗಳು ಹೆಚ್ಚಾದವೇ ಹೊರ್ತು ಜನರಲ್ಲಿ ರಾಷ್ಟ್ರೀಯ ಭಾವನೆ ಉತ್ಪನ್ನವಾಗಿರಲಿಲ್ಲ ಇದನ್ನು ಹೋಗಲಾಡಿಸುವದಕ್ಕಾಗಿ ನಮ್ಮ ವಚನಕಾರರು ದೇವರು ಒಬ್ಬನೇ ಇರುವನೆಂದೂ, ಸತ್ಯಧರ್ಮವೇ ಧರ್ಮವೆಂದೂ, ಮನುಷ್ಯ ಜನಾಂಗವೆಂದರೆ ಒಂದೇ ಎಂದೂ, ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ಜನಾಂಗದ ಮುಂದೆ ಇಟ್ಟರು. ಮತ್ತು ಷಟ್‌ಸ್ಥಲಶಾಸ್ತ್ರಸಿದ್ಧಾಂತ ಮೂಲಕ ಜನರಲ್ಲಿ ಚಿತ್ತಶುದ್ಧಿ ಇಂದ್ರಿಯನಿಗ್ರಹ ಸ್ವಾವಲಂಬನ ಮೊದಲಾದ ವಿಷಯದ ಕಲ್ಪನೆಯನ್ನು ಜನಾಂಗದೊಳಗೆ ತುಂಬಿದರು.

ದೇವರು ಒಬ್ಬನೇ ಇದ್ದಾನೆ.

೧. ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತಾಡಬೇಡ. ದೇವನೊಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿ ನೋಡಾ ಕೂಡಲಸಂಗಮದೇವಾ.

೨. ದೇವಲೋಕ ಮರ್ತ್ಯಲೋಕವೆಂಬಿವು ಬೇರಿಲ್ಲ ಕಾಣಿರಣ್ಣಾ. ಈ ಲೋಕದೊಳಗೆ ಮತ್ತನಂತಲೋಕ. ಶಿವಲೋಕ ಶಿವಾಚಾರವಯ್ಯ. ಶಿವಭಕ್ತನಿದ್ದ ಠಾವೇ ದೇವಲೋಕ ಶಿವಭಕ್ತನಂಗಣವೇ ವಾರಣಾಸಿ. ಕಾಯಕವೇ ಕೈಲಾಸ ಇದು ಸತ್ಯ ಕೂಡಲಸಂಗಮದೇವ.

೩ ದೇವಲೋಕ ಮರ್ತ್ಯಲೋಕವೆಂಬಿವು ಬೇರಿಲ್ಲಕಾಣಿರಣ್ಣಾ. ಸತ್ಯವ ನುಡಿವುದೇ ದೇವಲೋಕ ಮಿಥ್ಯವನುಡಿವುದೇ ಮರ್ತ್ಯಲೋಕ.

ಆಚಾರವೇ ಸ್ವರ್ಗ, ಅನಾಚಾರವೇ ನರಕ ಇದಕ್ಕೆ ನೀವೇ ಪ್ರಮಾಣ ಕೂಡಲಸಂಗಮದೇವ.

೪. ಪುಣ್ಯ ಪಾಪವೆಂಬವು ತಮ್ಮ ಇಷ್ಟ ಕಾಣಿರಣ್ಣಾ. ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದಡೆ ನರಕ. ದೇಶಭಕ್ತ ಜಯಜಯ ಎಂಬ ನುಡಿಯೊಳಗೆ ಕೈಲಾಸವೈದುವು ಕೂಡಲಸಂಗಮದೇವಾ.

೫. ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರಮನೆಯಲ್ಲು ಕಿಚ್ಚಿದ್ದು ಸುಡುವಾಗ ಬಚ್ಚಲ ನೀರು ಬೀದಿಯ ಧೂಳು ಹೊಯ್ದು ಬೊಬ್ಬಿಟ್ಟಿಲ್ಲರ ಕರೆವರಯ್ಯಾ. ವಂದನೆಯ ಮರೆದು ನಿಂದಿಸುತಿರ್ದರಲ್ಲಾ. ಕೂಡಲಸಂಗಮದೇವಾ.

೬. ದೇವ ದೇವ ಬಿನ್ನಪವ ಅವಧಾರು. ವಿಪ್ರವೊದಲು ಅಂತ್ಯಜ ಕಡೆಯಾಗಿ ಶಿವಭಕ್ತರನೆಲ್ಲ ಒಂದೇ ಎಂಬೆ. ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲ ಒಂದೇ ಎಂಬೆ. ಹೀಗೆಂದು ನಂಬುವ ದೆನ್ನ ಮನವು. ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹ ಪುಳ್ಳರೆ ನೀನಂದೇ ಮೂಗು ಕೊಯ್ಯಿ ಕೂಡಲಸಂಗಮದೇವಾ.

ವಚನಕಾರರ ಈ ತರದ ಬೋಧನೆಯಿಂದ ದೇವರ ವಿಷಯಕ್ಕಿದ್ದ ತಪ್ಪು ಕಲ್ಪನೆಗಳು ದೂರಾದವು. ಧರ್ಮದ ಮೂಢನಂಬಿಕೆಗಳು ಹಾರಿ ಹೋದವು. ಜನಾಂಗದಲ್ಲಿ ಒಕ್ಕಟ್ಟು ಬೆಳೆಯಹತ್ತಿತು. ಬಿಕ್ಕಟ್ಟು ಪರಿಹಾರವಾಗುತ್ತಾ ಬಂದಿತು. ಆಗಿನ ಕಾಲದ ಪಂಡಿತರ ಜ್ಞಾನಸಂಚಯಕ್ಕೆ ಗೀರ್ವಾಣ ಭಾಷೆಇದ್ದಂತೆ ಬಹುಸಂಖ್ಯಾಕರಾದ ಸಾಮಾನ್ಯ ಜನರ ಜ್ಞಾನಸಂಚಯಕ್ಕೆ ಕನ್ನಡ ಭಾಷೆಯೇ ಮಾತೃತ್ವದ ಸ್ಥಾನವನ್ನು ಪಡೆಯಿತು.

ಇನ್ನು ವಚನಕಾರರ ಶಿಕ್ಷಣವು ರಾಷ್ಟ್ರೀಯತೆಗೆ ಸಾಧಕವೇ ಬಾಧಕವೇ ಈ ಪ್ರಶ್ನೆಗೆ ನಾನು ಉತ್ತರ ರೂಪವಾಗಿ ಈಗಿನ ಕಾಲದಲ್ಲಿ ರಾಷ್ಟ್ರದ ಪುನರ್ಘಟನೆಯಲ್ಲಿ ಅದರಲ್ಲಿಯೂ ವಿಶೇಷತಃ ಶಿಕ್ಷಣದ ವಿಷಯದಲ್ಲಿ ಮಖ್ಯ ಪಾತ್ರವನ್ನು ವಹಿಸಿದ ಮಹಾತ್ಮಾ ಗಾಂಧಿಯವರ ವಿಚಾರಗಳನ್ನೇ ತಮ್ಮ ಮುಂದಿಡುತ್ತೇನೆ.

(೧) ಯಾವುದು ಚಿತ್ತಶುದ್ಧಿಯನ್ನು ಮಾಡುವದಿಲ್ಲವೋ ಮನಸ್ಸನ್ನು ಮತ್ತ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳಲು ಕಲಿಸುವದಿಲ್ಲವೋ ಧೈರ್ಯವನ್ನೂ ಸ್ವಾವಲಂಬನವನ್ನೂ ಹುಟ್ಟಿಸುವದಿಲ್ಲವೋ ಉಪಜೀವಿಕೆಯ ಮಾರ್ಗಗಳನ್ನು ತೋರಿಸುವದಿಲ್ಲವೋ ಪಾರತಂತ್ರ್ಯದಿಂದ ವಿಮುಗಡೆಯಾಗುವದಕ್ಕಾಗಿ ಸ್ವಾತಂತ್ರ್ಯದಿಂದ ಇರುವದಕ್ಕಾಗಿ ಕಷ್ಟಕ್ಕೆ ಸಾಹಸ, ಸಾಮರ್ಥ್ಯವನ್ನು ಹುಟ್ಟಿಸುವದಿಲ್ಲವೋ ಆ ಶಿಕ್ಷಣದಲ್ಲಿ ಅರಿವಿನ ಆಗರವೂ ತಾರ್ಕಿಕ ಕೌಶಲ್ಯವೂ ಭಾಷಾ ಪಾಂಡಿತ್ಯವೂ ಎಷ್ಟೇ ಇದ್ದರೂ ಅದು ಶಿಕ್ಷಣವೆನಿಸುವದಿಲ್ಲ. ಅದು ಅಪೂರ್ಣ ಶಿಕ್ಷಣವೆನಿಸುವದು.

(೨) ಆದರ್ಶ ಶಿಕ್ಷಕನು ವಿದ್ಯಾರ್ಥಿಯ ಅಭ್ಯಾಸದ ಕಡೆಗೆ ಅಷ್ಟೇ ಗಮನವನ್ನು ಕೊಡದೆ, ಅವನ ಇಡೀ ಜೀವನದ ಉನ್ನತಿಯ ಕಡೆಗೆ ಸಂಪೂರ್ಣ ಲಕ್ಷ್ಯಗೊಟ್ಟು ಅವನ ಅಂತರಾಳದಲ್ಲಿ ಇಳಿಯಲು ಪ್ರಯತ್ನಿಸುವನು.

ಈ ಪ್ರಕಾರ ಉಭಯ ಮಹಾತ್ಮರ ಶಿಕ್ಷಣದ ವಿಚಾರಗಳನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ, ವಿಶೇಷತಃ ಬಿನ್ನಾಭಿಪ್ರಾಯಗಳು ಕಂಡುಬರುವದಿಲ್ಲ. ಆದ್ದರಿಂದ ವಚನಕಾರರು ರಾಷ್ಟ್ರೀಯ ಧ್ಯೇಯವನ್ನೇ ಶಿಕ್ಷಣದ ಮೂಲಮಂತ್ರವನ್ನಾಗಿ ಮಾಡಿದರು.

ಉದ್ಯೋಗ.

ಯಾವದಾದರೊಂದು ರಾಷ್ಟ್ರ ಅಥವಾ ಜನಾಂಗದ ಸಾಂಪತ್ತಿಕ ಸ್ಥಿತಿಯು ಉನ್ನತಿಯಾಗಬೇಕಾದರೆ, ಆ ರಾಷ್ಟ್ರದಲ್ಲಿ ಔದ್ಯೋಗಿಕ ಸುಧಾರಣೆಯಾಗುವದು ಅವಶ್ಯವದೆ. ಆ ಪ್ರಕಾರ ನಮ್ಮ ವಚನಕಾರರು ಜನಾಂಗದೊಳಗೆ ಉದ್ಯೋಗಕ್ಕೆ ಒಳ್ಳೇ ಮಹತ್ವವನ್ನು ಕೊಟ್ಟಿದ್ದಾರೆ. ಯಾಕಂದರೆ ಅವರು ಸಮಾಜದಲ್ಲಿ ಯಾವದೇ ತರಗತಿಯ ಉದ್ಯೋಗವಿದ್ದರೂ ಅದಕ್ಕೆ ಸಮಾನ ಯೋಗ್ಯತೆಯನ್ನು ಕೊಟ್ಟಿದ್ದಾರೆ. ಮತ್ತು ಸಮಾಜದಲ್ಲಿ ಸಕಲರೂ ಯಾವದಾದರೊಂದು ಉದ್ಯೋಗ ಮಾಡಿಯೇ ತೀರಬೇಕೆಂಬ ಸ್ವಾವಲಂಬನ ತತ್ವವನ್ನು ಜನಾಂಗದೊಳಗೆ ತುಂಬಿದರು. ಇದರಿಂದ ಪ್ರತಿಯೊಬ್ಬ ಮನುಷ್ಯನು ಯಾವದಾದರೊಂದು ಉದ್ಯೋಗವನ್ನು ಮಾಡಿಯೇ ಹೊಟ್ಟೆ ತುಂಬಿಕೊಳ್ಳಬೇಕಾಯಿತು. ವಚ

ನಕಾರದಿಂದ ಪೂರ್ವದಲ್ಲಿ ಬಡಿಗ, ಸಿಂಪಿಗ, ಅಕ್ಕಸಾಲಿಗ, ಕಮ್ಮಾರ ಮೊದಲಾದ ಉದ್ಯೋಗಗಳು ಹೀನವಾದವುಗಳೆಂದೂ ಇಂಥ ಕೆಲಸಗ ಳನ್ನು ಮಾಡುವವರು ಕೀಳು ಕುಲದವರೆಂದೂ ತಿಳಿಯುತ್ತಿದ್ದರು. ವಚ ನಕಾರರು ಇಂಥ ಮೂಢ ವಿಚಾರವನ್ನು ತೆಗೆದುಹಾಕಿ ಉದ್ಯೋಗದಲ್ಲಿ ಮೇಲು ಕೀಳುಗಳೆಂಬ ಭಾವನೆಯು ತಪ್ಪೆಂದೂ ಇಂಥ ವಿಚಾರಗಳು ರಾಷ್ಟ್ರಘಾತುಕವಾದ ಕೀಳು ಭಾವನೆ ಎಂದೂ ಜನರಿಗೆ ಬೋಧನೆ ಯನ್ನು ಮಾಡಿದರು.

ಕಾಯಕದ ಮಹತ್ವ.

೧. ಕೃಷಿಕೃತ್ಯ ಕಾಯಕದಿಂದಾದಡೇನು ತನು ಮನ ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ. ಅದೆಂಬೆನೆ, ಅತನ ತನು ಶುದ್ಧ ಮನಶುದ್ಧ ನಡೆಶುದ್ಧ ನುಡಿ ಎಲ್ಲ ಪಾವನ. ಅತನಿಗೆ ಉಪದೇಶವ ಮಾಡಿದಾತನೇ ಪರಮ ಸದ್ಗುರು. ಅಂತಪ್ಪ ಸದ್ಭಕ್ತನ ಮನೆಯು ಕೈಲಾಸವೆಂದು ಹೊಕ್ಕು ಲಿಂಗಾರ್ಚ ನೆಯ ಮಾಡುವ ಜಂಗಮವೇ ಜಗತ್ಪಾವನ, ಇಂತಪ್ಪವರ ನಾನು ನೆರೆ ನಂಬಿ ನಮೋ ನಮೋ ಎಂಬೆನಯ್ಯ ಕೂಡಲ ಸಂಗಮದೇವಾ.

೨. ಕಾಯಕದಲ್ಲಿ ನಿರುತನಾದಡೆ, ಗುರುದರುಶನವಾದರೂ ಮರೆ ಯಬೇಕು, ಲಿಂಗಪೂಜೆಯಾದರೂ ಮರೆಯಬೇಕು, ಜಂಗಮ ಮುಂದೆ ಇದ್ದಡೆಯೂ ಹಂಗುಹರಿಯಬೇಕು, ಕಾಯಕವೇ ಕೈಲಾಸವಾವ ಕಾರಣ ಅಮುಕೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು.

ಕಾಯಕದಲ್ಲಿ ಜಾತಿಭೇದವಿಲ್ಲ.

೩. ದೇವಸಹಿತ ಭಕ್ತನ ಮನೆಗೆ ಬಂದರೆ, ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ ನಿಮ್ಮ ಪುರಾತನರಾಣೆ, ತಲೆದಂಡ ತಲೆ ದಂಡ ಕೂಡಲ ಸಂಗಮದೇವಾ ಭಕ್ತರಲ್ಲಿ ಕುಲವನರಸಿಹೊಡೆ ನಿಮ್ಮ ರಾಣೆವಾಸದಾಣೆ.

ಉದ್ಯೋಗದಲ್ಲಿ ನೈತಿಕ ಬೆಂಬಲವಿರಬೇಕು.

೪. ಕಂದಿಸಿ ಕುಂದಿಸಿ ಬಂಧಿಸಿ ನೋಯಿಸಿ; ಕಂಡ ಕಂಡವರ ಬೇಡಿ ತಂದು ಜಂಗಮ ಲಿಂಗಕ್ಕೆ ಮಾಡಿಹನೆಂಬ ದಂದುಗದ ಮಾಟಕ್ಕೆ ಲಿಂಗ ನೈವಿದ್ಯಸಲ್ಲದು. ತನುಕರಗಿ ಮನಬಳಲಿ ಬಂದ ತೆರಿಪ ಅಸುವ ಪಡೆದು ಸಂದಿಲ್ಲದೆ ಸಂಶಯವಿಲ್ಲದೆ ಜಂಗಮ ಲಿಂಗಕ್ಕೆ ದಾಸೋಹವೇ ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗ ಕ್ಕರ್ಪಿತವಲ್ಲದೆ ದುರಾಶೆಯಿಂದ ಬಂದುದು ಅನರ್ಪಿತ ಇದು ಕಾರಣ ಸತ್ಯ ಶುದ್ಧ ಕಾಯಕದ ನಿತ್ಯ ದ್ರವ್ಯವಾದರೆ ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯಾ.

ಉದ್ಯೋಗದಲ್ಲಿ ಸ್ತ್ರೀಯರ ಸಾಹಸ.

೫. ನಾತಿರುಹುತಿಹ ರಾಟೆಯು ಕುಲಜಾತಿಯ ಕೇಳರಣ್ಣಾ. ಪಡಿಯಣ ಹಲಗೆ ಬ್ರಹ್ಮ, ತೋರಣ ವಿಷ್ಣು. ನಿಂದ ಜೊಂಬೆ ಮಹಾ ರುದ್ರ, ರುದ್ರನ ಬೆಂಬಳಿಯವೆರಡು ಸೂತ್ರದ ಕರ್ಣ ಅರಿವೆಂಬ ಕದರು ಭಕ್ತಿಯೆಂಬ ಕೈಯ್ಯಲ್ಲಿ ತಿರುಹಲಾಗಿ ಸುತ್ತಿತ್ತು ನೂಲು. ಕದಿರು ತುಂಬಿತ್ತು ರಾಟೆಯು ತಿರುಪಲಾರೆ. ಎನ್ನ ಗಂಡ ಪುಟ್ಟಿಸಿದ ಕದಿರಿಂದೆ ಮೈಯ್ಯೊಡೆಯ ಗುಮ್ಮೇಶ್ವರ.

ಈ ಪ್ರಕಾರ ವಚನಕಾರರು ಔದ್ಯೋಗಿಕ ಕ್ರಾಂತಿಯನ್ನು ಮಾಡಿ ರಾಷ್ಟ್ರೀಯತ್ವದ ಮುಖ್ಯ ಅಂಗವೆನಿಸಿದ ಸಾಂಪತ್ತಿಕ ಸುಧಾರಣೆಗಾಗಿ ಪ್ರಯತ್ನ ಮಾಡಿದರು. ಇದು ಏನು ಸಾಮಾನ್ಯ ಕೆಲಸವಲ್ಲ. ಆಧು ನಿಕ ಹಿಂದುಸ್ತಾನದಲ್ಲಿಯೂ ಕೂಡ ರಾಷ್ಟ್ರ ಮುಖಂಡರು ನಿರುದ್ಯೋ ಗದ ನಿವಾರಣೆಗಾಗಿ ಸತತ ಪ್ರಯತ್ನ ಮಾಡಹತ್ತಿದ್ದಾರೆ. ಆದ್ದರಿಂದ ಸಮ್ಮ ವಚನಕಾರರ ಔದ್ಯೋಗಿಕ ಆಂದೋಲನವು ಜನಾಂಗದ ಸಾಂಪ ತ್ತಿಕ ಸ್ಥಿತಿಯನ್ನು ಸುಧಾರಿಸಿ, ರಾಷ್ಟ್ರೀಯ ಭಾವನೆಯನ್ನು ಉಜ್ವಲಗೊ ಳಿಸುವದೇ ಆಗಿದೆ.

ಸ್ತ್ರೀ ಸ್ವಾತಂತ್ರ್ಯ.

ಸಧ್ಯದ ಜಗತ್ತಿನೊಳಗೆ ಸ್ತ್ರೀಯರಿಗೆ ಸ್ವಾತಂತ್ರತೆ ಕೊಡಬೇಕೋ ಕೊಡಬಾರದೋ ಎಂಬದು ಇನ್ನೂ ಚರ್ಚಾಸ್ಪದ ವಿಚಾರವಾಗಿದೆ.

ಘ್ಯಾಸಿಸ್ಸುಂ ಮತ್ತು ನಾಜೀ ತತ್ವಗಳು ಸ್ತ್ರೀಯರ ಸ್ವಾತ-ತ್ರ್ಯಕ್ಕೆ ನಿರ್ಬಂಧ
ವಿರಬೇಕೆಂದೂ, ಬೊಲ್ಸೆವಿಜಂ ಮತ್ತು ಪ್ರಜಾಪಕ್ಷಗಳು ಅವರಿಗೆ
ಸ್ವಾತಂತ್ರ್ಯ ಕೊಡಬೇಕೆಂದೂ ವಾದಿಸುತ್ತವೆ. ಆದರಂತೆ ನಮ್ಮ
ಪೌರ್ವಾತ್ಯ ಜನಾಂಗದಲ್ಲಿಯೂ ಕೂಡ ಮತಭೇದ ಆದೆ. ಅಂತೂ
ಜಗತ್ತಿನಲ್ಲಿ ಸ್ತ್ರೀ ಸ್ವಾತಂತ್ರ್ಯವು ವಾದಗ್ರಸ್ತ ವಿಷಯವಾಗಿದೆ. ವಚನ
ಕಾರರು ಸ್ತ್ರೀ ಸ್ವಾತಂತ್ರ್ಯತೆಗೆ ಒಪ್ಪಿಗೆಯನ್ನು ಕೊಟ್ಟಿರಾದರೂ ಅದು
ನೈತಿಕ ಶಕ್ತಿಯ ಆಧಾರದ ಮೇಲೆ ನಿಲ್ಲಬೇಕೆಂಬ ಒಂದು ಸಂಕೋಚ
ಯನ್ನು ಬಗಿದಿದ್ದಾರೆ ಅಂದರೆ ನಮ್ಮ ವಚನಕಾರರ ಸ್ತ್ರೀ ಸ್ವಾತಂತ್ರ್ಯವು
ನೀತಿಯುಕ್ತವಾದುದು. ಸ್ವಾಭಾವಿಕವಾಗಿ ಸ್ತ್ರೀಯರು ಕೋಮಲಹೃದಯಿ
ಗಳು ಮತ್ತು ಪ್ರೇಮಿಗಳು ಇನ್ನು ವಿಷಯವಾಸನೆಗಳಿಯುವಂಥ
ಪ್ರೇಮದಿಂದ ರಾಷ್ಟ್ರಕ್ಕೆ ಅಹಿತನಾಗಬಹುದು; ಶುದ್ಧ ಸಾತ್ವಿಕ ಪ್ರೇಮ
ದಿಂದ ಹಿತವಾಗಬಹುದು. ಶುದ್ಧ ಸಾತ್ವಿಕ ಪ್ರೇಮದಿಂದ ಕೂಡಿದ
ಸ್ತ್ರೀ ಸ್ವಾತಂತ್ರ್ಯವೇ ನಮ್ಮ ವಚನಕಾರರ ತತ್ವವಾದ್ದರಿಂದ ವಚನ
ಕಾರರ ಸ್ತ್ರೀ ಸ್ವಾತಂತ್ರ್ಯತೆಯಲ್ಲಿ ಒಂದು ಅದ್ಭುತ ಶಕ್ತಿ ಇದೆ. ಸ್ತ್ರೀಯ
ರಿಗೆ ಸ್ವಾತಂತ್ರ್ಯವನ್ನು ಕೊಟ್ಟು ಅವರ ನೈತಿಕ ವೃತ್ತಿಯನ್ನೇ ಹಾಳ
ಗೆಡಿಸಿದ ಜನಾಂಗಕ್ಕೂ ನಮ್ಮ ವಚನಕಾರರು ಬೋಧನೆಯನ್ನು ಮಾಡಿ
ದ್ದಾರೆ. ಮತ್ತು ಸ್ತ್ರೀಯರನ್ನು ದಾಸ್ಯದಲ್ಲಿಟ್ಟು ಅವರನ್ನು ಮನುಷ್ಯತ್ವದ
ಸೇವೆಯಿಂದ ಹೊರಮಾಡಿದ ಜನಾಂಗಕ್ಕೂ ತಿಳಿ ಹೇಳಿದ್ದಾರೆ ಅಂತೂ
ನಮ್ಮ ವಚನಕಾರರ ಸ್ತ್ರೀ ಸ್ವಾತಂತ್ರ್ಯವು ಜಗತ್ತಿಗೇನೇ ಬುದ್ಧಿಕಲಿಸು
ವಂತಹದು ಇದೆ. ಮತ್ತು ಅವರ ಈ ಘೋರಣೆಯಿಂದ ಸದ್ಯದ ಜಗ
ತ್ತಿನಲ್ಲಿ ಸ್ತ್ರೀ ಸ್ವಾತಂತ್ರ್ಯದ ವಿಷಯಕ್ಕೆ ಇದ್ದ ವಾದವು ಬಗೆಹರಿಯ
ಬಹುದು ಎಂದು ತೋರುತ್ತದೆ. ವಚನಕಾರರ ಘೋರಣೆಯನ್ನು ಅವರ
ವಚನಗಳಿಂದಲೇ ತಿಳಿಯಲಾಗಿದೆ

೧. ಪತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಪತಿ
ಪತಿಗಳೊಂದಾಗದವನ ಭಕ್ತಿ ಅಮೃತದೊಳ್ ವಿಷಬೆರಸಿದಂತೆ ಕಾಣಾ
ರಾಮನಾಥಾ.

೨. ಉಭಯ ದೃಷ್ಟಿಯಿಂದ ದೃಷ್ಟನ ಕಾಂಬಂತೆ ದಂಪತಿ ಏಕ
ಭಾವವಾಗಿರಿಂದಲ್ಲಿ ನಮಹೇಶ್ವರಲಿಂಗಕ್ಕೆ ಆರ್ಹಿತವಾಯಿತ್ತು ಸಂಗನ
ಬಸವಣ್ಣಾ.

ಈ ವಚನಗಳಿಂದ ನೋಡಿದರೆ, ಸ್ತ್ರೀ ಮತ್ತು ಪುರುಷ
ರಿಂದ, ಒಂದೇ ಜೀವನದ ಎರಡು ದೇಹಗಳು, ಎಂಬ ಕಲ್ಪನೆಯನ್ನು
ತಂದುಕೊಟ್ಟು ಮೇಲು ಕೀಳೆಂಬ ಭಾವನೆಯನ್ನು ತಿತ್ತಿಗೆದರು. ಇದ
ರಿಂದ ಸಮಾಜದಲ್ಲಿ ಎಂಥ ಸ್ತ್ರೀಯರು ಉತ್ಪನ್ನವಾದರೆಂದರೆ, ಆಧ್ಯಾ
ತ್ಮಿಕ ಕ್ಷೇತ್ರದ ಮಹೋನ್ನತ ಶಿಖರವೆನಿಸಿದ ಐಕ್ಯಸ್ಥಲದವರೆಗೂ ಹೋಗಿ
ಮುಟ್ಟಿದರೆಂಬುದನ್ನು ಅವರ ವಚನಗಳಿಂದ ಸ್ಪಷ್ಟೀಕರಣ ಮಾಡಿದ್ದೇನೆ.

೩ ಅಂಗದೊಳಗೆ ಅಂಗವಾಗಿ ಅಂಗ ಲಿಂಗೈಕ್ಯವ ಮಾಡಿದೆ.
ಮನದೊಳಗೆ ಮನವಾಗಿ ಮನವ ಲಿಂಗೈಕ್ಯವ ಮಾಡಿದೆ, ಭಾವದೊ
ಳಗೆ ಭಾವವಾಗಿ ಭಾವಲಿಂಗೈಕ್ಯವ ಮಾಡಿದೆ, ಅರಿವಿನೊಳಗೆ ಅರಿವಾಗಿ
ಅರಿವು ಲಿಂಗೈಕ್ಯವ ಮಾಡಿದೆ, ಕ್ರೀಯುಗಳೆಲ್ಲವ ನಿಲಿಸಿ ಕ್ರೀಯಾತೀತ
ವಾಗಿ ನಿಷ್ಪತ್ತಿ ಲಿಂಗೈಕ್ಯವಾದೆ ನಾನೆಂಬುದ ನಿಲಿಸಿ ನೀನೆಂಬುದ ಕೆಡಿಸಿ
ಉಭಯ ಲಿಂಗೈಕ್ಯವ ಮಾಡಿದೆ, ಚನ್ನಮಲ್ಲಿಕಾರ್ಜುನನೊಳಗೆ ನಾನಳಿ
ವೆನಾಗಿ ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ ಸಂಗನ
ಬಸವಣ್ಣಾ.

೪. ನಾನು ನಿನಗೊಲಿದೆ ನೀನು ಎನಗೊಲಿದೆ, ನೀನೆನ್ನನಗಲ
ದಿಪ್ಪೆ, ನಾನಿನ್ನನಗಲದಿಪ್ಪೆ ನಿನಗೆ ನನಗೆ ಬೇರೊಂದು ತಾವುಂಟೇ?
ಈ ಕರುಣೆ ಎಂಬುವ ನಾ ಬಲ್ಲೆ. ನೀನಿರಿಸಿದ ಗತಿಯೊಳಗೆ ಇಪ್ಪೆಯಾ
ಸಯ್ಯಾ. ನೀನೇ ಬಲ್ಲೆ ಚನ್ನಮಲ್ಲಿಕಾರ್ಜುನ.

ಈ ಪ್ರಕಾರ ವಚನಕಾರರು ಸ್ತ್ರೀಯರಿಗೆ ಸ್ವಾತಂತ್ರ್ಯತೆಯನ್ನು
ಕೊಟ್ಟ ಕಾರಣ ಸಮಾಜದಲ್ಲಿ ಅಕ್ಕಮಹಾದೇವಿಯರಂಥ ಸ್ತ್ರೀ ರತ್ನಗಳು
ಉದಯವಾದರು. ಇಷ್ಟೇ ಅಲ್ಲ ಶಿವಾನುಭವ ಮಂಟಪದ ಮುಖ್ಯ
ಪೊಳು ನಿಂತು ಜ್ಞಾನ ಭಾಂಡಾರವೆನಿಸಿದ ಅಲ್ಲಮ ಪ್ರಭುವಿನನ್ನೂ
ಭಕ್ತಿಯ ಕಣಿಯಾವಂಥ ಬಸವಣ್ಣನವರನ್ನೂ ವಾದದಲ್ಲಿ ಸೋಲಿಸಿ.
ಆತ್ಮ ತೇಜಸ್ಸಿನ ಅಖಂಡ ವೈಭವವನ್ನು ಮೆರೆಸಿದರು. ಆದ್ದರಿಂದ
ನಮ್ಮ ಸ್ತ್ರೀ ಸ್ವಾತಂತ್ರ್ಯತೆಯಲ್ಲಿ ಭಕ್ತಿಯ ಭಾಂಡಾರವಿದೆ. ಸತ್ಯದ
ಸೌಂದರ್ಯವಿದೆ ಪ್ರೇಮದ ನನೆ ಇದೆ ಅಹಿಂಸೆಯ ಗೊನೆ ಇದೆ ವಾದ
ಗ್ರಸ್ತ ಜಗತ್ತು ಇತ್ತ ಲಕ್ಷ್ಯ ಕೊಡುವದೇ?

ಅಹಿಂಸೆ.

ವಚನಕಾರರ ಅಹಿಂಸೆಯ ವಿಷಯಕ್ಕೆ ಹೇಳುವದಾದರೆ ಅವರು ಪ್ರಾಣಿಗಳ ಹಿಂಸೆ ಮಾಡಬಾರದು. ಇಷ್ಟೇ ಅಲ್ಲ ಎರಡನೇಯವರ ಮನಸ್ಸು ನೋಯಿಸುವಂಥ ವೃತ್ತಿ ಕೂಡ ಹಿಂಸೆ ಎಂದೆ ಅವರ ಭಾವನೆ ಇದ್ದಂತೆ ಕಂಡು ಬರುತ್ತದೆ. ಯಾಕಂದರೆ ಬಸವಾದಿ ಪ್ರಮಥರ ಯಾವ ವಚನಗಳನ್ನು ಒಳಹೊಕ್ಕು ನೋಡಿದರೂ ಅಲ್ಲಿ ಕಠೋರತೆಯ ಲವಲೇಶವು ಕೂಡ ಕಂಡುಬರುವದಿಲ್ಲ. ಒಮ್ಮೊಮ್ಮೆ ಎರಡನೇಯರ ವಿಚಾರಗಳನ್ನು ಖಂಡನೆ ಮಾಡಿರುವರು. ಆದರೆ ಅದರಲ್ಲಿಯೂ ಕೂಡ ಒಂದು ತರದ ವಿನಯವಿದೆ.

೧. ತನುವ ನೋಯಿಸಿ ಮನವ ಬಳಲಿಸಿ ನಿಮ್ಮ ಪಾದವ ಪಿಡಿವವರೊಳರೇ? ಈ ನುಡಿ ಸುಡದಿಹುದೇ? ಕೂಡಲ ಸಂಗಮದೇವಾ ಶಿವಭಕ್ತರ ನೋವು ಲಿಂಗದ ನೋವು.

೨. ಜಾಲಗಾರನೊಬ್ಬ ಜಲವಹೊಕ್ಕು ಶೋಧಿಸಿ, ಹಲವು ಪ್ರಾಣಿಗಳ ಕೊಂದು ನಲನಲಿದಾಡುವ ತನ್ನ ಮನೆಯಲೊಂದು ಶಿಶು ಸತ್ತರೆ ಅದಕೆ ಮರುಗುವಂತೆ ಅವಕೇಕೆ ಮರುಗನು? ಚನ್ನಮಲ್ಲಿಕಾರ್ಜುನನ ಭಕ್ತನಾಗಿರ್ದು ಜೀವ ಹಿಂಸೆಮಾಡುವ ಮಾದಿಗರ ನೇನೆಂಬೆನಯ್ಯಾ?

೩. ನುಡಿಯಲ್ಲಿ ಕಿಂಕರತ್ವವನರಿದು ಕರವ ಬೀಸುವಲ್ಲಿ ತುಷಾರ ಕೀಟಕವನರಿದು ಅಡಿ ಇಡುವಲ್ಲಿ ಪೊಡವಿಯಲ್ಲಿ ಹೊರಹೊಮ್ಮಿದ ಜೀವನ ಜೀತನಾದಿಗಳನರಿದು ಮುತ್ತಿ ಗಿಡವ ಹಿಡಿವಲ್ಲಿ ಮತ್ತೊಂದು ಒಡಗೂಡುವಲ್ಲಿ ಒಡಗೂಡಿ ಬಿಡುವಲ್ಲಿ ಸರ್ವ ದಯಕ್ಕೆ ಪುದಿ ಪುಚ್ಚವಿಲ್ಲದಿರೆ ಬೇಕು ಇಂತೀ ಸಡಗರದ ಚಿತ್ತ ದಸರೇಶ್ವರ ಲಿಂಗನೊಡಗೂಡುವ ಭಕ್ತಿ.

ಆದ್ದರಿಂದ ನಮ್ಮ ವಚನಕಾರರು ಶುದ್ಧ ಅಹಿಂಸಾ ವಾದಿಗಳು.

ಅನೇಕರು ರಾಜಕಾರಣಕ್ಕೂ ಧರ್ಮಕ್ಕೂ ಏನೂ ಸಂಬಂಧವಿಲ್ಲ ಇದಕ್ಕೆ ರಾಜಕೀಯ ಸ್ವರೂಪ ಕೊಡುವದು ತಪ್ಪು ಎಂದು ತಿಳಿಯುತ್ತಾರೆ. ಆದರೆ ಯಾವದಾದರೂ ರಾಜ್ಯವು ಬಹುಕಾಲ ಸ್ಥಿರವಾಗಿ ಉಳಿಯಬೇಕಾದರೆ ನೀತಿಯ ನೆಲೆಗಟ್ಟಿನ ಮೇಲೆಯೇ ಅದು ನಿಲ್ಲಬೇಕು. ಇಲ್ಲದಿದ್ದರೆ ಅದು ಬಹು ದಿನಸ ಬಾಳಲಾರದು. ನೀತಿಯಿಲ್ಲದ

ರಾಜಕಾರಣ ರಾಷ್ಟ್ರೀಯತ್ವವೇ ಅಲ್ಲ ಅದು ಬಂಡುಗಾರಿಕೆಯಲ್ಲಿ ಬರುತ್ತದೆ. ನೀತಿ ಎಂದರೆ ಸತ್ಯ ಪ್ರೇಮ ಅಹಿಂಸೆ ಇವುಗಳ ಮಿಲನದಿಂದಾದ ಒಂದು ತತ್ವ ಇಂಥ ತತ್ವಗಳ ಭೂಮಿಕೆಯ ಮೇಲೆಯೇ ನಮ್ಮ ವಚನಕಾರರು ರಾಷ್ಟ್ರೀಯತ್ವದ ನಿಶಾನೆಯನ್ನು ನಿಲ್ಲಿಸಿದರು.

ಇನ್ನು ಅಹಿಂಸಾ ಮತ್ತು ಪ್ರೇಮದ ವಿಷಯಕ್ಕೆ ಮಹಾತ್ಮಾ ಗಾಂಧಿಯವರು ಅಂದಿರುವದೇನೆಂದರೆ, ಜಗದಾಂತರ್ಯಾ ಶಕ್ತಿಗಳಲ್ಲಿ ಪ್ರೇಮದಷ್ಟು ಅದ್ಭುತವಾದ ಶಕ್ತಿ ಮತ್ತೊಂದಿಲ್ಲ. ಅಂಥ ಶುದ್ಧ ಸಾತ್ವಿಕ ಪ್ರೇಮವೇ ಅಹಿಂಸೆಯು. ಈತರದ ಒಂದು ದಿವ್ಯಶಕ್ತಿಯು ಬಸವಣ್ಣನವರ ಹೃದಯದಲ್ಲಿಯೂ ಕೂಡ ಇತ್ತೆಂದು ಅವರ ವಚನಗಳ ಮೇಲಿಂದ ತಿಳಿಯುತ್ತದೆ. ಯಾವಾತನ ಹೃದಯದಲ್ಲಿ ಪ್ರೇಮದ ಝರಿಯು ಹರಿದಿದೆಯೋ ಅವನಲ್ಲಿ ಜನರನ್ನು ಒಲಿಸಿಕೊಳ್ಳುವ ಶಕ್ತಿ ಇರುತ್ತದೆ.

ಈ ಪ್ರಕಾರ ನಮ್ಮ ಬಸವಣ್ಣನವರು ಪ್ರತ್ಯಕ್ಷ ಪ್ರೇಮ ಮೂರ್ತಿಗಳಾದ್ದರಿಂದ ಆಗಿನಕಾಲದ ಜನರಿಗೆಲ್ಲ ಬೇಕಾದವರಾದರು, ಆದ್ದರಿಂದ ವಿಜ್ಜಳರಾಜನು ಬಹು ಸಂಖ್ಯಾಕರ ಬೆಂಬಲವನ್ನು ಪಡೆದ ಬಸವಣ್ಣನವರಿಗೆ ತನ್ನ ರಾಜನೀತಿಶಾಸ್ತ್ರಕ್ಕನುಸರಿಸಿ ಪ್ರಧಾನಪಟ್ಟಕ್ಕೇರಿಸಬೇಕಾಯಿತು. ಈ ಪ್ರಕಾರ ಬಸವಣ್ಣನವರು ಬಸವಣ್ಣವರಾಗಿಯೇ ಉಳಿಯದೆ ಮುಂತಿಯರ್ಯ ಬಸವಣ್ಣನವರಾದರು. ಧರ್ಮ ಮತ್ತು ರಾಜಕಾರಣ ಇವು ಒಂದೇ ನಾಣ್ಯದ ಎರಡು ಮುಗ್ಗುಲುಗಳೆಂಬುದನ್ನು ಪ್ರತ್ಯಕ್ಷತೋರಿಸಿದವರು ಆದ್ದರಿಂದ ಅಹಿಂಸೆಯಲ್ಲಿ ಒಂದು ತರದ ರಾಷ್ಟ್ರೀಯ ತೇಜವಿದೆ.

ಈ ಪ್ರಕಾರ ನಮ್ಮ ವಚನಕಾರರು ರಾಷ್ಟ್ರದಲ್ಲಿ ಸಂಘಟನೆ ಶಿಕ್ಷಣ ಪ್ರಸಾರವು ಔದ್ಯೋಗಿಕ ಪ್ರಗತಿ ಸ್ತ್ರೀ ಸ್ವಾತಂತ್ರ್ಯ ಅಹಿಂಸೆ ಮುಂತಾದ ರಾಷ್ಟ್ರಪೋಷಕವಾದ ವಿಚಾರಗಳಲ್ಲಿ ಹೊಸ ಜೈತನ್ಯವನ್ನು ತುಂಬಿದರು. ಇಂದಿನ ವರ್ತಮಾನಕಾಲದಲ್ಲಿ ನಡೆದ ಆಗಿನ ಕಾಲದ ಆಂದೋಲನವು ಈಗಿನ ಕಾಲಕ್ಕೆ ಸಹ ಅವಶ್ಯ ಪ್ರಾಯವಾಗಿದೆ. ಯಾಕಂದರೆ ಈಗಿನ ರಾಷ್ಟ್ರ ಮುಖಂಡರೂ ಕೂಡ ಅವೇ ವಿಚಾರಗಳನ್ನೇ ಮುಂದಿಟ್ಟುಕೊಂಡಿದ್ದಾರೆ. ಇವರ ಮೇಲಿಂದ ವಚನಕಾರರ ಮುಂದುಘೋರಣೆಯು ಎಷ್ಟು ಆದರ ಣೀಯವಾಗಿತ್ತೆಂಬುದು ವ್ಯಕ್ತವಾಗುತ್ತದೆ.

ಬಾರೆ! ಕಾವ್ಯರಾಣಿ.

(ಪಿ. ಎಸ್. ಎಸ್. ಪಾಟೀಲ, ಇಂಟರ ಕಾಲೇಜ ಗುಲ್ಬರ್ಗಾ.)

೧

ಬಾರೆ! ಬಾರೆ! ಕಾವ್ಯರಾಣಿ!
ಬಾರೆಯೆನ್ನ ಅರಗಿಣಿ!
ಕವಿಯ ಹೃದಯದಲ್ಲಿ ನೀನು
ಬೆರೆತು ಬೇಗ ಕೂಡಿಕೊಂಡು
ಸೊಗಸಿನಿಂದ ಸರಸವಾಡಿ
ನಲಿದು ನಲಿದು ನಲ್ಮೆಯಿಂದ
ಬಾರೆ ಬೇಗ ಮೋಹಿನಿ!
ಭರಿತ ರಸವ ಯೋಗಿನಿ!

ಬೆಳಗು ದೇವಿ ಬೆಳಗುವಾಗ
ಇಳೆಯ ಇರುಳು ಕಳೆಯುವಾಗ
ತಂಪುಗಾಳಿ ತೀಡುವಾಗ
ಕಂಪುಮನಕೆ ನೀಡುವಾಗ
ಓಡಿಬಾರೆ ಜೆಲುವ ಜಿನ್ನೆ!
ಸರಸಿಜಾಕ್ಷಿಸರಸ ರನ್ನೆ!

ಎದೆಯ ಬಳ್ಳಿಬಾಡುವಾಗ
ಮನದಶಾಂತಿ ನೀಗುವಾಗ
ಆತ್ಮಶಕ್ತಿ ಕುಂದಿದಾಗ
ಕವಿಯು ತಾನು ಬಳಲಿಬೆಂದು
ಬಯಸಿ ಬಹಳ ನಿನ್ನ ರೂಪು
ಚಿತ್ರಿಸುತ್ತ ಕರೆಯುವಾಗ
ಬಂದು ಸಿಲ್ಲೆ ಕಾಮಿನಿ!
ಪೂರ್ಣಭಾವ ಶಾಲಿನಿ!

(ಮುಂದುವರಿದುದು)

ಚಂದಿಮರಸನ ವಚನಗಳು.

ಚಂದಿಮರಸನ ವಚನಗಳು ನಮಗೆ ಸ್ವತಂತ್ರವಾಗಿ ದೊರೆತಿರುವದಿಲ್ಲ. ನಮಗೆ ಅಲ್ಲಲ್ಲಿ ದೊರೆದ ಅವನ ವಚನಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ ಈ ಗ್ರಂಥದಲ್ಲಿ ಪ್ರಸಿದ್ಧಿಸಿದ್ದೇವೆ. ಚಂದಿಮರಸನು ವಚನಕಾರರಲ್ಲಿ ಬಹು ಪ್ರಸಿದ್ಧನಾದವನು.. ಆದುದರಿಂದಲೇ ಅವನ ಉಕ್ತಿಗಳು ವಚನಗಳ ಪ್ರತಿಯೊಂದು ಸಂಗ್ರಹದಲ್ಲಿ ಬಹುಶಃ ದೊರೆಯುತ್ತವೆ. ಈ ವಚನಕಾರನ ಭಾಷೆಯಲ್ಲಿ ಕ್ಲಿಷ್ಟತೆ ಇಲ್ಲ. ಅವನ ನುಡಿಗಳು ಬಹು ಸುಲಭವೂ ಸರಳವೂ ಇರುತ್ತವೆ. ಆದರೂ ಅವುಗಳಲ್ಲಿ ಮಾಧುರ್ಯವು ತುಂಬಿರುತ್ತದೆ. ಇಲ್ಲಿ ಪ್ರಸಿದ್ಧಿಸಿದ ವಚನಗಳನ್ನು ನಾವು ಪರೀಕ್ಷಿಸಿದಲ್ಲಿ ಚಂದಿಮರಸನು, ತಾನು ಯಾರು, ವಿಶ್ವವಾವುದು, ತನಗೂ ವಿಶ್ವಕ್ಕೂ ಆವ ಸಂಬಂಧವಿದೆ, ತನ್ನನ್ನು ತಾನು ತಿಳಿಯುವದರ ಮಹತ್ವವೇನು, ಇಂಥ ಮಹತ್ವದ ವಿಷಯಗಳನ್ನು ಅವನು ಹೆಚ್ಚಿಗೆ ಚರ್ಚಿಸುತ್ತಿರುವದು ಕಂಡುಬರುತ್ತದೆ. ಅವುಗಳಲ್ಲಿ ವೀರಶೈವ ಧರ್ಮದ ತಿರುಳು ಚನ್ನಾಗಿ ಹೊರಬೀಳುತ್ತದೆ. ಅವನು ಪ್ರತಿಪಾದಿಸುವ ವಿಚಾರಗಳು ವೀರಶೈವ ಧರ್ಮದ ತತ್ವಗಳನ್ನು ಚನ್ನಾಗಿ ಸಮರ್ಥಿಸುತ್ತವೆ.

ಈ ವಚನಕಾರನು ಪುರಾತನ ಕಾಲದ ವಚನಕಾರರಂತೆ ಸ್ವಲ್ಪ ಶಬ್ದಗಳಲ್ಲಿ ಬಹ್ವರ್ಥವು ಬರುವಂತೆ ತನ್ನ ವಚನಗಳನ್ನು ರಚಿಸಿದ್ದಾನೆ. ಹೀಗೆ ಮಾಡುವಲ್ಲಿ ಅವನು ತನ್ನ ವಿದ್ವತ್ತೆಯನ್ನು ಹೊರಗೆಡುವುವ ಪ್ರಯತ್ನಕ್ಕೆ ಬಿದ್ದಿರುವದಿಲ್ಲ. ಅವನು ನುಡಿಗಳಲ್ಲಿ ಸಹಜತೆ ಇದೆ. ಪಾಂಡಿತ್ಯಾಡಂಬರಗಳೇನೂ ಇರುವದಿಲ್ಲ.

ಈತನ ಗ್ರಾಮವು ಅವನ ಮುದ್ರಿಕೆಯಲ್ಲಿ ಹೇಳಿದಂತೆ ಸಿಮ್ಮಲಿಗೆಯಾಗಿರುತ್ತದೆ. ಸಿಮ್ಮಲಿಗೆಯು ವಿಜಾಪುರ ಪಟ್ಟಣದ ದಕ್ಷಿಣಕ್ಕೆ ೩೦ ಮೈಲುಗಳಾಚೆ ಕೃಷ್ಣಾ ನದಿಯ ಥಡದಲ್ಲಿದೆ. ಇದು ಈಗ ಬಾಗೇವಾಡಿ ತಾಲೂಕಿನ ಒಂದು ಗ್ರಾಮವಾಗಿದೆ. ಈ ಗ್ರಾಮವಿದ್ದ ಸ್ಥಳವು ಬಹು ರಮಣೀಯವಾದದ್ದು. ಅಲ್ಲಿಯ ವಿಶಾಲವಾದ ಕೃಷ್ಣಾ ನದಿಯ

ಪಾತ್ರವು ಗ್ರಾಮಕ್ಕೆ ಕಳೆಯನ್ನು ತಂದಿದೆ. ಈ ಪಾತ್ರವ ಮಧ್ಯ
ಲ್ಲಿಯೇ ಚಂದಿಮರಸನ ಗುಡಿಯು ಇದೆ. ಅದಕ್ಕೆ ಊರವರು ಚಂದ
ಯ್ಯನ ಗುಡಿ ಎಂದೆನ್ನುತ್ತಾರೆ. ಗುಡಿಯ ಸುತ್ತಲೂ ಆಳವಾದ ಒಂದು
ಮಡುವು ಇದೆ. ಆದರೆ ನದಿಯ ನೀರು ತಗ್ಗಿದಾಗ ಈ ಗುಡಿಯ
ಕಟ್ಟೆಯ ಮೇಲೆ ನಿಲ್ಲಬಹುದು. ನೀರಿನ ಮಧ್ಯದಲ್ಲಿ ಗುಡಿಯು ಇರ
ದ್ದರ ಮೇಲಿಂದ ಕೃಷ್ಣಾ ನದಿಯು ತನ್ನ ಪಾತ್ರವನ್ನು ಬದಲಿಸಿ ಗುಡಿ
ಯನ್ನು ಸುತ್ತು ಹಾಕಿದೆಯೋ ಏನೋ ಎಂಬ ಸಂಶಯವು ಉಂಟಾ
ಗುತ್ತದೆ.

'ಚಂದಿಮರಸು' ಈ ಹೆಸರಿನ ಮೇಲಿಂದ ಈ ವಚನಕಾರನು ತನ್ನ
ಪೂರ್ವಾಶ್ರಮದಲ್ಲಿ ಒಂದು ಗ್ರಾಮ ಅಥವಾ ನಾಡಿನ ಒಡೆಯನಿದ್ದಿರ
ಬೇಕೆಂದು ಊಹಿಸಬಹುದಾಗಿದೆ. ಇವನ ಚರಿತ್ರೆಯು ಇನ್ನೂ ಉಪ
ಲಬ್ಧವಾಗಿಲ್ಲ. ಆದರೆ ಈತನ ಗುರುವು ನಿಜಗುಣಯೋಗಿಯು ಇದ್ದ
ನೆಂದು ಅವನ ವಚನಗಳಿಂದಲೇ ತಿಳಿದುಬರುತ್ತದೆ. ಈ ಗ್ರಂಥ
ದಲ್ಲಿಯ ವಚನಗಳು ೧೨, ೧೩, ೨೩. ೨೬, ೪೦, ೪೫ ಇವುಗಳನ್ನು
ನೋಡಿರಿ. ಇಲ್ಲಿ ಚಂದಿಮರಸನು ತನ್ನ ಗುರುವಿನ ಸ್ಮರಣೆ ಮಾಡಿದ್ದು
ಕಂಡುಬರುತ್ತದೆ. ಅವುಗಳಲ್ಲಿ ಅವನು ನಿಜಗುಣನೇ ತಾನಾಗಬೇಕೆಂಬ
ಆಕಾಂಕ್ಷೆಯನ್ನು ತೋರಿಸಿದ್ದಾನೆ. ಕೆಲವು ವಚನಗಳಲ್ಲಿ ತಾನು ಅವ
ನಿಗೆ ಮರೆಹೊಕ್ಕಿರುವೆನೆಂದು ಭಕ್ತಿಭಾವಪೂರಿತನಾಗಿ ನುಡಿದಿದ್ದಾನೆ.
ಇನ್ನೊಂದು ವಚನದಲ್ಲಿ ನಿಜಗುಣನು ಪರಮಾತ್ಮನ ಸ್ವರೂಪು ಎಂದು
ಸಂಬೋಧಿಸಿದ್ದಾನೆ. ಇವುಗಳ ಮೇಲಿಂದ ಯಾವ ಕಾಲದಲ್ಲಿ ಗುರು
ಶಿಷ್ಯ ಸಂಬಂಧದ ಶಿವಾನುಭವದ ವಿಚಾರಗಳು ಪ್ರಚಾರದಲ್ಲಿದ್ದವೋ
ಆ ಕಾಲದಲ್ಲಿ ಅಂದರೆ ಬಸವೇಶ್ವರನ ಕಾಲದ ಸಮೀಪಕ್ಕೆ ಈ ಉಭ
ಯತರಿದ್ದರೆಂದು ತೋರುತ್ತದೆ.

ಇದರೆ ಈ ನಿಜಗುಣನು ಷಟ್‌ಶಾಸ್ತ್ರಗಳನ್ನು ರಚಿಸಿದ ನಿಜಗುಣ
ಶಿವಯೋಗಿಯಲ್ಲ. ಈತನು ವಚನಕಾರನಾದ ನಿಜಗುಣಯೋಗಿಯೂ
ಗಿರುವನು. ಇವನ ಮುದ್ರಿಕೆಯು "ನಿಜಗುಣಯೋಗಿಯ ಯೋಗಾ"
ಎಂದು ಇದೆ. ನಿಜಗುಣ ಶಿವಯೋಗಿಯ ಮುದ್ರಿಕೆಯು "ಶಂಭುಲಿಂಗ"
ಎಂದು ಇದೆ. ಇದರ ಮೇಲಿಂದ ಈ ಉಭಯತರು ಬೇರೆ ಬೇರೆ
ಇದ್ದಾರೆಂಬದಾಗಿ ತೋರುತ್ತದೆ.

ತೋಂಟದಾರ್ಯನ ಶಿಷ್ಯನಾದ ಘನಲಿಂಗನು ಚಂದಿಮರಸನನ್ನು
ತನ್ನ ವಚನಗಳಲ್ಲಿ ಹೊಗಳಿದ್ದಾನೆ. ಘನಲಿಂಗನ ವಚನಗಳು ಪುಟ
೧೪ ನೋಡಿರಿ. ಅಲ್ಲಿ ಅವನು ಅಂದಿರುವದೇನೆಂದರೆ:— "ನಿಜಗುಣ
ಚಂದಿಮರಸರು ಕರಸ್ಥಲದವನಾಗಿದೇವರೊಳಗಾದ ಎಲ್ಲ ವಿರಕ್ತರು ಆವ
ಕ್ರಿಯೆಯಲ್ಲಿ ಆಚರಿಸಿ ಲಿಂಗೈಕ್ಯರಾದರೆಂದು ಕೆಟ್ಟು ನುಡಿವ ಭವಹೇ
ತುಗಳು ನೀವು ಕೇಳಿರೋ. ಅವರು ತುಂಬಿದ ತೊರೆಯ ಸಂಭ್ರಮ
ದಿಂದ ಹಾಯಿದರು. ಶಕ್ತಿಯ ಮುಂದೆ ಹಾಲು ಬೋನ ಹಣ್ಣು
ಕಜ್ಜಾಯನಿಕ್ಕೆರಲು ಆ ಶಕ್ತಿಯ ಪಾತನಾಡಿಸಿ ಉಂಡರು. ಇತ್ಯಾದಿ"
ಇಲ್ಲಿ ಘನಲಿಂಗನು "ನಿಜಗುಣ ಚಂದಿಮರಸರು" ಎಂದು ಈರ್ವರ
ಹೆಸರನ್ನು ಒಂದೆಡೆಗೆ ಹೇಳಿದ್ದರಲ್ಲಿ ಅರ್ಥವಿರಬೇಕು. ಅವರಲ್ಲಿರುವ
ಗುರುಶಿಷ್ಯ ಸಂಬಂಧವನ್ನು ಲಕ್ಷಿಸಿ ಅವನು ಹೀಗೆ ನುಡಿದಿರಬಹುದೆಂದು
ತೋರುತ್ತದೆ.

ಆದರೆ ಈ ಈರ್ವರು ಆವ ಕಾಲದಲ್ಲಿದ್ದರೆಂಬದನ್ನು ನಿಶ್ಚಿತವಾಗಿ
ಹೇಳಲು ಸಾಧ್ಯವಿಲ್ಲ. ನಿಜಗುಣನ ಕಾಲವು ೧೯೬೫ ಇದ್ದುದಾಗಿ
ರಾ॥ಬಿ॥ ನರಸಿಂಹಾಚಾರ್ಯರು ತಮ್ಮ ಕವಿಚರಿತೆಯಲ್ಲಿ ಬರೆದಿರುವರು.
ಆದರೆ ನಿಜಗುಣನು ಮತ್ತು ಚಂದಿಮರಸು ಶಿವಾನುಭವಮಂಟಪದಲ್ಲ
ಪ್ಪರೆಂಬ ಐತಿಹ್ಯವಿಲ್ಲ. ಆದರೂ ಅವರು ಬಸವನ ತರುವಾಯ ೩೦—೪೦
ವರ್ಷಗಳು ಮತ್ತು ಘನಲಿಂಗನ ಕಾಲ ಅಂದರೆ ೧೪೫೦ ಈ ಅವಧಿಯ
ಮಧ್ಯದಲ್ಲಿರಬೇಕೆಂದು ಹೇಳಲು ಮಾತ್ರ ಈಗ ಶಕ್ಯವಿದೆ.

---

(೧) ವಿಶ್ವದ ಸ್ವರೂಪು.

ವಿವರಣೆ:— ಜಗತ್ತು ಮಹಾಘನ ಗಂಭೀರವಾದ ಸಮುದ್ರದೋಪಾದಿಯಲ್ಲಿ ಎಲ್ಲಿಡೆಯಲ್ಲಿಯೂ ಪಸರಿಸಿವಂತೆ ದೃಷ್ಟಿಗೆ ಗೋಚರವಾಗುತ್ತದೆ. ಆದರೆ ಈ ವಿಸ್ತಾರವಾದ ಜಗತ್ತು ಪರಮಾತ್ಮನನ್ನು ಬಿಟ್ಟಿಲ್ಲ. ಪರಮಾತ್ಮನು ಈ ಜಗತ್ತಿನಲ್ಲೆಲ್ಲ ಪೂರ್ಣವಾಗಿ ನಿಬಿಡವಾಗಿ ಹರಡಿಕೊಂಡಿರುತ್ತಾನೆ. ಹ್ಯಾಗೆ ಜಲಧಿಯಲ್ಲಿ ನೊರೆ ತೆರೆಗಳು ಉದ್ಭವಿಸಿ, ಆ ಜಲಧಿಯಲ್ಲಿಯೇ ಇದ್ದುಕೊಂಡು ಅದರಲ್ಲಿಯೇ ಕಡೆಗೆ ಲಯಹೊಂದುತ್ತವೆಯೋ, ಹಾಗೆಯೇ ಜಗತ್ತು ಪರಮಾತ್ಮನಲ್ಲಿಯೇ ಜನಿಸಿ ಪರಮಾತ್ಮನಲ್ಲಿಯೇ ಸ್ಥಿತಿಗೊಂಡು ಕಡೆಗೆ ಪರಮಾತ್ಮನಲ್ಲಿಯೇ ಬೆರೆದು ಹೋಗುತ್ತದೆ. ಆದ್ದರಿಂದ ಪರಮಾತ್ಮನನ್ನು ಕಾಣಲು ವಿಶ್ವದ ಹೊರಗೆ ಹೋಗಲು ಕಾರಣವಿಲ್ಲ. ಅವನನ್ನು ಜಗತ್ತಿನಲ್ಲಿಯೇ, ಇಷ್ಟೇ ಅಲ್ಲ, ತನ್ನಲ್ಲಿಯೇ ಕಾಣಬಹುದು ಎಂದು ವಚನಕಾರನು ಹೇಳುತ್ತಾನೆ. ಹೀಗೆ ಹೇಳಿದರೂ ಅವನು ಈ ತೋರಿಕೆಯ ವಸ್ತುಗಳು ಪರಮಾತ್ಮನೆಂದು ತಿಳಿಯಬಾರದೆಂದು ಮರಳಿ ಎಚ್ಚರಿಸಿರುವನು. ಇಲ್ಲಿ ಅವನು ಈ ದೃಶ್ಯ ಜಗತ್ತಿಗೆ ಪರಮಾತ್ಮನು ಮೀರಿರುತ್ತಾನೆಂದು ಹೇಳುತ್ತಾನೆ. ವಿಶ್ವದ ಆಜೆಗೆ, ಅದರಿಂದಾಜೆಗೆ ಅವನು ಇರುತ್ತಾನೆಂದು ಇಲ್ಲಿ ಒತ್ತಿ ಒತ್ತಿ ಹೇಳುತ್ತಾನೆ. ಪರಮಾತ್ಮನು ನಿರ್ಜನಿತನು, ನಿರಾಶ್ರಯನು, ನಿಸ್ಸಂಗಿಯು, ನಿರ್ಲೇಪನು, ನಿಃಪ್ರಪಂಚಿಯು ಇದ್ದು ಅವನು ಇಂಥವನು, ಅಂಥವನು, ಎಂದು ನುಡಿಯ್ಕಲುಬಾರದು. ಅವನು ಅನ್ನುವದೇನೆಂದರೆ, ಸೃಷ್ಟಿಯು ಹುಟ್ಟಿದುದು ಪರಮಾತ್ಮನ ಲೀಲೆಯಿಂದ ಮಾತ್ರ. ಈ ಲೀಲೆಯ ಮೂಲಕ ಶಿವಶಕ್ತಿಗಳಿಂದು ಎರಡು ಉದ್ಭವಿಸುತ್ತವೆ. ಇವು ಆತ್ಮನಿಗೆ ಕಾರಣವು. ಈ ಆತ್ಮನಿಂದ ಆಕಾಶ ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಅಪ್ಪು, ಅಪ್ಪುವಿನಿಂದ ಪೃಥ್ವಿಯು ಉದ್ಭವಿಸುತ್ತವೆ. ಈ ಪಂಚ ಮಹಾ ಭೂತಗಳು ವಿಶ್ವಕ್ಕೆ ಕಾರಣವಾಗಿವೆ. ಹೀಗೆ ಜಗತ್ತೂ, ಜೀವರಾಶಿಗಳೆಲ್ಲವೂ ಪರಮಾತ್ಮನ ನೆನಹಿನಿಂದ ಉಂಟಾಗುತ್ತವೆ. ಈ ಪಂಚಮಹಾ ಭೂತಗಳಲ್ಲದೆ, ಪಂಚ ಪ್ರಾಣ ವಾಯುಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಕರಣ ಚತುಷ್ಟಯಗಳು ಜನಿಸುತ್ತವೆ. ಈ ಎಲ್ಲ ೨೪ ತತ್ವಗಳು ಕೂಡಿಕೊಂಡಲ್ಲಿ ಜೀವಾತ್ಮನು ಜಗತ್ತಿನಲ್ಲಿ ವ್ಯವಹರಿಸಲು ಶಕ್ತನಾಗುತ್ತಾನೆ. ಆದರೆ

ಹೀಗೆ ವ್ಯವಹರಿಸುವ ಜೀವಾತ್ಮನ ಗುಣ, ಕರ್ಮ, ಧರ್ಮಗಳು ಪರಮಾತ್ಮನಾಗಿಲ್ಲ. ಅವನು ಈ ಎಲ್ಲವನ್ನೂ ಮೀರಿ, ಜಗತ್ತಿನಲ್ಲಿದ್ದುಕೊಂಡು ಜಗತ್ತನ್ನು ರಕ್ಷಿಸುತ್ತ ಅಬಾಧಿತವಾಗಿ ನಾಶರಹಿತನಾಗಿ ವಿಶ್ವದಲ್ಲಿಯೇ ಇರುತ್ತಾನೆ. ಹೀಗೆ ಕೆಳಗಿನ ವಚನಗಳಲ್ಲಿ ವಚನಕಾರನು ಹೇಳುತ್ತಾನೆ. ಈ ವಿಚಾರಗಳು ಎಲ್ಲ ವಚನಕಾರರಲ್ಲಿ ಕಂಡುಬರುತ್ತಿದ್ದು ಅವುಗಳನ್ನೇ ಚಂದಿಮರಸನು ಬಹು ಸ್ಪಷ್ಟವಾಗಿ ವಿಶದವಾಗಿ ಇಲ್ಲಿ ತಿಳಿಯಪಡಿಸುತ್ತಾನೆ.

ವಚನಗಳು.

೧. ಘನ ಗಂಭೀರ ಮಹಾ ವಾರುಧಿಯಲ್ಲಿ ಫೇನತರಂಗಬುದ್ಬುದಂಗಳಾದವಲ್ಲದೆ, ಬೇರಾಗಬಲ್ಲವೇ? ಆತ್ಮನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡ ಕೋಟಿಗಳು ತೋರಿದವಲ್ಲದೆ ಬೇರಾಗಬಲ್ಲವೇ? ಇದು ಬೇರೆಂಬ ಅರಿಮರುಳಗಳನೇನೆಂಬೆ? ವಿಶ್ವವನೆಂದು ನೋಡಲು ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವು ಬೇರಿಲ್ಲ.

೨. ಸಮುದ್ರದಿಂದಾದ ತೆರೆಗಳು ಸಮುದ್ರದೊಳಗೆ ಅಡುತ್ತ ಆ ಸಮುದ್ರದೊಳಗೆ ಇಹವು. ತೆರೆಗಳು ಬೇರೊಂದುದಕವೇ? ನಿಮ್ಮಿಂದಾದ ಜಗವು ನಿಮ್ಮಲ್ಲಿಯೇ ಇದ್ದು ನಿಮ್ಮಲ್ಲಿಯೇ ಅಡುವುದು. ಬೇರೆ ಬೇರೆ ಕುಲ ಉಂಟೇ ಈ ಜಗಕ್ಕೆ? ಅದೆಂತೆಂದರೆ ಬ್ರಹ್ಮಬೀಜಂ ಜಗತ್ಸರ್ವಂ। ಬ್ರಹ್ಮಣೈವವಿವರ್ಧತೆ ಬ್ರಹ್ಮಣೈವ ಲಯಂ ಯಾತಿ ಜಾತಿ ಭೇದ ಕುತೋ ಭವೆತ್। ಇಂತೆಂದುದಾಗಿ ಕುಲವೂ ಇಲ್ಲ, ಫಲವೂ ಇಲ್ಲ. ಮರವೆಯ ನುಡಿಯನೊಪ್ಪುವನೇ ಸಿಮ್ಮಲಿಗೆಯ ಚನ್ನರಾಮ ಬಿಡು ಜಡನೇ.

೩. ದ್ವೀಪಾದ್ವೀಪವಿಲ್ಲದಲ್ಲಿಂದತ್ತತ್ತ. ಕಾಲಕರ್ಮವಿಲ್ಲದಲ್ಲಿಂದತ್ತತ್ತ. ಮಾಯಾ ಮೋಹವಿಲ್ಲದಲ್ಲಿಂದತ್ತತ್ತ. ಏನೂ ಅದೇನೂ ಇಲ್ಲದಲ್ಲಿಂದತ್ತತ್ತ. ಆದಿ ಮೂಲವಿಲ್ಲದಲ್ಲಿಂದತ್ತತ್ತ. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವಿಲ್ಲದಲ್ಲಿಂದತ್ತತ್ತ.

೪. ನಿರ್ಜನಿತ, ನಿರಾಶ್ರಯ, ನಿರಾವರಣ, ನಿಸ್ಸಂಗ, ನಿರ್ಲೇಪ ನಿಃಕಪಟಿ, ನಿರ್ಮಾಯೆ, ನಿಃಪ್ರಪಂಚಿ, ನಿರವಯ ನನನಯವಕ್ಕೆ ತರ

ಲಿಲ್ಲ ನಿಲ್ಲೋ. ಅನಿರ್ವಚನೀಯನ ವಚನಕ್ಕೆ ತರಲಿಲ್ಲ ನಿಲ್ಲೋ ಸಿಪ್ಪ
ಲಿಗೆಯ ಚನ್ನರಾಮನೆಂಬ ಚರಲಿಂಗವನುಪಮಿಸಲಿಲ್ಲ ನಿಲ್ಲೋ.

೫. ಏನೆಂಬೆನಲಿಲ್ಲದ ಮಹಾ ಘನವು ತನ್ನ ಲೀಲೆಯಿಂ ತಾನೆ
ಸ್ವಯಂಭುಲಿಂಗಸ್ಥಲವಾಯಿತ್ತು. ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕವು. ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ, ಆತ್ಮನಿಂದಾದುದಾಕಾಶ, ಆಕಾಶದಿಂದಾಯಿತ್ತು ವಾಯು, ವಾಯುವಿನಿಂದಾಯಿತ್ತು ಅಗ್ನಿ, ಅಗ್ನಿಯಿಂದಾಯಿತ್ತು ಅಪ್ಪು, ಅಪ್ಪುವಿನಿಂದಾಯಿತ್ತು ಪೃಥ್ವಿ, ಆ ಪೃಥ್ವಿಯಿಂದಾಯಿತ್ತು ಸಕಲ ಜಗ ಜೀವವೆಲ್ಲವು. ನಿಮ್ಮ ನೆನಹು ಮಾತ್ರದಿಂದಾದವು ನೋಡಾ ಸಿಮ್ಮಲಿಗೆಯ ಚನ್ನರಾಮಾ.

೬. ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬಿವು ಪಂಚ
ಮಹಾಭೂತಂಗಳು. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನವೆಂಬಿವು ಪಂಚ ಪ್ರಾಣವಾಯುಗಳು. ವಾಕ್ಕು ಪಾಣಿ, ಪಾದ, ಪಾಯು ಗುಹ್ಯವೆಂಬಿವು ಕರ್ಮೇಂದ್ರಿಯಂಗಳು. ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣವೆಂಬಿವು ಪಂಚ ಜ್ಞಾನೇಂದ್ರಿಯಂಗಳು. ಮನ, ಬುದ್ಧಿ, ಚಿತ್ತ, ಅಹಂಕಾರವೆಂಬಿವು ಅಂತಃಕರಣ ಚತುಷ್ಟಯಂಗಳು. ಇಂತು ಇಪ್ಪತ್ತುನಾಲ್ಕು ತತ್ವಂಗಳು ಕೂಡಿ ದೇಹವಾಯಿತ್ತು. ಅದೆಂತೆಂದಡೆ,
ಭೂತಿಷ್ಟ ಪಂಚಭಿಃಪ್ರಾಣೈ । ಶ್ರುತುರ್ದಶಭರಿಂದ್ರಿಯೈಃ ॥ ಚತುರ್ವಿಂಶತಿ
ದೇಹಃನಿ ಸಾಂಖ್ಯಶಾಸ್ತ್ರವಿದೋ ವಿದುಃ ॥ ಎಂದುದಾಗಿ ಇಂತೀ ಇಪ್ಪತ್ತು
ನಾಲ್ಕು ತತ್ವಂಗಳು ಕೂಡಿ ಜೀವಿಸುವಾತನೇ ಜೀವಾತ್ಮನು. ಅದೆಂತೆಂದರೆ ಮನ ಚತುರ್ವಿಂಶಕಸ್ಯ ಜ್ಞಾತೃತ್ವಂ ಪಂಚವಿಂಶಕಃ । ಆತ್ಮ
ಷಡ್ವಿಂಶಕಶ್ಚೈವ ಪರಮಾತ್ಮಸಪ್ತವಿಂಶಕಃ । ಚತುರ್ವಿಧಂ ತು ಮಾಯಾ
ಸನ್ನಿರ್ಗುಣಂ ಪರಮೇಶ್ವರಃ । ಪಂಚವಿಂಶತಿತತ್ವಾನಿ ಮಾಯಾಕರ್ಮ
ಗುಣಾಯಕಾ ವಿಷಯಾ ಇತಿ ಕಥ್ಯತೆ ಪಾಶಜೀವ ನಿಬಂಧನಾತ್ ।
ಇಂತು ಪಂಚವಿಂಶತಿ ತತ್ವಂಗಳುತ್ಪತ್ತಿಯು. ನಿಮ್ಮ ನೆನಹು ಮಾತ್ರದಿಂದಾದವಾಗಿ, ಅವರ ಗುಣ ಧರ್ಮ ಕರ್ಮಂಗಳು ನಿಮಗಿಲ್ಲ ನೋಡಾ ಸಿಮ್ಮಲಿಗೆಯ ಚನ್ನರಾಮಾ.

---

(೨) ತನ್ನನ್ನು ತಾನು ಅರಿವುದು.

ವಿವರಣೆ:— ವಚನಕಾರನು ಹಿಂದಿನ ವಚನಗಳಲ್ಲಿ ಪರಮಾತ್ಮನ ಸ್ವರೂಪನ್ನು ವರ್ಣಿಸಿ ಅವನನ್ನು ಹೇಗೆ ಒಳಕೊಳ್ಳಬೇಕೆಂಬುದನ್ನು ಮುಂದಿನ ವಚನಗಳಲ್ಲಿ ತಿಳಿಸುತ್ತಾನೆ. ಅವನ ಮುಖ್ಯ ಅಭಿಪ್ರಾಯವು ಜ್ಞಾನದಿಂದಲೇ ಪರಮಾತ್ಮನನ್ನು ಸಾಧಿಸಬೇಕು. ಮತ್ತು ಅವನಲ್ಲಿ ಬೆರೆಯಬೇಕು ಎಂದು ಹೇಳುತ್ತಾನೆ. ಈ ಜ್ಞಾನವು ಉಂಟಾದೊಡನೆಯೇ ಭಿನ್ನತ್ವವು ಹಾರಿಹೋಗುತ್ತದೆ. ಈ ಭಿನ್ನತ್ವವು ಅಳಿದಲ್ಲಿ ತಾನೇ ಸಿಮ್ಮಲಿಗೆಯ ಚನ್ನರಾಮನಾಗವನೆಂದು ಅವನು ಬೋಧಿಸುತ್ತಾನೆ. ಇದು ಅಶಕ್ಯವಲ್ಲನೆಂಬುದನ್ನು ತೋರಿಸಲು ಅವನು ಕೆಲವು ದೃಷ್ಟಾಂತಗಳನ್ನು ಇನೇ ವಚನದಲ್ಲಿ ಕೊಟ್ಟಿದ್ದಾನೆ. ಹ್ಯಾಗೆ ಚಂದ್ರಮನ ಪ್ರಕಾಶದಿಂದ ಚಂದ್ರನನ್ನು ಕಾಣುತ್ತಾರೋ ಹ್ಯಾಗೆ ದೀಪದ ಬೆಳಗಿನಿಂದ ದೀಪವನ್ನು ಕಾಣುತ್ತಾರೋ ಹಾಗೆಯೇ ತನ್ನ ಬೆಳಗಿನಿಂದ ತನ್ನನ್ನು ಕಂಡ ದ್ದಾದರೆ, ತಾನೇ ಸಿಮ್ಮಲಿಗೆಯ ಚನ್ನರಾಮನೆಂದು ಹೇಳುತ್ತಾನೆ. ಹೀಗೆ ಚಂದಿಮರಸನು ವೀರಶೈವ ಧರ್ಮದ ಮಹತ್ವದ ತಿರುಳನ್ನು ಈ ವಚನಗಳಲ್ಲಿ ವಿವರಿಸಿ ಹೇಳಿರುವನು. ಇದು ಆಶ್ಚರ್ಯವೆಂದು ವಚನಕಾರನು ೯ನೇ ವಚನದಲ್ಲಿ ಹೇಳುತ್ತಾನೆ. ತಾನೆಂಬುದೊಂದು ಬೆಳಗಿನ ಬೀಜ, ಈ ಬೀಜವು ಕತ್ತಲೆಯನೊಳಕೊಂಡು ಕೆಲಕಾಲವಿರುತ್ತದೆ. ಮುಂದೆ ಈ ಬೀಜವು ಹೊರಹೊರಟು ಪ್ರಕಾಶವನ್ನು ಕಂಡು ಫಲಿಸುತ್ತದೆ. ಹಾಗೆಯೇ ಮನುಷ್ಯನ ಅರಿವು ಇರುತ್ತದೆ ಮನುಷ್ಯನಲ್ಲಿ ಕಾಣಲು ಕತ್ತಲೆ, ಆದರೆ ಕತ್ತಲೆಯಲ್ಲಿ ಪ್ರಕಾಶವಾನವಾವ ರೂಪು ಇರುತ್ತದೆ. ಅದು ತಾನೆಂಬುದು ಇದ್ದು ಅದು ಮಹಾ ಘನಲಿಂಗವಲ್ಲಿಯೇ ಹೊಳಕೆಯೊಡೆದು ಅಲ್ಲಿಯೇ ಕಾಲೂರಿ ಫಲಿಸುತ್ತದೆ. ಜಗತ್ತಿನಲ್ಲಿ ಹೇಗೆ ಮಣ್ಣು ಕಳೆದು ಮಡಿಕೆ ಇರಲಾರದೋ, ಹೇಗೆ ಹೊನ್ನು ಕಳೆದ ತೊಡಿಗೆ ಇರಲಾರದೋ ಹಾಗೆಯೇ ಸಚ್ಚಿದಾನಂದ ನಿತ್ಯಪರಿಪೂರ್ಣನು ತಾನೇ ಇದ್ದಾನೆಂದು ವಚನಕಾರನು ೧೦ನೇ ವಚನದಲ್ಲಿ ಹೇಳುತ್ತಾನೆ. ಈ ವಿಚಾರದ ಮರ್ಮವನ್ನು ಹೇಳಲೂ ಬಾರದು, ಕೇಳಲೂ ಬಾರದು, ಇದು ಅನುಭವದ ಮಾತೆಂದು ೧೧ನೇ ವಚನದಲ್ಲಿ ಹೇಳುತ್ತಾನೆ. ಮುಂದೆ ಅನುಭವಿಯು ಹೇಗೆ ವರ್ತಿಸುತ್ತಾನೆಂಬದನ್ನು ೧೨ನೇ ವಚನದಲ್ಲಿ ಹೇಳಿದ್ದಾನೆ. ಉತ್ತನು ಮಣಿಯು ಒಂದು ಪದಾರ್ಥದ ಮೇಲೆ ಇಟ್ಟಲ್ಲಿ

ಅದರ ವರ್ಣವಂತೆ ಅದು ಹೇಗಾಗುವದೋ ಹಾಗೆಯೇ ಜ್ಞಾನಿಯು ಜನರಲ್ಲಿದ್ದು ಅವರವರಂತೆಯೇ ತೋರುತ್ತಾನೆ. ಆದರೆ ಅವನು ತನ್ನದನ್ನು ಬಿಟ್ಟಿರುವದಿಲ್ಲ. ಹೀಗೆ ವರ್ತಿಸಿ ಅವನು ಉತ್ತರೋತ್ತರ ಯನ್ನು ಹೊಂದುತ್ತ ಹೋಗುವನು. ಹೀಗೆ ವಚನಕಾರನು ಪರಪ್ರಜ್ಞೆಯನ್ನು ತನ್ನನ್ನು ಹೇಗೆ ಬೆರೆಯಬೇಕೆಂಬುದನ್ನು ಹೇಳಿರುತ್ತಾನೆ.

ವಚನಗಳು.

೬. ನಿಜವಸ್ತು ಒಂದೇ. ತನ್ನ ಲೀಲೆಯಲಿರಡಾಗಬಲ್ಲುದದೊಂದೇ. ಬೇರೆ ತೋರಬಲ್ಲುದದೊಂದೇ. ತನ್ನ ಮರವೆಯ ಬಲ್ಲುದದೊಂದೇ. ತಾನಲ್ಲದನ್ಯವಿಲ್ಲೆಂದರಿದರಿದರಿವು ತಾನೇ ಸಿಮ್ಮಲಿಗೆಯ ಚನ್ನರಾಮಾ.

೭. ಇಂದುವಿನ ಬೆಳಗಿನಿಂದ ಇಂದುವನು, ಭಾನುವಿನ ಬೆಳಗಿನಿಂದ ಭಾನುವೆನು, ದೀಪದ ಬೆಳಗಿನಿಂದ ದೀಪವ ಕಾಂಬಂತೆ, ತನ್ನ ಬೆಳಗಿನಿಂದ ತನ್ನನೇ ಕಂಡು ನಿಂದ ನಿಲವು ತಾನೆ ಸಿಮ್ಮಲಿಗೆಯ ಚನ್ನರಾಮಾ.

ಭಾನು = ಸೂರ್ಯ.

೮. ಬೆಳಗಿನ ಬೀಜ ಮಹಾ ಬೆಳಗು ಕತ್ತಲೆಯನೊಳಕೊಂಡು ಕಣ್ದೆರವ ಪರಿಯ ನೋಡಾ! ತಿಳಿವಡೆ ಬೆಳಗಲ್ಲ. ಒಳಗೊಳಗೆ ಹೊಳೆವ ಕಳೆ ಇದೇನೋ? ಅದೆಲ್ಲಿಂದ ಹುಟ್ಟಿ ಅದೆಲ್ಲಿಂದ ತೋರಿತ್ತು? ಅಲ್ಲಿಯೇ ಆಗಾಗಿ ಅಲ್ಲಿಯೇ ಬೆಳೆಯಿತ್ತು. ಸಿಮ್ಮಲಿಗೆಯ ಚನ್ನರಾಮನೆಂಬ ಮಹಾ ಘನಲಿಂಗದಲ್ಲಿಯೇ ಕಾಲೂರಿ ನಿಂದ ಪರಿಯನೇನೆಂಬೆ?

ಆಗು=ಅಸ್ತಿತ್ವ.

೯. ಮಣ್ಣು ಕಳೆದು ಮಡಿಕೆ ಇಲ್ಲ. ಹೊನ್ನು ಕಳೆದು ತೊಡಿಗೆ ಇಲ್ಲ. ತನ್ನ ಕಳೆದು ಜಗವಿಲ್ಲ. ತಾನೇ ತನ್ನಿಂದನ್ಯವಿಲ್ಲ. ಸುಖ ದುಃಖ ಬಂಧ ಮೋಕ್ಷಂಗಳಿಲ್ಲದ, ನಾಹಂ ಮೊಂದೆನಲಿಲ್ಲದ, ಕೋಹಂ ಮೊಂದೆನಲಿಲ್ಲದ, ನುಡಿಗೆಡಿ ಎಸಿಸಿ ಏನೂ ಇಲ್ಲದ, ಸಚ್ಚಿದಾನಂದ ನಿತ್ಯ ಪರಿಪೂರ್ಣ ನೀನೆ ಸಿಮ್ಮಲಿಗೆಯ ಚನ್ನರಾವಾ.

ತೊಡಿಗೆ = ಆಭರಣ.

೧೧. ತೋರುವಡೆ ವಿಷವಾಗಿರದು. ಅದು ತೋರದಾಗಿ ಅರಿಯಬಾರದು. ಅರಿಯಬಾರದಾಗಿ ಹೇಳಬಾರದು. ಹೇಳಬಾರದಾಗಿ ಅದು ಕಾಣಬಾರದು. ಅದು ತರ್ಕ. ಅದು ನಿನ್ನಲ್ಲಿಯೇ ಇಪ್ಪೆ. ಹೇಳಲಿಲ್ಲ. ಕೇಳಲಿಲ್ಲ, ಅರಿಯಲಿಲ್ಲದುದನೇನೆಂಬೆ ಹೇಳಾ ಸಿಮ್ಮಲಿಗೆಯ ಚನ್ನರಾಮಾ?

೧೨. ಸನ್ಮಣಿ ಎಂದು ಹೊದ್ದಿದಂತೆ ತೋರುತ್ತಿಪ್ಪುದು. ನಿಜವು ತನ್ನಂತೆ. ಅನುಭಾವಿ ಅವರವರಂತೆ ತೋರುವ. ತಾ ತನ್ನಂತೆ. ಮತ್ತಾರಂತೆಯೂ ಆಗ. ಚಿನ್ಮಯ ಪರಮಾನಂದ ತಿಳಿದು ನೋಡುವಡೆ ನಿಜ ಗುಣ ತಾನೇ ಸಿಮ್ಮಲಿಗೆಯ ಚನ್ನರಾಮಾ.

೧೩. ಕೋಹಮ್ಮೆಂಬುದರ ಪ್ರಸನ್ನತೆಯನರಸುವ ಕತದಿಂದ ನಿರಹಂಕಾರಿ ಪರಮ ವಿರಕ್ತ. ವಿಷಯ ರಹಿತ. ಏನು ಹೊರೆ ಹೊದ್ದದಿರ್ಪನು. ಚಿನ್ಮಯ ಪರಮಾನಂದವನು ತಿಳಿದು ನೋಡುವಡೆ ನಿಜ ಗುಣ ತಾನೆ ಸಿಮ್ಮಲಿಗೆಯ ಚನ್ನರಾಮಾ.

ಕತ = ನೆವ.

೧೪. ಹಾವ ಹೊತ್ತುಕೊಂಡು ಹೋಗುತ್ತ ಹಾವಡಿಗನಡಿಯಲ್ಲಿ ಹಾವ ಕಂಡ ಮರುಳನ ಗಾವಿಲತನವ ನೋಡಾ! ತನ್ನಿಂದನ್ಯವೆಂದರೆ ಭಿನ್ನವಾಯಿತ್ತು. ತನ್ನ ಪರವಾರ್ಥ ತನ್ನಲ್ಲಿ. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ. ಮಾಯಾ ಮರ್ಕಟ ಜಡನೇ.

ಗಾವಿಲತನ = ಮೂಢತನ, ಹುಂಬತನ.

---

(೩) ವಿಷಯಾದಿಗಳನ್ನು ಬಿಡುವುದು.

ವಿವರಣೆ - ಮನುಷ್ಯನು ತನ್ನನ್ನು ತಾನು ಅರಿಯಬೇಕಾದರೆ ಅವನಿಗೆ ದಾರಿಯಲ್ಲಿ ನಾನಾ ತರದ ವಿಷಯಗಳು ಅಡ್ಡಬರುವವು. ಇವುಗಳನ್ನು ಅವನು ಸ್ವಸಾಮರ್ಥ್ಯದಿಂದ ದೂರವಾಡಬೇಕು. ಇದು ಅವನ ಕರ್ತವ್ಯವು. ಮನುಷ್ಯನು ಪ್ರಪಂಚದಲ್ಲಿ ವಿಷಯಾಸಕ್ತನಾಗಿರುವನು. ಆದರೆ ಆತ್ಮನು ಹಾಗಿರದೆ ನಿರ್ಗುಣನೂ ನಿರ್ವಿಕಾರನೂ ಆಗಿರುವನು. ಮಾಯೆಯನ್ನು ದೂರವಾಡಿದಲ್ಲಿ ನೀನೇ ದಿಟವಾಗುವಿ ಎಂದು ವಚನಕಾರನು ೧೫ನೇ ವಚನದಲ್ಲಿ ಹೇಳಿರುವನು. ಆದ್ದರಿಂದ ವಿಷಯಗಳಲ್ಲಿಯ ಆಸಕ್ತಿಯನ್ನು ತೊರೆದು ನಿರ್ವಿಷಯಿಯಾಗಿ ಮನುಷ್ಯನು ಆಚರಿಸಬೇಕು. (ವಚನ ೧೬) ಮನುಷ್ಯನು ಸಹಜವಾಗಿ ಜ್ಞಾನಾನಂದ ಪರಿಪೂರ್ಣನಾಗಿರುವದರಿಂದ ಮಾಯೆಯನ್ನು ದೂರವಾಡಲು ಶಕ್ಯನಿದೆ. ಈ ಮಾಯೆ ದೂರಾಗಲೊಡನೆ ನೀನೇ ಸಿದ್ಧಲಿಂಗೆಯ ಚನ್ನರಾಮನು ಎಂದು ವಚನಕಾರನು ಇಲ್ಲಿ ಹೇಳುತ್ತಾನೆ. (ವಚನ ೧೭) ಇದೇ ಪರಮಾರ್ಥ ಸಾಧನೆಯು. ಇದು ಸುರರಿಗೂ ಯೋಗಿಗಳಿಗೂ ಅಸಾಧ್ಯವಾಗಿರುವದು. (ವಚನ ೧೮) ಆದರೆ ಪ್ರಪಂಚದಲ್ಲಿ ಮುಳುಗಿದ ಮನುಷ್ಯನು ನಿಜವನ್ನರಿಯದೆ ನೇಣು ಹಾನೆಂದು ಭಾವಿಸಿದ್ದಾನೆ. ಮಿಥ್ಯವಾದ ದೇಹವೇ ತಾನೆಂಬ ಭ್ರಮೆಗೊಳಗಾಗಿರುವನು. ಇಲ್ಲದ ಸಂಸಾರವನ್ನು ನೆಚ್ಚಿ ದುಃಖಕ್ಕೊಳಗಾಗುತ್ತಾನೆ. ಆದರೆ ಸಂಸಾರವು ಹುಸಿ ಎಂದು ತಿಳಿದರೆ, ಸಿದ್ಧಲಿಗೆಯ ಚನ್ನರಾಮನ ದಾರಿಯನ್ನು ಕಂಗೊಳಿಸಹತ್ತುವದು. (ವಚನ ೨೦) ವಚನಕಾರನು ಈ ವರ್ತನೆಯು ಸಾಧ್ಯವಾದುದೆಂಬ ಭಾವದಿಂದ ಅನೇಕ ವಚನಗಳನ್ನು ನುಡಿದಿರುವನು. ಆ ತರದ ಮನಸ್ಸಿನ ವರ್ತನೆ ಇರಬೇಕು. ಅಂದರೆ ನಿಜವು ಸಾಧ್ಯವೆಂದು ಅವನ ವಿಚಾರಗಳಿರುತ್ತವೆ. ೨೧ ಮತ್ತು ೨೨ನೇ ವಚನಗಳನ್ನು ನೋಡಿರಿ. ಆದರೆ ಹೀಗೆ ಹೇಳಿದರೂ ಅವನು ಗುರುಪಾದವ ಹಿಡಿದು ತಿಳಿಯಿರೆಂದು ೨೩ನೇ ವಚನದಲ್ಲಿ ನುಡಿದಿರುವನು. ವಚನಕಾರನ ಗುರುವು ಮಹಾ ಶಿವಾನುಭಾವಿಯಾದ ನಿಜಗುಣನಿದ್ದು ಅವನೊಡನೆ ಹ್ಯಾಗೆ ಒಡಗೂಡಬೇಕೆಂಬುದನ್ನು ಈ ವಚನದಲ್ಲಿ ಅವನು ಬಹು ಮಾರ್ಮಿಕ ರೀತಿಯಿಂದ ಹೇಳಿದ್ದಾನೆ. ಗುರುವಿನ ಜೀವವನ್ನರಿವುದೇ ಚನ್ನರಾಮನನ್ನು ತಿಳಿಯುವದೆಂದು ಹೇಳಿದ್ದಾನೆ. ವೀರಶೈವರಲ್ಲಿ ಗುರು

ಶಿಷ್ಯ ಸಂಬಂಧವು ಹೇಗಿರುತ್ತದೆಂಬುದನ್ನು ಅವನು ಇಲ್ಲಿ ಸೂಚಿಸಿದ್ದಾನೆ. ಹೀಗೆ ನಡೆದಲ್ಲಿ ವಿಷಯಗಳು ಅಡಗುವವು, ಮಾಯೆಯು ದೂರಾಗುವದು, ಪರಮಾತ್ಮನೊಡನೆ ಮನುಷ್ಯನು ಬೆರೆಯುವನೆಂದು ವಚನಕಾರನು ಕೆಳಗಿನ ವಚನಗಳಲ್ಲಿ ನುಡಿದಿರುವನು.

ವಚನಗಳು.

೧೫. ಆತ್ಮನು ನಿರವಯ ನಿರ್ಗುಣ ನಿರ್ವಿಕಾರ. ನೋಡುವರೆ ಕರ್ಮವ ಮಾಡುವವರಾರೋ? ಸಂಸಾರವಾರಿಗೆ ತೋರಿತ್ತು? ಬಂಧ ಮೋಕ್ಷಂಗಳಾರಿಗೆ ಎಲೆ ಅಯ್ಯಾ? ನಿನ್ನ ನಿನ್ನಿಂದ ತಿಳಿದು ನೋಡಲು ತಥ್ಯ ಮಿಥ್ಯಂಗಳನೊಂದು ಮಾಡಿ ಕಟ್ಟಲಳವೇ? ಮಾಯೆ ಪುಸಿ. ದಿಟ ನೀನೆ ಸಿದ್ಧಲಿಗೆಯ ಚನ್ನರಾಮಾ.

೧೬. ಇಂದ್ರಿಯಂಗಳಸೊಡಗೂಡಿ ಬಹಿರ್ಮುಖನಾಗಿ ವಿಷಯಂಗಳಲ್ಲಿ ಆಸಕ್ತಿಯುಳ್ಳವನು ಅಂತರ್ಮುಖ ರೂಪನಪ್ಪ ಪ್ರತ್ಯಗಾತ್ಮನನೆಂತೂ ಕಾಣಲರಿಯನು. ಮೇರುಗಿರಿಯ ಕಂಡಿಹೆನೆಂದು ತೆಂಕ ಮುಖವಾಗಿ ನಡೆದು ಮೇರುಗಿರಿಯ ಕಾಣಲರಿಯನು. ಸಕಲ ವಿಷಯಂಗಳಲ್ಲಿ ಆಸಕ್ತಿಯಂ ಬಿಟ್ಟು ನಿರ್ವಿಷಯಿಯಾಗಿ ನಿಜದಲ್ಲಿ ನಿಂದ ನಿಲವು ನೀನೆ ಸಿದ್ಧಲಿಗೆಯ ಚನ್ನರಾಮಾ.

೧೭. ತಾನಿದಿರೆಂಬ ಮಾಯೆ ತೋರಿತ್ತಾಗಿ ತಾನಲ್ಲ. ಈ ತೋರುವುದೇ ಉಳಿವು. ಜ್ಞಾನಾನಂದ ಪರಿಪೂರ್ಣ ತಾನೆಂಬುದನಾರೂ ಅರಿಯರಲ್ಲಾ. ತಿಳಿದು ನೋಡಲಿಲ್ಲಾಗಿ ನಿಜಸಿದ್ಧ ನೀನೆ ಸಿದ್ಧಲಿಗೆಯ ಚನ್ನರಾಮಾ.

೧೮. ಸುರರಿಗೆ ನಿರಂತರ ಜಾಗರಣ. ಮರುಳುಗಳಿಗೆ ನಿರಂತರ ಸ್ವಪ್ನ ಅಚರಜೀವಿಗಳಿಗೆ ನಿರಂತರ ಸುಷುಪ್ತಿ. ವರಯೋಗಿಗಳಿಗೆ ನಿರಂತರ ತುರ್ಯ. ಸ್ಥೂಲತನು ಸೂಕ್ಷ್ಮತನು ಕಾರಣತನುವ ಹೊಂದಿ ಮಾಯಾತನುವಾಗಿ ಮಾಯೆ ತೋರುತ್ತಿಪ್ಪುದು. ನೀನು ಸಕಲತನು ರಹಿತ. ತನ್ನ ತನ್ನಿಂದರಿದ ಪರಮಾರ್ಥ ನೀನೆ ಸಿದ್ಧಲಿಗೆಯ ಚನ್ನರಾಮಾ.

೧೯. ಹತ್ತರ ಹಸಿಸೆ ಯಲಚ್ಚಾದ ಪರಿಗಳ ನೀವೆತ್ತ ಬಲ್ಲಿರೋ ಗಣಿತದ ಗುಣಿತಪ? ನಾಲ್ಕು ಬಂದಿಡೆ ಕಳೆ. ಏದು ಬಂದಡೆ ನಂದಿ. ಆರು ಬಂದಡೆ ಜಾಗರ. ಏಳು ಬಂದಲ್ಲಿ ಸೈದು. ಜಾಣರೆಂಬವರಿಗೆ ಕುವಾಡ. ಸಿವ್ಮಲಿಗೆಯ ಚನ್ನರಾಮನೆಂಬ ಲಿಂಗವಲ್ಲಿ ಜೂಜುಗಳೆದು ನಿಲ್ಲು.

೨೦. ನೇಣು ಹಾವೆಂದು ಬಗೆದವನಂತೆ ಈ ದೇಹಾದಿಯಾನೆಂದು ಬಗೆದು, ಭ್ರಮೆ ಬಂದು, ಇಲ್ಲದ ಸುಸಾರದ ಸಕಲ ದುಃಖಕ್ಕೊಳಗಾದರಯ್ಯಾ! ಆ ಭ್ರಮೆಯ ಹುಸಿ ಎಂದು ತಿಳಿದ ತಿಳಿವು ನೀನೆ ಸಿವ್ಮಲಿಗೆಯ ಚನ್ನರಾಮಾ.

೨೧. ಕಂಗಳ ಮುಂದೆ ತೋರಿದ ವಿಂಜು ಮನದ ಮೇಲೆ ತಿಳಿಯಿತ್ತಿದೇನೋ? ಕಳೆಯಬಾರದು, ಕೊಳಬಾರದು. ಕಂಗಳ ಕತ್ತಲೆ ಮನದ ವಿಂಜು. ಇದು ಬಲ್ಲವರನಲ್ಲೆನಿಸಿತ್ತು ಸಿವ್ಮಲಿಗೆಯ ಚನ್ನರಾಮನೆಂಬ ನಾಮವೊಡಕು.

೨೨. ಹಿರಿದಪ್ಪ ಮಾಯೆಯನೆಂತು ಕೆಡಿಸುವೆನೆಂದು ಬೆಂಬಿಡದಿರು ಮರುಳೇ. ಮಾಯೆ ದಿಟಕ್ಕೆ ಇಲ್ಲ. ಇಲ್ಲದುವನೆಂತು ಕೆಡಿಸುವಿರಿ? ತನ್ನ ನರಿದಡೆ ಸಾಕು. ಅರಿದೆನರಿಯೆನೆಂಬುದು ಮಾಯೆ. ಆ ಮಾಯೆ ನಿನಗಿಲ್ಲ. ಚಿನ್ಮಯ ನೀನೆ ಸಿವ್ಮಲಿಗೆಯ ಚನ್ನರಾಮಾ.

೨೩. ಜಾಣನಯ್ಯ ಶ್ರೀಗುರುಪಾದವ ಹಿಡಿವಲ್ಲಿ. ಜಾಣನಯ್ಯ ವಿಷಯಂಗಳ ಬಿಡುವಲ್ಲಿ. ಜಾಣನಯ್ಯ ಅವಿದ್ಯೆಯ ಗೆಲುವಲ್ಲಿ. ಜಾಣನಯ್ಯ ತನ್ನ ತಾನರಿವಲ್ಲಿ. ಜಾಣನಯ್ಯ ಸಿವ್ಮಲಿಗೆಯ ಚನ್ನರಾಮನಲ್ಲಿ ನಿಜಗುಣನ ಜೀವವನರಿವಲ್ಲಿ.

---

(೪) ಸೋಹಂಭಾವದಿಂದ ವರ್ತಿಸುವುದು.

ವಿವರಣೆ:— ಮುಂದಿನ ವಚನಗಳಲ್ಲಿ ಚಂದಿಮರಸನು ಜಗತ್ತಿನಲ್ಲಿ ನಡೆಯುವ ದುರ್ವ್ಯಾಪಾರಗಳನ್ನು ವಿವರಿಸಿದ್ದಾನೆ. ಎಲ್ಲ ವಚನಕಾರರು ಶುದ್ಧ ವರ್ತನೆಯಿಂದ ಮನುಷ್ಯನು ನಡೆಯಬೇಕೆಂಬುದನ್ನು ಕುರಿತು ಪದೇ ಪದೇ ಹೇಳಲು ಎಂದೂ ಬೇಸರಿಯುವದಿಲ್ಲ. ಈ ವಿಷಯವನ್ನು ಅವರು ಅನೇಕ ರೀತಿಯಿಂದ ಹೇಳುವದುಂಟು. ಅನೇಕ ವಚನಗಳಲ್ಲಿ ಮನುಷ್ಯನು ಎಲ್ಲಿಂದ ಬಂದಿದ್ದಾನೆ, ಅವನು ಇಲ್ಲಿ ತನ್ನ ಪೂರ್ವದ ಹುಟ್ಟನ್ನು ಮರೆತು ಹ್ಯಾಗೆ ಆಚರಿಸುತ್ತಾನೆ, ಇದರಿಂದ ಪ್ರಪಂಚದಲ್ಲಿ ಅವನು ನೋವುತ್ತ ಬಳಲುತ್ತ, ಹೇಗೆ ನಾನಾ ಯೋನಿಗಳಲ್ಲಿ ಹುಟ್ಟಿ ಹುಟ್ಟಿ ಬರುತ್ತಾನೆ, ಎಂಬದನ್ನು ವರ್ಣಿಸಿ ಸೋಹಂ ಭಾವವಿರಬೇಕೆಂದು ಹೇಳಿದ್ದಾನೆ. ಇದೇ ಪರಮ ಸಂತೋಷದ ಸ್ಥಿತಿಯು. ಮನುಷ್ಯನು ವಿಧಿ ನಿಷೇಧ, ಜನನ ಜನಕರು, ಕುಲಗೋತ್ರ ಜಾತಿ ವಿಜಾತಿ, ಭೇದಾಭೇದ, ಸ್ವರ್ಗನರಕ ಇಂಥ ತೋರಿಕೆಯ ವಸ್ತುಗಳಿಗೆ ಒಲಿದು ಯಾತನೆಪಡುತ್ತಾನೆ. ಇಂಥ ಭಿನ್ನತೆಗಳಿಂದ ಅವನು ದೂರವಿರಬೇಕು. (ವಚನ ೨೬) ಆದರೆ ಹೀಗೆ ವರ್ತಿಸುವದು ಬಹು ಕಷ್ಟಕರವಾದ ಕಾರ್ಯವೆಂದು ವಚನಕಾರನು ಮುಂದೆ ಹೇಳಿ ಇಂಥ ಮಾಯೆಯನ್ನು ಗೆಲಿವುದು ಸಿವ್ಮಲಿಗೆಯ ಚನ್ನರಾಮನಿಗೆ ಮಾತ್ರ ಸಾಧ್ಯವೆಂದು ಹೇಳುತ್ತಾನೆ. ಹೀಗೆ ಹೇಳಿ ಮನುಷ್ಯನ ಕ್ಷುದ್ರ ದೇಹ ಎಂತಹದಿದೆ ಎಂಬುದನ್ನು ವರ್ಣಿಸಿ, ಮನಸ್ಸಿನಲ್ಲಿ ಇದಕ್ಕೊಸ್ಕರ ಹೇಯ ಭಾವ ಹುಟ್ಟಿಸಲು ಯತ್ನಿಸುತ್ತಾನೆ. (ವಚನ ೨೯) ಇಂಥ ದೇಹವನ್ನು ಹಿಡಿದುಕೊಂಡು ಸಂಸಾರದ ಅಲ್ಪ ಸುಖವನ್ನು ಬಯಸಿ ಅದಕ್ಕೆ ಹೇಗೆ ಮೋಹಿಸುತ್ತಾನೆಂಬುದನ್ನು ಚಿತ್ರವೇಧಕ ಉದಾಹರಣೆಯಿಂದ ಹೇಳುತ್ತಾನೆ. (ವಚನ ೩೦) ಆದರೆ ಇಂಥ ಸಂಸಾರದ ಕಷ್ಟಗಳನ್ನು ನಿವಾರಣೆ ಮಾಡಲು ಮನುಷ್ಯನಿಗೆ ಯಾರೂ ಸಹಾಯಕರಿಲ್ಲ. ಆದರೆ "ಸೋಹಂ ಸ್ಥಿರಸ್ಥಾಯಿ" ಎಂಬ ಭಾವವನ್ನು ಬಲಿದು ನಿನ್ನನ್ನು ನೀನೇ ತಿಳಿದುಕೋ ಎಂದು ಬೋಧಿಸುತ್ತಾನೆ

ವಚನಗಳು.

೨೪. ಪರಮಾತ್ಮನ ಪ್ರತಿಲಹರಿಯಿಂದ ಅಂತರಾತ್ಮನುತ್ಪತ್ತಿಯು. ಅಂತರಾತ್ಮನ ಪ್ರತಿಲಹರಿಯಿಂದ ಜೀವಾತ್ಮನುತ್ಪತ್ತಿಯು. ಇಂತೀ ಜೀವಾ

ತ್ಯಾಂತರಾತ್ಮಾದಿಗಳು ಅಂಗಪ್ರಾಣದಲ್ಲಿ ಒಂದೇ ಎಂದೆನಿಸಿದರೂ, ಆ ನೊಂದೆಂಬ ತಾಮಸಜೀವನು ಅಂಗನೆಯ ಸಂಗ ಮೊದಲಾದ ದುಃಖಂ ಗಳಲ್ಲಿ ನೋವುತ್ತ, ನಾನಾ ಯೋನಿಗಳಲ್ಲಿ ಜನಿಸುತ್ತ, ರೌರವನರಕದಲ್ಲಿ ಅಳುತ್ತ, ಮುಳುಗುತ್ತಲಿಹನು. ಆ ಪರಮಾತ್ಮನು ಜೀವಾತ್ಮನ ಶಿಖಾ ಮಧ್ಯದಲ್ಲಿದ್ದು ನಾಹಂ ಎನ್ನದೆ, ಸೋಹಂ ಸೋಹಂ ಎನ್ನುತ್ತ, ನಮ್ಮ ಸಿಮ್ಮಲಿಗೆಯ ಚನ್ನರಾಮನೆಂಬ ಅಖಂಡ ಲಿಂಗದೊಳಗೆ ನಿತ್ಯತ್ವವ ನೈದುತ್ತ, ಎಡೆದೆರಹಿಲ್ಲದೆ ಪರಮ ಸಂತೋಷದೊಳಗಿದ್ದಿತ್ತ.

೨೫. ಕರ್ಮ ಭಕ್ತಿ ಜ್ಞಾನ ವೈರಾಗ್ಯವೆಂಬ ಚತುರಾಶ್ರಮಿಗಳಿಗೆ ತೃತ್ಯನುಭವಸಿದ್ಧವಾಗಿಹುದು. ಹಿಡಿದು ಸುಖವಿಲ್ಲ, ಬಿಟ್ಟು ದುಃಖವಿಲ್ಲ. ನೆರೆಯರಿದು ವಿಷಯಂಗಳ ಬಿಟ್ಟೊಡೆ ಪರಮಾನಂದ. ಎಂದಿಗೂ ಪರ ಬ್ರಹ್ಮವಲ್ಲಿಹುದು, ಆ ಸೋಹಂಬ್ರಹ್ಮದಲ್ಲಿ ನಿಂದಿರೆ. ಈ ದೇಹದ ಅಹಂ ಮಮತೆಯ ಬಿಡು. ಮಾಯೆಯುಳಿವುದೇ ಸಿಮ್ಮಲಿಗೆಯ ಚನ್ನರಾಮನ ಭಾವಿಸಿ ನೋಡಿದಲ್ಲಿ?

೨೬. ವಿಧಿ ನಿಷೇಧ, ಜನನಿ ಜನಕ, ಕುಲ ಗೋತ್ರ, ಜಾತಿ ವಿಜಾತಿ, ಭೇದಾಭೇದ, ಸ್ವರ್ಗ ನರಕಾದಿ, ಭಯವೇನೂ ಇಲ್ಲ. ಜಗ ವೇನೂ ಇಲ್ಲ. "ಅತ್ರ ಪಿತಾ ಪಿತಾ ಭವತಿ ಮಾತಾ ಮಾತಾ ಲೋಕಾ ಲೋಕ ದೇವೋದೇವ ವೇದಾ ವೇದ ಬ್ರಾಹ್ಮಣ ಬ್ರಾಹ್ಮಣ ಚಾಂಡಾಲೋ ಚಾಂಡಾಲೋ" ಎಂದುದು ವೇದ. ಅದು ತಾನೇ. ತನ್ನಿಂದನ್ಯವಿಲ್ಲ. ತೋರುವ ತೋರಿಕೆ ಎಲ್ಲ ಮಾಯೆ ಎಂದಂದು, ಜ್ಞಾನಾನಂದ ಪರಿಪೂರ್ಣ ತಾನೆಂದರಿದು, ನೀನಾಗಿ ನಿಂದ ನಿಜಗುಣ ನೀನೆ ಸಿಮ್ಮಲಿಗೆಯ ಚನ್ನರಾಮಾ.

೨೭. ನಿಚ್ಚ ಕನಸಿನಲ್ಲಿ ಅಶ್ವಮಧೆ ಬ್ರಹ್ಮಹತ್ಯವ ಮಾಡಿದೊಡಂ, ಎಂತು ನಡೆದೊಡಂ ದೇವದತ್ತಂಗೆ ಗುಣ ದೋಷ ಉಂಟಿ? ಸ್ವರ್ಗ ನರಕ ಉಂಟೀ ಹೇಳಾ? ಅದೆತ್ತಣ ಮಾತು? ಕನಸು ಮಿಥ್ಯವಪ್ಪುದರಿಂ ಮಾಯೆ ಮಾಯೆ. ಈ ಮಾಯೆಯನರಿದು ಹುಸಿಜೀವ ಭಾವಾಭಾವ ವಿಂದ ಏನ ಮಾಡಿದರೇನೋ ಸಿಮ್ಮಲಿಗೆಯ ಚನ್ನರಾಮಾ.?

೨೮. ಕಾಳಕೂಟದ ಹಾಳಾಹಳವೆಂಬ ವಿಷ ಕುಡಿದವರನಲ್ಲದೆ, ಮಿಕ್ಕಿನವರನೇನು ಮಾಡಲು ಬಲ್ಲದು? ಹೆಸ್ಸೆಂಬ ಕಡು ನಂಜು ನುಡಿ ದವರಂ ನೋಡಿದವರಂ ಕೇಳಿದವರಂ ಗಡಣ ಸಂಗ ಮಾತ್ರದಿಂ ಮಡುಹಿ ನರಕದಿ ಕೆಡಿಸುದು. ದೇವ ದಾನವ ಮಾನವಾದಿಗಳನಾದೊ ಡೆಯೂ ಉಳಿಯಲೀಯದು. ಆವಂಗೆಯೂ ಗೆಲಬಾರದ ಮಾಯೆ. ಈ ಮಾಯೆಯ ಗೆಲಿದಾತ ನೀನೆ ಸಿಮ್ಮಲಿಗೆಯ ಚನ್ನರಾಮಾ.

ಗಡಣ = ಘಟನೆ, ಸಂಯೋಗ ಮಡುಹು = ಕೊಲ್ಲು.

೨೯. ಎಲು, ತೊಗಲು, ನರ, ಮಾಂಸ, ಪುರೀಷ, ಶ್ಲೇಷ್ಮ, ರಕ್ತ, ಅಂಗವಿಕಾರ, ಕ್ರಿಮಿ, ಓಕರಿಕೆ, ಜಂತು, ಜನ್ಮ, ಮರಣ, ವ್ಯಾಧಿಯ ತವರುಮನೆ, ನೋಡುವರೆ ಪಾಪದ ಪುಂಜ, ಇಂತೀ ಹೇಸಿಕೆಯೊಳಗೆ ಏತರ ಸುಖವನರಸುವೆ? ಸುಖದಾಸೆಯ ನೋಡುವರೆ ಸಕಲ ದುಃಖ ದಾಗರ, ನರಕದ ಪಾಕುಳ, ಇಂತೆಂದೇ ತಿಳಿದು ವಿರಕ್ತನಾದ ಪರಮಪ್ಪ ನಿಜ ನೀನೆ ಸಿಮ್ಮಲಿಗೆಯ ಚನ್ನರಾಮಾ.

ಪುರೀಷ = ಮಲ, ಶ್ಲೇಷ್ಮ = ಸುಂಬಳ, ಪಾಕುಳ = ಸುತ್ತುಮಲಯ, ಮನೆ.

೩೦. ಬಟ್ಟೆಯಲ್ಲಿ ಹೋಗುತ್ತಿರ್ಪ ಮನುಜನೊಬ್ಬನನ್ನ ಹುಲಿ ಕಾಡಗಿಚ್ಚು ರಕ್ಕಸಿ ಕಾಡಾನೆಗಳು ನಾಲ್ಕು ದಿಕ್ಕಿನಲ್ಲಿ ಅಟ್ಟಿ ಬರುತ್ತಿ ರಲು, ಅವಂ ಕಂಡ ಭಯದಿಂದ ಹೋಗಲು ದಿಕ್ಕು ತೋರದೆ ಹಾಳು ಬಾವಿಯ ಕಂಡು ತಲೆಯೂರಿ ಬೀಳುವಲ್ಲಿ ಹಾವ ಕಂಡು ಬೀಳಲಮ್ಮದೆ ಇಲಿ ಕಡಿದ ಬಳ್ಳಿಯಂ ಹಿಡಿದು ನಿಲ್ಲಲು ಜೀಸುಹುಳು ವೈನೂರು ವಾಗ ಮೂಗಿನ ತುದಿಯಲೊಂದು ಹನಿಯು ಮಧುವಿಂದು ಬೀಳ ಲಾಗಿ ಆ ಮಧುವಂ ಕಂಡು ಹಿರಿದಪ್ಪ ದುಃಖವನೆಲ್ಲವ ಸೈರಿಸಿ ನಾಲಿ ಗೆಯಲ್ಲಿ ಆ ಮಧುವ ಸೇವಿಸುವನಂತೆ ಈ ಸಂಸಾರ ಸುಖವ ವಿಚಾ ರಿಸಿ ನೋಡಿದಡೆ ದುಃಖದಾಗರವು. ಇದನರಿದು ಸಕಲ ವಿಷಯಂಗಳ ಲ್ಲಿಯು ಸುಖವಿಂತುಂಟೆಂದು ನಿರ್ವಿಷಯಿಯಾಗಿ ನಿಂದ ನಿಲವು ನೀನೇ ಸಿಮ್ಮಲಿಗೆಯ ಚನ್ನರಾಮಾ.

೩೧. ಎಲುವಿನ ಹಂದರ ನರವಿನ ಜಾಳಿಗೆ, ಅಮೇಧ್ಯದ ಹುತ್ತ, ಮೂತ್ರದ ಬಾವಿ, ಶ್ಲೇಷ್ಮದ ಕೆಸರು, ಕೀವಿನ ಸೊನೆ, ನೆತ್ತರ ಮಡು

ನಾಡಿಗಳ ಸುತ್ತುವಳಿ, ನೆಣ ಮಾಂಸದ ಗಟ್ಟಿಯ ತಿಪ್ಪ, ಕಿಸುಕುಳ ಹೇಸಿಕೆ, ಅತಿ ಹ್ಯೇಯದ ಮಲಿನತೆ, ತೊಗಲ ಪಾಕುಳ, ಕ್ರಿಮಿಯ ಸಂಕುಳ, ರೇತೋರಂಜಸ್ಸಿನಲ್ಲಿ ಜನಿತ, ಉತ್ಪತ್ತಿ ಸ್ಥಿತಿ ಲಯದ ಬೀಜ, ಆಧಿ ವ್ಯಾಧಿಯ ತವರುಮನೆ, ವಿಷಯದ ಭವದುಃಖದಾಗರ, ತೋರ ಕೆಡುವ ತನು ಇದು ನಿನ್ನದಂದು ಪಾಪಂಗಳ ಮಾಡಿ, ಬಾರದ ಭವಂಗ ಳಲ್ಲಿ ಬಂದು, ದೇಹದಿಚ್ಛೆಗೆ ಸಂದು, ಹುಸಿವೆತ್ತಿ ದೇಹಗೊಂಡು ಮರು ಗುಸೆ, ಮರುಳು ಮಾನವಾ! ಅಘೋರ ನರಕದಲ್ಲಿ ಕೆಡುವಾಗ, ಅಡ್ಡ ಬಪ್ಪವರಾರು ಹೇಳಾ? ಅಹಂ ಮಮತೆಯಂ ಮರೆದು, ದೇಹದಿಚ್ಛೆಯ ಬಿಟ್ಟು, ಸೋಹಂ ಬ್ರಹ್ಮಾಸ್ಮಿ ಎಂದು, ಕೇಡಿಲ್ಲದ ಪದವ ಮಾಡಿಕೋ ಮರುಳೇ. ಪೋಹ ಬೇಡ. ಕೆಡುವೆ. ನಿನ್ನಲ್ಲಿ ನೀನೇ ತಿಳಿದು ನೋಡು ನಿಮ್ಮುಲಿಗೆಯ ಚನ್ನರಾಮಾ.

ಸೊಸೆ = ಹೊರಬಿದ್ದರಸ

ಶಿವಾನುಭವ.

ವರ್ಷ ೦೨] ಎಪ್ರೇಲ ೧೯೩೮ [ಸಂಚಿಕೆ ೭

ಶ್ರೀ. ತೋಂಟದ ಸಿದ್ಧಲಿಂಗೇಶ್ವರರ ಚರಿತ್ರೆ.

(ರಾ. ಸಾ. ಫ. ಗು. ಹಳಕಟ್ಟಿ ಬಿ. ಏ. ಎಲೆಲ್. ಬಿ. ವಿಜಾಪುರ)

ತೋಂಟದಾರ್ಯರು ಕರ್ನಾಟಕದಲ್ಲಿ ಆಗಿಹೋದ ಮಹಾಪುರುಷರು. ಅವರು ಮಾಡಿದ ಕಾರ್ಯಗಳು ಮಹತ್ತರವಾದವುಗಳು. ಅವರು ಅತ್ಯುತ್ತಮ ತರಗತಿಯ ವಚನಕಾರರೂ ಇರುವರು. ಅವರ ವಚನಗಳು ಪಿಡ್ಪತ್ ಪ್ರಚುರವಾದವುಗಳು ಮತ್ತು ಬಹಳ ಓಜಸ್ಸುಳ್ಳವು. ಅಲ್ಲದೆ ಅವರು ಸಮಾಜೋದ್ಧಾರಕರೂ ಆಗಿರುವರು. ಅವರು ಅನೇಕ ದೇಶಗಳಲ್ಲಿ ಸಂಚರಿಸಿ ಧರ್ಮ ಜ್ಯೋತಿ ಮಾಡುತ್ತ ಕಾಲ ಕಳೆದರು. ಹಾಗೆಯೇ ಅವರು ಮಹತ್ತರವಾದ ಸಮಾಜ ಸಂಘಟನಾ ಶಕ್ತಿಯುಳ್ಳವರು. ಅವರು ತಮ್ಮ ವಿಶೇಷತರ ನಿರ್ಬಂಧನೆಗಳ ಮೂಲಕ ಸಮಾಜದ ಕಟ್ಟನ್ನು ಬಲಪಡಿಸಿದರು. ಯಾವ ಕಾಲದಲ್ಲಿ ಸಮಾಜವು ಬಹು ಶಿಥಿಲತೆಯನ್ನು ಹೊಂದಿತ್ತೋ ಆಗ್ಗೆ ಅವರು ಉದಯವಾಗಿ ಅದರ ಭದ್ರತೆಯನ್ನು ಕಾಯ್ದರು. ಇದರಂತೆಯೇ ಅವರು ಅತ್ಯಂತ ತಪಸ್ವಿಗಳೂ ಶಿವಯೋಗ ನಿರತರೂ ಆಗಿದ್ದರು. ಅವರ ಬಗ್ಗೆ ಅನೇಕ ಜಿಜ್ಞಾಯಿಕೆಗಳು ಪ್ರಚುರವಾಗಿವೆ. ಇಂಥ ಮಹಾನುಭಾವರ ಚರಿತ್ರೆಯನ್ನು ಈ ಸಂಚಿಕೆಯಲ್ಲಿ ಕೊಡಲೆಳಸಿದ್ದೇವೆ.

ವೀರಶೈವ ಸಮಾಜೋದ್ಧಾರದ ಕಾಲಗಳು.

ವೀರಶೈವ ಸಮಾಜೋದ್ಧಾರದ ಇತಿಹಾಸವಲ್ಲಿ ನಾವು ಮುಖ್ಯವಾದ ೪ ವಿಭಾಗಗಳನ್ನು ಕಲ್ಪಿಸಬಹುದು (೧) ದೇವರದಾಸಿಮಯ್ಯನ

ಕಾಲಃ— ಈ ಕಾಲದಲ್ಲಿ ಕರ್ನಾಟಕದಲ್ಲಿ ಒಂದು ಮಹತ್ತರವಾದ ಧರ್ಮ ಜಾಗ್ರತಿಯುಂಟಾಗಿ ಶಿವಮತವು ಇಲ್ಲಿ ನೆಲೆಗೊಳಿಸಲ್ಪಟ್ಟಿತು. ಆಗ ಅನೇಕ ಶಿವಶರಣರುದಯರಾಗಿ ಶಿವಮತೋದ್ಧಾರ ಕಾರ್ಯಗಳನ್ನು ನಡೆಸಿದರು. ಇದು ಬಸವೇಶ್ವರನ ಪೂರ್ವದ ಕಾಲವು. (೨) ಬಸವೇಶ್ವರನ ಕಾಲಃ— ಈ ಕಾಲದಲ್ಲಿ ಕರ್ನಾಟಕದಲ್ಲಿ ಒಂದು ಮಹತ್ತರವಾದ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯುಂಟಾಯಿತು. ಕಲ್ಯಾಣ ಪಟ್ಟಣದಲ್ಲಿ ಶಿವಾನುಭವ ಮಂಟಪದಲ್ಲಿ ಶ್ರೀ ಬಸವೇಶ್ವರನ ಸಮ್ಮುಖದಲ್ಲಿ ಸ್ಥಿರಪಡಿಸಿದ ಉದಾತ್ತ ತತ್ವಗಳು ಕರ್ನಾಟಕಾಂಧ್ರ ದೇಶಗಳಲ್ಲಿ ಸಾರಲ್ಪಟ್ಟವು. ಇದು ವಚನ ವಾಙ್ಮಯದ ಉಚ್ಚ ಕಾಲವು. (೩) ವಿಜಯನಗರದ ಕಾಲವುಃ— ಇದು ೧೫ನೇ ಶತಮಾನವು. ವೀರಶೈವ ಪುನರುದ್ಧಾರದ ಕಾಲವು ಇದರಲ್ಲಿ ನಾವು ಪುನಃ ಎರಡು ವಿಭಾಗಗಳನ್ನು ಮಾಡಬಹುದು. (ಅ) ಈ ಶತಮಾನದ ಮಧ್ಯಕಾಲ ಮತ್ತು (ಬ) ಕಡೆಯ ಕಾಲ. ಮಧ್ಯಕಾಲದಲ್ಲಿ ಅರಸನಾಗಿದ್ದ ಗಜಬೇಂಟೆಕಾರ ಇಮ್ಮಡಿ ದೇವರಾಯ ಅಥವಾ ಪ್ರೌಢರಾಯನ (೧೪೨೯–೧೪೪೬) ಆಳಿಕೆಯಲ್ಲಿ ಲಕ್ಕಣ್ಣದಂಡೇಶ, ನೂರೊಂದು ವಿರಕ್ತರು ಮೊದಲಾದ ಶಿವಾನುಭವಿಗಳು ಉದಯವಾಗಿ ವೀರಶೈವ ಧರ್ಮವನ್ನು ಎತ್ತಿಹಿಡಿದರು. ಕಡೆಯ ಕಾಲದಲ್ಲಿ ತೋಂಟದಾರ್ಯರು ಉದಯವಾಗಿ ದೇಶದಲ್ಲಿ ಉಂಟಾದ ವಿಪರೀತಗಳನ್ನು ದೂರಮಾಡಿ ಸಮಾಜದಲ್ಲಿ ವ್ಯವಸ್ಥೆಯನ್ನುಂಟು ಮಾಡಿದರು. (೪) ಕೆಳದಿಯ ರಾಜರ ಕಾಲಃ— ಈ ವಂಶದಲ್ಲಿ ವಿದ್ಯಾ ಪ್ರೋತ್ಸಾಹನ ಶೀಲರಾದ ಅನೇಕ ರಾಜರು ಉದ್ಭವಿಸಿ ಕರ್ನಾಟಕ ಸಂಸ್ಕೃತಿಯನ್ನು ಎತ್ತಿಹಿಡಿದರು. ಹೀಗೆ ವೀರಶೈವ ಧಾರ್ಮಿಕ ಮತ್ತು ಸಾಮಾಜಿಕ ಇತಿಹಾಸದಲ್ಲಿ ಮುಖ್ಯ ನಾಲ್ಕು ವಿಭಾಗಗಳನ್ನು ಮಾಡಬಹುದು.

ತೋಂಟದಾರ್ಯರು ಉದಯವಾದ ಕಾಲದ ಪರಿಸ್ಥಿತಿ.

ತೋಂಟದಾರ್ಯರು ವಿಜಯನಗರದ ರಾಜನಾದ ವಿರೂಪಾಕ್ಷನ (೧೪೬೭–೧೪೭೯) ಆಳಿಕೆಯಲ್ಲಿ ಪ್ರಸಿದ್ಧಿಗೆ ಬಂದಿರಬಹುದೆಂದು ರಾ॥ ಬಿ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯಲ್ಲಿ ಊಹಿಸಿರುವರು. ಅವರು ಸುಮಾರು ೧೪೭೦ ರಲ್ಲಿ ಇರಬಹುದೆಂತಲೂ ಹೇಳಿದ್ದಾರೆ. ಇದು ನಿಜವೆಂದು ತೋರುತ್ತದೆ. ವಿರೂಪಾಕ್ಷರಾಜನ ಆಳಿಕೆಯು ದೇಶಕ್ಕೆ ಸುಖಕರವಾಗಿರಲಿಲ್ಲ. ಆಗ ದೇಶದಲ್ಲೆಲ್ಲ ಅಸ್ಪಷ್ಟತೆಗಳು ನೆಲೆ

ಗೊಂಡಿದ್ದವು ಈತನು ಆರಂಭದಲ್ಲಿ ವೀರಶೈವ ಮತಾನುಯಾಯಿಗಿದ್ದು ಬಳಿಕ ಶ್ರೀ ವೈಷ್ಣವ ಧರ್ಮವನ್ನು ಸ್ವೀಕರಿಸಿದನು. ಅರಸನ ದೌರ್ಬಲ್ಯದ ಮೂಲಕ ದೇಶದಲ್ಲೆಲ್ಲ ದಂಗೆಗಳೆದ್ದಿದ್ದವು. ಪ್ರಾಂತಾಧಿಕಾರಿಗಳು ಸ್ವತಂತ್ರರಾಗಿ ಅಲ್ಲಲ್ಲಿ ಆಳತೊಡಗಿದ್ದರು. ಈ ಬಗೆಯ ರಾಜ್ಯದ ಅವನತಿಯೊಡನೆ ನೈತಿಕ ಮತ್ತು ಧಾರ್ಮಿಕ ಅವನತಿಗಳೂ ಉತ್ಪನ್ನವಾಗುವದು ಸ್ವಾಭಾವಿಕವು. ಹೀಗೆ ಅವ್ಯವಸ್ಥೆಯಾದದ್ದನ್ನು ಚನ್ನಬಸವ ಪುರಾಣ ಕರ್ತನಾದ ವಿರೂಪಾಕ್ಷ ಪಂಡಿತನು ತನ್ನ ಕಾವ್ಯದಲ್ಲಿ ವರ್ಣಿಸಿದ್ದಾನೆ. ಇಂಥ ವಿಪ್ಲವ ಕಾಲದಲ್ಲಿ ತೋಂಟದಾರ್ಯರು ಕರ್ನಾಟಕದಲ್ಲಿ ಉಗಮಿಸಿದರು.

ನಿರಂಜನ ವಂಶರತ್ನಾಕರದಲ್ಲಿ ತೋಂಟದಾರ್ಯರು ಯಾವ ಕಾಲದಲ್ಲಿ ಉದಯಿಸಿದರೆಂಬುದನ್ನು ಹೇಳುವಲ್ಲಿ "ಪಂಪಾ ವಿರೂಪಾಕ್ಷನ ಕ್ಷೇತ್ರದ ವಿದ್ಯಾನಗರದ ಪ್ರೌಢರಾಯನ ಆಳಿಕೆಯಲ್ಲಿ ನೂರೊಂದು ವಿರಕ್ತರು ಭೂಮಿಯಲ್ಲಿ ಮಹಿಮರೆನಿಸಿ ಮಹತ್ವಗಳ ಮಾಡಿ ಶಿವಮತವನುದ್ಧರಿಸಿ ಶಿವಲೋಕಕ್ಕೆ ಹೋದಬಳಿಕ ಪ್ರೌಢರಾಯನ ಪಟ್ಟಣವ ಆ ರಾಜನು ಸಾಂಬಲೋಕಕ್ಕೆ ಹೋದನಂತರ ನರಸಣ್ಣರಾಯನಾಳಿಕೆಯಲ್ಲಿ ಆ ಸೀಮೆಯಲ್ಲಿ ಶಿವಮತವಳಿದು ಅನ್ಯಮತವು ಹೆಚ್ಚಿದ ಕಾರಣನಾದನು. ಶಿವನಿಗೆ ಸೂಚಿಸಿದರಿಂದ ನಿರಂಜನ ಗಣವರನು ಶಿವನಪ್ಪಣೆಯಿಂದ ಏಳು ನೂರು ಗಣವರರು ಸಹಿತವಾಗಿ ಮರ್ತ್ಯಲೋಕದಿ ಈ ವಿರತರು ಅವತರಿಸಿದರೆಂಬುದಕ್ಕೆ ಆ ಪುರಾಣಗಳೇ ಸಾಕ್ಷಿಯು" (ಪುಟ ೩೯) ಎಂದು ಹೇಳುತ್ತಾನೆ.

ಇಲ್ಲಿ ಹೇಳಲ್ಪಟ್ಟ ನರಸಣ್ಣರಾಯನು ಸಾಳುವ ವಂಶದ ನರಸಿಂಹನಾಗಿರುವನು. ಈತನು ಪ್ರೌಢರಾಯನ ಕಾಲದಲ್ಲಿ ವಿಖ್ಯಾತನಾದ ಸೇನಾಪತಿಯಾಗಿ ದಕ್ಷಿಣ ದೇಶವನ್ನು ಮುಳುಬಾಗಿಲಿನಲ್ಲಿದ್ದು ಆಳುತ್ತಿದ್ದನು. ಪ್ರೌಢರಾಯನ ತರುವಾಯ ದುರ್ಬಲರಾದ ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷರಾಯ ಇವರ ಆಳಿಕೆಯಲ್ಲಿಯೂ ತನ್ನ ಅಧಿಕಾರವನ್ನು ಹೆಚ್ಚಿಸುತ್ತ ಕಡೆಗೆ ತಾನೇ ವಿಜಯನಗರದಲ್ಲಿ ರಾಜ್ಯಾರೋಹಣವನ್ನು ಮಾಡಿದನು. ಈ ನರಸಣ್ಣನಾಯಕನ ಕಾಲವು ೧೪೫೯ ರಿಂದ ೧೪೯೫ ರ ವರೆಗೆ ಇದ್ದುದುದಾಗಿ ತಿಳಿದುಬರುತ್ತದೆ. ಈ ಸಾಳುವ ನರಸಿಂಹನು ಶ್ರೀ. ವೈಷ್ಣವ ಮತಾವಲಂಬಿಯಾಗಿ ಈ ಮತವನ್ನು ಹೆಚ್ಚಿ

ಸುತ್ತಿರುವ ಕಾಲದಲ್ಲಿ ತೋಂಟದಾರ್ಯರು ಉದಯಿಸಿದರೆಂಬದನ್ನು ಈ ಗ್ರಂಥದಲ್ಲಿ ವರ್ಣಿಸಿದೆ. ಹೀಗೆ ಹೇಳಿದ್ದರಲ್ಲಿ ಸತ್ಯಾಂಶವಿರುತ್ತದೆಂದು ನಮಗೆ ತೋರುತ್ತದೆ.

ವಾಣಿಜ್ಯಪುರ.

ತೋಂಟದಾರ್ಯರು ಉದಯವಾದುದು ಮೈಸೂರು ಜಿಲ್ಲೆಯಲ್ಲಿರುವ ವಾಣಿಜ್ಯಪುರ ಅಥವಾ ಈಗಿನ ಹರದನಹಳ್ಳಿಯು. ಈ ಗ್ರಾಮವು ಈಗ ಒಂದು ಸಣ್ಣ ಸ್ಥಳವಾಗಿದ್ದರೂ ಹಿಂದಿನ ಕಾಲದಲ್ಲಿ ಇದು ಒಂದು ಮಹತ್ವದ ಪಟ್ಟಣವಾಗಿತ್ತು. ಇಲ್ಲಿಂದಲೇ ವೀರಶೈವ ಧರ್ಮಪ್ರಸಾರ ಕಾರ್ಯಗಳು ದೇಶದಲ್ಲೆಲ್ಲ ಜರಗುತ್ತಿದ್ದವೆಂಬುದಕ್ಕೆ ಬಲವಾದ ಕಾರಣಗಳುಂಟು. ಕರ್ನಾಟಕ ಪ್ರಾಂತದ ಉತ್ತರ ಪ್ರದೇಶವನ್ನು ಮುಸಲ್ಮಾನರು ಆಕ್ರಮಿಸಿ ಕಲ್ಯಾಣ ಪಟ್ಟಣವನ್ನು ವಿಧ್ವಂಸ ಮಾಡಿದ ಬಳಿಕ ಅಲ್ಲಿಯ ಶೂನ್ಯ ಸಿಂಹಾಸನಾಧೀಶ್ವರರು ಈ ಭಾಗದಿಂದ ತೆರಳಿ ವಿಜಯನಗರದ ರಾಜ್ಯವನ್ನು ಸೇರಿ, ಕೆಲವು ಕಾಲ ಮೈಸೂರು ಸೀಮೆಯಲ್ಲಿಯೂ ಕೆಲವು ಕಾಲ ಬೆಳಗಾವ ಜಿಲ್ಲೆಯ ದಕ್ಷಿಣ ಭಾಗದಲ್ಲಿಯೂ ಇದ್ದು ಕಡೆಗೆ ಮೈಸೂರು ಜಿಲ್ಲೆಯಲ್ಲಿರುವ ವಾಣಿಜ್ಯಪುರದಲ್ಲಿ ಇರಹತ್ತಿದರು. ಅಂದಿನಿಂದ ಈ ಗ್ರಾಮವು ಬಹು ಮಹತ್ವದ ಸ್ಥಾನವಾಯಿತು.

ತೋಂಟದಾರ್ಯರ ಉದಯ.

೧೪ನೇ ಪಟ್ಟದ ಶ್ರೀ. ಗೋಸಲ ಚನ್ನಬಸವ ಸ್ವಾಮಿಗಳು ಇಲ್ಲಿ ಇರುತ್ತಿರಲು ಅವರಿಗೆ ತೋಂಟದಾರ್ಯರು ಶಿಷ್ಯತ್ವವನ್ನು ಹೊಂದಿದರು. ಮತ್ತು ಅವರಿಂದ ಪಟ್ಟವನ್ನು ಹೊಂದಿದರು. ಇದು ನಿರಂಜನವಂಶರತ್ನಾಕರದಲ್ಲಿ ವರ್ಣಿಸಲ್ಪಟ್ಟಿದ್ದು ಹೇಗೆಂದರೆ:- "ವಾಣಿಜ್ಯಪುರದಿ ಶೂನ್ಯ ಸಿಂಹಾಸನಸ್ಥ ಗೋಸಲ ಚನ್ನಬಸವರಾಜೇಂದ್ರರು ಒಪ್ಪುತ್ತ ಇರ್ದ ಕಾಲದಲ್ಲಿ ಪಂಪಾಕ್ಷೇತ್ರದಿ ವಿದ್ಯಾನಗರಿಯನ್ನಾಳಿದ ಪ್ರೌಢರಾಯನು ಸಾಂಬಲೋಕಕ್ಕೆ ಹೋದನಂತರ ಕೆಲವು ದಿವಸದಿ ಆ ರಾಜ್ಯದಲ್ಲಿ ಅನಾಚಾರವು ಹೆಚ್ಚಾಗಿ ಶಿವಾಚಾರವಡಗಿ ಮೇಲಾಧರಣಿಯೊಳು ವೀರಶೈವಾಚಾರವಿಲ್ಲದೆ ಪರವಾದಿಗಳು ಘನವಾಗಲು ಕೈಲಾಸಕ್ಕೆ ನಾರದನು ಪೋಗಿ" ಇತ್ಯಾದಿ ಆಗ ಪರಶಿವನು ತನ್ನ ನಿರಂಜನ ಗಣೇಶ್ವರನನ್ನು ೭೦ ಗಣವರರೊಡನೆ ಭೂವಿಗೆ ಕಳಿಸಿದನೆಂತಲೂ ಈ ನಿರಂಜನ ಗಣೇ

ಶ್ವರನು ೮ ವರುಷದ ಶಿಶುರೂಪವನ್ನು ತಾಳಿ ಕೈಲಾಸದಿಂದ ವಾಣಿಜ್ಯಪುರದ ಗೋಸಲ ಚನ್ನಬಸವ ಸ್ವಾಮಿಗಳ ವರಸನ್ನಿಧಾನಕ್ಕೆ ಇಳಿದ ಸಂತಲೂ ಇದರಲ್ಲಿ ಹೇಳಲ್ಪಟ್ಟಿದೆ. ಮಹಾಪುರುಷರು ಮಹಿಮಶಾಲಿಗಳೆಂಬ ಭಾವನೆಯು ಹಿಂದೂ ಧರ್ಮೀಯರಲ್ಲಿದ್ದು ಇದಕ್ಕನುಸಾರವಾಗಿ ಈ ವರ್ಣನೆಯು ಇದ್ದರೂ, ಇದರಿಂದ ತೋಂಟದಾರ್ಯರು ಉದಯಿಸಿದ ಕಾಲದಲ್ಲಿ ದೇಶ ಪರಿಸ್ಥಿತಿಯು ಎಷ್ಟು ಕೆಟ್ಟು ಹೋಗಿತ್ತು ಅವರ ಗುರುಗಳು ಆರು, ತೋಂಟದಾರ್ಯರು ಎಲ್ಲಿ ಮೊದಲು ತಮ್ಮ ಅಯುಷ್ಯಕ್ರಮವನ್ನು ಪ್ರಾರಂಭಿಸಿದರು ಎಂಬ ಮಹತ್ವದ ವಿಷಯಗಳು ಮೇಲ್ಕಂಡ ಗ್ರಂಥದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿವೆ. ಹೀಗೆ ತೋಂಟದಾರ್ಯರು ಉದಯಿಸಲು, ಗೋಸಲ ಚನ್ನಬಸವೇಶ್ವರರು ಅವರಿಗೆ "ನಿರಾಭಾರ ವೀರಶೈವ ದೀಕ್ಷೆಯನ್ನಿತ್ತು ಷಟ್‌ಸ್ಥಲ ಬ್ರಹ್ಮೋಪದೇಶವಂ ಮಾಡಿ ಅನಾದಿ ಸಿದ್ಧಲಿಂಗೇಶನೆಂಬ ನಾಮವಂ ಕೊಟ್ಟು ರಕ್ಷಿಸಿದರು" ಎಂದು ಇದೇ ಗ್ರಂಥದಲ್ಲಿ ಹೇಳಲ್ಪಟ್ಟಿದೆ. (ಪುಟ ೩೭). ಮುಂದೆ ಗೋಸಲ ಚನ್ನಬಸವೇಶ್ವರರು ತಮ್ಮ ಶಿವಾನುಭವ ಚರಂತಿಕೆಯ ಪಟ್ಟವನ್ನು ಸಿದ್ಧಲಿಂಗ ಯತಿಗಳಿಗೆ ಕೊಟ್ಟು ತಾವು ಸಿದ್ಧಗಂಗೆಗೆ ಹೋಗಿ ಅಲ್ಲಿ ಕೆಲ ಕಾಲವಿದ್ದು ಮುಂದೆ ಗುಬ್ಬಿಗೆ ಬಂದು ಅಲ್ಲಿ ಮಹಾಕವಿ ಮಲ್ಲಣಾರ್ಯನ ಭಕ್ತಿಯನ್ನು ಸ್ವೀಕರಿಸಿ ಅಲ್ಲಿಯೇ ನಿರ್ವಯಲಾದರು.

ತೋಂಟದಾರ್ಯರ ಸಹಾಯಕರು.

ಹೀಗೆ ಗೋಸಲ ಚನ್ನಬಸವೇಶ್ವರರ ತರುವಾಯ ತೋಂಟದಾರ್ಯರ ಮೇಲೆ ಸಮಾಜೋದ್ಧಾರ ಕಾರ್ಯವನ್ನು ನಿರ್ವಹಿಸುವ ಭಾರವು ಬಿದ್ದಿತ್ತು. ಇದರಲ್ಲಿ ಅವರು ತಮ್ಮ ಶಕ್ತಿ ಸಾಹಸಗಳನ್ನು ಮಿಗಿಲಾಗಿ ತೋರಿಸಿದರೆಂದು ಅವರ ಚರಿತ್ರೆಯಿಂದ ತಿಳಿದುಬರುತ್ತದೆ. ಈ ಕಾಲಕ್ಕೆ ದೇಶದಲ್ಲಿದ್ದ ಶಿವಾನುಭವಿಗಳೂ ಸತ್ಪುರುಷರೂ ವಾಣಿಜ್ಯಪುರದಲ್ಲಿ ನೆರೆದು ಈ ಕಾರ್ಯದಲ್ಲಿ ಅವರಿಗೆ ನೆರವಾಗಲು ಸನ್ನದ್ಧರಾದರು. ಇಂಥವರು ಅನೇಕರು ಆ ಕಾಲಕ್ಕಿದ್ದುದು ತೋರಿಬರುತ್ತದೆ. ಯಾಕಂದರೆ ಪ್ರೌಢರಾಯನ ಆಳಿಕೆಯಲ್ಲಿ ಲಕ್ಕಣ್ಣಾರ್ಯಮಾತ್ಯ, ಜಕ್ಕಣಾಚಾರ್ಯ ಇವರ ಪ್ರಯತ್ನದಿಂದಲೂ ಆ ರಾಜನ ಸಹಾನುಭೂತಿಯಿಂದಲೂ ವೀರಶೈವ ಸಮಾಜಕ್ಕೆ ಕಳೆ ಏರಿತ್ತೆಂದು ಇತಿಹಾಸಜ್ಞರು ಒಪ್ಪಿಕೊಳ್ಳುತ್ತಾರೆ. ಇದರಿಂದ ಆ ಕಾಲಕ್ಕೆ ದೇಶದಲ್ಲೆಲ್ಲ ಬಹುಕಡೆಗೆ ಧರ್ಮಜಾಗ್ರತಿಯು ಉತ್ಪ

ನ್ನವಾಗಿ ಅನೇಕ ಶಿವಶರಣರು ಉತ್ಪನ್ನರಾದರು. ಇವರ ಹೆಸರುಗಳನ್ನು ಲಕ್ಕಣ್ಣದಂಡೇಶನು ತನ್ನ 'ಶಿವತತ್ವ ಚಿಂತಾಮಣಿ' ಎಂಬ ಗ್ರಂಥದಲ್ಲಿ ಕೊಟ್ಟಿದ್ದಾನೆ. ಇದರಿಂದ ವಿಜಯನಗರವು ವೀರಶೈವರಿಗೆ ಧಾರ್ಮಿಕ ಮಹತ್ವದ ಕೇಂದ್ರಸ್ಥಾನವಾಯಿತು.

ಆದರೆ ಮುಂದೆ ವಿರೂಪಾಕ್ಷರಾಯನ ಕಾಲದಲ್ಲಿ ರಾಜ್ಯದಲ್ಲಿ ಅವ್ಯವಸ್ಥೆಯು ತಲೆದೋರಿತು. ಮತ್ತು ಶ್ರೀ ವೈಷ್ಣವ ಧರ್ಮವು ಪ್ರಬಲಿಸಿತು. ಆಗ ವೀರಶೈವರ ಕೇಂದ್ರಸ್ಥಾನವು ವಿಜಯನಗರವಾಗಿ ಉಳಿಯಲು ಸಾಧ್ಯವಿಲ್ಲದಾಯಿತು. ಆದರೆ ಇಷ್ಟರಲ್ಲಿ ವಾಣಿಜ್ಯಪುರದಲ್ಲಿ ಶೂನ್ಯಸಿಂಹಾಸನಾಧಿಪತಿಗಳ ಆವಾಸ ಸ್ಥಾನವಾಗಿದ್ದುದರಿಂದಲೂ ಇದರಿಂದ ಅಲ್ಲಿ ಶಿವಾನುಭವಿಗಳು ಆಗಮಿಸಹತ್ತಿದುದರಿಂದಲೂ ಆದು ವೀರಶೈವರ ಚಟುವಟಿಕೆಗಳಿಗೆ ಮುಖ್ಯಸ್ಥಾನವಾಯಿತು. ಹಿಂದೆ ದೇವರ ದಾಸಿಮಾರ್ಯನ ಕಾಲದಲ್ಲಿ ಉಂಟಾದ ಧರ್ಮ ಜಾಗ್ರತಿಯು ಹೇಗೆ ಬಸವೇಶ್ವರನಿಗೆ ಸಹಾಯವಾಯಿತೋ ಹಾಗೆಯೇ ಪ್ರೌಢರಾಯನ ಕಾಲದಲ್ಲಿ ಉಂಟಾದ ಧರ್ಮ ಜಾಗ್ರತಿಯ ಪರಿಣಾಮಗಳು ತೋಂಟದಾರ್ಯರಿಗೆ ಸಹಾಯಕಾರಿಗಳಾದವು. ಅವರು ಅವುಗಳ ಉಪಯೋಗವನ್ನು ಬಸವೇಶ್ವರನಂತೆಯೇ ಪೂರ್ಣವಾಗಿ ಮಾಡಿಕೊಂಡು ದೇಶದಲ್ಲಿ ಅನೇಕ ಮಹತ್ವದ ಕಾರ್ಯಗಳನ್ನು ಜರುಗಿಸಿದರು.

ತೋಂಟದಾರ್ಯರ ಈ ಕಾಲದಲ್ಲಿ ಅನೇಕ ಸಹಾಯಕರು ದೊರೆತರು. ಅವರಲ್ಲಿ ಕೆಲವರು ವಚನಕಾರರಿರುವರು, ಕೆಲವರು ಕವಿಗಳಿರುವರು, ಕೆಲವರು ಸಾಧುವರ್ಯರಿರುವರು. ಇವರೆಲ್ಲರೂ ಒಂದೇ ಕಡೆಯವರಲ್ಲ. ಕರ್ನಾಟಕಾಂಧ್ರ, ತಮಿಳು, ದೇಶಗಳಲ್ಲಿಂದ ಬಂದವರು. ಬಸವೇಶ್ವರನ ಕಾಲದಲ್ಲಿ ಅನೇಕ ನಾಡುಗಳಿಂದ ಶಿವಾನುಭವ ಸಂಪನ್ನರು. ಕಲ್ಯಾಣಪಟ್ಟಣದಲ್ಲಿ ಕಲೆತು ಧರ್ಮ ಕಾರ್ಯಗಳನ್ನು ನೆರವೇರಿಸಲು ಹೇಗೆ ತತ್ಪರರಾದರೋ ಹಾಗೆಯೇ ವಾಣಿಜ್ಯಪುರದಲ್ಲಿ ತೋಂಟದಾರ್ಯರ ಸನ್ನಿಧಾನದಲ್ಲಿ ನೂರಾರು ಜನ ಶಿವಶರಣರು ನೆರೆದು ಅವರ ಸಹಾಯಕ್ಕೆ ಸನ್ನದ್ಧರಾದರು. ಈ ವೀರಶೈವ ಸಮಾಜದಲ್ಲಿ ಕಂಟಕಗಳು ಕಾಲಕಾಲಕ್ಕೆ ಉಂಟಾದದ್ದು ಕಂಡುಬರುತ್ತದೆ. ಆದರೆ ಇಂಥ ಕಾಲದಲ್ಲಿಯೇ ಅದರಲ್ಲಿ ಧಾರ್ಮಿಕ ಚಟುವಟಿಕೆಗಳು ದೃಷ್ಟಿಗೆ ಬೀಳುತ್ತವೆ.

ನಿರಂಜನ ವಂಶರತ್ನಾಕರದಲ್ಲಿ ತೋಂಟದಾರ್ಯರಿಗೆ ಜೋಡಿಗಳಾದ ಈ ಮಹಾನುಭಾವರ ಹೆಸರುಗಳು ಇವೆ. ಅವು ಯಾವವೆಂದರೆ - ಕಂಬಳಯದೇವರು, ಸಿದ್ಧನಂಜೇಶ್ವರರು, ಚನ್ನದೇವರು, ದೊಡ್ಡ ಸಿದ್ಧಲಿಂಗೇಶ್ವರ, ಕಂಕಣದದೇವರು, ಲಂಬಕರ್ಣದದೇವರು, ಸಿದ್ಧಮಲ್ಲೇಶ್ವರ, ಗುಮ್ಮಳಾಪುರದ ವರದ ಸಿದ್ಧಲಿಂಗೇಶ್ವರ, ಎಡತೊರೆಯ ಪುರದ ಗುರುಸಿದ್ಧ, ವೀರಣ್ಣೊಡೆಯರು, ಘನಲಿಂಗದೇವರು, ಚಿಕ್ಕಮಲ್ಲೇಶ್ವರ, ಮರುಳಸಿದ್ಧೇಶ್ವರ, ಚಂದ್ರಶೇಖರ, ಸುರಗಿಯಾರ್ಯ ಶಾಂತ ಮಲ್ಲಿಕಾರ್ಜುನ, ಬೆಡಗಿನ ಪರ್ವತೇಶ್ವರ, ಪಟ್ಟಣದದೇವರು, ಜಿಗುಸಿಯ ಮರುಳುದೇವರು, ಮಳೆಯದೇವರು, ಬತ್ತಲೆಯಾರ್ಯ, ಸಂಪಿಗೆಯ ರಾಚವಟ್ಟಿದೇವರು, ಸಪ್ಪೆಯಾರ್ಯ, ಉಪ್ಪಿನಹಳ್ಳಿಯಾರ್ಯ, ಜೋಲಿಯಾ ಬಸವೇಶ್ವರ, ರಾಚವಟ್ಟಿಯ ಕೋರಿಯ ಸಿದ್ಧಬಸವೇಶ್ವರ, ಹಿರಣ್ಯಾರ್ಯ, ಜೋಳ ಬಸವೇಶ್ವರ, ಕಿತ್ತಾವರದ ಚನ್ನಮಲ್ಲೇಶ್ವರ ಇವರ ಹೆಸರುಗಳು ಹೇಳಲ್ಪಟ್ಟಿವೆ. ಹೀಗೆ ಏಳುನೂರು ಜನರು ನೆರೆದು "ಸಂತತಂಗೂಡಿ ಷಟ್‌ಸ್ಥಲಮಾರ್ಗವಂ ಧರೆಯೊಳಂತರಿಸದಂತೆ ನೆಲೆಗೊಳಿಸುತ್ತೆ ಪೂಜೆಗೊಳುತಿರದೆ ನಿಜಮುಕ್ತರಹರು" ಎಂದು ಹೇಳಿದ್ದು ಇದರಿಂದ ಈ ಯಾವತ್ತರೂ ಷಟ್‌ಸ್ಥಲ ಮಾರ್ಗವನ್ನು ದೇಶದಲ್ಲಿ ಬೋಧಿಸುವ ಕಾರ್ಯದಲ್ಲಿ ನಿರತರಾಗಿದ್ದರೆಂದು ಕಂಡುಬರುತ್ತದೆ. ಹೀಗೆ ಹೇಳಿದ್ದರಲ್ಲಿ ಯಾವ ಅತಿಶಯೋಕ್ತಿಯೂ ಇರುವದಿಲ್ಲ. ಈ ವಿಷಯವು ಚನ್ನಬಸವ ಪುರಾಣ ಕರ್ತನಾದ ವಿರೂಪಾಕ್ಷ ಪಂಡಿತನೂ ಕೂಡ ತನ್ನ ಪುರಾಣದಲ್ಲಿ ಹೇಳಿರುವನು. ಇವನು ತೋಂಟದಾರ್ಯರ ತರುವಾಯ ಸುಮಾರು ೧೦೦ ವರ್ಷಗಳ ನಂತರ ಇದ್ದನು. ಆದುದರಿಂದ ತೋಂಟದ ಸಿದ್ಧಲಿಂಗ ಯತಿಯು ಮಾಡಿದ ಕಾರ್ಯಗಳ ವೃತ್ತಾಂತವು ಅವನಿಗೆ ಹೆಚ್ಚಿಗೆ ಗೊತ್ತಾಗುವದು ಸಾಧ್ಯವಿದೆ. ತೋಂಟದಾರ್ಯರ ಸಮಾಧಿಸ್ಥಲವು ಎಡೆಯೂರು. ಈ ಸ್ಥಳದಲ್ಲಿ ಅವರ ದೇವಸ್ಥಾನವಿದ್ದು ಅದರ ಪ್ರಾಕಾರದಲ್ಲಿ ೧೫೦೦ರಲ್ಲಿ ಬರೆದ ಒಂದು ಶಿಲಾಶಾಸನವಿದೆ. ಇದರಲ್ಲಿ ಬರೆದ ಸಂಗತಿಗಳಾದರೂ ಮಹತ್ವದವಿವೆ.

"ಇಂತಪ್ಪ ಅನಾದಿ ಜಂಗಮನೇ ಜಗದ್ಧಿತಾರ್ಥವಾಗಿ ಚರಿಸಿದ ಕ್ರಮವೆಂತೆಂದೊಡೆ:— ಜ್ಞಾನಕ್ರಿಯಾ ಸ್ವರೂಪನುಂ, ಸರ್ವಾಂಗಲಿಂಗಿ ಷಟ್‌ಸ್ಥಲಜ್ಞಾನಿ ಸರ್ವಾಚಾರ ಸಂಪನ್ನ ಪಾದೋದಕ ಪ್ರಸಾದ ಪ್ರತಿ

ಷ್ಮಾಚಾರ್ಯನುಂ ಅಷ್ಟಾವರಣಾಲಂಕರಣ ಪ್ರಿಯತಾಪ್ರಿಯತ ತೀಷ್ಣ ಮಾರ್ತಂಡನುಂ ಇಂತಪ್ಪ ದಿವ್ಯಶಿವಯೋಗಿ ಸಿದ್ಧಲಿಂಗೇಶ್ವರಂಗೆ ಸಮ್ಯಗ್ ಜ್ಞಾನೋದಯವಾಗಿ ಸಂಸಾಹ ಹ್ಯೇಯಮಂ ಮಾಡಿ ಶರಣ ಹೊಕ್ಕ ಶಿಷ್ಯಜನಗಳನಾಮ ಪರಿಕ್ರಮುಂಗಳೆಂತೆಂದೊಡೆಃ— ಸಪ್ಪೆದೇವರು, ಉಪ್ಪಿನಹಳ್ಳಿಯ ಸ್ವಾಮಿ ಸಿದ್ಧದೇವರು, ನಂಜೇದೇವರು, ಜೋಳ ಬಸವರಾಜದೇವರು, ಗುಮ್ಮಳಾಪುರದ ಸಿದ್ಧಲಿಂಗದೇವರು, ಪಟ್ಟಣದೇವರು, ರೇವಣ ಸಿದ್ಧದೇವರು, ಸೀಲವಂತದೇವರು, ಬೆಟ್ಟಿಗದೇವರು ಇಂತಿ ಇವರು ಮುಖ್ಯವಾದ ಭಕ್ತ ಮಾಹೇಶ್ವರಗಳ್ ಷಟ್‌ಸ್ಥಲ ಜ್ಞಾನಲಿಂಗಾಂಗ ಸಂಬಂಧ ಸಮರಸೈಕ್ಯಾರ್ಥಮಂ ಬೋಧಿಸಿ ಮುಕ್ತರಂಮಾಡಿ ಷಟ್‌ಸ್ಥಲೈಕಾರ್ಥವಾಗಿ ಮಾಡುವ ಕ್ರಿಯೆಗಳೆಲ್ಲ ನಿಷ್ಪತ್ತಿಯಾಗಿ ಎಡೆಯೂರಲ್ಲಿ ತಮಗೆ ಕಟ್ಟಿಸಿದ ಮಠದಲ್ಲಿ ಶಿವಯೋಗ ಸಮಾಧಿ ಸನ್ನದ್ಧರಾದರು. ತೋಂಟದ ಸ್ವಾಮಿಯ ಪಾದಪದ್ಮಾರಾಧಕರಾದ ದಾಸಿವಾಸ ನಿವಾಸಿಗಳಾದ ಚನ್ನರಾಯ ಒಡೆಯರು ಚನ್ನರಾಯ ಒಡೆಯರ ಮಕ್ಕಳು ಲಿಂಗಪ್ಪ ಒಡೆಯರು, ಲಿಂಗಪ್ಪ ಒಡೆಯರ ಮಕ್ಕಳು, ಪಾದೋದಕ ಪ್ರಸಾದ ಸಂಪನ್ನರಾದ ಚನ್ನವೀರಪ್ಪ ಒಡೆಯರು, ಚನ್ನವೀರಪ್ಪ ಒಡೆಯರ ಸತಿ ಪರ್ವತಮ್ಮ ದಂಪತಿಗಳು ತಮ್ಮ ಭಕ್ತಿಯಿಂದ ತೋಂಟದ ಸ್ವಾಮಿಗೆ ಕಲ್ಲುಮಠವ ಕಟ್ಟಬೇಕೆಂದು ಬೆಟ್ಟಿಗ ದೇವರಿಗೆ ಪದಾರ್ಥಮುಂ ಕೊಟ್ಟು ನಮಸ್ಕಾರವಂ ಮಾಡಲಾಗಿ ಭಕ್ತಿ ಪದಾರ್ಥಮುಂ ಕೈಕೊಂಡು ಎಡೆಯೂರಿಗೆ ಬಿಜಯಂಗೈದು ತೋಂಟದ ಸ್ವಾಮಿಗೆ ಕಲ್ಲುಮಠವನು ಎಂಟು ಜಡೆಯ ಬಗೆಯ ಹಿರಿಯರು ಬೆಟ್ಟಿಗ ದೇವರು ಕಟ್ಟಿಸಿದರು.

ಈ ಶಿಲಾಶಾಸನವು ತೋಂಟದಾರ್ಯರನ್ನು ಪ್ರತ್ಯಕ್ಷವಾಗಿ ಕಂಡು ಅವರ ಭಕ್ತಿಯಲ್ಲಿದ್ದ ಭಕ್ತರು ಬರೆಯಿಸಿದ್ದಾಗಿದೆ. ಇದರಿಂದ ಇದು ಹೆಚ್ಚಿಗೆ ವಿಶ್ವಾಸಾರ್ಹವಾದುದು. ಇದರಲ್ಲಿ ಬರೆದ ಹೇಳಿದ ವಿಷಯಗಳೂ ನಾವು ಹೇಳಿದ ಮೇಲಿನ ಸಂಗತಿಗಳನ್ನು ಸಮರ್ಥಿಸುತ್ತವೆ.

ವಚನ ವಾಙ್ಮಯದ ಉದ್ಧಾರವು.

ತೋಂಟದಾರ್ಯರ ಕಾಲದಲ್ಲಿ ಜರಗಿದ ಮಹತ್ವದ ಕಾರ್ಯವೆಂದರೆ ಬಸವಾದಿ ಪ್ರಮಥರ ಕಾಲದಲ್ಲುದಯ ಹೊಂದಿದ ವಚನ ವಾಙ್ಮಯದ ಉದ್ಧಾರವು. ಬಸವೇಶ್ವರನಿಂದ ಉಂಟಾದ ಅದ್ಭುತ ಧಾರ್ಮಿಕ

ಕ್ರಾಂತಿಯು ವಚನ ವಾಙ್ಮಯದ ಮೂಲಕವೇ ಇರುತ್ತದೆ. ಆದರೆ ಅವನ ತರುವಾಯ ದೇಶದಲ್ಲಿ ಪರಧರ್ಮೀಯರ ಉಪಟಳವು ಹೆಚ್ಚಿ ಸುಖ ಶಾಂತಿಯಿಂದ ರಾಜ್ಯ ಮಾಡುತ್ತಿದ್ದ ರಾಜ ವಂಶಗಳು ಲಯ ಹೊಂದಿದವು. ಮೊದಲು ಮಲಿಕಕಾಫರನ ಅಭಿಯೋಗ, ಆಮೇಲೆ ತಗಲಿ ಮಹಮ್ಮದನೊಡನೆ ಆದ ಕಡುಗಾಳಗಗಳು, ಇವುಗಳ ಮೂಲಕ ಕರ್ನಾಟಕ ಮತ್ತು ದಕ್ಷಿಣ ಹಿಂದುಸ್ತಾನದಲ್ಲೆಲ್ಲ ಮೊದಲು ವೈಭವಕ್ಕೆ ಬಂದಿದ್ದ ರಾಜ್ಯಗಳು ನಷ್ಟವಾದವು. ಇಂಥ ಕಾಲದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಕಾರ್ಯಗಳು ಸಡಿಲಾಗಿ ಹೋಗುವದು ಸ್ವಾಭಾವಿಕವಾಗಿದೆ. ಈ ತೆರದ ಸ್ಥಿತಿಯು ಕರ್ನಾಟಕಕ್ಕೆ ಪ್ರಾಪ್ತವಾದುದರಿಂದ ಬಸವೇಶ್ವರನ ಕಾಲದಲ್ಲಿ ಉಂಟಾದ ಧರ್ಮಪ್ರಸಾರದ ಮತ್ತು ಸಮಾಜೋದ್ಧಾರದ ಪ್ರಯತ್ನಗಳು ೧೩ನೆಯ ಮತ್ತು ೧೪ನೆಯ ಶತಮಾನಗಳಲ್ಲಿ ಮುಂದುವರಿಯುವದು ಅಶಕ್ಯವಾಯಿತು.

ಆದರೆ ವಿಜಯನಗರದ ಸಾಮ್ರಾಜ್ಯವು ನೆಲೆಗೊಂಡ ಬಳಿಕ ದೇಶದಲ್ಲಿ ಸುಖಶಾಂತಿಗಳು ಪುನಃ ನೆಲಿಸಿದವು. ಪ್ರೌಢ ನರೇಂದ್ರನ ಕಾಲದಲ್ಲಿ ವೀರಶೈವ ಸಮಾಜದಲ್ಲಿ ಅನೇಕ ವಿಖ್ಯಾತ ಮಹಾಪುರುಷರು ಉದಯವಾದರು. ಆಗ ಉತ್ಪನ್ನರಾದ ಜಕ್ಕಣಾಚಾರ್ಯ, ಜಾಮರಸ, ಕುಮಾರ ಬಂಕನಾಥ, ಕಲ್ಲುಮಠದ ಪ್ರಭುದೇವ ಇವರೇ ಮೊದಲಾದವರಿಂದ ವಚನಶಾಸ್ತ್ರವು ಪುನಃ ಅಭಿವೃದ್ಧಿಗೊಂಡಿತು. ಮುಂದೆ ಈ ಕಾರ್ಯವು ತೋಂಟದಾರ್ಯರ ಕಾಲದಲ್ಲಿ ಮತ್ತಿಷ್ಟು ಪ್ರಬಲವಾಗಿ ಪ್ರವಹಿಸತೊಡಗಿತು.

ತೋಂಟದಾರ್ಯರು ಸ್ವತಃ ತಾವು ಒಂದು ವಚನಗ್ರಂಥವನ್ನು ರಚಿಸಿದ್ದಾರೆ. ಅವರು "ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ" ಎಂಬ ಮುದ್ರಿಕೆಯನ್ನು ಸ್ವೀಕರಿಸಿದ್ದಾರೆ. ಇದು ಪುರಾತನರ ವಚನಗಳಂತೆಯೇ ವೀರಶೈವ ಧರ್ಮತತ್ವದ ತಿರುಳನ್ನು ತಿಳಿಯಲು ಬಹು ಸಹಾಯಕರವಾಗಿದೆ. ಅವರಂತೆಯೇ ಘನಲಿಂಗ, ಜೋಳಬಸವೇಶ, ಮರುಳುಸಿದ್ಧೇಶ್ವರ, ಶಾಂತಮಲ್ಲಿಕಾರ್ಜುನದೇವ, ಶೀಲವಂತಾರ್ಯ ಇವರೂ ವಚನಗ್ರಂಥಗಳನ್ನು ರಚಿಸಿದ್ದಾರೆ. ಇದಲ್ಲದೆ ಈ ೧೫ನೆಯ ಶತಮಾನದಲ್ಲಿ ೧೨ನೆಯ ಮತ್ತು ೧೩ನೆಯ ಶತಮಾನಗಳಲ್ಲಿ ಆಗಿಹೋದ ವಚನಗಳನ್ನು ಸುಸಂಬದ್ಧವಾಗಿ ಸಂಗ್ರಹಿಸುವ ಕಾರ್ಯಗಳೂ ಕೈಕೊ

ಪಲ್ಲಟ್ಟವು. ಶೂನ್ಯಸಂಪಾದನೆ, ಲಿಂಗಲೀಲಾವಿಲಾಸ, ಗಣಭಾಷ್ಯ ರತ್ನಮಾಲೆ ಈ ಬಗೆಯ ಗ್ರಂಥಗಳೂ ಅನೇಕ ವಚನಸಂಗ್ರಹಗಳೂ ಇದೇ ಕಾಲದಲ್ಲಿ ಉಂಟಾದವು. ಪ್ರಭುದೇವ, ಚನ್ನಬಸವ, ಸಿದ್ಧರಾಮ ಮೊದಲಾದವರ ವಚನಗಳು ಸಂಗ್ರಹಿಸಲ್ಪಟ್ಟವು. ಅನೇಕ ವಚನಗಳಿಗೆ ಟೀಕೆಗಳು ಬರೆಯಲ್ಪಟ್ಟವು. ಈ ಬಗೆಯ ವಾಙ್ಮಯವು ಈ ಕಾಲದಲ್ಲಿ ಉದ್ಭವಿಸಿತು ಮತ್ತು ಅದರ ಉಚ್ಚ ತತ್ವಗಳು ದೇಶದಲ್ಲೆಲ್ಲ ಪ್ರಸಾರ ಪಡಿಸಲ್ಪಟ್ಟವು. ಹೀಗೆ ವಚನ ವಾಙ್ಮಯವು ಪುನಃ ಅಭಿವೃದ್ಧಿಸ್ಥಿತಿಯನ್ನು ಈ ಕಾಲಕ್ಕೆ ಹೊಂದಿತು.

ಧರ್ಮ ಪ್ರಸಾರ ಕಾರ್ಯ.

ಹೀಗೆ ತೋಂಟದಾರ್ಯರು ವೀರಶೈವ ಧಾರ್ಮಿಕ ವಾಙ್ಮಯ ಕ್ಷೇತ್ರದಲ್ಲಿ ಕಾರ್ಯವನ್ನೆಸಗಿದ್ದುದಲ್ಲದೆ ಅವರು ಅದರ ತತ್ವಗಳನ್ನು ದೇಶದಲ್ಲೆಲ್ಲ ಪ್ರಸಾರ ಮಾಡುವ ಕಾರ್ಯವನ್ನೂ ಕೈಕೊಂಡರು. ಪೀಠಾಧಿಪತಿಗಳು ಮಾಡತಕ್ಕ ಈ ಮಹತ್ವದ ಕಾರ್ಯವನ್ನು ಅವರು ಹಿಂದುಸ್ತಾನದಲ್ಲಿ ಅನೇಕ ಕಡೆಗೆ ಸಂಚರಿಸಿ ಸೆರಪೇರಿಸಿದರು. ಅವರು ಸಂಚಾರ ಮಾಡಿದ ಸ್ಥಳಗಳು ತೋಂಟದಾರ್ಯ ರಗಳೆ ಮತ್ತು ಸಿದ್ಧೇಶ್ವರ ಪುರಾಣ ಇವುಗಳಲ್ಲಿ ಹೇಳಲ್ಪಟ್ಟಿವೆ. ಈ ಕಾಲದಲ್ಲಿ ಅವರು ೭೫ ಮಹಿಮೆಗಳನ್ನು ಮಾಡಿದರೆಂಬ ಆಖ್ಯಾಯಿಕೆಯು ಇದೆ. ಮತ್ತು ಇವುಗಳ ವರ್ಣನೆಯು ಅವರ ಪುರಾಣಗಳಲ್ಲಿಯೂ ಬಂದಿರುತ್ತದೆ.

ತೋಂಟದಾರ್ಯರು ಪೀಠಾಧಿಪತಿಗಳಾದ ಬಳಿಕ ಅವರು ಮೊದಲು ಜೋಳದೇಶದ ಕಡೆಗೆ ತೆರಳಿ, ಕಂಚಿ, ಕಾಳಹಸ್ತಿ, ಚಿದಂಬರ ಈ ಮೊದಲಾದ ಕ್ಷೇತ್ರಗಳಿಗೆ ಚಿತ್ತೈಸಿದರು. ಆಗ ಅವರು ಮಾಡಿದ ಕಾರ್ಯಗಳನ್ನು ಸಿರಂಜನವಂಶರತ್ನಾಕರ ಗ್ರಂಥದಲ್ಲಿ ಹೇಳಿದ್ದು ಏನೆಂದರೆ– "ಗಣಸಮೂಹಗಳಿಂದ ವಾಣಿಜ್ಯಪುರಮಂ ಬಿಟ್ಟು, ದೇಶ ದೇಶಗಳಲ್ಲಿ ಉತ್ಸಹಂಗೊಳ್ಳುತ್ತ ಅಲ್ಲಿರುವ ಜೋಗಿನಾಥರು, ಸಿದ್ಧರು, ವೈಷ್ಣವ, ಬೌದ್ಧ, ಜೈನ, ಕಾಳಾಮುಖ ಮುಂತಾದವರಂ ಶಾಸ್ತ್ರಮುಖದಿಂ ಮತ್ತಪ್ಪದಿಂ ಗೆಲಿದು ಅವರಿಗೆ ಶಿವಭಕ್ತಿಯನುಂಟು ಮಾಡುತ್ತ, ಕೆಲವು ಜನರಿಗೆ ಲಿಂಗಧಾರಣವಂ ಮಾಡಿಸಿ ವೀರಶೈವವಂ ಉದ್ಧರಿಸುತ್ತ . . . . ಶರಣಗಣರಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವ

ನೀತತ ಸಕಲ ದೇಶಂಗಳ ಸಂಚರಿಸಿ" ಎಂದು ಇದರಲ್ಲಿ ಉಲ್ಲೇಖವಿದೆ. ದೇಶಮಧ್ಯದಲ್ಲಿ ಧಾರ್ಮಿಕ ಅವನತಿಯು ಪ್ರಾಪ್ತವಾದ ಕಾಲದಲ್ಲಿ ತೋಂಟದಾರ್ಯರು ಹೀಗೆ ಉದ್ಧಾರ ಕಾರ್ಯವನ್ನು ಮಾಡಿದರೆಂಬುದು ಇಲ್ಲಿ ಬಹು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಇದರಲ್ಲಿ ನಿಜಾಂಶವಿರಬೇಕು. ಈ ಪ್ರಕಾರ ಅವರು ಕಾರ್ಯಮಾಡುತ್ತ ಸಂಚರಿಸಿದ ಸ್ಥಳಗಳು ಅನೇಕ ವಿರುತ್ತವೆ. ಅವುಗಳು ತೋಂಟದಾರ್ಯರ ರಗಳೆಯಲ್ಲಿ ಹೇಳಲ್ಪಟ್ಟಿವೆ. ಅವರು ಮೈಸೂರು ಪ್ರಾಂತದಲ್ಲಿ ಎಲ್ಲ ಕಡೆಗೂ ಸಂಚರಿಸಿದರು. ಅವರು ಹೊನ್ನುಡಿಕೆ, ಚನ್ನಪಟ್ಟಣ, ಕಲುಗುಣಿಕೆ, ಹಂಚಿಹಟ್ಟಿ, ಲಿಂಗಪುರ, ಬಸವಪುರ, ತುಮುಕೂರು, ದೇವರಾಯಪಟ್ಟಣ, ಮಂಗವಾಡ, ಬುರುಡುಗುಂಪೆ, ಹಲಕೂರು, ಬಸವಕೇತಶರಧಿ, ಕೋಡೀಹಳ್ಳಿ, ಕಡಬ, ವೇಪರಾಳಿ, ವೋದೂರು, ಹೆಬ್ಬೂರು, ಹೇರೂರು, ಎಡೆಯೂರು, ಕಗ್ಗೆರೆ ಈ ಗ್ರಾಮಗಳು ಮುಖ್ಯವಾಗಿ ಹೇಳಲ್ಪಟ್ಟಿವೆ. ಹಾಗೆಯೇ ಅವರು ಮೈಸೂರು ಸಂಸ್ಥಾನದ ನೆರೆ ಪ್ರಾಂತಗಳಾದ ಬಳ್ಳಾರಿ ಅನಂತಪುರ ಮತ್ತು ಮಂಗಳೂರು ಜಿಲ್ಲೆಗಳಲ್ಲಿಯೂ ಸಂಚರಿಸಿದರು. ಮಂಗಳೂರು ಜಿಲ್ಲೆಯಲ್ಲಿ ಗೋಣಿಬೇಡ, ಮಹಾಬಳೇಶ್ವರ, ಕಾರ್ಕಳ ಈ ಗ್ರಾಮಗಳು ಮತ್ತು ಬಳ್ಳಾರಿ ಅನಂತಪುರ ಜಿಲ್ಲೆಗಳಲ್ಲಿ ಉರುವಕೊಂಡ, ಹೊಳಲು, ಹೇಮಗಿರಿ ಇವುಗಳು ಹೇಳಲ್ಪಟ್ಟಿವೆ. ಧಾರವಾಡ ಜಿಲ್ಲೆಯಲ್ಲಿ ವ್ಯಾಸ್ತ್ರಪುರ ಎಂದರೆ ಲಕ್ಷ್ಮೇಶ್ವರ ಮತ್ತು ಕಾರವಾರ ಜಿಲ್ಲೆಯಲ್ಲಿ ಬಳಿವಿ ಇವುಗಳೂ ಹೇಳಲ್ಪಟ್ಟಿವೆ. ಹೀಗೆ ಅವರು ಸಂಚರಿಸುವ ಕಾಲದಲ್ಲಿ ಅವರು ಅನೇಕ ಪವಾಡಗಳನ್ನು ಮಾಡಿದರು ಭಕ್ತರನ್ನು ಉದ್ಧರಿಸಿದರು ಮತ್ತು ವೀರಶೈವ ಮಾರ್ಗವನ್ನು ಬೋಧಿಸಿದರು.

ಆಮೇಲೆ ಅವರು ಉತ್ತರ ಹಿಂದುಸ್ತಾನದಲ್ಲಿ ಕಾಶಿ, ಗಯೆ, ಪ್ರಯಾಗ, ಇವುಗಳನ್ನು ಸಂದರ್ಶಿಸಿ ದಕ್ಷಿಣಕ್ಕೆ ತೆರಳಿ ಕೊಲ್ಲಿಪಾಕಿ, ಶ್ರೀಶೈಲ ಇವುಗಳನ್ನು ನೋಡಿ, ಮುಸಲ್ಮಾನ ರಾಜಸಿದ್ದ ಬೇಡರ ಪಟ್ಟಣವನ್ನೂ ಸಹ ಕಂಡರೆಂದು ಅವರ ಚರಿತ್ರಾತ್ಮಕ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ.

ಪೀಠಾಧಿಕಾರದ ತ್ಯಾಗ.

ಈ ಪ್ರಕಾರ ತೋಂಟದಾರ್ಯರು ಹಿಂದುಸ್ತಾನದಲ್ಲಿಯ ಮಹಾಕ್ಷೇತ್ರಗಳನ್ನು ನೋಡುತ್ತ ತಿರುಗಾಮಲೆಗೆ ದಯಮಾಡಿಸಿದರು.

ಅಲ್ಲಿ ಅವರು ದಾಸೋಹ ಮಾಡುತ್ತಿರಲು ಆ ಕ್ಷೇತ್ರಕ್ಕೆ ಅಧಿಪತಿಯಾದ ದೀಕ್ಷಿತನು ಶ್ರೀ ಸ್ವಾಮಿಗಳಿಗೆ ಒಂದು ನವರತ್ನ ಹಾರವನ್ನು ಅರ್ಪಿಸಲು ಅವರು ಅದನ್ನು ತಮ್ಮೊಳಗಿದ್ದ ಒಬ್ಬ ಶಿಷ್ಯನಿಗೆ ಕೊಟ್ಟುಬಿಟ್ಟರು. ಇದನ್ನು ಉಳಿದವರು ನೋಡಿ ಸಹಿಸದೆ ಸ್ವಾಮಿಗಳು ತನಗೆ ಕೊಡಲಿಲ್ಲ, ನನಗೆ ಕೊಡಲಿಲ್ಲ ಎಂದು ತಮ್ಮ ತಮ್ಮೊಳಗೆ ಕಲಹಮಾಡಿದರಂತೆ. ಆಗ ಸ್ವಾಮಿಗಳು ಈ ಪಟ್ಟವೆಂಬುದು ಲಂಪಟತನವು, ಇದರಿಂದ ತಮಗೆ ೭೨ ಬಿರುದುಗಳು, ಇವಕ್ಕೆ ತಕ್ಕ ಆನೆ, ಕುದುರೆ, ಒಂಟೆ, ಕಾಲಾಳುಗಳು ಮುಂತಾದ ಸಂದಣಿ ಇರಬೇಕಾಯಿತು, ಆದ್ದರಿಂದ ಈ ಪಟ್ಟದಿಂದ ಕಾರಣವಿಲ್ಲವೆಂದು ತಿಳಿದು ತಮ್ಮ ಪಟ್ಟವನ್ನು ಬೋಳ ಬಸವೇಶ್ವರರೆಂಬ ಸ್ವಾಮಿಗಳಿಗೆ ಕೊಟ್ಟುಬಿಟ್ಟು, ಅವರನ್ನು ದೇಶಾಟಣಕ್ಕೆ ಕಳುಹಿಸಿ ಬಿಟ್ಟರು. ಮತ್ತು ತಾವೂ ಕೆಲವು ಗಣವರರನ್ನು ಜತೆಯಲ್ಲಿ ತೆಗೆದುಕೊಂಡು ದೇಶಾಂತರವನ್ನು ಮಾಡಹತ್ತಿದರು. ಈ ಪ್ರಕಾರ ತೋಂಟದಾರ್ಯರು ಆಚರಿಸಿದ್ದು ಅವರ ಉಚ್ಚತರ ವೃತ್ತಿಗೆ ಅನುರೂಪವಾದುದೇ ಇರುತ್ತದೆ.

ಈ ಪ್ರಕಾರ ತೋಂಟದಾರ್ಯರು ದೇಶದಲ್ಲಿ ಭಕ್ತೋದ್ಧಾರ ಕಾರ್ಯಗಳನ್ನು ಮಾಡುತ್ತ ಸಾಗಿದರು. ಹೀಗೆ ಅವರು ಮಾಡುವಲ್ಲಿ ಅವರ ಉದ್ದೇಶವು ಉತ್ಸವಾದಿಗಳನ್ನು ನೆರವೇರಿಸಿಕೊಂಡು ಕಪ್ಪಗಾಣಿಕೆಗಳನ್ನು ಸ್ವೀಕರಿಸುವದರಲಿಲ್ಲ. ಆದರೆ ತಾವು ಕೈಕೊಂಡ ಧರ್ಮೋದ್ಧಾರ ಕಾರ್ಯವು ನೆರವೇರಬೇಕು, ಅದು ದೇಶದಲ್ಲೆಲ್ಲ ಸ್ಥಿರತರವಾಗಿ ನಡೆದುಕೊಂಡು ಹೋಗಬೇಕು ಎಂದು ಮಾತ್ರ ಬಯಸಿದರು. ಇದಕ್ಕೋಸ್ಕರ ಅವರು ಸಮಾಜದಲ್ಲಿ ಹಿಂದೆ ಎಂದಿಗೂ ಇಲ್ಲದ ಒಂದು ಹೊಸದಾದ ಮತ್ತು ಬಲವಾದ ತಳಹದಿಯನ್ನು ಹಾಕಿದರು. ಇದರಿಂದ ಅವರ ಸಂಘಟನಾ ಶಕ್ತಿಯು ಎಷ್ಟು ಮಿಗಿಲಾಗಿದ್ದಿತೆಂಬುದು ವ್ಯಕ್ತವಾಗುತ್ತದೆ. ಈ ಸಂಘಟನೆಯಿಂದ ವೀರಶೈವ ಸಮಾಜದ ಸಾಮರ್ಥ್ಯವು ಆಗಿನ ಅತ್ಯಂತ ದುರ್ಧರ ಪ್ರಸಂಗದಲ್ಲಿ ಉಚ್ಚಳಿಯದೆ ಉಳಿಯಿತು. ಶ್ರೀ ಸ್ವಾಮಿಗಳವರು ಮಾಡಿದ ಈ ಕಾರ್ಯವು ವೀರಶೈವ ಸಮಾಜೇತಿಹಾಸದಲ್ಲಿ ಅಪೂರ್ವವಾಗಿದ್ದಾಗಿದೆ. ಅದನ್ನು ನಾವು ಕೆಳಗೆ ವಿವರಿಸುತ್ತೇವೆ.

ಮಠಗಳ ಹೊಸ ವ್ಯವಸ್ಥೆ.

ತೋಂಟದಾರ್ಯರು ಆಗಿನ ವೀರಶೈವ ಮಠಗಳಲ್ಲಿ ಹೊಸ ವ್ಯವಸ್ಥೆಯನ್ನು ಮಾಡಿದರು. ಇದರಿಂದ ದೇಶದಲ್ಲೆಲ್ಲ ಧರ್ಮಜಾಗ್ರತಿಯ ಕಾರ್ಯಗಳು ನಿರಂತರವಾಗಿ ನಡೆಯಲು ಸಾಧ್ಯವಾಯಿತು. ಅವರು ಎರಡು ಬಗೆಯ ಮಠಗಳನ್ನು ಮಾಡಿದರು. (೧) ಪುರಾಣ ಚರಂತಿಕೆ ಅಥವಾ ಪಳ್ಳೀಚರಂತಿಕೆಯ ಮಠಗಳು (೨) ಮತ್ತು ವಿರಕ್ತಮಠಗಳು ಎಂದು ಇವು ಇರುತ್ತವೆ. ತೋಂಟದಾರ್ಯರೊಡನೆ ಇದ್ದ ೭೦೦ 'ಗಣವರ'ರ ಮೂಲಕವಾಗಿಯೇ ಅವರು ಈ ಬಗೆಯ ವ್ಯವಸ್ಥೆಯನ್ನು ಮಾಡಿದರು. ಈ ೭೦೦ ಗಣಂಗಳು ಸ್ಥಾಪಿಸಿದ ಮಠಗಳು ಒಂದೊಂದು ಬುಡಕಟ್ಟಿನ ಮಠಕ್ಕೆ ಹೊಂದಿದವು ಎಂದು ತಿಳಿಯಲ್ಪಟ್ಟಿವೆ. ಈ ಬುಡಕಟ್ಟಿನ ಹೆಸರುಗಳಲ್ಲಿ ಕೆಲವುಗಳ ಹೆಸರುಗಳು. "ಶಿವಪೂಜಾ ಬುಡಕಟ್ಟು, ಕಂಥೆ ಬುಡಕಟ್ಟು, ಬಿಸಿ ಅಗ್ಗಣಿ ಬುಡಕಟ್ಟು" ಈ ವಿಧವಾಗಿ ಇವೆ. ಆದರೆ ಈ ಬಗೆಯ ವ್ಯವಸ್ಥೆಯು ಈಗಿನ ಕಾಲದಲ್ಲಿ ನಮ್ಮ ಅವಲೋಕನೆಯಲ್ಲಿ ಬಂದಿಲ್ಲ. ಇಲ್ಲವೆ ಅವುಗಳ ಅವಶೇಷಗಳು ಕರ್ನಾಟಕದ ಕೆಲವೊಂದು ಭಾಗದಲ್ಲಿ ಒಂದು ವೇಳೆ ಇದ್ದರೂ ಇರಬಹುದು. ಆದರೆ ಈಗ ಪ್ರಚಾರದಲ್ಲಿ ದೇಶದಲ್ಲೆಲ್ಲ ವಿರಕ್ತಮಠಗಳು ಎಂಬ ಹೆಸರು ಮಾತ್ರ ಉಳಿದಿದೆ. ಮತ್ತು ಅವುಗಳು ಇಂಥಿಂಥ ಸಮಯವವುಗಳೆಂಬುದಾಗಿ ಮಾತ್ರ ಹೇಳಲ್ಪಡುತ್ತವೆ. ಆದರೆ ಈ ಸಮಯಗಳು ಉತ್ಪನ್ನವಾಗುವ ಮೊದಲು "ಬುಡಕಟ್ಟಿನ ಮಠಗಳು" ಎಂಬ ಹೆಸರು ಅಸ್ತಿತ್ವದಲ್ಲಿ ಇದ್ದಿರಬೇಕೆಂದು ನಮಗೆ ತೋರುತ್ತದೆ. ಇಂಥ ಮಠಗಳನ್ನು ಸ್ಥಾಪಿಸಿದ ತೋಂಟದಾರ್ಯರ ಶಿಷ್ಯರಾದ ೭೦೦ ಗಣಗಳು ಪುನಃ ಅನೇಕರನ್ನು ವಿರಕ್ತರನ್ನು ಮಾಡಿದರು. ಇವರೆಲ್ಲರೂ ಕೂಡಿ ೩ ಸಾವಿರ ವಿರಕ್ತರಾದರೆಂದು ನಿರಂಜನವಂಶ ರತ್ನಾಕರದಲ್ಲಿ ಹೇಳಲ್ಪಟ್ಟಿರುತ್ತದೆ. ಈ ವಿರಕ್ತರೆಲ್ಲರೂ ಈ ಕಾಲದಲ್ಲಿ ದೇಶದಲ್ಲೆಲ್ಲ ಒಂದು ಅದ್ಭುತವಾದ ಧರ್ಮಜಾಗ್ರತಿಯ ಕಾರ್ಯಗಳನ್ನು ಕೈಕೊಂಡರು. ಇದರಿಂದ ದೇಶದಲ್ಲಿ ಆಗ ಉಂಟಾಗಿದ್ದ ಅವ್ಯವಸ್ಥೆಗಳು ಹೊರಟುಹೋದವು, ವಾಙ್ಮಯವು ಬೆಳೆಯಿತು, ಮತ್ತು ಸಮಾಜದಲ್ಲಿ ಭದ್ರತೆಯುಂಟಾಯಿತು.

ಪುರಾಣ ಚರಂತಿಕೆಯ ಮಠಗಳು

ಆಗ ನಿರ್ಮಿಸಲ್ಪಟ್ಟ ಮಠಾಧಿಕಾರಿಗಳಲ್ಲಿ ಪುರಾಣ ಚರಂತಿಕೆ ಅಥವಾ ಪಳ್ಳೀ ಚರಂತಿಕೆಯುಳ್ಳವರನ್ನು ನಿರ್ಮಿಸುವ ಕ್ರಮವು ಹೇಗೆಂ

ದರೆ:— "ಬುಡಕಟ್ಟಿನ ಮಠಸ್ಥರಾದ ಆ ಮೂರ್ತಿಗಳಲ್ಲಿ ಸ್ಥಲ ಕೂಡಿ ಶಾಸ್ತ್ರಸಂಪಾದನೆಯಂ ಮಾಡಿಕೊಂಡ ಗಣಪರರು ಈ ಬುಡಕಟ್ಟಿನ ಜಂ ಮೂರ್ತಿಗಳಿಂದ ಚರಂತಿಗೆ ಪುಸ್ತಕವೆಂದರೆ, ಚನ್ನಬಸವ ಪುರಾಣ, ಬಸವ ಪುರಾಣ ಮುಂತಾದ ಶಿವಪುರಾಣಗಳನ್ನು ತಮ್ಮಿಂದ ಷಟ್‌ಸ್ಥಲ ಜ್ಞಾನೋ ಪದೇಶವಂ ಪಡೆದು ಷಟ್‌ಸ್ಥಲಾಶ್ರಮವಂ ಹೊಂದಿದ ತಮ್ಮಯ ಶಿಷ್ಯೋ ತ್ತಮನಿಗೆ ಭಕ್ತಗಣಪರರ ಮಧ್ಯದಿ ಆ ಪುಸ್ತಕಗಳಂ ಕೊಟ್ಟು ತಮ್ಮ ಸ್ವಯಾಸನವಂ ಕೊಟ್ಟರೆ ಪುರಾಣ ಚರಂತಿಕೆ ಎಂತಲೂ ಪಳ್ಳೀಚರಂ ತಿಗೆ ಎಂತಲೂ ಈ ಎರಡು ನಾಮಗಳು ಬರುತ್ತವೆ." ಎಂದು ಹೇ ಳಲ್ಪಟ್ಟಿವೆ. (ನಿರಂಜನವಂಶ ರತ್ನಾಕರ ಪುಟ ೪೧) ಇವರ ಮೇಲಿಂದ ಈ ಪಳ್ಳೀ ಚರಂತಿಕೆಯವರು ಗ್ರಾಮಾಂತರಗಳಲ್ಲಿಯು ಜನರಿಗೆ ಶಿವಶರಣರ ಪುರಾಣಗಳನ್ನು ಹೇಳುತ್ತ ಧರ್ಮ, ನೀತಿಗಳನ್ನು ಬೋಧಿಸುತ್ತ ಧರ್ಮೋ ದ್ಧಾರ ಕಾರ್ಯಗಳನ್ನು ಮಾಡುವದು ಅವರ ಕರ್ತವ್ಯವಾಗಿತ್ತೆಂದು ತೋರುತ್ತವೆ. ಈ ವಿಧವ ಕಾರ್ಯಗಳನ್ನು ಮಾಡುತ್ತಿದ್ದದರಿಂದಲೇ ಈ ಕಾಲದಲ್ಲಿ ಅನೇಕ ಪುರಾಣಗಳು ಹುಟ್ಟಿದವು ಮತ್ತು ವೀರಶೈವ ವಾಙ್ಮಯದಲ್ಲಿ ಈ ಪೌರಾಣಿಕ ವಾಙ್ಮಯವು ಅಸ್ತಿತ್ವದಲ್ಲಿ ಬಂದಿತು.

ಚರಮೂರ್ತಿಗಳ ಮಠಗಳು ಅಥವಾ ವಿರಕ್ತಮಠಗಳು

ಈ ವರ್ಗವಲ್ಲದೆ ಚರಮೂರ್ತಿಗಳ ವರ್ಗವೆಂದು ಇನ್ನೊಂದು ಮಹತ್ವದ ವರ್ಗವು ಈ ಕಾಲದಲ್ಲಿ ಕಲ್ಪಿಸಲ್ಪಟ್ಟಿತು. ಇವರ ಬಗ್ಗೆ ಇದ್ದ ನಿಯಮಗಳು ಮೇಲ್ಕಂಡ ಗ್ರಂಥದಲ್ಲಿ ಹೇಳಿದ್ದು ಏನೆಂದರೆ:— "ಪ್ರಭು ಚನ್ನಬಸವರಾಜೇಂದ್ರರು . . . . ಸಿದ್ಧರಾಮೇಶಂಗೆ ನಿರೂಪಿಸಿದ ಗುರೇ ಶ್ವರ ವಚನ, ಕರಣಹಸಿಗೆ, ವಿಶ್ರಾರ್ಪಣ, ಸಿದ್ಧರಾಮೇಶ್ವರರ ಮಂತ್ರ ಗೋಪ್ಯ, ಅಕ್ಕಗಳ ಸೃಷ್ಟಿಯ ವಚನ, ಪ್ರಭುದೇವರ ಸೃಷ್ಟಿಯ ವಚನ, ಸಿದ್ಧೇಶ್ವರ ವಚನ, ಹಿರಿಯ ಮಂತ್ರ ಗೋಪ್ಯ, ಶೂನ್ಯಸಂಪಾದನೆಗಳನ್ನು ಸಂಗ್ರಹಿಸಿ . . . . ಶಿವಮಂತ್ರಗುರುಪ್ರಸಾದ ಅಂಗಲಿಂಗ ಸಾಮರಸ್ಯ ಮುಂತಾಗಿ ಅಂಗ ತತ್ವ ೭೫, ಲಿಂಗ ತತ್ವ ೧೧ ಕೂಡಿ ೩೬ ತತ್ವಂಗಳಂ ತಿಳಿದಾತನು . . . . ಆಶಿಷ್ಯೋತ್ತಮನಿಗೆ ಶಿವಾನುಭವ ಶಾಸ್ತ್ರವಂ ಶ್ರವಣ ಗೊಳಿಸಬೇಕು. ಆವೇಳೆಯಲಿ . . . . ಎರಡನೆಯವರು ಅಲ್ಲಿ ಇರಕೂ ಡದು. ಆಮೇಲೆ . . . . ಸಕಲಭಕ್ತಗಣದ ಸಾಕ್ಷಿಯಾಗಿ ಗೋತ್ರವಂ ಕೂಡಿಸಿಕೊಂಡು ಆ ಬಳಿಕ ಆ ಶಿಷ್ಯೋತ್ತಮನಲ್ಲಿ ಸಾಮರಸ್ಯವಂ ಮಾಡು

ವುದು ಈ ಪ್ರಕಾರ ಪಡೆದಾತನು ವಿರಕ್ತನಹನು" ಈ ಪ್ರಕಾರ ಹೇಳಿ ಮುಂದೆ ಇನ್ನರಲ್ಲಿ ಬರೆದುದು ಏನಂದರೆ:— "ಈ ಶಿವಾನುಭವ ಚರ ಮೂರ್ತಿಯು ತಮ್ಮ ಶಿಷ್ಯರಾದ ಬ್ರಹ್ಮಚಾರಿಗಳಾದ ಮರಿಗಳು ಗುರು ಉಪದೇಶವಂ ಪಡೆದರೂ ಆ ಮರಿಗಳು ಕರಣಹಸಿಗೆ ಮುಂತಾದ ಶಿವಾನು ಭವ ಶಾಸ್ತ್ರದ ನುಡಿಕಟ್ಟುಗಳು ನೂರೊಂದು ಸ್ಥಲವ ವಿಚಾರಗಳು ಗುರುಗಳಿಂದ ಆ ಶಾಸ್ತ್ರವಂ ಸಂಪಾದನವ ಮಾಡಿಕೊಳ್ಳದವರಿಗೆ ಆ ಶಾಸ್ತ್ರದ ನುಡಿಗಳಂ ಹೇಳಕೂಡದು. ಈ ಐದು ಶಾಸ್ತ್ರ ಬಾರದೆ ನಿರ ಕ್ಷರಿಗಳಿಗೆ **ಶಿವಾನುಭವ ಚರಂತಿಗೆ** ಯುಂ ಕೊಡಕೂಡದು. ಅಥವಾ ಅವರಿಗೆ ಕೊಡಬೇಕಾದರೆ ಪುರಾಣ ಚರಂತಿಗೆ ಪೂಜ್ಯದ ಪೂರ್ತಿಕೊಡು ವುದು" ಈ ಪ್ರಕಾರ ಇಲ್ಲಿ ವಿರಕ್ತಾಶ್ರಮಿಗಳ ಕಟ್ಟುಗಳು ಹೇಳಲ್ಪಟ್ಟಿವೆ. ಇವುಗಳ ಪ್ರಕಾರ ವಿರಕ್ತರು ಷಟ್‌ಸ್ಥಲ ಶಾಸ್ತ್ರದ ಮರ್ಮವನ್ನು ಗುರು ಗಳಿಂದ ತಿಳಿದುಕೊಳ್ಳಬೇಕು ಅವುಗಳಂತೆ ಆಚರಿಸಬೇಕು. ಮತ್ತು ಹೀಗೆ ಕ್ರೇಷ್ಮವಾದ ನಡೆಯುಳ್ಳವರಾಗಿ ಗ್ರಾಮಾಂತರಗಳಲ್ಲಿ ವಾಸಿಸುವ ಜನರಲ್ಲಿ ಉಚ್ಚತರದ ಧಾರ್ಮಿಕ ಭಾವನೆಯನ್ನು ಬೀರುತ್ತ ಇರಬೇಕು. ಇದೇ ಇವರ ಮುಖ್ಯ ಕರ್ತವ್ಯವಾಗಿದೆ.

ಧರ್ಮಜಾಗ್ರತಿಯ ಕಾರ್ಯಗಳು.

ತೋಂಟದಾರ್ಯರು ಈ ಎರಡು ವರ್ಗಗಳನ್ನು ಕಲ್ಪಿಸಿ ಅವರು ದೇಶದಲ್ಲಿ ಧರ್ಮಜಾಗ್ರತಿಯನ್ನು ಮಾಡಿದರು. ಈ ಕಾರ್ಯಗಳು ಬಹು ಮಹತ್ವದವಾಗಿವೆ. ಇವುಗಳು ನಿರೂಪಿಸಲ್ಪಟ್ಟಿದ್ದು ಏನಂದರೆ:— "ಆ ಗಣವರರಿಂಗೆ ನಿರೂಪಿಸಿ ಆಶೀರ್ವಾದವಂ ಮಾಡಿ ಅಪ್ಪಣೆಯಂ ಕೊಟ್ಟು ದೇಶಾಟಣಕ್ಕೆ ಕಳುಹಿದರು. ಅನಂತರ ಆ ಚರದವರು ದೇಶಾಂತರವಂ ಮಾಡುತ್ತ ಗ್ರಾಮ, ಪೇಟೆ ನುನೆಗೆ ದಯಮಾಡಿಸಿ ಅಲ್ಲಿಯ ಭಕ್ತ ಗಣಂಗಳಿಗೆ ಷಟ್‌ಸ್ಥಲಜ್ಞಾನೋಪದೇಶವಂ ಮಾಡುತ್ತ ಅನ್ಯ ಮತಸ್ಥ ರಾದ ಪರಮಾದಿಗಳಂ ಮಹತ್ವದಿಂ ಶಾಸ್ತ್ರ ಮುಖದಿಂ ಗೆಲಿವುತ್ತ ಶಿವ ಭಕ್ತಿಯನುಂಟುಮಾಡುತ್ತ ಆ ಭಕ್ತರ ಭಕ್ತಿಯಿಂ ದೇಶಮಧ್ಯದಿ ತಮ್ಮ ಮಾಹ ಮಾನ್ಯ ಕಾಣಿಕೆ ವಸ್ತ್ರಾಶನಗಳಂ ಪಡೆದು ಆ ಮಠಗಳಲ್ಲಿ ತಮ್ಮ ಸೂತ್ರಿಕರಾದ ಮರಿಗಳಂ ಇಡುತ್ತ ದೇಶಂಗಳಲ್ಲಿ ಭಕ್ತರಿಂ ಕಾಣಿಕೆಯುಂ ಎತ್ತಿ ತಮ್ಮಯ ಗುರುಸನ್ನಿಧಿಗೆ ವಾಣಿಜ್ಯಪುರದ ಶೂನ್ಯಸಿಂಹಾಸನಕ್ಕೆ ಕಾರಣಕರ್ತರಾದ ತೋಂಟದಾರ್ಯ ನಾಮಿಗಳವರ ದಾಸೋಹಕ್ಕೆ

ಕಳುಹಿಸುತ್ತಲಿದ್ದರು" ಎಂದು ಹೇಳಲ್ಪಟ್ಟಿದೆ. ಇದರಲ್ಲಿ ನಿಜ ಂಕವಿರುತ್ತದೆಂದು ನನಗೆ ತೋರುತ್ತದೆ.

ಇದರಿಂದ ತೋಂಟದಾರ್ಯರು ವೀರಶೈವ ಸಮಾಜದಲ್ಲಿ ಹೇಗೆ ಒಂದು ಮಹತ್ತರವಾದ ಕ್ರಾಂತಿಯನ್ನುಂಟು ಮಾಡಿದರೆಂಬುದು ಸ್ಪಷ್ಟವಾಗುತ್ತದೆ. ಇವರ ಪ್ರಯತ್ನಗಳ ಮೂಲಕ ಆಗ ಗ್ರಾಮ, ಪಟ್ಟಣ, ಪ್ರಾಂತಗಳಲ್ಲೆಲ್ಲ ವೀರಶೈವ ಧರ್ಮವು ಬಲಪಟ್ಟಿತು. ತೋಂಟದಾರ್ಯರು ಮೊದಲು ವಚನಗ್ರಂಥಗಳನ್ನು ಸರಿಪಡಿಸಿದರು. ಸ್ವತಃ ವಚನಕಾರರಾದರು. ವಿದ್ವಾಂಸರನ್ನು ತಮ್ಮಲ್ಲಿ ಬರಮಾಡಿಕೊಂಡರು. ದೇಶಪರ್ಯಟಣ ಮಾಡಿದರು. ಜನಾಂಗದ ಸ್ಥಿತಿಯನ್ನು ಚನ್ನಾಗಿ ತಿಳಿದರು. ಸಮಾಜಕ್ಕೋಸ್ಕರ ಒಂದು ಕಟ್ಟನ್ನು ಮಾಡಿದರು. ಇದರ ಮೂಲಕ ಸಮಾಜದ ಶಿಥಿಲತೆಯನ್ನು ದೂರ ಮಾಡಿದರು. ಇದಕ್ಕೋಸ್ಕರ ಹೊಸ ಬಗೆಯ ಮಠಗಳನ್ನು ಸ್ಥಾಪಿಸಿದರು. ಈ ವ್ಯವಸ್ಥೆಯನ್ನು ಬರೀ ವಿಜಯನಗರದ ರಾಜ್ಯದಲ್ಲಷ್ಟೇ ಅಲ್ಲ, ಮುಸಲ್ಮಾನರ ಆಳಿಕೆಗೆ ಒಳಪಟ್ಟ ಉತ್ತರ ದೇಶದಲ್ಲಿಯೂ ಕೂಡ ಮಾಡಿದರು. ಆದುದರಿಂದಲೇ ಪರಧರ್ಮೀಯರ ಧಾರ್ಮಿಕ ಉಪಟಳಗಳು ದೇಶದಲ್ಲಿ ಏನೂ ನಡೆಯದೆ ಹಿಂದೂ ಧರ್ಮವು ಇಲ್ಲಿ ಸ್ಥಿರತರವಾಗಿ ಉಳಿಯಲು ಕಾರಣವಾಯಿತು.

ವಚನಶಾಸ್ತ್ರವನ್ನು ಗುಪ್ತವಾಗಿಟ್ಟಿದುದು.

ತೋಂಟದಾರ್ಯರು ಮಾಡಿದ ಅನೇಕ ಕಟ್ಟುಗಳಲ್ಲಿ ವಚನ ಶಾಸ್ತ್ರದ ಮರ್ಮಗಳನ್ನು ಗುಪ್ತವಾಗಿ ಇಡಬೇಕೆಂದು ಅವರು ಮಾಡಿದ ನಿರ್ಬಂಧವು ಮಾತ್ರ ಯೋಗ್ಯವಾಯಿತೆಂದು ನಾವು ಅನ್ನಲಾರೆವು. ಅವರು ಕರಣಹಸಿಗೆ, ೩೬ ತತ್ವಗಳು, ಆಯಾ ಸ್ಥಲಗಳ ಪರಸ್ಪರ ಸಂಬಂಧ ನೂರೊಂದು ಸ್ಥಲಗಳ ಜ್ಞಾನ ಇವುಗಳ ನುಡಿಕಟ್ಟುಗಳನ್ನು ಬಹಿರಂಗಗೊಳಿಸಬಾರದೆಂದು ಅವರು ಗೊತ್ತುಪಡಿಸಿದರು. ಈ ವೃತ್ತಿಯು ಮಠಾಧಿಕಾರಿಗಳಲ್ಲಿ ಈಗಲೂ ನಡೆಯುತ್ತ ಬಂದಿದೆ. ನಾವು ವಚನ ಗ್ರಂಥಗಳನ್ನು ಸಂಶೋಧಿಸುವ ಕಾರ್ಯದಲ್ಲಿ ಮತ್ತು ಅವುಗಳ ಸಂಬಂಧವಾಗಿ ನಾವು ಕೇಳಿದ ಶಂಕೆಗಳಿಗೆ ಉತ್ತರ ಕೊಡುವಲ್ಲಿ ಉಪದೇಶಹೊಂದಿದ ಮಠಾಧಿಕಾರಿಗಳಿಂದ ಆವ ವಿವರಣೆಗಳೂ ನಮಗೆ ದೊರೆತಿಲ್ಲ, ಈಗಲೂ ದೊರೆಯುವದಿಲ್ಲ. ಆದರೆ ಈಚೆಗೆ ವಚನ ಶಾಸ್ತ್ರದ ಅರಿವು ಜನರಲ್ಲಿ

ಹೆಚ್ಚಿದ ಹಾಗೆ ಮತ್ತು ಅವುಗಳ ಪ್ರಶಂಸೆಯು ದೇಶದಲ್ಲಿ ನಡೆದ ಹಾಗೆ ಈ ಬಗೆಯಾಗಿ ಮುಚ್ಚುಮರೆ ಮಾಡುವ ವೃತ್ತಿಯು ಈಗ ಕ್ರಮೇಣ ಕಡಿಮೆಯಾಗಹತ್ತಿದೆ. ಆದರೆ ಬಸವೇಶ್ವರನ ಕಾಲದಲ್ಲಿ ಷಟ್‌ಸ್ಥಲ ಜ್ಞಾನವನ್ನು ಗುಪ್ತವಾಗಿ ಇಡುವ ಪದ್ಧತಿಯು ಇದ್ದಿಲ್ಲವೆಂದು ನಮಗೆ ತೋರುತ್ತದೆ.

ಕಗ್ಗೆರೆಯಲ್ಲಿ ವಾಸ.

ತೋಂಟದಾರ್ಯರು ಬಹುಕಾಲ ಕಗ್ಗೆರೆ ಎಂಬ ಗ್ರಾಮದಲ್ಲಿದ್ದುಕೊಂಡು ಅಲ್ಲಿಯ ನಿಂಬಿಣ್ಣಶೆಟ್ಟಿಯ ಆದರಾತಿಥ್ಯವಲ್ಲಿ ಕಾಲಕಳೆದರೆಂದು ತಿಳಿಯುತ್ತದೆ. ಅಲ್ಲಿ ಅವರು ಒಂದು ತೋಟದಲ್ಲಿಯೇ ತಮ್ಮ ವಾಸವನ್ನು ಕಲ್ಪಿಸಿಕೊಂಡರು. ಅವರು ಅಲ್ಲಿ ಇರುವ ಕಾಲಕ್ಕೆ ರತ್ನಗಿರಿಯ ಬೇಡರರಸು ಗ್ರಾಮದಲ್ಲಿ ಸುಲಿಗೆಯನ್ನು ಮಾಡಲು ಭಯದಿಂದ ಜನರು ಊರಬಿಟ್ಟು ಓಡಿಹೋದರು. ಆದರೆ ತೋಂಟದಾರ್ಯರು ಆ ಸ್ಥಾನವನ್ನು ಬಿಟ್ಟು ತೆರಳದೆ ತೋಟದಲ್ಲಿಯೇ ತಮ್ಮ ಶಿವಯೋಗ ಸಮಾಧಿಯಲ್ಲಿ ಉಳಿದರು. ಅವರು ಹೀಗೆ ತೋಟದಲ್ಲಿ ಬಹುದಿವಸ ಉಳಿದ್ದರಿಂದ ಅವರಿಗೆ ತೋಂಟದಾರ್ಯರೆಂಬ ಹೆಸರು ಬಿದ್ದಿರಬಹುದು. ಮುಂದೆ ದಂಡಿನ ಹಾವಳಿಯ ಭೀತಿಯು ತಗ್ಗಿದ್ದರಿಂದ ಜನರು ತಮ್ಮ ಗೃಹಗಳಿಗೆ ಬಂದು ಇರಹತ್ತಿದರು. ಆದರೆ ಸ್ವಾಮಿಗಳು ಬಹುದಿನ ಸಮಾಧಿಸ್ಥರಾದ್ದರಿಂದ ಅವರ ಮೇಲೆ ಹುತ್ತ ಬೆಳೆದು ಜನರಿಗೆ ಕಾಣದಂತಾಗಿದ್ದರು. ಮುಂದೆ ಆ ಸ್ಥಳದಲ್ಲಿ ಒಂದು ಗೋವು ದಿನಾಲು ಹಾಲು ಕರೆಯುತ್ತಿರುವದನ್ನು ಜನರು ನೋಡಿ, ಅದೊಂದು ಮಹತ್ವದ ಸ್ಥಳವಿರಬಹುದೆಂದು ಎಣಿಸಿ ಆ ಹುತ್ತನ್ನು ಅಗಿದು ನೋಡಲಾಗಿ ಒಳಗೆ ತೋಂಟದಾರ್ಯರು ಸಮಾಧಿಯಲ್ಲಿರುವದನ್ನು ಕಂಡು ವಿಸ್ಮಯಬಟ್ಟು ಅವರನ್ನು ಅತ್ಯಂತವಾಗಿ ಮನ್ನಿಸಿ ಸತ್ಕರಿಸಿದರು. ಹೀಗೆ ತೋಂಟದಾರ್ಯರ ವಿಷಯದಲ್ಲಿ ಬಹು ಪ್ರಚುರವಾದ ಆಖ್ಯಾಯಿಕೆಯು ಇದೆ.

ಐಕ್ಯ.

ಮುಂದೆ ಸ್ವಾಮಿಗಳು ಆ ಸ್ಥಳದಿಂದ ತೆರಳಿ ದೇಶಾಟಣ ಮಾಡುತ್ತ ಏಣೆಯೂರು ಎಂಬ ಗ್ರಾಮಕ್ಕೆ ಬಂದರು. ಅಲ್ಲಿ ಅವರು ಒಂದು ಮಠ

ವನ್ನು ಕಟ್ಟಿಸಿ ಒಂದು ಯೋಗಸಮಾಧಿಯನ್ನು ರಚಿಸಿ ಅಲ್ಲಿಯೇ ಬಯ
ಲಾದರು. ಅವರು ಹೀಗೆ ಬಯಲಾದ ಸ್ಥಳವು ಈಗ್ಗೆಯೂ ಆ ಊರ
ಲ್ಲಿದೆ. ಅಲ್ಲಿ ಈಗಲೂ ಪೂಜಾರಥೋತ್ಸವಗಳು ಪ್ರತಿವರುಷ ನಡೆಯು
ತ್ತಲಿವೆ.

ಹೀಗೆ ತೋಂಟದಾರ್ಯರ ಉಜ್ವಲ ಚರಿತ್ರೆಯು ಇವೆ. ಇದರಿಂದ
ಅವರು ವೀರಶೈವ ಸಮಾಜಕ್ಕೆ ಎಂಥ ಮಹೋಪಕಾರ ಮಾಡಿರುವ
ರೆಂಬದು ವಾಚಕರಿಗೆ ತಿಳಿಯದೆ ಇರಲಾರದು. ಅವರನ್ನು ಮಹಾ
ಧಾರ್ಮಿಕ ಪುರುಷರಾದ ದಾಸಿಮಾರ್ಯ, ಬಸವೇಶ್ವರ, ರೇವಣಸಿದ್ಧ
ಪ್ರಭುದೇವ ಈ ಮಹಾನುಭಿಮರ ಮಾಲಿಕೆಯಲ್ಲಿ ನಾವು ನಿಶ್ಚಯ
ವಾಗಿ ಸೇರಿಸಬಹುದು.

ಶ್ರೀ ನಿಡುಮಾವಿಡಿ ಮಠದ ಇತಿಹಾಸ.

ಲೇಖಾಂಕ ೫.

(ಲೇಖಕರು. ಎಂ. ಜಿ ನಂಜುಂಡಾರಾಧ್ಯ 'ವಿಶಾರದ' ಸಿದ್ಧಗಂಗಾ ಗುರುಕುಲಾಶ್ರಮ.)

ನಮ್ಮ ಹಿಂದಿನ ವಿವೇಚನೆಯಿಂದ ಶ್ರೀ ನಿಡುಮಾವಿಡಿ ಮಠದ ಕೆಲವು ವಿಚಾರಗಳು ವಾಚಕರಿಗೆ ಅರಿಕೆಯಾಗಿರಬಹುದು. ಅದರಲ್ಲಿ ಅದಷ್ಟೂ ಚಾರಿತ್ರಕ ದೃಷ್ಟಿಯಿಂದ ವಿವೇಚಿಸಿದ ಶೋಧನಾತ್ಮಕ ವಿಚಾರಗಳು ಪ್ರಕಟವಾಗಿವೆ. ಈ ಮಠದ ಚರಿತ್ರೆಯನ್ನು ಪುಲ್ಲ ಕವಿಯ 'ಪಂಡಿತಾರಾಧ್ಯಚರಿತ್ರೆ' ಯಿಂದ ಮಾತ್ರವೇ ನಿರ್ಣಯಿಸಲು ಸಾಧ್ಯ ವಿಲ್ಲವೆಂತಲೂ, ಈ ಮಠದ ಚರಿತ್ರೆಯನ್ನು ಬರೆದವರಲ್ಲಿ ಆತನೇ ಮೊದ ಲಿಗನೆಂದೂ, ಆತನ ಅನುಕರಣವನ್ನೇ 'ಇಡಗೂರು ರುದ್ರಕವಿ' ಮತ್ತು 'ಅಪ್ಪಪ್ಪ' ಇವರು ಅನುಸರಿಸಿರುವರೆಂದೂ ಮತ್ತು ಪುಲ್ಲ ಕವಿಯು ಈ ಚರಿತ್ರೆಯ ಪ್ರಾರಂಭದಲ್ಲಿ ಕೊಟ್ಟಿರುವ ಪೀಠಿಕಾ ಪ್ರಕರಣವು ಕೇವಲ ಇತರ ಪುರಾಣಗಳಂತೆ ಪೌರಾಣಿಕವಲ್ಲದೆ ಅದರಲ್ಲಿ ಚಾರಿತ್ರಕ ದೃಷ್ಟಿಯು ಕಾಣುಪದಿಲ್ಲವೆಂದೂ ಹೇಳಲಾಗಿದೆ. ಶ್ರೀ ವಿರೂಪಾಕ್ಷ ದೇಶಿಕರಿಂದ ಈ ಪೀಠದಲ್ಲಿ ಮಂಡಿಸಿದ ಮೂರ್ತಿಗಳ ಕಾಲದಲ್ಲಿ ನಡೆಯಿಸಿದ ಮಹತ್ಕಾ ರ್ಯಗಳು ಬಹಳವಾಗಿ ಚಾರಿತ್ರಕನೇ ಆಗಿದ್ದರೂ ಅದರಲ್ಲೂ ಅನೇಕ ಮೂರ್ತಿಗಳ ಚರಿತ್ರೆಗಳು ಬಿಟ್ಟು ಹೋಗಿವೆಯೆಂಬುದನ್ನೂ ಹೇಳಲಾ ಗಿದೆ. ಈತನು ಬ್ರಾಹ್ಮಣ ಕವಿ. ಆದರೂ ಈ ಚರಿತ್ರೆಯ ಸಂಗ್ರಹದ ಬಗ್ಗೆ ಮಾಡಿರುವ ಸಾಹಸ ಪ್ರಯತ್ನಗಳು ಸ್ತುತ್ಯವಾದುವಾಗಿವೆ. ಮತ್ತು ಈ ಚರಿತ್ರೆಯು ಹಿಂದೆ ಗದ್ಯರೂಪವಾಗಿದ್ದು ಅದನ್ನು ತಾನು ಪದ್ಯ ಕಾವ್ಯವಾಗಿ ಬರೆದಂತೆಯೂ ಕವಿಯು ಹೇಳುತ್ತಾನೆ.

ನಮ್ಮ ಹಿಂದಿನ ವಿವೇಚನೆಯಲ್ಲಿ ತಾಮ್ರಶಾಸನ, ಶ್ರೀಶೈಲಕ್ಷೇತ್ರದ ಇತಿಹಾಸ, ಶಿವಶರಣವಿಲಾಸ ಇತ್ಯಾದಿಗಳಿಂದ ಈ ಪೀಠವು 'ಫೇನು ಕರ್ಣ ಅಥವಾ ಗೋಕರ್ಣ ಇಲ್ಲವೆ ಪಂಡಿತಾರಾಧ್ಯ' ಇವರಿಂದ ಸ್ಥಾಪಿತ ವಾಗಿರಬೇಕು. ಅನಂತರ ವಿರೂಪಾಕ್ಷದೇಶಿಕ, ಚಂದ್ರಗುಂಡದೇಶಿಕ ಹೀಗೆ ನಡೆದಿರಬೇಕೆಂದು ಊಹಿಸಲಾಗಿದೆ. ಇದಕ್ಕೆ ಸರಿಯಾಗಿ ಶಿವ

ಶರಣವಿಲಾಸದಲ್ಲಿನ ಅವತರಣವು ಸರಿಯಾದ ಪ್ರಮಾಣವಾಗಿದೆಯೆನ್ನ ಬಹುದು. ಅದರಲ್ಲಿ ಕ್ರಮವಾಗಿ:—

"ಪಂಡಿತಾರಾಧ್ಯರೆನುತಿರ್ಪರ[೧]
ಕಂಡು ತದ್ವೀಕ್ಷೋಪದೇಶವ
ಗೊಂಡು . . . . . ತಪ್ಪರು
ಕರಪಯೋರುಹ ಸಂಭವ ವಿರೂಪಾಕ್ಷದೇಶಿಕನ॥
ಪರಮಶಿಷ್ಯಾಗ್ರಣಿಯೆನ್ನಿಸಿ
ಮೆರೆಯುತಿಹ ಶಶಿಗುಂಡದೇಶಿಕ"

ಅವರ ಶಿಷ್ಯನೇ ದೇವರದಾಸಿಮಾಯ್ಯನು ಎಂದು ಸ್ಪಷ್ಟವಾದ ಉಲ್ಲೇಖವಿದೆ. ಆದರೆ ಪುಲ್ಲಕವಿಯು ವಿರೂಪಾಕ್ಷದೇಶಿಕರೇ ಶ್ರೀ ಪಂಡಿತಾರಾಧ್ಯ ಸೂರ್ಯಸಿಂಹಾಸನವನ್ನು ಸ್ಥಾಪಿಸಿದರೆಂದು ಅಭಿಪ್ರಾಯ ಪಡುತ್ತಾನೆ. ವಿರೂಪಾಕ್ಷದೇಶಿಕರೂ ಗೋಕರ್ಣ ಶಿವಾಚಾರ್ಯರೂ ಒಬ್ಬರೇ ಇರಬಹುದೇ (?)

ಪುಲ್ಲಕವಿಯು, ತನ್ನ ಗ್ರಂಥಾದಿಯಲ್ಲಿ 'ವೀರಭದ್ರ, ಭದ್ರಕಾಳಿ, ಶಿವ, ವಿಷ್ಣು, ಲಕ್ಷ್ಮಿ, ವಾಣೀ, ಸುಬ್ರಹ್ಮಣ್ಯ. ಗಣಪತಿ ಮುಂತಾದವರನ್ನು ಸ್ತುತಿಸಿ ಅನಂತರ ತನ್ನ ವಂಶಾನುಕ್ರಮವನ್ನು ಈ ರೀತಿ ಕೊಟ್ಟಿರುತ್ತಾನೆ.

ಸೀ॥ ಅವನಿಯೂರ್ವೀಲಾನ್ವಯಂಬು ಭಾರದ್ವಾಜಗೋತ್ರ ಮಾಪ
ಸ್ತಂಭ ಸೂತ್ರಫನುಡು। ಸೂರನಾಮಾತ್ಯನಿ ಸೂನುಂಡು
ಪುಲ್ಲಯ ಗ್ರಂಥ ಸಂಪೂರ್ತಿಗಾವಿಂಚುಟಕುನು। ಕೃತಿವೀರ
ಭದ್ರುನಕತಿವೋದವೊಪ್ಪಗಾನರ್ಪಣಂಬೊನರಿಂಚ ಸುಂಚು
ವಲಚಿ। ಆಂಧ್ರ ಸಂಸ್ಕೃತ ಭಾಷಲಿತುಲಿತಂಬುಗಜೇರ್ಚಿ
ಕಬ್ಬಂಬು ಜೆಪ್ಪೆದ ಕವುಲು ಮೆಚ್ಚ।

ಗೀ॥ ನವರಸಂಬುಲ ಸುಧಾಲೊಲ್ಕಿ ನವ್ಯ ವೈನ
ಶಬ್ದಮುಲ ಜೇತನಾನಂದ ಸರಣಿಗಾಗ
ದಿವ್ಯ ಲಕ್ಷಣ ಲಕ್ಷ್ಯ ಮುತ್ಕೇಟ ಪಡಗ
ಪ್ರಾಕಟಂಬುಗ ಪದ್ಯ ಮುಲ್ಪ್ರಚುರ ಪರಕು॥

೧ ಕಳೆದ ಸಂಚಿಕೆಯಲ್ಲಿ ಈ ಪಜ್ಜೆಯು ಬಿಟ್ಟುಹೋಗಿದೆ.

ಭಾರದ್ವಾಜಗೋತ್ರ, ಆಪಸ್ತಂಭಸೂತ್ರಕ್ಕೆ ಸೇರಿದ ಸೂರ ನಾಮಾತ್ಯನ ಸುತನಾದ ಪುಲ್ಲಯ್ಯನು ಗ್ರಂಥಪರಿಸಮಾಪ್ತಿಯಾಗಿ ವೀರಭದ್ರನಿಗೆ ತನ್ನ ಕೃತಿಯನ್ನರ್ಪಿಸಲೆಳಸಿ ಆಂಧ್ರ ಸಂಸ್ಕೃತ ವಿಮಿಶ್ರಿತವೂ ನವರಸಭರಿತವೂ ಆದ ತನ್ನ ಪ್ರಬಂಧವನ್ನು ಕವಿಗಳು ಮೆಚ್ಚುವ ರೀತಿಯಲ್ಲಿ ಬರೆಯುವುದಾಗಿ ಪ್ರತಿಜ್ಞೆಮಾಡುತ್ತಾನೆ.

ಈತನು ತನ್ನ ಕೃತಿಗೆ ಕಾರಣವನ್ನೂ ಈ ರೀತಿ ಹೇಳುತ್ತಾನೆ.

"ಪ॥ ಈ ವಿಧಂಬುನನಭೀಷ್ಟ ದೇವತಾಸ್ತುತಿ ಪ್ರಾರಂಭಂಬುನು ಸನಸವಿದ್ಯಾ ವಿಜೃಂಭಮಾಣ ಗಂಭೀರ ಕವೀಂದ್ರ ವೃಂದಂಬುನಕು ವಂದನಂಬುನುಗಾವಿಂಚಿಯೇನೊಕ್ಕ ಕೃತಿಶೇಯನುದ್ಯೋಗಿಂಚಿನವಾಡನೈ।

ಗೀ॥ ಯುನ್ನಸಮಯಂಬುನಂದೊಕ ರಾತ್ರಿಯಂದು
ಸ್ವಪ್ನ ಮುನವೀರಭದ್ರುಂಡು ಚಕ್ಕನಿಲಚಿ।
ಪಂಡಿತಾರಾಧ್ಯಚರಿತಂಬು ಪ್ರಥಿತಮುಗನು
ಪದ್ಯಕಾವ್ಯಾಂಬು ಕೃತಿಶೇಯು ಪಾಪರಹಿತ॥

ವ॥ ಅನಿಜೆಪ್ಪಿಯಮ್ಮಹಾದೇವುಂಡು ತಿರೋಹಿ ಕುಂಡಯ್ಯ ತದನಂತರಂಬುನಾ॥"

ಅಂದರೆ, ಕವಿಯು ಇಷ್ಟದೇವತಾಸ್ತುತಿಕವಿಸ್ತುತಿಯನ್ನು ಮಾಡಿ ಯಾವುದಾದರೊಂದು ಕೃತಿಯನ್ನು ಮಾಡಲೆಳಸಿರಲು ಆರಾತ್ರಿ ಸ್ವಪ್ನದಲ್ಲಿ ಶ್ರೀ ವೀರಭದ್ರನು ಪ್ರತ್ಯಕ್ಷವಾಗಿ 'ಪಂಡಿತಾರಾಧ್ಯ ಚರಿತ್ರೆ' ಯನ್ನೂ ಪದ್ಯ ಕಾವ್ಯದಲ್ಲಿ ರಚಿಸೆಂದು ಹೇಳಿ ತಿರೋಹಿತನಾದನು.

ಕವಿಸ್ತುತಿಯಲ್ಲಿ,

ವ॥ ಘನವಾಲ್ಮೀಕಿನಿಗೊಲ್ಚಿ ವ್ಯಾಸುಲಿಕುವೇಟ್ಕುನ್ಮೊಕ್ಕಿ ಶ್ರೀ ಕಾಳಿದಾ। ಸುನಿ ದಂಡಿನ್ಭವಭೂತಿನೆಂಚಿ ಜಗತ್ಕೀ ಶೋಭಿಲ್ಲಗಾ ಭಾರತಂ। ಬುನುತೆನ್ನಿಂಚಿನ ಸತ್ಕವಿತ್ರಯಮುಭೂರಿ ಪ್ರೌಢಿ ಕೀರ್ತಿಂಚಿಯಾ। ಧುನಿಕ ಪ್ರಾಜ್ಞಿಕವೀಂದ್ರುಲ್ಗದಲತು ಮುದ್ಬುದ್ಧಿನ್ವಚಸ್ಸಿದ್ಧಿಕೈ॥

ಎಂದು ವಾಲ್ಮೀಕಿ, ವ್ಯಾಸ, ಕಾಳಿದಾಸ, ದಂಡಿ, ಭವಭೂತಿ ಭಾರತವನ್ನು ಆಂಧ್ರೀಕರಿಸಿದ ಅನ್ನಮಾಮಾತ್ಯನೇ ಮೊದಲಾದ ಕವಿತ್ರಯ ಅಲ್ಲದೆ ನೂತನ ಪ್ರಾಜ್ಞಕವಿಗಳನ್ನೂ ಸ್ತುತಿಸಿದ್ದಾನೆ.

ಇಡಗೂರು 'ರುದ್ರಕವಿ' ಯು ತನ್ನ 'ವಿರೂಪಾಕ್ಷವಾಹತ್ಮ್ಯ'[೧] ಆದಿಯಲ್ಲಿ

ಸೀ॥ ರಮಣೀಯ ವೃಷಭ ಪುರಾಣಂಬು ಜೆಪ್ಪಿನ ಸೋಮನಾರಾಧ್ಯ ಸ್ತುತಿವೊಸಪ್ಪ। ಲಲಗಿರಿಜಾ ವಿವಾಹಂಬು ನಿರ್ಮಿಂಚಿನ ಹರಿಹರ ದೇವುನಿಯಭಿನುತಿಂಚಿ। ಕರಮರ್ಥಿ ರಾಜಶೇಖರಮುರಚಿಂಚಿನ ಸರಸಷಡಕ್ಷರ ಸ್ವಾಮಿನೆಂಚಿ। ವೇದಾಂತಮುಲನೆಲ್ಲಿ ವಿವರಿಂಚಿ ದಿಲ್ಪಿನ ನಿಜಗುಣಾರ್ಯುಲಚಲನಿಷ್ಠಪಲಜಿ। . . . . ॥

ಎಂದು ಸೋಮನಾರಾಧ್ಯ, ಹರಿಹರ, ಷಡಕ್ಷರಿ ಮತ್ತು ನಿಜಗುಣಾರಾಧ್ಯರನ್ನು ಸ್ತುತಿಸಿರುತ್ತಾನೆ.

ಕವಿಕಾಲ ವಿಚಾರ.

ಪುಲ್ಲಕವಿಯ ಮೇಲಣ ಶ್ಲೋಕಗಳಿಂದ ಈತನು ಸ್ಮಾರ್ತಬ್ರಾಹ್ಮಣ ನಿದ್ದಿರಜೇಕೆಂಬು ಸ್ಪಷ್ಟವಾಗುತ್ತದೆ. ಈತನು ಆಂಧ್ರದಲ್ಲಿ ಪ್ರಸಿದ್ಧ ಕವಿಯಾಗಿದ್ದು ಅನೇಕ ಗ್ರಂಥಕರ್ತೃವಾಗಿಯೂ ಇದ್ದಂತೆ ತಿಳಿದುಬರುತ್ತದೆ. ಈತನ ಕಾವ್ಯಶೈಲಿಯು ಬಹಳ ಗಂಭೀರವಾಗಿಯೂ ವಿದ್ವತ್ತಾಪೂರ್ಣವಾಗಿಯೂ ಇರುವುದರಿಂದ ಸಂಸ್ಕೃತದಲ್ಲಿಯೂ ಆತನಿಗೆ ಸರಿಯಾದ ಜ್ಞಾನವಿದ್ದಂತೆ ತಿಳಿದುಬರುತ್ತದೆ.

ಈತನು ತನ್ನ ಗ್ರಂಥದ ಆದಿಯಲ್ಲಿ ಶ್ರೀ ವಿರೂಪಾಕ್ಷದೇಶಿಕೇಂದ್ರರ ಉದ್ಭವದ ಬಗ್ಗೆ ಕೊಟ್ಟಿರುವ ಪೀಠಿಕೆಯಲ್ಲಿ ನಾರದನ ಮುಖಾಂತರ ಹೇಳಿಸಿರುವ,

"ವ॥ ಕಲ್ಯಾಣ ಪಟ್ಟಣಂಬುನ ನೆಂತಕಾಲಂಬುನ ಬಸವೇಶ್ವರುಂಡು ಮಹಾಪ್ರಭಾವವಿಭಾಸವಾನುಂಡೈ ಅಖಂಡ ಮಹಿಮಾತಿಶಯಂಬುನ ಸಾಂಮ್ರಾಜ್ಯ ವೈಭವಂಬುನನೇಲು ಚುಂಡೆನಂತವಟ್ಟು ತದಧಿಷ್ಠಿತಂಬೈ ವೀರಶೈವಂಬು ಪ್ರಸಿದ್ಧಂಬೈಯುಂಡೆನತಂಡು ಸಪರಿವಾರುಂಡೈ ಮರಲಿ ಕೈಲಾಸಂಬುನಕು ವಚ್ಚಿನ

---

೧ ಈತನು ಈ ಪಂಡಿತಾರಾಧ್ಯ ಚರಿತ್ರೆಯನ್ನು 'ವಿರೂಪಾಕ್ಷಸಾಹತ್ಮ್ಯ' ವೆಂದು ಕರೆದಿದ್ದಾನೆ.

ನಾಟನುಂಡಿಯುನು, ತದುಚಾರ ವ್ಯವಹಾರಂಬುಲು ಜೂಡಂಬದವುಗಾವುನ."

ಎಂಬ ಈ ವಾಕ್ಯದಿಂದ ಪುಲ್ಲಕವಿಯು ೧೨ ನೇ ಶತಮಾನದಿಂದ ಪ್ರಾಚೀನವನೆಂಬುದು ಸ್ಪಷ್ಟವಾಗಿಯೇ ಇದೆ. ಅದರೂ ಪಂಡಿತಾರಾಧ್ಯ ಚರಿತ್ರೆಯು ಐದನೆಯ ಉಚ್ಛ್ವಾಸದ ಕೆಲವು ಭಾಗದವರೆಗೆ ಮಾತ್ರ ಬರೆದು ಅಪೂರ್ಣವಾಗಿಯೇ ಬಿಟ್ಟಿರುವುದರಿಂದಲೂ ಮತ್ತು ಪೆನುಗೊಂಡೆಯ ಕೃಷ್ಣರಾಯ ಅಚ್ಯುತರಾಯ ಇವರ ಹೆಸರನ್ನೆತ್ತಿರುವುದರಿಂದಲೂ ಈತನು ೧೫ ನೆಯ ಶತಾಬ್ದಿಯಿಂದೀಚಿನವನೆಂದು ಹೇಳಬಹುದಾಗಿದೆ.

'ವಿರೂಪಾಕ್ಷ ವಾಹಾತ್ಮ್ಯ' ವನ್ನು ಬರೆದಿರುವ 'ರುದ್ರಕವಿ' ಯು ತನ್ನ ಗ್ರಂಥಾಂತ್ಯದಲ್ಲಿ ಬರೆದಿರುವ ಈ ಪದ್ಯದಿಂದ ಆತನ ವಿಷಯವು ವ್ಯಕ್ತವಾಗುತ್ತದೆ.

॥ಸೀ॥ ಶ್ರೀ ವಿಂಚು ಮಧುಗಿರಿ ಶೀಮಲೋಘನತರ ಪ್ರಖ್ಯಾತಿಚಂನೊಂದಿ ಬರಗುಚುನ್ನ। ಮಹಿತವಯೌಯಿಡ್ಗೂರಿ ಮತಸ್ಥಿನಾಸುಡು ಪಂಡಿತಾರಾಧ್ಯ ವಂಶವರ್ಧನುಡುವೀರ। ಮಾಹೇಶ್ವರುಡುನಿಡಿವಾವಿಡಿವಾಸುತಾ ಶ್ರೀ ಗುರುಮೂರ್ತಿಕಿ ಶಿಷ್ಯುಡಾಂಧ್ರ। ಕರ್ನಾಟಕೋಭಯ ಕವಿತಾ ವಿಚಾರುಡು ವಿದ್ವಜ್ಜನಾನಂದ ವಿನಯಪರುಡು। ಚಾರು ಸದಾಚಾರ ಸಾಮ್ರಾಜ್ಯಧುರ್ಯುಡು ಅನಘುಡು ಪುಷ್ಪಪೈಯಾರ್ಯ ಸುತುಡು। ಘನಶೀಲ ರಾಜಾಂಬ ಗರ್ಭಾಬ್ಧಿಚಂದ್ರುಡು ರುದ್ರಕವೀಂದ್ರುಡಾರೂಢಿಸೆರಯ। ಸರಸ ಶಾಲೀವಾಹ ಶಕಕ ವರ್ಷಂಬುಲು ಕರದಿವಿಕರಿ ಸುಧಾಕರುಲಸಂಖ್ಯ। ವಿಕ್ರಮ ವತ್ಸರಾಶ್ವೀಜ ಪ್ರಥನುಪಕ್ಷ ಸಪ್ತವಿದ್ಯುಮಣಿವಾಸರ ಮುವರಕು। ವಿರವಿಂಚಿ ವಿರೂಪಾಕ್ಷ ಗುರು ಮಹಾತ್ಮ್ಯಂ"

ಮಧುಗಿರಿ ಪ್ರಾಂತದ ಇಡಗೂರೆಂಬ ಗ್ರಾಮದ ಮತಸ್ಥನೂ, ಪಂಡಿತಾರಾಧ್ಯ ವಂಶವರ್ಧನ ನಿಡುಮಾವಿಡಿ ಸ್ವಾಮಿಗಳ ಶಿಷ್ಯನೂ, ಆದ ವೀರಮಾಹೇಶ್ವರ ಪುಷ್ಪದಯ್ಯ ಮತ್ತು ರಾಚಾಂಬ ಇವರ ಪುತ್ರನಾದ ಕರ್ನಾಟಕಾಂಧ್ರ ಕವಿತಾ ವಿಚಾರನಾದ 'ರುದ್ರಕವಿ' ಯು ಶಾಲಿವಾಹನ ಶಕ ೧೬೦೨ ವಿಕ್ರಮ ಸಂ। ಆಶ್ವೀಜ ಶು. ೭. ಭಾನುವಾರ

(ಸನ್ ೧೮೮೧) ರಲ್ಲಿ ಈ ಗ್ರಂಥವನ್ನು ವಿರಚಿಸಿದಂತಿ ಹೇಳುತ್ತಾನೆ. ಕವಿಚರಿತೆಯಲ್ಲಿಯೂ ಈತನ ಉಲ್ಲೇಖವಿದೆ.

ಪುಲ್ಲಕವಿಯ ಗ್ರಂಥದಲ್ಲಿದ್ದ ಬರಹದ ತಪ್ಪುಗಳನ್ನು ತುದ್ದ ಮಾಡಲು ಹೋಗಿ ಹೊಸದಾಗಿಯೇ 'ಪಂಡಿತಾರಾಧ್ಯ ಚರಿತ್ರೆಯ' ನ್ನು ಬರೆದಿನೆಂದು ಹೇಳುವ 'ಅಪ್ಪಪ್ಪ' ನೆಂಬ ಕವಿವರ್ಯನು ಸಹ ೧೯ನೆಯ ಶತಕದವನೆಂದು ತಿಳಿದುಬಂದಿದೆ.

ಹಿಂದಿನ ಲೇಖನಗಳಲ್ಲಿ ಪ್ರಸಂಗಾನುಗುಣವಾಗಿ ವಿರೂಪಾಕ್ಷ ಪಂಡಿತಾರಾಧ್ಯರೇ ಮುಂತಾದವರು ನಡೆಯಿಸಿದ ಪ್ರಭಾವಗಳನ್ನು ಕೊಡಲಾಗಿದೆ. ಮತ್ತೆ ಅವುಗಳನ್ನು ಇಲ್ಲಿ ಹೇಳುವುದು ಅನವಶ್ಯಕ. ಪಂಡಿತಾರಾಧ್ಯಚರಿತ್ರೆಯಲ್ಲಿ 'ಶ್ರೀಗಿರಿ ರಾಜಸೂರ್ಯ ಸಿಂಹಾಸ' ನಾರೋಹಣ ಮಾಡಿದ 'ಮೂರ್ತಿಗಳ ಮಹತ್ಕಾರ್ಯಗಳ ವಿಪುಲವಾದ ವರ್ಣನೆಯು ಮನೋಹರವಾಗಿ ಚಿತ್ರಿತವಾಗಿದೆ. ಅದನ್ನು ವಿಮರ್ಶಾತ್ಮಕ ಲೇಖನದಲ್ಲಿ ಸಂಗ್ರಹಿಸಿದರೆ ಮಾತ್ರ ಸಾಕೆನಿಸುತ್ತದೆ. ಕವಿಯು ಪ್ರತಿ ಉಚ್ಛ್ವಾಸದ ಕಡೆಯಲ್ಲಿಯೂ ಕೊಟ್ಟಿರುವ ಗದ್ಯವು ಅನುಕ್ರಮಣಿಕಾ ರೂಪವಾಗಿರುವುದರಿಂದ ಅದನ್ನು ಉದಾಹರಿಸಿ ಅವಶ್ಯವಿದ್ದೆಡೆಗಳಲ್ಲಿ ವಿಸ್ತರಿಸುವುದು ಉಚಿತವೆನಿಸುತ್ತದೆ.

ಪ್ರಥಮೋಚ್ಛ್ವಾಸದ ಕಡೆಯಲ್ಲಿ ಈ ಗದ್ಯವಿದೆ.

"ಗದ್ಯ" ಇತಿ ಶ್ರೀ. ವೀರಭದ್ರಕಾರುಣ್ಯಾಮೃತ ಸಂವರ್ಧಿತ ಕವಿತಾಲತಾ ಸಮುತ್ಫುಲ್ಲ ವಚೋವಲ್ಲರೀ ಮಂತಲ್ಲಜ ಸಮುಲ್ಲಸತ್ಫುಲ್ಲ ಕವಿ ಪ್ರಣೀತಂ ಬೈನ ಪಂಡಿತಾರಾಧ್ಯಚರಿತ್ರಾಂಬುನು ಮಹಾಪ್ರಬಂಧಂಬುನಂದು ಶ್ರೀ ಕೈಲಾಸಂಬುನ ಪರಮೇಶ್ವರುಂಡು ಕೂಲುವುಂಡುಟಯು ನಾರದಾಗಮನಂಬುನು, ಮಹಾಪುರುಷೋತ್ಪತ್ತಿಯುನಕಡು ಶ್ರೀಶೈಲ ಭೀಮೇಶ್ವರುನಿ ದಿವ್ಯತೇಜೋ ವಿಶೇಷಂಬುನ ಪ್ರಕಾಶಿಂಚುಟಯು, ದುರ್ಗಾವೀರಭದ್ರಭೈರವುಲ ಸಮಾಗಮಂಬುನು, ವೀರಭಿಕ್ಷಾವಂತು ನಿಗ್ರಹಾನುಗ್ರಹಂಬುನು, ಕಾಶಿಕಾಪುರ ಪ್ರವೇಶಂಬುನು, ಅಮಾವಾಸ್ಯಯಂದು ಚಂದ್ರೋದಯಂಬುಗಾವಿಂಚುಟಯು, ಶ್ರೀಪತಿ ಪಂಡಿತುನಿ ವಂಶಜುಲಗು ಬ್ರಾಂಹಣುಲಕು ಲಿಂಗಧಾರಣಂಬುಗಾವಿಂಚುಟಯು

೧ ಕವಿಚರಿತೆ ಭಾಗ ಪು. ೨೨೬.

ಪಂಡಿತಾರಾಧ್ಯ ನಿರ್ಮಾಣಂಬುನು, ಪಾಂಚಾಲಬರ್ಬರಾದಿ ದೇಶ ಸಂಚಾರಂಬು ಲೇಯುಟಯು, ಶ್ರೀಶೈಲಮುನಕೇಕೆಂಚಿ 'ಸೂರ್ಯಸಿಂಹಾಸನ' ನಿರ್ಮಾಣಂಬುನು, ಚಂದ್ರಗುಂಡದೇಶಿಕೇಂದ್ರ ಸ್ವಾಮುಲವಾರಿಕಿ ಪಟ್ಟಾಭಿಷೇಕಂಬುನು, ವಿರೂಪಾಕ್ಷದೇಶಿಕೇಂದ್ರ ಸ್ವಾಮುಲವಾರು ಶ್ರೀ ಭೀಮೇಶ್ವರ ಲಿಂಗಮುನಂದು ಲಿಂಗೈಕ್ಯಂಬಗುಟಯು, ಚಂದ್ರಗುಂಡಸ್ವಾಮುಲವಾರಿ ಪ್ರಕಾಶಮಾನಂಬುನನು ಕಥಲುಂಗಲ ಪ್ರಥಮಾಶ್ವಾಸಂ "

ಕೈಲಾಸದಲ್ಲಿ ಪರಮೇಶ್ವರನು ಒಡ್ಡೋಲಗದಲ್ಲಿರುತ್ತಿರಲು ಅಲ್ಲಿಗೆ ನಾರದನು ಬಂದು ಭೂಲೋಕದಲ್ಲಿ ಶಿವಭಕ್ತಿಯು ದಿನೇ ದಿನೇ ಕೃಶವಾಗುತ್ತಿದೆಯೆಂದೂ ವೀರಶೈವ ಮತವನ್ನು ಉದ್ಧಾರ ಮಾಡಲು ಒಬ್ಬ ಗಣಾಧೀಶ್ವರನನ್ನು ಕಳುಹಿಸಬೇಕೆಂದೂ ಪೊರೆಯಿಡುತ್ತಾನೆ. ಆಗ ಪರಮಾತ್ಮನ ಇಚ್ಛೆಯನ್ನರಿತ ಒಬ್ಬ ಗಣವರನು (ಧ್ವನುಕರ್ಣಗಣಾಧೀಶರು) ಪರಮೇಶ್ವರನ ಸಮೀಪಕ್ಕೆ ಬಂದು ಅವನ ಅನುಜ್ಞೆಯನ್ನು ಪಡೆದು ಭೂಲೋಕದಲ್ಲಿ ಜಗತ್ಪ್ರಸಿದ್ಧವಾದ ಶ್ರೀಶೈಲಪರ್ವತದಲ್ಲಿ ವಿರಾಜಿಸುವ ಭೀಮಲಿಂಗದಲ್ಲಿ ತೇಜೋಮೂರ್ತಿಯಾಗಿ ಆವಿರ್ಭವಿಸುತ್ತಾನೆ. ಅವರ ಜನ್ಮಸಮಯದಲ್ಲಿ ಸಮಸ್ತ ದೇವಾಧಿದೇವತಿಗಳೂ ಸಮಸ್ತ ಋಷಿಗಳೂ ಅನೇಕವಾಗಿ ಸ್ತುತಿಸುತ್ತಾರೆ. ಆಗ ಪರ್ವತಾಧಿಪನಾದ ಶ್ರೀಮಲ್ಲಿಕಾರ್ಜುನ ಸ್ವಾಮಿಯು ಅಲ್ಲಿಗೆ ಬಂದು ಸ್ವಾಮಿಗಳನ್ನು ಹೊಗಳಿ ಹೀಗೆ ಹೇಳುತ್ತಾನೆ.

(೧) ಗೀ॥ ಪರಮಸಂಚಾಕ್ಷರೀ ಮಂತ್ರಪ್ರಭಾವಂಬು ।
ಬುದ್ಧಿಹೀನುಲಕೆಲ್ಲ ಬೋಧಪರಚಿ ॥
ವಾಸಿ ವಿಾರಂಗ ವಿರೂಪಾಕ್ಷದೇಶಿಕೇಂದ್ರ ।
ಸ್ವಾಮಿಯುನಿಪೇರುವಹಿಯಿಂಚಿ ಭೂವಿಯಂದು ॥

(೨) ಕಂ॥ ಶಿವಮತಮುನುಸ್ಥಾಪಿಂಚುಚು ।
ಭವಹರ ಮಗುನಟ್ಲು ಸಕಲ ಭಕ್ತುಲನೆಲ್ಲ ।
ವಿವರಿಂಚಿ ಪುಣ್ಯ ಕಥಲನು ।
ಶಿವಲೋಕಮುಜೇರುನಟ್ಲುಚೇಯು ಮಹಾತ್ಮಾ ॥

(೧) ಪರಮ ಪಂಚಾಕ್ಷರಿಯ ಪ್ರಭಾವದ ಶಕ್ತಿಯಿಂದ ಜ್ಞಾ
ಹೀನರಾದ ಮನುಷ್ಯರಲ್ಲಿ ಜ್ಞಾನವನ್ನು ಪ್ರಜ್ವೋದನಗೊಳಿಸಿ ನೀವು ವಿರೂ
ಪಾಕ್ಷ ದೇಶಿಕೇಂದ್ರರೆಂಬಭಿಧಾನದಿಂದ ಪ್ರಸಿದ್ಧರಾಗುವಿರಿ.

(೨) ಭೂಲೋಕದಲ್ಲಿರುವ ಸಕಲ ಭಕ್ತಶ್ರೇಣಿಗೂ ಶಿವತತ್ವ
ಶಿವಕಥಾ ಶಿವಾನುಸಂಧಾನ ಪುರಸ್ಸರ ಶಿವಮತವನ್ನು ಸ್ಥಾಪಿಸಿ ಅವರಿಗೆ
ಸದ್ಗತಿಯನ್ನನುಗ್ರಹಿಸಬೇಕು.

ಹೀಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯಿಂದ ಅಪ್ಪಣೆಯಂಕೊಂಡು
ಆ ಪರ್ವತದ ಅನೇಕ ಋಷ್ಯಾಶ್ರಮಗಳಲ್ಲಿ ಅನೇಕ ವರ್ಷಗಳಿಂದ ತಪ
ಸ್ಸನ್ನಾಚರಿಸುತ್ತಿದ್ದ ಮುನಿಗಳಿಗೆ ದರ್ಶನವನ್ನಿತ್ತು ಅವರಿಗೆ ವೀರಶೈವ
ತತ್ತ್ವ ರಹಸ್ಯಗಳನ್ನು ಬೋಧೆಮಾಡುತ್ತಿದ್ದರು. ಆ ಸಮಯಕ್ಕೆ ಜಗ
ದೀಶನ ಅಪ್ಪಣೆಯಿಂದ ದುರ್ಗಾ, ವೀರಭದ್ರ ಮತ್ತು ಭೈರವ ಈ
ಮೂವರೂ ಶ್ರೀಯವರ ಸೇವೆಯಲ್ಲಿ ಬಂದು ನಿರತರಾಗುತ್ತಾರೆ. ಈಗಲೂ
ಈ ಮಠದ ಎಲ್ಲಾ ಶಾಖೆಗಳಲ್ಲಿಯೂ ವೀರಭದ್ರ ಪ್ರತಿಷ್ಠೆಯಾಗಿರುತ್ತದೆ.
ಈ ಗ್ರಂಥವೂ ಕೂಡ ಶ್ರೀ ವೀರಭದ್ರನ ಅಂಕಿತದಿಂದಲೇ ಪ್ರಸಿದ್ಧವಾ
ಗಿರುವುದು ಇದಕ್ಕೊಂದು ನಿದರ್ಶನವಾಗಿದೆ.

ಅನಂತರ ಶ್ರೀ ವಿರೂಪಾಕ್ಷದೇಶಿಕೇಂದ್ರರು ಉಜ್ವಲತೋಜೋ
ವಿರಾಜಮಾನರಾಗಿ ಪರ್ವತ ಪ್ರಾಂತ್ಯದಲ್ಲಿ ಶಂಚರಿಸುತ್ತಿರಲು ಅಲ್ಲಿಗೆ ಪಾಳೆ
ಯಗಾರನಾಗಿದ್ದ 'ವೀರಭಿಕ್ಷಾಪತಿ' ಎಂಬುವನು ಶ್ರೀಯವರಿಗೆ ಹಿಂಸೆ
ಯನ್ನೀಯುತ್ತಾನೆ. ಅನಂತರ ಜಗದ್ಗುರುಗಳ ಆತ್ಮಶಕ್ತಿಯಿಂದ ಆಕ
ರ್ಷಿತನಾಗಿ ಆತನು ಶರಣಾಗತನಾಗುತ್ತಾನೆ. ಆಗ ಶ್ರೀಯವರು ಆತ
ನಿಗೆ ಶಿವತತ್ವಗಳನ್ನುಪದೇಶಿಸಿ ಅಲ್ಲಿಯೇ ಶಿವಯೋಗದಲ್ಲಿರಲು ನಿಯ
ಮಿಸುತ್ತಾರೆ.

ಅನಂತರ ವಿರೂಪಾಕ್ಷದೇಶಿಕೇಂದ್ರರು ತಮ್ಮ ಶಿಷ್ಯರಾದ ವೀರಭದ್ರ
ಭೈರವರೊಂದಿಗೆ ಕಾಶೀಪಟ್ಟಣಕ್ಕೆ ದಯಮಾಡಿಸಿ ಅಲ್ಲಿ ಅನೇಕ
ಬ್ರಾಹ್ಮಣರ ಶ್ರೇಣಿಯಲ್ಲಿ ಅನೇಕ ಅನೇಕ ಪ್ರಭಾವಗಳನ್ನು ತೋರಿಸು
ವುದಲ್ಲದೆ ಶಾಸ್ತ್ರಾರ್ಥದಲ್ಲಿ ವಿಜಯಿಗಳಾಗುತ್ತಾರೆ. ಬ್ರಾಹ್ಮಣ ಜನಾಂಗಕ್ಕೆ
ಮುಂದಾಳಾಗಿದ್ದ 'ಶ್ರೀಪತಿ' ಎಂಬ ಆರಾಧ್ಯ ಬ್ರಾಹ್ಮಣನನ್ನು ಜಯಿ

ಸಲು ಅತನು ವೀರಶೈವ ದೀಕ್ಷೆಯನ್ನು ಸ್ವೀಕರಿಸುತ್ತಾನೆ. ಅನಂತರ
ಅತನ ಬಂಗಡವರಿಗೆಲ್ಲರಿಗೂ ಲಿಂಗಧಾರಣೆಯೆನ್ನು ಮಾಡುತ್ತಾರೆ.
ಅದರಿಂದ 'ಪಂಡಿತಾರಾಧ್ಯ' ರೆಂದು ಕರೆಯಲ್ಪಟ್ಟು ಮುಂದೆ ಈ ವಿರೂಪಾಕ್ಷ
ದೇಶಿಕೇಂದ್ರರು ಸ್ಥಾಪಿಸಿದ ಪೀಠಕ್ಕೆ ಉತ್ತರಾಧಿಕಾರಿಗಳಾಗಲು ಶ್ರೀ ವಿರೂ
ಪಾಕ್ಷದೇಶೀಕರಿಂದ ನಿಯಮಿಸಲ್ಪಡುತ್ತಾರೆ. ಅಲ್ಲಿಯೂ ಅನೇಕ ಮಹಿಮೆ
ಗಳನ್ನು ಪ್ರಕಟಿಸಿ ಜಗದ್ವಂದ್ಯರಾಗಿ ಅನೇಕ ದೇಶಗಳಲ್ಲಿ ರಾಜಾಧಿರಾಜ
ರಿಂದ ಮನ್ನಣೆಯನ್ನೂ ಪಡೆದು ಶ್ರೀಶೈಲಕ್ಕೆ ದಯಮಾಡಿಸುತ್ತಾರೆ.

ಶ್ರೀಶೈಲದಲ್ಲಿ ಪಂಚವನ್ನಾಗಿಯ ಸ್ಥಳದಲ್ಲಿ ಒಂದು ಬೃಹನ್ಮಠವನ್ನು
ಕಟ್ಟಿಸಿ ಅಲ್ಲಿ 'ಸೂರ್ಯಸಿಂಹಾಸನ' ವನ್ನು ಸ್ಥಾಪಿಸುತ್ತಾರೆ. ಅದೇ
ನಾವು ಹಿಂದೆ ಹೇಳಿದ ಶ್ರೀ ಗೋಕರ್ಣ ಸೂರ್ಯಸಿಂಹಾಸನವು. ಇದರ
ಉಲ್ಲೇಖವುಳ್ಳ ತಾಮ್ರ ಪತ್ರವೊಂದು ಈ ಮಠದಲ್ಲಿ ಇರುತ್ತದೆ.

ಸೀ॥ ಅಂತಟನೊಕಮಠಂ ಬಚ್ಚಟ ಗಲ್ಪಿಂಚಿಯದಿ ಸೂರ್ಯಸಿಂಹಾ
ಸನಂಬಟಿಂಚು। ಅಭಿಧಾನವೊನಚಿ ಶಿಖಾಮು ಮುದ್ರುಲ ನಿರ್ಮಿಂಚಿ
ವರಪಂಡಿತಾರಾಧ್ಯವಂಶಮುನನು। ಸಕಲ ಲಕ್ಷಣ ಮುಲುಚಲುಗಿನ
ನೊಕಪಿನ್ನನಾನಿಗೈ ಕೊನಿಚಾಲ ವಾಂಛವೀರ।.....”

ಎಂದು ಆ ವಟುವಿಗೆ ಸಕಲ ವಿದ್ಯಾಭ್ಯಾಸವನ್ನು ಮಾಡಿಸಿ ಅತ
ನಿಗೆ ಶ್ರೀ. ಚಂದ್ರಗುಂಡದೇಶಿಕೇಂದ್ರನೆಂಬ ಅಭಿಧಾನವನ್ನಿಟ್ಟು ಶ್ರೀ
ಗೋಕರ್ಣ ಸೂರ್ಯಸಿಂಹಾಸನದಲ್ಲಿ ವಿದ್ಯುಕ್ತವಾಗಿ ಪಟ್ಟಾಭಿಷಿಕ್ತನ
ನ್ನಾಗಿ ಮಾಡಿ ಶಿಖಾಮುದ್ರೆಗಳನೊಪ್ಪಿಸಿ,

ಗೀ॥ ಆರ್ಯ ಗುರುವುಲು ನಿಜಕಳಾಂಶಂಬುವಲನ।
ಕರ್ತಲನುನಾಹ್ವಯಂಬುನುಗಲುಗಜೇಸಿ॥
ಪಟ್ಟಪಟ್ಟಂಬುವಾರುನು ಪರಮ ನಿಯತಿ।
ಪೂಜಗಾವಿಂಚುಡನಿಯಿಚ್ಚಿ ಬುಧಗುರುಂಡು॥

ಅನಂತರದಲ್ಲಿ ವಿದ್ಯಾಜ್ಞಾನಿಗಳಾದ ಶ್ರೀ. ವಿರೂಪಾಕ್ಷದೇಶಿಕರು
ತಮ್ಮ ನಿಜಕಲಾಂಶವನ್ನು ಆಹ್ವಾನಿಸಿ ತುಂಬಿದ ಕೆಲವು ಪವಿತ್ರ ವಸು
ಗಳನ್ನು ಶ್ರೀ. ಚಂದ್ರಗುಂಡುದೇಶಿಕವರನಿಗೆ ಕೊಟ್ಟು ಆಶೀರ್ವದಿಸಿ ಇಲ್ಲಿಂದ
ಮುಂದೆ ಈ ಪೀಠಾಸೀನರಾದ ಪ್ರತಿಯೊಬ್ಬ ಮೂರ್ತಿಯೂ ಈ ಕರ್ತರ

ಸೇವೆಯನ್ನು ತ್ರಿಕಾಲದಲ್ಲಿಯೂ ನಿಷ್ಠೆಯಿಂದ ಆರಾಧಿಸಿದಲ್ಲಿ ಅವ ಇಷ್ಟಾರ್ಥವು ನೆರವೇರಿ ಅವರು ಕೃತಕೃತ್ಯರಾಗುವರೆಂದು ಅಜ್ಞಾಪಿ ಆ ಮಹನೀಯ ಮೂರ್ತಿಯು ಮತ್ತೆ ಶ್ರೀ. ಭೀಮಲಿಂಗದಲ್ಲಿಯೇ ಐಕ್ಯ ನಾದನು. ಅವರಿತ್ತ ಪವಿತ್ರ ವಸ್ತುಗಳು ಪರಂಪರೆಯಾಗಿ ಈ ಪೀಠಾ ಧೀಶ್ವರರಿಂದ ಆರಾಧಿಸಲ್ಪಡುತ್ತ ಇಂದಿಗೂ "ಹಿರಿಯಕರ್ತರು" ಎಂಬ ಭಿಧಾನದಿಂದ ಮಠದಲ್ಲಿವೆ.

ಕಂ॥ ವಿರುಪಾಕ್ಷದೇಶಿಕೇಂದ್ರನಿ।
ಕರಪುಷ್ಪರ ಸಂಭವುಂಡು ಕಲಿಯುಗಮುಂರ್ಮ॥
ಸ್ಥಿರಮುಗ ಭಕ್ತುಲಕಲ್ಪಕ।
ತರುವಸಗಾ ಚಂದ್ರಗುಂಡ ದೇವಂಬಲರ್ಕೆ॥

ಅನಂತರ ಕವಿಯು ಶ್ರೀ ಚಂದ್ರಗುಂಡದೇಶಿಕರ ಪ್ರಭವಗಳನ್ನು ಬಣ್ಣಿಸುತ್ತಾನೆ.

(ಮುಂದೆ.)

೩೬ ತತ್ವಗಳು.

ಜಗತ್ತಿನ ಉತ್ಪತ್ತಿಗೆ ಮತ್ತು ಅದರ ವ್ಯವಹಾರಕ್ಕೆ ತತ್ವಗಳು ಮುಖ್ಯಧಾರವೆಂದೆನಿಸಿಕೊಂಡಿರುತ್ತವೆ. ಈ ತತ್ವಗಳು ಮೂವತ್ತಾರು ಇರುವವೆಂದು ವಚನಕಾರರು ಭಾವಿಸಿರುವರು. ಕೆಲವು ಆಗಮಗಳಲ್ಲಿಯೂ ತತ್ವ ವಿವೇಚನೆಯು ಇದ್ದು ಇಲ್ಲಿಯೂ ಇವುಗಳ ಸಂಖ್ಯೆಯು ಮೂವತ್ತಾರು ಎಂದು ಹೇಳಲ್ಪಟ್ಟಿದೆ. ಆದರೆ ವಚನಕಾರರ ಮತ್ತು ಆಗಮ ಸಿದ್ಧಾಂತಗಳ ವಿವರಣೆಯಲ್ಲಿ ಕೆಲವು ಕಡೆ ಪರಸ್ಪರ ಭಿನ್ನತೆಯುಂಟು. ವಚನಕಾರರಲ್ಲಿಯ ಕೆಲವು ತತ್ವಗಳು ಈ ಶಿವಸಿದ್ಧಾಂತಿಗಳಲ್ಲಿಲ್ಲ. ಆದರೂ ಈ ಉಭಯತರ ಸಿದ್ಧಾಂತದ ವಿವರಣೆಗಳಲ್ಲಿ ೩೬ ತತ್ವಗಳ ವಿವೇಚನೆಗೆ ಉನ್ನತ ಸ್ಥಾನವಿದೆ. ಇವುಗಳ ರೀತಿ ಮತ್ತು ಮರ್ಮಗಳನ್ನು ಅರಿಯದ ಹೊರ್ತು ಆತ್ಮಪ್ರಗತಿಯ ಮಾರ್ಗವು ತಿಳಿಯಲಾರದೆಂದು ಈ ಉಭಯ ವರ್ಗದ ಶಾಸ್ತ್ರಕಾರರು ದೃಢವಾಗಿ ಹೇಳುತ್ತಾರೆ. ಆದುದರಿಂದ ಈ ವಿಷಯವನ್ನು ಕುರಿತು ಈ ಲೇಖನದಲ್ಲಿ ವಿವೇಚಿಸಲು ಯತ್ನಿಸುವೆವು.

ಆದರೆ ಇಲ್ಲಿ ನಾವು ವೀರಶೈವ ವಚನಕಾರರ ಅಭಿಪ್ರಾಯದ ಪ್ರಕಾರ ೩೬ ತತ್ವಗಳಾವವು ಎಂಬದನ್ನು ವಿವರಿಸುವೆವು. ವಚನಕಾರರು ಆಗಮಕಾರರ ಸಿದ್ಧಾಂತಗಳನ್ನು ಸ್ವೀಕರಿಸಿದರೂ ಕೂಡ ಅವರು ತಮ್ಮ ಷಟ್‌ಸ್ಥಲ ಶಾಸ್ತ್ರಕ್ಕೆ ಹೊಂದಿಕೆಯಾಗುವಂತೆ ಕೆಲವು ವ್ಯತ್ಯಾಸಗಳನ್ನು ಮಾಡಿ ಅವುಗಳ ತತ್ವಗಳನ್ನು ವಿವರಿಸುವದುಂಟು.

ವೀರಶೈವ ವಚನಕಾರರು ತಮ್ಮ ೩೬ ತತ್ವಗಳಲ್ಲಿ ಮೂರು ಮುಖ್ಯ ವಿಭಾಗಗಳನ್ನು ಮಾಡಿರುವರು. ಅವು ಯಾವವೆಂದರೆ:— (೧) ಆತ್ಮ ತತ್ವಗಳು:— ಇವು ದೇಹಕ್ಕೆ ಸಂಬಂಧಪಟ್ಟವಿರುತ್ತವೆ. ಇವುಗಳ ಮೂಲ ಕಾರಣವೆ: ದೇಹದ ಬಹಿರಂಗದ ಮತ್ತು ಅಂತರಂಗದ ವ್ಯಾಪಾರಗಳು ನಡೆಯುತ್ತವೆ. ಇವುಗಳ ಸಂಖ್ಯೆಯು ೨೫ ಇರುತ್ತದೆ. (೨) ವಿದ್ಯಾತತ್ವಗಳು:— ಇವು ಬಹು ಸೂಕ್ಷ್ಮವಾದವುಗಳು. ಇವು ಪಿಂಡ ವನ್ನೂ ಬ್ರಹ್ಮಾಂಡವನ್ನೂ ಕೂಡ ವ್ಯಾಪಿಸಿರುತ್ತವೆ. ಇವುಗಳಿಗೆ ಲಿಂಗ ತತ್ವಗಳೆಂತಲೂ ಬೇರೊಂದು ಹೆಸರು ಇವೆ. ಇವುಗಳ ಸಂಖ್ಯೆ ೧೦

ಇರುತ್ತದೆ. ಶಿವತತ್ವಃ— ಇದು ಒಂದೇ ಇರುತ್ತದೆ. ಯಾವ ಮಹಾ ತತ್ವದಿಂದ ಈ ಜಗತ್ತು ಉದಯವಾಗಿರುತ್ತದೆಯೋ ಅದೇ ಈ ಶಿವ ತತ್ವವಿರುತ್ತದೆ. ಈ ಶಿವತತ್ವದಿಂದಲೇ ಉಳಿದ ತತ್ವಗಳೆಲ್ಲವೂ ಹೊರಬೆರುತ್ತವೆ. ಇದಾವದರೂ ಲಿಂಗತತ್ವವು. ಹೀಗೆ ವೀರಶೈವ ವಚನಕಾರರು ೩೬ ತತ್ವಗಳನ್ನು ಕಲ್ಪಿಸಿರುವರು.

ಈ ೩೬ ತತ್ವಗಳನ್ನು ಕಲ್ಪಿಸುವದರ ಉದ್ದೇಶವೇನೆಂಬದನ್ನು ವಚನಕಾರರು ಬಹು ಸರಸಾಗಿ ವರ್ಣಿಸುತ್ತಾರೆ. ಲಿಂಗಾಂಗ ಸಾಮರಸ್ಯ ಜ್ಞಾನವನ್ನು ಪಡೆಯಲು ಈ ತತ್ವಗಳ ಜ್ಞಾನದಿಂದ ಆಗಬೇಕಾದ್ದೇನು ಎಂಬುದನ್ನು ಅವರು ಬಹು ಕಡೆಗೆ ಹೇಳಿರುತ್ತಾರೆ. ದೇಹಕ್ಕೆ ಸಂಬಂಧಪಟ್ಟ ೨೫ ತತ್ವಗಳನ್ನು ಕಡೆಯುದಾದ ಶಿವತತ್ವದಲ್ಲಿ ಅಡಗಿಸುವದೇ ಶಿವತತ್ವದಲ್ಲಿ ಲಿಂಗಾಂಗಿಯ ಮುಖ್ಯ ಕಾರ್ಯವಾಗಿರುತ್ತದೆ. ಇದರ ಜ್ಞಾನಮಾಡಿಕೊಳ್ಳುವದೇ ಲಿಂಗಾಂಗ ಸಾಮರಸ್ಯ ಜ್ಞಾನವು. ಈ ಸಾಮರಸ್ಯವನ್ನು ಹೊಂದಲು ವಿದ್ಯಾತತ್ವಗಳು ಮನುಷ್ಯನಿಗೆ ಸಹಾಯಕಾರಿಗಳಾಗಿವೆ. ಈ ವಿದ್ಯಾತತ್ವಗಳು ೭ ಆತ್ಮತತ್ವಗಳನ್ನು ಶಿವತತ್ವದಲ್ಲಿ ಅಡಗಿಸಲು ಸಹಾಯಕವಾಗಿರುತ್ತವೆ. ತತ್ ಪದವೇ ೧೧ ಲಿಂಗ ತತ್ವಗಳು ತ್ವಂ ಪದವೇ ೭ ತತ್ವಗಳುಳ್ಳ ಅಂಗವು ಈ ಎರಡರ ಐಕ್ಯವೇ ಅಸಿ ಪದವು. ಹೀಗೆ "ತತ್ ತ್ವಮಸಿ" ಎಂಬ ಮಹಾವಾಕ್ಯವನ್ನು ವಚನಕಾರರು ಈ ತತ್ವಗಳಲ್ಲಿ ಕಾಣುತ್ತಾರೆ.

ಆತ್ಮ ತತ್ವಗಳು.

ಹಿಂದೆ ಹೇಳಿದಂತೆ ಆತ್ಮತತ್ವಗಳು ೭ ಇವೆಯಷ್ಟೇ. ಇವುಗಳಲ್ಲಿ ಪುನಃ ಮುಖ್ಯ ಐದು ವಿಭಾಗಗಳಿದ್ದು ಈ ಪ್ರತಿಯೊಂದು ವಿಭಾಗದಲ್ಲಿ ಐದು ಐದು ತತ್ವಗಳಿರುತ್ತವೆ. ಹೀಗೆ ಎಲ್ಲವೂ ಕೂಡಿ ಒಟ್ಟು ೨೫ ತತ್ವಗಳಾಗುತ್ತವೆ. ಅವು ಯಾವವೆಂದರೆ:—

(೧) ಕರ್ಮೇಂದ್ರಿಯಗಳುಃ— ಇವು ವಾಕ್, ಪಾದ, ಪಾಣಿ, ಪಾಯು, ಗುಹ್ಯ ಇವುಗಳೇ ಇರುತ್ತವೆ. ಇವೆಲ್ಲವೂ ಕ್ರಿಯಾರೂಪಾಗಿವೆ. ಇವುಗಳಿಂದಲೇ ಮನುಷ್ಯನು ತನ್ನ ನಿತ್ಯದ ಕ್ರಿಯೆಗಳನ್ನು ಮಾಡುತ್ತಾನೆ ಆದ್ದರಿಂದ ಇವುಗಳಿಗೆ ಕರ್ಮೇಂದ್ರಿಯಗಳೆಂಬ ಹೆಸರುಂಟಾಗಿವೆ.

(೨) ಜ್ಞಾನೇಂದ್ರಿಯಗಳುಃ— ಇವು ಘ್ರಾಣ, ಜಿಹ್ವೆ, ನೇತ್ರ ತ್ವಕ್, ಮತ್ತು ಶ್ರೋತ್ರ ಇವುಗಳೇ ಇರುತ್ತವೆ. ವಾಸಿಸುವದು, ರುಚಿಸುವದು, ನೋಡುವದು, ಸ್ಪರ್ಶಿಸುವದು, ಮತ್ತು ಕೇಳುವದು ಇವುಗಳು ಅನುಕ್ರಮವಾಗಿ ಈ ಇಂದ್ರಿಯಗಳ ಮೂಲಕವಾಗಿಯೇ ನಡಿಯುತ್ತವೆ. ಇವುಗಳನ್ನು ಬುದ್ಧೀಂದ್ರಿಯಗಳೆಂತಲೂ ಕರೆಯುವದುಂಟು.

(೩) ವಿಷಯಗಳುಃ— ಇವು ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದ ಇವುಗಳು ಇರುತ್ತವೆ. ಇವುಗಳು ಐದು ಜ್ಞಾನೇಂದ್ರಿಯಗಳಿಗೆ ಅನುಕ್ರಮವಾಗಿ ಸಂಬಂಧಪಟ್ಟು ಮನುಷ್ಯನ ಜ್ಞಾನಾಭಿವೃದ್ಧಿಗೆ ಕಾರಣವಾಗಿರುತ್ತವೆ.

(೪) ವಾಯುಗಳುಃ— ಇವು ಪ್ರಾಣ, ಅಪಾನ, ವ್ಯಾನ, ಉದಾನ ಸಮಾನ ಎಂದು ಐದು ಇರುತ್ತವೆ. ಪ್ರಾಣವಾಯುವು ಉಚ್ಛ್ವಾಸ ನಿಶ್ವಾಸಗಳನ್ನುಂಟುಮಾಡಿ ಜೀವನು ಜೀವಿಸಲು ಕಾರಣವಾಗಿರುತ್ತದೆ. ಅಪಾನವಾಯುವು ದೇಹದಲ್ಲಿಯ ಮಲವನ್ನು ಹೊರಗೆಡಹಿ ಅನ್ನರಸವನ್ನು ವ್ಯಾಪ್ತಿಯನ್ನು ಮಾಡುತ್ತಿರುವದು. ವ್ಯಾನವಾಯುವು ಸರ್ವಸಂಧಿಯಲ್ಲಿದ್ದು ನೀಡುವದೂ ಮುದುಡುವದೂ ಮೊದಲಾದ ಕಾರ್ಯಗಳನ್ನು ಮಾಡಿಸುವದು. ಉದಾನವಾಯುವು ಅನ್ನರಸ ಆಹಾರ ಸ್ಥಾಪನೆಯನ್ನು ಮಾಡಿಸುತ್ತಿರುತ್ತದೆ. ಸಮಾನ ವಾಯುವು ಅನ್ನರಸವನ್ನು ಶರೀರದಲ್ಲೆಲ್ಲ ವ್ಯಾಪಿಸಿ ರೋಮನಾಳಂಗಳಿಗೆ ಸಹ ಹಂಚಿಕ್ಕುತ್ತಿರುತ್ತದೆ. ಹೀಗೆ ವಾಯುಗಳು ಶರೀರದಲ್ಲಿರುವ ಇಂದ್ರಿಯಗಳನ್ನು ಪರಸ್ಪರ ಸಂಬಂಧಿಸಿ ಅವುಗಳ ಕಾರ್ಯಗಳಿಗೆ ಸಹಾಯಕವಾಗಿ ವರ್ತಿಸುತ್ತವೆ.

(೫) ಕರಣ ಚತುಷ್ಟಯಗಳು ಮತ್ತು ಜೀವಃ— ಈ ಐದು ಐದನೆಯ ವರ್ಗದಲ್ಲಿ ಬರುವವು. ಇವು ಅಹಂಕಾರ, ಚಿತ್ತ, ಬುದ್ಧಿ, ಮನ ಇವುಗಳಿವ್ವು ಇವುಗಳಲ್ಲದೆ ಜೀವನೂ ಇವುಗಳಲ್ಲಿ ಬರುತ್ತಾನೆ. ಈ ಯಾವತ್ತು ತತ್ವಗಳು ಮನುಷ್ಯನ ಕಾರ್ಯಗಳಿಗೆ ಮೂಲ ಕಾರಣವಾಗಿ ಅವನಿಗೆ ಪ್ರೇರಣೆಯನ್ನುಂಟು ಮಾಡುತ್ತ ವ್ಯವಹರಿಸುತ್ತವೆ.

ಈ ೨೫ ತತ್ವಗಳೆಲ್ಲವೂ ದೇಹಕ್ಕೆ ಸಂಬಂಧಪಟ್ಟಿರುವುದರಿಂದ ಆತ್ಮತತ್ವಗಳಾಗಿವೆ. ಇವುಗಳಿಂದ ಮನುಷ್ಯನು ಕೂಡಿಕೊಂಡು ಜಗತ್ತಿನಲ್ಲಿ ಅನೇಕ ಬಗೆಯ ಕಾರ್ಯಗಳನ್ನು ಮಾಡುತ್ತಾನೆ.

ವಿದ್ಯಾತತ್ವಗಳು.

ಈ ತತ್ವಗಳು ಒಟ್ಟು ೧೦ ಇದ್ದು ಅವುಗಳಲ್ಲಿ ಎರಡು ವರ್ಗಗಳು ಕಲ್ಪಿಸಲ್ಪಟ್ಟಿವೆ. ಅವು ಸಾದಾಖ್ಯಗಳು ಮತ್ತು ಕಲಿಗಳಿರುತ್ತವೆ. ಈ ಪ್ರತಿಯೊಂದರಲ್ಲಿ ಐದು ಐದು ತತ್ವಗಳಿರುತ್ತವೆ.

ಸಾದಾಖ್ಯಗಳುಃ— ಇವು ಕರ್ಮಸಾದಾಖ್ಯ ಕರ್ತೃಸಾದಾಖ್ಯ, ಮೂರ್ತಿಸಾದಾಖ್ಯ, ಅಮೂರ್ತಿಸಾದಾಖ್ಯ ಮತ್ತು ಶಿವಸಾದಾಖ್ಯ ಇವುಗಳು ಇರುತ್ತವೆ.

ಕಲಿಗಳುಃ— ಇವು ನಿವೃತ್ತಿಕಲೆ, ಪ್ರತಿಷ್ಠಾಕಲೆ, ವಿದ್ಯಾಕಲೆ, ಶಾಂತಿಕಲೆ, ಶಾಂತ್ಯತೀತಕಲೆ ಇವುಗಳಿರುತ್ತವೆ.

ಜಗತ್ತಿನ ರಚನೆಯ ಕಾಲದಲ್ಲಿಯೂ ಕೂಡ ಈ ತತ್ವಗಳು ಹೊಮ್ಮಿ ಪದಾರ್ಥಗಳ ಅಸ್ತಿತ್ವಕ್ಕೆ ಕಾರಣವಾಗುತ್ತವೆ ಎಂಬದನ್ನು ನಾವು ವಚನಕಾರರ ಉಕ್ತಿಗಳಿಂದಲೇ ಇಲ್ಲಿ ವಿವರಿಸುವದು ಯೋಗ್ಯವಾಗಿದ್ದು ಅವುಗಳನ್ನು ವಾಚಕರು ವಿಚಾರ ಮಾಡಿ ತಿಳಿಯಬೇಕು.

ಕರ್ಮಸಾದಾಖ್ಯಃ— ಕುಚಿತ್ತ ಮುಂದುಗೊಂಡು ಅಜ್ಞಾನ ದೆಸೆಯಿಂದ ಗುರುಭಕ್ತಿಯ ಮಾಡಿ ಗುರುಕರುಣವ ಪಡೆದು ಬಹು ಜನ್ಮದ ಪಾತಕ ಸೂತಕ ಕರ್ಮಾದಿಗಳ ಕಳೆಯಬೇಕೆಂಬವರಿಗೆ ಅಸಾಧ್ಯವಾಗಿ ಸರ್ವಸಂಗ ಪರಿತ್ಯಾಗದಿಂದ ನಿರ್ವಾಣಿಯಾಗಿ ಸಂಚಿತ ಪ್ರಾರಬ್ಧ ಆಗಾಮಿ ಎಂಬ ಕರ್ಮತ್ರಯಂಗಳನ್ನು ನಷ್ಟವ ಮಾಡಿದ ಜ್ಞಾನಕಲಾತ್ಮಗೆ ಕರ್ಮತ್ರಯವ ನೀಗಿರುವದು ಎಂಬುದೀಗ ಕರ್ಮಸಾದಾಖ್ಯವೆಂಬ ಶಬ್ದಕ್ಕರ್ಥ.

ಕರ್ತೃಸಾದಾಖ್ಯಃ— ಕುಬುದ್ಧಿ ಅತಿಯಾಸೆ ಅಜ್ಞಾನ ಮುಂದುಗೊಂಡು ಲಿಂಗಪೂಜೆಯ ಮಾಡಿ ಲಿಂಗದೊಲುಮೆಯ ಪಡೆದು ಷಣ್ಮತಂಗಳಿಗೆ ಉಪರಿಯಾಗಿರಬೇಕೆಂಬುವರಿಗೆ ಅಸಾಧ್ಯವಾಗಿ ಕಿಂಕುರ್ವಾಣ ಸತ್ಕ್ರಿಯಕ, ಸದ್ಭಕ್ತಿ, ಸದಾಚಾರ ಮುಂದುಗೊಂಡು ನಿಷ್ಪ್ರಪಂಚಿಯಾಗಿ ಚಿದಂಗ ಚಿಜ್ಞಾನಲಿಂಗದ ಪರ್ಮಾಪರ್ಮವನರಿದು ಅರ್ಚಿಸಿ ಲಿಂಗಾಂಗ ಸಂಬಂಧಿಯಾದ ಲಿಂಗನಿಷ್ಠಾಪರತ್ವದಿಂದ ಇಹಪರಂಗಳಿಗವೀರಿ ತೋರುವದೆಂಬುದೀಗ ಕರ್ತೃಸಾದಾಖ್ಯವೆಂಬುದೀಗ ಕರ್ತೃಸಾದಾಖ್ಯವೆಂಬ ಶಬ್ದಕ್ಕರ್ಥ.

ಮೂರ್ತಿಸಾದಾಖ್ಯಃ— ಅಹಂಬ್ರಹ್ಮವೆಂಬ ಅಹಂಕಾರದಿಂದ ಅಷ್ಟ ಭೋಗದ ಮದ ತಲೆಗೇರಿ ಅಜ್ಞಾನ ಮುಂದುಗೊಂಡು ದಾಸೋಹವ ಮಾಡಿ ಉಪರಿಯಾದ ಸೋಹಂ ಭಾವಿಯಾದೆನೆಂಬವರಿಗೆ ಅಸಾಧ್ಯವಾಗಿ ಇಂದು ನಾಳಿಂಗೆಂಬ ಸಂದೇಹದ ಕೀಲನು ಕಳೆದು ನಿರಹಂಕಾರಿಯಾಗಿ ಷಡಕ್ಷರತ್ರಯದಲಾಸೆಯ ಮಾಡದೆ ನಿರಾಶಿಕನಾಗಿ ತನುವು ನಷ್ಟವ ಪಡಿಸಿ ಸೋಹಂಭಾವಿಯಾಗಿರುವದು ಎಂಬುದೀಗ ಮೂರ್ತಿಸಾದಾಖ್ಯವೆಂಬ ಶಬ್ದಕ್ಕರ್ಥ.

ಅಮೂರ್ತಿಸಾದಾಖ್ಯಃ— ಭೋರೆಂಬ ನಾದವೇ ಬ್ರಹ್ಮವೆಂಬ ಕುಮತದಿಂದ ತೊಳಲುವವರಿಗೆ ಅಂತರಂಗವ ಪ್ರಸನ್ನಮೂರ್ತಿ ಪ್ರಾಣಲಿಂಗವು ಅಸಾಧ್ಯವಾಗಿ ನಿಜನೈಷ್ಠೆ ಕರಿಗೊಂಡು ಸ್ವಯಂಚರಪರವೇ ತಾನಾಗಿ ಅರಿದುದೇ ತಾನು ತನ್ನರಿವು ಶಿವತತ್ವವೆಂದು ತಿಳಿದು ಪರಮಾಮೃತ ಸ್ವರೂಪವಾಗಿ ಜ್ಯೋತಿರ್ಮಯ ಲಿಂಗದಲ್ಲಿ ಬೆರೆದಿರುವದು ಎಂಬುದೀಗ ಅಮೂರ್ತಿಸಾದಾಖ್ಯವೆಂಬುದೀಗ ಅಮೂರ್ತಿಸಾದಾಖ್ಯವೆಂಬ ಶಬ್ದಕ್ಕರ್ಥ.

ಶಿವಸಾದಾಖ್ಯಃ— ಕುಲಛಲವೆಂಬ ನಾಮರೂಪು ಕ್ರಿಯೆಗಳಿಂದ ಮತಿಗೆಟ್ಟು ಅಜ್ಞಾನಪಾಶಬದ್ಧತ್ವದಿಂದೆ ಶಿವಾಚಾರ ಮಾರ್ಗವನರಿಯದೆ ವೀರಶೈವದ ಗೊತ್ತು ತಿಳಿಯದೆ ಶಿವಭಕ್ತರೆಂದು ವಾಗ್ಜಾಲದಿಂದ ನುಡಿವ ಜಾಣರಿಗೆ ಅತ್ಯತಿಷ್ಠದ್ದಶಾಂಗುಲದಿಂದ ಸಾಧ್ಯವಾಗಿ ಶ್ರೀಗುರು ಕರುಣಿಸಿ ಕೊಟ್ಟ ಲಿಂಗಾಂಗ ವಿಚಾರವ ನಿಜ ಜಂಗಮದಿಂದೆ ಬೆಸಗೊಂಡು ಶರಣಸತಿ ಲಿಂಗಪತಿಭಾವದಿಂದೆ ನಡೆದಂತೆ ನುಡಿದು ನುಡಿದಂತೆ ನಡೆದು ಲಿಂಗಾಚಾರದಲ್ಲಿ ಎನೆಹಳಚಬೆ ಪರತತ್ವ ಜ್ಯೋತಿರ್ಮಯ ಜಂಗಮದ ಕರುಣಾಜಲ ಕೃಪಾಪ್ರಸಾದದಲ್ಲಿ ಮುಳುಗಿರುವುದು ಎಂಬುದೀಗ ಶಿವಸಾದಾಖ್ಯವೆಂಬ ಶಬ್ದಕ್ಕರ್ಥ.

ಈ ವಚನಗಳಲ್ಲಿ ೧೦ ವಿದ್ಯಾತತ್ವಗಳನ್ನು ಒಳಕೊಳ್ಳಲು ಹೇಗೆ ಆಚರಿಸಬೇಕು, ಹೀಗೆ ಆಚರಿಸಿದ್ದಾದರೆ ಅವನಲ್ಲಿ ಬೇರೆ ಬೇರೆ ಪ್ರಗತಿಗಳು ಹೇಗುಂಟಾಗುತ್ತವೆ ಎಂಬುದು ವಿಶದವಾಗಿ ವಿವರಿಸಲ್ಪಟ್ಟಿದೆ. ಈ ಪ್ರತಿಯೊಂದು ವಚನದಲ್ಲಿ ಬಹು ಅಳವಾದ ವಿಚಾರಗಳು ಅಡಕವಾಗಿವೆ. ಕರ್ಮಸಾದಾಖ್ಯದಲ್ಲಿ ಕರ್ಮಗಳು ಹೇಗೆ ದೂರೀಕರಿಸಲ್ಪಡಬೇಕೆಂಬುದು ಹೇಳಲ್ಪಟ್ಟಿದೆ. ಕರ್ತೃಸಾದಾಖ್ಯದಲ್ಲಿ ಕರ್ಮಗಳು ನಷ್ಟವಾದ ಬಳಿಕ

ಲಿಂಗನಿಷ್ಠಾಪರತ್ವದಿಂದ ಹೇಗೆ ಆಚರಿಸಬೇಕೆಂಬುದು ಹೇಳಲ್ಪಟ್ಟಿದೆ. ಮೂರ್ತಿಸಾದಾಖ್ಯ ಮತ್ತು ಅಮೂರ್ತಿಸಾದಾಖ್ಯಗಳಲ್ಲಿ ಭಕ್ತನು ಸಮ್ಪೂರ್ಣಭಾವವುಳ್ಳವನಾಗಿ ಲಿಂಗದೊಡನೆ ಹೇಗೆ ಬೆರೆಯಬೇಕೆಂಬುದು ಹೇಳಲ್ಪಟ್ಟಿದೆ. ಹೀಗೆ ಆಚರಿಸುವವನು ಅಮೂರ್ತಿ ಸಾದಾಖ್ಯವನ್ನು ಹೊಂದುತ್ತಾನೆ. ಅಮೇಲೆ ಶಿವಸಾದಾಖ್ಯವನ್ನು ಹೊಂದಲು ಅರ್ಹನಾಗುವನು. ಆಗ ಅವನು ಜ್ಯೋತಿರ್ಮಯ ಪರತತ್ವ ಪ್ರಸಾದದಲ್ಲಿ ಮುಳುಗುವನು. ಇವು ಪಂಚಸಾದಾಖ್ಯಗಳು. ಇವು ವಿದ್ಯಾತತ್ವಗಳಿಂದೆನಿಸಿಕೊಳ್ಳುತ್ತವೆ.

ಹೀಗೆ ಸಾದಾಖ್ಯಗಳನ್ನು ಒಳಕೊಂಡ ಹಾಗೆ ಅವನಲ್ಲಿ ಕ್ರಮವಾಗಿ ಪಂಚ ಕಲೆಗಳು ಅಥವಾ ಶಕ್ತಿಗಳು ಉತ್ಪನ್ನವಾಗುತ್ತವೆ. ಕರ್ಮ ಸಾದಾಖ್ಯದಲ್ಲಿ ನಿವೃತ್ತಿಕಲೆಯು, ಕರ್ತೃ ಸಾದಾಖ್ಯದಲ್ಲಿ ಪ್ರತಿಷ್ಠಾಕಲೆಯು ಮೂರ್ತಿಸಾದಾಖ್ಯದಲ್ಲಿ ವಿದ್ಯಾಕಲೆಯು, ಅಮೂರ್ತಿಸಾದಾಖ್ಯದಲ್ಲಿ ಶಾಂತಿಕಲೆಯು ಮತ್ತು ಕಡೆಯದಾದ ಶಿವಸಾದಾಖ್ಯದಲ್ಲಿ ಶಾಂತ್ಯಾತೀತ ಕಲೆಯು ಹೀಗೆ ಆಯಾ ಕಲೆಗಳು ಅನುಕ್ರಮವಾಗಿ ಉತ್ಪನ್ನವಾಗುತ್ತವೆ. ಹೀಗೆ ಇವೆಲ್ಲವುಗಳೂ ಕೂಡಿ ಹತ್ತು ವಿದ್ಯಾತತ್ವಗಳಾಗುತ್ತವೆ. ಈ ತತ್ವಗಳಮೂಲಕ ಮನುಷ್ಯನು ಉನ್ನತಸ್ಥಾನಗಳನ್ನು ಕ್ರಮೇಣ ಹೊಂದುತ್ತ ಹೋಗುತ್ತಾನೆ.

ಮೊದಲು ಅತ್ಮತತ್ವಗಳಲ್ಲಿ ಉಚ್ಚತಮವಾದ ವರ್ತನೆ, ನಡೆನುಡಿಗಳನ್ನು ಹೊಂದಿ ಶ್ರೇಷ್ಠವಾದ ಕಲೆಗಳನ್ನು ತಂದುಕೊಳ್ಳಬೇಕು. ಈ ಕಲೆಗಳು ನಿವೃತ್ತಿ, ಪ್ರತಿಷ್ಠಾ ಮೊದಲಾದವುಗಳೇ ಇರುತ್ತವೆ. ಈ ಕಲೆಗಳು ಉದಯವಾದ ಹಾಗೆ ಮನುಷ್ಯನು ಆಯಾ ಸಾದಾಖ್ಯಗಳೊಡನೆ ಕ್ರಮವಾಗಿ ಕೂಡತೊಡಗುವನು. ಈ ಸಾದಾಖ್ಯಗಳು ಯಾವ ಯಾವ ತರಗತಿಗಳಿಂದ ಉಚ್ಚ ಸ್ಥಾನಗಳನ್ನು ಹೊಂದುತ್ತ ಹೋಗುತ್ತವೆಂಬುದು ಮೇಲೆಯೇ ಹೇಳಲ್ಪಟ್ಟಿದೆ. ಹೀಗೆ ಆಯಾ ಸಾದಾಖ್ಯಗಳೊಡನೆ ಕೂಡುತ್ತ ಹೋದಹಾಗೆ ಮನುಷ್ಯನಲ್ಲಿಯ ಪಂಚಭೂತಗಳು ಬಯಲಾಗುತ್ತ ಹೋಗುತ್ತವೆ. ಹೀಗೆ ಬಯಲಾದ ಕೂಡಲೆ "ಮಹಾಘನ ಪರಾತ್ಪರವಪ್ಪ ದಿವ್ಯಲಿಂಗವು ವಾರಿಕಲ್ಲು ಕರಗಿ ನೀರಾದಂತೆ ತನ್ನ ಪರಮಾನಂದದಿಂದಲೇ ಸರ್ವಶೂನ್ಯವಾಯಿತ್ತು" ಎಂಬ ಭಾವವನ್ನು ಅನೇಕ ವಚನಕಾರರು ತಮ್ಮ ನುಡಿಗಳಲ್ಲಿ ಹೇಳಿರುತ್ತಾರೆ.

ವಚನಕಾರರಲ್ಲಿ ಅಗ್ರಸ್ಥಾನವನ್ನು ಹೊಂದಿದ ಅಲ್ಲಮಪ್ರಭುವಿನ ಅಭಿಪ್ರಾಯವು ಈ ವಿಷಯದ ಬಗ್ಗೆ ಇರುವದು ಏನಂದರೆ:—

"ಪ್ರಥಮದಲ್ಲಿ ವಸ್ತು ಏನೇನೂ ಇಲ್ಲದಂದು ಮಹಾಘನಶೂನ್ಯ ಪ್ರಭೆಯಾಗಿದ್ದಾಗ ಅಂತರ್ದ ಪರವಸ್ತು ತಾನೇ ತನ್ನ ದಿವ್ಯಾನಂದ ಸ್ವಲೀಲಾಭಾವದಿಂದಾದುದು. ಆತ್ಮತತ್ವವೆಂಬ ಅಂಗಸ್ಥಲ, ಅಂತಪ್ಪ ಜೀವಾತ್ಮನೆಂಬ ಅಂಗಸ್ಥಲಕ್ಕೆ ಸೇರಿದ ತತ್ವಂಗಳೆಪ್ಪತ್ತೈದು, ಅವಾವೆಂದಡೆ, ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು, ವಾಗಾದಿ ಕರ್ಮೇಂದ್ರಿಯಂಗಳೈದು, ಪ್ರಾಣಾದಿ ವಾಯುಗಳೈದು, ಶಬ್ದಾದಿ ವಿಷಯಂಗಳೈದು, ಮನ ಬುದ್ಧಿ ಚಿತ್ತಹಂಕಾರ ಜೀವಂಗಳೈದು ತನ್ನೊಳಗೆ ಸಾಮರಸ್ಯೈಕ್ಯವನೈದ ಶ್ರೋಸ್ಯರ ಭಕ್ತಿತದರ್ಥವಾಗಿ ಮಹಾಘನ ಪರಾತ್ಪರವಪ್ಪ ದಿವ್ಯಲಿಂಗವು ಹನ್ನೊಂದು ತತ್ವವಾಯಿತ್ತು. ಹನ್ನೊಂದು ತತ್ವವಾದ ಪರಿಕ್ರಮವೆಂತೆಂದೊಡೆ, ಶಾಂತ್ಯಾದಿ ಶಕ್ತಿಗಳೈದು ಶಿವಾದಿಕರ್ತೃಗಳೈದು ಪರಶಿವತತ್ವವೊಂದು ಇಂತೀ ಅಂಗತತ್ವ ಇಪ್ಪತ್ತೈದು, ಲಿಂಗತತ್ವ ಹನ್ನೊಂದು, ಅಂಗತತ್ವ ಲಿಂಗತತ್ವವೆಂಬ ಉಭಯತತ್ವ ಮೂವತ್ತಾರು, ಇಂತಪ್ಪ ಸಾಮರಸ್ಯದ ಐಕ್ಯವೆಂತುಟಯ್ಯ ಎಂದೊಡೆ ನಿವೃತ್ತಿಶಕ್ತಿಯನೈದಿ ವಾಗಾದಿ ಕರ್ಮೇಂದ್ರಿಯಗಳೈದು ಕರ್ಮಸಾದಾಖ್ಯವನೊಡಗೂಡಿದಲ್ಲಿ ಪೃಥ್ವೀತತ್ವ ಬಯಲಾಯಿತ್ತು. ಪ್ರತಿಷ್ಠಾಶಕ್ತಿಯನೈದಿ ಶಬ್ದ ವಿಷಯಗಳೈದು ಕರ್ತೃ ಸಾದಾಖ್ಯವನೊಡಗೂಡಿದಲ್ಲಿ ಅಪ್ಪು ತತ್ವ ಬಯಲಾಯಿತ್ತು. ವಿದ್ಯಾಶಕ್ತಿಯನೈದಿ ಶ್ರೋತ್ರಾದಿ ಜ್ಞಾನೇಂದ್ರಿಯಗಳೈದು ಮೂರ್ತಿಸಾದಾಖ್ಯವನೊಡಗೂಡಿದಲ್ಲಿ ತೇಜತತ್ವ ಬಯಲಾಯಿತ್ತು. ಶಾಂತಿಶಕ್ತಿಯನೈದಿ ಪ್ರಾಣಾದಿ ವಾಯುಗಳೈದು ಅಮೂರ್ತಿ ಸಾದಾಖ್ಯವನೊಡಗೂಡಿದಲ್ಲಿ ವಾಯುತತ್ವ ಬಯಲಾಯಿತ್ತು. ಶಾಂತ್ಯಾತೀತ ಶಕ್ತಿಯನೈದಿ ಮನ ಬುದ್ಧಿ ಚಿತ್ತಹಂಕಾರ ಜೀವಂಗಳೈದು ಶಿವಸಾದಾಖ್ಯವನೊಡಗೂಡಿದಲ್ಲಿ ಆಕಾಶತತ್ವ ಬಯಲಾಯಿತ್ತು. ಇಂತೀ ಪಂಚವಿಂಶತಿ ತತ್ವಂಗಳು ಲಿಂಗೈಕ್ಯವಾಗಲೊಡನೆ ಆ ಲಿಂಗತತ್ವ ಹನ್ನೊಂದು ತಾವು ಒಂದೊಂದನೊಡಗೂಡಿ ಏಕಾರ್ಥವಾದಲ್ಲಿ ಕುಳಸ್ಥಳವಡಗಿತು. ಇಂತೀ ಕುಳಸ್ಥಳವಡಗಲೊಡನೆ ಮಹಾಘನ ಪರಾತ್ಪರವಪ್ಪ ದಿವ್ಯಲಿಂಗವು ವಾರಿಕಲ್ಲು ಕರಗಿ ನೀರಾದಂತೆ ತನ್ನ ಪರಮಾನಂದದಿಂದಲೇ ಸರ್ವಶೂನ್ಯವಾಯಿತ್ತು. ಇಂತೀ ಅಂಗತತ್ವ ಇಪ್ಪತ್ತೈದು ಲಿಂಗತತ್ವ ಹನ್ನೊಂದು

ಇಂತೀ ಉಭಯತತ್ವ ಮೂವತ್ತಾರು ಏಕಾರ್ಥವಾಗಿ ಸರ್ವಶೂನ್ಯವಸ್ತುವಿದಿ ಪರಿಕ್ರಮದ ನಿರ್ಣಯದ ಬೆಡಗು ತತ್ವಮಸ್ಯಾದಿ ವಾಕ್ಯಾರ್ಥಂಗಳಲ್ಲಿ ಕಾಣಲಾಯಿತ್ತು. ತತ್ ಪದವೇ ಲಿಂಗ ತ್ವಂ ಪದವೇ ಅಂಗ ಈ ಎರಡರ ಐಕ್ಯವೇ ಅಸಿ ಪದವೆಂದುದಾಗಿ ಇಂತು ಸಕಲವಾಗಬಲ್ಲಿ, ನಿಃಕಲವಾಗಬಲ್ಲ, ಸಕಲನಿಃಕಲಾತೀತನಾಗಿ ಏನೂ ಇಲ್ಲದ ಮಹಾ ಘನ ಶೂನ್ಯಬ್ರಹ್ಮವಾಗಿರಬಲ್ಲನಯ್ಯ ನಮ್ಮ ಗುಹೇಶ್ವರಲಿಂಗವು"

ಈ ಪ್ರಕಾರ ಅಲ್ಲಮಪ್ರಭು ೩೬ ತತ್ವಗಳಾವವು, ಅವುಗಳ ಕಾರ್ಯಗಳೇನು, ಅವುಗಳ ಕೂಡುವಿಕೆಯು ಹೇಗಾಗುತ್ತದೆ ಎಂಬದನ್ನು ಬಹು ವಿಶದವಾಗಿ ವಿವರಿಸಿದ್ದಾನೆ.

ಈ ಪ್ರಕಾರ ವಚನಕಾರರು ೩೬ ತತ್ವಗಳನ್ನು ಷಟ್‌ಸ್ಥಲಕ್ಕೆ ಸಂಬಂಧಿಸಿ ಅವುಗಳಮೂಲಕ ಲಿಂಗಾಂಗ ಸಾಮರಸ್ಯವನ್ನು ಹೇಗೆ ಹೊಂದಬೇಕೆಂಬುದನ್ನು ವಿವರಿಸಿದ್ದಾರೆ. ವಚನಕಾರರಿಗೂ ಆಗಮವಾದಿಗಳಿಗೂ ಇವರಲ್ಲಿ ಕೆಲವು ಮತಾಂತರಗಳಿರುವದು ಕಂಡುಬರುತ್ತದೆ. ಇವುಗಳನ್ನು ತಿಳಿಯುವದು ಬಹು ಬೋಧಪ್ರದವಾಗಿದೆ. ಇದರಿಂದ ವಚನಕಾರರು ಆಗಮ ಮಾರ್ಗದಲ್ಲಿ ಹೇಗೆ ಬದಲಾವಣೆಮಾಡಿ ತಮ್ಮ ಮತವನ್ನು ಪ್ರಸ್ಥಾಪಿಸಿದ್ದಾರೆಂಬುದು ವ್ಯಕ್ತವಾಗುತ್ತದೆ. ಈ ವಿಷಯವನ್ನು ನಾವು ಕ್ರಮಶಃ ವಿವರಿಸುತ್ತ ಹೋಗುವೆವು.

ಬಸವೇಶ್ವರನ ಘನತೆ.

(ಲೇಖಕಃ— ಎಸ್. ಜಿ. ಹಂಜಿ, ಬಿ. ಎ. ಬೆಳಗಾವ.)

ಬಸವೇಶ್ವರನು ಜಗತ್ತಿನ ಮಹಾಪುರುಷರಲ್ಲಿ ಒಬ್ಬನೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ. ಇವನು ಗತಿಸಿಹೋಗಿ ಸುಮಾರು ೮೦೦ ವರ್ಷಗಳಾದರೂ ಸಹ ಇವನ ಹೆಸರು ಅಚ್ಚಳಿಯದೆ ಸ್ಪಷ್ಟವಾಗಿದ್ದದ್ದನ್ನು ನೋಡಿದರೆ ಇವನು ಮಾಡಿದಂಥ ಕಾರ್ಯಗಳು ಸಾಮಾನ್ಯವಲ್ಲವೆಂದು ಹೇಳಬಹುದು. ಇವನು ಇದ್ದ ಕಾಲವು ಇವನ ಕೀರ್ತಿಯನ್ನು ಎಲ್ಲ ಕಡೆಗೂ ಹಬ್ಬಿಸಲಿಕ್ಕೆ ಅನಾನುಕೂಲವಾಗಿತ್ತು. ಆದರೂ ಕೂಡ ಕಲ್ಯಾಣದಲ್ಲಿಯೇ ನಿಂತು ಸುತ್ತಮುತ್ತಿನ ಎಲ್ಲ ನಾಡುಗಳಿಂದ ಜನರನ್ನು ಆಪತರಲ್ಲಿ ಮುಖ್ಯವಾಗಿ ಅಲ್ಲಮಪ್ರಭು, ಸಿದ್ಧರಾಮೇಶ್ವರ, ಮಹಾದೇವಿಯಕ್ಕ ಮೊದಲಾದ ಸುಪ್ರಸಿದ್ಧ ವ್ಯಕ್ತಿಗಳನ್ನು ತನ್ನ ಭಕ್ತಿಯ ಪ್ರಭಾವದ ಮೂಲಕ ಎಳೆದುಕೊಂಡು ಅನೇಕ ಕಾರ್ಯಗಳನ್ನು ನೆರವೇರಿಸಿದನು. ನಮ್ಮ ಜನರ ಅಜ್ಞಾನದ ಇಲ್ಲವೆ ಐತಿಹಾಸಿಕ ಶೋಧದ ಅಭಾವದ ಮೂಲಕ ಬಸವೇಶ್ವರನ ನಿಜವಾದ ಚರಿತ್ರವು ನಮಗೂ ಕೂಡ ಗೊತ್ತಿಲ್ಲದೆ ಇರುವದು ನಮ್ಮ ದುರ್ದೈವವೇ ಸರಿ. ಆದರೂ ಇತ್ತಿತ್ತಲಾಗಿ ಐತಿಹಾಸಿಕ ಶೋಧವು ಭರದಿಂದ ನಡೆದದ್ದರಿಂದ ಬಸವೇಶ್ವರನ ಚರಿತ್ರದ ಸಂಬಂಧ ಗ್ರಂಥಗಳು, ಪುರಾಣಗಳು, ವಚನಗಳು, ಶಿಲಾಶಾಸನಗಳು, ತಾಡವಾಲೆಯ ಪತ್ರಗಳು ಮತ್ತು ಕೈಬರಹದ ಪತ್ರಿಕೆಗಳು ಸೊತಿತು ಅವನ ಬಗ್ಗೆ ಇದ್ದ ಅಜ್ಞಾನವು ಏನೋ ಸ್ವಲ್ಪ ದೂರವಾಗುತ್ತಲಿದೆ. ಅವನ ವಿಷಯವಾಗಿ ಪಕ್ಷಪಾತವಿಲ್ಲದೆ ವಿಮರ್ಶಕ ಬುದ್ಧಿಯಿಂದ ಬರೆದ ಕೆಲವು ಗ್ರಂಥಗಳು ಅವನ ಘನತೆಯನ್ನು ಸ್ಪಷ್ಟವಾಗಿ ತೋರಿಸುತ್ತವೆ.

ಬಸವೇಶ್ವರನು ಚಿಕ್ಕಂದಿನಿಂದಲೇ ಧರ್ಮದ ನಿಜವಾದ ತತ್ವಗಳನ್ನು ಜನ್ಮಾಗಿ ಅಭ್ಯಾಸ ಮಾಡಿ ಸರ್ವರಿಗೂ ಅನ್ವಯಿಸುವ ವೀರಶೈವ ಮತವನ್ನು ಪುನರುಜ್ಜೀವನಗೊಳಿಸಿದನು. ಧರ್ಮದ ಅವನ ಕಲ್ಪನೆಯು ಎಷ್ಟು ಉದಾತ್ತನಾಗಿತ್ತೆಂದು ಕೆಳಗಿನ ವಚನದಿಂದ ಕಂಡುಬರುವದು.

"ದಯವಿಲ್ಲದ ಧರ್ಮವದಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ!" ... ಉಳಿದ ಮತಗಳಲ್ಲಿಯ ಹಿಂಸೆ ಮೊದಲಾದ ಉಪಯೋಗವಿಲ್ಲದ ಅಂಶಗಳನ್ನು ಬಿಟ್ಟು ಉಪಯುಕ್ತವಾದ ಹೊಸತತ್ವಗಳನ್ನು ಸೇರಿಸಿ ಸರ್ವಸಂಗ್ರಾಹ್ಯವಾದ ಈ ಮತವನ್ನು ಪ್ರಚಾರಗೊಳಿಸಿದನು. "ಸರ್ವಂ ಶಿವಮಯಂ ಜಗತ್" ಎಂದು ಸಾರಿ ಲಿಂಗದೀಕ್ಷೆಯಾದ ಕೂಡಲೆ ಹಿಂದಿನ ಕರ್ಮಗಳು ಅಳಿಯುವವೆಂದು ಉಪದೇಶ ಮಾಡಿದನು. ಉಳಿದ ಮತಗಳು ಈ ಜನ್ಮದಲ್ಲಿಯ ಸುಖದುಃಖಗಳು ಪೂರ್ವಜನ್ಮದ ಕರ್ಮಗಳ ಫಲಗಳು ಎಂದು ಹೇಳಿದ್ದವು. ಅವು ಮುಗಿಯುವ ವರೆಗೆ ಮೋಕ್ಷ ಸಿಗುವದಿಲ್ಲೆಂದು ಸಾರಿದ್ದವು. ಆದರೆ ಬಸವೇಶ್ವರನು ಆಚಾರಕ್ಕೆ ಮಹತ್ವ ಕೊಟ್ಟು ಬೇಕಾದ ಮನುಷ್ಯನು ಸದಾಚಾರದಿಂದ ಈ ಲೋಕದಲ್ಲಿ ವರ್ತಿಸಿದರೆ ಅವನಿಗೆ ನಿಜವಾಗಿಯೂ ಮೋಕ್ಷವಾಗುವದೆಂದು ತಿಳಿಸಿ ಕೊಟ್ಟನು.

"ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ."
"ಪುಣ್ಯ ಪಾಪಗಳೆಂಬವು ತಮ್ಮ ಇಷ್ಟವು ಕಂಡಿರಯ್ಯ"
"ಆಚಾರವೇ ಸ್ವರ್ಗ ಅನಾಚಾರವೇ ನರಕ."

ಇವನ ಈ ನುಡಿಗಳಿಂದ ಸ್ವರ್ಗ ನರಕಗಳ ಕಲ್ಪನೆಯೂ ಸ್ವರ್ಗವನ್ನು ಪಡೆಯಲಿಕ್ಕೆ ನರಕವನ್ನು ತಪ್ಪಿಸಲಿಕ್ಕೆ ನಾವು ಪುಣ್ಯ ಮಾಡಬೇಕು, ಪಾಪವನ್ನು ಮಾಡಬಾರದು ಎಂಬ ವಿಚಾರವೂ ಮತ್ತು ಇವು ಪ್ರತಿಯೊಬ್ಬನ ಕೈಯಲ್ಲಿವೆ ಎಂಬ ನೂತನ ಮಾತೂ ಕಂಡುಬರುತ್ತವ. ಇವನು ಹಿಂದಿನ ವರ್ಣಾಶ್ರಮಗಳ ಪದ್ಧತಿಯನ್ನು ತೆಗೆದುಹಾಕಿ ಎಲ್ಲರೂ ಲಿಂಗದೀಕ್ಷೆಯಾಗಲಿಕ್ಕೆ ಯೋಗ್ಯರು ಮತ್ತು ಅವರೆಲ್ಲರು ಸಮಾನರು ಎಂಬ ಭಾವನೆಯನ್ನುಂಟು ಮಾಡಿದನು. ಇದರಿಂದ ಶೂದ್ರರಿಗೆ ಮತ್ತು ಉಳಿದ ಕೀಳು ಕುಲದವರಿಗೆ ಸಮಾಜದಲ್ಲಿ ಒಂದು ಉಚ್ಚ ಸ್ಥಾನವನ್ನು ಕಲ್ಪಿಸಿದನು. ಬಸವೇಶ್ವರನು ವೀರಶೈವ ಮತವನ್ನು ಪ್ರಸಾರಗೊಳಿಸುತ್ತ ಅದರ ಕೂಡ ಮತ್ತೊಂದು ಅದ್ಭುತ ಕಾರ್ಯವನ್ನು ನೆರವೇರಿಸಿದನು. ಅದೇ ಔದ್ಯೋಗಿಕ ಕ್ರಾಂತಿಯು. (*Industrial Revolution*). ಪ್ರತಿಯೊಬ್ಬ ವೀರಶೈವನು ಸ್ವಾವಲಂಬಿಯಾಗಿ ಒಂದು ಸ್ವಂತ ಉದ್ಯೋಗವನ್ನು ಮಾಡಿಯೇ ಉಪಜೀವಿಸಬೇಕೆಂದು ಕಟ್ಟುಮಾಡಿದನು. ಮತ್ತು

ಅವಕ್ಕೆ ಧಾರ್ಮಿಕ ಸ್ವರೂಪವನ್ನು ಕೊಟ್ಟು "ಕಾಯಕವೇ ಕೈಲಾಸ" ಎಂದರೆ ಸ್ವಂತ ಉದ್ಯೋಗದಿಂದಲೇ ಮೋಕ್ಷವೆಂದು ಹೇಳಿದ್ದರಿಂದ ಎಲ್ಲರೂ ಸ್ವಂತ ಉದ್ಯೋಗಗಳನ್ನು ಮಾಡಹತ್ತಿದರು. ಈ ಉದ್ಯೋಗಗಳು ಮೊದಲು ಇದ್ದಿಲ್ಲವೆಂತಲ್ಲ. ಆದರೆ ಅವುಗಳಿಗೆ ಹೊಸ ಅರ್ಥ ಕೊಟ್ಟು ಅವುಗಳ ಮಹತ್ವವನ್ನು ತಿಳಿಸಿಕೊಟ್ಟದ್ದರಿಂದ ಮೊದಲು 'ಕೀಳು' ಎಂದು ತಿಳಿದು ಬಿಟ್ಟ ಉದ್ಯೋಗಗಳನ್ನು ಈಗ ಭರದಿಂದ ಮಾಡಹತ್ತಿದರು. ಇದರಿಂದ ವೀರಶೈವರಲ್ಲಿ ಎಲ್ಲ ತರದ ಉದ್ಯೋಗಗಳು ಬಂದು ಅನ್ಯಮತದವರಿಗೆ ಬಾಯಿ ತೆರೆಯದಂತಾಗಿ ವೀರಶೈವ ಸಮಾಜವು ಸರ್ವಾಂಗ ಪರಿಪೂರ್ಣವಾಯಿತು.

ಬಸವೇಶ್ವರನು ಎಲ್ಲರಿಗೂ ಲಿಂಗದೀಕ್ಷೆಯನ್ನು ಕೊಟ್ಟು ವೀರಶೈವ ಮತವನ್ನು ಪ್ರಚಾರ ಮಾಡುವಾಗ ಇನ್ನೊಂದು ಅಪೂರ್ವವಾದ ಸಾಹಸದ ಕಾರ್ಯವನ್ನು ಮಾಡಿದನು. ಬಹುಕಾಲ ಪರಂಪರೆಯಿಂದ ನಡೆದು ಬಂದ ಅಸಹ್ಯವಾದ ಪದ್ಧತಿಯನ್ನು ತೆಗೆದುಹಾಕಿದನು. ಒಮ್ಮೆ ಲಿಂಗದೀಕ್ಷೆಯಾದ ಕೂಡಲೆ ಹೊಲೆಯನೂ ಕೂಡ ಉಳಿದವರ ಸಮಾನನು ಎಂದು ಹೇಳಿ ಅಸ್ಪೃಶ್ಯನಿವಾರಣೆಯನ್ನು ಮಾಡಿದನು. ಅವರಿಗೆ ಮೊದಲು ಸಮಾಜದಲ್ಲಿ ಸ್ಥಾನವಿರಲಿಲ್ಲ. ಇಷ್ಟೇ ಅಲ್ಲ, ಅವರು ಊರ ಹೊರಗೆ ಹೊಲಸು ಸ್ಥಳದಲ್ಲಿದ್ದು ಹೇಳಿದ ಕೆಲಸಗಳನ್ನು ಮಾಡಿ, ಉಳಿದವರು ಉಪಯೋಗಿಸುವ ನೀರನ್ನು ಕೂಡ ಮುಟ್ಟದೆ ಬಹಳ ಹೀನಾವಸ್ಥೆಯಲ್ಲಿದ್ದರು. ಇವರನ್ನು ಬಸವೇಶ್ವರನು ಉದ್ಧಾರ ಮಾಡಿದನಲ್ಲದೆ ಹರಳಯ್ಯನೆಂಬ ಮೊಚ್ಚಿಗಾರನ ಮಗನಿಗೆ ಮಧುವಯ್ಯನೆಂಬ ಬ್ರಾಹ್ಮಣನ ಮಗಳನ್ನು ಮದುವೆ ಮಾಡಿ ಮಿಶ್ರವಿವಾಹವನ್ನು ಪ್ರಚಾರದಲ್ಲಿ ತಂದು ಒಳ್ಳೇ ಸಾಹಸದ ಕೃತ್ಯವನ್ನು ಮಾಡಿದನು. ಇದರಿಂದ ಅವನಿಗೆ ಅನೇಕರು ವಿರೋಧಿಗಳಾದರು. ಆದರೂ ವಿಶಾಲ ಹೃದಯವುಳ್ಳ ಬಸವೇಶ್ವರನು

"ಕೊಲ್ಲುವನೇ ಮಾದಿಗ. ಹೊಲಸು ತಿಂಬುವನೇ ಹೊಲೆಯ. ಕುಲವೇನೋ, ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು"

ಎಂದು ಹೇಳಿ ಅಸ್ಪೃಶ್ಯರ ಉದ್ಧಾರವನ್ನು ಆಗಲೇ ಮಾಡಿದನು.

ಇನ್ನು ಬಸವೇಶ್ವರನು ಸ್ತ್ರೀಯರ ಉನ್ನತಿಗಾಗಿ ಏನು ಮಾಡಿದನೆಂದು ನೋಡೋಣ. ನಿಜವಾಗಿ ಇವನಲ್ಲಿ ಅವರ ಬಗ್ಗೆ ಬಹಳ ಉಚ್ಚ ವಿಚಾರಗಳಿದ್ದವು. ಪುರುಷನೇ ದೊಡ್ಡವನು, ಅವನೇ ದೀಕ್ಷೆಯೋಗ್ಯನು, ಅವನ ಮುಖಾಂತರವೇ ಸ್ತ್ರೀಯಳು ಮೋಕ್ಷವನ್ನು ಪಡೆಯಬೇಕು ಎಂಬ ಕೀಳು ವಿಚಾರಗಳನ್ನು ತೆಗೆದುಹಾಕಿ ಸ್ತ್ರೀಯರು ಪುರುಷರ ಸಮಾನರು, ಅವರೂ ದೀಕ್ಷೆಗೆ ಯೋಗ್ಯರು, ಮತ್ತು ಮೋಕ್ಷವನ್ನೂ ಮತ್ತು ತಮ್ಮ ಪತಿಗಳ ಸದ್ಗತಿಯನ್ನೂ ಪಡೆಯಲು ಸಮರ್ಥರು ಎಂದು ಹೇಳಿ ಅವರ ಉನ್ನತಿಗೆ ಪ್ರೋತ್ಸಾಹನ ಕೊಟ್ಟನು. ಗಂಡಹೆಂಡರಿಬ್ಬರೂ ಒಬ್ಬರಿಗೊಬ್ಬರು ಸಹಾಯಕರಾಗಿ ಸದ್ಗತಿಯನ್ನು ಪಡೆಯಬೇಕೆಂದು ಬೋಧಿಸಿದನು.

ಕೊನೆಗೆ ಬಸವೇಶ್ವರನು ಕನ್ನಡ ಸಾಹಿತ್ಯಸೇವೆಯನ್ನು ಮಾಡಿದ್ದಾನೆಂದು ಹೇಳಿದರೆ ನಮ್ಮ ಆಧುನಿಕ ಸಾಹಿತಿಗಳು ಬೆರಗಾಗಬಹುದು. ಅವನು ಸಾಹಿತ್ಯಸೇವೆಯನ್ನು ಮಾಡಬೇಕೆಂದು ಹೊರಟವನಲ್ಲ. ಆದರೆ ಉಳಿದ ಅವನ ಕಾರ್ಯಗಳೊಡನೆ ಸಾಹಿತ್ಯಸೇವೆಯು ಸಹಜವಾಗಿಯೇ ಆಗಿಹೋಯಿತು. ಅವನು ವೀರಶೈವ ಮತದ ತತ್ವಗಳನ್ನು ಪ್ರಚಾರ ಮಾಡುವಾಗ ಅವನ ಮುಂದೆ ಸಂಸ್ಕೃತ ಬಲ್ಲ ಪಂಡಿತರಿದ್ದರೂ ಸಾಮಾನ್ಯ ಜನರು ಕೂಡ ಅಸಂಖ್ಯಾತರಾಗಿದ್ದರು. ಇಂಥವರಿಗೆ ಸಂಸ್ಕೃತದಲ್ಲಿ ಹೇಳಿದರೆ ಏನು ತಿಳಿಯಬೇಕು? ಆದುದರಿಂದ ಅವರ ಸಾಮಾನ್ಯ ಭಾಷೆಯಾದ ಕನ್ನಡದಲ್ಲಿ ಸುಲಭವಾದ ಶಬ್ದಗಳನ್ನು ಉಪಯೋಗಿಸಿ ಸಹಜವಾಗಿ ತಿಳಿಯುವ ಸರಳವಾದ ಶೈಲಿಯಿಂದ ತನ್ನ ವಿಚಾರಗಳನ್ನು ತಿಳಿಸಿದನು. ದೊಡ್ಡ ದೊಡ್ಡ ತತ್ವಜ್ಞಾನದ ವಿಚಾರಗಳನ್ನು ಕೂಡ ತಿಳಿಗನ್ನಡದಲ್ಲಿ ಸಾಮಾನ್ಯ ಜನರಿಗೂ ಸಹ ತಿಳಿಯುವಂತೆ ಹೇಳಿದನು. ಬಸವೇಶ್ವರನ ಹೃದಯವು ಕೋಮಲವಾಗಿದ್ದು ಜನಸೇವೆಗಾಗಿ ಅವನಲ್ಲಿ ಭಕ್ತಿ ಪ್ರೇರಿತವಾದ ಒಂದು ತರದ ಸ್ಫೂರ್ತಿಯುಂಟಾಗಿ ಅಂತಃಕರಣಪೂರ್ವಕವಾಗಿ ಅವನಿಂದ ಕೆಲವು ನುಡಿಗಳು ಹೊರಟವು. ಈ ನುಡಿಗಳೇ ವಚನಗಳು. ಇವು ಸಹಜವಾಗಿ ಅವನ ಹೃದಯದಿಂದ ಹೊರಹೊಮ್ಮಿದವಾದುದರಿಂದ ಇವುಗಳನ್ನು ಶುದ್ಧ ಸಾಹಿತ್ಯದಲ್ಲಿ ಸೇರಿಸಲಿಕ್ಕೆ ಯಾವ ಅಡ್ಡಿಯೂ ಇಲ್ಲ. ಬಸವೇಶ್ವರನೂ ಮತ್ತು ಶಿವಾನುಭವ ಮಂಟಪದಲ್ಲಿದ್ದ ಚನ್ನಬಸವೇಶ್ವರ, ಅಲ್ಲಮಪ್ರಭು, ಸಿದ್ಧರಾಮೇಶ್ವರ, ಮಹಾದೇವಿಯಕ್ಕ ಮೊದಲಾದವರೆಲ್ಲರೂ ಸಹ ಇಂಥ ವಚನಗಳನ್ನು ರಚಿಸಿದ್ದಾರೆ. ಈ ವಚನಕಾರರು ಮತ್ತು ಅವರ ವಚನಗಳ ಸಂಖ್ಯೆಯು ಬಹಳವಿದ್ದು ಅವುಗಳ ಬಗ್ಗೆ ಶೋಧವು ಇನ್ನೂ ನಡೆದಿದೆ. ಈ ವಚನಗಳು ಬಿಡಿಬಿಡಿಯಾದ ಶಬ್ದಗಳಿಂದ ಕೂಡಿ ಸಣ್ಣ ಸಣ್ಣ ವಾಕ್ಯಗಳಾಗಿ ಕನ್ನಡ ಗದ್ಯದ ಬೆಳವಣಿಗೆಗೆ ತಳಹದಿಯಾಗಿದೆ. ಮುಂದೆ ಈ ವಚನಗಳ ಮೇಲೆ ಟೀಕೆಗಳನ್ನು ಬರೆಯಹತ್ತಿದ್ದರಿಂದ ಕನ್ನಡದಲ್ಲಿ ಗದ್ಯ ಲೇಖನವು ಹೆಚ್ಚಾಯಿತು. ಈ ವಚನಗಳು ಗದ್ಯದಲ್ಲಿದ್ದರೂ ಕಾವ್ಯಾಂಶಗಳಿಂದ ಕೂಡಿದ್ದರಿಂದ ಕಾವ್ಯಮಯವಾದ ಗದ್ಯ *(Poetic Prose)* ದಲ್ಲಿ ಇರುತ್ತವೆ. ಇವುಗಳನ್ನು ಓದುವಾಗ ಕಾವ್ಯದಲ್ಲಿರುವ ಶಬ್ದಸಾಧುರ್ಯವು *(music)* ಹೊರಡುತ್ತದೆ. ಇಷ್ಟೆಲ್ಲ ಕಾರಣಗಳಿಂದ ಕನ್ನಡ ಸಾಹಿತ್ಯದಲ್ಲಿ ವಚನಗಳಿಗೆ ಒಂದು ವಿಶಿಷ್ಟವಾದ ಮಹತ್ವದ ಸ್ಥಾನವು ಉಂಟಾಗಿದೆ.

ಒಟ್ಟಿನ ಮೇಲೆ ಬಸವೇಶ್ವರನು ತನ್ನ ಅಲ್ಪ ಅವಧಿಯಲ್ಲಿ ಯಾವ ಅಲೌಕಿಕ ಪುರುಷನೂ ಮಾಡದ ಕಾರ್ಯಗಳನ್ನು ನೆರವೇರಿಸಿದನು. ಉಚ್ಚನೀಚ ಕುಲಗಳೆಂಬ ಭೇದಭಾವವಿಲ್ಲದೆ ಎಲ್ಲರಿಗೂ ಲಿಂಗದೀಕ್ಷೆಯನ್ನು ಕೊಟ್ಟು ಡಂಭಾಚಾರಗಳನ್ನು ಕಡಿಮೆಮಾಡಿ ಆಚಾರಕ್ಕೆ ಹೆಚ್ಚು ಮಹತ್ವಕೊಟ್ಟನು. ಅದರೊಂದಿಗೆ ಪ್ರತಿಯೊಬ್ಬ ವೀರಶೈವನು ಒಂದು ಸ್ವಂತ ಉದ್ಯೋಗವನ್ನು ಮಾಡಿಯೇ ಜೀವಿಸಬೇಕೆಂದು ತಿಳಿಸಿಕೊಟ್ಟು ಆರ್ಥಿಕ ಸ್ಥಿತಿಯನ್ನು ಸುಧಾರಿಸಿದನು. ಉಳಿದ ಯಾವ ಮತದವರೂ ಅಸ್ಪೃಶ್ಯರಿಗೆ ಸಮಾಜದಲ್ಲಿ ಸ್ಥಾನ ಕೊಟ್ಟಿದ್ದಿಲ್ಲ. ಆದರೆ ಬಸವೇಶ್ವರನು ಯಾತರದ ಭೇದವನ್ನೇ ತೆಗೆದುಹಾಕಿ ಎಲ್ಲರೂ ಸಮಾನರು; ಶಿವಭಕ್ತರು ಎಂದು ಹೇಳಿದನು. ಸ್ತ್ರೀಯರಿಗೂ ಪುರುಷರ ಸಮಾನ ಹಕ್ಕುಗಳನ್ನು ಒದಗಿಸಿಕೊಟ್ಟು ಅವರ ನಿಜವಾದ ಮಹತ್ವವನ್ನು ತಿಳಿಸಿಕೊಟ್ಟನು. ಈ ಎಲ್ಲ ಸುಧಾರಣೆಗಳಿಂದ ಸಮಾಜದಲ್ಲಿ ಸ್ವಾತಂತ್ರ್ಯ, ಸಮಾನತ್ವ, ಭ್ರಾತೃತ್ವ *(Liberty, Equality, Fraternity)* ಗಳು ಉಂಟಾದವು. ಇವನು ವೀರಶೈವ ಮತಕ್ಕೆ ಮಹತ್ವಕೊಟ್ಟ ಮುಖ್ಯ ಕಾರಣವೇನೆಂದರೆ ಇದರಲ್ಲಿ ಇಡೀ ಮಾನವ ಧರ್ಮಕ್ಕೆ ಅನ್ವಯಿಸುವ ಉಚ್ಚ ವಿಚಾರಗಳಿರುತ್ತವೆ. ಧರ್ಮಸುಧಾರಕರಲ್ಲಿ ಇದಕ್ಕೂ ಹೆಚ್ಚಿಗೆ ಹೇಳಲು ಬೇಕು? ಇವನು ಅನ್ಯಮತದವರನ್ನು ಹಳಿದಿಲ್ಲ, ನಿಂದಿಸಿಲ್ಲ.

ಮತ್ತು ಇವನು ಈ ಜಗತ್ತು ಇರುವ ವರೆಗೂ ನೆನಪಿರುವಂತೆ ಮಾಡಿದ ಕಾರ್ಯವೆಂದರೆ ಕನ್ನಡ ಸಾಹಿತ್ಯಸೇವೆಯು.

ನಾವು ಯಾರಿಗಾದರೂ ಉಚ್ಚಸ್ಥಾನವನ್ನು ಕೊಡಬೇಕಾದರೆ ಅವರನ್ನು ವಿಶಾಲವಾದ ಹೃದಯದಿಂದ ಕಂಡು, ವಿಶಾಲವಾದ ದೃಷ್ಟಿಯಿಂದ ನೋಡಿ, ನಿಷ್ಪಕ್ಷಪಾತ ಮತ್ತು ವಿಮರ್ಶಕ ಬುದ್ಧಿಯಿಂದ ಅವರ ಗುಣ ದೋಷಗಳನ್ನು ಚೆನ್ನಾಗಿ ವಿಚಾರಮಾಡಬೇಕಾಗುವದು. ಕೆಲವರು ಇವನನ್ನು ಭಗವಾನ್ ಬುದ್ಧ, ಮಹಾತ್ಮಾ ಗಾಂಧಿ ಮೊದಲಾದ ಮಹಾ ಪುರುಷರೊಡನೆ ಹೋಲಿಸುವರು. ಆದರೆ "*Comparisons are always odious*" ಅಂದರೆ ಹೋಲಿಸಿ ನೋಡುವದು 'ಯಾವಾಗಲೂ ತಿರಸ್ಕರಣೀಯವು' ಎಂಬದನ್ನು ನೆನಪಿನಲ್ಲಿಟ್ಟು ಬಸವೇಶ್ವರನು ಸಾಮಾನ್ಯರಲ್ಲಿಯು ಅಸಾಮಾನ್ಯನು; ಲೌಕಿಕರಲ್ಲಿ ಅಲೌಕಿಕನು; ಜಗತ್ತಿನ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನವುಳ್ಳವನು ಎಂದು ಹೇಳಿದರೆ ಸಾಕು. ಮತ್ತು ಕೆಳಗಿನ ವಚನದಿಂದ ಅತನಲ್ಲಿ ಎಳ್ಳಷ್ಟು ಆತ್ಮಸ್ತುತಿಯು ವಿಚಾರವಿಲ್ಲೆಂದು ತಿಳಿಯುವದು.

"ಎನಗಿಂತ ಕಿರಿಯರಿಲ್ಲ. ಶಿವಭಕ್ತರಿಗಿಂತ ಹಿರಿಯರಿಲ್ಲ.
ಎನ್ನ ಮನ ಸಾಕ್ಷಿ. ನಿಮ್ಮ ಪಾದ ಸಾಕ್ಷಿ. ಕೂಡಲಸಂಗಮದೇವಾ
ಎನಗಿದೇ ದಿವ್ಯ."

ಇದರಿಂದ ಸಹಜವಾಗಿ ಇವನ ಘನತೆಯು ಒಡೆದು ಕಾಣುವದು.

ಶಿವಶರಣೆ ಲಿಂಗಮ್ಮನು.

ಲಿಂಗಮ್ಮನು ಬಸವೇಶ್ವರನ ಕಾಲದಲ್ಲಿ ಆಗಿಹೋದ ಒಬ್ಬ ಮಹಾ ಶಿವಶರಣೆಯು. ಇವಳು ಹಡಪದಪ್ಪಣ್ಣನ ಧರ್ಮಪತ್ನಿಯಾಗಿದ್ದಾಳೆ. ಅವ ನಂತೆಯೇ ಈಕೆಯಾದರೂ ಬಹು ವಿದ್ವಾಂಸಳು ಮತ್ತು ಶಿವಾನುಭವಿಯು. ಈಕೆಯ ವಚನಗಳಾದರೂ ಶ್ರೇಷ್ಠತರಗತಿಯವು ಇರುತ್ತವೆ. ಅವುಗಳಲ್ಲಿ ಗಾಂಭೀರ್ಯವಿದೆ, ಪ್ರತಿಯೊಂದು ವಚನದಲ್ಲಿ ಉಚ್ಚ ವಿಚಾರಗಳು ತುಂಬಿರುತ್ತವೆ. ಆದರೆ ಅಕ್ಕನಮಹಾದೇವಿಯ ವಚನಗಳು ಈಗ ಜನರ ಮನಸ್ಸನ್ನು ಬಲವಾಗಿ ಆಕರ್ಷಿಸಿರುವದರಿಂದ ಲಿಂಗಮ್ಮನ ವಚನಗಳ ತೇಜಸ್ಸು ಅಷ್ಟು ಪ್ರಕಾಶಕ್ಕೆ ಬಂದಿರುವದಿಲ್ಲ. ಆದರೆ ಅವುಗಳಲ್ಲಿ ವೀರಶೈವ ಮತದ ಸಾರವಿರುತ್ತದೆ. ಇವುಗಳನ್ನು ವೀರಶೈವರು ಅವಶ್ಯವಾಗಿ ಪರಿಶೀಲಿಸಬೇಕು.

ಕೆಳಗಿನ ವಚನಗಳಲ್ಲಿ ಲಿಂಗಮ್ಮನು ತನ್ನ ಸ್ವಂತದ ವಿಷಯವಾಗಿ ಉಲ್ಲೇಖಿಸಿಕೊಂಡಿರುವಳು. ಅದು ಹೇಗೆಂದರೆ:—

ಬಸವಣ್ಣ, ಚನ್ನಬಸವಣ್ಣ, ಮಡಿವಾಳಯ್ಯ, ಅಲ್ಲಮಪ್ರಭು, ಚನ್ನಮಲ್ಲೇಶ್ವರ, ಹಡಪದಪ್ಪಣ್ಣ, ತಮ್ಮೆಲ್ಲರ ತೊತ್ತಿನ ತೊತ್ತಿನ ಪಡಿ ದೊತ್ತಿನ ಮಗಳೆಂದು ಹೊತ್ತುಹೊತ್ತಿಗೆ ಎಚ್ಚರವ ಪಾಲಿಸಿ ರಕ್ಷಣೆಯು ಮಾಡಿದ ಕಾರಣದಿಂದ ತಮ್ಮೆಲ್ಲರ ಪಾದದಲ್ಲಿಯೇ ನಿಜ ಮುಕ್ತಳಾದೆನಯ್ಯ ಅಪ್ಪಣ್ಣಪ್ರಿಯ ಚನ್ನಬಸವಣ್ಣಾ.

ಇದರಮೇಲಿಂದ ಬಸವ, ಚನ್ನಬಸವ, ಅಲ್ಲಮಪ್ರಭು, ಇಂಥ ಮಹಾನುಭಾವರ ಸನ್ನಿಧಿಯಲ್ಲಿ ಲಿಂಗಮ್ಮನು ಇಷ್ಟು ಅವರಿಗೆ ಬಹು ಪ್ರಿಯಳಾಗಿದ್ದಳೆಂದು ಕಂಡುಬರುತ್ತದೆ.

ಲಿಂಗಮ್ಮನ ದೀಕ್ಷಾಗುರುವು ಚನ್ನಮಲ್ಲೇಶ್ವರನೆಂದು ಆಕೆಯ ಅನೇಕ ವಚನಗಳಿಂದಲೇ ಕಂಡುಬರುತ್ತದೆ. ಚನ್ನಮಲ್ಲೇಶ್ವರನೇ ತನಗೆ ಗುರುವೆಂದು ಮೇಲಿಂದಮೇಲೆ ಅವಳು ಹೇಳಿಕೊಂಡಿರುತ್ತಾಳೆ. ಈ ಬಗ್ಗೆ ಕೆಳಗಿನ ವಚನವನ್ನು ವಾಚಕರು ನೋಡಬೇಕು.

ಅಯ್ಯಾ ನಾ ಕಾಂಬುದಕ್ಕೆ ನನ್ನ ಶಕ್ತಿಯಿಲ್ಲ. ನಿಮ್ಮಿಂದಲೇ ಕಂಡೆನಯ್ಯ. ಅದೇನು ಕಾರಣವೆಂದರೆ, ತನುವ ತೋರಿದಿರಿ. ಮನವ

ತೋರಿದಿರಿ. ಧನವ ತೋರಿದಿರಿ. ತನುವ ಗುರುವಿಗಿತ್ತು, ಮನವ ಲಿಂಗಕ್ಕಿತ್ತು, ಧನವ ಜಂಗಮಕ್ಕಿತ್ತು, ಇವೆಲ್ಲವು ನಿಮ್ಮೊಡವೆ ನಿಮಗಿತ್ತು, ತಳೆಬಳೆಯನೆ ಹರಿದು ನಿಮ್ಮಲ್ಲಿಯೇ ನಲೆಗೊಂಡ ಕಾರಣ ಚನ್ನಮಲ್ಲೇಶ್ವರನ ಪಾದದಲ್ಲೇ ನಿರ್ಮುಕ್ತಳಾದೆನಯ್ಯ ಅಪ್ಪಣ್ಣ ಪ್ರಿಯ ಚನ್ನಬಸವಣ್ಣಾ.

ಲಿಂಗಮ್ಮನು ಕೆಳಗೆ ಕಾಣಿಸಿದ ವಚನದಲ್ಲಿ ತನ್ನ ಪತಿಯು ತನ್ನ ಕರಸ್ಥಲದ ಇಷ್ಟಲಿಂಗವೆಂತಲೂ ಚನ್ನಮಲ್ಲೇಶ್ವರನು ತನ್ನ ಮನಸ್ಥಲಕ್ಕೆ ಪ್ರಾಣವಾಗಿ ಮೂರ್ತಗೊಂಡನೆಂತಲೂ ಹೇಳಿ ತಾನು ಚನ್ನಬಸವಣ್ಣನ ಕರುಣದ ಶಿಸುವು ಎಂದು ಹೇಳಿಕೊಂಡಿದ್ದಾಳೆ. ಇದರ ಮೇಲಿಂದ ಲಿಂಗಮ್ಮನು ಶಿವಾನುಭವ ಮಂಟಪದಲ್ಲಿದ್ದುಕೊಂಡು ಅಲ್ಲಿ ನಡೆಯುತ್ತಿದ್ದ ಶಿವಾನುಭವದ ಚೋಧೆಯನ್ನು ಆಲಿಸುತ್ತ ಕಾಲ ಕಳೆಯುತ್ತಿದ್ದಳೆಂದು ತೋರುತ್ತದೆ.

ಏನೇನೂ ಇಲ್ಲದಾಗ ನೀವಿಲ್ಲದಿದ್ದರೆ ನಾನಾಗಬಲ್ಲೆನೇ ಅಯ್ಯ? ಆದಿ ಅನಾದಿ ಇಲ್ಲದಂದು ನೀವಿಲ್ಲದಿದ್ದರೆ ನಾನಾಗಬಲ್ಲೆನೇ ಅಯ್ಯ? ಮುಳುಗಿ ಹೋದವರ ತೆಗೆದುಕೊಂಡು ನಿಮ್ಮ ತೊತ್ತಿನ ತೊತ್ತಿನ ಪಡಿದೊತ್ತಿನ ಮಗಳೆಂದು ರಕ್ಷಣೆಯ ಮಾಡಿದ ಶಿಸುವಾದ ಕಾರಣ ಹಡಪದಪ್ಪಣ್ಣನೇ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡರು. ಚನ್ನಮಲ್ಲೇಶ್ವರನೇ ಎನ್ನ ಮನಸ್ಥಲಕ್ಕೆ ಪ್ರಾಣವಾಗಿ ಮೂರ್ತಗೊಂಡರು. ಆ ಕರಸ್ಥಲದ ಲಿಂಗವನರ್ಚಿಸಿ ಪೂಜಿಸಿ ವರವ ಬೇಡಿದರೆ, ತನುವ ತೋರಿದರು. ಆ ತನು ವಿಡಿದು ಮಹಾಘನವ ಕಂಡೆ. ಆ ಘನವಿಡಿದು ಮನವ ನಿಲ್ಲಿಸಿದೆ. ಮನವ ನಿಲ್ಲಿಸಿ ನೋಡುವನ್ನಕ್ಕ ಪ್ರಾಣದ ನೆಲೆಯನರಿದೆ. ಪ್ರಾಣವ ನೊಂದುಗೂಡಿದೆ. ಕಾಣಬಾರದ ಕದಳಿಯನೆ ಹೊಕ್ಕಾನೂನ ಕದಳಿಯ ದಾಂಟಿದೆ. ಜ್ಞಾನಜ್ಯೋತಿಯ ಕಂಡೆ. ತಾನುತಾನಾಗಿಪ್ಪ ಮಹಾ ಬೆಳಗಿನಲ್ಲಿ ಓಲಾಡಿ ಸುಖಿಯಾದೆನಯ್ಯ ಚನ್ನಬಸವಣ್ಣನ ಕರುಣದ ಶಿಸುವಾದ ಕಾರಣದಿಂದ ಅಪ್ಪಣ್ಣಪ್ರಿಯ ಚನ್ನಬಸವಣ್ಣಾ.

ಲಿಂಗಮ್ಮನ ಪತಿಯಾದ ಹಡಪದಪ್ಪಣ್ಣನು ಬಸವೇಶ್ವರನಿಗೆ ಅತ್ಯಂತ ವಿಶ್ವಾಸಿಕನಾಗಿದ್ದನು. ಅವನು ಬಸವೇಶ್ವರನನ್ನು ಎಂದಿಗೂ ಬಿಟ್ಟಿರದೆ ಅವನ ಸೇವೆಯಲ್ಲಿಯೇ ಇರುತ್ತಿದ್ದನೆಂದು ಅವನ ಚರಿತ್ರೆಯಿಂದ ತಿಳಿದುಬರುತ್ತದೆ. ಲಿಂಗಮ್ಮನು ಇಂಥವನ ಪತ್ನಿಯಾಗಿ ಕಲ್ಯಾಣ

ದಲ್ಲಿ ಸದ್ಭೋಧೆಯನ್ನು ಮಾಡುತ್ತ ಹೊಂದುತ್ತ ಕಾಲಕಳೆಯುತ್ತಿದ್ದಳೆಂದು ಆಕೆಯ ವಚನಗಳಿಂದ ತೋರುತ್ತದೆ. ಈ ಕಾಲದಲ್ಲಿ ಬಸವೇಶ್ವರನಕೂಡ ಅನೇಕ ಬಗೆಯ ಚಿಕ್ಕ ಪುಟ್ಟ ಹೋರೆಗಳನ್ನು ಮಾಡುತ್ತಿದ್ದ ಪ್ರಲ್ಲಕರು ಬಲಿತಿದ್ದರೆಂದು ಅನೇಕರ ತಿಳುವಳಿಕೆ ಇದೆ. ಇದರಿ ನಿಜ ಸ್ಥಿತಿಯು ಹೀಗಿರದೆ ಇವರು ಉಚ್ಚ ನಡೆವಳಿಯವರು ಇದ್ದರೆಂಬುದು ಈ ಕಾಲಕ್ಕೆ ಉತ್ಪನ್ನವಾದ ಉದಾರ ವಚನವಾಙ್ಮಯದಿಂದ ಊಹಿಸಬಹುದಾಗಿದೆ. ಮಧ್ಯಕಾಲದಲ್ಲಿ ಉತ್ಪನ್ನವಾದ ಪುರಾಣಗಳಲ್ಲಿ ವರ್ಣಿಸಲ್ಪಟ್ಟಂಥ ಜಂಗಮರಂತೆ ಬಸವೇಶ್ವರನ ಕಾಲದ ಜಂಗಮರು ನಿಜವಾಗಿಯೂ ಇರಲಿಲ್ಲ. ಅವರು ಉಚ್ಚ ವರ್ತನೆಯುಳ್ಳವರಿದ್ದುದರಿಂದಲೇ, ಆ ಕಾಲಕ್ಕೆ ವೀರಶೈವ ಧರ್ಮವು ಬಲಪಟ್ಟಿತು.

ಲಿಂಗಮ್ಮನ ವಚನಗಳಲ್ಲಿ ನೈತಿಕ ತತ್ವಗಳನ್ನು ನಿರೂಪಿಸುವ ಅನೇಕ ವಚನಗಳಿರುತ್ತವೆ. ಅವುಗಳನ್ನು ವಾಚಕರು ಮೂಲ ಗ್ರಂಥದಲ್ಲಿಯೇ ನೋಡಬೇಕು. ಈ ವಿಷಯದಬಗ್ಗೆ ಕೆಲವುಗಳನ್ನುಮಾತ್ರ ನಾವು ಇಲ್ಲಿ ಉದಹರಿಸುತ್ತೇವೆ.

ಆಸೆಯನಳಿದು ರೋಷವ ನಿಲಿಸಿ ಜಗದ ಪಾಶವನರಿದು ಈಶ್ವರ ನೆನಿಸಿಕೊಂಬ ಶರಣರ ಜಗದ ಹೇಸಿಗಳೆತ್ತ ಬಲ್ಲರೋ ಅಪ್ಪಣ್ಣಪ್ರಿಯ ಚನ್ನಬಸವಣ್ಣಾ?

ತನುವ ಕರಗಿಸಿ, ಹರಿವ ಮನವ ನಿಲ್ಲಿಸಿ, ಅಂಗ ಗುಣವನೇ ಅಳಿದು ಲಿಂಗ ಗುಣವನೇ ನೆಲಿಸಿ ಭಾವವಳಿದು ಭವಕೆ ಸವಿದು ಮಹಾ ದೇವನಾದ ಶರಣರ ಜಗದ ಮಾನವರಿತ್ತಬಲ್ಲರು ಅಪ್ಪಣ್ಣ ಪ್ರಿಯ ಚನ್ನಬಸವಣ್ಣಾ? ಇತ್ಯಾದಿ.

ಕೆಳಗಿನ ವಚನಗಳಲ್ಲಿ ಲಿಂಗಮ್ಮನು ಕೈಲಾಸವಾವುದು, ಮರ್ತ್ಯಲೋಕವಾವುದು ಎಂಬುದನ್ನು ಬಹು ಸರಸಾಗಿ ವರ್ಣಿಸಿ ಮನುಷ್ಯನು ಭವವನ್ನು ಹೇಗೆ ದಾಂಟಬೇಕೆಂಬುದನ್ನು ಹೇಳಿದ್ದಾಳೆ.

ಕೈಲಾಸ ಮರ್ತ್ಯಲೋಕವೆಂಬರು. ಕೈಲಾಸವೆಂದರೇನೋ? ಮರ್ತ್ಯಲೋಕವೆಂದರೇನೋ? ಅಲ್ಲಿಯ ನಡೆಯು ಒಂದೇ. ಇಲ್ಲಿಯ ನಡೆಯು ಒಂದೇ ಕಾಣಿರಯ್ಯ. ಕೈಲಾಸದವರೇ ದೇವರ್ಕಳೆಂಬರು. ಮರ್ತ್ಯಲೋಕದವರೇ ಮಹಾ ಗಣಂಗಳೆಂಬರು. ಸುರಲೋಕದೊಳಗೆ ಸಾಸಿರಕಾಲಕ್ಕಲ್ಲದೆ ಅಳಿವಿಲ್ಲವೆಂಬರು. ನರಲೋಕದೊಳಗೆ ಸತ್ತು

ಸತ್ತು ಹುಟ್ಟುತಿಹರೆಂಬರು. ಇವ ಕಂಡು ನಮ್ಮ ಶಿವಶರಣರು ಸುರ ಲೋಕವನು ನರಲೋಕವನು ತೃಣವೆಂದು ಭಾವಿಸಿ ಭವವ ದಾಂಟಿ ತಮ್ಮ ತಮ್ಮ ಹುಟ್ಟನರಿದು ಮಹಾ ಬೆಳಗಿನೆ ಕೂಡಿ ಬೆಳಗಿನಲ್ಲಿ ಬಯಲಾದರಯ್ಯ ಅಪ್ಪಣ್ಣ ಪ್ರಿಯ ಚನ್ನಬಸವಣ್ಣ.

ಕೆಲವು ಸಾರಿ ಸ್ತ್ರೀಯರಿಗೆ ಉಚಿತವಾದ ಉದಾಹರಣೆಗಳ ಮೂಲಕ ಧಾರ್ಮಿಕ ವಿಚಾರಗಳನ್ನು ಲಿಂಗಮ್ಮನು ಬಹು ಸುಂದರವಾಗಿ ವಿವರಿಸುವದೂ ಉಂಟು. ನಾವು ಕೆಲವುಗಳನ್ನು ಮಾತ್ರ ಕೆಳಗೆ ಕೊಟ್ಟಿರುತ್ತೇವೆ.

ಮನ ಕತ್ತಲಿ ತನು ಹಮ್ಮು ನೆನಹು ಮರವೆ ಇವರೊಳಗೆ ಇದ್ದು ಘನವ ಕಂಡಿಹೆನೆಂಬ ಅಣ್ಣಗಳಿರಾ ನೀವು ಕೇಳಿರೋ. ಘನವ ಕಾಂಬುದಕ್ಕೆ ಮನವೆಂತಾಗಬೇಕೆಂದರೆ ಅಕ್ಕಿಯ ತಳಿಸಿದಂತೆ ಅಲ್ಲ ಸುಲಿದಂತೆ ಕನ್ನಡಿಯ ನೋಡಿದಂತೆ ಮನ ನಿರ್ಮಳವಾದಲ್ಲದೆ ಘನವ ಕಾಣಬಾರದು ನಮ್ಮ ಅಪ್ಪಣ್ಣ ಪ್ರಿಯ ಚನ್ನಬಸವಣ್ಣಾ.

ಅಯ್ಯಾ, ನಾ ಮರ್ತ್ಯದಲ್ಲಿ ಹುಟ್ಟಿ, ಕಷ್ಟ ಸಂಸಾರಿ ಎನಿಸಿಕೊಂಡೆ. ಕತ್ತಲೆಯಲ್ಲಿ ಮುಳುಗಿದೆ. ಕರ್ಮಕ್ಕೆ ಗುರಿಯಾಗುತ್ತಿದ್ದರೆ ಹೆತ್ತ ತಾಯಿ ಎಂಬ ಗುರುಸ್ವಾಮಿ ಎನ್ನ ಕೊರಳಿಗೆ ಗಂಡನೆಂಬ ಲಿಂಗವ ಕಟ್ಟಿದನು. ತಂದೆ ಜಂಗಮ ಲಿಂಗವು ಎನ್ನ ಪ್ರಾಣಕ್ಕೆ ಪ್ರಸಾದವ ಊಡಿದನು. ಪ್ರಾಣಕ್ಕ ಪ್ರಸಾದವನೂಡಲಾಗಲೆ ಕತ್ತಲೆ ಹರಿಯಿತ್ತು. ಕರ್ಮ ಹಿಂಗಿತ್ತು. ಮನ ಬತ್ತಲೆಯಾಯಿತ್ತು. ಚಿತ್ತ ಸುಯಿಧಾನವಾಯಿತ್ತು. ನಿಷ್ಪ್ರಿಂತವಾಯಿತ್ತು. ನಿಜವ ನೆವಿಮ್ಮನೋಡುವನ್ನಕ್ಕ, ಎನ್ನ ಅತ್ತೆ ಮಾವನು ಅರತುಹೋದರು. ಅತ್ತಿಗೆ ನಾದಿನಿಯರು ಎತ್ತಲೋಡಿ ಹೋದರು. ಸುತ್ತಲಿರುವ ಬಂಧುಗಳೆಲ್ಲ ಬಯಲಾದರು. ಎನ್ನ ತಂದೆ ತಾಯಿ ಕಟ್ಟಿದ ಚಿಕ್ಕಂದಿನ ಗಂಡನ ವಿಚ್ಚಿಸಿ ನೋಡುವ ನೋಟ ಹೋಗಿ ಎನ್ನ ಮನಕ್ಕೆ ಸಿಲ್ಕಿತ್ತು. ಅಂಗ ಲಿಂಗವೆಂಬ ಉಭಯವಳಿಯಿತ್ತು. ಸಂಗ ಸುಖ ಹಿಂಗಿತ್ತು. ಮುಂಗಳದ ಮಹಾ ಬೆಳಗಿನಲ್ಲಿ ಓಲಾಡಿ ಸುಖಿಯಾದೆನಯ್ಯ ಅಪ್ಪಣ್ಣ ಪ್ರಿಯ ಚನ್ನಬಸವಣ್ಣಾ.

ಮೇಲ್ಕಂಡ ವಚನದಲ್ಲಿ ಲಿಂಗಮ್ಮನು ತನ್ನ ಮನೆತನದ ಸಂಗತಿಗಳ ಮೂಲಕ ಮಹಾದೇವಿಯಕ್ಕನಂತೆ ತನ್ನ ವಿಚಾರಗಳನ್ನು ಹೇಳಿರುವಳು.

ಕಡೆಗೆ ಲಿಂಗಮ್ಮನು ತನ್ನ ಸಾಮರಸ್ಯದ ಸ್ವರೂಪವನ್ನು ಕೆಲ ವಚನಗಳಲ್ಲಿ ಬಹು ಸುಂದರವಾಗಿ ನಿರೂಪಿಸಿದ್ದಾಳೆ.

ನೋಡಿಹೆನೆಂದರೆ ನೋಟವಿಲ್ಲ ಕೇಳಿಹೆನೆಂದರೆ ಕಿವಿ ಇಲ್ಲ. ವಾಸಿಸೆಂದರೆ ನಾಸಿಕವಿಲ್ಲ. ನುಡಿದಿಹೆನೆಂದರೆ ಬಾಯಿ ಇಲ್ಲ. ಹಿಡಿದಿಹೆನೆಂದರೆ ಹಸ್ತವಿಲ್ಲ. ನಡೆದಿಹೆನೆಂದರೆ ಕಾಲಿಲ್ಲ. ನೆನೆದಿಹೆನೆಂದರೆ ಮನವಿಲ್ಲ. ಇಂತು ನೆನಹು ನಿಷ್ಪತ್ತಿಯಾಗಿ ಶರಣರ ಪಾದದಲ್ಲಿಯೆ ಬೆರೆದು ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚನ್ನಬಸವಣ್ಣ.

ಮನ ಮುಂಕಾಯಿತ್ತು. ತನುವು ಮರೆಯಿತ್ತು. ವಾಯು ಬರ ತತ್ತು. ಉರಿ ಎದ್ದಿತ್ತು. ಹೊಗೆ ಉರಿಯಿತ್ತು. ಸರೋವರವೆಲ್ಲ ಉರಿದು ಹೋಯಿತ್ತು. ಒಳಗೆ ಹೊಕ್ಕು ಕವಚ ತೆಗೆದು ಬಯಲ ನೋಡಿ ಬೆಳಗ ಕೂಡಿದಲ್ಲದೆ ನಿಜಮುಕ್ತಿ ಇಲ್ಲವೆಂದರು ನಮ್ಮ ಅಪ್ಪಣ್ಣಪ್ರಿಯ ಚನ್ನ ಬಸವಣ್ಣ.

ಬೆಟ್ಟ ಬೆಂದಿತ್ತು. ಬಿದಿರುಗಣ್ಣಿ ಒಡೆಯಿತ್ತು. ಸುತ್ತನೋಡಿದರೆ ನಿರಾಳವಾಯಿತ್ತು. ಕತ್ತಲೆ ಹರಿಯಿತ್ತು. ಮನ ಬತ್ತಲೆಯಾಯಿತ್ತು. ಚಿತ್ತ ಮನ ಬುದ್ಧಿ ಏಕವಾದವು. ಎಚ್ಚತ್ತು ನೋಡಿದರೆ ಬಚ್ಚಬರಿಯ ಬೆಳಗಲ್ಲದೆ ಕತ್ತಲೆ ಕಾಣಬಾರದು ಕಾಣಾ ಅಪ್ಪಣ್ಣ ಪ್ರಿಯಚನ್ನಬಸವಣ್ಣಾ.

ತನು ಕರಗಿತ್ತು, ಮನ ನಿಂದಿತ್ತು, ಉಲುಹು ಅಡಗಿತ್ತು, ನೆಲೆಗೆ ನಿಂದಿತ್ತು, ಮನ ಪವನನ ಬಿಂದು ಒಡಗೂಡಿತ್ತು, ಉರಿ ಎದ್ದಿತ್ತು, ಊರ್ಧ್ವ ಕ್ಕೈದಿತ್ತು, ಶರಧಿ ಬತ್ತಿತ್ತು, ನೊರೆ ತೆರೆ ಅಡಗಿತ್ತು, ಅಷ್ಟಮದವೆಲ್ಲ ಹಿಟ್ಟು ಗುಟ್ಟಿತ್ತು, ಕರಣಂಗಳೆಲ್ಲ ಉರಿದು ಹೋಯಿತ್ತು, ಸಪ್ತಧಾತು ಕೆಟ್ಟಿತ್ತು, ರಸಪರತಿತ್ತು, ಅಪ್ಪು ಬರತಿತ್ತು, ಕಟ್ಟು ಹಾಯ್ದು ಬಿರಿನಂತೆ ತೊಟ್ಟುಬಿಟ್ಟು ಬಟ್ಟಬಯಲೊಳಗೆ ಬಿದ್ದು ನಾನೆತ್ತ ಹೋದೆನೆಂದರಿಯೆನಯ್ಯ ಅಪ್ಪಣ್ಣಪ್ರಿಯ ಚನ್ನಬಸವಣ್ಣ.

ಶ್ರೀಚರಲಿಂಗಸ್ವಾಮಿಗಳವರ ಚರಿತ್ರೆ.

ಮ. ರಾ. ರಾ. ಮಹಾರುದ್ರಪ್ಪ ಮಹಾಲಿಂಗಪ್ಪ ಮಿರ್ಜಿ ಹುಬ್ಬಳ್ಳಿ ಈ ಮಹನೀಯರು ಹುಬ್ಬಳ್ಳಿಯ ಕಲಬುರ್ಗಿ ಮಠದ ಚರಲಿಂಗಸ್ವಾಮಿಗಳವರ ಚರಿತ್ರೆಯನ್ನು ಬರೆದು ಅದರ ೨೦೦ ಪ್ರತಿಗಳನ್ನು ಶಿವಾನುಭವ ಪತ್ರಿಕೆಯ ಪೋಷಣಾರ್ಥವಾಗಿ ನಮ್ಮಕಡೆಗೆ ಕಳಿಸಿಕೊಟ್ಟಿರುವರು. ಇದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಶ್ರೀಚರಲಿಂಗಸ್ವಾಮಿಗಳು ಕಲಬುರ್ಗಿ ಪಟ್ಟಣದಲ್ಲಿಯ ಗದ್ದಿಗೆಮಠಕ್ಕೆ ಸಂಬಂಧಿಸಿದವರು. ಅವರು ಸಮಾಜ ಹಿತದ ಅನೇಕ ಕಾರ್ಯಗಳನ್ನು ಮಾಡಿದ್ದು ಅವುಗಳು ಈ ಗ್ರಂಥದಲ್ಲಿ ವಿವರಿಸಲ್ಪಟ್ಟಿರುತ್ತವೆ. ಈ ಗ್ರಂಥವು ಮುಂದೆ ಶಿವಾನುಭವ ಪತ್ರಿಕೆಯಲ್ಲಿ ವಿಮರ್ಶಿಸಲ್ಪಡುವದು. ಮ. ರಾ. ರಾ. ಮಹಾರುದ್ರಪ್ಪನವರ ಈ ಪ್ರಯತ್ನವು ಅತ್ಯಂತ ಸ್ತೋತ್ರಾರ್ಹವೂ ಅನುಕರಣೀಯವೂ ಆಗಿರುತ್ತದೆ.

ವಚನಶಾಸ್ತ್ರಸಾರ ಭಾಗ ೨.

(ವೀರಶೈವ ಸಿದ್ಧಾಂತ.)

ರಾ. ಸಾ. ಪಿ. ಜಿ. ಹಳಕಟ್ಟಿ ಇವರಿಂದ ಇದು ರಚಿಸಲ್ಪಟ್ಟಿದ್ದು ಇದರಲ್ಲಿ ವೀರಶೈವ ಸಿದ್ಧಾಂತವು ವಚನಕಾರರ ಉಕ್ತಿಗಳಮೂಲಕವಾಗಿಯೇ ಸಮಗ್ರವಾಗಿ ನಿರೂಪಿಸಲ್ಪಟ್ಟಿರುತ್ತದೆ. ಇದು ಅತ್ಯಂತ ಮಹತ್ವದ ಗ್ರಂಥವಿದ್ದು ಅದು ಬಸವಜಯಂತಿಯ ದಿವಸವೇ ಎಲ್ಲಕಡೆಗೂ ಪ್ರಸಿದ್ಧಿಸಲ್ಪಡುವದು.

---

(೫) ಮಾಯೆಯನ್ನು ದೂರಮಾಡುವದು.

ವಿವರಣೆ:— ಸೋಹಂಭಾವದಲ್ಲಿ ವರ್ತಿಸಬೇಕಾದರೆ, ಸಂಸಾರವೆ ಅದಕ್ಕೆ ಪ್ರತಿಬಂಧಕವಾಗುತ್ತದೆ. ಸಂಸಾರವು ಮನುಷ್ಯರಲ್ಲಿ ಭೇದವನ್ನುಂಟು ಮಾಡಿ, ಲಿಂಗದ ನೆನಹು, ಲಿಂಗದ ನಡೆ ಇವುಗಳಿಂದ ದೂರವಿರುವಂತೆ ಮಾಡುತ್ತದೆ. (ವಚನ ೩೨) ಮನುಷ್ಯನು ತನ್ನ ಪಂಚೇಂದ್ರಿಯಗಳ ವಶದಲ್ಲಿರುವ ವರೆಗೆ ಲಿಂಗದ ನಡೆಯು ಅವನಲ್ಲಿ ಉಂಟಾಗಲಾರದು. ಅನೇಕತರದ ಮರುಳಾಟಗಳಲ್ಲಿ ಕಂಗೆಡುವನು. (ವಚನ ೩೩) ಇದೇ ಮಾಯೆ ಎನಿಸುವದು. ಈ ಮಾಯೆಯು ಮನುಷ್ಯನನ್ನು ತರಕಟ ಕಾಡುತ್ತಿದೆ. (ವಚನ ೩೫) ಅದು ಬರಿಯ ವಾಗದ್ವೈತವನ್ನು ನುಡಿಸುವದಲ್ಲದೆ ನಿಜವನ್ನರುಹಲಾರದು. (ವಚನ ೩೬) ಅದು ಇಲ್ಲದ ಶಂಕೆಯನ್ನು ಹುಟ್ಟಿಸುತ್ತದೆ. ಮತ್ತು ತರತರದ ರೂಪದಿಂದ ಕಾಡುತ್ತದೆ. ಆದ್ದರಿಂದ ಈ ಮಾಯೆಯನ್ನು ಮೊದಲು ದೂರಮಾಡುವದು ಮನುಷ್ಯನ ಕರ್ತವ್ಯವಾಗಿದೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನಗಳು.

೩೨. ನಿಚ್ಚ ನಿಚ್ಚ ಮುಟ್ಟಿ, ನಿಚ್ಚ ನಿಚ್ಚ ಅಗಲುವಂದರ ಕಂಡು, ನಾಚಿತ್ತಯ್ಯ ಎನ್ನ ಮನ. ನಾಚಿತ್ತಯ್ಯ. ಸಂದಿಲ್ಲದಲ್ಲಿ ಸಂದು ಮಾಡಿದವರು ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಸಂಸಾರ ಸಂಬಂಧಿಗಳಿವರು.

೩೩. ಪಂಚೇಂದ್ರಿಯವೆಂಬ ಪಾಪದ ಕೂಸು ಘಾಸಿ ಮಾಡಿ ಕಾಡುತ್ತಿದೆ. ಶಿವಶಿವಾ! ಏಸು ಪರಿಯ ಸಂತೈಸಿದಡೂ ಸಂತವಾಗದು. ಮುದ್ದು ತೋರಿ ಬುದ್ಧಿಗೆಡಿಸಿತ್ತು. ಅಲ್ಲಿ ಹುಸಿಯನೇ ಮುಸುಕಿ ಮುಸಿ ಮುಣ್ಣ ಮಾಡಿತ್ತು. ನಮ್ಮ ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದ ಸಂಗಿಗಳಲ್ಲದ ಅಧಮ ಮಾನವರ ಮರುಳಾಟವನಾಡಿಸಿ ಕಾಡಿತ್ತು ನೋಡಾ.

೩೪. ಮನವ್ಯಸನ ಕಂಗಳಲ್ಲಿ ಗರ್ಭವಾಗಿ ಕೈ ಪ್ರಸೂತವಾದ ಪ್ರಪಂಚವ ನೇನೆಂಬೆ? ಮಾಡಿದರಾಯಿತ್ತು, ಮಾದಲ್ಲಿ ಹೋಯಿತ್ತು.

(೬) ಮಾಯೆಯನ್ನು ದೂರವಾಡುವ ಉಪಾಯಗಳು.

ವಿವರಣೆ – ಮಾಯೆಯನ್ನು ದೂರಮಾಡುವ ಉಪಾಯಗಳನ್ನು ಇಲ್ಲಿ ವಚನಕಾರನು ಹೇಳಿರುವನು. ಮನುಷ್ಯನು ಮೊದಲು ಗುರುವಿನಲ್ಲಿ ಶರಣುಹೋಗಬೇಕು. (ವಚನ ೪೦) ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಆಲಿಕಲ್ಲಿನಂತೆ ಅವನು ಜಗತ್ತಿನ ವಿಕೃತಿಗಳು ತನಗೆ ಅಂಟದಂತೆ ನಡೆಯಬೇಕು. (ವಚನ ೪೧) ನಾನು ಜ್ಞಾನಿ ಎಂಬ ಅಭಿಮಾನವನ್ನು ತೊರೆಯಬೇಕು. (ವಚನ ೪೨) ದೇಹದಿಚ್ಛೆಗೆ ಹರಿಯಬಾರದು. ಪೂರ್ವವಿಷಯವನ್ನು ಬಿಡಬೇಕು. (ವಚನ ೪೪) ಧನ, ವನಿತೆ ವಿಷಯ, ರಾಗ. ದ್ವೇಷ, ಭಯ, ಅಹಂಮಮತೆ ಇವುಗಳನ್ನು ಬಿಡಬೇಕು. (ವಚನ ೪೫) ಗುರುಪಾದವನ್ನ ನಂಬಬೇಕು. (ವಚನ ೪೬) ಆದರೆ ಗುರುವು ಮತ್ತು ಶಿಷ್ಯನು ತಿಳುವಳಿಕೆಯುಳ್ಳವರಾಗಿರಬೇಕು. (ವಚನ ೪೭ ಪ್ರಸಾದ ಭೋಗಿಯಾಗಬೇಕು. (ವಚನ ೪೮) ಸಾಮರಸ್ಯಭಾವದಿಂದ ಪ್ರಸಾದವನ್ನು ಭೋಗಿಸಬೇಕು. (ವಚನ ೪೯) ಹೀಗೆ ನಡೆದಲ್ಲಿ ಮಾಯೆಯು ಸಿಲ್ಕು ಬಿಡುವದೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನಗಳು.

೪೦. ಸಂಸಾರವೆಂಬತ್ತಿಗೆ ನಿರ್ಬುದ್ಧಿ ಸೊಸೆಯೊಬ್ಬಳು ಅಟ್ಟುಂಡಿ ಹೆನೆಂದು ಒಲೆಯ ಬೂದಿಯ ತೊಡುವನಕ, ಒಳಗೊಂದು ಕಿಡಿ ಇದ್ದುದೆ ಬೆಂದು, ಮರುಗುವಂತಾಯಿತ್ತಲ್ಲಾ ಎನಗೆ. ನಿಸ್ಸಂಗತಿಯ ಒಡಲೊಲೆಯ ಬೂದಿಯ ಕೆದಕುವನಕ ಒಳಗೊಂದು ಸುಜ್ಞಾನವೆಂಬ ಕಿಡಿ ಇದ್ದು ಎನ್ನ ಮನ ಬೆಂದು ಹೃದಯದಲ್ಲಿ ಮರುಗುತ್ತಿದ್ದನೇ? ಇದಕ್ಕೆ ಪಿತಾಳ ಮಂತ್ರ ಉಂಟೇ ಅಯ್ಯ? ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ನಿಜಗುಣ ಶರಣೆಂಬುದೇ ಮಂತ್ರ.

೪೧. ಇಹ ಪರವೆಂಬ ಇದ್ದಿಸೆಯಾದವನ ಪರಿ ಹೊಸತು. ನೆಯಿ ಹತ್ತದ ನಾಲಿಗೆಯಂತೆ, ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಆಲಿಯಂತಿರ್ದೆನಯ್ಯಾ. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿಸದಂತಿರ್ದೆನಯ್ಯಾ.

ಆಲಿ= ಕಣ್ಣು, ಕನೀನಿಕೆ.

ನೆಚ್ಚದಿರು. ನಿಶ್ಚಯವಲ್ಲ ಸಿಮ್ಮಲಿಗೆಯ ಚನ್ನರಾಮ ಲಿಂಗವೆಂಬ ಸಂಸಾರ ಕೇಳಾ.

೩೫. ಯತಿಗಳ ವ್ರತಿಗಳ ಧೃತಿಗೆಡಿಸಿತ್ತು ಮಾಯೆ. ಕಲಿಗಳ ಬಲಗಳ ಬಲುಹ ಮುರಿಯಿತ್ತು ಮಾಯೆ. ಹರಿ ಬ್ರಹ್ಮ ರುದ್ರಾದಿಗಳೆಲ್ಲರ ತರಕಟ ಕಾಡಿತ್ತು ಮಾಯೆ. ಹೋ ಹೋ, ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಮಾಯೆ, ಮರ್ಕಟ ವಿಧಿಯೇ.

೩೬. ವ್ಯಾಸ, ವಾಲ್ಮೀಕಿ, ಶುಕ. ಮೊದಲ್ಗೊಂಡು ಋಷಿಗಳು. ದೇಹಭಾವವುಳಿವರಿಗೆ ಜಾರಿಕೆ, ಧಾರುಣಿಯ ಮೇಲಾದ ಜಾರಿಕೆ. ಅಳವುಗೆಟ್ಟಳವೆಯ ಅಳವೆಯಾ ಸಿಮ್ಮಲಿಗೆಯ ಚನ್ನರಾಮನಲ್ಲಿ?

೩೭. ಹುಸಿಯ ವ್ಯಾಧನ ನಿಜದಿಂದ ಕ್ಷತ್ರಿಯನೆಂದು ಬೋಧಿಸಲು ಹೊದೆ ದೊಕ್ಕೊಂಬುನಲ್ಲದೆ ಬೋಧೆ ದೊರಕೊಂಬುದೇ ಹೇಳಾ! ಜೀವ ಭೋಕ್ತೃ, ನಿಜ, ಪರಮನೆಂದೆನ್ನದೆ ಪರಮನೇ ಹುಸಿ ಜೀವನೇ ದಿಟವೆಂದು ಬೋಧಿಸಲು ಬೋಧೆ ದೊರಕೊಳ್ಳದು ನೋಡಾ. ಜ್ಞಾತೃ ಜ್ಞಾನ ಜ್ಞೇಯ ಜ್ಞಪ್ತಿ ಸುಖ ಪರಿಪೂರ್ಣನಲ್ಲ ಸಿಮ್ಮಲಿಗೆಯ ಚನ್ನರಾಮಾ.

೩೮. ಮನ ರಥದ ಮೇಲೆ ನಿಂತುದ ಭೇದಿಸಬಾರದಯ್ಯ ಸ್ಪರ್ಶವಾದಿಗಳು ಹರಿಯ ತಾವರಿಯರಾಗಿ. ಹರಿ ವಿರಿಂಚಿಗಳಿಗೆ ತೂರ್ಯವೆಲ್ಲಿಯದೋ? ತನು ಮುಖದನುಭಾವಿಗಳಿವರು. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ವಾಗದ್ವೈತವ ನುಡಿವರಲ್ಲದೆ ನಿಜವೆಲ್ಲಿಯದೋ?

೩೯. ಹುಲ್ಲುಮನುಷ್ಯನ ಕಂಡು ಹುಲ್ಲಿ ತಾ ಬೆದರುವಂತೆ, ಇಲ್ಲದ ಶಂಕೆಯನುಂಟೆಂಬನ್ನಕ್ಕ ಅದಲ್ಲಿಯೇ ರೂಪವಾಯಿತ್ತು. ಕೇಡಿಗನನೇಡಿಸಿ ಕಾಡಿತ್ತು ಸಿಮ್ಮಲಿಗೆಯ ಚನ್ನರಾಮನೆಂಬ ಭಾವದ ಗಸಣಿ.

೪೨. ಕುರುಡ ಕಾಣನೆಂದು, ಕಿವುಡ ಕೇಳನೆಂದು, ಹೆಳವ ಹಿಡಿಯನೆಂದು, ಮರುಳ ಬೈದನೆಂದು, ಸಿಶಾಚಿ ಹೋದನೆಂದು ಮನ ಕದಸಿ ಬಿಡುವನೇ ತಾನರಿವುಳ್ಳಾತ? ತತ್ವವನರಿಯದವರಲ್ಲಿ ಗುಣದೋಷವ ನರಸುವರೇ ಹೇಳಾ ಸಿಮ್ಮಲಿಗೆಯ ಚನ್ನರಾಮಾ ?

ಕದನಬಡು= ರೇಗು.

೪೩. ಅಯ್ಯ ಹೊಂದಿಹನಲ್ಲ ಸಂಸಾರಿ ಜಂಗಮವಲ್ಲ. ಸಂಸಾರಿಗೂ ಜ್ಞಾನಿಗೂ ಸರಿ ಎನ್ನಬಹುದೆ ಸಿಮ್ಮಲಿಗೆಯ ಚನ್ನರಾಮಾ?

೪೪. ಸಾವು ತಡವಿಲ್ಲ. ನರಕ ದೂರವಿಲ್ಲ. ದೇಹದಿಚ್ಛೆಗೆ ಹರಿದು ಕೆಮ್ಮನೆ ಕೆಡಬೇಡ. ದುರ್ವಿಷಯವ ಬಿಡು ಬೇಗ. ಗುರುಪದವ ನಂಬು. ನಮ್ಮ ಸಿಮ್ಮಲಿಗೆಯ ಚನ್ನರಾಮನಲ್ಲಿ ನೀನು ಸುಖಿಯಪ್ಪೆ ಮರುಳೇ.

೪೫. ಸಂಸಾರವೆಂಬ ಹೇರಡವಿಯಂಧಕಾರದಲಿ ತೊಳಲುವ, ಆಧಿವ್ಯಾಧಿಗಳುಳ್ಳ, ಧನವನಿತೆ ವಿಷಯದ ರಾಗದ್ವೇಷದ ಭಯದ ತಾಪತ್ರಯದ ಕಾಳ್ಗಿಚ್ಚಿನಲ್ಲಿ ಸಾವ ಕೆಡುವ, ಅಹಂ ಮಮತೆಯ ಹೊತ್ತು ನಡೆವ ನರಗುರಿಗಳಾದ ಜೀವರಿಗೆ ಭವಬಂಧನ ಹರಿದು ಗುರುಪಥವಪ್ಪದು. ನಿಜಗುಣನ ಶ್ರೀಪಾದವ ಶರಣುಹೊಕ್ಕಡೆ, ನಿತ್ಯ ಸುಖಪೂರಿತ ಸಿಮ್ಮಲಿಗೆಯ ಚನ್ನರಾಮ ತಾನಹೆ, ನಿಜಗುಣನ ಶ್ರೀಪಾದವ ನೆರೆ ನಂಬಿದಡೆ.

೪೬. ಕನ್ನಡಿ ತನ್ನದಾದಡೇನು? ಅನ್ಯರದಾದಡೇನು? ತನ್ನ ಮುಖವ ಕಾಣಬಂದರೆ ಸಾಲದೇ? ಸದ್ಗುರುವಾರಾದಡೇನು? ತನ್ನ ನರುಹಿದಡೆ ಸಾಲದೇ ಸಿಮ್ಮಲಿಗೆಯ ಚನ್ನರಾಮಾ ?

೪೭. ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹವ ಮಾಡಿ ಮೊಡೇನಪ್ಪದು ಎಲವೋ? ಅಂಧಕನ ಕೈ ಅಂಧಕ ಹಿಡಿದಂತೆ. ಮುಂದೇನಪ್ಪದು ಹೇಳಿಲೆ ಮರುಳೇ. ಬರುವಾತಿನ ರಂಜನೆಯನಾಡದಿರು. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವು ಹುಸಿಯ ಹಸುಕವನಲ್ಲ.

೪೮. ಹೆಡತಲೆಯ ಮಾತ ಬಲ್ಲರೆ ಪ್ರಸಾದಿ. ನಡುನೆತ್ತಿಯ ವರ್ಮವ ಬಲ್ಲರೆ ಪ್ರಸಾದಿ. ಕುಗಳ ಮಾಲೆಯ ಕೂರ್ಮನಾಪ್ಯಾಯನವ ಬಲ್ಲರೆ

ಪ್ರಸಾದಿ. ಅಂಗೇಂದ್ರಿಯವನೊಂದು ಮುಖವ ಮಾಡಬಲ್ಲರೆ ಪ್ರಸಾದಿ. ನಿರಂಜನ ಜಂಗಮವನಾರಾಧಿಸಬಲ್ಲರೆ ಪ್ರಸಾದಿ. ನಿರಾಲಂಬದ ಪ್ರಣವವ ನುಚ್ಚರಿಸಬಲ್ಲರೆ ಪ್ರಸಾದಿ. ಹ್ರೀಂ ಶಕ್ತ್ಯಾರೂಢನಾದ ಚರಪಾದಾಂಬುವ ಹ್ರೀಂ ಶಕ್ತಿಬದ್ಧನಾದ ಲಿಂಗಕ್ಕೆ ಶಾಂತಿಯ ಮಾಡಬಲ್ಲರೆ ಪ್ರಸಾದಿ. ಆಧಾರ ಪ್ರಷ್ಟರಂಧ್ರದೊಳಗಡಗಿದಕ್ಷರವ ನೋಡಿ ಓದಬಲ್ಲರೆ ಪ್ರಸಾದಿ. ಭಾವವ ಕ್ರಿಯಲ್ಲಿಗೆ ತಂದು ಕ್ರಿಯಾಭಾವದಲಿ ನೆಲೆಗೊಳಿಸಬಲ್ಲರೆ ಪ್ರಸಾದಿ. ಒಳ ಹೊರಗೆಂಬ ಭಾವಗೆಟ್ಟು ಸುಳುಹಿನ ಪ್ರಸಾದದ ಕಳೆ ಬೆಳಗ ನುಂಗಿದ ಲಿಂಗಕ್ಕರ್ಪಿಸಿ ಸುಖಿಸಬಲ್ಲರೆ ಪ್ರಸಾದಿ. ಸ್ಥಾವರವ ಜಂಗಮದೊಳಗಡಗಿಸಿ ಜಂಗಮವ ಸ್ಥಾವರವ ಮಾಡಬಲ್ಲರೆ ಪ್ರಸಾದಿ. ಇದು ಕಾರಣ ನಿಜಗುಣನೆಂಬ ಮಹಾಜಂಗಮ ನಿಜಾನಂದವೆಂಬ ಒಕ್ಕು ಮಿಕ್ಕ ಘನ ಪ್ರಸಾದವ ಕೊಟ್ಟನಾಗಿ ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗಕ್ಕೆ ಕೊಟ್ಟು ಕೊಳಲು ಎನ್ನ ಹಿಂಗದಾಲಿಂಗಿಸಿದನಾಗಿ ಪ್ರಸಾದಿಯಾದೆ.

೪೯. ಕಂಡುದು ಕೇಳಿದುದು ಲಿಂಗಕ್ಕೆ ತಾಕಿತ್ತು ಸೋಂಕಿತ್ತು. ಕಾಯದ ಕೈಯ್ಯಲ್ಲಿ ಲಿಂಗಾರ್ಪಿತವಾಯಿತ್ತೆಂದರೆ ತಪ್ಪಿತ್ತು ನೋಡಾ. ತಾನರಿವುತ್ತ ಕೊಡಲುಂಟೇ ಲಿಂಗಕ್ಕೆ? ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಶರಣನಲ್ಲ, ಆತ ಸಂದೇಹಿ.

---

(೭) ಸಾಮರಸ್ಯ.

ವಿವರಣೆ:— ಮನುಷ್ಯನು ಹಿಂದೆ ಹೇಳಿದಂದೆ ನಡೆದಲ್ಲಿ ಅವನು ಇಹಲೋಕದ ಯಾತ್ರೆಯನ್ನು ಸುಖವಾಗಿ ಮುಗಿಸಿಕೊಂಡು ಅಖಂಡಿತ ಪದವನ್ನು ಹೊಂದುವನು. ಇದು ಸಾಮರಸ್ಯವೆನಿಸಿಕೊಳ್ಳುವದು. ಆಗ ಬಾಹ್ಯ ಕ್ರಿಯೆಗಳು ನಿಲ್ಲುವವು. ಭಾಷೆಗಳು ಅನಾವಶ್ಯಕವಾಗುವವು. ಲಿಂಗ ಜಂಗಮಕ್ಕೆ ಕೊಟ್ಟಿಹೆನೆಂಬ ಭಾವವಡಗುವದು. (ವಚನ ೫೦) ಸಂಸಾಸ ರತಿಯು ಅಡಗುವದು. ಸುಖದ ಸಾರವು, ನೆಚ್ಚಿಕೆಯು, ಮೆಚ್ಚಿಕೆಯು ನಿಲ್ಲುವವು. ನಿಷ್ಠೆಯು ನಿಃಸಂದೇಹವಾಗುವದು. ಪರಮಾತ್ಮನ ಸಾಮರಸ್ಯ ಪೂಜೆಯು ಒದಗಿ ಪರಮಾತ್ಮನಲ್ಲಿಯೇ ಅವನು ಅಡಗುವನು. (ವಚನ ೫೧) ಜನನ, ಗುಣಕರ್ಮ, ಬಂಧನೆಗಳು ಇವಾವೂ ಇಲ್ಲವಾಗುವವು. (ವಚನ ೫೨) ಮಾಯೆಯ ಕೃತಕವು ಅಳಿದು ಹೋಗುವದು. ಹೋದಕೂಡಲೆ ನಿಜವು ನಿಲ್ಲುವದು. ಅದೇ ಲಿಂಗೈಕ್ಯವು.

ವಚನಗಳು.

೫೦. ಸಿರದ ಕಂಗಳ ಕರದ ಶಿಸುವನಿಕ್ಕಿ ಮೆರೆದರು. ಭಾಷೆಗಳ ಹಂಗು ಹಳಸಿ ಹೋಯಿತ್ತು. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗಜಂಗಮಕ್ಕೆ ಕೊಟ್ಟಿಹೆನೆಂಬ ಶಬ್ದವಳಿಯಿತ್ತು.

೫೧. ರತಿಯಡಗಿತ್ತು. ಸಾರ ಸವೆಯಿತ್ತು. ನಚ್ಚಿಕೆ ನಾಚಿತ್ತು. ಮೆಚ್ಚಿಕೆ ಮರೆಯಿತ್ತು. ನಿಷ್ಠೆ ನಿಃಸಂದೇಹಕ್ಕೊಳಗಾಯಿತ್ತು. ನಮ್ಮ ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಖಂಡಿತ ಪೂಜೆ ಭಂಡಾಯಿತ್ತು.

೫೨. ಜನನಾದಿಯಿಲ್ಲದವನಿಗೆ ಜನನವನೇಕೊಡಂಬಡುವೆ? ಗುಣ ಕರ್ಮವಿಲ್ಲದ ಸಿನಗೆ ನಿರ್ವಿಷಯವನೇಕೊಡಂಬಡುವೆ? ಬಂಧನಿಲ್ಲದ ಸಿನಗೆ ಮೋಕ್ಷವನೇಕೊಡಂಬಡುವೆ? ಇನೇನೂ ಇಲ್ಲದ ಒಡಂಬಡಿಕೆ ಸಿನಗೆ ಸಿಮ್ಮಲಿಗೆಯ ಚನ್ನರಾಮ.

೫೩. ಹೆರದ ಮುನ್ನವೇ ಹುಟ್ಟ ಹೆತ್ತಲ್ಲಿಯೇ ಸತ್ತುದು ನೋಡಾ. ಅದು ಮಾಯೆಯ ಕೃತಕದ ಗರ್ಭದ ನೆಳಲತಿ ಸುಳುಹು. ಅದಲ್ಲಿಂದ ಹೋಯಿತ್ತು. ಹೋದಲ್ಲಿ ಸಿಂದಿತ್ತು ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗೈಕ್ಯವು.

ಅರುವಿನ ಮಾರ್ತಂಡೆಗಳ ವಚನಗಳು.

ಅರುವಿನ ಮಾರಿ ತಂಡೆ ಎಂಬ ಹೆಸರಿನ ವಚನಕಾರನು ರಚಿಸಿದ ವಚನಗಳು ಕೆಳಗೆ ಕೊಡಲ್ಪಟ್ಟಿವೆ, ಈತನು ೧೧೬೦ರಲ್ಲಿ ಇದ್ದಿರಬಹುದೆಂದು ರಾ॥ ಬಾ॥ ಆರ್. ನರಸಿಂಹಾಚಾರ್ಯರು ಅಭಿಪ್ರಾಯ ಪಟ್ಟಿರುತ್ತಾರೆ. ಆದರೆ ಈತನು ಬಸವೇಶ್ವರನ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿದ್ದನೆಂದು ವೀರಶೈವರಲ್ಲಿ ಐತಿಹ್ಯವಿರುವದಿಲ್ಲ. ಆದ್ದರಿಂದ ಬಸವೇಶ್ವರನಕಿಂತಲೂ ಈಚಿನವನಿರಬೇಕು. ಆದರೆ ೧೫ನೇ ಶತಮಾನದ ಅಂತ್ಯಭಾಗದಲ್ಲಿ ಪ್ರಸಿದ್ಧಿ ಹೊಂದಿದ ಗುಬ್ಬಿ ಮಲ್ಲಿಹಣನು ಈ ಅರುವಿನ ಮಾರಿತಂಡೆಯ ಉಕ್ತಿಗಳನ್ನು ತನ್ನ ಗಣಭಾಷ್ಯ ರತ್ನಮಾಲೆಯಲ್ಲಿ ಉದಹರಿಸಿದ್ದಾನೆ. ಅಲ್ಲದೆ ಅನೇಕ ವಚನಸಂಗ್ರಹಗಳಲ್ಲಿ ಈತನ ವಚನಗಳೂ ಆಗಿಂದಾಗ್ಗೆ ಬರುತ್ತಿರುತ್ತವೆ. ಆದ್ದರಿಂದ ಈತನನ್ನು ನಾವು ವೀರಶೈವರಲ್ಲಿ ಆಗಿಹೋದ ಪುರಾತನಕಾಲದ ಮಹತ್ವದ ವಚನಕಾರರಲ್ಲಿ ಗಣಿಸಲು ಏನೂ ಅಡ್ಡಿ ಇಲ್ಲ.

ಇವನ ಹೆಸರಿಗೆ ಸರಿಯಾಗಿ ಇವನು ಬಹು ಜ್ಞಾನಿಯಾಗಿದ್ದನೆಂಬದು ಈತನ ವಚನಗಳಿಂದಲೇ ತೋರಿಬರುತ್ತದೆ. ಈ ಗ್ರಂಥದಲ್ಲಿ ಉಪನ ಅನೇಕ ವಚನಗಳಿಗೆ ಟೀಕೆ ಇದ್ದುದನ್ನು ವಾಚಕರು ಕಾಣಬಹುದು. "ಪೆಡಗಿನ ವಚನಗಳು" ಎಂಬ ಗ್ರಂಥದಲ್ಲಿ ಈತನ ವಚನಗಳು ಅನೇಕವಾಗಿ ಉದಹರಿಸಲ್ಪಟ್ಟಿದ್ದು ಅವುಗಳಿಗೆ ಟೀಕೆ ಇದ್ದುದನ್ನೇ ನಾವು ಇಲ್ಲಿ ಎತ್ತಿಬರೆದಿರುತ್ತೇವೆ.

ಈ ವಚನಕಾರನ ವಚನಗ್ರಂಥವು ನಮಗೆ ಸಮಗ್ರವಾಗಿ ದೊರೆಯಲ್ಲಾಪ್ಪರಿಂದ ನಮಗೆ ದೊರೆದ ವಚನಗಳನ್ನಷ್ಟೇ ನಾವು ಒತ್ತಟ್ಟಿಗೆ ಸಂಗ್ರಹಿಸಿ ಈ ಗ್ರಂಥಮೂಲಕ ಪ್ರಸಿದ್ಧಿಸಿದ್ದೇವೆ.

ಪರಮಾತ್ಮನ ಅರಿವು.

ವಿವರಣೆ— ಪರಮಾತ್ಮನು ಜಗತ್ತಿನಲ್ಲೆಲ್ಲಿ ವ್ಯಾಪಿಸಿರುತ್ತಾನೆ. ಆದರೆ ಅವನು ತನ್ನನರಿವವರ ಹೃದಯದಲ್ಲಿ ಮಾತ್ರ ಇದ್ದು ಅವರನ್ನು ಪ್ರೇರಿಸಿ ಮಾಡುತ್ತಾನೇ ಹೊರತು ಉಳಿದವರಲ್ಲಿ ಕಾಣಿಸಿಕೊಂಬುದಿಲ್ಲ. (೧) ಅನೇಕರು ಮನುಷ್ಯನು ಅಂಗವನ್ನಳಿದ ಬಳಿಕ ಪರಮಾತ್ಮನು ಕಾಣುವನೆಂದು ತಿಳಿಯುತ್ತಾರೆ. ಅವರೆ ಇದು ನಿಜವಾದುದಲ್ಲ. ಅಂಗದಲ್ಲಿಯೇ ಲಿಂಗವನ್ನು ಕಾಣಬೇಕು. ಆದರೆ ಹೀಗೆ ಕಾಣುವಲ್ಲಿ ಅರಿವುದೂ ಮರೆವುದೂ ಇವುಗಳ ಸಂದವನ್ನು ತಿಳಿದು ವರ್ತಿಸಿದಲ್ಲಿ ಪರಮಾತ್ಮನ ಬೆಳಗು ಕಾಂಬುವುದು. (೨) ಅದರಂತೆಯೇ ಆದಿ, ಮಧ್ಯ, ಅವಸಾನ ಎಂಬ ಭೇದವನ್ನು ಮಾಡಿಕೊಂಡರೂ ಪರಮಾತ್ಮನು ಕಾಣಲಾರನು. ಅವನನ್ನು ಅರಿಯುವಲ್ಲಿ ಹೀಗೆ ಭೇದಭಾವವಮಾಡಲು ಬರಲಾರದು. (೩) ಆದರೆ ಜ್ಞಾನದಲ್ಲಿ ಭಕ್ತನು ಶರಣಹೊಕ್ಕು ಮರವೆಯನ್ನು ಬಿಟ್ಟು ಬಿಡಬೇಕು. (೪) ತನ್ನ ಅರಿವೆಯಮೂಲಕ ಮಲವನ್ನು ಬಿಟ್ಟು ಆಚರಿಸಬೇಕು. ಈ ವಿಚಾರಗಳು ವೇದಾಂತಿಗಳಲ್ಲಿಯೂ ಸಿದ್ಧಾಂತಿಗಳಲ್ಲಿಯೂ ಒಂದೆ ಇವೆ. (೫) ಎಂದು ವಚನಕಾರನು ಹೇಳಿ ಅಹಂಕಾರವನ್ನು ನೂರಮಾಡಿ, ಸುಜ್ಞಾನದಿಂದ ಜೀವಭಾವವನ್ನು ನಿವೃತ್ತಿಮಾಡಿ, ಗುರುಕಾರುಣ್ಯವಿಂದ ಸರ್ವಾಂಗಲಿಂಗ ಸಂಬಂಧಿಯಾಗಬೇಕೆಂದು ಕಡೆಗೆ ಬೋಧಿಸುತ್ತಾನೆ.

ವಚನಗಳು.

೧. ಸಿದ್ಧರಸ ಲೇಸೆಂದಡೆ ತಾಸಿದ್ದ ಕುಡಿಕೆ ಹೇಮವಾದುದಿಲ್ಲ, ಲೋಹಕ್ಕಲ್ಲದೆ ವೇದಿಪುದಿಲ್ಲ. ವಸ್ತು ಸರ್ವದಲ್ಲಿ ಸಂಪೂರ್ಣವಾಗಿದ್ದೇನು? ತನ್ನನರಿವರ ಹೃದಯದಲಲ್ಲದೆ ಇರ ಸದಾಶಿವಮೂರ್ತಿಲಿಂಗವ ಇರವು.

೨. ಅಂಗವ ಮರೆದು ಲಿಂಗವನರಿಯಬೇಕೆಂಬರು. ಕರಣಂಗಳರತು ಘನಲಿಂಗವನರಿಯಬೇಕೆಂಬರು. ಅದು ನಾ ಸಿಕ್ಕಿದ ತಡೆ ಕೇಳಿರಣ್ಣಾ. ಆಕಾರ ಬಯಲಾದಡೆ ಮುಗಿಲು ರೂಪ ತೋರಿ ಅಳಿವ ಪರಿ ಇನ್ನೆಂತೋ? ನಕ್ಷತ್ರ ಚಂದ್ರ ಸೂರ್ಯಾದಿಗಳು ಗ್ರಹ ಪ್ರವರ್ತನವಹ ಪರಿ ಇನ್ನೆಂತೋ? ಅದು ಕಾರಣವಲ್ಲಂಗವಿದ್ದಂತೆ ಲಿಂಗವನರಿಯಬೇಕು.

ಕರಣಂಗಳಿದ್ದಂತೆ ಘನಲಿಂಗವ ಭೇದಿಸಬೇಕು. ಹೀಗಲ್ಲದೆ ಮರೆದರಿಯಲಿಲ್ಲ. ಅರಿದು ಮರೆಯಲಿಲ್ಲ. ಈ ಉಭಯದ ಸಂದಿಯಲ್ಲಿ ಬೆಳಗು ತೋರುತ್ತಿದೆ ಸದಾಶಿವಮೂರ್ತಿಲಿಂಗದಲ್ಲಿ.

ಅರತು = ಒತ್ತಿ, ನಾಶವಾಗಿ; ತಡೆ = ಪ್ರತಿಬಂಧ

೩. ಆದಿ ಮಧ್ಯಾವಸಾನವನರಿಯಬೇಕೆಂಬರು. ಆದಿಯಲ್ಲಿ ನಿಂದು ಮಧ್ಯದಲ್ಲಿ ಕಂಡು ಅವಸಾನದಲ್ಲಿ ಅರಿಯಬೇಕೆಂಬರು. ಅರಿವುದೊಂದೂ ಮರೆವೋ ಎಂಬಲ್ಲಿ ನಿಂದಿತ್ತು. ನಿಂದುದ ಕಳೆದು ನಿಂದ ಹರಿ ಸದಾಶಿವಮೂರ್ತಿಲಿಂಗವನರಿವುದಕ್ಕೆ.

೪. ಕೆಯ್ಯ ಬೆಳೆವಲ್ಲಿ ಸರಿಗೆ ಮುನಿವರಲ್ಲದೆ ಬೆಳೆಗೆ ಮುನಿವರೇ ಅಯ್ಯ? ಅರಿದಂಗವ ತಾಳಿದವರಲ್ಲಿ ಮುರವೆಗೆ ಮುನಿವರಲ್ಲದೆ ಅರಿವಿಗೆ ಮುನಿವರುಂಟೆ ಅಯ್ಯ? ಹುಲ್ಲ ಆವಿಂಗೆ ಕಾಲ ಕಟ್ಟುವರಲ್ಲದೆ ಪೊಲೆಗೆ ಕಟ್ಟುವರುಂಟೆ ಅಯ್ಯ? ಗುರುವಾದಡಾಗಲಿ, ಲಿಂಗವಾದಡಾಗಲಿ, ಜಂಗಮವಾದಡಾಗಲಿ, ಅರಿವಿಂಗೆ ಶರಣು, ಮರವಿಂಗೆ ಮಘನವ ಮಾಡಬಲ್ಲರೆ, ಅದು ನೀವು ಕೊಟ್ಟ ಅರಿವಿನ ಮಾರನಿರಲು ಸದಾಶಿವಮೂರ್ತಿಲಿಂಗವ ಬರವು.

ಕೆಯ್ಯಿ = ಹೊಲ; ಸರಿ = ಮಳೆ;

೫. ವೇದವೇದಾಂತಂಗಳಿಂದ, ಸಿದ್ಧಿಸಿದ್ಧಾಂತಂಗಳಿಂದ ಎಲ್ಲೆ ನೋಡಿದರೂ ವಿಚಾರ ಒಂದೇ ಭೇದ. ಅರಿದಲ್ಲಿ ಮಲಕ್ಕೆ ಹೊರಗು. ಮರೆತಲ್ಲಿ ಮಲಕ್ಕೊಳಗು. ಅರಿವು ಮರವು ನಿಂದಲ್ಲಿ ಸದಾಶಿವಮೂರ್ತಿಲಿಂಗದ ಬೆಳಗು.

೬. ಬ್ರಹ್ಮಾಂಡದ ಧರೆಯ ಮೇಲೆ ಅರಿಬಿರಿದಿನ ಮಂತಣದ ಗಿರಿ ಸುಟ್ಟಿಪ್ಪತ್ತು. ಆ ದುರ್ಗಕ್ಕೆ ಮೂವರು ಧೊರೆಗಳು ಹುಟ್ಟಿದರು. ಒಬ್ಬ ಸರಪತಿ, ಒಬ್ಬ ಸುರಪತಿ. ಒಬ್ಬ ಸಿರಿಮುರಿಗೊಡೆಯ. ಮೂವರ ಮಗ ಒಂದೇಯಾಗಿ ಸಂದೇಹಕ್ಕೀಡಾಗುತ್ತಿದೆ. ಸದಾಶಿವ ಮೂರ್ತಿಲಿಂಗಸಂಗವಾಗಿಯಲ್ಲದೆಯಾಗದು.

ಟೀಕು — ಈ ಪ್ರಪಂಚ ಬ್ರಹ್ಮಾಂಡದಿಂದುದಯವಾದ ಪೃಥ್ವಿಯಂದದ ತನುವೆಂಬುದೀಗ ಬ್ರಹ್ಮಾಂಡದ ಧರೆಯ ಮೇಲೆ ಎಂಬ ಶಬ್ದಕ್ಕರ್ಥ.

ಅಂತಪ್ಪ ದೇಹದಲ್ಲಿ ಆರಿಗೂ ಸಾಧ್ಯವಲ್ಲದ ಭಿನ್ನಭಾವ ಯುಕ್ತವಾದ ಅಹಂಕಾರವೆಂಬ ಗಿರಿ ಹುಟ್ಟಿತ್ತೆಂಬುದೀಗ ಅರಿಬಿರಿದಿನ ಮುಂತಣದ ಗಿರಿ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಅಂತಪ್ಪಹಂಕಾರವೆಂಬ ದುರ್ಗಕ್ಕೆ ಜೀವತ್ರಯಂಗಳೆ ಕರ್ತರಾಗಿಹರೆಂಬುದೀಗ ಆ ದುರ್ಗಕ್ಕೆ ಮೂವರು ಧೊರೆಗಳು ಹುಟ್ಟಿದರು ಎಂಬ ಶಬ್ದಕ್ಕರ್ಥ. ಕರ್ಮೇಂದ್ರಿಯಂಗಳ ವ್ಯವಹಾರಕ್ಕೆ ಕರ್ತನಾಗಿಹನು ವಿಶ್ವನೆಂಬುದೀಗ ಒಬ್ಬ ನರಪತಿ ಎಂಬ ಶಬ್ದಕ್ಕರ್ಥ. ಜ್ಞಾನೇಂದ್ರಿಯಂಗಳ ವ್ಯವಹಾರಕ್ಕೆ ಕರ್ತನಾಗಿಹನು ತೈಜಸನೆಂಬುದೀಗ ಒಬ್ಬ ಸುರಪತಿ ಎಂಬ ಶಬ್ದಕ್ಕರ್ಥ. ತಾಪತ್ರಯಾಗ್ನಿಸಂಬಂಧವಾದ ವಾಯಾ ಭೋಗಕ್ಕೆ ಕರ್ತನಾಗಿಹನು ಪ್ರಾಜ್ಞನೆಂಬುದೀಗ ಒಬ್ಬ ಸಿರಿ ಮುರಿಗೊಡೆಯನೆಂಬ ಶಬ್ದಕ್ಕರ್ಥ. ಆ ಜೀವತ್ರಯಂಗಳಿಗೆ ಆಧಾರವಾದ ಅಹಂಕಾರವೆಂಬ ದುರ್ಗ ಒಂದೇಯಾಗಿ ಜೀವಭಾವದ ಸಂಕಲ್ಪಕ್ಕೊಳಗಾಗುತ್ತಿಹುದೆಂಬುದೀಗ ಮೂವರ ದುರ್ಗ ಒಂದೇಯಾಗಿ ಸಂದೇಹಕ್ಕೀಡಾಗುತ್ತದೆ ಎಂಬ ಶಬ್ದಕ್ಕರ್ಥ. ಸುಜ್ಞಾನೋದಯದಿಂ ಜೀವಭಾವ ನಿವೃತ್ತಿ ಮಾಡಿ ಶ್ರೀಗುರುಕಾರುಣ್ಯದಿಂ ಸರ್ವಾಂಗಲಿಂಗ ಸಂಬಂಧಿಯಾದ ಶರಣಂಗಲ್ಲದೆ ಅಹಂಕಾರವಳಿದು ನಿರಹಂಕಾರವಾಗಬೇಕೆಂಬುದೀಗ ಸದಾ ಶಿವಮೂರ್ತಿಲಿಂಗಸಂಗವಾಗಿಯಲ್ಲದೆಯಾಗದು ಎಂಬ ಶಬ್ದಕ್ಕರ್ಥ.

ಮಾಯೆಯನ್ನು ದೂರಮಾಡುವದು.

ವಿವರಣೆ:— ಮಾಯೆಯು ಭೇದಭಾವವನ್ನು ಹುಟ್ಟಿಸುತ್ತದೆ. ಈ ಭೇದಭಾವವಡಗಲು ಪರಮಾತ್ಮಲಿಂಗವು ಪ್ರಕಾಶಿಸಹತ್ತುವದು. (೮) ಇಂಥ ಮಾಯೆಯನ್ನು ಸಂಹರಿಸುವದು ಜೀವನ ಮುಖ್ಯ ಕರ್ತವ್ಯವು. ಸುಜ್ಞಾನ ಪ್ರಕಾಶದಿಂದಲೇ ಈ ಮಾಯೆಯು ಸಂಹಾರವಾಗುವದು. (೮) ಆದರೆ ಮನುಷ್ಯನ ದೇಹದಲ್ಲಿ ಮನಸ್ಸೆಂಬುದಿದ್ದು ಅದು ಅಜ್ಞಾನದ ಕಡೆಗೆ ಅವನನ್ನು ಹೊರಳಿಸುತ್ತದೆ. ಆದರೆ ಸುಜ್ಞಾನೋದಯವಾಗಲು ಮನೋವರ್ತನೆಯಲ್ಲಿ ಚಿಬ್ಬಿಂದುವು ಪ್ರಭಾವಿಸುತ್ತದೆ. ಅದು ಪ್ರಪಂಚವನ್ನು ನಿವೃತ್ತಿಮಾಡಿ ಮನವನ್ನು ಅವಗ್ರಹಿಸುತ್ತದೆ. ಆದರ ಇದು ಗುರುಕಾರುಣ್ಯದಿಂದ ಪ್ರಾಪ್ತವಾಗುತ್ತದೆ. (೯-೧೧) ಈ ಮಾಯೆಯನ್ನು ಹೋಗಲಾಡಿಸುವದು ಬಹು ದುಸ್ತರವಾದದ್ದು. ಬ್ರಹ್ಮ, ವಿಷ್ಣು, ರುದ್ರರೆಲ್ಲರೂ ಅದರ ಪಾಶಕ್ಕೆ ಒಳಗಾಗಿರುವರು. (೧೪)

೭. ಸಕಲವೆಂಬನ್ನಕ್ಕ ನಿಃಕಲ ಉಂಟು. ನಿಃಕಲವೆಂಬುದು ನಾಮ ರೂಪು. ಅದೆಂತೆಂದೊಡೆ ತ್ರಿವಿಧವ ಕೂಡಿ ಬೆಳಗುವ ಜ್ಯೋತಿಯ ಒಡವೆ ಘಟವಾಗಿ ಬೆಳಗೆ ಪ್ರಾಣವಾಗಿ ತೋರುವನ್ನಕ್ಕ ಮಾಯಾಸಂಗವಾಗಿಹುದು. ಅದರ ಬೆಡಗಡಗೆ ಸದಾಶಿವಮೂರ್ತಿ ಲಿಂಗವು ನಿರ್ಮಾಯ.

೮. ಕೊಂಬಿನ ಮೇಲಣ ಹಕ್ಕಿಯು ಆಕಾಶದ ಮೇಲಣ ಗಿಡಗ ಹಿಡಿಯಿತ್ತು. ಕೊಂಬು ಹಕ್ಕಿಯ ಕೂಡದೆ ಗಿಡಗನ ಕಡಿಯಿತ್ತು ಪಕ್ಷಿಯು ಗಿಡಗನ ಕೂಡೆ ಕಡಿವ ಕೊಂಬ ಚಿಟ್ಟಿಯು ಮರಿ ನುಂಗಿತ್ತು ಸದಾಶಿವಮೂರ್ತಿ ಲಿಂಗವನರಿಯಿತ್ತು.

ಟೀಕು:— ಶಿವಜ್ಞಾನೋದಯವಾದ ಶರಣನ ಶಿವಭಾವದಲ್ಲಿ ಸನ್ನಿಹಿತವಾಗಿರ್ಪ ಪರಮಾತ್ಮನೆಂಬುದೀಗ ಕೊಂಬಿನ ಮೇಲಣ ಹಕ್ಕಿ ಎಂಬ ಶಬ್ದಕ್ಕರ್ಥ. ಆತ್ಮಾಕಾಶವಲ್ಲಿರ್ಪ ಮಾಯೆಯು ಆ ಪರಮಾತ್ಮನನುಗ್ರಸಿಸಿತ್ತೆಂಬುದೀಗ ಆಕಾಶದ ಮೇಲಣ ಗಿಡಗ ಹಿಡಿಯಿತ್ತೆಂಬ ಶಬ್ದಕ್ಕರ್ಥ. ಆ ಶಿವಭಾವವು ಪರಮಾತ್ಮನೆಂಬ ಪಕ್ಷಿಯು ಮಾಯೆಗೆ ಕೂಡದೆ ಎಂಬುದೀಗ ಕೊಂಬು ಹಕ್ಕಿಯು ಕೂಡದೆ ಎಂಬ ಶಬ್ದಕ್ಕರ್ಥ. ಆ ಶಿವಭಾವವು ಮಾಯೆಯು ಸಂಹರಿಸಿತ್ತೆಂಬುದೀಗ ಗಿಡಗನ ಕಡಿಯಿತ್ತೆಂಬ ಶಬ್ದಕ್ಕರ್ಥ. ಆ ಪರಮಾತ್ಮನೆಂಬ ಪಕ್ಷಿಯನು ಮಾಯೆ ಎಂಬ ಗಿಡಗನು

ಅ ಸಕಲ ಪ್ರಪಂಚ ನಿವೃತ್ತಿಯು ಮಾಡುವ ಶಿವಭಾವವನು ಸೂಕ್ಷ್ಮಭಾವ ಚಿತ್ತಿನಿಂದುದಿಸಿದ ಸುಜ್ಞಾನ ಪ್ರಕಾಶವನವಗ್ರಹಿಸಿತ್ತೆಂಬುದೀಗ ಪಕ್ಕಿಯು ಗಿಡಗನ ಕೂಡೆ ಕಡಿವ ಕೊಂಬ ಚಿಟ್ಟಿಯು ಮುರಿ ನುಂಗಿತ್ತು ಸದಾಶಿವ ಮೂರ್ತಿಲಿಂಗವನರಿಯಿತ್ತೆಂಬ ಶಬ್ದಕ್ಕರ್ಥ.

೯. ಧರೆಯು ಹಾವು ಆಕಾಶದೊಳಗಣ ಕಪ್ಪೆ ಒಡಗೂಡಿ ಊರವೆಯಾಗಿ ಹಾವು ಗಾರುಡವ ನುಂಗಿ ಕಪ್ಪೆ ಹಿಡಿವ ಜೋಗಿಯ ನುಂಗಿತ್ತು. ಮತ್ತೆ ಕಪ್ಪೆಗೆ ಸರ್ಪನೆ ವಿರೋಧವಾಗಿ ಕಪ್ಪೆ ಜೋಗಿಯನುಗುಳ ಘಟ್ಟ ಸರ್ಪನ ನುಂಗಿತ್ತು. ಕಪ್ಪೆಯ ವಿಷ ತಾಗಿ ಜೋಗಿ ಮುತ್ತನಾದ. ಇಂತೀ ಭೇದದಿಂದಿರವು ತಾನೆ ಸದಾಶಿವಮೂರ್ತಿಲಿಂಗವು ತಾನು ತಾನೆ.

ಟೀಕು:— ಪಂಚಭೂತಾಶ್ರಯವಾದ ದೇಹದಲ್ಲಿರ್ಪ ಮನಸ್ಸೆಂಬುದೀಗ ಧರೆಯ ಹಾವು ಎಂಬ ಶಬ್ದಕ್ಕರ್ಥ. ಆತ್ಮಾಕಾಶದಲ್ಲಿರ್ಪ ಸುಜ್ಞಾನ ಸ್ವರೂಪಿಣಿಯಾದ ಮಾಯೆಯೆಂಬುದೀಗ ಆಕಾಶದೊಳಗಣ ಕಪ್ಪೆ ಎಂಬ ಶಬ್ದಕ್ಕರ್ಥ. ಅಂತಪ್ಪ ಮನ ಮಾಯೆ ಎರಡೂ ದೇಹದಲ್ಲಿ ಒಂಸೇ ಸ್ವರೂಪಿನಿಂದಿರುತ್ತಿಹವೆಂಬುದೀಗ ಒಡಗೂಡಿ ಊರವೆಯಾಗಿ ಎಂಬ ಶಬ್ದಕ್ಕರ್ಥ. ಅಂತಪ್ಪ ಮನಸ್ಸನು ಆಹ್ವಾನಿಸಿ ಹಿಡಿಯಬೇಕೆಂಬ ಭಿನ್ನ ಜ್ಞಾನಿಗಳ ಸರ್ವಾಂಗವನು ಸಂಕಲ್ಪ ಭಾವದಿಂದವಗ್ರಹಿಸಿತ್ತೆಂಬುದೀಗ ಹಾವು ಗಾರುಡವ ನುಂಗಿ ಎಂಬ ಶಬ್ದಕ್ಕರ್ಥ. ಆ ಮಾಯೆ ಮನವ ಆಹ್ವಾನಿಸಿ ಹಿಡಿಯಬೇಕೆಂಬ ಖಂಡಿತ ಜ್ಞಾನಿಗಳ ತಾನೇ ಅವಗ್ರಹಿಸಿತ್ತೆಂಬುದೀಗ ಕಪ್ಪೆ ಹಿಡಿವ ಜೋಗಿಯ ನುಂಗಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಪಿಂಡದಲ್ಲಿ ಸುಜ್ಞಾನೋದಯವಾಗಲು ಆ ಮಾಯೆಯಳಿದು ನಿವೃತ್ತಿಮುಖದಿಂ ಚಿದ್ಬಿಂದುವೆ ಪ್ರಭಾವಿಸಿ ಮನೋವರ್ತನೆಯ ನಿವೃತ್ತಿ ಮಾಡಿತ್ತೆಂಬುದೀಗ ಮತ್ತೆ ಕಪ್ಪೆಗೆ ಸರ್ಪಗೆ ವಿರೋಧವಾಗಿ ಎಂಬ ಶಬ್ದಕ್ಕರ್ಥ. ಆ ಪರಮ ಶಾಂತಿಯ ಚಿದ್ಬಿಂದು ಶಂಕಾವಿಷ ಸಂಬಂಧಿಯಪ್ಪ ಜೀವನ ಪ್ರಪಂಚಿನಿಂ ಬೇರ್ಪಡಿಸಿತ್ತೆಂಬುದೀಗ ಕಪ್ಪೆ ಜೋಗಿಯನುಗಳಿ ಎಂಬ ಶಬ್ದಕ್ಕರ್ಥ. ಆ ಜೀವಭಾವ ಪ್ರಪಂಚ ನಿವೃತ್ತಿಮಾಡಿದ ಚಿದ್ಬಿಂದುಪ್ರಕಾಶವು ಮನವನವಗ್ರಹಿಸಿತ್ತೆಂಬುದೀಗ ಸರ್ಪನ ನುಂಗಿತ್ತೆಂಬ ಶಬ್ದಕ್ಕರ್ಥ. ಆ ಪರಮಶಾಂತಿಯ ಚಿದ್ಬಿಂದುವಿನಲ್ಲಿರ್ದ ಚಿದಮೃತ ರಸವೆ ಶ್ರೀಗುರು ಕಾರುಣ್ಯದಿಂ ಸತ್ಕ್ರಿಯಾಲಿಂಗವಾಗಿ ಬಂದು ಶರಣನ ಸರ್ವಾಂಗದಲ್ಲಿ ದಟ್ಟವಾಗಲು ಆ ಸಜ್ಜೀವನು ಚಿಪ್ಪಿನಲಿಂಗ

ದಲ್ಲಿ ಪರಮಕಾಷ್ಠಿಯಾದನೆಂಬುದೀಗ ಕಪ್ಪೆಯ ವಿಷ ತಾಗಿ ಜೋಗಿ ಮುತ್ತನಾದ ಇಂತೀ ಭೇದದಿಂದಿರವು ತಾನೆ ಸದಾಶಿವಮೂರ್ತಿ ಲಿಂಗವು ತಾನು ತಾನೇ ಎಂಬ ಶಬ್ದಕ್ಕರ್ಥ.

೧೦. ನಾ ತೋಡಿದ ಬಾವಿಯಲ್ಲಿ ದುಂಡುಕ ಭೇಕ ಒಂದೇ ಆಗಿರ್ದವು. ದುಂಡುಕ ಹಸಿದು ಭೇಕನ ನುಂಗಿತ್ತು. ಭೇಕ ಸಾಯದೇ? ದುಂಡುಕನ ಕರುಳು ತಿಂದು ಒಣಗಲಾಗಿ ಅಂಗ ಬಿಗಿದು ಭೇಕನಲ್ಲಿಯೇ ಸತ್ತಿತ್ತು ಎನ್ನ ಬಾವಿ ಕೆಟ್ಟಿತ್ತು. ಸದಾಶಿವಮೂರ್ತಿಲಿಂಗವ ಕುರುಪಡಗಿತ್ತು.

ಟೀಕು:— ಆತ್ಮಂಗೆ ದೇಹ ಸಂಬಂಧವಾದಲ್ಲಿ ಸಂಸಾರ ವಿಷಯ ರಸ ಕೂಪವನುಂಟುಮಾಡಿಕೊಂಡನೆಂಬುದೀಗ ನಾ ತೋಡಿದ ಬಾವಿಯಲ್ಲಿ ಎಂಬ ಶಬ್ದಕ್ಕರ್ಥ. ಅಂತಪ್ಪ ತನುವೆಂಬ ಕೂಪದ ಮಧ್ಯದಲ್ಲಿ ಶಂಕಾ ವಿಷಯ ಸಂಬಂಧಿಯಪ್ಪ ಜೀವನು ಪರಮ ಶಾಂತಿಯ ಬಿಂದು ಅಡಗಿರುತ್ತಿಹುದೆಂಬುದೀಗ ದುಂಡುಕ ಭೇಕ ಒಂದೇ ಆಗಿದ್ದವು ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವನು ಆ ತೃಷ್ಣೆಯಿಂದ ಆ ಪರಮ ಶಾಂತಿಯ ಬಿಂದುವನವಗ್ರಹಿಸಿತ್ತೆಂಬುದೀಗ ದುಂಡುಕ ಹಸಿದು ಭೇಕನನುಂಗಿತ್ತೆಂಬ ಶಬ್ದಕ್ಕರ್ಥ. ಅಂತು ಜೀವನವಗ್ರಹಿಸಲು ಆ ಪರಮ ಶಾಂತಿಯ ಬಿಂದು ಮರವೆಯಿಂ ನಷ್ಟವಾಗದೆಂಬುದೀಗ ಭೇಕ ಸಾಯದೆ ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವಂಗೆ ಜ್ಞಾನೋದಯವಾಗಲು ಆ ಜೀವನ ಸಕಲ ಕರಂಗಳನು ಆ ಪರಮ ಶಾಂತಿಯ ಬಿಂದುವೇ ಅವಗ್ರಹಿಸಿತ್ತೆಂಬುದೀಗ ದುಂಡುಕನ ಕರುಳ ತಿಂದು ಎಂಬ ಶಬ್ದಕ್ಕರ್ಥ. ಆ ಪರಮ ಶಾಂತಿಯ ಬಿಂದು ಅವಗ್ರಹಿಸಲು ಜೀವಭಾವವಳಿದು ಸಂಸಾರ ವಿಷಯ ರಸವರತು ಹೋಯಿತ್ತೆಂಬುದೀಗ ದುಂಡುಕ ಸತ್ತು ಒಣಗಲಾಗಿ ಎಂಬ ಶಬ್ದಕ್ಕರ್ಥ. ಆ ಸಂಸಾರ ವಿಷಯ ರಸವರತು ಹೋದಲ್ಲಿ ತನ್ನ ನಿಜವಪ್ಪ ಪರಬ್ರಹ್ಮವಲ್ಲಿ ಕೂಡಬೇಕೆಂದು ಗುರೂಪಾವಸ್ಥೆಯ ಮಾಡಲು ಶ್ರೀಗುರು ಕರುಣಿಸಿ ಅಂಗವಲ್ಲಿ ಲಿಂಗ ಸಂಬಂಧವ ಮಾಡಲು ಪಂಚಾಚಾರವಿಡಿದಾಚರಿಸಿ ದೇಹಭಾವ ನಷ್ಟವಾಗಿ ಆತ್ಮನು ಮಹಾಘನವಲ್ಲಿಯೇ ಸರಸವಾದನೆಂಬುದೀಗ ಅಂಗ ಬಿಗಿದು ಭೇಕನಲ್ಲಿಯೆ ಸತ್ತಿತ್ತು ಎಂಬ ಶಬ್ದಕ್ಕರ್ಥ. ಅಂತು ಆತ್ಮನು ಲಿಂಗವಲ್ಲಿ ಸಮರಸೈಕ್ಯವಾಗಲು ವಿಷಯ

ಕೂಪ ನಷ್ಟವಾಗಿ ಲಿಂಗ ಶರಣನೆಂಬುಭಯ ಭಾವವಡಗಿ ಹೋಯಿತ್ತೆಂಬುದೀಗ ಎನ್ನ ಬಾವಿ ಕೆಟ್ಟಿತ್ತು ಸದಾಶಿವಮೂರ್ತಿ ಲಿಂಗವ ಕುರುಹಡಗಿತ್ತು ಎಂಬ ಶಬ್ದಕ್ಕರ್ಥ.

೧೧. ಉರಿಯ ಮಡುವಿನಲ್ಲಿ ಒಂದು ಜಲದ ಕುಸುಮ ಹುಟ್ಟಿತ್ತು. ಹರಿಸುರ ಬ್ರಹ್ಮಾದಿಗಳಿಗೆ ವಶವಲ್ಲ ನೋಡಾ. ಆ ಕುಸುಮದ ಎಸಳಿನ ಕೂಟಸ್ಥಲದಲ್ಲಿ ಕಪ್ಪು, ನಡುಮಧ್ಯದಲ್ಲಿ ತಮ ಕಪೋತ ವರ್ಣ, ಅದರ ತುದಿಯಲ್ಲಿ ನಾನಾವರ್ಣದ ಛಾಯೆ ಕೂಡಿ ಅಳವುತ್ತಿಹುದು. ಆ ಹೂವ ಒಂದೇ ಭೇದದಲ್ಲಿ ಕೆತ್ತು ಸದಾಶಿವ ಮೂರ್ತಿಲಿಂಗದ ಪಾದವಲ್ಲಿರಿಸಲಾಗಿ ಪದಕ್ಕೆ ಹೊರಗೊಂದು ಮುಕುಟದ ಮೇಲೇರಿತ್ತು. ಇದ ಬಲ್ಲವರಾರು ಜೋಯ್ಯವ ಹೇಳಿರಣ್ಣಾ.

ಟೀಕು:- ತಾಪತ್ರಯಾಗ್ನಿ ಸಂಬಂಧವಾದ ಸಂಸಾರ ವಿಷಯ ರಸದ ಘಾತವ ಕಾಣಬಾರದೆಂಬುದೀಗ ಉರಿಯ ಮಡುವಿನಲ್ಲಿ ಎಂಬ ಶಬ್ದಕ್ಕರ್ಥ. ಆ ಸಂಸಾರ ವಿಷಯ ರಸದ ಮಧ್ಯದಲ್ಲಿ ಸಂಚಲರೂಪವಾದ ಮನೋ ಕುಸುಮ ಹುಟ್ಟಿತ್ತೆಂಬುದೀಗ ಒಂದು ಜಲದ ಕುಸುಮ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಮನೋ ಪ್ರವೃತಿಯ ನಿಲಿಸಿಹನೆಂದೊಡೆ ಬ್ರಹ್ಮ ವಿಷ್ಣು ಮೊದಲಾದ ಸಮಸ್ತ ದೇವತೆಗಳಿಗೆ ಅಸಾಧ್ಯವೆಂಬುದೀಗ ಹರಿ ಸುರ ಬ್ರಹ್ಮಾದಿಗಳಿಗೆ ವಶವಲ್ಲ ನೋಡಾ ಎಂಬ ಶಬ್ದಕ್ಕರ್ಥ. ಆ ಮನೋ ಕುಸುಮದ ಎಸಳೆಂದೊಡೆ ಇಂದ್ರಿಯಂಗಳು, ಅಂತಪ್ಪ ಇಂದ್ರಿಯಂಗಳನೊಳಗೊಂಡಿರ್ಪ ಸ್ಥೂಲ ದೇಹವೆಲ್ಲ ಅಜ್ಞಾನಮಯವಾಗಿಹುದೆಂಬುದೀಗ ಆ ಕುಸುಮದ ಎಸಳಿನ ಕೂಟಸ್ಥಲದಲ್ಲಿ ಕಪ್ಪು ಎಂಬ ಶಬ್ದಕ್ಕರ್ಥ. ಆ ಮನಸ್ಸು ಸೂಕ್ಷ್ಮದೇಹದಲ್ಲಿ ಮರವೆಯನೆಯ್ದು ಷಡ್ವರ್ಣ ಸ್ವರೂಪವಾಗಿಹುದೆಂಬುದೀಗ ನಡುಮಧ್ಯದಲ್ಲಿ ತಮ ಕಪೋತ ವರ್ಣವೆಂಬ ಶಬ್ದಕ್ಕರ್ಥ. ಕಾರಣ ದೇಹದಗ್ರದಲ್ಲಿ ಆ ಮನಸ್ಸು ಸಕಲ ಕರಣಂಗಳ ವ್ಯವಹಾರದಲ್ಲಿ ಕೂಡಿ ಪ್ರಪಂಚಿನಲ್ಲಿ ಲಯವಾಗುತ್ತಿಹುದೆಂಬುದೀಗ ಅದರ ತುದಿಯಲ್ಲಿ ನಾನಾ ಛಾಯೆ ಕೂಡಿ ಅಳಿವುತ್ತಿಹುದೆಂಬ ಶಬ್ದಕ್ಕರ್ಥ. ಅಂತಪ್ಪ ಮನೋಮಧ್ಯದಲ್ಲಿ ಶಿವಕೃಪೆಯಿಂದ ಸುಜ್ಞಾನ ಪ್ರಕಾಶವಾಗಲು ಅಂತಪ್ಪ ಸುಜ್ಞಾನ ಪ್ರಕಾಶದಿಂ ಮನೋ ವರ್ತನೆಯಳಿದು ಸದ್ಭಾವನ ಸ್ವರೂಪವನೆಯ್ದಲು ಆ ಪುಷ್ಪವ ಕೃತಸಿಷ್ಟಯ ಹಸ್ತದಲ್ಲಿ ಪಿಡಿದು

ಸಕ್ಕೆಯಾ ಸ್ವರೂಪವಾದ ಇಷ್ಟಲಿಂಗದಲ್ಲಿ ಸಮರ್ಪಿಸುತ್ತಿರ್ದನೆಂಬುದೀಗ ಆ ಹೂವ ಒಂದೇ ಭೇದದಲ್ಲಿ ಕೆತ್ತು ಸದಾಶಿವ ಮೂರ್ತಿಲಿಂಗದ ಪಾದದಲ್ಲಿರಿಸಲಾಗಿ ಎಂಬ ಶಬ್ದಕ್ಕರ್ಥ. ಆ ಇಷ್ಟಲಿಂಗದಲ್ಲಿ ಸಂಬಂಧವಾದ ಉನ್ಮನಿತತ್ವ ಸ್ವರೂಪವಾದ ಮನಸ್ಸು ಚತುರ್ವಿಧ ಖಂಡಿತ ಪದವ ಮುಟ್ಟದೆ ಜ್ಞಾನ ಸ್ವರೂಪವಾದ ಪರಶಿವ ತತ್ವದಲ್ಲಿ ನಿಷ್ಪತ್ತಿಯಾಯಿತ್ತೆಂಬುದೀಗ ಪದಕ್ಕೆ ಹೊರಗೆಂದು ಮುಕುಟದ ಮೇಲೇರಿತ್ತು. ಇದ ಬಲ್ಲವರಾರು ಜೋಯ್ಯವ ಹೇಳಿರಣ್ಣಾ ಎಂಬ ಶಬ್ದಕ್ಕರ್ಥ.

೧೨. ಅಂಧಕಾರವೆಂಬ ಮನೆಯ ಬಾಗಿಲಲ್ಲಿ ಅಂಗವ ಕರಡಿ ಕಟ್ಟಿ ಮೂರಂಗದ ಕೋಡಗಯೋಡಿಸಿ ಕಾಡುತ್ತಿದೆ. ಮೀರಿದನೆಂಬುವರಿಲ್ಲರು ಕರಡಿಯ ನಿಲಿಸಿ ನಿನ್ನಲ್ಲಿ ಸತ್ತು ಕೋಡಗದ ಜೇಷ್ಟೆಯಲಿ ಸಿಕ್ಕಬೇಡ ನಿಮುಗಾರೂಢವ ಮಾತು ಇಂತಿವ ಮೀರಿ ನಿಂದವಂಗಲ್ಲದೆ ಸದಾಶಿವ ಮೂರ್ತಿ ಲಿಂಗವಿಲ್ಲ.

ಟೀಕು :— ಅಜ್ಞಾನ ಸಂಬಂಧವಾದ ದೇಹವೆಂಬುದೀಗ ಅಂಧಕಾರವೆಂಬ ಮನೆಯಲ್ಲಿ ಎಂಬ ಶಬ್ದಕ್ಕರ್ಥ. ಆ ದೇಹವನಾಶ್ರೈಸಿಕೊಂಡಿರ್ಪ ಇಂದ್ರಿಯ ದ್ವಾರಂಗಳಲ್ಲಿ ಎಂಬುದೀಗ ಬಾಗಿಲಲ್ಲಿ ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹವನಾಶ್ರೈಸಿಕೊಂಡಿರ್ಪ ಮಾಯೆ ಭವಪಾಶದಲ್ಲಿ ಬಿಗಿವಡೆದಿತ್ತಿಹಳೆಂಬುದೀಗ ಅಂಗದ ಕರಡಿ ಕಟ್ಟಿ ಎಂಬ ಶಬ್ದಕ್ಕರ್ಥ. ಆ ತನುತ್ರಯಂಗಳ ವ್ಯವಹಾರವಲ್ಲಿ ಸಿಕ್ಕಿರ್ಪ ಮನಸ್ಸು ಆ ಮಾಯಾವಶಗತರಾಗಿರ್ಪ ಜೀವರ ಹಾಸ್ಯಕ್ಕೀಡು ಮಾಡಿ ಕಾಡುತ್ತಿಹುದೆಂಬುದೀಗ ಮೂರಂಗದ ಕೋಡಗಯೋಡಿಸಿ ಕಾಡುತ್ತಿದೆ ಎಂಬ ಶಬ್ದಕ್ಕರ್ಥ. ಆ ಸಂಕಲ್ಪರೂಪವಾದ ಮನೋವರ್ತನೆಯ ನಿಲಿಸಿಹನೆಂಬ ಬಣವಾಗವೈಕೃತಿಗಳೆಲ್ಲರೂ ಮಾಯಾ ಪ್ರಪಂಚಿನ ಸುಖಕ್ಕೆ ಸಿಲ್ಕಿ ಲಯವಾಗಿ ಹೋದರೆಂಬುದೀಗ ಮೀರಿದನೆಂಬುವರೆಲ್ಲರೂ ಕರಡಿಯ ನಿಲಿಸಿ ನಿನ್ನಲ್ಲಿ ಸತ್ತು ಎಂಬ ಶಬ್ದಕ್ಕರ್ಥ. ಆ ಮನೋವರ್ತನೆಯಲಿ ಸಿಲ್ಕಿರ್ಪ ಅವ್ಯೆಕೃತ ಜ್ಞಾನಿಗಳು ಇಲ್ಲದ ಪರಬ್ರಹ್ಮವನುಂಟು ಮಾಡಿಕೊಂಡು ನುಡಯುತ್ತಿಹರು. ಅದು ಸಲ್ಲದೆಂಬುದೀಗ ಕೋಡಗದ ಜೇಷ್ಟೆಯಲ್ಲಿ ಸಿಕ್ಕಬೇಡ, ನಿಮುಗಾರೂಢದ ಮಾತು ಎಂಬ ಶಬ್ದಕ್ಕರ್ಥ. ಈ ಸಕಲ ಪ್ರಪಂಚು ದಾಂಟಿದವಗಲ್ಲದೆ ಅಂಗದ ನಿಜವು

ಕಾಣಬಾರದು ಎಂಬುದೀಗ ಇಂತಿವ ಮೀರಿ ನಿಂದವಗಲ್ಲದೆ ಸದಾಶಿವ ಮೂರ್ತಿ ಲಿಂಗವಿಲ್ಲ ಎಂಬ ಶಬ್ದಕ್ಕರ್ಥ.

೧೩ ಉರಿಯ ಸಿರಿಯ ನಡುವೆ ಒಂದು ಸರೋವರದಲ್ಲಿ ನರಿ ತಿರುಗಾಡುತ್ತಿದೆ. ಬಾಲ ಉಡುವಿನಂದ. ನಡು ಬಳ್ಳುವಿನ ಜೊಲ್ಲಿಯ ದಂದ. ತಲೆ ಕೋಡಗದಂತೆ ರೂಪು ನರಿಯಾಗಿ, ಆತ್ಮ ಕುಕ್ಕುರನಾಗಿ, ಏತಕ್ಕೂ ಸಿಕ್ಕದೆ ಸರೋವರದಲ್ಲಿ ಹರಿದಾಡುತ್ತಿದೆ. ಅದು ಸದಾಶಿವ ಮೂರ್ತಿಲಿಂಗವನರಿದವರಿಗಲ್ಲದೆ ಸಿಕ್ಕದು ಆ ಜೀವ.

ಟೀಕು :— ತಾಪತ್ರಯಾಗ್ನಿ ಸಂಬಂಧವಾದ ಸ್ಥೂಲದೇಹದ ಪ್ರಾರಬ್ಧಭೋಗ ಸಂಬಂಧವಾದ ಸೂಕ್ಷ್ಮದೇಹದ ಮಧ್ಯದಲ್ಲಿ ಎಂಬುದೀಗ ಉರಿಯ ಸಿರಿಯ ನಡುವೆ ಎಂಬ ಶಬ್ದಕ್ಕರ್ಥ. ಅಂತಪ್ಪ ಸೂಕ್ಷ್ಮದೇಹದ ಮಧ್ಯಸ್ಥವಾದ ಹೃದಯ ಕಮಲದಲ್ಲಿ ಜೀವನು ಹಂಸಗತಿಗಳಿಂ ಸಂಚರಿಸುತ್ತಿಹನೆಂಬುದೀಗ ಸಂದು ಸರೋವರದಲ್ಲಿ ನರಿ ತಿರುಗಾಡುತ್ತಿದೆ ಎಂಬ ಶಬ್ದಕ್ಕರ್ಥ. ಅಂತಪ್ಪ ಜೀವನ ಭವಪಾಶವು ತಮೋಗುಣದಲ್ಲಿ ಕೂಡಿರುತ್ತಿಹುದೆಂಬುದೀಗ ಬಾಲ ಉಡುವಿನಂದವೆಂಬ ಶಬ್ದಕ್ಕರ್ಥ. ಆ ಜೀವನ ಅಂತರ್ದೇಹವು ಸತ್ಪ್ರಾಣಮುಖವನೊಳಗೆ ಕೊಂಡಿಹುದೆಂಬುದೀಗ ನಡು ಬಳ್ಳುವಿನ ಜೊಲ್ಲಹದಂದವೆಂಬ ಶಬ್ದಕ್ಕರ್ಥ. ಆ ಜೀವವೃತ್ತಿ ಜ್ಞಾನವೆಂಬ ಶಿರಸ್ಸು ಮನೋವರ್ತನೆಯಲ್ಲಿ ಕೂಡಿರುತ್ತಿಹುದೆಂಬುದೀಗ ತಲೆ ಕೋಡಗದಂದ ಎಂಬ ಶಬ್ದಕ್ಕರ್ಥ ಆ ದೇಹವು ಜೀವನ ವ್ಯವಹಾರದಲ್ಲಿ ಕೂಡಿರುತ್ತಿಹುದೆಂಬುದೀಗ ರೂಪು ಸರಿಯಾಗಿ ಎಂಬ ಶಬ್ದಕ್ಕರ್ಥ. ಆ ಜೀವನು ಇಂದ್ರಿಯಗಳ ವ್ಯವಹಾರದಲ್ಲಿ ಚರಿಸುತ್ತಿಹನೆಂಬುದೀಗ ಆತ್ಮ ಕುಕ್ಕುರನಾಗಿ ಎಂಬ ಶಬ್ದಕ್ಕರ್ಥ. ಆ ಜೀವನ ನಿಲವು ಭಿನ್ನಯೋಗಾಭ್ಯಾಸಂಗಳಿಂ ಗ್ರಹಿಸಿಹೆನೆಂದೊಡೆ ಅಸಾಧ್ಯವೆಂಬುದೀಗ ಯಾತಕ್ಕು ಸಿಕ್ಕದೆ ಎಂಬ ಶಬ್ದಕ್ಕರ್ಥ. ಆ ಜೀವನು ಅಷ್ಟದಳ ಕಮಲದಲ್ಲಿ ಮನ ಪವನಂಗಳೆಂಬ ರೆಕ್ಕೆಗಳಿಂ ಚರಿಸುತ್ತಿಹುದಾಗಿ ಸುಜ್ಞಾನೋದಯದಿಂ ತನ್ನ ನಿಜವ ತಿಳಿದ ಶರಣಂಗೆ ಜೀವಭಾವವಳಿದು ಸಜ್ಜೀವ ಸ್ವರೂಪವಾಗುತ್ತಿಹುದಲ್ಲದೆ ಉಳಿದವರಿಗೆ ಅಸಾಧ್ಯವೆಂಬುದೀಗ ಸರೋವರದಲ್ಲಿ ಹರಿದಾಡುತ್ತಿದೆ, ಅದು ಸದಾಶಿವಮೂರ್ತಿ ಲಿಂಗವನರಿದವನಿಗಲ್ಲದೆ ಸಿಕ್ಕದು ಜೀವ ಎಂಬ ಶಬ್ದಕ್ಕರ್ಥ.

ಶಿವಾನುಭವ.

ಸಂ೦ ೧೨] ಮೇ ೧೯೩೮ [ಸಂಚಿಕೆ ೮

ಮಹಾದೇವಿಯಕ್ಕನ ಮದುವೆಯ ವಿವಾದ.

(ಹಿಂದಿನಿಂದ ಸಾಗಿದುದು.)

(ಲೇ:— ಶ್ರೀ ಚಂದ್ರಶೇಖರದೇವರು ಅಡ್ಡೂರು, ಮುಕ್ಕಾಂ ಬೆಂಗಳೂರು.)

ಪ್ರೊ. ಎಸ್. ಎಸ್. ಮಾಳವಾಡ ಎಮ್. ಎ. ಇವರ ಕೆಲವು ಪ್ರಶ್ನೆಗಳಿಗೆ ಹಿಂದಿನ ಲೇಖನದಲ್ಲಿ ಕೆಲವು ಉತ್ತರ ಹೇಳಿರುವೆನಾದರೂ ಇನ್ನೂ ಕೆಲವು ಅವರ ಆಕ್ಷೇಪಣೆಗಳಿಗೆ ನನಗೆ ತಿಳಿದಮಟ್ಟಿಗೆ ಇಲ್ಲಿ ಉತ್ತರಿಸುವದು ಉಚಿತವೆನಿಸದಿರದು.

ಇವರು 'ಹೀಗೆ (ಲಗ್ನವಾಗಿಲ್ಲೆಂದು) ವಾದಿಸುವವರಿಗೆ ಶೈವಭಕ್ತಿ ಸಾಮ್ರಾಜ್ಞಿಯು ಭವಿಯೊಡನೆ ಮದುವೆಯಾಗುವ ಕಲ್ಪನೆ ಸಹ್ಯವಾಗಿ ತೋರುವದಿಲ್ಲ, ಎಂದು ಬರೆದಿರುವರು. ಅಕ್ಕನವರ ವಚನಗಳನ್ನು ವಿಚಾರಿಸಿದರೆ ಅವರಿಗೆ ಕೇವಲ ಭವಿಯೊಬ್ಬನೊಡನಲ್ಲ. ಭಕ್ತರೊಡನೆಯೂ ಮದುವೆಯಾಗುವ ಇಷ್ಟವಿದ್ದಂತೆ ತೋರುವದಿಲ್ಲ ಎಂದು ಊಹಿಸಬಹುದಾಗಿದೆ. ಅವಳಲ್ಲಿ ಆವಿರ್ಭವಿಸಿದ ವಿರತಿಯೇ ಆ ತೆರನಾಗಿದೆ.

ನಾನು ಉಪಹರಿಸಿದ "ಮಿಕ್ಕಿನ ಲೋಕದ ಗಂಡರ ಸಂಬಂಧವೆ ಸಗಿಲ್ಲವಯ್ಯ" ಎಂಬ ಮಾತಿಗೆ ಇವರು 'ಅದೇ ಉಕ್ತಿಯಿಂದ ಮದುವೆಯಾಗಿದ್ದರೂ ಲೋಕದ ಗಂಡರ ಸಂಬಂಧವನ್ನು ತಡೆದುಹಾಕಿದ್ದಾಕೆಂಬ ಅಭಿಪ್ರಾಯವನ್ನೂ ಕೂಡ ನಾವು ಪಡೆಯಬಹುದಾಗಿದೆ.' ಎಂದು ಊಹಿಸಿದ್ದಾರೆ. ಆದರೆ ಇವರು 'ಗಂಡರ' ಎಂಬ ಬಹುವಚನಕ್ಕೆ

ಯಾವ ಅರ್ಥವನ್ನು ಹೇಳುವರು? ಸಾಮಾನ್ಯವಾಗಿ ಸರ್ವವ್ಯಾಪಕವಾದ 'ಲೋಕದ ಗಂಡರ' ಎಂಬ ಪದಕ್ಕೆ ಸಂಕುಚಿತಾರ್ಥ ಮಾಡಿ ಕೌಶಿಕನೋರ್ವನನ್ನೇ ಏಕೆ ಗುರಿಮಾಡಬೇಕು? ಭವಿಯ ಲಗ್ನವನ್ನು ಒಲ್ಲೆನೆಂದು ಬಿಟ್ಟುಹೋಗುವಾಗ ಅವಳ ತಾಯ್ತಂದೆಗಳು ಬಂದು ಭವಿಯಾಗಿದ್ದರೂ ಭಕ್ತನನ್ನಾದರೂ ಮಾಡಿಕೊ ಎಂದು ಹೇಳುವಾಗ ಅಕ್ಕನು ಈ ಮಾತನ್ನು ಅಂದಿರಬೇಕು. ಒಂದು ಪಕ್ಷ ಇವರು ಹೇಳುವಂತೆ ಲಗ್ನವಾಗಿ ಅನಂತರ ಕೌಶಿಕನ ಸಂಬಂಧವನ್ನು ತಡೆದುಹಾಕಿದಳೆಂದು ಹೇಳುವದಾದರೆ ಏಕವಚನವನ್ನು ಹೇಳಿದ್ದರೆ ನಡೆಯುತ್ತಿರಲಿಲ್ಲವೇ? ಮತ್ತು ಇದೇ ಲೇಖಕರು ಮುಂದೆ 'ಲೋಕದ ಗಂಡನನ್ನು ಪಡೆದಿದ್ದರೂ ಅವನು 'ಸಾವು ಕೆಡುವ' ಗಂಡನಾದುದರಿಂದ ಅವನನ್ನು ಒಲೆಯೊಳಗಿಕ್ಕು' ಎಂದು ಹೇಳಿ ಬಾಲ್ಯದ ತನ್ನ ಕನಸಿನ ...ದಿವ್ಯಸ್ವರೂಪನನ್ನು ಕಾಣುವ ಬಯಕೆಯಿಂದ ಹೊರಟುಹೋಗಿರಬೇಕೆಂದು ಊಹಿಸುವದು ತಪ್ಪಾಗಲಾರದು ಎಂದು ಹೇಳಿರುವರು. ಅಕ್ಕಗಳ ವಚನವು "ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು" ಎಂದು ಇರುವದು. ಇಲ್ಲಿಯೂ ಬಹುವಚನ ಪ್ರಯೋಗವೇ ಇದೆ. ಆದರೆ ಈ ಲೇಖಕರು ಏಕವಚನವನ್ನಾಗಿ ಮಾರ್ಪಡಿಸಿ 'ಅವನನ್ನು ಒಲೆಯೊಳಗಿಕ್ಕು' ಎಂದು ಕೌಶಿಕನೋರ್ವನನ್ನೇ ಆ ಬಿರುನುಡಿಗೆ ಗುರಿಮಾಡುವದು ಅಷ್ಟೊಂದು ಸಮಂಜಸವಾಗಿ ತೋರುವದಿಲ್ಲ. ಇದಲ್ಲದೆ ಈ ಲೇಖಕರು "ಹರಿಹರನು ಹೇಳಿದ ಮಾತು ಸತ್ಯವಾಗಿ ತೋರದ್ದರಿಂದ ಜಾಮರಸನು ಅದನ್ನು ಮಾರ್ಪಡಿಸಲು ಪ್ರಯತ್ನಿಸಬೇಕೆಂಬ ಊಹೆ ತಪ್ಪಾಗಲಿಕ್ಕಿಲ್ಲ ಎಂದು ಹೇಳುವ ಮಾತನ್ನು ಒಂದು ದೃಷ್ಟಿಯಿಂದ ಒಪ್ಪಬಹುದಾಗಿದೆ. ಏಕೆಂದರೆ ಹರಿಹರನ ಕಲ್ಪನೆಯ ಭಾಗಗಳನ್ನು ಕಿತ್ತುಹಾಕಿದ್ದರೆ ಜಾಮರಸನಿಗೆ ಬರುವ ದೋಷವಾದರೂ ಏನು?

ಇವರ ಮತ್ತೊಂದು ಪ್ರಶ್ನೆ— 'ಕಾರಿಕಾಲಮ್ಮೆ ತಾಂ ಭವಿಯೊಡನೆ ಬಾಳಕೇ? ಹೇರೂರ ಹೆಂಗೂಸು ಭವಿಗೆ ಸತಿಯಾಗಳೇ? ಎಂಬ ಹರಿಹರನ ವಾವವು ಸಮಂಜಸವೆಂದು ಏಕೆ ಹೇಳಬಾರದು? ಈ ಉದಾಹರಣೆಗಳನ್ನು ತಾಯಿತಂದೆಗಳು ಅಕ್ಕನಿಗೆ ಹೇಳಿರಬಹುದೇ? ಒಂದು ವೇಳೆ ಹೇಳಿದ್ದರೆ ಆ ಮಾತಿಗೆ ಅಕ್ಕನು ಒಡಂಬಟ್ಟಿರಬಹುದೇ? ಇದಕ್ಕೆ ಹರಿಹರನೇ ಮುಂದೆ "ಪಿರಿಯರ್ ಪುರಾತನರನೆನಗೆ ಸಮಗಟ್ಟುವರೆ? ಪರಮಪೈವಾಂಬುರಾಶಿಗಳನಿಂತು ಎಣಿಸುವರೆ?" ಎಂದು ಅಕ್ಕಗಳಿಂದಲೇ ಉತ್ತರ ಹೇಳಿಸುವನು. ಇವರಿಂದ ಇಷ್ಟೆಲ್ಲ ಕವಿಯ ಕಾವ್ಯ ಕೌಶಲತೆಯೇ ಹೊರ್ತು ಅದರಿಂದಲೇ ಅವಳು ಲಗ್ನವಾದಳೆಂದು ಹೇಳುವದು ಸಯುಕ್ತಿಕವಾಗುವದಿಲ್ಲ. ಅಥವಾ ಹರಿಹರನು ಮುಂದೆ ಕಾಲ್ಪನಿಕ ವಿವಾಹ ಮಾಡುವ ತನ್ನದುಗುಡತೆಯಿಂದಲೇ ಮೊದಲು ಈ ಉದಾಹರಣೆಗಳನ್ನು ಕೊಟ್ಟು ಕೊಂಚ ಧೈರ್ಯಸ್ಥನಾಗಿರುವನೆಂದು ಹೇಳಲು ಬಾಯದಿಲ್ಲವೇ?

ಈ ಲೇಖಕರು "..... ಶಿವಭಕ್ತರಾದ ತಾಯಿತಂದೆಗಳನ್ನು ರಕ್ಷಿಸಲಿಕ್ಕೆ ತನ್ನ ಆತ್ಮದ ಉಜ್ವಲತೆಯನ್ನು ತಾನು ಕಾಯ್ದುಕೊಳ್ಳಬಲ್ಲೆನೆಂಬ ಆತ್ಮ ವಿಶ್ವಾಸದಿಂದ ಪಾರ್ವತಿಯ ಸಂಕೇತಕ್ಕಾಗಿ ಹರಿಹರನ ಮಹಾದೇವಿಯು ಮುದುವೆಯಾಗುವದು ಅಯೋಗ್ಯವಲ್ಲ ಎಂದು ಅಭಿಪ್ರಾಯಪಡುತ್ತಾರೆ.

ಶಿವಭಕ್ತರನ್ನು ಸಲುಹಬಾರದೆಂಬ ಭಾವ ಜಾಮರಸನದೇನೂ ಇಲ್ಲ. ಅಕ್ಕನ ಆತ್ಮವಿಶ್ವಾಸಕ್ಕೂ ಯಾವ ಕೊರತೆಯನ್ನು ತಂದಿಲ್ಲ. ಈತನೂ ತಾಯಿತಂದೆಗಳ ರಕ್ಷಣೆಗೆ ಯತ್ನಿಸಿದ್ದಾನೆ. ಹರಿಹರನ ಯತ್ನಕ್ಕಿಂತಲೂ ಈತನ ಯತ್ನವು ಸುಗುಮವಾಗಿದೆ, ಸಹಜವಾಗಿದೆ, ಸುಂದರವಾಗಿದೆ. ಆದ್ದರಿಂದ ಇದನ್ನಾದರೂ ಏಕೆ ನಂಬಬಾರದು?

ಹರಿಹರನ ಅಕ್ಕನು ಲಿಂಗೈಕ್ಯವಾಗಿಲ್ಲ.

ಹರಿಹರಕವಿಯು ಮಹಾದೇವಿಯಕ್ಕನನ್ನು ತನ್ನ ಕಲ್ಪನೆಯಿಂದ ಮುನ್ನಿನಂದದಿ "ರುದ್ರಕನ್ನಿಕೆಯರೊಳು ಸಲಿಸಿ ಕರುಣಾಕರಂ" ಎಂಬುದಾಗಿ ರುದ್ರಕನ್ನಿಕೆಯನ್ನಾಗಿಯೇ ಮಾಡುತ್ತಾನೆ. ಆದರೆ ಅಕ್ಕಗಳೇ ತಮ್ಮ ವಚನದಲ್ಲಿ "ಚನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು." "ಎನ್ನ ದೇವ ಮಲ್ಲಿಕಾರ್ಜುನ ದೇವರ ಬೆರಸಿದ ಬಳಿಕ ಎನ್ನ ನಾನು ಏನೆಂದು ಅರಿಯೆನಯ್ಯ" "ಚನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ ಏನೂ ಅನ್ನೆ" ಎಂದು ಮುಂತಾಗಿ ಹೇಳಿಕೊಂಡಿರುವರು. ಇವರಲ್ಲಿ ಯಾರ ಮಾತನ್ನು ಸತ್ಯವೆಂದು ಗ್ರಹಿಸಬೇಕು?

ಹರಿಹರನು ಹೇಳುವ ನನ್ನ ಕಾರಣವು ಯೋಗ್ಯವಲ್ಲ

ಹರಿಹರನು ಹೇಳುವ ಕೊನೆಯ ಕಾರಣವು ಸಯುಕ್ತಿಕವಾಗಿ ತೋರುವದಿಲ್ಲ. ಏಕೆಂದರೆ ಯೋಗಾಂಗ ತ್ರಿವಿದಿಯಲ್ಲಿ "ಉಟ್ಟ ಸೀರೆಯ ಬಿಟ್ಟು। ಕೊಟ್ಟ ತೊಡಗೆಯ ಹರಿದು।" ಎಂದು ಅಕ್ಕಗಳೇ ತಾವು ಕೌಶಿಕನ ಮನೆಯಿಂದ ಹೊರಟ ಸನ್ನಿವೇಶದ ಸ್ವಭಾವವನ್ನು ವರ್ಣಿಸಿದ್ದಾಳೆ. ಇವರಲ್ಲಿರುವ ಇವೆರಡೂ ವಿಶೇಷಣಗಳು ಹರಿಹರನ ಮಾತಿಗೆ (ಕಾರಣಕ್ಕೆ) ಸರಿಬರುವದಿಲ್ಲ. ಹರಿಹರನು ಹೇಳುವಂತೆ ಗುರುವಿಗೆ ದಿಗಂಬರೆಯಾಗಿ ನಮಿಸುವ ಅಕ್ಕನು ಉಟ್ಟುದನ್ನು ಬಿಡುವ ಬಗೆ ಹೇಗೆ? ಭವಿಯ ಸಂಗದಲ್ಲಿರುವ ಅಕ್ಕನು ತೊಡಗೆ ತೊಡುವ ಪ್ರಸಂಗ ವಾದರೂ ಎಲ್ಲಿ? ಯಾವಾಗ ತೊಡಿಗೆಯೇ ವೈಯಲ್ಲಿಲ್ಲವೋ ಅವನ್ನು ಹರಿದುಬಿಡುವದಾದರೂ ಹೇಗೆ? ಈ ಕಾರಣಗಳಿಂದಲೇ ಹರಿಹರನು ಈ ಗೋಜಿಗೆ ಹೋಗದೆ ಕೇವಲ ಕೇಶಾಂಬರೆಯಾಗಿ ಹೋದಳೆಂದು ವರ್ಣಿಸಿರುವದು ಅವನ ಕಲ್ಪನೆಯಂತೆ ಅದು ಸಮಂಜಸವಾಗಿದೆ. ಆದರೆ ಈ ಅಕ್ಕನ ಮಾತಿಗೆ ಹೋಲಿಸಿ ನೋಡುವಾಗ ಅದು ಸಟಿಯಾಗಿ ನಿಲ್ಲಬಹುದಲ್ಲವೇ?

ಜಾವುರಸನ ಚರಿತ್ರೆಯು ಭಾವನಾವಶ ಭಕ್ತರಿಗೆ ಒಗ್ಗುವಂತಿದ್ದರೆ ಹರಿಹರನ ರೀತಿಯನ್ನಾದರೂ (ಬಾಸಿಗ ಕಟ್ಟುವದೊಂದನ್ನು ಮಾತ್ರ ಬಿಟ್ಟು) ಇನ್ನಿತರ ವಿಜ್ಞಾನವಾದಿಗಳು ಇತಿಹಾಸಜ್ಞರು ಬಿಟ್ಟುಬಿಡುವ ಕಾರಣವೇನು? ಅಕ್ಕನು ಲಗ್ನವಾಗಿ ಭವಿಯೊಡನೆ ಅಂಗಸಂಗವನ್ನನುಭವಿಸಿರುವಳೆಂದು ಹೇಳಿದಾಕ್ಷಣವೇ ಎಲ್ಲರೂ ಭಾವುಕರ ವರ್ಗವನ್ನು ಬಿಟ್ಟಂತಾಗುವದೋ ಹೇಗೆ? ಇದರಿಂದ ಅಕ್ಕನು ಲಗ್ನವಾಗಿರಲೇ ಇಲ್ಲೆಂದು ಸಾಧಿಸಲು ಬಯಸುವದಿಲ್ಲ. ಒಂದು ಪಕ್ಷ ಅವಳು ಲಗ್ನವಾಗಿದ್ದರೆ ಅವಳ ಚರಿತೆಯು ಇನ್ನಾವುದೋ ಒಂದು ರೀತಿಯಲ್ಲಿದ್ದಿರಬಹುದೆಂದು ಮಾತ್ರ ನನ್ನ ಭಾವನೆ.

ಈ ಲೇಖಕರು ಅಭಿಪ್ರಾಯಪಡುವಂತೆ "ಹನ್ನೆರಡು ವರುಷದ ಹಿರಿಯಳು ಮಹಾದೇವಿಯಕ್ಕ" ಎಂಬ ಮಾತನ್ನು ಸಾಮಾನ್ಯವಾಗಿ ಅವಳ ಕಿರಿಯತನದ ಅರುಪಿನ ಬಣ್ಣನೆಯೆಂದು ಭಾವಿಸಿಕೊಳ್ಳೋಣ. ಸಿದ್ಧವೀರಣ್ಣೊಡೆಯನು "ಷೋಡಶಪ್ರಾಯದ ಯೌವನದ ಸುಖದ ಸುಗ್ಗಿ"

ಎಂದು ಹೇಳಿದ ಮಾತನ್ನೂ ಅಂಗೀಕಾರಮಾಡಿಕೊಳ್ಳೋಣ. ಆದರೆ ನೀವು ಸಿದ್ಧವೀರಣ್ಣೊಡೆಯನ ಮಾತನ್ನು ಎಂಡಿಲ್ಲದೆ ಒಪ್ಪುವದಾದರೆ ಅಕ್ಕನಿಗೆ ಅದಕ್ಕೂ ಮೊದಲು (ಕೌಶಿಕನೊಡನೆ ರಗಳೆಯ ಅಭಿಪ್ರಾಯದಂತೆ ಲಗ್ನವಾಗುವಾಗ) ಎಷ್ಟು ವಯಸ್ಸಿರಬಹುದೆಂಬುದನ್ನು ಕೊಂಚ ಊಹಿಸಿ ಉಲ್ಲೇಖಿಸಬಲ್ಲಿರಾ? ಲಗ್ನವಾದ ಮೇಲೆ ಅರಮನೆಯಲ್ಲಿ, ಮತ್ತು ವೈರಾಗ್ಯಪರಳಾಗಿ ಹೊರಟ ಮೇಲೆ ಹಾದಿಯಲ್ಲಿ ಸಂದಿದ ಸಮಯವನ್ನು ಕಳೆಯಲು ಮಾತ್ರ ಮರೆಯಬೇಡಿ.

ವಚನದಲ್ಲಿ "ಚನ್ನ" ಎಂಬ ಪದವಿಲ್ಲದ ಮೂಲಕ ಬಸವಣ್ಣನೆಂದು ಬರೆದ ನನ್ನ ಮಾತನ್ನು ಖಂಡಿಸಲು ಹೊರಟು "ಪ್ರಭುವಾ ರೋಗಣೆಯ ಸಂಪಾದನೆಯ" ವಿಮರ್ಶೆಯನ್ನೇ ಮಾಡಿಬಿಟ್ಟಿದ್ದಾರೆ. ಒಂದೇ ಒಂದು ಮಾತಿನಲ್ಲಿ ಒಪ್ಪಿಕೊಳ್ಳುವ ಈ ವಿಚಾರವನ್ನು ಒಂದು ಪುಟದಷ್ಟು ವಿವರಿಸಿದ್ದನ್ನು ನೋಡಿದರೆ "ತೋಟ ಮೂರು ಮೊಳ, ಕಾಯಿ ಆರು ಮೊಳ" ಎಂಬ ನಾಣ್ಣುಡಿಗೆ ಸಮವಾಗುವಂತಿದೆ.

ಅಕ್ಕನು ಕೌಶಿಕನೊಡನೆ ಅಂಗಸುಖವನ್ನು ಅನುಭವಿಸಿದಳೆಂದು ಹೇಳಿದ ಹರಿಹರ ದೇವನ ಮಾತಿನಮೇಲೆ 'ಅಕ್ಕನಿಗೆ ಮಕ್ಕಳಾರು?' ಎಂದು ನಾನು ಪ್ರಶ್ನೆ ಮಾಡಿದರೆ, ಇದು ಹುರುಳಿಲ್ಲದ ತಿರುಳಿಲ್ಲದ ಪ್ರಶ್ನೆಯಾಗಿ ಪರಿಣಮಿಸಿತೆ? "ಹರದದ್ದೇ ಹಳ್ಳ ನಿಂತದ್ದೇ ತೀರ್ಥ" ಎಂಬ ಗಾದಿಯಂತೆ ನೀವು ಮಾತ್ರ ಬರೆದದ್ದೇ ಶಿಲಾಶಾಸನ; ಸಾಧಿಸಿದ್ದೇ ಸತ್ಯ; ಎಂದು ಹೇಳುವದಾದರೆ ನಾವಿಲ್ಲಿ ಮೂಕರಾಗುತ್ತೇವೆ; ವೌನರಾಗುತ್ತೇವೆ.

ಚನ್ನಬಸವಾಂಕನ ಅಭಿಪ್ರಾಯದಂತೆ ಕೇವಲ ಬಾಸಿಗ ಕಟ್ಟಿಕೊಳ್ಳುವದೊಂದನ್ನು ಮಾತ್ರ ನೀವು ಒಪ್ಪುವದಾದರೆ, ನೀವು ಇನಿತೊಂದು ಲಂಬವಾಗಿ ಲೇಖ ಬರೆಯುವದೂ ವ್ಯರ್ಥವೆ. ಏಕೆಂದರೆ ಅಕ್ಕನು ಸಂಸಾರಿಯಾಗಿ, ಸಂಸಾರದಲ್ಲಿ ಬೇಸರಹುಟ್ಟಿ, ವೈರಾಗ್ಯವಂತಳಾದಳೆಂದರೆ ಒಳ್ಳೇ ಒಳಿತಾಗುವದೆಂಬ ನಿಮ್ಮ ಭಾವನೆಯೇ ಇಲ್ಲಿ ಹಾರಿಹೋಗುವದು. ಮತ್ತು ಕೌಶಿಕನ ಕಾಮದ ದೌಡು ಅನಿತಕ್ಕೆ ತೀರುವಂತಹದೂ ಅಲ್ಲ. ಆದ್ದರಿಂದ ಅತನನ್ನು ನಿಮ್ಮ ಪಕ್ಷದಲ್ಲಿ ಸೇರಿಸಿಕೊಂಡು ಬರೀ ಬಾಸಿಗ ಕಟ್ಟಿಸಿಬಿಡುವದರಲ್ಲಿ ನಿಮ್ಮ ಇತ್ಯರ್ಥವೇನು? ಬರೀ ವಿವಾಹ ಮಾತ್ರದಿಂದ ಇಂತಹ ವೈರಾಗ್ಯ ಉದಯವಾಗುವದೆಂದೋ?

ಕೇಳಿಕೆ.

ಅಕ್ಕನು ಕೇವಲ ಕೌಶಿಕ ರಾಜನ ಮನೆಗೆ ಹೋದವ್ವನ್ನೀ ಲಗ ವಾಗಿರುವದೆಂದು ಬರೆಯು ಬಿಟ್ಟವ್ವರಿಂದ, ಅಲ್ಲಿಯ ಜನಗಳು ಹಾಗೆ ಊಹಿಸಿ ಹಬ್ಬಿಸಿರಲು ಸಾಕಷ್ಟು ಅವಕಾಶವಿದೆ ಎಂಬ ನನ್ನ ಬರವ ಣಿಗೆಗೆ— ಅಕ್ಕಗಳು ಪ್ರಥಮತಃ ಕೌಶಿಕನ ವಸತಿಗೆ ಹೋಗಿದ್ದರೆಂಬು ದಕ್ಕೆ ಪ್ರಮಾಣವೆಲ್ಲಿ? ಹರಿಹರದೇವನು ಮಾತ್ರ ಹೇಳಿಲ್ಲ. ಕಾರಣ ಈ ಲೇಖಕರ ಪ್ರಶ್ನೆಯು ತಳವಿಲ್ಲದುದಾಗಿದೆ ಎಂದು ವಿಚಾರದ ಒರಗಲ್ಲಿಗೆ ಹಚ್ಚಿಸಿ ಬರೆದುಬಿಟ್ಟಿದ್ದಾರೆ.

ಮಾರುತ್ತರ

ಅಕ್ಕನು ಕೌಶಿಕನ ಅರಮನೆಗೆ ಹೋಗದೆ, ಹರಿಹರನು ಮದುವೆ ಮಾಡಿದನೆ? ಭೋಗ ಮಾಡಿಸಿದನೇ? ೬ ನೇ ಸ್ಥಲದ ೫೧-೫೪ ನೇ ಪುಟ ಗಳಲ್ಲಿ ಬರುವ ಭೋಗ ವರ್ಣನೆಯು ಅರಮನೆಯಲ್ಲಿಯೋ? ಶರಣರ ಮನೆಯಲ್ಲಿಯೋ? ಹೀಗೆ ರಗಳೆಯಲ್ಲಿ ಅಕ್ಕನು ಅರಮನೆಯಲ್ಲಿದ್ದ ವಿಚಾರ ಸಿಕ್ಕುತ್ತಿರಲಿಕ್ಕೂ ಹರಿಹರದೇವನು ಮಾತ್ರ ಇದನ್ನು ಹೇಳಿಲ್ಲ ವೆಂದು ಹೇಳುವುದು ಸಮಂಜಸವಲ್ಲ. ಹೀಗೆ ಸುಳ್ಳು ಸಾಧಿಸುವದಕ್ಕಿಂ ತಲೂ ಸುಮ್ಮನಿರುವುದು ಲೇಸಲ್ಲವೇ? ಮತ್ತು ಅಕ್ಕಗಳು ಪ್ರಥಮತಃ ಕೌಶಿಕನ ವಸತಿಗೆ ಹೋಗಿದ್ದರೆಂಬುದಕ್ಕೆ ಪ್ರಮಾಣವೆಲ್ಲಿ?" ಎಂಬ ನಿಮ್ಮ ಪ್ರಶ್ನೆಯಲ್ಲಿರುವ 'ಪ್ರಥಮತಃ' ಎಂಬ ಶಬ್ದದ ಅಭಿಪ್ರಾಯ ವೇನು ದಯವಿಟ್ಟು ತಿಳಿಸುವಿರಾ?

ಇವರ ಗುರಿಯಿಲ್ಲದ ಉತ್ತರ.

ನಾನು ಹರಿಹರನು, ಉಡುತಡಿಯ ನಾಡನ್ನೂ, ರಾಜನ ಮತ ವನ್ನೂ ತಾಯ್ತಂದೆಗಳ ಹೆಸರನ್ನೂ ಹೇಳಿಲ್ಲವಾದ್ದರಿಂದ ಈತನ ಕಾವ್ಯವು ಸಂಪೂರ್ಣ ನಿರ್ದುಷ್ಟವಾದುದಲ್ಲವು ಎಂದು ಬರೆದುದಕ್ಕೆ— ರಾಜನ ಮತವನ್ನೂ, ಉಡುತಡಿಯ ನಾಡನ್ನೂ ಹರಿಹರನಂತೆ ಚಾಮರಸನೂ ಹೇಳಿಲ್ಲ. ಚನ್ನಬಸವಾಂಕನು ಮಾತ್ರ ಇವುಗಳನ್ನೆಲ್ಲಾ ವಿವರಿಸಿದ್ದಾನೆ. ಈತನಿಗೆ ಹರಿಹರನ ಕಾವ್ಯದ ಪರಿಚಯವಿದ್ದಿತು. ಇಂತು ನೋಡಿದರೆ ಚನ್ನಬಸವಾಂಕನ ಪುರಾಣವೇ ದಿಟವಾಗುವದು, ಚಾಮರಸನ ಪುರಾ

ಣವೇ ಸಟೆಯಾಗುವದು ಎಂದು ಅಸಮಂಜಸವಾಗಿ ಉತ್ತರಕೊಟ್ಟ ವನದನ್ನು ನೋಡಿದರೆ ಪರಮ ವಿಷಾದವೆನಿಸುತ್ತದೆ.

ಇದಕ್ಕೆ ನನ್ನ ಮಾರುತ್ತರ.

ಇವರ ಈ ಉತ್ತರದಲ್ಲಿ ಕಾತರತೆಯು ಎಡೆಯಾಡುತ್ತಿದೆ; ಕಳವ ಳವು ಒದಮೂಡುತ್ತಿದೆ. ಏಕೆಂದರೆ ಹರಿಹರನ ವಿಷಯವನ್ನು ಕೇಳಿ ದರೆ ಚನ್ನಬಸವಾಂಕನನ್ನು ತಂದು ನಿಲ್ಲಿಸಬೇಕೆ? ಹರಿಹರನಂತೆ ಚಾಮ ರಸನು ಹೇಳಿರದಿದ್ದರೂ, ಚಾಮರಸನು ಅಕ್ಕನ ಪುರಾಣವನ್ನು ಬರೆಯ ಹೊರಟವನಲ್ಲ. ಆದ್ದರಿಂದ ಆತನು ಹೇಳಿರುವಲ್ಲಿ ದೋಷವಿಲ್ಲ. ಇನ್ನು ಚನ್ನಬಸವಾಂಕನು ಇವನ್ನೆಲ್ಲಾ ವಿವರಿಸಿದ್ದಾನೆ. ಈತನಿಗೆ ಹರಿಹರನ ಕಾವ್ಯದ ಪರಿಚಯವಿದ್ದಿತು ಎಂದು ಸಾಧಿಸುವಲ್ಲಿ ನಿಮಗೆ ಯಾವ ಪ್ರಯೋಜನವಿದೆ? ಏನು ಉದ್ದೇಶವಿದೆ? ಚನ್ನಬಸವಾಂಕನು ಹರಿಹರನ ಕಾವ್ಯದ ಪರಿಚಯ ಮಾಡಿಕೊಂಡಿದ್ದರೆ ಹರಿಹರನು ಹೇಳದಿರುವದನ್ನೂ ಸಹ ಹೇಳಿದಂತಾಗುತ್ತದೆಯೆ? ಚನ್ನಬಸವಾಂಕನ ಪುರಾಣವು ದಿಟ ವಾಗಿ, ಚಾಮರಸನ ಪುರಾಣವು ಸಟೆಯಾದರೆ, ಹರಿಹರದೇವನ ರಗ ಳೆಯು ಏನಾಗಬೇಕಾಯಿತು ಕೊಂಚ ಹೇಳಬಲ್ಲಿರಾ? "ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ" ಎಂಬಂತೆ ಚಾಮರಸನನ್ನು ಸುಳ್ಳುಮಾಡಲು ಹೊರಟು ನಿಮಗೆ ಪ್ರಬಲ ಪ್ರಮಾಣವಾದ ರಗಳೆ ಯನ್ನೂ ನೀವೇ ಸುಳ್ಳುಮಾಡಿದಂತಾಗಲಿಲ್ಲವೇ? ತಾವು ಹೀಗೆಲ್ಲ ಬರೆದು ಕೊನೆಗೆ 'ಅಂತೋ ನಾಸ್ತಿ ಇಂತೋ ನಾಸ್ತಿ' ಎಂಬ ತತ್ವಕ್ಕೆ ಬರಬಾರ ದೆಂದು ನನ್ನ ಆಶಯ.[೧]

ಮಟ್ಟನ್ನರಿಯದ ಮತ್ತೊಂದು ಪ್ರಶ್ನೆ.

ಹರಿಹರನು ಐತಿಹಾಸಿಕ ದೃಷ್ಟಿಯನ್ನು ಬಿಟ್ಟು, ಸ್ವತಂತ್ರ ಮಾರ್ಗ ವನ್ನು ಕಲ್ಪಿಸಿಕೊಳ್ಳುವನೆಂಬ ಕೊಂಚ ಭಾವವನ್ನಾದರೂ ಈ ಲೇಖ

---

೧ ಇಲ್ಲಿ ಈ ಲೇಖಕರು ಹೆಸರಿನ ವಿಚಾರವನ್ನು ಕೊಂಚ ಎತ್ತಿದ್ದಾರೆ. ಈ ವಿಚಾರವಾಗಿ ನಾನು ಜನವರಿ ಸಂಚಿಕೆಯ ೨೪ ನೇ ಪುಟದಲ್ಲಿ ವಿಸ್ತಾರ ವಾಗಿ ವಿವರಿಸಿದ್ದೇನೆ. ಇಲ್ಲಿ ಪುನಃ ವಿವರಿಸುವ ಬಯಕೆಯು ಈ ಲೇಖಕನಿಗಿಲ್ಲ.

ಕರು ಆ ನನ್ನ ಬರವಣಿಗೆಯನ್ನೇ ಎತ್ತಿ ಇನ್ನು ಮುಂದಾದರೂ ತೋರಿಸಿಕೊಡಲು ಸಿದ್ಧರಿರುವರೋ? ಎಂದು ಧುಮುಕಿ ಧೈರ್ಯವಾಗಿ ಕೇಳಿರುತ್ತಾರೆ.

ಇದಕ್ಕೆ ನನ್ನ ಮಾರುತ್ತರ.

೩೭ನೇ ಇಷ್ಟಿಯ ಎಪ್ರೇಲ ತಿಂಗಳ 'ಶಿವಾನುಭವ' ದ ೨೮೬ನೇ ಪುಟದಲ್ಲಿ— "ಆತುರದ ಪ್ರೇಮಮುಂ ತಾನೆಯಾರೋಗಿಪಂ। ಭೂತಸಂಕುಳಕೆ ಮಾಂಸವನಿತ್ತು ತಣಿಯಿಪಂ"॥ ಎಂಬ ಶ್ಲೋಕವನ್ನು ವಿಮರ್ಶಿಸುತ್ತಃ— 'ಪ್ರೇಮವು ಪರಿಶುದ್ಧವಿದ್ದರೆ ಆ ಪ್ರೇಮದೊಡನೆ ತಂದ ವಸ್ತುವು ಮಂಗಲವೋ ಅಮಂಗಲವೋ ಎಂತಹದಾದರೂ ಗ್ರಾಹ್ಯವೇ. ಅದು ಕಾರಣ ಈಶನು ಸ್ವೀಕರಿಸಬೇಕಾಯಿತು.' ಎಂದು ಸ್ವೀಕಾರವನ್ನು ನಿರ್ಧಾರ ಮಾಡಿ ಮುಂದೆ— ಹಾಗಾದರೆ ಕವಿಯು, ಮಾಂಸವನ್ನು ಸ್ವೀಕರಿಸದೆ ಭೂತಗಳಿಗೆ ಕೊಟ್ಟು ಪ್ರೇಮದಿಂದ ತಣಿದನೆಂದು ಹೇಳುವನು. ಮಾಂಸವನ್ನೆಲ್ಲಿ ಭಕ್ಷಿಸಿದ? ಎನ್ನಬಹುದು, ಎಂದು ನೀವೇ ಪ್ರಶ್ನೆ ಮಾಡಿಕೊಂಡು— "ಕವಿಯು ಮಾಂಸಭಕ್ಷಣದ ಧರ್ಮದವನಾಗದಿರುವದರಿಂದ ಹೀಗೇ ತೋರಿರುವನು." ಎಂದು ಉತ್ತರ ಕೊಟ್ಟಿರುವಿರಿ. ಈ ಉತ್ತರದಿಂದ, ಶಿವನು ಮಾಂಸಭಕ್ಷಣ ಮಾಡಿದ್ದರೂ ಅದನ್ನು ಕವಿಯು ಮುಚ್ಚಿಟ್ಟಿರುವನೆಂಬ ಅಭಿಪ್ರಾಯವು ಅಭಿವ್ಯಕ್ತವಾಗುವದಿಲ್ಲವೇ? ಶಿವನ ಮಾಂಸಭಕ್ಷಣದ ನಿಜವಾದ ಐತಿಹ್ಯವು ತನ್ನ ಧರ್ಮಕ್ಕೆ ವಿರೋಧವೆಂದು ಭಾವಿಸಿ, ಭೂತಸಂಕುಳಕ್ಕೆ ಹಂಚಿದನೆಂಬ ಸ್ವತಂತ್ರ ಮಾರ್ಗವನ್ನು ಕಲ್ಪಿಸಿಕೊಂಡನೆಂಬ ಭಾವವು ಎಗ್ಗಳವಾಗಿ ತೋರುವದಿಲ್ಲವೇ? ಹೀಗೆ ಬರೆದೂ ಬರೆದಿಲ್ಲವೆಂದು ತೋರಿಸಲು "ಈ ಲೇಖಕರ ಸುಳ್ಳು ಹೇಳಿಕೆ" ಎಂದು ತಲೆಕಟ್ಟಿನಲ್ಲಿ ಬರೆದು ಬೀರಿದರೆ, ಇದರಲ್ಲಿ ಯಾರ ಅನಭಿಜ್ಞತೆಯು ಅಭಿವ್ಯಕ್ತನಾಗುತ್ತದೆಂಬುದನ್ನು ವಿಚಾರಿಸಬಲ್ಲಿರಾ? ಇನ್ನಾದರೂ "ಮಟ್ಟು ತಿಳಿದು ಮಾತಾಡಬೇಕು. ಗುಟ್ಟು ತಿಳಿದು ಗುದ್ದಾಡಬೇಕು" ಎಂಬ ನಾಣ್ಣುಡಿಯೊಂದನ್ನೂ ನೆನವಿಗೆ ತಂದುಕೊಳ್ಳುವಿರಾ?

ಲೇಖಾಂಕ ೩ ಕ್ಕೆ ಮಾರುತ್ತರ.

ಈ ಲೇಖಕರು ಲೇಖಾಂಕಗಳನ್ನು ಬಳಿಸಲು ಇಡೀ ಗ್ರಂಥಗಳನ್ನೇ ಅನುವಾದಿಸಲು ಅನುವಾಗಿದ್ದಾರೆ; ಹಿಂಜಿದ್ದನ್ನೇ ಹಿಂಜಲು ಹೊರಟಿ

ದ್ದಾರೆ. ಅಟ್ಟಿಟ್ಟದ್ದನ್ನೇ ಅಡಲು ಆರಂಭವಾಡಿದ್ದಾರೆ. ಹೀಗೆ ಹುರಳಿ ಬೆಲೆ ಹೊಸತನವಿಲ್ಲದ ಲೇಖಾಂಕಗಳನ್ನು ಎಷ್ಟು ಬರೆವರೇನು? "ಸಾವಿರ ಮಾತಿಗಿಂತ ಸಾಲದೇ ಒಂದು ಪೊನ್ನೆ"

ಅಧಿಕ ಪ್ರಸಂಗದ ಪ್ರಶ್ನೆ.

..... ಆಗ ಅಕ್ಕನ ಮನದಲ್ಲಿ ಕೌಶಿಕನು ಶಿವಭಕ್ತನಾದ ಪಕ್ಷದಲ್ಲಿ ಅವನನ್ನು ಲಗ್ನವಾಗಬೇಕೆಂಬ ಹಂಬಲವಿತ್ತೆಂದು (ಚಾಮರಸನ ದೃಷ್ಟಿಯಿಂದ) ಹೇಳಲ್ಪಡಬೇಕಾಗುತ್ತದೆ. ಮತ್ತೂ ಈ ಮಾತಿನಿಂದ ಆಗ ಒಟ್ಟು ಶಿವಭಕ್ತನನ್ನು ಮದುವೆಯಾಗುವ ಇಷ್ಟವು ಅಕ್ಕನಿಗೂ ಇದ್ದೇ ಇತ್ತೆಂದು ಬಹು ಸ್ಪಷ್ಟವಾಗಿ ತೋರುತ್ತದೆ ಎಂದು ಬರೆದಿರುವರು.

ಮಾರುತ್ತರ.

ಈ ಪ್ರಶ್ನೆಗೆ ಉತ್ತರ ಬರೆಯಲು ಇಷ್ಟವಿಲ್ಲವಾದರೂ ಬಿಟ್ಟರೆ ನಾವು ಬರೆದಿದ್ದೇ ಸಿದ್ಧಾಂತವೆಂದು ಭಾವಿಸಿಗೊಳ್ಳುವರೆಂದು ಭಾವಿಸಿ ಬರೆಯಬೇಕಾಗಿದೆ. ಅರಸನನ್ನು ಶಿವಭಕ್ತನನ್ನಾಗಿ ಮಾಡಿ ಅಕ್ಕನಿಗೆ ಬಾಸಿಗ ಕಟ್ಟುವ ಹಂಬಲವು ಚಾಮರಸನಿಗೂ ಇಲ್ಲ. ಕಟ್ಟಿಕೊಳ್ಳುವ ಹಂಬಲವು ಅಕ್ಕನಿಗೂ ಇಲ್ಲ. ಆದರೆ ಆ ದೃಷ್ಟಿಯನ್ನಿಟ್ಟು ನೋಡುವ ನಿಮ್ಮ ಹೃದಯದಲ್ಲಿ ಮಾತ್ರ ಇದೆ. ಕೌಶಿಕರಾಜನು ಶಿವಭಕ್ತನಾಗಲಾರನು. ಅತನು ಶಿವಭಕ್ತನಾಗದಿದ್ದರೆ ಅಕ್ಕನ ವ್ರತವೂ ಹಾಳಾಗಲಾರದು. ಮತ್ತು ಅಕೆಯನ್ನು ಪೆತ್ತನರ ಮರಣಶಾಸನವೂ ತಪ್ಪಿಹೋಗುವದು ಎಂದು ಉದಾತ್ತವಾದ ಭಾವನೆಯು ಚಾಮರಸನದು. ಅಕ್ಕನ ಮನದಲ್ಲಿಯೂ ಇವೇ ಭಾವನೆಗಳು ಒಡಮೂಡಿರಬೇಕು. ಮತಾಭಿಮಾನಿಯಾದ ಅರಸನು ಶಿವಭಕ್ತನಾಗುವದಿಲ್ಲೆಂದು ಅವಳಿಗೆ ಆಗಚನ್ನಾಗಿ ಗೊತ್ತಾಗಿರಲಿಕ್ಕೆಬೇಕು ಆದ್ದರಿಂದಲೇ ಅವಳು ಹಾಗೇ ಹೇಳಿರುವಳು. ಸೇವಾದರೂ ನಿಮ್ಮ ಬರಹದ ಕೊನೆಯ ಅಡಿಟಿಪ್ಪಣಿಯಲ್ಲಿ 'ವಿಷಯಿಯೂ, ಚಪಲಚಿತ್ತನೂ, ನಿಷ್ಕರುಣನೂ ಆದ ಕೌಶಿಕನು ಈ ಮೂರು ನಿಯಮಗಳಿಗೆ ಅಧಿನನಾಗಿ ವರ್ತಿಸುವದು ಅಸಾಧ್ಯವೆಂದೇ ಅಕ್ಕನ ಬಗೆಯಲ್ಲಿ ನಿಶ್ಚಯವಾಗಿರಬೇಕು, ಎಂದು ಹೇಳಿ ಮೂರು ಕರಾರುಗಳನ್ನು ಸಾಧುವನ್ನಾಗಿ ಸಾಧಿಸಿರುವಿರಿ. ಹೀಗೆಯೇ ಇಲ್ಲಿ ನಮ್ಮಿಂದಲೂ ಮಾರುತ್ತರ

ಬಂದೀತೆಂದು ನಿಮಗೆ ಈ ಪ್ರಶ್ನೆಯಾಡುವಾಗ ಹೊಳೆಯಲಿಲ್ಲವೇ? ಹೊಳೆದಿದ್ದರೆ ಹೀಗೆ ಪ್ರಶ್ನೆಮಾಡಿದ್ದು ಅಧಿಕ ಪ್ರಸಂಗವಲ್ಲದೆ ಮತ್ತೇನು? ಒಟ್ಟಿನಲ್ಲಿ ಅಕ್ಕನಿಗೆ (ಜಾಮರಸನ ಕಾವ್ಯದಲ್ಲಿ) ಶಿವಭಕ್ತರನ್ನು ವರಿಸುವ ಇಚ್ಛೆಯಿಲ್ಲ. ಭವಿಯನ್ನು ಬಿಡುವ ಸಾಹಸವಿದೆ. ರಗಳೆಯಂತೆ ಅಕ್ಕನು ಮೂರು ನಿಯಮಗಳನ್ನು ಹಾಕಿಕೊಂಡು, ಮದುವೆಯಾಗಿ, ಭವಿಯ ಸಂಗಮಾಡಿ, ತಾಯ್ತಂದೆಗಳನ್ನು ಉಳಿಸುವ ಇನಿತೊಂದು ದೀರ್ಘವಾದ ಕಟ್ಟಿಗೆ ಬೀಳುವವಳಲ್ಲ. ಮೊತ್ತ ಮೊದಲೇ ಭವಿಯನ್ನು ತೊರೆದು, ಭವವನ್ನು ಹರಿದು, ಹೆತ್ತವರ ಪೊರೆದು, ವೀರವಿರತಳಾಗುವ ಸ್ವತಂತ್ರ ವಿಚಾರವುಳ್ಳವಳು; ವಿಲಕ್ಷಣವಾದ ವ್ಯವಹಾರವುಳ್ಳವಳು.

ಇವರ ಇನ್ನೊಂದು ಸಂದೇಹ.

ಅರಸನು ಶಿವಭಕ್ತನಾಗಲು ಒಪ್ಪದಿರುವಾಗ ಬೇರೊಬ್ಬ ವೀರಶೈವನನ್ನು ವಿವಾಹವಾಗಲಿಲ್ಲವೆಂದ ಮೇಲೆ, ಆ ಅಕ್ಕನಿಗೆ ರಾಜನನ್ನೇ ವರಿಸಬೇಕೆಂಬ 'ಆಶೆ' ಏನಾದರೂ ಇತ್ತೋ ಎಂದು ಸಂಶಯವು ಬಂದೇ ಬರುತ್ತದೆ ಎಂದು ಶಂಕೆಯ ಶೃಂಖಲೆಯನ್ನು ಸುತ್ತಿಕೊಂಡಿರುವರು.

ಆ ಶೃಂಖಲೆಯ ಖಂಡನ.

ಅಕ್ಕನು ಲಗ್ನವಾಗದೆ ನಗ್ನಳಾಗಿ ಮನೆಯಿಂದ ಹೊರಟುಹೋಗುವಾಗ, ನೀವು ಮೇಲೆ ಹೇಳುವಂತೆ ಅಕ್ಕನ ತಾಯಿಯ ಮನಸ್ಸಿನಲ್ಲಿ (ಅಕ್ಕನ ಮನಸ್ಸಿನಲ್ಲಿ ಅಲ್ಲ) ಸಂಶಯ ಬಂದು ಎಲೋ ಪುತ್ರಿಯೆ! ಭವಿಯನೊಲ್ಲದಿದ್ದರೆ ಭಕ್ತರನ್ನಾದರೂ ಮಾಡಿಕೊಳ್ಳುವಿಯಾ? ಎಂದು ಕೇಳಿರಬೇಕು. ಅದಕ್ಕೆ ಅಕ್ಕಗಳು ಸಾವಮಾನ್ಯವಾಗಿ ನಾನು ಈ ಲೋಕದ ಯಾವ ಗಂಡರನ್ನೂ ಒಲ್ಲೆ. ಕೌಶಿಕನಿಗೆ ಶಿವಭಕ್ತನಾದರೆ ಆಗುವೆನೆಂದು ಹೇಳಿದ್ದು, ಕೇವಲ ನನ್ನ-ನಿಮ್ಮಗಳ ಮೇಲೆ ಬಂದ ಮೋಹ ಪ್ರಸಂಗವು ದೂರಾಗಲಿಕ್ಕೆ ಮಾತ್ರ. ಎಲೆ ಅವ್ವಾ! ನನ್ನ ಮನಸಿನ ನಿಶ್ಚಲಸ್ಥಿತಿಯನ್ನಾದರೂ ತಿಳಿ.

"ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚಲುವಂಗಾನೊಲಿದೆನವ್ವಾ! ಎಡೆಯಿಲ್ಲದ, ಕಡೆಯಿಲ್ಲದ, ತೆರಹಿಲ್ಲದ, ಕುರುಹಿಲ್ಲದ ಚಲುವಂಗಾನೊಲಿದೆ ಎಲೆ ಅವ್ವಾ! ನೀನು ಕೇಳಾ ತಾಯೆ. ಭವವಿಲ್ಲವ, ಭಯವಿಲ್ಲದ. ನಿರ್ಭಯ ಚಲುವಂಗೊಲಿದೆ ನಾನು. ಕುಲಸೀಮೆಯಿಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದು ಕಾರಣ ಚನ್ನಮಲ್ಲಿಕಾರ್ಜುನ ಚಲುವ ಗಂಡ ನೆನಗೆ. ಈ ನಾವ ಕೆಡುವ ಗಂಡರ ನೋಯ್ದು ಒಲೆಯೊಳಗಿಕ್ಕು."

ನಂದು ಸಾವಮಾನ್ಯವಾಗಿ ವಿವಾಹವ ಸುದ್ದಿಯನ್ನೇ ಎತ್ತಬೇಡೆಂಬ ಆಶಯದಲ್ಲಿ ಹೇಳಿಬಿಟ್ಟಿದ್ದಾಳೆ. ಒಂದು ಪಕ್ಷ ಅರಸನನ್ನೇ ಆಗುವ ಅಪೇಕ್ಷೆಯು ಅಕ್ಕನಿಗೆ ಇದ್ದಿದ್ದರೆ 'ನಿಮ್ಮ ಮತ ನಮಗಳವಡದು' ಎಂದು ಅರಸನು ಹೇಳಿದೊಡನೆಯೇ 'ನಮಗೆ ನಿಮ್ಮ ಸಂಗವಳವಡದು' ಎಂದು ಖಂಡತುಂಡವಾಗಿ ಎಂದೂ ಉತ್ತರಿಸುತ್ತಿರಲಿಲ್ಲ. ಹೀಗಿದ್ದೂ ನಿಮಗೆ ಸಂಶಯ ಬಂದದ್ದು ಬಹಳೇ ಆಶ್ಚರ್ಯವಾಗಿದೆ. ಇನ್ನಾದರೂ ತೊಲಗಲಿ.

ಮತ್ತೊಂದು ಕೇಳಿಕೆ.

ತನ್ನ ಉಡಿಗೆ ತೊಡಿಗೆಗಳನ್ನೆಲ್ಲ ಅರಸನಿಗೆ ಬಿಚ್ಚಿಕೊಟ್ಟು, ಪೈರಾಗ್ಯದಿಂದ ದಿಗಂಬರೆಯಾಗಿ ಹೋಗುವಷ್ಟು ಕಾರಣವು ಅಥವಾ ಕಷ್ಟವು ಆ ಅಕ್ಕನಿಗೆ ಅಲ್ಲಿ ಅಂತಹದೇನಿತ್ತು? ಎಂದು ಹುಡುಕಿದರೆ ಪ್ರಭುಲಿಂಗಲೀಲೆಯಲ್ಲಿ ಉತ್ತರ ದೊರೆಯಲಾರದೆಂದು ನನ್ನ ತಿಳವಳಿಕೆಯಲ್ಲಿದೆ. ಮತ್ತು ಆಭರಣಾದಿಗಳನ್ನು ಅರಸನಿಗೇಕೆ ಕೊಡಬೇಕಾಗಿತ್ತು? ಎಂಬ ಸಂಶಯವೂ ವಿಚಾರಿಸಲ್ಪಡತಕ್ಕದ್ದಾಗಿದೆ ಎಂದು ಮತ್ತೊಂದು ಸಂಶಯವನ್ನು ಮುಂದಲ್ಲಿ ಸಿಲ್ಕಿದ್ದಾರೆ.

ಇದಕ್ಕೆ ನನ್ನ ಹೇಳಿಕೆ.

ಜಾಮರಸ ಕವಿಯ ಕಾವ್ಯದಲ್ಲಿ ಅಕ್ಕನು ದಿಗಂಬರೆಯಾಗಲು ಕಾರಣವಿಲ್ಲವೆಂಬುದೇನೋ ಒಪ್ಪತಕ್ಕ ಮಾತಾದರೂ, ಆತನ ಅಂತರಂಗವಲ್ಲಿ ಅದಿಲ್ಲದಿಲ್ಲ. ಕಾರಣವನ್ನು ಕಾರ್ಯದಲ್ಲಿ ಅಡಗಿಸಿದ್ದಾನೆಯೇ ಹೊರ್ತು ಪ್ರತ್ಯೇಕವಾಗಿ ಚಿತ್ರಿಸಿಲ್ಲ. ಅವನ್ನೆಲ್ಲ ಚಿತ್ರಿಸಲು ಜಾಮರಸನು ಇಡೀ ಚರಿತ್ರೆಯನ್ನು ಬರೆಯಹೊರಟಿಲ್ಲ. ಸಂಕ್ಷಿಪ್ತವಾಗಿ ಸಾಗಿದ್ದಾನೆ. ಆದರೂ ಕಾರ್ಯವನ್ನು ಹೇಳಿದ ಮೇಲೆ ಕಾರಣವನ್ನು ಊಹಿ

ಬಂದೀತೆಂದು ನಿಮಗೆ ಈ ಪ್ರಶ್ನೆಯಾಡುವಾಗ ಹೊಳೆಯಲಿಲ್ಲವೇ? ಹೊಳೆದಿದ್ದರೆ ಹೀಗೆ ಪ್ರಶ್ನೆಯಾಡಿದ್ದು ಅಧಿಕ ಪ್ರಸಂಗವಲ್ಲದೆ ಮತ್ತೇನು? ಒಟ್ಟಿನಲ್ಲಿ ಅಕ್ಕನಿಗೆ (ಜಾಮರಸನ ಕಾವ್ಯದಲ್ಲಿ) ಶಿವಭಕ್ತರನ್ನು ವರಿಸುವ ಇಚ್ಛೆಯಿಲ್ಲ. ಭವಿಯನ್ನು ಬಿಡುವ ಸಾಹಸವಿದೆ. ರಗಳೆಯಂತೆ ಅಕ್ಕನು ಮೂರು ನಿಯಮಗಳನ್ನು ಹಾಕಿಕೊಂಡು, ಮದುವೆಯಾಗಿ, ಭವಿಯ ಸಂಗಮಾಡಿ, ತಾಯ್ತಂದೆಗಳನ್ನು ಉಳಿಸುವ ಇನಿತೊಂದು ದೀರ್ಘವಾದ ಕಟ್ಟಿಗೆ ಬೀಳುವವಳಲ್ಲ. ಮೊತ್ತ ಮೊದಲೇ ಭವಿಯನ್ನು ತೊರೆದು, ಭವಸವನ್ನು ಹರಿದು, ಹೆತ್ತವರ ಪೊರೆದು, ವೀರವಿರತಳಾಗುವ ಸ್ವತಂತ್ರ ವಿಚಾರವುಳ್ಳವಳು; ವಿಲಕ್ಷಣವಾದ ವ್ಯವಹಾರವುಳ್ಳವಳು.

ಇವರ ಇನ್ನೊಂದು ಸಂದೇಹ.

ಅರಸನು ಶಿವಭಕ್ತನಾಗಲು ಒಪ್ಪದಿರುವಾಗ ಬೇರೊಬ್ಬ ವೀರಶೈವನನ್ನು ವಿವಾಹವಾಗಲಿಲ್ಲವೆಂದ ಮೇಲೆ, ಆ ಅಕ್ಕನಿಗೆ ರಾಜನನ್ನೇ ವರಿಸಬೇಕೆಂಬ 'ಆಶ' ಏನಾದರೂ ಇತ್ತೋ ಎಂದು ಸಂಶಯವು ಒಂದೇ ಬರುತ್ತದೆ ಎಂದು ಶಂಕೆಯ ಶೃಂಖಲೆಯನ್ನು ಸುತ್ತಿಕೊಂಡಿರುವರು.

ಆ ಶೃಂಖಲೆಯ ಖಂಡನ.

ಅಕ್ಕನು ಲಗ್ನವಾಗದೆ ನಗ್ನಳಾಗಿ ಮನೆಯಿಂದ ಹೊರಟುಹೋಗುವಾಗ, ನೀವು ಮೇಲೆ ಹೇಳುವಂತೆ ಅಕ್ಕನ ತಾಯಿಯ ಮನಸ್ಸಿನಲ್ಲಿ (ಅಕ್ಕನ ಮನಸ್ಸಿನಲ್ಲಿ ಅಲ್ಲ) ಸಂಶಯ ಬಂದು ಎಲೋ ಪುತ್ರಿಯೆ! ಭವಿಯನೊಲ್ಲದಿದ್ದರೆ ಭಕ್ತರನ್ನಾದರೂ ಮಾಡಿಕೊಳ್ಳುವಿಯಾ? ಎಂದು ಕೇಳಿರಬೇಕು. ಅದಕ್ಕೆ ಅಕ್ಕಗಳು ಸಾಮಾನ್ಯವಾಗಿ ನಾನು ಈ ಲೋಕದ ಯಾವ ಗಂಡರನ್ನೂ ಒಲ್ಲೆ. ಕೌಶಿಕನಿಗೆ ಶಿವಭಕ್ತನಾದರೆ ಆಗುವೆನೆಂದು ಹೇಳಿದ್ದು, ಕೇವಲ ನನ್ನ-ನಿಮ್ಮಗಳ ಮೇಲೆ ಬಂದ ದುಃಖ ಪ್ರಸಂಗವು ದೂರಾಗಲಿಕ್ಕೆ ಮಾತ್ರ. ಎಲೆ ಅವ್ವಾ! ನನ್ನ ಮನಸಿನ ನಿಶ್ಚಲಸ್ಥಿತಿಯನ್ನಾದರೂ ತಿಳಿ.

"ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚಲುವಂಗಾನೊಲಿದೆನವ್ವಾ!
ಎಡೆಯಿಲ್ಲದ, ಕಡೆಯಿಲ್ಲದ, ತೆರಹಿಲ್ಲದ, ಕುರುಹಿಲ್ಲದ ಚಲುವಂಗ

ನೊಲಿದೆ ಎಲೆ ಅವ್ವಾ! ನೀನು ಕೇಳಾ ತಾಯೆ. ಭವವಿಲ್ಲದ, ಭಯವಿಲ್ಲದ, ನಿರ್ಭಯ ಚಲುವಂಗೊಲಿದೆ ನಾನು. ಕುಲಸೀಮೆಯಿಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದು ಕಾರಣ ಚನ್ನಮಲ್ಲಿಕಾರ್ಜುನ ಚಲುವ ಗಂಡ ನೆನಗೆ. ಈ ಸಾವ ಕೆಡುವ ಗಂಡರ ಮೊಯ್ಲು ಒಲೆಯೊಳಗಿಕ್ಕು."

ಎಂಬ ಸಾಮಾನ್ಯವಾಗಿ ವಿವಾಹದ ಸುದ್ದಿಯನ್ನೇ ಎತ್ತಬೇಡೆಂಬ ಅಭಿಪ್ರಾಯದಲ್ಲಿ ಹೇಳಿಬಿಟ್ಟಿದ್ದಾಳೆ. ಒಂದು ಪಕ್ಷ ಅರಸನನ್ನೇ ಆಗುವ ಅಪೇಕ್ಷೆಯು ಅಕ್ಕನಿಗೆ ಇದ್ದಿದ್ದರೆ 'ನಿಮ್ಮ ಮತ ನಮಗಳವಡದು' ಎಂದು ಅರಸನು ಹೇಳಿದೊಡನೆಯೇ 'ನಮಗೆ ನಿಮ್ಮ ಸಂಗವಳವಡದು' ಎಂದು ಖಂಡತುಂಡವಾಗಿ ಎಂದೂ ಉತ್ತರಿಸುತ್ತಿರಲಿಲ್ಲ. ಹೀಗಿದ್ದೂ ನಿಮಗೆ ಸಂಶಯ ಬಂದದ್ದು ಬಹಳೇ ಆಶ್ಚರ್ಯವಾಗಿದೆ. ಇನ್ನಾದರೂ ತೊಲಗಲಿ.

ಮತ್ತೊಂದು ಕೇಳಿಕೆ.

ತನ್ನ ಉಡಿಗೆ ತೊಡಿಗೆಗಳನ್ನೆಲ್ಲ ಅರಸನಿಗೆ ಬಿಚ್ಚಿಕೊಟ್ಟು, ಸ್ವೈರಾಗ್ಯದಿಂದ ದಿಗಂಬರೆಯಾಗಿ ಹೋಗುವಷ್ಟು ಕಾರಣವು ಅಥವಾ ಕಷ್ಟವು ಆ ಅಕ್ಕನಿಗೆ ಅಲ್ಲಿ ಅಂತಹದೇನಿತ್ತು? ಎಂದು ಹುಡುಕಿದರೆ ಪ್ರಭು ಲಿಂಗಲೀಲೆಯಲ್ಲಿ ಉತ್ತರ ದೊರೆಯುವಾರದೆಂದು ನನ್ನ ತಿಳವಳಿಕೆಯಲ್ಲಿದೆ. ಮತ್ತು ಆಭರಣಾದಿಗಳನ್ನು ಅರಸನಿಗೇಕೆ ಕೊಡಬೇಕಾಗಿತ್ತು? ಎಂಬ ಸಂಶಯವೂ ವಿಚಾರಿಸಲ್ಪಡತಕ್ಕದ್ದಾಗಿದೆ ಎಂದು ಮತ್ತೊಂದು ಸಂಶಯದಲ್ಲಿ ಸಿಲ್ಕಿದ್ದಾರೆ.

ಇದಕ್ಕೆ ನನ್ನ ಹೇಳಿಕೆ.

ಜಾಮರಸ ಕವಿಯ ಕಾವ್ಯದಲ್ಲಿ ಅಕ್ಕನು ದಿಗಂಬರೆಯಾಗಲು ಕಾರಣವಿಲ್ಲವೆಂಬುದೇನೋ ಒಪ್ಪತಕ್ಕ ಮಾತಾದರೂ, ಆತನ ಅಂತರಂಗದಲ್ಲಿ ಅದಿಲ್ಲದಿಲ್ಲ. ಕಾರಣವನ್ನು ಕಾರ್ಯದಲ್ಲಿ ಅಡಗಿಸಿದ್ದಾನೆಯೇ ಹೊರತು ಪ್ರತ್ಯೇಕವಾಗಿ ಚಿತ್ರಿಸಿಲ್ಲ. ಅವನ್ನೆಲ್ಲ ಚಿತ್ರಿಸಲು ಜಾಮರಸನು ಇಡೀ ಚರಿತ್ರೆಯನ್ನು ಬರೆಯಹೊರಟಿಲ್ಲ. ಸಂಕ್ಷಿಪ್ತವಾಗಿ ಸಾಗಿದ್ದಾನೆ. ಆದರೂ ಕಾರ್ಯವನ್ನು ಹೇಳಿದ ಮೇಲೆ ಕಾರಣವನ್ನು ಊಹಿ

ಸಲಾಗದೇ? ಒಂದು ವೇಳೆ ಹೇಳಲೇಬೇಕೆಂದರೆ ರಾಜನು ಅಕ್ಕನ ಮಾತಿಗೆ ಶಿವಭಕ್ತನಾಗಲು ಒಪ್ಪದಿರುವಾಗ ಅಕ್ಕಗಳಾದರೂ ನಿರ್ಬಿಡೆಯಿಂದ ನಿಮ್ಮ ಸಂಗ ನಮಗಳವಡದೆಂದು ಹೇಳಿ ಎದ್ದು ಹೊರಟಿರಬೇಕು. ಆಗ ಆತನು ತನ್ನ ಮೋಹಾವೇಶದಿಂದಲೂ ರಾಜದರ್ಪದಿಂದಲೂ ಅವಳನ್ನು ಎಳೆಯಲು ಮುಂದಾಗಿರಬೇಕು. ಆಗ ಅವಳು ಉಡಿಗೆ ತೊಡಿಗೆಗಳನ್ನು ಬಿಟ್ಟುಕೊಟ್ಟಿರಬೇಕು. ಇದು ಚಾಮರನು ಚಿತ್ರಿಸಿದ ಚಿತ್ರಿಯಿಂದ ಊಹಿಸಲ್ಪಡುತ್ತದೆ ಈ ಊಹೆಯು ಸತ್ಯವಾಗಿ ಪರಿಣಮಿಸುವದಲ್ಲದೆ ಚಾಮರಸನ ಅಭಿಪ್ರಾಯವೂ ಸತ್ಯವಾದುದೆಂದು ಕೆಳಗಿನ ದೃಷ್ಟಾಂತದಿಂದ ದೃಷ್ಟವಾಗುತ್ತದೆ.

"ಉಟ್ಟಸೀರೆಯ ಸೆಳೆದು | ತೊಟ್ಟ ತೊಡಿಗೆಯ ಹರಿದು।
ಬಿಟ್ಟಿನೋ ನಾನು ಬಿಡುಮುಡಿಯ ಎಲೆ ದೇವ!।
ಕೊಟ್ಟಿನೋ ಎನ್ನ ತನು ಮನವ ॥೮॥

—ಯೋಗಾಂಗತ್ರಿವಿಧಿ.

ಈ ಅಕ್ಕನ ಉಕ್ತಿಯನ್ನು ವಿಮರ್ಶಿಸಿದರೆ ಚಾಮರಸನ ಮಾತು ಸತ್ಯವೆಂದೂ ಹರಿಹರನದು ಕಾಲ್ಪನಿಕವೆಂದೂ ನಿರ್ಧರವಾಗುತ್ತದೆ. ಮತ್ತು ಹರಿಹರನ ನಗ್ನತೆಯ ಕಾರಣವನ್ನು ಇದಕ್ಕೆ ಸ್ವಲ್ಪ ಸರಿಹಚ್ಚಿ ದಿಟ್ಟಿಸುವ. ಹರಿಹರನ ಅಕ್ಕನು ಉಡಿಗೆತೊಡಿಗೆಗಳನ್ನು ಬಿಡುವಂತಹ ಸನ್ನಿವೇಶವೇ ಇಲ್ಲ. ಏಕೆಂದರೆ ಪವಡಿಸುವಾಗ ತೊಡಿಗೆಗಳನ್ನು ಹಾಕಿಕೊಳ್ಳುವದೇ ಅನುಚಿತ. ಹಾಗು ಮೊದಲೇ ಸೀರೆಯನ್ನು ಬಿಟ್ಟು ಬಂದು ಗುರುವಿಗೆ ನಮಸ್ಕರಿಸಿದ್ದರಿಂದ ಹೊರಡುವಾಗ ಸೀರೆಯನ್ನು ಮರಳಿ ಬಿಡುವ ಪ್ರಸಂಗವೂ ಇಲ್ಲ. ಆದಕಾರಣ ಹರಿಹರನು ತನ್ನ ಕಲ್ಪನೆಗೆ ತಕ್ಕಂತೆ "ಆಶಾರಹಿತೆ ಕೇಶಾಂಬರೆಯಾಗಿ" ಹೊರಟುಹೋದಳೆಂದು ಬಣ್ಣಿಸಿಬಿಡುತ್ತಾನೆ. ಹೀಗೆ ಹೇಳಿದಲ್ಲಿ 'ಉಟ್ಟ ಸೀರೆಯ ಸೆಳೆದು। ತೊಟ್ಟತೊಡಿಗೆಯ ಹರಿದು।' ಎಂಬ ಅಕ್ಕನ ಮಾತಿಗೇನೆ ಅತ್ಯಂತ ವಿರೋಧವಾಗುವದಿಲ್ಲವೇ? "ಕ್ರಮದಲುಟ್ಟುಡುಗೊರೆಯ ತೊಡಿಗೆಯ ನಿತ್ತ ಕರಸಂಗೆ" ಎಂಬ ಚಾಮರಸನ ನುಡಿಗೂ ಈ ಅಕ್ಕನ ಹಾಡಿಗೂ ವಿಶೇಷ ವಿರೋಧವಿಲ್ಲವಾದ್ದರಿಂದ ಚಾಮರಸನು ಹೇಳುವದೇ ಸತ್ಯ. ಇದೊಂದು ಪ್ರಬಲವಾದ ಉದಾಹರಣೆಯಿಂದಲೇ ಹರಿಹರನ ಮಾರ್ಗವು

ಕಾಲ್ಪನಿಕವೆಂದು ಚನ್ನಾಗಿ ಕಾಣಬರುವದಿಲ್ಲವೇ? ಮತ್ತು ಅರಸನು ಬಲಾತ್ಕರಿಸಿದಾಗ ವಿರತಿಭಾವವನ್ನು ತಳೆದ ಮಹಾದೇವಿಯಕ್ಕನು ಅರಸನಿಗಲ್ಲದೆ ಆಭರಣದ ಆಶೆಯಿಂದ ಮನೆಯವರನ್ನು ಕರೆದು ಕೊಡಬೇಕಾಗಿತ್ತೆ? ವಿರತಿಯಲ್ಲಿ ಯಾರಾದರೇನು? ಯಾವುದಾದರೇನು? ಬಸುಟಿ ಬಿಡುವದೇ ಒಂದು ಸ್ವಭಾವ. ಆದ್ದರಿಂದ ಆಭರಣಾದಿಗಳನ್ನು ಅರಸನಿಗೆ ಏಕೆ ಕೊಡಬೇಕಾಗಿತ್ತು? ಎಂಬ ನಿಮ್ಮ ಸಂಶಯವು ತಾನೇ ಸಡಲಿಹೋಗುತ್ತದೆ.

ವಿಚಾರವಿಲ್ಲದ ಇನ್ನೊಂದು ವಿಮರ್ಶೆ.

ಚಾಮರಸನು ಹೇಳುವಂತೆ ಮೊದಲಿಗೆ ಯಾವದೊಂದೂ ಬಲಾತ್ಕಾರವಿಲ್ಲದೆ ಮದುವೆಯಾಗುವೆನೆಂದು (ಲಿಂಗವಂತನಾದರೆ) ಮನಮಾಡುವಂತಹ, ಸಮ್ಮತಿಕೊಡುವಂತಹ ಸ್ವಭಾವವು ಅಕ್ಕಗಳದಾಗಿರಲಿಲ್ಲ. ಇದನ್ನು ಆಕೆಯ ವಚನಗಳಿಂದಲೇ ತಿಳಿಯಬಹುದು.

ಇದಕ್ಕೆ ಸಮಾಧಾನ.

ಆಹಾ! ಏನು ವಿಚಾರ! ಏನು ವಿಮರ್ಶೆ!! ಇವರ ಈ ಪ್ರಶ್ನೆ ಸಂಸ್ಕೃತದಲ್ಲಿರುವ "ಕಂಬಲವಂತಂ ನ ಬಾಧತೇ ಶೀತಲಂ?" "ಕಾ ಶೀತಲವಾಹಿನೀ" ಎಂಬ ಪ್ರಶ್ನೆಗಳಂತೆಯೇ ಇದೆ. ಆದರೆ ಇವುಗಳಲ್ಲಿ ಪಾಂಡಿತ್ಯಪ್ರದರ್ಶನವಿದೆ. ಇವರ ಪ್ರಶ್ನೆಯಲ್ಲಿ ಮಾತ್ರ....." ನೋಡಿ ಈ ಲೇಖಕರು ಬಲಾತ್ಕಾರವಿಲ್ಲದೆ ಮದುವೆಯಾಗಲು ಮನಮಾಡಿದಳೆಂದು ಚಾಮರಸನ ಮೇಲೆ ದೋಷ ಹೊರಿಸಲು ಹೊರಟು, ಕಂಸಿಸಲ್ಲಿ (ಲಿಂಗವಂತನಾದರೆ) ಎಂಬ ಬಲಾತ್ಕಾರ ಸೂಚಕಪದವನ್ನೂ ತಾವೇ ತೋರಿಸಿ, ಚಾಮರಸನನ್ನು ತಾವೇ ನಿರ್ದೋಷಿಯನ್ನಾಗಿ ಮಾಡಿದ್ದಾರೆ. ಮತ್ತು ನನ್ನಿಂದ ಬಯಿಸಿದ ಉತ್ತರವನ್ನು ಆ ಸಂಸ್ಕೃತ ಪದ್ಯಗಳಲ್ಲಿರುವಂತೆ ತಾವೇ ಸೇರಿಸಿಬಿಟ್ಟಿದ್ದಾರೆ. ಅಪರೊಂದು ವಿಧದಲ್ಲಿ ಜಾಣರು. ಇವರೊಂದು ವಿಧದಲ್ಲಿ.....ರು.

ನೆಲೆಯಿಲ್ಲದ ನುಡಿ

ಕೌಶಿಕನು ಕಾರ್ಯಾಕಾರ್ಯವಿವೇಕಿಯೂ ತಕ್ಕಮಟ್ಟಿಗೆ ಗುಣವಂತನೂ ಇದ್ದನು ಎಂಬ ನನ್ನ ಮಾತಿಗೆ— ತರುಣಿಯಾದ ಅಕ್ಕನು, ಲಗ್ನ

ಆವವಳೋ ಆಗದವಳೋ ಎಂಬುದನ್ನು ವಿಚಾರಿಸದೆ ನೋಡಿದೊಡನೆ ಅದೆಂದಿಗೂ ಕಾಮಾತುರನಾಗುತ್ತಿರಲಿಲ್ಲ (ದೂರದಿಂದ ಪರನಾರಿಯರನ್ನು ಕನ್ನೆ ಆಥವಾ ಸತಿಯೆಂದು ನಿರ್ಧರಿಸುವದು ತಿಣ್ಣ.) ಪರಸ್ತ್ರೀ ಎಲ್ಲಿರುವಳೋ ಎಂಬ ಸಂಶಯದಿಂದ ಅಂಜದೇ ಅಳುಕದೇ ಹೋಗುತ್ತಿರಲಿಲ್ಲ. ಆದ್ದರಿಂದ ಆ ಗುಣಗಳು ಮುಚ್ಚಿಹೋಗಿದ್ದವು, ಎಂಬಂಶದಲ್ಲಿ ಉತ್ತರಕೊಟ್ಟಿರುವರು.

ಮಾರುತ್ತರ.

ವಿಚಾರಿಸಿದರೆ ಇದರಲ್ಲಿ ಏನೊಂದೂ ತಿರುಳಿಲ್ಲ. ಏಕೆಂದರೆ ಯಾವ ಕಾರ್ಯವಾದರೂ ತ್ರಿಕರಣಗಳಿಂದ ಸಾಗುತ್ತವೆ ಎಂಬುದನ್ನು ನೆನವಿನಲ್ಲಿಡಬೇಕು. ಹಾಗೆ ಕೌಶಿಕನು ಅಕ್ಕನನ್ನು ನೋಡಿ ಮನಸ್ಸಿನಲ್ಲಿ ಮೋಹಿಸಿದಾಗ ಮಾತ್ರ ಮನೋಧೈರ್ಯವು ಅಳದಿರಬಹುದು. ಗುಣ ಹರಿದಿರಬಹುದು. ಬುದ್ಧಿ ಸರಿದಿರಬಹುದು. ಆದರೆ ಆತನು ಅದೇ ಅವಿವೇಕವನ್ನೇ ಕಾರ್ಯದಲ್ಲಿ ತರಲಿಲ್ಲ. ಆಗ ವಿಚಾರ ಮಾಡಿದನು. ಈಗಲೇ ಬಲಾತ್ಕಾರಮಾಡುವದು ಅನುಚಿತವು. ಆದ್ದರಿಂದ ಅರಮನೆಗೆ ಹೋಗಿ ಹೇಳಿ, ಕೇಳಿ ವರಿಸುವದು ಉಚಿತವೆಂದು ಭಾವಿಸಿ ಹಾಗೆಯೇ ಅರಮನೆಗೆ ತೆರಳಿದನು. ಇದು ಆತನ ಕಾರ್ಯಾಕಾರ್ಯವಿವೇಕವಲ್ಲದೆ ಮತ್ತೇನು? ತರುಣಿಯಾದ ಅಕ್ಕನು, ಕನ್ನೆಯೋ, ಸತಿಯೋ ಎಂಬುದನ್ನು ನಿರ್ಧಾರಿಸದೆ ಅದೆಂದಿಗೂ ಕಾಮಾತುರನಾಗುತ್ತಿರಲಿಲ್ಲ ಎಂಬುದಾಗಿ ಈ ಲೇಖಕರದೊಂದು ದೊಡ್ಡ ಪ್ರಶ್ನೆಯಿದೆ. ಕಾಮುಕರಿಗೆ ಇವಳು ಲಗ್ನವಾದವಳು ಆಗದವಳು ಎಂಬ ನಿರ್ಬಂಧವಿದೆಯೇ? ಇದರಿಂದ ನಿಮ್ಮ ಅಭಿಪ್ರಾಯವೇನು? ಹಾಗೆ ಕಾಮವಾಸನೆ ಜನಿಸಿದರೆ ಗುಣವಂತರಲ್ಲವೆಂದೋ? ಆಥವಾ ಕನ್ನೆಯರನ್ನು ಬಯಿಸಿ ತರುಣರು ವಿವಾಹವಾಗಬಾರದೆಂದೋ? ಇವೆರಡರಲ್ಲಿ ನೀವು ಯಾವ ಅಭಿಪ್ರಾಯವನ್ನಿಟ್ಟುಕೊಂಡಿದ್ದರೂ ಅದು ತಪ್ಪು. ಕೌಶಿಕನು ಪುರುಷ ಸಾಮಾನ್ಯವಾಗಿ ಮೋಹಿಸಿದ್ದರೂ ಪರಸ್ತ್ರೀಯೆಂಬ ಅಂಜಿಕೆಯಿಂದಲೂ ಅಳುಕಿನಿಂದಲೂ ಬಲಾತ್ಕರಿಸುವದನ್ನು ಬಿಟ್ಟು ಅರಮನೆಗೆ ತೆರಳಿದನು. ಕನ್ನೆಯಿರಲಿ ಸತಿಯಿರಲಿ ಸೌಂದರ್ಯವತಿಯಿದ್ದರೆ ಮನಸೋಲುವದು ಸಹಜವಾದ ಮಾತು. ಆದರೆ ಅದನ್ನು ಹಾಗೆಯೇ ಹರಿಬಿಟ್ಟು ತತ್ಕ್ಷಣವೇ ಕಾರ್ಯ

ಪ್ರವೃತ್ತರಾದಿರುವದೇ ಗುಣ; ಇದೇ ಕಾರ್ಯಾಕಾರ್ಯವಿವೇಕ. ಇವು ಈ ಲೇಖನದಲ್ಲಿ ಇವೆ. ಆದ್ದರಿಂದ ಈತನೂ ಕಾರ್ಯಾಕಾರ್ಯವಿವೇಕಿ, ತಕ್ಕ ಮಟ್ಟಿಗೆ ಗುಣಿ ಎಂದು ಹೇಳುವಲ್ಲಿ ಯಾವ ದೋಷವೂ ಇಲ್ಲ.

ದೃಷ್ಟಿಕೋನವಿಲ್ಲದ ದೃಷ್ಟಾಂತ.

ಕರಾರನ್ನು ಮುಕ್ತಿ ಕೊಲ್ಲುವಷ್ಟು ಕೌಶಿಕನು ಕಟುಕನಿದ್ದಿಲ್ಲ ಎಂಬ ಸತ್ಯವನ್ನು ವಿಚಾರಕ್ಕೆ ಈ ಲೇಖಕರು, ಒಂದು ಅನುಚಿತವಾದ ದೃಷ್ಟಾಂತವನ್ನು ಕೊಟ್ಟು ಕೃತಾರ್ಥರಾಗಲು ಹೆಣಗಿದ್ದಾರೆ. ಆದರೆ ಅದರಿಂದ ಅವರು ಕೃತಾರ್ಥರಾಗಲು ಶಕ್ಯವಿಲ್ಲ. ಆ ಕತೆಯ ಸನ್ನಿವೇಶಗಳನಷ್ಟು ವಿವೇಚಿಸುವ.

ಇವರು ದೃಷ್ಟಾಂತಕ್ಕಾಗಿ ಎತ್ತಿಕೊಂಡ ಕಥಾನಾಯಕನು ಕಡಲೇ ಪಟ್ಟಿ ಸ್ಟೇಶನ್ ಮಾಸ್ತರನು. ಈತನಿಗಿರುವ ಸನ್ನಿವೇಶಗಳಾವು? ಕೌಶಿಕನಿಗಿರುವ ಸನ್ನಿವೇಶಗಳಾವು? ಎಂಬುದನ್ನು ಸ್ವಲ್ಪಾ ಯೋಚಿಸದೆ ಈತನನ್ನು ಉದಹರಿಸಿಬಿಟ್ಟಿದ್ದಾರೆ. ಈ ಕ್ಷುಲ್ಲಕ ಉದಾಹರಣೆಯಿಂದ ಇವರ ಬರಹದ ಬಿಗುವೇ ಸಡಲಿಹೋದಂತಾಗಿದೆ. ಇವರ ಕಥಾನಾಯಕನಿಗೆ ಪಾತ್ರವು ಏಕಾಂತದಲ್ಲಿ ಲಭ್ಯವಾಗಿದೆ. ಅದರಲ್ಲಿ ಕೈಯಲ್ಲಿ. ಮತ್ತು ಆತನ ಮನೋಭಾವ ಕ್ಷಣಕಾಲ ಕಾನೋಜ್ಞೆಯೊಂದನ್ನು ತೀರಿಸಿಕೊಂಡು ಕೈಬಿಡುವದು. ಇಲ್ಲಿ ಇವಾವೂ ಸನ್ನಿವೇಶಗಳಿಲ್ಲ. ಹಾಗು ಭೋಕವರಿಯುವಂತೆ ವಿವಾಹಿತನಾಗಿ, ಸತಿಯನ್ನಾಗಿ ಕೈವಿಡಿದು, ಸಂಸಾರ ಸುಖವನ್ನು ಅನುಭವಿಸಬೇಕೆಂಬುದು ಕೌಶಿಕನ ಇಷ್ಟ. ಆದ್ದರಿಂದ ಈತನು ಗುಣವಂತ, ಉಚಿತಜ್ಞ. ನಿಮ್ಮ ಕಥಾನಾಯಕನು ಕಿಂಚಿಜ್ಞ, ಕಿಂಚಿತ್ಕಾಲ ಅಂಗಸುಖದ ಹಂಬಲುಳ್ಳವ ಮತ್ತು ಅನುಚಿತಜ್ಞ. ಆದ್ದರಿಂದ ಈ ಉದಾಹರಣೆಯು ಇಲ್ಲಿ ಸಲ್ಲದು.

ಇನ್ನೊಂದು ಪ್ರಶ್ನೆ.

ಅರಸನ ಭೀಕರವಾದ ಬೆದರಿಕೆಗೆ ಅಳುತ್ತಲಿರುವ ಹೆತ್ತವರನ್ನು ರಕ್ಷಿಸಿದಷ್ಟು ಅಕ್ಕನ ಚಿತ್ತವು ದಾರುಣವಾದುದಿರಲಿಲ್ಲ ....." ಆಗ ಇಂತು ವಿಚಾರಿಸಿದರೆ ಅಕ್ಕನು ತನಗೆ ಅನಿಷ್ಟವಾದ ಭವಿಯ ವಿವಾಹವನ್ನು ಒಪ್ಪಿಕೊಳ್ಳಬೇಕು ....." "..... ಇಂತು ಅನಧಿಕಾರಿಯಾದ

ಕೌಶಿಕ ರಾಜನನ್ನು ತತ್‌ಕ್ಷಣವೇ 'ನೀನು ಶಿವಭಕ್ತನಾದರೆ ಲಗ್ನವಾಗುವೆ' ಎಂದು ನುಡಿಯಲು, ಒಪ್ಪಿಕೊಳ್ಳಲು ಅಕ್ಕಗಳೀನೂ ಅಜ್ಞಾನಿಗಳಿದ್ದಿಲ್ಲ; ಅನುಭವಿಗಳಿದ್ದಿಲ್ಲ. ಆದ್ದರಿಂದಲೇ ಈ ನಿಜವಾದ ಲಿಂಗವಂತಿಕೆಯ ತತ್ವವನ್ನರಿತ ಹರಿಹರನೂ ತನ್ನ ಕಾವ್ಯದಲ್ಲೆಲ್ಲಿಯೂ 'ಶಿವಭಕ್ತನಾಗು' ಎಂಬ ಮಾತನ್ನೇ ಎತ್ತಿಲ್ಲ ಎಂದು ಏನೊಂದೂ ಹುರುಳಿಲ್ಲದ ಉತ್ತರವನ್ನು ಕೊಟ್ಟಿದ್ದಾರೆ.

ಮಾರುತ್ತರ.

ವಸಂತಕನ ಬಿರುನುಡಿಯನ್ನು ಕೇಳಿದೊಡನೆ ಬಯಪಟ್ಟು, ಕನ್ಯೋರಿಟ್ಟು ಮಗಳಿಗೆ ಬೆಂಬಿಡದು ಬೀಳ್ಕೊಳ್ಳುವಷ್ಟು ಬಲಹೀನರಿದ್ದರೇ ಆ ಶಿವಭಕ್ತರು? ಅವರಲ್ಲಿ ಮತದ ಛಲವೇ ಇರಲಿಲ್ಲವೇ? ಸ್ವತಃ ಅಭಿಪ್ರಾಯ ಪಡುವಷ್ಟು ಶಕ್ತಿಯಿರಲಿಲ್ಲವೇ? ಅಕ್ಕನು ಭವಿಯ ವಿವಾಹವನ್ನು ಒಪ್ಪುವದರಿಂದಲೇ ಅವರ ಬಾಧೆಯ ನಿವಾರಣೆಯಾಗುತ್ತಿತ್ತೆಂದು ಹೇಳುವಲ್ಲಿಗಮಕವೇನು? ಭವಿಯ ವಿವಾಹವನ್ನು ಒಪ್ಪಿ ಜೀವಿಸುವಷ್ಟು ಅಕ್ಕ ಬಲಹೀನರಿದ್ದರೇ? ಆಚಾರ ಭ್ರಷ್ಟರಿದ್ದರೇ? ಹಾಗಾದರೆ ಪಂಚಾಚಾರವೇ ಪ್ರಾಣವೆಂಬ ಮಾತಿಗೆ ಗತಿಯೇನು? ಸಮಯಕ್ಕೆ ತಕ್ಕಂತೆ ಶೀಲ (ಸ್ವಭಾವ) ವನ್ನು ತಿದ್ದಿಕೊಳ್ಳುವ ಸ್ವಭಾವದವರೇ ನಮ್ಮ ಶರಣರು? ದೇಹ ಹೋದರೂ ಧರ್ಮವನ್ನು ಬಿಡರೆಂಬುದನ್ನು ನೀವರಿಯಿರಾ? ತಮ್ಮ ಮತದವನಲ್ಲದವನು, ತಮ್ಮೊಳಗೆ ವ್ಯವಹರಿಸಬಂದರೆ ಮೊದಲು ಮತವನ್ನು ಕೇಳದೆ ಜೊಳ್ಳು ಕರಾರಗಳನ್ನು ಕೇಳುವರೋ? ವಿದ್ಯಾರ್ಥಿಯಾಗದ ಉಂಡಾಡಿಗನಿಗೆ (ದನಗಾಯಿಗೆ) ನೀನು ಫೀ ಕೊಡು, ಪುಸ್ತಕ ಕೊಳ್ಳು, ಓದು ಎಂದು ನಿರ್ಬಂಧಪಡಿಸುವದರಿಂದ ಏನು ಪ್ರಯೋಜನ? ಶಿವಭಕ್ತನಾದಲ್ಲಿ ಒರಿಸುವನೆಂದು ಛಲತೊಟ್ಟರೆ ಇದು ಅಜ್ಞಾನವೇ? ಭವಿಯನ್ನು ಒರಿಸಿ, ಅನಂತರ ಜೊಳ್ಳು ಕರಾರುಗಳನ್ನು ಕೇಳುವದು ವಿಜ್ಞಾನವೇ? ಶಿವಭಕ್ತನಾದರೆ ವಿವರಿಸುವೆನೆಂಬ ಉಚಿತಪ್ರಶ್ನೆಯಿಲ್ಲದೆ ಕೇವಲ ಜೀವನದ ಹಂಗಿಗಾಗಿ, ಸುಮ್ಮನೆ ಭವಿಯಸಂಗ ಮಾಡಿಸಿದ ಹರಿಹರನ ರೀತಿಯು ನಿಜವಾದ ಲಿಂಗತತ್ವವೇ? ಭವಿಯ ಸಂಗವನ್ನು ಬಿಡಿಸಿದ ಜಾಮರಸನದು ಲಿಂಗ ಬಾಹ್ಯ ತತ್ವವೇ? ವಿಚಿತ್ರ! ಎಲ್ಲವೂ ವಿಚಿತ್ರ!!

ಹೆತ್ತವರನ್ನು ಅಪಮೃತ್ಯುವಿನ ತುತ್ತಾಗುವಂತೆ ಕಾಪಾಡುವದು ಉಚಿತವೆಂದು ಜಾಮರಸನು ಹೇಳಿರುವನೇ? ಇಲ್ಲವಾದರೆ ಈ ಅನುಚಿತವಾದ ಅಪ್ರಸ್ತುತವಾದ ವಿಷಯವನ್ನು ಇಲ್ಲಿ ಇಷ್ಟೊಂದು ಲಂಬಿಸಿ ಏಕೆ ಬರೆದಿರುವದು? ವಚನಾಗಮಗಳ ಉದಾಹರಣೆಯನ್ನಾದರೂ ಯಾರು ಕೇಳಿದ್ದರು? ಹೀಗೆ ಸಲ್ಲದ ವಿಚಾರವನ್ನು ಬಲ್ಲಂತೆ ಬರೆದು ಲೇಖಾಂಕಗಳನ್ನು ಬೆಳೆಸುವ ಬಯಕೆಯನ್ನು ಬಿಟ್ಟುಕೊಟ್ಟು, ಇನ್ನಾದರೂ ಮಿತವಾಗಿ ಉಚಿತವಿದ್ದಷ್ಟನ್ನೇ ಪದಯವಿಟ್ಟು ಬರೆಯುವಿರಾ? ಮತ್ತು ಹಿಂಜಿದ್ದನ್ನೇ ಹಿಂಜಬೇಡಿ, ಹೊಸದೇನಾದರೂ ಇದ್ದರೆ ಬರೆದು ಬೀರಿರಿ, ಎಂದು ಕೋರುವೆನು.

ಇಷ್ಟೊಂದು ದೀರ್ಘವಾದ ಈ ವಾದಕ್ಕೆ ತಮ್ಮ ಪತ್ರಿಕೆಯಲ್ಲಿ ಸಂತೋಷದಿಂದ ಸ್ಥಳಕೊಟ್ಟು ಪ್ರೋತ್ಸಾಹಿಸಿದ, 'ಶಿವಾನುಭವ' ಸಂಪಾದಕರಾದ ಶ್ರೀಮಾನ್ ರಾ. ಸಾ. ಪಿ. ಜಿ. ಹಳಕಟ್ಟಿಯವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಓ ಕು ಮಾ ರ !

(ಒಲವಿನ ಹಾಡು.)

ಶ್ರೀಗುರು ಸಾರ್ವಭೌಮ ಸುವಿರಾಟ್ಪುರನಾಯಕ ವೀರಶೈವ ಮ-।
ಹಾಗುರುವರ್ಗದಾಚರಣೆಯಂ ಸರಿಗೈಯ್ಯಲು ಕಜ್ಜಮುಂಗಳೊಳ್ ॥
ರಾಗವ ಪೆರ್ಚಿಸುತ್ತಿಹ ಮಹಾಸಭೆ ನಿರ್ಮಿಸಿ ರಾಜತೇಜದಿಂ।
ಯೋಗಸುಮಂದಿರಂ ರಚಿಸಿ ರಂಜಿಪ ಯೋಗಿಯೆ ಪೋದೆಯಕ್ಕಟಾ! ॥೧॥

ಮೆರೆಯುವ ಹಾನಗಲ್ಲಮಠವಂ ತೊರೆವಂದಿನ ವೀರಶೈವರು।
ಕೊರಗುವ ಧರ್ಮಹೀನತೆಯ ಕೃತ್ಯಗಳಂ ನೆರೆ ನೋಡಿ ಭಾವದೊಳ್ ॥
ಮರುಗುತ ವೀರಶೈವಮತ ಧರ್ಮದ ಗುಟ್ಟನು ಬೋಧಿಸಲ್ ಸದಾ।
ಸ್ಮರಿಸದೆ ದೇಹ ದುಃಖವನು ಯತ್ನಿಸಿದೈ ಸುಕುಮಾರ ಯೋಗಿಯೇ ॥೨॥

ನಿನ್ನಯ ಬೋಧೆಯಿಂದಲಿ ಕುಬೋಧಕರಂಜಿದರಾಗ ತಪ್ಪೊಳು।
ನಿನ್ನಯ ನೀತಿತೇಜಕೆ ಕುನೀತಿಗಳಂಜಿದವಾಗ ನಾಡಿನೊಳ್ ॥
ನಿನ್ನಯ ಕರ್ಮತತ್ಪರತೆಯಿಂದಲಿ ಸೈವೆರಗಾದರಾಲಸರ್।
ನಿನ್ನಯ ಶಾಂತಿಸದ್ಗುಣಕೆ ಬಾಗದ ಭಕ್ತರೊಳೊಬ್ಬರಿಲ್ಲವೈ ॥೩॥

ಎಲಲೇ! ದೈವವೆ! ಸಾಧ್ಯವೇ ಗುರುವರಂ ಕೊಂಡೊಯ್ದೆ
ನೆಂದೆಂಬುದಂ।
ಮಲಿನಾಚಾರವಿದೂರನಂ ಗುಣಧನಂ ಯೋಗೀಂದ್ರನಂ ತ್ಯಾಗಿಯಂ ॥
ಬಲದಿಂದೊಯ್ದಿಹೆನೆಂದು ನೀಂ ಸೆಟೆಯದಿರ್ ಲಿಂಗೈಕ್ಯನೇಂ ಸಾಧ್ಯನೇ?।
ವಿಲಸತ್ಕೀರ್ತಿಯ ದೇಹವಾಂತು ಜಗದೊಳ್ ತಾ ಜೀವಿಸಿರ್ಪಂ ವಲಂ ॥೪॥

ಜಗಸೊಗವೆನ್ನದಾ ಜಗದ ದುಃಖವದೆನ್ನಯ ದುಃಖವೆನ್ನುತಂ।
ಜಗಸೊಗಕಾಗಿ ಸಂತತದಿ ಕಾಯಕ-ವಾಚಕ-ಮಾನಸಂಗಳಿಂ- ॥
ಪಗಡಿತ ಕಜ್ಜಮುಜ್ಜಗಿಸಿ ದೈಹಿಕ ಸೌಖ್ಯಕೆ ನೀರ ನೀಡುತಂ।
ಮಿಗೆ ಜಗದೊಳ್ ವಿರಾಜಿಪ ವಿರಕ್ತ ಶಿಖಾಮಣಿ ಧನ್ಯನಲ್ತೆನೀಂ ॥೫॥

ಶ್ರೀಚಂದ್ರಶೇಖರದೇವರು ಅಡ್ನೂರು.

ಶ್ರೀ. ನಿಡುವಾವಿಡಿ ಮಠದ ಇತಿಹಾಸ.

ಲೇಖಾಂಕ ೬.

(ಲೇಖಕ:— ಎಂ ಜಿ. ನಂಜುಂಡಾರಾಧ್ಯ 'ವಿಶಾರದ' ಸಿದ್ಧಗಂಗಾ ಗುರುಕುಲಾಶ್ರಮ.)

ಶ್ರೀ. ವಿರೂಪಾಕ್ಷಪಂಡಿತಾರಾಧ್ಯರು ನಡೆಯಿಸಿದ ಪ್ರಭಾವಗಳು ದಿಗ್ದರ್ಶನವಾಗಿ ಹಿಂದೆ ಹೇಳಲಾಗಿದೆ. ಅವರು ಕಡೆಯಲ್ಲಿ ಶ್ರೀಗಿರಿಯ ಭೀಮಲಿಂಗದಲ್ಲಿಯೇ ಅಡಗಿದರೆಂದು ಹೇಳಿದೆ. ಆದರೆ ಓಲೆಗರಿಯ 'ಪಂಡಿತಾರಾಧ್ಯ ಚರಿತ್ರೆ' ಯಲ್ಲಿ ವಿರೂಪಾಕ್ಷದೇಶಿಕರು ಶ್ರೀ ಮಲ್ಲಿಕಾರ್ಜುನಲಿಂಗದಲ್ಲಡಗಿದರೆಂದು ಸ್ಪಷ್ಟವಾಗಿ ಉಲ್ಲಿಖಿತವಾಗಿದೆ. ಮತ್ತು ಅನೇಕ ಹಳೆಯ ಕಾಪಿಗಳಲ್ಲಿಯೂ ಇದೇ ಉಲ್ಲೇಖಗಳು ಕಂಡು ಬರುತ್ತವೆ.

ವಿರೂಪಾಕ್ಷದೇಶಿಕರು ದುರ್ಗಾ ವೀರಭದ್ರ ಮತ್ತು ಭೈರವ ಈ ಮೂವರೂ ಕಲಿಯುಗ ಮುಗಿಯುವ ವರೆಗೂ ಈ ಪೀಠಕ್ಕೆ ಸಹಾಯಕರಾಗಿರಬೇಕೆಂದು ಹೇಳುವಾಗ್ಗೆ:—

ಏಕಚ್ಛಿಂಹಾಸನಂಬು ಪ್ರಬಲಿಂಪ ಸೇಯುವಾರಲ್ಲಿಯಡತೆಗಕಸೀ ಕಲಿಯುಗಂ ಬೆಂತಕಾಲಂಬುಂಡುನಂತವಟ್ಟು ವಿಾರು ನಿರಸಾಯುಲರೈಯುಂಡುಡನಿಯಾಜ್ಞಾಪಿಂಚಿ, ಯತೆಂಡು ಮಲ್ಲಿಕಾರ್ಜುನ ಲಿಂಗಂಬುನಂ ದೈಕ್ಯಂಬುನೊಂದೆನಂತ ''

ಆಗನೋಕ್ತರಾದ ಪಂಡಿತಾರಾಧ್ಯರು ಶ್ರೀಶೈಲದಲ್ಲಿ ಪ್ರಸಿದ್ಧವಾದ ಮಲ್ಲಿಕಾರ್ಜುನ ಲಿಂಗದಲ್ಲಿ ಉತ್ಸವವಾಗಿ ಅಲ್ಲಿಯೇ ಅಡಗಿದರೆಂಬುದು ಆಗಮ ಪ್ರಸಿದ್ಧವಾಗಿದೆ. ಆದರೆ ಅದೇ ಪೀಠಕ್ಕೆ ಸಂಬಂಧಿಸಿದ ಶ್ರೀ. ವಿರೂಪಾಕ್ಷದೇಶಿಕರು ಭೀಮಲಿಂಗದಲ್ಲಿ ಉದಯಿಸಿ ಮಲ್ಲಿಕಾರ್ಜುನ ಲಿಂಗದಲ್ಲಿ ಐಡಗಿದರೆಂಬುದು ವಿಚಾರಣೀಯವಾಗಿದೆ. ಲಿಂಗೋದ್ಭವವನ್ನು ಅಂಗೀಕರಿಸುವ ಪುಲ್ಲಕವಿಯು ಈ ವ್ಯತ್ಯಾಸವನ್ನು ಯಾವ ಕಾರಣದಿಂದ ಮಾಡಿದನೆಂಬುದು ತಿಳಿದುಬಂದಿಲ್ಲ. ಆದರೂ ಈ ಚರಿತ್ರೆಯಲ್ಲಿ ಶ್ರೀ ಮಲ್ಲಿ

ಕಾರ್ಜುನ ಸ್ವಾಮಿಯ ಸಂಬಂಧವು ವಿಶೇಷವಾಗಿ ಬಂದಿದೆಯಾದ್ದರಿಂದ ಶ್ರೀ ವಿರೂಪಾಕ್ಷದೇಶಿಕರೇ ಮಲ್ಲಿಕಾರ್ಜುನ ಲಿಂಗದಲ್ಲಿ ಅವತರಿಸಿ ಕಾಲಕ್ರಮದಲ್ಲಿ ಪಂಡಿತಾರಾಧ್ಯರೆಂದು ಪ್ರಸಿದ್ಧರಾಗಿರಬಹುದೇ (?) ಎಂಬ ಸಂಶಯಕ್ಕೆ ಅವಕಾಶವಿದೆ. ಅಸ್ತು.

ಶ್ರೀ ಚಂದ್ರಗುಂಡದೇಶಿಕೇಂದ್ರ ಶಿವಾಚಾರ್ಯರು.

ಈ ಮತದ ಇತಿಹಾಸದಲ್ಲಿ ಇವರ ಚರಿತ್ರೆಯು ಬಹಳ ಪ್ರಭಾವ ಶಾಲಿಯಾಗಿದೆ. ಇವರು ತಮ್ಮ ತಪಃ ಪ್ರಭಾವದಿಂದ ಅನೇಕ ಮಂದಿ ರಾಜಾಧಿರಾಜರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು, ಅನೇಕ ಜನಾಂಗಗಳವರಿಗೆ ವೀರಶೈವಸಿದ್ಧಾಂತವನ್ನುಪದೇಶಿಸಿ ಲಿಂಗಾಂಗಿಗಳನ್ನಾಗಿ ಮಾಡಿ, ಕೀರ್ತಿಶಾಲಿಗಳಾಗಿದ್ದಾರೆ. ಇವರ ಕಾಲದಲ್ಲಿ ಅನೇಕ ಮಠಮಾನ್ಯಗಳೂ ಬಿರುದುಬಾವಲಿಗಳೂ ರಾಜಮರ್ಯಾದೆಗಳೂ ಈ ಮಠಕ್ಕೆ ನಡೆಯುವಂತೆ ವ್ಯವಸ್ಥೆಯಾಗಿತ್ತೆಂದು ತಿಳಿದುಬಂದಿದೆ.

"ಕ॥ ಯೂ ಸಿಂಹಾಸನಮಭಿವೃದ್ಧಿನ
ಜೇಸಿ ಮಹಾಮಹಿಮ ಜೇತಶಿರಿಬೆಂಪೊಂದನ್॥
ಭಾಸಿಲ್ಲುಚುಕ್ಷ್ಮಿತಲಮುನ
ದಾಸುಲುಗಂ ಜೇಸು ಕೊನುಮು ಧರಣೀಶ್ವರುಲ್॥"

ಎಂದು ಇವರೇ ನಮ್ಮ ಶಿಷ್ಯರಿಗೆ ಉಪದೇಶಿಸುವುದರಿಂದ ಅವರ ಪೀಠಾನುರಾಗವೂ ಶಿಷ್ಯಪ್ರೇಮವೂ ವ್ಯಕ್ತವಾಗುತ್ತದೆ.

ಶ್ರೀ ಚಂದ್ರಗುಂಡದೇಶಿಕೇಂದ್ರರು ಪಟ್ಟಾಭಿಷಕ್ತರಾದನಂತರ.

"ಗೀ॥.....ಅಂಚಿತ ವೀರಶೈವಾಚಾರ ಧರ್ಮಂ ಬುಲತಿಮು
ದಂಬೊದವಗಾನಾನಕಿಚ್ಚಿ। ಶಿಷ್ಯಜನಮುಲಧನ್ಯುಲಜೇಸಿ
ಸ್ವಾಮು । ಲಕುಲಿತಂ ಬೈನ ಶ್ರೀಪರ್ವತಂಬುನಂದು।
ಭಾನುಸಿಂಹಾಸನಮುನಯಾಸೀನುಡಗುಚು । ಭಕ್ತುಲ
ಕೋಕ್ಕಿಲೊಸಗುಚು ಬಿರಗುಚುಂಡೆ॥"

ಹೀಗೆ ಶ್ರೀಶೈಲ ಸೂರ್ಯಸಿಂಹಾಸನಾಸೀನರಾಗಿ ಭಕ್ತರಿಷ್ಟಾರ್ಥಗಳಂ ನೆರವೇರಿಸುತ್ತಿರುವಲ್ಲಿ ದೇವರದಾಸಿಮಾರ್ಯರು ಅವರಲ್ಲಿಗೆ ಬಂದು

ವಿಷ್ಣೆಯಂ ಪಡೆಯುವರು. ಈ ವಿಷಯದಲ್ಲಿ ಹಿಂದಿನ ಲೇಖನದಲ್ಲಿ ವಿಸ್ತರವಾಗಿ ಕೇಳಿರುವುದರಿಂದ ಇಲ್ಲಿ ಪುಲ್ಲ ಕವಿಯ ಮೂಲವನ್ನಾ ಗಲೂ ಬರೆಯುವುದು ಅನಿವಾರ್ಯವಾಗಿದೆ.

ಓರ್ವ ಗಣಾಧೀಶನು ಪರಮೇಶ್ವರನಿಂದ ಭೂಲೋಕದಲ್ಲಿ ವೀರಶೈವ ಮತವನ್ನುದ್ಧಾರಮಾಡಲು ಆಜ್ಞಪ್ತನಾಗಿ ಶ್ರೀಶೈಲದಲ್ಲಿ ಕಮಲೋದ್ಭವನಾಗುವನು. ಈತನಿಗೆ ಪರಮೇಶ್ವರನು ಹೀಗೆ ಆಜ್ಞಾಪಿಸುತ್ತಾನೆ.

"..... ಶ್ರೀಶೈಲಮುನಬರಗು। ನಮ್ಮಮಹಾಸ್ಥಲಮುನಂ
ದಬ್ಜಮಂದುದಯ ವೈವಸ್ತ್ರಕಾರುಂಡನವಾಶ್ರಕೆಕ್ಕಿ। ಮಲ್ಲಿಕಾ
ರ್ಜುನಕಾರುಣ್ಯಮುಹಿಮವಲ್ಲ।.....ಅಂಬರಂಬುಲುನೇ
ತಜೇತನಿರ್ಮಿಂಚಿ ಖ್ಯಾತಿಗಾಂಚಿ॥

ಗೀ॥ ಶ್ರೀ ಚಂದ್ರಗುಂಡಾಖ್ಯಗುರುವುಲಶರಣಂಜೊಚ್ಚಿ।
ನವ್ಯ ವಸ್ತ್ರಂಬುಲರ್ಪಿಂಚಿ ದಿವ್ಯವೈನ।
ಮೋಕ್ಷಮಾರ್ಗಂಬುವೇಡಿನ ಮುದಮು ತೋಡಾ।
ಬೋಧಗಾವಿಂಚು ವೇಗಮೇ ಪೊಮ್ಮಟಿಂಚು॥"

ಅದರಂತೆ ಆ ಮಹಾಪುರುಷನು ಅಲ್ಲನವತರಿಸಿ ಶ್ರೀ ಚಂದ್ರಗುಂಡ ದೇಶಿಕೇಂದ್ರನ ಶರಣು ಪಡೆದಿರಲು. ಅವರು ಅನುಗ್ರಹಿಸಿ ಅವರಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿ ವಿಧ್ಯುಕ್ತವಾಗಿ ಲಿಂಗಧಾರಣವನ್ನು ಮಾಡಿ ಹೀಗೆ ಆಜ್ಞಾಪಿಸುತ್ತಾರೆ.

"ವ॥ ವೀರಶೈವಾಚಾರಂಬುವಡಿಸಿ ಈ ಸಿಂಹಾಸನಂಬುಸಕು
ಶಿಷ್ಯುಲೈದೇವಾಂಗಮುವಾರನಿ ಪ್ರಸಿದ್ಧಿನೊಂದಿವರ್ಧಿಲ್ಲು
ಮನಿಯಾನ ಕಿಚ್ಚಿನ ಮಡು ಪರಮ ಸಂತೋಷ ಭರಿ
ತುಡ್ಯೈಯೊಪ್ಪು ಚುಂಡೆಸಂತ."

'ವೀರಶೈವ ಧರ್ಮಪರಾಯಣನಾಗಿ ವಂಶಪಾರಂಪರ್ಯವಾಗಿ ವಸ್ತ್ರಕಾಂಕ ಪ್ರಭುವೆನಿಸಿ ಆ ದಾಸಿಮಯ್ಯನ ವಂಶೀಯರು 'ದೇವಾಂಗ ಮಹಾರಸ್ಥ' ರೆಂದು ಪ್ರಸಿದ್ಧಪಡೆದು ವಸ್ತ್ರಗಳನ್ನು ಶ್ರೀಮಠಕ್ಕೆ ನೆಯಿದು ಕಾಣಿಸುವಂತೆ ಅಪ್ಪಣೆ ಕೊಡುತ್ತಾರೆ. ಅದರಂತೆ ಪ್ರತಿವರ್ಷ ಮಾಘ ಶು. ೭ ಮಲ್ಲಿ ಆರ್ಯ ಗುರುಗಳಿಗೆ ವಸ್ತ್ರವನ್ನುಡಿಸುವ ಪದ್ಧತಿಯು ಇಲ್ಲಿ ಅನೂ

ಚಾನವಾಗಿ ನಡೆದುಬಂದಿದೆ. ಮತ್ತು ತಪ್ಪಂಶೀಯರೇ ಅವನ್ನು ಒವ
ಗಿಸುತ್ತಿದ್ದರೆಂದೂ ತಿಳಿದುಬಂದಿದೆ.

ಶಿವಶರಣ ವಿಲಾಸದಲ್ಲಿಯೂ ಸಹ ಈ ವಿಷಯಗಳು ಬಹಳ
ವಿಸ್ತಾರವಾಗಿ ವರ್ಣಿತವಾಗಿರುವುವಲ್ಲದೆ ಈತನೇ ಜಯಸಿಂಹ ಕಾಲದ
ವನೆಂಬುದೂ ಅದರಲ್ಲಿ ಸ್ಪಷ್ಟವಾಗಿದೆ.

ಅನಂತರ ಚಂದ್ರಗುಂಡದೇಶಿಕರು ಕಾರ್ತವೀರ್ಯಾರ್ಜುನ ವಂಶ
ಯರಾಗಿದ್ದ ಒಂದು ಜನಾಂಗದವರಿಗೆ ಲಿಂಗಧಾರಣೆಯನ್ನು ಮಾಡುತ್ತಾರೆ.
ಅವರೆಲ್ಲರೂ 'ಸಜ್ಜನ ಶಿವಾಚಾರಸ್ಥ'ರೆಂದು ಪ್ರಸಿದ್ಧರಾಗಿ ಈ ಪೀಠಕ್ಕೆ
ವಂಶಪಾರಂಪರ್ಯವಾಗಿ ನಡೆದುಕೊಳ್ಳುವಂತೆ ವರ್ಣಿತವಾಗಿದೆ.

ಅನಂತರ ಶ್ರೀ ಸ್ವಾಮಿಗಳು ದಕ್ಷಿಣ ದೇಶವನ್ನು ಕುರಿತು ಪ್ರಯಾಣ
ವನ್ನು ಬೆಳೆಯಿಸಿ ಇತಿಹಾಸ ಪ್ರಸಿದ್ಧನಾದ ರಾಜೇಂದ್ರಚೋಳ ಭೂಪಾ
ಲನ ರಾಜಧಾನಿಗೆ ಸಮೀಪದಲ್ಲಿದ್ದ ಉದ್ಯಾನವನದಲ್ಲಿದ್ದ ಶ್ರೀ ಚಂದ್ರ
ಮೌಳೀಶ್ವರ ಲಿಂಗದ ಸಾನ್ನಿಧ್ಯದಲ್ಲಿ ಶಿವಾರ್ಚನೆಯನ್ನು ಮಾಡು
ತ್ತಾರೆ. ಅಲ್ಲಿ ಅವರು ಲಿಂಗಾರ್ಪಿತಕ್ಕೆ ನಾರಿಕೇಳ ವೃಕ್ಷದಿಂದ ಫಲಗ
ಳನ್ನು ಬೇಡಿ ಅರ್ಪಿಸುವರೆಂದೂ ಅನಂತರ ಈ ಮಹಿಮಾ ಪ್ರಭಾವದ
ವಿಷಯವು ಅರಸನಿಗೆ ಅರಿಕೆಯಾಗಿ ಆತನು ಪರಿವಾರ ಸಮೇತನಾಗಿ
ಶ್ರೀಯವರ ದರ್ಶನಕ್ಕೆ ಬಂದು ಅವರ ಅನುಗ್ರಹದಿಂದ ತನ್ನ ಬ್ರಹ್ಮ
ಹತ್ಯಾದೋಷವಿನಿರ್ಮುಕ್ತನಾಗುವನೆಂಬ ವಿಷಯವು ಬಹಳ ಚನ್ನಾಗಿ
ವರ್ಣಿತವಾಗಿದೆ. ಈ ವಿಷಯ ನಮ್ಮ ಮೊದಲನೆಯ ಲೇಖದಲ್ಲಿಯೇ
ಸಂಕ್ಷೇಪಿಸಲಾಗಿದೆ. ಪಂಡಿತಾರಾಧ್ಯ ಚರಿತ್ರೆಯಲ್ಲಿ ಈ ಸಂದರ್ಭದಲ್ಲುಕ್ತ
ವಾದ ಕೆಲವು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ.

"ಕಂ॥ ಸ್ಥಾವರ ಮುಲ್ಲಿನ ಭೂಜಮು
ಲಾವನಮುನ ಜಂಗಮಂಬುಲ ಗುಚುಧರಿತ್ರಿನ್॥
ಕೇವಲನಮ್ರತತ್ವಮು ತೋ
ಪಾವನಮಗು ಸ್ವಾಮಿಪಾದ ಪದ್ಮಂಬುಲಕುನ್॥

ಗೀ॥ ಶಾಖಿಲನು ಬಾಹುವುಲಕೋಡಸಾಗಿವ್ರೊಕ್ಕಿ।
ಪುಷ್ಪಮುಲುಗಲ್ಗು ವೃಕ್ಷಮುಲ್ ಪುವ್ವುಲೊಸಗೆ॥

ಪಕ್ವಫಲಮುಲತೋನುನ್ನಪಾದಪಮುಲು।
ಫಲಮುಲಿಂವಂದ ರಾಸುಲಪಗಿದಿಸಿಡಿನ॥

ಗೀ॥ ಇಷ್ಟಲಿಂಗಾರ್ಪಣಂಬುಜೇಸಿ ನಿಷ್ಠತೋಡ।
ನಂದು ಲೋಕೊನ್ನ ಗುರುಡುಕಾಸಾರಗಿಂಚಿ॥
ಫಲಮುಲಾಮೋದನುನಶಿಷ್ಯಪಜ್ಞಿಕೊಸಗಿ
ಭಕ್ಷಣಮುಶೇಯು ಶೆಲವಿಚ್ಚಿಭದ್ರಮೂರ್ತಿ॥"

ಅಂದರೆ 'ಆ ವನದಲ್ಲಿನ ಸ್ಥಾವರಾತ್ಮಕವಾದ ಓಷಧಿಗಳೆಲ್ಲವೂ ಜಂಗ
ಮತ್ವವನ್ನು ವಹಿಸಿ ಕೇವಲ ನಮ್ರಭಾವದಿಂದ ಶ್ರೀಯವರ ಪಾದಪ
ದ್ಮಂಗಳಿಗೆ ಶಾಖೆಗಳೆಂಬ ಬಾಹುಗಳಿಂದ ಫಲಪುಷ್ಪ ಪತ್ರಾದಿಗಳನ್ನು
ಅರ್ಪಿಸಿದವು. ಅನಂತರ ಶ್ರೀಗುರುದೇವನು ನಿಷ್ಠೆಯಿಂದ ಲಿಂಗಾರ್ಪಿತವಂ
ನಾಡಿ ಶಿಷ್ಯಕೋಟಿಗೆ ಅರ್ಪಣವಾಡಲು ಅಪ್ಪಣೆಯನೊಸಗುವನು.
ಆಗ ಸಮೀಪದಲ್ಲಿದ್ದ ನಾರಿಕೇಳ ವೃಕ್ಷವು:—

"ಸೀ॥ ತನ ಚಂತನತಿಯುನ್ನತಮುಗಲ್ಲು ಟಿಂಕಾಯಜಿಟ್ಟು
ನಿರೀಕ್ಷಣ ಜೇಸಿಯಪುಡು। ಹರಹರಾಯನುಚುಸದ್ಗುರು
ಪದಾಬ್ಜಮುಲನು ಸ್ಥಿರಭಕ್ತಿತೋನುತಿ ಜೇಸುಕೊನು
ಚು 'ಘನು ಗುರುಧರ್ಮಕೋರಾಣ್ಯ ಭಿಕ್ಷಾಯನ ವೃಕ್ಷ
ಮಾಕ್ಷಣಮೆಮುಮೂಕ್ಷುನಕುನು। ವಿಲ್ಲುವಂಚಿನ ರೀತಿ
ವಿಪುಲಂಬು ಸೋಕಗ ಬಿವ್ವನತಲವಂಚಿ ಶ್ರೀಘ್ರಮು
ಗನು। ವಂದನಂಬುಗ ತನಯುಂ ದುನ್ನ ಫಲಮುಲನು
ಮುಂದರನುನಚಿತಾ ಮುಂದು ನುನ್ನ। ವಿದ್ಧಮುನ
ನಿಲ್ವನಪುಡು....."

(ವಿರೂಪಾಕ್ಷಮಾಹಾತ್ಮ್ಯರು)

ಶ್ರೀಯವರು ನಾರಿಕೇಳವೃಕ್ಷವನ್ನು ನಿರೀಕ್ಷಿಸಿ 'ಗುರುಧರ್ಮಕೋರಾಣ್ಯ
ಭಿಕ್ಷಾ' ಎಂದು ನುಡಿದಾಕ್ಷಣವೆ ನಾರಿಕೇಳವೃಕ್ಷವು ಬಿಲ್ಲಿನೋಪಾದಿ
ಯಲ್ಲಿ ಬಾಗಿ ಫಲಗಳನ್ನರ್ಪಿಸಿ ಮೊದಲಿನಂತೆಯೇ ನಿಲ್ಲುವುದು.

ಈ ಸನ್ನಿವೇಶವು ಕವಿಸಾರ್ವಭೌಮನಾದ ಕಾಳಿದಾಸನ:—

ಪ॥ ಕ್ವಾಮುಂ ಕೇನ ಚಿದಿಂದು ಪಾಂಡು ತರುಣಾಮಾಂಗಲ್ಯ
ಮಾವಿಷ್ಕೃತವ್ । ನಿಷ್ಪ್ರೀತಶ್ಚರಣೋಪಭೋಗಸುಲ
ಭೋಲಾಕ್ಷಾರರಸಃ ಕೇನಚಿತ್ ॥ ಅನ್ಯೇಭ್ಯೋ ವನದೇ
ವತಾ ಕರತಲೈರಾಪರ್ವ ಭಾಗೋತ್ಥಿತೈಃ । ದತ್ತಾನ್ಯಾ
ಭರಣಾನಿತತ್ಕಿಸಲಯೋದ್ಭೇದಪ್ರತಿದ್ವಂದ್ವಿಭಿಃ ॥

ಮಹಾ ತಪಸ್ವಿಯಾದ ಕಣ್ವಮಹರ್ಷಿಯ ಪ್ರಭಾವದಿಂದೆ ವನ ದೇವತೆಯ ನಚ್ಚಿನ ಕುವರಿಯಂತಿದ್ದ ಶಕುಂತಲೆಯು ದುಷ್ಯಂತನಲ್ಲಿಗೆ ಪಯಣವಾಗಿದ್ದಾಗ ವನತರುಗಳು ದಿವ್ಯಾಂಬರಗಳನ್ನೂ ಮಂಗಲದ್ರವ್ಯ ಗಳನ್ನೂ ಲೇಪನ ದ್ರವ್ಯಗಳನ್ನೂ ನಾನಾಭರಣಗಳನ್ನೂ ಅತಿಪ್ರೀತಿಯಿಂದ ಅರ್ಪಿಸಿದುವೆಂಬ ಸನ್ನಿವೇಶವನ್ನು ಸಂಪೂರ್ಣವಾಗಿ ಹೋಲುತ್ತದೆ. ಅಸ್ತು.

ಅದರಂತೆ ಈ ಪೀಠಕ್ಕೆ ಕೇಂದ್ರಸ್ಥಾನವಾಗಿರುವ ಗುಳೂರು (ಗುಯ್ಯ ಲೂರು) ಗ್ರಾಮದ ಬಳಿ ಅದೇ ಚಂದ್ರಮೌಳೀಶ್ವರ ದೇವಾಲಯವೂ ರಾಜವತ್ತುವಾದ ಮಾನ್ಯಗಳೂ ಇಂದಿಗೂ ಇವೆ. ಇದೇ ರಾಜೇಂದ್ರ ಚೋಳನ ಉದ್ಯಾನವಿತ್ತು. ಅನಂತರ ಶ್ರೀ ಜಗದ್ಗುರುಗಳು ಅಲ್ಲಿಯೇ ಒಂದು ಭಾವಿಯಲ್ಲಿ ಆವಿರ್ಭವಿಸಿದ ಬಸವೇಶ್ವರನನ್ನೂ ಶ್ರೀ ವೀರಭದ್ರ ದೇವರನ್ನೂ ಪ್ರತಿಷ್ಠಿಸಿದರೆಂದು ಕವಿಯು ವರ್ಣಿಸಿರುವಂತೆ ಇಂದಿಗೂ ಮಠದಲ್ಲಿ ಭಾರೀ ಶಿಲಾಮೂರ್ತಿಯಾದ ವೃಷಭೇಶ್ವರನನ್ನೂ 'ಗುಂಡಿ ನಲ್ಲಿ ಪ್ರಕಟವಾಗಿರುವ ಶ್ರೀ ವೀರೇಶ್ವರನನ್ನೂ ನೋಡಬಹುದು.

ನಾರಿಕೇಳ ವೃಕ್ಷವಂ ಬಿಕ್ಷೆ ಬೇಡಿದ ವಿಷಯವು ವಿರುಪಾಕ್ಷ ಪಂಡಿ ತಾರಾಧ್ಯನ ಜನ್ಮಬಸವ ಪುರಾಣದಲ್ಲೂ ಉಕ್ತವಾಗಿದೆ ಎಂಬದು ಮೊದ ಲನೆಯ ಲೇಖನದಲ್ಲಿ ಹೇಳಲಾಗಿದೆ.

ಅನಂತರ ಶ್ರೀಯವರು ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಲು ದ್ಯುಕ್ತರಾಗಲು ರಾಜನ ಪಟ್ಟ ಮಹಿಷಿಯಾದ ಕನಕವಲ್ಲೀ ದೇವಿಯು ಶ್ರೀಯವರು ಇಲ್ಲಿಯೇ ನೆಲಿಸಿ ತಮ್ಮನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿ ಸುತ್ತಾಳೆ. ಅನಂತರ ಭೂಪಾಲನು ಅಲ್ಲಿಯೇ ಒಂದು ಭಾರೀ ಮಠ ವನ್ನು ಕಟ್ಟಿಸಿ ಕೊಡುತ್ತಾನೆ. ಅಲ್ಲಿಂದ ಶ್ರೀಯವರು ಲೋಕೋದ್ಧಾರ

ನಿಮಿತ್ತದಿಂದ ಅನೇಕ ರಾಜ ಮರ್ಯಾದೆಗಳಿಂದ ಪ್ರಸಿದ್ಧವಾದ ರಾಜ ವೀಡು ಪ್ರಾಂತ್ಯಕ್ಕೆ ದಯಮಾಡಿಸುತ್ತಾರೆ. ಅಲ್ಲಿ ಅರಣ್ಯ ಮಧ್ಯವಲ್ಲಿ ಒಂದು ಬಂಡೆಯಲ್ಲಿ ತಮ್ಮ ಪ್ರಭಾವದಿಂದ ಗಂಗೋದ್ಭವವನ್ನು ಮಾಡಿಸಿ ರಾಮಜೋಟಯಲ್ಲಿ ಶ್ರೀ ವೀರಭದ್ರ ದೇವರ ಪ್ರತಿಷ್ಠೆಯನ್ನು ಮಾಡಿಸಿ ಒಂದು ಮಠವನ್ನು ಕಟ್ಟಿಸಿ ಅಲ್ಲಿ ಓರ್ವ ಮೂರ್ತಿಗಳಿಗೆ ಅನುಗ್ರಹ ಮಿತ್ತು ಅದರ ಅಧಿಕಾರವನ್ನು ಅವರ ವಶಕ್ಕೆ ಅರ್ಪಿಸುತ್ತಾರೆ. ಈ ಸಂದರ್ಭದಲ್ಲಿ:—

"ಸೀ ಗುರುಮೂರ್ತಿಯಾ ವೀಟ ಕೋವೆಲಗಟ್ಟಿಂಚಿ ವೀರಶೈವಾ ಚಾರ ವಿಧುಲಜೇತ। ವೀರಭದ್ರ ಪ್ರತಿಷ್ಠವೇಡುಕಶೋಜೇಸಿ ಶಾಸ್ತ್ರ ಸಂಮತ ಮುಗ ಶಾಂತಿಕ್ರಮಮು। ಜರಿಪಿಂಚಿ ಲಿಂಗಾಂಗುಲಚ ಯ್ಯನರಪ್ಪಿಂಚಿ ನಿತ್ಯಪೂಜ ಕುವಾರಿನಿಸಿನರ್ಯಮಿಂಚಿ ....." ಇತ್ಯಾದಿ ವರ್ಣಿತವಾಗಿದೆ. ಆ ದೇವಾಲಯ ವೀರಶೈವ ಮೂರ್ತಿಗಳ ಅಧೀನದಲ್ಲಿ ಹಾಗಂತೆ ವ್ಯವಸ್ಥೆಮಾಡಿದರೆಂಬ ವಿಷಯಗಳು ಹಿಂದೆಯೇ ಹೇಳಲಾಗಿದೆ.

ಅನಂತರ ಶ್ರೀಯವರು ಪುನಃ ಗುಯ್ಯಲೂರಿಗೆ ದಯಮಾಡಿಸಿ ತಮ್ಮ ಅಧಿಕಾರವನ್ನು ಓರ್ವ ಸದ್ವಂಶೀಯ ವಟುವಿಗೆ ಅನುಗ್ರಹಿಸಿ ಇಮ್ಮಡಿ ಕರಿಬಸವ ದೇಶಿಕೇಂದ್ರನೆಂದು ಹೆಸರಿಟ್ಟು

॥ಗೀ॥ ಪಂಡಿತಾರಾಧ್ಯ ಸಂಭವುನಿ ಸುಗುಣ।
ಶಾಲಿನಿವೀಕ್ಷಿಂಚಿ ಲಾಲಿತ ಮುಗ।
ಹಸ್ತಪಂಕಜ ಮುನುಶೀರ್ಷಮುಂಟನಿವಿರಿ।
ವಾಸಿ ನೊರಂಗ ಮುಂತ್ರಮುಪದೇಶ ಮೊಸಗಿ ॥

ಮುಂತಾಗಿ ಉಪದೇಶಮಾಡಿ ತಾವು ಅಲ್ಲಿಯೇ ಲಿಂಗನಲ್ಲಿ ಬೆರೆಯು ತ್ತಾರೆ. ಇಲ್ಲಿಗೆ ಎರಡನೆಯ ಆಶ್ವಾಸವು ಮುಗಿದಿದೆ.

ಒಟ್ಟಿನಲ್ಲಿ ಶ್ರೀ ಚಂದ್ರಗುಂಡ ದೇಶಿಕೇಂದ್ರರ ಚರಿತ್ರೆಯಲ್ಲಿ ಅನೇಕ ಚಾರಿತ್ರಾತ್ಮಕವಾದ ಐತಿಹಾಸಿಕ ವಿಷಯಗಳು ಬಹಳವಾಗಿ ಉಲ್ಲಿಖಿತ ವಾಗಿವೆ ಅವೆಲ್ಲವೂ ಸಿದ್ಧಾಂತವಾಗಬೇಕಾದರೆ ಇನ್ನೂ ಅನೇಕ ಶೋಧ ನೆಗಳಾಗುವುದು ಅವಶ್ಯಕವೆಂದು ಭಾವಿಸಬೇಕಾಗಿದೆ. ಪುಲ್ಲ ಕವಿಯು

ಈ ಚರಿತ್ರೆಯನ್ನು ಪುರಾಣ ರೂಪವಾಗಿ ಆರಂಭಿಸಿದರೂ ಅದರಲ್ಲಿನ ಅನೇಕ ವಿಚಾರಗಳು ಐತಿಹಾಸಿಕವಾಗಿಯೂ ಗಮನಾರ್ಹವಾಗಿಯೂ ಇವೆ.

ಜಗದ್ಗುರು ಚಂದ್ರಗುಂಡದೇಶಿಕೇಂದ್ರರು ಮಹಾ ಪ್ರಭಾವಶಾಲಿಗಳಾಗಿದ್ದು ವೀರಶೈವ ಮತದ ಉದ್ಧಾರ ಕಾರ್ಯವನ್ನು ಬಹಳವಾಗಿ ಮುಂದುವರಿಸಿ ವೀರಶೈವ ಮತದ ಚರಿತ್ರೆಯಲ್ಲಿ ವಂದ್ಯರಾಗಿದ್ದಾರೆ. ಇವರಿಂದ ಪುನೀತರಾದ ಜನಾಂಗಗಳು ಅನೇಕವಾಗಿ ಇಂದಿಗೂ ಈ ಮತದ ಶಿಷ್ಯಕೋಟಿಯಲ್ಲಿ ಸೇರಿದ್ದಾರೆ. ಇವರ ಸೂತ್ರವಿಡಿದು ನಡೆದ ಮುಂದಿನ ಮೂರ್ತಿಗಳ ಪ್ರಭಾವಗಳನ್ನು ಮುಂದೆ ಪರಿಶೀಲಿಸುವ.

(ಕ್ರಮಶಃ)

ವಚನಸಾಹಿತ್ಯದ ಮಹತ್ವ.

(ಲೇಖಕರ— ಶ್ರೀಯುತ ಜೀರಗೆ ಕ. ಬಸವಪ್ಪ, ಬಿ. ಎ. ಬೆಂಗಳೂರ)

ಶಿವಶರಣರ ವಚನಸಾಹಿತ್ಯವು ಕನ್ನಡಸಾಹಿತ್ಯದಲ್ಲಿ ಒಂದು ಉನ್ನತ ಸ್ಥಾನವನ್ನು ಪಡೆದಿರುತ್ತದೆಂಬ ವಿಷಯದಲ್ಲಿ ದ್ವಿಮತಗಳಿಲ್ಲ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ವಿಚಾರಕ್ರಾಂತಿಯ ಯುಗವನ್ನು ನಿರ್ಮಿಸಿ ಜನತೆಯಲ್ಲಿ ನವಚೇತನವನ್ನುಂಟುಮಾಡಿ ಜನತೆಯ ಜೀವನಾಧಾರವಾದ ಸಾಹಿತ್ಯವೆಂದರೆ ಶರಣರ ವಚನಸಾಹಿತ್ಯ. ಶರಣರ ನಂತರ ಕೆಲವು ಸಲದ ಮೇಲೆ ಕನ್ನಡಸಾಹಿತ್ಯಕ್ಕೆ ಮತ್ತೆ ಚೇತನವನ್ನು ಕೊಟ್ಟು ಜನಜಾಗ್ರತಿಯನ್ನುಂಟು ಮಾಡಿದವರೆಂದರೆ ದಾಸರು. ಈ ರೀತಿ ಬಂಡಕೂಟದವರಿಂದಲೂ ದಾಸಕೂಟದವರಿಂದಲೂ ಕನ್ನಡ ಸಾಹಿತ್ಯಕ್ಕೆ ಮಹೋಪಕಾರವಾಗಿದೆ. ಕನ್ನಡ ಸಾಹಿತ್ಯದ ಇಂಪನ್ನು ಸೊಂಪನ್ನು ತಂಪನ್ನು ಅರಿತುಕೊಳ್ಳಬೇಕೆಂಬುವವರು ಶರಣರ ವಚನಸಾಹಿತ್ಯವನ್ನು ದಾಸರ ಕೀರ್ತನಸಾಹಿತ್ಯವನ್ನೂ ಪಾನಮಾಡಿಯೇ ತೀರಬೇಕು.

ದಾಸಕೂಟದವರಂತೆಯೇ ಶರಣಕೂಟದವರೂ ಸಕ್ಕದದ ಮೋಹಕ್ಕೆ ಬೀಳದೆ ಜನರ ಮನೆಮಾತಾದ ಕನ್ನಡದಲ್ಲೇ ಒಂದು ಭವ್ಯನಾದ ಸಾಹಿತ್ಯಮಂದಿರವನ್ನು ನಿರ್ಮಿಸಿ ಪಂಡಿತಪಾಮರರೆನ್ನದೆ ಸರ್ವರಿಗೂ, ಸಾಹಿತ್ಯ ಮಂದಿರ ಪ್ರವೇಶಕ್ಕೆ ಅವಕಾಶವನ್ನಿತ್ತು ಜನತೆಯ ಬಾಳನ್ನು ಉತ್ತಮಗೊಳಿಸಿದರು. ಶರಣರ ವಚನಸಾಹಿತ್ಯ ನಿರ್ಮಾಣವು ಪಂಡಿತರಾದ ಕೆಲವರಿಗಾಗಿ ಮಾತ್ರವಲ್ಲ; ಪಾಮರರಾದ ಹಲವರಿಗಾಗಿ. ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿಯೂ ಅಜ್ಞಾನಿಗಳನ್ನು ಜ್ಞಾನಿಗಳನ್ನಾಗಿಯೂ, ಅನೀತಿವಂತರನ್ನು ನೀತಿವಂತರನ್ನಾಗಿಯೂ, ಮಾಡಬೇಕೆಂಬ ಪವಿತ್ರೋದ್ದೇಶದಿಂದಲೇ ವಚನಸಾಹಿತ್ಯದ ಸೃಷ್ಟಿಯಾಯಿತು. ಕೆಲವರು ಭಾವಿಸುವಂತೆ ಸಾಮಾನ್ಯರಿಗಾಗಿ ನಿರ್ಮಿಸಿದ ಈ ವಚನಸಾಹಿತ್ಯವು ಸಾಮಾನ್ಯವಾದ ಸಾಹಿತ್ಯವೆಂದು ಭಾವಿಸುವುದಾದರೆ ಆ ಭಾವನೆಯೂ ಸಾಮಾನ್ಯವಾದದ್ದೇ ಸರಿ. ಸಾಹಿತ್ಯವು ಭಾಷೆಯನ್ನು ಅವಲಂಬಿಸುವುದಿಲ್ಲ. ಭಾವವನ್ನು ಅವಲಂಬಿಸುತ್ತದೆ. ಜೀವನವನ್ನು ಪ್ರತಿ

ಬಿಂಬಿಸುತ್ತದೆ. ಜೀವನಕ್ಕೆ ಸಂಬಂಧವಿಲ್ಲದ ಸಾಹಿತ್ಯ, ಜೀವವಿಲ್ಲದ ಸಾಹಿತ್ಯ ರುಂಡವಿಲ್ಲದ ಮುಂಡದಂತೆ. ಭಾವವು ಕ್ಷೀರದಂತೆಂದರೆ ಭಾಷೆಯು ಕ್ಷೀರವನ್ನೊಳಗೊಂಡ ಪಾತ್ರೆಯಂತೆ ನಾವು ಪಾನ ಮಾಡುವುದು ಕ್ಷೀರವನ್ನು, ಪಾತ್ರೆಯನ್ನಲ್ಲ. ಭಾಷೆಯು ಎಷ್ಟು ಸರಳವೂ ಸುಲಭವೂ ಆಗಿರುವುದೋ ಅಷ್ಟೂ ಸಾಹಿತ್ಯಕ್ಕೆ ತೇಜಸ್ಸು ಓಜಸ್ಸು. "ರೋಗಿಗಳಿಗೆ ವೈದ್ಯನ ಅವಶ್ಯಕತೆ ಎಂತೋ, ಪಾಪಿಗಳಿಗೆ ನನ್ನ ಅವಶ್ಯಕತೆ ಅಂತು" ಎಂದು ಹೇಳಿದ ಮಹಾತ್ಮಾ ಏಸುಕ್ರಿಸ್ತನಂತೆ ಶರಣರು ಪಾಮರರ, ಅಜ್ಞಾನಿಗಳ, ಪಾಪಿಗಳ ಉದ್ಧಾರಕ್ಕಾಗಿ ವಚನಸಾಹಿತ್ಯವನ್ನು ನಿರ್ಮಿಸಿ ತನ್ಮೂಲಕ ಧರ್ಮಪ್ರಸಾರ ಮಾಡಿದ್ದಾರೆ.

ಶರಣರ ವಚನಸಾಹಿತ್ಯದ ಸರಣಿಯನ್ನು ಸ್ವಲ್ಪ ಅವಲೋಕಿಸುವಃ-

"ಕಾಗೆ ಒಂದಗುಳ ಕಂಡರೆ ಕರೆಯದೇ ತನ್ನ
ಬಳಗವನು? ಕೋಳಿ ಒಂದು ಗುಟಕವ
ಕಂಡರೆ ಕರೆಯದೇ ತನ್ನ ಕುಲವೆಲ್ಲವನು?"

"ಉರ್ವರೇಪೆ ಇದ್ದಲ್ಲಿ ಫಲವೇನೋ
ಆಯುಷ್ಯ ರೇಪೆ ಇಲ್ಲದನ್ನಕ್ಕ"

"ಸಗಣಿಯ ಬೆನಕಂಗೆ ಸಂಪಿಗೆಯರ
ಳಿನಲ್ಲಿ ಪೂಜಿಸಿದರೆ ರಂಜನೆಯಲ್ಲ
ವೆ ಅದರ ಗಂಜಳ ಬಿಡದಣ್ಣಾ"

"ಹೊನ್ನ ನೇಗಲುತ್ತು ಎಕ್ಕೆಯ
ಬೀಜವ ಬಿತ್ತುವರೇ? ಕರ್ಪೂರ
ದ ಮರನ ಕಡಿದು ಕಳ್ಳಿಗೆ ಬೇಲಿಯ
ಸಿಕ್ಕುವರೇ?"

ಎಂತಹ ಮಧುರ ಸಾಹಿತ್ಯವಿದು! ಎಂತಹ ಸಹಜಭಾವ! ಎಂತಹ ಕಲಾನೈಪುಣ್ಯ! ನೈಜೋಪಮಾನಗಳನ್ನು ಕೊಟ್ಟು ಭಾವಗಳನ್ನು ವಿಜೃಂಭಿಸುವ ಪರಿ ಎಂತಹದು!

ಇನ್ನು ಸಮಾಜ ಸುಧಾರಣೆಯಲ್ಲಿ ವಚನಸಾಹಿತ್ಯವು ಹೇಗೆ ಪ್ರಯತ್ನಿಸಿದೆ ಎಂಬುದನ್ನೂ ಸ್ವಲ್ಪ ನೋಡುವ.

ಕುಲ ಅಕುಲಗಳೆಂದು ಹೆಮ್ಮೆಪಡುವವರ ಮುಖಕ್ಕೆ ಕನ್ನಡಿಯನ್ನು ಹಿಡಿದಿರುವ ಬಗೆಯನ್ನು ನೋಡಿ!

"ಕುಲವನರಸದಿರಿ ಭೋ! ಕುಲದಿಂದ
ಮುನ್ನೇನಾದಿರಿಂ ಭೋ!"

"ವ್ಯಾಸ ಬೋಯಿತಿಯ ಮಗ
ಮಾರ್ಕಂಡೇಯ ಮಾತಂಗಿಯ
ಮಗ, ಮಂಡೋದರಿ ಕಪ್ಪೆಯ
ಮಗಳು..... ಸಾಕ್ಷಾತ್ ಅಗಸ್ತ್ಯ
ಕಬ್ಬಿಲ, ದೂರ್ವಾಸ ಮಚ್ಚಿಗ,
ಕಶ್ಯಪ ಕಮ್ಮಾರ, ಕೌಂಡಿಲ್ಯ
ನೆಂಬ ಋಷಿ ಮೂರು ಭುವನವರಿ
ಯೆ ನಾಯಿದ ಕಾಣಿ ಭೋ"

"ಹೊಲೆಗಂಡಲ್ಲದೆ ಪಿಂಡದ ನೆಲೆ
ಗಾಶ್ರಯವಿಲ್ಲ, ಜಲಬಿಂದುವಿನ
ವ್ಯವಹಾರ ಒಂದೇ, ಆಸೆಯಾ
ವಿಷಹರುಷ ವಿಷಯಾದಿಗ
ಳಿಲ್ಲ ಒಂದೇ. ಏನನೋದಿ
ಏನ ಕೇಳಿ ಏನು ಫಲ? ಕುಲಜ
ನೆಂಬುದಕ್ಕೆ ಆವುದು ದೃಷ್ಟ?

* * *

ಕಾಸಿ ಕಮ್ಮಾರನಾದ, ಬೀಸಿ ಮಡಿ
ವಳನಾದ, ಹಾಸನಿಕ್ಕಿ ಸಾಲಿಗನಾದ,
ವೇದವನೋದಿ ಹಾರುವನಾದ.
ಕರ್ಣದಲಿ ಜನಿಸಿದವರುಂಟೇ
ಜಗದೊಳಗೆ? ಇದು ಕಾರಣ
ಕೂಡಲಸಂಗಮದೇವ ಲಿಂಗಸ್ಥಲವ
ನರಿದವನೇ ಕುಲಜನು"

ಯಜ್ಞದ ಹೋತನನ್ನು ನೋಡಿ ವಚನಕಾರರು ಅಳುವುದನ್ನು ಕೇ
ವರೆ ನಮಗೂ ಅಳುಬರುವುದು.

"ಎಲೆ ಹೋತೆ ಅಳು ಕಂಡೆಯಾ! ಪೇ
ದವನೋದಿದವರ ಮುಂದೆ ಅಳು
ಕಂಡೆಯಾ ಹೋತೆ. ಶಾಸ್ತ್ರವ
ನೋದಿದವರ ಮುಂದೆ ಅಳು ಕಂಡೆ
ಯಾ ಹೋತೆ. ನೀನತ್ತುದಕ್ಕೆ ತಕ್ಕು
ದ ಮಾಡುವ ಕೂಡಲ ಸಂಗನು
ದೇವನವರ"

ಪಾಮರನೂ ಧರ್ಮದ ನೆಲೆಯನ್ನು ಅರಿತು ಆಚರಿಸುವಂತೆ ಧರ್ಮದ
ನಿರ್ಣಯವನ್ನು ಎಷ್ಟು ಸುಲಭವಾಗಿ ಮಾಡಿಟ್ಟಿದ್ದಾರೆಂಬುದನ್ನು ಈ ವಚ
ನದಲ್ಲಿ ನೋಡಬಹುದಾಗಿದೆ:—

"ದಯವಿಲ್ಲದ ಧರ್ಮವದಾವುದ
ಯ್ಯ? ದಯೆ ಬೇಕು ಸಕಲ
ಪ್ರಾಣಿಗಳಲ್ಲಿ. ದಯವೇ
ಧರ್ಮದ ಮೂಲವಯ್ಯ"

ಲೋಕದ ಆಚಾರ ವ್ಯವಹಾರಗಳ ಅಂತರವು ಎಷ್ಟಿದೆ ಎಂಬುದನ್ನು
ಎತ್ತಿ ಹಿಡಿದು ತೋರಿಸಿ ಎಲ್ಲರೂ ನಾಚಿ ತಲೆ ಬಾಗುವಂತೆ ಮಾಡುವ
ಈ ವಾಕ್ಯವನ್ನು ನೋಡಿ:—

"ಕಲ್ಲನಾಗರ ಕಂಡರೆ ಹಾಲನೆರೆ
ಎಂಬರು! ದಿಟದ ನಾಗರ ಕಂಡರೆ
ಹೊಡೆ ಎಂಬರಯ್ಯ! ಉಂಬ
ಜಂಗಮ ಬಂದರೆ ನಡೆ ಎಂಬರು!
ಉಣ್ಣದ ಲಿಂಗಕ್ಕೆ ಬೋನವ
ಹಿಡಿ ಎಂಬರಯ್ಯ!"

ಏನಿಲ್ಲದಿದ್ದರೂ ಒಳ್ಳೆಯ ಮಾತನ್ನಾದರೂ ಏಕೆ ಆಡುವುದಿಲ್ಲವೆಂದು
ಪ್ರಶ್ನಿಸುವ ವೈಖರಿಯನ್ನು ನೋಡಿ:—

"ಏನಿ ಬಂದಿರಿ, ಹದುಳವಿದ್ದಿರೆಂದರೆ
ನಿಮ್ಮ ವೈರಿಸಿರಿ ಹಾರಿಹೋಹುದೇ?
ಕುಳ್ಳಿರೆಂದರೆ ನೆಲ ಕುಳಿ ಹೋ
ಹುದೇ? ಒಡನೆ ನುಡಿದರೆ
ಬಿರ ಹೊಟ್ಟೆ ಒಡೆವುದೇ?
ಕೊಡಲಿಲ್ಲದಿದ್ದಡೊಂದು ಗುಣ
ವಿಲ್ಲದಿದ್ದೊಡೆ ಮೂಗ
ಕೊಯ್ಯದೆ ಮಾಣ್ಬನೇ?
ಕೂಡಲಸಂಗಮದೇವ"

ಕನ್ನಡ ಬಾಂಧವರೇ, ಇದುವರೆಗೂ ಕೊಟ್ಟ ಉದಾಹರಣೆಗ
ಳಿಂದ ಶರಣರ ವಚನಸಾಹಿತ್ಯದ ಸೂಕ್ಷ್ಮ ಪರಿಚಯ ಮಾಡಿಕೊಟ್ಟಂ
ತಾಗಿದೆ. ಒಟ್ಟಿನಲ್ಲಿ ಹೇಳಬೇಕೆಂದರೆ ವಚನಸಾಹಿತ್ಯವು ಅಬಾಲವೃದ್ಧ
ರಿಗೂ ಅರ್ಥವಾಗುವ ಪಂಡಿತರನ್ನೂ ತಲೆದೂಗುವಂತೆ ಮಾಡುವ ಎಲ್ಲ
ರನ್ನೂ ಮುಗ್ಧರನ್ನಾಗಿ ಮಾಡುವ ಪತಿತೋದ್ಧಾರ ಸಾಹಿತ್ಯವಾಗಿದೆ.

ಇಂಥ ಶೋಭಾಯಮಾನವಾದ ಅಮರ ಸಾಹಿತ್ಯದ ಪ್ರಚಾರದ
ಕಡೆಗೆ ಎಲ್ಲ ಕನ್ನಡಿಗರೂ ಲಕ್ಷಕೊಡಬೇಕಾಗಿದೆ.

ಶ್ರೀ ವಿಶ್ವ ವಿಭೂತಿ ಬಸವೇಶ.

ರಾಗಃ-- ಕೇದಾರ. ತಾಳಃ-- ಝುಂಪಾ.
("ಉದಯವಾಗಲಿ ನವ್ಯ ಚೆಲುವ ಕನ್ನಡ ನಾಡು" ಎಂಬಂತೆ)

ಶ್ರೀ ಬಸವರಾಜ! ಘನತೇಜ!! ಅಹ! ಸುರಭೂಜ!!
ಬಾ! ಬಾರೊ!! ಗುಣಸಿಂಧು!!! ಮುರಳಿ ಮಹಿಗಿಂದು ॥ಪ॥

ವಿನುತ ಬಸವನ ಉದಯ ಬಾಗವಾಡಿಯೊಳಾಯ್ತು।
ಜನಸಿ-ಜನಕರು ಮಾದಲಾಂಬೆ-ಮಾದರಸ್ ॥
ಎನಿತು ಪೇಳಲಿ! ದ್ವಿಜನು ಶಿವದೀಕ್ಷೆ ಹೊಂದಿದನು।
ತನಗೆ ಕೂಡಲಸಂಗಮೇಶ ಗುರುವೆಂದು ॥೧॥

ಶ್ವಪಚರನು, ಪತಿತರನು ಸುಪಥಕೆಳಿಸಿದ ಶಾಂತಿ-।
ನಿಪುಣನಾತನು ಸ್ತ್ರೀಸಮಾಜ-ಪಾಲಕನು ॥
ಅಪರಿಮಿತ ಪಾಂಡಿತ್ಯದಿಂ ಮುಂತ್ರಿ ತಾನಾಗಿ।
ಶಪಥಗಳ ಪಾಲಿಸಿದ ಆತ್ಮಬಲದಿಂದ ॥೨॥

ವಿಮಲ ಖಾದಿಯ ಪೆರಿಸಿ, ಕೈಗಾರಿಕೆಯ ಬರಿಸಿ।
ಅಮವು! ಮಾಯೆಯ ಮೀರಿ, ಮಹಿಮೆಗಳ ತೋರಿ॥
ಅಮಿತ-ಅನುಪಮ-ಅಮರ-ಅನುಭವದ ವಚನಗಳ।
ನಮಗಾಗಿ ಬೋಧಿಸಿದ ಸರಳಗನ್ನಡದಿ ॥೩॥

ಭೂರಿ ಕರುಣಾಭರಣ! ಕಲ್ಯಾಣ ಬಸವಣ್ಣ।
ಚಾರುಧರ್ಮದ ಮೂರ್ತಿ! ಪೂರ್ತಿ!! ಬಸವಣ್ಣ।
ವೀರಶೈವ ವಿಭವ! ಪ್ರತಿ ಅಭವ!! ಬಸವಣ್ಣ।
ಪಾರಮಾರ್ಥಿಕ ಪಾಠ-ಪೀಠ ಬಸವಣ್ಣ ॥೪॥

ತಿಳಿಸಿದನು ಜಗಕೆಲ್ಲ ಶರಣಸಂದೇಶವನು।
ಗಳಿಸಿದನು ಗಡ! ವಿಶ್ವಪ್ರೀತಿ-ನೀತಿಯನು॥
ಬೆಳಿಸಿದನು ತಾಯ್ನುಡಿಯನುಳಿಸಿದನು ಹರಮತವ।
ನಳಿಸಿವನು ಬಲಗೊಂಡ ಬರಿನಂಬಿಕೆಗಳ ॥೫॥

ಬಸವೇಶ! ತತ್ವಖನಿ!! ಸನ್ಯಾಸಿ! ಮಾದಾಪ!!
ವಿಸರಾಂತ ಚರವೋಹಿ! ವರಲಿಂಗದೇಹಿ॥
ಬಸವ ಭಾಸ್ಕರ! ಭಾಪುರೇ!! ಭಕ್ತಿಭಾಂಡಾರಿ!!!
ಎಸೆವ ಕಾಯಕಭೋಗಿ! ಭಲೆ!! ಕರ್ಮಯೋಗಿ ॥೬॥

ಸಕಲ ಮಾನ್ಯರೇ! ಸಾಧುಸಜ್ಜನರ ಸಂಸ್ಮರಣ।
ವಖಿಲ ಜೀವಿತ-ಧ್ಯೇಯಗಳಲಿ ಮಿಗಿಲಲ್ತೆ?॥
ಶಕಪುರುಷ ಬಸವೇಶ್ವರನ ಜನ್ಮದಿನವಿಂದೆ।
ಸುಖಮಾಸ- ವೈಶಾಖ ಶುದ್ಧ ಬಿದಿಗೆಯಿರಿ ॥೭॥

ವೇದ-ವಾದಗಳೇಕೆ? ಶಸ್ತ್ರ-ಶಾಸ್ತ್ರಗಳೇಕೆ?।
ಸೋದರರೆ! ನುಡಿಯಂತೆ ನಡೆಯೊಂದೆ ಸಾಕು॥
ಈ ದಿನವು ಕರುನಾಡ ಅಲ್ಲಲ್ಲ-ಭಾರತದ।
ಮೇದಿನಿಯ ಪಾವಿತ್ರ್ಯದಿನವಾಗಬೇಕು ॥೮॥

ಶಶಿಧರಗೆ-ಶಾಂಭವಿಗೆ-ಶಿವಸುತ-ವಿನಾಯಕಗೆ।
ಅಸಮ ಕವಿತಿಲಕರಿಗೆ-ಮುನಿವರೇಣ್ಯರಿಗೆ॥
ಬಸವಾದಿ ಪ್ರಮುಥರಿಗೆ-ನಿಜರಾಷ್ಟ್ರವೀರರಿಗೆ।
ಒಸೆದು ನುಡಿಸಿದ "ಮಹಾಂತ" ಯತಿಗೆ ಮಂಗಲವು ॥೯॥

ತುಂಗ ಬಸವಪಾದಾಬ್ಜ ಭೃಂಗ, "ಶ್ರೀಸಂಗ."

ಶ್ರೀಕರ ಭಾಷ್ಯ ವಿಮರ್ಶವು.

(ಲೇ:—ಶ್ರೀ ಸಿದ್ಧರಾಮಪ್ಪ ದಂಡಪ್ಪ ಪಾವಟೆ)

"ಶ್ರೀ ಪಂಡಿತಾಚಾರ್ಯನು ಪ್ರಾಕೃತಕ್ರಿಯಾತ್ಮಕ ಧರ್ಮಪ್ರತಿಪಾದಕ ಪೂರ್ವ ತಂತ್ರಸ್ಯ ಸಿದ್ಧಬ್ರಹ್ಮಪ್ರದಿಪಾದಕತ್ವೌ ಸಂಭವಾಚ್ಚ" ಪ್ರಾಕೃತ ಕ್ರಿಯಾಮಯವಾದ ಧರ್ಮವನ್ನು ಪ್ರತಿಪಾದಿಸುವ ಪೂರ್ವ ತಂತ್ರವು ಸಿದ್ಧ ಸ್ವರೂಪವಾದ ಬ್ರಹ್ಮವನ್ನು ಪ್ರತಿವಾದಿಸಲಾರದಾಗಿ ಧರ್ಮ ವಿಮರ್ಶಾಂ ಸಾಧಿಗವಾನಂತರದಲ್ಲಿ ಬ್ರಹ್ಮವಿಮರ್ಶಾಂಸಾಧಿಕಾರವಹುದೆಂಬುದು ಆಗದು. ಆದರೆ ಮಲತ್ರಯ ನಿವಾರಣಕ್ಕಾಗಿ ಲಿಂಗಧಾರಣವಾದ ಬಳಿಕ ಬ್ರಹ್ಮವಿಮರ್ಶಾಂಸಾಧಿಕಾರವು ಎಂದು ಕೇಳುವನು. ಈ ಮತವನ್ನು ನಾವು ವ್ಯಾಕರಣದಿಂದಲು, ಶಿಕ್ಷೆಯಿಂದಲು, ಸೂತ್ರಪೌರ್ವಾಪರ್ಯದಿಂದಲು, ತೈತ್ತಿರಿಯೋಪನಿಷತ್ತಿನ ಪೌರ್ವಾಪರ್ಯದಿಂದಲು ಪರೀಕ್ಷಿಸಿದೆವು. ಇದಹುದಾದರೆ ವೀರಶೈವವೆಂದು ನಾವು ಆಚರಿಸುವ ಧರ್ಮವು ಧರ್ಮವಲ್ಲ, ಧರ್ಮದ ಹೆಸರಿನದಲ್ಲ ಎಂದು ತೋರಿಸಿದೆವು. ಶ್ರೀ ಪಂಡಿತಾಚಾರ್ಯನ ಅಭಿಪ್ರಾಯವು ನಿಲ್ಲಲಾರದೆಂದು ತೋರಿಸುವಲ್ಲಿ ನಮ್ಮ ಆಗ್ರಹವು ಲಿಂಗಸಂಗದ ಈ ವೀರಶೈವವು ಸ್ವಕೀಯ ಅತಿ ಪ್ರಸ್ಥಾನ ವಿಶೇಷವನುಳ್ಳದು ಚಾತುರ್ವರ್ಣ್ಯವನ್ನು ಅತಿಗಳಿದುದು ವಿಧಿವಿಹಿತವಲ್ಲವುದು ಭಾವಪ್ರಧಾನವಾದುದು. ಅತ್ಯುದಾರ ತತ್ವಗಳನು ಹಿಡಿದುದು ಮಾನವನ ಉದಾತ್ತ ಜೀವನಕ್ಕೆ ಹೊಲಬಾದುದು ಎಂಬಿದನೆಲ್ಲ ತೋರಿಸಬಹುದು.

ಆದುದರಿಂದ ಇಲ್ಲಿ ಮಲತ್ರಯ ನಿವಾರಣ ದೀಕ್ಷಾ ವಿಚಾರದಿಂದಲು ಶಿವಭಕ್ತಿಯ ಸಾಮಾನ್ಯ ನಿರೂಪಣದಿಂದಲು ಶ್ರೀ ಪಂಡಿತಾಚಾರ್ಯನ ಲಿಂಗಧಾರಣ ವಿವರಣವನ್ನು ಅಳುಕಿಸಬಹುದಾಗಿದ್ದಿತು. ಆದರೆ ಆಚಾರ್ಯನ ಸಿದ್ಧಾಂತವು ಆಶ್ರಯಿಸಬಹುದಾದ ಹಲವು ಯುಕ್ತಿಗಳನು ಹರಿಯದೆ ಮುಂದುವರಿವುದು ಉಚಿತವಲ್ಲವೆಂದು ಆಯುಕ್ತಿಗಳನು ಪರಿಕಿಸತೊಡಗುವೆವು

ಪ್ರಾಕೃತಧರ್ಮ ಸಿದ್ಧಬ್ರಹ್ಮಗಳು

ಆಚಾರ್ಯ ಪಕ್ಷಪಾತಿಗಳು ನಮಗೆ ಇಂತೆನಬಹುದು. ಆಚಾರ್ಯನು ಭಾಷ್ಯದಲ್ಲಿ ತನ್ನ ಸಿದ್ಧಾಂತಕ್ಕೆ ಮುಂಡಕೋಪನಿಷತ್ತಿನ ಶ್ರುತಿವಾಕ್ಯವನ್ನು ಉದಾಹರಿಸಬೇಕಾಗಿದ್ದಿತು. ಆ ಉಪನಿಷತ್ತಿನಲ್ಲಿ ಯಜ್ಞಯಾಗಾದಿಗಳು ಅನಿತ್ಯ ಫಲಗಳಿಂದೂ ಅಕೃತವಾದ ಬ್ರಹ್ಮವು ಕ್ರಿಯಾಮಯ ಯಾಗಗಳಿಂದ ತಿಳಿಯದೆಂದೂ ಹೇಳಿಯದೆ. ಮತ್ತು ಬ್ರಹ್ಮಪ್ರಾಪ್ತಿಗೆ ಸಲಿಂಗಕವಾದ ತಪಸ್ಸನ್ನು ಆ ಉಪನಿಷತ್ತು ಒತ್ತಿ ಹೇಳುವದು. ಆಚಾರ್ಯನು ಎಲ್ಲ ವಾಕ್ಯಗಳಲ್ಲಿ ಉದಾಹರಿಪುದಾವಶ್ಯಕವಲ್ಲ. ಮುಂಡಕ ಶ್ರುತಿಯು ಆಚಾರ್ಯಸಿದ್ಧಾಂತಕ್ಕೆ ಪ್ರಮಾಣವಾಗಿದೆ.

ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾ ಅಷ್ಟಾದಶೋಕ್ತಮವರಂ ಯೇಷು ಕರ್ಮ, ಏತಚ್ಛ್ರೇಯೋ ಯೇಭಿನಂದಂತಿ ಮೂಢಾ ಜರಾ ಮೃತ್ಯುಂ ತೇ ಪುನರೇವಾ ಪಿಯಂತಿ. ಮು. ೧ ಖ ೨ ಮಂತ್ರ ೭ ಪರಿಕ್ಷೀಣೇ ಕರ್ಮಣಿ ತಾನ್ಬ್ರಹ್ಮಣೋನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್ಸ ಮಿತ್ಪಾಣಿ: ಶ್ರೋತ್ರಿಯಂ ಬ್ರಹ್ಮನಿಷ್ಠಂ ಮು. ೧ ಖ. ೨ ಮ. ಸ್ತಿ. ನಾಯಮಾತ್ಮಾ ಬಲಹೀನೇನ ಲಭ್ಯೋನಚ ಪ್ರಮಾದಾತ್ತ ಪಸೋ ವಾಪ್ಯ ಲಿಂಗಾತ್। ಏತೈರುಪಾಯೈರ್ಯತತೇಯಸ್ತು ವಿದ್ವಾಂಸ್ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಂ ಮು. ೩ ಖ. ೨ ಮ. ೪

ಹದಿರ್ವರು ಋತ್ವಿಜರು ಪತ್ನೀ ಯಜಮಾನರೀರ್ವರು ಹದಿನೆಂಟು ಜನದಿಂದ ಆಗುವ ಹೀನ ಕರ್ಮಗಳನು ಹೇಳಿದ ಯಜ್ಞಗಳು ನಟ್ಟಿಯಲ್ಲ. ಆವ ಮೂಢರು ಇದು ಕಲ್ಯಾಣವೆಂದು ನಂಬುವರೊ ಅವರು ಅಲ್ಲಿಂದಾಗ ಮುಪ್ಪು ಸಾವುಗಳಿಗೀಡಹರು.

ಕರ್ಮದಿಂದ ಸಂಗ್ರಹಿಸಿದ ಲೋಕಗಳನ್ನು ಚನ್ನಾಗಿ ನೋಡಿ ಹೇಸುವಲು ಅಕೃತ (ನಿತ್ಯಸಿದ್ಧವಾದು) ವಾದುದು ಕೃತದಿಂದ (ಕರ್ಮದಿಂದ) ಆಗದೆಂದು ಆ ಅಕೃತವನ್ನು ತಿಳಿಯಲು ಸಮಿತ್ತುಗಳನು ಕೈಯ್ಯೊಂಡು ಶ್ರೋತ್ರಿಯು ಬ್ರಹ್ಮನಿಷ್ಠೆ ಗುರುವನು ಹೊಂದತಕ್ಕದು.

ಈ ಆತ್ಮನು ಬಲಹೀನನಿಂದ ದೊರಕಿಸಲಾಗನು. ಎಚ್ಚರಗೇಡಿತನದಿಂದ ಸಿಲುಕನು. ಲಿಂಗವಿಲ್ಲದ ತಪಸ್ಸಿನಿಂದಲು ಸಿಲುಕನು. ಅವನು ಈ ಉಪಾಯಗಳಿಂದ ಯತ್ನಿಸುವನೋ ಆ ವಿದ್ವಾಂಸನಿಗೆ ಈ ಆತ್ಮನು ತನ್ನ ಸ್ವರೂಪವನು ಪ್ರಕಟಿಸುವನು. ಇಂತು ಮುಂಡಕೋಪನಿಷತ್ತಿನಲ್ಲಿ ಪ್ರಾಕೃತವಾದ ಸ್ವರ್ಗಸಾಧನ ಯಾಗಗಳಿಗೆ ಸಿಲುಕದ ಬ್ರಹ್ಮಜಿಜ್ಞಾಸಕ್ಕೆ ಶಿವಲಿಂಗ ಧಾರಣ ಸಂಸ್ಕಾರವನ್ನು ವಿಧಿಸಿವೆ.

ಇದನೀಗ ನೋಡುವಣ.

ಮೊದಲನೆಯ ಮುಂಡಕದ ಮೊದಲನೆಯ ಖಂಡದಲ್ಲಿ ಒಂಬತ್ತು ಮಂತ್ರಗಳಿವೆ. ಮೊದಲನೆಯ ಎರಡು ಮಂತ್ರಗಳಲ್ಲಿ ಬ್ರಹ್ಮವಿದ್ಯಾಪ್ರಕರಂಪರೆಯು ಬ್ರಹ್ಮನಿಂದ ಅಂಗಿರಸನ ವರೆಗೆ ಬರುವುದು. ಮೂರನೆಯ ಮಂತ್ರದಲ್ಲಿ ಶೌನಕನು ಅಂಗಿರಸನಲ್ಲಿ ಬ್ರಹ್ಮವಿದ್ಯೆಯನ್ನು ಬೆಸಗೊಂಬನು. ನಾಲ್ಕನೆಯ ಐದನೆಯ ಆರನೆಯ ಮಂತ್ರಗಳಲ್ಲಿ ಅಂಗಿರಸನು ಶೌನಕನಿಗೆ ಪರಾಪರವೆಂಬ ಬ್ರಹ್ಮವಿದ್ಯೆಯೂ ಋಗ್ವೇದಾದಿ (ಕರ್ಮಸಾಧಕ) ಅಪರವಿದ್ಯೆಯೂ ಉಂಟೆಂದು, ಅದರಿಂದ ಪರವಿದ್ಯೆಯಿಂದ ತಿಳಿವ ಬ್ರಹ್ಮವು ಇಂದ್ರಿಯಾಗೋಚರವೆಂದು ಹೇಳುವನು. ಏಳನೆಯ ಎಂಟನೆಯ ಒಂಬತ್ತನೆಯ ಮಂತ್ರಗಳಿಂದ ಬ್ರಹ್ಮವು ಜಗತ್ತಿಗೆ ಉತ್ಪತ್ತಿ ಸ್ಥಾನವೆಂದೂ ಆ ಬ್ರಹ್ಮದ ಉತ್ಪತ್ತಿ ಪ್ರಕಾರದ ಜ್ಞಾನದಿಂದ ಅವ್ಯಾಕೃತವೆಂಬ ಜಗದ್ಬೀಜವು ಹುಟ್ಟುವದೆಂದೂ ಆ ಬೀಜದಿಂದ ಪ್ರಾಣ ಆದಿಗಳೂ ಕರ್ಮಗಳೂ ಕರ್ಮಫಲಗಳೂ ಬರುತ್ತವೆಂದೂ ನಾಮರೂಪಗಳೂ ಅದರಿಂದಲೆ ಹುಟ್ಟುವುವೆಂದೂ ತಿಳಿಸುವುನು.

ಎರಡನೆಯ ಮುಂಡಕದ ಹತ್ತು ಮಂತ್ರಗಳಲ್ಲಿ ಅಗ್ನಿ ಹೋತ್ರಾದಿ ಕರ್ಮಗಳು ಕಷ್ಟಸಾಧ್ಯವೆಂದೂ, ವಿಕಲವಾದಲ್ಲಿ ಯಜಮಾನನ ಸಪ್ತ ಲೋಕಗಳಲ್ಲಿ ಕೆಡಿಪುವೆಂದೂ, ಸಾಂಗವಾದಲ್ಲಿ ಯಜಮಾನನಿಗೆ ಇಂದ್ರಲೋಕ ಪ್ರಾಪ್ತಿಯಹುದೆಂದೂ, ಹಾಗಾದರು ಅದು ಶಾಶ್ವತವಲ್ಲೆಂದೂ, ಕರ್ಮೋಪಾಸಕರು ಅಜ್ಞಾನ ಮೂಢರೆಂದೂ ಅಂಗಿರನು ಶೌನಕನಿಗರುಹುವನು. ಹನ್ನೊಂದನೆಯ ಮಂತ್ರದಲ್ಲಿ ಕರ್ಮಜ್ಞಾನ ಸಮುಚ್ಚಯದಿಂದ ಸೂರ್ಯದ್ವಾರವಾಗಿ ಉಪಾಸಕರು ಅವ್ಯಯಾತ್ಮನಾದ ಪುರುಷನ ಲೋಕವನ್ನು ಹೊಂದುವರೆಂದು ತಿಳಿಸುವನು.

ಹನ್ನೆರಡನೆಯ ಮಂತ್ರದಲ್ಲಿ ಈ ಎಲ್ಲ ಲೋಕಗಳು ಅಸ್ಥಿರವೆಂದು ತಿಳಿಸಿ ಅವುಗಳಿಂದ ಹೇಸಿ ಗ್ರಂಥಾರಂಭದಲ್ಲಿ ವಿವರಿಸಿದ ಅದ್ರೇಶ್ಯತ್ವಾದಿ ವಿಶಿಷ್ಟ ಅಕೃತಬ್ರಹ್ಮವನರಿಯಲು ಬ್ರಹ್ಮನಿಷ್ಠನಾದ ಶ್ರೋತ್ರಿಯ ಗುರುವನ್ನು ಹೊಂದತಕ್ಕುದೆಂದು ಉಪದೇಶಿಸುವನು.

ಇಷ್ಟು ಸಂದರ್ಭದಿಂದ ಬ್ರಹ್ಮವಿದ್ಯಾಧಿಕಾರಿಯು ಅಗ್ನಿಹೋತ್ರಾದಿಗಳನ್ನೆಸಗಿದವನು ಅಥವಾ ಕರ್ಮಜ್ಞಾನ ಸಮುಚ್ಚಯದಿಂದ ಹಿರಣ್ಯಗರ್ಭೋಪಾಸಕನಾಗಿ ಅವುಗಳು ಅನಿತ್ಯಫಲಕ್ಕೆ ಹೇಸಿದವನಿರಬೇಕೆಂದು

ಯಾಚನೆಯಾಯ್ತು. ಗುರುವು ಶ್ರೋತ್ರಿಯ ಬ್ರಹ್ಮನಿಷ್ಠನೆಂದು ಕಂಡು ಬಂದಿತು.

ಹದಿಮೂರನೆಯ ಮಂತ್ರವಿದು--ತಸ್ಮೈಸವಿದ್ವಾನುಪಸನ್ನಾಯ ಪಕ್ವಕ್ಷಾಯ ಶಾಂತಚಿತ್ತಾಯ ಶಮಾನ್ವಿತಾಯ। ಯೇನಾಕ್ಷರಂ ಪುರುಷಂ ವೇದಸತ್ಯಂ ಪ್ರೋವಾಚತಾಂ ತತ್ವತೋ ಬ್ರಹ್ಮವಿದ್ಯಾಯಂ.

ಆ ವಿದ್ವಾಂಸನು (ಅಂಗೀರನು) ತನ್ನನ್ನು ವಿಧಿವತ್ತಾಗಿ ಬಳಿಸಾರಿದ ದರ್ಪಾದಿನೋಕ್ಷಗಳೇನು ಇಲ್ಲದ ಶಾಂತಿಯುಂದೊಡಗೂಡಿದ ಅವನಿಗೆ (ಶೌನಕನಿಗೆ) ಆವುದರಿಂದ ನಾಶರಹಿತನಾದ ಪುರುಷನ ತಿಳಿವೆಯುಹುದೊ ಆ ಬ್ರಹ್ಮ ವಿದ್ಯೆಯಲ್ಲಿ ಯಥಾರ್ಥವಾಗಿ ಹೇಳಿದನು.

ಬ್ರಹ್ಮ ವಿದ್ಯೆಗೆ ಲಿಂಗಧಾರಣವು ಬೇಕೆಂದು ಉಪನಿಷತ್ಸಿದ್ಧಾಂತವಾಗಿರ್ಪರೆ ಶೌನಕನಿಗೆ ಲಿಂಗಧಾರಣವು ಬರುತ್ತಿದ್ದಿತು. ಅದು ಬಂದಿಲ್ಲ. ಇಂದಿನ ಸಂದರ್ಭದಿಂದ ಶೌನಕನು ಅಗ್ನಿ ಹೋತ್ರಾದಿಗಳನ್ನನುಷ್ಠಿಸಿ ಶಮಾನ್ವಿತನಾದವನೆಂದು ತೋರುವುದು. ಅವನಿಗೆ ಲಿಂಗಧಾರಣವಿದ್ದಿಲ್ಲ. ಅಂಗಿರನು ಅವನಿಗೆ ಲಿಂಗಧಾರಣಂಗೆಯ್ಯಲಿಲ್ಲ

ನುತ್ತೊಂದು ಮಾತು.

ಬ್ರಹ್ಮಜಿಜ್ಞಾಸುವು ಬಳಿಸಾರ್ವಗುರುವಿನ ಲಕ್ಷಣವು ಶ್ರೋತ್ರಿಯನೆಂದೂ ಬ್ರಹ್ಮನಿಷ್ಠನೆಂದೂ ಬಂದಿದೆ. ಲಿಂಗವನ್ನು ಧರಿಸಿದವನೆಂದೂ ಲಿಂಗಪೂಜಾ ನಿಷ್ಠನೆಂದೂ ಬಂದಿಲ್ಲ. ಇವೆರಡು ಪದಗಳಲ್ಲಿ ಲಿಂಗಧಾರಣವನುಳ್ಳವನೆಂದಾಗಲಿ ಇತರವಾವುದೊಂದು ವೀರಶೈವ ಲಕ್ಷಣವನುಳ್ಳವನೆಂದಾಗಲಿ ಭಾವವು ತೋರುವದೋ? ಇಲ್ಲ. ಶಿಷ್ಟೈಕಾಹಿತ ಚಿತ್ತಶ್ಚ ಶಿವಲಿಂಗಾರ್ಚನಾಪರಃ॥ ಸೂಕ್ಷ್ಮಾಗಮ ಋ-ಲ ಎಂಬಿದು ಪ್ರತ್ಯುದಾಹರಣವು

ಶ್ರೋತ್ರೀಯ ಶಬ್ದವು "**ಶ್ರೋತ್ರಿಯ ಶ್ಛಂದೋಧೀತೇ**" (ಋ-೨-೪೪) ಪಾಣಿನಿ ಸೂತ್ರದಿಂದಲೂ "ಶ್ರೋತ್ರಿಯಶ್ಛಂದಸಃ ಸಮೌ" ಎಂಬ ಅಮರ ವಾಕ್ಯದಿಂದಲು ವೇದಾಧ್ಯಯನ ಸಂಪನ್ನನೆಂಬರ್ಥದಲ್ಲಿ ವರ್ತಿಪದು. ಬ್ರಹ್ಮನಿಷ್ಠ ಶಬ್ದವಲ್ಲಿ ಲಿಂಗನಿಷ್ಠನೆಂಬ ಅರ್ಥವಹುದೆಂದು ಆಚಾರ್ಯ ಪಕ್ಷಪಾತಿಗಳು ವಾದಿಸಬಹುದು. ಪ್ರಸ್ತುತ ವಿಮರ್ಶದ ಪ್ರಾರಂಭದಲ್ಲಿ ಬ್ರಹ್ಮ ಲಿಂಗ ಪದ್ಯಗಳ ವಿಷಯದಲ್ಲಿ ನಾವು ಬರೆದುದನ್ನು ಓದುಗರು ನೋಡಲೆಂದು ಬಯಸುತ್ತೇವೆ.

ಆದುದರಿಂದ ಶ್ರೀ ಪಂಡಿತಾಚಾರ್ಯರ ಮತಕ್ಕೆ ಮುಂಡಕದಲ್ಲಿ ಇಂಬಿಲ್ಲ.

ಇಲ್ಲೊಂದು ಆಶಾಂಕುರವು.

ಮೂರನೆಯ ಮುಂಡಕದ ನಾಲ್ಕನೆಯ ಮಂತ್ರವಿದು. ನಾಯ ಮಾತ್ಮಾ ಬಲಹೀನೇನ ಲಭ್ಯೋನಚ ಪ್ರಮಾದಾತ್ತಪಸೋವಾಪ್ಯಲಿಂ ಗಾತ್ ಏತೈರುಪಾಯೈರ್ಯತತೇಯಸ್ತು ವಿದ್ವಾಂಸ್ತಸ್ಯೈಷ ಆತ್ಮಾ ವಿಶತೇ ಬ್ರಹ್ಮಧಾಮ.

ಇದರಲ್ಲಿ ಅಲಿಂಗವಾದ ತಪಸ್ಸಿನಿಂದ ಆತ್ಮನು ಲಭ್ಯನಲ್ಲೆನ್ನುವು ದರಿಂದ ಲಿಂಗಧಾರಣವು ಆತ್ಮಪ್ರಾಪ್ತಿಗೆ ಬೇಕಾದುದೆಂದು ಹಸನಾಗಿ ಕಾಣುತ್ತಿದೆ ಎಂದು ಭಾಷ್ಯ ಪಕ್ಷಪಾತಿಗಳು ನಮ್ಮನ್ನು ಎದುರಿಸಬ ಹುದು. ಇದವರ ಮನೋರಥಮಾತ್ರವು ನೋಡಿರಿ. ಈ ಆತ್ಮನು ಬಲಹೀನನಿಂದ (ಆತ್ಮ ನಿಷ್ಠೆಯಲ್ಲಿ ಬಲವು) ದೊರಕಿಸಪಡನು. ಎಚ್ಚರ ಗೇಡಿತನದಿಂದ ದೊರಕನು. ಲಿಂಗವಿಲ್ಲದ ತಪಸ್ಸಿನಿಂದಲು ದೊರಕನು. ಬಲದಿಂದಲು ಎಚ್ಚರದಿಂದಲು ಲಿಂಗ ರಹಿತನಾದ ತಪಸ್ಸಿನಿಂದಲು ಈ ಎಲ್ಲ ಉಪಾಯಗಳಿಂದ ಆವ ವಿದ್ವಾಂಸನುಯತ್ನಿಸುವನೊ ಅವನ ಆತ್ಮನು ಪ್ರಕಾಶಮಯವಾದ ಬ್ರಹ್ಮನನು ಸೇರುವನು. ಇಂತಿದು ಮಂತ್ರಾರ್ಥವು. ಜಾತಕವು ಮಳೆನನಿಗಳನ್ನು ಮುಗಿಲಿಂದ ನೋಡುವಂತೆ ವೇದದಲ್ಲಿ ಉಪನಿಷತ್ತಿನಲ್ಲಿ ಲಿಂಗಶಬ್ದವನ್ನು ದಾರಿ ನೋಡುವ ಅಕ್ಷರತೆಗಾರರು ನಮ್ಮನ್ನು ಈ ಮಂತ್ರದಿಂದ ಎದುರಿಸುವಲ್ಲಿ ಸಂಶಯವಿಲ್ಲ. ನಾವೀಗ ಇದನ್ನು ತೆರೆದು ವಿವರಿಸುವಣ.

ಈ ಮಂತ್ರದಲ್ಲಿ ಲಿಂಗವಿಲ್ಲದ ತಪಸ್ಸಿನಿಂದ ಆತ್ಮನು ದೊರೆಯ ನೆಂದು ಹೇಳುವುದರಿಂದ ಕಂಠದಿಂದಲೆ ಉಪನಿಷತ್ತು ಲಿಂಗಧಾರಣದ ಅವಶ್ಯಕತೆಯಲ್ಲಿ ಹೇಳುವುದಾಗಿ ಶೌನಕನಿಗೆ ಲಿಂಗಧಾರಣವಾದ ಬಳಿಕ ಅಂಗಿರನು ಬ್ರಹ್ಮೋಪದೇಶವ ಮಾಡಿದನೆನಬೇಕು. ಇಂತಿದು ಭಾಷ್ಯ ಭಿಮಾನಿಗಳ ಪೂರ್ವವಾದವು.

ಈ ವಾದಕ್ಕೆ ಭಾಷ್ಯಪಂಕ್ತಿಯು ಅನುಕೂಲವಾಗಿಲ್ಲ. ಯತ್ಪೂರ್ವ ಭಾವಿತ್ವಂ ನಿಯಮನಿಯತ ಪ್ರಯೋಜಕತಯಾ ಮುಮುಕ್ಷೂಣಾಂ ಮಲತ್ರಯ ವಿಧ್ವಂಸನೇ ವಿಧೀಯತೇ ತತ್ಪೂರ್ವಭಾವಿತ್ವಂ ಬ್ರಹ್ಮವಿಚಾರ ಶಾಸ್ತ್ರಸ್ಯೇತಿ ನಿರ್ಣೀಯತೇ ಅತೋಸ್ಯ ವಿಷಯಃಶ್ರೂಯತೇ ತೈತ್ತಿರೀಯ ಶಾಖಾಯಾಂ ಬ್ರಹ್ಮನೋಧಾಕಾಮಸ್ಯ ತತ್ಪ್ರಾಪ್ತಿಸಾಧನಂ ಕಿಮಿತ್ಯಾಕಾಂ

ಕ್ಷಯಾನಾಹ-ಯಚ್ಛಬ್ದಂದಸಾನಿತಿ ಪುಟ ೭ ಈ ವಾಕ್ಯದಿಂದ ಬ್ರಹ್ಮಜಿ ಜ್ಞಾಸುವಿಗೆ ಬೇಕಾದ ಮೇಧೆಯ ಪರಿಪೋಷಕ್ಕಾಗಿ ಲಿಂಗಧಾರಣವು ವಿಹಿತವಾಗಿದೆಯೆಂದು ಭಾಷ್ಯಾಭಿಪ್ರಾಯವು.

ಮೂರನೆಯ ಮುಂಡಕದ ಮಂತ್ರವಿದುಃ – ನಾಯಮಾತ್ಮಾ ಪ್ರವ ಚನೇನ ಲಭ್ಯೋನಮೇಧಯಾನ ಬಹುನಾಶ್ರುತೇನ ಯಮೇವೈಷವೃಣು ತೇತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನುಸ್ವಾಮ್—

ಈ ಆತ್ಮನು ಪ್ರವಚನದಿಂದ (ವೇದಶಾಸ್ತ್ರಾಧ್ಯಯನದಿಂದ) ದೊರೆ ಯನಲ್ಲ. ಮೇಧೆಯಿಂದ ದೊರೆವನಲ್ಲ. ವಿಪುಲ ಶ್ರವಣದಿಂದ ದೊರೆವನಲ್ಲ. ಆವನನ್ನು ಈ ಆತ್ಮನು ಆರಿಸಿಕೊಳ್ಳನೊ ಅವನಿಗೆಯೆ ಇವನು ದೊರೆ ಯನು. ಅವನಿಗೆ ಈ ಆತ್ಮನು ತನ್ನ ಪೂರ್ಣಸ್ವರೂಪವನ್ನು ಪ್ರಕಟಿ ಸುವನು.

ಈ ಮಂತ್ರದಲ್ಲಿ ಮೇಧೆಯು ಮುಂತಾದವುಗಳು ಆತ್ಮನು ಸಾಧ ಕನನ್ನೆ ಅನುಗ್ರಹಿಸದೆ ಬ್ರಹ್ಮಾತ್ಮ ಜ್ಞಾನಕ್ಕೆ ಸಾಧನವಲ್ಲವೆಂದು ಬಂದಿದೆ. ಶ್ರೀಪಂಡಿತಾಚಾರ್ಯನ ಮತದಿಂದ ಲಿಂಗಧಾರಣವು ಮೇಧೆಗಾಗಿ ವಿಹಿತವಾಗಿದೆ. ಅದು ಅಹುದಾಗಿದ್ದರೆ ಈ ಮಂತ್ರದಲ್ಲಿ "ನಾಯಮಾತ್ಮಾ ಅಲಿಂಗಯಾ ಮೇಧಯಾ ಲಭ್ಯಃ" ಅಥವಾ "ನಾಯಮಾತ್ಮಾ ಅಲಿಂ ಗೇನ ಮೇಧಯಾ ಲಭ್ಯಃ" ಆತ್ಮನು ಲಿಂಗವಿಲ್ಲದ ಮೇಧೆಯಿಂದ ಅಥವಾ ಲಿಂಗವಿಲ್ಲದವನಿಂದ ಮೇಧೆಯಿಂದ ದೊರೆಯನು ಎಂದು ಬರುತ್ತಿತ್ತು.

ಭಾಷ್ಯಾಭಿಮಾನಿಗಳು ಆದರೇನಾಯ್ತು! ಲಿಂಗವಿಲ್ಲದ ತಪಸ್ಸಿನಿಂದ ಆತ್ಮನು ದೊರೆಯನೆಂಬುದು ಲಿಂಗಧಾರಣವಿಧಾಯಕವಾಗಿದೆ. ಮುಂಡ ಕವು ತಪಸ್ಸಿಗೆ ಲಿಂಗವನ್ನು ವಿಧಿಸಿದಪುದು ತೈತ್ತಿರೀಯವು ಮೇಧಾಪ್ತಿ ಗೆ ವಿಧಿಸಿದಪುದು ಇಂತಾಗಿ ಮುಂಡಕವು ತೈತ್ತಿರೀಯಕ್ಕೆ ಬಲವಾ ಗಿ ಎನ್ನಬಹುದು.

ತಪಸೋಪ್ಯ ಲಿಂಗಾದ್ವಿಚಾರವು

ಹಾಗಾದರೆ ತಪಸ್ಸಿನ ಸಿದ್ಧಿಗೆ ಲಿಂಗವು ವಿಧಿಸಲ್ಪಡೆವುದರಿಂದ ಲಿಂಗಧಾರಣವು ತಪಸ್ಸಿಗೆ ಅಂಗಭೂತವಾಯ್ತು. ವೀರಶೈವ ಧರ್ಮವು

ಲಿಂಗ ಪ್ರಾಪ್ತಿಗೆ ತಪಸ್ಸಿನಲ್ಲಿ ಹೇಳುತ್ತಿವೆ. ಆ ಲಿಂಗವೆ ವೇದಾಂತಗಳು ಉದ್ಘೋಷಿಸುವ ಬ್ರಹ್ಮನೆನಿಸುತ್ತಿವೆ. "ಯಲ್ಲಿಂಗಮಪರಿಚ್ಛೇದ್ಯಮಾದಿ ಮಧ್ಯಾಂತವರ್ಜಿತಂ ಪರಾನಂದಂ ಚಿದಾಕಾರಂ ಪುರುಷಂ ಕೃಷ್ಣಪಿಂಗಲಂ। ಹಿರಣ್ಯಪತಿಮೀಶಾನಂ ಪಶೂನಾಂ ಪತಿಮೀಶ್ವರಂ। ಊರ್ಧ್ವರೇತಮುಮಾಶಾಂತಂ ಸರ್ವವಿದ್ಯಾಧಿನಾಯಕಂ॥ ಬ್ರಹ್ಮಾದಿಪತಿ ಮದ್ವಂದ್ವಂ ನೀಲಕಂಠಂ ಸದಾಶಿವಂ। ವಿಶ್ವಾಧಿಕಂ ಮಹಾದೇವಂ ಜಗದ್ವ್ಯಾಪಕಮಚ್ಯುತಂ॥ ಪರಾತ್ಪರತರಂ ತತ್ವಮಕ್ಷರಂ ಸದಸಚ್ಚ್ಯುತ್। ಅಪ್ರತರ್ಕ್ಯಮಮೇಯಂಚ ವ್ಯೋಮಕೇಶಂ ದುರಾಸದಂ॥ ಭರ್ಗೋವರೇಣ್ಯಂ ಯದ್ರೂಪಂ ತಲ್ಲಿಂಗಮಿತಿಕೀರ್ತಿತಂ। ತಸ್ಮಾಲ್ಲಿಂಗಂ ಪರಂ ಬ್ರಹ್ಮ ಸದಾ ಧ್ಯಾಯಂತಿಯೋಗಿನಃ॥" ಸೂಕ್ಷ್ಮಾಗಮ ಪಟಲ ೬ ಶ್ಲೋಕ ೧೯-೨೩

ಶ್ಲೋಕಗಳು ಸುಬೋಧವಿಹವಾಗಿ ಕನ್ನಡಿಸಿಲ್ಲ. ಶ್ರೀಪಂಡಿತಾಚಾರ್ಯರ ಭಾಷ್ಯವು ಉಪನಿಷದ್ವಿಚಾರಕ್ಕೆ ಮೇಧೆಯನ್ನು (ಗ್ರಂಥಧಾರಣ ಶಕ್ತಿ) ಮೇಧೆಗೆ ಲಿಂಗಧಾರಣವನ್ನು ಹೇಳಿ ಉಪನಿಷದ್ವಿಚಾರದಿಂದ ಬ್ರಹ್ಮಜ್ಞಾನ ಮುಂಡಕೋಪನಿಷತ್ತಿನಿಂದ ಲಿಂಗಧಾರಣವ ಸಾಧಿಸಿದರೆ ಬ್ರಹ್ಮಜ್ಞಾನಕ್ಕೆ ತಪಸ್ಸು ಏನು ಹೇಳುವುದು. ತಪಃಸಿದ್ಧಿಗೆ ಲಿಂಗಧಾರಣವು ಬೇಕು. ಅಂತಾಗಿ ಲಿಂಗಧಾರಣವು ಈ ಮತದ್ವಯದಿಂದ ಬ್ರಹ್ಮಜ್ಞಾನಕ್ಕೆ ಸಾಧನವಲ್ಲದೆ ಲಿಂಗಪ್ರಾಪ್ತಿಯೆ ಪರಮ ಸಾಧ್ಯವಾಗಲಿಲ್ಲ. ಬ್ರಹ್ಮಜ್ಞಾನವು ಪರಮಸಾಧ್ಯವು.

ಮತ್ತೇನಂದರೆ ಮುಂಡಕದಲ್ಲಿ ಆಗಲಿ ತೈತ್ತಿರೀಯದಲ್ಲಾಗಲಿ ಲಿಂಗವು ಪರಬ್ರಹ್ಮರೂಪವಾದುದೆಂದು ಹೇಳಿಲ್ಲ. ಆದುದರಿಂದ ಮುಂಡಕದಲ್ಲಿಯ ಸಲಿಂಗಕ ತಪಸ್ಸು ಇಷ್ಟಲಿಂಗ ಧಾರಣಪರವಲ್ಲ. ಹಾಗೆಂದು ಹಿಡಿದರು ಇಷ್ಟಲಿಂಗವು ಪರಬ್ರಹ್ಮರೂಪವಲ್ಲಾಗಿ ಅದು ವೀರಶೈವ ಸಿದ್ಧಾಂತವಲ್ಲ.

ಇಷ್ಟಾದರು ಉಪನಿಷದ್ವಾಕ್ಯಲಾಲಸರು ಮುಂಡಕವು ವಿಧಿಸುವ ಸಲಿಂಗಕ ತಪಸ್ಸು ಇಷ್ಟಲಿಂಗಪರವೆಂದರೆ ಆ ಉಪನಿಷತ್ತಿ ಹಾಗಲ್ಲವೆನ್ನುವುದಕ್ಕೆ ಸಾಕ್ಷಿಯಾಗಿದೆ. ಈ ಉಪನಿಷದ್ವಿದ್ಯಾಧಿಕಾರವಿಂತು. ತದೇತದೃಚಾಭ್ಯುಕ್ತಂ ಕ್ರಿಯಾವಂತಃ ಶ್ರೋತ್ರಿಯಾ ಬ್ರಹ್ಮನಿಷ್ಠಾಃ ಸ್ವಯಂ ಜುಹ್ವತ ಏಕರ್ಷಿಂ ಶ್ರದ್ಧಯಂತಃ। ತೇಷಾಮೇವೈತಾಂ ಬ್ರಹ್ಮವಿದ್ಯಾಂ ವದೇತ ಶಿರೋವ್ರತಂ ವಿಧಿವದ್ಯೈಸ್ತು ಚೀರ್ಣಂ ॥

ಪ್ರಸಿದ್ಧವಾದ ಈ ವಿದ್ಯಾ ಸಂಪ್ರದಾಯವನು ಋಜೆಯು ಪ್ರಕಾಶಿಸಿದರೆ ಆವ ಶ್ರೋತ್ರಿಯರು ಕ್ರಿಯಾಸಂಪನ್ನತೆಯಿಂದ ಬ್ರಹ್ಮನಿಷ್ಠರಾಗಿ ಸ್ವಯಂ) ಅಗ್ನಿಯನ್ನು (ಅಗ್ನಿಯಲ್ಲಿ) ಹವಿಸ್ಸನ್ನಿಡುವರೋ ಮತ್ತು ಶ್ರದ್ಧೆಯುಳ್ಳವರಾಗಿಹರೋ ಶಿರೋವ್ರತ (ಶಿರಸ್ಸಿನಲ್ಲಿ ಅಗ್ನಿಧಾರಣ ವ್ರತವು) ವನ್ನು ಯಥಾವಿಧಿಯಿಂದಾಚರಿಸಿದ ಅಂತಹ ಕ್ರಿಯಾಸಂಪನ್ನಶ್ರೋತ್ರಿಯರಿಗೆಯೆ ಈ ಬ್ರಹ್ಮನಿದ್ಯೆಯನ್ನು ತಿಳಿಸತಕ್ಕದ್ದು.

ಅಗ್ನಿಗಾಹುತಿಯನಿಕ್ಕುವ ಯಾಗಗಳಿ ಸನ್ಯಾಸಯೋಗದಿಂದ ಬ್ರಹ್ಮವಿದ್ಯೆಗೆ ಸಾಧನವೆಂದು ಮುಂತ್ರವು ತಾನು ಹೇಳಿದ ಇತರ ಸಾಧನಗಳಲ್ಲಿ ನಿರಾಕರಿಪುದು. ತೇಷಾಮೇವ ಅವರಿಗೆಯೆ ಎಂಬ ಪದಗಳಿಂದ ಈ ನಿರಾಕರಣವು ಸ್ಪಷ್ಟವದೆ. ಆದುದರಿಂದ ವೀರಶೈವಸ್ಥಭಿಮತವಹ ಇಷ್ಟಲಿಂಗಧಾರಣವು ಮುಂಡಕಶ್ರುತಿಪ್ರತಿಷಿದ್ಧವು.

ಹಾಗಾದರೆ ಅಲಿಂಗಾತ್ ಪದದ ಅರ್ಥವೇನು? ಇದಕ್ಕಾಗಿ ಮುಂಡಕೋಪನಿಷತ್ತಿನ ಪೂರ್ವಾಪರಾನ್ವಯದಲ್ಲಿ ನೋಡತಕ್ಕುದು. ಬ್ರಹ್ಮಸಾಕ್ಷಾತ್ಕಾರಕ್ಕೆ ಶುದ್ಧಸತ್ವವು ಅದಕ್ಕಾಗಿ ಸನ್ಯಾಸಯೋಗವು ವಿಹಿತವಾಗಿದೆ. "ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ ಸನ್ಯಾಸಯೋಗಾತ್ಯತಯಃ ಶುದ್ಧ ಸತ್ವಾಃ ತೇ ಬ್ರಹ್ಮಲೋಕೇಷು ಪರಾಂತಕಾಲೇ ಪರಾಮೃತಾಃ ಪರಿಮುಚ್ಯಂತಿ ಸರ್ವೆ" ಮುಂಡಕ ೩ ಖಂಡ ೨ ಮಂತ್ರ ೬ ಉಪನಿಷತ್ತುಗಳ ವಿಶೇಷ ಜ್ಞಾನದಿಂದ ಪರಮಾರ್ಥ ನಿಶ್ಚಯವನ್ನುಳ್ಳವರು ಸನ್ಯಾಸ ಯೋಗದಿಂದ ಶುದ್ಧಾಂತಃಕರಣರಹ ಯತ್ನಪರರು ಎಲ್ಲರು ದೇಹಾವಸಾನಕಾಲದಲ್ಲಿ ಬ್ರಹ್ಮದಲ್ಲಿ ಮರಣವ ಕಳೆದವರಾಗಿ ಎಲ್ಲಾ ಬಂಧಗಳಿಂದ ಬಿಡುಗಡೆಯ ಹೊಂದುವರು ಎಂದಿದು ಮಂತ್ರಾರ್ಥವು.

ನ ಚಕ್ಷುಷಾ ಗೃಹ್ಯತೇನಾಪಿವಾಚಾ ನಾನ್ಯೈರ್ದೇವೈಸ್ತಪಸಾಕರ್ಮಣಾ ವಾ ಜ್ಞಾನಪ್ರಸಾದೇನ ವಿಶುದ್ಧ ಸತ್ವಸ್ತತಸ್ತುತಂಪಶ್ಯತೇನಿಷ್ಕಲಂ ಧ್ಯಾಯಮಾನಃ ॥ ಮು. ೩ ಖ. ೧ ಶ್ಲೋಕ ೮ ಈ ಬ್ರಹ್ಮವು ಕಣ್ಣಿನಿಂದ ಕಾಣದು. ನುಡಿಯಿಂದ ನುಡಿಯಲಾಗದು. ಬೇರಾವ ಇಂದ್ರಿಯಗಳಿಂದಲು ತಪಸ್ಸಿನಿಂದಲು ಕರ್ಮದಿಂದಲು ಗೋಚರಿಸದು. ಜ್ಞಾನವು ಮೂಲವಾಗಿ ವಿಶುದ್ಧಾಂತಃಕರಣದಿಂದ ಧ್ಯಾನಶೀಲನು ನಿಷ್ಕಲಬ್ರಹ್ಮ

ವನ್ನು ಕಾಂಬನು. ಇಲ್ಲಿಯು ವಿಶುದ್ಧ ಸತ್ವವು ಬ್ರಹ್ಮದರ್ಶನಕ್ಕೆ ವಿಹಿತವಾಗಿದೆ.

ಬರಿಯ ತಪಸ್ಸು ಸಾಕ್ಷಾತ್ಕಾರಕ್ಕೆ ಕಾರಣವಾಗದು. ಆದರೆ ಸಲಿಂಗವಾದ (ಲಿಂಗದಿಂದೊಡಗೂಡಿದ) ತಪಸ್ಸು ಮುಂತಾದವುಗಳು ಬ್ರಹ್ಮದರ್ಶನಕ್ಕೆ ಹೇತುವಾಗಿವೆ.—(ಏತೈರುಪಾಯೈರ್ಯತತೇಯಸ್ತು ವಿದ್ವಾಂಸ್ತಸ್ಯೈಷ ಆತ್ಮಾತತೇ ಬ್ರಹ್ಮಧಾಮ) ಈ ಎಲ್ಲ ಉಪಾಯಗಳಿಂದ ಆವ ವಿದ್ವಾಂಸನು ಯತ್ನ ಪಡುವನೊ ಅವನ ಈ ಆತ್ಮನು ಬ್ರಹ್ಮತೇಜವನ್ನು ಹೊಂದುವುದು ಎಂದು ಇಹುದನ್ನು ನೋಡಿರಿ. ತಪಸೆಂದರೆ ಶರೀರವಚನ ಮನೆಗಳನ್ನು ಬ್ರಹ್ಮಲಾಭಕ್ಕಾಗಿ ನುರಿಸುವುದು. ಈ ನುರಿತಕ್ಕೆ ತಾನು ಮಾಡುವ ಕರ್ಮಫಲಗಳನ್ನು ಬಿಡುವುದೆಂಬ ಸನ್ಯಾಸವು ಬೇಕು. ಲಿಂಗಶಬ್ದಕ್ಕೆ ಸನ್ಯಾಸವೆಂಬರ್ಥವುಂಟು. ಶ್ರೀಶಂಕರಾಚಾರ್ಯರು ಅಲಿಂಗಾತ್ ಸನ್ಯಾಸರಹಿತಾತ್ ಎಂದು ಹೇಳುವನು. ಆ ಆಚಾರ್ಯರು ಸನ್ಯಾಸವೆಂದರೆ ಸರ್ವ ಕರ್ಮತ್ಯಾಗವು ಎನ್ನುವನು. ಮುಂಡಕದ ಸಮಗ್ರ ಪರ್ಯಾಲೋಚನದಿಂದ ಸನ್ಯಾಸವೆಂದರೆ ಕರ್ಮ ಸನ್ಯಾಸವಲ್ಲ. ಕರ್ಮ ಫಲ ತ್ಯಾಗವೆಂದು ನಮಗಭಿಮತವು. ಅಂದರೆ "ತಸ್ಯಪಲಾಭಿಸಂಧಿರಹಿತಸ್ಯ ಪಾಪಾಪನಯನರೂಪ ಚಿತ್ತಶುದ್ಧಿ ಸಂಪಾದನದ್ವಾರಾ ಬೋಧಹೇತುತ್ವಂ" ಯಾಗಾದಿಯು ಫಲಾಭಿಲಾಷೆಯಿಲ್ಲದೆ ಮಾಡಲ್ಪಟ್ಟುದಾಗಿ ಪಾಪವು ದೂರಾಗಿ ಚಿತ್ತ ಶುದ್ಧಿಯಿಂದ ಯಾಗಾದಿಕವು ಬೋಧಕೇತುವಾಗಿದೆ ಎಂಬ ಶ್ರೀಕಂಠಮತವು ಮುಂಡಕಸಮ್ಮತವಾಗಿದೆ. ಇಂತಾಗಿ ದೇವಧಾರಣ ವಾಕ್ಯದಿಂದ ಲಿಂಗಧಾರಣವು ವಿಹಿತವಾಗಿಲ್ಲ.

ಮುಂದಿನ ಲೇಖಗಳು ಮಲತ್ರಯ ನಿವಾರಣವಾದ ತ್ರಿವಿಧ ದೀಕ್ಷಾ ಸ್ವಭಾವವನ್ನು ತೋರಿಸಿ ಅದು ವಿಧಿ ಪ್ರಾಪ್ತವಲ್ಲ, ಕೇವಲ ಶಿವಾನುಗ್ರಹ ಪ್ರಾಪ್ತವು, ಮಲಾಪಕರ್ಷದಿಂದ ಒದಗುವ ಶುದ್ಧಿಯಿಂದ ಆತ್ಮನು ಆವ ವಿಧಿಗೂ ಒಳಗಾಗದೆ ಆತ್ಮೇಕ್ಷಣರೂಪದಿಂದ ಶಿವಧರ್ಮ ಶಿವಜ್ಞಾನಗಳನ್ನು ಪಡೆವನು, ದೀಕ್ಷಾಧಿಕಾರವು ಶಿವಾನುಗ್ರಹಮಾತ್ರ ಲಭ್ಯವಾದುದರಿಂದ ಅದನ್ನು ಪೊಂದಿದವರು ವರ್ಣಾತೀತರು ಆತಿವರ್ಣಗಳು ಕೃತಕೃತ್ಯರು ಎಂಬಂತಿವನೆಲ್ಲ ತೋರಿಸುವೆವು.

ಮೃತಸ್ವಪ್ನ.

(ಶ್ರೀ ಈಶ್ವರ ಸಣಕಲ್ಲ ಬೆಳಗಾವ)

ನಾನಿಲ್ಲಿ ನಿಂತಿರುವೆ, ಈ ಮಸಣಗಾಡಿನಲಿ,
ನನ್ನ ಮೃತಸ್ವಪ್ನದಾ ಅಂತ್ಯಕ್ರಿಯೆಗಾಗಿಂದು!
ಉದುರಿ ಬಿದ್ದಿಹ ಆಸೆ-ತರಗೆಲೆಗಳನು ಗೂಡಿ-
ಸುತ ಹೊಬ್ಬಿಸುವೆನಿಲ್ಲಿ! ಕಳಚಿ ಮಣ್ಣಾಡುತಿಹ
ಭಾವ-ಸುಮಗಳನೆಲ್ಲ ಹರಡಿ ಮುಲಗಿಪೆನಿನ್ನ
ಮೃತ-ಸ್ವರ್ಣ-ಸ್ವಪ್ನವನು! ಒಡೆದು ಹೋದೆಯ? ಅಯ್ಯೋ!
ಸ್ವರ್ಗೀಯ-ಸ್ವಪ್ನವೇ! ಯಾವ ಹೂಬಳ್ಳಿಯೊಳಿ-
ನಿನ ಸ್ವಾರ್ಥ-ಭೃಂಗವದು ನಿನ್ನ ಸತ್ವವ ಹೀರಿ,
ಪಾರಿ ಹೋಯಿತೊ! ಅಯ್ಯೋ! ಯಾವ ಉನ್ಮತ್ತ ಹ-
ಸ್ತಿಯು ನಿನ್ನ, ಕಾಲ್ಕೆಳಗೆ ಮೆಟ್ಟಿ ನಡೆಯಿತೊ! ಅಯ್ಯೋ!
ವಿಕಸಿತ-ಸಹಸ್ರ-ದಳ-ಕಮನೀಯ-ಕಮಲವೇ,
ರಸಪೂರ್ಣ-ಕಾಸಾರ-ಮಧ್ಯದಲಿ ರಾಜಿಸಿದ
ಓ ಸ್ವಪ್ನ-ಪದ್ಮವೇ, ಋಷಿವರರು, ಯೋಗಿಗಳು,
ಸಾಧುಗಳು, ಶರಣಪುಂಗವರಮರರವತಾರಿ-
ಗಳು, ನಿನ್ನ ದಳದಳದಿ, ದಳದಳದಿ ಪವಡಿಸಿದ-
ರೆಂತು ಆ ಮುಕ್ತಿ-ವಧು-ಪಾನದಾನಂದ-ನಿ-
ದ್ರೆಯಲಿ! ಹಾ! ಗೀರ್ವಾಣ ಕನ್ನಿಕೆಯರಿಂದ್ರ-ಜಾ-
ಪದ ಪ್ರಭೆಗೆ ಮೈಯೊಡ್ಡಿ, ಚಂದ್ರಿಕೆಯ ಹಾಸದಲಿ,
ಅತ್ತಿತ್ತ ಒಲೆದೊಲೆದು, ಮಣಿಮಣಿದು ಎಂತು ಕುಣಿ-
ದಾಡಿದರು ಕಲ್ಪತರುಸುಮಗಳಲಿ! ಕಾಲ-ದೇ-
ವನ ಮೀರ್ದ ಅಮೃತ-ಸಂಗೀತವನು ಎಂತು ಪರಿ-
ಸಿದರಾಹ! ತಮ್ಮ ಇನಿಗೊರಲಿಂದೆ! ಶಶಿ-ಸೂರ್ಯ-
ತಾಳದಲಿ, ಆ ವಾಣಿ ಬಾಜಿಸಿದಳೆಂತಮರ-
ವೀಣೆಯನು! ಅದರ ಶ್ರುತಿಯಲಿಯವಳ ನವಿಲೆಂತು
ಗರಿಗೆದರಿ ನರ್ತಿಸಿತು? ಪಾಡಿದುದು ಪಕ್ಷಿಸಂ-
ಕುಲವೆಂತು! ನಿನ್ನ ಸುತ್ತಿಹ ಕೋಟಿ-ಕೋಟಿ-ನ-

ಪ್ತತ್ರ-ಗಣ-ಮಣಿ ರಶ್ಮಿ-ಮಾಲೆಯಲಿ, ನಿನ್ನ ದಿ-
ವ್ಯತೆಯೆಂತು ಹರಡಿದುದು ನಭನಭಕೆ! ನಿನ್ನ ಪೈ-
ಭವಕದೋ, ಈರೇಳು ಭುವನಗಳು ಎಂತು ತಲೆ-
ವಾಗಿದವು ಸುಮ್ಮಾನ-ಮೋನದಲಿ! ನಿನ್ನ ಸತ್ವದ ಕಳೆಯು
ಗಾಳಿಗುದುರೆಯನೇರಿ ತಾನೆಂತು ಚಿಮ್ಮಿದುದು
ದೆಸೆದೆಸೆಗೆ! ಭಾವಸುಮಗಳ ಮುಡಿದು ಕಲ್ಪನಾ-
ಸುಂದರಿಯರೆಂತಾಡಿದರು ನಿನ್ನ ಪ್ರಂತವನು
ಬಳಸುತಲಿ! ನಿನ್ನಿನಿಸು ಕಂಪನೆಗೆ ಕಲ್ಪ-ಕ-
ಲ್ಪಗಳೆಂತು ಮೂಡಿ ಮುಳುಗಿದವಲ್ಲಿ! ಬ್ರಹ್ಮ-ಪ-
ಥವು ಮೇಲೆ ಗರಿಹರಡಿ, ಕೊಡೆಪಿಡಿದು ಎಂತು ರಾ-
ಜಿಸಿತಲ್ಲಿ! ಉರಿವಿಸಿಲು ಬೆಳ್ದಿಂಗಳಿರುಳು ಶಾಂ-
ತಿಯ ಪ್ರಭೆಯು, ಪ್ರತಿಭೆ ಮಂಗಲದಾರತಿಯದಾಗು-
ತಸೆದಿರ್ದವೆಂತಲ್ಲಿ! ನಡುಕಟ್ಟಿ, ಕೈಮುಗಿದು,
ನಿತ್ಯದಾಸಿಯ ತೆರದಿ, ನವ್ಯಭಾವದಿ ಸಿರಿಯು
ನಿಂತಿರ್ದಳೆಂತಲ್ಲಿ! ನಿನ್ನ ನರುಗಂಪಿನು-
ಚ್ಛ್ವಸಿತ-ಗರ್ಭದಿ ಬೆಳೆದ ವಿಶ್ವದಂಚಿನ ವರೆಗು
ಸುಕೃತಿ-ಪೌನವದೆಂತು ತೇಲಿದುದು ರಾಜಹಂಸಗಳಂತೆ!

ಅಯ್ಯೋ! ಮರೆಯಾಯ್ತಯ್ಯೋ! ಆ ವೈಭ-
ವೋತ್ಕರವು! ಆ ಸ್ವಪ್ನ-ಭಂಗದೊಡನೆನ್ನ ಸ-
ರ್ವಸ್ವವೂ ಭಂಗವಾಯಿತು! ಅಯ್ಯೋ! ನನ್ನ ಸುಖ-
ಧ್ಯೇಯಗಳು ಮಣ್ಣುಗೂಡಿದವಯ್ಯೋ! ಪರಹಿತದ
ಸೋಗಿನಲಿ, ಸರ್ವಸ್ವವನು ಸುಲಿವ, ಓ **ಸ್ವಾರ್ಥ-**
ಭೂತವೇ, ಎಂಥನಿಷ್ಟುರ ನೈವೆ ಎನ್ನ ಜೀ-
ವನ-ಪಥದಿ! ಹಾ! ಎನ್ನ ಧ್ಯೇಯರಂಗದೊಳೆಂಥ
ಪ್ರಳಯ-ನಾಟ್ಯವ ನೈದಿ ಪಾಪವೇತಾಳವೇ!
ಎನ್ನ ಜೀವದ ಕನಸು ನನಸಾಗುವನಿತರೊಳಿ,
ಒಡೆದು ಹೋಯಿತು! ಅಯ್ಯೋ! ಘೋರಾಂಧಕಾರವದು
ಕಂಗೆಡಿಸುತಿಹುದೆನ್ನ! ಬೇಸಗೆಯ ನಡುವಗಲ
ಕೋಟಿ-ಸೂರ್ಯರ ಬಿಸಿಲ ತಾಪವದು, ಅಯ್ಯಯ್ಯೋ!

ಕ್ರೌರ್ಯ-ನೈಷ್ಠುರಗಳಲಿ ದಹಿಸುತಿಹುದೆನ್ನನ್ನ!
ಯುಗ ಯುಗ-ದುರಂತ-ದುಃಖವು ನಿರುತ ನರಳುವದು!
ಓ ಸ್ವರ್ಣಸ್ವಪ್ನವೇ, ಒಡೆದು ಹೋದೆಯ ಇಂದು!
ಓ ದಿವ್ಯ-ಸ್ವಪ್ನವೇ, ಕರಗಿ ಹೋದೆಯ ಇಂದು!
ಓ ಧ್ಯೇಯ-ಸ್ವಪ್ನವೇ, ಅಳಿಸಿ ಹೋದೆಯ ಇಂದು!
ಶೋಕ ನಿರ್ಭರಹೃದಯನಾಗಿಲ್ಲಿ ನಿಂತಿಹೆನು,
ಓ ಎನ್ನ ಮೃತಸ್ವಪ್ನವೇ, ನಿನಗೆ ಬಾಷ್ಪಾಂಜ-
ಲಿಯನರ್ಪಿಸಲ್ಕೆಂದು! ನಿನ್ನನ್ನು ಮುದ್ದಿಟ್ಟು,
ಕೊನೆವರೆಗು ತಿಮಿರ-ಗರ್ಭದಿ ಲೀನನಾಗಲ್ಕೆ,
ನಾನಿಲ್ಲಿ ಬಂದಿಹೆನು! ನಿನಗಿಂದು, ಕಡೆಯ ಸಲ,
ತಲೆವಾಗಿ, ನೈರಾಶ್ಯ-ಕೂಪದಲಿ ಬೀಳಲ್ಕೆ,
ಬಂದಿಹೆನು! ಜಗದ ಜಂಗುಳಿಯಲ್ಲಿ, ಹುಚ್ಚನೊಲು,
ಶೂನ್ಯನೊಲು, ತಿರುಗುವೆನು! ದುಃಖ-ಗೀತೆಯ ಪಾಡಿ-
ಜೀವನದ ದುಃಖವನು ನಾ ನುಂಗಿಕೊಳ್ಳುವೆನು!
ಮತ್ತೊಮ್ಮೆ ನೀನುದಿಸಿ ಬರುವನ್ನೆಗಂ ನಾನು
ಇಂತೆಯೇ ತಿರುಗುವೆನು! ತೇಲು ಬಿಡುವೆನು ಬಾಷ್ಪ-
ಧುನಿಯಲ್ಲಿ ನಿನ್ನ ಈ ದಿವ್ಯವಹ ಸ್ಮೃತಿಯನ್ನು!
ಆಶಾಮೃತಾರ್ಣವದಿ ತಲೆಯೆತ್ತಿ ಮತ್ತೊಮ್ಮೆ
ಬರುವಂದು ಬಾ ನೀನು! ಅನ್ನೆಗಂ, ಇದೆ ನಿನಗೆ
ಸ್ವಾರ್ಥ-ಹತ-ಸ್ವಪ್ನವೇ, ಚರಮಗೀತೆ!

ಹರಿಹರದೇವನ ರಕ್ಷಾಶತಕ.

(ಲೇ:— ಶ್ರೀ ಎಸ್. ಶಿವಯೋಗಿ ಶಿವಯೋಗಮಂದಿರ, ಬನಾರಸ್.)

ಕವಿಯೆನ್ನಬೇಕು ಆ ರಕ್ಷಾಶತಕವನ್ನು ರಚಿಸಿದ ರಸಿಕಜಕ್ಕಿಗೆ; ಭಕ್ತಿಭಾಂಡಾರಿಗೆ. ಆಹಾ! ಅದೆಂತಹ ಪ್ರತಿಭೆ; ಅದೆಂತಹ ಭಾವ, ಅದೆಂತಹ ಭಕ್ತಿಲಹರೀ. ಹರಿಹರದೇವನು ನಿಜವಾಗಿಯೂ ನರನಲ್ಲ; ಹರನು. ಇಲ್ಲದಿರೆ ಆತನಲಿ ಈ ಬಗೆಯ ಕಲೆಯಿರಲು, ಬೆಲೆ ಬರಲು ಸಾಧ್ಯವಿಲ್ಲ. ಓದಬೇಕು ಆತನ ಆ ರಕ್ಷಾಶತಕವನ್ನು; ಜೀವನದಲ್ಲಿ ಒಮ್ಮೆಯಾವರೂ ಕಾಣಬೇಕು ಆ ರಸದ ರುಚಿಯನ್ನು; ಅನುಭವಿಸಬೇಕು ಆ ಶತಕ ಪಠನದ ಪರಮಾನಂದವನ್ನು. ಅದಿಲ್ಲದಿರೆ ಅವನ ಹುಟ್ಟು ಹುಟ್ಟೇ ಅಲ್ಲ; ಬಾಳು ಬಾಳುವೆಯಲ್ಲ. ಶತಕವೆಲ್ಲವೂ ಪ್ರತಿಭೆಯ ನೆಲಗಟ್ಟಿನಿಂದ ಬಲವಾಗಿದೆ; ಬಂಧುರವಾಗಿದೆ. ಅದರ ಮೇಲೆ ಭಕುತಿ ದೇವತೆಯ ಭವ್ಯ ನರ್ತನವಿದೆ. ಅಡಿಗಡಿಗೂ ರಸವು ಒತ್ತಿ ಒಸರುತ್ತಿದೆ.

ಮೊದಲು ಶತಕವನ್ನು ಪ್ರಾರಂಭಿಸುವಲ್ಲಿ ಕವಿಯು ತನ್ನ ಇಷ್ಟ ಮೂರ್ತಿಯಾದ ಹಂಪೆಯ ವಿರೂಪಾಕ್ಷನ ಮಂಗಲವನ್ನಾಚರಿಸಿ ಆ ದೇವದೇವನ ಅಪ್ರತಿಮ-ಮೂರ್ತಿತ್ವವನ್ನೂ ಅಸಾಧಾರಣ ಲಕ್ಷಣಗಳನ್ನೂ ಎದುಗರೆದುರಿಗೆ ಜೆನ್ನಾಗಿ ಚಿತ್ರಿಸುವನು. ಆ ವಿರೂಪಾಕ್ಷನಲ್ಲಿಯೇ ಆತನಿಗೆ ಮೀರಿದ ಅತುಲ ಭಕ್ತಿ. ವಿರೂಪಾಕ್ಷನಿಗಾಗಿ ತನ್ನ ತನುವನ್ನೂ ಮನವನ್ನೂ ಧನವನ್ನೂ, ಅನಿತೇ ಏಕೆ? ಬೇಕೆಂದಲ್ಲಿ ಸರ್ವಸ್ವವೆನಿಸಿದ ಪ್ರಾಣವನ್ನೂ ಸಹ ನೀಡಲು ಸಿದ್ಧನಿದ್ದನು. ಪ್ರತಿಕ್ಷಣವೂ ಆತನ ಸ್ಮರಣೆಯಲ್ಲಿಯೇ ಸರಿಯುತ್ತಿದ್ದಿತು. ಲೋಕೈಕ ಬಂಧುವೆನಿಸಿದ ಆ ವಿರೂಪಾಕ್ಷನಲ್ಲದೇ ಎನಗೆ ಬೇರೆ ಗತಿಯಿಲ್ಲ; ಮತಿಯಿಲ್ಲ. ಎನ್ನಯ ಜನನಿಯಾತ; ಎನ್ನ ಜನಕನಾತ. ಆ ವಿರೂಪಾಕ್ಷನಂ ಬಿಟ್ಟು ಎನಗೆ ಬೇರೆ ಗುರುವಿಲ್ಲ; ಗೋತ್ರವಿಲ್ಲ. ಆತನೇ ಎನಗೆ ಅನನ್ಯಶರಣು.

ಶರಣಾರ್ನೀಂ ಕಾವರಾರ್ನೀಂ ಗತಿಮತಿಪತಿಯಾರ್ನೀಂ
ಕವಾಂಭೋಧಿಯಾರ್ನೀಂ। ಗುರುವಾರ್ನೀಂ ಗೋ

ತ್ರವಾರ್ನೀಂ ಜನನಿ ಜನಕರಾರ್ನೀಂ ಮಹಾ ಬಂಧುವಾರ್ನೀಂ॥
ಪರರಾರ್ನೀಂ ವಂದ್ಯರಾರ್ನೀನೆನಗತಿ ಓತರಾರ್ನೀಂ ಮಹಾ-
ದೇವ ನಿಮ್ಮಿಂ। ಪರರಾರ್ನೀಂ ನೀನೆ ಪಂಪಾಪುರದರಸೆ
ವಿರೂಪಾಕ್ಷ ರಕ್ಷಿಪ್ಪುದೆನ್ನಂ॥

ಹೀಗೆ ಬಲವಾಗಿ ನಂಬಿ ಆತನಿಗೆ ಶರಣು ಹೋಗಿದ್ದನು. ಇಂತು ಬರಿಯ ಮಾತಿನಲ್ಲಿ ಮಾತ್ರ ಹೇಳಿಕೊಳ್ಳುತ್ತಿರಲಿಲ್ಲ. ಆತನಿಗೆ ಅನಿತೊಂದು ಭರವಸೆ ಇದ್ದಿತು. ಆ ಎದೆಯ ನಂಬುಗೆಯು ನೈಜವಾಗಿತ್ತು. ನಿಬಿಡವಾಗಿತ್ತು. ಇದಲ್ಲವೇ ಭಕುತಿಯ ಕುರುಹು? ಒಂದು ಸಲ ದೇವನಲ್ಲಿ ಇರಿಸಿದ ವಿಶ್ವಾಸವು ಅದೆಂದಿಗೂ ಕುಂದದೇ ಕದಲದೇ ಸ್ಥಾಯಿಯಾಗಿಂಬೇಕು ದೇವನ ಕರುಣೆಯಾಗಲಿ, ಕೋಪವಾಗಲಿ, ಒಳಿತಾಗಲಿ, ಇಲ್ಲವೇ ಕೇಡಾಗಲಿ, ಏನಾದರೆಯೂ ಎದೆಯ ನೆಚ್ಚು ಮಾತ್ರ ನಿಶ್ಚಲವಾಗಿರಬೇಕು. ದೇವರು ಭಕ್ತನನ್ನು ಹಿಂಡದೇ ಹಿಸುಕದೇ ಎಂದೂ ಬಿಡುವವನಲ್ಲ. ಅರೆದೊರೆದು ಪರಿಕಿಸದೇ ಇರುವವನಲ್ಲ. ಅತ "ನುಗ್ಗು ಮಾಡುವ ನುಸಿಯ ಮಾಡುವನಂತೆ?" "ಅರಿವನಯ್ಯ ಸಂಣಾಗುವನ್ನಕ್ಕ. ವರಿವನಯ್ಯ ಬಂಣ ಗಾಂಬನ್ನಕ್ಕ " ಎಂಬ ಮಹಾತ್ಮಾ ಬಸವಂಣನವರ ಅನುಭವದ ಮಾತನ್ನು ಆ ಬಗೆಯಲ್ಲಿಯೇ ಅರಿಯಬೇಕು. ಅಂತಹ ಕಠಿಣ ಪರೀಕ್ಷೆಯಲ್ಲಿಯೂ ಸಹ ಭಕ್ತನು ಮನಗುಂದದಿರಬೇಕು; ಮೈಗುಂದದಿರಬೇಕು ಹಾಗಿಲ್ಲದೇ "ಮಾಡುವ ಭಕ್ತಂಗೆ ಮನಹೀನವಾದೊಡೆ ಅದೇ ಕಡೆ" ಯಾಗುವದು. ಆಗಲೂ ಬೆಚ್ಚದೇ ಬೆದರದೇ ಭಕ್ತನು ಧೈರ್ಯದಿಂದ ಮುಂದಡಿಯಿಡಬೇಕು. ತನಗಾಗುವ ಸುಖಸಂಪತ್ತುಗಳನ್ನೂ ದುಃಖನಿಪತ್ತುಗಳನ್ನೂ ದೇವನಿಗಾಗಿ ಪಂಚನೆಯಿಲ್ಲದೇ ಒಪ್ಪಿಸುತ್ತಿರಬೇಕು. ಆತನಿಗಾಗಿ ತಾನು ಮೊದಲು ಕಿರಿಯ ಗುಲಾಮನಾಗಿರಬೇಕು. ಆ ದೇವ-ದೇವನ ಸೇವೆಗಾಗಿ ಸತತವೂ ಹೃದಯವು ತವಕಿಸುತ್ತಿರಬೇಕು. ದೇವರಿಂದ ತನಗೆ ಸ-ಧಾ-ಸೇಚನೆಯಾಗಲಿ, ವಿಷವರ್ಷಣವಾಗಲಿ ಅದರೂ ಮೊದಲಿನ ನಂಬಿಗೆಯು ಮಂದವಾಗದಿರಬೇಕು. ಅದನ್ನಿಲ್ಲಿ ಕಾಣಿರಿ.

ಬಿಡೆನೀಶಾ ನಿಮ್ಮ ಪಾದಾಬ್ಜವನೆಲೆಲೆ ಬಿಡೆಂ ಸೀಳ್ದೊಡಂ
ಪೋಳ್ದೊಡಂ ಪೊಱಯ್ದೊಡದಂತಿಂತೆಂದುಮೆಂದುಂ ಬಿಡೆ.

ನಭವ ಬಿಡೆಂ ಸರ್ವದಾ ಮಾಡೆ ನಾಂ ಬ ॥ ಲ್ಬಿದಿದೆಂ ಮ.
ತ್ತತ್ತಮಿತ್ತಂ ಚಲಿಸೆನೆಲೆ ಮಮಸ್ವಾಮಿ ನಿಮ್ಮಾಜ್ಞೆ-
ಯಿಂದಂ। ಮೃಡನೇ ಭಕ್ತ್ಯರ್ಥಿ ಪಂಪಾಪುರದರಸ
ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ಆಹಾ! ಇದೆಂತಹ ಅತುಲಭಕ್ತಿ; ಇದೆಂತಹ ಮೀರಿದ ಅನನ್ಯ ಭಾವ. ಭಕ್ತನಿಗೆ "ತನ್ನದು ತಾನು ಕೊಡುವೆ" ನೆಂಬ ಭಾವವಳಿದು ಸರ್ವವನ್ನೂ ಶಿವಾರ್ಪಣಮಾಡುವ ಬುದ್ಧಿಯು ಬರಬೇಕು. ಅದು ಬೇರೂರಬೇಕು. ಮುಂದೆ ಮುಂದೆ ಹೆಗೆಯೇ ಆ ಭಕುತಿ ಆ ಭಾವ ಬಲಿದು ಬಲಿದು "ಶಿವೋಽಹಮ್" ಎಂಬ ಭಾವನೆಯುಂಟಾಗಬೇಕು. ಶಿವ-ಭಕ್ತರ ಸಹಜ ಸಮರಸವಾಗಬೇಕು. ಅಂದರೆ ಮಾತ್ರ ಅದು ಭಕ್ತಿ; ಆತ ಭಕ್ತ. "ಮಮ ಭಕ್ತಾ ಮಮಾಧಿಕಾಃ" ಎಂಬ ಆಗಮ ವಾಕ್ಯವು ಅನ್ವಯಿಸುವದಾದರೂ ಇಂತಹ ಭಕ್ತನಲ್ಲಿ; ಇಂತಹ ಮಹಾ ಶರಣನಲ್ಲಿ. ಈತನು ಮೆಟ್ಟಿದ ನೆಲವೇ ಮಹಾಕ್ಷೇತ್ರ; ಮಿಂದ ಜಲವೇ ಮಂಗಲಮಯ ತೀರ್ಥ. ಇಲ್ಲಿ ನೋಡಿ ಹರಿಹರದೇವನ ಭಕ್ತಿಯ ಪಾರವಶ್ಯವನ್ನು; ಆತನ ಅರ್ಪಣದ ಬಗೆಯನ್ನು—

ನಿಮಗೆನ್ನಂ ಮಾರುಗೊಟ್ಟೆಂ ಹರಹರ ನಿಮಗೆನ್ನನ್ನೆತಾನೊತ್ತುಗೊಟ್ಟೆಂ
ನಿಮಗೆನ್ನಂಸೂರೆಗೊಟ್ಟೆಂ ನಿಮಗೆ ಹರುಸದಿಂದೊಚ್ಚತಂ ಗೊಟ್ಟೆನಾಹಾ॥
ನಿಮಗೆನ್ನಂಮಚ್ಚುಗೊಟ್ಟೆಂ ಗುರುವೆಳನವೆ ಸಂತೋಷದಿಂದೊಪ್ಪುಗೊಟ್ಟೆಂ
ನಿಮಗೆನ್ನಂ. ದೇವ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ಈ ಜಗದಲ್ಲಿ ತನ್ನದೆಂಬುವದೆಲ್ಲವನ್ನೂ ತನ್ನನ್ನೂ ಶ್ರೀವಿರೂಪಾಕ್ಷನಿಗಾಗಿ ಸಲ್ಲಿಸಿದ್ದನು ಆ ಮಹಾಮಹಿಮ. ಹೀಗೆ ಮನದಿಂದ ನೊರೆವೋದ ಹರೀಶ್ವರನಿಗೆ ಮೊದಲು ಈ ಸಂಸಾರದ ನಿಃಸಾರತೆಯು ಒಡೆದು ತೋರಿದೆ. ಕಾಮ-ಕ್ರೋಧಾದಿಗಳ ಬಾಧೆ ಮನವನ್ನು ಬಲವಾಗಿ ಬಾಧಿಸಿದೆ. ನಂತರ ಭಕ್ತಿ-ಜ್ಞಾನ-ವೈರಾಗ್ಯಗಳ ಅರಿವುಂಟಾಗಿದೆ. ಅವೆಲ್ಲವನ್ನೂ ಶತಕದಲ್ಲಿಯೇ ವಿಶದವಾಗಿ ಕಾಣಬೇಕು ಇಲ್ಲಿ ಇದೊಂದನ್ನು ಮಾತ್ರ ಉದಹರಿಸುವೆ. ವಿರೂಪಾಕ್ಷನಲ್ಲಿ ಮಾಡುವ ವಿರತಿಯಾಚನೆಯ ಬಗೆಯನ್ನಿಲ್ಲಿ ಕೊಂಚ ಮನವಿಟ್ಟು ನೋಡಿ.—

ಪ್ರಕ್ಷಪ್ತಂ ಸತ್ತು ಹೋಗುತ್ತಿದೆ ನರನಿಕರಂ ತಾನಿದಂ ಕಂಡು ಕಂಡುಂ
ಪ್ರತ್ಯಕ್ಷಂಪೆತ್ತು ಪಾಂಗಿಂ ಪಳಿವ ಮುಳಿವ ಕಾಮಿಪ್ಪ ಕೋಪಿಪ್ಪ ಲೋಭಿ
ಪ್ಪಕ್ಷಂ ವಿತಂ ಗರ್ಬಪೆನ್ನೀ ಮನಕೆ ಪರಮುಪೈರಾಗ್ಯಮುಂಗೊಟ್ಟು ತಂದೀ
ಕ್ಷಂ ಸತ್ಯಾತ್ಮ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ಮಹಾತ್ಮರ ಜೀವನ-ಸಂಗ್ರಾಮದ ಗಂಭೀರ ದರ್ಶನವು ಜನದ ಜೀವನವನ್ನೂ ಮನವನ್ನೂ ಮಾರ್ಪಡಿಸಲೊಂದು ಪ್ರಬಲ ಕಾರಣವಾಗಿದೆ. ಅವರ ಆ ರೀತಿ-ನೀತಿಗಳನ್ನರಿಯಲು ಅಂತಹ ಆತ್ಮ-ಗೀತೆಗಳನ್ನು ಕಾಣಬೇಕು. ಕಲಿಯಬೇಕು. ಒಂದೆರಡು ಸಲ ಮನವಿಟ್ಟು ಪಠಿಸಬೇಕು. ಅದನ್ನೇ ಮತ್ತೊಮ್ಮೆ ಹೇಳಬೇಕು; ಮಗುದೊಮ್ಮೆ ಹೇಳಬೇಕು. ಆಂದಕೆ ಆಗ ಆದರ ರಸಾನುಭವವು ದೊರಕೊಳ್ಳುವದು. ಅದು ಜೀವನದ ಬೆಳಕಿಗೆ ಬೆಂಬಲವಾಗುವದು. ಸಂತರ-ಶರಣರ-ಕವಿಗಳ ಆತ್ಮ-ಗೀತೆಗಳಿಂದರೆ ಅವು ಮಾಯಾ ಪ್ರಪಂಚಕ್ಕೆ ಸೇರಿದ ಮಿಥ್ಯಾ-ಗೀತೆಗಳಲ್ಲ; ಸತ್ಯಪ್ರಪಂಚಕ್ಕೆ ಒಳಪಟ್ಟ ಸ್ಥೂಲರೂಪದ ಸೊಗಸಾದ ಸಾಹಸಗಳು. ಈ ಬಗೆಯಲ್ಲಿರುವ ಆ ಕವಿ ಸಾರ್ವಭೌಮ ಶ್ರೀಹರಿಹರದೇವನ ಆ ಮುದ್ದು ರಕ್ಷಾಶತಕವನ್ನು ಜೀವನದಲ್ಲಿ ಒಮ್ಮೆಯಾದರೂ ಓದಿ ತಿಳಿದು ಪರಮಾನಂದವನ್ನನುಭವಿಸಿದಲ್ಲಿ ಈ ಎನ್ನ ಚಿಕ್ಕ ಕೃತಿ ಕೃತಾರ್ಥ.

ವಿಶ್ವವಿದ್ಯಾಲಯಗಳಲ್ಲಿ ವೀರಶೈವ ಸಂಸ್ಕೃತಿಯ ಅಭ್ಯಾಸ.

ಕರ್ನಾಟಕ ಸಂಸ್ಕೃತಿಯು ಜೈನ ವೀರಶೈವ ಮತ್ತು ಬ್ರಾಹ್ಮಣ ಸಂಸ್ಕೃತಿಗಳಿಂದೊಡಗೂಡಿ ಬೆಳೆದಿರುತ್ತದೆ. ಇವುಗಳ ಇತಿಹಾಸವೇ ಕರ್ನಾಟಕ ಸಂಸ್ಕೃತಿಯ ಇತಿಹಾಸವಾಗಿದೆ. ಈ ಮೂರೂ ಸಮಾಜಗಳಲ್ಲಿ ಕಾಲಕಾಲಕ್ಕೆ ಅನೇಕ ಧಾರ್ಮಿಕ ಪುರುಷರು ಉದಯವಾದರು. ಮತ್ತು ಅವರು ತಮ್ಮ ಉಚ್ಚ ವಿಚಾರಗಳನ್ನು ಅನೇಕ ಗ್ರಂಥಗಳ ಮೂಲಕ ಪ್ರಕಟಿಸಿರುವರು. ಇವುಗಳ ಅಭ್ಯಾಸವು ಪ್ರತಿಯೊಬ್ಬ ಕನ್ನಡಿಗನಿಗೆ ಅವಶ್ಯವಾದುದು. ಇಂಥ ಗ್ರಂಥಗಳನ್ನು ವಿಶ್ವವಿದ್ಯಾಲಯದ ಪರೀಕ್ಷೆಗಳಿಗೋಸ್ಕರ ನಿಯಮಿಸಿದಲ್ಲಿ ಅವುಗಳ ಅಭ್ಯಾಸವು ಸುಸಾಧ್ಯವೆಂಬುದನ್ನು ನಾವು ಹೇಳುವ ಅವಶ್ಯವಿಲ್ಲ. ಈ ಧೋರಣವನ್ನು ಮೈಸೂರು ಮತ್ತು ಮುಂಬಯಿ ವಿಶ್ವವಿದ್ಯಾಲಯಗಳು ಅನುಸರಿಸಿ ಈ ಬಗೆಯ ಅನೇಕ ಗ್ರಂಥಗಳನ್ನು ಪಠ್ಯ ಪುಸ್ತಕಗಳಾಗಿ ಈಚೆಗೆ ನಿಯಮಿಸುತ್ತಿರುವದು ಕಂಡುಬರುತ್ತದೆ. ಇದು ಬಹು ಸಮಾಧಾನಕರವಾದದ್ದು.

ಈ ವರೆಗೆ ವೀರಶೈವ ಧಾರ್ಮಿಕ ಸಂಸ್ಕೃತಿ ಮತ್ತು ವಾಙ್ಮಯವನ್ನು ತಿಳಿಯಪಡಿಸುವ ಗ್ರಂಥಗಳು ಹೆಚ್ಚಾಗಿ ಉಪಲಬ್ಧವಾಗಿರಲಿಲ್ಲ. ಆದರೆ ಶಿವಾನುಭವ ಪತ್ರಿಕೆಯದ್ವಾರಾ ಅನೇಕ ವಚನ ಗ್ರಂಥಗಳು ಈಗ ಹೊರಪಟ್ಟವು. ಇವುಗಳಲ್ಲಿ ಅನೇಕವು ಕಾಲಕಾಲಕ್ಕೆ ವಿಶ್ವವಿದ್ಯಾಲಯಗಳಲ್ಲಿ ನಿಯಮಿಸಲ್ಪಡುವದು ತೋರಿಬರುತ್ತದೆ. ಇದರಿಂದ ವಿದ್ಯಾರ್ಥಿಗಳು ಇವುಗಳನ್ನು ಚನ್ನಾಗಿ ಅಭ್ಯಾಸಮಾಡಲಿಕ್ಕೆ ಸಂಧಿಯು ದೊರೆಯುತ್ತದೆ. ಈ ವರ್ಷದ ಮುಂಬಯಿ ವಿಶ್ವವಿದ್ಯಾಲಯದ ಎಮ್. ಏ. ಪರೀಕ್ಷೆಯಲ್ಲಿ ವೀರಶೈವಧರ್ಮ, ವಾಙ್ಮಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಕೆಳಗೆ ಕಾಣಿಸಿದ ಪ್ರಶ್ನೆಗಳು ಕೇಳಲ್ಪಟ್ಟಿವೆ. ಶಿವಾನುಭವ ಪತ್ರಿಕೆಯ ವಾಚಕರಿಗೆ ಅವು ಬೋಧಪ್ರದವಾಗಬಹುದೆಂದು ಎಣಿಸಿ ನಾವು ಅವುಗಳನ್ನು ಇಲ್ಲಿ ಕೊಟ್ಟಿರುತ್ತೇವೆ.

ಪ್ರಶ್ನೆಗಳು.

(೧) ಮೊಗ್ಗೆಯ ಮಾಯಿದೇವರ ಶಿವಾನುಭವ ಸೂತ್ರದ ಮೇರೆಗೆ ಮುಖ್ಯ ಸ್ಥಲಭೇದಗಳಾವವು? ಮತ್ತು ಅವುಗಳ ಆಚರಣೆಗಳು ಮನುಷ್ಯನ ಅಂಗಗಳಲ್ಲಿ ವಿಕಾಸತೆಯನ್ನು ಹೇಗೆ ಉಂಟು ಮಾಡುತ್ತವೆಂಬುದನ್ನು ನಿರೂಪಿಸಿರಿ.

(೨) ವೀರಶೈವ ಧರ್ಮದ ವಿಶಿಷ್ಟ ಲಕ್ಷಣಗಳಾವವು? ಹಿಂದೂ ಧರ್ಮದಲ್ಲಿಯ ಆವ ತತ್ವಗಳನ್ನು ಅದು ಸ್ವೀಕರಿಸಿ ತನ್ನ ಸಿದ್ಧಾಂತವನ್ನು ನೆಲೆಗೊಳಿಸಿರುತ್ತದೆಂಬುದನ್ನು ವಿವೇಚಿಸಿ. ಮತ್ತು ಅವುಗಳ ಮೂಲಕ ಆವ ಸಾಮಾಜಿಕ ಪರಿಣಾಮಗಳುಂಟಾದವೆಂಬುದನ್ನೂ ವಿವರಿಸಿರಿ.

(೩) ಷಡ್ಲಿಂಗಗಳು ಅವವು? ಅವುಗಳ ಲಕ್ಷಣಗಳೇನು? ಮತ್ತು ಮನುಷ್ಯನ ಪ್ರಗತಿಯಲ್ಲಿ ಅವುಗಳಿಂದಾಗುವ ಕಾರ್ಯಗಳಾವವೆಂಬುದನ್ನು ವಿವೇಚಿಸಿರಿ.

(೪) ವೀರಶೈವ ಧರ್ಮದ ಪ್ರಕಾರ ಪರಮಾತ್ಮನ ಬಗ್ಗೆ ಆವ ವಿಚಾರಗಳಿರುತ್ತವೆ? ಅದು ಮೂರ್ತಿ ಪೂಜೆಯನ್ನು ಸ್ವೀಕರಿಸುತ್ತದೆಯೋ ಹೇಗೆ? ಸ್ವೀಕರಿಸದಿದ್ದರೆ, ಅದು ಎಷ್ಟರ ಮಟ್ಟಿಗೆ ಎಂಬುದನ್ನು ಚರ್ಚಿಸಿರಿ.

ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಇವುಗಳ ಪರಸ್ಪರ ಸಂಬಂಧವನ್ನೂ ಅವುಗಳ ಕ್ರಿಯೆಗಳನ್ನೂ ವಿವರಿಸಿರಿ.

(೫) ಷಟ್ ಸ್ಥಲಗಳ ಮುಖ್ಯ ಲಕ್ಷಣಗಳಾವವು? ಮತ್ತು ಅವುಗಳ ತತ್ವ ಮತ್ತು ಆಚರಣೆಗಳ ಮೂಲಕ ಲಿಂಗಾಂಗ ಸಾಮರಸ್ಯವು ಹೇಗೆ ಲಭಿಸುತ್ತದೆಂಬುದನ್ನು ವಿವರಿಸಿರಿ.

(೬) ಪ್ರಭುದೇವರ ವಚನಗಳ ವಿಶಿಷ್ಟತೆ, ಅತನ ನಿರೂಪಣಾ ಪದ್ಧತಿ, ಶೈಲಿ ಇವುಗಳನ್ನು ಕುರಿತು ನಿರೂಪಿಸಿರಿ.

(೭) ವಚನಕಾರರು "ವಿಚಾರ ವಾದಿಗಳು" ಎಂದೆನ್ನಬಹುದೋ ಹೇಗೆ? ಅವರು ವಿಚಾರ ವಾದಿಗಳೆಂದು ನಿಸ್ಸಂ ಅಭಿಪ್ರಾಯವಿದ್ದರೆ,

ಇದನ್ನು ಸೋದಾಹರಣ ಪೂರ್ವಕವಾಗಿ ಚರ್ಚಿಸಿರಿ. ಮತ್ತು ಇದರಿಂದ ಅವರು ಸಮಾಜ ಸುಧಾರಣೆ ಮಾಡಲು ಹೇಗೆ ಶಕ್ತರಾದರೆಂಬುದನ್ನು ವಿವರಿಸಿರಿ.

(೮) ಪ್ರಭುದೇವರ ಅಭಿಪ್ರಾಯದ ಪ್ರಕಾರ ಪ್ರಸಾದದ ಉದ್ದೇಶವೇನು? ಮತ್ತು ಅದರ ಕಾರ್ಯಗಳಾವವು?

(೯) ವೀರಶೈವರ ೩೬ ತತ್ವಗಳಾವವು? ಅವುಗಳ ಲಕ್ಷಣ ಮತ್ತು ಪರಸ್ಪರ ಸಂಬಂಧ ಇವುಗಳನ್ನು ಕುರಿತು ವಿವೇಚಿಸಿರಿ.

(೧೦) ವಿರೂಪಾಕ್ಷ ಪಂಡಿತನ ಅಭಿಪ್ರಾಯದ ಮೇರೆಗೆ ಮನುಷ್ಯನ ಪ್ರಗತಿಯಲ್ಲಿ ಗುರು, ಲಿಂಗ, ಜಂಗಮಗಳ ಸ್ಥಾನವಾವುದು ಮತ್ತು ಅವು ಅವನ ಮೇಲೆ ಆವ ಪರಿಣಾಮಗಳನ್ನುಂಟು ಮಾಡುತ್ತವೆಂಬುದನ್ನು ವಿವರಿಸಿರಿ.

(೧೧) ಪಂಚಸಾದಾಖ್ಯಗಳಾವುವೆಂಬುದನ್ನು ವಿವರಿಸಿ ಅವುಗಳ ಸ್ವರೂಪನ್ನು ಕುರಿತು ಚರ್ಚಿಸಿರಿ.

ವಚನಶಾಸ್ತ್ರಸಾರ ಭಾಗ ೨.

(ವೀರಶೈವ ಸಿದ್ಧಾಂತ.)

ವಚನಶಾಸ್ತ್ರಸಾರ ಭಾಗ ೨ (ವೀರಶೈವ ಸಿದ್ಧಾಂತ):— ಈ ಗ್ರಂಥವು ಕವರ್ಷ ಶ್ರೀ ಬಸವಜಯಂತಿಯ ದಿನ ರಾ॥ ಸಾ॥ **ಫ. ಗು. ಹಳಕಟ್ಟಿ** ಯವರಿಂದ ಪ್ರಕಟವಾಗಿರುತ್ತದೆ. ಮೊದಲನೆಯ ಭಾಗವು ಮೊದಲು ಗಿಸಿನೇ ಇಸ್ವಿಯಲ್ಲಿ ಅವರಿಂದ ಪ್ರಸಿದ್ಧವಾಯಿತು. ವಚನವಾಙ್ಮಯದ ಸೊದಲನೇ ಗ್ರಂಥವೆಂದರೆ ಇದೇ ಆಗಿರುತ್ತದೆ. ಅಂದಿನಿಂದ ಈ ವರೆಗೆ ಶಿವಾನುಭವ ಪತ್ರಿಕೆಯ ದ್ವಾರಾ ೧೫ ವರ್ಷಗಳ ವರೆಗೆ ಅನೇಕ ವಚನ ಗ್ರಂಥಗಳು ಪ್ರಕಾಶಕ್ಕೆ ಬಂದವು. ಇವುಗಳ ಮೂಲಕ ವಚನ ವಾಙ್ಮಯದ ಮಹತ್ವವು ಎಷ್ಟಿರುತ್ತದೆಂಬದು ಕರ್ನಾಟಕಸ್ತರಿಗೆಲ್ಲ ಚನ್ನಾಗಿ ಈಗ ತಿಳಿದದ್ದಾಗಿದೆ. ಇದನ್ನು ನಾವು ಇಲ್ಲಿ ಹೆಚ್ಚಿಗೆ ವಿಸ್ತರಿಸುವ ಅವಶ್ಯವಿಲ್ಲ.

ಈಗ ಪ್ರಸಿದ್ಧವಾದ ವಚನಶಾಸ್ತ್ರಸಾರ ಭಾಗ ೨ ಈ ಗ್ರಂಥವು ಈ ವರೆಗೆ ಅಚ್ಚಾದ ಗ್ರಂಥಗಳಂತಿರದೆ ಅದು ತೀರ ಹೊಸತರದ್ದಾಗಿರುತ್ತದೆ. ಇದರಲ್ಲಿ ಸಂಪೂರ್ಣವಾಗಿ ವೀರಶೈವ ಸಿದ್ಧಾಂತವು ವಿವೇಚಿಸಲ್ಪಟ್ಟಿರುತ್ತದೆ.

ಈ ವರೆಗೆ ಪ್ರಕಟವಾದ ವಚನ ಗ್ರಂಥಗಳಲ್ಲಿ ಷಟ್‌ಸ್ಥಲಗಳ ಸಾಮಾನ್ಯ ವಿವೇಚನೆ, ವೀರಶೈವ ಧರ್ಮ ತತ್ವಗಳ ಸ್ಥೂಲ ನಿರೂಪಣೆ ಮತ್ತು ವೀರಶೈವರ ಸಾಮಾಜಿಕ ಮತ್ತು ನೈತಿಕ ತತ್ವಗಳು ಇವುಗಳೇ ಹೆಚ್ಚಾಗಿ ನಿರೂಪಿಸಲ್ಪಟ್ಟಿರುತ್ತವೆ. ಆದರೆ ಅವುಗಳಲ್ಲಿ ವೀರಶೈವ ಧರ್ಮದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ ಷಟ್‌ಸ್ಥಲ ಶಾಸ್ತ್ರದ ಸಾದ್ಯಂತ ಸಿದ್ಧಾಂತವಿರುವದಿಲ್ಲ ಆದರೆ ಈ ವಿಷಯವು ಈ ೨ನೇ ಭಾಗದಲ್ಲಿ ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿರುತ್ತದೆ.

ಈ ಗ್ರಂಥದಲ್ಲಿ ಐದು ಮುಖ್ಯ ವಿಭಾಗಗಳು ಮಾಡಲ್ಪಟ್ಟಿವೆ. ಅವು ಯಾವವೆಂದರೆ:— (೧) ಸೃಷ್ಟಿಯ ರಚನೆ (೨) ಕರಣಹಸಿಗೆ (೩)

ಕ್ರಿಯೆಗಳು ಮತ್ತು ಸಕೀಲಗಳು (೪) ಷಟ್‌ಸ್ಥಲಗಳು, ಪ್ರವೃತ್ತಿ ಮತ್ತು ನಿವೃತ್ತಿ (೫) ಮತ್ತು ಏಕೋತ್ತರಶತಸ್ಥಲ. ಈ ಕಡೆಯ ಐನೇ ವಿಭಾಗದಲ್ಲಿ ನೂರಾ ಒಂದು ಸ್ಥಲಗಳು ಸವಿಸ್ತಾರವಾಗಿ ವಿವೇಚಿಸಲ್ಪಟ್ಟಿರುತ್ತವೆ. ಅಲ್ಲದೆ ಅಂತ್ಯದಲ್ಲಿ ೧೪ ಅನುಬಂಧಗಳಿದ್ದು ಅವುಗಳಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಅನೇಕ ಮಹತ್ವದ ವಿಷಯಗಳ ಸಂಬಂಧವಾಗಿ ಗ್ರಂಥಕಾರರ ಅಭಿಪ್ರಾಯಗಳೂ ಸಮಾಲೋಚನೆಗಳೂ ಕಾಣಿಸಲ್ಪಟ್ಟಿವೆ. ಈ ವಿವರಣೆಯ ಮೇಲಿಂದ ಈ ಗ್ರಂಥದ ವಿಸ್ತಾರವೂ ಮಹತ್ವವೂ ಎಷ್ಟಿರುತ್ತದೆಂಬುದು ವಾಚಕರ ನಿದರ್ಶನಕ್ಕೆ ಬರದೆ ಇರಲಾರದು.

ಭಾಗ ೧, ಸೃಷ್ಟಿಯ ರಚನೆ:— ಈ ಭಾಗದಲ್ಲಿ ಮಹಾಲಿಂಗವೆಂದರೇನು, ಪ್ರಣವದ ಸ್ವರೂಪ, ಪಂಚಸಾದಾಖ್ಯಗಳ ವೃತ್ತಾಂತ, ಷಡಧ್ವಗಳ ವಿವೇಚನೆ ಇವುಗಳು ಬಂದಿದ್ದಲ್ಲದೆ, ಮೂವತ್ತಾರು ತತ್ವಗಳಾವವು ಇವೇ ಮೊದಲಾದ ವಿಷಯಗಳು ವಿವರಿಸಲ್ಪಟ್ಟಿರುತ್ತವೆ. ಮತ್ತು ಕಡೆಗೆ ಮಹಾದೇವಿಯಕ್ಕ, ಪ್ರಭುದೇವ ಮೊದಲಾದ ಮಹತ್ವದ ವಚನಕಾರರ ಜಗದುತ್ಪತ್ತಿಯ ವಚನಗಳು ಕೊಡಲ್ಪಟ್ಟಿವೆ. ಇವುಗಳ ಜ್ಞಾನವು ಷಟ್‌ಸ್ಥಲ ಶಾಸ್ತ್ರವನ್ನು ಅರಿಯಲು ಬಹು ಸಹಾಯಕಾರಿಯಾಗಿದೆ.

ಭಾಗ ೨, ಕರಣಹಸಿಗೆ:— ಇದರಲ್ಲಿ ದೇಹದ ಜ್ಞಾನ ಪಂಚಭೂತಗಳ ಪಂಚೀಕೃತಿಗಳು, ೨೫ ತತ್ವಗಳ ವಿಚಾರ, ದೇಹದ ವ್ಯಾಪಾರಗಳು, ಅದರ ಗುಣಗಳು, ಅದರ ಅವಸ್ಥೆಗಳು ಈ ವಿಷಯಗಳಲ್ಲದೆ, ಮನುಷ್ಯನ ಅನೇಕ ಬಗೆಯ ದುರ್ವ್ಯಾಪಾರಗಳು ಮತ್ತು ಮನೋವೃತ್ತಿಗಳು ವರ್ಣಿಸಲ್ಪಟ್ಟಿರುತ್ತವೆ. ಷಟ್‌ಸ್ಥಲದಲ್ಲಿ ಇವುಗಳ ಜ್ಞಾನದ ಅವಶ್ಯಕತೆ ಏನೆಂಬದನ್ನು ತಿಳಿಯಪಡಿಸಲು ಅನೇಕ ವಚನಗಳು ಗ್ರಂಥದಲ್ಲಿ ಕೊಡಲ್ಪಟ್ಟಿರುತ್ತವೆ.

ಭಾಗ ೩, ಕ್ರಿಯೆಗಳು ಮತ್ತು ಸಕೀಲಗಳು:— ವೀರಶೈವ ಧರ್ಮದ ಪ್ರಕಾರ ಕ್ರಿಯೆಗಳಲ್ಲಿ ಮಾರ್ಗಕ್ರಿಯೆಗಳು ಮತ್ತು ಮೀರಿದ ಕ್ರಿಯೆಗಳು ಎಂದು ೨ ಭಾಗಗಳಿವೆ. ಇವುಗಳನ್ನು ವೀರಶೈವರು ಅರಿಯುವದು ಬಹು ಅವಶ್ಯವಾದದ್ದು. ಈ ಕ್ರಿಯೆಗಳಲ್ಲಿ ೧೨ ವಿಭಾಗಗಳಿದ್ದು ಪ್ರತಿಯೊಂದು ವಿಭಾಗಕ್ಕೆ ಸಂಬಂಧಿಸಿದ ಕ್ರಿಯೆಯು ೯ ತರಗತಿಗಳುಳ್ಳ

ಪಾಠ ಪ್ರವೃತ್ತಿಯನ್ನು ಹೊಂದುತ್ತ ಹೋಗುತ್ತದೆ. ಹೀಗೆ ಎಲ್ಲವೂ ಸೇರಿ ೨೯೬ ಬಗೆಯ ಕ್ರಿಯೆಗಳಾಗುತ್ತವೆ. ಇವುಗಳ ವರ್ಣನೆಗಳು ಈ ಭಾಗದಲ್ಲಿ ಬಂದಿರುತ್ತವೆ. ಅಲ್ಲದೆ ಈ ಕ್ರಿಯೆಗಳ ಪರಸ್ಪರ ಸಂಬಂಧವನ್ನು ಅರಿಯಲು ಸಕೀಲಗಳು ಬಹು ಸಹಾಯಕಾರಿಗಳಾಗಿವೆ. ಆದ್ದರಿಂದ ಇವುಗಳಲ್ಲಿ ಬಹು ಮುಖ್ಯವಾದ ಅಷ್ಟವಿಧ ಸಕೀಲಗಳು, ೧೦೮ ಸಕೀಲಗಳು, ೨೧೬ ಸಕೀಲಗಳು ವಿವರಿಸಲ್ಪಟ್ಟಿರುತ್ತವೆ.

ಭಾಗ ೪, ಷಟ್‌ಸ್ಥಲಗಳು:— ಹಿಂದೆ ವಿವರಿಸಿದ ವಿಷಯಗಳ ಜ್ಞಾನವಾದಲ್ಲಿ ಷಟ್‌ಸ್ಥಲಗಳ ತಿಳುವಳಿಕೆಯು ಮನುಷ್ಯನಿಗೆ ಉಂಟಾಗಹತ್ತುತ್ತದೆ. ಈ ಷಟ್‌ಸ್ಥಲ ವಿವೇಚನೆಯಲ್ಲಿ ೧, ೨, ೩, ೪ ಈ ಸ್ಥಲಗಳ ಸವಿಸ್ತರಣೆಗಳು ಬರುತ್ತವೆ. ಈ ಪ್ರತಿಯೊಂದು ಸ್ಥಲದಲ್ಲಿ ಅಂಗಸ್ಥಲಗಳು, ಲಿಂಗಸ್ಥಲಗಳು ಎಂಬ ಭಾಗಗಳು ಮಾಡಲ್ಪಡುತ್ತವೆ. ಇವಲ್ಲದೆ ೧೪ ಅಂಗಸ್ಥಲಗಳು ೧೪ ಲಿಂಗಸ್ಥಲಗಳು ಮತ್ತು ೩೬ ಅಂಗಸ್ಥಲಗಳು, ೩೬ ಲಿಂಗಸ್ಥಲಗಳು ಇದ್ದು ಇವುಗಳ ತಾತ್ವಿಕ ವಿವೇಚನೆಯೂ ಈ ಭಾಗದಲ್ಲಿ ಮಾಡಲ್ಪಟ್ಟಿರುತ್ತವೆ. ಈ ಭಾಗವಾದರೂ ಅತ್ಯಂತ ಮಹತ್ವದ್ದಾಗಿರುತ್ತದೆ.

ಭಾಗ ೫, ಏಕೋತ್ತರ ಶತಸ್ಥಲ:— ವೀರಶೈವ ಧರ್ಮದಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ. ಆದರೆ ಷಟ್‌ಸ್ಥಲಗಳಲ್ಲಿ ಇನ್ನರ ಕಾರ್ಯಗಳಾವವೆಂಬುದನ್ನು ಕಂಡುಹಿಡಿಯುವದು ಬಹು ದುಸ್ತರವಾಗಿರುತ್ತದೆ. ಆದ್ದರಿಂದಲೇ ಈ ವಿಷಯವು ಈ ಗ್ರಂಥದಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿರುತ್ತದೆ. ಈ ನಿರೂಪಣೆಯ ಮೂಲಕ ಷಟ್‌ಸ್ಥಲಗಳ ಆಚರಣೆಗಳ ಮೇಲೆ ಮಹತ್ವದ ಪ್ರಕಾಶವು ಬೀಳದೆ ಇರಲಾರದೆಂದು ನಾವು ಭಾವಿಸಿದ್ದೇವೆ.

ಈ ಯಾವತ್ತು ವಿವೇಚನೆಗಳು ಬಸವಾದಿ ಪ್ರಮಥರ ಅಸಂಖ್ಯ ವಚನಗಳ ಮೂಲಕವಾಗಿಯೇ ಈ ಗ್ರಂಥದಲ್ಲಿ ಮಾಡಲ್ಪಟ್ಟಿರುತ್ತವೆ. ಅಲ್ಲಲ್ಲಿ ಸೂಚನಾತ್ಮಕ ವಿವರಣೆಗಳು ಗ್ರಂಥಕಾರರಿಂದ ಮಾಡಲ್ಪಟ್ಟಿವೆ. ವಚನಶಾಸ್ತ್ರಸಾರ ಭಾಗ ೧ ಈ ಗ್ರಂಥವು ಯಾವ ಪದ್ಧತಿಯನ್ನನುಸರಿಸಿ ರಚಿಸಲ್ಪಟ್ಟಿತೋ ಅದೇ ಪದ್ಧತಿಯೇ ಇದರಲ್ಲಿಯೂ ಸ್ವೀಕರಿಸಲ್ಪಟ್ಟಿರುತ್ತದೆ.

ಬಸವಾದಿ ಪ್ರಮಥರ ಕಾಲದಲ್ಲಿ ಷಟ್‌ಸ್ಥಲಶಾಸ್ತ್ರವು ಅತ್ಯಂತ ಉನ್ನತ ಸ್ಥಾನವನ್ನು ಹೊಂದಿತು. ಅವರ ವಿಚಾರಗಳನ್ನು ಈ ಕಾಲಕ್ಕೆ ಅರಿಯುವದು ಬಹು ಅವಶ್ಯವಾಗಿರುತ್ತದೆ. ಇದನ್ನು ಅರಿತಾಗಲೇ ವೀರಶೈವ ಸಂಸ್ಕೃತಿಯ ತಿಳವಳಿಕೆಯು ಶಕ್ಯವಾಗುತ್ತದೆ. ಈ ಸಂಗತಿಯನ್ನು ವೀರಶೈವರು ವಿಚಾರ ಮಾಡಿದಲ್ಲಿ ಈ ಗ್ರಂಥದ ಮಹತ್ವವು ಈ ಕಾಲದಲ್ಲಿ ಎಷ್ಟಿದೆ ಎಂಬುದು ವಾಚಕರಿಗೆ ಗೊತ್ತಾಗದೆ ಇರದು. ಈ ಗ್ರಂಥವು ಒಟ್ಟು ೬೩೧ ಪುಟಗಳುಳ್ಳದಾಗಿದೆ.

ಈ ಗ್ರಂಥದ ಮಹತ್ವವನ್ನು ಅರಿತು ಶ್ರೀಯುತ ಮಂಜಪ್ಪ ಹರ್ಡೇಕರ ಇವರು ವಿಜಾಪುರ ಜಿಲ್ಲೆಯಲ್ಲಿ ಸಂಚರಿಸಿ ಅದರ ಮುದ್ರಣಕ್ಕೆಷ್ಟಕ್ಕಾಗಿ ಹಣವನ್ನು ಶೇಖರಿಸಿದರು ಮತ್ತು ಅದು ಬಾಗಲಕೋಟೆಯಲ್ಲಿ ರಾ॥ ಸಾ॥ ಹಳಕಟ್ಟಿಯವರಿಗೆ ಸಾರ್ವಜನಿಕ ಸಭೆಯಲ್ಲಿ ಸನ್ಮಾನ ಪೂರ್ವಕವಾಗಿ ಅರ್ಪಿಸಲ್ಪಟ್ಟಿತು. ಇದರ ಮೇಲಿಂದ ಈ ಗ್ರಂಥದ ಮಹತ್ವವು ವಾಚಕರಿಗೆ ಗೋಚರವಾಗದಿರಲಾರದೆಂದು ಭಾವಿಸಿದ್ದೇವೆ.

ಜ್ಞಾನದಿಂದಲೇ ಮಾಯೆಯ ನಿವೃತ್ತಿಯು

ವಿವರಣೆ:— ಮಾಯಾ ಪಾಶವು ಲಿಂಗಜ್ಞಾನದಿಂದ ನಿವೃತ್ತಿಯಾಗುತ್ತದೆ. (೧೪) ಮನುಷ್ಯನ ಕರ್ಮತ್ರಯಗಳೂ ಕೂಡ ಜ್ಞಾನದಿಂದಲೇ ದೂರಾಗುತ್ತವೆ. (೧೫) ಜ್ಞಾನಿಯಾದವನು ಸಮರಸಾಚಾರದಿಂದ ವರ್ತಿಸಬೇಕು. (೧೬) ಹೀಗೆ ಆಚರಿಸಿದಲ್ಲಿ ಅವನಿಗೆ ಬಚ್ಚಬಯ ಬಯಲು ಎಂದರೆ ಮೋಕ್ಷವು ಪ್ರಾಪ್ತವಾಗುತ್ತದೆ. (೧೭) ಪುತ್ತು ಮಾಯೆಯು ಅಳಿದು ಇಷ್ಟ ಪ್ರಾಣ ಭಾವಲಿಂಗಗಳು ಅಳವಡುವವು. (೧೮) ಆದರೆ ಭಿನ್ನಾಚಾರದಿಂದ ವರ್ತಿಸುವವರಿಗೆ ಇದು ಒಲವಡಲಾರದು. (೧೯) ಮಾಯಾಪ್ರಪಂಚು ನಿವೃತ್ತಿಮಾಡಿದಲ್ಲಿ ಚಿದ್ಘನ ಪ್ರಕಾಶವು ದೊರೆಕೊಳ್ಳುವದು. (೨೦-೨೧)

ವಚನಗಳು.

೧೪. ಗಂಡನಿಲ್ಲದ ಸತಿ ಯೋನಿ ಇಲ್ಲದೆ ಮಕ್ಕಳ ಹಡೆದು ನಾಲಿಗೆ ಇಲ್ಲದ ಬಾಯಲ್ಲಿ ಜೋಗುಳವಾಡುತ್ತೈದಾಳೆ. ತೊಟ್ಟಿಲಿಲ್ಲದ ನೇಣು ಹೊರತೆಯಾಗಿ ಗಂಟ ಕಟ್ಟಿ ಮಗುವಿಲ್ಲದೆ ಶಿಶುವಳುತ್ತಿದೆ. ಇದಕ್ಕೆ ಮೊಲೆ ಇಲ್ಲ. ಹಾಲ ಬೇಕು. ಸದಾಶಿವಮೂರ್ತಿ ಲಿಂಗವ ನರಿಯಲ್ಲದಾಗದು.

ಟೀಕು:— ಜೀವನ ವ್ಯವಹಾರವಿಲ್ಲದ ಜ್ಞಾನಶಕ್ತಿ ಸ್ವರೂಪನಾದ ಶರಣನೆಂಬುದೀಗ ಗಂಡನಿಲ್ಲದ ಸತಿ ಎಂಬ ಶಬ್ದಕ್ಕರ್ಥ. ಆ ಸುಜ್ಞಾನ ಸಹಿತವಾದ ಶರಣ ಸತಿಗೆ ಉತ್ಪತ್ತಿ ನಾಸ್ತಿಯಾಯಿತ್ತೆಂಬುದೀಗ ಯೋನಿ ಇಲ್ಲದೆ ಎಂಬ ಶಬ್ದಕ್ಕರ್ಥ. ಆ ಉತ್ಪತ್ತಿ ನಾಸ್ತಿಯಾಗಿರ್ಪ ಚಿತ್ ಸ್ವರೂಪನಾದ ಶರಣ ಸತಿಯಲ್ಲಿ ಸದ್ರೂಪವಾದಲ್ಲಿ ಶ್ರೀಗುರು ಅವಿರಳ ಸಂಗವ ಮಾಡಲು ಅಲ್ಲಿ ಚಿದ್ಗರ್ಭ ತಲೆದೋರಿ ಸಚ್ಚಿದಾನಂದ ಸ್ವರೂಪನಾದ ಲಿಂಗತ್ರಯವು ಉದಯಿಸಿದವೆಂಬುದೀಗ ಮಕ್ಕಳ ಹಡೆದು ಎಂಬ ಶಬ್ದಕ್ಕರ್ಥ. ಆ ಲಿಂಗತ್ರಯದಲ್ಲಿ ಸಮರಸ ಭಾವವ ಘಟಿಸಿದ ಶರಣ ನಿಗೆ ಶಬ್ದ ಜಾಲಂಗಳಿಲ್ಲದೆ ಶಿವಾಪೇಕ್ಷೆಯಿಂ ಶಿವೋಹಂ ಎಂದು ಉಚ್ಚರಿಸುತ್ತಿಹಳೆಂಬುದೀಗ ನಾಲಿಗೆ ಇಲ್ಲದ ಬಾಯಲ್ಲಿ ಜೋಗಳವಾಡುತ್ತೈದಾಳೆ ಎಂಬ ಶಬ್ದಕ್ಕರ್ಥ. ಆ ಶಿವೋಹಂ ಭಾವ ಘಟಿಸಿದ ಶರಣನಿಗೆ ದೇಹಭಾವ ನಾಸ್ತಿಯಾಗಿ ಮಾಯಾಪಾಶ ನಿವೃತ್ತಿಯಾಯಿತ್ತೆಂ

ಬುದೀಗ ತೊಟ್ಟಿಲಿಲ್ಲದ ನೇಣು ಹೊರತೆಯಾಗಿ ಎಂಬ ಶಬ್ದಕ್ಕರ್ಥ. ಆ ಮಾಯಾಪಾಶ ನಾಸ್ತಿಯಾಗಲು ಶರಣನು ತನ್ನ ಆಚಾರಾಂಗವ ಸ್ವಾನುಭಾವ ಸೂತ್ರವಲ್ಲಿ ಸಂಬಂಧಿಸಿದನೆಂಬುದೀಗ ಗಂಟ ಕಟ್ಟ ಎಂಬ ಶಬ್ದಕ್ಕರ್ಥ. ಆ ಸರ್ವಾಚಾರ ಸಂಪತ್ತಿನಲ್ಲಿ ಸ್ವಾನುಭಾವ ಸೂತ್ರವ ಸಂಬಂಧಿಸಿಕೊಂಡಿರ್ಪ ಶರಣಂಗೆ ಮನೋವರ್ತನೆ ಇಲ್ಲದೆ ಆ ಪರ ಬ್ರಹ್ಮದಲ್ಲಿ ಶಿವೋಹಂ ಶಿವೋಹಂ ಎನುತಿರ್ದನೆಂಬುದೀಗ ಮಗುವಿಲ್ಲದೆ ಶಿರು ಅಳುತ್ತಿದೆ ಎಂಬ ಶಬ್ದಕ್ಕರ್ಥ. ಆ ಶಿವೋಹಂ ಎನುತಿರ್ದ ಶರ ಣನೆಂಬ ಶಿರುವಿಂಗೆ ಸಂಸಾರ ವಿಷಯ ರಸವ ತುಂಬಿಕೊಂಡಿರ್ಪ ಘಟ ಸ್ವರೂಪಿನ ಸ್ಥಾನನಿಲ್ಲದೆ ಜ್ಞಾನಾಮೃತ ರಸವನೇ ಸ್ವೀಕರಿಸುತ್ತಿ ಹುದೆಂಬುದೀಗ ಅವಕ್ಕೆ ಮೊಲೆ ಇಲ್ಲದ ಹಾಲು ಬೇಕು. ಸದಾಶಿವ ಮೂರ್ತಿ ಲಿಂಗವನರಿತಲ್ಲದಾಗದು ಎಂಬ ಶಬ್ದಕ್ಕರ್ಥ.

೧೫. ಸುಖದುಃಖದ ನಡುವೆ ಒಂದ ತಿರುಕದ ಕೂಸು ಹುಟ್ಟ ಹಾಲನೊಲ್ಲದೆ ಮೂರು ಕೂಳು ಬೇಡುತ್ತಿದೆ. ಕೂಳು ಕುಡಿವುದಕ್ಕೆ ಮೊದಲೆ ಗಂಜಿಯ ಕುಡಿದು ಕೂಸು ಹೇಳದೇ ಹೋಯಿತ್ತು ಸದಾ ಶಿವಮೂರ್ತಿಲಿಂಗವನರಿದು.

ಟೀಕು:— ದೇಹಾತ್ಮರ ಮಧ್ಯದಲ್ಲಿ ನಾನಾ ದುಶ್ಚರಿತವನುಳ್ಳ ಮನಸ್ಸು ಹುಟ್ಟಿತ್ತೆಂಬುದೀಗ ಸುಖದುಃಖದ ನಡುವೆ ತಿರುಕದ ಕೂಸು ಹುಟ್ಟ ಎಂಬ ಶಬ್ದಕ್ಕರ್ಥ. ಆ ದೇಹಾತ್ಮರ ಮಧ್ಯದಲ್ಲಿ ಹುಟ್ಟಿದ ಮನಸ್ಸು ಜ್ಞಾನಾಮೃತ ರಸವನಿಚ್ಛಿಸಿತ್ತೆಂಬುದೀಗ ಹಾಲನೊಲ್ಲದೆ ಎಂಬ ಶಬ್ದ ಕ್ಕರ್ಥ. ಆ ಸುಜ್ಞಾನ ನಷ್ಟವಾದ ಮನಸ್ಸು ಸಂಚಿತ ಪ್ರಾರಬ್ಧ ಆಗಾಮಿ ಎಂಬ ಕರ್ಮತ್ರಯಂಗಳ ಭಿನ್ನಾಪೇಕ್ಷೆಯಿಂದ ಇಚ್ಛಿಸುತ್ತಿಹು ದೆಂಬುದೀಗ ಮೂರು ಕೂಳು ಬೇಡುತ್ತಿದೆ ಎಂಬ ಶಬ್ದಕ್ಕರ್ಥ. ಆ ಮನೋ ಮಧ್ಯದಲ್ಲಿ ಜ್ಞಾನಾಗ್ನಿ ಪ್ರಭಾವಿಸಲು ಆ ಜ್ಞಾನಾಗ್ನಿಯ ಪ್ರಕಾ ಶದಿಂ ಕರ್ಮತ್ರಯಂಗಳು ಸಮರಸಪಾಕವಾದಾಕ್ಷಣವೆಂಬುದೀಗ ಕೂಳು ಕುಡಿವುದಕ್ಕೆ ಮೊದಲೆ ಎಂಬ ಶಬ್ದಕ್ಕರ್ಥ. ಆಕರ್ಮತ್ರಯಂಗಳು ಜ್ಞಾನಾ ಗ್ನಿಯಲ್ಲಿ ದಗ್ಧವಾಗಲು ಆ ಮನಸ್ಸು ಚಿದಮೃತ ರಸವನವಗ್ರಹಿಸಿ ಮಹಾ ಘನಲಿಂಗದಲ್ಲಿ ನಿಷ್ಪತ್ತಿಯಾದಲ್ಲಿ ಶಬ್ದಜಾಲವಳಿದು ಹೋಯಿತ್ತೆಂಬು ದೀಗ ಗಂಜಿಯ ಕುಡಿದು ಕೂಸು ಹೇಳದೆ ಹೋಯಿತ್ತು ಸದಾಶಿವ ಮೂರ್ತಿ ಲಿಂಗವನರಿದು ಎಂಬ ಶಬ್ದಕ್ಕರ್ಥ.

೧೬. ಹುತ್ತದೊಳಗಣ ಉಡು ಹೊಳೆಯೊಳಗಣ ಮೊಸಳೆ ನುಂಗಿತ್ತು. ನುಂಗಿ ಹೋಗುವಾಗ ಅಂಗನೆ ಎಂಬ ಹೆಂಗುಸು ಉಡುವ ಕಂಡು ತಾ ಹೊತ್ತಿರ್ದ ಕೊಡನ ಕೂಡಿ ಮುಂಡೆಯ ಮೇಲಿರಿಸಲಾಗಿ ತಾ ಸತ್ತು ಕೊಡನೊಡೆದು ಆ ಉಡುವಡಗಿತ್ತು, ಹಿಡಿಯಲಿಲ್ಲ, ಬಿಡಲಿಲ್ಲ, ಬೇರೊಂದಡಿ ಇಡಲಿಲ್ಲ ಸದಾಶಿವಮೂರ್ತಿ ಲಿಂಗವನರಿತಲ್ಲಿ.

ಟೀಕು:— ನವದ್ವಾರಯುಕ್ತವಾದ ದೇಹದಲ್ಲಿ ಸೂಕ್ಷ್ಮವಾಗಿರ್ಪ ಸುಜ್ಞಾನ ಪ್ರಕಾಶವೆಂಬುದೀಗ ಹುತ್ತದೊಳಗಣ ಉಡು ಎಂಬ ಶಬ್ದಕ್ಕರ್ಥ. ಅಂತಪ್ಪ ಸುಜ್ಞಾನ ಪ್ರಕಾಶವು ಸಂಸಾರ ವಿಷಯ ಜಲಪ್ರವಾಹದಲ್ಲಿ ಕ್ರೀಡಿಸುತ್ತಿರ್ಪ ಮಾಯೆಯನವಗ್ರಹಿಸಿತ್ತೆಂಬುದೀಗ ಹೊಳೆಯೊಳಗಣ ಮೊಸಳೆಯ ನುಂಗಿತ್ತು ಎಂಬ ಶಬ್ದಕ್ಕರ್ಥ. ಅಂತು ಮಾಯೆಯನವ ಗ್ರಹಿಸಿ ನಿವೃತ್ತಿ ಮಾರ್ಗದಿಂ ಪರಶಿವತತ್ವವತ್ತಲೆಯ್ದುತ್ತಿರಲು ಎಂಬು ದೀಗ ನುಂಗಿಹೋಗುವಾಗ ಎಂಬ ಶಬ್ದಕ್ಕರ್ಥ. ಅಂತು ಮೋಕ್ಷಮಾರ್ಗ ನಿಡಿದೈದಿಪ ಚಿಚ್ಛಕ್ತಿ ಸ್ವರೂಪವಾದ ಶರಣಸತಿಯು ಆ ಸುಜ್ಞಾನ ಪ್ರಕಾ ಶವ ಪ್ರತ್ಯಕ್ಷ ಕಂಡು ತನ್ನಲ್ಲಿರ್ಪ ಚಿದ್ಭಾಂಡದೊಳಗೆ ಸಾಹಿತ್ಯವ ಮಾಡಿ ಕೊಂಡಳೆಂಬುದೀಗ ಅಂಗನೆ ಎಂಬ ಹೆಂಗಸು ಉಡುವ ಕಂಡು ತಾ ಹೊತ್ತಿರ್ದ ಕೊಡನ ಕೂಡಿ ಎಂಬ ಶಬ್ದಕ್ಕರ್ಥ. ಆ ಸುಜ್ಞಾನ ಪ್ರಕಾಶ ನೋಕಕೊಂಡಿರ್ಪ ಚಿದ್ಭಾಂಡವ ಜ್ಞಾನಸ್ವರೂಪವಾವ ಪರಬ್ರಹ್ಮದಲ್ಲಿ ಸಂಬಂಧಿಸಿದಳೆಂಬುದೀಗ ಮುಂಡೆಯ ಮೇಲಿರಿಸಲಾಗಿ ಎಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿ ಸ್ವರೂಪವಾದ ಶರಣ ಸತಿಯು ಚಿದ್ಘನಲಿಂಗದಿಂ ಸಮ ರಸ ಭಾವದಿಂ ನಿಷ್ಪತ್ತಿಯಾಗಲು ಆ ಚಿದ್ಭಾಂಡವು ವಿಕ್ರಮಿಸಿ ಆ ಸುಜ್ಞಾನ ಪ್ರಕಾಶವು ನಿರಾಳ ಲಿಂಗದಲ್ಲಿ ನಿರ್ವಯಲಾಯಿತ್ತೆಂಬುದೀಗ ತಾ ಸತ್ತು ಕೊಡನೊಡೆದು ಉಡುವಡಗಿತ್ತು ಎಂಬ ಶಬ್ದಕ್ಕರ್ಥ. ಆ ಸುಜ್ಞಾನ ಪ್ರಕಾಶ ನಿಷ್ಪತ್ತಿಯಾದ ಶರಣನು ಪರವಸ್ತುವನಾಹ್ವಾನ ವಿಸರ್ಜ ನಕ್ಕೆ ತರಲಿಲ್ಲವೆಂಬುದೀಗ ಹಿಡಿಯಲಿಲ್ಲವೆಂಬುದೀಗ ಹಿಡಿಯಲಿಲ್ಲ ಬಿಡ ಲಿಲ್ಲವೆಂಬ ಶಬ್ದಕ್ಕರ್ಥ. ಆ ಶರಣನು ಎರಡಿಟ್ಟು ಭಿನ್ನಕ್ರಿಯೆಯನಾ ಚರಿಸಲಿಲ್ಲವೆಂಬುದೀಗ ಬೇರೊಂದು ಅಡಿ ಇಡಲಿಲ್ಲ ಸದಾಶಿವಮೂರ್ತಿ ಲಿಂಗವನರಿತಲ್ಲಿ ಎಂಬ ಶಬ್ದಕ್ಕರ್ಥ.

೧೭. ಹುತ್ತದೊಳಗಿನ ಹಾವ ಹದ್ದಿನ ಹೊಟ್ಟೆಯೊಳಗಣ ತತ್ತಿ ನುಂಗಿತ್ತು. ಗಿಡುಗನ ಉಡು ನುಂಗಿ ಹೊಡೆವವನ ಪಡೆ ನುಂಗಿತ್ತು.

ಹಾವಿನ ಹದ್ದಿನ ತತ್ತಿಯ ಗಿಡುಗನ ಉಡುವ ಹೊಡೆವವನ ಡೊಣ್ಣೆಯ ಬಾಯಿಲ್ಲದ ಇರುಹೆ ನುಂಗಿತ್ತ ಕಂಡೆ. ಸದಾಶಿವಮೂರ್ತಿಲಿಂಗವು ಬಚ್ಚ ಬಯಲಾಯಿತ್ತು.

ಟೀಕುಃ— ನವದ್ವಾರ ಯುಕ್ತವಾದ ದೇಹದಲ್ಲಿರ್ಪ ಶಂಕಾವಿಷ ಸಂಬಂಧಿಯಾದ ಜೀವನೆಂಬುದೀಗ ಹುತ್ತದೊಳಗಣ ಹಾವೆಂಬ ಶಬ್ದ ಕ್ಕರ್ಥ. ಅಂತಪ್ಪ ಜೀವನ ಪರಮಾತ್ಮನ ಅಂತರಂಗದಲ್ಲಿರ್ಪ ಸ್ವಯ ಜ್ಞಾನವ ಗ್ರಹಿಸಿತ್ತೆಂಬುದೀಗ ಹದ್ದಿನ ಹೊಟ್ಟೆಯೊಳಗಣ ತತ್ತಿ ನುಂ ಗಿತ್ತೆಂಬ ಶಬ್ದಕ್ಕರ್ಥ. ಅಂತು ಶಿವಜ್ಞಾನ ಪ್ರಕಾಶವ ಗ್ರಹಿಸಲು ಸಕಲ ಪ್ರಪಂಚಿಗೆ ಲಂಘಿಸುತ್ತಿರ್ಪ ಮಾಯೆಯನು ಸೂಕ್ಷ್ಮವಾದ ಚಿತ್‌ಪ್ರಕಾ ಶವು ಗ್ರಹಿಸಿತ್ತೆಂಬುದೀಗ ಗಿಡುಗನ ಉಡು ನುಂಗಿ ಎಂಬ ಶಬ್ದಕ್ಕರ್ಥ. ಅಂತು ಚಿತ್‌ಪ್ರಕಾಶವ ಗ್ರಹಿಸಲು ಸಕಲ ಕರಂಣಂಗಳ ನಿವೃತ್ತಿಯ ಮಾಡುತ್ತಿರ್ಪ ಶರಣನ ಶಿವಭಾವವ ಗ್ರಹಿಸಿತ್ತೆಂಬುದೀಗ ಹೊಡೆವವನ ದಡೆ ನುಂಗಿತ್ತು ಎಂಬ ಶಬ್ದಕ್ಕರ್ಥ. ಜೀವನ ಪರಮಾತ್ಮ ಸ್ವಯಜ್ಞಾ ನವ ಮಾಯೆಯ ಸೂಕ್ಷ್ಮವಾದ ಚಿತ್‌ಪ್ರಕಾಶವ ಸಕಲ ಕರಣಂಗಳ ನಿವೃತ್ತಿ ಮಾಡುತ್ತಿರ್ಪ ಶರಣನ ಶಿವಾನುಭಾವ ಭಿನ್ನಾಪೇಕ್ಷೆಯಿಂದ ಸೂಕ್ಷ್ಮ ವಾದ ಪರಿಪೂರ್ಣ ಜ್ಞಾನವೇ ಆ ಸಮೂಹವನವಗ್ರಹಿಸಿ ಪರಶಿವ ತತ್ವ ದಲ್ಲಿ ನಿರ್ವಯಲಾಯಿತ್ತೆಂಬುದೀಗ ಹಾವಿನ ಹದ್ದಿನ ತತ್ತಿಯ ಗಿಡುಗನ ಉಡುವ ಹೊಡೆವವನ ಡೊಣ್ಣೆಯ ಬಾಯಿಲ್ಲದ ಇರುಹೆ ನುಂಗಿತ್ತ ಕಂಡೆ ಸದಾಶಿವಮೂರ್ತಿಲಿಂಗವು ಬಚ್ಚ ಬಯಲಾಯಿತ್ತು.

೧೮. ಕೊಟ್ಟ ಕೂಗಿತ್ತು. ಹಾಲುವಕ್ಕಿಯ ಬಳಿಯಿತ್ತು. ಹಂಗ ಕಟ್ಟಿತ್ತು. ಅವನ ಅವಳ ಮದುವೆ ನಿಂದಿತ್ತು. ಇವನಿಗಾಯಿತ್ತು. ತಂದ ಮರುದಿನಕ್ಕೆ ಸತ್ತವಳು ಮದವಳಿಗ ಮುಂಡೆಯ ಮೇಲೆ ಸೀರೆಯ ಹಾಕಿಕೊಂಡು ಕೆಟ್ಟ ಕೆಟ್ಟನೆಂದು ಹೋಗುತ್ತಿರ್ದನು ಸದಾಶಿವಮೂರ್ತಿ ಲಿಂಗದಲ್ಲಿಗೆ.

ಟೀಕುಃ— ಅಂತರಂಗದಲ್ಲಿ ಚಿತ್‌ಪ್ರಣಮ ಜ್ಞಾನ ಉದಯವಾಗಿ ಶಿವೋಹಂ ಶಿವೋಹಂ ಎನುತ್ತಿದ್ದಿತ್ತೆಂಬುದೀಗ ಕೊಟ್ಟ ಕೂಗಿತ್ತು ಎಂಬ ಶಬ್ದಕ್ಕರ್ಥ. ಆ ಶಿವೋಹಂ ಭಾವವಳವಡಲು ಅಂತರಂಗದಲ್ಲಿರ್ದ ತೈಜ ಸನು ಸಮಸ್ತ ಪ್ರಪಂಚ ಸುಜ್ಞಾನ ಮುಖದಿಂ ನಿವೃತ್ತಿ ಮಾಡಿತ್ತೆಂಬುದೀಗ

ಹಾಲುವಕ್ಕಿ ಬಳಿಯಿತ್ತೆಂಬ ಶಬ್ದಕ್ಕರ್ಥ. ಆ ಪ್ರಪಂಚು ನಾಸ್ತಿಯಾಗಲು ಸಂಕಲ್ಪರೂಪವಾದ ಪೂರ್ವಕ್ರಿಯಾ ಚರಿತ್ರೆಯ ಬಿಟ್ಟು ಉತ್ತರವಾದ ಜ್ಞಾನದಲೆಯಿದ್ದಿತ್ತು ಮನಸ್ಸೆಂಬುದೀಗ ಹಂಗ ಕಟ್ಟಿತ್ತು ಎಂಬ ಶಬ್ದಕ್ಕರ್ಥ. ಶಿವಜ್ಞಾನೋದಯವಾದಲ್ಲಿ ಜೀವನು ಮಾಯೆಯಲ್ಲಿ ಕೂಡಿ ಸಕಲ ವಿಷ ಯಂಗಳ ಭೋಗಿಸಬೇಕೆಂಬ ಅದೇ ನಿವೃತ್ತಿಯಾಯಿತ್ತೆಂಬುದೀಗ ಅವನ ಅವಳ ಮದುವೆ ನಿಂದಿತ್ತು ಎಂಬ ಶಬ್ದಕ್ಕರ್ಥ. ಆ ಮಾಯಾ ಸಂಭ್ರ ಮವಳಿಯಲು ಜೀವಭಾವ ಭ್ರಾಂತಳಿದು ಸಜ್ಜೀವ ಸ್ವರೂಪನಾದ ಶರ ಣನು ನಿರ್ಮಾಯ ಸ್ವರೂಪವಾದ ಜ್ಞಾನ ಶಕ್ತಿಯಲ್ಲಿ ಸಮರಸ ಸಂಯೋ ಗವ ಮಾಡುತ್ತಿರ್ದನೆಂಬುದೀಗ ಇವನಿಗಾಯಿತ್ತೆಂಬ ಶಬ್ದಕ್ಕರ್ಥ. ಶರ ಣನ ಮಾರ್ಗ ಕ್ರಿಯಲ್ಲಿ ಸಂಬಂಧವಾದ ಜ್ಞಾನ ಶಕ್ತಿಯ ಮೀರಿದ ಕ್ರಿಯೆಯನೊಳಕೊಂಡಿರ್ಪ ಪ್ರಾಣಲಿಂಗದಲ್ಲಿ ನಿಷ್ಪತ್ತಿಯಾದಳೆಂಬುದೀಗ ತಂದ ಮರುದಿನಕ್ಕೆ ಸತ್ತವಳು ಎಂಬ ಶಬ್ದಕ್ಕರ್ಥ. ಆ ಜ್ಞಾನಶಕ್ತಿಯು ನಿಷ್ಪತ್ತಿಯಾಗಲು ಅಷ್ಟದಳ ಕಮಲಂಗಳಳಿದ ಚಿತ್‌ಸ್ವರೂಪನಾದ ಶರಣನು ಜ್ಞಾನಸ್ವರೂಪವಾದ ಪರಶಿವತತ್ವದಲ್ಲಿ ತನ್ನ ಜ್ಞಾನಾಂಬರವನೇಕೀಕರಿಸಿ ತಾನೆಂಬ ಭಾವ ಮಹಾಘನ ಲಿಂಗದಲ್ಲಿ ನಿಷ್ಪತ್ತಿಯಾಯಿತ್ತೆಂಬುದೀಗ ಮದವಳಿಗ ಮುಂಡೆಯ ಮೇಲೆ ಸೀರೆಯ ಹಾಕಿಕೊಂಡು ಕೆಟ್ಟ ಕೆಟ್ಟನೆಂದು ಹೋಗುತ್ತಿರ್ದನು ಸದಾಶಿವಮೂರ್ತಿಲಿಂಗದಲ್ಲಿಗೆ ಎಂಬ ಶಬ್ದ ಕ್ಕರ್ಥ.

೧೯. ಹುಲ್ಲು ಕೆಂಡವ ಮುಟ್ಟಿ ಹತ್ತದ ಪರಿಯ ನೋಡಾ. ಹಸಿದ ಸರ್ಪನ ಹೆಡೆಯ ನೆಳಲಲ್ಲಿ ಮಂಡುಕ ನಿಂದ ತೆರ ನೋಡಾ. ಜೀವ ಪಮನಲ್ಲಿ ಬಂದು ನಿಂದು ಒಂದಾಗದ ಸಂದೇಹವ ನೋಡಾ. ಇಂತೀ ಸಂಪನನಿದಲ್ಲದೆ ಅಂಗ ಲಿಂಗ ಪ್ರಾಣ ಪರಮನೊಂದಾಗಲಿಲ್ಲ ಸದಾ ಶಿವಮೂರ್ತಿಲಿಂಗವನರಿವುದಕ್ಕೆ.

ಟೀಕುಃ— ವಿಷಯ ಪ್ರಪಂಚದಲ್ಲಿ ಕೂಡಿರ್ದಾತ್ಮನು ಚಿದಗ್ನಿ ಸ್ವರೂ ಪವಾದ ಇಷ್ಟಲಿಂಗವ ಭಿನ್ನವಿಟ್ಟು ಅಂಗದಲ್ಲಿ ಧರಿಸಿ ಎಂಬುದೀಗ ಹುಲ್ಲು ಕೆಂಡವ ಮುಟ್ಟಿ ಎಂಬ ಶಬ್ದಕ್ಕರ್ಥ. ಆ ಲಿಂಗಕ್ಕೆ ಭಿನ್ನ ತ್ರಿಯೆಮಾಡಿ ಭಿನ್ನಭಾವಿಯಾಗಿ ಹೋದನಲ್ಲದೆ ಆ ಲಿಂಗದಲ್ಲಿ ಸಮ ರಸಭಾವ ಹುಟಿಸಿದುದಿಲ್ಲವೆಂಬುದೀಗ ಹತ್ತದ ಪರಿಯ ನೋಡಾ ಎಂಬ

ಶಬ್ದಕ್ಕರ್ಥ. ಆ ಶಂಕಾ ವಿಷಯ ಸಂಬಂಧಿಯಪ್ಪ ಜೀವಾತ್ಮನು ಆ ತೃಷೆಯಲ್ಲಿರ್ದನೆಂಬುದೀಗ ಹಸಿದ ಸರ್ಪನ ಎಂಬ ಶಬ್ದಕ್ಕರ್ಥ. ಆ ಜೀವನ ಇಂದ್ರಿಯಂಗಳೆಂಬ ಶಿರಸ್ಸಿನಲ್ಲಿ ಅಜ್ಞಾನ ಮಾಯಾ ಛಾಯೆ ಇರುತ್ತಿಹುದೆಂಬುದೀಗ ಹೆಡೆಯ ನೆಳಲಲ್ಲಿ ಎಂಬ ಶಬ್ದಕ್ಕರ್ಥ. ಆ ಅಜ್ಞಾನ ಮಾಯಾ ಛಾಯೆಯ ಮಧ್ಯದಲ್ಲಿ ಪರಮ ಶಾಂತಿಯ ಬಂಧು ಅಡಗಿರುತ್ತಿಹವೆಂಬುದೀಗ ಮಂಡುಕ ನಿಂದ ತೆರನ ನೋಡಾ ಎಂಬ ಶಬ್ದಕ್ಕರ್ಥ. ಆ ಪರಮ ಶಾಂತಿಯ ಚಿಬ್ಬಿಂದು ಅಡಗಿದ ಕಾರಣ ಆ ಜೀವನು ಪರಮಾತ್ಮನಲ್ಲಿರ್ದು ಸಮರಸ ಘಟಿಸಿದುದಿಲ್ಲ ಎಂಬುದೀಗ ಜೀವ ಪರಮನಲ್ಲಿ ಬಂದು ನಿಂದು ಒಂದಾಗದ ಸಂದೇಹವ ನೋಡಾ ಎಂಬ ಶಬ್ದಕ್ಕರ್ಥ. ಆ ಎರಡಿಟ್ಟು ಮಾಡುವ ಭಿನ್ನಕ್ರಿಯಾಚಾರವ ಳಿದು ಅಭಿನ್ನಕ್ರಿಯಾಜ್ಞಾನವಳವಟ್ಟ ಶರಣಂಗೆ ಲಿಂಗಾಂಗ ಸಂಬಂಧ ಘಟಿಸಿ ಜೀವ ಪರಮಾತ್ಮನಲ್ಲಿ ಏಕಾರ್ಥವಹುದಲ್ಲದೆ ಈ ಭೇದವನರಿಯದೆ ಇರ್ಪ ಭಿನ್ನಜ್ಞಾನಿಗಳಿಗೆ ಅಸಾಧ್ಯವೆಂಬುದೀಗ ಇಂತೀ ಸಂದನರಿದಲ್ಲದೆ ಅಂಗಲಿಂಗ ಪ್ರಾಣಪರಮನೋಡಾಗಲಿಲ್ಲ ಸದಾಶಿವಮೂರ್ತಿಲಿಂಗವನರಿವುದಕ್ಕೆ ಎಂಬ ಶಬ್ದಕ್ಕರ್ಥ.

೨೦. ಮೂರು ಲೋಕವನೆಲ್ಲವ ಗಾಳಿಯಲ್ಲಿ ತೂರಿಬಂದ ಗುಂಗುರು ನುಂಗಿತ್ತು. ಮೂರು ಲೋಕದ ರಾಯರು ಕೂಡಿ ಆ ಗುಂಗುರ ಕೊಂದೆ ಹೆನೆಂದಡೆ ಆರಿಗೂ ಅಸಾಧ್ಯ. ಆ ಗುಂಗುರು ಬಾಯಲ್ಲಿ ಕತ್ತರಿ ವಾಣಿ ಕಾಲನಲ್ಲಿ ಖಂಡೆಯ ಅಂಡದಲ್ಲಿ ಕಾಳಕೂಟ ಪಿಂಡವೆಲ್ಲವು ಅಸಿಯ ಬಳಗ ಅದು ಕೊಂದು ನಿಂದವಂಗಲ್ಲದೆ ಸದಾಶಿವಮೂರ್ತಿ ಲಿಂಗದ ಬೆಳಗು ದೊರೆಕೊಳ್ಳದು ಎಂಬ ಶಬ್ದಕ್ಕರ್ಥ.

ಟೀಕುಃ— ಸ್ವರ್ಗ ಮರ್ತ್ಯ ಪಾತಾಳದಲ್ಲಿರ್ಪ ದೇವ ದಾನವ ಮಾನವರೆಲ್ಲರನು ಪ್ರಾಣವಾಯು ವಿಕಾರದಿಂ ಸಂಚರಿಸುತ್ತಿರ್ಪ ಸೂಕ್ಷ್ಮವಾದ ಮಾಯೆಯೇ ಅವಗ್ರಹಿಸಿದಳೆಂಬುದೀಗ ಮೂರು ಲೋಕವನೆಲ್ಲವ ಗಾಳಿಯಲ್ಲಿ ತೂರಿಬಂದ ಗುಂಗುರು ನುಂಗಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ತನುತ್ರಯ ಸಂಬಂಧಿಗಳಾದ ದೈವೃತಾದೈವೃತ ಯೋಗ ಮಾರ್ಗಿಗಳಿಗೆ ಆ ಮಾಯೆಯ ಸಂಹರಿಸಿಹೆನೆಂದೊಡೆ ಅಸಾಧ್ಯವೆಂಬುದೀಗ ಮೂರು ಲೋಕದ ರಾಯರು ಕೂಡಿ ಆ ಗುಂಗುರ ಕೊಂದಿಹೆನೆಂದೊಡೆ ಆರಿಗೂ ಅಸಾಧ್ಯವೆಂಬ ಶಬ್ದಕ್ಕರ್ಥ. ಅಂತಪ್ಪ ಮಾಯೆಯನು ಭಿನ್ನಾಪೇಕ್ಷೆಯಲ್ಲಿ

ಮೋಂಕಿದವರ ಕಡಿದು ಕತ್ತರಿಸುವ ಅತಿ ವಿಷಾದನವಪ್ಪ ಸಂಸಾರ ವಿಷಯ ವ ತುಂಬಿಹುದೆಂಬುದೀಗ ಆ ಗುಂಗುರು ಬಾಯಲ್ಲಿ ಕತ್ತರಿವಾಣಿ ಎಂಬ ಶಬ್ದಕ್ಕರ್ಥ. ಆ ಮಾಯೆಯ ದುಶ್ಚರಿತ್ರವೆಂಬ ಚರಣದಲ್ಲಿ ಖಂಡಿತ ಜ್ಞಾನವೆಂಬ ಶಸ್ತ್ರವಿರುತ್ತಿಹುದೆಂಬುದೀಗ ಕಾಲನಲ್ಲಿ ಖಂಡೆಯವೆಂಬ ಶಬ್ದಕ್ಕರ್ಥ. ಉತ್ಪತ್ತಿಗೆ ಕಾರಣವಾದ ತನುವೆಲ್ಲ ಅಜ್ಞಾನಮಯವಾಗಿಹುದೆಂಬುದೀಗ ಅಂಡದಲ್ಲಿ ಕಾಳಕೂಟವೆಂಬ ಶಬ್ದಕ್ಕರ್ಥ. ಆ ಮಾಯೆಯ ಸೂಕ್ಷ್ಮದೇಹದಲ್ಲಿ ಸಕಲ ಕರಣಂಗಳೆಲ್ಲ ಅಜ್ಞಾನಸಂಬಂಧಿಗಳಾಗಿಹುದೆಂಬುದೀಗ ಪಿಂಡವೆಲ್ಲ ಅಸಿಯ ಬಳಗವೆಂಬ ಶಬ್ದಕ್ಕರ್ಥ. ಸುಜ್ಞಾನೋದಯವಾಗಿ ಸಕಲ ಮಾಯಾ ಪ್ರಪಂಚ ನಿವೃತ್ತಿ ಮಾಡಿದಲ್ಲದೆ ಚಿದ್ಘನ ಲಿಂಗದ ಚಿತ್ ಪ್ರಕಾಶ ದೊರೆಕೊಳ್ಳದೆಂಬುದೀಗ ಅದು ಕೊಂದು ನಿಂದವನಸ್ಪದೆ ಸದಾಶಿವಮೂರ್ತಿ .ಲಿಂಗದ ಬೆಳಗು ದೊರೆಕೊಳ್ಳದು ಎಂಬ ಶಬ್ದಕ್ಕರ್ಥ

(೨೧) ಎರಳೆಯ ಕೊಂಬಿನ ನುಲಿಕೆಯ ಬಳಸಿನಲ್ಲಿ ಅರುಹಿರಿಯರೆಲ್ಲರು ಬಳಸಿ ಆಡುತ್ತೈದಾರೆ. ಎರಳೆ ಸತ್ತು ಕೋಡಳಿದು ಕೊಂಬಿನ ನುಲುಹು ನೇರಿತವಾಗಿ ಬಳಸುವ ಅರುಹಿರಿಯರೆಲ್ಲರು ಒಬ್ಬುಳಿತವಾಗಿ ಸುಳುಹು ನಿಂದಾಗವೇ ಸದಾಶಿವಮೂರ್ತಿ ಲಿಂಗವ ಅಂಗದಲ್ಲಿ ಲೀಯವಾಯಿತ್ತು.

ಟೀಕುಃ— ಜೀವಾತ್ಮನೆಂಬುದೀಗ ಎರಳೆಯೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಂಗೆ ಅಹಂಕಾರ ಮಮಕಾರಗಳೇ ಕೋಡುಗಳಾಗಿಹುದೆಂಬುದೀಗ ಎರಳೆಯ ಕೊಂಬಿನ ಎಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರ ಮಮಕಾರಂಗಳ ಸಂಕಲ್ಪ ಮಾರ್ಗವಿಡಿದು ಮಾಯಾ ಪ್ರಪಂಚಿನ ತಿರುಹುಮುರುವಿನಲ್ಲಿ ನಾ ಬಲ್ಲೆ ಬಲ್ಲಿದರೆಂಬ ಅಪ್ಪೈತ ಜ್ಞಾನಿಗಳೆಲ್ಲರು ಮಾಯಾಪ್ರಪಂಚಿನಲ್ಲಿ ವರ್ತಿಸುತ್ತಿಹರೆಂಬುದೀಗ ನುಲಿಯು ಬಳಿಸಿನಲ್ಲಿ ಅರುಹಿರಿಯರೆಲ್ಲರು ಬಳಿಸಿಯಾಡುತ್ತೈದಾರೆ ಎಂಬ ಶಬ್ದಕ್ಕರ್ಥ. ಅಂತು ಪ್ರಪಂಚಿನಲ್ಲಿ ಕೂಡಿ ಪರಿಭವಕ್ಕೆ ಬರುತ್ತಿರ್ದಾತ್ಮಂಗೆ ಶಿವಕೃಪೆಯಿಂ ಸುಜ್ಞಾನೋದಯವಾಗಲು ಜೀವಭಾವ ನಿವೃತ್ತಿಯಾಯಿತ್ತೆಂಬುದೀಗ ಎರಳೆ ಸತ್ತು ಎಂಬ ಶಬ್ದಕ್ಕರ್ಥ. ಅಂತು ಜೀವಭಾವವಳಿಯಲು ಅಹಂಕಾರ ಮಮಕಾರಗಳು ನಷ್ಟವಾಯಿತ್ತೆಂಬುದೀಗ

ಕೋಡಳಿದು ಎಂಬ ಶಬ್ದಕ್ಕರ್ಥ. ಅಹಂಕಾರವಳಿದಲ್ಲಿ ಸಂಕಲ್ಪ ವಿಕಲ್ಪ ಮಾರ್ಗವಿಡಿದಿರ್ಪ ಸಕಲ ಮಾಯಾ ಪ್ರಪಂಚಿನ ತಿರುವು ಮುರುವುಗಳಿಲ್ಲ ನಿವೃತ್ತಿಯ ಮುಖವಿಂಗೆ ಸಮಾನವಾದವೆಂಬುದೀಗ ಕೊಂಬಿನ ನುಲುಹು ನೇರಿತವಾಗಿ ಎಂಬ ಶಬ್ದಕ್ಕರ್ಥ. ಅಂತು ಪ್ರಪಂಚಿನಲ್ಲಿ ಚರಿಸುತ್ತಿರ್ದ ಅಪ್ಪೆಪ್ರತಜ್ಞಾನಿಗಳಿಲ್ಲರು ಶಿವಜ್ಞಾನೋದಯವಾದಲ್ಲಿ ತಮ್ಮ ನಿಜವ ತಿಳಿದು ಶ್ರೀಗುರು ಕಾರುಣ್ಯಮಂ ಪಡೆದು ನಿವೃತ್ತಿ ಮಾರ್ಗವನೆಯ್ದುತ್ತಿಹರೆಂಬುದೀಗ ಬಳಸುವ ಅರುಹಿರಿಯರೆಲ್ಲರು ಒಬ್ಬುಳಿತವಾಗಿ ಎಂಬ ಶಬ್ದಕ್ಕರ್ಥ. ಅಂತು ನಿವೃತ್ತಿ ಮಾರ್ಗವನೆಯ್ದಲು ಸಕಲ ಪ್ರಪಂಚಿನ ವರ್ತನೆಗಳೆಲ್ಲ ಅಳಿದು ಮಹಾಘನಲಿಂಗದ ಚಿತ್‌ಪ್ರಭಾಂಗದಲ್ಲಿ ಏಕಾರ್ಥವಾದರೆಂಬುದೀಗ ಸುಳುಹು ನಿಂದಾಗಲೆ ಸದಾಶಿವ ಮೂರ್ತಿಲಿಂಗದ ಅಂಗದಲ್ಲಿ ಲೀಯವಾಯಿತ್ತು ಎಂಬ ಶಬ್ದಕ್ಕರ್ಥ.

ಶಿವಾನುಭವ.

ಪರ್ಷ ೧೨] ಜೂನ ೧೯೩೮ [ಸಂಚಿಕೆ ೯

ಬಸವೇಶ್ವರನ ನೀತಿತತ್ವ.

(ಲೇಖಕ:- ಎಸ್. ಜಿ. ಹಂಜಿ, ಬಿ. ಎ, ಹಲಸಿ.)

ಈ ಜಗತ್ತಿನಲ್ಲಿ ಮನುಷ್ಯನು ಯಾವಾಗಲೂ ಸುಖದಿಂದ ಜೀವಿಸಬೇಕಾದರೆ ನೀತಿತತ್ವದ ನಿಯಮಗಳಿಗನುಸಾರವಾಗಿ ನಡೆಯಬೇಕಾಗುವದು. ಇವುಗಳನ್ನು ನೀತಿವಿಶಾರದರಾದ ಹಿರಿಯರು, ಕವಿಗಳು, ತತ್ವಜ್ಞಾನಿಗಳು ಮತ್ತು ಇತಿಹಾಸಕಾರರು ಆ ಆ ಕಾಲಕ್ಕೆ ಮೇಲಿಂದ ಮೇಲೆ ಹೇಳುತ್ತ ಬಂದಿರುವರು. ಇಂಥವರ ನೀತಿತತ್ವಗಳಿಂದಲೇ ಜನಾಂಗವು ಸುಧಾರಿಸುತ್ತ ಈಗಿನ ಪ್ರಗತಿಯ ಸ್ಥಿತಿಗೆ ಬಂದಿರುವದು. ಜಗತ್ತಿನ ತತ್ವಬೋಧಕರಾದ ಜೀಸಸ್ ಕ್ರೈಸ್ಟ, ಮಹಮ್ಮದ ಪೈಗಂಬರ, ಭಗವಾನ ಬುದ್ಧ, ಸ್ವಾಮಿ ವಿವೇಕಾನಂದ, ಮಹಾತ್ಮಾ ಗಾಂಧಿ, ರವೀಂದ್ರನಾಥ ಟಾಗೋರ, ಟಾಲಸ್ಟಾಯ ಮೊದಲಾದ ಸುಪ್ರಸಿದ್ಧ ವ್ಯಕ್ತಿಗಳು ತಮ್ಮ ಅನುಭವಯುಕ್ತವಾದ ತತ್ವದ ಮಾತುಗಳನ್ನು ಹೇಳಿದ್ದಾರೆ. ಇಂಥ ಪ್ರಸಿದ್ಧ ನೀತಿಬೋಧಕರಲ್ಲಿ ಬಸವೇಶ್ವರನೂ ಒಬ್ಬನೆಂದು ಹೇಳಬಹುದು.

ಸಾಮಾನ್ಯವಾಗಿ ಧರ್ಮಸುಧಾರಕರು ತಮ್ಮ ತಮ್ಮ ಧರ್ಮದ ತತ್ವಗಳನ್ನು ಹೇಳುವಾಗ ನೀತಿತತ್ವಗಳನ್ನು ಹೇಳಿಯೇ ಹೇಳಿದ್ದಾರೆ. ಅವರೆ ಬಸವೇಶ್ವರನು ಮತೋದ್ಧಾರಕನಾದರೂ ಆತನು ಹೇಳುವ ರೀತಿಯೇ ಬೇರೆಯಾಗಿರುವದು. ಜನರಿಗೆ ಬೋಧಿಸುವದಕ್ಕಿಂತ ಮೊದಲು ಅವನು ಚಿಕ್ಕಂದಿನಿಂದಲೇ ಸದಾಚಾರದಿಂದ ನಡೆಯುತ್ತ ಸತ್ಯಮಾರ್ಗ

ವನ್ನು ಹಿಡಿದು ಸತತವಾದ ಸಾಧನದಿಂದ ಸಾಕ್ಷಾತ್ಕಾರವನ್ನು ಪಡೆದು ತನ್ನ ಅನುಭವದಲ್ಲಿ ಬಂದ ಎಲ್ಲ ಸಂಗತಿಗಳನ್ನು ತಿಳಿಸಿದನು. ಅವನು ತಾನು ನುಡಿದಂತೆ ನಡೆದು ಅನುಭವ ಪಡೆದು ಆಮೇಲೆ ಅದನ್ನು ಬೋಧಿಸಿದನು. ಅವನ ಮುಖ್ಯವಾದ ವೈಶಿಷ್ಟ್ಯವೇನೆಂದರೆ ಅವನು ಸತ್ಯಧರ್ಮದಿಂದ ನಡೆದು ಆತ್ಮಶುದ್ಧಿಯನ್ನು ಪಡೆದಿದ್ದನು. ಜಗತ್ತಿಗೆ ಬೋಧನೆ ಮಾಡಬೇಕಾದರೆ ಮೊದಲು ನಮ್ಮ ಅಂತರಂಗವನ್ನು ಶುದ್ಧ ಮಾಡಿಕೊಂಡು ಆತ್ಮವಿಶ್ವಾಸವನ್ನು ಪಡೆಯಬೇಕಾಗುವದು. ಇಲ್ಲದಿದ್ದರೆ ನಮ್ಮ ಆಚರಣೆಯಲ್ಲಿ ದೋಷವುಂಟಾಗಿ ನಮ್ಮ ತತ್ವಬೋಧನೆಯು ವ್ಯರ್ಥವಾಗಿ ನಮ್ಮ ಯಾವ ಮಾತಿಗೂ ಜನರ ನಂಬಿಗೆಯಾಗುವದಿಲ್ಲ. ಬಸವೇಶ್ವರನು ಈ ಪೂರ್ವಸಿದ್ಧತೆಯನ್ನು ಮಾಡಿಕೊಂಡು ಯಾರಾದರೂ ತನ್ನಲ್ಲಿ ತಪ್ಪನ್ನು ತೋರಿಸಿಕೊಟ್ಟರೆ ಅದಕ್ಕೆ ವಿನಯದಿಂದ ಒಪ್ಪಿ ಅದನ್ನು ತಿದ್ದಿಕೊಂಡು ನಡೆಯುತ್ತಿದ್ದನು. ಅವನು ತಾನು ದೊಡ್ಡವನೆಂದು ತಿಳಿಯದೆ ದುಷ್ಟರನ್ನೂ ದುರಾಚಾರಿಗಳನ್ನೂ ಪ್ರೇಮದಿಂದ ಹತ್ತರ ಕರೆದು ಮಧುರವಾದ ನುಡಿಗಳಿಂದ ಅವರ ಅಜ್ಞಾನವನ್ನು ತಿಳಿಸಿಕೊಟ್ಟು ಸನ್ಮಾರ್ಗಕ್ಕೆ ಹಚ್ಚುತ್ತಿದ್ದನು. ಪಾಪಿಗಳನ್ನು ಉದ್ಧಾರ ಮಾಡುವಾಗ ಅವನು ತೋರಿಸಿದ ವಿನಯವನ್ನೂ, ಪ್ರೇಮವನ್ನೂ, ಕುಶಲತೆಯನ್ನೂ ನೋಡಿದರೆ ಎಂಥವರಿಗಾದರೂ ಆನಂದವೂ ಆಶ್ಚರ್ಯವೂ ಆಗದೆ ಇರಲಿಕ್ಕಿಲ್ಲ. ತಮ್ಮಷ್ಟಕ್ಕೆ ತಾವು ಬೇಕಾದಷ್ಟು ನೀತಿವಿಶಾರದರಾಗಬಹುದು. ಆದರೆ ಇತರರನ್ನು ಅವರ ಅಜ್ಞಾನವನ್ನು ಹೋಗಲಾಡಿಸಿ ಯೋಗ್ಯ ದಾರಿಗೆ ಹಚ್ಚುವದು ಸಾಮಾನ್ಯ ಕಾರ್ಯವಲ್ಲ.

ಬಸವೇಶ್ವರನು ಮೊದಲಿನಿಂದ ಸತ್ಯಪ್ರೇಮಿಯು. ಅಸತ್ಯವೆನ್ನುವದು ಅವನ ಕನಸುಮನಸಿನಲ್ಲಿಯೂ ಸಹ ಇದ್ದಿಲ್ಲ. ಸತ್ಯವನ್ನು ನುಡಿದು ಸತ್ಯದಿಂದ ಆಚರಿಸುವದೇ ಅತನ ಧ್ಯೇಯವಾಗಿತ್ತು. ಮತ್ತು ಸತತವಾದ ಸಾಧನದಿಂದ ಸತ್ಯದ ಶೋಧವನ್ನು ಮಾಡಿದನು.

"ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ, ಕೂಡಲಸಂಗಮದೇವಾ ನೀವೇ ಪ್ರಮಾಣ"

"ಪುಣ್ಯ ಪಾಪಂಗಳೆಂಬುವು ತಮ್ಮ ಇಷ್ಟವು ಕಾಣಿರಯ್ಯಾ! 'ಅಯ್ಯಾ' ಎಂದಡೆ ಸ್ವರ್ಗ, 'ಎಲವೋ' ಎಂದಡೆ ನರಕ, 'ದೇವಭಕ್ತ ಜಯ' ಎಂಬ ನುಡಿಯೊಳಗೆ ಕೈಲಾಸ ವೈಮುದು ಕೂಡಲಸಂಗಮದೇವಾ."

ಮೇಲಿನ ಆತನ ಮೊದಲನೆಯ ವಚನದಿಂದ ಸತ್ಯದ ಮಹತ್ವವು ಕಂಡುಬರುವದು. ನಾವು ಸ್ವರ್ಗವೆಂದು ಕರೆಯುವದು ಆಕಾಶದ ಕಡೆಗೆ ಅಥವಾ ಬೇರೆ ಯಾವ ಗುಪ್ತಸ್ಥಳದಲ್ಲಿ ಇಲ್ಲ. ಅದರಿ ಸ್ವರ್ಗ ನರಕಗಳಿರಡೂ ನಮ್ಮ ಈ ಜಗತ್ತಿನಲ್ಲಿಯೇ ಇರುವವು. ನಾವು ಸತ್ಯವನ್ನು ನುಡಿದು ಸದಾಚಾರದಿಂದ ವರ್ತಿಸಿದರೆ ಇದೇ ಸ್ವರ್ಗಲೋಕವಾಗುವದು. ಮತ್ತು ಅಸತ್ಯವನ್ನು ನುಡಿದು ಕೆಟ್ಟರೀತಿಯಿಂದ ನಡೆದರೆ ಇದೇ ನರಕವಾಗುವದು. ಎರಡನೆಯ ವಚನದಿಂದ ಪುಣ್ಯ ಪಾಪ ಸ್ವರ್ಗ ಮತ್ತು ನರಕಗಳನ್ನು ದೊರಕಿಸುವವು ನಮ್ಮ ಕೈಯಲ್ಲಿಯೇ ಇವೆ ಎಂದು ತಿಳಿಯುವದು. ಇವರ ಮೇಲಿಂದ ನಮಗೆ ಸ್ವರ್ಗವು, ಪುಣ್ಯವು ಇಲ್ಲವೆ ಸುಖವು ಸಿಗಬೇಕಾದರೆ ಸತ್ಯವನ್ನು ಪಾಲಿಸಿ ಸದಾಚಾರದಿಂದ ನಡೆಯಬೇಕು. ಈ ರೀತಿಯಿಂದ ಅತನು ಸತ್ಯ ಮತ್ತು ಸದಾಚಾರಕ್ಕೆ ಮಹತ್ವಕೊಟ್ಟು ತಾನೂ ಹಾಗೆ ನಡೆದು ತನ್ನ ಎಲ್ಲ ಬಂಧುಗಳು ಹಾಗೆ ನಡೆಯಬೇಕೆಂದು ಉಪದೇಶ ಮಾಡಿದನು.

ಸತ್ಯವನ್ನು ಪಾಲಿಸಿದ ಮೇಲೆ ಅವರ ಕೂಡ ಅಹಿಂಸೆಯು ಸಹಜವಾಗಿ ಬರುವದು. ಜಗತ್ತಿನಲ್ಲಿರುವ ಎಲ್ಲ ಜೀವಿಗಳು ಶಿವನ ದಯೆಯಿಂದ ಹುಟ್ಟಿದ ಮೇಲೆ ಅತನು ದಯೆ ತೋರಿಸುವಂತೆ ನಾವೆಲ್ಲರೂ ಅವುಗಳನ್ನು ನೋಯಿಸದೆ ರಕ್ಷಣ ಮಾಡತಕ್ಕದ್ದು. ಮನುಷ್ಯರಷ್ಟೇ ನಮ್ಮ ಬಂಧುಗಳಲ್ಲ. ಆದರೆ ಉಳಿದ ಎಲ್ಲ ಪ್ರಾಣಿಗಳೂ ಕೂಡ ನಮಗೆ ಒಂದು ರೀತಿಯಿಂದ ಸಂಬಂಧಿಸಿದ್ದು ಮನುಷ್ಯನ ಹಿತಕ್ಕಾಗಿಯೇ ಇರುವದು. ಆದುದರಿಂದ ನಾವು ಅವುಗಳ ಮೇಲೆ ಅಂತಃಕರಣವನ್ನೂ ಪ್ರೇಮವನ್ನೂ ತೋರಿಸಲೇಬೇಕು ಎಂದು ಬಸವೇಶ್ವರನು ಉಪದೇಶ ಮಾಡಿದನು. ಈ ಸಂಗತಿಯು ಅತನ ಕೆಳಗಿನ ವಚನದಿಂದ ಸ್ಪಷ್ಟವಾಗುವದು.

"ದಯವಿಲ್ಲದ ಧರ್ಮವದಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯ. ಕೂಡಲಸಂಗಯ್ಯ ನಂತಲ್ಲದೊಲ್ಲನಯ್ಯ."

ಇದೇ ಕಾರಣದಿಂದ ಹಿಂಸಾಮಯ ಯಜ್ಞಯಾಗಾದಿಗಳನ್ನು ಮತ್ತು ಫಲಾಪೇಕ್ಷೆಯುಳ್ಳ ವಿಧಿನಿಷೇಧಗಳನ್ನು ಒಳಗೊಂಡ ವೇದದ ಕರ್ಮಕಾಂಡವನ್ನು ಬಿಟ್ಟು ಜ್ಞಾನಕಾಂಡವನ್ನು ಮಾತ್ರ ಸ್ವೀಕರಿಸಿದನು. ಭಗವಾನ್ ಬುದ್ಧನಾದರೂ ಇದೇ ತತ್ವದವನಿದ್ದು "ಅಹಿಂಸಾ ಪರಮೋ ಧರ್ಮಃ" ಎಂದು ಗಂಭೀರವಾಗಿ ಸೊದಲೇ ಸಾರಿಹೇಳಿದ್ದನು.

ಮನುಷ್ಯನಿಗೆ ದುರ್ವ್ಯಸನಗಳು ಬಹು ಸುಲಭವಾಗಿ ಹತ್ತುವವು. ಆದರೆ ಅವುಗಳನ್ನು ಬಿಡಿಸುವದು ಬಹಳ ಕಠಿಣ. ಬಸವೇಶ್ವರನು ಜನರ ಇಂಥ ಸ್ಥಿತಿಯನ್ನು ನೋಡಿ ಕನಿಕರಪಟ್ಟು ತನ್ನ ಕೈಲಾದಷ್ಟು ಸುಧಾರಿಸಿದನು. ಮದ್ಯಪಾನ ಮಾಡುವದು, ಮಾಂಸಾಹಾರ ಮಾಡುವದು, ವ್ಯಭಿಚಾರ ಮಾಡುವದು ಮೊದಲಾದ ಭಯಂಕರ ದುರ್ವ್ಯಸನಗಳನ್ನು ಬಿಡಿಸಿ ಸದಾಚಾರದಿಂದ ವರ್ತಿಸಲಿಕ್ಕೆ ಹಚ್ಚಿದನು.

"ದುರ್ವ್ಯಸನಿ, ದುರಾಚಾರಿ ಎಂದೆನಿಸದಿರಯ್ಯಾ! ಎನ್ನ ಲಿಂಗ ವ್ಯಸನಿ ಜಂಗಮ ಪ್ರೇಮಿ ಎಂದೆನಿಸಯ್ಯ. 'ಅವಶ್ಯ ಮನುಭೋಕ್ತವ್ಯಂ' ಎಂದೆನಿಸದಿರಯ್ಯ! ಕೂಡಲಸಂಗಮದೇವಾ ಸೆರಗೊಡ್ಡಿ ಬೇಡುವೆನು."

ಈ ವಚನವನ್ನು ನೋಡಿದರೆ ಅವನು ಕೆಟ್ಟ ವ್ಯಸನಗಳಿಗೆ ಎಷ್ಟು ತಿರಸ್ಕರಿಸುತ್ತಿದ್ದನು ಮತ್ತು ತನ್ನನ್ನು ಸನ್ಮಾರ್ಗಕ್ಕೆ ಹಚ್ಚಿಂದು ಎಷ್ಟು ದೀನಸ್ವರದಿಂದ ಬೇಡಿಕೊಳ್ಳುತ್ತಿದ್ದನು ಎಂಬುದು ತಿಳಿಯುವದು.

ಬಸವೇಶ್ವರನು ಎಲ್ಲರನ್ನೂ ಮನ್ನಿಸುವಂತೆ ಸ್ತ್ರೀಯರಿಗೆ ಯೋಗ್ಯವಾನ ಮರ್ಯಾದೆಗಳನ್ನು ಸಲ್ಲಿಸುತ್ತಿದ್ದನು. ಅವರಿಗೆ ಪುರುಷರ ಸಮಾನ ಹಕ್ಕುಗಳನ್ನು ಕೊಟ್ಟದ್ದಲ್ಲದೆ ದೇವತೆಯರ ಸ್ಥಾನವನ್ನು ಕೊಟ್ಟಿದ್ದನು. ಪರಸ್ತ್ರೀಯರನ್ನು ಅವನು ಯಾವಾಗಲೂ ತನ್ನ ಸಹೋದರಿಯರಂತೆ ಇಲ್ಲವೆ ಮಾತೆಯಂತೆ ಕಾಣುತ್ತಿದ್ದನು.

"ಎಲ್ಲಿ ನೋಡಿದಲ್ಲಿ ಮನವೆಳಿಸಿದೊಡೆ ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪರವಧುವನು ಮಹಾದೇವಿ ಎಂದು ಕಾಂಬೆನು ಕೂಡಲ ಸಂಗಮದೇವಾ."

"ನೋಡಲಾಗದು, ನುಡಿಸಲಾಗದು, ಪರಸ್ತ್ರೀಯರ ಬೇಡ, ಕಾಣಿರೋ. ತಗರ ಬೆನ್ನಲ್ಲಿ ಹರಿವ ಸೊಣಗನಂತೆ ಬೇಡ, ಕಾಣಿರೋ, ಒಂದಾಸೆಗೆ ಸಾಸಿರ ವರುಷ ನರಕದಲ್ಲದ್ದುವ ಕೂಡಲಸಂಗಮದೇವಾ"

ಈ ವಚನಗಳಿಂದ ಆತನ ಪರನಾರೀ ಸಹೋದರತ್ವದ ಭಾವನೆ ತಿಳಿಯಬಹುದು. ಪರಸ್ತ್ರೀಯರನ್ನು ಕಂಡು ಮೋಹಿಸುವ ಜನರು ಬಹುದರಿಂದ ಬಸವೇಶ್ವರನು ಇದನ್ನರಿತು,

"ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದರೆ, ತುದು ಗುಣತನದಲ್ಲಿ ಪರವಧುವ ನೋಡುವ ಸರಸ ಬೇಡ ಕಾಣಿರಣ್ಣಾ. ಒಡೆಯನರಸಿಯ ಸರಸ ಬೇಡ. ಕೂಳಸೊಕ್ಕು ತಲೆಗೇರಿ, ರಾಣೇವಾಸನೊಡನೆ ಸರಸಬೇಡ. ....." ಎಂದು ವರವಧುಗಳನ್ನು ಪಾಪದೃಷ್ಟಿಯಿಂದ ನೋಡಬೇಡಿರೆಂದು ಹೇಳಿ ತಮ್ಮ ಪತ್ನಿಯರ ಕೂಡ ಸುಖದಿಂದ ಕಾಲಕಳೆಯಬೇಕೆಂದು ಬೋಧಿಸಿದನು. ಕೇವಲ ಹೆಸರಿಗೆ ಮಾತ್ರ ಬ್ರಹ್ಮಚಾರಿಗಳಂತೆ ಇದ್ದು ಕೆಟ್ಟ ವ್ಯಸನಗಳಿಗೆ ಈಡಾಗುವದಕ್ಕಿಂತ ವಿವಾಹಿತರಾಗಿ ಸದ್ವರ್ತನದಿಂದ ಇರುವದು ಲೇಸೆಂದು ಆತನು,

"ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವವು ದೋಷಂಗಳು. ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು. ಸತಿಪತಿ ರತಿ ಸುಖವ ಬಿಟ್ಟರೆ ಸಿರಿಯಾಳ ಜೆಂಗಳೆಯರು? ಸತಿಪತಿ ರತಿಸುಖ ಭೋಗೋಪಭೋಗ ಬಿಟ್ಟರೆ ಸಿಂಧು ಬಲ್ಲಾಳನವರು? ನಿಮ್ಮ ಮುಟ್ಟಿ ಪರಧನ, ಪರಸತಿಯರಿಗೆಳಸಿದರೆ, ನಿಮ್ಮ ಚರಣಕ್ಕೆ ದೂರ ಕೂಡಲ ಸಂಗಮದೇವಯ್ಯ."

ಎಂದು ಹೇಳಿ ಸದ್ಗೃಹಸ್ಥರಾಗಿ ಸದಾಚಾರದಿಂದ ವರ್ತಿಸಲಿಕ್ಕೆ ಯೋಗ್ಯ ದಾರಿಯನ್ನು ತೋರಿಸಿದನು.

ಇನ್ನು ನಿರುದ್ಯೋಗಿ ಮತ್ತು ಆಲಸ್ಯವುಳ್ಳ ಜನರಿಗೆ ಯೋಗ್ಯ ಕೆಲಸಕ್ಕೆ ಹಚ್ಚುವದು ಬಹಳ ಮಹತ್ವದ ಮತ್ತು ಕಠಿಣ ಕಾರ್ಯವಾಗಿರುತ್ತದೆ. ಆದರೆ ಬಸವೇಶ್ವರನು ಇದನ್ನು ಸಹ ಸುಲಭವಾಗಿ ತನ್ನ ನೂತನ ಬೋಧನೆಯಿಂದ ಸೆರವೇರಿಸಿದನು. ಕೆಲವರು ಕೈಗೆ ಮೈಗೆ ಹತ್ತುವ ಉದ್ಯೋಗಗಳನ್ನು ಪಾತ್ರ ಮಾಡಿ ಉಳಿದವುಗಳನ್ನು ಕೀಳು ಎಂದೂ ಅವುಗಳನ್ನು ಮಾಡುವದು ತಮ್ಮ ಮಾನ ಮರ್ಯಾದೆಗೆ ಸಾಲದೆಂದೂ ತಿಳಿದು ನಿರುದ್ಯೋಗಿಗಳಾಗುತ್ತಾರೆ. ಎಷ್ಟು ಉದ್ಯೋಗಗಳು ಅಷ್ಟೇ ಮಹತ್ವದವು ಮತ್ತು ಯಾವದೇ ಉದ್ಯೋಗ ಮಾಡಿ

ದರೂ ಸಹ ಅದು ಒಂದು ಪವಿತ್ರ ಕಾರ್ಯವೆಂದೂ ಮತ್ತು ಪ್ರತಿಯೊಬ್ಬನು ಒಬ್ಬರ ಹಂಗಿನೊಳಗಿರದೆ ತನ್ನ ಸ್ವಂತ ಶ್ರಮದಿಂದ ಗಳಿಸಿದ ಹಣವನ್ನೇ ಉಪಯೋಗಿಸಬೇಕು ಹೊರತು ಅನ್ಯರ ಧನವನ್ನು ಎಂದೆಂದಿಗೂ ಮುಟ್ಟಬಾರದೆಂದೂ ಉಪದೇಶ ಮಾಡಿದನು. ಇದರಿಂದ ಪ್ರತಿಯೊಬ್ಬನು ಒಂದೊಂದು ಉದ್ಯೋಗವನ್ನು ಮಾಡಹತ್ತಿದರು. "ಕಾಯಕವೇ ಕೈಲಾಸ" ವೆಂದು ತಿಳಿಸಿದ್ದರಿಂದ ಅವರಿಗೆ ಮೊದಲು 'ಕೀಳು' ಎನಿಸಿದ ಉದ್ಯೋಗಗಳು ಪವಿತ್ರವೆನಿಸಿ ಹೆಚ್ಚಿಗೆ ಪ್ರಚಾರದಲ್ಲಿ ಬಂದವು. ಹೀಗೆ ಬಸವೇಶ್ವರನು ಶ್ರಮದ ಸೌರವ (*Dignity of Labour*) ವನ್ನು ಆಚರಣೆಯಲ್ಲಿ ತಂದು ಜನರ ನಿರುದ್ಯೋಗತನ ಮತ್ತು ಆಲಸ್ಯತನವನ್ನು ಹೋಗಲಾಡಿಸಿದನು.

ಬಸವೇಶ್ವರನು ಸಾಮಾನ್ಯ ದಿನದ ವ್ಯವಹಾರಕ್ಕೆ ಉಪಯೋಗವುಳ್ಳ ಅನೇಕ ನೀತಿಯ ನುಡಿಗಳನ್ನು ಹೇಳಿರುವನು. ಅವುಗಳಲ್ಲಿ ಕಳವು ಮಾಡದೆ ಇರುವದು, ಸಮಾಧಾನಿಯಾಗಿರುವದು, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮೊದಲಾದ ದುರ್ಗುಣಗಳನು ಬಿಡುವದು, ದಾನ ಮಾಡುವದು, ಸಜ್ಜನರ ಸಂಗ ಮಾಡುವದು, ಹಿರಿಯರನ್ನೂ ಜ್ಞಾನಿಗಳನ್ನೂ ಮನ್ನಿಸುವದು, ಕರ್ತವ್ಯದಕ್ಷನಾಗಿರುವದು, ಬಡತನದಲ್ಲಿ ಧೈರ್ಯಗುಂದದೆ ಇರುವದು—ಇವೇ ಮೊದಲಾದ ಅನೇಕ ಉಪಯುಕ್ತ ಸಂಗತಿಗಳನ್ನು ಬೋಧಿಸಿದ್ದಾನೆ. ಮಾದರಿಗಾಗಿ ಕೆಳಗಿನ ವಚನವನ್ನು ನೋಡಬಹುದು.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಬಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ."

ಬಸವೇಶ್ವರನು ಜನರ ಡಾಂಭಿಕತನವನ್ನೂ ಬಿಡಿಸಲಿಕ್ಕೆ ಬಹಳ ಪ್ರಯತ್ನಿಸಿದನು. ಕೆಲವರು ಜನರ ತೋರಿಕೆಗೆ ಮಾತ್ರ ಬಹಳ ಹೊತ್ತು ಶಿವಪೂಜೆಗೆ ಕೂಡ್ರುವದು, ಪತ್ರಿಯ ದಳಗಳನ್ನು ಅತಿಶಯವಾಗಿ ಉಪಯೋಗಿಸುವದು, ಹೆಚ್ಚಾಗಿ ರುದ್ರಾಕ್ಷಿಗಳನ್ನು ಧರಿಸುವದು, ಢಾಳವಾಗಿ ವಿಭೂತಿಯನ್ನು ವಿವಿಧ ರೀತಿಯಿಂದ ಧರಿಸುವದು, ದೊಡ್ಡ ದೊಡ್ಡ

ಪುಸ್ತಕಗ್ರಂಥಗಳನ್ನು ಓದುವದು ಮೊದಲಾದ ಕಾರ್ಯಗಳನ್ನು ಮಾಡುತ್ತಿರಲಿ. ಆದರೆ ಅವರ ಮನಸ್ಸು ಬೇರೆ ಕಡೆಗೆ ಇದ್ದು ಅವು ಮುಗಿದ ಮೇಲೆ ಮತ್ತೆ ದುಷ್ಟ ಕಾರ್ಯಗಳನ್ನು ಪ್ರಾರಂಭಿಸುವರು. ಇವುಗಳನ್ನು ಜ್ಞಾನಿಯಾದ ಬಸವೇಶ್ವರನು ತಿಳಕೊಂಡು ಇಂಥ ಡಂಭಾಚಾರಗಳುಳ್ಳ ಕಾಮಸ ಶಿವಪೂಜೆಯು ಅವಶ್ಯವಿಲ್ಲ ಮತ್ತು ಅದರಿಂದ ಯಾವ ಪ್ರಯೋಜನವೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದನು. ಅತನ ಕೆಳಗಿನ ವಚನಗಳಿಂದ ಈ ಮಾತು ಒಡೆದು ಕಾಣುವದು.

"ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ, ಹಲವು ಪರಿಯಲಿ ವಿಭೂತಿಯ ಧರಿಸಿ, ಗಣಾಡಂಬರದ ನಡುವೆ ನಲಿನಲಿದಾಡಿ, ಉಂಡು ತಂಬುಲಗೊಂಡು ಹೋಹುದಲ್ಲ! ತನು ಮನ ಧನವ ಸಮರ್ಪಿಸದವರ ಕೂಡಲಸಂಗಮದೇವನೆಂತೊಲಿವ?"

"ಬಂಡಿ ತುಂಬಿದ ಪತ್ರಿಯ ತಂದು, ಕಂಡಕಂಡಲ್ಲಿ ಮಜ್ಜನಕ್ಕೆರೆ ವಿರಯ್ಯ. ತಾಪತ್ರಯವ ಕಳೆದು ಪೂಜಿಸಿ. ತಾಪತ್ರಯವ ಲಿಂಗನೊಲ್ಲ. ಕೂಡಲಸಂಗಮದೇವ ಬರಿಯುದಕವಲ್ಲಿ ನಸೆವನೆ?"

"ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು. ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ. ಉಂಬುವ ಜಂಗಮ ಬಂದರೆ ನಡೆ ಎಂಬರು. ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯಾ! ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನ ಮಾಡಿದರೆ ಕಲ್ಲ ತಾಗಿದ ಮಿಟ್ಟಿಯಂತಿಪ್ಪರಯ್ಯಾ."

ಕೊನೆಗೆ ಬಸವೇಶ್ವರನು ಉಪದೇಶ ಮಾಡುವ ಮಹಾತ್ಮರಿಗೂ ಒಂದು ಉಪದೇಶದ ಮಾತನ್ನು ಹೇಳಿದ್ದಾನೆ. ಈ ಜಗತ್ತಿನಲ್ಲಿ ಉಪದೇಶ ಮಾಡುವವರೇ ಬಹಳ ಜನರು. ಆದರೆ ಅವರೇ ಸ್ವತಃ ಆ ಉಪದೇಶದಂತೆ ನಡೆಯುವರೋ ಇಲ್ಲವೋ ಸಂಶಯದ ಮಾತು. ಆದುದರಿಂದ ಬಸವೇಶ್ವರನು,

"ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯವರ ಮುಖಕ್ಕೆ ಅಳುವರ ಮೆಚ್ಚ ಕೂಡಲಸಂಗಮದೇವಾ."

ಎಂದು ಹೇಳಿದನು. ಜಗತ್ತಿಗೆ ಉಪದೇಶ ಮಾಡುವ ಹಂಬಲವುಳ್ಳವರು ಮೊದಲು ತಮ್ಮ ದೋಷಗಳನ್ನು ತಿದ್ದಿಕೊಂಡು ನಿರ್ದೋಷಿಗಳಾಗಿ ಈ ಕೆಲಸದಲ್ಲಿ ಕೈಹಾಕಬೇಕು. ಪ್ರತಿದಿವಸ ಸಾವಿರಾರು ಪಾಪಗಳನ್ನು ಮಾಡುವಂಥವರು ಎಂದಾದರೂ ಇಂಥ ಕಾರ್ಯಕ್ಕೆ ಯೋಗ್ಯರೇ? ಜಗತ್ತಿಗೆ ಉಪದೇಶ ಮಾಡುವ ಕಾರ್ಯವು ದೊಡ್ಡ ದೊಡ್ಡ ಮಹಾತ್ಮರದು. ಅವರು ಅದನ್ನು ಮಾಡಿಯೇ ಮಾಡುವರು. ನಮ್ಮನ್ನು ನಾವು ತಿದ್ದಿಕೊಂಡು ಇದ್ದರೆ ಹೆಚ್ಚಿನ ಕಾರ್ಯ ಮಾಡಿದಂತಾಗುವದು.

ಹೀಗೆ ಅನೇಕ ನೀತಿಯ ತತ್ವಗಳನ್ನು ಉಪದೇಶ ಮಾಡಿದರೂ ಕೂಡ ಬಸವೇಶ್ವರನು, ತಾನು ಪರಿಪೂರ್ಣನು, ನಿರ್ದೋಷಿಯು ಎಂದು ಎಂದಿಗೂ ಹೇಳಿಕೊಂಡಿಲ್ಲ. ಅವನೂ ಕೂಡ ಸಾಮಾನ್ಯ ಮನುಷ್ಯರಂತೆ ಕಷ್ಟದಿಂದ ಬಳಲಿ ಬೆಂಡಾಗಿ ದೇವರನ್ನು ಮೊರೆಹೊಕ್ಕು ಹೀಗೆ ಬೇಡಿಕೊಂಡಿದ್ದಾನೆ.

"ಸಂಸಾರವೆಂಬ ಸರ್ಪ ಮುಟ್ಟಲು, ಪಂಚೇಂದ್ರಿಯ ವಿಷಯವೆಂಬ ವಿಷದಿಂದ ಆನು ಮುಂದುಗೆಟ್ಟಿನಯ್ಯಾ! ಆನು ಹೊರಳಿ ಬೀಳುತ್ತಿದ್ದೆನಯ್ಯಾ! 'ಓಂ ನಮಃ ಶಿವಾಯ' ಎಂಬ ಮಂತ್ರವ ಜಪಿಸುತ್ತಿದ್ದೆನಯ್ಯಾ ಕೂಡಲಸಂಗಮದೇವಾ"

"ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನಬಾಳುವೆ. ಸಂಸಾರಸಂಗವ ಬಿಡದು ನೋಡೆನ್ನ ಮನವು. ಈ ನಾಯಿತನವ ಮಾಣಿಸು, ಕೂಡಲಸಂಗಮದೇವ ನಿಮ್ಮ ಧರ್ಮ"

"ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ! ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ. ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ. ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ."

ಒಟ್ಟಿನ ಮೇಲೆ ಬಸವೇಶ್ವರನು ತನ್ನ ಮೃದುಮಧುರವಾದ ನುಡಿಗಳಿಂದ ನೀತಿಯ ಸೊಬಗನ್ನೂ ಮೇಲ್ಮೆಯನ್ನೂ ಸಾಮಾನ್ಯರೆಲ್ಲರಿಗೂ ತಿಳಿಯುವಂತೆ ತಿಳಿಸಿದ್ದಾನೆ. ಸಜ್ಜನರ ಸಹವಾಸದಲ್ಲಿದ್ದಂತೆ ದುಷ್ಟರ ದುರಾಚಾರಿಗಳ ಗುಂಪಿನೊಳಗೂ ಸೇರಿ, ಎಂಥ ಕಠಿಣ ಎಡರುಗಳು

ಬಂದರೂ ಸಹ ಶಾಂತರೀತಿಯಿಂದ ತಾಳಿಕೊಂಡು, ಒವರ ಬಲಿಸಿ ಒಳಗಾಗಿ, ಅವರಿಗೆ ಮೃದು ವಚನಗಳಿಂದ ಅಂತಃಕರಣ ಕರಗುವಂತೆ ದೀನಸ್ವರದಿಂದ ಬೇಡಿಕೊಂಡು, ಅವರ ಅಜ್ಞಾನವನ್ನು ಹೊಡೆದೋಡಿಸಿ ಜ್ಞಾನವಂತರನ್ನಾಗಿಮಾಡಿ ಸನ್ಮಾರ್ಗಕ್ಕೆ ಹಚ್ಚಿ ಸಮಾಜದಲ್ಲಿ ಅವರಿಗೆ ಒಂದು ಸ್ಥಾನವನ್ನು ಒದಗಿಸಿಕೊಟ್ಟದ್ದನ್ನು ನೋಡಿದರೆ ಬಸವೇಶ್ವರನು ನಿಜವಾಗಿಯೇ ಒಬ್ಬ ಶ್ರೇಷ್ಠ ನೀತಿತತ್ವ ಬೋಧಕನು ಎಂದು ಸ್ಪಷ್ಟವಾಗುವದು.

ವೀರಶೈವರ ಚರಿತ್ರೆ
ಅದರ ಶುದ್ಧತೆ ಮತ್ತು ಭದ್ರತೆ.

(ಲೇಖಕ:-- ಜೀರಿಗೆ ಕ ಬಸವಪ್ಪ ಬಿ. ಎ, ಬೆಂಗಳೂರ ನಗರ)

ಯಾವ ಜನಾಂಗಕ್ಕೇ ಆಗಲಿ ಚರಿತ್ರೆಯು ಒಂದು ಅಮೂಲ್ಯವಾದ ಮತ್ತು ಪವಿತ್ರವಾದ ನಿಧಿಯಾಗಿದೆ. ಜನಾಂಗದ ಐಕ್ಯತೆಗೂ ಮತ್ತು ಅದರ ಅಭಿವೃದ್ಧಿಗೂ ಚರಿತ್ರೆಯು ಮೂಲಕಾರಣವಾಗಿದೆ. ನಮ್ಮ ಜನಾಂಗದಲ್ಲಿ ಹಿಂದೆ ಇಂಥಿಂಥ ಮಹಾ ಮಹಾ ವಿಭೂತಿಗಳು, ವೀರರು, ಯೋಧರು, ಸಾಹಿತಿಗಳು, ಸಾಹಸಿಗಳು ಬದುಕಿ ಬಾಳಿ ಹೋದರೆಂದು ಕೇಳಿದರೆ ನಮ್ಮಲ್ಲಿ ಒಂದು ತೆರನಾದ ಅಭಿಮಾನವು ಅಂಕುರಿಸುವುದು. ನಾವೂ ಅವರಂತೆ ಮಹತ್ಕಾರ್ಯಗಳನ್ನು ಮಾಡಬೇಕೆಂದೆನಿಸುವುದು. ಅಡಗಿರುವ ಶಕ್ತಿಯು ಸ್ಫುರಣಹೊಂದುವುದು. ಸಾಹಸವು ಮೈದೋರುವುದು. ಪರಿಣಾಮವಾಗಿ ಮಹತ್ಕಾರ್ಯಗಳು ನಡೆಯುವುವು. ಇವೆಲ್ಲಕ್ಕೂ ಮೇಲೆ ಹೇಳಿದಂತೆ ಚರಿತ್ರೆಯೇ ಕಾರಣವಾಗಿದೆ. ಆದ್ದರಿಂದ ನಾವು ನಮ್ಮ ಚರಿತ್ರೆಯನ್ನು ಭದ್ರಪಡಿಸಿ ಅದನ್ನು ತಲೆತಲಾಂತರಕ್ಕೂ ಸಾಗಿಸಿಕೊಂಡು ಹೋಗಬೇಕಾಗಿದೆ. ಚರಿತ್ರೆಯು ಎಷ್ಟು ಶುದ್ಧವಾಗಿರುವುದೋ ಅಷ್ಟೂ ಅದು ಪವಿತ್ರವೂ ಅಮೂಲ್ಯವೂ ಆಗಿರುವುದು. ಚರಿತ್ರೆಯನ್ನು ಯಾವ ರೀತಿಯಲ್ಲೂ ಯಾವ ಕಾರಣಕ್ಕೂ ಮಾರ್ಪಡಿಸಬಾರದು. ಹಾಗೆ ಮಾರ್ಪಡಿಸುವುದು ಬಹು ತಪ್ಪಿನ ಕೆಲಸ. ಅದೊಂದು ಪಾಪಕರ್ಮವೆಂದೇ ಹೇಳಬೇಕಾಗುವುದು.

ಜಗತ್ತಿನ ಚರಿತ್ರಪ್ರಸಿದ್ಧಗಳಾದ ಕ್ರಿಶ್ಚಿಯನ್ ಇಸ್ಲಾಂ ಮೊದಲಾದ ಮತಗಳಂತೆ ವೀರಶೈವ ಅಥವಾ ಲಿಂಗಾಯತ ಮತವೂ ಒಂದು ಚರಿತ್ರಪ್ರಸಿದ್ಧ ಮತವಾಗಿದೆ. ವೀರಶೈವ ಮತದ ಚರಿತ್ರೆಯು ಪ್ರಬಲವಾದುದೂ ಅಲ್ಲದೆ ಪವಿತ್ರವಾದುದೂ ಆಗಿದೆ. ಶರಣರ ವೀರತ್ಯಾಗವೇ ಇದಕ್ಕೆ ಕಾರಣವಾಗಿದೆ. " *The blood of Saints is the future seed* " ಎಂಬ ಉಕ್ತಿಯಂತೆ ಶರಣರು ತಮ್ಮ ಯಾವತ್ತು ತನುಮನಧನಗಳನ್ನು ಲೋಕೋದ್ಧಾರಕ್ಕಾಗಿ ಧಾರೆ ಎರೆದು ಒಂದು

ಉನ್ನತ ಚರಿತ್ರೆಯನ್ನು ಕಟ್ಟಿದ್ದಾರೆ. ಇಂತಹ ಪವಿತ್ರ ಚರಿತ್ರೆಯನ್ನು ಸಾಧಿಸಿಕೊಂಡು ಬರತಕ್ಕದ್ದು ನಮ್ಮ ಬದ್ಧ ಕರ್ತವ್ಯವಾಗಿದೆ.

ಆದರೆ ವೀರಶೈವ ಮತದ ದುರ್ದೈವದಿಂದಲೋ ಏನೋ ಅದರ ಚರಿತ್ರೆಯ ರಕ್ಷಣೆಯ ಕಡೆಗೆ ವೀರಶೈವ ಮತಾನುಯಾಯಿಗಳು ಹೆಚ್ಚು ಲಕ್ಷಕೊಟ್ಟಂತೆ ಕಾಣುವದಿಲ್ಲ. ಅದಕ್ಕೆ ಬದಲು ವೀರಶೈವ ಮತದ ಚರಿತ್ರೆಯನ್ನು ಮನಸ್ಸಿಗೆ ಬಂದಂತೆ ಬದಲಾಯಿಸಲು ಪ್ರಯತ್ನಗಳು ಹಿಂದೆಯೂ ನಡೆದಿರುವುವಲ್ಲದೆ ಈಗಲೂ ಅಲ್ಲಲ್ಲಿ ನಡೆಯುತ್ತಿರುವುವಾಗಿ ಕಂಡುಬರುತ್ತದೆ. ಈ ಎಲ್ಲ ಬದಲಾವಣೆಗಳಿಗೂ ಚಾರಿತ್ರ ಪ್ರಮಾಣಗಳು ಆಧಾರವಾಗಿರದೆ ಯಾವುದೋ ಒಂದು ವಿಜಾತೀಯ ಅಭಿಮಾನವೋ ಇಲ್ಲವೇ ಸ್ವಾರ್ಥಸಾಧನೆಯೋ ಆಧಾರವಾಗಿರುವುದರಿಂದ ವೀರಶೈವ ಬಾಂಧವರು ಈ ವಿಚಾರವಲ್ಲಿ ಬಹಳ ಯೋಚಿಸಬೇಕಾಗಿರುವುದಲ್ಲದೆ ಇನ್ನು ಮುಂದೆಯಾದರೂ ಇಂಥ ಬದಲಾವಣೆಗಳು ನಡೆಯದಂತೆ ಎಚ್ಚರಿಕೆಯಿಂದಿರತಕ್ಕದ್ದು ಅವಶ್ಯಕವಾಗಿದೆ.

ಪ್ರಕೃತ ಈ ಲೇಖನದಲ್ಲಿ ಈ ವಿಚಾರದಲ್ಲಿ ಕೆಲವು ಎಚ್ಚರಿಕೆಗಳನ್ನು ಸೂಚಿಸಿದ್ದೇನೆ. ಈ ಎಚ್ಚರಿಕೆಗಳು ಎಲ್ಲರ ಮನಸ್ಸಿನಲ್ಲಿಯೂ ಮೂಡಿ ಸತ್ಪರಿಣಾಮವನ್ನುಂಟುಮಾಡಲೆಂದು ಬಯಸುತ್ತೇನೆ.

ಚರಿತ್ರೆಯ ಶುದ್ಧತೆ ಭದ್ರತೆಗಳು ಈ ಶತಮಾನವಲ್ಲಂತೂ ಬಹುಮಟ್ಟಿಗೆ ಗ್ರಂಥಪ್ರಕಾಶಕರನ್ನೇ ಅವಲಂಬಿಸಿವೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇದರಿಂದ ಗ್ರಂಥಪ್ರಕಾಶಕರ ಕೆಲಸವು ಎಷ್ಟರ ಮಟ್ಟಿನ ಜವಾಬ್ದಾರಿಯ ಕೆಲಸವಾಗಿದೆ ಎಂಬುದು ಸುಲಭವಾಗಿ ಅರ್ಥವಾಗುವದು. ಗ್ರಂಥಪ್ರಕಾಶಕರು ಸತ್ಯಸ್ಫೋಷಿಗಳೂ, ಪ್ರಮಾಣಿಕರೂ, ನಿರ್ದಾಕ್ಷಿಣ್ಯ ಬುದ್ಧಿಯುಳ್ಳವರೂ ಆಗಬೇಕು. ಪಕ್ಷಸಾಧಕರಾಗಬಾರದು. ಇದ್ದದ್ದನ್ನು ಇದ್ದಂತೆಯೇ ಹೇಳುವ ಎದೆಗಾರಿಕೆ ಅವರಿಗೆ ಇರಬೇಕು. ಚಾರಿತ್ರ ಪ್ರಮಾಣಗಳು ವಿಪುಲವಾಗಿ ಸಿಗದಿರುವ ನಮ್ಮ ಭರತಖಂಡದಲ್ಲಂತೂ ಗ್ರಂಥಪ್ರಕಾಶಕರ ಜವಾಬ್ದಾರಿಯು ಬಹಳ ಭಾರವಾಗಿದೆ. ಗ್ರಂಥಗಳ ಮೂಲ ಪಾಠದ ಒಂದೊಂದು ಅಕ್ಷರವೂ ಎಷ್ಟೋ ಪ್ರಮಾಣವಾಗಿ ಕಂಡುಬರುತ್ತದೆ. ಗ್ರಂಥಕರ್ತನು ಸ್ತುತಿಸಿರುವ ಕವಿಗಳೇ ಮೊದಲಾದವರ ಹೆಸರುಗಳಿಂದಲೇ ಎಷ್ಟೋ ಕಡೆಗಳಲ್ಲಿ ಗ್ರಂಥ

ಕರ್ತನ ಕಾಲನಿರ್ಣಯ ಮಾಡಬೇಕಾಗಿದೆ. ಒಕ್ಕಣಿಕೆಗಳು, ವ್ಯಾಕರಣದ ಜೋಡಣೆಗಳು, ಶಬ್ದಪ್ರಯೋಗಗಳು, ಶೈಲಿ ಇವುಗಳಿಂದ ನಮಗೆ ಎಷ್ಟೋ ಚರಿತ್ರಾಂಶಗಳು ಗೊತ್ತಾಗುತ್ತವೆ. ಆದ್ದರಿಂದ ಗ್ರಂಥಪ್ರಕಾಶಕರು ಪೂರ್ವ ಗ್ರಂಥಗಳನ್ನು ಬಹು ಎಚ್ಚರಿಕೆಯಿಂದ ಇದ್ದಕ್ಕಿದ್ದಂತೆಯೇ ಪ್ರಕಟಿಸಬೇಕಾಗಿದೆ. ಅಂದಚಂದಕ್ಕಾಗಿಯೋ ಇಲ್ಲವೇ ಯಾವುದೋ ಒಂದು ಅಭಿಮಾನದಿಂದಲೋ ಗ್ರಂಥಗಳನ್ನು ತಿದ್ದಿ ಮುದ್ರಿಸಬಾರದು. ಇದರಿಂದ ಚರಿತ್ರೆಗೆ ಭಂಗಬರುವುದು. ಒಂದು ವೇಳೆ ತಿದ್ದುವುದು ಅನಿವಾರ್ಯವಾಗಿ ಕಂಡುಬಂದಲ್ಲಿ ಅಡಿಟಿಪ್ಪಣಿಯನ್ನು ಬರೆದು ಮೂಲ ಪಾಠವನ್ನು ಕಾಣಿಸುವುದೂ ಅಲ್ಲದೆ ತಿದ್ದಿಕೆಗೆ ಕಾರಣವನ್ನೂ ತೋರಿಸಬೇಕು.

ವೀರಶೈವ ಬಾಂಧವರೇ! ಮೇಲ್ಕಂಡ ಕಾರಣಗಳಿಂದ ಗ್ರಂಥಪ್ರಕಾಶನ ವಿಷಯದಲ್ಲಿ ನಾವು ಬಹಳ ಎಚ್ಚರದಿಂದಿರಬೇಕೆಂಬುದು ವಿದಿತವಾಗುತ್ತದೆ. ಗ್ರಂಥಗಳೇ ನಮ್ಮ ಪ್ರಾಣವಾಗಿವೆ. ನಮ್ಮ ವೀರಶೈವ ಧರ್ಮವೂ ಇಂದಿಗೂ ದಿಟ್ಟತನದಿಂದ ನಿಂತಿರುವುದು ಕೇವಲ ಗ್ರಂಥಗಳ ಆಧಾರದಿಂದಲೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಗ್ರಂಥಗಳು ಶಿಥಿಲವಾಗುತ್ತ ಬಂದಲ್ಲಿ ನಮ್ಮ ಧರ್ಮವೂ ಶಿಥಿಲವಾಗುತ್ತ ಬರುವುದು. ಧರ್ಮವು ಶಿಥಿಲವಾಗುತ್ತ ಬಂದಲ್ಲಿ ನಮ್ಮ ಸಮಾಜವೂ ಶಿಥಿಲವಾಗುತ್ತ ಬಂದು ಕೆಲವು ದಿನಗಳಲ್ಲೇ ಹೇಳಹೆಸರಿಲ್ಲದಂತಾಗುವುದರಲ್ಲಿ ಯಾವ ಸಂದೇಹವು ಇಲ್ಲ.

ಆದ್ದರಿಂದ ಬಂಧುಗಳೇ, ಗ್ರಂಥಪ್ರಕಾಶನ ವಿಷಯದಲ್ಲಿ ನಾವು ಬಹಳ ಎಚ್ಚರದಿಂದಿರಬೇಕು. ಗ್ರಂಥಗಳು ಶಿಥಿಲವಾಗದಂತೆ ನೋಡಿಕೊಳ್ಳಬೇಕು. ಗ್ರಂಥ ಶೋಧನೆಯ ಕೆಲಸದಲ್ಲಿ ಎಲ್ಲರೂ ತಕ್ಕಮಟ್ಟಿಗೆ ಪ್ರಯತ್ನಪಡಬೇಕು. ಮುಖ್ಯವಾಗಿ ನಮ್ಮ ತರುಣರು ವಿರಾಮಕಾಲಗಳಲ್ಲಿ ತಮ್ಮ ತಮ್ಮ ಪ್ರಾಂತಗಳಲ್ಲಿ ಸಂಚಾರಮಾಡಿ ಗ್ರಂಥಗಳನ್ನು ಶೋಧಿಸಿ ಅವುಗಳನ್ನು ಪ್ರಕಾಶಕರ ಕಡೆಗೆ ಕಳಿಸಿಕೊಟ್ಟು ಅವುಗಳನ್ನು ಇದ್ದಕ್ಕಿದ್ದಂತೆಯೇ ಪ್ರಕಟಿಸುವ ಏರ್ಪಾಡು ಮಾಡಬೇಕು. ಪುರಾತನ ಗ್ರಂಥಗಳನ್ನು ಇದ್ದಕ್ಕಿದ್ದಂತೆಯೇ ಪ್ರಕಟಿಸುವುದು ಒಂದು ಮಹತ್ತರವಾದ ಸಮಾಜಸೇವೆ ಎಂಬುದನ್ನು ಸರ್ವರೂ ನೆನಪಿನಲ್ಲಿಡಬೇಕು. ಈ

ರೀತಿಯಲ್ಲಿ ನಾವೆಲ್ಲರೂ ಎಚ್ಚರದಿಂದಿದ್ದರೆ ಗ್ರಂಥಪ್ರಕಾಶಕರೂ ಎಚ್ಚರದಿಂದಿರುತ್ತಾರೆ. ಎಚ್ಚರದಪ್ಪಿದರೆ ತಮಗೆ ಬೇಕಾದ ಹಾಗೆ ವರ್ತಿಸುತ್ತಾರೆ. ಹಾಗೆ ಮಾಡಿದಲ್ಲಿ ಮೇಲೆ ಹೇಳಿದಂತೆ ಗ್ರಂಥಗಳು ಮಾಪಾರ್ಡಾಗುವುದಲ್ಲದೇ ಇತಿಹಾಸವೂ ಧರ್ಮವೂ ಮಾಪಾರ್ಡಾಗಿ ನಮ್ಮ ವೀರಶೈವ ಸಮಾಜವು ಇಲ್ಲವೇ ಕುರೂಪಿಯಾಗುವುದು ಇಲ್ಲವೇ ನಿರ್ನಾಮವೇ ಆಗುವುದು. ಆದ್ದರಿಂದ ಬಂಧುಗಳೇ, ಗ್ರಂಥಪ್ರಕಾಶನ ವಿಷಯದಲ್ಲಿ ಎಚ್ಚರಿಕೆ! ಎಚ್ಚರಿಕೆ! ಎಚ್ಚರಿಕೆ!

ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳ ಹಾಡು ಗಬ್ಬಗಳು.

(ಸಂಗ್ರಾಹಕರು:— ಶ್ರೀ ಚಂದ್ರಶೇಖರದೇವರು ಅಡ್ನೂರ)

ಜಾನೇವರಿ ೧೯೩೮ನೇ ಸಂಚಿಕೆಯಿಂದ ಮುಂದೆವರಿದದ್ದು.

ನಿರದೆ ಬೋಧಿಸಿ ಶಿಷ್ಯ ಭಕ್ತರನುದ್ಧರಿಸಿ।
ಚರತಿಂಥಿಣಿಯೊಳಾಡಿ ಗುರುವೆನಿಪ ಚರವರಗೆ ॥

೩

ಪಾಪ ಪುಣ್ಯಗಳ ಮೀರಿ ಸ್ವಾತಂತ್ರ್ಯದಿ।
ಕೋಪಾದಿ ಗುಣವ ತೂರಿ ॥
ತಾಪಗೊಳ್ಳದೆ ಜಗಜ್ಜಾಲವ ಧಿಕ್ಕರಿಸಿ।
ಕಾಪಟ್ಯವಳಿದು ಶಿವ ತಾನಹ ಪರತರಗೆ ॥

೪

ಅಷ್ಟಾವರಣವ ಸಾಧಿಸಿ ಸದ್ಭಕ್ತಿಯಿಂ।
ಶಿಷ್ಟ ಚರವರನೆನಿಸಿ ॥
ಶ್ರೇಷ್ಠ ಪ್ರಮಥನಾಮ ಪ್ರೇಮದಿಂದುಚ್ಚರಿಸಿ।
ಕಷ್ಟತರದ ಮಾಯೆಯನು ಗೆಲಿದ ಯತಿವರಗೆ ॥

೫

ಸಚ್ಚಿದಾನಂದವೆನಿಪ ಅಥಣೀಪುರಿ।
ಗಚ್ಚಿನಮಠ ಮುಂಟಪ ॥
ಅಚ್ಚರಿಗೊಳಿಪ ಷಟ್‌ಸ್ಥಲ ಬ್ರಹ್ಮವಾಸದಿಂ।
ಬಿಚ್ಚಿ ಬೇರಿರಿಸಿದ ಮುರುಘ ಶಿವಯೋಗಿಗೆ ॥

ಮುಂಗಲ ೨೦

(ರಾಗ– ಜಂಗಲ್)

ಮುಂಗಳಾರತಿಯನು ನಾನು ಎತ್ತಿ ಪಾಡುವೆ।
ಪೊಂಗಿ ಶ್ರೀಗುರು ಲಿಂಗ ಜಂಗಮರನು ಬೇಡುವೆ ॥ಪ॥

೧

ತುಂಗ ಶಿವನ ಮುಖದಿ ಜನಿಸಿ। ಮುಂಗಲಾತ್ಮನಾಜ್ಞೆ ವಹಿಸಿ।
ಲಿಂಗ ಮೂರ್ತಿ ಅಂಗಗೊಳಿಸಿ। ಸಂಗ ಶರಣರ ಭೋ ಪುಂಗ ಗುರುವರ।
ಪುಂಗಗುಣವ ಕಳೆದು ಜನರ ಹಂಗು ತೊಲಗಿಸೈ ॥

೨

ಭವ್ಯ ಶಿರದ ಲಿಂಗ ಮೂರ್ತಿ। ಸೇವ್ಯ ಗುರುವರನ ಕೀರ್ತಿ!
ದಿವ್ಯ ತರದ ರೂಪವೆತ್ತಿ। ಸರ್ವ ಭಕ್ತರ ಭೋ ಗರ್ವಸಂಹರ।
ಪೂರ್ವದೋಷವನ್ನು ಕಳೆದು ಶರ್ವ ಪಾಲಿಸೈ ॥

೩

ಚೈತ್ಯತನದಿ ಗುರುವು ತಾನು। ಜೆನ್ನ ಶಿವನ ಪ್ರಾರ್ಥಿಸಿಹನು।
ಚೂನ್ಯ ಚಕ್ರ ಸ್ವಾಮಿಯಿನ್ನು। ಎನ್ನ ಪಾಲಿಸೈ ಭೋ ಮುನ್ನ ಲಾಲಿಸೈ।
ಚನ್ನಗುಣವ ಕಳೆದು ಉನ್ನತದಿ ಪೋಷಿಸೈ ॥

ಮುಂಗಲ ೨೧

(ರಾಗ– ಪೂರ್ವಿ)

ಯೋಗಿರಾಡ್ವಯ ಮುಂಗಲಂ। ಪರತರ ಶಿವ ॥ಪ॥

೧

ಲಿಂಗಾಂಗೋಭಯ ಸಂಗ ಶರಣರ ಪುಂಗ। ಅಂಗಜ ಭವ ಭಂಗ।
ಮುಂಗಲಾತ್ಮಕ ಭಕ್ತತತಿ ಹೃದ್ವಾಸನೇ ಶ್ರೀಶನೇ।
ಜಂಗಮಾರ್ಪಿತ ಸತ್ಕ್ರಿಯಾಂಗಳ ದಕ್ಷನೇ ನಿರಪೇಕ್ಷನೇ ॥

೨

ಈಡಪಿಂಗಳ ಜೋಡಿಸಿ ಹರಿದಾಡುವ। ಜೋಡಕ್ಷರವ ಕೂಡಿಸಿ।
ಕೂಡಿ ನಡು ನಾಡಿಯೊಳಡರ್ದತಿ ಶಾಂತನೇ ಕಾಂತನೇ।
ನಾಡೆ ದಶ ವಿಧ ದಿನದೊಳಗತಿ ಗುಪ್ತನೇ ಪರಮುಕ್ತನೇ ॥

೩

ಮುಂಡಲತ್ರಯದಗ್ರದಿ ದೀಪಿಸುತಿಹ। ಖಂಡ ಜ್ಯೋತಿಯ ತೆರದಿ।
ಮುಂಡಿಸಿಹ ಕುಮಾರಗುರು ಶಿವಯೋಗಿಯೇ ತ್ಯಾಗಿಯೇ।
ಕಂಡ ವಿಷಯವನೈಕ್ಯಗೊಂಡಿಹ ಧ್ಯಾನಿಯೇ ಸಂಧಾನಿಯೇ ॥

ಮುಂಗಲ ೨೨

(ರಾಗ- ಕಾಪಿ)

ರೇವಣಸಿದ್ಧ ಗುರುದೇವ। ಭಾವಜ ಹರಜೀವ।
ಓವಿನೀ ಕೊಡು ಮುಂಗಲವ ॥ಪ॥

೧

ಕಾಮುವೆನ್ನನು ಕೂಡಿ ಕಾಡಿ। ನೇಮ ಸೀಮೆಯ ಕೆಡಿಸದಾಡಿ।
ಪ್ರೇಮುದಪ್ಪಿಯು ಭವದೊಳು ನೂಂಕುವ।
ನೀ ಮನಸಿಜನನು ಬಿಡಿಸು ಬೇಗ ॥

೨

ದುಷ್ಟವಾಸನೆಗಳ ಬಲದಿಂದ। ಭ್ರಷ್ಟ ಕಾಮನತಾಚ್ಛಲದಿಂದ।
ಮುಟ್ಟಿ ಕೊರಗಿಪೆ ದುರ್ವಾಸನೆಯ।
ಕುಟ್ಟಿ, ವರಸುಖವ ಕೊಡು ಜವದಿ ॥

೩

ಅಂಗಹೀನನ ಸೇವೆಯ ಬಿಡಿಸಿ। ಲಿಂಗದೇವನ ಪೂಜೆಯ ಹಿಡಿಸಿ।
ಕಂಗಳಾಲಯನೀಕ್ಷಿಸು ಭಾವದಿ।
ಮುಂಗಲಮಯನೆನಿಸೋ ಯತಿವರ ॥

ಮುಂಗಲ ೨೩

(ರಾಗ- ದೇಸ್)

ಕೊಡು ಮುಂಗಲವನು ಬೇಗನೆ ಶಿವನೆ ನೀನಿದನು।
ಭವರೋಗವನು, ತನೆಹರಿಪುದನು ಸುವಿಲಾಸದೊಳು ॥ಪ॥

೧

ಘೋರವೆನಿಪವೃತ್ತಿ। ಸಾರಿ ಕಾಡುವದತಿ।
ಕ್ರೂರತನದಿ ಮುತ್ತಿ। ಗಾರುಗೊಳಿಸಿ ಶಾಂತಿ।
ಪೂರವಳಿದು ಗತಿ। ಸೇರದಿರುವೆ ॥

೨

ಮುತ್ತಿ ತಾಮಸವದು। ವೃತ್ತಿ ಮೂಢವದು।
ಚಿತ್ತದಾವರಣದು। ಸತ್ಯ ಬ್ರಹ್ಮವ ಮರೆದು।
ಅತ್ತಿತ್ತ ಲೋಗದಂತೆ। ಸುತ್ತಿಕೊಂಡಿರುವೆ ॥

೩

ಆಂತು ಸತ್ಸಂಗವನು। ಕಂತು ಮರ್ದನನನು।
ಚಿಂತಿಸುತ್ತಿರುವದನು। ಭ್ರಾಂತಿ ನೀಗಿರುವದನು।
ಕಾಂತಿ ಹೊಂದುವದನು। ಇಂತು ಬೇಡುವೆ ॥

ಶತಕತ್ರಯವು.

ಲೇಖಕ—ಮುರಿಗೆಪ್ಪ ಸಿದ್ದಪ್ಪ ಗುದ್ದದ ವಿಜಾಪುರ

ಇದರಲ್ಲಿ ಶಿವಾಧವ, ಶಿವಾವಲ್ಲಭ, ಮಹದೈಪುರೀಶ್ವರ, ಎಂಬ ಮೂರು ಶತಕಗಳಿರುವದರಿಂದ ಇದಕ್ಕೆ "ಶತಕತ್ರಯ" ವೆಂಬ ಹೆಸರು ಬಂದಿದೆ. ಕ್ರಮವಾಗಿ ಆ ಮೂರೂ ಶತಕಗಳಲ್ಲಿಯೂ ವೀರಶೈವಾಗ ಮೋಕ್ತಮರ್ಯಾದೆಯನ್ನನುಸರಿಸಿ ಭಕ್ತಿ ಜ್ಞಾನ ವೈರಾಗ್ಯಗಳ ಲಕ್ಷಣವು ನಿರೂಪಿಸಲ್ಪಟ್ಟಿರುವದು. ವೀರಶೈವ ಕವಿಗಳು ಅನೇಕ ಶತಕಗಳನ್ನು ರಚಿಸಿರುವರು. ಅವುಗಳಲ್ಲಿ ಭಕ್ತಿ ಮತ್ತು ನೀತಿ ಪ್ರಧಾನವಾದವುಗಳೇ ಹೆಚ್ಚು. ಆದರೆ ಈ ಶತಕತ್ರಯವು ವೀರಶೈವ ಧರ್ಮಾಚರಣೆಯ ಶಾಸ್ತ್ರ ದಂತಿರುವದು. ಆದುದರಿಂದ ಇದು ವೀರಶೈವ ಮತದತಿಳಿವಳಿಕೆಗೆ ಯೋಗ್ಯ ವಾದ ಗ್ರಂಥವಾಗಿರುವದು.

ಕೆಲಕೆಲವು ಕಡೆಗೆ ಈ ಗ್ರಂಥದ ವಿಚಾರ ಸರಣಿಯು ಬಹು ಮನೋಹರವಾಗಿರುವದು. ಮೊದಲು ವಿಚಾರವನ್ನು ಹೊರಡಿಸಿ ಅದಕ್ಕೆ ಸಂಶಯತೆಗೆದುಕೊಂಡು ಸಹಜವಾಗಿ ತಿಳಿಯುವ ಉಪಮಾನಗಳಿಂದ ನಿರ್ಣಯವನ್ನು ಹೇಳಿದ್ದಾರೆ. ಆದುದರಿಂದ ಓದುಗರು ಯಾವದಾದ ರೊಂದು ಪದ್ಯವನ್ನು ಓದಿ ನಿರ್ಣಯವನ್ನು ಹೇಳಹೋದರೆ ಕವಿಯ ನಿಜವಾದ ವಿಚಾರವು ತಿಳಿಯದು. ಆದರೆ ಒಂದು ವಿಚಾರಕ್ಕೆ ಸಂಬಂಧ ಪಟ್ಟ ಎಲ್ಲ ಪದ್ಯಗಳನ್ನು ಓದಿದರೆ ಕವಿಯ ನಿಜವಾದ ಅಭಿಪ್ರಾಯವು ಮನದಲ್ಲಿ ಬಿಂಬಿಸುವದು.

ಮುಗ್ಗೆಯ ಮಾಯಿದೇವರ ಚರಿತೆ

ಇದನ್ನು ರಚಿಸಿದವರು ಶ್ರೀ ಮುಗ್ಗೆಯಮಾಯಿದೇವರು. ಇವರು ಐಪುರ ಅಂದರೆ ವಿಜಾಪುರ ಜಿಲ್ಲೆಗೆ ಸೇರಿದ ಐಹೊಳಿಯವರು. ಇವರ ಕಾಲಮಾನದ ವಿಷಯವಾಗಿಯೂ ಇವರು ಬರೆದಿರುವ ಗ್ರಂಥದ ವಿಷಯ ವಾಗಿಯೂ ಶ್ರೀ ವಿರೂಪಾಕ್ಷ ಪಂಡಿತರು ತಮ್ಮ ಚೆನ್ನಬಸವಪುರಾಣ ದಲ್ಲಿ ಹೇಳಿರುವ ವಿವೇಚನೆಯಿಂದ ಸ್ಪಷ್ಟೀಕರಿಸಿದ್ದು ಯೋಗ್ಯವಾಗಿದೆ. ಚನ್ನಬಸವಪುರಾಣದ ೫ ನೆಯಕಾಂಡದ ೧೦ ನೆಯಧ್ಯಾಯದಲ್ಲಿ.

"ಎಲೆರಾಮ ಕೇಳಿನ್ನು ಸಕಲಾಗಮುಂಗಳಿಗೆ, ನೆಲೆಯೆನಿಸಿ ಪ್ರೌಢ
ನಿಂಪೂಜೆಯುಂಕೊಂಡುಷ। ಟ್ಸ್ಥಲಮಾರ್ಗಮುಂ ಸಕಲ ಶಿವಭಕ್ತಸಂತ
ತಿಗೆ ಕರತಳಾಮಳಕಮಾಗಿ॥ ತಿಳಿವೊಲನುಭವ ಸೂತ್ರವಾದಿ ಶಾಸ್ತ್ರಂಗಳಂ।
ನಲವಿನಿಂ ಪೇಳ್ದು ನಿಜ ಶಿವಸಮಾಧಿಯಲಿ ಮಿಗೆ। ನಲವಿನಿಂದಲ್ಲಿ
ಮುಗ್ಗೆ ಮಾಯಿದೇವ ಪ್ರಭುವರನಿರವೆ ಮುಕ್ತನಹನು."

ಈ ಪದ್ಯವನ್ನು ವಿಜಯನಗರದ ಚರಿತೆಯನ್ನು ಹೇಳುವಾಗಲಿ ಹೇಳಿರುವದರಿಂದಲೂ ಅದರಲ್ಲಿ ಪ್ರೌಢನಿಂ ಪೂಜೆಯುಂ ಕೊಂಡು ಎಂದಿ ರುವದರಿಂದಲೂ ವಿಜಯನಗರದ ಪ್ರೌಢರಾಯನಿಂದ ಸಂಪೂಜಿತವಾ ಗಿದ್ದರೆಂಬುದು ವ್ಯಕ್ತವಾಗುತ್ತದೆ. ಈ ರಾಯನ ಕಾಲವು ೧೫ನೇ ಶತಮಾನ ವಾಗಿರುವದು. ಅದೇ ಈ ಕವಿಯ ಕಾಲವಾಗಿದೆ. ಸಕಲಾಮುಂಗಳಿಗೆ ನೆಲೆಯೆನಿಸಿ ಎಂದಿರುವದರಿಂದ ಆಗಮ ಪಂಡಿತರಾಗಿ ವೇದ ವೇದಾಂ ತಗಳ ಸಾರವನ್ನು ಹೀರಿ ವೀರಶೈವ ತತ್ವ ಪ್ರತಿಪಾದಿತವಾದ ಅನುಭವ ಸೂತ್ರ ಶತಕತ್ರಯ ಮೊದಲಾದ ಗ್ರಂಥಗಳನ್ನು ಪರಿಪಾಕ ಸ್ಥಿತಿಯಲ್ಲಿ ಬರೆದಿರುವದೇ ಸಾಕ್ಷಿಯಾಗಿದೆ. ಇವರು ಉಭಯ ಭಾಷಾವಂಡಿತರಾಗಿ ಆ ಸ್ಥಿತಿಗೆ ತಕ್ಕಂತೆ ಗ್ರಂಥ ನಿರೂಪಣೆ ಮಾಡಿದ್ದಾರೆ. ಇವರು ಬರೆದ ಗ್ರಂಥಗಳು ವೀರಶೈವಾಚರಣೆಯನ್ನೇ ಸಮರ್ಥಿಸಿರುವದರಿಂದ ಆ ಆಚ ರಣೆಯ ವಿಚಾರವನ್ನು ತಿಳಿದುಕೊಳ್ಳುವ ಅಭಿಲಾಷೆಯುಳ್ಳವರಿಗೆ ಇವ ಗ್ರಂಥಗಳ ಮಹತ್ವವು ಎಷ್ಟಿರುವದೆಂಬುದು ಗೊತ್ತಾಗುವದು. ಆದು ದರಿಂದ ವೀರಶೈವರು ಈ ಕವಿಯ ಮತ್ತು ಗ್ರಂಥಗಳ ವಿಷಯವಾಗಿ ಹೆಚ್ಚಿಗೆ ಶೋಧಿಸುವದು ಯೋಗ್ಯವಾಗಿದೆ.

ಆದರೂ ಪರಧರ್ಮಿಯರಿಗೂ ಕೂಡ ಮಾರ್ಗದರ್ಶಕವಾದ ಎಷ್ಟೋ ಉಪಯುಕ್ತ ವಿಚಾರಗಳು ಇವರಲ್ಲಿ ಅಡಕವಾಗಿವೆ.

ಇವರು ಅನುಭವಸೂತ್ರದಲ್ಲಿ ಕಲ್ಯಾಣದ ಮಾಯಿದೇವರೆಂದೂ, ಮುಗ್ಗೆಯ ಮಾಯಿದೇವರೆಂದೂ ಕರೆಯುತ್ತಿದ್ದರೆಂದು ಗೊತ್ತಾಗುತ್ತವೆ. ಇವರು ಶಿವಕವಿಗಳ ಮಾಲಿಕೆಯವರು ಎಂಬುದಕ್ಕೆ ಚೆನ್ನಬಸವಪುರಾ ಣದ ೧೫ನೆಯ ಕಾಂಡದ ೧೫ನೆಯ ಸಂಧಿಯಲ್ಲಿ ಕವಿಸ್ತುತಿಯಲ್ಲಿ,

"ಸರಸಕವಿ ಬಾಣಂ ಮಯೂರ ಭವಭೂತಿಸದ್ವರ ಕಾಳಿದಾಸ
ಮುಲುಹಣ ಮಳಯರಾಜನತಿ। ಬಿರುದಂಕ ಕವಿ ರಾಘವಾಂಕ ಹಂಪೆಯ

ಹರೀಶ್ವರ ಹಲಾಯುಧನುಳ್ಳಟ ॥ ಗುರು ಪಂಡಿತೇಶ ಪಾಲ್ಕುರಿಕೆಯಾರಾ ಧ್ಯಭೀ । ಮರಸ **ಮೊಗ್ಗೆಯ ಮಾಯಿದೇವ** ಚಾಮರಸ ಶಂ । ಕಂಕರೆಯ ಪದ್ಮರಸರಾದಿ ಶಿವಕವಿಗಳಂ ಬಲಗೊಂಡು ಕೃತಿವೇಳ್ದೆನು. ॥

ಇವರ ವಿಷಯವಾಗಿ ತೋಂಟದ ಸಿದ್ಧಲಿಂಗ ಶಿವಯೋಗಿಗಳು ತಮ್ಮ ಪಾಲ್ಕುರಿಕೆಯ ಸೋಮನಾಥ ಪುರಾಣದ ಆದಿಯಲ್ಲಿ "ಮಾಯಿದೇವರು ನೆಲಲು ಭೂವಿಯಮೇಲೆ ಬೀಳದಂತಹ ಜಯಸ್ತಂಭವನ್ನು ನಟ್ಟು ಇಷ್ಟಲಿಂಗವನ್ನು ಶರೀರದಮೇಲೆ ಧರಿಸಿದವರಿಗೆ ಭವಬಂಧವಿಲ್ಲೆಂಬದನ್ನು ಸಿದ್ಧಾಂತವಾಡಿ ತೋರಿಸಿ ಷಟ್ಸ್ಥಲವಾರ್ಗವನ್ನು ವಿಸ್ತರಿಸಿ ನಿರೂಪಿಸಿದರು" ಎಂದು ಬರೆದಿರುವರು.

ಇವರ ಗ್ರಂಥಗಳನ್ನು ಓದಿದ್ದಾದರೆ ಇವಕ್ಕಿಂತಲೂ ಹೆಚ್ಚಿನ ಪೂಜ್ಯಭಾವವು ಅವರಲ್ಲಿ ಹುಟ್ಟುವದೆಂಬುದಕ್ಕೆ ಸಂಶಯವಿಲ್ಲ.

ಇವರು ತಮ್ಮ ತಂದೆಯ ಹೆಸರು ಸಂಗಮೇಶ್ವರ ದೇವರೆಂದೂ ಅವರ ಗುರುಗಳಾದ ನಾಗರಾಜರು ಐಸುರವ ಸೋಮನಾಥ ಭಕ್ತರಾದ ಉಪಮನ್ಯು ಶಿವಾಚಾರ್ಯರ ವಂಶೀಯರೆಂದೂ ಮಾತ್ರ ಬರೆದುಕೊಂಡಿದ್ದಾರೆ. ಇದಕ್ಕಿಂತಲೂ ಹೆಚ್ಚಿನ ಸಂಗತಿ ಗೊತ್ತಾಗಿಲ್ಲ. ಇವರು ವಚನಕಾರರೆಂದೂ ಕೇಳಿಕೆಯುಂಟು. ಆದರೆ ಆ ವಚನಗಳ ಮುದ್ರಿಕೆಯು ಯಾವುದೆಂಬುದು ತಿಳಿದಿರುವದಿಲ್ಲ. ಆದುದರಿಂದ ವಚನಗಳನ್ನು ಗುರ್ತಿಸಲು ಸಾಧ್ಯವಿಲ್ಲ

ಇನ್ನು ಈ ಶತಕತ್ರಯದ ವಿಷಯಗಳನ್ನು ವಿಚಾರಿಸಿದಲ್ಲಿ ಇವು ಕ್ರಮವಾಗಿ ಶಿವಾಧವ, ಶಿವವಲ್ಲಭ, ಮಹದೈಪುರೀಶ್ವರ ಎಂದಿರುವವು. ಇವುಗಳಲ್ಲಿಯ ವಿಷಯಗಳು ಕ್ರಮವಾಗಿ ಭಕ್ತಿ-ಜ್ಞಾನ-ವೈರಾಗ್ಯ ಇವುಗಳಿರುತ್ತವೆಂದು ಕಂಡುಬರುತ್ತದೆ.

ಮುಗ್ಗೆಯ ಮಾಯಿದೇವರ ಧಾರ್ಮಿಕ ವಿಚಾರಗಳು.

ಪರಗತಿಯನ್ನು ಕುರಿತು ವಿಚಾರ ಮಾಡಿ ಸ್ಥಾಪಿಸಿರತಕ್ಕ ಮಾರ್ಗಗಳು ಒಂದೊಂದು ಮತಕ್ಕೆ ಒಂದೊಂದು ವಿಧವಾಗಿರುವವು. ಹಾಗೆ ಮಾರ್ಗಭೇದ ಉಂಟಾಗಿರುವದರಿಂದಲೇ ಮತಭೇದ ಮತ್ತು ವ್ಯವಹಾರಭೇದಗಳು ಉಂಟಾಗಿರುವವು. ಆರ್ಯಮತಗಳೊಳಗೆ ದ್ವೈತಾದ್ವೈತ

ಮತಗಳು, ಜೀವಸ್ವರೂಪ, ಆತ್ಮಸ್ವರೂಪ, ಮುಕ್ತಿಸ್ವರೂಪಗಳನ್ನು ತಿಳಿದುಕೊಳ್ಳುವ ಮಾರ್ಗಗಳನ್ನು ಹೇಳುವಲ್ಲಿ ಒಂದಕ್ಕಿಂತ ಒಂದು ವಿಲಕ್ಷಣವಾದ ರೀತಿಯಿಂದ ಪ್ರತಿಪಾದಿಸುತ್ತಿರುವಂತೆ ವೀರಶೈವ ಮತವೂ ಇತರ ಮತಗಳಿಂದ ಭಿನ್ನವಾಗಿ ಮತ್ತೊಂದು ವಿಧದ ವಿಲಕ್ಷಣತ್ವವನ್ನು ತಾಳಿದೆ. ವ್ಯವಹಾರಿಕ ಸತ್ಯ ಶೋಧನೆಯಿಂದ ಸ್ವತಂತ್ರವಾಗಿರುವದು.

ಇದರಲ್ಲಿ ಷಟ್ಸ್ಥಲ ತಿಳಿವಳಿಕೆಯೇ ಬ್ರಹ್ಮವಿದ್ಯೆ ಎಂದೆನಿಸಿಕೊಳ್ಳುತ್ತದೆ. ಇದರಲ್ಲಿ ಕಾಮ್ಯ ಕರ್ಮದ ಕಾಟವಿಲ್ಲ. ಅನಂತ ದೈವೋಪಾಸನೆಯ ಜಂಜಾಟವೂ ಇಲ್ಲ. ಶಿವೈಕ್ಯ ದೇವೋಪಾಸನೆಯ ಪಂಥವಿದೆ. ಜೀವನ್ಮುಕ್ತಿಗೆ ಸುಖಕರವಾದ ಮಾರ್ಗವಿದೆ. ಕ್ರಿಯಾಜ್ಞಾನಗಳ ತಪರೆನಿಸಿಕೊಂಡಿದೆ. ಭಕ್ತಿ ಜ್ಞಾನ ವೈರಾಗ್ಯಗಳ ನಿಧಿಯಾಗಿದೆ. ವೀರಶೈವ ಧರ್ಮದ ವಿಶೇಷತೆಗಳೆಲ್ಲ ಈ ಷಟ್ಸ್ಥಲ ವಿದ್ಯೆಗೆ ಅಂಗವಾದವುಗಳು.

ಮಾನವಸಿಗೆ ಜೀವತ್ವವಳಿದು ಸಾಮರಸ್ಯವು ಉಂಟಾಗಬೇಕಾದರೆ ಏನು ನಡೆಯತಕ್ಕ ಮಾರ್ಗವಾವುದೋ ಅದೆಲ್ಲವೂ ಕ್ರಮವಾಗಿ ಈ ಶತಕತ್ರಯದಲ್ಲಿ ನಿರೂಪಿಸಲ್ಪಟ್ಟಿರುವದು ಅವರಲ್ಲಿಯ ಕೆಲವು ಪದ್ಯಗಳಿಂದ ಷಟ್ಸ್ಥಲಮಾರ್ಗದ ಸ್ಥೂಲ ಸ್ವರೂಪವನ್ನು ಇಲ್ಲಿ ಹೇಳುವೆವು.

ಕರ್ಮಮಾರ್ಗ.

ಲಿಂಗಭಕ್ತಿ ಸಂಪನ್ನನಾದ ಶರಣನು ಕೃಚ್ಛ್ರಚಾಂದ್ರಾಯಣಾದಿ ವ್ರತಗಳನ್ನೂ ಪಂಚೇಂದ್ರಿಯಗಳ ನಿಗ್ರಹವನ್ನೂ ವಿಷಯ ವೈರಾಗ್ಯವನ್ನೂ ಯಮನಿಯಮಾದಿಗಳನ್ನೂ ಮೌನ ಮೊದಲಾದ ವ್ರತಗಳನ್ನೂ ಸವಿಕಲ್ಪ ನಿರ್ವಿಕಲ್ಪ ಸಮಾಧಿ ಹೋಮ ನೇಮ ತೀರ್ಥ-ಯಾತ್ರೆ ಮೊದಲಾದ ಧರ್ಮಾಶ್ರಮದಲ್ಲಿ ಹಿಡಿವ ಯಾವ ನಿಯಮಗಳನ್ನೂ ಹಿಡಿದು ಆಚರಿಸುವ ಅವಶ್ಯವಿಲ್ಲ. ಇದಕ್ಕೆ ಮಾಯಿದೇವರು—

ತಪದ ಜಿತೇಂದ್ರಿಯತ್ವದ ವಿರಾಗದ ಯೋಗದ ಮೌನದ ವ್ರತ।
ಪರವ ನಿತ್ಯ ಕರ್ಮದ ಸಮಾಧಿಯ ಸಂಜೆಯ ಮಂತ್ರ ಮಾಲಿಕಾ ॥
ಪದ ಶರೀರ ನಿಗ್ರಹದ ಹೋಮದ ನೇಮದ ತೀರ್ಥಯಾತ್ರೆಯ-।
ಪೆತ ಸವಾಯ ಜಾಡ್ಯದೊಳಗಿಪ್ಪನೆ ಭಕ್ತಿಪರಂ ಶಿವಾಧನಾ ॥೧೦॥

ಭಕ್ತಸ್ಥಲ.

ಕಿಂಕರಭಾವಮುಂ ಬಲಿದು ಲಿಂಗವುಖಂ ಚರಲಿಂಗವೆಂದು ನಿ।
ಶ್ಯಂಕತೆಯಿಂ ಸುವರ್ಣ ವಸನಾನ್ನ ಪುರಸ್ಸರ ವಸ್ತುವಾಹನಾ ॥
ಲಂಕರಣಂಗಳಂ ಸಲೆ ಸಮರ್ಪಿಸಿ ವೀರಶಿವಾಗವೆಂಕ್ತ ಚಿ ॥
ನ್ಮಾಂಕಿತರಾದವರ್ಗೆ ಮಣಿವಂತುಟೆ ಭಕ್ತಿಪದಂ ಶಿವಾಧವಾ ॥೧೩॥

ಭಾವಃ— ವಿನಯಶೀಲನಾಗಿ ತನ್ನಿದುರಿಗೆ ತಿರುಗುವ ಜೀವರುಗಳ ಮುಖವೇ ದೇವಮುಖವೆಂದು ಸಂಶಯವಿಲ್ಲದೆ ತಿಳಿದು ಆರಾರಿಗೆ ಅವುದರ ಕೊರತೆ ಇರುವದೋ ಅದನ್ನು ಕೋರುತ್ತಲೂ ಇಲ್ಲವೇ ಸಹಾಯ ಮಾಡುತ್ತಲೂ ಇಲ್ಲವೇ ಮನ ಕರಗಿ ಸೇವಿಸುತ್ತಲೂ ತನ್ನ ಸರ್ವಸ್ವವನ್ನೇ ಅವರಿಗೆ ಅರ್ಪಿಸಿದವನಾಗಿ ಶಿವಾಗವೆಂಕ್ತ ಧರ್ಮಶೀಲರಾದವರಿಗೆ ಪೂಜ್ಯಭಾವದಿಂದ ನಮಸ್ಕರಿಸುವದೇ ಭಕ್ತಿಮಾರ್ಗವು, ಭಕ್ತಸ್ಥಲದ ಮಾರ್ಗವು.

ಮಹೇಶ್ವರಸ್ಥಲ.

ಪರವಧುವಂ ಪರದ್ರವಿಣಮುಂ ಪರಹಿಂಸೆಯ ನೈದೆ ದೂರದಿಂ।
ಪರಿಹರಿಸಿ ಸ್ವದೇಶಿಕ ನಿರೂಪಿತವುಪ್ಪ ಷಡರ್ಥಸಂಗ್ರಹಾ ॥
ಚರಣೆಯೊಳೇಕ ಲಿಂಗ ನಿಜನಿಷ್ಠೆ ಸಮಾಹಿತಮಾದೊಡಂತದೇ।
ಪರಮ ಮಹೇಶ್ವರಸ್ಥಲದ ಲಕ್ಷಣ ವೃತ್ತಿಪದಂ ಶಿವಾಧವಾ ॥೧೪॥

ಭಾವಃ—ಪರಸ್ತ್ರೀ ಪರದ್ರವ್ಯ ಪರಹಿಂಸೆಗಳನ್ನು ದೂರೀಕರಿಸಿ ತನ್ನ ಗುರುವು ಉಪದೇಶಿಸಿದ ಷಡರ್ಥ ಅಂದರೆ ಜ್ಞಾನ ಜ್ಞೇಯ ಅನುಷ್ಠೇಯ ಅಧಿಕಾರ ಸಾಧನ ಸಾಧ್ಯ ಎಂಬವುಗಳನ್ನು ಗಳಿಸುವದಲ್ಲಿಯೇ ಆಸಕ್ತಿಯುಳ್ಳವನಾಗಿ ಗುರುವಿನಿಂದ ಲಭ್ಯವಾದ ಲಿಂಗವಲ್ಲದೆ ಅನ್ಯಭಕ್ತಿಯನ್ನು ತೊರೆದು ನಡೆಯುವದೇ ಮಹೇಶ್ವರಸ್ಥಲವು.

ಪ್ರಸಾದಿಸ್ಥಲವು.

ಲಿಂಗಮುಖಾರ್ಪಣೀಯವಹ ಸರ್ವ ವಿಶುದ್ಧಪದಾರ್ಥ ಜಾತಮಂ।
ಸ್ವಾಂಗವಜೋ ಮನಃ ಕಾರಣ ಕಾಯಕ ವಾಚಕ ಮಾನಸ ಕ್ರಿಯಾ ॥
ಸಂಗತ ಸಾವಧಾನ ಸುವಿವೇಕದಿನರ್ಪಿಸಿ ತತ್ಪ್ರಸಾದಮುಂ।
ಪಿಂಗದೆ ಭೋಗಿಪಲ್ಲಿ ಬಳಿಕಾಸ್ಥಲಸಿದ್ಧಿ ದಿಟಂ ಶಿವಾಧವಾ ॥೧೫॥

ಭಾವಃ— ಇಷ್ಟ, ಪ್ರಾಣ, ಭಾವಲಿಂಗಗಳಿಗೆ ಅರ್ಪಿಸಲಿಕ್ಕೆ ಯೋಗ್ಯವಾದ ರೂಪ, ರುಚಿ ತೃಪ್ತಿಗಳಿಲ್ಲವನ್ನೂ ಸತ್ಯ ಮತ್ತು ಪ್ರಾಮಾಣಿಕತನ ಗಳಿಕೆಯಿಂದ ಶುದ್ಧವೆನಿಸಿದ ಪದಾರ್ಥಗಳನ್ನೂ ಪೈಸೆ, ಮಾತು ಮನಗಳಿಂದ ಸ್ವಲ್ಪವೂ ಭೇದವಿಲ್ಲದೆ ಆಯಾಯ ಲಿಂಗಗಳಿಗೆ ವಿಚಾರ ಪೂರ್ವಕ ಅರ್ಪಿಸಿ ಸೇವಿಸುತ್ತಿರುವದೇ ಪ್ರಸಾದಿಸ್ಥಲವು.

ಪ್ರಾಣಲಿಂಗಿಸ್ಥಲವು.

ಆಣವ ಮಾಯ ಕಾರ್ಮಿಕ ಮಲತ್ರಯ ಸಂಗತಿ ದೂರವಾಗಿ ನಿ।
ರ್ವಾಣ ಪಪ್ಪೈಕ ಹೇತುವಹ ಸದ್ಗುರುನಾಥ ನಿಜೋಪದೇಶದಿಂ ॥
ಪ್ರಾಣದ ಲಿಂಗದ ಸ್ಥಿತಿ ಸಮುಂಜಸವಾಗಿ ಸುಸಾಧ್ಯವಾದೊಡಾ।
ಪ್ರಾಣವೇ ಲಿಂಗವಾದ ಪರಮಸ್ಥಳ ಸಿದ್ಧಿ ಕಣಾ ಶಿವಾಧವಾ ॥೧೬॥

ಭಾವಃ— ಶ್ರೀಗುರುನಾಥನು ಮಾಡಿದ ದೀಕ್ಷೆಗೆ ಮುಖ್ಯ ಕಾರಣವಾದ ದೀಕ್ಷಾತ್ರಯಗಳಲ್ಲಿ ವೇಧಾ ದೀಕ್ಷೆಯಿಂದ ಆಣವ ಮಲ ಎಂದರೆ ಗರ್ಭಸಂಬಂಧವಾದ ಮಲವೂ ಮನುದೀಕ್ಷೆಯಿಂದ ಮಾಯಮಲ ಎಂದರೆ ಜಾತಿಸಂಬಂಧವಾದ ಮೋಹವೆಂಬ ಮಲವೂ ಕ್ರಿಯಾದೀಕ್ಷೆಯಿಂದ ಕಾರ್ಮಿಕಮಲ ಎಂದರೆ ದ್ರವ್ಯ ಗಳಿಸುವ ಸಂಬಂಧವಾಗಿದ್ದ ದೋಷವೂ ಹೋಗುವವು. ಹೀಗೆ ಹುಟ್ಟು, ಜಾತಿ, ಗಳಿಕೆಗಳಲ್ಲಿದ್ದ, ಅಭಿಮಾನ ಅಹಂಕಾರಗಳು ನಷ್ಟವಾಗಿ ಪ್ರಾಣವೂ, ಲಿಂಗವೂ ಎರಡೂ ಒಂದಾಗಿ ಸಮನಿಸಿದ್ದರೆ ಅದೇ ಪ್ರಾಣಲಿಂಗಿಸ್ಥಲವು.

ಶರಣಸ್ಥಲ.

ಪಂಚವಿಧೇಂದ್ರಿಯ ಪ್ರಕೃತಿ ಸಂಗಸುಖಂ ತನಗೆಂಬ ಬುದ್ಧಿಯಂ।
ಸಂಚಿಸಿ ಲಿಂಗವೇ ಪತಿ ತದೀಯ ಮಹಾಸತಿ ತಾನೆನಿಪ್ಪ ನಿರ್ ॥
ವ್ಯಂಜಕ ಭಾವಮುಂ ಬಲಿದು ಚಿತ್ಪರಿಣಾಮ ಪರಾನುಭೂತಿಯಿಂ।
ಪಂಜರಿಸಲ್ವಿಶಿಷ್ಟ ಶರಣಸ್ಥಲ ಸಿದ್ಧಿ ಕಣಾ ಶಿವಾಧವಾ ॥೧೭॥

ತಾತ್ಪರ್ಯಃ— ಶ್ರೋತ್ರಾದಿ ಪಂಚೇಂದ್ರಿಯಂಗಳ ಮುಖದಿಂದ ಸ್ವಭಾವ ಸಿದ್ಧವಾಗಿ ಹುಟ್ಟುವ ವಿಷಯ ಸೌಖ್ಯವು ತನಗೆಂಬ ಭಾವವನ್ನು ಬಿಟ್ಟು ತಾನು ಸತಿ ಲಿಂಗವೇ ಪತಿಯೆಂಬ ನಿರ್ಮಲವಾದ

ಭಾವನೆಯನ್ನು ಹೊಂದಿ ಸಕಲ ಜಗತ್ತೂ ಚಿಚ್ಛಕ್ತಿವಿಕಾರವಾದುದೆಂಬ ಉತ್ಕೃಷ್ಟವಾದ ಅನುಭವದಿಂದ ಕೂಡಿರುವದೇ ಶರಣಸ್ಥಲವು.

ಐಕ್ಯಸ್ಥಲವು.

ತನಗವಸಾನ ಭೂಮಿ ಶಿವಲಿಂಗ ಮದಕ್ಕವಸಾನ ಭೂಮಿ ತಾ।
ನೆನಿಸಿ ಬಹಿಃ ಪ್ರಪಂಚ ರಚನಾ ಕ್ರಿಯೆಯಂ ಸೆರೆ ಬಿಟ್ಟು ಚಿತ್ಪರಾ ॥
ನ್ವನುಭವದಿಂದಹಂತ್ವಮಿತಿ ಶಬ್ದ ವಿಭೇದವಡಂಗಿ ತೋರ್ಪಡಾ।
ತನೆ ಪರವೈಕ್ಯ ನಿಷ್ಕಳ ಮಹಾಸ್ಥಲ ಯುಕ್ತಿ ಯುತಂ ಶಿವಾಧವಾ ॥೫॥

ಟಿಪ್ಪಣಿಃ— ತನಗೆ ಶಿವಲಿಂಗವೂ ಶಿವಲಿಂಗಕ್ಕೆ ತಾನೂ ನಿಲುಕಡೆಯ ಸ್ಥಲವೆಂದು ತಿಳಿದು ಸ್ವಸ್ವರೂಪ ಜ್ಞಾನದಿಂದ ಭೇದ ಭಾವನೆಗೆ ಕಾರಣವಾದ ಮೂಲ ಜ್ಞಾನವು ನಷ್ಟವಾಗಿ ಸಕಲ ಜಗತ್ತೂ ಶಿವಾತಿರಿಕ್ತವಲ್ಲದೆ ಇರುವರೆಂದು ತೋರಿರುವ ಕಾರಣ ಪ್ರಪಂಚವನ್ನು ಬಾಹ್ಯವಾದುದೆಂದು ಪರಿಭಾವಿಸದೆ ಅದರಂತೆಯೇ ನಾನು ನೀನು ಎಂಬ ಭೇದ ಭಾವವು ಅಳಿದು ಹೋಗಿ ಇರುತ್ತಿರುವದೇ ಐಕ್ಯಸ್ಥಲ ಮಾರ್ಗವರ್ತನವು.

ಈ ಪ್ರಕಾರ ಷಟ್ ಸ್ಥಲಾಚರಣ ಯುಕ್ತನಾದ ಶರಣನ ಪಂಚೇಂದ್ರಿಯಗಳಲ್ಲಿಯೂ ಹೃದಯದಲ್ಲಿಯೂ ಲಿಂಗ ಸಂಬಂಧವು ಹೇಗಿರುವದೆಂಬದು ಕೆಳಗಿನ ಶ್ಲೋಕದಲ್ಲಿ ಹೇಳಲ್ಪಟ್ಟಿದೆ.

ಷಡ್ಲಿಂಗಗಳ ಸಂಬಂಧವು.

ಆಚರಣಾದಿಲಿಂಗ ಗುರುಲಿಂಗ ಶಿವಾಹ್ವಯಲಿಂಗ ಜಂಗಮಾ।
ಖ್ಯೋಚಿತಲಿಂಗ ನಿರ್ಮಳ ನಿರಗ್ಘಳ ನಿಶ್ಚಲ ಮುಕ್ತಿದಪ್ರಸಾ ॥
ದಾಚಳಲಿಂಗ ನಿಷ್ಕಳ ಮಹಾಘನಲಿಂಗ ಮಹೇಂದ್ರಿಯ ಪ್ರಭಾ।
ಸೂಚಿತ ಷಟ್‌ಸ್ಥಲಾತ್ಮಕ ಶರೀರಧರಂ ಶರಣಂ ಶಿವಾಧವಾ ॥೧೯॥

ಟಿಪ್ಪಣಿಃ— ಘ್ರಾಣೇಂದ್ರಿಯದಲ್ಲಿ ಆಚಾರಲಿಂಗ, ಜಿಹ್ವೇಂದ್ರಿಯದಲ್ಲಿ ಗುರುಲಿಂಗ, ನೇತ್ರೇಂದ್ರಿಯದಲ್ಲಿ ಶಿವಲಿಂಗ, ತ್ವಗಿಂದ್ರಿಯದಲ್ಲಿ ಜಂಗಮಲಿಂಗ, ಶ್ರೋತ್ರೇಂದ್ರಿಯದಲ್ಲಿ ಪ್ರಸಾದಲಿಂಗ, ಹೃದಯದಲ್ಲಿ ಮಹಾಲಿಂಗ, ಹೀಗೆ ಆರು ಇಂದ್ರಿಯಗಳಲ್ಲಿಯೂ ಲಿಂಗಗಳು ಪ್ರತಿಷ್ಠಿತವಾಗಿರುವವು

ಎಂದ ಆವ ಮುಖದಿಂದ ಬಂದ ಪದಾರ್ಥವಾದರೂ ಲಿಂಗಮುಖವಾಗಿಯೇ ಪರಿಗ್ರಹಿಸಲ್ಪಡುವದು.

ಇಷ್ಟಲಿಂಗ ವಿಚಾರ

ಹೀಗೆ ಲಿಂಗಸಂಬಂಧಿಯಾದ ಶರಣನು ತನ್ನ ಇಷ್ಟಲಿಂಗವನ್ನು ಹೇಗೆ ನೋಡುವನು, ಅದು ತನ್ನ ವ್ಯತಿರಿಕ್ತವಾಗಿರುವದಿಲ್ಲವೇ, ಎಂಬ ಪ್ರಶ್ನೆಗೆ ಮಾಯಿದೇವರು ಬಹು ಬೋಧಪ್ರದವಾಗಿ ವಿವರಿಸಿದ್ದಾರೆ. ಅದು ಹೇಗೆಂದರೆ,

ಮುಕುರವನೀಕ್ಷಿಸಂಗನೆಯ ಬುದ್ಧಿಯದೇಂ ವರರೂಪಹಾವಭಾ।
ವಕಲಿತ ವಿಭ್ರಮಾಪ್ತ ನಿಜಮುಂಗಳ ಮೂರ್ತಿಯನೀಕ್ಷಿಸಲ್ಲಿಯೋ ॥
ಮುಕುರವನೇ ನಿರೀಕ್ಷಿಪೆಡೆಯಲ್ಲಿಯೊ ತನ್ನನೆ ನೋಳ್ಪಳೈಸೆ ಲೈಂ।
ಗಿಕನಿಯಮಾರ್ಚನಾನುಭವ ದರ್ಪಣದೊಳ್ ಶರಣಂ ಶಿವಾಧವಾ।

ಕನ್ನಡಿಯನ್ನು ನೋಡತಕ್ಕ ಸ್ತ್ರೀಯ ಉದ್ವೇಶವು ಸೌಂದರ್ಯ ಲಾವಣ್ಯ ವಿಲಾಸಾದಿಗಳಿಂದ ಕೂಡಿದ ತನ್ನ ದೇಹವನ್ನು ನೋಡಿಕೊಳ್ಳುವದಾಗಿರುವದೇ ಹೊರತು ಕನ್ನಡಿಯನ್ನೇ ನೋಡಬೇಕೆಂಬುದಾಗಿರುವದಿಲ್ಲ. ಅದರಂತೆ ಶರಣನು ಲಿಂಗಾರ್ಚನಾನಿಯಮವೆಂಬ ಕನ್ನಡಿಯನ್ನೋಟದಲ್ಲಿ ಸ್ವಸ್ವರೂಪ ಸಾಕ್ಷಾತ್ಕಾರವನ್ನೇ ಉದ್ದೇಶವಾಗಿಟ್ಟುಕೊಂಡಿರುವನು. ಇದಕ್ಕೆ ಕೆಲವರು—

ಕನ್ನಡಿಯಲ್ಲಿ ಕಂಡಂತೆ ತನ್ನ ಆತ್ಮಸ್ವರೂಪವು ಇಷ್ಟಲಿಂಗದಲ್ಲಿ ಹೇಗೆ ಕಾಣುವದು? ಪೂಜ್ಯ ದೈವವೆಂದು ಪ್ರತ್ಯೇಕಿಸಿ ಪೂಜಿಸುವದಿಲ್ಲವೆ? ಆದರ ಆಕಾರಗಳು ಬೇರೆಯಾಗಿ ಕಾಣುವದಿಲ್ಲ, ಎಂಬ ಪ್ರಶ್ನೆಗೆ ಮಾಯಿದೇವರು ಹೇಳುವದೇನಂದರೆ:—

ನೋಡದ ಮುನ್ನ ದರ್ಪಣದ ಭಾವಮದುಂಟು ವಿಭ್ರಮಂ।
ಗೂಡಿ ವಿರಾಜಿಸುತ್ತಾಭಿಮುಖಾಸ್ಪದವಾದ ನಿಜ ಸ್ವರೂಪಮಂ ॥
ನೋಡಿದ ನಂತರಂ ಮರಳಿ ದರ್ಪಣ ಭಾನಮದುಂಟೆ ತತ್ವಮಂ।
ನೋಡದ ಮುನ್ನ ಮಾಯೆ ಬಳಿಕೆಲ್ಲಿಯ ಮಾಯೆ ಬಿಡಾ ಶಿವಾಧವಾ ॥

ಕನ್ನಡಿಯನ್ನು ದೂರಿಂದ ನೋಡಿದಾಗ ಇಲ್ಲವೆ ಮಗ್ಗುಲಾಗಿ ನೋಡಿದಾಗ ಇದು ಕನ್ನಡಿ, ಕಾಜು, ಚೌಕಟ್ಟು ಎಂಬ ಭಾವನೆ ಬರುವದಿಲ್ಲ.

ವನು. ಎಂದರೆ ತನ್ನಿದಿರಾಗಿಟ್ಟುಕೊಂಡು ನೋಡುವದಕ್ಕೆ ಮುಂಚಿ ಕನ್ನಡಿಯೆಂಬ ಭಾವನೆಯು ತನಗುಂಟು. ಅದರಲ್ಲಿ ತನ್ನ ರೂಪನ್ನು ನೋಡಿದ ಬಳಿಕ ಕನ್ನಡಿಯ ವಿಚಾರವು (ಜ್ಞಾನವು) ತನಗಿಲ್ಲ. ತತ್ವಗ ಳನ್ನು ನೋಡಿ ತಿಳಿಯುವ ಮೊದಲು ಮಾಯೆ, ತಿಳಿದ ಬಳಿಕ ಎಲ್ಲಿಯ ವರೆಗೆ ಮಾಯೆ ಎಂದರೆ ಲಿಂಗಾರ್ಚನಾದಿ ಸ್ಪಷ್ಟರೂಪ ಸಾಕ್ಷಾತ್ಕಾರವಾ ಗುವ ವರೆಗೆ ಮಾತ್ರ. ಅದರೆ ತತ್ವ ಸಾಕ್ಷಾತ್ಕಾರವಾದ ಬಳಿಕ ಮಲಶಕ್ತಿ ಯಳಿವ ಕಾರಣ ಕ್ರಿಯೆಯಲ್ಲಿ ಹೊರಗಿನ ಆಕಾರದ ವಿಚಾರವು ಮಾಯ ವಾಗಿ ಸ್ವಸ್ವರೂಪಜ್ಞಾನವು ತನಗಾಗುವದೆಂಬ ಭಾವವು.

ಭಾಕ್ತಿಕವೇ ಮಹೇಶ್ವರ ಮಹಾಸ್ಥಲವಾ ಸ್ಥಲವೇ ಪ್ರಸಾದಸಂ।
ಯುಕ್ತಿವಿಶಾರದ ಸ್ಥಳವದೇ ಘನಜೀವಕಳಾತ್ಮಲಿಂಗಭಾ॥
ವೋಕ್ತ ನಿಜಸ್ಥಳಾಖ್ಯವದು ತಾನೆ ಲಸಚ್ಚರಣಸ್ಥಳತ್ವವಾ।
ಮುಕ್ತಿವಿಶಿಷ್ಟ ದಿವ್ಯ ಶರಣಸ್ಥಳವೈಕ್ಯಪದಂ ಶಿವಾಧವಾ॥

ಭಕ್ತಸ್ಥಲವೇ ವಿಶಿಷ್ಟಾಚರಣಸಂಪನ್ನತೆಯಿಂದ ಮಹೇಶ್ವರ ಸ್ಥಲವಾಗುವದು. ಆ ಮಹೇಶ್ವರಸ್ಥಲವೇ ಮನೋನೈರ್ಮಲ್ಯದ ಸಂಬಂಧದಿಂದ ಪ್ರಸಾದಿಸ್ಥಲವಾಗುವದು ಆ ಪ್ರಸಾದಿಸ್ಥಲವೇ ಜ್ಞಾನಯೋಗದಿಂದ ಪ್ರಾಣಲಿಂಗಿಸ್ಥಲವಾಗುವದು. ಆ ಪ್ರಾಣಲಿಂಗಿಸ್ಥಲವೇ ಶರಣಸತಿ ಲಿಂಗಪತಿ ಭಾವದಿಂದ ಲಿಂಗಾಂಗ ಸಾಮರಸ್ಯ ಸೌಖ್ಯವನ್ನನುಭವಿಸುತ್ತ ಬಾಹ್ಯ ವ್ಯಾಪಾರವನ್ನು ಮರೆತಿರುವದರಿಂದ ಶರಣಸ್ಥಲವಾಗುವದು. ಆ ಶರಣಸ್ಥಲವೇ ಶಿವಲಿಂಗದಲ್ಲಿ ಐಕ್ಯವನೈದಿ ಭಿನ್ನಭಾವವನ್ನಳಿದಿರುವದರಿಂದ ಐಕ್ಯಸ್ಥಲವಾಗುವದು. ಹೀಗೆ ಅವುಗಳೆಲ್ಲವನ್ನೂ ಪಡೆದಿರುವದರಿಂದ ಸ್ವಸ್ವರೂಪಸಾಕ್ಷಾತ್ಕಾರವುಳ್ಳ ಶರಣನಿಗೆ ಮೇಲೆ ಹೇಳಿದ ಷಟ್ಸ್ಥಲಾಚರಣೆಯೆಲ್ಲಾ ಒಂದೇ ಆಗಿರುವದು.

ನಿಜವಾದ ವೀರಶೈವಧರ್ಮಾಚರಣೆಯು ಹೀಗಿರುತ್ತಿದ್ದರೂ ನಮ್ಮಲ್ಲಿಯ ಕೆಲವರು ಧರ್ಮಶೀಲರೆಂಬವರು ಇದಕ್ಕೆ ತೀರ ಭಿನ್ನವಾಗಿರುವ ಆಚರಣೆಗಳಿಂದ ನಡೆಯುತ್ತಿರುವರು. ಅವರು ತಮ್ಮ ಸುತ್ತಲಿನ ಕರ್ಮಾಚರಣೆಯವರಂತೆ ಅಸ್ಪೃಶತೆ, ಚಾಂದ್ರಾಯಣಾದಿ ವ್ರತಗಳು, ಪ್ರಾಣಾಯಾವಾದಿ ಕಾಮ್ಯಕರ್ಮಗಳು ಇವುಗಳನ್ನು ಆಚರಿಸುತ್ತಿರುವರು. ಅವರಿಗೆ ಮಾಯಿದೇವರುಃ—

ಷ್ಟಪಚನ ದೈವದಂತರಮನುಸೊರ್ವ ವಿಚಾರಿಸಿ ನೋಡಿಲೋಕದೊಳ್।
ಪ್ರಪಚನೆ ಬಲ್ಪಿನಾಜನದ ಬುದ್ಧಿಗೆ ದೈವವನುಸೊಲ್ದು ಮುಟ್ಟಿದ॥
ಪರಮಶುದ್ಧತಾ ಸ್ಮರಣೆಯಿಲ್ಲದ ಶುದ್ಧಸಲೇಪಭಾವವಾ।
ಪ್ರಪಚನ ತಟ್ಟು ಮುಟ್ಟಿನೆಡೆಯಲ್ಲಿಯೇ ಬರ್ಪುದರಿಂ ಶಿವಾಧವಾ॥

ಭಾವಾರ್ಥ— ಕರ್ಮ ಭ್ರಾಂತರಾದ ಜನರ ಆಚರಣೆಯನ್ನು ನೋಡಿದರೆ ಅವರಿಗೆ ದೇವರಿಗಿಂತಲೂ ಹೊಲೆಯನೇ ಹೆಚ್ಚಿನವನೆಂದು ತೋರುವಂತೆ ಕಾಣುತ್ತದೆ. ಯಾಕಂದರೆ ತನ್ನಲ್ಲಿ ಇಷ್ಟಲಿಂಗ ಸಂಬಂಧವಿರುವಾಗ ಅದರಿಂದ ತಾನು ಪರಿಶುದ್ಧನಾಗಿರುವೆನೆಂಬ ಭಾವವಿರುತ್ತಿರುವಲ್ಲಿ ಅದನ್ನು ಮರೆತು ಹೊಲೆಯನು ತನ್ನನ್ನು ಮುಟ್ಟಿದ ಕೂಡಲೇ ತಾನು ಪತಿತನಾದೆನೆಂದು ಇಲ್ಲವೆ ತನಗೆ ಅರುಚಿತ್ವವು ಬರುವದೆಂದು ತಿಳಿದರೆ ದೇವಸ್ಪರ್ಶನಕ್ಕಿಂತಲೂ ಹೊಲೆಯನ ಮುಟ್ಟೋಣವು ಹೆಚ್ಚಿನದಾಗಲಿಲ್ಲವೇ? (ಅಂಗದ ಮೇಲೆ ಲಿಂಗಸಂಬಂಧವಾಗಿ ಲಿಂಗಭಾವವಿಡೆಗೊಳ್ಳದೆ ಮಲಿನಭಾವಿಯಾಗಿರ್ದೊಡೆ ಆ ಲಿಂಗಧಾರಣಂ ವ್ಯರ್ಥವೆಂದು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಅಭಿಪ್ರಾಯವು)

ಇನ್ನು ಅವರು ಆಚರಿಸತಕ್ಕ ಆಚರಣೆಗಳ ಸಂಬಂಧವಾಗಿ ವಿಚಾರವಾಡಿ ನೋಡಿದರೆ ಚಾಂದ್ರಾಯಣಾದಿ ವ್ರತಗಳು ಪ್ರಾಣಾಯಾವಾದಿ ನಿಯಮುಗಳು ಉಪವಾಸ ಮೊದಲಾದ ಕಾಮ್ಯಕರ್ಮ ಸಂಬಂಧವಾದ ಆಚರಣೆಗಳು ಲಿಂಗವಿಹೀನರಾದ ಭವಿಗಳಿಗೆ ಉತ್ಕೃಷ್ಟವಾದ ಧರ್ಮವಾಗಿರುವವೇ ಹೊರತು ಲಿಂಗಾಂಗಸಂಗಿಗಳಿಗೆ ಅವು ತತ್ವಾರ್ಥ ವಿಚಾರವಂದ ಸದ್ಧಾಂತವಾದ ಆಚರಣೆಗಳಾಗಿರುವದಿಲ್ಲ. ಅದು ಹೇಗೆಂದರೆ—

ಆದೊಡೆ ನಿಲ್ಲು ತೀರ್ಥ ಜಲ ಮಜ್ಜನ ಮುಂಡನದಂತಭಾವನಾ।
ಚ್ಛಾವನ ಧೌತ್ರದೇಹ ಪರಿಶುದ್ಧ್ಯುಪವಾಸ ಸಹಪ್ರಸಾರಣಾ॥
ಸಾದಿತನಿತ್ಯಕರ್ಮ ವಿಧಿ ನೋಳ್ಪಿಂದೆ ಮುಂಡೆಗೆ ಯೋಗ್ಯವೈಸೆ ಮು।
ತ್ರೈದೆಗೆ ಯೋಗ್ಯವಲ್ಲ ಸತತಂ ಪತಿಭಕ್ತಿಯಿರಲ್ ಶಿವಾಧವಾ॥

ಭಾವಾರ್ಥಃ— ಆ ಉಪವಾಸಾದಿ ವ್ರತಗಳೇ ಕರ್ತವ್ಯಗಳೆಂದು ಹೇಳುವದಾದರೆ ಪತಿಯೇ ದೈವವೆಂದು ತಿಳಿದಿರುವ ಮುತ್ತೈದೆಯು ಪತಿಯ ಅಪ್ಪಣೆಯ ಹೊರತು ತೀರ್ಥಜಲ ಸ್ನಾನ ತಲೆಬೋಳಿಸುವಿಕೆ ಉಪವಾಸ

ಪಾರಣೆ ಎಂದಿಗೂ ಮಾಡುವದಿಲ್ಲವಾದ್ದರಿಂದ ಅವೆಲ್ಲ ಮುಂಡೆಯಾಜರಿಸತಕ್ಕ ಧರ್ಮಗಳು. ಅದರಂತೆ ತಾನು ಸತಿ ಲಿಂಗ ಪತಿ ಯೆಂದು ತಿಳಿದಿರುವ ಶರಣರಿಗೆ ಶಿವೈಕಾಯತ್ತವಾದ ಆಚರಣೆಯ ಹೊರತು ಬೇರೆ ವ್ರತೋಪವಾಸಾದಿಗಳನ್ನು ಮಾಡುವುದು ಅಧರ್ಮವೆಂಬ ಭಾವವು.

ಇದರಂತೆ ಅರಿಸಿನ ಹೂವು ಗಂಧ ಒಡವೆ ವಸ್ತ್ರ ಮೊದಲಾದವುಗಳನ್ನಲಂಕರಿಸಿ ಮೆರೆಯುವುದು ಗಂಡನುಳ್ಳ ಮುತ್ತೈದೆಗೆ ಒಪ್ಪುವದೇ ಹೊರತು ಮುಂಡೆಗೆ ಯೋಗ್ಯವಲ್ಲದಿರುವಂತೆ ಲಿಂಗಾಂಗ ಸಂಬಂಧಯುಕ್ತವಾಗಿರುವ ಶರಣನು ಸಕಲೇಂದ್ರಿಯ ಮುಖಾಗತವಾದ ಸೌಖ್ಯವನ್ನು ಅನುಭವಿಸುವದಕ್ಕೆ ಯೋಗ್ಯನಾಗಿರುವನು. (ಅನ್ಯರ ಮನಸ್ಸೋಯದ ಪ್ರಾಪಾಣಿಕ ಸಂಪಾದನೆಯ ಸುಖದಲ್ಲಿ ವೈರಾಗ್ಯವನ್ನು ತಾಳದೆ ಎಲ್ಲವೂ ಪರಮಾತ್ಮನದೇ ಎಂದು ಭಾವಿಸಿ ಪ್ರಾಮಾಣಿಕವಾದ ಎಲ್ಲ ಉದ್ಯೋಗ ವ್ಯವಹಾರಗಳಲ್ಲಿ ತೊಡಗಿರುವದು ಧರ್ಮವಾಗಿರುವದು.)

ಹೀಗಿದ್ದು ಕೆಲವು ವೀರಶೈವರು ವೇದಾಂತದ ಬೆನ್ನುಹತ್ತಿ ಒಣವಾಗದ್ವೈತಿಗಳಾಗಿ ಪ್ರತ್ಯಕ್ಷ ಶಿವಯೋಗವಾಗಿರುವ ಲಿಂಗಧಾರಣ, ಪೂಜನೆ, ಧ್ಯಾನ ಮೊದಲಾದವುಗಳಿಗೆ ಆಶ್ರಯವಾಗಿರುವ ಶಿವದೀಕ್ಷೆಯನ್ನು ಹೊಂದದೆ, ಗರ್ವಾಂಧತೆಯಿಂದ ಲಿಂಗಸುಖಪರಿಣಾಮಿಗಳಾಗುವ ರೀತಿಯನ್ನರಿಯದೆ, ಶೂನ್ಯಬ್ರಹ್ಮವೇ ತಾವಾದೆವೆಂಬ ಅಹಂಕಾರದಿಂದ ತಾವು ಯೋಗಿಗಳೆಂದು ಹೇಳಿಕೊಳ್ಳುತ್ತಿರುವರು. ಇಂಥವರಿಗೆ ಪಾಯಿದೇವರು ಹೇಳಿದ್ದೇನಂದರೆ—

ದೃಷ್ಟದ ಲಿಂಗಧಾರಣ ಸಮರ್ಚನಚಿಂತನವಿಲ್ಲದಾಗಮ।
ಭ್ರಷ್ಟರಿಗಂತರಾನುಪಮ ಚಿದ್ಘನರೂಪ ಮಹಾತ್ಮ ಲಿಂಗಮ ॥
ಸ್ಪಷ್ಟಮದೃಶ್ಯಮಧ್ರುವಮಪೂಜ್ಯಮಗೋಚರವಿಷ್ಟಲಿಂಗನಿ।
ರ್ದಿಷ್ಟ ಬಹಿಷ್ಕ್ರಿಯಾಪರರಿಗಂತರಸಿದ್ಧಿ ದಿಟಂ ಶಿವಾಧಜಾ ॥

ಭಾವಾರ್ಥಃ— ಪ್ರತ್ಯಕ್ಷವಾದ ಇಷ್ಟಲಿಂಗವನ್ನು ಧರಿಸಿಕೊಂಡು ಅದರ ಪೂಜಾಧ್ಯಾನಗಳನ್ನು ಮಾಡದಿರುವ ಶಿವಾಗಮ ದೂರಂಥವರಿಗೆ ಅಸದೃಶವಾದ ಜ್ಞಾನಸ್ವರೂಪವಾದ ಅಂತರ್ಗತವಾದ ಪ್ರಾಣಲಿಂಗವು ವ್ಯಕ್ತವಾಗುವದಿಲ್ಲ, ಕಾಣಿಸುವದಿಲ್ಲ, ಸ್ಥಿರವಾಗುವದಿಲ್ಲ, ಪೂಜಾಯೋಗ್ಯವಾಗುವದಿಲ್ಲ, ಮನಸ್ಸಿಗೆ ನಿಲುಕುವದಿಲ್ಲ. ಮತ್ತೇನೆಂದರೆ— ಯಾರು

ಬಾಹ್ಯವ್ಯಾಪಾರಗಳನ್ನೆಲ್ಲ ಇಷ್ಟಲಿಂಗಕ್ಕೆ ಅರ್ಪಿಸುವ ಅವಧಾನವುಳ್ಳವರೋ ಅಂಥವರಿಗೆ ಮಾತ್ರ ಪ್ರಾಣಲಿಂಗವು ಗೋಚರಿಸುವದು ಎಂಬ ಭಾವವು.

ಇದಕ್ಕೆ ಕೆಲವರು ಆಕ್ಷೇಪಿಸುವದೇನಂದರೆ— ಯೋಗಸಾಧನದಿಂದಲ್ಲವೆ ಮನಸ್ಸಿನ ಧ್ಯಾನದಿಂದ ಸಮಾಧಿಸ್ಥರಾಗಿ ಪ್ರಾಣಲಿಂಗದಲ್ಲಿ ತಲ್ಲೀನರಾಗಿರುವಾಗ ಇಷ್ಟಲಿಂಗದಿಂದ ಪ್ರಯೋಜನವೇನು? ಇಷ್ಟೇಕೆ? ಬಾಹ್ಯಕ್ರಿಯೆಗಳಿಂದ ಅಂತರ್ಧ್ಯಾನಕ್ಕೆ ಒಂದು ರೀತಿಯಿಂದ ಬಾಧಕವೇ ಆಗುವದು ಎನ್ನುವರು. ಇದಕ್ಕೆ ಅನುಭಾವಿಗಳಾದ ಪಾಯಿದೇವರು ಎಲ್ಲಿಂಗೂ ತಿಳಿಯುವಂತೆ ಉತ್ತರಕೊಟ್ಟಿರುವರು. ಅದೇನಂದರೆ—

ಚಿರಸುಖಿ ಜಾಗ್ರದೊಳ್ ನೆರೆ ಮನೋರಮೆಯಪ್ಪ ನಿಜಪ್ರಿಯಾಂಗನಾ।
ಸರಸರತಿಪ್ರಸಂಗ ಪರಿಣಾಮದೊಳರ್ಪನೆಗಂ ತದೀಯನಿ ॥
ರ್ಭರಸುಖ ತೃಪ್ತಿ ಸುಪ್ತಿ ಯೆಡೆಗೊಂಡಿರಲಲ್ಲಿಯ ವೇಧೆಯಿಂದವಾ।
ಪರಿಯೆ ದಿಟಂ ಪ್ರಬುದ್ಧತೆಯೊಳಂತುಮದೇ ಸಹಜಂ ಶಿವಾಧವಾ ॥

ಟೀಕೆ— ಜಾಗ್ರದವಸ್ಥೆಯಲ್ಲಿ ತನ್ನ ಪ್ರಿಯೆಯೊಡನೆ ಕೂಡಿ ರಮಿಸಿ ಸುಖಪಡುತ್ತಿರುವವನು ನಿದ್ರೆಯಲ್ಲಿಯೂ ಕೂಡ ಆ ಜಾಗ್ರದವಸ್ಥೆಯ ಸುಖಸಂಸ್ಕಾರದಿಂದ ಕನಸಿನಲ್ಲಿಯೂ ಅದೇ ತರವ ಸುಖಪರಿಣಾಮಿಯಾಗಿಯೇ ಇರುವನು. ಮತ್ತು ಎಚ್ಚರುಗೊಂಡಾಗಲೂ ಹತ್ತಿರ ನಿಜಸತಿ ಇರುವದರಿಂದ ಆ ಸ್ವಪ್ನಾವಸ್ಥೆಯ ಸುಖಭೋಗವನ್ನೇ ಸಹಜವಾಗಿ ಕೊಂಡುತ್ತಿರುವನು. ಅದರಂತೆಯೇ ಇಷ್ಟಲಿಂಗಧಾರಣ ಪೂಜಾಸ್ಮರಣಾದಿಗಳಿಂದ ಸುಖಿಸುತ್ತಿರುವನು. ಆ ಸಂಸ್ಕಾರಬಲದಿಂದ ಪ್ರಾಣಲಿಂಗ ಜ್ಞಾನಿಯಾಗಲೂ ಶಕ್ತನಾಗುವನು.

ಈ ಪ್ರಕಾರ ಮಗ್ಗೆಯ ಪಾಯಿದೇವರು ಇಷ್ಟಲಿಂಗ ವಿಚಾರಗಳನ್ನೂ ಇಷ್ಟಲಿಂಗ ಪ್ರಾಣಲಿಂಗಗಳ ಸಂಬಂಧವನ್ನೂ, ಕರ್ಮಮಾರ್ಗದ ಅನಾವಶ್ಯಕತೆಯನ್ನೂ ಬಹು ಸರಸಾಗಿ ನಿರೂಪಿಸಿದ್ದಾರೆ.

(ಮುಂದೆ)

ಬೇ ಡಿ ಕೆ.

—:—

ಸಕಲ ಜೀವಾತ್ಮರಿಗೆ
ಲೇಸ ಬಯಸುವ ತೆರದ
ಅಕಳಂಕ ಬುದ್ಧಿಯನು
ಕರುಣಿಸೆಲೆ ದೇವಾ ॥ಪ॥

ಲೋಕ ಸೇವೆಯ ನೈಪೆ
ನೆಂದಹಂಕರಿಸುವಾ
ಕಾಕು ಬುದ್ಧಿಯನೆನ್ನೊ
ಳಿರದಂತೆ ತೊಲಗಿಸುತೆ ॥ಸ॥ ೧॥

ಕಳವು, ಕೊಲೆ, ಹಿಂಸೆಗಳ
ನೈವರಾ ಸಹವಾಸ
ದೊಳಗೆನ್ನ ನಿರಿಸದಲೆ
ಕರುಣಾಳು ಪಾಲಿಸುತೆ ॥ಸ॥ ೨॥

ಚಂದನವ ತುಂಡರಿಸಿ
ತೇದರು ಗಂಧ ಕೆಡದೊಲು
ಕುಂದದ ಧೈರ್ಯ ಕರುಣಿಸಿ
ಬಂದೆಡರ ಸಹಿಸಲ್ಕೆ ನೀಂ ॥ಸ॥ ೩॥

ಜನತೆಯೊಳು ಮೇಲು ಕೀ
ಳುಗಳೆಂದು ಭೇದಿಸುವ
ಮನವ ನೆನಗೀಯದಲೆ
ಸಮತೆಯನು ಕರುಣಿಸುತೆ ॥ಸ॥ ೪॥

ಸತ್ಯ, ಶಮೆ, ದಮೆ, ಶಾಂತಿ
ಧೈರ್ಯ ಸ್ಥೈರ್ಯಗಳ
ನತ್ಯಧಿಕದಿಂ ಕರುಣಿಸುತೆ
ಜಗವನು ಪೊರೆಯುತಲಿ ನೀಂ ॥ಸ॥ ೫॥

ಶ್ರೀ ವೀರೇಶ್ವರ ಬೆಂಗಳೂರುನಗರ.

ಪುರಾಣಗಳು ಸಾಕು, ವಚನಗಳು ಬೇಕು.

(ಲೇಖಕ:— ಓರ್ವ ಶಿಕ್ಷಕ ಬಳಗಾನೂರ)

ಶ್ರಾವಣಮಾಸದಲ್ಲಿ ಜನರಿಗೆ ಕೆಲಸ ಕಡಿಮೆ. ಧಾರ್ಮಿಕ ವಿಧಿಗಳು ಹೆಚ್ಚು. ಆ ಮಾಸದಲ್ಲಿ ಹಲಕೆಲವು ಕಡೆ ಒಂದೊಂದು ದೇವರ ಹೆಸರಿನಿಂದ ಪುರಾಣಗಳು ನಡೆಯುವವು. ಅದರೆ ಪುರಾಣ ಬೋಧನೆಯಿಂದ ಜನರಲ್ಲಿ ಧಾರ್ಮಿಕ ಉಚ್ಚತತ್ವಗಳು ಆಚಾರವಿಚಾರಗಳು ನಿಶ್ಚಯವಾಗಿ ಉತ್ಪನ್ನವಾಗುವವೆಂದು ಹೇಳಲಿಕ್ಕೆ ಬರಲಾರದು. ಅವುಗಳಲ್ಲಿ ಅದ್ಭುತ ವರ್ಣನೆಗಳದ್ದು ಇವು ಬಹುಸಾರ ಅನೈಕ್ಯತೆಯನ್ನು ಬೆಳೆಸತಕ್ಕವುಗಳಾಗಿವೆ.

ಧಾರ್ಮಿಕ ವಿಷಯದಲ್ಲಿ ಪುರಾಣಗಳು ಪ್ರಮಾಣ ಗ್ರಂಥಗಳೆನಿಸಿಕೊಳ್ಳಲಾರವು. ಹಿಂದುಧರ್ಮಕ್ಕೆ ಹೇಗೆ ವೇದಗಳೋ ಹಾಗೆ ವೀರಶೈವ ಧರ್ಮಕ್ಕೆ ವಚನಗಳು ಮಹತ್ವದ ಗ್ರಂಥಗಳಾಗಿವೆ. ಇವುಗಳನ್ನು ನಿಂದಿಸಿ ಸ್ವಾರ್ಥಸಾಧಕರು ರಚಿಸಿರುವ ಹಲಕೆಲವು ಪುರಾಣ ಗ್ರಂಥಗಳನ್ನೇ ಪ್ರಮಾಣಗಳನ್ನಾಗಿ ಸಮಾಜವು ನಂಬಿದ್ದರಿಂದ ಅದು ಮೋಸ ಹೋಗಿ ಸಂಕಟದಲ್ಲಿ ಬಿದ್ದಿದೆ. ಉದಾಹರಣಾರ್ಥವಾಗಿ, ದೇವರು ಒಬ್ಬನೇ ಎಂದು ಎಲ್ಲರೂ ತಿಳಿದಿರುವಾಗ, ಬ್ರಹ್ಮ ವಿಷ್ಣು ರುದ್ರರೆಂದೂ, ಇವರಲ್ಲಿ ಪರಸ್ಪರ ಹೆಚ್ಚುಕಡಿಮೆಗಳು ಇರುವವೆಂದೂ ಹೇಳಿ, ತ್ರಿಮೂರ್ತಿಗಳ ತಿಕ್ಕಾಟವನ್ನು ಪುರಾಣಗಳು ಬೋಧಿಸುತ್ತವೆ. ಈ ವಿಷಯದಲ್ಲಿ ಧಾರ್ಮಿಕ ವರ್ಗದವರು ಶಿವ ಎಂದರೆ ವಿಷ್ಣು ದ್ರೋಹ ಮಾಡಿದಂತಾಗುತ್ತದೆ, ಹರಿ ಎಂದರೆ ಹರದ್ರೋಹವಾಗುತ್ತದೆ, ಎಂದು ಬೋಧಿಸಿ ಸ್ಮಾರ್ತ ವೈಷ್ಣವ, ವೈವ ವೈಷ್ಣವ ಎಂಬ ಕಲಹಾಗ್ನಿಯನ್ನು ಎಬ್ಬಿಸಿದ್ದಾರೆ ನಮ್ಮ ಜನರು ಇಂಥ ಮೋಸದ ಬಲೆಗೆ ಬೀಳಬಾರದು. ಆದರೆ ವಚನಗಳಲ್ಲಿ ಹೀಗೆ ತ್ರಿಮೂರ್ತಿಗಳ ತಿಕ್ಕಾಟವಿಲ್ಲ. ದೇವರು ಒಬ್ಬನೇ ಎಂದು ಅವು ಬೋಧಿಸುತ್ತವೆ.

ಬಸವಪುರಾಣದಲ್ಲಿ ಮುಗ್ಧಸಂಗಯ್ಯನು ಒಬ್ಬ ವೇಶ್ಯಾಸ್ತ್ರೀಯಳ ಮನೆಗೆ ಹೋದಾಗ ಆಕೆಯ ಕುಜಗಳನ್ನೇ ಪೂಜಿಸಿದನೆಂದು ವರ್ಣಿತವಾಗಿದೆ. ಇದು ಎಂಥ ಅಲೌಕಿಕ ವರ್ಣನೆಯು! ಅಕೆಯಾದರೂ

ಕುಚಗಳನ್ನು ಹೇಗೆ ಪೂಜಿಸಿಕೊಂಡಾಳು!! ಹೀಗೆ ಪುರಾಣಗಳಲ್ಲಿ ಪೇಶ್ಯೆಯರ ವರ್ಣನೆಗಳು ಅತ್ಯಧಿಕವಾಗಿ ಬರುತ್ತವೆ. ಅವುಗಳಲ್ಲಿ ಅಶ್ಲೀಲತೆಯು ತುಂಬಿರುತ್ತದೆ. ಪುರಾಣಿಕರು ಮನರಂಜನೆಗಾಗಿ ನಾನಾತರದ ಇಂಥ ಕಥೆಗಳನ್ನು ಹೇಳುವದುಂಟು. ಅವುಗಳು ನೈತಿಕ ಅಥವಾ ಧಾರ್ಮಿಕ ತತ್ವಗಳನ್ನು ಬೋಧಿಸುವಂಥವೇ ಇರುತ್ತವೆಂದು ಹೇಳಲಿಕ್ಕೆ ಬರುವದಿಲ್ಲ. ಬೀಭತ್ಸವೂ ಇರುವದುಂಟು. ಆದರೆ ವಚನಗಳಲ್ಲಿ ಇಂಥ ಅನೈತಿಕ ಆಚಾರ ವಿಚಾರಗಳಿಗೆ ಇಂಬು ಇಲ್ಲ. ಅದುವರಿಂದ ಜನರಲ್ಲಿ ಇಂಥ ಕಡಿಮೆ ವಿಚಾರದ ಪುರಾಣ ಪುಸ್ತಕಗಳನ್ನು ಪಠಣ ಮಾಡಿಸಿ ದೇವರ ಹಾಗು ಧರ್ಮದ ಬಗ್ಗೆ ತಪ್ಪು ಕಲ್ಪನೆಗಳನ್ನು ತುಂಬಿಸಬಾರದು. ವಚನಗಳ ಪಾರಾಯಣ ನಡಿಸಿ ಧಾರ್ಮಿಕ ಮೂಢಭಾವನೆಗಳನ್ನು ತೆಗೆಯಿಸಬೇಕು. ಹೀಗೆ ಮಾಡದಹೊರ್ತು ನಮ್ಮಲ್ಲಿ ಸಮಾಜ ಸುಧಾರಣೆಯಾಗುವದು ಶಕ್ಯವಿಲ್ಲ.

ಮುಗಿಲ ಜೇನು.

ಮರದ ಕೊಂಬೆಗೆ ಒಂದು
ತೊಟ್ಟಿಲವ ಕಟ್ಟಿಹುದು
ತೊಟ್ಟಿಲಲಿ ಆಡುತಿದೆ
ಕೈಕಾಲುಗಳ ಬಿಚ್ಚಿ
ಈಗ ಕಣ್ತೆರೆದಿರುವ
ಹೊಚ್ಚ ಹೊಸ ಎಳೆಯ ಕೂಸು ॥

ಮರದ ಮೇಲ್ಬದಿಯಲ್ಲಿ
ಮರಜೇನು ಹುಟ್ಟಿಹುದು
ದೇವರಾಯನ ಕರುಣೆ
ಯಿಂದ ಹುಟ್ಟಿಗೆ ಸಣ್ಣ
ಹುಗಿಲು ಕೊರೆದಿಹುದಲ್ಲಿ
ಹನಿಯುತಿದೆ ಸವಿಜೇನು
ಒಂದೊಂದು ಹನಿಯಾಗಿ
ಧಾರೆಯಾಗಿಳಿಯುತಿದೆ
ಹನಿಗಡಿದು ಆಧಾರೆ
ಮತ್ತೆ ಮೇಲಕೆ ಏರಿ
ಹನಿಗೊಂಡು ಇಳಿಯುತಿಹುದು ॥

ತೂಗುತಿದೆ ತೊಟ್ಟಿಲವು
ಬಿಡದೆ ತೂಗಲು ಬೇಕು
ತೂಗು ನಿಂತರೆ ಹಸುಳೆ
ಕಿರಚಿ ಕೂಗುವದೆನಿತೊ
ಹುಟ್ಟಿರುವ ರೆಂಬೆಯದು
ಅಂತರದಿ ತೇಲುತಿದೆ
ರೆಂಬೆಯಲಿ ಹುಟ್ಟಿಹುದು
ಹುಟ್ಟಿನಲಿ ಜೇನಿಹುದು
ಜೇನಿನಲಿ ಸವಿಯಿಹುದು

ಸವಿಯಲ್ಲಿ ಸುಧೆಯಿಹುದು
ಅದು ಒಸರಿ ಇಳಿವಂತೆ
ದೇವರಾಯನ ಕರುಣೆ
ಹುಗಿಲು ಕೊರೆದಿಹುದಲ್ಲಿ
ಹನಿಹನಿದು ಹನಿಯುತಿದೆ
ಇತ್ತ ಈ ತೊಟ್ಟಿಲಲಿ
ಅಮರಶಿಶು ಅಳುತಲಿದೆ
ತಿನ್ನಲಿಕೆ ಬಾಯಿಹುದು
ಅರಗಿಸಲು ಒಡಲಿಹುದು
ಸಹಿಸಲಾಗದೆ ಅಳುತ
ತೊಟ್ಟಿಲಲಿ ತೂಗುತಿದೆ
ಇಂತಿರಲು ಆ ಅಮೃತ
ತನ್ನಬಾಯಿಗೆ ಎಂದು
ಎಂತು ಬೀಳುವದದನು
ತಿಳಿಯುವದೆ ಆ ಕೂಸು ?
ಜೀಕು ನಿಂತಿರಲಾಗ ಲೇಸು ಲೇಸು ॥

—ಸಿಂಪಿ ಲಿಂಗಣ್ಣ.

ಟೀಪು:— ಈ ಕವಿತೆಯಲ್ಲಿ ಬಂದ 'ಹುಟ್ಟು' ಎಂಬುದು 'ಜೀನುಹುಟ್ಟು' ಎಂಬರ್ಥದಲ್ಲಿ ಉಪಯೋಗಿಸಿದೆ.

ಬೌದ್ಧಧರ್ಮ.

(ಲೇಖಕ:— ವೀರಪ್ಪ ಯಗಟಿ ಬಿ. ಏ. ಎಲ್. ಎಲ್ ಬಿ. ಹಾವೇರಿ.)

ಬೌದ್ಧಧರ್ಮವು ಜಗತ್ತಿನ ಮುಖ್ಯ ಧರ್ಮಗಳಲ್ಲಿ ಒಂದಾಗಿರುವದು. ಇದರ ಉಗಮವು ಭರತಖಂಡದಲ್ಲಿಯೇ ಆಯಿತು. ಆದರೆ ಈ ದೇಶದಲ್ಲಿ ಈಗ ಇದು ನಾಮಶೇಷವಾಗಿರುವದು. ಈಗ ಇದು ಟಿಬೇಟ್, ಚೈನಾ, ಜಪಾನ, ಸಿಲೋನ ದೇಶಗಳಲ್ಲಿ ಮುಖ್ಯ ಧರ್ಮವಾಗಿರುವದು. ಈ ಧರ್ಮ ಸ್ಥಾಪಕನು ಗೌತಮಬುದ್ಧನು. ಇವನು ಕಪಿಲ ವಸ್ತುವೆಂಬ ಪಟ್ಟಣದಲ್ಲಿ ಮಾಯಾ ಮತ್ತು ಶುದ್ಧೋದನರೆಂಬ ತಾಯಿತಂದೆಗಳ ಹೊಟ್ಟೆಯಲ್ಲಿ ಕ್ರೈಸ್ತ ಪೂರ್ವ ೫೬೨ ರಲ್ಲಿ ಜನ್ಮವೆತ್ತಿದನು. ಶುದ್ಧೋದನನು ಶಾಕ್ಯವಂಶದ ರಾಜನಾಗಿದ್ದನು. ಬುದ್ಧನು ಹುಟ್ಟಿದ ಏಳು ದಿನಗಳಲ್ಲಿಯೇ ಅವನ ತಾಯಿಯು ಮರಣಹೊಂದಿದಳು. ಈತನ ಮಲತಾಯಿಯು ಈತನನ್ನು ಜೋಪಾನ ಮಾಡಿದಳು. ಇವನು ಎಶೋಧರೆ ಎಂಬವಳನ್ನು ಲಗ್ನವಾದನು. ರೋಹಿಲನೆಂಬ ಪುತ್ರಸಂತಾನವೂ ಆಯಿತು. ಬುದ್ಧನು ಚಿಕ್ಕವನಿರುವಾಗಲೇ ಜಗತ್ತಿನಲ್ಲೆಲ್ಲ ದುಃಖವು ಪಸರಿಸಿರುವದನ್ನು ನೋಡಿ ಬಹು ಕಳವಳಪಟ್ಟನು. ಮುಪ್ಪಿನಿಂದ ನಡುಬಾಗಿ ಕೋಲು ಊರುತ್ತ ಬರುತ್ತಿದ್ದ ಮನುಷ್ಯನ ಮತ್ತು ಮೃತವಾದ ಮನುಷ್ಯನ ದೃಶ್ಯವು ಇವನಿಗೆ ಗೋಚರವಾದಾಗ ಇವನ ದುಃಖವು ಮಿತಿಮೀರಿತು. ಆಗ ಅವನು ಜಗತ್ತು ಶಾಶ್ವತವಲ್ಲವೆಂದು ಭಾವಿಸಿದನು. ದುಃಖವನ್ನು ಅಳಿದುಹಾಕಲು ರಾಜ್ಯ ಸಂಪತ್ತು ಬಂಧುಬಳಗವನ್ನು ತ್ಯಾಜ್ಯ ಮಾಡಿ ಶಾಶ್ವತ ಶಾಂತಿಮಾರ್ಗವನ್ನು ಶೋಧಿಸಬೇಕೆಂದು ನಿರ್ಧರಿಸಿದನು.

ಬುದ್ಧನು ಇಪ್ಪತ್ತೊಂಭತ್ತು ವಯಸ್ಸಿನವನಿರುವಾಗ ಅವನಿಗೆ ಸಂಪೂರ್ಣ ವೈರಾಗ್ಯವುಂಟಾಗಿ ಒಂದು ದಿನ ರಾತ್ರಿಯಲ್ಲಿ ಯಾರಿಗೂ ತಿಳಿಯದಂತೆ ನಿದ್ರೆಯಿಂದೆಚ್ಚತ್ತು ತನ್ನ ಐದು ಜನ ಸ್ನೇಹಿತರೊಂದಿಗೆ ಕಾನಿಯ ವೇಷವನ್ನು ಹಾಕಿಕೊಂಡು ರಾಜಧಾನಿಯನ್ನು ಬಿಟ್ಟು ಹೊರಹೊರಟನು ಇದು ಸಾಧಾರಣವಾದ ತ್ಯಾಗವಲ್ಲ. ಅತನ ಹೃದಯ ಮನಸ್ಸುಗಳು ಸಂಪೂರ್ಣವಾಗಿ ಪಕ್ವವಾಗಿದ್ದವು. ವಿಧವಿಧವಾದ ರಾಜಪೈ

ಭವ, ಪಕ್ವವಾದ ಮೃದುವಾದ ಕುತ್ತನಿಯ ಶಯನಗೃಹವನ್ನು ತ್ಯಾಜ್ಯ ಮಾಡಿ ಮನೆ ಮನೆ ತಿರುಗಿ ತಿರಿದನ್ನವನ್ನೂ, ಉರುಟಾದ ಹರಕು ಕಾವಿಯನ್ನೂ, ನೆಲವನ್ನೇ ಹಾಸಿಗೆಯನ್ನೂ ಮಾಡಿಕೊಂಡದ್ದು ಅಗ್ರ್ಯವಾದ ವೈರಾಗ್ಯದ ದೃಷ್ಟಾಂತವಲ್ಲವೇ? ಕೆಲವು ಕಾಲ ಹೀಗೆ ಸಂಚರಿಸುತ್ತ ಆತನು ಉರುವೆಲವೆಂಬ ಅರಣ್ಯವನ್ನು ಆಶ್ರಯಿಸಿದನು. ಅವನು ಸತ್ಯಶೋಧನೆಗಾಗಿ ಅನೇಕ ದಿನಗಳ ವರೆಗೆ ಉಪವಾಸವಿದ್ದು ಕಠಿಣವಾದ ತಪಸ್ಸು ಮಾಡಿದನು. ಆದರೂ ಸತ್ಯದ ಬೆಳಕು ಅವನಿಗೆ ಗೋಚರವಾಗಲಿಲ್ಲ. ಆಗ ಆತನು ಈ ಪದ್ಧತಿಯು ಸರಿಯಾದುದಲ್ಲವೆಂದು ಮನಗಂಡು ಧ್ಯಾನಮಾರ್ಗವನ್ನು ಸ್ವೀಕರಿಸಿದನು. ಬುದ್ಧನು ಒಂದು ಗಿಡದ ಅಡಿಯಲ್ಲಿ ಕುಳಿತು ಧ್ಯಾನ ಮಾಡಲುದ್ಯುಕ್ತನಾದನು. ಅನೇಕ ದಿನಗಳು ಧ್ಯಾನದಲ್ಲಿ ಕಳೆಯಲಾಗಿ ಒಂದು ದಿನ ಬುದ್ಧನಿಗೆ ಜ್ಞಾನಪ್ರಕಾಶವುಂಟಾಯಿತು. ಅವನ ಉದ್ದೇಶವು ಸಾಧ್ಯವಾಯಿತು.

ಹೀಗೆ ಅವನಿಗೆ ಜ್ಞಾನೋದಯವುಂಟಾಗಲು ಆತನು ಅದನ್ನು ಜಗತ್ತಿನ ಮಾನವರಿಗೆ ಬೋಧಿಸುವುದು ತನ್ನ ಕರ್ತವ್ಯವೆಂದು ತಿಳಿದನು. ಅವನ ಸೌಮ್ಯವಾದ ಮುಖಮುದ್ರೆಯು, ಆತನ ಗಾಂಭೀರ್ಯವಾದ ಜೀವಿತವು ಆತನ ಸರಳವಾದ ಪ್ರೇಮವು ಮತ್ತು ಗೂಢವಾದ ಉಪದೇಶಗಳು ಸ್ತ್ರೀಪುರುಷರ ಹೃದಯಗಳನ್ನು ಆಕರ್ಷಿಸಿದವು. ಅವನ ಪ್ರಥಮ ಶಿಷ್ಯರೆಂದರೆ ಅವನ ಐದು ಜನ ಸ್ನೇಹಿತರು. ಕ್ರಮೇಣ ಅವನ ಶಿಷ್ಯವರ್ಗವು ಹೆಚ್ಚಾಗುತ್ತ ಹೋಯಿತು. ಅವರಲ್ಲಿ ಮುಖ್ಯರಾದವರೆಂದರೆ ಉಪಾಲಿ, ಕಾಶ್ಯಪ, ಆನಂದ ಮುಂತಾದವರು. ಬ್ರಾಹ್ಮಣರನೇಕರು ಬೌದ್ಧಧರ್ಮ ಸ್ವೀಕಾರ ಮಾಡಿದರು. ಒಂದು ಸ್ತ್ರೀ ಸನ್ಯಾಸಿವರ್ಗವೂ ಪ್ರಾರಂಭವಾಯಿತು. ಆತನ ಕಾಲದಲ್ಲಿ ಭಾರತದ ಧರ್ಮವು ಹೀನಾವಸ್ಥೆಯಲ್ಲಿದ್ದಿತು. ಒಂದುಕಡೆಯಲ್ಲಿ ಅನೇಕ ದೇವತೆಗಳ ಕಲ್ಪನೆಯೂ ಇನ್ನೊಂದು ಕಡೆ ಹಿಂಸಾಮಯವಾದ ಯಜ್ಞಗಳೂ ವರ್ಣಭೇದ ಜಾತಿಭೇದಗಳನ್ನು ಕಲ್ಪಿಸಿದ ಮನುಸ್ಮೃತಿಯಲ್ಲಿ ನಂಬಿಗೆಯೂ ಬುದ್ಧನ ಹೃದಯವನ್ನು ಭೇದಿಸಿದವು. ಅಂಧಶ್ರದ್ಧೆಯ ಮೂಲಕ ಮನುಷ್ಯನ ನೈತಿಕವೃತ್ತಿಗೆ ಕುಂದುಕೊರತೆಗಳುಂಟಾಗುವವು. ಧರ್ಮದ ಹೆಸರಿನಲ್ಲಿ ಅನೇಕ ಪಾಪಗಳು ಘಟಿಸುತ್ತಿರುವದನ್ನು ನೋಡಿ ಬುದ್ಧನು ಪುರೋಹಿತರ ಸಹಾಯವಿಲ್ಲದೆ ಅಥವಾ ದೇವರಲ್ಲಿ ನಂಬಿಗೆಯಿಡದೆ ಮೋಕ್ಷವನ್ನು ಸಂಪಾದಿಸಬಹುದೆಂದು ಹೇಳಿದನು. ಆದರಿಂದ ಅವನು ಮಾನವವರ್ಗದ ಯೋಗ್ಯತೆಯನ್ನೂ ನೈತಿಕ ನಿಯಮದ ಬೆಲೆಯನ್ನೂ ಹೆಚ್ಚಿಸಿದನು. ಬುದ್ಧನು ಜಗತ್ತಿನ ಕಾರಣವನ್ನು ವಿವರಿಸುವಾಗ ಕರ್ಮನಿಯಮದಿಂದ ವಿವರಿಸುವನಲ್ಲದೆ ದೇವರ ಸಹಾಯವು ಅವನಿಗೆ ಅವಶ್ಯವಾಗಿಲ್ಲ.

ಬುದ್ಧನು ಜನರ ಮೂಢನಂಬಿಕೆಯನ್ನು ನೋಡಿ ಅಸಮಾಧಾನಪಟ್ಟನು. ಪುರೋಹಿತರು ಜನರಲ್ಲಿ ಧರ್ಮದ ವಿಷಯದಲ್ಲಿ ಅಂಧಶ್ರದ್ಧೆಯನ್ನು ಹುಟ್ಟಿಸಿ ದ್ರವ್ಯಸಂಪಾದಿಸುವವರನ್ನು ಕಂಡು ವ್ಯಥೆಪಟ್ಟನು. ಜನರು ಆಗ ಅನೇಕ ದೇವತೆಗಳನ್ನು ಆರಾಧನೆಮಾಡುತ್ತಿರುವದನ್ನೂ, ದೇವತೆಗಳು ತಪ್ಪಿಗೆ ತೊಂದರೆ ಕೊಡಬಾರದೆಂದು ಅವರಿಗೆ ಅನೇಕ ಹವಿಸ್ಸು ಪೂಜೆ ಪುನಸ್ಕಾರಗಳನ್ನು ಅರ್ಪಿಸುತ್ತಿರುವದನ್ನೂ ಕಂಡು ಬುದ್ಧನು ಇಂತಹ ದೇವರನ್ನು ಮತ್ತು ವೇದಗಳನ್ನು ನಿರಾಕರಿಸಿದನು. ವೇದವು ದೇವೋಕ್ತವೆಂದು ನಂಬಲ್ಪಟ್ಟ ಗ್ರಂಥದ ಆಧಾರದ ಮೇಲಿಂದ ಅವನು ತನ್ನ ಧರ್ಮವನ್ನು ಸ್ಥಾಪಿಸಲು ಇಚ್ಛಿಸಲಿಲ್ಲ. ದೇವರ ಕೋಪವನ್ನು ಹೋಗಲಾಡಿಸಲು ಪ್ರಾರ್ಥನೆ ಮಾಡುವದರಿಂದ ಮೋಕ್ಷವು ಲಭಿಸುವದೆಂದು ಅವನು ನಂಬಲಿಲ್ಲ. ಸ್ವಕರ್ತವ್ಯದ ಯೋಗ್ಯತೆಯ ಮೇಲೂ ಉದಾತ್ತವಾದ ನೈತಿಕ ಧ್ಯೇಯದ ಮೇಲೂ, ವಿಚಾರಯುಕ್ತವಾದ ನಂಬಿಗೆಯ ತಳಹದಿಯ ಮೇಲೂ, ಅವನು ತನ್ನ ಧರ್ಮಮಂದಿರವನ್ನು ರಚಿಸಿದನು. ಮೋಕ್ಷವು ಪ್ರತಿಯೊಬ್ಬನ ಸದಾಚರಣೆಯ ಮೇಲೂ ಸತ್ಯದ ಮೇಲೂ ಅವಲಂಬಿಸಿರುವದೆಂದು ಆತನ ನಂಬಿಗೆ. ಸತ್ಯವನ್ನು ಅರಿಯದಿರುವದೇ ದುಃಖದ ಕಾರಣವೆಂದು ಆತನು ಹೇಳಿದನು. ಬುದ್ಧನ ಕಾಲದಲ್ಲಿದ್ದ ಧರ್ಮದ ಮತ್ತು ಸಮಾಜದ ಸ್ಥಿತಿಗತಿಗಳೇ ವೀರಶೈವ ಮತೋದ್ಧಾರಕನಾದ ಬಸವೇಶ್ವರನ ಕಾಲದಲ್ಲಿದ್ದವು. ಬುದ್ಧನಂತೆಯೇ ಬಸವಣ್ಣನವರು ಅನೇಕ ದೇವತೆಗಳಲ್ಲಿಯ ನಂಬಿಕೆಯನ್ನು ಪ್ರಬಲವಾಗಿ ನಿರಾಕರಿಸಿರುವನು. ವೇದದ ಮೂಗ ಕೋಯ್ಯವೆ ಎಂದು ಮುಂತಾಗಿ ಸಿಟ್ಟಿನಿಂದ ಹೇಳಿರುವರು. ಬಸವಣ್ಣನವರು ತಮ್ಮ ಧರ್ಮಬೋಧೆಯಲ್ಲಿ ಮತ್ತು ಆಚರಣೆಯಲ್ಲಿ ದಯಾ, ಸರ್ವಸಮಾನತ್ವ, ನೀತಿಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿರುವರು. ಭರತಭೂಮಿಯಲ್ಲಿ ಧರ್ಮ, ನೀತಿಗಳಲ್ಲಿ ಯಥಾರ್ಥವಾದ ಜೋಧೆಯನ್ನು ಮಾಡಿ ಅಸದೃಶವಾದ

ಕ್ರಾಂತಿಯನ್ನುಂಟು ಮಾಡಿದವರೆಂದರೆ ಬುದ್ಧ ಬಸವರೀರ್ವರೇ ಹೊರತು ಮತ್ತಾರೂ ಇರುವದಿಲ್ಲ.

ಬುದ್ಧನು ವಿಚಾರವಾದಿಯು. ದೈವೀ ಕಲ್ಪನೆಯ ಸಹಾಯವಿಲ್ಲದೆ ಆಧುನಿಕ ವಿಜ್ಞಾನವಾದಿಗಳಂತೆ ಸೃಷ್ಟಿ ಕ್ರಮವನ್ನು ಅರಿಯಲು ಈತನು ಇಚ್ಛಿಸಿದನು. ತರ್ಕದ ಆಧಾರದ ಮೇಲೆ ಧರ್ಮವನ್ನು ಸ್ಥಾಪಿಸಿದನು. ಬುದ್ಧನು ನಾಲ್ಕು ಸತ್ಯಮಾರ್ಗಗಳನ್ನು ಪ್ರತಿಪಾದಿಸಿದನು. ಜೀವಿತವು ದುಃಖಮಯವಾದದ್ದು. ಜನನ, ಜರಾ, ರೋಗ ಮತ್ತು ಮರಣಗಳು ದುಃಖಮಯವಾದವುಗಳು. ತೃಪ್ತಿಹೊಂದದ ಆಶೆಯು ಸಹ ದುಃಖಾಸ್ಪದವಾದದ್ದು. ಧಮ್ಮಪದದ ಗ್ರಂಥದಲ್ಲಿ ಬುದ್ಧನು ಹೀಗೆ ಹೇಳಿದ್ದಾನೆ. "ಸಮುದ್ರ ಮಧ್ಯದಲ್ಲಿ ಅಡಗಿ ಕುಳಿತರೂ, ಗಿರಿಕಂದರಗಳಲ್ಲಿ ಮರೆಮಾಜ ಕೊಂಡರೂ, ಆಕಾಶದಲ್ಲಿ ಸಂಚರಿಸುತ್ತಿದ್ದರೂ ಮರಣವು ತಪ್ಪದು. ಎಲ್ಲ ವಸ್ತುಗಳು ಹೆಸರಿಲ್ಲದಂತೆ ನಾಶವಾಗುವವು." ಸಂಸಾರ ದುಃಖದಿಂದ ಪಾರಾಗಿ ನಿರ್ವಾಣವನ್ನು ಹೊಂದುವದೇ ಇದಕ್ಕೆ ಮುಖ್ಯೋಪಾಯವು. ಬೌದ್ಧಧರ್ಮವು ನೈತಿಕಮಾರ್ಗವನ್ನು ತೋರಿಸುವದರಿಂದಲೂ, ಜೀವಿತದ ಪರಿಪೂರ್ಣತೆಯನ್ನು ಬೋಧಿಸುತ್ತಿರುವದರಿಂದಲೂ ಇದಕ್ಕೆ ನಿರಾಶಾವಾದವೆಂದು ಹೆಸರಿಡಲು ಬರುವಂತಿಲ್ಲ. ಪಾಪಮಯವಾದ ಜೀವಿತವನ್ನು ತ್ಯಾಗಮಾಡಿ ಉತ್ತಮ ಜೀವಿತವೆಂದರೆ ಅರ್ಹತ ಸ್ಥಿತಿಯನ್ನ ಹೊಂದಬೇಕೆಂದು ಬುದ್ಧನು ಬೋಧಿಸುತ್ತಾನೆ. ಎಲ್ಲ ವಸ್ತುಗಳು ಕ್ಷಣಿಕವಾದ್ದರಿಂದ ಮತ್ತು ಕ್ಷಣಿಕ ವಸ್ತುಗಳನ್ನು ನಾವು ಅಪೇಕ್ಷೆಮಾಡುವದರಿಂದ ದುಃಖವು ಘಟಿಸುವದು. ಆಶೆಗಳ ಉತ್ಪತ್ತಿಗೆ ಅಜ್ಞಾನವೇ ಕಾರಣವು. ಜ್ಞಾನೋದಯವಾದ ಕೂಡಲೇ ದುಃಖವು ಇಲ್ಲದಂತಾಗುವದು. ಜೀವಿತವು ದುಃಖಮಯವಾದುದೆಂಬ ತತ್ವವನ್ನು ಬುದ್ಧನು ಉಪನಿಷತ್ತಿನಿಂದಲೇ ಸ್ವೀಕರಿಸಿದನು. ಇವನು ಹೆರಾಕ್ಲೈಟಿಸನಂತೆ ಪ್ರಪಂಚವು ಅಸ್ಥಿರವಾದುದೆಂದು ಪ್ರತಿಪಾದಿಸಿದನು. ಜಗತ್ತಿನ ಸ್ಥಿತಿಗೆ ಸಾರ್ವತ್ರಿಕವಾದ ಕಾರಣನಿಯಮವೇ (*Law of universal causation*) ಆಧಾರವೆಂದು ಬುದ್ಧನು ಹೇಳುತ್ತಾನೆ. ಭಾರತೀಯರ ವಿಜ್ಞಾನಕ್ಷೇತ್ರದಲ್ಲಿ ಬುದ್ಧನು ಪ್ರತಿಪಾದಿಸಿದ ಇದೊಂದು ಮಹತ್ವವಾದ ತತ್ವವಾಗಿದೆ. ಅಸ್ತಿತ್ವದಲ್ಲಿರುವ ಪ್ರತಿಯೊಂದು ವಸ್ತುವಿಗೂ ಕಾರಣವುಂಟು ಮತ್ತು ಲಯವುಂಟು.

ಉಪನಿಷತ್ತುಗಳು ಅಸ್ಥಿರವಾದ ಸೃಷ್ಟಿಯ ತಳಹದಿಯಲ್ಲಿ ಸ್ಥಿರವಾದ ವಸ್ತುವಿದೆಯೆಂದು ಹೇಳುತ್ತವೆ. ಆದರೆ ಬೌದ್ಧಧರ್ಮವು ಇಂತಹ ಸ್ಥಿರವಾದ ವಸ್ತುವು ಜ್ಞಾನಕ್ಕೆ ಅಗಮ್ಯವಾಗಿರುವದರಿಂದ ಈ ವಿಷಯದಲ್ಲಿ ಮೌನವೃತ್ತಿಯುಳ್ಳದ್ದಾಗಿದೆ. ಇದರಿಂದ ಬೌದ್ಧಧರ್ಮವು ನಾಸ್ತಿಕ ಮತವೆಂದು ಹೇಳಲಾಗುವದಿಲ್ಲ ಉದಾನವೆಂಬ ಗ್ರಂಥದಲ್ಲಿ ಬುದ್ಧನು ಹೀಗೆ ಹೇಳಿದ್ದಾನೆ. "ಓ ಭಿಕ್ಷುಗಳೇ ಸ್ವಯಂಭುವಾದ ಮತ್ತು ಅನಾದಿಯಾದ ವಸ್ತುವಿಲ್ಲದಿದ್ದರೆ ಈ ಅಸ್ಥಿರವಾದ ಜಗತ್ತಿನಿಂದ ಮೋಕ್ಷವೇ ಇಲ್ಲದಂತಾಗುವದು." ಜಗತ್ತು ಅಸ್ಥಿರವಾದದ್ದು. ಆದರೂ ಅದಕ್ಕೆ ಅಸ್ತಿತ್ವವುಂಟು. ದೇಹದಲ್ಲಿ ಕ್ಷಣಿಕವಾದ ಇಂದ್ರಿಯಗಳ ಹೊರತು ಶಾಶ್ವತವಾದ ಯಾವ ವಸ್ತುವೂ ಇಲ್ಲ. ಬುದ್ಧನು ಆತ್ಮದ ವಿಷಯದಲ್ಲಿ ಮೌನವಾಗಿದ್ದಾನೆ. ಆತ್ಮವಿಲ್ಲವೆಂದು ಹೇಳಲು ಸಹ ಈತನು ಸಿದ್ಧನಿಲ್ಲ. ಶಾಶ್ವತವಾದ ಆತ್ಮವಿಲ್ಲದ ಹೊರತು ಇಂದ್ರಿಯಜ್ಞಾನ ಮತ್ತು ಸ್ಮರಣ ಕ್ರಿಯೆಗಳು ಅಸಂಭವವಾಗುವವೆಂದು ಶಂಕರಾಚಾರ್ಯನು ಕ್ಷಣಿಕವಾದವನ್ನು ನಿರಾಕರಿಸಿದ್ದಾನೆ. ಕ್ಷಣಿಕವಾದವು ನಿಜವಾಗಿದ್ದರೆ ನಿನ್ನೆ ಸಂಭವಿಸಿದ ವಿಷಯದ ನೆನಪು ನಮಗೆ ಆಗಲಾರದು. ಬೌದ್ಧತತ್ವದ ಪ್ರಕಾರ ದೇಹ, ಮನಸ್ಸುಗಳು ಒಂದನ್ನೊಂದು ಅವಲಂಬಿಸಿವೆ. ಸ್ಥೂಲವಿರುವದೆಲ್ಲ ರೂಪವೆಂತಲೂ, ಸೂಕ್ಷ್ಮವಾದುದೆಲ್ಲ ನಾಮವೆಂತಲೂ ಕರೆಯಲ್ಪಟ್ಟಿವೆ. ಇವೆರಡೂ ಏಕಕಾಲಕ್ಕೆ ಉದ್ಭವಿಸುವವು. ಹೇಗೆ ಮತ್ತಿ ಇಲ್ಲದೆ ಕೋಳಿಯು ಮರಿಯು ಹುಟ್ಟುವದಿಲ್ಲವೋ ಹಾಗೆಯೇ ನಾಮವಿಲ್ಲದೆ ರೂಪವು ಉಂಟಾಗುವದಿಲ್ಲ. ಮನಸ್ಸು ಭೌತಿಕ ಸ್ವರೂಪವುಳ್ಳದು. ನಾಮರೂಪಗಳು ಅಥವಾ ಸ್ಕಂಧಗಳು ಯಾವವೆಂದರೆ— (೧) ರೂಪ ಅಥವಾ ಭೌತಿಕ ಗುಣಗಳು. (೨) ವೇದನಾ (*Feeling*) (೩) ಸಂಜ್ಞಾ (*Perception*). (೪) ಸಂಸ್ಕಾರಗಳು ಅಥವಾ ಮಾನಸಿಕ ಗುಣಗಳು ಮತ್ತು ಇಚ್ಛಾಶಕ್ತಿ. (೫) ವಿಜ್ಞಾನ ಅಥವಾ ಬುದ್ಧಿ. ಇವೆಲ್ಲವು ಕೂಡಿ ಜೀವಾತ್ಮವನ್ನು ರಚಿಸಿವೆ. ಕಿರಿವು ಮೊದಲು ವಸ್ತುವಿನ ಸಂಪರ್ಕವಾದಾಗ ಸಂಜ್ಞಾ, ವೇದನಾ ಮತ್ತು ಇಚ್ಛಾಶಕ್ತಿಗಳು ಉತ್ಪನ್ನವಾಗುವವೆಂದು ಬುದ್ಧಘೋಷನು ಹೇಳುತ್ತಾನೆ. ಶಬ್ದ, ಸ್ಪರ್ಶ ರೂಪ, ರಸ, ಗಂಧಗಳೆಂಬ ಇಂದ್ರಿಯ ವಿಷಯಗಳಿವೆ. ಕಣ್ಣು ಇಲ್ಲದ ಹೊರತು ಗೋಚರವಾದ ಜಗತ್ತು ಇರಲಾರದು. ಜಗತ್ತು ಇರದ ಹೊರತು ನೋಡುವ ಕಣ್ಣು ಇರಲಾರದು.

ಬೌದ್ಧತತ್ವದಲ್ಲಿ ಪಾರಮಾರ್ಥಿಕವಾದ ಆತ್ಮವಿಲ್ಲ. ಆದರೆ ಜನ್ಮದಿಂದ ಜನ್ಮಕ್ಕೆ ಹೋಗತಕ್ಕದ್ದು ವಿಜ್ಞಾನವೇ. ವಿಜ್ಞಾನವು ಶಾಶ್ವತವಾದ ವಸ್ತುವಿರದಿದ್ದರೂ ಇದು ಸ್ವತಂತ್ರವಾದ ಮಾನಸಿಕ ಸ್ಥಿತಿಯಾಗಿದೆ. ಸಂಬಂಧಾತ್ಮಕ ನಿಯಮದ ಪ್ರಕಾರ ವಸ್ತುಗಳು ಗೋಚರವಾದಾಗ ವಿಶಿಷ್ಟ ಕಲ್ಪನೆಗಳುಂಟಾಗುವವು. ಅರಿವು ಮೂರು ಸ್ಥಿತಿಗಳಿಂದ ಕೂಡಿದೆ. ಉತ್ಪತಿ, ಸ್ಥಿತಿ ಅಥವಾ ವೃದ್ಧಿ, ಲಯ (ಭಂಗ). ಅರಿವು ಕ್ಷಣಿಕವಾದದ್ದೆಂದು ಬೌದ್ಧರ ಮತವು. ಎಚ್ಚರಿಕೆ ಇಲ್ಲದ (ವಿಧಿಮುಕ್ತ) ಸ್ಥಿತಿಯುಂಟೆಂದು ಇವರು ಗ್ರಹಿಸಿದರು. ಅರಿವು ಮತ್ತು ಅರಿವಿನ ಅಭಾವಗಳನ್ನು ಮನೋದ್ವಾರವು ವಿಭಾಗಿಸಿದೆ. ಪ್ರತಿಕ್ಷಣವೂ ನಾವು ಬದಲಾವಣೆ ಹೊಂದುತ್ತೇವೆ. ಆದಾಗ್ಯೂ ಹಳೆಯುದಾದದ್ದು ನಮ್ಮ ಜೀವಿತದಲ್ಲಿ ಸೇರಿಕೊಂಡೇ ಇದೆ. ಅಜ್ಞಾನದಿಂದ ಸಂಸ್ಕಾರಗಳೂ, ಸಂಸ್ಕಾರಗಳಿಂದ ಅರಿವೂ, ಅರಿವಿನಿಂದ ನಾಮರೂಪಗಳೂ, ನಾಮರೂಪಗಳಿಂದ ಕಣ್ಣು, ಕಿವಿ, ಮೂಗು, ನಾಲಿಗೆ, ದೇಹ ಅಥವಾ ಸ್ಪರ್ಶ ಮತ್ತು ಮನಸ್ಸು, ಈ ಇಂದ್ರಿಯಗಳಿಂದ ಸಂಗವೂ ಸಂಗದಿಂದ ಇಂದ್ರಿಯಜ್ಞಾನವೂ, ಇಂದ್ರಿಯಜ್ಞಾನದಿಂದ ಕಾಮವೂ, ಕಾಮದಿಂದ ಸ್ನೇಹವೂ, ಸ್ನೇಹದಿಂದ ಸ್ಥಿತಿಯೂ, ಸ್ಥಿತಿಯಿಂದ ಜನನವೂ, ಜನನದಿಂದ ವಾರ್ಧಿಕ್ಯವೂ, ಮರಣ ದುಃಖಗಳೂ ಉಂಟಾಗುವವು. ಈ ವಿಧವಾದ ಕ್ರಮಕ್ಕೆ ಪ್ರತೀತ್ಯ ಸಮುತ್ಪಾದವೆಂದು ಹೆಸರು. ಅಜ್ಞಾನದ ನಾಶದಿಂದ ಸಂಸ್ಕಾರ, ನಾಮರೂಪ, ಜನ್ಮಮರಣ ದುಃಖಗಳ ನಾಶವಾಗುವದು. ಇದೇ ಮೋಕ್ಷಮಾರ್ಗವು. ಮನುಷ್ಯನು ಜನ್ಮಕ್ಕೆ ಬರುವದೇ ದೊಡ್ಡ ಪಾಪವು. ಅಸತ್ಯವಾದ ಜೀವಿತದ ಮೇಲೆ ಆಶೆಯನ್ನುಂಟುಮಾಡುವದು ಅವಿದ್ಯೆ ಅಥವಾ ಅಜ್ಞಾನವು. ಸಂಸ್ಕಾರವೆಂದರೆ ಕರ್ಮವು. ಕರ್ಮಾನುಸಾರವಾಗಿ ಮುಂದೆ ಸದ್ಗತಿ ಅಥವಾ ದುರ್ಗತಿಯುಂಟಾಗುವದು. ನಾವು ಸುಖವನ್ನು ಬಯಸುವದರಿಂದ ದುಃಖಕ್ಕೆ ಈಡಾಗುತ್ತೇವೆ. ಆಶೆಯನ್ನು ತೊರೆದಲ್ಲಿ ನಿರ್ವಾಣವುಂಟಾಗುವದು. ಅಜ್ಞಾನವು ಹೇಗೆ ಉದ್ಭವಿಸುವದರ ಕಾರಣವನ್ನು ಬೌದ್ಧರು ಹೇಳಿರುವದಿಲ್ಲ. ಅವಿದ್ಯೆಯು ಮೂಲವಸ್ತುವಿನ ಶಕ್ತಿಯಾಗಿದ್ದು ಮೂಲವಸ್ತುವಿನಿಂದ ಅನೇಕ ವಸ್ತುಗಳನ್ನು ಹುಟ್ಟಿಸುವದೆಂದು ಇತ್ತೀಚಿನ ಬೌದ್ಧರಾದ ಅಶ್ವಘೋಷ, ವಸುಬಂಧು ಮುಂತಾದವರು ಹೇಳುತ್ತಾರೆ.

ನಿರ್ವಾಣವನ್ನುಂಟುಮಾಡತಕ್ಕ ನಡತೆಯಲ್ಲವೂ ಒಳ್ಳೆಯದು. ಪುನರ್ಜನ್ಮಕ್ಕೆ ಕಾರಣವಾದ ಮತ್ತು ನಿರ್ವಾಣವನ್ನುಂಟುಮಾಡದ ನಡತೆಯೆಲ್ಲವೂ ಕೆಟ್ಟದು. ಮನುಷ್ಯನಿಗೆ ಒಳ್ಳೇದು ಇಲ್ಲವೆ ಕೆಟ್ಟದ್ದು ಮಾಡಲು ಇಚ್ಛಾಸ್ವತಂತ್ರ್ಯವಿದೆ. ಬೌದ್ಧನೀತಿಯು ಅಥವಾ ನಿರ್ವಾಣಮಾರ್ಗವು ಎಂಟು ವಿಧವಾಗಿದೆ. ನಿಜವಾದ ನಂಬಿಗೆ, ನಿಜವಾದ ಮೋಕ್ಷಾಪೇಕ್ಷೆ, ನಿಜವಾದ ಭಾಷಣ, ನಿಜವಾದ ವರ್ತನೆ, ನಿಜವಾದ ಜೀವನ, ನಿಜವಾದ ಪ್ರಯತ್ನ, ನಿಜವಾದ ಉದ್ದೇಶ ಮತ್ತು ನಿಜವಾದ ಆನಂದ. ತಪ್ಪು ನಂಬಿಗೆಯಿಂದ ತಪ್ಪು ಕೃತಿಯುಂಟಾಗುವದು. ಎಲ್ಲ ಪ್ರಾಣಿಗಳನ್ನು ತನ್ನಂತೆ ಭಾವಿಸುವದೇ ಮೋಕ್ಷಾಪೇಕ್ಷೆಯಲ್ಲಿ ಸಮಾವೇಶವಾಗಿದೆ. ಚಾಡಿ, ನಿಂದೆ, ಕಠಿಣೋಕ್ತಿಗಳನ್ನಾಡದಿರುವದೇ ಸತ್ಯ ಭಾಷಣವು. ನಿಸ್ವಾರ್ಥವಾದ ಕಾರ್ಯವೇ ಸತ್ಯ ವರ್ತನವು. ಬುದ್ಧನು ಯಜ್ಞ, ಪ್ರಾರ್ಥನೆ, ಪೂಜೆಗಳಿಗೆ ಏನೂ ಮಹತ್ವ ಕೊಟ್ಟಿರುವದಿಲ್ಲ. "ಅಗ್ನಿಯನ್ನು ನೂರು ವರ್ಷ ಪ್ರಾರ್ಥಿಸುವದಕ್ಕಿಂತ ಧರ್ಮಿಷ್ಠನಾದ ಮನುಷ್ಯನನ್ನು ಗೌರವಿಸುವದು ಶ್ರೇಯಸ್ಸು" ಎಂದು ಬುದ್ಧನು ಹೇಳಿದನು ಜೀವಿಗಳಲ್ಲಿ ಕಾರುಣ್ಯವೂ, ಅಹಿಂಸೆಯೂ ಉತ್ತಮವಾದ ಧರ್ಮಮಾರ್ಗಗಳಾಗಿವೆ. ಸತ್ಯ ವರ್ತನೆಯಿಂದ ಸತ್ಯ ಜೀವಿತವುಂಟಾಗುವದು. ಸತ್ಯ ಜೀವಿತವೆಂದರೆ ಅನ್ಯಾಯ, ಮೋಸಗಳಿಲ್ಲದಿರುವಂತಹದು. ಅಹಂಕಾರ ಮೊದಲಾದ ದುಷ್ಪ್ರವೃತ್ತಿಗಳನ್ನು ನಿಗ್ರಹಿಸುವದೇ ನಿಜವಾದ ಪ್ರಯತ್ನವು. ಪ್ರಜ್ಞಾ, ಧ್ಯಾನ ಮತ್ತು ಸಮಾಧಿಗಳು ಮಾನಸಿಕ ವೃತ್ತಿಗಳಾಗಿವೆ. ನಿರ್ವಾಣವೆಂದರೆ ಉತ್ಕೃಷ್ಟವಾದ ಸುಖ ಅಥವಾ ಆನಂದವು. ಸಂಪೂರ್ಣ ಜ್ಞಾನವನ್ನೂ, ಶಾಂತಿಯನ್ನೂ, ಆನಂದವನ್ನೂ ಮತ್ತು ಎಲ್ಲ ಜೀವಿಗಳೊಡನೆ ಐಕ್ಯ ಭಾವವನ್ನೂ ಹೊಂದುವದು ನಿರ್ವಾಣವು. ಒಳ್ಳೆಯದರ ಜ್ಞಾನವೇ ಸದ್ಗುಣವು. ಸದಾಚಾರವಿಲ್ಲದ ಹೊರತು ಧ್ಯಾನ, ಸಮಾಧಿಗಳು ಪೂರ್ಣ ಸ್ಥಿತಿಯನ್ನುಂಟು ಮಾಡಲಾರವು. ಬುದ್ಧನ ತಿಳುವಳಿಕೆಯ ಪ್ರಕಾರ ಪ್ರಪಂಚದ ತೊಡಕನ್ನು ಕತ್ತರಿಸುವದು ಸನ್ಯಾಸವಾಗಿರದೆ ಅಹಂಕಾರ, ದ್ವೇಷ, ಕಾಮಗಳನ್ನು ತ್ಯಾಜ್ಯ ಮಾಡುವದಾಗಿತ್ತು.

ಜನ್ಮದಿಂದ ಬ್ರಾಹ್ಮಣನಾಗಲಿ ಅಥವಾ ಅಂತ್ಯಜನಾಗಲಿ ಆಗಿರದೆ ಆಚರಣೆಯಿಂದ ಆಗುತ್ತಾನೆ. ಬುದ್ಧನ ಸಂಘದಲ್ಲಿ ಎಲ್ಲ ಜಾತಿಯವ

ರಿಗೂ ಆಶ್ರಯವು ದೊರೆಯಿತು. ಹೀಗೆ ಬುದ್ಧನು ಜಾತಿ ಪದ್ಧತಿಯನ್ನು ತೆಗೆದು ಹಾಕಲು ಯತ್ನಿಸಿದನು. ಪಶು ಯಜ್ಞವನ್ನು ಪ್ರತಿಪಾದಿಸುವ ವೇದ ಭಾಗವನ್ನು ಬುದ್ಧನು ನಿರಾಕರಿಸಿದನು. ನಮ್ಮ ಪೂರ್ವದ ಕರ್ಮವು ಸದ್ಯದ ಜೀವಿತದಲ್ಲಿ ಪರಿಣಾಮವನ್ನುಂಟು ಮಾಡುತ್ತಿರುವದು. ಹಿಂದಿನ ದುಷ್ಕರ್ಮದ ಪ್ರತಿಫಲವಾಗಿಯೇ ಈಗ ದುಃಖವನ್ನನುಭವಿಸುತ್ತೇವೆಂದು ತಿಳಿಯುವದು ನ್ಯಾಯವಾದದ್ದಲ್ಲದೆ ನಮ್ಮ ಹಳೇ ಸಾಲವನ್ನು ನಾವು ಈಗ ತೀರಿಸುತ್ತಿರುವೆವೆಂದು ಸಮಾಧಾನ ಹೊಂದಬೇಕಾಗಿದೆ. ಮನೋ ಧೈರ್ಯವಿಲ್ಲದ ಮನುಷ್ಯನು ದುಷ್ಕಾರ್ಯ ಮಾಡಿದರೆ ನರಕಕ್ಕೆ ಹೋಗ ಬಹುದು. ಆದರೆ ಸಾಧುವು ಅದೇ ದುಷ್ಕಾರ್ಯದಿಂದ ಸ್ವಲ್ಪ ದುಃಖ ವನ್ನನುಭವಿಸಿ ಪಾರಾಗಬಹುದು. ಯಾವನೊಬ್ಬ ವ್ಯಕ್ತಿಯ ಕರ್ಮ ಚರಿತ್ರೆಯು ಅವನು ಹುಟ್ಟಿದಾಗಿನಿಂದ ಪ್ರಾರಂಭಿಸದೆ ಯುಗಯುಗಾಂ ತರದಿಂದ ನಡೆದಿರುತ್ತದೆ. ಕರ್ಮ ನಿಯಮವನ್ನು ವಶಮಾಡಿಕೊಳ್ಳಲು ವ್ಯಕ್ತಿಗೆ ಸ್ವಾತಂತ್ರ್ಯವಿದೆಯೆಂದು ಬುದ್ಧನು ಹೇಳುತ್ತಾನೆ. ಸದ್ಯದ ಜೀವಿತವು ಹಿಂದಿನ ಕರ್ಮದ ಮೇಲೆ ಅವಲಂಬಿಸಿದ್ದರೂ ಭವಿಷ್ಯ ಜೀವಿತವು ನಮ್ಮ ಇಚ್ಛೆಯನ್ನವಲಂಬಿಸಿದೆ. ಜೀವಿತದ ಚಕ್ರದಿಂದ ಪಾರಾಗಲು ನಾವು ಪುಣ್ಯ ಪಾಪಗಳನ್ನು ಮೀರಿದ ಸ್ಥಿತಿಯನ್ನು ಹೊಂದ ಬೇಕು. ನೈತಿಕ ವರ್ತನವು ಧ್ಯೇಯವನ್ನು ಸಂಪಾದಿಸಲು ಸಾಧನ ವಾಗಿದೆ. ಧ್ಯೇಯವು ಕೈವಶವಃದಾಗ ನೈತಿಕ ಕ್ರಿಯೆಯು ನಿಂತು ಹೋಗುವದು. ಮರಣವೆಂದರೆ ಜನ್ಮದ ಬೀಜವು. ನಮ್ಮ ಜೀವಿತ ಚಕ್ರದಲ್ಲಿ ಹೊಸ ಹೊಸ ಸುಸಂಧಿಗಳು ಲಭಿಸುವವು. ಆ ಸುಸಂಧಿ ಗಳ ಪ್ರಯೋಜನವನ್ನು ನಾವು ಪ್ರಯತ್ನ ಪೂರ್ವಕವಾಗಿ ತೆಗೆದುಕೊಂ ಡಲ್ಲಿ ನಮ್ಮ ಅದೃಷ್ಟವನ್ನು ನಾವು ತಿದ್ದಿಕೊಳ್ಳಬಹುದು. ಎಲ್ಲ ಜೀವ ಜಂತುಗಳು ಈ ಚಕ್ರವನ್ನು ಒಮ್ಮೆ ಮೇಲಾಗಿ ಮತ್ತೊಮ್ಮೆ ಕೆಳಗಾಗಿ ಸುತ್ತುತ್ತಿರುವವು.

ಬುದ್ಧನು ಹಿಂದೂ ತತ್ವದಂತೆಯೇ ದುಷ್ಟರಿಗೆ ನರಕವನ್ನೂ, ಸಾಧುಗಳಿಗೆ ಸ್ವರ್ಗವನ್ನೂ, ಪರಿಪಕ್ವವನ್ನು ಹೊಂದುವವರಿಗೆ ಪುನರ್ಜನ್ಮ ವನ್ನೂ ಕಲ್ಪಿಸಿದ್ದಾನೆ. ಪುನರ್ಜನ್ಮವೆಂದರೆ ಸತ್ತವನ ಆತ್ಮವು ಹೊಸ ದೇಹದಲ್ಲಿ ಬರುವದೆಂದು ಬೌದ್ಧರ ತತ್ವವಲ್ಲ. ಹೊಸದಾಗಿ ಹುಟ್ಟು ವದು ಹಿಂದಿನ ಜನ್ಮದ ಸೂಕ್ಷ್ಮ ಶರೀರವು ಅಥವಾ ವಿಜ್ಞಾನಾಂಶವು.

ಈ ಸೂಕ್ಷ್ಮ ಶರೀರದ ಸಹಾಯವಿಲ್ಲದೆ ಕರ್ಮನಿಯಮವು ಏನನ್ನೂ ಮಾಡಲು ಸಮರ್ಥವಾಗಿಲ್ಲ. ನಿರ್ವಾಣವನ್ನು ಹೊಂದಿದಾಗ ನಾವು ಕರ್ಮವನ್ನೂ ವಿಚಾರ ಅಥವಾ ವಿಜ್ಞಾನವನ್ನೂ ಮೀರಿರುತ್ತೇವೆ. ವ್ಯಕ್ತಿತ್ವವು ಅಳಿದುಹೋದಾಗ ದುಃಖಕ್ಕೆ ಆಸ್ಪದವೇ ಉಳಿಯುವದಿಲ್ಲ. ನಿರ್ವಾಣವೆಂದರೆ ಕಾಮ, ಕ್ರೋಧ, ದ್ವೇಷ ಮತ್ತು ಅಜ್ಞಾನಗಳ ನಾಶವೆಂದು ಬುದ್ಧನು ಹೇಳುತ್ತಾನೆ. ಪರಿನಿರ್ವಾಣವೆಂದರೆ ಪರಿಪೂರ್ಣತ್ವವನ್ನು ಅಥವಾ ಅರ್ಹತಸ್ಥಿತಿಯನ್ನು ಹೊಂದುವದು. ನಮ್ಮಲ್ಲಿಯ ವ್ಯಕ್ತಿತ್ವವು ಅಳಿದುಹೋಗಿ ವಿಶ್ವದೊಂದಿಗೆ ಸಮರಸವಾಗುವದೆಂದರ್ಥವು. ದೇವರು ಇರುವದಾದರೆ ಅವನು ಸತ್ಯಾಸತ್ಯ ಸುಖ, ದುಃಖಗಳ ಮೂಲಕಾರಣ ವಾಗಿರಬೇಕು. ಹೀಗಿದ್ದರೆ ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲದ ಹಾಗಾಗು ವದು. ಆತನು ದುಷ್ಕೃತಿಗೂ ದುಃಖಕ್ಕೂ ಕಾರಣನಾಗಿರದಿದ್ದರೆ ಅವನು ಸರ್ವ ಕಾರಣನಾಗಿರಲಾರನು. ಆತನು ತನ್ನ ದಯೆಯಿಂದ ದುಷ್ಟ ನನ್ನು ಸಾಧುವನ್ನಾಗಿ ಮಾಡಿದ್ದಾದರೆ ಮನುಷ್ಯನ ನೈತಿಕ ವೃತ್ತಿಯೇ ವ್ಯರ್ಥವಾಗುವದು. ಜಗತ್ತಿನಲ್ಲಿಯ ದುಃಖಕ್ಕೆ ಕಾರಣವನ್ನು ಹೇಳಲು ಕರ್ಮನಿಯಮವಲ್ಲದೆ ಬೇರೆ ಇಲ್ಲ. ನಮ್ಮನ್ನು ನಿರ್ಮಾಣಮಾಡುವ ವನು ದೇವರಲ್ಲ. ಕರ್ಮನಿಯಮವೇ ಕಾರಣವು. ಆದರೆ ಈ ನಿಯಮವು ದೇವರಿಂದ ನಿಯಂತ್ರಿತವಾದದ್ದೆಂಬದನ್ನು ಬುದ್ಧನು ಮರೆತನು.

ಬೌದ್ಧ ಧರ್ಮವು ಪ್ರೇಮಪ್ರಾಧಾನ್ಯವಾಗಿದ್ದುದರಿಂದ ಅನೇಕರನ್ನು ಆಕರ್ಷಿಸಿತು. ಬುದ್ಧನು ತೀರಿದ ೨೫೦ ವರ್ಷಗಳ ತರುವಾಯ ಮೌರ್ಯ ವಂಶದ ಚಕ್ರವರ್ತಿಯಾದ ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿ ಸಿದನು. ಈತನ ಪ್ರಯತ್ನದ ಮೂಲಕ ಬೌದ್ಧ ಧರ್ಮವು ಜಗತ್ತಿನ ಧರ್ಮವಾಗಿ ಪರಿಣಮಿಸಿತು. ಇವನು ಕಾಶ್ಮೀರದಿಂದ ಸಿಲೋನದ ವರೆಗೂ, ಈಜಿಪ್ಟ, ನೇಪಾಲ, ತಿಬೆಟ್ಟು, ಜೈನಾ. ಜಪಾನ, ಮಂಗೋ ಲಿಯಾ ಮುಂತಾದ ಕಡೆಗೂ ಬೋಧಕರನ್ನು ಕಳಿಸಿದ್ದಲ್ಲದೆ ಅನೇಕ ಸ್ಥಳಗಳಲ್ಲಿ ಶಿಲಾಶಾಸನಗಳನ್ನು ನಿಲ್ಲಿಸಿದನು. ಬುದ್ಧನ ಮೂಲಬೋಧನೆ ಯನ್ನೂ, ಸನ್ಯಾಸ ಪದ್ಧತಿಯನ್ನೂ ಪಾಲಿ ಭಾಷೆಯಲ್ಲಿ ಪ್ರತಿಪಾದಿಸಿದ ಬೌದ್ಧ ಪಂಥಕ್ಕೆ ಹೀನಯಾನವೆಂದು ಹೆಸರಾಯಿತು. ಕ್ರಿ. ಶ. ೩೦೦ ರ ಸುಮಾರಕ್ಕೆ ಕೆಲವು ಬೌದ್ಧಸುಧಾರಕರು ಬುದ್ಧನ ಮೂರ್ತಿ ಪೂಜೆ ಯನ್ನೂ, ಭಕ್ತಿಮಾರ್ಗವನ್ನೂ ಸಂಸ್ಕೃತ ಭಾಷೆಯಲ್ಲಿ ಪ್ರತಿಪಾದಿಸಿದರು.

ಈ ಪಂಥಕ್ಕೆ ಮಹಾಯಾನವೆಂದು ಹೆಸರುಂಟಾಯಿತು. ಇದು ಈವರೆಗೆ ನೇಪಾಳ ಮತ್ತು ಜೈನಾ ದೇಶಗಳಲ್ಲಿ ಪ್ರಾಮುಖ್ಯವಾಗಿದೆ. ಹೀನಯಾನವು ಸಿಲೋನ ಮತ್ತು ಬರ್ಮಾ ದೇಶಗಳಲ್ಲಿ ಪ್ರಾಮುಖ್ಯವಾಗಿದೆ. ಹೀನಯಾನದ ಪಂಥವು ಎಲ್ಲ ವಸ್ತುಗಳು ಕ್ಷಣಿಕವೆಂದೂ, ವಿಚಾರಿಸುವ ಅಥವಾ ಅನುಭವಿಸುವ ವ್ಯಕ್ತಿಯಿರದೆ ಕೇವಲ ವಿಚಾರ ಮತ್ತು ಭಾವಗಳುಂಟೆಂದು ಹೇಳುತ್ತದೆ. ನಿರ್ವಾಣ ಅಥವಾ ಅರಿವಿನ ಅಪಸಾನವೇ ಜೀವಿತದ ಧ್ಯೇಯವು. ಧ್ಯಾನದಿಂದ ನಿರ್ವಾಣವನ್ನು ಹೊಂದುವದು ಪ್ರತಿಯೊಬ್ಬನಿಗೆ ಶಕ್ಯವಾಗಿದೆ. ಇದಕ್ಕೆ ದೇವರ ಸಹಾಯವು ಕಾರಣವಿಲ್ಲ. ಸಂಸಾರವನ್ನು ತ್ಯಾಗಮಾಡಿ ಏಕಾಂತವಾಸಮಾಡಬೇಕು. ಈ ಪಂಥವು ಅನೇಕ ದೇವತೆಗಳಿರುವದಾಗಿಯೂ, ಸ್ವರ್ಗ, ನರಕ, ಮತ್ತು ಪುನರ್ಜನ್ಮಗಳಲ್ಲಿ ನಂಬಿಕೆಯನ್ನೂ ಪ್ರಕಟಿಸಿತು.

ಮಹಾಯಾನ ಪಂಥವು ಸಂಸಾರ ತ್ಯಾಗಮಾಡಬೇಕೆಂದು ಹೇಳುವದಿಲ್ಲ. ಜಗತ್ತಿನ ಎಲ್ಲ ವಸ್ತುಗಳು ಒಂದೇ ಸತ್ಯವಸ್ತುವಿನ ರೂಪವಿದ್ದು ಅದನ್ನು ವರ್ಣಿಸಲು ಬರುವಂತಿಲ್ಲ. ಅವು ರೂಪಾಂತರವನ್ನಾಗಲಿ, ನಾಶವನ್ನಾಗಲಿ ಹೊಂದದೆ ಒಂದೇ ಆತ್ಮಸ್ವರೂಪವಾಗಿವೆ. ಮೂಲ ವಸ್ತುವು ಸ್ವಯಂಭುವೂ, ಎಲ್ಲ ವಸ್ತುಗಳ ಆಧಾರವೂ ಆಗಿದೆ. ದೃಶ್ಯ ಜಗತ್ತು ನಿಜವಾದದ್ದಿರದೆ ಕನಸಿನ ಸ್ವರೂಪದ್ದಾಗಿದೆ. ವಸ್ತುಗಳಿಗೆ ಮೂರು ಗುಣಗಳುಂಟು. (೧) ಉಪಾಧಿ, (೨) ರೂಪ, ಮತ್ತು (೩) ಕ್ರಿಯೆ. ಮಡಿಕೆಯಲ್ಲಿ ಮಣ್ಣು ಉಪಾಧಿಯು, ಆಕೃತಿಯು ರೂಪವು ಮತ್ತು ನೀರನ್ನು ಇಟ್ಟುಕೊಂಡಿರುವದು ಅದರ ಕ್ರಿಯೆಯು. ಇವುಗಳಲ್ಲಿ ಉಪಾಧಿಯು ಅವಿನಾಶಿಯಾಗಿದ್ದು ರೂಪ ಕ್ರಿಯೆಗಳು ಬದಲಾವಣೆಗೆ ಆಸ್ಪದವಾಗಿವೆ. ಮೂಲ ವಸ್ತುವು ನಾಮ ರೂಪಗಳಿಂದ ಅನೇಕವಾಗುವದು. ಅವಿದ್ಯೆಯು ಜಗತ್ತಿನ ಕಾರಣವು. ಬುದ್ಧನು ದೇವತೆಗಳಲ್ಲಿ ಶ್ರೇಷ್ಠನು. ಎಲ್ಲ ಪ್ರಾಣಿಗಳಲ್ಲಿ ಧರ್ಮಕಾಯ ಅಥವಾ ಶಾಶ್ವತವಸ್ತುವೂ, ಸಂಭೋಗಕಾಯವೂ ಮತ್ತು ನಿರ್ವಾಣಕಾಯವೂ ಉಂಟು. ನೈತಿಕ ಧ್ಯೇಯವು ಬೋಧಿಸತ್ವ ಅಥವಾ ಪೂರ್ಣ ಜ್ಞಾನವಾಗಿದೆ. ದಾನ, ವೀರ್ಯ, ಶೀಲ, ಕ್ಷಾಂತಿ, ಧ್ಯಾನ ಮತ್ತು ಪ್ರತಿಜ್ಞೆಗಳು ನೈತಿಕ ತತ್ವಗಳಾಗಿವೆ. ಬುದ್ಧನ ಆಜ್ಞೆಪಾಲಿಸುವದೇ ಮೋಕ್ಷಮಾರ್ಗವು. ಇದು ಎಲ್ಲರಿಗೂ ಭಕ್ತಿ ಮೂಲಕ ಸಾಧ್ಯವಿದೆಯೆಂದು ಈ ಪಂಥವು ಹೇಳಿತು. ಹೀನಯಾನ

ಪಂಥದಲ್ಲಿ ಸನ್ಯಾಸಿಗಳಾದ ಕೆಲವರಿಗೆ ಮಾತ್ರ ಮೋಕ್ಷವು ಸಾಧ್ಯವಿದೆ. ನಿರ್ವಾಣವೆಂದರೆ ಪರಮಾತ್ಮನಲ್ಲಿ ಐಕ್ಯಹೊಂದುವದೆಂದು ಈ ಪಂಥದ ನಂಬಿಕೆ. ಹಳೇ ಬೌದ್ಧಧರ್ಮವು ದೇವರ ಮತ್ತು ಅಮರತ್ವದ ವಿಷಯದಲ್ಲಿ ನಿಶ್ಚಯವಾದ ನಂಬಿಕೆಯನ್ನು ಇಡದಿದ್ದರಿಂದಲೂ, ಕಾಲಾಂತರದಲ್ಲಿ ಬೌದ್ಧಧರ್ಮದಲ್ಲಿ ಅಂಧ ಶ್ರದ್ಧೆಯು ಬೆಳೆದದ್ದರಿಂದಲೂ, ಹೀನಯಾನ ಮಹಾಯಾನ ಪಂಥಗಳು ಹಿಂದೂ ದೇವತೆಗಳನ್ನು ಸ್ವೀಕರಿಸಿದ್ದರಿಂದಲೂ, ಹಿಂದುಗಳು ಬುದ್ಧನನ್ನು ವಿಷ್ಣುವಿನ ಅವತಾರವೆಂದು ತಿಳಿದದ್ದರಿಂದಲೂ ಬೌದ್ಧಧರ್ಮವು ಹಿಂದೂ ಧರ್ಮದಲ್ಲಿ ಬೆರೆತು ನಾಮಶೇಷವಾಗುವ ಪ್ರಸಂಗವುಂಟಾಯಿತು. ಬೌದ್ಧಧರ್ಮದಿಂದ ಹಿಂದೂ ಧರ್ಮವು ಅಹಿಂಸೆ ಅಥವಾ ಸರ್ವಪ್ರಾಣಿಗಳಲ್ಲಿ ದಯಾ ಬುದ್ಧಿಯನ್ನು ಕಲಿತುಕೊಂಡಿತು.

ಹೀನಯಾನದಲ್ಲಿ ವೈಭಾಷಿಕ ಮತ್ತು ಸೌತ್ರಾಂತಿಕ ಎಂಬ ಎರಡು ಉಪಪಂಥಗಳುಂಟು. ಇವು ವಾಸ್ತವ್ಯವಾದ ಅಥವಾ ಸರ್ವಾಸ್ತಿವಾದವನ್ನು ಪ್ರತಿಪಾದಿಸುತ್ತವೆ. ಜಗತ್ತು ಸ್ವಯಂಭುವವಾದದ್ದೂ ದೇಶ, ಕಾಲಗಳಲ್ಲಿ ಇರುವಂತಹದೂ ಇದೆ. ಇವರಲ್ಲಿ ಮನಸ್ಸೂಸಹ ಉಳಿದ ಪ್ರಾಕೃತ ವಸ್ತುಗಳ ಸ್ಥಿತಿಯಲ್ಲಿಯೇ ಇದೆಯೆಂದು ಈ ಉಪಪಂಥಗಳ ನಂಬಿಕೆಯು. ಮಹಾಯಾನದಲ್ಲಿ ಯೋಗಾಚಾರ ಮತ್ತು ಮಾಧ್ಯಮಿಕ ಎಂಬ ಎರಡು ಉಪಪಂಥಗಳುಂಟು. ಯೋಗಾಚಾರವು ಧ್ಯೇಯವಾದವನ್ನು ಪುರಸ್ಕಾರಮಾಡುತ್ತದೆ. ಇದು ವಿಚಾರವು ಸ್ವಯಂ ನಿರ್ಮಾಣಶಕ್ತಿಯುಳ್ಳದ್ದೂ, ಸರ್ವಸೃಷ್ಟಿಕರ್ತೃವೂ, ನಿತ್ಯವಸ್ತುವೂ ಆಗಿದೆಯೆಂದು ನಂಬುತ್ತದೆ. ಮಾಧ್ಯಮಿಕವು ಶೂನ್ಯವಾದ (*Nihilism*) ವಾಗಿದೆ.

(೧) ವೈಭಾಷಿಕರು ಅನುಭವಕ್ಕೆ ಪ್ರಾಧಾನ್ಯಕೊಟ್ಟಿದ್ದಾರೆ. ವಸ್ತುವಿನ ಪ್ರತ್ಯಕ್ಷ ಸ್ಪರ್ಶದಿಂದಾದ ಜ್ಞಾನಕ್ಕೆ ಅನುಭವವೆಂದು ಹೆಸರು. ಬಾಹ್ಯ ಜಗತ್ತಿನ ಪ್ರತ್ಯಕ್ಷ ಜ್ಞಾನವಿಲ್ಲೆಂಬದು ತಪ್ಪು. ಪ್ರತ್ಯಕ್ಷ ಜ್ಞಾನವಿರದಿದ್ದರೆ ಅನುಮಾನವೇ (*Inferance*) ಹೊರಡದು. ಪ್ರಕೃತಿ ಮತ್ತು ಮನಸ್ಸು ಬೇರೆ ಬೇರೆ ವಸ್ತುಗಳೆಂದು ಇವರ ನಂಬಿಕೆ. ವಸ್ತುಗಳಿರುವವೆಂದು ಮನಸ್ಸಿಗೆ ಅರಿಕೆಯುಂಟು. ಕಾರಣವು ಎಂದೂ ನಾಶವಾಗದೆ ಅದು ತನ್ನ ಸ್ಥಿತಿಯನ್ನು ಮಾರ್ಪಡಿಸಿ ಪರಿಣಾಮವನ್ನು ಹೊಂದಿದಾಗ ಹೆಸರಿನಲ್ಲಿ ಮಾತ್ರ ಬದಲಾವಣೆ ಹೊಂದುವದು. ಹೆಸರು ಕೊಡವಾದಾಗ

ಕಿಸರೆಂಬ ಹೆಸರು ಹೋಗಿ ಕೊಡವೆಂಬ ಹೆಸರಾಗುತ್ತದೆ. ವಸ್ತುಗಳು ನಮ್ಮ ಇಂದ್ರಿಯ ಗೋಚರವಾದಾಗಲೂ ಸಹ ಅಸ್ತಿತ್ವದಲ್ಲಿರುತ್ತವೆ. ಪುದ್ಗಲ ಅಥವಾ ಆತ್ಮವು ನಮ್ಮ ದೇಹದ ಭೂತಗಳಿಂದ (*Elements*) ಪ್ರತ್ಯೇಕವಾಗಿಲ್ಲ. ವೈಭಾಷಿಕರು ಸೌತ್ರಾಂತಿಕರಂತೆಯೇ ವಸ್ತುಗಳನ್ನು ಬಾಹ್ಯ, ಅಭ್ಯಂತರ ಎಂದು ವಿಭಾಗಿಸಿದ್ದಾರೆ. ಬಾಹ್ಯ ವಸ್ತುಗಳಲ್ಲಿ ಭೂತ ಮತ್ತು ಭೂತಗಳಿಗೆ ಸಂಬಂಧಿಸಿದ ವಸ್ತುಗಳೆಂತಲೂ (ಭೌತಿಕ) ಅಭ್ಯಂತರ ವಸ್ತುಗಳಲ್ಲಿ ಚಿತ್ತ ಮತ್ತು ಚಿತ್ತಕ್ಕೆ ಸಂಬಂಧಿಸಿದ ವಸ್ತುಗಳೆಂತಲೂ ಗ್ರಹಿಸಿದ್ದಾರೆ. ನಾಲ್ಕು ಭೂತಗಳು ಮಾತ್ರ ಉಂಟು. ಭೂಮಿ, ನೀರು, ಬೆಂಕಿ, ಗಾಳಿ ಬಾಹ್ಯ ವಸ್ತುಗಳು ಅಣುಗಳ ಕೂಡುವಿಕೆಯಿಂದಾಗಿವೆ. ಅಣುವಿಗೆ ಆರು ಪಕ್ಕಗಳಿದ್ದಾಗ್ಯೂ ಅಣುವಿನಲ್ಲಿಯ ಸ್ಥಳವು ಅವಿಭಾಜ್ಯವಾಗಿದೆ. ಒಂದೇ ಅಣುವು ಕಾಣಿಸದಿದ್ದರೂ ಅಣುಗಳ ಸಮೂಹವು ದೃಷ್ಟಿಗೋಚರವಾಗಿದೆ. ಅಣುಗಳು ಒಂದರಲ್ಲೊಂದು ಪ್ರವೇಶಿಸಲಾರವು. ಪರಮಾಣುವು ರೂಪ, ರಸ, ಗಂಧ, ಸ್ಪರ್ಶಗಳೆಂಬ ನಾಲ್ಕು ಗುಣಗಳುಳ್ಳದ್ದು. ಇದು ಪ್ರಥಕ್ಕರಣಕ್ಕೆ ಆಸ್ಪದವಾಗಿಲ್ಲ. ಪರಮಾಣುಗಳ ಸಮೂಹವು ಅಣುರೂಪವಾಗಿ ದೃಷ್ಟಿಗೋಚರವಾಗುವದು. ಎಲ್ಲ ಭೂತಗಳಲ್ಲಿ ಅಣುಗಳು ಭೂಮಿ, ನೀರು, ಬೆಂಕಿ, ಗಾಳಿಗಳಿಂದ ಸಹಿತವಾಗಿ ಒಂದೇ ಸ್ವರೂಪವಾಗಿವೆ. ಕಠಿಣ ಪದಾರ್ಥದಲ್ಲಿ ಭೂಮಿಯ ಅಂಶವೂ, ದ್ರವರೂಪ ಪ್ರವಾಹದಲ್ಲಿ ನೀರಿನ ಅಂಶವೂ, ಉರಿಯುವ ಅಗ್ನಿಯಲ್ಲಿ ಬೆಂಕಿಯ ಅಂಶವೂ, ಪ್ರಾಧಾನ್ಯವಾಗಿವೆ. ಸರ್ವಾಸ್ತಿವಾದಿಗಳು ಭಾಜನ ಲೋಕ ಅಥವಾ ವಸ್ತುಗಳ ಲೋಕವೆಂತಲೂ ಸತ್ವ ಲೋಕ ಅಥವಾ ಜೀವಿಗಳ ಲೋಕವೆಂತಲೂ ಎರಡು ಲೋಕಗಳ ಭೇದವನ್ನು ಮಾಡಿದ್ದಾರೆ. ಚಿತ್ತನಿಪ್ರಯುಕ್ತ ಧರ್ಮಗಳು ಘಟನಾತ್ಮಕ ಶಕ್ತಿಗಳಿದ್ದು ಪ್ರಾಪ್ತಿ, ಅಪ್ರಾಪ್ತಿಗಳಂತಹ ಪ್ರಕೃತಿ, ಮನಸ್ಸುಗಳಿಂದ ಬೇರೆಯಾಗಿವೆ. ಇವು ಮಾನಸಿಕ ಅಥವಾ ಪ್ರಾಕೃತಿಕ ಆಧಾರವನ್ನು ಹೊಂದಿದಾಗ ಪ್ರತ್ಯಕ್ಷ ಅಸ್ತಿತ್ವದಲ್ಲಿ ಬರುವವು.

ಘಟನಾತ್ಮಕ ಭೂತಗಳು ಮೂರು (೧) ಆಕಾಶ-- ಇದು ನೋರೆಯಿಲ್ಲದ್ದು, ಭೇದರಹಿತವಾದದ್ದು, ಸರ್ವವ್ಯಾಪಿಯಾದ ಸಹಜ ವಸ್ತು, ರೂಪವಿಲ್ಲದ್ದು ಮತ್ತು ಪ್ರಕೃತಿಸ್ವರೂಪವಿಲ್ಲದ್ದು. (೨) ಅಪ್ರತಿಸಂಖ್ಯಾ ನಿರೋಧವು ಧರ್ಮವನ್ನು ಅರಿಯದಿರುವದು, ಪ್ರತ್ಯಯದ ಅಭಾವದಿಂದ

ಆಸ್ರವ ಉಂಟಾಗುವದಲ್ಲದೆ ಜ್ಞಾನದಿಂದ ಉಂಟಾಗುವದಿಲ್ಲ. ಒಂದೇ ವಸ್ತುವಿನ ಮೇಲೆ ಅತ್ಯಂತ ಲಕ್ಷವನ್ನಿಟ್ಟಾಗ ಇದು ಸಂಭವಿಸುವದು. (೩) ಪ್ರತಿಸಂಖ್ಯಾನಿರೋಧವು ಪಾರಮಾರ್ಥಿಕ ಜ್ಞಾನದ ಪರಿಪಕ್ವವನ್ನು ಹೊಂದುವದು. ಇದು ಸರ್ವಾಸ್ತಿವಾದಿಗಳ ಅಂತಿಮಧ್ಯೇಯವು. ಮನಸ್ಸು (ಚಿತ್ತ) ಅಥವಾ ವಿಜ್ಞಾನವು ಅಂತರಿಂದ್ರಿಯವು. ವಿಜ್ಞಾನದ ಹೊರತು ಬೇರೆ ಆತ್ಮವಿಲ್ಲ.

(೨) ಸೌತ್ರಾಂತಿಕರುಃ — ಮನೋಬಾಹಿರವಾದ ದೃಶ್ಯ ಜಗತ್ತಿನ ಅಸ್ತಿತ್ವವನ್ನು ಇವರು ಒಪ್ಪುತ್ತಾರೆ. ವಸ್ತುಗಳಿರದಿದ್ದರೆ ಅವು ಇಂದ್ರಿಯ ಗೋಚರವಾಗುತ್ತಿರಲಿಲ್ಲ. ಎಲ್ಲ ವಸ್ತುಗಳು ಕ್ಷಣಿಕವಾದವುಗಳು. ವಸ್ತುಗಳ ಕಲ್ಪನೆಯು ಅಥವಾ ಚಿತ್ರವು ಮೊದಲು ಗೋಚರವಾಗುವದು. ಅನಂತರ ವಸ್ತುವನ್ನು ಅರಿತುಕೊಳ್ಳುತ್ತೇವೆಂದು ಇವರ ಗ್ರಹಿಕೆ. ಆದರೆ ಈ ಅಭಿಪ್ರಾಯವು ಆಧುನಿಕ ಮಾನಸಿಕಶಾಸ್ತ್ರಕ್ಕೆ ಸಮ್ಮತವಾಗಿರದೆ ವೈಭಾಷಿಕರು ವಸ್ತುವೇ ಮಾತ್ರ ಗೋಚರವಾಗುವದೆಂಬದು ಸಮಂಜಸವಾಗಿದೆ. ಇವರು ವೈಭಾಷಿಕರಂತೆ ಅಣುವಾದಿಗಳು. ಪರಮಾಣುವಿನಂತೆಯೇ ಆಕಾಶವಿದೆಯೆಂದು ಇವರ ಗ್ರಹಿಕೆ. ವೈಭಾಷಿಕ, ಮಾಧ್ಯಮಿಕರ ವ್ಯತಿರಿಕ್ತವಾಗಿ ಅರಿವು ತನ್ನನ್ನೇ ಅರಿತುಕೊಳ್ಳಬಲ್ಲದೆಂದೂ, ನಾವು ಆತ್ಮಜ್ಞಾನವನ್ನು ಹೊಂದಬಲ್ಲೆವೆಂದೂ ಇವರು ಹೇಳುತ್ತಾರೆ. ಪ್ರಾಣಿಗಳು ಈಶ್ವರನಿಂದಾಗಲಿ, ಪುರುಷನಿಂದಾಗಲಿ ಅಥವಾ ಪ್ರಕೃತಿಯಿಂದಾಗಲಿ ನಿರ್ಮಿತವಾಗಿಲ್ಲವೆಂದು ಯಶೋಮಿತ್ರನು ಹೇಳುತ್ತಾನೆ. ಕೆಲವು ಪ್ರಾಣಿಗಳು ಪಿಂಡಜ, ಕೆಲವು ಅಂಡಜ, ಕೆಲವು ಉದ್ಭಿಜ ಹೀಗೆ ನಾನಾ ವಿಧವಾಗಿರುವದರಿಂದ ಉತ್ಪತ್ತಿ ಕಾರಣವು ಅನೇಕಪ್ರಕಾರವಿದ್ದು ಯಾವದು ಮುಖ್ಯ ಕಾರಣನಲ್ಲ.

(೩) ಯೋಗಾಚಾರರುಃ — ಯೋಗ ಸಾಧನದಿಂದಲೇ ಪೂರ್ಣ ಸತ್ಯವು ಲಭಿಸುವದೆಂದು ಇವರ ಮತವು. ಬಾಹ್ಯ ಜಗತ್ತು ಮಿಥ್ಯವಾದದ್ದು. ಒಂದು ವೇಳೆ ಅದು ಇದ್ದರೂ ಅದನ್ನು ನಾವು ಅರಿತುಕೊಳ್ಳಲಾರೆವು. ಅರಿತುಕೊಳ್ಳುತಕ್ಕ ವಸ್ತುಗಳೆಲ್ಲ ಇಂದ್ರಿಯಗಳ ಮೇಲೆ ಮುದ್ರಿತವಾದ ಕಲ್ಪನೆಗಳಾಗಿವೆ. ನಮ್ಮ ಸುತ್ತಲಿನ ಬಾಹ್ಯ ಜಗತ್ತು ನಮ್ಮ ಮಾನಸಿಕ ಕಲ್ಪನೆಯ ಹೊರತು ಮತ್ತೊಂದಿಲ್ಲ. ಅದು ಮೋಡದಂತೆ ಹುಟ್ಟಿ ತೀವ್ರವಾಗಿ ಅದೃಶ್ಯವಾಗುವದು. ನಮ್ಮ ಕನಸುಗಳು ಕಲ್ಪನೆಗ

ಳಿಂದ ಕೂಡಿದ್ದು ವಸ್ತುಗಳ ಅವಶ್ಯವಿಲ್ಲದೆ ಹಿಂದಿನ ಮಾನಸಿಕ ಕಲ್ಪನೆಗಳಿಂದ ಉದಯವಾಗುತ್ತವೆ. ಇವರು ಜ್ಞಾನವಾದಿಗಳು. ಅರಿವು ಅಥವಾ ಜ್ಞಾನದ ಹೊರತು ಮತ್ತಾವದೂ ಇರುವದಿಲ್ಲ "ಸರ್ವಂ ಬುದ್ಧಿಮಯಂ ಜಗತ್" ಅರಿವು ಬಾಹ್ಯ ವಸ್ತುಗಳ ಮೇಲೆ ಅವಲಂಬಿಸಿರದೆ ಸ್ವಾವಲಂಬನವಾಗಿದೆಯೆಂದು ಇವರು ನಂಬುವದರಿಂದ ಇವರ ಮತವು ನಿರಾಲಂಬನವಾದವೆಂದು ಕರೆಯಲ್ಪಟ್ಟಿದೆ. ಸೌತ್ರಾಂತಿಕರು ವಾಸ್ತವ್ಯವಾದಿಗಳಿರುವಂತೆ ಯೋಗಾಚಾರರು ಧ್ಯೇಯವಾದಿಗಳಿದ್ದಾರೆ. (*Idealists*) ಅರಿವಿನ ಸಮೂಹಕ್ಕೆ ಆಲಯವಿಜ್ಞಾನವೆಂದು ಹೆಸರು. ಇದನ್ನು ಯೋಗಿಗಳು ಧ್ಯಾನದಿಂದ ಕಂಡುಹಿಡಿಯುತ್ತಾರೆ. ಇದು ಉತ್ಪತ್ತಿ, ಸ್ಥಿತಿ, ಲಯಗಳಿಂದ ರಹಿತವಾದದ್ದೆಂದು ಹೇಳಲ್ಪಟ್ಟಿದೆ ಇದು ಎಲ್ಲ ಮನಸ್ಸುಗಳಲ್ಲಿಯ ಭಾವ ಮತ್ತು ಕಲ್ಪನೆಗಳ ಶಾಶ್ವತವಾದ ತಳಹದಿಯಾಗಿದೆ. ಜಗತ್ತಿನಲ್ಲಿಯ ಎಲ್ಲ ವಸ್ತುಗಳು ಇದರಲ್ಲಿ ಅಡಕವಾಗಿವೆ. ಅರಿವು ಒಂದೇ ನಿಜವಾದ ವಸ್ತುವು. ಸೃಷ್ಟಿಯ ವಸ್ತುಗಳು ಅರಿವಿನಿಂದಲೇ ಉತ್ಪತ್ತಿಯಾಗಿದ್ದು ಅರಿವಿನಲ್ಲಿಯೇ ಅಡಗುವವು. ದೇಶ ಕಾಲಗಳಲ್ಲಿರುವ ಜಗತ್ತು ನಮ್ಮ ಅಪೂರ್ಣ ಜ್ಞಾನದ ಮೂಲಕ ನಿಜವಾಗಿ ತೋರುತ್ತದೆ. ಅವಿದ್ಯೆಯೇ ಈ ತೋರುವಿಕೆಗೆ ಕಾರಣವು. ಆಲಯವಿಜ್ಞಾನವು ವ್ಯಕ್ತಿವಿಶಿಷ್ಟವಾದದ್ದು. ಸರ್ವಾಂತರ್ಯಾಮಿಯಾದ ಮತ್ತು ಶುದ್ಧವಸ್ತುವು ತಥತಾ ಎಂದು ಕರೆಯಲ್ಪಟ್ಟಿದೆ. ತಥತಾದಿಂದ ಆಲಯವಿಜ್ಞಾನಕ್ಕೆ ಇಳಿದುಬಂದಾಗ ನಮಗೆ ಅರಿವು ಮತ್ತು ದೇಶ ಅಥವಾ ಸ್ಥಲವು ಲಭಿಸುವವು. ಸ್ಥಲಕ್ಕೆ ನಿಜವಾದ ಅಸ್ತಿತ್ವವಿಲ್ಲ. ಅವಿದ್ಯೆಯಮೂಲಕ ಅಂತರಂಗವೇ ಬಹಿರಂಗವಾಗಿ ತೋರುತ್ತದೆ. ನಮ್ಮಲ್ಲಿ ಅವಿದ್ಯೆಯಿರುವ ವರೆಗೆ ವ್ಯಕ್ತಿತ್ವವಿರುವದು. ಮೋಕ್ಷಕ್ಕೆ ಜ್ಞಾನ ಮತ್ತು ಸದಾಚಾರಗಳು ಅವಶ್ಯವಾಗಿಬೇಕು. ಯೋಗ ಸಾಧನೆಯು ಆತ್ಮಜ್ಞಾನವನ್ನುಂಟುಮಾಡುವದು.

(೪) ಮಾಧ್ಯಮಿಕರು— ಮಾಧ್ಯಮಿಕತತ್ವವು ಬುದ್ಧನ ಬೋಧೆಯ ಆಧಾರದಿಂದ ಪ್ರಾರಂಭವಾದದ್ದು. ಬುದ್ಧನು ತನ್ನ ನೈತಿಕ ಬೋಧೆಯನ್ನು ಮಧ್ಯಮ ಮಾರ್ಗವೆಂದು ಕರೆದನು. ಜಗತ್ತು ಪ್ರಗತಿಯನ್ನು ಹೊಂದತಕ್ಕುದಾದುದರಿಂದ ಅದು ಪೂರ್ಣ ನಿಜವಾದುದಲ್ಲ. ಮನುಷ್ಯನು ಮಾನಸಿಕ ಮತ್ತು ಪ್ರಾಕೃತಿಕ ಧರ್ಮಗಳ ಸಮೂಹವಾಗಿದ್ದಾನೆ. ಜಡವಸ್ತುವು ಪ್ರಾಕೃತಿಕ ಧರ್ಮಗಳ ಸಮೂಹವಾಗಿದೆ. ಧರ್ಮಗಳು

ಮಾತ್ರ ಅಸ್ತಿತ್ವದಲ್ಲಿವೆ. ಆದರೆ ಅವು ನಾಶವನ್ನು ಹೊಂದುವವು. ಪ್ರತಿಯೊಂದು ವಿಚಾರಕ್ಕೆ ಅದರ ಹಿಂದಿನ ವಿಚಾರವೇ ಕಾರಣವಾಗಿದೆ. ಯಾವ ವಸ್ತುವೂ ಸ್ವತಂತ್ರವಾಗಿರದೆ ಮತ್ತೊಂದರ ಮೇಲೆ ಅವಲಂಬನವಾಗಿದೆ. ಒಂದು ವಸ್ತುವಿನ ಸತ್ಯವನ್ನು ವಿವರಿಸುವದು ಆವಶ್ಯವೆಂದು ಹೇಳುವದಾದರೆ ಅಂತರಂಗದ ಆತ್ಮಗಳೂ ಬಹಿರಂಗದ ವಸ್ತುಗಳೂ ಅಸತ್ಯವಾಗುವವು. ಅರಿವಿನ ಮೂಲಕವಾಗಿಯೇ ಎಲ್ಲ ವಸ್ತುಗಳ ಅರಿವೆಯಾಗುವದೆಂದು ಯೋಗಾಚಾರರು ಹೇಳುತ್ತಾರೆ. ಮಾಧ್ಯಮಿಕರ ಪ್ರತಿನಿಧಿಯಾದ ನಾಗಾರ್ಜುನನು ಈ ತತ್ವವನ್ನು ಸ್ವೀಕರಿಸಿದ್ದಾನೆ. ವೈವಿಧ್ಯ ಜಗತ್ತು ತೋರುಮುಖವಾದುದೆಂದು ನಾಗಾರ್ಜುನನು ಹೇಳುತ್ತಾನೆ ಘಟನಾತ್ಮಕ ವಸ್ತುಗಳಿಗೆ ಸಂಸ್ಕೃತಗಳೆಂದು ಹೆಸರು. ವಸ್ತುವಿನ ಸೃಷ್ಟಿಯ ಕಾಲಕ್ಕೆ ವಸ್ತುವು ಸ್ಥಿತಿ, ಲಯಗಳಿಂದ ವಿರಹಿತವಾಗಿದ್ದರೆ ಅದಕ್ಕೆ ಸಂಸ್ಕೃತವೆಂದು ಹೆಸರುಂಟಾಗದು. ಆದರೂ ಮೂರೂ ಏಕಕಾಲಕ್ಕೆ ಇರಲಾರವು. ಭೂತ, ಭವಿಷ್ಯಗಳು ನಿಶ್ಚಿತವಾದವುಗಳಲ್ಲ. ವರ್ತಮಾನಕಾಲವೇ ನಿಶ್ಚಿತವಾದದ್ದು. ಆದರೆ ವರ್ತಮಾನಕಾಲವು ಭೂತ ಭವಿಷ್ಯಗಳಿಂದ ಪ್ರತ್ಯೇಕವಾಗಿಲ್ಲ. ನಾವು ವಸ್ತುವನ್ನು ಅದರ ಗುಣಗಳ ಮೂಲಕವಾಗಿ ಅರಿತುಕೊಳ್ಳುತ್ತೇವೆ. ಗುಣಗಳು ಗೊತ್ತಾಗದಾಗ ವಸ್ತುವಿನ ಜ್ಞಾನವಾಗುವದಿಲ್ಲ. ಗುಣಗಳ ಹೊರತಾಗಿ ವಸ್ತುವೇ ಇಲ್ಲ. ರೂಪ, ರಸ, ಗಂಧ, ಮೃದು, ಕಠಿಣ ಮುಂತಾದ ಗುಣಗಳುಂಟು. ಯಾಕೆಂದರೆ ಇಂದ್ರಿಯಗಳಿವೆ. ಕಣ್ಣಿಲ್ಲದೆ ರೂಪವೂ, ಕಿವಿಯಿಲ್ಲದೆ ಶಬ್ದವೂ ಇರವಾರವು. ಗುಣಗಳು ಸ್ವತಂತ್ರವಾಗಿರದೆ ಇಂದ್ರಿಯಗಳನ್ನು ಅವಲಂಬಿಸಿವೆ. ಎಲ್ಲ ಗುಣಗಳು ತೋರಮುಖವಾಗಿದ್ದು ಯಾವ ವಸ್ತುವಿನಲ್ಲಿ ಈ ಗುಣಗಳು ನೆಲೆಸಿರುವವೋ ಆ ವಸ್ತುಗಳು ನಿಜವಾಗಿಲ್ಲ. ನಮಗೆ ಗುಣಗಳ ವಿಷಯದಲ್ಲಿ ಮಾತ್ರವೇ ಜ್ಞಾನವಿರುವದು. ವಸ್ತುವು ಗುಣಗಳ ಪರೋಕ್ಷ ಸಂಬಂಧವಿದ್ದು ಅರಿವಿನಿಂದ ನಿರ್ಮಿತವಾಗಿ ಅರಿವನ್ನು ಬಿಟ್ಟು ಇರಲಾರದು. ವಸ್ತುವು ಅದರ ಕಾರಣದಿಂದ ಕೂಡಿದೆ. ಬದಲಾವಣೆಯ ಕ್ರಮವು ತಿಳಿಯಲಶಕ್ಯವಾಗಿದೆ. ಬಟ್ಟೆಯಾಗಲಿ ಅದರ ಎಳೆಗಳಾಗಲಿ ಒಂದನ್ನು ಬಿಟ್ಟು ಒಂದು ಸ್ವತಂತ್ರವಾಗಿಲ್ಲ. ಜಗತ್ತಿನ ಯಾವ ವಸ್ತುವೂ ಪೂರ್ಣ ಅಸ್ತಿತ್ವದಲ್ಲಿರದೆ ಒಂದಕ್ಕೊಂದರ ಸಂಬಂಧ ಮೂಲಕವಾಗಿವೆ. ಅರಿವಿನ ಸ್ಥಿತಿಗಳ ಹೊರತಾಗಿ ಆತ್ಮನೆಂಬದು ಇರುವದಿಲ್ಲ. ನೋಟವಿರದಿದ್ದರೆ ರೂಪವಿರಲಾರದು. ರೂಪಗಳಿರದಿದ್ದರೆ ನೋಟವಿರಲಾರದು. ಒಂದೇ ವಸ್ತುವು ಅನೇಕರಿಗೆ ಅನೇಕ

ವಿಧವಾಗಿ ತೋರುತ್ತದೆ. ಮತ್ತು ಅದೇ ಒಬ್ಬನಿಗೆ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆಯಾಗಿ ತೋರುತ್ತದೆ.

ನಮ್ಮ ಜ್ಞಾನವು ಭೇದವನ್ನು ಅವಲಂಬಿಸಿರುವದು. ಆಕಳು ಕುದುರೆಯಲ್ಲ, ಕುರಿಯಲ್ಲವೆಂದು ತಿಳಿಯುತ್ತೇವೆ. ಒಂದು ವಸ್ತುವಿನ ಸ್ವಸ್ಥಿತಿಯನ್ನು ತಿಳಿಯುವದು ಅಶಕ್ಯವು. ಎಲ್ಲ ವಸ್ತುಗಳು ಸಂಬಂಧಾರ್ಥದಲ್ಲಿ ತಿಳಿಯಲ್ಪಡುತ್ತವೆ. ಕನಸಿನಲ್ಲಿ ಕಂಡ ವಸ್ತುವು ಎಚ್ಚತ್ತಾಗ ಕಾಣುವದಿಲ್ಲ. ವಿಚಾರವು ಮತ್ತೊಂದು ವಿಚಾರವನ್ನೂ ಮತ್ತು ತನ್ನನ್ನೇ ತಾನು ಅರಿಯಲಾರದು. ಜ್ಞಾನವು ಅಶಕ್ಯವಾಗಿದೆ. ಈ ಪ್ರಕಾರ ನಾಗಾರ್ಜುನನ ತರ್ಕವಿದೆ. ಜಗತ್ತನ್ನು ಬಿಟ್ಟು ದೇವರಾಗಲಿ ದೇವರನ್ನು ಬಿಟ್ಟು ಜಗತ್ತಾಗಲಿ ಇರುವದಿಲ್ಲ. ಇವೆರಡೂ ತೋರಿಕೆಯ ವಸ್ತುಗಳು. ನಾಗಾರ್ಜುನನು ದೈವವಾದವನ್ನು ಖಂಡಿಸುತ್ತಿರುವನೇ ವಿನಹ ನಿಜವಾದ ದೇವರಲ್ಲಿ ನಂಬಿಕೆಯುಳ್ಳವನಿದ್ದಾನೆ. ಮೂಲತಃ ಸತ್ಯಾಸತ್ಯಗಳಲ್ಲಿ ಭೇದವಿಲ್ಲೆಂದು ಈತನು ಹೇಳುತ್ತಾನೆ. ಯಾವದೂ ನಿಜವಸ್ತುವು ಇಲ್ಲದ್ದರಿಂದ ತಪ್ಪು ತಿಳುವಳಿಕೆಯು ಸಂಭವವೇ ಇಲ್ಲವೆಂದು ಈತನ ಹೇಳಿಕೆ. ಜನನ, ಮರಣ, ಏಕತ್ವ, ಬಹುತ್ವವೆಂಬವು ಇಲ್ಲವೇ ಇಲ್ಲ. ಜಗತ್ತು ಗುಣಗಳ ಕಲ್ಪನೆಯ ಮತ್ತು ಸಂಬಂಧಗಳ ಹೊರತಾಗಿ ಮತ್ತೇನೂ ಇರುವದಿಲ್ಲ. ಜಗತ್ತು ಮಿಥ್ಯವಾದದ್ದು. ಕಾರ್ಯ ಕಾರಣಗಳ ಮೂಲಕವಾಗಿ ಜಗತ್ತು ನಮ್ಮ ದೃಷ್ಟಿಪಥಕ್ಕೆ ಬೀಳುವದು. ನಿತ್ಯವಸ್ತುವು ವರ್ಣನಾತೀತವೆಂದು ಈತನ ಹೇಳಿಕೆ. ಈತನು ಸತ್ಯವು ಪರ ಮತ್ತು ಅಪರ ಎಂದು ಎರಡು ಭೇದವುಳ್ಳದ್ದೆಂದು ಹೇಳುತ್ತಾನೆ. ಅಪರ ಸತ್ಯದಿಂದ ಪರವು ಸಾಧಿಸುವದು. ಪರದಿಂದ ನಿರ್ವಾಣವು ಲಭಿಸುವದು. ಸಂವೃತಿಯು ಮನುಷ್ಯನ ಬುದ್ಧಿಯ ಪ್ರತಿಫಲವಾಗಿದೆ. ಇದು ಜಗತ್ತು ಮತ್ತು ಅದರ ತೋರುವಿಕೆಯ ಕಾರಣವಾಗಿದೆ. ಇದು ಸತ್ಯವನ್ನು ಮರೆಮಾಡುವದು. ಜಗತ್ತು ಶೂನ್ಯವಾದದ್ದು. ಅಂದರೆ ಅಸ್ತಿತ್ವವಿಲ್ಲದ್ದೆಂದು ಅರ್ಥವಲ್ಲ. ಕೇವಲ ತೋರಿಕೆಯುದೆಂದರ್ಥವು. ಆದರೆ ಕೆಲವು ಮಾಧ್ಯಮಿಕರು ಜಗತ್ತಿನ ಅಸ್ತಿತ್ವವೇ ಇಲ್ಲವೆಂದು ಹೇಳುತ್ತಾರೆ. ಇದು ಪೂರ್ಣ ಶೂನ್ಯವಾದಕ್ಕೆ ತಕ್ಕುದ್ದಾಗಿದೆ (*Nihilism*). ನಾಗಾರ್ಜುನನು ನಿತ್ಯವಸ್ತುವಿಗೆ ಶೂನ್ಯವೆಂದು ಕರೆದಾಗ ಅದು ವರ್ಣನಾತೀತವೆಂದು ಗ್ರಹಿಸಿದ್ದಾನೆ. ನಿರ್ವಾಣವುಂಟಾದ ಮೇಲೆ ಅಜ್ಞಾನ ನಾಶವಾಗುವದು.

ಜಯ! ಬಸವೇಶ.

ದಾಟಿ— "ಎನಿತು-ಇನಿದು ಈ ಕನ್ನಡ ನುಡಿಯು" ಎಂಬಂತೆ.

(ನಾರಂಗಾದಿ ತಾಳ.)

ಜಯ! ಬಸವೇಶನ ಸುಂದರ ಪಾದವ
ನಯ ವಿನಯದಿಂ ನೆನೆಯುತೆ ನಮಿಸುವೆ ॥ಪಲ್ಲ॥

(೧)

ಸತ್ಯಾಗ್ರಹದೊಳು
ಕೀರ್ತಿಯ ಹೊಂದಿದ
ನಿತ್ಯಾನಂದದ
ನಿಜವನು ತೋರಿದ
ಭಸ್ಮೋದ್ಧಾರಕ ಮಹಿಮಾ ಪುರುಷನ

(೨)

ಅಹಿಂಸಾವ್ರತವನು
ಲೋಕಕೆ ಸಾರಿ
ದಯಾಧರ್ಮದ
ಕೀಲವನರುಹಿ
ದೇಶೋದ್ಧಾರವ ಗೈದಿಹ ಶರಣನ

(೩)

ಜಾತಿಯ ಭೇದದ,
ಸೂತಕ ಪಳುಕಿಸಿ
ಸಮಾತಾ ವಾದವ
ಜಗದೊಳು ಹಬ್ಬಿಸಿ
ರಾಷ್ಟ್ರೋದ್ಧಾರನ ಸೈದಿ ಮಹಾತ್ಮನ

ಆನಂದಕವಿ ಕುರುಗುಂದ.

ಕೇಂದ್ರಕಿರಣಾವಲಿ.

(ಜ್ಞಾನಮುಖನಿಂದ)

ಮನುಷ್ಯನಿಗೆ ಏನಾದರೂ ವಿಶ್ರಾಂತಿ, ಉಚ್ಚ ವಿಚಾರಗಳು ಬೇಕೋ ಹೇಗೆ ಅಥವಾ ಬಾಹ್ಯವಸ್ತುಗಳನ್ನು ಸಮನಾಗಿ ಹಂಚಿಕೊಳ್ಳುವದರಲ್ಲಿಯೇ ಸರ್ವಸ್ವವೋ? ರೊಟ್ಟಿಯನ್ನು ದೊರಕಿಸಿಕೊಡುವ ಭರದಲ್ಲಿ ಮುಂದಿನ ಉನ್ನತಿಯನ್ನು ಸಾಧಿಸುವ ಶಾಸ್ತ್ರವನ್ನು ನಿರುಪಯೋಗಿಯೆಂದು ಹಳಿಯುವದೇನು?

ನಮ್ಮ ಕಡೆಗೆ ನಾವು ದುರ್ಲಕ್ಷಿದಿಂದಿರುವ ವರೆಗೆ, ಮತ್ತು ನಮ್ಮ ಸುಧಾರಕರು ನಾವೇ ಆಗದ ವರೆಗೆ, ಜಗತ್ತಿನಲ್ಲಿಯ ಎಲ್ಲ ಸುಧಾರಕರು ಕೂಡಿಯೂ ನಮ್ಮನ್ನು ಉದ್ಧಾರಮಾಡಲಾರರು. ಇಂದಿನ ವರೆಗೆ ಲಕ್ಷಾವಧಿ ಶ್ರೇಷ್ಠ ಉಪದೇಶಕರಾದರೂ ಜಗತ್ತು ಹಾಗೆಯೇ ಉಳಿವದ್ದಕ್ಕೆ ಈ ಆತ್ಮವಿಮುಖತೆಯೇ ಕಾರಣವು. ಶ್ರೇಷ್ಠ ಪುರುಷರು ಏನಾದರೂ ಕಲಿಸ ಬಂದರೆ ಅವರನ್ನೇ ಸುಧಾರಿಸುವದಕ್ಕೆ ಹೊರಡುವ ಸ್ವಯಂಮನ್ಯ ಈ ಹುಟ್ಟು ಸುಧಾರಕರ ರೀತಿಯು ಯಾವ ಉನ್ನತಿಯನ್ನು ತಾನೇ ಸಾಧಿಸಬಲ್ಲದು? ಸಾರಾಂಶ, ಸ್ವೋನ್ನತಿಯನ್ನು ಬದಿಗಿಟ್ಟು ಒಬ್ಬರೊಬ್ಬರ ಉನ್ನತಿಯನ್ನು ಒಬ್ಬರೊಬ್ಬರು ಮಾಡಲಿಕ್ಕೆ ಹೊರಟರೆ ಯಾರದೂ ಉದ್ಧಾರವಾಗದೆ ಪರಸ್ಪರ ಕಲಹಕ್ಕೆ ಮಾತ್ರ ಕಾರಣವಾಗುವದು.

ಇಬ್ಬರು ಹೆಣ್ಣುಮಕ್ಕಳು 'ನಿನ್ನ ಹೆರಳು ನಾನು ಹಾಕುತ್ತೇನೆ, ನನ್ನ ಹೆರಳು ನೀನು ಹಾಕು' ಎಂದು ಮಾತನಾಡಿಕೊಂಡು ಆ ಪ್ರಕಾರ ಮಾಡುವರು. ಪ್ರಸ್ತುತ ಸುಧಾರಣೆಯು ಈ ರೀತಿಯ ಪರಸ್ಪರ ಸಹಕಾರದಿಂದಲೇ ಶಕ್ಯವು.

ಭೌತಿಕ ಸುಧಾರಣೆಯಿಂದ, ಎಂದರೆ ನದಿಗೆ ಭವ್ಯ ಪೂಲುಗಳು, ಇರಲು ಸುಂದರ ಪ್ರಾಸಾದಗಳು, ಇಂಥವುಗಳನ್ನು ನಿರ್ಮಿಸಿದ ಮಾತ್ರಕ್ಕೆ ಅಂತಃಕರಣೋದಿತ ಪ್ರೇಮದ ಅವಶ್ಯಕತೆಯು ಎಂದಾದರೂ ಕಡಿಮೆಯಾಗುವದೇ? ವರ್ತಮಾನಪತ್ರಗಳಲ್ಲಿ ದೊಡ್ಡ ಅಕ್ಷರಗಳಿಂದ ತೋರಿಸಲ್ಪಡುವ ಬಾಹ್ಯ ಉಪಚಾರದ ಸಭೆಗಳು, ಭಾಷಣಗಳು, ಕ್ರಾಂತಿವಾದಗಳು ಭವ್ಯವಾಗಿ ಕಂಡರೂ ಸತ್ಯಸೃಷ್ಟಿಯಲ್ಲಿ ಪ್ರೇಮಳತೆ, ಐಕ್ಯಭಾವದ ವರ್ತನೆ ಇವೇ ಎಲ್ಲಕ್ಕಿಂತ ಹೆಚ್ಚು ಸಮಾಧಾನವನ್ನೊದಗಿಸುವವು.

ಸಮುದ್ರವು ಧಡ್ ಧಡ್ ಎಂದು ಬಹು ದೂರ ಕೇಳುವಂತೆ ಕೂಗಿ ಕರೆಯುವದು. ಅಲ್ಲಿ ನೋಡಲು ವಿಪುಲ ಸ್ವಚ್ಛ ನೀರಿನ ಸಂಚಯವೂ ಇರುವದು. ಆದರೆ ಸಮೀಪಕ್ಕೆ ಹೋದವರ ನೀರಡಿಕೆಯನ್ನು ಅದು ದೂರಮಾಡಬಲ್ಲದೋ? ಆದರೆ ಅದೇ ಶಾಂತ ನಿಃಶಬ್ದವಾಗಿ ಝುಳು ಝುಳನೆ ಹರಿಯುವ ಝರಿಯು ತಾನಲ್ಪನಾಗಿದ್ದರೂ ತನ್ನ ಸ್ವಚ್ಛ ನೀರಿನಿಂದ ನೀರಡಿಕೆಯನ್ನು ತಣಿಸುವದು.

ಹೀಗೆಯೇ ಸುಧಾರಕನ ನಿಯತಪತ್ರಗಳಲ್ಲಿಯ ವತ್ತು ಸಭೆಗಳಲ್ಲಿಯ ಗರ್ಜನೆಯನ್ನು ಕೇಳಿ ತಣಿಯುವ ಆಶೆಯಿಂದ ಅವನ ಹತ್ತಿರ ಹೋದಲ್ಲಿ ಕಷ್ಟಪಡುವದು ನಿಶ್ಚಯವು. ಅವನು ನಿಮ್ಮ ತಪ್ಪುಗಳನ್ನೇ ದೊಡ್ಡವು ಮಾಡಿತೋರಿಸುತ್ತ ನಿಮ್ಮ ಬೆರಳನ್ನೇ ನಿಮ್ಮ ಕಣ್ಣುಗಳಲ್ಲಿ ಕಡಿಸಿದರೆ ಮುಗಿಯಿತು ಅವನ ಕೆಲಸ! ಇಂಥವನಿಂದ ಸುಧಾರಣೆ ಯಾಗದು.

ಕಾಲ್ಚಂಡೆ !

(Foot-ball)

ಕಾಲ್ಚಂಡೆ! ಓ ಪುಟವ ಕಾಲ್ಚಂಡೆ, ನಿನ್ನವ-
ಸ್ಥೆಗೆ, ಅಯ್ಯೋ! ಬಗೆಯು ಮರಗುತಲಿಹುದು! ಗುರಿಯಿಲ್ಲ!
ಗತಿಯಿಲ್ಲ! ಸ್ವಂತಜೀವನವಿಲ್ಲ! ಆತ್ಮದುಸಿ-
ರೂ ಇಲ್ಲ! ಆದರೂ ಪುಟಿಯುತಿಹೆ! ಹಾರುತಿಹೆ!
ಏತರ್ಕೆ? ಏತರ್ಕೆ? ಓ ಪರಾಲಂಬಿಯೇ!
ನಿನಗೆ ಜೀವವ ನೀಡಿ, ನಿನ್ನ ಹೊಟ್ಟೆಯ ತುಂಬು-
ತಿಹರೇಕೆ? ಏತರ್ಕೆ? ತಮ್ಮ ಬಲವರ್ಧನಕೆ!
ತಮ್ಮ ಸುಖಸಂತಸಕೆ! ತಮ್ಮ ಗುರಿ ತಲುಪಲ್ಕೆ!

ನೀ ಮಾತ್ರ, ನಿನ್ನ ಪಥಧ್ಯೇಯಗಳ ಅರುಹು-ಪರ-
ವೆಗಳಿರದೆ, ಸಿಕ್ಕುಸಿಕ್ಕುವರೊದೆತಗಳ ಸಹಿಸು-
ತಲೆಯುತಿಹೆ! ಆ ಹೊಟ್ಟೆಯೊಂದನೇ ನೋಡುತಿಹೆ!
ಆದೊಡೇಂ? ಅವರಾಶ್ರಯವು ತಪ್ಪೆ,.....ಅಯ್ಯಯ್ಯೋ!
ನಿನ್ನ ಗತಿಯೇನಹುದು? ಗತಜೀವಿಯಾಗಿ, ಹಾ!
ಬೀಳ್ವೆ ನೀ ಮಣ್ಣಾಡಿ! ಚಿಃ! ಪರಾಲಂಬನೆಯೆ!

ತಾ॥ ೧೧-೬-೩೮ —ಈಶ್ವರ ಸಣಕಲ್ಲ.
ಮಧ್ಯರಾತ್ರಿಯಲ್ಲಿ

ಷಟ್‌ಸ್ಥಲಗಳು,

ವಿವರಣೆಃ - ಕೆಳಗಿನ ವಚನದಲ್ಲಿ ವಚನಕಾರನು ಷಟ್‌ಸ್ಥಲಗಳ ಸ್ವರೂಪನ್ನು ವಿವರಿಸಿದ್ದಾನೆ. ಈ ಸ್ವರೂಪನ್ನು ಅವನು ಇಲ್ಲಿ ನೈತಿಕ ದೃಷ್ಟಿಯಿಂದ ವಿವೇಚಿಸಿದ್ದಾನೆ. ಹೀಗೆ ವರ್ತಿಸದೆ ಇದ್ದ ಜಂಗಮರನ್ನು ಅವನು ಈ ವಚನದ ಕಡೆಯಲ್ಲಿ ಟೀಕಿಸಿದ್ದಾನೆ.

ವಚನಗಳು.

೨೨. ಅಯ್ಯಾ ಇದ್ದುದ ವಂಚನೆ ಮಾಡದೆ ಇಲ್ಲದುದ ಕಡವ ಮಾಡದೆ ಪರರ ಕಾಡಿ ಬೇಡಿ ತಂದು ದಾಸೋಹವ ಮಾಡದೆ, ತನ್ನ ಬೇಡಿದವರಿಗೆ ಇಲ್ಲೆನ್ನದಿಹುದೇ ಭಕ್ತಸ್ಥಲ. ಜಿಹ್ವೇಂದ್ರಿಯ ಗುಹ್ಯೇಂದ್ರಿಯ ಮೊದಲಾದ ಸಕಲ ಸಂಸಾರ ವಿಷಯದಲ್ಲಿ ಮನ ಮಗ್ನವಾಗದಿಹುದೇ ಮಹೇಶ್ವರಸ್ಥಲ. ಲಾಂಛನವ ಧರಿಸಿ ಕಾಂಚನಕ್ಕೆ ಕೈಯ್ಯೊಡ್ಡಿ ಬೇಡುವ ಪಂಚ ಮಹಾಪಾತಕರಲ್ಲಿ ಪಾದೋದಕ ಪ್ರಸಾದವ ತೆಗೆದುಕೊಳ್ಳದಿಹುದೇ ಪ್ರಸಾದಿಸ್ಥಲ. ತನ್ನ ತಾನರಿಯದ ಭಿನ್ನಜ್ಞಾನ ಕ್ರಿಯಿಂದಾಚರಿಸುವ ನರಗುರಿಗಳಿಗೆ ನಮಸ್ಕರಿಸದೆ ಪರಲೋಕದ ಫಲಪದವಿಗಿಚ್ಛೈಸದಿಹುದೇ ಪ್ರಾಣಲಿಂಗಿಸ್ಥಲ. ಇಹಲೋಕದ ಜಡ ಸಂಸಾರಿಗಳ ಸಂಗವ ಜರಿದು ಗುರುಲಿಂಗಜಂಗಮ ಮೂಲವಾದ ಬಾಹ್ಯಕ್ರಿಗಳ ಮರೆದು ಜನನಮರಣಂಗಳಿಲ್ಲದಿಹುದೇ ಶರಣಸ್ಥಲ. ಅರಿಷಡ್ವರ್ಗಂಗಳ ತೊರೆಯದ ಷಡ್ವಿಧ ಲಿಂಗಾಂಗಸಮರಸವನರಿಯದ ಮುಂಗಹೊಲೆ ಮಾದಿಗರ ಸಂಗವ ತೊರೆದು ತಾನಿದಿರೆಂಬುದನರಿಯದೆ ಇಹುದೇ ಐಕ್ಯಸ್ಥಲ. ತಾನಾಗಿ ಕೊಟ್ಟರೆ ಹಿಡಿವುದೇ ಮಧ್ಯಮ ಗುರುಸ್ಥಲ. ಕೊಟ್ಟರೂ ಹಿಡಿಯದಿಹುದೇ ಪರಮ ವಿರಕ್ತಿಸ್ಥಲ. ಕಾಡಿ ಬೇಡುವದೇ ಕಿರಾತಸ್ಥಲ. ಇಂತೀ ನವವಿಧಸ್ಥಲವ ಹರಗುರುವಾಕ್ಯ ಪುರಾತನರ ವಚನ ಪ್ರಮಾಣದಿಂದ ವಿಚಾರಿಸಿ, ಪುರಾತನರ ಕವಳಿಕೆಗೆ ಯೋಗ್ಯವಾದ ಸ್ಥಲವನಂಗಗೊಂಡ ಪರಿಣಾಮಿ, ನಿರುಪಾಧಿ, ಪರಿಪೂರ್ಣ, ಎಂಬ ತ್ರಿವಿಧ ಜಂಗಮಲಿಂಗದ ತೀರ್ಥ ಪ್ರಸಾದವನಂಗೀಕರಿಸಿ, ಪುರಾತನರ ಕವಳಿಕೆಗೆ ಅಯೋಗ್ಯವಾದ ಸ್ಥಯ, ಚರ, ಪರವೆಂಬ ತ್ರಿವಿಧ ಗುರುಗಳಲ್ಲಿ ತೀರ್ಥ ಪ್ರಸಾದವನುಳಿದಾಚರಿಸುವದು ನಿರ್ಣಯದ ಪದವನೈದುವದು ಬಸವಾದಿ ಪ್ರಮಥರಿಗಲ್ಲದೆ, ಭಿನ್ನ ಜ್ಞಾನಿಗಳೆಲ್ಲಿಯದೋ ಸದಾಶಿವಮೂರ್ತಿ ಲಿಂಗವೇ ?

ಭಕ್ತಸ್ಥಲ.

ವಿವರಣೆಃ— ನೈತಿಕಾಚರಣೆಯೇ ಭಕ್ತಸ್ಥಲದ ಮುಖ್ಯ ಲಕ್ಷಣವಾಗಿರುತ್ತದೆ. ಈ ಸ್ಥಲದಲ್ಲಿ ವಚನಕಾರರು ನೀತಿಯಿಂದ ನಡೆಯಬೇಕೆಂದು ಅನೇಕ ಬಗೆಯಾಗಿ ಹೇಳುವದುಂಟು. ವರ್ತನೆ ಶುದ್ಧವಾಗಿರಬೇಕು, ಮನಸ್ಸನ್ನು ಬಿಗಿಹಿಡಿಯಬೇಕು, ಮಾಯೆಗೆ ಬಲಿ ಬೀಳಬಾರದು, ನೀತಿಯಿಂದ ವರ್ತಿಸುವದರಿಂದಲೇ ಜ್ಞಾನವು ಪ್ರಾಪ್ತವಾಗುತ್ತದೆ, ಜಂಗಮರ ಕೂಡ ನೀತಿಯಿಂದ ವರ್ತಿಸಬೇಕು ಎಂದು ಮೊದಲಾಗಿ ಈ ಸ್ಥಲದಲ್ಲಿ ಅವರು ಯಾವಾಗಲೂ ಒತ್ತಿ ಹೇಳುವದುಂಟು. ಅರುವಿನ ಮಾರನು ಕೆಳಗಿನ ವಚನಗಳಲ್ಲಿ ಈ ವಿಷಯವನ್ನೇ ಹೇಳಿರುವನು.

ವಚನಗಳು.

೨೩. ಕನ್ನಡಿಯಲ್ಲಿ ಕಪ್ಪು ಹುಟ್ಟಿದಾಗ ಕಪ್ಪು ಕಳೆದಲ್ಲದೆ ಒಪ್ಪವ ಕಾಣಬಾರದು. ತನ್ನ ಭಾವಶುದ್ಧಕ್ಕೆ ದರ್ಪಣದೊಪ್ಪವನರಸಬೇಕು. ಎನ್ನ ಮನದ ಕಪಟ ನಿಮ್ಮಯ ಚಿತ್ತಶುದ್ಧವನರಸಬೇಕು. ನಿಮ್ಮಯ ನಿರ್ಮಲ ಎನ್ನಯ ಮಲದೇಹವ ತೊಳೆಯಬೇಕು. ಅರುವಿನ ಮಾರನ ಬಿನ್ನಹ. ಸದಾಶಿವಮೂರ್ತಿ ಲಿಂಗಕ್ಕೆ ತೆರಪಿಲ್ಲದ ಭಾವ.

೨೪. ಕಾಯದ ಕಕ್ಕುಲಿತೆಗಾಗಿ ಜೀವಿಗಳ ಬಾಗಿಲವ ಕಾಯದೆ, ಈಷಣತ್ರಯಕ್ಕಾಗಿ ಭವದುಃಖಗಳ ಬಾಗಿಲಲ್ಲಿ ನಿಂದು ವೇಳೆಯ ಕಾವಂಗೆ ಬ್ರಹ್ಮದ ಮಾತೇಕೆ? ಅದು ನಾಣ್ಮಡಿಗಳೊಳಗಾಗು, ಸದಾಶಿವಮೂರ್ತಿ ಲಿಂಗಕ್ಕೆ ಹೊರಗು.

೨೫. ಒಂದಾಶೆಯ ಕುರಿತು ಸರ್ವಮಾತಿಂಗೊಡಲಾಯಿತ್ತು. ಒಂದಾಶೆಯನರಿತು ನಿಂದಡೆ ಈಶ ಮೂರ್ತಿ ತಾನಾಗಿಪ್ಪ. ಇಂತೀ ಉಭಯದಾಶೆಯಲ್ಲಿ ಗಾಸಿಯಾಗುತ್ತ ಮಾತಿನ ಮಾಲೆ ಬೇಡ. ಆಶೆಯ ಪಾಶ ಹರಿದು ಈಷಣತ್ರಯವೆ ಕಿತ್ತು, ನಿರ್ಜಾತನಾಗಿರ್ದಲ್ಲಿ ಸದಾಶಿವಮೂರ್ತಿಲಿಂಗವು ತಾನೇ.

೨೬. ಭಕ್ತಿಹೀನನರಿದು ಭಕ್ತಿಯ ಮಾಡುವಲ್ಲಿ ಗುರುಲಿಂಗ ಜಂಗಮದ ಇರವ ಸಂಪಾದಿಸಲಿಲ್ಲ. ಭಕ್ತಿಯುಳ್ಳವನರಿದು ಭಕ್ತಿಯ ಮಾಡುವಲ್ಲಿ ಗುರುವಿನಲ್ಲಿ ಗುಣವನರಸಬೇಕು. ಲಿಂಗದಲ್ಲಿ ಲಕ್ಷಣವನರಸಬೇಕು.

ಜಂಗಮದಲ್ಲಿ ವಿರಕ್ತಿಯನರಸಬೇಕು. ಅದೆಂತೆಂದೊಡೆ, ಇಂತೀ ತ್ರಿವಿಧವೂ ತನ್ನಯ ಪ್ರಾಣವಾದ ಕಾರಣ. ಪರುಷ ಶುದ್ಧವಾಗಿಯಲ್ಲದೆ ಲೋಹವ ಪುಲವ ಕೆಡಿಸಲರಿಯದು. ತಾ ಹಿಡಿದು ಆರಾಧಿಸುವ ವಸ್ತು ಶುದ್ಧವಾಗಿಯಲ್ಲದೆ ಪೂಜಿಸುವ ಭಕ್ತನ ಚಿತ್ತ ಶುದ್ಧವಾಗಲರಿಯದು. ಸದಾಶಿವ ಮೂರ್ತಿ ಲಿಂಗ ಶುದ್ಧವಲ್ಲದೆ ಎನ್ನಂಗ ಶುದ್ಧವಲ್ಲ.

೨೭. ಬಚ್ಚಿಟ್ಟ ಬಯಕೆಯನೊಡೆಯ ಬೇಡಿದಡೆ ಕೊಡದಿರ್ದಡೆ ಸ್ವಾಮಿದ್ರೋಹವಲ್ಲವೇ? ಅಟ್ಟಡಿಗೆಯ ಪತಿಗೆ ಇಕ್ಕದೆ ಸತಿಯುಂಡಡೆ ಸಟ್ಟನೆ ಕಳವೆಯಲ್ಲವೇ? ಕೊಟ್ಟಾತನೊಡವೆಯ ಬೇಡಿದಡೆ ಕಟ್ಟಿ ಹೋರುವ ಕಷ್ಟ ಜೀವಿಗೇಕೆ ತ್ರಿವಿಧಭಕ್ತಿ, ಸಜ್ಜನಯುಕ್ತಿ? ಇಂತೀ ಸಜ್ಜನ ಕಳ್ಳರ ಬಲ್ಲನಾಗಿ, ಸದಾಶಿವ ಮೂರ್ತಿಲಿಂಗವು ಒಲ್ಲನು.

೨೮. ಸಕಲವನರಿದಡೆ ಮಲತ್ರಯನಾಸ್ತಿಯಾಗಿರಬೇಕು. ಅರಿತು ಸಿಂದುದಕ್ಕೆ ಮುಖ್ಯ. ಮೃತ್ತಿಕೆಯ ಕೂಡಿದ ಜಲವಾರದಿರ್ದಡೆ ಪಂಕ ದೋರುವಂತೆ, ಏನನರಿತು ನುಡಿದಡೂ ಕುಲ ಫಲ ಮಲ ನಾಸ್ತಿಯಾಗಿರಬೇಕು ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

೨೯. ಮೊನೆ ತಪ್ಪಿದಲಗಿನ ಘನವೇನನೂ ಮಾಡದು. ಅರಿವು ಹೀನವಾದಲ್ಲಿ ಕ್ರಿಯೆ ಹರವರಿ ಏನನೂ ಮಾಡದು. ವರ್ತನ ಶುದ್ಧವಿಲ್ಲದೆ ಲಾಂಛನದುತ್ಕೃಷ್ಟತೆ ಏನನೂ ಮಾಡದು. ತ್ರಿಕರಣ ಶುದ್ಧವಿಲ್ಲದ ಮಾಟ ದ್ರವ್ಯದ ಕೇಡು ಭಕ್ತಿಗೆ ಹಾನಿ. ಇಂತೀ ಗುಣಾದಿಗುಣಂಗಳಲ್ಲಿ ಅರಿಯಬೇಕು. ಸದಾಶಿವ ಮೂರ್ತಿ ಲಿಂಗವನರಿಯಬೇಕು.

೩೦. ನಿಷ್ಠೇಪವ ನಿಕ್ಷೇಪಿಸುವಲ್ಲಿ ಮತ್ತಾರು ಅರಿಯಬೇಕೆಂಬುದಿಲ್ಲ. ಶಿವಪ್ರಸಂಗವನೊಂದ ನುಡಿಯಲಾಗದು. ಮೀರಿ ನುಡಿದನಾದಡೆ ಸದಾಶಿವಮೂರ್ತಿ ಲಿಂಗಕ್ಕೆ ದೂರ.

೩೧. ಅನುವನರಿವನ್ನಕ್ಕಾಚರಣೆ. ಪುಣ್ಯವನರಿವನ್ನಕ್ಕ ಪೂಜೆ. ಸರೀರವುಳ್ಳನ್ನಕ್ಕ ಸುಖದುಃಖ. ಸಂತೋಷಿಸಬೇಕು. ತಪ್ಪಿದಲ್ಲಿ ನಿಂತು ಹೊಳೆಯ ದಾಂಟುವನಂತೆ ಕ್ರಿಯಾಶುದ್ಧವಾದಲ್ಲಿ ಜ್ಞಾನವ ಗೊತ್ತು ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

೩೨. ಬ್ರಹ್ಮಂಗೆ ಸರಸ್ವತಿಯಾಗಿ ಕಾಡಿತ್ತು ಮಾಯೆ. ವಿಷ್ಣುವಿಂಗೆ ಲಕ್ಷ್ಮಿಯಾಗಿ ಕಾಡಿತ್ತು ಮಾಯೆ. ರುದ್ರಂಗೆ ಉಮಾದೇವಿಯಾಗಿ ಕಾಡಿತ್ತು ಮಾಯೆ. ಎನಗೆ ನಿಮ್ಮನರಿವ ಬಯಕೆ ಭಾವ ಮಾಯೆಯಾಗಿ ಕಾಡುತ್ತಿದೆ. ನೀ ನಾ ಉಳ್ಳನ್ನಕ್ಕ ಉಭಯವು ಮಾಯವಾಗಿದೆ. ಸದಾಶಿವಮೂರ್ತಿಲಿಂಗವು ನಾ ನೀನೆಂಬುದೇ ಮಾಯೆ.

೩೩. ಕಾಳೋರಗನ ಹೆಡೆಯ ಮಧ್ಯದೊಳಿಂದು ಕೊಳು ಸಿಕ್ಕ ಹೆಣ್ಣು ಕಾಲುಮೇಲಾಗಿ ತಲೆ ಕೆಳಗಾಗಿ ಅರುಹರನೆಲ್ಲರ ತನ್ನ ಕಾಲ ಸಂದಿಯಲ್ಲಿರಿಸಿ ಭಾಳಾಂಬಕನ ಲೀಲೆಯ ಹೊತ್ತಾಡುವರನೆಲ್ಲರ ತನ್ನ ಶುಕ್ಲದ ಪದರಿನಲಿ ಬೈಚಿಟ್ಟು ಇದ್ದಾಳೆ. ಆ ಹೊಲೆಯ ಹರಿವಲ್ಲದಾಗದು ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

೩೪. ಮತಿಯಿಂದ ಕಾಂಬುದು ಚಿತ್ತದ ಹಂಗು. ಪೂಜೆಯಿಂದ ಕಾಂಬುದು ಪುಣ್ಯದ ಹಂಗು. ಉಭಯವನಳಿದು ಕಾಂಬುದಕ್ಕೆ ಚಿತ್ತವೆಂಬುದಕ್ಕೆ ಗೊತ್ತಿಲ್ಲ. ಏನು ಏನು ಬಾರದುದಕ್ಕೆ ಸದಾಶಿವಮೂರ್ತಿ ಲಿಂಗವನರಿವುದಕ್ಕೆ ಠಾವ ಹೇಳಾ.

೩೫. ಭಕ್ತ ಗುರುಚರವ ನುಡಿವಲ್ಲಿ ನೋವುಂಟೇ ಅಯ್ಯ? ಪುರುಷ ಕಳ್ಳನಾದಲ್ಲಿ ಸತಿಗೆ ಸೆರೆಯುಂಟಲ್ಲದೆ ಸೂಳೆಯ ಮಿಂಡ ಸತ್ತರೆ ಅವಳನಾರು ಸೆರೆಯ ತೆಗೆವರುಂಟೇ ಅಯ್ಯ? ಸಜ್ಜನ ಸದ್ಭಕ್ತನೆಂದಡೂ ಸದಾಶಿವಮೂರ್ತಿ ಲಿಂಗಕ್ಕೆ ಒಳಗು.

೩೬. ಯತಿಗು ಗುಣದ್ವೇಷ, ಶಾಸ್ತ್ರ ಗುಣದ್ವೇಷ, ಆಚಾರ ಗುಣದ್ವೇಷ. ಸಮತೆ ಶಾಂತಿ ಗುಣದಲ್ಲಿ ನಿಂದು ವಿರಕ್ತಿ ಗುಣದ್ವೇಷ. ಇಂತೀ ದ್ವೇಷವುಂ ಬಿಟ್ಟು ಸ್ವಯಂಭುವಾಗಿ ನಿಂದುದು ಸದಾಶಿವಮೂರ್ತಿ ಲಿಂಗವು ತಾನೇ.

೩೭. ಶಿವಭಕ್ತನಾಗಿ ಮುಂದೆ ಬಂದು ಶಿವಜಂಗಮವಾಗಿ ಕರ್ತೃರೂಪ ತಾಳಿ ಹಿಂದುಳಿದ ಬಂದ ಉಭಯವು ಒಂದಾಗಿ ಜಗಹಿತಾರ್ಥವಾಗಿ ಬಂದಂದು ಸದಾಶಿವಮೂರ್ತಿ ಲಿಂಗವು ತಾನೆ.

ಮಹೇಶಸ್ಥಲ.

ವಿವರಣೆ: – ಭೈರ್ಯಸ್ಥೈರ್ಯಾದಿಗಳುಳ್ಳವನೇ ಮಹೇಶ್ವರನು. ಇವನಲ್ಲಿ ಸಂದೇಹವೆಂಬುದಿಲ್ಲ. ಭಾಷೆಗೆ ತಪ್ಪನು. ಅತ್ಯಂತ ನೇಮಸ್ತನಾಗಿರುವನು. ದೃಢಚಿತ್ತವುಳ್ಳವನಾಗಿರುವನು.

ವಚನಗಳು.

೩೮. ಕುಂಭಕ್ಕೆ ಜಲವ ತುಂಬುವಲ್ಲಿ ಶೋಧಿಸಿದಲ್ಲದೆ ಶುದ್ಧವಿಲ್ಲ. ತಾ ಭುಂಜಿಸುವ ದ್ರವ್ಯಕ್ಕೆ ಕಲ್ಲು, ಕಡ್ಡಿ, ಮುಳ್ಳು ಮೊದಲಾಗಿ ಶೋಧಿಸಿಕೊಂಡಲ್ಲದೆ ಶುದ್ಧವಿಲ್ಲ. ಕಂಡು ಕೊಳಬಹುದೇ? ಇಂತಿದನರಿತು ಸಂದೇಹವಿಲ್ಲದೆ ಮಾಡುವ ಭಕ್ತಿ ಅಂಧಕ ಕಣ್ಣು ಹೊಸೆದಂತಾಯಿತ್ತು. ಸಂದೇಹ ಬಿಟ್ಟಲ್ಲಿ ಆದು ನಿನ್ನಂಗ, ಸದಾಶಿವಮೂರ್ತಿ ಲಿಂಗದ ಸಂಗ.

೩೯. ಕ್ಷೀರಕ್ಕೆ ವಾರಿಯಲ್ಲರತಲ್ಲದೆ ಮಧುರ ಗುಣವಿಲ್ಲ. ಶರೀರವಿಡಿದಿದ್ದ ಲಿಂಗಕ್ಕೆ ಆಸೆಯರತು ರೋಷ ಹಿಂಗಿ ಈಷಣತ್ರಯವನರಿದು ಈಶನ ವೇಷದ ಭಾಷೆಗೆ ತಪ್ಪದಿಪ್ಪುದು ಗುರುಚರಮತ ಸದಾಶಿವಮೂರ್ತಿಲಿಂಗವನರಿವುದಕ್ಕೆ.

೪೦. ಮುನ್ನವೇ ಮೂರ ಹಂದು, ಗುರು ಚರ ತಾನಾಗಿ ಬಂದಲ್ಲಿ ಇನ್ನು ಮೂರರಾಶಿ ಏಕೆ? ಆವ ಜೀವಿಯೂ ತಮ್ಮ ಮಲವ ತಾವು ಮುಟ್ಟುವಾಗಿ ಬಿಟ್ಟುದ ಹಿಡಿವ ಮಿಟ್ಟಿಯ ಭಂಡರನೊಪ್ಪ. ಸದಾಶಿವಮೂರ್ತಿಲಿಂಗವು ನಿರ್ಭರವಿಲ್ಲದವರನೊಲ್ಲ.

(೪೧) ಅರಿವಾಗ ಆ ತನುವಿನಲ್ಲಿದ್ದೇ ಅರಿಯಿತ್ತು. ಮರೆವಾಗ ಆ ತನುವಿನಲ್ಲಿದ್ದೇ ಮರೆಯಿತ್ತು. ಅರಿವು ಮರಸೆ ಎರಡಾಯಿತ್ತು. ಉಭಯವ ತಾನಳಿದ ಘಟ ಒಂದಾಯಿತ್ತು. ಇಂತೀ ಭೇದ ವಿಷದ ಬೇರಿನಂತೆ. ಸಂಚಾರದೊಳಗಾದುದು ವಿಷಮಯವಾಯಿತ್ತು. ಗೋಪ್ಯ ಕ್ಕೊಳಗಾದುದು ಅಮೃತಮಯವಾಯಿತ್ತು. ಇಂತೀ ಸಂಚಾರವುಳ್ಳನ್ನಕ್ಕ ಸಂಚಿತಕರ್ಮ, ಸಂಚಾರನಿಲೆ ಸದಾಶಿವಮೂರ್ತಿ ಲಿಂಗವು ತಾನೇ.

೪೨. ಎನ್ನ ಮಡದಿ ಹಾಲ ಕಾಸುವಾಗ ಹಾಲಿನ ಕುಡಿಕೆಯಲ್ಲಿ ಕಾವು ಬಿದ್ದು ಸತ್ತಿತ್ತು. ಎನ್ನ ಭಾಷೆ ನೆಟ್ಟಿತ್ತು. ಮಡದಿಯ ಬಿಡ

ಬಾರದು. ಹಾಲ ಚಲ್ಲಬಾರದು. ಹಾವಿನ ವಿಷ ಹಾಲಿನಲ್ಲಿಯೇ ಸೋರಿತ್ತು. ಅದಕ್ಕಿನ್ನಾವುದು ತೆರ? ಕ್ರಿಯೆಯ ಬಿಡಬಾರದು. ಅದು ಹಿಂಗಾಶ್ರಯವಿಲ್ಲ. ಅರಿವ ನರಿದಿಹೆನೆಂದಡೆ ಪ್ರಪಂಚಕ್ಕೆ ಒಡಲಾಯಿತ್ತು. ಹುಲಿ ಬಾಯಿ ಹಾವಿನ ಹೆಡೆಯನಿಕ್ಕಿದ ತೆರ ಎನಗಾಯಿತ್ತು. ಈ ಸಂದೇಹವ ಬಿಡಿಸು ಸದಾಶಿವಮೂರ್ತಿಲಿಂಗವೇ ನಿಮ್ಮ ಧರ್ಮ.

೪೫. ವೇದಪಾತಕ ಶಾಸ್ತ್ರವಿತ್ತು. ಪುರಾಣ ಬಹುಕೃತಿವಂತ ವಾಚಕಾಡಂಬರ. ಛೇದಕ ಸಂಸ್ಕೃತ, ಪ್ರಾಕೃತ, ಅಪಭ್ರಂಶ ದೇಶಿಕವು ಈ ಮೊದಲಾದ ವಾಚಕ ಚಾರ್ವಾಕ ಮುಖಗಳಿಂದ ಹೋರುವ ಮಾಯಾವಾದದ ತೆರನಲ್ಲ. ಮೂಲಿಕಾಸಿದ್ಧಿ, ರಸಸಿದ್ಧಿ, ಅಂಜನಸಿದ್ಧಿ, ಅದೃಶ್ಯಕರಣ, ಕಾಯಸಿದ್ಧಿ ಇಂತೀ ಕುಟಿಲಂಗಳಿಗತಿರೇಕ ಅಗೋಚರ ಅಪ್ರಮಾಣ. ಅಂಗಲಿಂಗ ಸಂಬಂಧವಾದ ಶರಣನಿರವು ಎಂತೆಂದೊಡೆ, ಅನಿಲ ಮುಟ್ಟದ ಕಂಪಿನಂತೆ, ಶ್ರುತಿ ಮುಟ್ಟದ ಕಡ್ಡಿಯಂತೆ, ಮುಟ್ಟದ ಗತಿಯಂತೆ, ನೆಯಿ ಮುಟ್ಟದ ಮುಗ್ಧದಂತೆ, ಪವನ ಮುಟ್ಟದ ಪರ್ಣದಂತೆ, ಭಾವ ಭ್ರಮೆಯೊಳಗಿರ್ದು ಇಲ್ಲದ ಶರಣನ ಇರವು ಸದಾಶಿವಮೂರ್ತಿ ಲಿಂಗದಿರವು ತಾನೇ.

೪೬. ಕುರಿಯೊಡೆಯ ಹಲವರ ನಡುವೆ ನಿಂದರೆ ತನ್ನೊಡೆಯನ ನರಿವಂತೆ ಸಕಲೇಂದ್ರಿಯ ಬಹು ದುಃಖದಲ್ಲಿದ್ದರೂ ತತ್ತತ್ ಕಾಲಾರ್ಜನೆ ನೇಮ ಕೃತ್ಯ ತಪ್ಪದೆ ಮಾಡಬೇಕು. ಇದು ನಿಶ್ಚಯದಿರವು ಸದಾಶಿವ ಮೂರ್ತಿಲಿಂಗವನರಿವುದಕ್ಕೆ.

೪೭. ಉಂಟೆಂಬ ದೃಢವಿಲ್ಲೆಂಬ ಸಂದೇಹ ತನ್ನಲ್ಲಿ ತೋರಿ ಆಳವುತ್ತಿಪ್ಪ ಬೇಧವನರಿತಂಗೆ ಮಲತ್ರಯ ನಾಸ್ತಿ ಸದಾಶಿವ ಮೂರ್ತಿಲಿಂಗವನರಿತಡೆ.

೪೮. ಹರಿವ ಹಾವಿಂಗೆ ಕಾಲ ಕೊಟ್ಟು, ಉರಿವ ಕಿಚ್ಚಿಂಗೆ ಕೈಯ್ಯನಿಕ್ಕಿ, ಅರಿವಾಯುಧಕ್ಕೆ ಕೊರಳ ಕೊಟ್ಟು, ಮತ್ತಿಂತೋ ಅರುಹಿರಿಯರಾದಿರಿ? ಮುಂದಕ್ಕಾತನನರಿಯ ಬಲ್ಲಡೆ ಹರಿವ ಚಿತ್ತವ ನಿಲಿಸಿ, ಕುದಿವ ಆಶೆಯ ಕೆಡಿಸಿ, ಸರ್ವ ವ್ಯಾಪಾರವೆಂಬ ಗೊತ್ತಿಗೆ ಚಿತ್ತವನಿಕ್ಕದೆ, ನಿಶ್ಚಯವಾಗಿ ನಿಂದುದು. ಆತನಿರವೇ ಸದಾಶಿವ ಮೂರ್ತಿಲಿಂಗವು ತಾನೇ.

೪೯. ಉಂಟೆಲ್ಲೆಂಬುದನರಿತು ನುಡಿವುದು ಕ್ರಿಯೆಯೋ, ನಿಃಕ್ರಿಯೆಯೋ? ಇವೆಲ್ಲವನರಿತು ನುಡಿವುದು ಘಟದೊಳಗಣ ಮಾತಲ್ಲವೇ? ಅದು ಮಾಯಾವಾದದಿರವು. ಭಾವ ಕಾಯದಲ್ಲಿ ಸಿಕ್ಕಿ ಸಕಲವನೊಡನೂಡಿ ಭೋಗಂಗಳನುಣುತ ತಾನಲ್ಲವೆಂಬ ಮಾಯಾವಾದಿಗಳ ಮಾತು ಕನ್ನದ ಬಾಯಲ್ಲಿ ಸಿಕ್ಕಿದ ಕಳ್ಳನ ಬಾಯುಲಿಯಂತೆ ಬಲ್ಲವರು ಮಚ್ಚುವರೇ? ಶರೀರವುಳ್ಳನ್ನಕ ಪ್ರಾಣಯುಕ್ತನಾಗಬೇಕು. ಇದೇ ನಿಶ್ಚಯ ಸದಾಶಿವ ಮೂರ್ತಿಲಿಂಗವನರಿವುದಕ್ಕೆ.

ಪ್ರಸಾದಿಸ್ಥಲ.

ವಿವರಣೆ— ಮನುಷ್ಯನು ಪದಾರ್ಥಗಳನ್ನು ಲಿಂಗಕ್ಕೆ ಅರ್ಪಿಸಿ ಉಪಭೋಗಿಸಬೇಕು. ಇದರಿಂದ ಅವನ ಕರ್ಮಗಳು ಕೆಡುವವು ಅವನು ಲೋಕದಲ್ಲಿ ಇದ್ದರೂ ಇಲ್ಲದಂತೆ ಇರುತ್ತಾನೆ.

ವಚನಗಳು.

೪೮. ಕಾಳೆಯ ಕಣ್ಣ ಕಿತ್ತು ಎಡಿಯ ಸರ್ವಾಂಗವ ಸೀಳಿ ಅಚ್ಚ ಬೆಳ್ಳಗೆಯ ಹಾಲ ನಿಶ್ಚಯದಲ್ಲಿ ತೆಗೆದು ತೃಪ್ತಿಯಾಗಿ ಕೊಳಬಲ್ಲಡೆ ಆತನೇ ಸದಾಶಿವ ಮೂರ್ತಿಲಿಂಗವು.

ಟೀಕು:— ಶಿವಜ್ಞಾನೋದಯವಾದ ಶರಣನು ಅಜ್ಞಾನ ಸ್ವರೂಪಿಣಿಯಾದ ಮಾಯೆಯ ಭಿನ್ನಜ್ಞಾನವ ನಿವೃತ್ತಿಯ ಮಾಡಿದನೆಂಬುದೀಗ ಕಾಳೆಯ ಕಣ್ಣ ಕಿತ್ತು ಎಂಬ ಶಬ್ದಕ್ಕರ್ಥ. ಅಂತು ಮಾಯಾ ಸಂಬಂಧವಾದ ಖಂಡಿತ ಜ್ಞಾನವಳಿಯಲು ನಾನು ದುಶ್ಚರಿತ್ರವನುಳ್ಳ ಮನಸ್ಸಿನ ಪ್ರಕೃತಿಭಾವವ ನಿವೃತ್ತಿಯ ಮಾಡಿದನೆಂಬುದೀಗ ಎಡಿಯ ಸರ್ವಾಂಗವ ಸೀಳಿ ಎಂಬ ಶಬ್ದಕ್ಕರ್ಥ. ಅಂತು ಮನವಳಿಯಲು ಮಲತ್ರಯಂಗಳು ಹೊದ್ದದೆ ನಿರ್ಮಲಸ್ವರೂಪವಾದ ಜ್ಞಾನಶಕ್ತಿಯ ಮಧ್ಯದಲ್ಲಿರ್ಪ ಪರಮಾಮೃತ ರಸವನು ಸ್ವಾನುಭಾವ ಉಪಾಯ ತಂತ್ರದಿಂ ಕರೆದುಕೊಂಡು ಸರ್ವಾಂಗದಲ್ಲಿ ಧರಿಸಿ ಆ ಲಿಂಗಸುಖ ಪ್ರಸನ್ನ ಪ್ರಸಾದವ ಸ್ವೀಕರಿಸಬಲ್ಲಾತನೇ ಪರಶಿವ ಸ್ವರೂಪನೆಂಬುದೀಗ ಅಚ್ಚ ಬೆಳ್ಳಗೆಯ ಹಾಲ ನಿಶ್ಚಯದಲ್ಲಿ ತೆಗೆದು ತೃಪ್ತಿಯಾಗಿ ಕೊಳಬಲ್ಲಡೆ ಆತನೇ ಸದಾಶಿವ ಮೂರ್ತಿ ಲಿಂಗವು ಎಂಬ ಶಬ್ದಕ್ಕರ್ಥ.

೪೯. ಬಂಟನೊಡೆಯನೊಡನೆಯುಂಡಲ್ಲಿ ದಾಸತನವಳಿಯಿತ್ತು. ನೀ ಮರೆದು ಮಲಗಿರ್ದು ಸ್ವಪ್ನವ ಕಾಂಬಲ್ಲಿ ಲಿಂಗದ ಕೂಟವೆಲ್ಲಿದ್ದಿತ್ತು? ನೀ ಸ್ತ್ರೀ ಸಂಭೋಗವ ಮಾಡುವಲ್ಲಿ ಲಿಂಗ ನಿನ್ನಲ್ಲಿ ಸಹಗೂಡಿದ್ದ ತಾವಾವುದು? ಸಾಕು ಆರ್ಥಿಕಾರರ ಹೊತ್ತುಹೋಕಿನ ಅರ್ಪಿತಲಿಂಗವಂಗದಿಂದ ಹಿಂಗಿದಾಗಲೇ, ಸ್ವಪ್ನದ ಅರ್ಪಿತ. ಮರವೆಯ ಮುಟ್ಟಿದ ಅರ್ಪಿತವಿದು. ನಿಶ್ಚಯವಲ್ಲ. ಸದಾಶಿವಮೂರ್ತಿ ಲಿಂಗಕ್ಕೆ ಹೊರಗು.

ಶಿವಾನುಭವ.

ಪರ್ವ ೦೨] ಸಪ್ಟಂಬರ ೧೯೩೮ [ಸಂಚಿಕೆ ೦೨

ಬಸವೇಶ್ವರನು ಸ್ತ್ರೀಯರಿಗೆ ತೋರಿಸಿದ ಗೌರವ.

(ಲೇಖಕ:—ಎಸ್. ವ್ಹಿ. ಹಂಜಿ, ಬಿ. ಎ. ಹಲಸಿ)

ನಮ್ಮೀ ಭರತಖಂಡದಲ್ಲಿ ವೇದಕಾಲದಿಂದ ಸ್ತ್ರೀಯರಿಗೆ ಯೋಗ್ಯ ಮಾನಮರ್ಯಾದೆಗಳು ಸಲ್ಲುತ್ತಿದ್ದು ನಡುವೆ ಸ್ಮೃತಿಗಳ ಕಾಲದಲ್ಲಿ ಮಾತ್ರ ಅವರ ಉನ್ನತಿಗೆ ಸ್ವಲ್ಪ ತೊಂದರೆಯುಂಟಾಯಿತು. ಇದೇ ಮುಂದೆ ಪರಮಾವಧಿಗೆ ಮುಟ್ಟಿ ಸ್ತ್ರೀಯರು ಪುರುಷರ ದಾಸ್ಯಕ್ಕೊಳಗಾದರು. ಅವರು ಪುರುಷರ ಅಪ್ಪಣೆಯ ಹೊರತು ಏನೂ ಮಾಡದೆ ಕೇವಲ ಮನೆಯಲ್ಲಿದ್ದು ಕೊಂಡು ಅಡಿಗೆ ಮೊದಲಾದ ಮನೆಗೆಲಸಗಳನ್ನೆ ಮಾಡುವದು, ಮಕ್ಕಳನ್ನಾಡಿಸುವದು ಇವೇ ಮೊದಲಾದ ಚಿಕ್ಕಪುಟ್ಟ ಕಾರ್ಯಗಳಲ್ಲಿ ತೊಡಗುತ್ತಿದ್ದರು. ಸಮಾಜದ ಯಾವದೇ ಕಾರ್ಯದಲ್ಲಿ ಅವರಿಗೆ ಭಾಗವಹಿಸಲಿಕ್ಕೆ ಬರುತ್ತಿದ್ದಿಲ್ಲ. ಇಷ್ಟೇ ಅಲ್ಲ. ಅವರು ಧಾರ್ಮಿಕ ಕಾರ್ಯದಲ್ಲಿಯಂತೂ ಸಂಪೂರ್ಣ ಅಯೋಗ್ಯರು. ಮತ್ತು ಮಂತ್ರ ಪುರಾಣ ಪುಣ್ಯ ಕಥೆಗಳನ್ನು ಕೂಡ ಕೇಳಬಾರದು ಎಂದು ಅವರಿಗೆ ಅಪ್ಪಣೆಯಾಯಿತು. ಅವರು ದೀಕ್ಷೆಗೆ ಅಯೋಗ್ಯರು. ಪುರುಷರ ಮುಖಾಂತರವೇ ಅವರು ದೇವರನ್ನು ಪೂಜಿಸಿ ಮೋಕ್ಷವನ್ನು ಪಡೆಯಬೇಕು ಎಂದು ಅವರ ವಿಚಾರವಿತ್ತು. ಹೀಗೆ ಪುರುಷರು ಸ್ತ್ರೀಯರನ್ನು ಸಂಪೂರ್ಣವಾಗಿ ತಮ್ಮ ಆಧೀನದಲ್ಲಿಟ್ಟುಕೊಂಡು, ಅವರನ್ನು ಕೇವಲ ತಮ್ಮ ವಿಲಾಸನ ಸ್ತ್ರೀಗಳನ್ನಾಗಿಮಾಡಿ ಇಲ್ಲವೆ ಕೈಯೊಳಗಿನ ಆಳುಗಳಂತೆ ನಡಿಸಿಕೊಂಡು ತಾವೇ ಶ್ರೇಷ್ಠರೆಂಬ ಭಾವನೆಯುಳ್ಳವರು. ಮತ್ತು ಇದೇ ಪದ್ಧತಿಯು ನಮ್ಮ ಈಗಿನ ನವನಾಗರಿಕತೆಯ ಯುಗದಲ್ಲಿಯೂಕೂಡ ವಂಶಪರಂಪರೆಯಿಂದ ನಡೆದುಬಂದಿದೆ.

ಸ್ತ್ರೀಯರ ಸ್ಥಿತಿಯು ಹೀಗಿರುತ್ತಿರಲಾಗಿ ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿ ಒಳ್ಳೇ ಸುಂದರವಾದ ಸಮಾಜವನ್ನು ನಿರ್ಮಿಸುವಾಗ ಬಸವೇಶ್ವರನು ಸ್ತ್ರೀಯರ ಉನ್ನತಿಗೆ ಬಹಳ ಪ್ರೋತ್ಸಾಹನ ಕೊಟ್ಟನು. ಜನಜನಿತವಾಗಿ ಬಂದ ಸ್ತ್ರೀಯರ ದುರವಸ್ಥೆಯನ್ನು ಕಂಡು ಅವನು ಮರುಗಿದನು. ಸಮಾಜವನ್ನು ಪೂರ್ಣಗೊಳಿಸಲು ಸ್ತ್ರೀಯರ ಸಹಾಯವು ಅತ್ಯವಶ್ಯವೆಂದು ಕಂಡುಹಿಡಿದನು. ಪುರುಷರಂತೆ ಅವರಲ್ಲಿಯಾದರೂ ವಿಚಾರಶಕ್ತಿಯಿದೆ; ಮತ್ತು ಅವರಿಗೆ ಯೋಗ್ಯ ಶಿಕ್ಷಣ ಕೊಟ್ಟರೆ ಅವರ ವಿಚಾರಶಕ್ತಿಯು ಬೆಳೆದು ಅತ್ಯೋನ್ನತಿಯನ್ನು ಮಾಡಿಕೊಂಡು ತಮ್ಮ ಮನೆತನಕ್ಕೂ ಸಮಾಜಕ್ಕೂ ಉಪಯುಕ್ತವಾದ ಕಾರ್ಯಗಳನ್ನು ಮಾಡಬಲ್ಲರೆಂಬುದನ್ನು ಅರಿತನು. ಅವರಲ್ಲಿಯೂ ಉಚ್ಚ ವಿಚಾರಗಳು, ಭಾವನೆಗಳು ಇವೆಯೆಂಬುದನ್ನು ತಿಳಿಕೊಂಡನು. ಈ ಎಲ್ಲ ಕಾರಣಗಳಿಂದ ಬಸವೇಶ್ವರನು ಅವರ ಶಿಕ್ಷಣ, ವಿಚಾರಬೆಳವಣಿಗೆ, ಮತ್ತು ಅವುಗಳ ಪ್ರಕಟನೆಗಳಿಗೆ ಎದೆಗೊಟ್ಟು ಸಮಾಜದಲ್ಲಿ ಅವರ ಹಕ್ಕು ಬಾಧ್ಯತೆಗಳನ್ನು ಒದಗಿಸಿಕೊಟ್ಟನು.

ಬಸವೇಶ್ವರನು ಮೊದಲು ಸ್ತ್ರೀಯರ ವಿಷಯವಾಗಿ ಆದರ, ಪೂಜ್ಯ ಬುದ್ಧಿಗಳು ಹುಟ್ಟುವಂತೆ ಮಾಡಿದನು. ಆತನು ಅನ್ಯ ಸ್ತ್ರೀಯರನ್ನು ತನ್ನ ಸಹೋದರಿಯರಂತೆ ಇಲ್ಲವೆ ಮಾತೆಯರಂತೆ ಕಾಣಬೇಕೆಂದು ಹೇಳಿದನು. ಕೇವಲ ಜನರಿಗೆ ಹೀಗೆ ಉಪದೇಶ ಮಾಡದೆ ತಾನು ಸ್ವತಃ ಹೀಗೆ ನಡೆಯುತ್ತಿದ್ದನು. ಇಷ್ಟೇ ಅಲ್ಲ. ಪರಸ್ತ್ರೀಯು ಪ್ರತ್ಯಕ್ಷ ಮಹಾದೇವಿಯೆಂದು ಹೇಳಿ ಅವರಿಗೆ ದೇವತೆಯರಿಗೆ ಸಲ್ಲುವ ಗೌರವವನ್ನೂ ಪೂಜ್ಯತೆಯನ್ನೂ ಒದಗಿಸಿಕೊಟ್ಟನು. ಈ ಸಂಗತಿಯು ಕೆಳಗಿನ ವಚನಗಳಿಂದ ಹೆಚ್ಚು ಸ್ಪಷ್ಟವಾಗುವದು.

"ನೋಡಲಾಗದು, ಸುಡಿಸಲಾಗದು, ಪರಸ್ತ್ರೀಯರ ಬೇಡ, ಕಾಣಿರೋ. ತಗರ ಬೆನ್ನಲ್ಲಿ ಹರಿವ ಸೊಣಗನಂತೆ ಬೇಡ, ಕಾಣಿರೋ. ಒಂದಾಸೆಗೆಸಾಸಿರ ವರುಷ ನರಕದಲ್ಲದ್ದುವ ಕೂಡಲಸಂಗಮದೇವಾ"

"ಎಲ್ಲಿ ನೋಡಿದಲ್ಲಿ ಮನವೆಳಿಸಿದೊಡೆ ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪರವಧುವನು ಮಹಾದೇವಿ ಎಂದು ಕಾಂಬೆನು ಕೂಡಲಸಂಗಮದೇವಾ." ಮತ್ತು ಅವರಿಗೆ ಧಾರ್ಮಿಕ ಕಾರ್ಯಗಳಲ್ಲಿ ಸರಿಸಮಾನ ಹಕ್ಕುಗಳನ್ನು ಕೊಟ್ಟನು. ಅವರು ಪುರುಷರಿಗಿಂತ ಕೀಳಲ್ಲ;

ಪುರುಷರ ಸಮಾನರು; ಪುರುಷರಂತೆ ಅವರೂ ದೀಕ್ಷೆ ಹೊಂದಲಿಕ್ಕೆ ಯೋಗ್ಯರು. ಹೀಗೆ ಅವರು ತಮ್ಮ ಸದ್ಗತಿಯನ್ನೂ ಮತ್ತು ತಮ್ಮ ಪುರುಷರ ಮೋಕ್ಷವನ್ನೂ ಸಂಪಾದಿಸಬಲ್ಲರು ಎಂದು ತಿಳಿಸಿಕೊಟ್ಟನು. ಇದರಿಂದ ಅವರಿಗೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವೆಂಬ ನಾಲ್ಕು ವಿಧದ ಪುರುಷಾರ್ಥಗಳನ್ನು ಸಾಧಿಸಲು ಅನುವಾಯಿತು. ಸಂಸಾರವು ಯಾವಾಗಲೂ ಸುಖರೂಪವಾಗಿ ಸಾಗಬೇಕಾದರೆ ಪತಿಪತಿಗಳಿಬ್ಬರೂ ಸದಾಚಾರದಿಂದ ನಡೆದು ಒಬ್ಬರಿಗೊಬ್ಬರು ಸಹಾಯಕರಾಗಿ ನಡೆಯಬೇಕೆಂದು ಬೋಧಿಸಿದರು.

"ಗಂಡ ಶಿವಲಿಂಗದೇವರ ಭಕ್ತ. ಹೆಂಡತಿ ಮಾರಿಮಸಣಿಯ ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ. ಹೆಂಡತಿ ಕೊಂಬುದು ಸುರೆ ಮಾಂಸ. ಭಾಂಡ ಭಾಜನ ಶುದ್ಧಿಯಿಲ್ಲದವರ ಭಕ್ತಿ, ಹೆಂಡದ ಮಡಿಕೆಯ ಹೊರಗೆ ತೊಳೆದಂತೆ, ಕೂಡಲಸಂಗಮದೇವಾ."

ಈ ವಚನದಿಂದ ಪತಿಯು ಶಿವಭಕ್ತನಾಗಿ ಪಾದೋದಕ ಪ್ರಸಾದ ತಕ್ಕೊಂಡು ಸತಿಯು ಮಾರಿಮಸಣಿಯ ಭಕ್ತಳಾಗಿ ಸುರೆಯ ಮಾಂಸಗಳನ್ನು ಸೇವಿಸುವವಳಾದರೆ ಅವರಿಗೆ ಎಂದೂ ಸುಖವಾಗದು ಮತ್ತು ಮೋಕ್ಷವು ಸಿಗಲಾರದು; ಆದುದರಿಂದ ಪತಿಪತಿಗಳಿಬ್ಬರೂ ಒಂದೇ ಮತ್ತು ಒಳ್ಳೇ ಸ್ವಭಾವದವರು ಇರಬೇಕೆಂದು ಕಂಡುಬರುವದು.

ಆಧ್ಯಾತ್ಮ ಸಾಧನೆಯನ್ನು ಮಾಡುವ ಪುರುಷನು ಸತ್ಯ ಅಹಿಂಸೆ, ಮೊದಲಾದವುಗಳನ್ನು ಪಾಲಿಸಿದಂತೆ ಬ್ರಹ್ಮಚರ್ಯ ಮತ್ತು ಇಂದ್ರಿಯ ನಿಗ್ರಹಗಳನ್ನು ಪಾಲಿಸಬೇಕಾಗುವದು. ಸಂಪೂರ್ಣ ಬ್ರಹ್ಮಚಾರಿಗಳಾಗಿರುವದು ಗಟ್ಟಿ ಮನಸ್ಸಿನವರಾದ ಕೆಲವರಿಗೆ ಮಾತ್ರ ಸಾಧ್ಯ. ಆದರೆ ಸಾಮಾನ್ಯ ಜನರಿಗೆ ಇದು ಸ್ವಲ್ಪ ಕಠಿಣವಾಗುವದು. ಯಾಕೆಂದರೆ ಮನಸ್ಸು ಚಂಚಲವಿದ್ದು ಅದು ವಿಷಯಸುಖಕ್ಕೆ ಎಳಸುವದು. ಆದುದರಿಂದ ಬಸವೇಶ್ವರನು ಜನರಿಗೆ ವಿವಾಹಿತರಾಗಿ ತಮ್ಮ ಪತ್ನಿಯರ ಕೂಡ ಅಷ್ಟೇ ಶಾಸ್ತ್ರೋಕ್ತವಾದ ಪ್ರಸಂಗಗಳಲ್ಲಿ ಸಂಬಂಧವನ್ನಿಟ್ಟು ಸದಾಚಾರದಿಂದ ವರ್ತಿಸಿ ಸುಖದಿಂದ ಇರಬೇಕೆಂದು ಹೇಳಿದನು. ಇದರಿಂದ ಹೆಸರಿಗೆಮಾತ್ರ ಬ್ರಹ್ಮಚಾರಿಗಳಾದ ಜನರು ಮಾಡುವ ದುಷ್ಟ ವ್ಯಾಪಾರಗಳು ಎಷ್ಟೋ ಕಡಿಮೆಯಾದವು. ಮತ್ತು ದಾಂಪತ್ಯದ ಮಹತ್ವವು ಕಂಡುಬಂದು ಏಕಪತ್ನೀವ್ರತವು ಹೆಚ್ಚು ಪ್ರಚಾರದಲ್ಲಿ ಬಂದಿತು.

ಇಂದ್ರಿಯನಿಗ್ರಹವನ್ನು ಹೆಚ್ಚೆಚ್ಚು ಮಾಡಿದಂತೆ ಮನಸ್ಸಿಗೆ ತೊಂದರೆಯಾಗಿ ಕೊನೆಗೆ ಇಂದ್ರಿಯಗಳು ಹೇಳಿದಂತೆ ಕೇಳುವ ಪ್ರಸಂಗವು ಬರುವದಾದುದರಿಂದ ಅದರಿಂದ ಅಷ್ಟೊಂದು ಮಹತ್ವವಿಲ್ಲೆಂದು ತಿಳಿಸಿದನು.

"ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವವು ದೋಷಂಗಳ. ಮುಂದೆ ಬಂದು ಕಾಡುವವು ಪಂಚೇಂದ್ರಿಯಗಳು. ಪತಿಪತಿ ರತಿಸುಖವ ಬಿಟ್ಟರೆ ಸಿರಿಯಾಳ ಚೆಂಗಳೆಯರು? ಪತಿಪತಿ ರತಿಸುಖವ ಭೋಗೋಪ ಭೋಗ ಬಿಟ್ಟರೆ ಸಿಂಧು ಬಲ್ಲಾಳನವರು? ನಿಮ್ಮ ಮುಟ್ಟಿ ಪರಧನ, ಪರ ಸತಿಯರಿಗೆಳಿಸಿದರೆ ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಯ್ಯ"

ಈ ವಚನದಿಂದ ಪುರುಷನು ಪರಧನ ಪರಸ್ತ್ರೀಯರ ಮೇಲೆ ಮನಸ್ಸು ಮಾಡದೆ ತನ್ನ ಪತ್ನಿಯೊಡನೆ ಬೇಕಾಬಷ್ಟು ಸುಖವನ್ನು ಪಡೆಯಬಹುದು ಎಂದು ಸ್ಪಷ್ಟವಾಗುವದು. ಬಸವೇಶ್ವರನು ಪುನಃ ಪುನಃ ಹೇಳುವದೇನಂದರೆ ಪರನಾರಿಯರನ್ನು ಎಂದೂ ಪಾಪದೃಷ್ಟಿಯಿಂದ ನೋಡಬೇಡಿರಿ. ಇದರಿಂದ ಬಹಳ ಹಾನಿಯುಂಟು. ಇದನ್ನೇ ಮುಂದಿನ ವಚನದಲ್ಲಿ ಎಷ್ಟು ಮನೋಹರವಾಗಿ ಹೇಳಿದ್ದಾನೆಂದು ನೋಡಬಹುದು.

"ಹರಿವ ಹಾವಿಗಂಜೆ. ಉರಿಯ ನಾಲಿಗೆಗಂಜೆ. ಸುರಿಗೆಯ ಮೊನೆಗಂಜೆ. ಒಂದಕ್ಕಂಜುವೆ, ಒಂದಕ್ಕಳುಕುವೆ. ಪರಸ್ತ್ರೀ ಎಂಬ ಜೂಜಿಗಂಜುವೆ. ಮುನ್ನಂಜದ ರಾವಣನೇವಿಧಿಗೊಳಗಾದ? ಅಂಜುನೆನಯ್ಯ ಕೂಡಲಸಂಗಮದೇವಾ"

ಇಲ್ಲಿಯವರೆಗೆ ಪುರುಷರು ಸ್ತ್ರೀಯರ ವಿಷಯವಾಗಿ ಹೇಗೆ ವರ್ತಿಸಬೇಕೆಂಬದನ್ನು ಹೇಳಿದುದಾಯಿತು. ಇನ್ನು ಸ್ತ್ರೀಯರು ಪುರುಷರ ಕೂಡ ಹೇಗೆ ನಡೆಯಬೇಕೆಂಬದನ್ನು ನೋಡೋಣ. ಹೆಣ್ಣಜನ್ಮಕ್ಕೆ ಬಂದಮೇಲೆ ಮದುವೆಯನ್ನು ಆಗಲೇಬೇಕೆಂದು ಹಿಂದಿನವರ ಕಟ್ಟಳೆಯಿತ್ತು. ಮತ್ತು ಈಗ್ಯೂ ಅದೆ. ಆದರೆ ಬಸವೇಶ್ವರನು ಚೆನ್ನಾಗಿ ವಿಚಾರ ಮಾಡಿ ಅವರು ಬೇಕಾದರೆ ಮದುವೆಯಾಗಬಹುದು. ಇಲ್ಲವೆ ಆಜನ್ಮ ಅವಿವಾಹಿತರಾಗಿ "ಶರಣಸತಿ ಲಿಂಗಪತಿ" ಎಂಬ ಭಾವದಿಂದ ಸದ್ವರ್ತನೆಯಿಂದ ಇರಬಹುದೆಂದು ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟನು. ವಿವಾಹದ ವಯಸ್ಸು ಮೀರಿತೆಂದು ಯಾರಿಗಾದರೂ ಗಂಟುಹಾಕಿ ಬಿಡಬೇಕೆಂಬ ಆತುರದ ವಿಚಾರವು ಅವನಲ್ಲಿ ಇದ್ದಿಲ್ಲ. ದುರಾಚಾರ

ದಿಂದ ನಡಿಯುವ ರಾಜನ ರಾಣಿಯಾಗುವದಕ್ಕಿಂತ ಶಿವಭಕ್ತಳಾಗಿ ತೊತ್ತಾಗಿರುವದು ಲೇಸೆಂದು

"ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ, ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸೈ! ತಾರೌ ಅಗ್ಗಣಿಯ, ನೀಡೌ ಪಕ್ಕಿಯ ಲಿಂಗಕ್ಕೆ ಜೋನವ ಹಿಡಿಯೌ, ಎಂಬರು ಕೂಡಲಸಂಗನ ಮನೆಯಲ್ಲಿ ಒಕ್ಕಪನುಣ್ಣೌ ತೊತ್ತೀ ಎಂಬರು."

ಹೀಗೆ ಹೆಣ್ಣುಮಕ್ಕಳಿಗೆ ಉಪದೇಶ ಮಾಡಿದನು. ಇದರಿಂದ ಆಪರಿಗೆ ದೇಹದ ಆರೋಗ್ಯವನ್ನು ಕಾಯ್ದುಕೊಂಡು ಶಿಕ್ಷಣವನ್ನು ಹೊಂದಿ ಸುಸಂಸ್ಕೃತರಾಗಲಿಕ್ಕೆ ಹೆಚ್ಚಿಗೆ ಅನುಕೂಲವಾಯಿತು. ಪರಪುರುಷರ ಪಾಪದೃಷ್ಟಿಯು ಕಡಿಮೆಯಾಯಿತು. ವಿವಾಹದ ಸಮಸ್ಯವು ಬಿಡಿಸಲ್ಪಟ್ಟಿತು. ಹೀಗೆ ಅವರಿಗೆ ಸ್ವತಂತ್ರರೀತಿಯಿಂದ ವಿಚಾರ ಮಾಡಲಿಕ್ಕೆ ಅನುವಾಯಿತು. ವಯಸ್ಸಾದ ಕೂಡಲೆ ತಿಳಿಗೇಡಿ ತಂದೆತಾಯಿಗಳ ಆಜ್ಞೆಗನುಸಾರವಾಗಿ ವಿವಾಹವನ್ನು ಮಾಡಿಕೊಂಡು ಅವರ ಮುಂದಿನ ಉಚ್ಚ ಜೀವನವನ್ನು ನಡಿಸಲಿಕ್ಕೆ ಆಸ್ಪದವು ಸಿಗುತ್ತಿದ್ದಿಲ್ಲ. ಒಂದು ವೇಳೆ ಸುದೈವದಿಂದ ಅನುಕೂಲವುಳ್ಳ ಯೋಗ್ಯ ಪತಿಯು ಸಿಕ್ಕರೆ ನೆಟ್ಟಗಾಯಿತು. ಇಲ್ಲದಿದ್ದರೆ ತೊಂದರೆಯು ತಪ್ಪಿದ್ದಲ್ಲ. ಬಸವೇಶ್ವರನ ಈ ತರದ ಪ್ರೋತ್ಸಾಹನದಿಂದ ಅನೇಕ ಸ್ತ್ರೀಯರು ತಮ್ಮ ದೇಹ ಮನಸ್ಸುಗಳನ್ನು ಪವಿತ್ರವಾಗಿಟ್ಟುಗೊಂಡು ಆತ್ಮೋನ್ನತಿಯನ್ನು ಸಮಾಜದ ಉನ್ನತಿಯನ್ನು ಮಾಡಿದರು.

ಶಿವಾನುಭವ ಮಂಟಪದಲ್ಲಿ ಸರ್ವಸಂಗ ಪರಿತ್ಯಾಗ ಮಾಡಿದ ವೀರ ವೈರಾಗ್ಯಶಾಲಿಗಳಿದ್ದಂತೆ ಮನಿತನವನ್ನು ಮಾಡಿಕೊಂಡ ಸದ್ಗೃಹಸ್ಥರೂ ಇದ್ದರು. ಅವರೊಡನೆ ಅವರವರ ಧರ್ಮಪತ್ನಿಯರೂ ಇದ್ದು ಅವರು ಒಳ್ಳೇ ಅನುಭಾವಿಗಳಿದ್ದು ತಮ್ಮ ತಮ್ಮ ಉಚ್ಚ ವಿಚಾರಗಳನ್ನು ಪ್ರಕಟಮಾಡುತ್ತಿದ್ದರು. ಅಲ್ಲಿ ಬಸವೇಶ್ವರ, ಅಲ್ಲಮಪ್ರಭು, ಚನ್ನಬಸವೇಶ್ವರ, ಸಿದ್ಧರಾಮೇಶ್ವರ ಮೊದಲಾದವರು ಅವರೆಲ್ಲರನ್ನೂ ತಮ್ಮ ಸಹೋದರಿಯರು ಇಲ್ಲವೆ ಮಾತೆಯರಂತೆ ಕಾಣುತ್ತಿದ್ದರು. ಅಲ್ಲಿ ಪೆಲ್ಲಗೊಂಡ ಮಹಾದೇವಿ, ಅಕ್ಕ ಜೊಂತಾದೇವಿ, ಬಲದೇವಿ, ವೀರಗುಪ್ಪೆಯ್ಯೆ, ಸೂರಸಾನಿ, ಜಕ್ಕಲಬ್ಬೆ, ರಿಬ್ಬವ್ವೆ, ರಿಮ್ಮವ್ವೆ, ಸಾಯಿದೇವಿ, ಚಿಕ್ಕ ಪಾರ್ವತಿ, ಕಾಮಲಾಂಬಿಕೆ, ಕಮಳಿಪ್ಪೆ, ವಿಮಳವ್ವೆ, ಮುಕ್ತಾಯಿ,

ಶವದಾಸಪ್ಪೆ, ರೇಕಪ್ಪೆ, ಗಂಗಾದೇವಿ, ಕೇತಲದೇವಿ, ನೀಲಲೋಚನೆ ಮೊದಲಾದ ಅನೇಕ ಮಹಿಳೆಯರಿದ್ದು ಇವರೆಲ್ಲರಲ್ಲಿ ಉಡುತಡಿಯ ಮಹಾದೇವಿಯಕ್ಕನು ತನ್ನ ಉಜ್ವಲವಾದ ತೇಜಸ್ಸಿನಿಂದ ಮುಕುಟ ಮಣಿಯಂತೆ ಒಪ್ಪುತ್ತಿದ್ದಳು. ಇವರ ವಿಚಾರಗಳನ್ನು ವ್ಯಕ್ತಪಡಿಸಲಿಕ್ಕೆ ಅಸ್ಪದಕೊಟ್ಟದ್ದರಿಂದ ಅನೇಕರು ವಚನಗಳನ್ನು ರಚಿಸಿದರು. ಇವುಗಳಲ್ಲಿ ಮಹಾದೇವಿಯಕ್ಕನ ವಚನಗಳು ಉಚ್ಚತರಗತಿಯವಿದ್ದು ಕನ್ನಡ ಸಾಹಿತ್ಯದಲ್ಲಿ ಬಸವೇಶ್ವರ ಮೊದಲಾದವರ ವಚನಗಳಂತೆ ವಿಶಿಷ್ಟ ಸ್ಥಾನವನ್ನು ಪಡೆದಿರುವವು. 'ಆಕೆಯ ಒಂದು ವಚನವು ಅಣ್ಣಯ್ಯರ ಅರುವತ್ತು ವಚನಗಳಿಗೆ, ದಣ್ಣಾಯಕರ ಇಪ್ಪತ್ತು ವಚನಗಳಿಗೆ, ಪ್ರಭುದೇವರ ಹತ್ತು ವಚನಗಳಿಗೆ, ಅಜಗಣ್ಣನ ಐದು ವಚನಗಳಿಗೆ ಸರಿಯಾಗಿರುವದು' ಎಂದು ಚನ್ನಬಸವೇಶ್ವರನು ಆಕೆಯ ವಚನಮಹತ್ವವನ್ನು ಹೇಳಿದ್ದಾನೆ.

ಮಹಾದೇವಿಯಕ್ಕನ ಜೀವನಚರಿತ್ರವನ್ನಷ್ಟೇ ನೋಡಿದರೂ ಶಿವಾನುಭವ ಮಂಟಪವು ಎಷ್ಟು ಪವಿತ್ರವಾದದ್ದಿತ್ತು ಎಂದು ಸ್ಪಷ್ಟವಾಗಿ ಕಾಣುತ್ತದೆ. ಒಳ್ಳೆ ಹದಿನಾರು ವರುಷದ ನವಯೌವ್ವನದ ಆ ಸುಂದರಿಯು ಅಲ್ಲಿಗೆ ಬರಲು ಬಸವೇಶ್ವರನು ಆಕೆಯ ವೈರಾಗ್ಯವನ್ನು ಕಂಡು ಅವಳನ್ನು ಒಳ್ಳೇ ಆದರದಿಂದ ಸತ್ಕರಿಸಿದನು. ಆದರೆ ಅಲ್ಲಮಪ್ರಭುವು ಅವಳ ವೈರಾಗ್ಯವನ್ನು ಅರಿತಿದ್ದರೂಸಹ ಆಕೆಯನ್ನು ಪರೀಕ್ಷೆ ಮಾಡಬೇಕೆಂದು 'ನೀನು ಒಳ್ಳೆ ಚಲುವೆಯಾದ ಪ್ರಾಯದ ಹೆಣ್ಣುಮಗಳು, ನಿನ್ನ ಪತಿಯು ಕುರುಹು ಹೇಳಿಪರೆ ಶರಣರ ಸಂಗದಲ್ಲಿ ಬಂದು ಕುಳ್ಳಿರು ಇಲ್ಲದಿರೆ ಅತ್ತ ತೊಲಗು ತಾಯೆ,' ಎಂದು ಹೇಳಿದನು. ಅದಕ್ಕೆ ಕೂಡಲೆ ಅವಳು 'ದೇವರೇ ನನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸುತ್ತಿದ್ದೆನು. ಅವನೊಡನೆ ಮದುವೆ ಮಾಡಿ ಎಲ್ಲರೂ ಎನ್ನ ಬಯಕೆಯನ್ನು ಪೂರೈಸಿದರು'' ಎಂದು ಉತ್ತರಕೊಟ್ಟಳು. ಆದರೆ ಅಲ್ಲಮನು ಮತ್ತೆ "ನಿನ್ನ ಮಾತನ್ನು ನಂಬಲಾರೆ. ಕೌಶಿಕನು ದೀಕ್ಷೆ ಹೊಂದಲಿಲ್ಲ ಎಂಬ ಕಾರಣವನ್ನು ಅವನ ಮೇಲೆ ಹೊರಿಸಿ ನೀನು ಸಿಟ್ಟಿನಿಂದ ಹೊರಟು ಬಂದಿರುವಿ. ನಿನ್ನಲ್ಲಿ ನಿಜವಾದ ವಿರಕ್ತಿಯಿದ್ದರೆ, ನಿನ್ನ ಭಾವವು ಸತ್ಯವಾಗಿ ಶುದ್ಧವಿದ್ದರೆ ಈ ಕೂದಲ ಮರೆ ಏಕೆ?' ಎಂದು ಪ್ರಶ್ನೆ ಹಾಕಿದನು. ಆಗ ಮಹಾದೇವಿಯಕ್ಕನು "ನನಗೆ ನನ್ನ ಕಾಯದ ಪರಿವೆಯಿಲ್ಲ. ನನ್ನ

ಕಾಯವು ಕರ್ರನೆ ಕಂದಿದರೂ ಅಷ್ಟೇ, ಬಿರ್ರನೆ ಬಿಂಚಿದರೂ ಅಷ್ಟೇ. ಆದರೆ ಕಾಮುದ ಮುದ್ರೆಯ ಕಂಡು ನಿಮಗೆ ನೋವಾದೀತೆಂಬ ಭಾವದಿಂದ ಎನ್ನ ಕೂದಲ ಮರೆ ಮಾಡಿರುವೆ' ಎಂದು ಸಮರ್ಪಕವೂ, ಪ್ರಣಯಂಗಮವೂ, ಹೃದಯಭೇದಕವೂ ಆದ ಪ್ರತ್ಯುತ್ತರವನ್ನು ಕೊಡಲು ಅಲ್ಲಮಪ್ರಭುವು ಅವರ ನಿಜವಾದ ವಿರಕ್ತಿಯನ್ನು ಕಂಡು ಬಹಳ ಕೊಂಡಾಡಿದನು. ಬಸವೇಶ್ವರ ಚನ್ನಬಸವೇಶ್ವರ ಮೊದಲಾದವರು ಅವಳ ಉಜ್ವಲವಾದ ಆಚರಣೆಯನ್ನು ನೋಡಿ ಅವಳನ್ನು ಬಹಳ ಹೊಗಳಿದರು. ಅವರ ಹೊಗಳಿಕೆಯನ್ನು ಕೇಳಿ ಮಹಾದೇವಿಯಕ್ಕನು ವಿನಯದಿಂದ ತನ್ನನ್ನು ಹಾಗೆ ಹೊಗಳಕೂಡದು ತನ್ನ ತಪ್ಪುಗಳನ್ನು ಒಪ್ಪಿಕೊಳ್ಳಬೇಕು, ತನ್ನ ತಪ್ಪುಗಳನ್ನು ಹಿಡಿದರೆ ತನಗೆ ಹಿತವೇ ಹೊರತು ಕುಂದಿಲ್ಲ ಎಂದು ಅಂದಿರುವಳು. ಬಸವೇಶ್ವರನನ್ನು ಅವಳು ಸ್ವತಃ ಹೀಗೆ ಬಹಳ ಕೊಂಡಾಡಿರುವಳು.

"ಎನ್ನಂಗದಲ್ಲಿ ಆಚಾರವ ತೋರಿದನಯ್ಯ ಬಸವಣ್ಣನು. ಆಚಾರವೇ ಲಿಂಗವೆಂದರುಹಿದನಯ್ಯ ಬಸವಣ್ಣನು. ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯ ಬಸವಣ್ಣನು. ಅರಿವೇ ಜಂಗಮವೆಂದು ಅರುಹಿದನಯ್ಯ ಬಸವಣ್ಣನು. ಚನ್ನಮಲ್ಲಿಕಾರ್ಜುನಯ್ಯ.....

"ಬಸವಣ್ಣ, ನಿಮ್ಮಂಗದಾಚಾರವ ಕಂಡು ಎನಗೆ ಲಿಂಗಸಂಗವಾಯಿತ್ತು. ಅಯ್ಯ, ಬಸವಣ್ಣ, ನಿಮ್ಮ ಮನದ ಸುಜ್ಞಾನವ ಕಂಡು ಎನಗೆ ಜಂಗಮ ಸಂಬಂಧವಾಯಿತ್ತಯ್ಯ. ಬಸವಣ್ಣ, ನಿಮ್ಮ ಪದ್ಧತಿಯ ತಿಳಿವು ಎನಗೆ ನಿಜವು ಸಾಧ್ಯವಾಯಿತ್ತು. ಚನ್ನಮಲ್ಲಿಕಾರ್ಜುನಯ್ಯನ ಹೆಸರಿಟ್ಟ ಗುರು ನೀವಾದ ಕಾರಣ ನಿಮ್ಮ ಪಾದಕ್ಕೆ ನಮೋ ನಮೋ ಎನುತಿರ್ದೆನು."

"ಕಾಮನ ಗೆಲಿದೆನು ಬಸವಾ ನಿಮ್ಮ ದಯೆಯಿಂದ. ಸೋಮಧರನ ಪಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ. ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡು ರೂಪು. ಬಸವಾ ನಿಮ್ಮ ದಯೆದಿಂದ, ಅತಿಕಾಮಿ ಚನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ ಎರಡುವರಿಯದೆ ಕೂಡಿದೆನು ಬಸವಾ ನಿಮ್ಮ ಕೃಪೆಯಿಂದ."

ಮತ್ತು ಅಲ್ಲಿಯ ಎಲ್ಲ ಶರಣರನ್ನು ಹೀಗೆ ಹೊಗಳಿರುವಳು.

ಬಸವಣ್ಣನ ಭಕ್ತಿ, ಜನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಲ, ನಿಜಗುಣನ ಆರೂಢ ಸ್ಥಲ, ಸಿದ್ಧರಾಮಯ್ಯನ ಸಮಾಧಿಸ್ಥಲ, ಇಂತಿವರ ಕರುಣ ಪ್ರಸಾದವೆನಗಾಯಿತ್ತು ಚನ್ನಮಲ್ಲಿಕಾರ್ಜುನಾ"

ಬಸವಣ್ಣನ ಮನೆಯ ಮಗಳಾದ ಕಾರಣ ಭಕ್ತಿ ಪ್ರಸಾದವ ಕೊಟ್ಟನು. ಪ್ರಭುದೇವರ ತೊತ್ತಿನ ತೊತ್ತಿನ ಮರಿದೊತ್ತಿನ ಮಗಳಾದ ಕಾರಣ ಜ್ಞಾನಪ್ರಸಾದವ ಕೊಟ್ಟನು. ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ ಪ್ರಾಣಪ್ರಸಾದವ ಕರುಣಿಸಿ ಕೊಟ್ಟನು. ಮಡಿವಾಳಯ್ಯನ ಮನೆಯ ಮಗಳಾದ ಕಾರಣ ನಿರ್ಮಲ ಪ್ರಸಾದವ ನಿಶ್ಚಯಿಸಿ ಕೊಟ್ಟನು. ಇಂತೀ ಅಸಂಖ್ಯಾತ ಗಣಂಗಳೆಲ್ಲರೂ ತಮ್ಮ ಕರುಣದ ಕಂದನೆಂದು ತಲೆವಡಹಿದ ಕಾರಣ ಚನ್ನಮಲ್ಲಿಕಾರ್ಜುನಯ್ಯನ ಶ್ರೀಪಾದಕ್ಕೆ ಯೋಗ್ಯಳಾದೆನು."

ಹೀಗೆ ಮಹಾದೇವಿಯಕ್ಕನು ಶಿವಾನುಭವ ಮಂಟಪದ ಶರಣರನ್ನು ಹೊಗಳುವದನ್ನು ನೋಡಿದರೆ, ಅವರು ಅವಳಿಗೆ ತೋರಿಸಿದ ಪರನಾರೀ ಸಹೋದರತ್ವ, ಉದಾತ್ತವಾದ ಅವರ, ಪ್ರೇಮ, ಗೌರವಗಳು ಸ್ಪಷ್ಟವಾಗಿ ಒಡೆದು ಕಾಣುವವು.

ಇನ್ನು ಬಸವೇಶ್ವರನ ಪ್ರೋತ್ಸಾಹನದಿಂದ ದಂಪತಿಗಳೂ ಕೂಡ ಎಷ್ಟು ಅನನ್ಯ ಭಕ್ತಿಯಿಂದ ಧಾರ್ಮಿಕ ಕಾರ್ಯಗಳಲ್ಲಿ ತತ್ಪರರಾಗುತ್ತಿದ್ದರೆಂಬದು ಅನೇಕ ಉದಾಹರಣೆಗಳಿಂದ ಕಾಣಬಹುದು. ಮೋಳಿಗೆಯ ಮಾರಯ್ಯನ ಪತ್ನಿಯಾದ ಮಹಾದೇವಿಯಮ್ಮನು ತನ್ನ ಪತಿಗೆ ನಿಜೈಕ್ಯದ ತತ್ವವನ್ನು ಚನ್ನಾಗಿ ತಿಳಿಸಿ ಹೇಳಿ ಅವನ ಅಹಂಕಾರ, ಅಜ್ಞಾನಗಳನ್ನು ಹೊಡೆದೋಡಿಸಿ ದಿವ್ಯಜ್ಞಾನದ ಉಪದೇಶವನ್ನು ಮಾಡಿದಳು. ಇದರಿಂದ ಇವಳ ಜ್ಞಾನ, ವಿನಯ ಮತ್ತು ಪತಿಭಕ್ತಿಗಳು ಕಂಡುಬರುವವು. ಹಾಗೆಯೇ ವಿರಕ್ತನಾದ ಆಯುದಕ್ಕಿ ಮಾರಯ್ಯನ ಹೆಂಡತಿಯಾದ ಲಕ್ಕವ್ವನು ತನ್ನ ಗಂಡನಿಗೆ ನಿಷ್ಠಾವಂತ ಗುರುಲಿಂಗ ಜಂಗಮಸೇವೆಯನ್ನು ತಿಳಿಸಿದಳು. ಒಮ್ಮೆ ಅವಳು ಎಲ್ಲ ಜಂಗಮರೊಡನೆ ಬಸವಾದಿ ಪ್ರಮಥರೆಲ್ಲರನ್ನು ನೈವೇದ್ಯಕ್ಕೆ ಕರೆಯಬೇಕೆಂದು ತನ್ನ ಪತಿಗೆ ಬೇಡಿಕೊಂಡಳು. ಅವನು ತಾವು ಬಡವರಾದುದರಿಂದ

ಇದು ತಮ್ಮ ಕಾರ್ಯವಲ್ಲವೆಂದು ಅಂದನು. ಆದರೆ ಅವಳು "ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದತ್ತ ಅತ್ತಲೆ ತಾನಾಗಿಪ್ಪನು' ಎಂದು ಆತ್ಮವಿಶ್ವಾಸದಿಂದ ಧೈರ್ಯ ಕೊಟ್ಟಳು. ಮತ್ತು ಆ ಎಲ್ಲ ಪ್ರಮಥರನ್ನು ಕರೆದು ಅವರವರಿಗೆ ಇಷ್ಟವಾದ ಪದಾರ್ಥಗಳನ್ನು ಸಲ್ಲಿಸಿ ಸಂತೋಷಪಡಿಸಿದರು ಇದನೆಲ್ಲ ನೋಡಿ ಬಸವೇಶ್ವರ ಮತ್ತು ಅಲ್ಲಮಪ್ರಭುಗಳು ಆಶ್ಚರ್ಯದಿಂದ,

"ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು. ಧನ ನೋಡಾ ಬಡವರು, ಘನಮನ ಸಂಪನ್ನರು. ದಂಪತಿ ಏಕಭಾವದಲ್ಲಿ ನಿಂದಲ್ಲಿ ಪರಮಾತ್ಮನಿಗೆ ಅರ್ಪಿತವಾಯಿತ್ತು."

ಎಂದು ಹಲವು ಪರಿಯಿಂದ ಆ ದಂಪತಿಗಳನ್ನು ವರ್ಣಿಸಿರುವರು. ಇಂಥ ಅನೇಕ ಉದಾಹರಣೆಗಳನ್ನು ಕಾಣಬಹುದು.

ಒಟ್ಟಿನ ಮೇಲೆ ಬಸವೇಶ್ವರನು ಸ್ತ್ರೀಯರ ದಾಸ್ಯತ್ವವನ್ನು ಹೋಗಲಾಡಿಸಿ ಅವರೂ ಪುರುಷರ ಸಮಾನರು; ಅವರಿಂದ ಪುರುಷರಿಂದ ಸಹ ಆಗದ ಕಾರ್ಯಗಳು ಆಗುತ್ತವೆಂದೂ, ಅವರಲ್ಲಿಯೂ ವ್ಯವಹಾರ ಚಾತುರ್ಯ, ಸಾಹಸ, ಧರ್ಮವೀರತೆ, ವೈರಾಗ್ಯ, ಅನುಭಾವ, ಭಕ್ತಿ..... ಮೊದಲಾದ ಗುಣಗಳು ಇವೆಯೆಂದೂ ತೋರಿಸಿಕೊಟ್ಟನು. ಸ್ತ್ರೀಯರು ನಿಜವಾಗಿ ಜನಾಂಗದ ಜನನಿಯರು. ಅವರು ಪುರುಷರ ಸಹಾಯಕರಾಗಿ, ಅವರ ಪ್ರತಿಯೊಂದು ಕಾರ್ಯದಲ್ಲಿ ಪ್ರೇಮದಿಂದ ತತ್ಪರರಾದರೆ ಈ ಸಂಸಾರವು ಯಾವಾಗಲೂ ಸುಖಮಯವಾಗುವದೆಂಬು ಅನ್ನಲಿಕ್ಕೆ ಏನೂ ಸಂಶಯವಿಲ್ಲ. ಇದನ್ನೆಲ್ಲ ಕಂಡು ಹಿಂದು ಅವರಿಗೆ ಯೋಗ್ಯ ಮಾನ, ಮರ್ಯಾದೆ, ಗೌರವಗಳನ್ನು ತೋರಿಸಿ ಸಮಾಜದಲ್ಲಿ ಒಳ್ಳೇ ಸ್ಥಾನವನ್ನು ಕೊಟ್ಟಿದ್ದನ್ನು ನೋಡಿದರೆ ನಿಜವಾಗಿಯೂ ಬಸವೇಶ್ವರನು ಪರನಾರೀ ಸಹೋದರನೂ, ಅವರ ವಿಷಯವಾಗಿ ಆದರ ಗೌರವಗಳುಳ್ಳವನೂ, ಉಚ್ಚ ವಿಚಾರಗಳುಳ್ಳವನೂ ಎಂದು ಒಳ್ಳೇ ಸ್ಪಷ್ಟವಾಗಿ ಕಂಡುಬರುವದು.

ಮಹಾದೇವಿಯಕ್ಕಗಳ ಮದುವೆ.

(ಶ್ರೀ ಸ ಹಾ. ಶಿವಮೂರ್ತಿಗಳ ಕೊನೆಯ ಲೇಖಾಂಕ. ಜನವರಿ ೩೮)

ಇದು ಬಹುದಿನದ ವಾದವಾದುದರಿಂದ ಸಹೃದಯವೃಂ 'ಶಿವಾನುಭವ'ದ ವಾಚಕವೃಂದದಲ್ಲಿ ಬೇಸರಗೊಳ್ಳದಿರಲು ಪೊದಲಿನ್ನ ಪಂದಿ.

ಮಹಾದೇವಿಯಕ್ಕಗಳ ಮದುವೆ ಸಂಬಂಧವಾಗಿ, ಒಂದೇ ಸಂಸ್ಥೆಯಲ್ಲಿರುವ ಶ್ರೀ ಚಂದ್ರಶೇಖರ ದೇವರಿಗೂ ನನಗೂ ವಿವಾದವೆದ್ದಿರುವದು 'ಶಿವಾನುಭವ'ದ ವಾಚಕರಿಗೆಲ್ಲ ಹಳೆ ಪಾತು. ಈಗಿರುವ ಅಕ್ಕನ ವಚನಗಳು ಯಾವ ನಿಷ್ಕರ್ಷೆಗೂ ಅನುಕೂಲವಿಲ್ಲದುದರಿಂದಲೇ ಈ ವಾದವು ಹುಟ್ಟಿದೆ; ಬೆಳೆದಿದೆ. ವಚನಶಾಸ್ತ್ರವನ್ನೆಲ್ಲ ಬಯಲಿಗೆ ತಂದ ಶ್ರೀಮಾನ್ ರಾವಸಾಹೇಬ ಪಿ. ಜಿ. ಹಳಕಟ್ಟಿಯವರು ಬಹು ಪ್ರಮುಪಟ್ಟು ಅಲ್ಲಿ ಇಲ್ಲಿಯ ಸಂಗ್ರಹದೊಳಗಿಂದ ಆಯ್ದುಕೊಂಡು ಪ್ರಕಟಿಸಿರುವ "ಮಹಾದೇವಿಯಕ್ಕನ ವಚನಗಳು" ಎಂಬ ಗ್ರಂಥದಲ್ಲಿ ಹರಿಹರನು ತನ್ನ ರಘಟಾ ಕಾವ್ಯದಲ್ಲಿ ಉದಾಹರಿಸಿರುವ ಕೆಲವು ಅಕ್ಕನ ವಚನಗಳು ಕಂಡುಬರುವದಿಲ್ಲ. ಹರಿಹರನ ಕಾಲದಲ್ಲಿ ಸಂಗ್ರಹಾತ್ಮಕವಾದ ವಚನಗ್ರಂಥಗಳು (ಶೂನ್ಯಸಂಪಾದನೆ ಮೊದಲಾದವು) ಹುಟ್ಟಿರಲಿಲ್ಲವೆಂಬುವದನ್ನು ಒಪ್ಪುವದಾದರೆ ಅಕ್ಕನ ಸಂಪೂರ್ಣ ವಚನಗ್ರಂಥವು ಹರಿಹರನಿಗೆ ಅಪರಿಚಯವಾದದ್ದಿಲ್ಲ.

ಕವಿ – ಕಾಲ.

ಹರಿಹರದೇವನ ಕಾಲನಿರ್ಣಯವು ಇದುವರೆಗೆ ವಾದಗ್ರಸ್ತವಾಗಿತ್ತು. ಈಗ ಶ್ರೀಮಾನ್‌ಗಳಾದ ಕುಂದಣಗಾರರವರೂ, ಎಸ್. ಎಸ್. ಮಾಳವಾಡರವರೂ ಕ್ರಿ. ಶ. ೧೨೧೬ ಎಂದು ನಿಶ್ಚಯಕ್ಕೇ ನಿಲ್ಲಿಸಿದ್ದಾರೆ. ("ಹರಿಹರದೇವ" ಎಂಬ ಗ್ರಂಥದೊಳಗಿನ ಅವರ ಲೇಖನವನ್ನು ಓದಿ.) ಕ್ರಿ. ಶ ೧೨೨೨ರಲ್ಲಿದ್ದ ಸೋಮರಾಜನು ತನ್ನ "ಉದ್ಭಟ ಕಾವ್ಯ"ದಲ್ಲಿ ಹರೀಶ್ವರನನ್ನು ಸ್ತುತಿಸಿರುವದರಿಂದ, ೧೨೧೬ನೆಯ ಶಕವು ಸುಮಾರು ಹರಿಹರನ ಕೊನೆಯ ಕಾಲವೆಂದೇ ಹೇಳಬಹುದು. ಹರಿಹರನು ಅಕಾಲ ಮರಣಕ್ಕೆ ತುತ್ತಾಗದೆ ಪ್ರಾಯಃ ಸಂಪೂರ್ಣಾಯುಷ್ಯವನ್ನು

ನಾಗಿದ್ದನೆಂದು ಅತನ ಕಾವ್ಯಸೃಷ್ಟಿಯಿಂದಲೇ ಊಹಿಸಲವಕಾಶವಿದೆ. ಈ ಕಾರಣ "ಬಸವಣ್ಣನವರ ಪಟ್ಟಶಿಷ್ಯರಲ್ಲಿ ಕೆಲವರನ್ನಾದರೂ ಹರೀಶ್ವರನು ಕಂಡಿರಬಹುದು." ಎಂಬ ಶ್ರೀಮಾನ್ ಆ. ನ. ಕೃಷ್ಣರಾಯರ ಅಭಿಪ್ರಾಯವೂ ಮಿಥ್ಯವಾಗಲಾರದು. ಪ್ರಾಯಃ ಹರಿಹರನ ಕಾವ್ಯಗಳೆಷ್ಟೂ ಅಂದಿನ ವೀರಶೈವರ ಇತಿಹಾಸ ಶೋಧನೆಗೆ ಬಹು ಸಹಾಯಕವಾಗಿವೆಯೆಂದು ಎಲ್ಲ ಇತಿಹಾಸ ಪಂಡಿತರೂ ಒಪ್ಪುತ್ತಾರೆ. ಆದರೆ ನಮ್ಮ ಪ್ರತಿವಾದಿಗಳು ಮಾತ್ರ "ಹರಿಹರನು ರಚಿಸಿದ ರಗಳೆಗಳೆಲ್ಲಾ ಐತಿಹಾಸಿಕಕ್ಕೆ ತಳಹದಿಯಾಗಲಾರವೆಂದು ನನ್ನ ಭಾವನೆ" ಎಂದು ಬರೆದುಕೊಂಡಿದ್ದಾರೆ. (ಇದೇ ವರ್ಷದ ಜನವರಿಯ "ಶಿವಾನುಭವ"ದಲ್ಲಿದೆ.)

ಚಾಮರಸನ ಕಾವ್ಯಕ್ಕೆ ಅಭಿಪ್ರಾಯವು.

ಈ ನಮ್ಮ ಪ್ರತಿವಾದಿಗಳು ಅಕ್ಕನ ವಚನಗಳನ್ನೇ ಮುಖ್ಯ ಪ್ರಮಾಣವಾಗಿಟ್ಟುಕೊಂಡಿರುವೆವೆಂದು ಹೇಳಿಕೊಳ್ಳುವರಾದರೂ, ಚಾಮರಸನ ಪ್ರಭುಲಿಂಗಲೀಲೆಯನ್ನೇ ಹಿಡಿದು ಸಾಧಿಸುವದರಿಂದ ಚಾಮರಸನ ಕಾವ್ಯವು ಕಾಲ್ಪನಿಕವೆಂಬುದನ್ನೇ ನನ್ನ ಮೂರನೇ ಲೇಖಾಂಕದಲ್ಲಿ ಬಿತ್ತರಿಸಿದ್ದೇನೆ. ಇದನ್ನು ನೋಡಿದ ಹಲವು ಜನ ಮಾನ್ಯ ವಿದ್ವಾಂಸರು ನನಗೆ ಒಪ್ಪೋಲೆಗಳನ್ನು ಬರೆದು ಮತ್ತಷ್ಟು ಉತ್ಸಾಹ ಗೊಳಿಸಿದರು. ಚಾಮರಸನು ತನ್ನ 'ಪ್ರಭುಲಿಂಗಲೀಲೆ'ಯಲ್ಲಿ— "ಒಂದು ರೀತಿ ತಿದ್ದುವುದಕ್ಕೆ ಪ್ರಯತ್ನಪಟ್ಟ ಹಾಗೆ ತೋರುತ್ತದೆ." ಎಂದು ಶ್ರೀಮಾನ್ ಎಮ್. ಆರ್. ಶ್ರೀಯವರೂ ಅದೇ ಪ್ರಭುಲಿಂಗಲೀಲೆಯ — 'ಸಂಗ್ರಹ'ದ ಸೀರಿಕೆಯ xlivನೆಯ ಪುಟದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಇವರಂತೆ ಶ್ರೀಯುತರಾದ ಬಿ. ಶಿವಮೂರ್ತಿ ಶಾಸ್ತ್ರಿಗಳವರೂ 'ಅಕ್ಕ ಮಹಾದೇವಿ' ನಾಟಕದ ನಿಮರ್ಶೆಯಲ್ಲಿ ಕೆಚ್ಚೆದೆಯಿಂದ ವ್ಯಕ್ತವಾಗಿದ್ದಾರೆ.

ನಮ್ಮ ಪ್ರತಿವಾದಿಗಳ ಆಕ್ಷೇಪಗಳು.

(೧) 'ಯಾವುದು ಇರುವುದಿಲ್ಲವೋ ಅದು ಪ್ರಸಾರವಾಗುವದೇ ಇಲ್ಲ' ಎಂಬಿವರ ಮಾತಿನಂತೆ ಅಕ್ಕನ ಅಥವಾ ಹರಿಹರನ ಕಾಲಕ್ಕಿಲ್ಲದ ವಚನವನ್ನು ಚಾಮರಸನಾದರೂ ಹೇಗೆ ಪ್ರಸಾರ ಮಾಡಿದನು? ಇಲ್ಲದುದನ್ನು ಹೇಳಿದನೆಂದರೆ ನಿಮ್ಮ ಮಾತಿಗೇ ವ್ಯತ್ಯಯ ಬರುವದಿಲ್ಲವೇ?

(೨) ಅಥವಾ ಲಗ್ನವಾಗಿಲ್ಲವೆಂಬ ಮಾತು ಹರಿಹರನ ಕಾಲಕ್ಕಿಲ್ಲದಿದ್ದರೂ ಅಕ್ಕನವರ ಕಾಲಕ್ಕಿತ್ತು. ಅದೇ ಜಾಮರಸನ ಕಾಲಕ್ಕೆ ಹಬ್ಬಿತು. ಹಾಗಾದರೆ ಹರಿಹರನೇಕೆ ಹಾಗೆ ಹೇಳಲಿಲ್ಲವೆಂದರೆ— ಅತನ ಕಾಲಕ್ಕೆ ಅತನಿಗೆ ಹೇಳಿದ ಜನಗಳಲ್ಲಿ ಲಗ್ನವಾಗಿದ್ದಳೆಂದು ಭ್ರಮೆ (ತಪ್ಪು ಕಲ್ಪನೆ)ಯಾಗಿರಬೇಕು. ಬರಬರುತ್ತ ಅದು ಸುಳ್ಳಾಗಿ ಜಾಮರಸನ ಕಾಲಕ್ಕೆ ನಿಜಸಂಗತಿಯು ಪ್ರಮೆಯಾಗಿರಬೇಕು. ಆದ ಕಾರಣ "ಭ್ರಮೆಯಿಂದ ಪ್ರಮೆಯಾಗುವದೂ ಸೃಷ್ಟಿಯ ನೇಮ" ಎಂದು ನನ್ನ ಹೇಳಿಕೆ. ಇದಕ್ಕೆ ಸರ್ಪರಜ್ಜುನ್ಯಾಯ"ವೇ ದೃಷ್ಟಾಂತ.

(೩) ಇನ್ನು ಹರಿಹರದೇವನಿಗಾದರೂ ಲಗ್ನವಾಗಿತ್ತೆಂದು ಹೇಳಲು ಯಾವ ಐತಿಹಾಸಿಕ ಆಧಾರವಿದೆಯೋ ಅದು ನನಗೆ ತಿಳಿಯದಾಗಿದೆ. ಒಂದು ಪಕ್ಷದ ದೃಷ್ಟಿಯಿಂದ ಅಕ್ಕನವರಗಿಂತಲೂ ೧೫೦ ವರ್ಷ ಅಂತರದಲ್ಲಿರುವ ಹರಿಹರನಿಗಾದರೂ ಈ ಲೇಖಕರು ಒಂದು ಐತಿಹಾಸಿಕ ಪ್ರಮಾಣವನ್ನು ಕೊಡದಿದ್ದರೆ ಅಕ್ಕನವರು ಲಗ್ನವಾಗಿದ್ದರೆಂದು ಹೇಳುವದು ತಾವೇ ಹೇಳಿದಂತೆ ತಮ್ಮದೇ ಜೇಸರ ಕಳೆಯಲು ಕೂತು ಕೇಳುವ ಕತೆಯಾಗುವದಲ್ಲವೇ? ಎಂದು ಕೇಳಿದರೆ ಇವರಿಗೆ ಕೊಂಚ ಕಠಿಣವಾಗಬಹುದು. ಕಾರಣ ಆ ಪ್ರಶ್ನೆ ಮಾಡಿ ಕಲ್ಲಿದೆಯುವನಾಗುವ ಇಚ್ಛೆಯು ಎನಗಿಲ್ಲ.

ಕ್ರಮವಾಗಿ ನಮ್ಮ ಉತ್ತರವು.

ಕೊಂಕುಪೆತ್ತ ಮೆಲ್ಲಿದೆಯಿಲ್ಲದ ನಾನು, ನನ್ನ ಸಾಜವಾದ ಕಲ್ಲಿದೆಗಾಗಿ ಬೇಸತ್ತು, ಮುಂದೆ ಉತ್ತರಿಸಲು ಉತ್ಸಾಹಪಡುತ್ತೇನೆ.

(೧) "ಒಂದು ಭಾಗದಲ್ಲಿ ಅಥವಾ ಒಂದು ನಾಡಿನಲ್ಲಿ ನಡೆದು ಹೋದ ಕಾರ್ಯಗಳ ನಿಜಸ್ಥಿತಿಯು ಕಾಲಾಂತರದ ಮೇಲೆ ಎಲ್ಲೆಡೆಯಲ್ಲಿ ಹಬ್ಬುವದು ಸ್ವಾಭಾವಿಕ" ಎಂಬ ಈ ಲೇಖಕರ ಮಾತಿಗೆ ಉತ್ತರವಾಗಿ— "ಒಂದು ನಾಡಿನ ವ್ಯಕ್ತಿಯ ಕಾರ್ಯಗಳು ಕಾಲಾಂತರದ ಮೇಲೆ ಹಬ್ಬುವದೇನೋ ದಿಟವು. ಆದರೆ ಆ ಕಾರ್ಯವು ಕಾಲಾಂತರದ ಮೇಲೆ ಹಬ್ಬುವ ಪ್ರಮಾಣದಿಂದಲಾದರೂ ಹಬ್ಬಿಕೊಂಡಿರಬೇಕಾಗುತ್ತೆ" ಎಂದು ಬರೆದು ಮುಂದೆ ಈ ವಿಷಯವು ಎಲ್ಲಿಯಾದರೂ ಹಬ್ಬಿದಾಗ—'ಯಾವುದು ಇರುವುದಿಲ್ಲವೋ ಅದು ಪ್ರಸಾರವಾಗುವದೇ ಇಲ್ಲ ಎಂದು ಬರೆದಿದ್ದೇನೆ. ಇದರ ಸ್ಥೂಲಾರ್ಥವಾದರೂ ಇಂತು ಪ್ರಸಾರ

ವಾಗುವದೆಲ್ಲ ಪೂರ್ವದಲ್ಲಿರಬೇಕಾಗುತ್ತೆ ಎಂದರೆ ಮೊದಲು ಹುಟ್ಟು ಕಾಣುತ್ತಿದ್ದು ಆಮೇಲೆ ಪ್ರಸಾರವುಳ್ಳದ್ದು. ಇನ್ನೂ ಸರಿಯಾಗಿ ತಿಳಿಸಬೇಕೆಂದರೆ ಅಕ್ಕನು ಮದುವೆಯಾಗಿಲ್ಲವೆಂದು ಜಾಮರಸನು ಹೇಳುತ್ತಾನಲ್ಲವೆ? ಈ ಹೇಳಿಕೆಯು ಇವನಿಗಿಂತಲೂ ಬಹು ಪ್ರಾಚೀನ ಕಾಲದಲ್ಲಿ ವಿಷಮವಾಗಿ ತೋರುತ್ತದಲ್ಲದೆ ಸಮವಾಗಿ ತೋರುವುದಿಲ್ಲ ಕಾರಣ ಅದು ಅವನಿಂದ ಆರಂಭ; ಅಂತೆಯೇ ಕಲ್ಪಿತ. ಈ ದೃಷ್ಟಿಯಿಂದ ನನ್ನ ಮಾತಿಗೇನೂ ವ್ಯತ್ಯಯವಿಲ್ಲ.

(೨) ಅಕ್ಕನು ಲಗ್ನವಾಗಿಲ್ಲವೆಂಬುದು ಆಕೆಯ ಕಾಲದಲ್ಲಿ ನೆಲಿಸಿತ್ತೆಂದೂ, ಅದು ಹರಿಹರನ ಕಾಲಕ್ಕೆ ಅಜ್ಞಾತವಾಸ ಮಾಡಿತ್ತೆಂದೂ, ಅನಂತರ ಜಾಮರನ ಕಾಲಕ್ಕೆ ಮತ್ತೆ ಹಬ್ಬಿತೆಂದೂ, ನೀವು ಯಾವ ಆಧಾರದಿಂದ ಬರೆದಿರುವಿರಿ? ಇಂಥವುಗಳನ್ನು ಹೇಳಬೇಕಾದರೆ ಪ್ರಮಾಣ (ಆಧಾರ) ಬಿಟ್ಟು ಬರಬಾರದೆಂದು ಈ ಹಿಂದೆಯೇ ಎಚ್ಚರಿಕೆ ಕೊಟ್ಟಿದ್ದಿಲ್ಲವೆ? ಇರಲಿ. ಇನ್ನು ಮುಂದಾದರೂ ಇದನ್ನು ಸಾಧಾರವಾಗಿ ಸಾಧಿಸಿ ತೋರಿಸಿದರೆ, ನಮ್ಮ ಲೆಕ್ಕಣಿಕೆಯಾಗ ಮುಂದುವರಿಯಲಾರದು. ಆಧಾರ ತೋರಿಸದಿದ್ದರೆ ಮಾತ್ರ ಮತ್ತೂ ಜೇಸರ ಕಳೆಯಲು ಕೂತು (ತೂಕಡಿಸುತ್ತ) ಕೇಳುವ ಕತೆಯ ಜೊತೆಗೇ ಸೇರುವದರಲ್ಲಿ ಸಂಶಯವಿಲ್ಲ. ಇನ್ನು ಹರಿಹರನನ್ನು ಕುರಿತು ಹೇಳುವ ಜನಗಳಲ್ಲಿ ಲಗ್ನವಾಗಿತ್ತೆಂಬ ಭ್ರಮೆಯೇಕೆ ಹುಟ್ಟಿತು? ದೋಷಯುಕ್ತವಾದುದಕ್ಕೇ "ಭ್ರಮೆ"ಯೆಂದು ನೈಯ್ಯಾಯಿಕರ ಮತ. ಹೇಗೆಂದರೆ—ನೀವು ಹೇಳುವ "ಸರ್ಪರಜ್ಜುನ್ಯಾಯ" ವೇ ದೃಷ್ಟಾಂತ ಎಂಬ ವಾಕ್ಯವನ್ನೇ ವಿಚಾರವಾಡೋಣ. ಹಗ್ಗದಲ್ಲಿ ಹಾವೆಂದು ಭ್ರಮಿಸಬೇಕಾದರೆ ಅಲ್ಲಿ ಕಲ್ಪಿತ ಲಯಿರಲೇಬೇಕು. ಇದೇ ಇಲ್ಲಿ ದೋಷವು. ಹೀಗೆ ಅಲ್ಲಿರುವ ದೋಷವಾವುದು ತೋರಿಸಿ ನೋಡೋಣ? ತೋರಿಸುವದಾದರೆ "ಭ್ರಮೆಯಿಂದ ಪ್ರಮೆಯಾಗುವದು ಸೃಷ್ಟಿಯ ನೇಮ"ವೇ ಆಹುದು.

(೩) ಹರಿಹರನಿಗಿಂತಲೂ ಪೂರ್ವದಲ್ಲಿ ಯಾರಾದರೂ ಅಕ್ಕನ ಚರಿತ್ರೆಯನ್ನು ಬರೆದಿದ್ದರಲ್ಲವೇ ಪ್ರಮಾಣ ತೋರಿಸುವದು? ಎಲ್ಲದಕ್ಕಿಂತಲೂ ಯಾವುದು ಪ್ರಾಚೀನವಿದೆಯೋ ಅದಕ್ಕೆ ಅದೇ ಪ್ರಮಾಣ. ಒಂದು ಪ್ರಾಚೀನ ಇತಿಹಾಸವನ್ನು ತಪ್ಪೆಂದು ಹೇಳುವ ಧೈರ್ಯವಿರಬೇಕಾದರೆ ಅದಕ್ಕಿಂತಲೂ ಪ್ರಾಚೀನ ಪ್ರಮಾಣ ತೋರಿಸಬೇಕು. ಅಲ್ಲಿ

ದಿರಿ ಅದೇ ಸತ್ಯ. ಜಾಮರಸನಿಗಿಂತ ಪೂರ್ವದಲ್ಲಿಯೂ ಕೊನೆಯಲ್ಲಿಯೂ ಅಕ್ಕನ ಮದುವೆಯನ್ನು ತಿಳಿಸಿದವರುಂಟು. ಇಲ್ಲಿ ನಿಮ್ಮ ಅಭಿಪ್ರಾಯದಂತೆ ಜಾಮರಸನದು ಭ್ರಮೆಯಿಂದ ಪ್ರಮೆಯಾಗಿದ್ದರೆ ಅತನ ತರುವಾಯ ಅದು ಮತ್ತೇಕೆ ಭ್ರಮೆಯಾಯಿತು? "ಪ್ರಮೆಯಿಂದ ಭ್ರಮೆಯಾಗುವದೂ ಸೃಷ್ಟಿಯ ನೇಮವಿದೆಯೇ?" ಎಂದು ಮರಳಿ ಪ್ರಶ್ನಿಸಿದರೆ ಯಾರಿಗೆ ಕೊಂಚ ಕಠಿಣವಾಗಬಹುದು ನೀವೇ ನೋಡಿ?

ಮತ್ತಿ ಕೆಲವು ಆಕ್ಷೇಪಗಳು.

(ಳ) ಒಂದು ಪಕ್ಷದ ಶ್ರೀಮಾನ್ ದ. ರಾ. ಬೇಂದ್ರೆಯವರು ಹೇಳುವಂತೆ ಅಕ್ಕನ ಕಾಲ ೧೧೦೦ ಹೋಗುವದು ಸತ್ಯವಾಗಿ ಪರಿಣಮಿಸಿದರೆ (ಹರಿಹರನಿಗೂ ಅಕ್ಕನಿಗೂ) ಸುಮಾರು ೨೦೦ ವರ್ಷ ಅಂತರವಾಗುವದು.

(ಱ) ಹರಿಹರನ ರಗಳೆಯ ಕೆಲವಂಶಗಳು ಅಕ್ಕನ ವಚನಗಳಿಗೆ ವಿರೋಧವಾಗಿ ನಿಲ್ಲುವಂತಿವೆ. ಅವುಗಳಲ್ಲಿ ಕೆಲವನ್ನು ಹಿಂದಿನ ಬರಹದಲ್ಲಿ ಹೇಳಿದ್ದೇನೆ.

(ಲ) ಕೌಶಿಕನೊಡನಾದ ವಿವಾಹವಿಷಯವನ್ನು ಹೇಳತಕ್ಕ ಪ್ರಸಂಗಗಳು ಅಕ್ಕನವರಿಗೆ ಘಟಿಸಿದ್ದರೂ ಹೇಳಿಲ್ಲ. ಅಕ್ಕಗಳು ಆಗಿಹೋದುದನ್ನು ವ್ಯಕ್ತವಾಡದೆ ಬಚ್ಚಿಡುವ ಸಂಕುಚಿತ ಸ್ವಭಾವದವಳೂ ಆಗಿರಲಿಲ್ಲ. ಅದ್ದರಿಂದ ಅವಳ ವಚನದಿಂದ ಲಗ್ನವಾಗಿಲ್ಲವೆಂದು ಬಹು ಮಟ್ಟಿಗೆ ಊಹಿಸಲು ಸಾಧ್ಯವಿದೆಯೆಂದು ತೋರುತ್ತದೆ.

ಕ್ರಮವಾಗಿ ನಮ್ಮ ಉತ್ತರವು.

(ಳ) ವಿಮರ್ಶೆಯಲ್ಲಿ ನಿಶ್ಚಯಾತ್ಮಕ ಅಭಿಪ್ರಾಯವಿದ್ದರೇ ಮಾನ್ಯ. ಕಾರಣ ಈ ನಿಮ್ಮ ಪ್ರಶ್ನೆಯಲ್ಲಿ 'ಒಂದು ಪಕ್ಷ' 'ಸತ್ಯವಾಗಿ ಪರಿಣಮಿಸಿದರೆ' ಎಂಬ ಅನಿಶ್ಚಯ ಪದಗಳಿರುವದರಿಂದ, ನಾವು ಅದರ ಗೋಜಿಗೆ ಹೋಗೆವು. ಆದರೂ ಅಕ್ಕನ ಕಾಲವು ಕ್ರಿ. ಶ. ೧೧೬೫ ಇರುವದರಿಂದ ಇದೇ ಲೇಖದಲ್ಲಿ 'ಕವಿಕಾಲ' ದ ವಿಚಾರವಾಗಿ ಬರೆದುದೂ ಉತ್ತರವಾಗುತ್ತದೆ.

(ಱ) ಹರಿಹರನ ರಗಳೆಯು ಅಕ್ಕನ ವಚನಗಳಲ್ಲಿರುವ ತಾತ್ವಿಕ ವಿಚಾರಕ್ಕೆ ತಪ್ಪಿದೆಯೋ ಒಪ್ಪಿದೆಯೋ? ಎಂಬುದನ್ನು ನಾವು ಬೇರೆದೆಯಲ್ಲಿ ಸಿದ್ಧಯವಾಗಿಯೂ ಚರ್ಚಿಸುತ್ತೇವೆ. ಸೂಕ್ಷ್ಮವಾದ ತಾತ್ವಿಕ

ದೃಷ್ಟಿಗೂ, ಐತಿಹಾಸಿಕವಾದ ಸ್ಥೂಲ ಜರಿತ್ರೆಗೂ ಬಹು ದೂರವಿದೆ. ಕಾರಣ ಈಗ ನಡೆದಿರುವ ವಿಷಯವಾದರೂ 'ಮಹಾದೇವಿಯಕ್ಕಗಳು ಮದುವೆಯಾಗಿದ್ದರೇ ಅಥವಾ ಇಲ್ಲವೆ? ಎಂಬುದು. ಇದನ್ನು ಬಿಟ್ಟು ಅಕ್ಕನು ತನ್ನ ಇಷ್ಟದೈವವಾದ ಶ್ರೀಶೈಲದಲ್ಲಿಯ ಚೆನ್ನಮಲ್ಲಿಕಾರ್ಜುನನಿಗೆ ಪೊಡಮಟ್ಟಳು ಎಂದು ಹರಿಹರನು ಹೇಳಿದೊಡನೇ, ಅಕ್ಕನು ಮದುವೆಯಾದದ್ದೇ ಸುಳ್ಳೆಂದೂ, ಅತನ ಕಾವ್ಯವು ಸತ್ಯಪೀಠದಲ್ಲಿ ನಿಲ್ಲಲಾರದೆಂದೂ, ಹರಿಹರನು 'ಪುಷ್ಪದ ರಗಳೆ' ಯನ್ನು ಬರೆದುದರಿಂದ ಕಾವ್ಯದೊಲವು ಅಂತರಂಗದಲ್ಲಿ ಹರಿದುಸಿಂತಿದೆಯೆಂದೂ ಹೇಳುವುದೆಂದರೆ— ತಮ್ಮ ಪಕ್ಷ ಬೀಳುವ ಮಿಥ್ಯಾಭಿಮಾನವಲ್ಲದೆ ಮತ್ತೇನೂ ಇಲ್ಲವು. ಏನೋ ಹೇಳುತ್ತಾರಲ್ಲವೆ?— "ಕೈಲಾಗದಿರೋಣ ..... ರೆಂದು" ಇದೂ ಹಾಗೆಯೇ ಸರಿ. ಏಕೆಂದರೆ— ಮದುವೆಯಾಗಿತ್ತೋ ಇಲ್ಲವೇ ಎಂಬುದನ್ನು ಬಿಟ್ಟು ಅವನ ತತ್ವವೆಂಥದು? ಎಷ್ಟು ಶಾಸ್ತ್ರಗಳನ್ನು ಅಭ್ಯಸಿಸಿದ್ದ? ಅವನಿಗೆ ವೇದ ಬರುತಿತ್ತೋ ಇಲ್ಲವೇ? ಹೀಗೆಲ್ಲಾ ಇಲ್ಲದ್ದು ಅಲ್ಲದ್ದು ಸೇರಿಸಿ ಸತ್ಯವನ್ನು ಮುಳುಗಿಸಲು ಯತ್ನಿಸಾಡುವದು ಸತ್ಯಾಪೇಕ್ಷೆಯಾದ ವಿಮರ್ಶಕನಿಗೆ ತಕ್ಕುದಲ್ಲ. ಯಾವುದೂ ಎಲ್ಲೆ ವಿಚಾರಬಾರದು. ಪ್ರತಿಯೊಂದಕ್ಕೂ ಎಲ್ಲೆಯಿದೆ. ಸತ್ಯಕ್ಕೆ ಒಪ್ಪಿಬಿಡಬೇಕು.

ಇನ್ನು ಕೆಲವು ಹರಿಹರನ ಅಭಿಪ್ರಾಯಗಳು ಅಕ್ಕನ ವಚನಗಳಿಗೆ ವಿರೋಧವಾಗಿದ್ದುದರಿಂದ ಕೆಲವುಗಳನ್ನು ಹಿಂದಿನ ಬರಹದಲ್ಲಿ ಹೇಳಿರುವೆನೆಂದೂ ತಿಳಿಸಿದ್ದಾರಲ್ಲವೇ? ಅವೇ ಇವನೇ ಇಸ್ವಿಯ ಜುಲೈ ತಿಂಗಳ ಇದೇ ಪತ್ರಿಕೆಯ ಳಽಽನೇ ಪುಟ ಮತ್ತು ಳಱನೇ ಪುಟದಲ್ಲಿವೆ. ಅಲ್ಲಿ ಇವರು ಮಾಡಿರುವ ಅರ್ಥವಾದರೂ ಸಂಪೂರ್ಣ ಅಬದ್ಧವಾಗಿದೆ. ಅದರಲ್ಲಿಯೂ "ಹಿಂಡನಗಲಿ ಹಿಡಿಪಡೆದ ಕುಂಜರ....." ಎಂಬ ವಚನಕ್ಕೆ ಬಿಚ್ಚಿ ಬರೆದಿರುವದನ್ನು ನೋಡಿದರೆ ನುರುಗಬೇಕಾಗುತ್ತದೆ. ಇವುಗಳ ಖಂಡನೆಗಿಲ್ಲಿ ಸ್ಥಳಸಂಕೋಚವಾಗುವದರಿಂದ ಅಕ್ಕನ ಮದುವೆಗೆ ಉಪಯುಕ್ತವಿದ್ದ ವಿಷಯವನ್ನಷ್ಟೇ ಚರ್ಚಿಸುತ್ತ ಈಗ ಮುಗಿಸುತ್ತೇನೆ.

(ಱ) "ಮಹಾದೇವಿಯಕ್ಕನ ವಚನ" ಗಳನ್ನು ಶ್ರೀಮಾನ್ ರಾವ ಸಾಹೇಬ ಹಳಕಟ್ಟಿಯವರು, ತಾವು ಸಂಗ್ರಹಗ್ರಂಥಗಳಿಂದ ಅಲ್ಲಲ್ಲಿ ಆಯ್ದುಕೊಂಡು ಪ್ರಕಟಿಸಿರುವರಾಗಿ ಅವರ ಮುನ್ನುಡಿಯಲ್ಲಿಯೇ ತಿಳಿಸಿದ್ದಾರೆ. ಕಾರಣ ಅಕ್ಕನ ವಚನಗಳೆಲ್ಲವೂ ದೊರೆತಿಲ್ಲವೆಂ[illegible]

ಹರನ 'ಮಹಾದೇವಿಯಕ್ಕನ ರಗಳೆ' ಯಲ್ಲಿರುವ ಅಕ್ಕನ ವಚನಗಳೀ ದೃಷ್ಟಾಂತ.

ಮ. ರಗಳೆಯ ಪುಟ ಸಂಖ್ಯೆ.	ಸಾಲು.		
೫೦	೩	೪	೬
೫೨	೨೨	೨೩	೨೪
೫೩	೧	೨	೩
೫೫	೨೦	೨೧	೨೨
೫೬	೧.		

ಇವುಗಳನ್ನು ನೋಡಿದರೆ ತಿಳಿಯುವದು. ಕಾರಣ ಅಕ್ಕನ ಸಂಪೂರ್ಣ ವಚನಗ್ರಂಥವು ದೊರೆತಾಗ ಯಾವುದನ್ನೂ ಊಹಿಸಬೇಕಿಲ್ಲದೆ ಇಷ್ಟೇ ವಚನಗಳನ್ನು ನೋಡಿ—"ಕೌಶಿಕನೊಡನಾದ ವಿವಾಹ ವಿಷಯವನ್ನು ಹೇಳತಕ್ಕ ಪ್ರಸಂಗಗಳು ಅಕ್ಕನವರಿಗೆ ಘಟಿಸಿದ್ದರೂ ಹೇಳಿಲ್ಲ. ಅಕ್ಕಗಳು ಆಗಿಹೋದುದನ್ನು ಬಚ್ಚಿಡುವ ಸಂಕುಚಿತ ಸ್ವಭಾವದವಳೂ, ಕಲ್ಮಷ ಹೃದಯದವಳೂ ಆಗಿರಲಿಲ್ಲ" ಎಂದು ಮೊದಲಾಗಿ ಅಭಿಪ್ರಾಯ ಪಟ್ಟುದು ಇಲ್ಲಿ ಬಿದ್ದು ಹೋಗುತ್ತದೆ.

ಅಕ್ಕನು ಆಗಿಹೋದುದನ್ನು ಬಿಚ್ಚಿಡುವ ಸ್ವಭಾವದಳು ಇದ್ದಳೆಂಬುದಕ್ಕೆ ನಾವೂ ಪ್ರಮಾಣವನ್ನು ತೋರಿಸುತ್ತೇವೆ—ಈ ಮೇಲೆ ಹೇಳಿದ ಹರಿಹರನ ರಗಳೆಯಲ್ಲಿರುವ ವಚನಗಳನ್ನು ನೋಡಿ. ನೋಡಿದರೆ ಮದುವೆಯಾಗಿದ್ದಳೆಂಬ ನಿಶ್ಚಯವು ಅಕ್ಕನ ವಚನಗಳಿಂದಲೇ ಸಿದ್ಧಾಂತವಾದಂತಾಗುತ್ತದೆ.

ಉಪಸಂಹಾರ

ಇದುವರೆಗೂ ವಿಚಾರಿಸಿದ—ವಿಚಾರಿಸಿರುವ ನವಿೂರ್ವರ ಅಭಿಪ್ರಾಯಗಳಿಂದ ಕೊಂಚಮಟ್ಟಿಗಾದರೂ ಒಂದು ನಿಶ್ಚಯ ಭಾವವು ಪಾಸ್ಯ ವಿಮರ್ಶಕರಿಗೆ ಹೊಳೆಯದಿರದು. ಸತ್ಯಾಸತ್ಯಗಳ ಕಲ್ಪನೆಯು ಉದಿಸದಿರದು. ವಿಮರ್ಶೆಯಲ್ಲಿ ಸೋಲುಗೆಲುವುಗಳು ಮುಖ್ಯವಾಗಿಲ್ಲ. ಸತ್ಯಾಸತ್ಯಗಳ ವಿವೇಚನೆಯು ಮುಖ್ಯ ಇದರಲ್ಲಿ ನಾನು ಸೋಲಾದರೆ ಗೆಲುವಿಗಿಂತ ಹೆಚ್ಚಾಗಿ ಆನಂದಪಡುತ್ತೇನೆ. ಕಾರಣ ನನ್ನ ಈ ಲೇಖಗಳನ್ನು ಬೇಕಾದವರು ಇನ್ನು ವಿಮರ್ಶಿಸಬಹುದು.

ವಿಮರ್ಶಕಾರನೆಂದರೆ— "ಸಾಹಿತ್ಯರೂಪದಲ್ಲಿ ಬಯ್ಯುವ ಪದ್ಧತಿಯೊಳಗಿನ ಒಂದು ಪ್ರಭೇದದವನು" ಎಂದು ಕೆಲರು ಅವನ ಲಕ್ಷಣವಾಡುತ್ತಾರೆ. ಕಾರಣ ನನ್ನೀ ವಿಮರ್ಶೆಯಲ್ಲಿ ಯಾವಾದರೂ ಬಿರುಸುಡಿಗವಾಗಿದ್ದರೆ ಇದರಲ್ಲಿ ಕ್ಷಮೆಯಿಟ್ಟೇಡುವದು ಅನವಶ್ಯಕ. ಆದರೂ ಪದ್ಧತಿಗನುಸರಿಸಿ 'ಕ್ಷಮೆಯಿರಲಿ' ಎಂದು ನಮ್ಮ ಪ್ರತಿವಾದಿಗಳಲ್ಲಿ ವಿನಂತಿ.

ನಾನಿನ್ನು ಲೇಖನಗಳಲ್ಲಿ ಈ ವಿಷಯವನ್ನು ಚರ್ಚಿಸುವದಿಲ್ಲ. ಮಹಾದೇವಿಯಕ್ಕನ ಸರ್ವವಿಷಯವನ್ನೊಳಗೊಂಡ ಒಂದು ಹೊತ್ತಿಗೆಯನ್ನೇ ಬರೆಯಲು ತೊಡಗುತ್ತೇನೆ. (ತೊಡಗಿದ್ದೇನೆ) ಇದರಲ್ಲಿ 'ಅಕ್ಕನ ಸಹಜ ಚರಿತ್ರೆ ಮತ್ತು ಮಾಪಾರ್ಟುಗಳು" — "ಅಕ್ಕನ ವೇದಾಂತ; ಅಥವಾ ತತ್ವಪ್ರತಿಪಾದನೆ"—"ಕರ್ನಾಟಕದ ಇತಿಹಾಸ ಮತ್ತು ಸಾಹಿತ್ಯಗಳಲ್ಲಿ ಅಕ್ಕನಿಗಿರುವ ಸ್ಥಾನ-ಮಾನಗಳು"-"ಆಗಿನ ಕಾಲ-ಧರ್ಮಗಳು"-"ಅಕ್ಕನು ಚರಿತ್ರೆಯನ್ನು ಬರೆದ ಪ್ರಾಚೀನ ಕವಿಗಳ ಉದ್ದೇಶ" ಮೊದಲಾದವುಗಳನ್ನು ವಿಚಾರಿಸುವೆನಲ್ಲದೆ. ಅದರ ಪರಿಶಿಷ್ಟಭಾಗದಲ್ಲಿ ಮದುವೆಯ ಸಂಬಂಧ ಒಂದು ಸಿದ್ಧಾಂತ ಮಾಡುವ ಧೈರ್ಯ ತಾಳಿದ್ದೇನೆ. ಮತ್ತು ಈ 'ಪರಿಶಿಷ್ಟ'ದಲ್ಲಿ 'ಈ ಲೇಖಕರು ಮಾಡಿರುವ ಅಕ್ಕನ ವಚನಗಳ ಅಪಾರ್ಥವನ್ನು ತೋರಿಸಿ ನನ್ನ ಸಿದ್ಧಾಂತವನ್ನು ಮಂಡಿಸುತ್ತೇನೆ.

ಈ ಹೊತ್ತಿಗೆಯನ್ನು ಬೇಗನೆ ಕನ್ನಡಿಗರ ಹಸ್ತದಲ್ಲಿಡುವಂತೆ ಅನುಗ್ರಹಿಸಲೆಂದು ನನ್ನ ದೇವನಲ್ಲಿ ಕೊನೆಯ ಪ್ರಾರ್ಥನೆಯು.

ನೀನಲ್ಲದಿನ್ನಾರು?

ಚಿತ್ರಿಗರು ನಿನ್ನನ್ನು ಚಿತ್ರವೆಂದೊರೆಯುವರು
ಗಾಯಕರು ನಿನ್ನನ್ನು ಗಾನವೆಂದು-ಸುರುವರು

ಶಿಲ್ಪಿಗರು ನಿನ್ನನ್ನು ಮೂರ್ತಿಯೊಳು ತೋರುವರು
ಶಕ್ತಿಯೇ ನೀನೆಂದು ಹಲಕೆಲರು ಉಲಿಯುವರು

ಕರ್ಮವೇ ನೀನೆಂದು ಕರ್ಮಿಗಳು ಬಣ್ಣಿಪರು
ಪಾಂಡಿತ್ಯವೇ ನೀನೆಂದು ಪಂಡಿತರು ನುಡಿಯುವರು

ತರ್ಕವೇ ನೀನೆಂದು ತಾರ್ಕಿಕರು ತರ್ಕಿಪರು
ಜ್ಞಾನವೇ ನೀನೆಂದು ಜ್ಞಾನಿಗಳು ಬೋಧಿಪರು

ನಲ್ಮೆಯೇ ನೀನೆಂದು ಪ್ರೇಮಿಗಳ್ಪೇಳುವರು
ಚಂದವೇ ನೀನೆಂದು ಜೆನ್ನಿಗರು ನಲಿಯುವರು

ಕರುಣೆಯೇ ನೀನೆಂದು ಶರಣಜನ ಹೊಗಳುವದು
ಕಾವ್ಯವೇ ನೀನೆಂದು ಕವಿವರರು ನುತಿಸುವರು

ಸತ್ಯವೇ ನೀನೆಂದು ಸತ್ಪುರುಷರುಸುರುವರು
ಶಾಂತಿಯೇ ನೀನೆಂದು ಮಹಾತ್ಮರಿಂದುಲಿಯುವರು

ಸಕಲರೂ ನಿನ್ನೊಳಿಹ ಸೌಂದರ್ಯವನ್ನರಿತು
ಬಗೆ-ಬಗೆಯ ವಿಧದಿಂದ ಬಣ್ಣಿಸುತಲಿರುತಿಹರು

ಸೊಬಗುಳ್ಳ ಸೇವೆಯೇ! ಸೌಂದರ್ಯ ಮೂರ್ತಿಯೇ!
ವಿಶ್ವದೊಳು ನೀನಲ್ಲ-ದಿನ್ನಾರು ದೇವರಿಹರು?

—ಆನಂದಕವಿ ಕುರಗುಂದ.

ಅಕ್ಕನಮಹಾದೇವಿಯು ಕದಳೀ ಹೊಕ್ಕ ಹಾಡು.

(ಲೇಖಕರು:— ಶ್ರೀ. ಚಂದ್ರಶೇಖರದೇವರು ಅಡ್ನೂರು.)

ಅಕ್ಕನ ಹೆಸರು ಅವಳ ಘನತೆಯ ಕುರುಹು. ಅದು ಕೇವಲ ವೀರಶೈವರಿಗೇ ಅಲ್ಲ ಕನ್ನಡಿಗರಿಗೆಲ್ಲ ಹೆಮ್ಮೆಯ ಹೆಸರು. ನಾಡಿನಲ್ಲೆಲ್ಲ ಹೆಸರುವಾಸಿಯಾದ ಹಿರಿ ಹೆಸರು. ಅದುದರಿಂದಲೇ ಅದು ಅಂದಿನ ಮಹಾನುಭಾವರ ಭಾವಗಳನ್ನು ಆಕರ್ಷಿಸಿದೆ. ಮಹಾಕವಿಗಳ ಹೃದಯಗಳನ್ನು ಸೆಳೆದಿದೆ; ಕಾವ್ಯಕಟ್ಟಿ ಹಾಡಹಚ್ಚಿದೆ.

ಅವಳಾ ಸುಂದರವಾದ ಜೀವನ ಚರಿತೆಯನ್ನು, ಮಹಾಕವಿಯಾದ ಪರಿಹರನು ಮೊತ್ತಮೊದಲು ರಗಳೆಯ ರೂಪಾಗಿ ಚಿತ್ರಿಸಿದನು. ಚೆನ್ನ ಬಸವಾಂಕನು ಷಟ್ಪದಿಯಲ್ಲಿ ಪುರಾಣರೂಪವಲ್ಲಿ ಹರಿಸಿದನು. ರಾಚಯ್ಯ ಕವಿಯು ಸಾಂಗತ್ಯದಲ್ಲಿ ಸಾರಿರುವನು. + ಹೀಗೆ ಅಕ್ಕನ ಆ ಅಲೌಕಿಕ ಜೀವನ ಚರಿತ್ರೆಯು ಕೇವಲ ಗಂಡುಗವಿಗಳನ್ನೇ ತನ್ನತ್ತ ಎಳೆದಿದ್ದಿತೆಂದು ಹೇಳಲಾಗುವದಿಲ್ಲ. ಅದು ಸ್ತ್ರೀಯರನ್ನೂ ಸಹ ಎಳೆದಿದ್ದಿತು. "ಅಕ್ಕನಮಹಾದೇವಿಯು ಕದಳೀ ಹೊಕ್ಕ ಹಾಡು" ಎಂಬುದಾಗಿ ಜನಪದ ಸಾಹಿತ್ಯದಲ್ಲಿ ಹೆಣ್ಣುಮಕ್ಕಳು ಹಾಡಿದ ಒಂದು ದೊಡ್ಡ ಹಾಡಿದೆ. ಇದರಲ್ಲಿ ಸು. ೩೦೦ ರಷ್ಟು ಪದ್ಯಗಳಿವೆ. ತ್ರಿಪದಿ ಮೊದಲಾದ ಬೇರೆ ಬೇರೆ ರಾಗಗಳಲ್ಲಿ ಹಾಡಿದ್ದಾರೆ. ಇದರಲ್ಲಿ ಇಡೀ ಜೀವನ ಚರಿತ್ರೆಯೇ ಅಡಕಾಗಿದೆ. ಆದರೆ ಇದು ಕೈಯಿಂದ ಎತ್ತಿ ಬರೆದುಕೊಂಡ ಪ್ರತಿಯಾದ್ದರಿಂದ ತಪ್ಪುಗಳಿಗೆ ಪಾರವಿಲ್ಲ. ಅಲ್ಲಲ್ಲಿ ಕೆಲವು ಪದ್ಯಗಳೇ ಬಿಟ್ಟು ಹೋಗಿವೆ. ಇದರ ಮೂಲಪ್ರತಿಯು ದೊರೆಯುವದೂ ಕಷ್ಟವಾಗಿತು. ಏಕೆಂದರೆ ಇದು ತಲತಲಾಂತರದಿಂದ ಹಾಡಿಕೊಳ್ಳುತ್ತ ಬಂದಂತೆ ತೋರುತ್ತದೆ. ಈ ಹಾಡಿನ ಕೊನೆಯಲ್ಲಿ—

ಆಡೊ ಮುಕ್ಕಳನೆ ಬಿಟ್ಟು। ಕಡೆವ ಮುಸರನೆ ಬಿಟ್ಟು।
ಎನ್ನೊಡನಾಡಿ ಪದವ ಕಲಿಸಿದ ರಾಚಮ್ಮನಿಗೆ।
ಕೈಲಾಸದಲಿ ಗಂಟೆ ಘಣರೆಂದು॥

+ 'ಶರಣಸಾಹಿತ್ಯ' ಮಾಸಿಕದ ಒನೇ ಸಂಚಿಕೆಯಲ್ಲಿ "ಮಹಾದೇವಿಯಕ್ಕನ ಸಾಂಗತ್ಯ" ಎಂಬುದಾಗಿ ಬರೆದ ಪೈ. ರಂ. ಶ್ರೀ. ಮುಗಳಿ ಎಂ. ಎ. ಬಿ. ಟಿ. ಇವರ ಲೇಖನದಿಂದ ತಿಳಿದುಬರುತ್ತದೆ.

ಈ ಪದವ ಕಲಿಸಿದಮ್ಮನ। ಯಾವಲ್ಲಿ ನೆನೆಯಲಿ।
ಬಿಲ್ವಪತ್ರಿಯಾ ವನದಲ್ಲಿ ರಾಚಮ್ಮನಿಗೆ।
ಕೈಲಾಸವದು ತಾನೆದುರಾಗಿ॥

ಎಂಬುದಾಗಿ ಹಾಡುಗಲಿಸಿದ ರಾಚಮ್ಮನ ಉಪಕಾರವನ್ನು ಒಳ್ಳೇ ಹೃದಯದಿಂದ ಹಾಡಿಹೇಳುತ್ತಾಳೆ. ಇದು ಮೇಲೆ ಬರೆದ ಮಾತಿಗೆ ಉಪಪ್ಲವಂಭಕವಾಗಬಹುದಾಗಿದೆ. ಆದರೆ ಇದನ್ನು ಯಾರು ರಚಿಸಿದರು? ಅವರ ಕಾಲವಾವುದು? ಇವಾವೂ ಗೊತ್ತಾಗುವುದಿಲ್ಲ. ಒಮ್ಮೆ ಈ ಹಾಡನ್ನು ಕಲಿಸಿದ ರಾಚಮ್ಮನೇ ರಚಿಸಿರಬಹುದೇ ಎಂದು ಸಂಶಯವು ಹುಟ್ಟುವದಾದರೂ ನಿರ್ಧರಿಸಲು ಬರುವಂತಿಲ್ಲ.

ಈ ಹಾಡನ್ನು ರಚಿಸಿದವಳು "ಮುದ್ದು ಮಲ್ಲಯ್ಯನ ನೆನೆದೇನೆ" ಎಂದು ೨-೩ನೇ ಪದ್ಯಗಳಲ್ಲಿ ಮಲ್ಲಯ್ಯನನ್ನು ನೆನೆಯುತ್ತಾಳೆ. ನಾಲ್ಕನೇ ಪದ್ಯದಲ್ಲಿ ದಕ್ಷಯಜ್ಞಧ್ವಂಸಕನಾದ ವೀರಭದ್ರನನ್ನು ಹರಿಸುತ್ತಾಳೆ. ನಂತರ ನೌರಿಯ ಮಗನಾದ ಗೂಳೂರ ಗಣಪತಿಯನ್ನು ಬಹುವಾಗಿ ಕೊಂಡಾಡಿದ್ದಾಳೆ. ಮೈಸೂರ ಪ್ರಾಂತದಲ್ಲಿ ಗುಮ್ಮಳಾಪುರದ ಗೌರಮ್ಮ, ಗೂಳೂರ ಗಣಪತಿ ಇವೆರಡೂ ಪ್ರಸಿದ್ಧವೆಂದೂ ಈಗಲೂ ಜನರು ಆ ದೇವಸ್ಥಾನಗಳಿಗೆ ನಡೆದುಕೊಳ್ಳುವರೆಂದೂ ಹೇಳುತ್ತಾರೆ. ಆದ್ದರಿಂದ ಗೂಳೂರ ಗಣಪ್ಪನ ರಸಿಕ ವರ್ಣನೆಯನ್ನು ಕೊಂಚ ಕೇಳಿರಿ.

ಕಟ್ಟಿ ಹಿಂದಲ ಪುಟ್ಟ ಬಾಳಿ ಹಣ್ಣನು ತಂದು।
ಕೊಟ್ಟೊಡಾ ಹಣ್ಣ ಸಲಿಸುವ ಗೂಳೂರ।
ಹೊಟ್ಟಿ ಜೆನಕನೆ ಕೊಡುಮತಿಯ॥
ಖಂಡುಗದ ಕಿರಿಗೆಜ್ಜೆ। ಮುಂಡಿ ಊರಿದ ಪಾದ।
ಖಂಡ್ಯಕ್ಕಿ ಬಾನಾ ಕಿರಿದೆಂದು ತಾಯೊಡನೆ।
ಚಂಡಿಮಾಡಿದನೆ ಕೊಡುಮತಿಯ॥
ಸೂಸಲಪ ಸವಿಕಡಬು। ಸುಲಿದ ಬಾಳೆಯ ಹಣ್ಣು।
ರಾಶಿಹೊಯ್ಯುವೆ ನಿಮ್ಮ ಬಳಿಗೆ ಗೌರಿಯ।
ಬಾಲ ಕೊಡೆನಗೆ ಮತಿಗಳ॥

ಹೀಗೆಂದು ಗೂಳೂರು ಗಣಪತಿಯ ಪವಾಡಗಳನ್ನು ವಿವಿಧವಾಗಿ ವರ್ಣಿಸಿರುವದರಿಂದ ಈ ಹಾಡಿನ ಕರ್ತೃಳು ಗೂಳೂರವಳಿರಬಹುದೆ? ಎಂದು ಭಾಸವಾಗುತ್ತದೆ. ಮುಂದೆ

ಚಿನ್ನವ ಹಲಗಿ ಕೊಡೆ। ರನ್ನವ ಬಳಪ ಕೊಡೇ।
ಇನ್ನೊನ್ಮೆ, ನಿನ್ನ ಬಳಿಗಾಗಿ ಸರಸ್ವತಿ ತಾಯಿ।
ಜನ್ನಾಗಿ ಪದವ ಬರಕೋಡೆ॥

ಎಂದು ೩-೪ ಪದ್ಯಗಳಲ್ಲಿ ಸರಸ್ವತಿಯನ್ನು ಪದ ಬರಕೊಡಲು ಬೇಡಿದ್ದಾಳೆ. ಆದರಿಂದು ಅವಳ ಸ್ತುತಿಯಿರಬಹುದೋ ಅಥವಾ ಅವಳೇ ರಚಿಸಿರಬಹುದೋ ಯಾವದೂ ತಿಳಯುವದಿಲ್ಲ. ಕೇವಲ ಬರಕೊಡು ಎಂದು ಬೇಡುವಳೇ ಹೊರತು ಬರಕೊಟ್ಟಳೆಂದು ಎಲ್ಲಿಯೂ ಹೇಳುವದಿಲ್ಲ. ಆದ್ದರಿಂದ ಇದು ಹೀಗೆ ಎಂದು ಹೇಳಲಿಕ್ಕಾಗುವದಿಲ್ಲ. ಆ ಮೇಲೆ ಕಿನ್ನರಯ್ಯ, ಆದಯ್ಯ, ಮಾದಯ್ಯ, ಊಳಿಗಯ್ಯ ಜೇರಮರನ್ನು ನೆನೆಯುತ್ತಾಳೆ.

ಈ ಹಾಡುಗಾರಳು ಗೂಳೂರು ಶಾಂತಿದೇವರನ್ನಾಗಲಿ ಗುಮ್ಮಳಾಪುರದ ಶಾಂತೇಶರನ್ನಾಗಲಿ ಸ್ತುತಿಸುವದಿಲ್ಲ. ಇವರಿಬ್ಬರೂ ಒಳ್ಳೇ ಹೆಸರುವಾಸಿಗಳು, ಮಹಾಮಹಿಮರು, ಅನುಪಮ ಚರಿತರು. ಇವರ ವಿಷಯವಾಗಿ ಬಸವ ಪೌರಾಣದ ಮಲ್ಲಣಾರ್ಯರು (ಕ್ರಿ. ಶ ೧೪೬೫) ತಮ್ಮ ಭಾವ ಚಿಂತಾರತ್ನದ ಮೊದಲನೆಯ ಸಂಧಿಯೊಳಗೆ ಶ್ಲೋಕ ೧೦-೧೧ ರಲ್ಲಿ ಒಳ್ಳೇ ಹೃದಯಂಗಮವಾಗಿ ಹೇಳಿದ್ದಾರೆ. ಇಂಥಹರನ್ನು ಸ್ಮರಿಸದೆ ಗೂಳೂರು ಗಣಪನೊಬ್ಬನನ್ನೇ ಸ್ತುತಿಸಿದ್ದನ್ನು ನೋಡಿದರೆ ಈ ಕವಯಿತ್ರಿಯು ಇವರಗಿಂತಲೂ ಮೊದಲೇ ಇದ್ದಿರಬಹುದೇ?

ಮುಂದೆ ಈ ಹಾಡಿನಲ್ಲಿ ಅಕ್ಕನ ಚರಿತ್ರೆಯು ಹೀಗೆ ಚಿತ್ರಿತವಾಗಿದೆ. ಹಿಂದಿನ ಹಿರಿಯರ ನೆನಹು ಮುಗಿದ ಮೇಲೆ ಕೈಲಾಸದ ವಾರ್ತೆಯ ಒಡ್ಡೋಲಗದ ವರ್ಣನೆಗೆ ಪ್ರಾರಂಭವಾಗುವದು. ಅಲ್ಲಿ ಹಲವು ತರಹದ ದೇವಿಯರು ನೆರೆದಿದ್ದರು. ಬಲ್ಲಮರ ಅಗಮನವೂ ಆಗಿದಿತು. ಹಲ ಕೆಲ ಪ್ರಮಥಗಣವೂ ಬಂದಿದ್ದಿತು. ಆ ಸಮಯದಲ್ಲಿ ಯಾವುದೋ ಉದ್ವೇಶದಿಂದ ಎದ್ದು ಹೋಗುವಾಗ ರುದ್ರಕನ್ನಿಕೆಯ ಶರಗು ಗಣಂಗಳಿಗೆ ಸೋಂಕುವದು. ಆಗ ಅವರು ರೋಷಗೊಂಡು:— ಹಿರಿಯರಿಂದರಿಯರು. ಕಿರಿಯರೆಂದರಿಯರು. ವಿರಕ್ತರೆಂದು ಭಾವಿಸರು. ತಾವು ತಮ್ಮ ಭರದಲಿ ಓಡಾಡುವರು. ಓ ರುದ್ರಕನ್ನಿಕೆ ನಿನ್ನ ಶರಗು ನಮಗೆ ಸೋಂಕಿದ ಕಾರಣ ಭುವಿಯಲ್ಲಿ "ಭವಿ ನಿಮ್ಮ ಶರಗ ಪಿಳಿಯಲಿ" ಎಂದು ಶಾಪಕೊಡುವರು. ಆ ಶಾಪಕ್ಕೆ ಕನ್ನಿಕೆಯು ಭಯಗೊಂಡು ಎಲೆ ತಂದೆ! ಎನ್ನಪ್ಪ!! ಹೇಗೆ ನಾನಲ್ಲಿ ಜೀವಿಸಲಿ. ಹ್ಯೇಯವಾದ ಗರ್ಭದಲ್ಲಿ ಎಂತು

ವಾಸಿಸಲಿ. ಅಪ್ರಮಾದದಿಂದಾವ ಅಪರಾಧವನ್ನು ಪ್ಪನಿಸಬೇಕು ಎಂದು ಮುಂತಾಗಿ ಬೇಕ್ಕೊಳ್ಳುವಳು. ಅವಕ್ಕೆ ಗಣಂಗಳು ಪ್ರಸನ್ನಹೃದಯರಾಗುವರು. ಎಲೋ ದೇವಿ ಗರ್ಭವಾಸಕ್ಕೆ ಹೆದರಬೇಡ. ಗರ್ಭಕ್ಕೋ ಶವು ಕೊಳಕಾದರೂ ಅದರ ಲೇಪವಿಲ್ಲದೆ ನೀನು ಸುಖವಿರು. ಮತ್ತು ನೀನು ಜನಿಸುವಾಗಲೇ ನಾವೇ ನೊಸಲಗಣ್ಣಿನಿಂದ ಬಸವನೊಡನೆ ಬಂದು ನಿನಗೆ ಸನ್ಯಾಸ್ಯೋಪದೇಶವನ್ನು ಮಾಡುವೆನು. ಎಂದು ಅಲ್ಲಮನು ಅಭಯವನ್ನು ಕೊಡುವನು. ಇತ್ತ ಉಡುತಡಿಯಲ್ಲಿ ಸುಮತಿಯು ಮಕ್ಕಳಿಲ್ಲದೆ —

ಒಂದ್ಹೊತ್ತು ಇರುವೆ। ವಿಂದು ಮಡಿಗಳುಡುವೆ।
ಕಂದನ ಗರ್ಭಜನಿಸಿದರೆ ಶಿವನಿಗೆ।
ಐಂಡ್ಲದಾರತಿಯ ಬೆಳಗುವೆ॥

ಎಂದು ಹರನಿಗಾಗಿ ಹಲವು ಹರಿಕೆಗಳನ್ನು ಹೊರುತ್ತಿದ್ದಳು. ಇಂತಿರುವ ಇವಳ ಗರ್ಭದಲ್ಲಿ ಆ ರುದ್ರಕನ್ನಿಕೆಯು ಬರುವಳು. ದಿನ ಕಳೆದಂತೆ ಸುಮತಿಗೆ ಗರ್ಭದ ಬೇನೆಯು ಬಲವಾಗುವದು. ಅದರ ಉಪಚಾರಕ್ಕಾಗಿ ನಿರ್ಮಲನು ಅದೇ ಊರ ಸೂಲಗಿತ್ತಿ ದೇವಮ್ಮನನ್ನು ಕರೆತರುವನು. ಅವಳು ಬಂದು ಮಾಡುವ ಉಪಚಾರಗಳನ್ನೆಲ್ಲ ಮಾಡುವಳು. ಮಹಾದೇವಿಯು ಜನಿಸುವಳು. ಕೈಲಾಸದಲ್ಲಿ ಮಾತುಕೊಟ್ಟಂತೆ ಅಲ್ಲಮನು ನಂದೀಶ್ವರನೊಡನೆ ಬರುವನು. ಆ ಶಿಶುವಿನ ಮೈತೊಳಿಸಿ ಭಸ್ಮಧರಿಸಿ, ಲಿಂಗಧಾರಣೆಮಾಡಿ, ಪಂಚಾಕ್ಷರಿಯನುಪದೇಶಿಸುವನು. ಕೊನೆಗೆ—

ನಿತ್ಯಾನಿತ್ಯಳು ಆಗು। ಸತ್ಯವನಿತೆಯಾಗು।
ಮೂರು ತನುವನು ಮೂರು ಲಿಂಗಕೆ ಕೊಟ್ಟ್ಯ।
ನರರ ಹಂಗ ಅಳಿಯೆಂದು ಕಟ್ಟು ಮಾಡ್ಯಾರೆ ಶಿವ ತಾವು॥

ಎಂದು ಉಪದೇಶಿಸಿ ತಮ್ಮ ಪುರಕೆ ಹೊರಟು ಹೋಗುವರು. ಇತ್ತ ನಿರ್ಮಲ ಮೊದಲಾದವರು ಆ ಶಿಶುವಿಗೆಂದು ಶ್ರೀಗಂಧದ ಹೊಸ ಕಟ್ಟಿಗೆಯನ್ನು ತಂದು ತೊಟ್ಟಿಲ ಮಾಡತೊಡಗಿದ್ದಾರೆ. ಆ ತೊಟ್ಟಿಲದ ರಚನೆಯನ್ನು ಆಲಿಸಿರಿ.

ಮುಂಡೆಯ ಕಡೆಗೆ। ಗುಂಡು ಬ್ರಹ್ಮಯ್ಯನೋರು।
ಸಿಂಧು ಬಲ್ಲಾಳ ಸಿರಿಯಾಳ ಹಂಪೆಯ ಘನಲಿಂಗವ।
ಕಡಿದು ರಚಿಸ್ಯಾರೆ॥

ಹಸ್ತದ ಕಡೆಗೆ। ಹರಿಯು ಬ್ರಹ್ಮನೋರು।
ಅಕ್ಕ ಚಂಗಳೆ ಅಜಗಣ್ಣ ಅಲ್ಲಮಪ್ರಭು ಮುಕ್ತಣ್ಣನ;
ಕಡಿದು ರಚಿಸ್ಯಾರೆ॥

ಪಾದದ ಕಡೆಗೆ। ಮೇದಾರ ಚನ್ನಯ್ಯ।
ಜೇದಿರಾಜ ಸಿರಿಯಾಳ ಹಂಪೆಯ ಘನಲಿಂಗವ।
ಕಡಿದು ರಚಿಸ್ಯಾರೆ॥

ಈ ಪದ್ಯಗಳಲ್ಲಿ ಎಲ್ಲಿಯೂ ಪ್ರಾಸುಗೀಸುಗಳನ್ನು ನೋಡಬೇಡಿ. ಈ ಹಾಡುಗಾರಳು ಪ್ರಾಸಿಗಾಗಿ ಧ್ಯಾನ ಮಾಡಿಲ್ಲ. ಅದು ಅವಳ ಧ್ಯೇಯವಿದ್ಯಂತೆಯೂ ಕಾಣುವದಿಲ್ಲ. ಹೀಗೆ ಪ್ರಮಥರ ಜೊಂಜೆಗಳನ್ನು ಸುತ್ತಲೂ ಕೆತ್ತಿದ ಶ್ರೀಗಂಧದ ಹೊಸದೊಟ್ಟಲಲ್ಲಿ ಆ ಕೂಸು ಬೆಳೆದಿದೆ. ತನ್ನ ಗೆಳತಿಯರೊಡನೆ ಆಟಪಾಟಗಳನ್ನು ಆಡಲು ಆರಂಭಿಸಿದ್ದಾಳೆ. ಒಂದು ದಿನ ಮಹಾದೇವಿಯು ತನ್ನ ಸಖಿಯರೊಡನೆ ಆಡುವಾಗ ಒಬ್ಬ ಜಂಗಮರು ಭಿಕ್ಷಕ್ಕೆ ಬರುವರು. ಅವರಿಗೆ ಕೂಡಲೆ ನೀಡಿ ಕಳಿಸುವಳು. ಅದೇ ವೇಳೆಗೆ ಅಗಸರವನು ಬರುವನು ಅವನನ್ನು ನೋಡಿ ಹೊರನಿರುವ ಗೆಳತಿಯರು ಮಹಾದೇವಿಯನ್ನು ಅವನಿಗೆ ಬಾನಾ ನೀಡೆಂದು ಕೂಗುವರು. ಅದಕ್ಕೆ ಮಹಾದೇವಿಯು:—

ಅಟ್ಟಂತ ಅಡಿಗಿಗೆ ವಿಭೂತಿ ಧಾರಣೆ ಮಾಡಿ।
ಎಷ್ಟಾದರೂ ಭನಿಗೆ ಕೊಡಬೇಡಿನುತ।
ಸಾರಿಕಳಿಸ್ಯಾಳೆ ನಮ್ಮಮ್ಮಯ್ಯ॥

ಎಂದು ಉತ್ತರ ಹೇಳುವಳು. ಅದಕ್ಕೆ ಸಖಿಯರು:—

"ಶೀಲವಂತರೆಂಬುವರು ಬಹು ಜೀನರಕ್ಕ।
ಅಗಳು ಬಿದ್ದಲ್ಲಿ ಅರಿಸಿ ಉಂಬುವರು....."

ಎಂದು ಪರಿಹಾಸವಾಡುವರು. ಹೀಗಿರಲು ಮತ್ತೊಂದು ದಿನ ಹಲವು ಸಖಿಯರು ಸೇರಿ ಮಹದೇವಿಯನ್ನು ಊರಹೊರಗಿರುವ ಉಪ

ವನಕ್ಕೆ ಹಬ್ಬಣಿ ಹಾಡಲು ಹತತ್ತಾಗಿ ಕರೆದುಕೊಂಡು ಹೋಗುವರು. ಆ ವನದಲ್ಲಿ ಸಖಿಯರೊಡನೆ ಆಡುತ್ತ ಹಾಡುತ್ತ ಕಾಲಕಳೆಯುವಾಗ ಅದೇ ದಿನ ಕೌಶಿಕನು ಪೈಹಾಳಿಯಿಂದ ಅಲ್ಲಿಗೆ ಬರುವನು. ಆಗ ರಾಜನಿಗೂ ಅಕ್ಕಗಳಿಗೂ ಭೆಟ್ಟಿಯಾಗುವದು. ಅಕ್ಕಗಳು ಈತನು ಭವಿಯೆಂದು ಛೀವಿಸಿ ತನ್ನ ಮನೆಗೆ ಬೇಗನೆ ಹೊರಟುಹೋಗುವಳು. ಇತ್ತ ರಾಜನು ಅವಳ ಆ ರೂಪಕ್ಕೆ ಮನಸೋಲುವನು. ತನ್ನೊಡನಿರುವ ಸೈನಿಕರಿಗೆ ನೋಡಿದಿರಾ ಆ ರೂಪನ್ನು ಎಂತಹ ರೂಪು? ಏನು ಆಕೃತಿ? ಜಗನ್ಮೋಹಕಳಾದ ಆ ಚಲುವೆ ಯಾರ ಮಗಳು ಬಲ್ಲಿರಾ? ಎಂದು ಕೇಳುವನು ಅವರಿಗಾದರೂ ಅವಳ ವಿಚಾರವಾಗಿ ಗೊತ್ತಿರುವದಿಲ್ಲ. ಅಲ್ಲೇ ಪಕ್ಕದಲ್ಲಿ ಆಡುತ್ತಿರುವ ಇನ್ನುಳಿದ ಬಾಲಿಕೆಯರನ್ನು ಕರೆಯಿಸಿ ಕೇಳುವನು. ಅವರು ಆಕೆಯು ಶೀಲವಂತರ ಮಗಳು. ನೇಮದೊಳಗಿರುವವಳು. ಎಂದು ಉತ್ತರ ಕೊಡುವರು. ರಾಜನು ಕೆಲವು ಪೂತರನ್ನು ಶೀಲವಂತರ ಮನೆಗೆ ಕೇಳಲು ಕಳಿಸುವನು. ಅದರಂತೆ ಅವರು ಹೋಗಿ ಕೇಳಲು ಅಕ್ಕನ ತಾಯ್ತಂದೆಗಳು ನಾವೇನಾದರೂ ಬಿಟ್ಟಿವು. ಆದರೆ ಭವಿಗೆ ಮಗಳನ್ನು ಕೊಡಲಾರೆವು ಎಂದು ಖಂಡತುಂಡಾಗಿ ಹೇಳಿಬಿಡುವರು. ಅವರು ತಿರುಗಿಹೋಗಿ ರಾಜನಿಗೆ ಹಾಗೆಯೇ ಹೇಳುವರು. ಪುನಃ ರಾಜನು ೫ ಮಂದಿ ಸ್ತ್ರೀಯರನ್ನು ಕಳಿಸಿಕೊಡುವನು. ಅವರಿಗೂ ಅದೇ ಉತ್ತರ. ಅವರೂ ಹಾಗೆಯೇ ಹೋಗುವರು. ಆದೇ ಉತ್ತರವನ್ನೇ ಅರಸನಿಗೆ ಹೇಳುವರು. ಆಗ ರಾಜನಿಗೆ ಮೋಹವ್ಯಥೆಯು ಹೆಚ್ಚಾಗಿ ಸ್ಮರಜ್ವರದಿಂದ ಸಂತಪ್ತನಾಗುವನು. ಆ ವಿರಹವ್ಯಥೆಯನ್ನು ತಾಳದೆ ಒಡನೆ ಮಂತ್ರಿಯನ್ನು ಕರೆಯಿಸಿ ಬಲಾತ್ಕಾರದಿಂದಾದರೂ ಅವಳನ್ನು ಕರತರಬೇಕೆಂದು ಕಟ್ಟಪ್ಪಣೆಯನ್ನು ವಿಧಿಸಿ ಕಳಿಸುವನು. ಆ ಮಂತ್ರಿಯು ಕಂಡು ದೃಢಭಕ್ತನಾದ ನಿರ್ಮಲನು ಸುವತಿಯನ್ನು ಕರೆದು ನಮಗೆ ಎಂತಹ ಕಷ್ಟವು ಪ್ರಾಪ್ತವಾಯಿತಲ್ಲ? ನಾವೀಗ ಏನುಮಾಡೋಣ? ಈಗ ಸುಮ್ಮನಿರುವದಕ್ಕಿಂತಲೂ ಮಠಕ್ಕೆ ಹೋಗಿ ಗುರುಗಳನ್ನು ಕೇಳಿಬರೋಣ! ಎಂದು ಗುರುಗಳಾದ ಲಿಂಗಪ್ಪಮರಿ (?) ಗಳ ಮಠಕ್ಕೆ ಹೋಗಿ ಕೇಳುವರು. ಆದರೆ ಗುರುಗಳು ಅದಕ್ಕೆ ಯಾವ ಉತ್ತರ ಕೊಟ್ಟರೆಂಬುದನ್ನು ನಾವಿಲ್ಲಿ ಕಾಣಲಾರೆವು. ಮರಳಿ ಬಂದ ತಾಯ್ತಂದೆಗಳು ಮಗಳ ಈ ಅವಸ್ಥೆಗಾಗಿ ಶೋಕವಾಡುವರು. ಅದನ್ನು

ನೋಡಿ ಮಹಾದೇವಿಯು ತನ್ನ ಬುದ್ಧಿಕೌಶಲ್ಯದಿಂದ ಅಪ್ಪ, ಅಪ್ಪ, ಅಂಜಬೇಡಿರಿ, ಅಳುಕಬೇಡಿರಿ, ಬಂದ ಬಂಧನವ ಪರಿಹರಿಸುವ ತಂದೆ ಲಿಂಗಪ್ಪನ ಕೃಪೆಯುಂಟು ಎಂದು ಸಂತವಿಡುವಳು, ಸ್ವಂತ ಯೋಚಿಸುವಳು. [ನಾವು ಹೀಗೆಯೇ ಖಂಡತುಂಡವಾದ ಉತ್ತರವನ್ನು ಕೇಳಿದರೆ ರಾಜನಿಗೆ ಶಾಂತಿಯಾಗದು. ನಮ್ಮ ಸಂಕೋಲೆಯು ಪರಿಹಾರವಾಗದು. ಆವರಂತೆ ಹೋಗಿ ಅವರ ಬೆರಳನ್ನೇ ಅವರ ಕಣ್ಣಿಗೆ ಚುಚ್ಚಬೇಕು] ಎಂದು ಬಗೆದು ಮನೆಗೆ ಬಂದು ಬಲಾತ್ಕಾರ ಮಾಡುವ ಮಂತ್ರಿಯನ್ನು ಕರೆದು, ಅಕ್ಕನೇ ನಿಮ್ಮ ರಾಯನು ನನ್ನನ್ನು ಪ್ರೀತಿಸುವದಾದರೆ ಆತನೇ ಬಂದು ನಮ್ಮ ಮನೆಯನ್ನು ಕಾಣಬೇಕು, ಅಂದರೆ ನಾನು ಅರಮನೆಗೆ ಬರುವೆನು ಎಂದು ಉತ್ತರ ಹೇಳುವಳು. ಈ ಉತ್ತರದಿಂದ ಮಂತ್ರಿಯು ಸಂತುಷ್ಟನಾಗಿ ಹಿಂತಿರುಗಿ ಬಂದು ರಾಜನಿಗೆ ತಿಳಿಸುವನು. ಅರಸನಾದರೂ ಅತ್ಯಂತ ಆನಂದದಿಂದ ಕೂಡಿ ಕೂಡಲೆ ಹೊರಟು ನಿರ್ಮಲನ ಮನೆಗೆ ಬರುವನು. ಮಹಾದೇವಿಯು ಮನ ಮೆಚ್ಚಿಸಲು ಕಲವು ತೊಡಿಗೆಗಳನ್ನು ಕೊಡಲು ಹೋಗುವನು. ಭಸ್ಮಾಭರಣವುಳ್ಳ ನಮಗೆ ಇವೇಕೆ, ಜೋಡ ಎಂದು ಹೇಳುವಳು. ಮತ್ತು ಒಂದು ಕೈಯಲ್ಲಿ ಲಿಂಗವನ್ನು ಮತ್ತೊಂದು ಕೈಯಲ್ಲಿ ಪತ್ರೆಯನ್ನು ಹಿಡಿದುಕೊಂಡು ಬಂದು ಇಕೋ ಈ ಲಿಂಗಾಂಗಿಗಳ ಸಂಗನಿಮಗೇಕೆ? ನೀವು ಭಕ್ತರಾಗಬಲ್ಲಿರಾ? ಎಂದು ಕೇಳುವಳು. ಅದಕ್ಕೆ ರಾಜನು ಈ ಪಾತೊಂದನ್ನು ಬಿಟ್ಟು ಇನ್ನೇನಾದರೂ ಹೇಳಿದರೆ ಅವನ್ನು ನಾನು ಮೀರುವದಿಲ್ಲ, ಒಮ್ಮೆ ಹೇಳಿ ಮೀರಿದರೆ ಹಸುಮಗುವಿಗೆ ಹಾಲೆರೆಯದೆ ಬಾವಿಯಲ್ಲಿ ಚಲ್ಲಿ ಕೊಲ್ಲಿ ಪಾತಕಸ್ತ್ರೀಯಳ ಗತಿಯು ಎನಗಾಗಲಿ. ತಾಯಿತಂಗಿಗಳನ್ನು ಬೈಯ್ದವರ ತೆಂಗಿನ ಮರವನ್ನು ಕತ್ತರಿಸಿದವರ ಗತಿ ಎನಗಾಗಲಿ. ಜಪವ ಜರಿದವರ ತಪವ ತೆಗಳಿದವರ ಪಾಡು ನನಗಾಗಲಿ. ತಂದೆತಾಯಿಗಳಿಗೆರಡು ಬಗೆದವರ ಪಾತಕವು ನನಗಾಗಲಿ. ಆಗಮವ ಜರಿದು ಅಭ್ಯಾಗತರ ನೋಯಿಸಿದವರ ಗತಿಯು ಎನಗಾಗಲಿ ಎಂದು ಮುಂತಾಗಿ ಆಣೆಯಿಟ್ಟುಕೊಳ್ಳುವನು. ಆದರೂ ಅವನ ಮಾತಿನಲ್ಲಿ ಅವಳಿಗೆ ನಂಬಿಕೆಯಾಗುವದಿಲ್ಲ.

ಲಿಂಗಪೂಜೆಯಿಂದಿದ್ದರು ಜಗಲೆಂದು।
ಜಂಗಮ ಮನೆಗೆ ಬರಲೆಂದು ಇಷ್ಟಕ್ಕೆ।
ಕೈಯೋಲೆ ತಾರೋ ಕೌಶಿಕಾ॥

ಎಂದು ತಾನು ಹಾಕುವ ಕರಾರುಗಳಿಗೆ ಕೈಯೋಲೆಯನ್ನು ಕೇಳುವಳು. ಈ ಕೈಯೋಲೆಯನ್ನು ಕೊಟ್ಟರೆ ಮಾತ್ರ ಅರಮನೆಗೆ ಬರುವೆನು ಎಂದು ಹೇಳುವಳು. ಆದರೆ ಅದಕ್ಕೆ ಆತನು ಕೈಯೋಲೆಯನ್ನು ಕೊಟ್ಟನೋ ಇಲ್ಲೋ ಇಲ್ಲಿ ಅದಾವುದೂ ಉಲ್ಲೇಖವಾಗಿಲ್ಲ. ಬಹುಶಃ ಆ ಶ್ಲೋಕಗಳನ್ನು ಬರಕೊಳ್ಳುವವರು ಬಿಟ್ಟು ಬಿಟ್ಟಿರಬೇಕು. ಆದರೆ ಅಕ್ಕನು ಮುಂದೆ ಅರಮನೆಗೆ ಹೋಗುವದರಿಂದ ಆತನು ಕೈಯೋಲೆಯನ್ನು ಕೊಟ್ಟಿರಲೇಬೇಕು. ಆಮೇಲೆ ಅಕ್ಕನು ಹೊರಡುವಾಗ ತನ್ನ ತಾಯ್ತಂದೆಗಳ ಅಡಿಗಳಿಗೆ ಪೊಡಮಡುವಳು. ಆಗವರು ಏನಾದರೂ ಮದುವೆಯಾಗಲು ಒಪ್ಪಬೇಡೆಂದು ಹೇಳಿದರಲ್ಲದೆ, ನಿನ್ನನಗಲಿ ನಾವೆಂತು ವಾಸಿಸೋಣ ಎಂದು ಕಂಬನಿದುಂಬಿ ದುಃಖಿಸುವರು. ಅಕ್ಕನು ಅವರನ್ನು ಸಂತೈಸಿ ಇವರೂ ನನ್ನ ಬೆಂಬಳಿವಿಡಿದು ಬರಬಹುದೆಂದು ಭಾವಿಸಿ ನೀವು ನನ್ನೊಡನೆ ಬರಲಾಗದೆಂದು ಜಂಗಮರ ಮತ್ತು ಜನರ ಆಣತಿಯನ್ನಿಡುವಳು. ಇಟ್ಟು ಹೊರಡುವಳು. ಹೊರಡುವಾಗ ರಾಜನು ತಾಯ್ತಂದೆಗಳಿಗೆ ತೆರವನ್ನು ಕೊಡಬೇಕೆಂದು ಕೆಲವು ಸಂಪತ್ತನ್ನು ತಂದು ಮುಂದಿಡುವನು. ಅವನ್ನು ಅಕ್ಕನು ನೋಡಿ ಶಿವನು ನಮಗೆ ಕೊಡುವವನಿರಲು ಇದೇನು ನಿನ್ನ ಮೋಹದಾಟ! ಇದು ಬೇಡ. ಇದೇ ಮೊದಲನೆಯದಾದ ತಪ್ಪು ಎಂದು ಹೇಳುವಳು. ಅರಮನೆಗೆ ಹೊರಟು ಹೋಗುವರು. ಅಲ್ಲಿ ಇವಳಿಗೆ ಒಂದು ಪ್ರತ್ಯೇಕ ಮನೆಯನ್ನೇರ್ಪಡಿಸುವರು. ಕೆಲವು ಸಖಿಯರನ್ನು ನೇಮಿಸುವರು.

ಇತ್ತ ರಾಜನ ಮನಸ್ಸಿನಲ್ಲಿ ವಿವಾಹ ಸಾಹಿತ್ಯವನ್ನು ಸಜ್ಜುಗೊಳಿಸಬೇಕೆಂಬ ಸಂಭ್ರಮ. ಅತ್ತ ಅಕ್ಕನ ಮನವಲ್ಲಿ ಅಷ್ಟರಲ್ಲಿಯೇ ಇನ್ನೆರಡು ಅಪರಾಧಗಳನ್ನು ಮಾಡಹಚ್ಚಿ ಹೊರಗಾಗಬೇಕೆಂಬ ಕುತೂಹಲ. ಹೀಗಿರಲು ಒಂದು ದಿನ ಅಕ್ಕನು ಶಿವಪೂಜೆಯಲ್ಲಿ ತಲ್ಲೀನರಾಗಿರುವಳು. ಆಗ ರಾಜನು ಮೋಹಾವೇಶದಿಂದ ಬಂದು ಬಹು ತಪಸಿನೊಂದೆಯೆಂದು ತಲೆಯಮೇಲೆ ಕೈಯಿಕ್ಕುವನು. ಅದನ್ನು ತಿಳಿದು ಇದೇನು ಶಿವಪೂಜೆಯ ಸಮಯವಲ್ಲಿ? ಎಂದು ಕೋಪದಿಂದ ಉರಿದಿದ್ದು ಹೀಗೆಲ್ಲ ವರ್ತಿಸುವದಾದರೆ ನಾನು ನನ್ನ ಪ್ರಾಣವನ್ನೇ ಬಿಟ್ಟು ಬಿಡುವೆನು ಎಂದು ಎದ್ದುನಿಲ್ಲುವಳು. ಆಗಲೇ ಶಿವನು ಜಂಗಮವೇಷದಿಂದ ಬಂದು ಎದುರಿಗೆ ನಿಲ್ಲುವನು. (ಕೌಶಿಕನು ಶಿವಪೂಜೆಗೆ

ಅಡ್ಡಿಮಾಡಿದ್ದರಿಂದ ಇದು ಎರಡನೇ ತಪ್ಪೆಂದು ಹೇಳುವಳು.) ಅದನ್ನು ನುರಿತು ಎದುರಿಗಿದ್ದ ಜಂಗಮನನ್ನೂ ಅವನೊಡನೆ ಬಂದ ಮಹಾಂತರನ್ನೂ ಸತ್ಕರಿಸತೊಡಗುವಳು. ಅವರೆಲ್ಲರಿಗೂ ಶಿವಪೂಜೆಗೆ ಅಣಿಮಾಡಿ ಅವರನ್ನು ಶಿವಪೂಜೆಗೆ ಕೂಡ್ರಿಸುವಳು. ಆದರೆ ಅವರೆಲ್ಲರೂ ಅವಳ ಆ ದಿವ್ಯರೂಪಕ್ಕೆ ಮನವೆಳಿಸಿದ್ದಾರೆ.

ದೇವರ ಪೂಜೆಯ ಯೆಂದಿದ್ದರು ಮಾಡೀವು।
ಬಾಲೆಯ ರೂಪು ನಿಜರೂಪು ಮಹಂತೋರು।
ಯೋಗ ಜಪವ ಮರೆದಾರು॥

ಆ ಮಹಾಂತರ ಜಪಮಾಲೆಗಳು ಕೈಯಿಂದ ಹಾಗೆಯೇ ಕಳಚಿಬಿದ್ದಿವೆ. ಮಂತ್ರಪಠನವು ನಿಂತು ಹೋಗಿದೆ. ಲಿಂಗ ನೋಟಗಳು ಅಕ್ಕನ ಅಂಗದ ಮೇಲೆ ಬಿದ್ದಿವೆ. ಇಷ್ಟಾದರೂ ಅಕ್ಕನು ಇದಾವುದನ್ನರಿಯದೆ ಸಹಜವಾದ ತನ್ನ ಭಕ್ತಿಭಾವದಿಂದ ಭವಿಗಳು ಮಹಾಂತರು ಮಾಡುವ ಶಿವಪೂಜೆಯನ್ನು ನೋಡಬಾರದೆಂದು ಮರೆಮಾಡುವಳು. ಇದೆಲ್ಲವನ್ನು ನೋಡಿ ಭವಿಯಾದ ಕೌಶಿಕನಿಗೆ ಸಂಶಯವು ಹೆಚ್ಚಿತು—

ಇತ್ತಬಾರೆ ಮಹದೇವಿ ಮತ್ತೊಂದ ಹೇಳುವೆನು।
ಪಟ್ಟೀಯ ನುಳಿದು ಬಿಳಿದುಡೆ ಮಹದೇವಿ।
ನಿನ್ನ ರೂಪು ಕಂಡವರು ಬಿಡುವರೇ॥

ಎಂದು ಹೇಳುವನು. ಇದನ್ನು ಕೇಳಿ ಅಕ್ಕನು ರೇಗಿ, ಏತಕ್ಕೆ ಎಲೆ ರಾಯ, ಕಾಕುವಾತುಗಳಾಡುವದು? ಲೋಕಸಂದ್ಯರ ಮೇಲೆ ನೀಚತನದಲಿ ನುಡಿವುದು ನಿನಗೆ ಲೇಸಲ್ಲ. ಇಲ್ಲಿಗೆ ಸಂದಿದವು ಸಂಪೂರ್ಣ ದೋಷತ್ರಯಗಳು. ನಾನಿನ್ನು ನಸ್ಸಿಜ್ಜೆಯಲಿ ತೆರಳುವೆನು ಎಂದು ಹೋಗುದ್ಯುಕ್ತಳಾಗುವಳು. ಆಗ ಕಾಮುಕನಾದ ಕೌಶಿಕನು ಅವಳ ಸೆರಗು ಹಿಡಿದು ಎಳೆಯುವನು. ಅದಕ್ಕೆ ಇನ್ನೂ ರೇಗಿ ಕೊಂಡು ಉಟ್ಟ ಬಟ್ಟೆಯನ್ನು ತೊಟ್ಟ ತೊಡಿಗೆಯನ್ನು ಬಿಸುಟಿ ನಗ್ನಳಾಗಿ ಹೊಂಟು, ಹೋಗುವಳು. ಅಲ್ಲಿಂದ ಕಲ್ಯಾಣಕ್ಕೆ ಬಂದು ಅಲ್ಲಿ ಅಲ್ಲಮನ ಕರುಣೆಯನು ಪಡೆದು ಶರಣರ ನಿಸ್ಸಂಗ ಸುಖವನನುಭವಿಸಿ ಮುಂದೆ ಶ್ರೀಗಿರಿಗೆ ಬಂದು ಕದಳೀವನ ಹೊಕ್ಕು ನಿಃಕಾಯಳಾಗುವಳು. ಈ ವಾರ್ತೆಯು ಮೊದಲು ಬಸವನಿಗೆ ಬರುವದು. ಆವನು ಆಮೇಲೆ ಕೈಯೋಲೆಯಿಂದ ಎಲ್ಲರಿಗೂ ತಿಳಿಸುವನು. ಹೀಗೆಂದು ಹೇಳಿ ಹಾಡನ್ನು ಪೂರೈಸುವಾಗ—

ದೊಡ್ಡ ದೊಡ್ಡ ಹಾಡು। ದೊಡ್ಡ ಭರಣಿಗೆ ತುಂಬಿ।
ಒಪ್ಪಿ ಹೊನ್ನಿನ ಮುದ್ರಿಕೆಯ ಭರಣಿಯ।
ನಮ್ಮಣ್ಣಯ್ಯನಿಗೊಪ್ಪಿಸಿದೆನೆ ಪದ ನೂರು॥

ಚಿಕ್ಕ ಚಿಕ್ಕ ಹಾಡು। ಚಿಕ್ಕ ಭರಣಿಗೆ ತುಂಬಿ।
ಒಪ್ಪಿ ಚಿನ್ನದ ಮುದ್ರಿಕೆಯ ಭರಣಿಯ।
ನಮ್ಮಣ್ಣಯ್ಯನಿಗೊಪ್ಪಿಸಿದೆ ಪದನೂರು॥

ಕವಯಿತ್ರಿಯು ತಾನು ರಚಿಸಿದ ಹಾಡುಗಳನ್ನು ತಮ್ಮಣ್ಣನಿಗೆ ಅರ್ಪಿಸಿದ್ದಾಳೆ. ಅರ್ಪಿಸುವ ಆನಂದ ಭರದಲ್ಲಿ ಪದ್ಯ ಪ್ರಾಸವನ್ನೇ ಬಿಟ್ಟು ಬಿಟ್ಟಿದ್ದಾಳೆ. ಈ ಹಾಡಿನಲ್ಲಿ ಆರಂಭಕ್ಕಿದ್ದ ಪ್ರಾಸು ಆಮೇಲಿಲ್ಲ. ಕೊನೆಕೊನೆಗಂತೂ ಇಲ್ಲವೇ ಇಲ್ಲ. ಇದಕ್ಕೆ ಈ ಪದ್ಯಗಳೇ ಸಾಕ್ಷಿ. ಒಮ್ಮೊಮ್ಮೆ ಇವು ಪದ್ಯಗಳೇ ಗದ್ಯಗಳೇ ಎಂಬುವಷ್ಟು ಲಂಗವಾಗಿವೆ. ಒಮ್ಮೊಮ್ಮೆ ತೀರ ಕೊರಗಿ ಹೋಗಿವೆ. ಒಮ್ಮೊಮ್ಮೆ ಹಲಕೆಲವು ಪದ್ಯಗಳೇ ಬಿಟ್ಟುಹೋಗಿವೆ. ಇನ್ನು ಶಬ್ದ ವ್ಯತ್ಯಾಸಗಳಿಗಂತೂ ಮಿತಿಯೇ ಇಲ್ಲ. ಪುನರುಕ್ತಿಗಳಂತೂ ಹೆಜ್ಜೆಹೆಜ್ಜೆಗೆ ತುಂಬಿಕೊಂಡಿವೆ. ಇವೆಲ್ಲ ಕಾರಣಗಳಿಂದ ಈ ಪದ್ಯದ ಭಾವವನ್ನು ಮಾತ್ರ ನಾವು ಎತ್ತಿಗೊಳ್ಳಬಹುದೇ ಹೊರತು ಭಾಷೆಯನ್ನು ತಿದ್ದಿ ಸರಿಪಡಿಸುವದು ತುಂಬಾ ಕಷ್ಟ.

ಈ ಹಾಡಿನಲ್ಲಿರುವ ಚರಿತ್ರೆಯನ್ನೂ ಹರಿಹರದೇವನ ರಗಳೆಯಲ್ಲಿ ಹೇಳಿದ ಚರಿತ್ರೆಯನ್ನೂ ಪರಿಶೀಲಿಸಿದರೆ ಕೆಳಗಿನಂತೆ ಕೆಲವು ಹೆಚ್ಚು ಕಡಿಮೆಗಳನ್ನು ಕಾಣಬಹುದು. ಹರಿಹರನ ರಗಳೆಯಲ್ಲಿ ಗುಪ್ತಗಣನಾಥನ ಕಾಲು ರುದ್ರಕನ್ನಿಕೆಗೆ ಸೋಂಕಿದೊಡೆ ಅವಳು ಭವಿಯೆಂದು ಜೈಯುವಳು. ಅದಕ್ಕೆ ಪಾರ್ವತಿಯೇ ರುದ್ರಕನ್ನಿಕೆಗೆ ಶಪಿಸುವಳು. ಇಲ್ಲಿ ರುದ್ರಕನ್ನಿಕೆಯ ಶಿರಗು ಪ್ರಮಥರಿಗೆ ಸೋಂಕಿ ಅವರಿಂದ ಶಪ್ತಳಾಗುತ್ತಾಳೆ. ಹರಿಹರನ ಕೌಶಿಕನು ಮಹಾದೇವಿಯನ್ನು ಮನೆಯ ಬಾಗಿಲಲ್ಲಿ ಕಾಣುತ್ತಾನೆ. ಇಲ್ಲಿ ಊರ ಹೊರಗಿನ ವನದಲ್ಲಿ ಕಾಣುತ್ತಾನೆ. ಹರಿಹರನಂತೆ ಇಲ್ಲಿಯೂ ಮೂರು ಕರಾರುಗಳಿವೆ. ಆದರೆ ಅವು ಇಲ್ಲಿ ಲಗ್ನಕ್ಕಿಂತಲೂ ಮೊದಲೇ ಪರೀಕ್ಷಿಸಲ್ಪಡುತ್ತವೆ. ರಗಳೆಯಲ್ಲಿ ಲಗ್ನವಾದ ಮೇಲೆ ಪರೀಕ್ಷಿಸಲ್ಪಡುತ್ತವೆ. ಮೂರನೆಯ ತಪ್ಪು ಘಟಿಸುವಾಗ ರಗಳೆಯಲ್ಲಿ ಶಿವನು ಜಂಗಮನಾಗಿ ರಾತ್ರಿಯಲ್ಲಿ ಮಲಗಿದಾಗ ಬರುತ್ತಾನೆ. ಇಲ್ಲಿ ಮಲಗಿದ

ಮುನ್ನ ಪೂಜೆಯ ವೇಳೆಗೆ ಸಂಗಿ ಸಮಯಕ್ಕೆ ಸಕಾರಣವಾಗಿ ಬರುತ್ತಾನೆ. ಈ ವಿಚಾರವಾಗಿ ನಡೆದ ಸಂಗತಿಯೂ ಭಿನ್ನವಾಗಿದೆ. ಇವಿಷ್ಟು ಮುಖ್ಯವಾದವುಗಳು. ಇವುಗಳಲ್ಲಿ ಯಾವುದು ಸಹಜವಾದುದು ಸಮಂಜಸವಾದುದು ಎಂಬ ವಿಚಾರವನ್ನು ವಾಚಕರ ನಿರ್ಣಯಕ್ಕೆ ಬಿಡುತ್ತೇನೆ.

ಈ ಹಾಡಿನಲ್ಲಿ ಹಿಂದೆ ಹೆಣ್ಣು ಮಕ್ಕಳಿಗಿರುವ ಸಾಹಿತ್ಯಪ್ರೇಮ, ಸಚ್ಚರಿತ್ರೆಗಳಲ್ಲಿ ಒಲವು, ಎಷ್ಟಿದ್ದವೆಂಬುದು ವ್ಯಕ್ತವಾಗುತ್ತದೆ. ಕವಯಿತ್ರಿಗಳಾಗಬೇಕೆಂಬ ಹಂಬಲವಿಲ್ಲದಿದ್ದರೂ ಸಚ್ಚರಿತ್ರೆಗಳನ್ನು ಹಾಡುಗಟ್ಟಿ ಹಾಡುವ ಹಂಬಲವಿದೆ; ಹಾರ್ದಿಕೆಯಿದೆ. ಇಂತಹ ಹಾಡುಗಳು ಸಾಹಿತ್ಯ ಶ್ರೇಣಿಗೆ ಸೇರದಂತಿದ್ದರೂ ನಿಜವಾದ ಘಟನೆಗಳನ್ನು ತಿಳಿಯಲು ಕೊಂಚ ಉಪಕಾರಕಗಳಾಗುವಂತಿವೆ. ಪದ ಬರೆದು ಕೊಟ್ಟ ರಾಚಮ್ಮನ ಉಪಕಾರ ಸ್ಮರಣೆಯ ಪದ್ಯಗಳನ್ನು ಓದಿದರೆ ಬರೆಯಿಸಿಗೊಂಡವಳಿಗೆ ಆದ ಆನಂದವು ನಮ್ಮಿಂದ ಹೇಳಲಸಾಧ್ಯ. ವಿವಾದಾಸ್ಪದವಾದ ಅಕ್ಕನ ಚರಿತೆಯ ನಿಜಾಂಶವೇನೆಂದು ತಿಳಿಯಲು ಇದೂ ಕೊಂಚ ಉಪಕಾರಕವಾಗಬಹುದಲ್ಲವೇ?

ಸಂತೋಷ.

(ಲೇ.—ಶ್ರೀ ಸಂಗಮೇಶ್ವರ ದೇವರು ಹಿಕಾರಿಪೂರ ಶಿವಯೋಗಾಶ್ರಮ)

'ಸದಾ ಸಂತೋಷ ಚಿತ್ತಾನಾಂ। ಸಂಪದಸ್ತು ಪದೇಪದೇ'

(ಹಾನಗಲ್ಲ ಶ್ರೀಗಳವರ ಉಕ್ತಿ.)

'ಶಾಚ, ಸಂತೋಷ ತಪಃ ಸ್ವಾಧ್ಯಾಯ ಈಶ್ವರ ಪ್ರಣಿಧಾನಾನಿ ನಿಯಮಾಃ (ಪಾತಂಜಲಯೋಗಸೂತ್ರ)

ದುಃಖೇಷ್ವ ನುದ್ವಿಗ್ನಮನಾಃ। ಸುಖೇಷುವಿಗತಸ್ಪೃಹಃ।
ವೀತರಾಗಭಯಕ್ರೋಧಃ। ಸ್ಥಿತಧೀರ್ಮುನಿರುಚ್ಯತೆ॥

(ಭಗವದ್ಗೀತಾ)

ಶ್ರೀಕೃಷ್ಣನ ಉಕ್ತಿಯಂತೆ ಸಮಸ್ತ ಮನುಷ್ಯರು ಸದಾ ಸಂತೋಷದಿಂದಿರಬೇಕೆಂಬುದೇ ಮೇಲಿನ ಶ್ಲೋಕದ್ವಯದ ತಾತ್ಪರ್ಯವಿದೆಯಷ್ಟೇ. ಅನೇಕ ನೀತಿ ಶಾಸ್ತ್ರಗಳಲ್ಲಿ ಇದು ಒಂದು ನೀತಿ ಎಂಬುದಾಗಿ ಹೇಳಲ್ಪಡುವದು. ಈ ಸುಸ್ವಭಾವವನ್ನು ಎಲ್ಲರೂ ಆಚರಣೆಯಲ್ಲಿ ತಂದರೆ ಆರೋಗ್ಯವೃಷ್ಟ್ಯಾ ಬಹು ಲಾಭದಾಯಕವಾಗುವದು. ಮಾನವ ಕೋಟಿಯಲ್ಲಿ ಪರಸ್ಪರ ವಿರುದ್ಧ ಕೃತಿಯುವರು, ಅನೇಕರಿರಬಹುದು. ಕೆಲವು ಮಂದಿ ಜೀವಮಾನದಲ್ಲಿಯೂ ಸಹ ಸುಖಶಾಂತಿಯನ್ನು ತಿಳಿಯಲಾರರು. ಊಟದ ಸಮಯದಲ್ಲಿಯಾಗಲೀ, ಅಥವಾ ಮಿತ್ರರೊಡನೆ ಮಾತಾಡುವಲ್ಲಿಯಾಗಲಿ, ಸೇವಕರ ಸಂಗಡವಾಗಲಿ, ಯಾವಾಗಲೂ ಸಿಡಿಮಿಡಿಗುಟ್ಟುತ್ತಲೇ ಇರುವರು. ಸದಾ ಜಗಳಗಂಟಿಗರಾಗಿ 'ಬೆಂಕಿಬೇತಾಳನಂತೆ' ಇರುವರು. ಇಂತಹ ಜನರು ಪಂಚಪಕ್ವಾನ್ನಗಳನ್ನು ಯಥೇಷ್ಟವಾಗಿ ಉಂಡರೂ ಯಾವಾಗಲೂ ಒಣಗಿಕೊಂಡೇ ಇರುವರು. ಚಿಂತೆ ಮತ್ತು ಕೋಪಾಗ್ನಿಯು ಮನುಷ್ಯನಲ್ಲಿದ್ದರೆ ಸಾಕು, ಅವನನ್ನು ಅಧಃಪತನಕ್ಕೆ ಕೆಡುವುತ್ತವೇ ವಿನಾ ಉನ್ನತ ಸ್ಥಾನಕ್ಕೆ ಒಯ್ಯಲಾರವು ಇಂತಹ ಮನುಷ್ಯನಿಂದ ಸಮಾಜದ ಸುಧಾರಣೆಯು ಏನು ತಾನೇ ಸಾಧ್ಯವಾದೀತು? ಅವನು ತಿಂದ ಅನ್ನವೂ ಸಹ ಜೀರ್ಣಿಸುವದಿಲ್ಲ ಅನು ಜೀರ್ಣಿಸದಿದ್ದರೆ ಶರೀರವು ಪುಷ್ಟಿಯನ್ನು ಹೊಂದದೆ ಕಾಷ್ಠದಂತೆ ಯಾವಾಗಲೂ ಕೃಶವಾಗಿರುತ್ತದೆ. 'ಅಶಾಂತಸ್ಯ ಕುತ ಸುಖಂ' ಎಂಬ ಭಗವಂತನ

ಮಾತಿನಂತೆ ಮನಸ್ಸು ಸಮಾಧಾನವಿಲ್ಲದವರಿಗೆ ಸುಖ ಮತ್ತು ಶಾಂತಿ ಇವು ಸ್ವಪ್ನದಲ್ಲಿಯೂ ದುರ್ಲಭವಾಗಿರುವವು.

ಕಾರಣ 'ಸಂತೋಷಂ ಜನಯೇತ್ ಪ್ರಾಜ್ಞಃ। ತದೇವೇಶ್ವರಪೂಜನಂ' ಎಂಬ ಉತ್ತಮವಾದ ಉಕ್ತಿಯಂತೆ ತಾನು ಸದಾ ಸಂತೋಷ ಚಿತ್ತನಾಗಿರಬೇಕು. ಇದಲ್ಲದೆ ಇತರರಿಗೂ ಸಾಧ್ಯವಾದ ಮಟ್ಟಿಗೆ ಸಂತೋಷವನ್ನುಂಟುಮಾಡುತ್ತಿರಬೇಕು. ಇದೇ ಈಶ್ವರ ಪೂಜೆಯು. ಇದರಿಂದಲೇ ಪರಮಾತ್ಮನು ಪ್ರೀತನಾಗುವನು. ಇರಲಿ. ಇನ್ನೂ ಸ್ವಲ್ಪ ಮುಂದಾಲೋಚನೆಯನ್ನು ಮಾಡಿ ನೋಡುವಾ. ಯಾವದು ಅಂದರೆ ಪ್ರಕೃತದಲ್ಲಿ ರೋಗವೆಂಬುದೇ ಒಂದು ದುಃಖ ಎಂಬುದಾಗಿ ಊಹಿಸೋಣ. ಆ ದುಃಖವಲ್ಲಿ ಎರಡು ಭಾಗಗಳನ್ನು ಕಲ್ಪಿಸಬಹುದು. ಒಂದು ಶಾರೀರಿಕವೆಂತಲೂ, ಒಂದು ಮಾನಸಿಕವೆಂತಲೂ ಎರಡು ಪ್ರಕಾರ ಸಂತಾಪವನ್ನುಂಟುಮಾಡುವ ಜ್ವರಾದಿಗಳು ಶಾರೀರಕವು. ಇನ್ನು ಚಿಂತೆ, ಭಯ, ಕ್ರೋಧ ಇವೇ ಮೊದಲಾವುಗಳು ಮಾನಸಿಕ ರೋಗಗಳು. ಈ ಶಾರೀರಕ ಮತ್ತು ಮಾನಸಿಕ ರೋಗಗಳಿಂದ ಮನುಷ್ಯನ ಪ್ರಕೃತಿಯು ಕ್ರಮೇಣ ಕ್ಷೀಣವಾಗುತ್ತ ಬರುತ್ತದೆ. ಇವೆಲ್ಲವುಗಳು ನನ್ನ ಸ್ವಂತ ಅನುಭವದ ಮಾತಾಗಿದೆ. ಇರಲಿ. ಜೀರ್ಣಕೋಶ ಶ್ವಾಸಕೋಶ ಹೃದಯಕೋಶಗಳೆಂಬ ಈ ಕೋಶತ್ರಯಗಳು ಬಲಹೀನವಾಗುತ್ತ ಬಂದರೆ ಶರೀರಕ್ಕೆ ಅಲ್ಪ ಆಯುಷ್ಯವನ್ನುಂಟುಮಾಡುವ ಸಂಭವವಿರುತ್ತದೆ. ಕಾರಣ ಆಯುಷ್ಯವನ್ನೇ ಬಯಸತಕ್ಕ ಮಹನೀಯರು ಅನಾವಶ್ಯಕಗಳಾದ ಚಿಂತೆಗಳಿಗಾಗಲಿ, ಮಿತಿಮೀರಿದ ಆಹಾರ ವಿಹಾರಾದಿಗಳಿಗಾಗಲಿ ಆದಷ್ಟು ಕೆಚ್ಚು ಅವಕಾಶ ಕೊಡದೇ ಸದಾ ಸಂತೋಷದಿಂದಿರಬೇಕೆಂಬುದೇ ಈ ಲೇಖನದ ಬಯಕೆ. ಮತ್ತೂ—

'ಸುಖಸ್ಯದುಃಖಸ್ಯ ನ ಕೋಪಿ ದಾತಾ। ಪರೋ ದದಾತೀತಿ ಕುಬುದ್ಧಿರೇಷಾ। ಅಹಂಕರೋಮೀತಿ ವೃಥಾಭಿಮಾನಃ। ಸ್ವಕರ್ಮ ಜಾಲಗ್ರಥಿತೋ ಹಿ ಲೋಕಃ।' ಮುಖ್ಯಾಭಿಪ್ರಾಯವೇನೆಂದರೆ ಸುಖವಾಗಲಿ ದುಃಖವಾಗಲಿ ಇನ್ನೊಬ್ಬರಿಂದ ನಮಗೆ ಎಂದಿಗೂ ಪ್ರಾಪ್ತವಾಗಲಾರದು. ಸುಖದುಃಖಗಳಿಗೆ ನಮ್ಮ ನಮ್ಮ ಕರ್ಮಗಳೇ ಕಾರಣ ಹೊರತು ಅನ್ಯಥಾ ತಿಳಿಯುವದು ಶುದ್ಧ ಅಜ್ಞಾನವೇಸರಿ. ಮೇಲಿನ ಶ್ಲೋಕದ ರಹಸ್ಯಾರ್ಥವನ್ನು ಪ್ರತಿಯೊಬ್ಬರೂ ಸರಿಯಾಗಿ ಮನನಮಾಡಿ ತಿಳಿದುಕೊಂಡರೆ

ಪ್ರಾಯಃ ಅನಾವಶ್ಯಗಕಳಾದ ಚಿಂತೆಗಳೆಲ್ಲವೂ ಪರಿಹಾರವಾಗಿ ಸಂತೋಷವು ಪ್ರಾಪ್ತಿ ಆಗುವದರಲ್ಲಿ ಯಾವ ಅಭ್ಯಂತರವೂ ಇಲ್ಲ. ಇನ್ನು ಆರೋಗ್ಯ ವೃಷ್ಟಿಗೆ ಸಂತೋಷದಿಂದ ನಮಗೆ ಆಗತಕ್ಕ ಮುಖ್ಯ ಪ್ರಯೋಜನಗಳು ಯಾವವೆಂದರೆ ಆಹಾರ ಜೀರ್ಣಕ್ಕೆ ಅನುಕೂಲಗಳಾಗಿರುವ ಹಲವು ಕಾರಣಗಳಲ್ಲಿ ಸಂತೋಷವು ಅತ್ಯುತ್ತಮವೆಂದು ನಮಗೆ ತಿಳಿಯುತ್ತದೆ. ಅಂದರೆ ಒಳ್ಳೇ ಜೀರ್ಣಶಕ್ತಿಯೂ ಪೂರ್ಣಾರೋಗ್ಯವೂ ನಮ್ಮಲ್ಲಿ ಹೆಚ್ಚುವಂತೆ ಮಾಡುವದೇ ಸಂತೋಷದಿಂದ ಲಭಿಸತಕ್ಕ ಒಂದು ಮುಖ್ಯ ಗುಣ. ಬಹಳ ಹೊತ್ತು ಮನಸ್ಸಿಗೆ ಕೆಲಸ ಕೊಡೋಣದರಿಂದ ತಲೆದೋರುವ ನಿದುಳಿನ ಆಯಾಸವೂ ಕೂಡ ನಗುವದರಿಂದ ಉಪಶಮನವಾಗುತ್ತದೆ. ಇದರಿಂದ ನಿದುಳಿನ ಶಕ್ತಿ ಹೆಚ್ಚಿ ಪುನಃ ಕೆಲಸಕ್ಕೆ ತೊಡಗಿಸುವದು. ಒಳ್ಳೇ ನಗೆಯು ಹರ್ಷೋದ್ರೇಕವನ್ನುಂಟುಮಾಡಿ ನರಗಳೆಲ್ಲಾ ಉಬ್ಬುವಂತೆ ಮಾಡುವದಲ್ಲದೆ ಇದರಿಂದ ನರಗಳ ಶಕ್ತಿಯು ಅಧಿಕವಾಗುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ ಸಂತೋಷವೇ ಶಾಶ್ವತವಾದ ಯೌವನವು. ಚಿಂತೆಯೇ ಮುಪ್ಪು. ಆದ್ದರಿಂದ ಆಯುರಾರೋಗ್ಯಕಾಮಿಗಳು, ಈ ಸಂತೋಷವೆಂಬ ತತ್ವವನ್ನು ಚನ್ನಾಗಿ ತಿಳಿದು ಹೆಚ್ಚು ಹೆಚ್ಚು ಆಚರಣೆಯಲ್ಲಿ ತಂದವರಿಗೆ ಆರೋಗ್ಯ, ಸೌಭಾಗ್ಯ, ಆಯುಷ್ಯ, ಕ್ರಾಂತಿ, ಶಾಂತಿ, ತುಷ್ಟಿ, ಪುಷ್ಟಿ ಇವೆಲ್ಲವುಗಳೂ ಸುಗಮವಾಗಿ ಪ್ರಾಪ್ತವಾಗುತ್ತವೆಂದು ಹೇಳಿ ಈ ಚಿಕ್ಕ ಲೇಖವನ್ನು ತಮ್ಮ ಮುಂದೆ ಇಟ್ಟು ವಿರಮಿಸುವೆನು.

ಸಂಗೀತದಲ್ಲಿ ಶ್ರೀ ಬಸವಣ್ಣನವರ ವಚನಗಳು.

(ಲೇ—ಶ್ರೀ ಸಂಗಮೇಶ್ವರ ದೇವರು ಹಿಕ್ಕಾರಿಪುರ ಶಿವಯೋಗಾಶ್ರಮ)

ರಾಗ. ಆರಭಿ.—ತಾಲ. ಝಂಪಾ.

ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ। ಎನ್ನ ಒಡಲಿಂಗೆ ಎನ್ನ ಮಡದಿಮಕ್ಕಳಿಗೆಂದು। ಕುದಿದೆನಾದರೆ। ಎನ್ನ ಮನಕ್ಕೆ ಮನವೇ ಸಾಕ್ಷಿ ॥ಪ॥

"ಅಶನೇ ಶಯನೇ ಯಾನೆ। ಸಂದಕೇ ಸಹಭೋಜನೆ।
ಸಂಚರಂತಿ ಮಹಾಘೋರೆ। ನರಕೆಕಾಲಮುಷ್ಟಮಯಂ ॥"

ಭವಿಯಾದ ಬಿಜ್ಜಳನ। ಗದ್ದುಗೆಯ ಕೆಳಗೆ। ಕುಳಿದವ ಒಲ್ಲೆ ಸಿಹಸನೆಂಬರಯ್ಯ ಪ್ರಮಥರು। ಕೊಡುವೆನುತ್ತರವನವರಿಗೆ। ಕೂಡಲಸಂಗಮದೇವ ಹೊಲೆ ಹೊಲೆಯರ ಮನೆಯ। ಹೊಕ್ಕಾವರೆಯು ॥೧॥ ಪಲಿ ಕೈಕೂಲಿಯ ಮಾಡಿದರೆಯು। ನಿಮ್ಮ ನಿಲವಿಂಗೆ ಕುದಿವೆನಲ್ಲದೆ। ಎನ್ನೊಡಲಪಸರಕ್ಕೆ ಕುದಿದೆನಾದರೆ। ತಲೆಂಡ ಕೂಡಲಸಂಗಮದೇವ ॥೨॥

ರಾಗ. ಬಾಗೇಶ್ರಿ.—ತಾಲ. ಜಂಪಾ.

ಜಾಲಿ. (ಗಾವ್ಯೇ ಬಾಗೇಸರಿ) ಎಂಬಂತೆ.

ಎಮ್ಮವರು ಬಿಸಗೊಂಡರೆ। ಶುಭಲಗ್ನವೆನ್ನಿರಯ್ಯ। ರಾಶಿಕೂಟ ಋಣಸಂಬಂಧ। ಉಂಟೆಂದು ಹೇಳಿರಯ್ಯ। ॥ಪ॥ ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯ। ನಾಳಿನ ದಿನಕ್ಕಿಂದಿನ ದಿನ॥ ರಿಸನಿದಾನಿಸಾ। ಮಗಾ। ಮಧಾ। ನಿದಮಗರಿಸಾ। ॥೧॥ ಲೇಸೆಂದು ಹೇಳಿರಯ್ಯ। ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯ॥ ರಿಸನಿದಾನಿಸಾ। ಮಗಾ। ಮಧಾ। ನಿದಮಗರಿಸ ॥೨॥

ಬಾಗೇಶ್ರಿ. ರಾಗ--ತ್ರಿತಾಲ.

ಚಾಲಿ (ಜೈನ ನಹೀ ಜೈತೊ)

ಸುಡಲೀ ಮನವೆನ್ನ । ನುಡುಹನವಾಡಿತ್ತು । ನಡೆವಲ್ಲಿ ನುಡಿವಲ್ಲಿ । ಅಧಿಕನೆಂದಿನಿಸಿತ್ತು ॥ಪ॥ ಬೆಡಗಿನಕೀಲ । ಕಳೆದು ಕೆಡೆದ ಬಳಿಕ । ಕಡಗೂಪ ಮುಡದಿ ತಾ ಮುಟ್ಟಲಮ್ಮಳು ॥೧॥ ಒಡಲನುರಿಕೊಂಬುದು । ಒಡವೆಯನರಸು ಕೊಂಬ । ಕಡುಗೂಪ ಮುಡದಿಯ । ಮತ್ತೊಬ್ಬ ಜನ್ನಿಗ ಕೊಂಬ ॥೨॥ ಮುನ್ನ ಮಾಡಿದ ಕರ್ಮ । ಬೆನ್ನ ಬಿಡದನ್ನಕ್ಕ । ಇನ್ನು ನಾಡಿದರೊಳವೆ । ಕೂಡಲಸಂಗಮದೇವ ॥೩॥

ರಾಗ—ಕಾಫಿ. ತ್ರಿತಾಲ.

ಚಾಲಿ (ಮದನಸಜವಿಲಾ.)

ಅರ್ಘವನರ್ಘವ ಮಾಡಿ । ಕೋಳಾಹಳಂಗೈವುತ್ತಿರಲಿ । ಹುಟ್ಟದ ಮಕ್ಕಳ ನವಖಂಡವ ಮಾಡಿ । ಕಡಿವುತ್ತಿರಲಿ ॥ಪ॥ ಮುಟ್ಟಿದ ಸ್ತ್ರೀಯ ಕಣ್ಣ ಮುಂದೆ । ಕುಭಿಮಾನಂಗೊಂಡು । ನೆರೆವುತ್ತಿರಲಿ ॥೧॥ ಇಂತೀತ್ರಿವಿಧವು । ಹೊರಗಣವು । ಇನ್ನೆನ್ನಂಗದ ಮೇಲೆ ಬರಲಿ ॥೨॥ ಹಿಡಿಖಂಡವ । ಕೊಯ್ಯಲಿ । ಇಕ್ಕುವ ಶೂಲ ಪ್ರಾಪ್ತಿಯಾಗಲಿ । ಹಃಕೊಂದೆಸೆ । ಹನ್ನೊಂದೆಸೆಯಾಗಿ । ಮಾಡುತ್ತಿರಲಿ ॥೩॥ ಮತ್ತೆಯೂ ಲಿಂಗಾರಾಧನೆ ಮಾಡುವೆ । ಜಂಗಮಾರಾಧನೆ ಮಾಡುವೆ । ಪ್ರಸಾದಕ್ಕೆ ತಪ್ಪೆ ॥೪॥ ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದರೆ। ನೀನಂದೇ ಮೂಗು ಕೊಯ್ಯಿ। ಕೂಡಲಸಂಗಮದೇವ ॥೫॥

ರಾಗ—ದುರ್ಗಾ, ಝಂಪಾ.

ಮಾಡಿನೀಡಿ ಲಿಂಗವ । ಪೂಜಿಸಿಹನೆಂಬರು । ನೀವುಕೇಳಿರೋ । ಹಾಗದ ಕೆರಹ ಹೊರಗೆ ಕಳೆದು । ದೇಗುಲಕ್ಕೆ ಹೋಗಿ । ನಮಸ್ಕಾರವ ಮಾಡುವನಂತೆ ॥ಪ॥ ತನ್ನಕೆರಹಿನ ಧ್ಯಾನವನಲ್ಲದೆ। ದೇವರ ಧ್ಯಾನವಿಲ್ಲ। ಧನವಸಿರಿಸಿದಿರಾ । ಇರಿಸಿದರೆ । ಭವ ಬಪ್ಪುದು ತಪ್ಪದು । ಕೂಡಲ ಸಂಗನ ಶರಣರಿಗೆ । ಸವಿಸಲೇಬೇಕು ॥೧॥

ರಾಗ—ಭೀಮಪಲಾಸ, ತ್ರಿತಾಲ.

ಅಂಜಿದರಾಗದು । ಅಳುಕಿದರಾಗದು । ವಜ್ರ ಪಂಜರದೊಳಗಿದ್ದರೆ ಆಗದು ॥ಪ॥ ತಪ್ಪದೆಲವೋ ಲಲಾಟಲಿಖಿತ । ಕಕ್ಕುಲತೆಬಟ್ಟರು ಆಗದು ನೋಡಾ ॥೧॥ ಧೃತಿಗೆಟ್ಟು ಮನಧಾತು । ಗೆಟ್ಟರಿ ಅಪ್ಪದು । ತಪ್ಪದು ಕೂಡಲಸಂಗಮದೇವ ॥೨॥

ರಾಗ—ಬಾಗೇಶ್ರೀ, ಝಂಪಾ.

ಚಾಲಿ (ನಂಬು ನಂಬೆಲೋ)

ಸಮುದ್ರ ಘನವೆಂಬೆನೆ । ಧರೆಯಮೇಲಡಗಿತ್ತು । ಧರೆಯು ಘನವೆಂಬೆನೆ । ಫಣಾಮಣಿಮೇಲಡಗಿತ್ತು ॥ಪ॥ ನಾಗೇಂದ್ರ ಘನವೆಂಬೆನೆ । ಪಾರ್ವತಿಯ ಕೆರುಕುಣಿಯ ಮುದ್ರೆಯಾಗಿತ್ತು ॥೧॥ ಪಾರ್ವತಿಯು ಘನವೆಂಬೆನೆ । ಪರಮೇಶ್ವರನ ಅರ್ಧಾಂಗಿ ॥ ಅಂಥ ಪರಮೇಶ್ವರನು ಘನವೆಂಬೆನೆ । ನಮ್ಮ ಕೂಡಲಸಂಗನ ಶರಣರ । ಮನದ ಕೊನೆಯ ಮೇಲಡಗಿದನು ॥೨॥

ಶಿವಾನುಭವ ಪತ್ರಿಕೆ.

(ಸಂಪಾದಕ)

ಶಿವಾನುಭವ ಪತ್ರಿಕೆಯು ೧೨ನೆಯ ವರುಷವು ಈ ಸಂಚಿಕೆಗೆ ಮುಗಿಯಿತು. ಮತ್ತು ಮುಂದಿನ ಸಂಚಿಕೆಯಿಂದ ಅದರ ೧೩ನೆಯ ವರುಷವು ಪ್ರಾರಂಭವಾಗುತ್ತದೆ. ಶಿವಾನುಭವವು ಶಿವಶರಣರ ಮಾರ್ಗವನ್ನೂ ಅವರ ವಿಚಾರಗಳನ್ನೂ ಜನರ ಮುಂದೆ ಇಡುವ ತನ್ನ ಧ್ಯೇಯವನ್ನು ಬಿಡದೆ ಅದಕ್ಕೋಸ್ಕರ ಈ ವರೆಗೆ ಪ್ರಯತ್ನಿಸುತ್ತ ಬಂದಿರುತ್ತದೆ. ಈ ಕಾರ್ಯವನ್ನು ಇನ್ನೂ ಹೆಚ್ಚಿಗೆ ಬಲವಾಗಿ ಸಾಗಿಸಲು ಅದು ಇಚ್ಛೆಯನ್ನು ತಾಳಿದೆ. ವೀರಶೈವ ಸಮಾಜಕ್ಕೆ ಸಂಬಂಧಿಸಿದ ಮತ್ತು ಇನ್ನೂ ಸಂಶೋಧಿಸಲ್ಪಡತಕ್ಕ ರಾಜಕೀಯ ವಾಙ್ಮಯಾತ್ಮಕ, ಸಾಮಾಜಿಕ ವಿಷಯಗಳು ಅಸಂಖ್ಯಾತವಿರುತ್ತವೆ. ನಮ್ಮ ಈ ಸಂಶೋಧನ ಕಾರ್ಯದಲ್ಲಿ ವಾಚಕರು ಸಹಾನುಭೂತಿಯುಳ್ಳವರಾಗಿ ನಮಗೆ ಸಹಾಯವನ್ನೀಯಬೇಕೆಂದು ನಾವು ಪ್ರಾರ್ಥಿಸುತ್ತೇವೆ.

ಶಿವಾನುಭವ ಗ್ರಂಥಮಾಲಾ ನಂ॥ ೪೭.

ಶಿವಶರಣರ

ಸಂಕೀರ್ಣ ವಚನಗಳು

ಭಾಗ ೧.

(ಗಜೇಶಮಸಣಯ್ಯ, ಚಂದಿಮರಸು ಮತ್ತು ಅರುವಿನ ಮಾರಿತಂದೆಗಳ ವಚನಗಳು.)

ಸಂಪಾದಕ
ಫ. ಗು. ಹಳಕಟ್ಟಿ.

ಹಿತಚಿಂತಕ ಪ್ರಿಂಟಿಂಗ ಪ್ರೆಸ್
ವಿಜಾಪುರ.

ಬೆಲೆ:— ೯ ಆಣೆ.

ಅನುಕ್ರಮಣಿಕೆ.

		ಪುಟ
೧.	ಗಜೇಶಮುಸಣಯ್ಯನ ವಚನಗಳು	೩-೨೦
೨.	ಚಂದಿಮರಸನ ವಚನಗಳು	೨೩-೪೬
೩.	ಅರುವಿನ ಮಾರಿತಂದೆಗಳ ವಚನಗಳು	೪೯-೧೨೦

ಪ್ರಸ್ತಾವನೆ.

ಈ ಗ್ರಂಥದಲ್ಲಿ ನಾವು ಹಿಂದಿನ ಕಾಲದಲ್ಲಿ ಬಹು ಪ್ರಸಿದ್ಧರಾದ ಮೂವರು ವಚನಕಾರರ ವಚನಗಳನ್ನು ಪ್ರಸಿದ್ಧಿಸಿದ್ದೇವೆ. ಅವರು ಗಜೇಶ ಮುಸಣಯ್ಯ, ಚಂದಿಮರಸು ಮತ್ತು ಅರುವಿನಮಾರಿತಂದೆ ಈ ಪ್ರಕಾರ ಇದ್ದಾರೆ. ವೀರಶೈವ ವಾಙ್ಮಯದಲ್ಲಿ ದೊರೆಯುವ ಪ್ರತಿಯೊಂದು ವಚನ ಸಂಗ್ರಹದಲ್ಲಿ ಇವರ ವಚನಗಳು ಬಹುತರ ಉಲ್ಲೇಖಿಸಲ್ಪಡುವದುಂಟು. ವೀರಶೈವರಲ್ಲಿ ಅವರು ಒಳ್ಳೇ ಮಹತ್ಪಿಕರೆಂದು ಪ್ರಸಿದ್ಧಿಯನ್ನು ಹೊಂದಿರುವದರಿಂದ ಅವರ ವಚನಗಳಿಗೆ ಮಹತ್ವದ ಸ್ಥಾನವು ಬಂದಿರುತ್ತದೆ. ಇವರಲ್ಲಿ ಗಜೇಶಮುಸಣಯ್ಯನ ವಚನಗಳಲ್ಲಿ ಸತಿಪತಿ ಭಾವದ ವಚನಗಳು ಹೆಚ್ಚಾಗಿ ಬಂದಿರುತ್ತವೆ. ಅವು ಬಹು ಸೊಬಗುಳ್ಳವು ಇವೆ. ಚಂದಿಮರಸನ ವಚನಗಳಾದರೂ ಬಹು ಸುಂದರವಾದವುಗಳು. ಅರುವಿನಮಾರಿತಂದೆಯ ವಚನಗಳಲ್ಲಿ ಬೆಡಗಿನ ವಚನಗಳೇ ಹೆಚ್ಚಾಗಿರುತ್ತವೆ. ಅವು ಬಹು ಅರ್ಥಬೋಧಕವಾಗಿರುತ್ತವೆ.

ಈ ಮೂವರು ವಚನಕಾರರ ವಚನಗಳು ಇನ್ನೂ ಬಹಳ ಇರಬಹುದು. ಆದರೆ ನಮಗೆ ಉಪಲಬ್ಧವಾದವುಗಳನ್ನಷ್ಟೇ ನಾವು ಇಲ್ಲಿ ವಿಷಯಾನುಸಾರವಾಗಿ ಕ್ರಮಗೊಳಿಸಿ ಅಚ್ಚು ಹಾಕಿದ್ದೇವೆ. ಆದರೆ ಈ ಪ್ರತಿಯೊಬ್ಬನ ವಚನಗಳ ಸಂಖ್ಯೆಯು ಬಹು ಕಡಿಮೆ ನಮಗೆ ದೊರೆತಿರುವದರಿಂದ ಅಷ್ಟೇ ವಚನಗಳನ್ನು ಗ್ರಂಥ ರೂಪಾಗಿ ಅಚ್ಚು ಹಾಕುವದು ಅನಾನುಕೂಲವೆಂದು ತೋರಿದ್ದರಿಂದ ಈ ಮೂವರು ವಚನಕಾರರ ವಚನಗಳನ್ನು ಒಕ್ಕಟ್ಟಿಗೆ ಸಂಗ್ರಹಿಸಿ ಈ ಗ್ರಂಥವನ್ನು ಪ್ರಸಿದ್ಧಿಸಿದ್ದೇವೆ. ಸ್ವಲ್ಪ ಸಂಖ್ಯೆಯುಳ್ಳ ವಚನಕಾರರ ಅನೇಕ ವಚನಗಳು ಇನ್ನೂ ಬಹಳ ದೊರೆಯುತ್ತವೆ. ಅವುಗಳನ್ನು ನಾವು ಯಥಾವಕಾಶವಾಗಿ ಕ್ರಮಗೊಳಿಸಿ "ಸಂಕೀರ್ಣ ವಚನ" ಗಳೆಂದು ಬೇರೆ ಬೇರೆ ಭಾಗಗಳನ್ನಾಗಿ ಮಾಡಿ ಮುದ್ರಿಸಲು ಇಚ್ಛಿಸಿದ್ದೇವೆ.

ನಮಗೆ ದೊರೆದ ವಚನಗಳೆಲ್ಲವೂ ಬಹು ಅಶುದ್ಧವಾದವುಗಳು. ಅವುಗಳನ್ನು ಶಕ್ಯವಿದ್ದಷ್ಟರ ಮಟ್ಟಿಗೆ ತಿದ್ದಿ ಈ ಗ್ರಂಥವನ್ನು ಅಚ್ಚಿಗೆ

ಸಿದ್ಧಪಡಿಸಿರುತ್ತೇನೆ. ಅವರೂ ಅರ್ಥವು ತಿಳಿಯುವಂಥ ಅನೇಕ ವಚನಗಳು ಇದರಲ್ಲಿವೆ. ಇದು ಅನಿವಾರ್ಯವಾದುದರಿಂದ ವಾಚಕರು ಇದಕ್ಕೋಸ್ಕರ ನನ್ನನ್ನು ಕ್ಷಮಿಸಬೇಕು.

ಈ ಗ್ರಂಥದಲ್ಲಿ ಬಂದ ವಚನಕಾರರ ಚರಿತ್ರೆಗಳು ಅವರವರ ವಚನಗಳ ಆರಂಭದಲ್ಲಿಯೇ ಪ್ರಸ್ತಾವನಾರೂಪವಾಗಿ ಕೊಟ್ಟಿದ್ದೇವೆ. ಅವುಗಳನ್ನು ವಾಚಕರು ನೋಡಬೇಕು.

ವಿಜಾಪುರ
ತಾ॥ ೨೬-೮-೧೯೩೮

ಫ. ಗು. ಹಳಕಟ್ಟಿ
ಸಂಪಾದಕ.

ಟೀಕು:— ಪೃಥ್ವಿಜ್ಞಾನ ನೂಸೊಂದು ಸ್ಥಲವಾಚರಣೆಯಲ್ಲಿ ಕೂಡಿ ಹುದೆಂಬುದೀಗ ಪೃಥ್ವಿಜ್ಞಾನ ಪಿಸೀಲಿಕ ಸಂಬಂಧವಾಗಿಹುದೆಂಬ ಶಬ್ದಕ್ಕರ್ಥ. ಅಪ್ಪು ಜ್ಞಾನ ಷಡ್ವಿಧ ಲಿಂಗಾಂಗ ಸ್ಥಲದಾಚರಣೆಯನೊಳಕೊಂಡಿಹುದೆಂಬುದೀಗ ಅಪ್ಪು ಜ್ಞಾನ ಮರ್ಕಟ ಸಂಬಂಧವಾಗಿಹುದೆಂಬ ಶಬ್ದಕ್ಕರ್ಥ. ತೇಜಜ್ಞಾನ ಚಿದಗ್ನಿ ಸ್ವರೂಪವಾಗಿ ಪ್ರಕಾಶಿಸುತ್ತಿಹುದೆಂಬುದೀಗ ತೇಜಜ್ಞಾನ ಅಗ್ನಿಸಂಬಂಧವಾಗಿಹುದೆಂಬ ಶಬ್ದಕ್ಕರ್ಥ. ವಾಯುಜ್ಞಾನ ಚಿದ್ವಾಸನ ಸ್ವರೂಪವಾಗಿಹುದೆಂಬುದೀಗ ವಾಯುಜ್ಞಾನ ಗಂಧಸಂಬಂಧವಾಗಿಹುದೆಂಬ ಶಬ್ದಕ್ಕರ್ಥ. ಆಕಾಶಜ್ಞಾನತಿಭೇದ್ಯವಾದ ಪರಶಿವ ತತ್ವವನವಗ್ರಹಿಸಿ ಹೊರಿ ಇಲ್ಲದೆ ಒಂದೇಯಾಗಿಹುದೆಂಬುದೀಗ ಆಕಾಶಜ್ಞಾನ ವಿಹಂಗ ಸಂಬಂಧವಾಗಿಹುದೆಂಬ ಶಬ್ದಕ್ಕರ್ಥ. ತಮಜ್ಞಾನ ಪರಶಿವ ತತ್ವವನರಿಯಬೇಕೆಂಬ ಏಕಾಗ್ರ ಚಿತ್ತವಳಿರುತ್ತಿಹುದೆಂಬುದೀಗ ತಮಜ್ಞಾನ ಮಾರ್ಜಾಲ ಸಂಬಂಧವಾಗಿಹುದೆಂಬ ಶಬ್ದಕ್ಕರ್ಥ. ಪರಿಪೂರ್ಣಜ್ಞಾನ ರೂಪು ರುಚಿ ತೃಪ್ತಿ ಮೊದಲಾದ ಸಕಲ ಪದಾರ್ಥವ ಲಿಂಗವೇ ಕೈಕೊಂಡು ಭೋಗಿಸಿ ತೃಪ್ತಿಯನೆಯ್ದಿತ್ತೆಂಬ ನೆನಹಿನಲ್ಲಿರುತ್ತಿಹುದೆಂಬುದೀಗ ಪರಿಪೂರ್ಣಜ್ಞಾನ ಕೂರ್ಮ ಸಂಬಂಧವಾಗಿಹುದೆಂಬ ಶಬ್ದಕ್ಕರ್ಥ. ಲಿಂಗಾಂಗ ಸ್ಥಲ ಮೊದಲಾದ ಸರ್ವಾಚಾರ ಸಂಪತ್ತನು ಭೇದಿಸಿ ಅರುಹುತ್ತಿಹುದೆಂಬುದೀಗ ದಿವ್ಯಜ್ಞಾನ ಸರ್ವಮಯವಾಗಿ ನಾನಾ ಭೇದಂಗಳ ಭೇದಿಸುತ್ತಿಹುದೆಂಬ ಶಬ್ದಕ್ಕರ್ಥ. ಶರಣನ ಉನ್ಮನಿ ಸ್ವರೂಪವಾದ ಮನೋಮಧ್ಯದಲ್ಲಿ ಪರಿಪೂರ್ಣಜ್ಞಾನ ಸಮರಸವಾಯಿತ್ತೆಂಬುದೀಗ ಇಂತೀ ಮನಜ್ಞಾನ ಭರಿತನಾಗಿ ಎಂಬ ಶಬ್ದಕ್ಕರ್ಥ ಆ ಶರಣ ದಶವಾಯು ವಿಕಾರದಲ್ಲಿ ಸಂಚರಿಸುತ್ತಿರ್ದ ಮನೋವರ್ತನೆಯ ಸತ್ಕ್ರಿಯಾಚರಣೆಯಿಂದ ಧ್ವಂಸವ ಮಾಡಿದನೆಂಬುದೀಗ ದಶಗುಣ ಮರ್ಕಟನ ಮೆಟ್ಟಿ ನಿಂದು ಎಂಬ ಶಬ್ದಕ್ಕರ್ಥ. ಚಿದಾಕಾಶ ಮಧ್ಯದಲ್ಲಿರ್ದ ಚಿದ್ಘನ ಲಿಂಗವು ತೂರ್ಯಾವಸ್ಥೆಯ ಭಾವದಲ್ಲಿರ್ದ ಶರಣನ ಉನ್ಮನಿ ಸ್ವರೂಪವಾದ ಮನೋಮಧ್ಯದಲ್ಲಿ ತೋಗಿ ಜಿಗುತ್ತಿಹುದೆಂಬುದೀಗ ಬಟ್ಟ ಬಯಲ ತುಟ್ಟ ತುದಿಯ ಸದಾಶಿವ ಮೂರ್ತಿ ಲಿಂಗದ ಕಳೆ ಕಳಕಳಿಸುತ್ತಿದೆ ಚಿತ್ತದ ನನಪಿನಲ್ಲಿ ಎಂಬ ಶಬ್ದಕ್ಕರ್ಥ.

ಲಂ. ಪೃಥ್ವೀಜ್ಞಾನ, ಅಪ್ಪುಜ್ಞಾನ, ತೇಜಜ್ಞಾನ, ವಾಯುಜ್ಞಾನ, ಆಕಾಶಜ್ಞಾನ, ತಮೋಜ್ಞಾನ, ಪರಿಪೂರ್ಣಜ್ಞಾನ, ದಿವ್ಯಜ್ಞಾನ ಇಂತೀ

೮೧. ನಂಜಿನ ಭೂಮಿಯ ಮೇಲೆ ಸಂದೇಹದ ಕವಲು ನೆಟ್ಟು ಮುಂಜುಳ ಮೂರಂಗದ ಮುಂಡಿಯ ನೆಟ್ಟು ಸರಂಗದ ಸುಮನದ ಡೊಂಕರತ ಬೆಂಬರನ ಹಾಕಿ ಗತಿಮತಿಯೆಂಬ ಇಕ್ಕೆಲದ ಸೂರಿಗೆ ನಿಜ ನಿಶ್ಚಯವೆಂಬ ಹುಲು ಒಡುವ ಹಾಕಿ ಏರಿಸಿದಗಳು ಚಿತ್ತಶುದ್ಧವೆಂಬ ಮೂಗುತಿಗೋಲಿನಲ್ಲಿ ನಿಂದಿತ್ತು. ತೊಲಗದ ಕಟ್ಟು ವಿಶ್ವಾಸ ನಿಷ್ಠೆಯಲ್ಲಿ ನಿಂದಿತ್ತು. ಸಂದೇಹ ನಿಂದು ಹಂಜರವೇರಿತ್ತು. ಕಡೆನಡು ಮೊವಲೆನ್ನದ ತ್ರಿಗುಣದ ಕಂತೆ ಕಟ್ಟಿ ಅರಿದು ಮರೆಯದ ಹುಲ್ಲು ಕವಿಸಿತ್ತು. ಮನೆಯಾಯಿತ್ತು. ಮನದ ಕೊನೆಯಲ್ಲಿ ಬಾಗಿಲು ಬಯಲಾಯಿತ್ತು. ಸದಾಶಿವಮೂರ್ತಿಲಿಂಗವು ನಿರಾಳವಾಯಿತ್ತು.

ಟೀಕು:— ಶಿವಜ್ಞಾನೋದಯವಾಗಿ ಸಕಲ ಮಾಯಾಪ್ರಪಂಚು ನಷ್ಟವಾದ ಶರಣನ ಚಿದ್ಭೂಮಿಯಲ್ಲಿ ಎಂಬುದೀಗ ನಂಜಿನ ಭೂಮಿಯ ಮೇಲೆ ಎಂಬ ಶಬ್ದಕ್ಕರ್ಥ. ಆ ಚಿದ್ಭೂಮಿಯಲ್ಲಿ ಸಂಕಲ್ಪ ವಿಕಲ್ಪ ಅಳಿದು ದೃಢಸ್ತಂಭವ ನೆಲೆಗೊಳಿಸಿದನೆಂಬುದೀಗ ಸಂದೇಹದ ಕವಲು ನೆಟ್ಟು ಎಂಬ ಶಬ್ದಕ್ಕರ್ಥ. ಆ ಸದ್ಭಾವದಲ್ಲಿ ನಿರ್ಧಾರವಾದ ಶರಣನು ಶ್ರೀಗುರುಕಾರುಣ್ಯದಿಂ ತನುತ್ರಯಂಗಳಿಗೆ ಚೈತನ್ಯವಾದ ಆತ್ಮತ್ರಯದಲ್ಲಿ ಗುರುಲಿಂಗಜಂಗಮವ ಸಂಬಂಧವ ಮಾಡಿದನೆಂಬುದೀಗ ಮುಂಜುಳ ಮೂರಂಗ ಎಂಬ ಶಬ್ದಕ್ಕರ್ಥ. ಆ ಲಿಂಗತ್ರಯ ಸಂಬಂಧವಾದ ಶರಣನು ಕುಬುದ್ಧಿಯಳಿದು ಸುಬುದ್ಧಿಯನೇ ಕಂಬವ ಮಾಡಿದನೆಂಬುದೀಗ ಮುಂಡಿಯ ನೆಟ್ಟು ಎಂಬ ಶಬ್ದಕ್ಕರ್ಥ. ಆ ಶರಣನ ಕುಮನವಳಿದ ನೇರಿತವಾದ ಸಮರಸವೆಂಬುದೀಗ ಸರಂಗದ ಸುಮನ ಎಂಬ ಶಬ್ದಕ್ಕರ್ಥ. ಅಂತು ಮನಬುದ್ಧಿಗಳೆರಡು ನಷ್ಟವಾದಲ್ಲಿ ಶರಣಲಿಂಗವೆಂಬುಭಯವಳಿದ ಬೆಂಬರನ ಹಾಕಿದನೆಂಬುದೀಗ ಡೊಂಕರತ ಬೆಂಬರನ ಹಾಕಿ ಎಂಬ ಶಬ್ದಕ್ಕರ್ಥ. ಅಂತು ಉಭಯವಳಿದು ಒಂದೇಯಾದ ಶರಣಂಗೆ ಜ್ಞಾನಕ್ರಿಯಾಚಾರವೆಂಬುಭಯವು ಇಕ್ಕೆಲದ ಸೂರಾಯಿತ್ತೆಂಬುದೀಗ ಗತಿಮತಿ ಎಂಬ ಇಕ್ಕೆಲದ ಸೂರಿಗೆ ಎಂಬ ಶಬ್ದಕ್ಕರ್ಥ. ಆ ಜ್ಞಾನಕ್ರಿಯಲ್ಲಿ ತತ್ಪರನಾದ ಶರಣನಾ ಪರಶಿವ ಸ್ವರೂಪನು ಪರಬ್ರಹ್ಮ ಸ್ವರೂಪನು ಎಂಬ ನಿಶ್ಚಯವೀಗ ನಿಜ ನಿಶ್ಚಯ ವೆಂಬ ಹುಲು ಒಡುವ ಹಾಕಿ ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮವೇ ತಾನಾದ ಶರಣನ ಸಕಲ ಕರಣಂಗಳೆಲ್ಲ ಲಿಂಗಕರಣಂಗಳಾಗಿ ಲಿಂಗವಲ್ಲಿ ಏಕಾರ್ಥವಾದವೆಂಬು

ಜ್ಞಾನಂಗಳಲ್ಲಿ ಕಂಡು ದೇಹ ಧರ್ಮಂಗಳನರಿದು ಪಿಂಡಪ್ರಾಣ ಅಂಗ ಲಿಂಗ ಸಂಯೋಗ ಸಂಪದವಲ್ಲಿ ನಿಂದು ನೋಡು. ಸದಾಶಿವಮೂರ್ತಿ ಲಿಂಗದಲ್ಲಿ ಕಳೆ ಬೆಳಗುತ್ತಿವೆ.

ಟೀಕು:— ಪೃಥ್ವೀಜ್ಞಾನ ಭಕ್ತಸ್ಥಲ ಸಂಬಂಧವಾಗಿಹುದೆಂಬುದೀಗ ಪೃಥ್ವೀಜ್ಞಾನವೆಂಬ ಶಬ್ದಕ್ಕರ್ಥ. ಅಪ್ಪುಜ್ಞಾನ ಮಹೇಶ್ವರಸ್ಥಲ ಸಂಬಂಧವಾಗಿಹುದೆಂಬುದೀಗ ಅಪ್ಪು ಜ್ಞಾನವೆಂಬ ಶಬ್ದಕ್ಕರ್ಥ. ತೇಜಜ್ಞಾನ ಪ್ರಸಾದಿಸ್ಥಲ ಸಂಬಂಧವಾಗಿಹುದೆಂಬುದೀಗ ತೇಜಜ್ಞಾನವೆಂಬ ಶಬ್ದಕ್ಕರ್ಥ. ವಾಯುಜ್ಞಾನ ಪ್ರಾಣಲಿಂಗಿ ಸಂಬಂಧವಾಗಿಹುದೆಂಬುದೀಗ ವಾಯುಜ್ಞಾನವೆಂಬ ಶಬ್ದಕ್ಕರ್ಥ. ಆಕಾಶಜ್ಞಾನ ಶರಣಸ್ಥಲ ಸಂಬಂಧವಾಗಿಹುದೆಂಬುದೀಗ ಆಕಾಶಜ್ಞಾನವೆಂಬ ಶಬ್ದಕ್ಕರ್ಥ. ತಮಜ್ಞಾನ ಐಕ್ಯಸ್ಥಲ ಸಂಬಂಧವಾಗಿಹುದೆಂಬುದೀಗ ತಮಜ್ಞಾನವೆಂಬ ಶಬ್ದಕ್ಕರ್ಥ. ಇಂತಪ್ಪ ಸ್ಥಲಕುಲಾದಿಗಳನೊಳಕೊಂಡು ಸರ್ವಾಚಾರವಲ್ಲಿ ಸಂಬಂಧವಾಗಿಹುದೆಂಬುದೀಗ ಪರಿಪೂರ್ಣ ಜ್ಞಾನವೆಂಬ ಶಬ್ದಕ್ಕರ್ಥ. ಅಂತಪ್ಪ ಲಿಂಗಾಂಗಸ್ಥಲಂಗಳ ಭೇದಾದಿ ಭೇದಂಗಳನರುಹಿಸಿಕೊಳ್ಳುತ್ತಿಹುದೆಂಬುದೀಗ ದಿವ್ಯಜ್ಞಾನವೆಂಬ ಶಬ್ದಕ್ಕರ್ಥ. ಇಂತಪ್ಪ ಪರಿಪೂರ್ಣ ಜ್ಞಾನಂಗಳಂ ಸ್ಥಲಸಂಬಂಧಗಳನರಿದು ಎಂಬುದೀಗ ಇಂತೀ ಜ್ಞಾನಂಗಳಲ್ಲಿ ಕಂಡು ಎಂಬ ಶಬ್ದಕ್ಕರ್ಥ. ಇಂತಪ್ಪ ಸರ್ವಾಂಗಲಿಂಗಸಂಬಂಧಿಯಾದ ಶರಣಂಗೆ ದೇಹ ಪ್ರಾರಬ್ಧ ಭೋಗ ನಷ್ಟವಾಗಿ ಲಿಂಗಭೋಗೋಪ ಭೋಗಿಯಾಗಿರ್ಪನೆಂಬುದೀಗ ದೇಹಧರ್ಮವನರಿದು ಎಂಬ ಶಬ್ದಕ್ಕರ್ಥ. ಅಂತಪ್ಪ ಶರಣನ ದೇಹವಳಿದು ಜ್ಞಾನಕಾಯಸ್ವರೂಪವಾಯಿತ್ತೆಂಬುದೀಗ ಪಿಂಡವೆಂಬ ಶಬ್ದಕ್ಕರ್ಥ. ಆ ಶರಣನ ಪ್ರಸಾದವಳಿದು ಲಿಂಗ ಪ್ರಾಣವಾಯಿತ್ತೆಂಬುದೀಗ ಪ್ರಾಣವೆಂಬ ಶಬ್ದಕ್ಕರ್ಥ. ಆ ಶರಣನ ಭಕ್ತೈಕ್ಯಾಂತವಾದ ಷಡ್ವಿಧ ಚಿದಂಗಗಳೆಂಬುದೀಗ ಅಂಗವೆಂಬ ಶಬ್ದಕ್ಕರ್ಥ. ಆ ಚಿದಂಗಗಳಲ್ಲಿ ಸಂಬಂಧವಾದ ಆಚಾರಾದಿ ಮಹಾಲಿಂಗಂಗಳೆಂಬುದೀಗ ಲಿಂಗವೆಂಬ ಶಬ್ದಕ್ಕರ್ಥ. ಇಂತಪ್ಪ ಲಿಂಗಾಂಗವೆರಡರ ಕೂಟವೇ ಅಸಿಪದವಾದ ಕಾರಣ ಸಂಯೋಗವೆಂಬ ಶಬ್ದಕ್ಕರ್ಥ. ಈ ಲಿಂಗಾಂಗ ಸಮರಸ ಕೂಟವ ಮಹದೈಶ್ವರ್ಯದಲ್ಲಿ ಸುಸ್ಥಿರಭಾವಿಯಾಗಿ ನಿಂದು ತನ್ನ ನಿಜ ಸ್ವರೂಪ ಅವಿರಳಜ್ಞಾನವ್ಯಕ್ತಿನಿಂ ನಿರೀಕ್ಷಿಸುತ್ತಿರ್ದ ಶರಣನೆಂಬುದೀಗ ಸಂಪದದಲ್ಲಿ ನಿಂದು ನೋಡು ಸದಾಶಿವಮೂರ್ತಿಲಿಂಗದಲ್ಲಿ ಕಳೆ ಬೆಳಗುತ್ತಿವೆ ಎಂಬ ಶಬ್ದಕ್ಕರ್ಥ.

ದೀಗ ಏರಿಸಿದಗಳು ಎಂಬ ಶಬ್ದಕ್ಕರ್ಥ. ಅಂತು ಕರಣಂಗಳ ಲಿಂಗ ದಲ್ಲಿ ಏಕಾರ್ಥವ ಮಾಡಿದ ಶರಣಂಗೆ ಸಂಕಲ್ಪ ವಿಕಲ್ಪ ಜ್ಞಾನವಿಲ್ಲದ ಸ್ವಸ್ಥವಾದ ಶಿವಜ್ಞಾನವೆಂಬ ಮೂಗುತಿ ಗೋಲಿನಲ್ಲಿ ನಿಂದಿತ್ತೆಂಬುದೀಗ ಚಿತ್ತಶುದ್ಧವೆಂಬ ಮೂಗುತಿಗೋಲಿನಲ್ಲಿ ನಿಂದಿತ್ತೆಂಬ ಶಬ್ದಕ್ಕರ್ಥ. ಅಂತು ಶಿವಜ್ಞಾನದಲ್ಲಿ ನಿರ್ಧರವಾದ ಶರಣನ ಸಕಲ ಕರಣಂಗಳು ಭಿನ್ನ ವರ್ತನೆಗೆ ತೊಲಗದ ಹಾಗೆ ಸದ್ಭಾವದಿಂ ಸಂಬಂಧಿಸಿದನೆಂಬುದೀಗ ಗಳು ತೊಲಗದ ಕಟ್ಟು ಎಂಬ ಶಬ್ದಕ್ಕರ್ಥ. ಅಂತು ಸಕಲ ಕರಣಂಗಳು ಸದ್ಭಾವದಲ್ಲಿ ಸನ್ನಿಹಿತವಾದ ಶರಣನ ಗುರುಲಿಂಗಜಂಗಮದಲ್ಲಿ ವಿಶ್ವಾಸ ನೆಲೆಗೊಂಡಲ್ಲಿ ಸಾಧ್ಯನಾಯಿತ್ತೆಂಬುದೀಗ ವಿಶ್ವಾಸ ನಿಶ್ಚಯದಲ್ಲಿ ನಿಂದಿ ತ್ತೆಂಬ ಶಬ್ದಕ್ಕರ್ಥ. ಆ ತ್ರಿವಿಧ ಭಕ್ತಿಯಲ್ಲಿ ತತ್ಪರನಾದ ಶರಣಂಗೆ ಸಂಕಲ್ಪ ವಿಕಲ್ಪ ನಷ್ಟವಾಗಿ ಜ್ಞಾನಕ್ರಿಯಾಚಾರವೆಂಬ ಹಂಜರ ಸ್ಥಿರ ವಾಯಿತ್ತೆಂಬುದೀಗ ಸಂದೇಹ ನಿಂದು ಹಂಜರವೇರಿತ್ತೆಂಬ ಶಬ್ದಕ್ಕರ್ಥ. ಆ ಜ್ಞಾನಕ್ರಿಯಾಚಾರದಲ್ಲಿ ನಿರ್ಧರವಾದ ಶರಣಂಗೆ ಗುಣತ್ರಯುಂಗಳು ನಷ್ಟವಾಗಿ ಇಷ್ಟ ಪ್ರಾಣ ಭಾವ ಲಿಂಗ ತ್ರಯ ಸಂಬಂಧವಾಯಿತ್ತೆಂಬು ದೀಗ ಕಡೆ ನಡು ಮೊದಲಿನ್ನವ ತ್ರಿಗುಣದ ಕಂತೆ ಕಟ್ಟು ಎಂಬ ಶಬ್ದ ಕ್ಕರ್ಥ. ಅಂತು ಲಿಂಗತ್ರಯ ಸಂಬಂಧವಾದ ಶರಣ ಪರಶಿವತತ್ವವೇ ತನ್ನ ನಿಜವೆಂದರಿದು ಮರೆಯದೆ ಇರ್ದ ಹುಲ್ಲು ಕವಿಸಿತ್ತೆಂಬುದೀಗ ಅರಿದು ಮರೆಯದ ಹುಲ್ಲು ಕವಿಸಿತ್ತೆಂಬ ಶಬ್ದಕ್ಕರ್ಥ. ಆ ಸುಜ್ಞಾನ ಸ್ವರೂಪನಾದ ಶರಣನು ಚಿದ್ಘನಲಿಂಗಕ್ಕೆ ಚಿದ್ಗೃಹವ ಮಾಡಿದ ತನ್ನ ನೆನಹಿನ ಅಗ್ರದಲ್ಲಿ ಎಂಬುದೀಗ ಮನೆಯಾಯಿತ್ತು ಮನದ ಕೊನೆಯಲ್ಲಿ ಎಂಬ ಶಬ್ದಕ್ಕರ್ಥ. ಚಿದ್ಗೃಹವ ಮಾಡಿದ ಚಿದ್ರೂಪನಾದ ಶರಣನ ಉನ್ಮನಿಸ್ವರೂಪವಾದ ಚಿದ್ಭಾವವು ಚಿದ್ಘನ ಲಿಂಗದಲ್ಲಿ ನಿರ್ಭಯಲಾಯಿ ತ್ತೆಂಬುದೀಗ ಬಾಗಿಲ ಬಯಲಾಯಿತ್ತು ಸದಾಶಿವಮೂರ್ತಿಲಿಂಗವು ನಿರಾಳವಾಯಿತ್ತೆಂಬ ಶಬ್ದಕ್ಕರ್ಥ.

೮೨. ಜೀವಜ್ಞಾನ, ಪರಮಜ್ಞಾನ, ಪ್ರಕಾಶಜ್ಞಾನ, ಪ್ರಜ್ವಲಿತ ಜ್ಞಾನ, ಪ್ರಭಾವಜ್ಞಾನ, ತೇಜೋಮಯಜ್ಞಾನ, ಪರಂಜ್ಯೋತಿಜ್ಞಾನ, ದಿವ್ಯಜ್ಞಾನ, ಸರ್ವಮಯಸಂಪೂರ್ಣಂಗಳಲ್ಲಿ, ತೋರುತ್ತಿಹ ತೋರಿಕೆ, ಆಕಾಶ ಮಂಡಲದಲ್ಲಿ ತೋರುವ ಅರುಣನ ಕಿರಣ ಸರ್ವ ಜೀವಜ್ಞಾನ ಪರಿ ಪೂರ್ಣ ದೃಷ್ಟಿಯಾಗಿ ಕಾಂಬ ತೆರನಂತೆ ಎನ್ನ ಪಿಂಡಮಂಡಲದಲ್ಲಿ ದಿವ್ಯ

ತೇಜೋ ವರುಣ ಕಿರಣ ನುಯವಾಗಿ ಬಂದರಲ್ಲಿ ನಿಂದು ಕಾಂಬುದು ಹಲವಾದಂತೆ ಎನ್ನ ಮನದ ಮಂದಿರದಲ್ಲಿ ನಿಂದವ ನೀನೊಬ್ಬ ವಿಶ್ವ ರೂಪಾದೆಯಲ್ಲಾ ಭೇದ್ಯಕ್ಕೆ ಅಭೇದ್ಯನಾದೆಯಲ್ಲಾ ನಿನ್ನನೇನೆಂಬುದಕ್ಕೆ ತೆರಪಿಲ್ಲ. ಭಾಗೀರಥಿಯಂತೆ ಆರು ನಿಂದರೂ ಪ್ರಮಾಣಾದಿಯಲ್ಲಾ. ಎನ್ನ ಮನಕ್ಕೆ ಕಾಷ್ಠಗಟ್ಟಿಯಾಗಿನಿಂದೆಯಲ್ಲಾ ಸದಾಶಿವಮೂರ್ತಿಲಿಂಗವೇ.

ಟೀಕು:— ಶ್ರದ್ಧಾಭಕ್ತಿ ಸಂಬಂಧವಾಗಿಹುದು ಭಕ್ತಿಸ್ಥಲವೆಂಬುದೀಗ ಜೀವಜ್ಞಾನವೆಂಬ ಶಬ್ದಕ್ಕರ್ಥ. ಸಮರಸಭಕ್ತಿ ಸ್ವರೂಪವಾಗಿಹುದು ಐಕ್ಯಸ್ಥಲವೆಂಬುದೀಗ ಪರಮಜ್ಞಾನವೆಂಬ ಶಬ್ದಕ್ಕರ್ಥ. ಭಕ್ತನ ಶ್ರದ್ಧಾ ಭಕ್ತಿಯನೊಳಕೊಂಡು ತೋರುತ್ತಿಹುದು ಆಚಾರಲಿಂಗವೆಂಬುದೀಗ ಪ್ರಕಾಶಜ್ಞಾನವೆಂಬ ಶಬ್ದಕ್ಕರ್ಥ. ಮಹೇಶ್ವರನ ನಿಷ್ಠಾಭಕ್ತಿಯನೊಳ ಕೊಂಡು ತೋರುತ್ತಿಹುದು ಗುರುಲಿಂಗವೆಂಬುದೀಗ ಪ್ರಜ್ವಲಿತ ಜ್ಞಾನ ವೆಂಬ ಶಬ್ದಕ್ಕರ್ಥ. ಪ್ರಸಾದಿಯ ಸಾವಧಾನ ಭಕ್ತಿಯನೊಳಕೊಂಡು ತೋರುತ್ತಿಹುದು ಶಿವಲಿಂಗವೆಂಬುದೀಗ ಪ್ರಭಾವಜ್ಞಾನವೆಂಬ ಶಬ್ದಕ್ಕರ್ಥ. ಪ್ರಾಣಲಿಂಗಿಯ ಅನುಭಾವ ಭಕ್ತಿಯನೊಳಕೊಂಡು ತೋರುತ್ತಿಹುದು ಜಂಗಮಲಿಂಗವೆಂಬುದೀಗ ತೇಜೋಮಯಜ್ಞಾನವೆಂಬ ಶಬ್ದಕ್ಕರ್ಥ. ಶರಣನ ಆನಂದಭಕ್ತಿಯನೊಳಕೊಂಡು ತೋರುತ್ತಿಹುದು ಪ್ರಸಾದ ಲಿಂಗವೆಂಬುದೀಗ ಪರಂಜ್ಯೋತಿಜ್ಞಾನವೆಂಬ ಶಬ್ದಕ್ಕರ್ಥ. ಐಕ್ಯ ಸಮ ರಸ ಭಕ್ತಿಯನೊಳಕೊಂಡು ತೋರುತ್ತಿಹುದು ಮಹಾಲಿಂಗವೆಂಬುದೀಗ ದಿವ್ಯಜ್ಞಾನವೆಂಬ ಶಬ್ದಕ್ಕರ್ಥ. ಇಂತಪ್ಪ ಷಡ್ವಿಧಸ್ಥಲ ಮುಖ್ಯವಾದ ಸರ್ವಾಚಾರ ಸಂಪತ್ತಿನೊಳಗಾದ ಸಕಲವನು ಪರಿಪೂರ್ಣ ಜ್ಞಾನವ ಒಳ ಕೊಂಡಿಹುದೆಂಬುದೀಗ ಸರ್ವಮಯ ಸಂಪೂರ್ಣಂಗಳಲ್ಲಿ ತೋರುತ್ತಿಹ ತೋರಿಕೆ ಎಂಬ ಶಬ್ದಕ್ಕರ್ಥ. ಆಕಾಶದಲ್ಲಿ ತೋರುವ ಸೂರ್ಯಕಿರಣ ಪ್ರಕಾಶ ಪಿಂಡಬ್ರಹ್ಮಾಂಡದೊಳಗೆ ಸರ್ವ ಜೀವರುಗಳಿರುವ ಪ್ರಭಾವಸಿ ಕೊಡುವ ಹಾಗೆಂಬುದೀಗ ಆಕಾಶಮಂಡಲದಲ್ಲಿ ತೋರುವ ಅರುಣನ ಕಿರಣ ಸರ್ವ ಜೀವಜ್ಞಾನ ಪರಿಪೂರ್ಣ ದೃಷ್ಟಿಯಾಗಿ ಕಾಂಬ ತೆರನಂತೆ ಎಂಬ ಶಬ್ದಕ್ಕರ್ಥ. ಆ ಶರಣ ಚಿತ್ಪಿಂಡ ಮಂಡಲ ಮಧ್ಯದಲ್ಲಿ ಚಿತ್ಸೂ ರ್ಯನು ಪ್ರಭಾವಿಸಿ ಒಳಹೊರಗೆ ಸರ್ವಾಂಗದಲ್ಲಿ ಪ್ರಕಾಶಿಸುತ್ತಿಹುದೆಂಬು ದೀಗ ಎನ್ನ ಪಿಂಡ ಮಂಡಲದಲ್ಲಿ ದಿವ್ಯತೇಜೋವರುಣ ಕಿರಣಮಯ ವಾಗಿ ಎಂಬ ಶಬ್ದಕ್ಕರ್ಥ. ಒಂದರಿಂದೆ ಹಲವು ಲಿಕ್ಕವು ಕಾಂಬಂತೆ

ಒಂದೇ ಪರಬ್ರಹ್ಮವು ತನ್ನ ಸ್ವಲೀಲೆಯಿಂ ಸಿಂಡಾದಿಜ್ಞಾನ ರೂಸ್ಯಾಂತವಾದ ನೂರೊಂದು ಸ್ಥಲಕುಳ ಸ್ವರೂಪವನೆಯ್ದಿತ್ತೆಂಬುದೀಗ ಒಂದರಲ್ಲಿ ನಿಂತು ಕಾಂಬುದು ಹಲವಾದಂತೆ ಎಂಬ ಶಬ್ದಕ್ಕರ್ಥ. ಅನೇಕ ಸ್ಥಲ ಕುಲಂಗಳನೊಳಕೊಂಡಿರ್ಪ ಪರಬ್ರಹ್ಮವು ಉನ್ಮನಿಸ್ವರೂಪವಾದ ಮನವ ನೊಳಕೊಂಡು ಶರಣನ ಹೃದಯ ಕಮಲ ಕರ್ಣಿಕಾವಾಸದಲ್ಲಿ ಪ್ರಾಣ ಲಿಂಗ ಸ್ವರೂಪವಾಗಿ ಮೂರ್ತಿಗೊಂಡಿತ್ತೆಂಬುದೀಗ ಎನ್ನ ಮನದ ಮಂದಿರದಲ್ಲಿ ನಿಂದವ ನೀನೊಬ್ಬನೆಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು ಅನೇಕ ತತ್ವ ಬ್ರಹ್ಮಾಂಡಂಗಳಲ್ಲಿ ಚೈತನ್ಯಸ್ವರೂಪವಾಗಿ ವೇಧಿಸಿಹುದೆಂಬುದೀಗ ವಿಶ್ವರೂಪಾವಯಲ್ಲಾ ಎಂಬ ಶಬ್ದಕ್ಕರ್ಥ. ಆ ವಸ್ತುವ ಅಷ್ಟಾಂಗ ಯೋಗದಿಂ ಛೇದಿಸಿಹೆನೆಂದಡೆ ಅಛೇದ್ಯವಾಗಿಹುದೆಂಬುದೀಗ ಛೇದಕ್ಕೆ ಅಛೇದ್ಯನಾವೆಯಲ್ಲಾ ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮವನು ಸಕಲ ನಿಷ್ಕಲವೆಂದು ಸಕಲ ನಿಷ್ಕಲಾತೀತವೆಂದು ಭಿನ್ನವಿಟ್ಟು ನುಡಿಯಬಾರ ದೆಂಬುದೀಗ ನಿನ್ನನೇನೆಂಬುದಕ್ಕೆ ತೆರಪಿಲ್ಲವೆಂಬ ಶಬ್ದಕ್ಕರ್ಥ. ಭಾಗೀರಥೀ ಸರ್ವರಿಗೂ ಒಂದೇ ಸಮಾನವಾಗಿಹ ಹಾಗೆ ಲಿಂಗಾಂಗಸಂಬಂಧಿಗಳಾದ ಶರಣ ಜನಂಗಳೆಲ್ಲಕ್ಕೂ ಪರಬ್ರಹ್ಮವು ಪರಿಪೂರ್ಣ. (ಸೂಚನೆ— ಮುಂದಿನ ಭಾಗ ಉಪಲಬ್ಧವಿಲ್ಲ)

ಅಃ. ಕಲ್ಲಿನ ಗಿರಿಯ ಹುಲ್ಲಿನ ಪೊಸೆಯಲ್ಲಿ ಕುಕ್ಕಿ ಹುಲ್ಲೆಯು ಮರಿ ಹುಲಿಯೊಂದಾಗಿ ಚಲ್ಲಸಾಡುತ್ತಿದ್ದಿತ್ತು. ಬಲ್ಲಹನ ಬಲುಹ ಏನೂ ಇಲ್ಲದವ ಮುರಿದು ಈ ಸೊಲ್ಲಿನ ವಿವರವ ಕೇಳುವ ಬನ್ನಿ ಸದಾಶಿವ ಮೂರ್ತಿಲಿಂಗದಲ್ಲಿಗೆ.

ಟೀಕು:— ಕಲುಹೃದಯವಾದ ದೇಹಮಧ್ಯದಲ್ಲಿ ಅಹಂಕಾರ ಹುಟ್ಟಿತ್ತೆಂಬುದೀಗ ಕಲ್ಲಿನ ಗಿರಿಯ ಎಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರದ ಗಿರಿಯ ಸುಜ್ಞಾನಾಂಕುರದಲ್ಲಿ ಸಂಬಂಧವಾಗಿರ್ಪ ಭಕ್ತಿಯಿಂ ನಿವೃತ್ತಿ ಮಾಡಿದನೆಂಬುದೀಗ ಹುಲ್ಲಿನ ಪೊಸೆಯಲ್ಲಿ ಕುಕ್ಕಿ ಎಂಬ ಶಬ್ದಕ್ಕರ್ಥ. ಅಂತು ಅಹಂಕಾರವಳಿದು ಚಿಚ್ಛಕ್ತಿಯಿಂದುದ್ಭವಿಸಿ ಚಿತ್ಸ್ವರೂಪನಾದ ಶರಣನು ಸಕಲ ತತ್ವಂಗಳನವಗ್ರಹಿಸಿ ಕೊಂಡಿರ್ಪ ಮಹಾಘನಲಿಂಗದಲ್ಲಿ ಒಡಗೂಡಿ ಕ್ರೀಡಾಪರನಾಗಿರ್ದನೆಂಬುದೀಗ ಹುಲ್ಲೆಯು ಮರಿ ಹುಲಿಯೊಂದಾಗಿ ಚಲ್ಲಾಡುತ್ತಿದ್ದಿತ್ತೆಂಬ ಶಬ್ದಕ್ಕರ್ಥ. ಅಂತು

ಲಿಂಗದಲ್ಲಿ ಕ್ರೀಡಾಪರನಾದ ಶರಣನು ಅಹಂ ಬ್ರಹ್ಮವೆಂಬ ಅಪ್ಪೈತ ಜ್ಞಾನದ ಅಹಂಕಾರವನು ಸಕಲ ಪ್ರಪಂಚು ಹೊವ್ವದ ಚಿತ್ಸ್ವರೂಪನಾದ ಶರಣ ನಿವೃತ್ತಿಮಾಡಿದನೆಂಬುದೀಗ ಬಲ್ಲಹನ ಬಲುಹ ಏನು ಇಲ್ಲದವ ಮುರಿದನೆಂಬ ಶಬ್ದಕ್ಕರ್ಥ. ಅಂತು ಅಪ್ಪೈತಜ್ಞಾನವ ನಿವೃತ್ತಿ ಮಾಡಿ ಶಿವೋಹಂ ಭಾವ ಘಟಿಸಿದ ಶರಣನ ಚರಿತ್ರವ ತ್ರಿವಿಧ ಲಿಂಗಾನುಭಾವಿಗಳಿಂ ಬೆಸಗೊಳುತಿರ್ದನೆಂಬುದೀಗ ಈ ಸೊಲ್ಲಿನ ವಿವರವ ಕೇಳುವ ಬನ್ನಿ ಸದಾಶಿವಮೂರ್ತಿಲಿಂಗದಲ್ಲಿಗೆ ಎಂಬ ಶಬ್ದಕ್ಕರ್ಥ.

ತಾನುಸ ಜಂಗಮುರು.

ಳಳ. ಜಂಗಮು ಲಿಂಗವಾದಲ್ಲಿ ಜಗದ ಜಂಗುಳಿಗಳ ಬಾಗಿಲ ಕಾಯುದಿರಬೇಕು. ಒಡೆಯರ ಓಲಗವ ಬಂಟ ಕಾಯಬೇಕಲ್ಲದೆ ಬಂಟನ ವೇಳೆಯುವ ಒಡೆಯ ಕಾಯಬಲ್ಲನೇ? ಇಂತಿವನರಿದು ರಾಜಮಂದಿರದಲ್ಲಿ ಗೃಹಸ್ಥಾಶ್ರಮದಲ್ಲಿ ವೇಳೆಯವನರಿತು ಭುಂಜಿಸಿಹೆನೆಂಬ ದರ್ಶನ ಜಂಗುಳಿಗಳಿಗೆ ಜಂಗಮಸ್ಥಲವಿಲ್ಲವೆಂದೆ. ಸದಾಶಿವಮೂರ್ತಿ ಲಿಂಗವು ಅವರಂಗಕ್ಕೆ ಮುನ್ನವೇ ಇಲ್ಲವೆಂದೆ.

ಅಃ ಬಾಗಿಲಲ್ಲಿ ತಡೆವಾತನ ಮನೆಯಲ್ಲಿ ಬಾಗಿ ಹೊಕ್ಕು ಉಂಡ ಜಂಗಮದ ಪಾದೋದಕ ಪ್ರಸಾದವೆಂದು ಕೊಂಡಾತಂಗೆ ಅಘೋರ ಪಾತಕನೆಂದೆ. ಅದೆಂತೆಂದೊಡೆ ತಾ ಸರ್ವಸಂಗದ ಅರಿವ ಕಂಡು ಭಕ್ತಿ ವಿರಕ್ತಿಯ ಕಂಡು ಇಂತೀ ಗುಣಂಗಳಲ್ಲಿ ಸನ್ನದ್ಧನಾಗಿ ಮತ್ತೆ ಉಪದೇಶದ ಕಕ್ಕುಲಿತೆಗೆ ಸದನ ಹೊಗಲಾಗದು. ಇಂತೀ ವಿರಕ್ತನ ಸ್ಥಲ. ಸದಾಶಿವಮೂರ್ತಿ ಲಿಂಗದಲ್ಲಾಗು ಜಾಗೆಯನರಿಯಬೇಕು.

ಐಕ್ಯಸ್ಥಲ.

ವಿವರಣೆ— ಐಕ್ಯಸ್ಥಿತಿಯಲ್ಲಿ ಮನುಷ್ಯನು ನಿವೃತ್ತಿ ಮಾರ್ಗವನ್ನು ಕೈಕೊಳ್ಳುತ್ತಾನೆ. (೪೬, ೪೭) ಆಗ ಅವನ ಮನಸ್ಸು ಸದ್ವಿವೇಕ ಸ್ವರೂಪವನ್ನು ಹೊಂದಿ ಶಿವಭಾವದಲ್ಲಿ ಸ್ಥಿರವಾಗುವದು. ಇಂದ್ರಿಯಗಳು ನಿವೃತ್ತಿಯಾಗುವವು. ಜೀವಭಾವವು ದೂರಾಗುವದು. ಇದು ಬಚ್ಚಬಯಲು. (೪೮) ಆಗ ನಾದ ಬಿಂದು ಕಲೆಗಳು ಮೂಲ ಚಿತ್ತುವಿನಲ್ಲಿ ಬೆರೆದು ಸ್ವಯಂಭು ಸ್ಥಿತಿಯುಂಟಾಗುತ್ತದೆ. (೪೯) ಅದು ಕೇವಲ ಪ್ರಕಾಶಮಯವಾದ ಸ್ಥಿತಿಯು. ಇದೇ ಲಿಂಗೈಕ್ಯವು. (೫೦)

ವಚನಗಳು.

೪೬. ಹರಿವ ಹಾವು ಕೊಂಬಿನ ಮೇಲಣ ಕೋಡಗ ಸಂಗಿಸಿ ಒಂದಕ್ಕೊಂದೆಂಜಿ ನಿಂದೈದಾವೆ. ಕೋಡಗ ನೋಡಲವ್ಯಾದು. ಹಾವು ಹೋಗಲವ್ಯಾದು. ಎರಡು ನಿಂದು ಜೋಗಿಗೆ ಲೇಸಾಯಿತ್ತು ಸದಾಶಿವ ಮೂರ್ತಿಲಿಂಗವನರಿತು.

ಟೀಕು:— ಸಕಲ ಪ್ರಪಂಚಿನ ವ್ಯವಹಾರದಲ್ಲಿ ಚರಿಸುತ್ತಿಹ ಶಂಕಾವಿಷಯ ಸಂಬಂಧಿಯಪ್ಪ ಜೀವನೆಂಬುದೀಗ ಹರಿವ ಹಾವು ಎಂಬ ಶಬ್ದಕ್ಕರ್ಥ. ಇಂದ್ರಿಯಂಗಳೆಂಬ ಶಾಖೋಪ ಶಾಖೆಗಳಲ್ಲಿ ಲಂಘಿಸುತ್ತಿಹುದು ಮನಸ್ಸೆಂಬುದೀಗ ಕೊಂಬಿನ ಮೇಲಣ ಕೋಡಗವೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಂಗೆ ಶಿವಕೃಪೆಯಿಂ ಸಮ್ಯಜ್ಞಾನೋದಯವಾಗಲು ಮನಸ್ಸು ಸದ್ವಿವೇಕ ಸ್ವರೂಪವನೆಯ್ದಿ ನಿವೃತ್ತಿ ಮಾರ್ಗದಿಂ ಸಮ್ಮುಖವಾದ ವೆಂಬುದೀಗ ಸಂಧಿಸಿಯೇ ಎಂಬ ಶಬ್ದಕ್ಕರ್ಥ. ಆ ಜೀವನ ಸುಜ್ಞಾನ ಪ್ರಕಾಶಕ್ಕೆ ಮನವಳುಕಿ ಆ ಮನಸ್ಸಿನ ಸದ್ವಿವೇಕ ಜೀವಗಳು ಎರಡು ಶಿವಭಾವದಲ್ಲಿ ಸುಸ್ಥಿರವಾದವೆಂಬುದೀಗ ಒಂದಕ್ಕೊಂದೆಂಜಿ ನಿಂದೈದಾವೆ ಎಂಬ ಶಬ್ದಕ್ಕರ್ಥ. ಇಂದ್ರಿಯಂಗಳ ಪ್ರವರ್ತನೆಯ ಅಜ್ಞಾನ ದೃಷ್ಟಿಸಿಂ ನಿರೀಕ್ಷಿಸಲವ್ಯಾದು ಮನಸ್ಸೆಂಬುದೀಗ ಕೋಡಗ ನೋಡಲವ್ಯಾದೆಂಬ ಶಬ್ದಕ್ಕರ್ಥ. ಸಕಲ ಮಾಯಾ ಪ್ರಪಂಚಿಗೆ ಅಡಿಯಿಡಲವ್ಯಾದು ಜೀವನೆಂಬುದೀಗ ಹಾವು ಹೋಗಲವ್ಯಾದು ಎಂಬ ಶಬ್ದಕ್ಕರ್ಥ. ಸುಜ್ಞಾನೋದಯವಾದ ಜೀವನು ಸದ್ವಿವೇಕ ಸ್ವರೂಪವಾದ ಮನಸ್ಸು ಎರಡು ಶಿವಭಾವದಲ್ಲಿ ಸುಸ್ಥಿರವಾಗಲು ಶಿವತತ್ವದಲ್ಲಿ ಸಮರಸೈಕ್ಯವನೆಯ್ದುವ ಶರ

ಣಂಗೆ ಮುಖವಾಯಿತ್ತೆಂಬುದೀಗ ಎರಡು ನಿಂದು ಜೋಗಿಗೆ ಲೇಸಾಯಿತ್ತು ಸದಾಶಿವಮೂರ್ತಿ ಲಿಂಗವನರಿತು ಎಂಬ ಶಬ್ದಕ್ಕರ್ಥ.

೪೭. ಹಸಿವ ಹಾವಿನ ಹೆಡೆಯಲ್ಲಿ ಬಿಲವ ನೋಡುತ್ತಿದೆ. ಹೆಡೆಯಲ್ಲಿ ಹೆಬ್ಬಿಲ ಕಣ್ಣಿನ ಓವರಿಯಲ್ಲಿ ಹುಲ್ಲಿನ ಹಾಸಿಕೆಯ ಶಯನದ ಮನೆ ಮೂಗಿನವಾಸದಲ್ಲಿ ತಪ್ಪುದಾರಿ ಬಾಲದ ತುದಿಯಲ್ಲಿ ಹುಡುಪ ಹಾವ ಹಿಡಿದಲ್ಲಿ ಸಿಕ್ಕಿತ್ತು ಸದಾಶಿವಮೂರ್ತಿ ಲಿಂಗವನರಿನಲ್ಲಿ ಚಿತ್ತ ನಿಂದಿತ್ತು.

ಟೀಕು:— ಶಂಕಾವಿಷ ಸಂಬಂಧಿಯಪ್ಪ ಜೀವನು ಆಶಾ ತೃಷ್ಣೆಯಲ್ಲಿರ್ದನೆಂಬುದೀಗ ಹಸಿವ ಹಾವಿನ ಎಂಬ ಶಬ್ದಕ್ಕರ್ಥ. ಪಂಚೇಂದ್ರಿಯಂಗಳೇ ಆ ಜೀವಂಗೆ ಶಿರಸ್ಸಾಗಿಹವೆಂಬುದೀಗ ಹೆಡೆಯಲ್ಲಿ ಎಂಬ ಶಬ್ದಕ್ಕರ್ಥ. ಆ ಪಂಚೇಂದ್ರಿಯ ದ್ವಾರಂಗಳಲ್ಲಿ ವಿಷಯ ಪ್ರಪಂಚವನೇ ಉಂಟು ಮಾಡಿ ಕೊಳ್ಳುತ್ತಿಹುದು ಮನಸ್ಸೆಂಬುದೀಗ ಬಿಲವ ತೋಡುತ್ತಿದೆ ಎಂಬ ಶಬ್ದಕ್ಕರ್ಥ. ಆ ಇಂದ್ರಿಯಂಗಳಲ್ಲಿ ಆತಿ ಅತ್ಯಂತ ಘನತರವಾಗಿಹುದೆಂಬುದೀಗ ಹೆಡೆಯಲ್ಲಿ ಹೆಬ್ಬಿಲವೆಂಬ ಶಬ್ದಕ್ಕರ್ಥ. ಆ ಜ್ಞಾನ ದೃಷ್ಟಿಯ ಬೆಂಬಳಿಯಿಂ ಪಂಚವಿಷಯ ಸಂಬಂಧವಾದ ಅಂತ ದೋಹವೇ ಆ ಮನಸ್ಸು ಮರವೆಯನೆಯ್ದುವದಕ್ಕೆ ಆಶ್ರಯವಾಯಿತ್ತೆಂಬುದೀಗ ಕಣ್ಣಿನ ಓವರಿಯಲ್ಲಿ ಹುಲ್ಲಿನ ಹಾಸಿಕೆಯ ಶಯನದ ಮನೆಯೆಂಬ ಶಬ್ದಕ್ಕರ್ಥ. ದುರ್ವಾಸನ ಸ್ವೀಕಾರವೆಂಬ ನಾಸಿಕವಿಡಿದು ನಾನಾ ದುಶ್ಚರಿತ್ರಂಗಳಲ್ಲಿ ಚರಿಸುತ್ತಿಹುದು ಮನಸ್ಸೆಂಬುದೀಗ ಮೂಗಿನ ನಾಸದಲ್ಲಿ ತಪ್ಪುದಾರಿಯೆಂಬ ಶಬ್ದಕ್ಕರ್ಥ. ಆ ಮನಸ್ಸು ಭವಪಾಶದಲ್ಲಿ ತಮೋಗುಣ ಸಂಬಂಧದಿಂ ಮರವೆಯನೆಯ್ದಿಹುದೆಂಬುದೀಗ ಬಾಲದ ತುದಿಯಲ್ಲಿ ಹುಡುಪನೆಂಬ ಶಬ್ದಕ್ಕರ್ಥ. ಸುಜ್ಞಾನೋದಯವಾದ ಶರಣನ ಆ ಜೀವಭಾವವ ನಿವೃತ್ತಿ ಮಾಡಿ ಶಿವಭಾವ ಘಟಿಸಿದಲ್ಲಿ ಗುರು ಕಾರುಣ್ಯದಿಂ ಲಿಂಗಾಂಗ ಸಂಬಂಧನಾದಲ್ಲಿ ಮನವಳಿದು ಉನ್ಮನಿ ತತ್ಪರೂಪವನೆಯ್ದಿ ಲಿಂಗದಲ್ಲಿ ಸಮರಸನಾಯಿತ್ತೆಂಬುದೀಗ ಹಾವ ಹಿಡಿದಲ್ಲಿಯೇ ಸಿಕ್ಕಿತ್ತು ಸದಾಶಿವಮೂರ್ತಿ ಲಿಂಗವನರಿದಲ್ಲಿ ಚಿತ್ತ ನಿಂದಿತ್ತು ಎಂಬ ಶಬ್ದಕ್ಕರ್ಥ.

೪೮. ಪೃಥ್ವಿ ಅಪ್ಪುವಿನಾಧಾರದಿಂದ ಬೀಜ ಒಡೆದು ಬೆಳೆವಂತೆ ಅರುಹು ಅರುಹಿಸಿಕೊಂಬ ಉಭಯದ ಮಧ್ಯದಲ್ಲಿ ಜ್ಞಾನ ಕುರುಹಾಗಿ

ಚಿದ್ಭನ ವಸ್ತು ಪತಿಯಾಗಿ ಉಭಯ ಒಂದುಗೂಡಿ ಮೇಲನರಿತಲ್ಲಿ ಸದಾಶಿವಮೂರ್ತಿ ಲಿಂಗ ಬಚ್ಚ ಬಯಲು.

೮೯. ನಾದ ಬ್ರಹ್ಮಶಕ್ತಿಯಾಗಿ, ಬಿಂದು ವಿಷ್ಣುಶಕ್ತಿಯಾಗಿ, ಕಳಿ ರುದ್ರಶಕ್ತಿಯಾಗಿ, ತ್ರಿವಿಧ ಪ್ರಾಣ ಅತೀತಭೇದ ಚೇತನವಾಗಿ ಉಮಾ ಪತಿ ನಿರಸನ ಸ್ವಯಂಭು ಸದಾಶಿವಮೂರ್ತಿ ಲಿಂಗವು ತ್ರಿವಿಧನಾಮ ನಷ್ಟವಾಯಿತ್ತು.

೯೦. ಚಕ್ಷುಮಯನಾಗಿ, ಚಕ್ಷುರೂಪನಾಗಿ, ಚಕ್ಷುವಿಮೋಕ್ಷನಾಗಿ, ವಿಮೋಕ್ಷ ಸುಕ್ಷೇತ್ರವಾಸನಾಗಿ, ವಾಸದ ಮಧ್ಯದಲ್ಲಿ ಮೂರ್ತಿಯು ಜಿಳಗು ತೋರುತ್ತಿದೆ ಸದಾಶಿವಮೂರ್ತಿ ಲಿಂಗದಲ್ಲಿ.

ಗುರು.

ವಿವರಣೆ:— ಗುರುವು ಕ್ರಿಯಾದೀಕ್ಷೆಯಿಂದ ಸ್ಥೂಲತನುವನ್ನು ನಿವೃತ್ತಿಮಾಡಿ ಭಕ್ತನಲ್ಲಿ ಲಿಂಗ ಸಾಹಿತ್ಯವನ್ನು ಮಾಡುವನು. ಮಂತ್ರ ದೀಕ್ಷೆಯಿಂದ ಸೂಕ್ಷ್ಮ ತನುವನ್ನು ನಿವೃತ್ತಿಮಾಡಿ ಪ್ರಾಣಲಿಂಗ ಸಾಹಿತ್ಯ ವನ್ನು ಮಾಡುವನು. ವೇಧಾ ದೀಕ್ಷೆಯಿಂದ ಹಸ್ತ ಮಸ್ತಕ ಸಂಯೋಗವನ್ನು ಮಾಡಿ ಕಾರಣ ದೇಹವನ್ನು ಅಳಿದು ಭಾವಲಿಂಗ ಸಂಬಂಧ ಮಾಡು ವನು. (೯೧-೯೨) ಹೀಗೆ ಜೀವತ್ರಯಗಳನ್ನಳಿದು ಲಿಂಗತ್ರಯಗಳನ್ನು ಸಂಬಂಧಿಸುವನು. ಇದರಿಂದ ದುರ್ವರ್ತನೆಗಳಡಗುವವು. ಭಕ್ತನು ಶಿವ ಜ್ಞಾನ ಸ್ವರೂಪನಾಗುವನು. ಹೀಗೆ ಅಂಗವನ್ನು ಲಿಂಗವನ್ನಾಗಿ ಮಾಡಿದ ಗುರುವು ತನ್ನ ಶಿಷ್ಯನಲ್ಲಿ ಅವಿರಳ ಸಂಗವನ್ನು ಮಾಡುವನು. ಗುರುವು ನಿಷ್ಕಲಚಿತ್ ಶಕ್ತಿಯೆಂದೇ ಭಾವಿಸಬೇಕು. ಇದೇ ವೀರಶೈವ ಮಾರ್ಗವು. ಈತನು ಶುದ್ಧ ಶೈವ, ಮಾರ್ಗ ಶೈವ, ಪೂರ್ವ ಶೈವ ಇವುಗಳಿಗೆ ಹೊರ ಗಾಗಿರಬೇಕು. (೯೩) ಈತನು ತನ್ನ ಶಿಷ್ಯರಲ್ಲಿ ಭಿನ್ನಾಚಾರವುಳ್ಳವನಾಗಿ ರಬಾರದು. (೯೪) ಅವನು ಬರಿಯ ಮಾತಿನ ಮಾಲೆಯುವನಲ್ಲ. (೯೫) ಅವನು ಪ್ರಾಣಕ್ಕೆ ಉಪದೇಶವನ್ನು ಮಾಡಿ ಕಾಯಕ್ಕೆ ಲಿಂಗವನ್ನು ಕೊಡು ವನು. ಕಾಯ ಶುದ್ಧವಾಡಿ ಪ್ರಾಣಕ್ಕೆ ಅರಿವ ಕೊಡುವನು. (೯೬) ಹೀಗೆ ಶಿಷ್ಯನು ಗುರುವಿನಲ್ಲಿ ಲಿಂಗವನ್ನು ಪಡೆಯಬೇಕು. ಇವನು ಪುನರ್ಜಾತನಾಗುವನು. (೯೭) ಇವನು ಪವಿತ್ರಾಚರಣೆಯಿಂದ ಆಚ ರಿಸಬೇಕು. ಇದು ಹೇಗೆಂಬುದು ೯೮ ನೇ ವಚನದಲ್ಲಿ ಹೇಳಲ್ಪಟ್ಟಿದೆ.

ವಚನಗಳು.

೯೧. ಆ ದುರ್ಗವಲ್ಲಿರ್ದ ಧೂರೆಗಳ ವಿರೋಧವನರಿದು ಇದೇ ದುರ್ಗಕ್ಕೆ ಸಾಧ್ಯ ವೇಳಿ ಎಂಬುದನರಿದು ಮಾಯಾಮಲ ನಾಸ್ತಿ ಎಂಬ ಮನ್ನೆಯ ಕಾಳಗವ ಹಿಡಿದು ದುರ್ಗವ ಮುತ್ತಿ ಕೈಯ್ಯೊಳಗಾದರು ಮೂವರು ಧೂರೆಗಳು. ನರಪತಿಯ ಅಂಡವ ಕಿತ್ತು ಸುರಪತಿಯ ಕೈಯ್ಯಹಿಡಿದು ಸಿರಿಮುರಿಗೊಡೆಯನ ಕಣ್ಣ ಕಳೆದು ಅರಿಗಳಿಲ್ಲಾ ಎಂದು ಅಭಿಮುಖವ ನಷ್ಟವ ಮಾಡಿ ಊರ್ಧ್ವಮುಖವಾದ ಮಾಯಾ ಕೋಳಾ ಹಳ ಮಲಂ ನಾಸ್ತಿ ಮನ್ನಣೆಯ ಭಾವರಹಿತ ಅನುಪಮ ಚರಿತ ಸದಾಶಿವಮೂರ್ತಿಲಿಂಗಕ್ಕೆ ಅರಿಗಳಲ್ಲದೆ ನಿರಾಳವಾಯಿತ್ತು.

ಟೀಕುಃ— ಅಂತಪ್ಪ ಅಹಂಕಾರವನಾಶ್ರಯಿಸಿಕೊಂಡಿರ್ಪ ಜೀವತ್ರಯಂಗಳಲ್ಲಿ ಸವ್ಯಜ್ಞಾನೋದಯವಾಗಲು ನಿವೃತ್ತಿ ಮುಖದಿಂ ವಿರೋಧವಾಗಿರ್ದ ಛೇದವ ಶರಣ ಸುಜ್ಞಾನ ದೃಷ್ಟಿಯಿಂ ಕಂಡು ವಿವೇಕಿಸುತ್ತಿರ್ದನೆಂಬುದೀಗ ಆ ದುರ್ಗದಲ್ಲಿರ್ದ ಛೊರೆಗಳ ವಿರೋಧವನರಿದು ಎಂಬ ಶಬ್ದಕ್ಕರ್ಥ. ಅಂತು ಸದ್ವಿವೇಕಮುಖದಿಂ ವಿವೇಕಿಸುತ್ತಿರ್ದ ಶರಣನ ನಿವೃತ್ತಿ ಮಾಡುವದಕ್ಕೆ ಇದೇ ತತ್ಸಾಲನೆಂದರಿದು ನಿರೂಪಿಸುತ್ತಿರ್ದನೆಂಬುದೀಗ ಇದೇ ದುರ್ಗಕ್ಕೆ ಸಾಧ್ಯ ವೇಳೆ ಎಂಬುದನರಿತು ಎಂಬ ಶಬ್ದಕ್ಕರ್ಥ. ಮಾಯಾ ಸಂಬಂಧವಾದ ಮಲತ್ರಯ ರಹಿತವಾದ ನಿರ್ಮಳಾಂಗ ಸ್ವರೂಪವಾದ ಶರಣನೆಂಬುದೀಗ ಮಾಯಾ ಮಲ ನಾಸ್ತಿ ಎಂಬ ಶಬ್ದಕ್ಕರ್ಥ. ದುರ್ಭಾವವಳಿದು ಸದ್ಭಾವವುಳ್ಳಾತನೇ ಶರಣನೆಂಬುದೀಗ ಮನ್ನೆಯನೆಂಬ ಶಬ್ದಕ್ಕರ್ಥ. ಅಂತಪ್ಪ ಶರಣನು ಅಹಂಕಾರವನಾಶ್ರಯಿಸಿರ್ಪ ಜೀವತ್ರಯಂಗಳ ಸಂಹರಿಸಬೇಕೆಂದು ಪರಿಪೂರ್ಣಜ್ಞಾನವನು ಕೃತನಿಶ್ಚಯ ಹಸ್ತದಲ್ಲಿ ದೃಢವಿಡಿದನೆಂಬುದೀಗ ಕಾಳಗವ ಹಿಡಿದು ಎಂಬ ಶಬ್ದಕ್ಕರ್ಥ. ಆ ಪರಿಪೂರ್ಣ ಜ್ಞಾನ ಪ್ರಕಾಶದಿಂದಹಂಕಾರವನವಗ್ರಹಿದನೆಂಬುದೀಗ ದುರ್ಗವ ಮುತ್ತಿ ಎಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರವ ನಿವೃತ್ತಿಮಾಡಿ ಚಿದಹಂಕಾರವ ನಿವೃತ್ತಿ ಮಾಡಿ ಚಿದಹಂಕಾರ ಸ್ವರೂಪನಾದ ಶರಣನ ಜೀವಭಾವದಲ್ಲಿ ಜೀವತ್ರಯಂಗಳು ಅಡಗಿದವೆಂಬುದೀಗ ಕೈಯ್ಯೊಳಗಾದರು ಮೂವರು ಛೊರೆಗಳು ಎಂಬ ಶಬ್ದಕ್ಕರ್ಥ. ಆ ಶಿವಭಾವತ್ರಯಂಗಳನವಗ್ರಹಿಸಿವ ಶರಣ ಗುರೂಪಾವಸ್ಥೆಯ ಮಾಡಲು ಶ್ರೀಗುರು ಕರುಣಿಸಿ ಪ್ರಸನ್ನನಾಗಿ ಕ್ರಿಯಾದೀಕ್ಷೆಯಿಂ ವಿಶ್ವಂಗೆ ಸಂಬಂಧವಾದ ಸ್ಥೂಲತನುವ ನಿವೃತ್ತಿಯ ಮಾಡಿ ಇಷ್ಟಲಿಂಗವ ಸಾಹಿತ್ಯವ ಮಾಡಿದನೆಂಬುದೀಗ ನರಪತಿಯ ಅಂಡವ ಕಿತ್ತು ಎಂಬ ಶಬ್ದಕ್ಕರ್ಥ. ಮಂತ್ರ ದೀಕ್ಷೆಯಿಂದ ಸೂಕ್ಷ್ಮತನು ನಿವೃತ್ತಿಯಾಗಿ ಪ್ರಾಣಲಿಂಗ ಸಾಹಿತ್ಯವಾಗಲು ತೈಜಸನು ಭೋಕ್ತವ್ಯವನುಂಬ ಮನೋಹಸ್ತವು ನಷ್ಟವಾಯಿತ್ತೆಂಬುದೀಗ ಸುರಪತಿಯ ಕೈಯ್ಯುಹಿಡಿದು ಎಂಬ ಶಬ್ದಕ್ಕರ್ಥ. ವೇಧಾದೀಕ್ಷೆಯಿಂದ ಹಸ್ತಮಸ್ತಕ ಸಂಯೋಗವಾದಲ್ಲಿ ಕಾರಣ ದೇಹವಳಿದು ಭಾವಲಿಂಗ ಸಂಬಂಧವಾದಲ್ಲಿ ಆ ಪ್ರಾಜ್ಞ ಭಿನ್ನಜ್ಞಾನ ನಷ್ಟವಾಯಿತ್ತೆಂಬುದೀಗ ಸಿರಿಮುರಿಗೊಡೆಯನ ಕಣ್ಣ ಕಳೆದು ಎಂಬ ಶಬ್ದಕ್ಕರ್ಥ. ಅಂತು ಅಂಗತ್ರಯ ಮುಖ್ಯನಾದ ಜೀವತ್ರಯವಳಿದು

ಲಿಂಗತ್ರಯ ಸಂಬಂಧವಾದ ಶರಣನ ಸಕಲ ಕರಣಂಗಳಿಲ್ಲ ಲಿಂಗ ಕರಣಂಗಳಾದ ಕಾರಣ ಶರಣಂಗೆ ವಿರೋಧವಿಲ್ಲದೆ ಹೋಯಿತ್ತೆಂಬುದೀಗ ಅರಿಗಳಿಲ್ಲ ಎಂಬ ಶಬ್ದಕ್ಕರ್ಥ. ಆ ಕರಣಂಗಳ ನಿವೃತ್ತಿ ಮಾಡಿದ ಶರಣನ ಪ್ರಪಂಚಿನತ್ರಭಿಮುಖವಾಗಿರ್ದ ದುರ್ವರ್ತನೆ ನಿವೃತ್ತಿಯ ಮಾಡಿದನೆಂಬುದೀಗ ಅಭಿಮುಖವ ನಷ್ಟವ ಮಾಡಿ ಎಂಬ ಶಬ್ದಕ್ಕರ್ಥ. ಆ ಪ್ರಪಂಚ ನಷ್ಟವಾದಲ್ಲಿ ಶಿವಜ್ಞಾನ ಸ್ವರೂಪನಾಗಿರ್ದನೆಂಬುದೀಗ ಊರ್ಧ್ವಮುಖವಾದನೆಂಬ ಶಬ್ದಕ್ಕರ್ಥ. ಆ ಜ್ಞಾನಸ್ವರೂಪನಾದ ಶರಣನು ಆ ಜ್ಞಾನಸ್ವರೂಪಿಯಾದ ಮಾಯೆಯ ನಿವೃತ್ತಿಯ ಮಾಡಿ ಮಲತ್ರಯ ರಹಿತನಾಗಿರ್ದನೆಂಬುದೀಗ ಮಾಯಾ ಕೋಳಾಹಳ ಮಲಂನಾಸ್ತಿ ಎಂಬ ಶಬ್ದಕ್ಕರ್ಥ. ಆ ನಿರ್ಮಲಸ್ವರೂಪನಾದ ಶರಣಂಗೆ ತಾನೆಂಬ ಭಾವನಷ್ಟವಾಗಿ ಉರಮಾತೀತನಾಗಿರ್ದನೆಂಬುದೀಗ ಭಾವರಹಿತ ಅನುಪಮ ಚರಿತ ಸದಾಶಿವಮೂರ್ತಿಲಿಂಗಕ್ಕೆ ಅರಿಗಳಿಲ್ಲದೆ ನಿರಾಳವಾಯಿತ್ತೆಂಬ ಶಬ್ದಕ್ಕರ್ಥ.

೯೨. ಊರ ಹೊರಗಣ ಹೊಲತಿಯು ಹಾರುವನೆರೆದು ತನ್ನಯ ಸೂತಕ ಹೋಯಿತ್ತು. ಹೊಲತಿಯ ಕುಲ ಹರಿದು ಹಾರುವ ಹೊಲೆಯನಾಗಿ ಸದಾಶಿವಮೂರ್ತಿ ಲಿಂಗಕ್ಕೊಳಗಾದ.

ಟೀಕುಃ— ದೇಹ ಭಾವಕ್ಕೆ ಹೊರಗಾಗಿರ್ಪ ನಿಷ್ಕಲ ಚಿಚ್ಛಕ್ತಿ ಎಂಬುದೀಗ ಊರ ಹೊರಗಣ ಹೊಲತಿಯು ಎಂಬ ಶಬ್ದಕ್ಕರ್ಥ. ಪರಧನ ಪರಸ್ತ್ರೀಯರ ಬಯಸುತ್ತಿರ್ದ ಜೀವಂಗೆ ಶಿವಕೃಪೆಯಿಂ ಸುಜ್ಞಾನೋದಯವಾಗಿ ಗುರೂಪಾವಸ್ಥೆಯ ಮಾಡಲು ಆ ನಿಷ್ಕಲ ಚಿಚ್ಛಕ್ತಿಯೇ ಗುರು ಸ್ವರೂಪವಾಗಿ ಬಂದು ದೀಕ್ಷಾತ್ರಯಂಗಳಿಂದಂಗಕ್ಕೆ ಲಿಂಗ ಸಂಬಂಧವ ಮಾಡಿದಲ್ಲಿ ಆ ಶ್ರೀಗುರು ತತ್ಪದಲ್ಲಿ ಶಿಷ್ಯನವಿರಳ ಸಂಗವ ಮಾಡಲು ತನ್ನ ಮುನ್ನಿನ ಜೀವಭಾವ ಭ್ರಾಂತಿನ ಸೂತಕ ನಿವೃತ್ತಿಯಾಯಿತ್ತೆಂಬುದೀಗ ಹಾರುವನೆರೆದು ತನ್ನಯ ಸೂತಕ ಹೋಯಿತ್ತು ಎಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿ ಸ್ವರೂಪವಾದ ಶ್ರೀಗುರು ತಾನೆ ಪರಬ್ರಹ್ಮವೆಂಬ ಚಿದಹಂಕಾರವ ನಿವೃತ್ತಿಯ ಮಾಡಿದನೆಂಬುದೀಗ ಹೊಲತಿಯ ಕುಲ ಹರಿದು ಎಂಬ ಶಬ್ದಕ್ಕರ್ಥ. ಶಿವಾಪೇಕ್ಷೆಯ ಮುಂದುಗೊಂಡಿರ್ಪ ಶರಣನು ಸರ್ವ ಸೂತಕ ರಹಿತವಾದ ಪರಬ್ರಹ್ಮವೆಯಾದನೆಂಬುದೀಗ

ಹಾರುವ ಹೊಲೆಯನಾಗಿ ಸದಾಶಿವಮೂರ್ತಿ ಲಿಂಗಕ್ಕೊಳಗಾವನೆಂಬ ಶಬ್ದಕ್ಕರ್ಥ.

೯೩. ವೀರಶೈವ ಗುರುವಾಗಿ ಶುದ್ಧಶೈವಕ್ಕೆ ಹೊರಗಾಗಬೇಕು. ಶುದ್ಧಶೈವ ಗುರುವಾಗಿ, ಮಾರ್ಗಶೈವಕ್ಕೆ ಹೊರಗಾಗಬೇಕು. ಮಾರ್ಗಶೈವ ಗುರುವಾಗಿ ಪೂರ್ವಶೈವಕ್ಕೆ ಹೊರಗಾಗಬೇಕು. ಇಂತೀ ಶೈವಂಗಳಲ್ಲಿ ಸನ್ನರ್ಧನಾಗಿ ತಿಳಿದು ಅಂಗಲಿಂಗಾತ್ಮನಲ್ಲಿ ನಿಂದು ಸಂಯೋಗವ ಮಾಡಬೇಕು. ಮಾಡಿದಲ್ಲಿ ಕೂಡಿದ ಕಾರಣ ಪರಶೈವವೆಂಬ ಹೆಸರಾಯಿತ್ತು ಸದಾಶಿವಮೂರ್ತಿ ಲಿಂಗವನರಿತಲ್ಲಿ.

೯೪. ಲಿಂಗ ಹೊರ್ತಾಗಿ ವಿಭೂತಿ ರುದ್ರಾಕ್ಷಿಯ ಕೊಟ್ಟು ಗುರುವಾಗಬಹುದೇ ಅಯ್ಯ? ಬೀಜವಿಲ್ಲದೆ ಅಂಕುರವಾಗಬಲ್ಲುದೇ? ಗಂಡನಿಲ್ಲದೆ ಮುಂಡೆಗೆ ಗರ್ಭ ನಿಂದಡೆ ಅವಳಾರಿಗೆ ಯೋಗ್ಯ? ಉಭಯವು ಕೇಡಾಯಿತ್ತು. ಇದನರಿತು ಮಾಡಿ ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

೯೫. ಭಕ್ತ ತನ್ನಯ ಪಾಶವ ಗುರುಮುಖದಿಂದ ಕಳಿವ. ಗುರು ತನ್ನಯ ಪಾಶವ ಏತರಿಂದ ಕಳಿಯಬೇಕೆಂಬುದನರಿಯಬೇಕು. ಹಾಗರಿಯದೆ ಉಪಾಧಿಕನಾಗಿ ಮಾತಿನ ಮಾಲೆಯ ನುಡಿದು ಜ್ಞಾತೃ, ಜ್ಞಾನ ಜ್ಞೇಯವನರಿಯದೆ ಭಾವ ಶುದ್ಧವಿಲ್ಲದ ಆಚಾರ್ಯನ ಕೈಯ್ಯಿಂದ ಕೊಂಡ ಪಾಷಾಣದ ಕುರುಹು ಆದೇತಕ್ಕು ಯೋಗ್ಯನಲ್ಲ ಎಂದೆ. ಪ್ರತಿಜ್ಞೆ ಘನದಿಂದಲ್ಲದೆ ಲಿಂಗ ಚೇತನವಿಲ್ಲ ಎಂದೆ ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

೯೬. ಪ್ರಾಣಕ್ಕುಪದೇಶವ ಮಾಡಿ ಕಾಯಕ್ಕೆ ಲಿಂಗವ ಕೊಡಬೇಕು. ಕಾಯ ಶುದ್ಧವ ಮಾಡಿ ಪ್ರಾಣಕ್ಕರಿವ ತೋರಬೇಕು. ಇಷ್ಟವನರಿಯದೆ ದೀಕ್ಷೆಯ ಮಾಡಬಾರದು. ಕುರುಡನ ಕೈಯ್ಯಲ್ಲಿ ಕೂಳ ಕಲಿಸಿ ಪ್ರತಿಗುರುಡಂಗೂಡಿಸಿದಂತಾಯಿತ್ತು. ಮಲಭಾಂಡದ ಜೀವಿಯ ಕೈಯ್ಯಲ್ಲಿ ಅನುಜ್ಞೆಯ ಪಡೆದ ಶಿಷ್ಯಂಗೆ ಉಭಯದ ಕೇಡಾಯಿತ್ತು. ಇದನರಿದು ಅರಿವುಳ್ಳ ಶಿಷ್ಯನು ಶಿವ ಜ್ಞಾನ ಮಾರ್ಗವ ಬಲ್ಲ ಗುರುವಿನ ಕೈಯ್ಯಲ್ಲಿ ಆ ಲಿಂಗವ ಕೊಟ್ಟು ಮರಳಿ ಪಡೆಯಬೇಕಣ್ಣಾ. ಸದಾಶಿವ ಲಿಂಗ ಮೂರ್ತಿಯನರಿವುದಕ್ಕೆ ಇದೇ ಚಿನ್ಹ.

೯೭. ಪ್ರಥಮದೀಕ್ಷೆ ಪರಬ್ರಹ್ಮದೀಕ್ಷೆ ಅಂಗಲಿಂಗದೀಕ್ಷೆ ಪುನರ್ದೀಕ್ಷೆ ಇಂತೀ ದೀಕ್ಷೆಂಗಳಲ್ಲಿ ತಿಳಿಯಬೇಕು. ಪ್ರಥಮದೀಕ್ಷೆ ಮಾಡುವಲ್ಲಿ ಬ್ರಹ್ಮನ ಪಾಶವ ಹರಿಯಬೇಕು. ಪರಬ್ರಹ್ಮ ದೀಕ್ಷೆಯ ಮಾಡುವಲ್ಲಿ ವಿಷ್ಣುವಿನ ಪಾಶವ ಹರಿಯಬೇಕು. ಅಂಗಲಿಂಗದೀಕ್ಷೆಯ ಮಾಡುವಲ್ಲಿ ರುದ್ರನ ಪಾಶವ ಹರಿಯಬೇಕು. ಪುನರ್ದೀಕ್ಷೆಯ ಮಾಡುವಲ್ಲಿ ಘಟದಲ್ಲಿದ್ದಾತ್ಮನ ಕಳೆದು ಪುನರಪಿಯ ಮಾಡಿ, ಪುನರ್ದೀಕ್ಷೆಯ ಮಾಡಬೇಕು. ಅದೆಂತೆಂದೊಡೆ ಇದಕ್ಕೆ ದೃಷ್ಟ. ದ್ವಿಜರ ಗರ್ಭದಲ್ಲಿ ಜನಿಸಿದ ಪಿಂಡಕ್ಕೆ ಮುಂಜ್ಯೋಚ್ಚರಣೆ ಮುಂಜಿಯಿಂದಲ್ಲದೆ ಭೂಸುರ ಕುಲವಿಲ್ಲ. ಇದನರಿತು ವಿಚಾರವ ಮಾಡಿ ಕೇಳಿ ಕಂಡು ಉಪದೇಶ ಗುರುವಾಗಬೇಕು ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

೯೮. ದೀಕ್ಷಾಗುರುವಾದಲ್ಲಿ ತ್ರಿವಿಧದಾಸೆ ಇಲ್ಲದಿರಬೇಕು. ಶಿಕ್ಷಾಗುರುವಾದಲ್ಲಿ ಅರಿಗಳಿಗಂಜದೆ ಪ್ರಾಣತ್ಯಾಗ ನಿಶ್ಚಯವಾಗಿರಬೇಕು. ಮೋಕ್ಷಾಗುರುವಾದಲ್ಲಿ ಸರ್ವದೋಷ ಸರ್ವೇಂದ್ರಿಯ ನಾಶವಾಗಿರಬೇಕು. ಇಂತೀ ಮೂರ ಮೀರಿ ಬೇರೊಂದರಲ್ಲಿ ನಿಂದು ತ್ಯಾಗಾಂಗ, ಭೋಗಾಂಗ, ಯೋಗಾಂಗ, ತ್ರಿವಿಧ ಲೇಪನಾಗಿ ನಿಂದುದೇ ನಿಜಗುರುಸ್ಥಲ. ಆ ಗುರುವಿನ ಕೈಯ್ಯ ಅನುಜ್ಞೆ ಪರಂಜ್ಯೋತಿ ಪ್ರಕಾಶ, ಅದು ನಿರವಯ ತತ್ವ, ಸದಾಶಿವಮೂರ್ತಿ ಲಿಂಗವು ತಾನೆ.

ಲಿಂಗ.

ವಿವರಣೆಃ— ಬ್ರಹ್ಮ ರಂಧ್ರದಲ್ಲಿ ಪರಮಾವೃತ ಕೂಪವಿದೆ. ಅದರಲ್ಲಿ ಉಂಟಾಗಿದ್ದ ದೇಹದಲ್ಲಿ ಸುಜ್ಞಾನೋದಯವಾಗುವದು. ಇಂತಪ ಸುಜ್ಞಾನ ಗುರುವೇ ಕ್ರಿಯಾಘನ ಗುರುವಾಗಿ ಬಂದು ಅಂಗಕ್ಕೆ ಲಿಂಗ ಸಂಬಂಧವ ಮಾಡಿ ತನ್ನಾದಿಯನೆಚ್ಚರಿಸುವನು. ಆಗ ಗುರುಮಾರ್ಗಾಚಾರವನ್ನು ಹಿಡಿದು ಶಿವತತ್ವದತ್ತ ಹೋಗುವನು. (೯೯) ಮನುಷ್ಯನಲ್ಲಿ ವಿಶ್ವ ತೈಜಸ ಪ್ರಾಜ್ಞ ಎಂಬ ಜೀವತ್ರಯಂಗಳಿದ್ದು ಸುಜ್ಞಾನವು ಪ್ರಭಾವಿಸಲು ಅವುಗಳ ಪ್ರಪಂಚು ನಿವೃತ್ತಿಯಾಗುವದು. ಆಗ ಸತ್ಕ್ರಿಯೆಗಳ ಮೂಲಕ ಇಷ್ಟಲಿಂಗ ಸಂಬಂಧವು, ಸುಜ್ಞಾನವು ನೆಲೆಗೊಳ್ಳಲು ಪ್ರಾಣಲಿಂಗ ಸಾಹಿತ್ಯವು, ಅವೃಷವನ್ನು ದೂರವಾಡಲು ತೃಪ್ತಿಲಿಂಗ ಸಂಬಂಧವು. (೧೦೦) ಆಗ ಗುರು ಶಿಷ್ಯರೆಂಬ ಉಭಯ ಭಾವವಳಿದು ಶಿವಬ್ರಹ್ಮ ಸ್ವರೂಪನಾಗುವನು.

ವಚನಗಳು.

೯೯. ಶ್ರೀಶೈಲದ ಮಧ್ಯದಲ್ಲಿ ಒಂದು ಪರುಷದ ರಸದ ಭಾವಿ ಹುಟ್ಟಿತ್ತು. ಆ ಭಾವಿಯೊಳಗೆ ಕಬ್ಬಿಣದ ಆದುರು ಹುಟ್ಟಿ ಸಿದ್ಧರಸವ ನುಂಗಿತ್ತು. ಇದ್ದವನ ಸುದ್ದಿಯ ಸತ್ತವ ಹೇಳಿ ಕಾಣದವ ಕೇಳಿ ಹೋದ. ಸದಾಶಿವಮೂರ್ತಿ ಲಿಂಗ ಬಚ್ಚ ಬಯಲು.

ಟೀಕುಃ— ಬ್ರಹ್ಮರಂಧ್ರದ ಸಹಸ್ರದಳ ಕಮಲಕರ್ಣಿಕಾ ಮಧ್ಯದಲ್ಲಿ ಎಂಬುದೀಗ ಶ್ರೀಶೈಲದ ಮಧ್ಯದಲ್ಲಿ ಎಂಬ ಶಬ್ದಕ್ಕರ್ಥ. ಆ ಬ್ರಹ್ಮರಂಧ್ರದ ಸ್ಥಾನದಲ್ಲಿ ಪವಿತ್ರಸ್ವರೂಪವಾದ ಪರಮಾವೃತ ಕೂಪ ಉದಿಸಿತ್ತೆಂಬುದೀಗ ಪರುಷ ರಸದ ಬಾವಿ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಆ ಪರಮಾವೃತ ಕೂಪವನೊಳಕೊಂಡಿರ್ಪ ಚಿದ್ಘನ ಲಿಂಗದಿಂದೆ ಅಜ್ಞಾನ ಸಂಬಂಧವಾದ ದೇಹಭಾವ ತೋರಿತ್ತು ಜೀವಂಗೆಂಬುದೀಗ ಆ ಭಾವಿಯೊಳಗೆ ಕಬ್ಬಿಣದ ಆದರು ಹುಟ್ಟಿ ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹವು ಆ ಪರಮಾವೃತ ರಸ ಬಿಂದುವನೊಳಕೊಂಡಿಹುದೆಂಬುದೀಗ ಸಿದ್ಧರಸವ ನುಂಗಿತ್ತು ಎಂಬ ಶಬ್ದಕ್ಕರ್ಥ. ಇಂತಪ್ಪ ದೇಹ ಸಂಬಂಧಿ

ಯಾಗಿರ್ದ ಆತ್ಮಂಗೆ ಶಿವಕೃಪೆಯಿಂ ಸುಜ್ಞಾನೋದಯವಾಗಲು ಅಂತರಂಗದ ಸುಜ್ಞಾನ ಗುರುವೇ ಕ್ರಿಯಾಘನ ಗುರುವಾಗಿ ಬಂದು ಅಂಗಕ್ಕೆ ಲಿಂಗಸಂಬಂಧವ ಮಾಡಿ ತನ್ನಾದಿಯನೆಚ್ಚರಿಸಿ ಸುಜ್ಞಾನ ಜ್ಯೋತಿಯ ಕೇಳಿ ಆ ಗುರುಮಾರ್ಗಾಚಾರವಿಡಿದು ಶಿವ ತತ್ವದತ್ತಲೆಯುತ್ತಿರ್ದನೆಂಬುದೀಗ ಕಾಣದವ ಕೇಳಿ ಹೋದ ಸದಾಶಿವಮೂರ್ತಿಲಿಂಗ ಬಚ್ಚ ಬಯಲು ಎಂಬ ಶಬ್ದಕ್ಕರ್ಥ.

೧೦೦. ಮೂಳೆಯ ಮೊದಲಿನಲ್ಲಿ ಮೂವರು ಮಕ್ಕಳು ಹುಟ್ಟಿ ಒಬ್ಬ ಕಂಬಲ್ಲಿ ಬಲ್ಲಿವ, ಒಬ್ಬ ಕೈಯ್ಯಲ್ಲಿ ಬಲ್ಲಿವ, ಒಬ್ಬ ಬಾಯಲ್ಲಿ ಬಲ್ಲಿದ ಇಂತೀ ಮೂವರು ಮಕ್ಕಳ ಹೆತ್ತ ತಂದೆಯನಾಳುಮಾಡುತ್ತಿರಲಾಗಿ ಇವರು ಎನಗೆ ಹಗೆ ಮಕ್ಕಳಲ್ಲಾ ಎಂದು ಹಗೆಯೆಂಬುದನರಿದು ಹಿರಿಯ ಮಗನ ಕಾಲ ಮುರಿಪು ನಡುವಣ ಮಗನ ಕೈ ಮುರಿದು ಕಿರಿಯ ಮಗನ ಬಾಯ ಮುಚ್ಚಿ ಗೋಣು ಮುರಿದು ಅವರ ಹಿಂಗಿನಾ ಬದುಕಿಸಿನೆಂದು ತ್ರಿವಿಧ ಸಂದ ಬಿಟ್ಟು ಸದಾಶಿವಮೂರ್ತಿಲಿಂಗದಲ್ಲಿ ಸಂದಿತ್ತು ಚಿತ್ತ.

ಟೀಕುಃ— ಅನಾಹತ ಕರ್ಣದ್ವಾರಂಗಳು ರಹಿತವಾಗಿರ್ಪ ಮಾಯೆಯು ತಾನೆಂಬ ಮೂಲಾಹಂಕಾರದಲ್ಲಿ ಎಂಬುದೀಗ ಮೂಳೆಯ ಮೊದಲಿನಲ್ಲಿ ಎಂಬ ಶಬ್ದಕ್ಕರ್ಥ. ಆ ಮಾಯಾ ಸಂಬಂಧವಾದ ಮೂಲಾಹಂಕಾರದಲ್ಲಿ ವಿಶ್ವ ತೈಜಸ ಪ್ರಾಜ್ಞರೆಂಬ ಜೀವತ್ರಯಂಗಳುದಯಿಸಿದವೆಂಬುದೀಗ ಮೂವರು ಮಕ್ಕಳು ಹುಟ್ಟಿದರೆಂಬ ಶಬ್ದಕ್ಕರ್ಥ. ಸ್ಥೂಲತನು ಸಂಬಂಧವಾದ ವಿಶ್ವನು ದುಷ್ಟರಿತ್ರದಲ್ಲಿ ಜನಿಸುತ್ತಿಹನೆಂಬುದೀಗ ಒಬ್ಬ ಕಾಲಲ್ಲಿ ಬಲ್ಲಿದನೆಂಬ ಶಬ್ದಕ್ಕರ್ಥ. ಸೂಕ್ಷ್ಮತನು ಸಂಬಂಧಿಯಪ್ಪ ತೈಜಸನು ಸಂಕಲ್ಪರೂಪವಾದ ಮನೋಪರ್ತನೆಯಲ್ಲಿ ಕೂಡಿಹನೆಂಬುದೀಗ ಒಬ್ಬರ ಕೈಯ್ಯಲ್ಲಿ ಬಲ್ಲಿದನೆಂಬ ಶಬ್ದಕ್ಕರ್ಥ. ಕಾರಣತನು ಸಂಬಂಧಿಯಪ್ಪ ಪ್ರಾಜ್ಞನು ಭಿನ್ನಾಪೇಕ್ಷೆಯಲ್ಲಿ ಕೂಡಿಹನೆಂಬುದೀಗ ಒಬ್ಬ ಬಾಯಲ್ಲಿ ಬಲ್ಲಿದನೆಂಬ ಶಬ್ದಕ್ಕರ್ಥ. ಅಂತಪ್ಪ ಜೀವತ್ರಯಂಗಳ ಮಧ್ಯದಲ್ಲಿ ಆ ಶಿವಕೃಪೆಯಿಂ ಸುಜ್ಞಾನ ಪ್ರಭಾವಿಸಿ ಅಹಂಕಾರಯುಕ್ತವಾದ ಜೀವನು ಅನಿತ್ಯವಾದ ಮಾಯಾ ಪ್ರಪಂಚಿಗೆ ಸಿಲ್ಕಿದನಲ್ಲಾ ಎಂದು ಹಾಸ್ಯೋಪಪಾದನವ ಮಾಡುತ್ತಿಹನೆಂಬುದೀಗ ಇಂತೀ ಮೂವರು ಮಕ್ಕಳು ಹೆತ್ತ ತಂದೆಯನಾಳುಮಾಡುತ್ತಿರಲಾಗಿ ಎಂಬ

ವಸ್ಥೆಯ ಮಾಡುತ್ತಿರ್ದ ಶಿಷ್ಯನು ತನ್ನ ನಿಜ ಸ್ವರೂಪವಾವುದೆಂಬ ವಿಸ
ಗೊಂಡಲ್ಲಿ ಆ ಶಿಷ್ಯನ ಆತ್ಮಾಂತರ್ಗತವಾಗಿರ್ಪ ಪರಮ ಜಿತ್ಕಲೆಯನು
ಭಾವ ಮನ ವೃಕ್ಷನಿಂ ಬಹಿಷ್ಕರಿಸಿ ಕರಸ್ಥಲಕ್ಕೆ ಇಷ್ಟಲಿಂಗ ಸಾಹಿತ್ಯವ
ಮಾಡಲು ಅಂಗವಲ್ಲಿ ಜ್ಞಾನಕ್ರಿವಿಡಿದಾಚರಿಸಿ ಸಮರಸ ಭಾವದಿಂ ನಿಷ್ಪ
ತ್ತಿಯಾದನೆಂಬುದೀಗ ನೀತಿಯ ಕೇಳಿ ಮೂಷಕ ನೆರೆದಲ್ಲಿ ಅಳಿಯಿತ್ತು ಎಂಬ
ಶಬ್ದಕ್ಕರ್ಥ. ಆ ಸಕ್ರಿಯಾ ಲಿಂಗವಲ್ಲಿ ನಿಷ್ಪತ್ತಿಯನೆಯ್ದಿವ ಶಿಷ್ಯ ಉನ್ಮನಿ
ತತ್ಪಸ್ವರೂಪವಾದ ಮನಸ್ಸು ಅಂತರಂಗವಲ್ಲಿ ಸಾಹಿತ್ಯವಾಗಿರ್ಪ ಪ್ರಾಣಲಿಂ
ಗದಲ್ಲಿ ಸಮರಸವನೆಯ್ದಿತ್ತೆಂಬುದೀಗ ಮಾರ್ಜಾಲ ಮನೆಗೆ ಹೋಯಿತ್ತು
ಎಂಬ ಶಬ್ದಕ್ಕರ್ಥ. ಆ ಮನವು ಲಿಂಗದಲ್ಲಿ ಸಮರಸವನೆಯ್ದಲು ಗುರು
ಶಿಷ್ಯರೆಂಬುಭಯ ಭಾವವಳಿದು ಶಿವಬ್ರಹ್ಮ ಸ್ವರೂಪವಾಯಿತ್ತೆಂಬುದೀಗ
ನಾನೀನೆಂಬುದು ನಿಂದಿತ್ತು ಸದಾಶಿವಮೂರ್ತಿ ಲಿಂಗವನರಿದಲ್ಲಿ ಎಂಬ
ಶಬ್ದಕ್ಕರ್ಥ.

೧೦೨. ಮಹಾ ಧರೆಯಲ್ಲಿ ಮನೆಯ ಕಟ್ಟುವದಕ್ಕೆ ಕಾವಿಲ್ಲದ
ಕೊಡಲಿಯಲ್ಲಿ ಹುಟ್ಟಿದ ಮರನ ತರಿದು ಎತ್ತಿಲ್ಲದ ಏರಿನಲ್ಲಿ ಹೂಡಿ
ತಂದವ ನೀನಾರಣ್ಣಾ? ನಾನೆಂಬುವಕ್ಕೆ ಮೊದಲೇ ನಾಮ ನಷ್ಟವಾಯಿತ್ತು.
ಸದಾಶಿವಮೂರ್ತಿ ಲಿಂಗವು ಇಲ್ಲಿ ಸತ್ತು ಅಲ್ಲಿ ಹೆಣನಾಯಿತ್ತು.

ಟೀಕು:— ಅಖಂಡ ಚಿತ್ ಪೃಥ್ವಿಯಲ್ಲಿ ಶರಣ ತನ್ನ ಜ್ಞಾನಕಾ
ಯವ ರಚಿಸುತ್ತಿರ್ದನೆಂಬುದೀಗ ಮಹಾ ಧರೆಯಲ್ಲಿ ಮನೆಯ ಕಟ್ಟುವ
ದಕ್ಕೆ ಎಂಬ ಶಬ್ದಕ್ಕರ್ಥ. ಆ ಶರಣನು ಭಿನ್ನಭಾವವಲ್ಲದೆ ಇರ್ಪ ಶಿವ
ಜ್ಞಾನದಲ್ಲಿ ಎಂಬುದೀಗ ಕಾವಿಲ್ಲದ ಕೊಡಲಿಯಲ್ಲಿ ಎಂಬ ಶಬ್ದಕ್ಕರ್ಥ.
ಜನನಾಂಕುರವಿಲ್ಲದ ಸದ್ವಿವೇಕ ವೃಕ್ಷವ ಆ ಶಿವಜ್ಞಾನದಲ್ಲಿ ಅವಗ್ರಹಿ
ಸಿದನೆಂಬುದೀಗ ಹುಟ್ಟಿದ ಮರನ ತರಿದು ಎಂಬ ಶಬ್ದಕ್ಕರ್ಥ. ಆತ್ಮ
ತ್ರಯಂಗಳಿಲ್ಲದ ಅಭಿನ್ನ ಕ್ರಿಯಾಚಾರದಲ್ಲಿ ಆ ಸದ್ವಿವೇಕ ವೃಕ್ಷವ ಸಂಬಂ
ಧಿಸಿದಾತ ಶ್ರೀಗುರುವೆಂದು ಶಿಷ್ಯ ಬೆಸಗೊಳುತ್ತಿರ್ದನೆಂಬುದೀಗ ಎತ್ತಿ
ಲ್ಲದ ಏರಿನಲ್ಲಿ ತಂದು ಹೂಡಿ ತಂದವ ನೀನಾರಣ್ಣಾ ಎಂಬ ಶಬ್ದಕ್ಕರ್ಥ.
ತಾನೆಂಬ ಅಹಂಕಾರವ ತಲೆದೋರುವದಕ್ಕೆ ಮೊದಲೇ ಶರಣ ಲಿಂಗ
ವೆಂಬುಭಯ ನಾಮವಳಿಯಿತ್ತೆಂಬುದೀಗ ನಾನೆಂಬುದಕ್ಕೆ ಮೊದಲೇ
ನಾಮ ನಷ್ಟವಾಯಿತ್ತೆಂಬುದೀ ಶಬ್ದಕ್ಕರ್ಥ. ಅಂತು ಉಭಯ ನಾಮ
ವಳಿದು ಶರಣನ ಬಹಿರಂಗವ ಅಭಿನ್ನ ಕ್ರಿಯಾಚಾರದಲ್ಲಿ ಸ್ವರೂಪ

ರಬ್ಬಕ್ಕರ್ಥ. ಆ ಸುಜ್ಞಾನ ಪ್ರಕಾಶದಿಂದ ತನ್ನ ನಿಜವ ತಾನೆಚ್ಚತ್ತು
ನೋಡಿಯೂ ಜೀವತ್ರಯಂಗಳು ಸಕಲ ಪ್ರಪಂಚ ನಿಷ್ಪತ್ತಿಯು ಮಾಡಿವ
ಶರಣನು ಶ್ರೀಗುರೂಪಾವಸ್ಥೆಯು ಮಾಡಲು ಆ ಗುರು ಕರುಣಿಸಿ ವಿಶ್ವನ
ಮಚ್ಚರಿತ್ರವೆಂಬ ಚರಣವ ಕ್ರಿಯಾದೀಕ್ಷೆಯಿಂ ಛೇದಿಸಿ ಸಕ್ರಿಯಾಚಾ
ರವ ನೆಲೆಗೊಳಿಸಿ ಇಷ್ಟಲಿಂಗ ಸಂಬಂಧವ ಮಾಡಿದನೆಂಬುದೀಗ ಹಿರಿಯ
ಮಗನ ಕಾಲು ಮುರಿದು ಎಂಬ ಶಬ್ದಕ್ಕರ್ಥ. ಇಂತು ಸಕ್ರಿಯಾ
ಚಾರವ ನೆಲೆಗೊಳಿಸಿ ತೈಜಸನ ಸಂಕಲ್ಪ ರೂಪವಾದ ಮನೋಹಸ್ತವ
ಮಂತ್ರದೀಕ್ಷೆಯಿಂ ಛೇದಿಸಿ ಸುಜ್ಞಾನವ ನೆಲೆಗೊಳಿಸಿ ಪ್ರಾಣಲಿಂಗ ಸಾಹಿ
ತ್ಯವ ಮಾಡಿದನೆಂಬುದೀಗ ನಡುವಣ ಮಗನ ಕೈಯ್ಯ ಮುರಿದು ಎಂಬ
ಶಬ್ದಕ್ಕರ್ಥ. ಅಂತು ಮನೋಹಸ್ತ ನಷ್ಟವಾಗಿ ಸುಜ್ಞಾನ ನೆಲೆಗೊಂ
ಡಲ್ಲಿ ಪ್ರಾಜ್ಞನ ಭಿನ್ನಾಪೇಕ್ಷೆಯನು ಅವೃಥವ ಕಂಡವನು ಮೇಧಾದೀ
ಕ್ಷೆಯಿಂ ನಷ್ಟವ ಮಾಡಿ ಭಾವವ ನೆಲೆಗೊಳಿಸಿ ತೃಪ್ತಿಲಿಂಗ ಸಂಬಂಧವ
ಮಾಡಿದನೆಂಬುದೀಗ ಕಿರಿಯ ಮಗನ ಬಾಯ ಮುಚ್ಚಿ ಗೋಣು ಮುರಿದು
ಎಂಬ ಶಬ್ದಕ್ಕರ್ಥ. ಅಂತು ಜೀವತ್ರಯಂಗಳು ನಷ್ಟವಾಗಿ ಮಹಾಘನ
ಲಿಂಗವಲ್ಲಿ ಶರಣ ಮಹಾಜ್ಞಾನ ಪ್ರಕಾಶ ನಿಷ್ಪತ್ತಿಯಾಯಿತ್ತೆಂಬುದೀಗ
ಅವರು ಹಿಂಗಿ ನಾ ಬದುಕಿದೆನೆಂದು ತ್ರಿವಿಧ ಸಂದು ಬಿಟ್ಟು ಸದಾಶಿವ
ಮೂರ್ತಿ ಲಿಂಗವಲ್ಲಿ ಸಂದಿತ್ತು ಚಿತ್ತ ಎಂಬ ಶಬ್ದಕ್ಕರ್ಥ.

೧೦೧. ಮೂಷಕ ಮಾರ್ಜಾಲ ಕೂಡಿ ಭೇಕನ ಕಂಡು ನೀತಿಯ
ಕೇಳಿ ಮೂಷಕ ನೆರೆದಲ್ಲಿ ಅಳಿಯಿತ್ತು. ಮಾರ್ಜಾಲ ಮನೆಗೆ ಹೋಯಿತ್ತು.
ನಾ ನೀನೆಂಬುದು ನಿಂದಿತ್ತು ಸದಾಶಿವಮೂರ್ತಿ ಲಿಂಗವನರಿದಲ್ಲಿ.

ಟೀಕು:— ದೇಹ ಸಂಬಂಧಿಯಾಗಿರ್ಪ ಜೀವನು ಮಾಯಾ ವಾಸ
ನೆಯ ಕೂಡಿರ್ದಲ್ಲಿ ಶಿವಕೃಪೆಯಿಂ ಸುಜ್ಞಾನೋದಯವಾಗಲು ಜೀವ
ಭಾವವಳಿದು ಸಜ್ಜೀವ ಸ್ವರೂಪವನೆಯ್ದಿ ಮನೋ ಮಾರ್ಜಾಲನ
ವರ್ತನೆಯ ನಿವೃತ್ತಿ ಮಾಡಿ ಶಿವಭಾವ ಘಟಿಸಿ ಎರಡು ಏಕವಾಗಿ ಎಂಬು
ದೀಗ ಮೂಷಕ ಮಾರ್ಜಾಲ ಕೂಡಿ ಎಂಬ ಶಬ್ದಕ್ಕರ್ಥ. ಆ ಶಿವ
ಭಾವದಲ್ಲಿ ಸನ್ನಿಹಿತವಾದ ಚಿತ್‌ಸ್ವರೂಪನಾದ ಶಿಷ್ಯನ ಆತ್ಮ ಚೈತನ್ಯ
ವಾದ ಪರಮ ಶಾಂತಿಯ ಚಿದ್ಬಿಂದುವೇ ಗುರು ಸ್ವರೂಪವಾಗಿ ಬಂದು
ಪ್ರತ್ಯಕ್ಷವಾದಲ್ಲಿ ಆ ಶಿಷ್ಯನು ಗುರೂಪಾವಸ್ಥೆಯ ಮಾಡುತ್ತಿರ್ದನೆಂಬು
ದೀಗ ಭೇಕನ ಕಂಡು ಎಂಬ ಶಬ್ದಕ್ಕರ್ಥ. ಆ ಶ್ರೀಗುರುವಿಂಗೆ ಉಪಾ

ವಾದ ಇಷ್ಟಲಿಂಗವು ಸಂಬಂಧವಾಗಿಹುದೆಂಬುದೀಗ ಸದಾಶಿವಮೂರ್ತಿ ಲಿಂಗವು ಇಲ್ಲಿ ಸತ್ತು ಎಂಬ ಶಬ್ದಕ್ಕರ್ಥ. ಆ ಮಾರ್ಗ ಕ್ರಿಯೆಯಲ್ಲಿ ಸಂಬಂಧವಾದ ಇಷ್ಟಲಿಂಗವು ವೀರದ ಕ್ರಿಯೆಯನೊಳಕೊಂಡು ಅಂತರಂಗದಲ್ಲಿ ನಿವೃತ್ತಿಯಾಯಿತ್ತೆಂಬುದೀಗ ಅಲ್ಲಿ ಹೆಣನಾಯಿತ್ತೆಂಬ ಶಬ್ದಕ್ಕರ್ಥ. ತನ್ನಯ ಬಾಯ ಶೇಷಪ ಲಿಂಗಕ್ಕೆ ತೋರಿ, ಲಿಂಗದ ಶೇಷವ ತಾ ಕೊಂಡೆನೆಂದು ಕೊಂಡುದು ಪ್ರಸಾದ, ಇದ್ದುದು ಸುಯಿಧಾನವೆಂದುಂಡು ಲಿಂಗಕ್ಕೆ ಕೊಡಲಹುದೇ ಅಯ್ಯ? ಉದು ಮುನ್ನವೇ ಲಿಂಗಾರ್ಪಿತ. ತನ್ನ ಸಂದೇಹಕ್ಕೆ ಕೊಟ್ಟು ಕೊಂಡಿಹೆನೆಂಬ ಭೇದವಲ್ಲದೆ ಇಂತೀ ಗುಣ ಸದಾಶಿವಮೂರ್ತಿ ಲಿಂಗಕ್ಕೆ ಹೊರಗು.

೧೦೩. ಸ್ಥಾವರಲಿಂಗ ಪೂಜೆ ಶುದ್ಧಶೈವಪೂಜೆ. ವೀರಶೈವಲಿಂಗ ಪೂಜೆ ಅಂಗದ ಮೇಲೆ ಹಿಂಗದೆ ಧರಿಸಿಹುದು. ಇದೆಲ್ಲವು ಸರಿ. ವೀರ ಶೈವ ಪೂಜೆ ಎಂತೆಂದೊಡೆ ಇಷ್ಟಲಿಂಗ ಜೀವನಂಗ ಉಭಯವು ಕೂಡಿ ಲೀಯವಾಗಿದ್ದುದು, ಶೈವ ಭೇದಂಗಳಿಗೆ ಹೊರಗು, ಸದಾಶಿವಮೂರ್ತಿ ಲಿಂಗಕ್ಕೊಳಗು.

೧೦೪. ಬೀಜವಿಲ್ಲದ ಬೆಳೆಯುಂಟೇ ಅಯ್ಯ? ನಾದವಿಲ್ಲದ ಶಬ್ದ ಉಂಟೇ ಅಯ್ಯ? ದೃಷ್ಟಿ ಇಲ್ಲದ ಕಳೆಯುಂಟೇ ಅಯ್ಯ? ಅಂಗ ಸಾಹಿತ್ಯವಾಗಿ ಸರ್ವಸಂಗವನರಿಯಬೇಕಲ್ಲದೆ ಲಿಂಗ ಅಂಗದಲ್ಲಿ ಹೊಕ್ಕು ಸರ್ವಭೋಗಂಗಳ ಕಾಂಬುದಕ್ಕೆ ಇದೇ ದೃಷ್ಟ. ಭಂಗಾರದ ಒಡಲಿನಲ್ಲಿ ಬಣ್ಣ ನಿಂದು ಲಕ್ಷವಪ್ಪಕ್ಕೆ ಬಾಹಂತೆ ಆತ್ಮನ ದೃಷ್ಟವ ಕಂಡು ಮತ್ತೆ ಅಧ್ಯಾತ್ಮವೆನಲೇಕೆ? ಘಟದ ಮಧ್ಯದಲ್ಲಿ ನಿಂದು ನುಡಿವುದೇ ಕ್ರಿ ಎಂಬೆ ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

೧೦೫. ಪಂಚತತ್ವದಲ್ಲಿದ್ದು ಪರತತ್ವವನರಿಯಬೇಕು. ಅದಕ್ಕೆ ದೃಷ್ಟ. ಪಶುವಿನ ಹೊಟ್ಟೆಯಲ್ಲಿ ಕರುವಿದ್ದಡೆ ಕರೆವುದಕ್ಕೆ ಮನೋಹರ ಉಂಟೇ? ಅದು ಭಿನ್ನಭಾವವಾಗಿ ಇದಿರಿಟ್ಟು ಉಂಡಲ್ಲದೆ ಮೊಲೆ ತೊರೆಯುವು. ಆ ತೆರನನರಿದಲ್ಲಿ ಅರಿವುದಕ್ಕೊಂದು ಕುರುಹು ಬೇಕು. ಬಲ್ಲಿದ ವೀರನೆಂದಡೆ ಅಲಗಿನ ಮೊನೆಯಲ್ಲಲ್ಲದೆ ಗೆಲಬಹುದೇ? ಆ ಅರಿವ ಚಿತ್ತ ಕುರುಹಿನ ಘಟದಲ್ಲಿದ್ದು ಅರಿವುತಿದ್ದಿತಾವ ಕಾರಣ ಇದನರಿತಾತ್ಮವಾದವೆನಲಿಲ್ಲ. ಸದಾಶಿವಮೂರ್ತಿ ಲಿಂಗವನರಿವುದಕ್ಕೆ ಇದಿರಿಟ್ಟು ಕಳೆದುಳಿಯಬೇಕು.

ಜಂಗಮ.

ವಿವರಣೆ: — ಯಾವುದು ವಸ್ತುವಿನಲ್ಲಿ ಚೈತನ್ಯಾತ್ಮಕವಾಗಿ ವ್ಯಾಪಕವಾಗಿರುತ್ತದೋ ಅದೇ ಜಂಗಮವೆಂದು ಹೇಳಲ್ಪಡುತ್ತದೆ. ಈ ದೃಷ್ಟಿಯಿಂದ ಕಾಯವನ್ನು ಭಕ್ತನೆಂದು ಕರೆದರೆ ಜಂಗಮವು ಅವನಲ್ಲಿಯ ಪ್ರಾಣವಾಗಿರುವದು. (೧೦೬) ಜಂಗಮವು ಜ್ಞಾನವಾಗಿ ಪದಾರ್ಥಗಳಲ್ಲಿ ಪ್ರೇರಣೆ ಮಾಡುತ್ತದೆ. ಆದುದರಿಂದ ಜಂಗಮನು ಉಚ್ಚವರ್ತನೆಯುಳ್ಳವನಾಗಿರಬೇಕು. ಅಂದರೆ ಮಾತ್ರ ಅವನು ಭಕ್ತನಲ್ಲಿ ಪರಿಣಾಮ ಮಾಡುವನು. ಜಂಗಮನ ವರ್ತನೆ ಹೇಗಿರಬೇಕೆಂಬದು ಮುಂದಿನ ವಚನಗಳಲ್ಲಿ ಹೇಳಲ್ಪಟ್ಟಿರುತ್ತದೆ.

ವಚನಗಳು.

೧೦೬. ಅಪ್ಪು ಚಿಪ್ಪಿನಲ್ಲಿ ನಿಂದು ಅಪ್ಪುವ ಬೆರಸದಂತೆ, ವೃತ್ತಿಕಿ ತೇಜದಲ್ಲಿ ಜೆಂದು ಪೃಥ್ವಿಯ ಕೂಡದಂತೆ, ಹಾಗಿರಬೇಕು ಭಕ್ತ ವಿರಕ್ತನ ಭೇದ ಇಷ್ಟಪ್ರಾಣದಿರವು ಇದು ನಿಶ್ಚಯ. ಲಿಂಗಾಂಗಕಾಯ ಭಕ್ತಪ್ರಾಣ ಜಂಗಮವಾದ ಸ್ವಾನುಭಾವಸಿದ್ಧಿ ಈ ತೆರ ತಾನೆ ಸದಾಶಿವಮೂರ್ತಿಲಿಂಗವು.

೧೦೭. ಅರಿದು ಮಾಡುವುದು ಗುರುಭಕ್ತಿ, ಅರಿದು ಮಾಡುವುದು ಲಿಂಗಭಕ್ತಿ, ಅರಿದು ಮಾಡುವುದು ಜಂಗಮಭಕ್ತಿ, ಅರಿಕೆಯಿಂದ ಕಾಂಬುದು ಸದಾಶಿವಮೂರ್ತಿಲಿಂಗವನರಿವುದಕ್ಕೆ.

೧೦೮. ಉಪಾಧಿಯುಳ್ಳನ್ನಕ್ಕ ಗುರುವಲ್ಲ. ವೇಷವ ಹೊತ್ತು ಬಾಗಿಲ ಕಾಯುವನ್ನಕ್ಕ ಜಂಗಮವಲ್ಲ. ಶಕ್ತಿಸಹಿತ ಉಳ್ಳನ್ನಕ್ಕ ಲಿಂಗವಸ್ತುವಲ್ಲ. ಅದೆಂತೆಂದೊಡೆ ಏತರಲ್ಲಿರ್ದಡೂ ಶರೀರ ಬಲಿದು ತದ್ರೂಪ ಹಾಕಿವಂತಿರಬೇಕು. ಇದು ಅರಿವಿನ ಪೊದಲು ಸದಾಶಿವಮೂರ್ತಿ ಲಿಂಗದಿರವು.

೧೦೯. ಗುರು ಚರ ಮೂರ್ತಿ ಪೂಜಿಸಿಕೊಂಬಲ್ಲಿ ತಮ್ಮ ವಿವರವ ತಾವರಿಯಬೇಕು. ಹೆಣ್ಣು, ಹೊನ್ನು, ಮಣ್ಣು ಹೊರಗೆಂದು ಕೆಲರಿಗೆ ಹೇಳಿ ಗನ್ನದಿಂದ ಗಳಿಸಿಕೊಡುವುದು ಅದು ತಾನೇ ಅನ್ಯಾಯವಲ್ಲವೇ? ಬಿರಿವ ಕಟ್ಟಿದ ಬಂಟ ಭಾಷೆಗೆ ತಪ್ಪಿಸಬೆ ರಾಜನ ಮುಖ ಕ್ಕರಿದಡೆ ಭಂಗ. ಇಂತಿದನರಿಯದೆ, ಮೂಗ ಕುಯ್ದು ಪ್ರಾಣಕ್ಕ

ಮೇಲುವ ಎನ್ನೆಗಪೃಗೇಕೆ ಗುರು ಚರಸ್ಥಲ? ಇ-ತಿವರಿಲ್ಲರು ಸದಾಶಿವ ಮೂರ್ತಿ ಲಿಂಗಕ್ಕೆ ಹೊರಗು.

೧೧೦. ಗುರುವಾದಡೂ ಮುಲತ್ರಯುದಾಸೆಯುಳ್ಳನ್ನಕ್ಕ ಮಲ ದೇಹಿ. ಲಿಂಗವಾದಡೂ ಶಕ್ತಿಸಂಪುಟವುಳ್ಳನ್ನಕ್ಕ ಭವಕ್ಕೊಳಗು. ಜಂಗಮವಾದಡೂ ತನ್ನಿರವ ತಾನರಿಯದನ್ನಕ್ಕ ಪ್ರಸಿದ್ಧಭಾವವಿಲ್ಲ. ಇಂತಿವನರಿದು ಪೂಜಿಸಬೇಕು. ತನ್ನಯ ಜನ್ಮನಿವೃತ್ತಿಯ ಮಾಡಿಕೊಳಬಲ್ಲಡೆ ಇದೇ ಸದ್ಭಕ್ತನಿರವು ಸದಾಶಿವಮೂರ್ತಿಲಿಂಗವನರಿವುದಕ್ಕೆ.

೧೧೧. ಗುರುವೆಂದು ಅನುಸರಣೆಯ ಮಾಡಿದಲ್ಲಿ ಲಿಂಗವಿಲ್ಲ. ಲಿಂಗವೆಂದು ಅನುಸರಣೆಯ ಮಾಡಿದಲ್ಲಿ ಜಂಗಮವಿಲ್ಲ. ಜಂಗಮವೆಂದು ಅನುಸರಣೆಯ ಮಾಡಿದಲ್ಲಿ ಪಂಚಾಚಾರ ಶುದ್ಧಕ್ಕೆ ಹೊರಗು. ತಾ ಮಾಡುವ ಭಕ್ತಿ ತನಗೆ ಹಾನಿಯಾದ ಕಾರಣ ಈ ತ್ರಿವಿಧಕ್ಕೆ ಅನುಸರಣೆಯ ಮಾಡಲಿಲ್ಲ ಸದಾಶಿವಮೂರ್ತಿಲಿಂಗವನರಿವುದಕ್ಕೆ.

೧೧೨. ಗುರುವಿಂಗೆ ಗುರುವಿಲ್ಲದೆ ಅರಿವ ಪರಿ ಇನ್ನೆಂತೋ? ಲಿಂಗಕ್ಕೆ ಕಳಿ ಇಲ್ಲದೆ ಅರಿವ ಪರಿ ಇನ್ನೆಂತೋ? ಜಂಗಮಕ್ಕೆ ಪದಫಲ ನಾಸ್ತಿಯಾದಲ್ಲದೆ, ಪ್ರಸಿದ್ಧವಹ ಪರಿ ಇನ್ನೆಂತೋ? ಇಂತೀ ಅರಿವನರಿವಲ್ಲಿ ಸದಾಶಿವಮೂರ್ತಿಲಿಂಗವನರಿದುದು.

೧೧೩. ಪಾಶವರತು ಗುರುವಾಗಬೇಕು. ಪೇಷವರತು ಚರವಾಗಬೇಕು. ಭ್ರಾಮಕವರತು ಲಿಂಗವಾಗಬೇಕು. ಸಕಲಕೃತ ಭೇದವರತು ವಿರಕ್ತವಾಗಬೇಕು. ಇಂತೀ ಸಕಲ ಭ್ರಮೆಯುಳಿದು ನಿಂದುದೇ ಸದಾಶಿವ ಮೂರ್ತಿಲಿಂಗವು ತಾನೆ.

೧೧೪. ಭಕ್ತಂಗೆ ಕ್ರಿಯೆ, ಜಂಗಮಕ್ಕೆ ನಿಷ್ಕ್ರಿಯೆ, ಎನ್ನಬಾರದು ಸೋದಾ. ಜಂಗಮವಾದರೆ ಸದ್ಭಕ್ತಿ ಸದಾಚಾರ ಸತ್ಕ್ರಿಯೆಗಳಲ್ಲಿರಬೇಕು. ಅದೆಂತೆಂದಡೆ ಪುರುಷನ ಆಚಾರ ಸತಿಗೆ ಕಟ್ಟು. ಜಂಗಮದ ಆಚಾರವು ಭಕ್ತನ ಸಂಪದದ ಜೆಳೆ. ಅವತಾರಕ್ಕೆ ವೇಷ ಅರುಹಿಂಗೆ ಆಚಾರ. ಆ ಜಂಗಮ, ಆ ಭಕ್ತ ಈ ಉಭಯದ ಇರವು ಅಂಗಪ್ರಾಣದಂತೆ, ಭಿನ್ನವಿಲ್ಲ ಕಾಣಾ. ಸದಾಶಿವಮೂರ್ತಿ ಲಿಂಗವು ತಾನೆ.

The Vijay College
LIBRARY,
VIJAY COLLEGE,
BIJAPUR